MICROFILMED BY
NEHRU MEMORIAL MUSEU
AND LIBRARY
TEEN MURTI HOUSE
NEW DELHI

REEL - 10

SWADESHA BHIMANI

CONTD FROM:

24 AUGUST 1928

D.V.
26.3.80

ದೇಶಾಭಿಮಾನಿ

[illegible] ವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

[illegible]ಗಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲಸುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷವ ಸುದುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಮಂಗಳೂರು, ತಾ. ೨೪ನೇ ಶುಕ್ರವಾರ ಆಗೋಸ್ತು ೧೯೨೮ (24-8-28) ಸಂಚಿಕೆ ೩.

[illegible] CANARA BANKING CORPORATION,
UDIPI, LIMITED.

ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

Head office:—UDIPI.
ಹೆಡ್ ಆಫೀಸು:— ಉಡುಪಿ

Branches:—COONDAPOOR
,, Mangalore
ಶಾಖೆ.— ಕುಂದಾಪುರ
,, ಮಂಗಳೂರು.

Notice

Is hereby given that the following rates of interest on Fixed Deposits will come into force from 1—9—'28 For 3 months 5 % p a For 6 months 5½ % p a For 12 months 6¼ % p a For 24 months 6½ % p a

ನಿರಖು ಠೇವಣಾತಿಗಳ ಮೇಲೆ ತಾ 1-9-28ರಿಂದ ಈ ಕೆಳಗೆ ನಮೂದಿಸಿದ ಬಡ್ಡಿಯ ದರಗಳು ಜ್ಯಾರಿಗೆ ಬರುವವು.

3 ತಿಂಗಳ ವ್ಯಾಯಿದೆಗೆ ಸಾ ಕೆ 5 — ತಿಂಗಳ ವ್ಯಾಯಿದೆಗೆ ಸಾ ಕೆ 5½
12 ತಿಂಗಳ ವಾಯಿದೆಗೆ ಸಾ ಕೆ 6 — 24 ತಿಂಗಳ ವಾಯಿದೆಗೆ ಸಾ ಕೆ 6½

Office of the Corporation
UDIPI, 13-8-'28

N ANANDA RAO
Secretary

ಮಕ್ಕಳ ಸಲುವಾಗಿ,

ಡೋಂಗರ
ಇವರ
ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ತಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ ಟಿ ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ

ಏಜಂಟರು ವಿ ಊಲನ್ ಮಾರ್ಟ್,
ಮಂಗಳೂರು.



ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧವಟ್ಟ ನೋವಿನ ಮುಲಾಮು

ತಲೆನೋವಿನಿಂದ [illegible] ಪೀಡಿತರಾದ ಜೇಳಿನಿಂದ ಕಷ್ಟಪಟ್ಟ [illegible] ನೋವು [illegible] ದಿನಗಳಿಂದ ಬಾಧಿಸಲ್ಪಟ್ಟ [illegible] ಔಷಧವಾಗಿದೆ

ಎಲ್ಲಾ ಅಂಗಡಿಗಳಲ್ಲಿಯೂ [illegible] 10 ಅಣೆ [illegible] ಹಾಸಲು ಪ್ರತ್ಯೇಕ

ವಿ ಸೂ —[illegible] ಮೋಸಹೋಗದಿರಿ—

[illegible]ದ ಮುಲಾಮು — ಎಲ್ಲಾ [illegible] ಔಷಧ[illegible] ಮುಲಾಮು [illegible] ಪೂರ್ಣ ಗುಣವಾಗುವುದು [illegible] ಡಬ್ಬಿಗೆ ಅಣೆ 6

[illegible]ನ — ಈ ಉತ್ತಮವಾದ, [illegible] ದಂತಮಂಜನವನ್ನು [illegible] ಹಲ್ಲುಗಳು [illegible] ಮಾರ್ಜನ[illegible] ಡಬ್ಬಿ 1ಕ್ಕೆ ಅಣೆ 2

ಅಮೃತಾಂಜನ ಡಿಪೊ.

[illegible], [illegible] ಮದ್ರಾಸು. — 249 ಥ್ರೇಯರ್ ರೋಡ್ ಮುಂಬಯಿ.

[illegible]—ಊಲನ್ ಮಾರ್ಟ್, [illegible] ಇವರಲ್ಲಿಯೂ ದೊರಕುವುದು.

Ready for Sale

THE
MADRAS HINDU RELIGIOUS ENDOWMENT ACT
No II of 1927
Price 8 annas.
Postage Extra.

For copies apply to—
The M. T. A Sharada Press,
Car-street, MANGALORE.

[illegible]

[illegible] ಸಾಗಿವೆ. ಇವರು ಸಿದ್ಧಾಂತಗಳಿಂದ [illegible] ಇದರಿಂದ [illegible] ಲೇಖನ ಅನಾವಶ್ಯಕ [illegible] ಇದ್ದರೆ ಪ್ರಕಟನೆಗೆ ಅರ್ಹವಾಗುವುದು

ಸಂಪಾದಕ.

ಸರ್ವಶ್ರಾಭಿಮಾನಿಯ 'ಅನುತಾಪ"

ಅಯ್ಯಾ, ಸ್ವದೇಶಾಭಿಮಾನಿಯೇ! ಸುಳ್ಯ ನಿವಾಸಿಗಳೊಬ್ಬರು ನವೀನ ರಾಷ್ಟ್ರಬಂಧುವಿನ ಗತಿಸಿದ ಸಂಚಿಕೆಯಲ್ಲೊಂದು ನವೀನ ತರದ ವಾರ್ತೆಯನ್ನು ಕೊಟ್ಟಿರುವರು. ವಾರ್ತೆಕಾರರು, ಸುಳ್ಯ ವೈದ್ಯ ಶಾಲೆಯ ಪ್ರಸಂಗವನ್ನು ಎತ್ತಿ ಅಲ್ಲಿನ ಈಗಿನ ವ್ಯವಸ್ಥೆಯ ಕುರಿತಾಗಿ ಶ್ಲಾಘಿಸುತ್ತಾ ಕೊಡಗಿನ ಬೋರ್ಡಿನವರ ಸಹಾಯ ಪಡೆದು ಪುತ್ತೂರು ತಾಲೂಕು ಬೋರ್ಡಿನವರು ಸಂಪಾಜೆಯಲ್ಲಿ ತೆರೆದ ವೈದ್ಯ ಶಾಲೆಯ ಕುರಿತಾಗಿ ಅವರಿಗುಂಟಾದ ಅನುತಾಪವನ್ನು ಸ್ಪಷ್ಟಪಡಿಸಿರುವರು.

ವಾರ್ತೆಕಾರರನ್ನುವ ಪ್ರಕಾರ ೪೫ ಗ್ರಾಮಗಳಿಗಿದ್ದ ಒಂದು ವೈದ್ಯ ಶಾಲೆಯು ಬದಲಾಗಿ ಪಂಜ ಮತ್ತು ಸಂಪಾಜೆಯಲ್ಲಿ ಹೊಸತಾಗಿ ಎರಡು ವೈದ್ಯ ಶಾಲೆಗಳನ್ನು ತೆರೆದುದರಿಂದ ಅದರ ಆಸ್ಪಾಸಿನ ಕೆಲವು ಗ್ರಾಮದ ನಿವಾಸಿಗಳಾದರೂ, ಈ ಹೊಸ ವೈದ್ಯ ಶಾಲೆಗಳಿಂದಲೂ, ಚಿಕಿತ್ಸೆಹೊಂದಲು ಅನುಕೂಲವಾಯಿತೆಂಬುದನ್ನು ಲೇಖಕರು ಪೂರಾ ಮರೆತದ್ದು ವಿಷಾದಕರವಾಗಿರುವುದು.

ಪುತ್ತೂರು ತಾಲೂಕಿನ ಪೈಕಿ, ಮಲೆಯಾಳದ ಗೌರುಮನೆಯಾದ ಮತ್ತು ಘಟ್ಟದ ಬುಡವಾದ ಸಂಪಾಜೆ, ಕೊಡಿಕಾನ, ಅರಂತೋಡು, ನೆಲ್ಲೂರು ಕೆಂಬ್ರಾಜೆ ಮೂಡ್ನೂರು ಮರಕಂಜೆ ಕಳಮುಕಾರ ವಗೈರೆ ಗ್ರಾಮಗಳೂ, ಕೊಡಗಿಗೆ ಸಮ್ಮಂಧಪಟ್ಟ ಪೆರಾಜೆ, ಚೆಂಬು ಸಂಪಾಜೆ, ಕಲ್ಲಳ, ದಬ್ಬಡ್ಕ ಅರಕಲ್ಲು ಮುಂತಾದ ಗ್ರಾಮದ ನಿವಾಸಿಗಳು ನಿತ್ಯ ರೋಗಿಗಳಾಗಿ ಸದಾ ಪಡುವ ಯಾತನೆಯನ್ನು ಮಾನ್ಯ ಡಿಸ್ಟ್ರಿಕ್ಟ್ ಬೋರ್ಡಿನವರೂ, ತಾಲೂಕು ಬೋರ್ಡಿನವರೂ, ಕಸ್ತೂರಿ ಕೊಂಡು ಕನಿಕರಪಟ್ಟು ಎರಡು ಜಿಲ್ಲೆಯವರು ಸಹಕರಿಸಿಕೊಂಡು, ಉಭಯರ ಖರ್ಚಿನಿಂದ ತೆರೆದ ಈ ವೈದ್ಯ ಶಾಲೆಯು ಲೇಖಕರ ಕಣ್ಣಿಗೆ ಬಿದ್ದುದು ಶೋಚನೀಯವೆ ಸರಿ!

ಲೇಖಕರು ಅನ್ನುವ ಪ್ರಕಾರ ಸಂಪಾಜೆ ವೈದ್ಯಶಾಲೆಯಿಂದ ಕೊಡಗಿನವರಿಗೆ ಮಾತ್ರ ಪ್ರಯೋಜನವಲ್ಲದೆ ದಕ್ಷಿಣ ಕನ್ನಡದ ನಿವಾಸಿಗರಿಗೆ ಹೆಚ್ಚಿನ ಪ್ರಯೋಜನವಿಲ್ಲವೆನ್ನುವುದಾದರೆ ಕೊಡಗು ಡಿ ಬೋರ್ಡಿನವರು ಈ ಕಳೆದ ಮೂರು ವರ್ಷಗಳಲ್ಲಿ ಸಂಪಾಜೆಯಲ್ಲಿ ಹಂಗಾಮಿಯಾಗಿ ತೆರೆದ ವೈದ್ಯ ಶಾಲೆಯಿಂದ ದಕ್ಷಿಣ ಕನ್ನಡದ ನಿವಾಸಿಗರು ಸುಮಾರು ಶೇಕಡಾ ಎಂಭತ್ತು ಮಂದಿ ಚಿಕಿತ್ಸೆಹೊಂದಲು ಕಾರಣವೇನಿರಬಹುದೆಂಬುದನ್ನು ವಾಚಕರೇ ಊಹಿಸಿ. ಸುಳ್ಯ ನಿವಾಸಿಗಳಲ್ಲೊಬ್ಬರ ಲೇಖನವನ್ನು ವ್ಯರ್ಥ ಪಡಿಸಬೇಕಷ್ಟೆ?

ಓಟಿಕೊಲ್ಲಿ, ದೇವರಕೊಲ್ಲಿ ವಗೈರೆ ಕೊಡಗಿಗೆ ಸಮ್ಮಂಧಪಟ್ಟ ಸ್ಥಳಗಳಲ್ಲಿ ರಬ್ಬರ್ ತೋಟಗಳಿರುವುದರಿಂದ ಸಾವಿರಾರು ಕೂಲಿಗಳು ಅಲ್ಲಿ ಕೆಲಸ ಮಾಡುತ್ತಾರೆ. ಅವರು ಕೂಡಾ ಕೊಡಗಿನವರಾದುದರಿಂದ ಅದು ಕೂಡಾ ಕೊಡಗಿಗೆ ಪ್ರಯೋಜನವೆಂಬುದೇ ಲೇಖಕರ ಅಭಿಪ್ರಾಯ. ಆದರೆ ಆ ಕೂಲಿ ಆಳುಗಳಲ್ಲಿ ಹೆಚ್ಚಿನವರು ದಕ್ಷಿಣ ಕನ್ನಡದಿಂದ ಹೋಗಿ ದ್ರವ್ಯಾರ್ಜನೆಮಾಡಿ ಬರುವ ಜನರೆಂಬುದನ್ನು ನೆನೆಗೆ ತಾರದೆಯೂ ರಬ್ಬರ್ ತೋಟಗಳ ತತ್ಸಮಾನವಾದ [illegible] ಜಿಲ್ಲೆಯ ಮತ್ತು ಕೊಡಗಿನ ನಾಲ್ಕೈದು ಮೈಲಿಕ್ಕೆ ಮಲೆಗಳ ಇಲ್ಲಿಗೆ ಸಮಾಪವಿದ್ದ ವರ್ಷದ ಆರು ತಿಂಗಳಲ್ಲಿ ಕನ್ನಡ ಜಿಲ್ಲೆಯ ಕೂಲಿ ಆಳುಗಳ ಸವೇತ ಅನೇಕ ಮಂದಿ ದಕ್ಷಿಣ ಕನ್ನಡ ಜಿಲ್ಲೆಯ ಬಂಧುಗಳೇ ಇಲ್ಲಿಗೆ ಬಂದು ವಾಸವಿದ್ದು ಇಲ್ಲಿ ಚಿಕಿತ್ಸೆ ಹೊಂದುವುದನ್ನು ಕೂಡಾ ಮರೆತ ಲೇಖಕರ ಕೆಲ ಮಹನೀಯರನ್ನು ಹೊಗಳಿಯೂ ಕೆಲ ಮಹನೀಯರನ್ನು ತೆಗಳಿಯೂ ತಾನೊಬ್ಬ ಸರ್ವಶ್ರಾಭಿಮಾನಿಯೆಂಬಂತೆ ನಟಿಸಿ ತನ್ನ ಅನುತಾಪವನ್ನು ತೋರಗೊಡಿಸಿದುದು ಶೋಚನೀಯವೇ ಸರಿ.

ನಿಷ್ಪಕ್ಷಪಾತಿ

ಹೊಸದುರ್ಗ ಪಂಚ್ಯಾತ ಕೋರ್ಟು ಮೆಂಬರರ ಚುನಾವಣೆ

ಇಲ್ಲಿಯ ಪಂಚ್ಯಾತ ಕೋರ್ಟಿನ ಮೆಂಬರರ ಪೈಕಿ ಮ. ರಾ. ರಾ. ಎಚ್ ಅಪ್ಪಯ್ಯ ಎಂಬವರ ಮೆಂಬರಿಕೆ ಅವಧಿಯು ಗತಿಸಿದ ಸಮ್ಮಂಧ ಈ ಸ್ಥಾನವನ್ನು ಅಲಂಕರಿಸುವರೆ ಬೇರೊಬ್ಬ ಪ್ರತಿನಿಧಿಯ ಚುನಾವಣೆಯು ತಾ ೨೦-೮-'೩೮ರಲ್ಲು ಹೊಸದುರ್ಗ ಡಿಪ್ಯುಟಿ ತಹಸಿಲ್ದಾರರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚ್ಯಾತದಾರರ ಚುನಾವಣೆಯ ಸಾಮಾನ್ಯ ವಿಷಯಗಳಲ್ಲಿ ಅವಶ್ಯವಿರುವ ವಿಧಾನಗಳನ್ನು ವಿವರಿಸಿ ಹೇಳಿದ ನಂತರ ಉಮೇದ್ವಾರರೊಬ್ಬರ ಶಿಫಾರಸು ಅಂಗೀಕರಿಸಲಾಯಿತು. ನಿವಾಸಿಗರ ಹಾಜರಾತಿಯು ವಿಶೇಷವಾಗಿತ್ತು. ಉಮೇದ್ವಾರ ಮ. ರಾ. ಗಳಾದ ಯಚ್ ಶೇಷಗಿರಿ ಕಂಪ್ಟರು ಮತ್ತು ಯಚ್ ಅಪ್ಪಯ್ಯ ಇವರಾಗಿದ್ದರು. ರಾಮಪ್ಪನ ಪುತ್ರನು ಅಪ್ಪಯ್ಯ ಎಂಬವರಿಗೆ ಬೆಂಬಲವಾಗಿದ್ದನು. ಇತ್ಯಾದಿ ನವರ ಓಟುಗಳ ರಿಕಾರ್ಡುಮಾಡಿದ್ದು ಬಹಳ ಸೂಕ್ಷ್ಮತರವಾಗಿತ್ತು. ರಿಕಾರ್ಡುಮಾಡುವ ಆಫೀಸರರು ತಲಪುವ ಮೊದಲೇ ಬೆಂಬಲಾರ್ಥಿಯು ತನ್ನ ಕಡೆ ಓಟುಗಳನ್ನು ಲೆಕ್ಕಮಾಡಿ [illegible] ಜಾಗ್ರತೆ ಯೆಂತ ರಾಮಸ್ಮರಣೆ ಮಾಡುತ್ತಿದ್ದನು. ಮೊತ್ತವು ಆ ಸಮಯ ೨೨೮ ಆಗಿತ್ತು ಯೆಂತ ಕಾಣುತ್ತದೆ. ಸಮಯಕ್ಕೆ ಅದು ಗಡಿಬಿಡಿಯಲ್ಲಿ ಪರಿಣಮಿಸಿತು. ಇನ್ನೊಂದು ಭಾಗದಲ್ಲಿ ೨೫೦ ವೋಟುಗಳು ದೊರೆತವು. ಚುನಾವಣೆಯು ಕಾನೂನು ಮೇರೆಗೆ ಯಾವ ಭಂಗವಿಲ್ಲದೆ ಕೊನೆಗಾಣಿಸಿತು. ಈ ಸಮಯ

[illegible] ಇವರಿಗೆ ಧನ್ಯವಾದ.

ಇನ್ನೊಂದು ಮಾತು. ಮ. ರಾ. ಅಪ್ಪಯ್ಯರು, ಮೊದಲಿನ ಮೆಂಬರಿಕೆಯ ಕಾಲಾವಧಿಯಲ್ಲಿ ದೇಶದ ಸೇವೆಗೆ ತನ್ನ ಶಕ್ತ್ಯನುಸಾರವಾಗಿ ಕೆಲಸಮಾಡಿರುವ ಸಂಗತಿ ನಿವಾಸಿಗರೆಲ್ಲರಿಗೆ ಸಮಾಧಾನವಿರುತ್ತದೆ. ಆದರೇನು? ಪಂಚ್ಯಾತ ಕೋರ್ಟ್ ಮ್ಯಾನುವೆಲಿನ ೨ನೇ ಭಾಗದ ೭-B ನಿಬಂಧನೆಗೆ ಒಳಗಾಗದ ಮೆಂಬರಿಕೆಯನ್ನು ಇಟ್ಟುಕೊಂಡದ್ದು ಸ್ವೀಕರವೆಂತ ಹೇಳಬಹುದು. ಪ್ರತಿ ಮೀಟಿಂಗಿಗೆ ಬರುವರೆ ಆಸ್ಥೆಯಾಗಿ ತನ್ನ ಸ್ವಂತ ಕಾರ್ಯಾಧಿಕಾರಿಗಳನ್ನು ಹೊರಗೋಸುವರೆ ಸುಸಮಯ ಸಿಕ್ಕದ ಈ ಗ್ರಹಸ್ಥರು ಪುನಾ ಅದೇ ಸ್ಥಾನಕ್ಕೆ ಆಶೆಪಟ್ಟು ನಿರಾಶೆಯಾದಲ್ಲಿ ವ್ಯಸನಪಡಲಾರರೆಂತ ನನ್ನ ಅಭಿಪ್ರಾಯ. ಇತರರಿಗೂ ನನ್ನ ವಂದನೆಗಳು

ಸತ್ಯವಾದಿ

ಕೆನರಾ ಬಾಲಿಕಾ ಪಾಠಶಾಲೆಯ ಹಿತಚಿಂತಕರ ಲೇಖನಕ್ಕೆ ಉತ್ತರ.

ಹಿತಚಿಂತಕರು ಬರೆದ ಲೇಖನದಲ್ಲಿ ಸರಕಾರದವರ ಸಹಾಯವಿಲ್ಲದ ಕಟ್ಟೋಣ ಕಟ್ಟಿಸಿರುವರೆಂದು ಬರೆದಿರುವರು. ಸರಕಾರದವರು ಎಲ್ಲಾ ಶಾಲೆಗಳಿಗೂ ಕಟ್ಟೋಣ ಸಾಹಿತ್ಯ ಸಾಮಗ್ರಿಗಳಿಗೆ ಖರ್ಚಿನ ಅರೆವಾಸಿ ಹಣವನ್ನು ಕೊಡುತ್ತಿರುವರು. ಕೆನರಾ ಗರ್ಲ್ಸ ಸ್ಕೂಲಿಗೆ ಕೊಡದೆ ಇದ್ದುದು ಪರಮಾಶ್ಚರ್ಯ! ಇನ್ನು ಮೂರು ಕೋಣೆಗಳು ಇದ್ದ ಕ್ಲಾಸುಗಳಿಗೆ ಬೇಕಾಗಿವೆಯಂತೆ. ಆದುದರಿಂದ ಮೇಲಿನ ಕ್ಲಾಸುಗಳನ್ನು ಇಡಲು ಇನ್ನೂ ಹೆಚ್ಚು ಸ್ಥಳಬೇಕಂತೆ. ಒಂದು ಶೆಡ್ಡು ಕಟ್ಟಿಸಿ ತತ್ಕಾಲಕ್ಕೆ ಸುಧಾರಿಸಬಹುದಲ್ಲವೇ? ಇದಕ್ಕೆ ಹೆಚ್ಚು ಹಣ ಅಗತ್ಯವಿಲ್ಲವೆಂದು ಕಾಣುತ್ತದೆ. ಸ್ಥಳದ ಅಭಾವಕ್ಕೆ ಶೆಡ್ಡು ಸಾಕಾಗುವುದು. ಧನದ ಅಭಾವಕ್ಕೆ ಸರಕಾರದವರು. ಈಗ ಸೆಕೆಂಡರಿ ಗ್ರೇಡಿನ ಉಪಾಧ್ಯಾಯಿನಿಯರಿಗೆ ತಿಂಗಳಿಗೆ ೧೩॥ ರೂಪಾಯಿ ಗ್ರೇಂಟು ಕೊಡುತ್ತಾರೆ. ಇನ್ನು ಎಫಿಶಿಯನ್ಸಿ ಗ್ರೇಂಟು ಸಿಕ್ಕುತ್ತದೆ. ಉಪಾಧ್ಯಾಯಿನಿಯರ ಬೇಕಾದಷ್ಟು ಸಿಕ್ಕುತ್ತಿರುವರು. ಬಹುಶಃ ಈಗಿರುವ ಹೆಡ್ ಮಿಸ್ಟ್ರೆಸರು ಸೆಕೆಂಡರಿ ಗ್ರೇಡಿನವರಲ್ಲವೆಂದು ಕಾಣುತ್ತದೆ.

ಶಾಲೆಯಿಂದ ಫೀಸು ವಸೂಲು ಮಾಡುವುದಿಲ್ಲವಂತೆ. ಈ ಶಾಲೆಗೆ ಬಾರದೆ ಇತರ ಶಾಲೆಗಳಿಗೆ ಹೋಗುವ ಹುಡುಗಿಯರ ಹೆಚ್ಚು ಸಂಬಳ ಕೊಟ್ಟು ಕಲಿಯುವುದಿಲ್ಲವೇ? ಈಗಿರುವ ಕ್ಲಾಸುಗಳಿಂದ ಸಂಬಳ ವಸೂಲು ಮಾಡುವುದು ಬೇಡ. ೬-೭-೮ ನೇ ವರ್ಷಗಳ ವಿದ್ಯಾರ್ಥಿನಿಯರಿಂದ ತಿಂಗಳಿಗೆ ಕಳಕೆಪ್ರಕಾರ ವಸೂಲುಮಾಡಿದರೆ ಸಾಧಾರಣ ಖರ್ಚಿಗೆ ಸಾಕಾದೀತು. ಇತರ ಎಲ್ಲಾ ಕೆಥೋಲಿಕ್ ಶಾಲೆಗಳಿಗೆ ಹೋಗುವ ಹಿಂದೂ ಹುಡುಗಿಯರು ಈ ದರಕ್ಕಿಂತಲೂ ಹೆಚ್ಚು ಸಂಬಳವನ್ನು ಕೊಡುತ್ತಿರುವಾಗ ಈ ಹುಡುಗಿಯರ ಶಾಲೆಯ ೬-೭-೮ನೆ ಕ್ಲಾಸುಗಳ ಹುಡುಗಿಯರಿಂದ ಸಂಬಳ ವಸೂಲು ಮಾಡಿದರೆ ಯಾವ ಬಾಧಕವೂ ಬರಲಿಕ್ಕಿಲ್ಲ.

ಈಗಿನ ೮ನೆ ದರ್ಜೆಯಲ್ಲಿ ೨೫ ಹುಡುಗಿಯರು ಮಾತ್ರವೇ ಇರುವರೆಂದು ಬರೆಯುವರು. ಎಲಿಮೆಂಟರಿ ಶಾಲೆಗಳಲ್ಲಿ ಒಂದು ಕ್ಲಾಸಿನ ಮೆಕ್ಸಿಮಮ್ ೪೦. ಆದುದರಿಂದ ೨೫ ಕಡಿಮೆ ಸಂಖ್ಯೆಯಲ್ಲ. ೧೧-೧೨ ವರ್ಷಗಳಲ್ಲಿ ಹೆಣ್ಣು ಮಕ್ಕಳ ಶಾಲೆಯನ್ನು ಬಿಡುತ್ತಾರೆಂಬ ಮಾತು ನಿರಾಧಾರವಾದುದು. ಯಾಕೆಂದರೆ ಈಗಿರುವ ಸರಕಾರಿ ಹೈಸ್ಕೂಲ್ ಮತ್ತು ಕೊಲೇಜ್ ಸೆಂಟಲೋಯಿಸ್ ಹುಡುಗಿಯರ ಶಾಲೆ ಬ್ರಾಹ್ಮೋ ಗರ್ಲ್ಸ ಸ್ಕೂಲ್ ನೇಶನಲ್ ಗರ್ಲ್ಸ ಸ್ಕೂಲು ಮುಂತಾದ ಹಲವು ಹುಡುಗಿಯರ ಶಾಲೆಗಳಿಗೆ ಹೋಗಿ ಕಲಿಯುವ ಅನೇಕ ಮಂದಿ ಗೌಡ ಸಾರಸ್ವತ ಹುಡುಗಿಯರು ಇರುವರು. ಇವರೊಳಗೆ ಪ್ರೌಢವಯಸ್ಸಿನವರು ಬಹಳ ಮಂದಿ ಇರುವರು.

ಒಟ್ಟಾರೆ ಶಾಲೆಯ ಸ್ಥಿತಿಯನ್ನು ನೋಡಿದರೆ ಮೆನೆಜ್‌ಮೆಂಟಿನವರು ಈ ಬಾಲಿಕಾ ಪಾಠಶಾಲೆಯ ಕಡೆಗೆ ಒಂದಿಷ್ಟು ಲಕ್ಷ್ಯವನ್ನು ಹೆಚ್ಚುಕೊಟ್ಟರೆ ಶಾಲೆಯು ಅಭಿವೃದ್ಧಿಯಾಗುವದೆಂದು ಆಶಿಸುತ್ತಿದ್ದೆ. ಕೆನರಾ ಹೈಸ್ಕೂಲಿನಲ್ಲಿ ನಾಲ್ಕನೆ ತರಗತಿಯಿಂದ ಮೆಟ್ರಿಕ್ಯುಲೇಶನ್ ಕ್ಲಾಸುವರೆಗೆ ಒಂದೇ ರಾತ್ರಿಯ ಆಲೋಚನೆಯಿಂದ ಒಂದೇ ದಿವಸದಲ್ಲಿ ಸ್ಥಾಪನೆಯಾಗಲಿಲ್ಲವೇ? ಆಗ ಕೆನರಾ ಹೈಸ್ಕೂಲಿಗೆ ಕಟ್ಟಡವಿತ್ತೇ? ಶಾಲೆಯನ್ನು ಯಾವ ವಿಧದಲ್ಲಿಯಾದರೂ ಸ್ಥಾಪಿಸಬೇಕೆಂಬ ಒಂದೇ ಛಲವಿಕೆಯು ಮನಸ್ಸಿನಲ್ಲಿದ್ದರೆ ಈ ಶಾಲೆಯನ್ನು ಹೈಸ್ಕೂಲನ್ನಾಗಿ ಮಾಡಲು ವಿಚಾರ ಈಗಲೂ ಇಲ್ಲವೆನ್ನಲಾಗುವುದೇ? ಬಂಟವಾಳ ಪದ್ಮನಾಭ ಬಾಳಿಗರು, ಬಿ. ವಾಮನ ಬಾಳಿಗರು, ಬಂಟವಾಳ ಪುಂಡಲೀಕ ಬಾಳಿಗರು, ಬಂಟವಾಳ ಮಂಜುನಾಥ ಬಾಳಿಗರು, ಸುಬ್ರಾಯ ಶಾಸ್ತ್ರರು ಮುಂತಾದ ವೀರ ಪುರುಷರು ಶಿವಾಜಿಯ ಮಿತ್ರರಾದ ನೇತಾಜಿಪಾಲ್ಕರ ಮುಂತಾದವರಂತೆ ವೀರರು ಶಿವಾಜಿಯಂತೆ ಮಹತ್ಕಾರ್ಯವನ್ನು ಮಾಡಲಿಕ್ಕೆ ತಿಮ್ಮಪ್ಪ ನಾಯಕ ಇನ್ನ ಸುಬ್ರಾಯ ಪೈಗಳ ಚಾಲಕರಾಗಿದ್ದರು.

ಈ ಶಾಲೆಯನ್ನು ಸ್ಥಾಪಿಸಿದ ಪೋಲಿ ಗವರ್ನಮೆಂಟ್ ಹೈಸ್ಕೂಲ್ ಆಯಿತು. ಹಲವು ಮುನಿಸಿಪಾಲಿಟಿ ಹುಡುಗಿಯರ ಶಾಲೆಗಳಾದವು. ನೇಶನಲ್ ಗರ್ಲ್ಸ ಸ್ಕೂಲ್ ಆಯಿತು. ಇವನ್ನೆಲ್ಲಾ ನೋಡಿಯಾದರೂ ಈ ಶಾಲೆಯ ಆಡಳಿತದಾರರು ಈ ಶಾಲೆಯಲ್ಲಿ ಮೇಲಿನ ಕ್ಲಾಸುಗಳನ್ನು ತೆರೆಯಲು ಹಾತೊರೆಯಬೇಕಿತ್ತು.

ಆದ ಪ್ರಯುಕ್ತ ಶಾಲಾ ಆಡಳಿತದಾರ ಮಹಾಶಯರೇ! ಸಾಮಾನ್ಯವಾಗಿ ತೋರುವ ಅಡ್ಡಂತರಗಳಿಗೆ ಸೋಲದೆ ಶಾಲೆಯನ್ನು ಬರುವ ಜೂನ್ ತಿಂಗಳಲ್ಲಿಯೇ ಒಂದೇ ಸಾರಿ ೬-೭-೮ ಕ್ಲಾಸುಗಳನ್ನು ಕೆನರಾ ಹೈಸ್ಕೂಲ್ ತೆರೆದ ರೀತಿಯಲ್ಲಿಯೇ ಒಂದು ಶೆಡ್ಡನ್ನಾದರೂ ಕಟ್ಟಿಸಿ ಸ್ವಲ್ಪ ಸಂಬಳ ವಸೂಲುಮಾಡಿ ಸರಕಾರಿ ಗ್ರೇಂಟಿಗೆ ದಾನಮಾಡಿ ಖರ್ಚಿಗೆ ಹಣ ಭರ್ತಿಮಾಡಿ ತೆರೆದು ಡಾ ಸುಬ್ರಾಯಪೈಗಳ ಅನುಕರಣೆಯಿಂದ ಕೀರ್ತಿ ಪಡೆಯಿರಿ

ಹೆಣ್ಮಕ್ಕಳ ತಂದೆ.

[illegible] ಬೀಗನೇ ಒಣಗುವೆನು.

[illegible] ಸೇರಿಸುವರು. ಆದರೆ ಪಾದಿಯನ್ನು [illegible] ದಾಗಿ ಸಮಾನಾಂತರವಾಗಿ ಎರಡು [illegible] ಮತ್ತು ಒಣಗಿಸಬೇಕಾದ ವಸ್ತ್ರವನ್ನು ಎರಡು [illegible] ರಿಸಿ ಹಾಕಬೇಕು. ವಸ್ತ್ರದ ನಡುಭಾಗವು [illegible] ದಾಗಿ ನೇತಾಡಿಕೊಂಡಿರುವ ಹಾಗಾಗಬೇಕು. ಇದೇ ವಸ್ತ್ರದ ಮೇಲೆ ಸಂಚರಿಸಿ ಅದನ್ನು [illegible] ಉದ್ದವಾದ ಸೀರೆಗಳನ್ನು ಉಪಯೋಗಿಸುವ ಮರಾ[illegible] ವನ್ನನುಸರಿಸುವರು.

ಸುಖದ ಆರು ಹೆದ್ದಾರಿಗಳು.

ಸುಖವನ್ನು ಪಡೆಯಬೇಕಾದರೆ [illegible] ಸೂಚನೆಗಳನ್ನು ಯಾವಾಗಲೂ ಮರೆಯದೆ [illegible] ವಾಗಿ ನಡೆಯಬೇಕು.

(೧) ಮೊದಲನೆಯ ದಾರಿಯೇ ಆರೋಗ್ಯ.

(೨) ಆರೋಗ್ಯವೆಂಬ ಮೊದಲನೆಯ [illegible] ಪ್ರವೇಶಿಸಿ, ಎರಡನೆಯ ಹಾದಿಗೆ ಬರಬೇಕು. ಎರಡನೆಯ ದಾರಿಯೇ ಒಳ್ಳೆಯ ನಡತೆ. ಸಮಾಜದಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ತಿಳಿಯುವದು ಅತ್ಯಗತ್ಯವಾಗಿದೆ.

(೩) ಮೂರನೆ ಹಾದಿಯೆಂದರೆ, ನೀತಿಬೋಧನೆಗಳಿಗೆ ಕಿವಿಗೊಟ್ಟು ಅವುಗಳನ್ನು ತಪ್ಪಿ ನಡೆಯದಷ್ಟು ಜವಾಬ್ದಾರರಾಗಿರುವದು.

(೪) ಶಿಕ್ಷಣೆಯೇ ನಾಲ್ಕನೇ ಹಾದಿಯು.

(೫) ಐದನೇಯ ಹಾದಿಯು, ಸತ್ಯಮಾರ್ಗವನ್ನು ಅನುಸರಿಸುವದು.

(೬) ಸತತ ಪ್ರಯತ್ನ, ಅಸಾಧಾರಣ ಧೈರ್ಯ, ಇವುಗಳೇ ಸುಖವನ್ನು ಹೊಂದುವ ಸಲುವಾಗಿ ಅವಲಂಬಿಸಬೇಕಾದ ಕೊನೆಯ ಹೆದ್ದಾರಿಯು.

ಚಹಾ (Tea) ಕುಡಿಯುವದರ ಪ್ರಯೋಜನ

ಚಹಾ ತೋಟಗಳಲ್ಲಿ ಕೆಲಸಮಾಡುವ ಕೂಲಿಗಳಾಗುವ ದುಷ್ಪರಿಣಾಮವನ್ನು ಕಂಡ ಚಹಾ ಕುಡಿಯುವದು ಹಾನಿಕರವೆಂದು ಕೆಲವರು ಹೇಳುತ್ತಿರುವರಾದರೂ ಚಹಾ ಕುಡಿಯುವದು ಬಹು ಪ್ರಯೋಜನಕಾರಿಯೆಂತ ಚೀನಾ ಮತ್ತು ಜಪಾನಿನ ಹಲವರು ರುಜುಪಡಿಸಿರುವರು.

ಚೀನಾ ದೇಶದಲ್ಲಿ ಹುಟ್ಟುವ ನೀರು ಒಳ್ಳೆಯದಲ್ಲವಾದುದರಿಂದ ಬಹು ಪ್ರಾಚೀನ ಕಾಲದಿಂದಲೂ ಅಲ್ಲಿ ಚಹಾ ಕುಡಿಯುವ ಅಭ್ಯಾಸವೇ ಸ್ಥಿರವಾಗಿ ಉಳಿದಿದೆ. ಜಪಾನಿನಲ್ಲಿಯೂ ಮೊದಲು ಜನರು ಒಂದನೇದಾಗಿ ಆರೋಗ್ಯಕ್ಕೆ ಸಲುವಾಗಿ ಎಂದೂ, ಎರಡನೆಯದಾಗಿ ರುಚಿಕರವಾಗಿದೆಯೆಂದೂ ಚಹಾ ಕುಡಿಯಲಾರಂಭಿಸಿದರು. ಎಚ್ಚರದಾಗಿರಲು ಚಹಾದ ಸಹಕಾರಿಯಾದುದರಿಂದ, ಬೌದ್ಧ ಸನ್ಯಾಸಿಗಳು ಪುಸ್ತಕ ಬರೆಯುವಾಗ ನಿದ್ದೆ ಬಾರದಂತೆ ಅದನ್ನು ಕುಡಿಯತೊಡಗಿದರು. ಚಹಾ ಕುಡಿಯುವುದರ ಪ್ರಯೋಜನವೆಂದು ಕಿರೋನಾಮೆಯುಳ್ಳ ಒಂದು ಪುಸ್ತಕವನ್ನು ಜಪಾನಿ ಗ್ರಂಥಕರ್ತನೊಬ್ಬನು ಬರೆದಿರುವನು. ಕೆಲಿಫೋರ್ನಿಯದ ಒಬ್ಬ ಪ್ರೊಫೆಸರನು ಈ ಕುರಿತಾಗಿ ಒಂದು ಪುಸ್ತಕವನ್ನು ಬರೆದಿರುವನು. ಚಹಾ ಕುಡಿಯುವದರಿಂದ ಉತ್ಸಾಹವು ಹೆಚ್ಚಿ, ಒಳ್ಳೆಯ ಆರೋಗ್ಯವು ದೊರೆತು, ಮನುಷ್ಯನು ಬಹು ಕಾಲ ಬದುಕಿ ಸಂತೋಷದಲ್ಲಿರುವನೆಂದೂ, ಅವನ್ನು ಜಪಾನೀಯರು [illegible] ಅತಿ ಬೇಗನೆ. ಇದೇ ರೀತಿಯಲ್ಲಿ ಹಲವರ ಅಭಿಪ್ರಾಯ ಪಡುವರು. ಚಹಾ ಕುಡಿಯುವವನು ಹಾಲು ಕುಡಿಯುವನಿಗಿಂತಲೂ ಉತ್ತಮವನು. ಡಾ॥ ಸುಜುಕಿ ಎಂಬವರು ಬರೆದಿರುವರು.

ಯೌವನವನ್ನು ಕಳೆಯದಿರುವದೆಂತು?

ಯೌವನ ಪ್ರಾಯದವರಂತೆ ಕಾಣಲು ಈಗ ಪ್ರಯತ್ನಿಸುತ್ತಿರುವ ರಕಾರಿ ಉಪಾಯಗಳಿಂದ ಹಾಗೆ ಮಾಡಲು ಬೇಕಾದ ಸಾಧಾರಣ ಕ್ರಮಗಳು ಮರೆಯಲ್ಪಡುತ್ತಿವೆ. ಶುದ್ಧವಾದ ವಾಯು, ಬೆಳಕು, ಸತ್ಸಂಗ, ತಕ್ಕ ವ್ಯಾಯಾಮ, ಬೇಕಾದಷ್ಟು ವಿಶ್ರಾಂತಿ, ಸದ್ಗುಣಗಳ ಅವಲಂಬನ ಇವುಗಳಿಂದ ಸಹಿತ ಪ್ರಾಪ್ತವಾಗಿ ಶರೀರವು ಜರ್ಜರಿತವಾಗದಿರುವುದು ಜ್ಞಾನ ಬಲ್ಲ ವಿಷಯವೇ. ಇವುಗಳು ಇಲ್ಲದಿದ್ದರೆ, ಎಂತಹ ಗಟ್ಟಿ ಮುಟ್ಟಾದ ಶರೀರವು ಸಹ ದುರ್ಬಲವಾದ ಶರೀರವಂತಾಗಿ, ಸುಖವು ಕಳೆದುಹೋಗುವುದು. ಸಹಜವಾದ ರೀತಿ ಕ್ರಮಗಳನ್ನು ಕಲಿಯುವದರ ಬದಲಿಗೆ [illegible] ನಡೆಯಬೇಕು. ಇವುಗಳನ್ನು ಮರೆತು ಕೃತ್ರಿಮ ಉಪಾಯಗಳಲ್ಲಿ ತೊಡಗಿದರೆ, ಯೌವನದ ಶರೀರ ಸೊಬಗು ಎಷ್ಟು ಮಾತ್ರಕ್ಕೂ ಸ್ಥಿರವಾಗಿರದೆ ನಶಿಸಿಹೋಗುವುದರಲ್ಲಿ ಸಂಶಯವಿಲ್ಲ.

ಹಾಲನ್ನೇ ಕುಡಿಯಿರಿ

ಹಾಲನ್ನು ಕುಡಿಯುವದು ಆರೋಗ್ಯಕ್ಕೆ ಬಹು ಸಹಾಯಕವೆಂದು ತಿಳಿಯಲ್ಪಟ್ಟಿದೆ.

ಬ್ರಿಟನಿನಲ್ಲಿ ಇದುವರೆಗೆ ಹೆಚ್ಚು ಹಾಲನ್ನು ಉಪಯೋಗಿಸುವ ಕಟ್ಟಳೆಯು ಇರಲಿಲ್ಲ. ಆದರೆ ಈಗ ಹಾಲಿನ ಉಪಯೋಗದಿಂದ ಉಂಟಾಗುವ ಅಪಾರ ಲಾಭವನ್ನು ಕಂಡು, ಹೆಚ್ಚು ಹಾಲನ್ನು ಕುಡಿಯಬೇಕೆಂಬ ಕಾನೂನೇ ಜಾರಿಗೆ ಬರುವಂತಿದೆ. ಅಮೇರಿಕದಲ್ಲಿ ಮಕ್ಕಳು ತುಂಬಾ ಹಾಲನ್ನು ಕುಡಿಯುವರು. ಸ್ವೀಡನ್, ನಾರ್ವೆ, ಡೆನ್ಮಾರ್ಕ್ ಮತ್ತು ಸ್ವಿಟ್ಜರ್ಲೆಂಡ್ ಈ ದೇಶಗಳಲ್ಲಿ [illegible] ಹಾಲನ್ನು ಉಪಯೋಗಿಸುವರು. ಆದರೆ ಬ್ರಿಟನಿನಲ್ಲಿ [illegible] ಉಪಯೋಗವು ಹೆಚ್ಚಾಗಿರಲಿಲ್ಲ. ದಿನಕ್ಕೆ ಒಂದು [illegible] ಕುಡಿಯುವವರು ಹಾಲನ್ನು ಕುಡಿಯದೆ ಇರುವವರಿಗಿಂತ [illegible] ಭಾರದಲ್ಲಿ ಹೆಚ್ಚಾಗಿ ವರುಷಕ್ಕೆ [illegible] ಇಂಚು ಎತ್ತರ ಬೆಳೆಯುವರು. ಆದರೆ ಹಾಲನ್ನೇ ಕುಡಿಯದವರು ವರುಷಕ್ಕೆ [illegible] ಹೆಚ್ಚು ೧॥ ಇಂಚು ಮಾತ್ರವೇ ಬೆಳೆಯುವರು. [illegible] ಹಾಲನ್ನೇ ಕುಡಿಯುವ ಅಭ್ಯಾಸವನ್ನು ಪ್ರಾರಂಭಿಸತಕ್ಕದ್ದು.

ಅಮೂಲ್ಯ ಔಷಧಗಳು.

ಅಮೃತಕಾಳಾಂಜನ ತೈಲ:—ಇದು ಪುನರ್ವಸು ಆತ್ರೇಯ ಮುನಿ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಶ್ವಿನಿಗಳ ಅನುಭವವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮಿದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು 6 ಔನ್ಸಿನ ಶೀಶೆಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನ ವಾಗಿದೆ, ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 8—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ಸಂಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ದೋಷವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭ ಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲ ಬೇಕಾಗುವುದು

ಕ್ರಯ ಬಾಟ್ಲ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

[illegible]

ಯಮ್. ವಿ. ಶಾಸ್ತ್ರೀ,

ಆಯುರ್ವೇದ ಭೂಷಣ,

ಮಂಗಳೂರು ದ ಕನ್ನಡ

ಮುದಲ್‌ತರವಾದ ಬೆಳ್ಳಿ ಪುಡಿವಾರಹಗ್ಗ

Estd 1896

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿವಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ [illegible] ಅನುಭವದ ಮೇಲೆ ನಮ್ಮ ಪುಡಿವಾರ ಹಗ್ಗಗಳ [illegible] ದಲ್ಲಿಯೂ, ಸರಕಿನ ನಾಣ್ಯಯತ್ತಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳ ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿವಾರಗಳ ಗುಣವು ತಿಳಿಯುವುದು ಬೆಳ್ಳಿ ಧಾರಣೆ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,

ಹರಾಫು ವ್ಯಾಪಾರ,

14-3-'28 ತಿಮ್ಮಾಪೇಟೆ ಸೇಲಂ (ದಕ್ಷಿಣ ಇಂಡಿಯಾ)

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ

32 ಮಾತ್ರೆಗಳುಳ್ಳ ಡಬ್ಬಿಗೆ ಬರೀ ರೂಪಾಯಿ 1 ಮಾತ್ರ

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ

ಬರೆಯಿರಿ—

ಆತಂಕನಿಗ್ರಹ ಅವುಷಧಾಲಯ,

ನಂ. 26, ಬ್ರಾಡ್ವೇ, ಮದರಾಸು.

ದಕ್ಷಿಣ:—

ಮೆಸ್ಸರ್ಸ್ ರೇಕ್ಷೆಲ್ ಎಂಡ್ ಕಂಪೆನಿ,

ಮಂಗಳೂರು

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟದು

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 338,500—0—0	ರಿಸರ್ವನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G P Notes Rs 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6¼% for 2 Years, 6% „ 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರ್ಷಗಳಿಗೆ ಶೇಕಡಾ 6¼% 1 ವರ್ಷಕ್ಕೆ 6
Season deposits of Rs 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ಇರುವ ರೂ. 1000/-ವ ಮೇಲ್ಪಟ್ಟ ಸೀಸನ್ ಠೇವಣಿಗಳಿಗೆ ಬಡ್ಡಿ ದರ ಶೇಕಡಾ 6¼

Canara Bank Ltd

Mangalore, 16th Feb 1928

K. Venkat Rao,

Secretary

The Pangal Nayak Bank Limited, Udipi, S. K.

ಸ್ಥಾಪಿತವಾದದ್ದು 1920

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡ್ಪಿ, ದ. ಕ

ಬೇಂಕರರು—

ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಮುಂಬ್ಯಾ

ನಿಯಮಿತ ಮೂಲಧನ ರೂಪಾಯಿ 2,00,000	ಆಪದ್ಧನ ಇತ್ಯಾದಿ ನಿಧಿಗಳ ರೂ. 1,00,000/
ಚಂದಾ ಮೂಲಕ ಹಾಕಲ್ಪಟ್ಟ ವಸೂಲಾದ ಮೂಲಧನ ರೂ. 1,00,000	ಕಾಯಂ ಠೇವಣಾತಿಗಳು „ [illegible]

ಕೊನೆಗೆ [illegible] ರೂ. [illegible] 615—1—1

ಕಾಯಂ ಠೇವಣಾತಿಗಳು [illegible] 13, ರೂ. [illegible] ತಿಂಗಳುಗಳಿಗೆ [illegible] ಮತ್ತು 24 ತಿಂಗಳುಗಳಿಗೆ [illegible] ಮೇಲೆ ಅಂಗೀಕರಿಸಲ್ಪಡುವವು

ಮುಸಂ ಠೇವಣಾತಿಗಳ ([illegible]) ಕರೆಂಟ್ ಠೇವಣಾತಿಗಳು [illegible] ಠೇವಣಾತಿಗಳು, ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಮತ್ತು ಶಾಲೆ ಠೇವಣಾತಿಗಳು [illegible] ಅಂಗೀಕರಿಸಲ್ಪಡುವವು

ಸಾಲಗಳು [illegible] ಕೊಡಲ್ಪಡುವವು ಹುಂಡಿಗಳು ಮತ್ತು ಡ್ರಾಫ್ಟುಗಳು [illegible] ನಡಿಸಲ್ಪಡುವವು

ಕಾರ್ಯಕ್ರಮಗಳ ಮತ್ತು [illegible]

ಹೆಡ್ ಆಫೀಸ ಉಡ್ಪಿ [illegible]

ಪಾಂಗಾಳ ಪರಮೇಶ್ವರ ನಾಯಕ್

[illegible]

'ಸಾರಸ್ವತಾಸವ

ಓದಿದುದು ಮರೆತು ಹೋಗುತ್ತಿದ್ದರೆ ಓದಲು ಕಠಿಣವೆನಿಸುತ್ತಿದ್ದರೆ, ದಣಿದ [illegible] ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ [illegible] ಇದನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ ಸೀಸೆ ಒಂದಕ್ಕೆ ಬೆಲೆ [illegible] ಪೋಸ್ಟೇಜು ಬೇರೆ

ಬಾಲಸುಧೋದಯ

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣವಿಲ್ಲದೆ [illegible] ಮಲಬದ್ಧವಿದ್ದರೂ ಬಾಲಕರಿಗೆ [illegible] ಗುಣಪಡಿಸಿ ಮಕ್ಕಳಿಗೆ ಬಲವನ್ನೂ ಬೆಳವಣಿಗೆಯನ್ನೂ ಉಂಟು ಮಾಡುತ್ತದೆ ಸೀಸೆ ಒಂದಕ್ಕೆ ಬೆಲೆ [illegible], ಪೋಸ್ಟೇಜು ಬೇರೆ

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ ಚಳಿಜ್ವರ ಕೆಮ್ಮಲು ಮುಂತಾದ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ

ಮಕ್ಕಳ— ಮಂದ, ಎಳವು ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ [illegible] ಬಾಣಂತಿಯರಿಗೂ ಸಂಜೀವನ [illegible] ಮಾತ್ರೆಗಳ ಪಡೆಗಿರುವ ಸೀಸೆ ಬೆಲೆ [illegible] ಪೋಸ್ಟೇಜು ಬೇರೆ.

'ಬಿಷಕ್‌ರತ್ನ' ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ

ಹೆಡ್ ಆಫೀಸ್ ಸೀತಾರಾಘವ ವೈದ್ಯಶಾಲಾ, ಮೈಸೂರು

ಏಜಂಟರು —

ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಹವಗೆ [illegible]

ಬೆಂಗಳೂರ ಅನಾಹುತಗಳ ವಿಚಾರಣಾ ಕಮಿಟಿ.

ಬೆಂಗಳೂರಿನ ಅನಾಹುತಗಳು ಪ್ರಜೆಗಳಲ್ಲಿ ನಾನಾ ತರದ ಸುದ್ದಿಗಳು ಹರಡಲು ಅವಕಾಶ ಕೊಟ್ಟಿದಾಗಿ ತಿಳಿದು ಬರುತ್ತಿದೆ. ಸರಕಾರವು ಕೆಲವು ಪತ್ರಿಕೆಗಳ ಪ್ರಕಟನೆಯನ್ನು ನಿಲ್ಲಿಸಿದ ಕಾರಣದಿಂದಲೇ ಈ ಸುದ್ದಿಗಳು ಮತ್ತಷ್ಟು ಹೆಚ್ಚಿದುವು. ದಿವಾನರಾಗಿರುವ ಮಿರ್ಜಾ ಇಸ್ಮಾಯಿಲ್ ಖಾನರು ಈ ಅನಾಹುತಗಳ ಪರಿಣಾಮಗಳ ಕಡೆಗೆ ಯೋಗ್ಯವಾದ ರೀತಿಯಲ್ಲಿಯೂ ಅಗತ್ಯವಿದ್ದಷ್ಟು ಶೀಘ್ರವಾಗಿಯೂ ಲಕ್ಷ್ಯಗೊಟ್ಟಿಲ್ಲವೆಂದೇ ನೆನಸಬೇಕಾಗುತ್ತದೆ. ಜಾತೀಯ ವೈಷಮ್ಯಗಳು ಇನ್ನೂ ಬಲವಾಗಿವೆ ಎಂಬುದು ಹಿಂದೂ ಪತ್ರಿಕೆಯಲ್ಲಿ ಮಿ| ಕೊವರ್‌ಲೆಂಡ್ ಎಂಬ ಯುರೋಪಿಯಾನರೊಬ್ಬರು, ಕೆಲವು ಮುಸಲ್ಮಾನ ಪುಂಡರು ಒಬ್ಬ ಹಿಂದೂ ವಿದ್ಯಾರ್ಥಿಯ ಮೇಲೆ ಅತ್ಯಾಚಾರ ನಡಿಸಲು ಪ್ರಯತ್ನಿಸಿದುದನ್ನೂ, ಅವರನ್ನು ತಾನು ಬಿಡಿಸಿದುದನ್ನೂ ವಿವರಿಸಿ ಬರೆದ ಪತ್ರವನ್ನು ನೋಡಿದರೆ ತಿಳಿಯುವುದು. ಆದರೆ ತಡವಾಗಿಯಾದರೂ ಕಳೆದ ಆಗೋಸ್ತು ತಾ ೨೧ರಲ್ಲಿ ಬೆಂಗಳೂರಿನಲ್ಲಿ ಮೈಸೂರು ಪ್ರಾಂತದ ಪ್ರಮುಖ ಪ್ರಜೆಗಳ ಶಾಂತಿ ಪರಿಷತ್ತನ್ನು ದಿವಾನರು ಕೂಡಿಸಿದುದು ಅಭಿನಂದನೀಯವಾಗಿದೆ. ಎಂದಿನಂತೆಯೇ ಅವರ ಭಾಷಣಗಳೂ ಮಾತುಗಳೂ ಬಹಳ ಸಮರ್ಪಕವಾಗಿದ್ದುವು. ಎಂದಿನಂತೆಯೇ ದಿವಾನರು ಪ್ರಜೆಗಳ ಸಹಕಾರವನ್ನೂ, ಪತ್ರಿಕಾ ಸಂಪಾದಕರ ಸಹಕಾರವನ್ನು ಬಯಸಿ ಭಾಷಣಕೊಟ್ಟರು. “ಒಬ್ಬ ದೊಡ್ಡ ಪರ್ಷಿಯನ್ ಕವಿಯ ಮಾತಿನಲ್ಲಿ ಹೇಳುವುದಾದರೆ ನನ್ನ ಮತ ಭಕ್ತಿಯು ಪ್ರಜಾ ಸೇವೆಯಲ್ಲಿಯೇ ಇದೆ ಎಂಬುದನ್ನು ನಂಬಿರಬೇಕಾಗಿ ನಾನು ನನ್ನ ಸಹ ಪ್ರಜಾ ಜನರನ್ನು ಕೇಳಿಕೊಳ್ಳುವೆನು” ಎಂದು ದಿವಾನರು ತಮ್ಮ ಭಾಷಣವನ್ನು ಉಚ್ಚ ಭಾವದಿಂದ ಅಖೈರಿ ಪಡಿಸಿದರು. ಕಮಿಟಿಯು ಬೇಗನೆ ಕೂಡುವುದಾಗಿಯೂ ಈ ಸಭೆಯಲ್ಲಿ ತಿಳಿದು ಬಂದಿತು. ಶ್ರೀಮನ್ಮಹಾರಾಜರು ಸರ್ ವಿಶ್ವೇಶ್ವರಯ್ಯನವರನ್ನೇ ಇದರ ಅಧ್ಯಕ್ಷರನ್ನಾಗಿ ನೇಮಿಸಿರುವುದೂ ತಿಳಿಸಲಾಯಿತು. ಶ್ರೀಮನ್ಮಹಾರಾಜರ ಹಿತಾಕಾಂಕ್ಷೆಯೂ ದೂರದರ್ಶಿತ್ವವೂ ಇದರಿಂದ ವ್ಯಕ್ತವಾಗುವುದು. ಮೈಸೂರು ಪ್ರಜೆಗಳಿಗೂ ಈ ನೇಮಕವು ತೃಪ್ತಿಕರವಾಗಿ ಕಂಡು ಬರಬಹುದೆಂದು ನಾವು ನೆನಸುತ್ತೇವೆ. ಎಲ್ಲದಕ್ಕಿಂತಲೂ ಹೆಚ್ಚಾಗಿ ಆಶಿಸತಕ್ಕ ವಿಷಯವೆಂದರೆ ಪರಸ್ಪರ ಮನಃಕ್ಲೇಶಗಳಿಲ್ಲದೆ ಸೌಹಾರ್ದಪೂರ್ಣವಾದ ಹಿಂದೂ ಮುಸಲ್ಮಾನ ಐಕ್ಯ.

ಮಧ್ಯಪ್ರಾಂತದ ಮಂತ್ರಿಮಂಡಲ

ಹಿಂದೂಸ್ಥಾನದ ಹಲವು ಪ್ರಾಂತಗಳ ಮಂತ್ರಿಗಳಿಗೆ ರಾಜೀನಾಮೆ ಕೊಡುವ ಅವಶ್ಯಕತೆ ಬಿದ್ದಾಗ ದೊರಕಿಕ್ಕೆ ನಮಗೊಂದು ಸರಕಾರವಿತ್ತು. ಮಧ್ಯಪ್ರಾಂತವು [illegible] ಕೇಂದ್ರ, ಸಹಕಾರದ ಪ್ರಚಂಡ ಅಂಗಗಳನ್ನು ತೋರಿಸಲು ಹೊಂಚಿಕಟ್ಟಿದ ರಂಗಭೂಮಿ. ಇಲ್ಲಿಯ ಮಂತ್ರಿಗಳ ಅವಸ್ಥೆಯನ್ನು ನೋಡಿದರೆ ಹಿಂದೀಯರ ಕಾರ್ಯಕುಶಲತೆಯಲ್ಲಿ ಬಹಳ ಅಸಮಾಧಾನಪಡಬೇಕಾಗುವುದು. ಅಲ್ಲಿನ ಮಂತ್ರಿಮಂಡಲವು ಎಷ್ಟೋ ಹೋದರೂ ಒಡೆದ ಹುಡುಗಾಟಿಕೆಯಂತಿದೆ. ಕೌನ್ಸಿಲಿನಲ್ಲಿ ಹಿಂದೀ-ಮರಾಠಿಗಳ ದ್ವಂದ್ವವು ಬಹಳ ತೀಕ್ಷ್ಣವಾಗಿರುತ್ತದೆ. ರಾಷ್ಟ್ರೀಯತ್ವವು ಕೂಡ ಅವರಲ್ಲಿ ಅನ್ಯೋನ್ಯವನ್ನುಂಟು ಮಾಡಿಲ್ಲ. ಕೌನ್ಸಿಲಿನಲ್ಲಿ ಸರಕಾರದ ಕಾರಣದ ಕೈಯು ಯಾವ ರೀತಿಯಲ್ಲಿ ಕೆಲಸಮಾಡಿತೆಂದು ಹೇಳಲಿಕ್ಕಾಗುವುದಿಲ್ಲವೆಂದು ಹಿಂದೂ ಪತ್ರಿಕೆಯು ತಪ್ಪನ್ನು ಸರಕಾರದ ಮೇಲೂ ದ್ವಿದಳ ರಾಜ್ಯ ಪದ್ಧತಿಯ ಮೇಲೂ ಹೊರಿಸುವುದಾದರೂ, ಇಂತಹ ಕಾರಣದ ಕೈಗಳಿಗೆ ಕೌನ್ಸಿಲ್ ಮೆಂಬರರೊಳಗೆ ಇಷ್ಟು ಎಡೆ ಸಿಕ್ಕುವುದಾದರೆ ಪ್ರಜಾಪ್ರತಿನಿಧಿಗಳ ಮೇಲೆ ವಿಶ್ವಾಸವಿಡುವುದು ಹೇಗೆಂದು ತಿಳಿಯುವುದಿಲ್ಲ. ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟೇ ಜಗಳದ ಹಣ್ಣು (Apple of Discord)ಯಾಗಿ ಪರಿಣಮಿಸಿದುದೇ ವಿಶೇಷವಾದುದು. ಡಾ| ದೇಶಮುಖರು ಪಬ್ಲಿಕ್ ವರ್ಕ್ಸ್ ಡಿಪಾರ್ಟಮೆಂಟಿನ ಚಾರ್ಜಿನಲ್ಲಿದ್ದರು. ಶ್ರೀ ರಾಘವೇಂದ್ರರಾಯರಿಗೆ ಆ ಡಿಪಾರ್ಟಮೆಂಟು ಬೇಕೆಂದನ್ನಿಸಿತು. ದೇಶಮುಖರು ನ್ಯಾಯವಾದ ಕಾರಣವಿಲ್ಲದೆ ಬಿಟ್ಟುಕೊಡನೆಂದರು. ಕೊಡುವುದಿಲ್ಲವಾದರೆ ಅವಿಶ್ವಾಸದ ಠರಾವು ತರಿಸುವೆನೆಂದು ರಾಯರು ಬೆದರಿಸಿದರು. ಠರಾವು ಬಂದೂ ಆಯಿತು. ದೇಶಮುಖರು ರಾಜೀನಾಮೆ ಕೊಟ್ಟರು. ದೇಶಮುಖರ ರಾಜೀನಾಮೆನಂತರ ರಿಸ್ಪಾನ್ಸಿವ್ ಕೊ-ಆಪರೇಶನಿಗೆ ಗೌರವವೋ, ಕೌನ್ಸಿಲಿಗೆ ಗೌರವವೋ, ಹಿಂದೀ ಪ್ರಾಂತಿಕತ್ವಕ್ಕೆ ಗೌರವವೋ, [illegible] ಮಂತ್ರಿಗಳಾದ ಈ ಎರಡು ವ್ಯಕ್ತಿಗಳಿಗೆ ಗೌರವವೋ ಎಂದು [illegible] ಅಭಿಪ್ರಾಯವನ್ನು ಸ್ಪಷ್ಟಗೊಳಿಸಬೇಕು. ಅಂತೂ ರಿಸ್ಪಾನ್ಸಿವ್ ಕೊ-ಆಪರೇಶನ್ ವಾದಿಗಳೂ ಇದರಿಂದ ಸರಿಯಾದ ಪಾಠವನ್ನು ಕಲಿಯಬಹುದು.

ಶಾಂತಿಸ್ಥಾಪನೆ!

ಲೋಕಶಾಂತತೆಯ ಸಂಧಿ ಸ್ಥಾಪನೆಗಾಗಿ ಅದರ ರಚಯಿತರಾದ ಕೆಲಾಗ್ಗರವರು ಅಮೇರಿಕದಿಂದ ಫ್ರಾನ್ಸಿಗೆ ಹೊರಟಿರುವರು. ಲೋಕವು ಯುದ್ಧಗಳಿಂದ ಸಂರಕ್ಷಿಸಲ್ಪಡುವುದೆಂಬ ಉದ್ಗಾರಗಳು ಕೆಲವು ಆದರ್ಶವಾದಿಗಳಿಂದ ಹೊರಡಲಾರಂಭಿಸಿರುವುವು. ಯುನೈಟೆಡ್ ಸ್ಟೇಟ್ಸಿನ ಪರದೇಶ ಮಂತ್ರಿ ಮತ್ತು ಸರ್ ಆಸ್ಟಿನ್ ಚೆಂಬರಲೇನರೊಳಗೆ ಮುಂದೆ ಸಹಿ ಹಾಕಲ್ಪಡುವ ಸಂಧಿಗಾಗಿ ಪರಸ್ಪರ ಪ್ರಶಂಸೆಯ ಸಂದೇಶಗಳು ಬದಲಾಯಿಸಲ್ಪಟ್ಟವು. Tickle me Tobby, and I will Tickle you ಎಂದು ಬ್ರಿಟಿಷ ನಾಣ್ಣುಡಿಯಂತೆ ಎಲ್ಲರೂ ಕಣ್ಣು ಮುಚ್ಚಿದರೆ ಚೆನ್ನಾಗಿ ಕಾಣುತ್ತದೆಂದು ಹೇಳಲಾರಂಭಿಸಿರುವರು. ಇತ್ತ ಲಂಡನ್ನಿನ ಮೇಲೆ ವೈಮಾನಿಕ ಯುದ್ಧ ಸನ್ನಾಹಗಳ ಪರೀಕ್ಷೆಯು ಭರದಿಂದ ಸಾಗಿತು. ಅತ್ತ ಫ್ರಾನ್ಸ್ ಇಂಗ್ಲಂಡಿನೊಳಗೆ ನೌಕಾ-ಸಂಧಿಯು ರಚಿಸಲ್ಪಟ್ಟಿತು— ಈ ಸಂಧಿಯ ಅರ್ಥವೇನೆಂದು ಅಮೇರಿಕಕ್ಕೆ ದಿಗಿಲು ಬಿದ್ದಿದೆ. ಮೇಲಾಗಿ ಅಮೇರಿಕವು ಈಜಿಪ್ತವನ್ನು ಸ್ವತಂತ್ರ ರಾಷ್ಟ್ರವಾಗಿ ಪರಿಗಣಿಸಿ ಅದರೊಡನೆ ಸ್ವತಂತ್ರವಾಗಿ ವರ್ತಿಸಿ ಇಂಗ್ಲಂಡಿಗೆ ದಿಗಿಲುಬಿದ್ದಿದೆ. ಯುರೋಪಿನ ಮುಸ್ಸೋಲೀನಿಯು ಇನ್ನೂ ಯುದ್ಧ ಪತಾಕೆಗೆ ಬಣ್ಣ ಬರೆಯುವುದರಲ್ಲಿದ್ದಾನೆ. ಗ್ರೀಸಿನಲ್ಲಿಯೂ ವೆನಿಜೆಲೊಸ್ಸನ ಇಲೆಕ್ಶನ್ ವಿಜಯವು ಬಾಲ್ಕನ್ ರಾಜಕೀಯ ಪ್ರಗತಿಯನ್ನು ಬದಲಾಯಿಸಿ ಯುರೋಪಿನ ಪ್ರಮುಖ ರಾಷ್ಟ್ರಗಳ ಲಕ್ಷ್ಯವನ್ನು ತನ್ನ ಕಡೆಗೆ ಎಳೆದಿದೆ. ಜರ್ಮನಿಯು ಇಂಗ್ಲಂಡ್—ಅಮೇರಿಕದೊಳಗಿನ ಭಿನ್ನತೆಗಳು ಹೇಗೆ ಅಭಿವೃದ್ಧಿ ಹೊಂದುತ್ತಿವೆಯೆಂದು ಕಾಯ್ದುಕೊಂಡೇ ಇದೆ. ಶಾಂತಿಸ್ಥಾಪಕ ರಾಷ್ಟ್ರಗಳ ಕಾರ್ಯಕ್ರಮಗಳ ಒಳಗಿನ ಗುಟ್ಟು ಹೀಗಿರುವಾಗ ಶಾಂತತೆಗೆ ಭಂಗ ತರುವುದೆಂದು ಎಣಿಸಲ್ಪಟ್ಟ ರಶ್ಯಾದೇಶದ ತಯಾರಿಯು ಮೆಲ್ಲನೆ [illegible] ನಡೆಯುತ್ತಿದೆ. ಲೋಕದ ರಾಜಕೀಯ ವ್ಯವಹಾರಗಳಲ್ಲಿ ಮಹತ್ವದ ಒಂದು ತಪ್ಪು ನಡೆದಿರುವುದಾದರೆ ಅದು ರಶ್ಯಾದ ಮೇಲೆ ಇತರ ರಾಷ್ಟ್ರಗಳು ಆಚರಿಸುವ ಬಹಿಷ್ಕಾರದ ಧೋರಣವಾಗಿದೆ. ಇವೆಲ್ಲವನ್ನು ನೋಡುವಾಗ ಕೆಲಾಗ್ಗರ ಪ್ರಯಾಣದ ಆರಂಭಕ್ಕೆ ಶುಭಶಕುನಗಳು ತೋರುವುದಿಲ್ಲವೆನ್ನಬೇಕಾಗುತ್ತದೆ. ಅಂತೂ ವರ್ಸೇಲ್ ಸಂಧಿಯ ನಂತರ ಪ್ಯಾರಿಸ್ಸಿಗೆ ಸಂಭ್ರಮದ ಮುಹೂರ್ತವು ದೊರಕಿತು. ಆ ಸಮಯದಲ್ಲಿ ಪ್ರೆಸಿಡೆಂಟ ವಿಲ್ಸನರ ಹದಿನಾಲ್ಕು ಪ್ಯಾಯಿಂಟುಗಳಿಂದ ಜರ್ಮನಿಯನ್ನು ಬಗ್ಗಿಸಲಾಯಿತು. ಈ ಬಾರಿ ಕೆಲಾಗ್ಗರವರ ಶಾಂತಿ ಸ್ಥಾಪನೆಯಿಂದ ಅಧೀನ ಜನಾಂಗಗಳ ಬಡಿದಾಟದ ಕಟ್ಟಳೆಗಳು ಶಾಶ್ವತವಾಗಿ ಮುಚ್ಚಲ್ಪಡಲಿದೆ.

ಅಮೇರಿಕದಲ್ಲಿ ವೇದಕಾಲೀನ ಪರಿಶೋಧಗಳು

ಹಿಂದೂಸ್ಥಾನದಲ್ಲಿ ಸಾಂಪ್ರದಾಯಿಕರು (orthodoxy) ಅಸ್ಪೃಶ್ಯತಾ ನಿವಾರಣೆಯಿಂದಲೂ, ಪ್ರೌಢ ವಿಧವಾ ವಿವಾಹದಿಂದಲೂ, ಶುದ್ಧೀ ಚಳವಳಿಯಿಂದಲೂ ವೇದಗಳ ಅಧಃಪಾತ ಹೊಂದುವುದನ್ನು ಕಂಡು, ಅವುಗಳನ್ನು ಅಜ್ಞಾನ ಕಾರಣವಾದ ತಮಸ್ಸಿನಲ್ಲಿ ಮುಚ್ಚಿಟ್ಟು ಅಂಧಾಚಾರಗಳ ಮೂಲದಿಂದ ಕಾಪಾಡಲು ಯತ್ನಿಸುವಾಗ, ಸುಧಾರಕರು ಹಳೆಯ ಡೊಳ್ಳಿನದಲ್ಲೆಂದು ತಮ್ಮ ರಚನಾತ್ಮಕ ಶಕ್ತಿಯನ್ನು (originality) ಯನ್ನು ತೋರಿಸುವಾಗ ಅಮೇರಿಕದಲ್ಲಿ ವೇದಗಳೊಳಗಿನ ಶೋಧಗಳಿಗೆ ಕೈಹಾಕಿರುವರೆಂಬ ಶುಭವಾರ್ತೆಯು ಬಂದಿದೆ. ಪಾಶ್ಚಾತ್ಯರ ಶೋಧನಾಶಕ್ತಿಗೂ ನಮ್ಮ ಜನತೆಯ ಮಾನಸಿಕತೆಗೂ ಇರುವ ತಾರತಮ್ಯವು ಇದರಿಂದ ವ್ಯಕ್ತವಾಗುತ್ತದೆ. ನಾವು ವೇದಗಳ ಅಂತರ್ಗತ ಭಾವವನ್ನು ತಿಳಿಯುವುದಕ್ಕಿಂತಲೂ ಅದರ ಅಕ್ಷರಗಳ ಹೆಕ್ಕಲಿಕೆಯಲ್ಲಿಯೇ ಜಗಳವಾಡಿಕೊಳ್ಳುತ್ತಿರುವೆವು. ಪಂಡಿತರು ವೇದಾರ್ಥಗಳನ್ನು ನಿಷ್ಪಕ್ಷಪಾತ ಬುದ್ಧಿಯಿಂದ ತಿಳಿದುಕೊಳ್ಳಲಿಚ್ಛಿಸುವುದಕ್ಕಿಂತ ತಮ್ಮ ಮನಸ್ಸಿಗೆ ಒಡಂಬಡುವ ಅರ್ಥಕ್ಕೆ ವೇದಗಳ ಶಬ್ದಗಳನ್ನು ಹೇಗೆ ತಿರುವಿಕೊಳ್ಳಬಹುದೆಂದು ನೋಡುವವರಾಗಿದ್ದಾರೆ. ಅಮೇರಿಕದಲ್ಲಿ ೫೦೦, ಮಿಲಿಯ ಡಾಲರಿನ ದೊಡ್ಡದೊಂದು ಆಸ್ತಿಯು ಈ ಉದ್ದೇಶಕ್ಕಾಗಿ ಬಿಟ್ಟುಕೊಡಲ್ಪಟ್ಟಿತೆಂದೂ ಇದಕ್ಕಾಗಿ ಬಹಳ ದೊಡ್ಡ ತಯಾರಿಗಳೂ ನಡೆಯುತ್ತಿವೆಯಾಗಿ ತಿಳಿದುಬರುತ್ತಿದೆ. ಹಿಂದೂ ಆಚಾರಕರ್ತರು ಹಿಂದೂಗಳೆಲ್ಲರೂ ಮತಾಂತರವಾಗಿ ಹಿಂದೂ ಮತವು ಕ್ಷೀಣವಾಗಿ ಬರುವುದನ್ನು ನೋಡಿದರೂ ಪುನರ್ಮತಾಂತರವನ್ನು ನಿಷೇಧಿಸುವಂತೆ ವೇದಗಳು ಪರಮತೀಯರಿಂದ ಪುನರುದ್ಧರಿಸಲ್ಪಡುವಾಗ ತಾವು ಕವಲದೆ ಪುನಃ ಕಲ್ಯಾಣಕಾರದ ಮುಂದಾಗಿ ಒಂದು ಮತ್ಸ್ಯಾವತಾರವನ್ನು ವೇದೋದ್ಧಾರಕ್ಕಾಗಿ ನಿರೀಕ್ಷಿಸುತ್ತ ಕುಳಿತಿರಲಿ!

NOTES

ಬೆಂಗಳೂರಿನ ರಾಜಗಣಪತಿಯು [illegible] ಸಮ್ಮಂಧ ಸರಕಾರದವರು ಕನ್ನಡ ಪತ್ರಿಕೆಗಳ [illegible] ವನ್ನು ಕೆಳಗಿಳಿಸಿದರು. ಪತ್ರಿಕೆಗಳಿಗೆ ನಿರ್ಬ[illegible] ಕಾರಕ್ಕೆ ಸಿಕ್ಕಿದ ಲಾಭ ಇನ್ನೂ ತಿಳಿದುಬಂದಿಲ್ಲ.

• • •

ಈ ಮಹಾಭಾರತದ ಗೀತಾಬೋಧೆಯು [illegible] ಬೆಂಗಳೂರಿನ ಪೀಸ್ ಕೊನ್ಫರೆನ್ಸಿನಲ್ಲಿ ನಡೆಯಿತು [illegible] ನಂದರೆ—ಈ ಗೀತಾಗಾನವು ಕುರುಕ್ಷೇತ್ರದಲ್ಲಿ [illegible].

• • •

ಮೈಸೂರು ಮಹಾರಾಜರು ಬೆಂಗಳೂರಿಗೆ [illegible] ಗಣಪತಿಯ ಮಹಾಭಾರತದ ವಿಷಯ [illegible] ಪ್ರಜಾ ಶಾಂತಿ ಮಾಡುವರಂತೆ.

• • •

ಬಂಟವಾಳದಲ್ಲಿ ಮೋಟಾರ್ ಕೇಸಿನ ಶಿಕ್ಷೆಯ ಹೊಸ ಕ್ರಮ—ಸ್ವತಃ ಸಬ್ ಮೆಜಿಸ್ಟ್ರೇಟರೇ ಅಂಗಡಿಯಲ್ಲಿ ಕುಳಿತ ಪತ್ತೇದಾರರು—ಪತ್ತೆ ಬಹಳ ದೊಡ್ಡದು; ಲೇಟು ಉಂಟೋ ಇಲ್ಲವೊ ಎಂದು—ಇತ್ತ ಕಳ್ಳ ಪುಂಡರಿಗೆ ಮುಂಟಾ ಪುರುಸತ್ತು.

• • • •

ನಮ್ಮ ಮಂಗಳೂರು ಮುನಿಸಿಪಾಲಿಟಿಯವರು ಕಳೆದ ತಿಂಗಳಲ್ಲಿ ಪೆಂಟ್‌ಲೆಂಡ್ ಪೇಟೆಯವರಿಗೆ ಸಾಲುಮರಗಳ ಮಾರ್ಗಕ್ಕೆ ಆವರಿಸಿರುವ ಗೆಲ್ಲುಗಳನ್ನು ಕಡಿದು ಸ್ವಲ್ಪ ಮಳೆಗಾಲಕ್ಕೋಸ್ಕರ ಸವುದೆ ಮಾಡಿಕೊಟ್ಟಿದ್ದರು. ಈಗ ಲೈನ್ ಮೈದಾನಿನ ಹತ್ತಿರದ ಗೋಳಿಮರದ ಗೆಲ್ಲುಗಳನ್ನು ಕಡಿಯಲು ಪ್ರಾರಂಭಿಸಿರುವರು. ಮೈದಾನಿನ ಹತ್ತಿರವಿದ್ದವರಿಗೆ ಸವುದೆ ಸಿಕ್ಕಿದಂತಾಯಿತು.

ಹಂಪನಕಟ್ಟೆ, ಬಲ್ಮಠ, ಪೋಲೀಸ್ ಆಫೀಸು ಇವುಗಳ ಹತ್ತಿರ ಹೊಸ ಹೊಸ ಗ್ಯಾಸುದೀಪಗಳನ್ನು ಉರಿಸುವ ಏರ್ಪಾಡು ಮುನಿಸಿಪಾಲಿಟಿಯವರು ಮಾಡಿರುತ್ತಾರೆ. ರಥಬೀದಿಯಲ್ಲಿ ಮಾತ್ರ ಗ್ಯಾಸ್ ಲೈಟ್ ಕಂಭವಿದೆ. ದೀಪ ಮಾತ್ರ ಕಾಣುವುದಿಲ್ಲ.

ರಥಬೀದಿಯಲ್ಲಿರುವ ಕಂಭಕ್ಕೆ ಗ್ಯಾಸ್ ದೀಪ ಉರಿಸಲು ಗತಿಸಿದ ಎಮ್ ಉಪೇಂದ್ರ ಪೈಗಳ ಪರವಾಗಿ ಮುನಿಸಿಪಾಲಿಟಿಯವರ ಕೂಡೆ ಹಣ ಕಟ್ಟಿರುವುದಾಗಿ ಒಬ್ಬ ಮಹನೀಯರ ಹೇಳಿಕೆ. ಇದು ನಿಜವಾದರೆ ರಥಬೀದಿಯಲ್ಲಿಯೂ ಗ್ಯಾಸುದೀಪವೊಂದನ್ನು ಮುನಿಸಿಪಾಲಿಟಿಯವರು ಉರಿಸಬಾರದೆ!

• • • *

ಕಾರ್ಕಳದಲ್ಲಿ ಬೋರ್ಡ ಎಲಿಮೆಂಟರಿ ಶಾಲೆಯಲ್ಲಿ ಪ್ರೆಸಿಡೆಂಟರ ಅಧ್ಯಕ್ಷತೆಯಲ್ಲಿ ತಾಳಮದ್ದಳೆ ಎಂಬ ಯಕ್ಷಗಾನ ಪ್ರಬಂಧ ಗಾಯನವು ನಡೆಯಿತಂತೆ. ಧರ್ಮರಾಯರ ಪಾಲು ಹಿಂದೂ ಧರ್ಮಾಭಿಮಾನಿಯಲ್ಲದ ಅಲಿಬ್ಯಾರಿಗಳು ವಹಿಸಿದ್ದರಂತೆ. ಇಂತಹ ಹಲವು ಪ್ರಸಂಗಗಳು ಬಂದರೆ ಹಿಂದೂ ಮುಸಲ್ಮಾನ ಐಕ್ಯವು ಸುಲಭವಾಗಿ ನೆರವೇರಿದಂತಾಯಿತು.

• • • •

[illegible] ಅಯ್ಯಂಗಾರರು ಭಾಗವತರಿಗೆ ಬಂಗಾರದ ಪದಕವನ್ನೂ ಅಲಿಬ್ಯಾರಿಗಳಿಗೆ ಭಾಗವತರ ಬದಲಿಗೆ ಇವರಿಗೆನೇ ಪದಕವನ್ನು ಕೊಡಬೇಕು ಎನ್ನುವ ಮಾತನ್ನೂ ಕೊಟ್ಟರಂತೆ, ಒಬ್ಬರಿಗೆ ಬೆಲ್ಲ ಇನ್ನೊಬ್ಬರಿಗೆ ಬೆಲ್ಲದಂತಹ ಮಾತು!

ಶಿಲೋನಿನಲ್ಲಿ ಮೋಟಾರ್ ರೋಲ್ಸುಗಳನ್ನು ಆನೆಗಳ ಮೇಲೂ ತರುವ ಆಲೋಚನೆ. ಇನ್ನು ಮುಂದಕ್ಕೆ ಆನೆಗಳಿಗೂ ಹಿಂದೂ ಮುಂದೂ ಕೆಂಪು ಡೇಂಜರ್ ದೀಪಗಳನ್ನು ಉರಿಸುವ ಕಾನೂನು ಮಾಡಬೇಕಾಗಿ ಹೊಸದೊಂದು ಚಳವಳಿ.

ಕಳೆದ ಎರಡು ಮೂರು ವಾರಗಳ ಒಳಗೆ ಸುಳ್ಯ ಗ್ರಾಮದಲ್ಲಿ ನಾಲ್ಕೈದು ಕೊಲೆಗಳು ನಡೆದವು. ಕೊಲೆಗಳ ಸುಗ್ಗಿ.

ಒಂದರ ಹಿಂದೆ ಒಂದು ಕೊಲೆಯಾಗುತ್ತಿರುವಾಗ ಪೋಲೀಸರ ನಿಗಾ ಇಲ್ಲವೇ?

ಜಪಾನ್ ದೇಶವು ಇಂಗ್ಲೀಷರನ್ನು ಅನುಕರಿಸುವುದೇನೋ ನಿಜ. ಆದರೆ ಇಂಗ್ಲೀಷರಿಗೆ ಹಿಂದೂಸ್ಥಾನವು ಸಿಕ್ಕಿದ್ದು ಹಲವು ಶತಮಾನಗಳ ಹಿಂದಿನ ಕತೆ. ಚೀನಾವು ಅಷ್ಟೇ ಸುಲಭವಾಗಿ ಜಪಾನಿಗೆ ಸಿಕ್ಕಲಾರದೆಂದು ಜಪಾನು ತಿಳಿದಿದ್ದರೆ ಕ್ಷೇಮವಿತ್ತು.

ಚೀನವು ಜಪಾನಿನ ಸಾಮಾನುಗಳನ್ನು ಬಹಿಷ್ಕರಿಸುವುದು. ಜಪಾನು ಅತಿಆಶೆಗೆ ಹೋಗಿ ಗತಿಗೆಡಿಸಿಕೊಳ್ಳುವುದೇ!

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟ್ಯಾಮ್ ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟ್ಯಾಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ

ವಿ. ಸೂಚನೆ — ನಮ್ಮ ವಾಚು ರಿಪೇರಿಯವರು [illegible] ವರ್ಷಗಳಿಗೂ [illegible] ಕೆಲಸ ಕಲಿತು [illegible] ಪ್ರಸಿದ್ಧವಾಗಿರುವುದರಿಂದ ಸರಿಯಾದ ಸಮಯವು ದೊರಕುವುದು

ಇನ್ನೂ ಹೆಚ್ಚಿನ ಕಾರಣಗಳು!
ಪೆರೆಡ್ಯಾಸ್ ಟೋನಿಕ್ ಪಿಲ್ಸ್

ಎಂಬರ್, ಕಸ್ತೂರಿ, ಶಿಲಾರಾಳ, ಬಂಗಾರ ಮೊದಲಾದ ಅಮೌಲ್ಯ ಪದಾರ್ಥಗಳಿಂದಾಗುವ ಈ ನಿರ್ಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವನ್ನು ಘಟಿಸುವ ಈ ಮಾತ್ರೆಗಳು ಇಡೀ ಶರೀರದ ಚೇತನವನ್ನು ವೃದ್ಧಿ ಮಾಡುವುವು. ದೇಹಶಕ್ತಿಯನ್ನೂ ಸ್ನಾಯುಗಳ ಬಲವನ್ನೂ ಹೆಚ್ಚಿಸಿ, ಪ್ರಾಣವನ್ನೂ ತೇಜವನ್ನೂ ಅತಿಯಾಗಿ ಕಳೆಕೊಂಡಿರುವವರಿಗಾದರೂ ಸ್ವಲ್ಪದರಲ್ಲೇ

— ಕೊಡುವುವು. —

60 ಮಾತ್ರೆಗಳುಳ್ಳ ಸೀಸೆಗೆ ಬೆಲೆ 7 8–0 ಮಾತ್ರ

ಆರ್. ಛೋಟಾಲಾಲ್ ಎಂಡ್ ಕೋ,
(K) ಪ್ರಿನ್ಸೆಸ್‌ಸ್ಟ್ರೀಟ್, ಬೊಂಬಾಯಿ ನಂಬ್ರ 2



ಸ್ವತಂತ್ರ ಉದ್ಯೋಗ

ಅಲ್ಪ ಭಂಡವಲದಿಂದ ಸ್ವತಂತ್ರ ಉದ್ಯೋಗ ನಡೆಯಿಸಿ ತುಂಬಾ ಲಾಭವನ್ನು ಸಂಪಾದಿಸಬೇಕಾಗಿದ್ದರೆ

ಮೆಸರ್ಸ್

ಮೋತಿಲಾಲ ತ್ರಿಭುವನದಾಸ ಮತ್ತು ಕಂಪೆನಿ,

ಪಿಂಪಳಭಾಯಿ ಬಿಲ್ಡಿಂಗ್ ಪ್ರಿನ್ಸೆಸ್‌ಸ್ಟ್ರೀಟ್ ಮುಂಬಾಯಿ

ಇವರ

ಸೋಡಾ ವಾಟರ್ ಯಂತ್ರಗಳು, ಎಸಿಡ್, ಸಿಲಿಂಡರ, ಸೋಡಾ ವಾಟರ್ ಬಾಟಲಿಗಳು, ಮೊದಲಾದುವನ್ನು ಕುರಿತಾದ ಧರ್ಮಾರ್ಥವಾಗಿ ಸಿಗುವ ಕೆಟಲಾಗಿಗೆ ಇಂದೇ ಬರೆದುಕೊಳ್ಳಿರಿ

ಸನ್ ೧೯೨೭-೨೮ರಲ್ಲಿ ಹೊಸತಾಗಿ ತಯಾರಾದ
ಸಮಸ್ತರಿಗೂ ಚೆನ್ನಾಗಿ ಮಾಹಿತಿಯುಳ್ಳ

'ಸೂರ್ಯ' ಗುರುತುಳ್ಳ ಪವಿತ್ರ ಕೇಶರ.

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್

ಸ್ವಚ್ಛವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು.

'ಸೂರ್ಯ'ಮಾರ್ಕಿನ ಉತ್ತಮ ಕೇಶರವನ್ನು ಕೆಳಗೆ ವಿಳಾಸ ಕೊಟ್ಟಿರುವವರಿಂದ ಪಡೆಯಿರಿ

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾಶಲಿನದು. ಒಂದು ರಾಶಲಿನ ಡಬ್ಬಿ ಇರುವುದಿಲ್ಲ. ಆದರೆ ಅತಿ ಕಡಿಮೆಯೆಂದರೆ ಒಂದು ಔನ್ಸ್ ಧಾರಣಕ್ಕನ್ನಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ,
28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು.

ದಯೆ ಇಟ್ಟು ಮೇಲಣ ಸಾಮಾನುಗಳನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ ನಿಮಗೆ ಅದರಿಂದ ಪ್ರಯೋಜನವಿದೆ ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,

ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ
210 ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲತೃಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S. I. R.)

ಆಯುರ್ವೇದೀಯ ವೈದ್ಯ ಸಭೆಗಳಲ್ಲಿ ವಿಖ್ಯಾತವಾಗಿ ಸರಕಾರದಿಂದ 'ವೈದ್ಯರತ್ನ' ಎಂಬ ಬಿರುದು ಪಡೆದು ಪ್ರಸಿದ್ಧರಾದ 'ವೈದ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮೂಸ್ಸಾದ್' ಅವರ [illegible] ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವ ನಾನಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳ [illegible] ಭಸ್ಮಗಳು [illegible], ಮತ್ತು ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಗಳು ನಮ್ಮಲ್ಲಿ ಯಾವಾಗಲೂ ಶಿಲ್ಕಿನಲ್ಲಿ ತಯಾರಿರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ಕಳೆದಿರುವ ಕಾಲ, ವಯಸ್ಸು, ನಿತ್ಯ ಆಹಾರದ [illegible] ಮೊದಲಾದ [illegible] ಪದಾರ್ಥಗಳ ಅಭ್ಯಾಸ [illegible] ಈ ವಿವರ ಹಿಂದೆ ನಡೆಸಿದ ಚಿಕಿತ್ಸೆ [illegible] ಆ ವಿವರ ಮತ್ತು ರೋಗಿಯ [illegible] ಎಂಬ [illegible] ವಿವರಗಳು [illegible] ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ [illegible] ಕೆಳಗಿನ ವಿಳಾಸಕ್ಕೆ [illegible] ಅನಾನುಕೂಲಸ್ಥರಾದ [illegible] ಮದ್ದುಗಳನ್ನು ಕೊಡುವರೆಯೂ [illegible] ಅದನ್ನು ಸೇವಿಸುವ ಎಲ್ಲಾ [illegible] ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು [illegible] ಮದ್ದುಗಳನ್ನು ಒದಗಿಸಿಕೊಡುವರೆ [illegible]

[illegible] ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.

ADVERTISE IN OUR WEEKLY
To Reach the Hearths & Homes of India's Masses

For Particulars Apply to

The Manager,
SWADESHABHIMANI,
MANGALORE.

Diamonds ವಜ್ರಗಳು **Diamonds**

BOLA MANGESH ROW & CO,
MANGALORE

Agents & Direct importers of Superior Diamonds of Antwerp

ಯೇಜಂಟ್ರಾಗಿ, ಯಂಟವರ್ಪಿನಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್,
10-8-'28. ಮಂಗಳೂರು

ಸ್ವದೇಶಾಭಿಮಾನಿ.

ಮಂಗಳೂರು ... ಆಗೋಸ್ತು ೧೯-೨೮.

ನಮ್ಮ ಒಪ್ಪಿತದ ಸರಕಾರ.

[illegible]

... (Statistical Study)ನ್ನು ... [illegible]

ದೇಶದ ವರ್ತಮಾನ

[illegible]

ಪರದೇಶ ವರ್ತಮಾನ

[illegible]

[illegible]

ದಕ್ಷಿಣ ಕನ್ನಡ

ಸ್ವೀಕಾರ.

[illegible] ಶ್ರೀಕೃಷ್ಣ [illegible]

ಗ್ರಂಥಕರ್ತರು—[illegible]

[illegible]

ಮಂಗಳೂರು—[illegible]

[illegible]

[illegible]

[illegible]

ಅನುಕ್ರಮಣಿಕೆ

ಅಗ್ರಲೇಖ — ಪುಟ
ನಮ್ಮ ಒಪ್ಪಿತದ ಸರಕಾರ — ೬
ವಿದೇಶ ವರ್ತಮಾನ — ೬
ಸ್ವದೇಶಾಭಿಮಾನಿ ... — ೯
[illegible] — ,,
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ — ೬-೭
ದಕ್ಷಿಣ ಕನ್ನಡ— ಮಂಗಳೂರು, ಸುಳ್ಯ, ಹೊಸದುರ್ಗ, ಮಂಜೇಶ್ವರ
ಪಾಣೆಮಂಗಳೂರು, ಬಂಟವಾಳ, ಕುಂದಾಪುರು ಉಪ್ಪಿನಂಗಡಿ
ಪುತ್ತೂರು ... ಬಳಿ — ೬-೮
ವಿವಿಧ ಸಮಾಚಾರಗಳು — ೮
ಅಮೇರಿಕದವರ ಕೈಗಾರಿಕೆ ಕ್ರಮಗಳಿಂದ ಇಂಡಿಯವು ಕಲಿತು
ಕೊಳ್ಳಬೇಕಾದ ಕೆಲವು ಸಂಗತಿಗಳು. — ೧೪
ಪತ್ರವ್ಯವಹಾರ, ೧, ೨, ೩ — ೨
ಕೆಲವು ಉಪಯುಕ್ತ ಸಲಹೆಗಳು. — ,,

ಸ್ವದೇಶಾಭಿಮಾನಿ.

ತಾರೀಕು ೨೪ನೇ ಶುಕ್ರವಾರ ಆಗೋಸ್ತು ೧೯೨೮.

ನಮ್ಮ ಒಪ್ಪಿತದ ಸರಕಾರ.

ಲೇಖಾಂಕ ೨

ನೆಹರು ಕಮಿಟಿಯ ವರದಿಯು ಪ್ರಕಟವಾದ ಮೇಲೆ ಅದರ ವಿಷಯವಾದ ಎಲ್ಲವರ ಅಭಿಪ್ರಾಯಗಳೂ ಕೊಡಲ್ಪಟ್ಟವೆ. ಇದೇ ವರದಿಯು ಪ್ರತಿ ದೈನಿಕ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟದ್ದರೂ, ಪ್ರಥಮ ಬಾರಿ ಮುದ್ರಿಸಲ್ಪಟ್ಟ ೨೦೦೦ ಪ್ರತಿಗಳು ಐದೇ ದಿನಗಳಲ್ಲಿ ಮುಗಿದು ಹೋದುವೆಂಬುದರಿಂದಲೇ ಆ ವರದಿಯ ಪ್ರಾಮುಖ್ಯತೆಯು ತಿಳಿದುಬರುವುದು. ಹಿಂದೂದೇಶದ ಸಾಮಾನ್ಯ ಎಲ್ಲಾ ದೇಶೀಯ ಅಭಿಪ್ರಾಯಗಳೂ ನೆಹರು ಕಮಿಟಿಯ ವರದಿಯನ್ನು ಹೊಗಳುತ್ತಿವೆ. ಎಂಗ್ಲೊ ಇಂಡಿಯನ್ ಪತ್ರಿಕೆಗಳು ಕೂಡಾ ಆ ವರದಿಯಲ್ಲಿ ಕಂಡುಬರುವ ಮಹತ್ವವನ್ನು ಒಪ್ಪಿಕೊಳ್ಳದೆ ಇಲ್ಲ. ಪಾಯೊನಿಯರ್ ಪತ್ರಿಕೆಯು ಇದರಷ್ಟು ಉತ್ತಮ ವರದಿಯು ಇನ್ನೊಂದಾಗಲಾರದೆಂದೂ ಇನ್ನಾದರೂ ಸೈಮನರು ಇವರನ್ನು ಹತ್ತಿರ ಬರಮಾಡಿ ಚರ್ಚಿಸಿಕೊಳ್ಳಬೇಕೆಂದೂ ಸೂಚಿಸುವರು. ಇಂಗ್ಲೆಂಡಿನಲ್ಲಿ ಮಜೂರ ಪಕ್ಷದ ಪತ್ರಿಕೆಗಳೂ ಸದಕ್ಕರ ವರದಿಯ ಮಹತ್ವವನ್ನು ಒಪ್ಪಿಕೊಂಡು ಸೈಮನರ ಲಕ್ಷ್ಯವನ್ನು ಈ ವರದಿಯ ಕಡೆಗೆ ಎಳೆಯುವರು. ಆದರೆ ಕನ್ಸರ್‍ವೆಟಿವ್ ಪಕ್ಷದವರು ಇನ್ನೂ ಹಿಂದೀಯರನ್ನು ನಿಂದಿಸುವುದರಲ್ಲಿಯೇ ನಿರತರಾಗಿ ತಮ್ಮ ಮನೋಮಾಲಿನ್ಯವನ್ನು ವ್ಯಕ್ತಪಡಿಸುವರು. ಈ ಅಭಿಪ್ರಾಯಗಳ ಮಧ್ಯದಿಂದ ಕಾಣುವುದೇನೆಂದರೆ, ಬ್ರಿಟಿಷರು ಹಿಂದೀಯರಿಗೆ ರಾಜಕೀಯ ಹಕ್ಕುಗಳನ್ನು ಉದಾರಹಸ್ತದಿಂದ ಕೊಡಲಿಕ್ಕೆ ಸಿದ್ಧರಿಲ್ಲವೆಂಬುವುದು.

ಇನ್ನು ನಾವು ನೆಹರು ಕಮಿಟಿಯು ಚರ್ಚಿಸಿಕೊಟ್ಟಿರುವ ಸೂಚನೆಗಳನ್ನು ಪರ್ಯಾಲೋಚಿಸಬೇಕಾಗಿದೆ ಪ್ರಥಮತಃ ಹಿಂದೂಸ್ಥಾನಕ್ಕೆ ಯಾವ ತರದ ಸರಕಾರ ಬೇಕಾಗಿದೆ ಎಂಬುದನ್ನು ಅವರು ಸ್ಥೂಲವಾಗಿ ವಿಚಾರಿಸಿರುವರು. "ಹಿಂದೂಸ್ಥಾನಕ್ಕೆ Self Government ಸೆಲ್ಫ ಗವರ್ನಮೆಂಟನ್ನು ಕೊಡುವುದೇ ತಮ್ಮ ಧ್ಯೇಯವೆಂದು ಸನ್ ೧೯೧೭ನೇ ಇಸವಿಯಲ್ಲಿ ಸೆಕ್ರೆಟರಿಯವರು ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಹೇಳಿದ್ದರು. ಆ ಮಾತಿಗೆ ಅನುಸಾರವಾಗಿಯೂ, ಹಿಂದೂಸ್ಥಾನದ ಅಂತರಿಕ ಪರಿಸ್ಥಿತಿಗೆ ಅನುಸಾರವಾಗಿಯೂ ಈ ದೇಶಕ್ಕೆ ಡೊಮಿನಿಯನ್ ಸರಕಾರವೇ ಯೋಗ್ಯವಾದದ್ದೆಂದು ಕಮಿಟಿಯು ಎಲ್ಲಾ ತರದ ವಿರೋಧಾಭಿಪ್ರಾಯಗಳನ್ನು ಸಮಾಲೋಚಿಸಿ, ಖಂಡಿಸಿ, ಸ್ಥಾಪಿಸಿರುವರು. ಈ ಸ್ಥಾಪನೆಯು ತತ್ಕಾಲದ ಮಟ್ಟಿಗೆ ಎಲ್ಲ ಹಿಂದೀಯರೂ ಒಪ್ಪುವಂತಹುದೇ ಆಗಿರುತ್ತದೆ. ಕೆನಡಾ ದೇಶವು ಬ್ರಿಟಿಷ ಸಾಮ್ರಾಜ್ಯದ ಡೊಮಿನಿಯನ್ನಾಗಿರುತ್ತದೆ. ಅದಕ್ಕೆ ಇಂಗ್ಲೆಂಡಿನ ರಾಜರಿಂದ ಗವರ್ನರ ಜನರಲರೊಬ್ಬರು ನೇಮಕವಾಗುತ್ತಾರೆ. ಆದರೆ ಆ ಗವರ್ನರ ಜನರಲರು ನಮ್ಮ ವ್ಯಾಸರಾಯರಂತೆ ಸರ್ವಾಧಿಕಾರವುಳ್ಳವರಾಗಿರದೆ ಬರೇ ರಾಜ ಪ್ರತಿನಿಧಿ ಮಾತ್ರ ಆಗಿರುವರು. ಸರಕಾರವು ಅಲ್ಲಿಯ ಪಾರ್ಲಿಮೆಂಟಿನಿಂದಲೂ ಪಾರ್ಲಿಮೆಂಟಿನ ಮಂತ್ರಿಗಳಿಂದಲೂ ನಡೆಯುತ್ತಿದೆ. ಸಾಮ್ರಾಜ್ಯ ಪರಿಷತ್ತಿನಲ್ಲಿ ಕೆನಡಾದ ಪ್ರತಿನಿಧಿಗಳಿಗೆ ಇಂಗ್ಲೆಂಡಿನ ಪ್ರತಿನಿಧಿಗಳಷ್ಟೇ ಗೌರವ [illegible] ಸಾಮ್ರಾಜ್ಯದ ಸೌಹಾರ್ದದಲ್ಲಿ ಮಾತ್ರ ಇಂಗ್ಲೆಂಡಿನೊಡನೆ ಒಟ್ಟುಗೂಡುತ್ತಿದೆ. ಇಂತಹ ಸೌಹಾರ್ದವನ್ನು ಯಾರೊಬ್ಬನೂ ಬರೇ ಒಂದು ಅನುಭೋಗಿಗಾಗಿ ನಿರೋಧಿಸುವನೆಂದು ನಾವು ತಿಳಿಯಲಾರೆವು. ಹಿಂದೀಯರಿಗೆ ಸಮಾನತೆಗೆ ಭಂಗ ಒದಗದಿರುವ ವರೆಗೆ ಹಿಂದೂಸ್ಥಾನವು ಬ್ರಿಟಿಷ ಸಾಮ್ರಾಜ್ಯಾಂತರ್ಗತವಾಗಿರಲಿಕ್ಕೆ ಯಾವ ಅಡ್ಡಿಯೂ ಇರಲಾರದು.

ಇದೇ ವರದಿಯಲ್ಲಿ ಬಹಳ ಕಷ್ಟಕರವಾದ ಸಮಸ್ಯೆಯೆಂದರೆ ಜಾತೀಯ ಸಮಸ್ಯೆಯಾಗಿತ್ತು. ಇದು ವರದಿಯನ್ನು ತಯಾರಿಸಲಿಕ್ಕೆ ಬಹಳ ತೊಂದರೆಕೊಡಬಹುದೆಂದೆಣಿಸಲಾಗಿತ್ತು. ಆದರೆ ನೆಹರು ಕಮಿಟಿಯ ಮನಃ ಪೂರ್ವಕತೆಯೂ, ಶಕ್ತಿಯೂ ಇದನ್ನು ಸಾಧ್ಯವಾಗಿ ಮಾಡಿತು. ಜಾತೀಯ ಸಮಸ್ಯೆಗೆ ಒಂದು ನೂತನ ರೂಪವು ಕೊಡಲ್ಪಟ್ಟು, ಎಲ್ಲರಿಗೂ ಒಪ್ಪುವಂತಹ ತೀರ್ಮಾನವು ಕೊಡಲ್ಪಟ್ಟಿತು. ಮುಸ್ಲಿಮ್ ಲೀಗಿನ ಮತ್ತು ಹಿಂದೂ ಮಹಾಸಭೆಯ ಪ್ರಮುಖ ಧುರೀಣರ ಸ್ಪಷ್ಟವಾದ ಅಭಿಪ್ರಾಯವು ಈ ವರೆಗೆ ಬಂದಿಲ್ಲವಾದರೂ, ಅಲಿ ಬಂಧುಗಳೂ, ಮದ್ರಾಸಿನ ಮುಸಲ್ಮಾನ ಬಂಧುಗಳೂ, ಹಿಂದೂ ಮಹಾಸಭೆಯಲ್ಲಿ ಜವಾಬ್ದಾರಿಗಳನ್ನು ವಹಿಸುವ ಮುಖಂಡರೂ ನೆಹರು ಕಮಿಟಿಯ ಅಭಿಪ್ರಾಯಗಳನ್ನು ಸ್ವೀಕರಿಸಿ ದೇಶದ ಒಪ್ಪಿತವನ್ನು ಸುಲಭಸಾಧ್ಯವಾಗಿ ಮಾಡಿರುವರು.

ಈ ಜಾತೀಯ ಸಮಸ್ಯೆಗಳ ವಿಷಯವಾಗಿ ಅನೇಕ ರೀತಿಯಲ್ಲಿ ಸಂಖ್ಯಾ ಶೋಧಗಳ (Statistical Study)ನ್ನು ಕಮಿಟಿಯು ಮಾಡಿದೆ. ಈ ಮೂಲಕ ಜಾತೀಯವಾಗಿ ಮತದಾರರನ್ನು ವಿಭಾಗಿಸದೆ, ಹತ್ತು ವರ್ಷಗಳ ವರೆಗೆ ಸ್ಥಾನಗಳನ್ನು ಜಾತೀಯವಾಗಿ ವಿಭಾಗಿಸಿ, ಚುನಾವಣೆಯನ್ನು ಎಲ್ಲಾ ಮತದಾರರ ಮೂಲಕ ಮಾಡಿಸಿ, ಹತ್ತು ವರ್ಷಗಳ ನಂತರ ಜಾತೀಯ ವಿಭಾಗಣೆಯನ್ನೇ ತೆಗೆದುಹಾಕುವ ಆಲೋಚನೆ ಮಾಡಲಾಗಿದೆ. ಅಲ್ಪ ಸಂಖ್ಯಾಕರ ಹಿತಕ್ಕಾಗಿ ಪ್ರತ್ಯೇಕ ಉಪಾಯಗಳನ್ನು ರಚಿಸಲಾಗಿಯದೆ. ಜಾತೀಯ ವಿಭಾಗಣೆಗಳಿಂದ ಕೌನ್ಸಿಲುಗಳಲ್ಲಿ ಕೃತ್ರಿಮ ವಿಭಾಗಣೆಗಳನ್ನು ಮಾಡುವುದು ದೇಶದ ರಾಜಕೀಯ ಉನ್ನತಿಗೆ ಹಿತಕರವಾಗಿಲ್ಲವೆಂದು ಈಗಿನ ಮೊಂಟಫೊರ್ಡ ಸರಕಾರವೇ ತೋರಿಸುವುದು. ರಾಜಕೀಯ ವಿವಾದಗಳು ರಾಜಕೀಯ ಪಕ್ಷ ವಿಭಾಗಣೆಗಳಿಂದಲೇ ನಡೆಯತಕ್ಕದ್ದು. ಆದುದರಿಂದ ನೆಹರು ಕಮಿಟಿಯ ಸಮಸ್ಯೆಯ ಚರ್ಚೆಯು ದೇಶಕ್ಕೆ ಬಹಳ ಪ್ರಯೋಜನಕಾರಿಯಾಗಿರುತ್ತದೆ. ಅತ್ಯಲ್ಪ ಸಂಖ್ಯಾಕರು, ಅಂದರೆ ಕ್ರಿಸ್ತೀಯರು, ಸಿಕ್ಖರು, ಜೈನರು ಮೊದಲಾದವರಿಗೂ ಪ್ರತ್ಯೇಕ ಪ್ರಾತಿನಿಧ್ಯದ ಅನಾವಶ್ಯಕತೆಯು ಸ್ಪಷ್ಟವಾಗಿ ತೋರಿಸಲ್ಪಟ್ಟಿದೆ. ನೆಹರು ತೀರ್ಮಾನವು ಕಾರ್ಯತಃ ಸ್ವೀಕೃತವಾದರೆ ಹಿಂದೂಸ್ಥಾನದ ಜಾತೀಯ ಕಲಹಗಳು ಬಹುಮಟ್ಟಿಗೆ ಕಡಿಮೆಯಾಗುವುವು ಎಂದು ಆಶಿಸಲು ಕಾರಣ ಉಂಟಾಗುವುದು.

ವಿದೇಶ ವರ್ತಮಾನ.

ರೋಸ್‌ಫೋರ್ಡ್ ಎಂಬ ಪಟ್ಟಣದಿಂದ ವಿಮಾನದಲ್ಲಿ ಕ. ೧ಕಾ ಅಟ್ಲಾಂಟಿಕ್ ಸಾಗರವನ್ನು ದಾಟಿ ಸ್ವೀಡನಿಗೆ ತಲುಪಬೇಕೆಂದು ಇಬ್ಬರು ಹೊರಟಿರುವರು. ಅವರು ತಮ್ಮ ಪ್ರಯಾಣದ ಸಮಯದಲ್ಲಿ ಮೂರು ಸ್ಥಳಗಳಲ್ಲಿ ಕೆಳಗಿಳಿಯಬೇಕೆಂದು ನಿಶ್ಚಯಿಸಿರುವರು. ವಾಯರ್‌ಲೆಸ್ ಒಂದು ಮೋಟರು ಒಂದು ಬೋಟು, ಇವಿಷ್ಟು ವಿಮಾನದಲ್ಲಿ ಇರುವವು.

— ಪೌರ್ವಾತ್ಯರ ಒಂದು ದೊಡ್ಡ ಪರಿಷತ್ತು ಆಗಸ್ಟು ೨೬ನೇ ತಾರೀಕಿನ ದಿನ ಒಕ್ಸ್‌ಫೋರ್ಡಿನಲ್ಲಿ ಪ್ರಾರಂಭವಾಗುವದು. ಇದಕ್ಕೆ ಸುಮಾರು ೩೦೦ ಪ್ರತಿನಿಧಿಗಳ ಬರಲಿರುವರು. ಎಲ್ಲಾ ಸರಕಾರದವರ ವಲಿಗೇಶನುಗಳೂ ಬರುವವು. ಇದೇ ಪರಿಷತ್ತಿನ ಹಿಂದಿನ ಅಧಿವೇಶನವು ೧೯೧೨ನೇ ಇಸವಿಯಲಿ ಏಥೆನ್ಸಿನಲ್ಲಿ ಜರಗಿದ್ದಿತು.

— ಸೊಟ್ಲೆಂಡ್ ದೇಶದ ಸಮೀಪವಿರುವ ಸ್ಕೋಟನ್ ಕಲ್ಲಿದ್ದಲು ಕಾರಖಾನೆಗೆ ಬ್ಯೂನೋಸ್ ಏರಿಸಿನ ಹತ್ತು ಸಾವಿರ ಟನ್ ಕಲ್ಲಿದ್ದಲ ನಳಿಗೆಗಳಿಗಾಗಿ ಕಂಟ್ರಾಕ್ಟು ಬಂದಿರುತ್ತದೆ. ಯುದ್ಧದ ತರುವಾಯ ಇಂಗ್ಲೆಂಡಿನ ಕಾರಖಾನೆಗಳಿಗೆ ಇಂತಹ ಕಂಟ್ರಾಕ್ಟು ಬಂದಿರಲಿಲ್ಲ.

— ೧೯೧೯ನೇ ಇಸವಿಯಲ್ಲಿ ಮುಳುಗಿಹೋದ ಬ್ರಿಟಿಷರ ಸಬ್‌ಮೆರಿನನ್ನು ರಶ್ಯಿಯನರು ಕಂಡುಹಿಡಿದಿರುವರು. ಹೊರಗಿನಿಂದ ವಸ್ತುವಾದ ಮಣ್ಣು ಕವಿದಿತ್ತು. ಅದರೊಂದಿಗೆ ಸತ್ತ ನಾಲ್ವತ್ತು ಜನರ ಎಲುಬಿನ ಗೂಡುಗಳೂ ಸಿಕ್ಕಿರುವವು.

— ಪ್ರಸಿದ್ಧ ಪಟ್ಟ ಲೇಖಕನಾದ ವೆಕಾಲೆಯ ಅಳಿಯನಾದ ಸರ್ ಜೋರ್ಜ ಟ್ರೆವೆಲ್ಯಯನ್ ಎಂಬವನು ಮೃತಪಟ್ಟನು. ಈತನು ಬಹು ವಿದ್ವಾಂಸನಾಗಿದ್ದನಲ್ಲದೆ ಮೆಕಾಲೆಯ ಜೀವನ ಚರಿತ್ರೆಯನ್ನು ಬರೆದಿರುವನು.

— ಅಮಾನುಲ್ಲ ಖೊರಿಗಳವರ ಕನಿಷ್ಠ ಸಹೋದರಿಯಾದ ರಾಜಕುಮಾರಿ ಕುಬ್ರಾಖಕಿಂಬವಳನ್ನು ಮದುವೆಯಾಗಬೇಕೆಂದು ಕೆಲ ಸಾರ್ದಾರರು ಅಪೇಕ್ಷೆ ಪಡುವರು. [illegible] ಅಮಾನುಲ್ಲಾ ದೊರೆಗಳವರೂ ಕುರ್ಕಿ ಪ್ರಸಿಡೆಂಟರ ಕಾಲೂರಿನಲ್ಲಿ ಒಟ್ಟಾಗಿ ಚರ್ಚಿಸಿರುವರು.

— ಟಿಬೇಟಿನ ಆಗ್ನೇಯ ಭಾಗದಲ್ಲಿರುವ [illegible] ಕೆಂಧೀಯವನ್ನು ಚಿಟಿಷ್ ಸರಕಾರಕ್ಕೆ ಕೊಡುವುದಕ್ಕೆ ಅಲ್ಲಿನ ಜನರು ಒಪ್ಪಿದ್ದರು. ಅದಕ್ಕಾಗಿ ಟಿಬೇಟ್ ಸರಕಾರದವರು ಕೆಲವನ್ನು ಸೈನ್ಯವನ್ನು ಕಳುಹಿಸಿದರು. ಸಾಧಾರಣ ತರದ ಕಾದಾಟಕ್ಕೆ ಪ್ರಾರಂಭವಾಯಿತು.

— ಸ್ಪೈನ್ ದೇಶದ ಅರಸನ ಸಹೋದರನು [illegible] ಹಲವರೊಡನೆ ಕಾದಾಡಿದನು. ಅತನನ್ನು ಯಾರೋ [illegible] ಬಿಟ್ಟರು.

— ಇಂಗ್ಲೆಂಡಿನಿಂದ ಪಶ್ಚಿಮ ಅಮೇರಿಕಕ್ಕೆ [illegible] ವಾಯು ವಿಮಾನಗಳ ಮೂಲಕ ಒಯ್ಯುತ್ತಿರುವರು. ಇಂಗ್ಲೆಂಡಿನಿಂದ ಹೊರಟ ವಿಮಾನವು ಬರೇ ೮ ದಿನಗಳೊಳಗೆ ಅಮೇರಿಕಕ್ಕೆ ತಲುಪುವದು.

— ಲಿಂಕೊಲ್ನಶಾಯರಿನಲ್ಲಿ ಒಂದು ವಿಮಾನವು ಇನ್ನೊಂದು ವಿಮಾನಕ್ಕೆ ತಾಗಿ ಮೂರು ಜನರು ಸತ್ತು ಹೋದರು. ೧೯೨೮ನೇ ಇಸವಿಯಲ್ಲಿ ವಿಮಾನಗಳ ಮೂಲಕ ಇದು ವರೆಗೆ ಸತ್ತವರ ಸಂಖ್ಯೆಯು ೩೩. ೧೯೨೭ನೇ ಇದೇ ವರುಷದಲ್ಲಿ ಸತ್ತವರು ೨೫ ಮಾತ್ರ, ೧೯೨೬ರಲ್ಲಿ ಸತ್ತವರು ೮೫; ಈ ದಾಖಲೆಯಲ್ಲಿ ನೋಡಿದರೆ ಈ ವರುಷ ಸಾಯುವವರ ಸಂಖ್ಯೆಯು ಬಹಳ ಹೆಚ್ಚು.

— ಕೆಂಬ್ರಿಜಿನಿಂದ ಹೊರಟು ಹೋಗುತ್ತಿದ್ದ ಒಂದು ಎಕ್ಸ್‌ಪ್ರೆಸ್ ರೈಲು ಬಂಡಿಯು ಒಂದು ಮೋಟಾರ್ ಲೋರಿಗೆ ತಗಲಿದುದರಿಂದ ಕಂಬಿಗಳಿಂದ ತಪ್ಪಿ ಹೋಯಿತು. ಒಬ್ಬಿಬ್ಬರು ಸತ್ತುಹೋದರು. ಲೋರಿಯ ಡ್ರೈವರನೂ ಸತ್ತು ಹೋದನು. ಹಾಗೆ ಅಪಾಯಕರವಾದ ರೈಲು ಮತ್ತು ರಾಜಮಾರ್ಗದ ಜಂಕ್ಷನುಗಳು ಇಂಗ್ಲೆಂಡಿನಲ್ಲಿ ಹಲವು ಇರುವವು, ಅವುಗಳನ್ನು ತೆಗೆಯಲು ವ್ಯವಸ್ಥೆಮಾಡದ ವಿನಹ ಇಂತಹ ಅಪಘಾತಗಳು ತಪ್ಪುವಂತಿಲ್ಲ.

— ಒಸ್ಟಿನ್ ಮೋಟರ ಕಂಪೆನಿಯವರು ತಮ್ಮ ಮೋಟಾರ್ ಕಾರುಗಳ ಬೆಲೆಯನ್ನು ಇಳಿಸಿ ಬಿಟ್ಟಿರುವರು. ನಾಲ್ಕು ಸಿಲಿಂಡರುಗಳ ಕಾರುಗಳಿಗೆ ೪೦ ಪೌಂಡು ೬ ಸಿಲಿಂಡರುಗಳ ಕಾರಿಗೆ ೫೦ ಪೌಂಡು ಕ್ರಯ ಕಡಿಮೆಯಾಗಿರುವದು.

— ಇಂಗ್ಲೆಂಡಿನ ಮಂತ್ರಿಗಳಲ್ಲೊಬ್ಬರಾದ ಲೋರ್ಡ ಹೆಲ್ಡೇನರು ತನ್ನ ೭೩ನೇ ವಯಸ್ಸಿನಲ್ಲಿ ಮೃತಪಟ್ಟರು. ಇವರ ೧೯೧೫ರಿಂದ ೧೯೨೮ರ ವರೆಗೆ ಯುದ್ಧದ ಸೆಕ್ರೆಟರಿಯಾಗಿದ್ದರು. ಅವರು ತತ್ವಶಾಸ್ತ್ರದಲ್ಲಿ ನಿಪುಣರಾಗಿದ್ದು ಅನೇಕ ಪುಸ್ತಕಗಳನ್ನು ಬರೆದಿರುವರು. ನ್ಯಾಯ ಶಾಸ್ತ್ರವನ್ನು ಚೆನ್ನಾಗಿ ತಿಳಿದಿದ್ದರು.

— ಕೊಲೊಂಬೋವಿನಲ್ಲಿ ಕತ್ತಲೆಯಾದ ಮೇಲೆ ಮಾರ್ಗದಲ್ಲಿ ಆನೆಯನ್ನು ಕೊಂಡು ಹೋಗಬೇಕಾದರೆ ಅದರ ಎದುರಿನಲ್ಲಿಯೂ, ಹಿಂದಿನಿಂದಲೂ ದೀಪಗಳನ್ನು ಉರಿಸಬೇಕೆಂದು ಮುನಿಸಿಪಾಲಿಟಿಯವರು ನಿರ್ಣಯಿಸಿರುವರು. ಯಾಕೆ ವರೆ ಆನೆಗಳು ಮಾಡುವದಕ್ಕೂ ಕೂಡ ವಿಧೇಯವಾಗಿಲ್ಲ. ಮೋಟಾರ ಗಳಿಗಿಂತಲೂ ಅಪಾಯಕರವಾದವುಗಳು.

— ನ್ಯೂಫೌಂಡ್‌ಲೆಂಡಿನಲ್ಲಿ ಒಂದು ಹೊಸ ಮಂತ್ರಿಮಂಡಳವನ್ನು ಸ್ಥಾಪಿಸಿರುವರು.

— ವಿಮಾನಗಳನ್ನು ನಡಿಸಲು ಮೋಟಾರುಗಳನ್ನೋಡಿಸಲು ಸಿನೆಮಾ ಕ ಪಟಗಳಲ್ಲಿ ಅಭಿನಯಿಸಲು ೨೦೦ ಹೆಂಗಸರು ಇಂಗ್ಲಾಂಡಿನಲ್ಲಿ ಈಗ ತರಬೇತಿಯನ್ನು ಹೊಂದುತ್ತಿರುವರು.

ವಂದಲೆಯಲ್ಲಿ ಒಂದು ಅನಾಥ ಬಾಲಕಾಲಯಕ್ಕೆ ಬೆಂಕಿ ಹತ್ತಿ ಸುಟ್ಟುಹೋಯಿತು. ಇಲ್ಲಿ ಟ್ಯಾನಾ, ಬರ್ಮಾ, ಮೊದಲಾದ ಸ್ಥಳಗಳ ಸುಮಾರು ೨೦೦ ಅನಾಥ ವಿದ್ಯಾರ್ಥಿಗಳಿದ್ದರು. ಪ್ರಾಣಹತ್ಯೆಯಾಗಲಿಲ್ಲ, ಈ ಕಟ್ಟೋಣವನ್ನು ಸುಮಾರು ೨೪ ವರುಷಗಳ ಹಿಂದೆ, ೨೪೦೦೦ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿದ್ದರು.

— ಜಾಮೈಕಾಯ ಪಶ್ಚಿಮ ಭಾಗದಲ್ಲಿ ಬಿರುಗಾಳಿಯ ದೆಸೆಯಿಂದ ಹತ್ತಿಪ್ಪತ್ತು ಜನರು ಸತ್ತಿರುವರು. ಇಂತಹ ಬಿರುಗಾಳಿಯು ನಾಲ್ವತ್ತು ವರುಷಗಳಿಂದೀಚೆ ಬಂದಿರಲಿಲ್ಲ. ನಷ್ಟವು ಸುಮಾರು ಒಂದು ಮಿಲಿಯ ಪೌಂಡುಗಳಾಗಬಹುದೆಂದು ಅಂದಾಜು ಮಾಡಲಾಗಿಯದೆ.

ಒಳದೇಶ ವರ್ತಮಾನ

ಸಿಂಗಾಪುರದಲ್ಲಿ ವೇನ್‌ಲಿಯರನೆಂಬೊಬ್ಬ ಮನುಷ್ಯನು ೫,೦೦೦ ರೂಪಾಯಿಗಳ ಕಳವನ್ನು ಮಾಡಿದ್ದನು. ಆತನು ಹಡಗವ ಹತ್ತಿ ಕೊಲೊಂಬೋವಿಗೆ ತೆರಳಿದನೆಂದು ಸಂಶಯಪಟ್ಟು ಸಿಂಗಾಪುರದ ಪೋಲೀಸರು ಈ ವಿಷಯವನ್ನು ಕೊಲೊಂಬೊ ಪೋಲೀಸರಿಗೆ ತಂತಿಯ ಮೂಲಕ ತಿಳಿಸಿ, ವೇನ್‌ಲಿಯರನ ಉದ್ದ ಮುಖಲಕ್ಷಣ ಮೊದಲಾದ್ದುಗಳನ್ನು ತಿಳಿಸಿದರು. ಹಡಗವು ಬಂದು ಕೊಲೊಂಬೊ ಬಂದರದಲ್ಲಿ ನಿಂತೊಡನೆ ಕೊಲೊಂಬೊ ಪೋಲೀಸರು ನಿರಾಪರಾಧಿಯೊಬ್ಬನನ್ನು ಹಿಡಿದು ಕೈಮುಡಿ ಹಾಕಿ, ವಕೀಲುಗಳ ಸಮೇತ ಆತನನ್ನು ಜೈಲಿನಲ್ಲಿಟ್ಟರು. ತಾನು ಯಾವ ತಪ್ಪನ್ನೂ ಮಾಡಿದುದಿಲ್ಲವೆಂದು ನಿರಪರಾಧಿಯ ಈ ಮನುಷ್ಯನು ಬೊಬ್ಬೆಯಿಟ್ಟರೂ ಕೂಡ ಪೋಲೀಸರಲ್ಲಿ ದಯೆಯುಂಟಾಗಲಿಲ್ಲ. ಮರುದಿನ ನಿಜ ಅಪರಾಧಿಯು ಸಿಂಗಾಪುರದಲ್ಲಿ ಸಿಕ್ಕಿರುವನು ಎಂದು ಕೊಲೊಂಬೊ ಪೋಲೀಸರಿಗೆ ತಂತಿ ಬಂದುದರಿಂದ ಆತನನ್ನು ಬಿಟ್ಟುಬಿಟ್ಟರಂತೆ. ಆತನಿಗೋಸುಗ ಹಡಗವು ಬಂದರದಲ್ಲೇ ಕಾದು ನಿಂತಿದ್ದಿತು. ಪೂರ್ವ ಜನ್ಮದಲ್ಲಿ ಮಾಡಿದ ಯಾವ ಅಪರಾಧಕ್ಕೆ ಆತನು ಈ ಶಿಕ್ಷೆಯನ್ನು ಅನುಭವಿಸಬೇಕಾಯಿತೋ ಏನೋ!

— ಪೂನೆಯಲ್ಲಿ ನಡೆಯಲಿರುವ ಅಖಿಲ ಹಿಂದೀ ನೇಕಿ ಮತ್ತು ಔದ್ಯೋಗಿಕ ವಸ್ತು ಪ್ರದರ್ಶನವು ಹೊನರೇಬಲ್ ಜಿ. ಪ್ರಧಾನರಿಂದ ಇದೇ ತಿಂಗಳ ತಾರೀಖು ೨೬ನೇ ದಿನ ಬೆಳಿಗ್ಗೆ ಘಂಟೆ ೯ಕ್ಕೆ ತೆರೆಯಲ್ಪಡುವದು. ಅಂದಿನಿಂದ ಈ ಪ್ರದರ್ಶನವು ಅಕ್ಟೋಬರ ಹತ್ತನೇ ತಾರೀಖಿನ ವರೆಗೆ ತೆರೆಯಲ್ಪಟ್ಟೇ ಇರುವುದು.

...ಸ್ಟ್ಯಾನ್ ಕೆಮಿಕಲ್ಸಿನವರಿಗೆ ಮುಂಬಾಯಿಯ ವಿದ್ಯಾ ಇಲಾಖೆಯವರ ಕಡೆಯಾಗಿ ವಹಿಸಿಕೊಡಲಾಗಿರುವವರು ಒಂದು ಮಹಜರನ್ನು ಸಮರ್ಪಿಸಬೇಕೆಂದೂ ವಿದ್ಯಾ ಇಲಾಖೆಯ ಕಾರ್ಯದರ್ಶಿಗಳವರು ಬರೆದಿದ್ದರು. ಆದರೆ ಮುನಿಸಿಪಾಲಿಟಿಯ ಅಧಿವೇಶನದಲ್ಲಿ ಈ ವಿಷಯವು ಚರ್ಚಿಸಲ್ಪಟ್ಟು, ಮಹಜರನ್ನು ಸಮರ್ಪಿಸಬಾರದೆಂದೇ ನಿರ್ಣಯವಾಯಿತು.

ಟಪ್ಪಾಲು ಪೇದೆಗಳು ಒಂದು ಬಸ್ಸಿನಲ್ಲಿ ಕುಳಿತು ಡಬ್ಬಿಯಲ್ಲಿ ಟಪ್ಪಾಲನ್ನು ಕೊಂಡೊಯ್ಯುತ್ತಿರುವಾಗ ಲೋಕ ಬಜಾರ ಎಂಬಲ್ಲಿ ಪೋಲೀಸ್ ಕಾನ್ಸ್ಟೇಬಲನೊಬ್ಬನು ಬಸ್ಸನ್ನು ನಿಲ್ಲಿಸಿ ಡ್ರೈವರನ ಲೈಸನ್ಸು ಕಾಣಿಸಬೇಕೆಂದನು. ತಮಗೆ ತಡವಾಗುವ ಕಾರಣ ಬಸ್ಸನ್ನು ನಿಲ್ಲಿಸಲಾಗದೆಂದು ಟಪ್ಪಾಲು ಪೇದೆಗಳು ಡ್ರೈವರನಿಗೆ ಸೂಚಿಸಿದರು. ಒಡನೆ ಪೋಲೀಸನು ಸೀಟಿಯು ಊದಿ, ಹಲವು ಪೋಲೀಸರನ್ನು ಅಲ್ಲಿಗೆ ಬರಮಾಡಿ, ಪೋಲೀಸರೊಳಗೂ, ಟಪ್ಪಾಲು ಪೇದೆಗಳೊಳಗೂ ಜಗಳವು ಪ್ರಾರಂಭವಾಯಿತು. ಪೋಸ್ಟ್ ಮಾಸ್ಟರ್ ಸುಪರಿಂಟೆಂಡೆಂಟರಿಗೆ ಈ ವಾರ್ತೆಯು ತಿಳಿದು, ಅವರು ಬಂದೊಡನೆ ಸಮಾಧಾನವುಂಟಾಯಿತು.

— ಚೋರಿಯೊ ಎಂಬಲ್ಲಿರುವ ನೂಲಿನ ಗಿರಣಿಯಲ್ಲಿ ಕೆಲಸಗಾರರ್ ಮುಷ್ಕರ ಹೂಡಿರುವ ಕಾರಣ ಕಳೆದ ತಿಂಗಳ ೧೬ನೇ ತಾರೀಕಿನಿಂದ ಗಿರಣಿಯನ್ನು ಇದುವರೆಗೂ ಮುಚ್ಚಿರುವರು. ಇದರಿಂದ ೧೨,೦೦೦ ಜನರು ಕೆಲಸವಿಲ್ಲದೆ ಉಪವಾಸ ವ್ರತವನ್ನಾಚರಿಸತೊಡಗಿರುವರು. ಕೆಲವರಿಗೆ ಕೊಡುತ್ತಿದ್ದ ಸಂಬಳವು ಕಡಿಮೆಯಾಗಲೂ ಇಲ್ಲ. ಗಿರಣಿ ಅಧಿಕಾರಿಗಳು ಅವರಿಗೆ ಕಷ್ಟಗಳನ್ನು ಕೊಡುತ್ತಿದ್ದಿಲ್ಲ. ಆದರೂ ಮುಂಬಾಯಿ ಕಲಕತ್ತಾ ಗಿರಣಿಗಳ ಕೂಲಿಕಾರರ ಉದಾಹರಣೆಯನ್ನೇ ಇವರು ಅವಲಂಬಿಸಿರುವರು. ಇಂತಹ ಮುಷ್ಕರಗಳನ್ನು ಪ್ರಾರಂಭಿಸುವುದು ತಮಗೆನೇ ಹಾನಿಕರವೆಂದು ಅವರು ಇನ್ನೂ ತಿಳಿಯದಿರುವುದು ಶೋಚನೀಯ.

— ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಕಲಕತ್ತಾ ಕಾಂಗ್ರೆಸಿನ ಅಧ್ಯಕ್ಷತನಕ್ಕೆ ಪಂಡಿತ ಮೋತಿಲಾಲನೆಹರುಗಳವರ ಹೆಸರನ್ನು ಸೂಚಿಸಿರುವರು.

— ತಿರುಚಿನಾಪಳ್ಳಿಯಲ್ಲಿ ವಿದ್ಯುಚ್ಛಕ್ತಿಯ ಸರಿಗೆಯ ಕೆಲಸವನ್ನು ಮಾಡುವಾಗ ಅಜಾಗ್ರತೆಯಿಂದಿಬ್ಬರು ವಿದ್ಯುತ್ ಪ್ರವಹಿಸುವ ಸರಿಗೆಗೆ ಮುಟ್ಟಿ ಮರಣಕ್ಕೆ ತುತ್ತಾದರು.

— ವೆಲ್ಲೋರಿನ ಸೆಂಟ್ರಲ್‌ಜೈಲರರು ಕಳೆದ ಗುರುವಾರ ತನ್ನ ಕೋಣೆಯ ಬಾಗಿಲು ತೆರೆದು ನೋಡುವಾಗ ಒಳಗಿನ ಹಲವು ರಿಕಾರ್ಡು ಗಳು ಸುಟ್ಟುಹೋಗಿದ್ದುವು. ಹಲವು ಉರಿಯುತ್ತಾ ಇದ್ದುವು. ಹಲವು ರಿಕಾರ್ಡುಗಳು ಬಿಮಿಣೆ ಎಣ್ಣೆಯಿಂದ ತೊಯ್ದುಹೋಗಿದ್ದುವು. ಒಂದೆರಡು ಬಾಗಿಲುಗಳು ತೆರೆದಿದ್ದುವು. ಆದರೂ ಮುಖ್ಯವಾದ ರಿಕಾರ್ಡುಗಳಲ್ಲಿ ಹೆಚ್ಚಿನ ಅಂಶ ಉಳಿದಿದ್ದುವು.

— ಖಾನಪುರದ ಬಸ್ಲಾದ ಶಾಲೆಯಲ್ಲಿ ಒಬ್ಬ ಉಪಾಧ್ಯಾಯನಿಂದ ಒಬ್ಬ ವಿದ್ಯಾರ್ಥಿಗೆ ಏನೋ ತೊಂದರೆಯಾಯಿತೆಂದು ವಿದ್ಯಾರ್ಥಿಗಳೆಲ್ಲರೂ ಮುಷ್ಕರವನ್ನು ಪ್ರಾರಂಭಿಸಿರುವರು.

— ಮುಂಬಾಯಿಯ ಸಕ್ಕರೆ ವ್ಯಾಪಾರಿಗಳೊಬ್ಬರ ಅಂಗಡಿಯ ಬಿಲ್ಲು ಹಣವನ್ನು ಶೇಖರಿಸಿ ೨೨,೦೦೦ ರೂಪಾಯಿಗಳ ಗಂಟನ್ನು ಒಂದು ಚೀಲದಲ್ಲಿ ಕಟ್ಟಿ ಒಬ್ಬ ಆಳಿನ ತಲೆಯ ಮೇಲೆ ಹೊರಿಸಿ ಆ ಗಡಿಯ ಕೇಶಿಯರನು ಸಾಹುಕಾರನ ಮನೆಗೆ ಹೋಗುತ್ತಿದ್ದನು. ಅರ್ಧ ಹಾದಿಯಲ್ಲಿ ಮೋಟಾರಕಾರಿನಲ್ಲಿ ಕೆಲವರು ಬಂದು ದೊಣ್ಣೆಯಿಂದ ಕೇಶಿಯರನನ್ನು ಹೊಡೆದು ಕೆಡವಿ ಆಳಿನಿಂದ ಹಣದ ಗಂಟನ್ನು ಕಸಕೊಂಡು ಓಡುವಾಗ ಆಳು ಬೊಬ್ಬೆ ಹಾಕಿದನು. ಆಳಿಗೂ ತಿವಿಂದ ಹೊಡೆದು ಮೋಟಾರಿನಲ್ಲಿ ಕುಳಿತು ಕಳ್ಳರು ಓಡಿಹೋದರು. ಅವರ ಪತ್ತೆಯು ಇನ್ನೂ ಆಗಿಲ್ಲ.

— ಮಧ್ಯಪ್ರಾಂತದ ಮಂತ್ರಿಗಳಾದ ಹೊನರೇಬಲ್ ದೇಶಮುಖರವರು ತನ್ನ ಹುದ್ದೆಗೆ ರಾಜಿನಾಮೆಯನ್ನು ಕೊಟ್ಟರು. ಅವರ ಕುರಿತಾಗಿ ಕೌನ್ಸಿಲಿನಲ್ಲಿ ನೊಕೊನ್ಫಿಡೆನ್ಸ್ ಠರಾವನ್ನು ಎದುರು ತಂದಿದ್ದರು.

— ಮೈಸೂರಿನಲ್ಲಿ ಜಾತೀಯ ಕಲಹಗಳುಂಟಾಗುವ ಸಂಭವವಿರುವುದರಿಂದ ಪೋಲೀಸರು ಬಹು ಜಾಗರೂಕರಾಗಿರುವರು. ರಿಸರ್ವ ಪೋಲೀಸರನ್ನು ತರಿಸಿರುವರು.

— ಪಾಟ್ನಾದ "ಸರ್ಚ್‌ಲೈಟ್" ಎಂಬ ಪತ್ರಿಕೆಯು ಪಾಟ್ನಾ ಹೈಕೋರ್ಟಿನ ಚೀಫ್ ಜಸ್ಟಿಸರಿಂದ ಕೊಡಲ್ಪಟ್ಟ ಒಂದು ತೀರ್ಪಿನ ಮೇಲೆ ಏನೋ ಆಕ್ಷೇಪಮಾಡಿದರೆಂಬ ಕಕ್ಷಿಯ ಮೇಲೆ ಆ ಪತ್ರಿಕೆಯ ಸಂಪಾದಕರಿಗೆ ೫೦೦ ರೂಪಾಯಿ ಜುಲುಮಾನೆಯನ್ನು ವಿಧಿಸಿದರು. ಜುಲುಮಾನೆಯನ್ನು ತೆರುವ ತನಕ ಜೈಲಿನಲ್ಲಿರಬೇಕಾಗಿ ತೀರ್ಪು ಕೊಟ್ಟಿರುವರು. ಪತ್ರಿಕೆಯ ಮೆನೇಜರನನ್ನು ಈ ನಂಬ್ರದಲ್ಲಿ ಬಿಟ್ಟಿರುವರು.

— ಜಮುಶೆಡ್‌ಪುರದಲ್ಲಿ ಆದ ಮುಷ್ಕರದ ಸಮ್ಬಂಧ ಕೆಲಸ ಬಿಟ್ಟವರಲ್ಲಿ ಕಳೆದ ೧೫ನೇ ತಾರೀಕಿನ ವರೆಗೆ ೯೨೪೩ ಕೂಲಿಗರು ಪುನಃ ಕೆಲಸಕ್ಕೆ ಸೇರಿರುವರೆಂದು ಟಾಟಾ ಕಂಪೆನಿಯವರ ರಿಪೋರ್ಟಿನಿಂದ ತಿಳಿದುಬರುತ್ತದೆ.

— ಕೋಲಾರದ ಒಂದು ಗಣಿಯ ಆಫೀಸಿನಲ್ಲಿ ಮೋಟಾರ ಡ್ರೈವರನಾಗಿದ್ದ ಒಬ್ಬನಲ್ಲಿ ೧೧ ತೊಲೆ ಚಿನ್ನವು ಸಿಕ್ಕಿದುದರಿಂದ ಅತನನ್ನು ಕೈದು ಮಾಡಿರುವರು.

— ಡಾಕ್ಟರ್ ಮುತ್ತುಲಕ್ಷ್ಮಿ ಅಮ್ಮನವರ ದೇವದಾಸಿ ಮಸೂದೆಯು ಹಿಂದೂ ಮತಕ್ಕೆ ವಿರೋಧವಾದುದರಿಂದ ಅಂತಹ ಮಸೂದೆಯನ್ನು ಎಂದೆಂದಿಗೂ ಸಮರ್ಥಿಸಬಾರದೆಂದು ಮಾಯಾವರದ ಜನರು ಸಭೆಕೂಡಿ ನಿಶ್ಚಯಿಸಿದರು.

— ಎಲ್ಲಾ ಪಕ್ಷದ ಪರಿಷತ್ತು ಲಕ್ನೋವಿನಲ್ಲಿ, ಗಂಗಾಪ್ರಸಾದ ಮೆಮೋರಿಯಲ್ ಹೋಲಿನಲ್ಲಿ ಜರಗಬೇಕೆಂದು ನಿಶ್ಚಯವಾಗಿತ್ತಾದರೂ ಅಲ್ಲಿ ಸ್ಥಳಾಭಾವವಿರುವ ದೆಸೆಯಿಂದ ಕೈಸರ್ ಭಾಗದಲ್ಲಿ ಜರಗಬೇಕೆಂದು ಈಗ ನಿಶ್ಚಯವಾಗಿರುತ್ತದೆ.

— ರತ್ನಗಿರಿಯಲ್ಲಿ ಹಡಗದಿಂದ ಜನರೂ ಸಾಮಾನೂ ಇಳಿಯಲು ಸುಲಭವಾಗುವಂತೆ ೯ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಸಮುದ್ರದಲ್ಲಿ ಒಂದು ಪಿಯರನ್ನು ಕಟ್ಟುವರು. ಈ ಪಿಯರು ೧೪೦೦ ಅಡಿ ಉದ್ದ, ೨೪ ಅಡಿ ಅಗಲ.

— ಬರ್ಮಾದ ಚಿಂದವಿನ ನದಿಯಲ್ಲಿ ನೆರೆ ಬಂದು ಹಲವು ರೈಲು ಮಾರ್ಗಗಳು ನೀರಿನಡಿಯಲ್ಲಿದ್ದುವು. ರೈಲು ಚಲಾವಣೆಯು ನಾಲ್ಕೈದು ದಿನ ನಿಂತುಹೋಗಿತ್ತು.

ದಕ್ಷಿಣ ಕನ್ನಡ

ಸ್ವೀಕಾರ

ಪ್ರಭಾಸ, ಅಥವಾ ಶ್ರೀಕೃಷ್ಣ ನಾಮಾಮೃತ

ಗ್ರಂಥಕರ್ತರು— ಭೀಮಾಜಿ ಜಿವಾಜಿ ಹುಲಿಕವಿ. "ಶಾರದೆ"ಯ ಉಪಹಾರವಾಗಿ ಪ್ರಕಟಿಸಲ್ಪಟ್ಟುದು.

ಇದು ಸುಪ್ರಸಿದ್ಧ ಬಂಗಾಳೀ ಲೇಖಕರಾಗಿರುವ ಶ್ರೀ ನವೀನಚಂದ್ರ ಸೇನರವರ ಮರಾಠಿ ಅನುವಾದದ ಆಧಾರದಿಂದ ಬರೆಯಲ್ಪಟ್ಟಿದೆಂದು ಗ್ರಂಥಕರ್ತರು ನಿವೇದಿಸುವರು. ಈ ಲೇಖಕರ ಶ್ರೀಕೃಷ್ಣನ ಮೇಲಿನ ಹಲವು ಗ್ರಂಥಗಳು ಲೋಕವಿಖ್ಯಾತವಾಗಿವೆ. ಮರಾಠಿ ಅನುವಾದಕರು ಇವರ ಗ್ರಂಥವನ್ನು ಅನುವಾದಿಸುವಾಗ ಕೆಲವು ಬದಲಾವಣೆಗಳನ್ನು ಮಾಡಿದಂತೆಯೂ, ಈ ಕನ್ನಡ ಅನುವಾದದಲ್ಲಿ ಮತ್ತೂ ಬದಲಾವಣೆಗಳಾದಂತೆಯೂ ತೋರಿಬರುತ್ತದೆ. ಮೂಲಗ್ರಂಥವನ್ನು ನಾವು ನೋಡಿಲ್ಲವಾದುದರಿಂದ ಇದಕ್ಕೂ ಮೂಲಗ್ರಂಥಕ್ಕೂ ವ್ಯತ್ಯಾಸವು ಎಷ್ಟಿದೆಯೆಂದೂ ಆ ವ್ಯತ್ಯಾಸವು ಗ್ರಂಥವನ್ನು ಪುಷ್ಟೀಕರಿಸಿಯದೋ, ಕ್ಷೀಣಿಸಿಯದೋ ಎಂದೂ ನಾವು ಹೇಳಲಾರೆವು. ಭಕ್ತಿತತ್ವದಲ್ಲಿ ನಾಮಭಜನೆಯ ಪ್ರಾಮುಖ್ಯತೆಯ ವಿಷಯದಲ್ಲಿ ಈ ವಿವರ್ತಕರ ಭಿನ್ನಾಭಿಪ್ರಾಯವಿದೆ. ಆ ನ್ಯಾಸ್ಯ[illegible] ಇದಕ್ಕೆ ಕೊಟ್ಟ ಶ್ರೀಕೃಷ್ಣ ನಾಮಾಮೃತವೆಂಬ ದ್ವಿತೀಯ ನಾಮವು ಅಗತ್ಯವಿರಲಿಲ್ಲ. ಪುಸ್ತಕದ ಒಳಭಾಗದಲ್ಲಿಯೂ ನಾಮಕೀರ್ತನೆಗೆ ಕಥೆಯಲ್ಲಿ ಅವಶ್ಯವಿದ್ದುದಕ್ಕಿಂತಲೂ ಹೆಚ್ಚು ಪ್ರಾಮುಖ್ಯತೆಯು ಕೊಡಲ್ಪಟ್ಟಿಯದೆ, ಮೂಲಗ್ರಂಥದಲ್ಲಿಯೂ ಇದೇ ಪ್ರಾಮುಖ್ಯತೆಯು ಕೊಡಲ್ಪಟ್ಟಿಯದೋ ಎಂದು ಹೇಳಲಾರೆವು. ಆದರೆ ಶ್ರೀಕೃಷ್ಣ ಚರಿತ್ರೆಯನ್ನೂ ಅದರ ಹಲವು ತರದ ವಿವರಾಂಶಗಳನ್ನೂ ತಿಳಿಯಲಿಕ್ಕೆ ಭಾರತ ಭಾಗವತದ ಪೌರಾಣಿಕ ಕಥಾಪಠನಕ್ಕಿಂತಲೂ ಇಂತಹ ಪುಸ್ತಕಗಳ ಬಹಳ ಪ್ರಯೋಜನಕಾರಿಗಳಾಗಿವೆ. ಈ ಪುಸ್ತಕದಲ್ಲಿ ಆಕರ್ಷಕವಾದ ಸರಳತೆಯೂ, ಅತೀ ಮನೋವೇಧಕವಾದ ಕಥಾ ಸರಣಿಯೂ, ಅತ್ಯಂತ ಪ್ರೇರಕವಾದ ಭಕ್ತಿ ಭಾವವೂ ಕಂಡುಬರುತ್ತದೆ. ಹಿಂದೂವನು ಈ ಪುಸ್ತಕವನ್ನು ಅಗತ್ಯವಾಗಿ ಓದಬೇಕೆಂದು ಹೇಳುವುದರಲ್ಲಿ ನಮಗೆ ಸಂಕೋಚವೇನೂ ಕಾಣುವುದಿಲ್ಲ.

ಮಂಗಳೂರು: — ಬೋಳೂರ ಮುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆಯಲ್ಲಿ ಕಳೆದ ಜೂನು ತಿಂಗಳಲ್ಲಿ ೪೩೩ ಹೊಸ, ೩೧೮ ಪ್ರಿಟ್ರ್ಯಾಂಟರ ಕೂಡಿ ಕಿತ್ಸರ ಮತ್ತು ೫೭ ಮಗ್ಗಾವರ ಸೇರಿ ಒಟ್ಟು ೩೭೮ ವ್ಯಾಧಿಗ್ರಸ್ತರು ಚಿಕಿತ್ಸೆ ಪಡೆಯಲ್ಪಟ್ಟಿದ್ದರು. ದಿನವಹಿ ಸರಾಸರಿ ರೋಗಿಗಳ ಸಂಖ್ಯೆ ೧೧೯ ಆಗಿತ್ತು. ಒಂದೇ ದಿವಸದಲ್ಲಿ ಅಂದರೆ ತಾ ೨೨-೬-೨೮ರಲ್ಲಿ ಹೆಚ್ಚಾಗಿ ಕಾಣುವಾಗ ಸಂಖ್ಯೆ ೧೪೨.

ಬರುವ ಮುನಿಸಿಪಲ್ ಚುನಾವಣೆಯಲ್ಲಿ ಕೌನ್ಸಿಲರಾಗಿ ಚುನಾಯಿಸಲ್ಪಡಲಿಕ್ಕೆ ಕಾಂಗ್ರೆಸ್ ಕಡೆಯ ಉಮೇದವಾರರಾಗಿ ನಿಲ್ಲತಕ್ಕವರ ಸಮ್ಮ ಕಛೇರಿಯಲ್ಲಿ ದೊರಕುವ ಪ್ರತಿಜ್ಞಾಪತ್ರಕ್ಕೆ ಸಹಿಹಾಕಿ ತಮ್ಮ ಕಛೇರಿಗೆ ಈ ತಿಂಗಳ ಆಖೈರಿ ಒಳಗೆ ತಲ್ಪುವ ಹಾಗೆ ಕಳುಹಿಸಬೇಕು. ಅವರ ನಮೀನೇಶನ ಹಿಸತಕ್ಕದ್ದು, ಆ ಮೇಲೆ ಬರುವ ಅರ್ಜಿಗಳಿಗೆ ಅನುಕೂಲವಿದ್ದರೆ ಮಾತ್ರ ಗಮನಕೊಡಲಾಗುವುದು ಎಂದು ಮಂಗಳೂರು ತಾಲೂಕು ಕಾಂಗ್ರೆಸ ಕಮಿಟಿಯ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಹವಾಗುಣವು ಒಳ್ಳೆಯದಿದ್ದರೆ ದಿ ಬೊಂಬಾಯಿ ಸ್ಟೀಮ್ ನೇವಿಗೇಶನ್ ಕಂಪೆನಿಯ ಫಾಸ್ಟ್ ಮೈಲ್ ಗ್ ಸ್ಟೀಮರು ಬರುವ ಸಪ್ಟಂಬರ ತಿಂಗಳ ೨ನೇ ಶುಕ್ರವಾರ ಬೊಂಬಾಯಿಂದ ಹೊರಟು ಅದೇ ಆದಿತ್ಯವಾರ ಪ್ರಾತಃಕಾಲ ಇಲ್ಲಿಗೆ ತಲುಪುವದು. ಬೇಗ್ಗೆ ಫ ೮ ಗಂಟೆಗೆ ಇಲ್ಲಿಂದ ಹೊರಟು, ಹೊನ್ನಾವರ ಮತ್ತು ಇದರ ಎರಡು ಬಂದರುಗಳ ಹೊರತು ಉಳಿದ ಬಂದರುಗಳಲ್ಲಿ ತಂಗಿ ಪ್ರಯಾಣ ಬೆಳೆಸುವುದು. ಮತ್ತು ಕಾರ್ಗೋ ಸ್ಟೀಮರು ಬರುವ ತಿಂಗಳ ೧೮ನೇ ಮಂಗಳವಾರ ಮುಂಬಾಯಿಂದ ಹೊರಟು ಅದೇ ಶುಕ್ರವಾರ ಪ್ರಾತಃಕಾಲ ಇಲ್ಲಿಗೆ ತಲುಪಿ ಅದೇ ದಿನ ರಾತ್ರಿ ಹಿಂತಿರುಗುವುದು. ಬರುವಾಗಲೂ ಹೋಗುವಾಗಲೂ ಯೊನಾರವರು ಹೊರತು ಉಳಿದ ಎಲ್ಲಾ ಬಂದರುಗಳಲ್ಲಿ ತಂಗುವದು. ಹೊನ್ನಾವರದಲ್ಲಿ ಮಾತ್ರ ಒಕ್ಟೋಬರ ೨ನೇ ತಾರೀಕಿನ ತರುವಾಯ ಕಾರ್ಗೋ ಸ್ಟೀಮರು ನಿಲ್ಲುವದು. ಇವುಗಳಲ್ಲಿ ಏನಾದರೂ ಬದಲಾವಣೆಯಾಗುವುದಿದ್ದರೆ, ಮುಂದೆ ತಿಳಿಸಲಾಗುವದು.

ತಾರೀಕು ೧೮-೮-'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೨೦ ಮರಣಗಳೂ, ೩೨ ಜನನಗಳೂ ಆದವು. ಮರಣಗಳ ಪೈಕಿ, ಅತಿಸಾರದಿಂದ ೪ ಶ್ವಾಸಕೋಶದಿಂದ ೪ ಇತರ ಎಲ್ಲಾ ಕಾರಣಗಳಿಂದ ೧೨ ಶಿಶುಮರಣಗಳ ೬.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡು ಸಭೆಯು ಇದೇ ಬರುವ ೨೭ನೇ ಸೋಮವಾರ ದಿನ ೪ ೩೦ ಘಂಟೆಗೆ ಮಂಗಳೂರಿನಲ್ಲಿರುವ ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಜರಗುವುದು.

ಮಂಗಳೂರಿನಲ್ಲಿ ನಡೆಯಲಿರುವ ಜಿಲ್ಲಾ ಪರಿಷತ್ತಿನ ಸಮಯದಲ್ಲಿ ಒಂದು ಯುವಕ ಪರಿಷತ್ತನ್ನು ಜರಗಿಸಬೇಕೆಂದು ನಿರ್ಣಯಿಸಿ ಪ್ರೊವಿಜನಲ್ ಕಮಿಟಿಯವರ ಶ್ರೀ ಎ ಬಿ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕಳೆದ ೨೧ನೇ ತಾರೀಕಿನ ದಿನ ಗಣಪತಿ ಹೈಸ್ಕೂಲಿನ ಸಭಾಸದನದಲ್ಲಿ ಸಭೆಕೂಡಿದರು. ಕಮಿಟಿಗೆ ಈ ಕೆಳಗಿನವರು ಬಂದರು — ಶ್ರೀಯುತರಾದ ಎ ಬಿ ಶೆಟ್ಟಿ ಎಮ್ ಎಸ್ ವಕಂಬರಾವ್ ಎನ್ ಎಸ್ ಸುವರ್ಣ ಸದಾಶಿವರಾವ್ ಕೆ ಟಿ ಎಮ್ ಪರಮೇಶ್ವರನ್ ಕೆ. ಎಸ್ ವಿ ಶರ್ಮ ಎಸ್ ಎಸ್ ಶರ್ಮ, ಟಿ ರಾಘವನ್ ನಾಯರ್, ಕೆ ಕುನ್ನಂಬು ನಾಯರ್, ಲಕ್ಷ್ಮೀನಾರಾಯಣ ಅಡಿಗ ರಾಮಕೃಷ್ಣಾಚಾರ್, ಶಾಂತಾರಾಮ, ರಾಘವನ್ ನಂಬಿಯಾರ್, ಎ. ನಾರಾಯಣ ಪೈ, ಪ್ರೊಫೆಸರ್ ಸಿ ಜಿ ವಾರ್ಕಿ ಮತ್ತು ಜೋಸೆಫ್, ಅಚ್ಯುತ ಬಾಳಿಗ ಪ್ರಬಾಕ ಕುಮಾರ, ಸದಾನಂದ ಹೆಗಡೆ, ವೆಂಕಟರಾಮ ಅಯ್ಯರ್, ಸ್ತ್ರೀಮೆಂಬರರಿಂದರೆ ಮಿಸೆಸ್ ಕಮಲಾದೇವಿ ಚಟ್ಟೋಪಾಧ್ಯಾಯ, ಮಿಸೆಸ್ ಶಿಕಂಬರರಾವ್, ಮಿಸೆಸ್ ರಂಗನಾಥ ಶೆಣೈ, ಮಿಸೆಸ್ ಪಂಡಿತ ರಮಾಬಾಯಿ, ಮಿಸೆಸ್ ತಾರಾಬಾಯಿ.

ಸಭೆ ನೆರೆಯಿಸುವವರಾದ ಶ್ರೀ ಎಸ್. ಎಸ್. ಶರ್ಮರು, ೧೨ನೇ ತಾರೀಕಿನ ದಿನ ನಡೆದ ಸಮಾಲೋಚನೆಯ ವರದಿಯನ್ನು ಓದಿದೊಡನೆ ಅದು ಅಂಗೀಕರಿಸಲ್ಪಟ್ಟಿತು. ಕೊನೆಗೆ ಕಮಿಟಿಗೆ, ಶ್ರೀ ಎ. ಬಿ ಶೆಟ್ಟಿ ಅಧ್ಯಕ್ಷರಾಗಿಯೂ, ಶ್ರೀ ಕಮಲಾದೇವಿ ಚಟ್ಟೋಪಾಧ್ಯಾಯ ಮತ್ತು ರಾ। ಎನ್. ಎಸ್ ಸುವರ್ಣ ಇವರು ಉಪ ಅಧ್ಯಕ್ಷರಾಗಿಯೂ, ಸೈಂಟ್ ಎಲೋಸಿಯಸ್ ಕೊಲೇಜಿನ ವಿದ್ಯಾರ್ಥಿ ಶ್ರೀ ಎಸ್ ಎಸ್ ಶರ್ಮ, ಮತ್ತು ಪಂಡಿತ ರಮಾಬಾಯಿಯವರು ಜೊತೆಕಾರ್ಯದರ್ಶಿಗಳಾಗಿಯೂ, ರಾ। ಟಿ ಎಮ್ ಪರಮೇಶ್ವರನ್, ಇವರು ಕೋಶಾಧಿಕಾರಿಗಳಾಗಿಯೂ, ಆರಿಸಲ್ಪಟ್ಟರು.

ಯುವಕ ಪರಿಷತ್ತಿಗೆ ಅಧ್ಯಕ್ಷರಾಗಲು, ಮುಂಬಾಯಿ ಕೌನ್ಸಿಲ್ ಮೆಂಬರ್ ಕೆ. ಎಫ್ ನರಿಮೋನರನ್ನು ಆಮಂತ್ರಿಸಬೇಕೆಂದೂ, ಸ್ವಾಗತ ಕಮಿಟಿಯ ಮೆಂಬರರಾಗಲು ವಿದ್ಯಾರ್ಥಿಗಳು ಒಂದು ರೂಪಾಯಿ ಮತ್ತು ಇತರರು ೨ ರೂಪಾಯಿ ವಂತಿಗೆ ತೆರಬೇಕೆಂದೂ, ವಿದ್ಯಾರ್ಥಿಗಳಿಗೆ ೪ ಆಣೆ ಡೆಲಿಗೇಶನ್ ಫೀ ಆಗಿರಬೇಕೆಂದೂ, ವಿದ್ಯಾರ್ಥಿಗಳಲ್ಲದವರು ಪರಿಷತ್ತಿಗೆ ಬರಬೇಕಾದರೆ ರೂಪಾಯಿ ೨-೧, ಆಣೆ ೮ ಕೊಡಬೇಕಾಗುವದೆಂದೂ, ಮಂಜೂರಾಯಿತು. ರಾ। ಎಸ್ ಎಸ್ ಸುವರ್ಣನವರು ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿದ ಮೇಲೆ ಸಭೆಯು ಕೊನೆಗಂಡಿತು.

ಇಲ್ಲಿಯ 'ಶಿವಬ್ರಾಹ್ಮಣ ವಿದ್ಯಾರ್ಥಿ ಭವನ'ದಲ್ಲಿ ಇದೇ ಬರುವ ತಾ ೨೯ನೇ ಬುಧವಾರ ದಿವಸ ಉಪಾಕರ್ಮವು ಎಂದಿನಂತೆ ಆಚರಿಸಲ್ಪಡುವುದು. ಸ್ವಜಾತಿ ಗೃಹಸ್ಥರಿಗೆ ಸುಸ್ವಾಗತವಿದೆ. ಅಂದು ಪ್ರಾತಃ ಘಂಟೆ ೬ಕ್ಕೆ ಸರಿಯಾಗಿ ಪ್ರಸ್ತುತ ಭವನದ ಸ್ಥಿತಿಯ ಕುರಿತು ಆಲೋಚಿಸಿ ತೀರ್ಮಾನಿಸಲಾಗುವದು. ಆದಕಾರಣ ಸಂಬಂಧ ಪಟ್ಟವರೂ ಹಿತಕಾಂಕ್ಷಿಗಳೂ ಅಂದು ದಯಮಾಡಿ ಹಾಜರಾಗಬೇಕಾಗಿ ವಿನಂತಿ ಇದೆ.

ಇದೇ ತಿಂಗಳ ತಾ ೨೪ರ ಲಾಗಾಯ್ತು ತಾ ೩೦ರ ವರೆಗೆ ಮ। ರಾ। ಎಮ್ ವಿ ಶಾಸ್ತ್ರಿಗಳವರ ಮನೆಯ ಲಾಗಾಯ್ತು ಕದ್ರಿ ರಸ್ತೆಯ ಜಂಕ್ಷನಿನ ವರೆಗಿನ ರಸ್ತೆಯು ರಿಪೇರಿಯ ಸಮ್ಬಂಧ ಮುಚ್ಚಲ್ಪಡುವುದು ಎಂದು ಮುನ್ಸಿಪಲ್ ಚೇಯರ್ಮೇನರು ತಿಳಿಸುತ್ತಾರೆ.

ಉಪ್ಪಿನಂಗಡಿ — ಇಲ್ಲಿ ಒಬ್ಬ ಮಾಪಿಳ್ಳೆಯನ್ನು ಕೈದು ಮಾಡಿರುತ್ತಾರೆ. ಅತನು ೭ ದಿವಸಗಳ ಒಳಗೆ ೪೮ ಮನೆಗಳನ್ನು ಹೊಕ್ಕು ಕಳವು ಮಾಡಿರುತ್ತಾನಂತೆ. ಸ್ತ್ರೀ ಒಂದೆ ದಿವಸ ೧೧ ಮನೆಗಳನ್ನು ಹೊಕ್ಕಿರುತ್ತಾನೆ. ಈತನಿಗೆ ವಯಸ್ಸು ೨೫. ಆದರೆ ಇಷ್ಟರಲ್ಲಿ ೧೩ ಹುಡುಗರನ್ನು ಮದುವೆ ಆಗಿ ಎಲ್ಲರನ್ನು ಬಿಟ್ಟು [illegible] ಯಲ್ಲಿ ಮದುವೆಯಾಗಿರುತ್ತಾನೆ. ಈ ಮ್ಯಾಜಿಸ್ಟ್ರೇಟರ ಹದಿನಾಲ್ಕು ಕಣ್ಣುಗಳನ್ನು ಮದುವೆಮಾಡಿಕೊಂಡವನು. ಒಬ್ಬ ಹೆಣ್ಣುಮಗಳು ಮನೆಗಳನ್ನು ನಗ್ಗಿದ್ದು ಆಶ್ಚರ್ಯವಲ್ಲ!

ಮೊನ್ನೆ ಬುಧವಾರ ದಿವಸ [illegible] ಕಾಲ [illegible] ಕಾಲಾ ಕಟ್ಟೋರವಲ್ಲ ಹೆಲ್ತ್ ಆಫೀಸರರ ವಿನಾಯಿತು [illegible] ಇಲ್ಲಿ ಬರುವ ರೋಗವನ್ನು ಕುರಿತು ಅರ್ಥಗರ್ಭಿತವಾದ ಭಾಷಣವನ್ನು ಮಾಡಿಯು. ಆಲದೆ ದಾರ ಹಾಕಿಸುವುದರ ಉಪಯೋಗವನ್ನೂ ಪ್ರಯೋಜನವನ್ನು ಸವಿಸ್ತಾರವಾಗಿ ವಿವರಿಸಿದರು. ಇವರು ತಮಿಳ ಭಾಷಿಯವರಾದುದರಿಂದ ಇವರಿಗೆ ಕನ್ನಡವು ಬರುವುದಿಲ್ಲವಾದ ಕಾರಣ ಹಿಂದಿ ನಲ್ಲಿ ವಿವರಿಸಿದರು. ಇದನ್ನು ಇಲ್ಲಿಯ ಶಾಲಾವಹಿಕ್ಯರು ಕನ್ನಡಕ್ಕೆ ಭಾಷಾಂತರಿಸಿ ಜನರಿಗೆಲ್ಲರಿಗೂ ಅಭಿಪ್ರಾಯವನ್ನು ತಿಳಿಸಿದರು.

ಪಾಣೆಮಂಗಳೂರು — ಮಂಗಳೂರು ಕೇ ಜನ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರಾದ ಡಾ। ಕೋರಿಕಲ್ ಮ [illegible] ಮೊದಲು ಕಾರ್ಕಳದ ಎಸ್ ವಿ ಎಸ್ ಎಲಿಮೆಂಟರಿ ಶಾಲೆ ಮತ್ತು ಇತರ ಶಾಲೆಗಳ ಪರೀಕ್ಷೆಯನ್ನು ಮಾಡಿ ತೆರಳಿದರು.

ಇಲ್ಲಿಯ ಬೋರ್ಡು ಹುಡುಗಿಯರ ಶಾಲೆಗೆ ಒಬ್ಬ ಮುನಿಸಿಪಲ್ ಇಲ್ಲದೆ ಮಕ್ಕಳೂ ಉಪಾಧ್ಯಾಯಿನಿಯರೂ ಶಾಲೆಗೆ ಬರುವ ಕಷ್ಟವನ್ನು [illegible] ಇದು ಬಹಳ ಗಮನಾರ್ಹವಾಗಿದೆ. ಆದುದರಿಂದ ಹೆಣ್ಣುಮಕ್ಕಳ ಮುನ್ನಡೆಯನ್ನು ಉಳಿಸುವುದಕ್ಕಾಗಿ ಈ ವಿಷಯದಲ್ಲಿ ಬೋರ್ಡಿನವರು ಬೇಗ ಗಮನಕೊಡಬೇಕು.

ಮೂಡುಗೋಡಿನ ಬಳಿ — ಶಾಲೆಯಲ್ಲಿ ಮಕ್ಕಳ ಸಂಖ್ಯೆಯು ಹೆಚ್ಚಾಗಿರುವುದರಿಂದ ಇಬ್ಬರು ಉಪಾಧ್ಯಾಯರಿಂದ ಕಲಿಸಲು ಸಾಧ್ಯವಿಲ್ಲದ್ದರಿಂದ ತಾಲೂಕ ಬೋರ್ಡಿನವರು ಇನ್ನೊಬ್ಬ ಉಪಾಧ್ಯಾಯರನ್ನು ಈ ಶಾಲೆಗೆ ಅಗತ್ಯವಾಗಿ ಕೊಡಬೇಕಾಗಿದೆ.

ಬಂಟವಾಳ — ಬಂಟವಾಳ ನೆ ಟ್ರಿ ಎಲಿಮೆಂಟ್ರಿ ಶಾಲಾ ಉಪಾಧ್ಯಾಯರ ಸಂಘದ ಸಭೆಯು ಬರುವ ಸಪ್ಟಂಬರ ತಿಂಗಳ ೧ನೇ ತಾರೀಕು ಶನಿವಾರ ಬಂಟವಾಳ ಮೂಡುಗೋಡಿನ ಶಾಲೆಯಲ್ಲಿ ಮಂಗಳೂರ ಕೋಲೇಜಿನ ಜೂನಿಯರ್ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ರಾ। ವೆಂಕಟ್ರಮಣರವರ ಅಧ್ಯಕ್ಷತೆಯಲ್ಲಿ ಜರಗುವುದು. ಈ ಸಮಯ ಜಿಲ್ಲಾ ಉಪಾಧ್ಯಾಯ [illegible] ಹೊಸತಾಗಿ ಹೊರಟ ನೋಟ್ ಒಫ್ ಲೆಸನ್ ಸರ್ಕ್ಯುಲರ್ [illegible] ವಿಷಯವೂ ಚರ್ಚೆಯು ನಡೆಯುವುದು.

ಕೊಂಬತ್ತೂರು — [illegible] ಮುನ್ನೂರು ಜನರು ವಾಸಿಸುವ ಇಲ್ಲಿಯ ಬೋರ್ಡು ಹುಡುಗರ ಶಾಲೆಯು ಈ ಮೊದಲು ಶಾಸಕಗೋಪ ತಾಲೂಕ ಬೋರ್ಡು ಸ್ಥಾಪಿಸಿದ ಕಾಲದಲ್ಲಿ ಮೂವರ ಉಪಾಧ್ಯಾಯರಿದ್ದು ಉತ್ತಮ ಸ್ಥಿತಿಯಲ್ಲಿ ನಡೆಯುತ್ತಿತ್ತು. ಈಗ ಈ ಶಾಲೆಯಲ್ಲಿ ಒಬ್ಬ ಉಪಾಧ್ಯಾಯರು ಒಬ್ಬರು ಉಪಾಧ್ಯಾಯನಿಯರು ಇರುವರು. ಇತ್ತಲಾಗೆ ಉಪಾಧ್ಯಾಯನಿಗೆ ಬಾಯೊಂದರಲ್ಲಿ ಹುಣ್ಣಾಗಿದ್ದರಿಂದ ಶಾಲೆ ತೀರ ದಿಕ್ಕೆ ವರ್ಗವಾಗಿದೆ. ಒಬ್ಬರೆ ಉಪಾಧ್ಯಾಯರು ಮಾತ್ರವೇ ಉಳಿದು ಹೀಗಿದ್ದರೆ ಶಾಲೆಯ ಸ್ಥಿತಿಯು ಹೇಗಿದ್ದೀತೆಂದು ತಾಲೂಕ ಬೋರ್ಡಿನವರೇ ಆಲೋಚಿಸಲಿ.

ತಯಾರಾಗಿವೆ! ತಯಾರಾಗಿವೆ

ಐದನೇ ದರ್ಜೆಯ

ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.

ಶಾರದಾ ಛಾಪಖಾನೆ, SHARADA PRESS,

ರಥಬೀದಿ ಮಂಗಳೂರು MANGALORE.

ಕ | ರ | ಣಿ | ಕ | ರ

ಎ | ಗ್ಯು | ಮಿ | ಕ್ಸ್ಚ | ರ್

ಕರ್ಣೀಕ ಎಗ್ಯೂಮಿಕ್ಸ್ಚರ.

ಇವರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಝಾ ಬಹು ದಿನದ ಜ್ವರ, ಹಾದಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು ಇದರಿಂದ ಬೆವರು ಬಂದು, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ

ದೊಡ್ಡ ಬಾಟ್ಲಿ ಕಿಮ್ಮತು ೧-೪-೦, ಸಣ್ಣದಕ್ಕೆ ೦-೧೪-೦

ಎಲ್ಲ ಕಡೆಗೂ ಔಷಧವನ್ನು ಮಾರುವಗೋಸ್ಕರ

ಏಜಂಟರು ಬೇಕಾಗಿದ್ದಾರೆ

ಏಜಂಟರು ದಿ ಊಲನ್ ಮಾರ್ಟ್, ಮಂಗಳೂರು | ಕರ್ಣೀಕ ಬ್ರದರ್ಸ, ಗಿರಿಗಾಂವ, ಮುಂಬಯಿ

Batliwalla's Preparations Cover All Your Needs.
A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಅಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಕ. ರೂ ೧

ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪

ಬಾಟ್ಲಿವಾಲರ ಟೂಥ್ ಅಫ್ ಪಾವ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೨

ಬಾಟ್ಲಿವಾಲರ ಫ್ಲೆರಿಯಾ ಮಿಕ್ಸ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ ಆಣೆ ೧೪

ಬಾಟ್ಲಿವಾಲರ ಕ್ವಿನೀನ ಟೀಕುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ ೧ ಬಾಟ್ಲಿಯಲ್ಲಿ ೧೦೦ ಟೀಕುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ ರೂ ೧—೮—೦ ರೂ ೧—೪—೦ ೧—೧೨—೦

ಬಾಟ್ಲಿವಾಲರ ಹುಳ ಕಡ್ಡಿ ಔಷಧ ರೂ ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ ರೂ ೦—೬—೦ LIBERAL DISCOUNT TO TRADE

ಕಾರಖಾನೆ—CAWASHAPUR, BOMBAY

ಎಲ್ಲಾ ಕಡೆಗಳಲಿ ಡಾ. ಯಚ್ ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

ಏಜಂಟರು ಬೇಕಾಗಿದ್ದಾರೆ Sayani Road P O Cadell Road Bombay, No 14

ಕೇಸರಿಯವರ ಲೋಧ್ರ

ಗರ್ಭಾಶಯ ರೋಗನಿವಾರಿಣೀ.

ಅಮೆರಿಕದವರ ಕೈಗಾರಿಕೆ ಕ್ರಮಗಳಿಂದ ಇಂಡಿಯವು ಕಲಿತುಕೊಳ್ಳಬೇಕಾದ ಕೆಲವು ಸಂಗತಿಗಳು.	೧೫
ಪತ್ರವ್ಯವಹಾರ, ೧, ೨, ೩	೨
ಸ್ವೀಕಾರ ಮತ್ತು ವಿಮರ್ಶೆ	,,
ಮಂಗಳೂರಲ್ಲಿ ಸ್ಥಾಪಿಸಬೇಕಾದ ಹಿಂದೂ ಗಾಯನ ಶಾಲೆ	೧೪
ಆರೋಗ್ಯದ ಕೆಲವು ಸೂತ್ರಗಳು	೧೧

ಸ್ವದೇಶಾಭಿಮಾನಿ.

ತಾರೀಕು ೩೧ನೇ ಶುಕ್ರವಾರ ಅಗೋಸ್ತು ೧೯೨೮.

ನಮ್ಮ ಒಪ್ಪಿತದ ಸರಕಾರ.

ಲೇಖಾಂಕ ೩.

ಪ್ರಾಂತಿಕ ವಿಭಾಗಣೆಯಲ್ಲಿ ನೆಹರು ಕಮಿಟಿಯು Self-determination ತತ್ವಕ್ಕೆ ಅವಶ್ಯವಿದ್ದುದಕ್ಕಿಂತಲೂ ಹೆಚ್ಚು ಪ್ರಾಮುಖ್ಯತೆಯನ್ನು ಕೊಟ್ಟಿರುತ್ತದೆ. ಹಿಂದೂಸ್ಥಾನದ ಪ್ರಕೃತದ ವಿಭಾಗಣೆಗಳಲ್ಲಿ, ಒರಿಸ್ಸಾ, ಬೀಹಾರ, ಸಿಂಧ, ಆಂಧ್ರಾ, ತಮಿಳು, ಕೇರಳ ಮತ್ತು ಕರ್ನಾಟಕ ಇವೇ ಪ್ರತ್ಯೇಕ ಪ್ರಾಂತಗಳಿಗಾಗಿ ಪ್ರಯತ್ನಪಡುತ್ತಿವೆ. ಇವುಗಳಲ್ಲಿ ಸಿಂಧ ಪ್ರಾಂತ ವಿಭಾಗಣೆಯ ಪ್ರಶ್ನೆಯು ಮುಸಲ್ಮಾನ ಪಕ್ಷಾಭಿಮಾನದಿಂದ ಅಖಿಲ ಭಾರತದ ರಾಜಕೀಯ ಸಮಸ್ಯೆಯಾಗಿ ಬೆಳೆದಿದೆ. ಉಳಿದವುಗಳು ಭಾಷಾ ಕಾರಣಗಳಿಂದ ಪ್ರಾಂತಿಕ ವಿಭಾಗಗಳನ್ನು ಕೇಳುತ್ತಿವೆ.

ಈಗಿನ ಪ್ರಾಂತಿಕ ವಿಭಾಗಣೆಗಳು ಬ್ರಿಟಿಷ ಸಾಮ್ರಾಜ್ಯ ವಿಸ್ತಾರದ ಕ್ರಮಗಳನ್ನು ಮಾತ್ರವೇ ಸೂಚಿಸುತ್ತಿವೆಯಲ್ಲದೆ ದೇಶದ ನೈಸರ್ಗಿಕ ಅಂಶಗಳನ್ನಾಗಿ ತೋರಿಬರುವುದಿಲ್ಲವೆಂದು ನೆಹರು ಕಮಿಟಿಯು ಹೇಳುವುದು ನಿಜವಾಗಿದೆ. ಆದುದರಿಂದ ಈಗಿನ ವಿಭಾಗಣೆಗಳನ್ನು ತಿದ್ದುಪಡಿಮಾಡಿಸುವುದು ಅಗತ್ಯವಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಪ್ರಾಂತಿಕ ವಿಭಾಗಣೆಗೆ ಈ ಕೆಳಗಿನ ಶರ್ತಗಳನ್ನು ಅವರು ಆಧಾರವಾಗಿ ತೆಗೆದುಕೊಳ್ಳುವರು—(೧) ಭಾಷೆ, (೨) ಜನತೆಯ ಇಚ್ಛೆ, (೩) ಸಾಂಪತ್ತಿಕ ಶಕ್ತಿ. ಇವುಗಳೇ ನೆಹರು ಕಮಿಟಿಯ ಕೈಯಲ್ಲಿ, ಪ್ರಾಮುಖ್ಯತೆಯನ್ನು ತಳೆದಿವೆ. ಆದರೆ ಆಡಳಿತದ ಸೌಲಭ್ಯಕ್ಕೆ ಇವರು ಹೆಚ್ಚು ಲಕ್ಷ್ಯವನ್ನು ಕೊಡುವುದಿಲ್ಲ. ಮೇಲಿನ ಮೂರು ಶರ್ತಗಳಲ್ಲಿ ಭಾಷೆ ಮತ್ತು ಜನತೆಯ ಇಚ್ಛೆಯೇ ಎಲ್ಲದಕ್ಕಿಂತಲೂ ಮಿಗಿಲಾದುದಾಗಿ ನೆಹರು ಕಮಿಟಿಯ ಅಭಿಪ್ರಾಯವಾಗಿರುತ್ತದೆ.

ತತ್ವತಃ ಭಾಷೆ ಮತ್ತು ಜನತೆಯ ಇಚ್ಛೆಯು ಮಹತ್ವದ್ದೆನ್ನುವುದು ಸಹಜವಾದರೂ, ಆಡಳಿತದ ಸೌಲಭ್ಯವೂ, ಸಾಂಪತ್ತಿಕ ಶಕ್ತಿಯೂ ಕಾರ್ಯತಃ ಪ್ರಾಂತ ರಚನೆಯ ಪರಿಮಾಣವನ್ನು ನಿರ್ಧರಿಸುವ ಶರ್ತಗಳಾಗಿರುತ್ತವೆ. ಕೇರಳ, ಮತ್ತು ಸಿಂಧ ಪ್ರಾಂತಗಳ ರಚನೆಗಿರುವ ತೊಡಕುಗಳನ್ನು ನೋಡಿದರೆ ಜನತೆಯ ಇಚ್ಛೆಯೊಂದೇ ಪ್ರಾಂತರಚನೆಗೆ ಸಾಕಷ್ಟು ಆಧಾರವಾಗಿಲ್ಲವೆಂದು ತೋರುವುದು. ಸೆಲ್ಫ ಡಿಟರ್ಮಿನೇಶನ್ ತತ್ವವನ್ನು ಮೊದಲು ನಾವು ಗೌರವಿಸಿ, ಇಂತಹ ವಿಷಯಗಳಲ್ಲಿ ಅದನ್ನು ನಿರಾಕರಿಸಿದರೆ "ಸಮಂಜಸವಲ್ಲವೆಂದು ನೆಹರು ಕಮಿಟಿಯು ಹೇಳುವುದು. ಆದರೆ ಈ ರೀತಿಯಲ್ಲಿ ಹೆಚ್ಚು ದೂರ ತರ್ಕಿಸಲಾಗುವುದಿಲ್ಲವೆಂದು ಇನ್ನೂ ಸಣ್ಣ ವಿಭಾಗರಚನೆಗಳ ವಿಷಯದಲ್ಲಿ ಆಲೋಚಿಸಿದರೆ ತಿಳಿದುಬರುವುದು. ಇಂತಹ ಉದಾತ್ತ ತತ್ವಗಳನ್ನು ವಿಶಾಲವಾಗಿ ಗ್ರಹಿಸಬೇಕೇ ಹೊರತು ಸೂಕ್ಷ್ಮ ವಿಚಾರಗಳಿಗೂ ಇವನ್ನು ಅನ್ವಯಿಸುತ್ತಾ ಬಂದರೆ ಮನೆಗೊಂದರಂತೆ ಹಿಂದೂಸ್ಥಾನವು ಸರಕಾರಮಯವಾಗಲಿಕ್ಕೆ ಅಡ್ಡಿ ಇರುವುದಿಲ್ಲ.

ನಾವು ಹೆಚ್ಚಾಗಿ ವಿಚಾರಿಸತಕ್ಕ ಅಂಶವೆಂದರೆ ಕರ್ನಾಟಕ ಪ್ರಾಂತರಚನೆಯ ವಿಷಯ. ಪ್ರಾಂತರಚನೆಯ ಸಮಸ್ಯೆಯ ತೀರ್ಮಾನಕ್ಕೆ ಬೇಕಾದ ಎಲ್ಲಾ ವಿಚಾರಗಳನ್ನು ಅತ್ಯಂತ ಉತ್ತಮವಾದ ರೀತಿಯಲ್ಲಿ ಸಂಗ್ರಹಿಸಿ ನೆಹರು ಕಮಿಟಿಯ ಮುಂದೆ ಇಟ್ಟಿರುತ್ತಾರೆಂದು ಕಮಿಟಿಯು ಹೇಳಿದುದು ಕರ್ನಾಟಕಕ್ಕೆ ಗೌರವದ ಮಾತಾಗಿದೆ. ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವಾಗಿ ಮಾಡಲು ಸಾಕಷ್ಟು ಆಧಾರಗಳನ್ನು ಏಕೀಕರಣವಾದಿಗಳು ಕೊಟ್ಟಿರುವರೆಂದು ಕಮಿಟಿಯು ಒಪ್ಪುತ್ತಿದೆ.

ಆದರೆ ಈ ಪತ್ರಿಕೆಯು ಈ ಮೊದಲೇ ಸೂಚಿಸಿದ ಕೆಲವು ಪ್ರಶ್ನೆಗಳಿಗೆ ನೆಹರು ಕಮಿಟಿಯ ಮುಂದೆ ಕೂಡ ಸರಿಯಾದ ಉತ್ತರವು ದೊರಕಿಲ್ಲ. ೧೯೨೭ನೇ ಇಸವಿ ಜೂನ್ ತಾ. ೧೭ರ ಸಂಚಿಕೆಯಲ್ಲಿ ಇದೇ ಪತ್ರಿಕೆಯು ಹೀಗೆ ಬರೆದಿತ್ತು:—

"ಹಿಂದೂಸ್ಥಾನದಲ್ಲಿ ಭಾಷಾವಾರು ಪ್ರಾಂತರಚನೆಯಲ್ಲಿ ಕರ್ನಾಟಕದಷ್ಟು ಕಠಿಣ ವಿಭಜನೆಯು ಇನ್ನಾವ ಪ್ರಾಂತಕ್ಕಾಗಿಯೂ ಇರುವುದೆಂದು ನಮಗೆ ಅನುಭವವಾಗುವುದಿಲ್ಲ. ಕರ್ನಾಟಕದ ಜಾಗೃತ ರಕ್ತವು ಸಮ್ಮಿಲನಕ್ಕಾಗಿ ಉತ್ತೇಜಿಸಲ್ಪಟ್ಟು ಉತ್ತಪ್ತವಾದರೂ, ಅದರ ಏಕೀಕರಣದ ಸಮಸ್ಯೆಯು ಮುಂದೆ ಬಂದಾಗ ಅದರ ತೀರ್ಮಾನದ ಜವಾಬ್ದಾರಿಯನ್ನು ಹೊರಲು ಸಿದ್ಧವಾಗಿಲ್ಲವೆಂಬುವುದು ಈಗಿನ ಅನುಭೂತಿಮಯವಾದ ವಾತಾವರಣದಲ್ಲಿ ಒಡೆದು ಕಾಣುವ ವಿಷಯವಾಗಿದೆ."

ಮೇಲಿನ ಸಮಸ್ಯೆಯನ್ನು ನೆಹರು ಕಮಿಟಿಯು ಕೆಳಗಿನಂತೆ ಸೂಚಿಸುತ್ತಿದೆ:—

"ಕರ್ನಾಟಕದ ಕೆಲವು ಭಾಗಗಳು ದೇಶೀ ಸಂಸ್ಥಾನಗಳಲ್ಲಿ ಮುಖ್ಯವಾಗಿ ಮೈಸೂರಿನಲ್ಲಿ ಇರುವುವು; ಮತ್ತು ಇವುಗಳನ್ನು ಇತರ ಭಾಗಗಳೊಡನೆ ಏಕೀಕರಿಸುವುದರಲ್ಲಿ ಕಷ್ಟಗಳಿವೆ. ಅಲ್ಲದೆ ಮೈಸೂರಿನ ಬೇರೆ ಪಾರ್ಶ್ವದಲ್ಲಿರುವ ಕೆಲವು ಕರ್ನಾಟಕ "ದ್ವೀಪ" (ಇತರ ಪ್ರಾಂತಗಳ ಭಾಗಗಳಿಂದ ನಾಲ್ಕು ದಿಕ್ಕುಗಳಲ್ಲೂ ಸುತ್ತುವರಿಯಲ್ಪಟ್ಟ)ಗಳನ್ನು ಕರ್ನಾಟಕದ ಮುಖ್ಯ ಭಾಗದೊಡನೆ ಕೂಡಿಸುವುದೂ ಸುಲಭವಾಗಲಾರದು."

ಇದೀಗ ಪ್ರಶ್ನೆಯನ್ನೇ ನಾವು ಹಲವು ವರ್ಷಗಳಿಂದಲೂ ಕನ್ನಡಿಗರ ಮುಂದಿಟ್ಟಿದ್ದೆವು. ಆದರೆ ಕರ್ನಾಟಕೀಯರಿಗೆ ಸಮಾಧಾನವಾಗುವದಾದರೆ ನೆಹರು ಕಮಿಟಿಯು ಸೂಚಿಸುವಂತೆ ಮೇಲೆ ತೋರಿಸಿದ ಭಾಗಗಳನ್ನು ಬಿಟ್ಟರೂ ಕರ್ನಾಟಕ ಪ್ರಾಂತ ರಚನೆಗೆ ಸಾಕಷ್ಟು ದೊಡ್ಡ ವಿಭಾಗವು ಉಳಿಯುವುದರಿಂದ ಅದನ್ನೇ ಪ್ರಾಂತವಾಗಿ ಮಾಡಿಕೊಳ್ಳಬಹುದು. ಈ ತೀರ್ಮಾನವು ಎಲ್ಲರಿಗೂ ಒಪ್ಪಿತವಿದ್ದರೆ ಆ ಕಡೆಗೆ ಎಲ್ಲರೂ ತಮ್ಮ ಶಕ್ತಿಯನ್ನು ಕೇಂದ್ರೀಕರಿಸಿದರೆ ಕರ್ನಾಟಕ ಏಕೀಕರಣವು ಬೇಗನೇ ಸಾಧ್ಯವಾಗುವುದರಲ್ಲಿ ನಮಗೆ ಯಾವ ಸಂದೇಹವು ತೋರುವುದಿಲ್ಲ. ಆದರೆ ನಮ್ಮ ತಕ್ಕಮಟ್ಟಿನ ವಿಲೇವಾರಿಯಲ್ಲಿ ಆ ಬಡ ಕನ್ನಡಿಗ "ದ್ವೀಪ"ವಾಸಿಗಳ ಗತಿಯೇನು? ಅವರನ್ನು ಸುತ್ತುವರಿದ ಪ್ರಾಂತಕ್ಕೆ ಅವರು ಬಲಿಬೀಳಬೇಕೆ? ಇಲ್ಲವೇ ಅವರು ಮೈಸೂರಿಗೆ ಸೇರಲಾರರೇತೆ? ಭಾಷಾ ಏಕೀಕರಣವೆಂದು ಈಗಿನ ಬ್ರಿಟಿಷ ಪ್ರಭುತ್ವದಿಂದ ತಪ್ಪಿಸಿ ಮೈಸೂರಿನ ನಿರಂಕುಶಪ್ರಭುತ್ವಕ್ಕೆ ಅವುಗಳನ್ನು ಸೇರಿಸಿದರೆ ಪ್ರಜಾನೆಮ್ಮದಿಯಾದೀತೆ? ಮೊದಲಾದ ಕೆಲವು ಪ್ರಶ್ನೆಗಳು ಏಳುವುವು. ಅವುಗಳನ್ನೂ ವಿಚಾರಪೂರ್ವಕ ತೀರಿಸಿಕೊಳ್ಳುವುದು ಕನ್ನಡಿಗರ ಕರ್ತವ್ಯವಿರುತ್ತದೆ.

ಈ ಕರ್ನಾಟಕ ಪ್ರಾಂತರಚನೆಯ ಚರ್ಚೆಯಲ್ಲಿ ಮದರಾಸಿಯವರಾದ ಶ್ರೀ ಆಣೆಯವರ ಅಭಿಪ್ರಾಯಗಳು ವಿಚಿತ್ರತರದವುಗಳೂ, ಮದರಾಸಿಯ ಕಲಂಕಿತ ಮನಸ್ಸನ್ನು ತೋರಿಸುವಂತಹವುಗಳೂ ಆಗಿದ್ದುವು. ಕರ್ನಾಟಕ ಪ್ರಾಂತರಚನೆ ಬೇಡವೆನ್ನುವ ಕನ್ನಡಿಗರಿರಬಹುದೆಂದು ಆಣೆಯವರು ದುರ್ಬೋಧನೆಯನ್ನು ಮಾಡಲು ಹೊರಟಿದುದು ಮದರಾಸಿ ಮಾತ್ಸರ್ಯದ್ದ ಚಿಹ್ನೆಯೊ ಎಂದು ತೋರುವುದು. ಏಕೆಂದರೆ ಕರ್ನಾಟಕದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರೆಂಬ ಚಳವಳಿಯು ಅಲ್ಪಸ್ವಲ್ಪವಾಗಿ ಇದೆಯೆಂದು ಒಪ್ಪಬಹುದಾದರೂ ಈ ಬ್ರಾಹ್ಮಣ-ಬ್ರಾಹ್ಮಣೇತರ ಭೇದವು ಕೂಡ ಕರ್ನಾಟಕ ಏಕೀಕರಣವನ್ನು ನಿಷೇಧಿಸಿದುದು ಎಲ್ಲಿಯೂ ಕಂಡುಬರುವುದಿಲ್ಲ. ಆದರೂ ಈ ಆಣೆಯವರಿಗೆ ಕರ್ನಾಟಕದೊಳಗಿನ ವಿಭೇದಗಳ ಸ್ವಪ್ನಬಿದ್ದುದು ಆಶ್ಚರ್ಯಕರವಾಗಿದೆ. ನೆಹರು ಕಮಿಟಿಯು ಆಣೆಯವರ ಈ ಮಾತಿನ ಪೊಳ್ಳುತನವನ್ನು ತಿಳಿದುದು ಅಭಿನಂದನೀಯವಾಗಿದೆ.

ನೆಹರು ಕಮಿಟಿಯು ಕರ್ನಾಟಕ ಪ್ರಾಂತರಚನೆಯ ವಿಷಯದಲ್ಲಿ ಪ್ರಕಟಿಸಿದ ಅಭಿಪ್ರಾಯಗಳು ನ್ಯಾಯಸಮ್ಮತವಾಗಿವೆ ಎಂದು ನಮಗನ್ನಿಸುತ್ತಿದೆ. ಆದರೆ ಪ್ರಾಂತರಚನೆಯ ಸರಿಯಾದ ಆವರಣವನ್ನು ಅವರು ಹಾಕಲಿಕ್ಕೆ ಹೋಗದೆ, ಪ್ರಾಂತ ರಚನೆಯ ಆವಶ್ಯಕತೆಯನ್ನು ಒಪ್ಪಿ, ಸೂಕ್ಷ್ಮವಿಚಾರಗಳನ್ನು ಮುಂದಿನ ತೀರ್ಮಾನಕ್ಕೆ ಬಿಟ್ಟಿದ್ದಾರೆ. ಇದು ಸಮಾಧಾನಕರವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ವಿದೇಶ ವರ್ತಮಾನ.

— ರಷ್ಯಾದೇಶದಲ್ಲಿ ಕುಡಿಕತನವನ್ನು ನಿಲ್ಲಿಸುವರು. ... ಕತನವೆಂಬ ಹೇಯ ದುರಭ್ಯಾಸಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದ ... ದಾರರನ್ನು ಕೈದು ಮಾಡಿರುವರು. ಕಾಲೇಜಗಳಲ್ಲಿ ವಿದ್ಯಾ... ಪರೀಕ್ಷಿಸಿ ನೋಡಲಾಗಿ ಶೇಕಡಾ ೭೪ರಷ್ಟು ವಿದ್ಯಾರ್ಥಿಗಳು ... ಯಿತು. ಅವರ ಹೆತ್ತವರೇ ಅವರಿಗೆ ಪ್ರೋತ್ಸಾಹವನ್ನು ಕೊಡುತ್ತಿದ್ದರು.

— ಕೆಲಿಫೋರ್ನಿಯದಲ್ಲಿ ಒಬ್ಬ ಚೀನಿಯ ಮನುಷ್ಯನು ... ಮದ್ದು ತಿಂದು ಅಮಲಿನಿಂದ ಪಿಸ್ತೂಲು ಹಿಡಿದು ಹತ್ತು ... ರನ್ನು ಹೊಡೆದು ಕೊಂದು ಒಂದು ಮೋಟಾರ್ ಕಾರಿನಲ್ಲಿ ... ತಪ್ಪಿಸಿಕೊಂಡನು. ಆಫೀಸಿನವನೊಬ್ಬನು ಹೇಗಾದರೂ ... ದರಿಂದ ಪೋಲೀಸರು ಕೂಡಿ, ಕೊಲೆಪಾತಕಿಯನ್ನು ಹಿಡಿದರು. ... ಗೃಹದಲ್ಲಿ ಬಂಧಿಸಲು ಆತನು ಏನೂ ತಡೆಯನ್ನುಂಟು ಮಾಡಲಿಲ್ಲ.

— ಲಂಡನಿನಿಂದ ಹಿಂದೂಸ್ಥಾನಕ್ಕೆ ಸೀದಾ ವರ್ತಮಾನವನ್ನು ಸಾರಿಸುವ ಕೇಬಲುಗಳನ್ನು ಬಹು ಹಣ ಖರ್ಚು ಮಾಡಿ ಸ್ಥಾಪಿಸುವರು.

— ಇಂಪೀರಿಯಲ್ ಹೊಗೆಸೊಪ್ಪಿನ ಕಂಪೆನಿಯ ಪ್ರೆಸಿಡೆಂಟರಾದ ಸರ್ ಜೋರ್ಜ ವಿಲ್ಸನೆಂಬವನು ಹತ್ತು ಮಿಲಿಯ ಸ್ವರ್ಣನಾಣ್ಯಗಳ ಧನಿಕನು. ಆತನು ಸಾಯುವಾಗ ಮರಣ ಸುಂಕವಾಗಿ ೪ ಮಿಲಿಯ ಸ್ವರ್ಣನಾಣ್ಯಗಳು ಸರಕಾರಕ್ಕೆ ಸಿಕ್ಕುವವು.

— ಬ್ರಿಟನಿಗೂ ಆಸ್ಟ್ರೇಲಿಯಾದೇಶಕ್ಕೂ ಇದ್ದ ಟೆಲಿಫೋನಿನ ಸಂಬಂಧವನ್ನು ಅಭಿವೃದ್ಧಿಪಡಿಸುವರು. ಶೀಘ್ರದಲ್ಲಿಯೇ ಇದರ ಚಾರ್ಜು ಬಹು ಕಡಿಮೆಯಾಗಲಿದೆ.

— ಬರುವ ಲೀಗ್ ಓಫ್ ನೇಶನ್ಸಿನ ಅಧಿವೇಶನಕ್ಕೆ ಹಿಂದೂಸ್ಥಾನದ ಪರವಾಗಿ ಪ್ರತಿನಿಧಿಗಳಾಗಿ ಹೋಗಲಿಚ್ಛಿಸುವವರ ಒಂದು ಮುಂದಾದ ಸಭೆಯು ನಡೆಯಿತು. ಕಳ್ಕತ್ತದಿಂದ, ಪ್ರತಿನಿಧಿಗಳು ಸಪ್ಟಂಬರ ಒಂದನೇ ತಾರೀಕಿನೊಳಗೆ ಜಿನೇವಕ್ಕೆ ಹೊರಡಬೇಕಂತೆ.

— ಹಿಂದೂಸ್ಥಾನ ಮತ್ತು ಸಿಲೋನ್ ಇವೆರಡರೊಳಗೆ ತಂತಿಯನ್ನು ಪ್ರಾರಂಭಿಸುವರು. ಇದು ಶೀಘ್ರದಲ್ಲಿಯೇ ಆಗುವದು.

— ಇಂಗ್ಲೆಂಡಿನ ಲೀಡ್ಸ್ ಎಂಬಲ್ಲಿ ಎರಡು ಹುಚ್ಚುನಾಯಿಗಳು ಹಲವು ವಾರಗಳಿಂದ ಹಾವಳಿಯನ್ನುಂಟು ಮಾಡುತ್ತಿವೆ. ಅವುಗಳನ್ನು ಕೊಲ್ಲಲು ಪೋಲೀಸರಿಗೂ ಕಷ್ಟವಾಗಿ ಪರಿಣಮಿಸಿಯದೆ.

— ನ್ಯೂಯೋರ್ಕನಲ್ಲಿ ಒಂದು ರೈಲು ಬಂಡಿಯು ಕಂಬಿಗಳಿಂದ ತಪ್ಪಿಹೋಯಿತು. ಇದರಿಂದ ೨೦ ಜನರು ಸತ್ತುಹೋದರು. ಅನೇಕ ಜನರಿಗೆ ಜಖಮು ಆಗಿರುತ್ತದೆ.

— ಮೊರೊಕ್ಕೊದಲ್ಲಿ ಒಬ್ಬರಿಗೆ ಶಿರಚ್ಛೇದನವನ್ನು ಮಾಡಿದರು. ಇವರು ಹಲವು ಪ್ರೆಂಚರನ್ನು ಕೊಂದಿದ್ದರು. ಇನ್ನೂ ಹಲವು ಅನ್ಯಾಯಗಳನ್ನು ಮಾಡಿದ್ದರು. ಗುಂಡು ಹೊಡೆದು ಕೊಲ್ಲುವುದು ಇವರಿಗೆ ತಕ್ಕ ಶಿಕ್ಷೆಯಲ್ಲವಾದ ಕಾರಣ ಜನರ ಅಪೇಕ್ಷೆಯಂತೆ ಶಿರಚ್ಛೇದನ ಮಾಡಿದರು. ಈ ಸಂದರ್ಭದಲ್ಲಿ ಪಟ್ಟಣಿಗರು ಕಿಕ್ಕಿರಿದು ನೆರೆದಿದ್ದರು.

ಮನುಷ್ಯರ ಸಮುದಾಯದಲ್ಲಿ ಗೂಢಚಾರಳಾಗಿದ್ದ ಜರ್ಮನಿಯವರು ಕೀರ್ತಿ ಬಲ್ಲಿಯ ಬಿ.... ರ ಕೋಣೆಯ ತುತ್ತಿನ್ನ ೫೦ ವರುಷ ಪ್ರಾಯದ ಹೆಂಗಸೊಬ್ಬಳು ಈಗ ಸಿಕ್ಕಿ ದಿಕ್ಸ್ವಿಡಿನ್ ಲೀಫ್‌ಜಿಗಿನಲ್ಲಿ ಅವಳನ್ನು ಕಾರಾಗೃಹದಲ್ಲಿ ಬಂಧಿಸಿದರು.

— ಆಸ್ಟ್ರೇಲಿಯಾ ನಡ್ನಿ ಮತ್ತು ನ್ಯೂಜಿಲೆಂಡ್ ಇವುಗಳೊಳಗೆ ವಿಮಾನ ಸರ್ವೀಸನ್ನು ಪ್ರಾರಂಭಿಸುವರು. ಇವೆರಡು ೧೨೦೦ ಮೈಲುಗಳ ಅಂತರದಲ್ಲಿವೆ. ಒಮ್ಮೆಗೆ ೧೫ ಜನರು ಕುಳಿತುಕೊಳ್ಳಬಹುದಾದ ವಿಮಾನವನ್ನು ಉಪಯೋಗಿಸುವರು.

— ಲಂಡನಿನ ಡೊಡ್ಡಿಂಗ್ ಹರ್ಸ್ಟ್ ಇಗರ್ಜಿಯ ಪಾದರಿಯವರಾದ ರೆವರೆಂಡ್ ಹಚಿನ್‌ಸನ್ ಎಂಬವನು ಕೆಲವು ದಿನಗಳಿಂದ ಕಾಣೆಯಾಗಿ ಎಲ್ಲಿ ಹೋಗಿದ್ದಾನೆಂದೂ ಒಬ್ಬರಿಗೂ ತಿಳಿದಿರಲಿಲ್ಲ. ೨೬ ಕೋಣೆಗಳುಳ್ಳ ಆತನ ಇಗರ್ಜಿಯ ಬೇರಿಯವರಿಗೆ ಆಸವಾಗಿ, ಆತನ ಕೈಯಲ್ಲಿ ಚಿಕ್ಕಾಸು ಕೊಡ ಇಲ್ಲದೆ ಇದ್ದುದರಿಂದ, ಆತನು ಆತ್ಮಹತ್ಯವನ್ನು ಮಾಡಿಕೊಂಡನೆಂದು ಈಗ ತಿಳಿಯಲಾಗಿದೆ.

ಒಳದೇಶ ವರ್ತಮಾನ.

— ಮುಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಗಿರಣಿ ಮುಷ್ಕರದವರ ಸಹಾಯಾರ್ಥವಾಗಿ ೩೦೦೦ ರೂಪಾಯಿಗಳನ್ನು ಸೆಂಕ್ಷನ್ ಮಾಡಿರುವರು.

— ದೀಕ್ಷಾಯಿಯ ಮಹಾರಾಜರು ಬರೋಡಾ ರಾಜ್ಯದ ಒಂದು ವನದಲ್ಲಿ ಒಂದು ಸಿಂಹವನ್ನು ಗುಂಡು ಹೊಡೆದು ಕೊಂದಿರುವರು. ದಕ್ಷಿಣ ಆಫ್ರಿಕದಲ್ಲಿ ಅವರು ೨೮ ಸಿಂಹಗಳನ್ನು ಕೊಂದಿದ್ದರಂತೆ.

— ಹಿಂದೂಸ್ಥಾನದ ಅಡಿಟರ್ ಜನರಲರಾದ ಸರ್. ಪ್ರೆಡರಿಕ್ ಗೌಂಟಲೆಟರವರು ಈ ವರುಷ ನವಂಬರ ತಿಂಗಳಲ್ಲಿ ಪೆನ್‌ಶನ್ ಹೊಂದಬೇಕಾಗಿದ್ದರೂ ಅವರು ಇನ್ನು ಒಂದು ವರುಷದ ಕೆಲಸವನ್ನಾಡಿ ಬರುವ ವರುಷದ ನವಂಬರ ತಿಂಗಳಲ್ಲಿ ರಿಟಾಯರ್ ಆಗುವರು.

— ಕಲಕತ್ತದ ಎಸೋಸಿಯೇಟೆಡ್ ಚೇಂಬರ್ ಓಫ್ ಕಮ್ಮರ್ಸ್ ಇದರ ವಾರ್ಷಿಕ ಅಧಿವೇಶನವನ್ನು ಇದೇ ಇಸವಿಯ ಡಿಸೆಂಬರ ೧೭ನೇ ತಾರೀಕಿನ ದಿನ ವೈಸರಾಯರು ತೆರೆಯುವರು. ಅಂದಿನಿಂದ ಅಲ್ಲಿ ಸಭೆಗಳು ಪ್ರಾರಂಭಿಸುವವು.

— ರಾಂಚಿಯಲ್ಲಿ ಕಳೆದ ೨೬ನೇ ತಾರೀಕಿನ ದಿನ ಒಂದು ಬಹಿರಂಗವಾದ ಸಭೆಯು ನಡೆದು ಪಶುವಧೆಯನ್ನು ಮಾಡಬಾರದೆಂತಲೂ ಮೂಕ ಪ್ರಾಣಿಗಳನ್ನು ಹಿಂಸಿಸಬಾರದೆಂತಲೂ ಠರಾವುಗಳಾದವು. ಪ್ರಾಣಿದಯಾ ಸಂಘವೆಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿದರು.

— ಕಳೆದ ೨೧ನೇ ತಾರೀಕಿನ ವರೆಗೆ ಬಾರ್ಡೋಲಿ ತಾಲೂಕಿನ ಜನರಿಂದ ವಸೂಲು ಮಾಡಿದ ತೆರಿಗೆಯು, ೩,೩೩,೦೦೦ ರೂಪಾಯಿಗಳು. ಇನ್ನೂ ಬಾಕಿ ಇರುವ ಹಳೆ ತೆರಿಗೆಯು ೪೫೦೦೦ ರೂಪಾಯಿಗಳು ಮಾತ್ರ. ವಲೋಡ ಮಹಾಲಿನ ಜನರಿಂದ ಇದು ವರೆಗೆ ವಸೂಲಾದ ಹಣವು ೧,೨೪,೦೦೦. ಅವರಿಂದ ಇನ್ನೂ ೩೪,೩೦೦ ರೂಪಾಯಿಗಳು ಬಾಕಿ ಇವೆ. ಉಳಿಕೆಯ ಹಣವು ಶೀಘ್ರದೊಳಗೆ ವಸೂಲಾಗುವುದರಲ್ಲಿ ಸಂಶಯವಿಲ್ಲ.

— ಬರ್ಮಾ ದೇಶದ ಉತ್ತರ ಭಾಗದಲ್ಲಿ ವಿಶೇಷವಾದ ಮಳೆಬರದ [illegible] ರೈಲುವೇ ಲೈನುಗಳು ನೀರಿನ ಅಡಿಯಲ್ಲಿ ಇದ್ದುವು. [illegible] ರೈಲುವೇ ಕಂಬಿಗಳು ಬಿದ್ದು ಹೋಗಿದ್ದುವು ಇದಕ್ಕಾಗಿ [illegible] ವರೆಗೆ ರೈಲ್ವೇ ಚಲಾವಣೆಯನ್ನು ನಿಲ್ಲಿಸಬೇಕಾಯಿತು.

— ಮುಂಬಾಯಿಗೆ ನೀರನ್ನೊದಗಿಸುತ್ತಿದ್ದ ತಾನ್ಸಾ ಸರೋವರದಲ್ಲಿ [illegible] ಕಡಿಮೆಯಾಗಿರುವುದಂತೆ. ಇದರಿಂದ ಮುಂಬಾಯಿ ಪಟ್ಟಣಕ್ಕೆ [illegible] ನೀರು ಸಿಕ್ಕುವುದು ಸಂಶಯಾಸ್ಪದ. ಇನ್ನೂ ಒಂದು [illegible] ನೀರು ಮಾತ್ರ ಸರೋವರದಲ್ಲಿರುವುದು. ಆದ [illegible] ಕಾರಂಜಿಗಳಿಗೆ ನೀರನ್ನೊದಗಿಸಬಾರದೆಂದು [illegible] ಮಾಡಿರುತ್ತದೆ. ಇಂತಹ ಬಹಿರಂಗವಾದ ಕಾರಂಜಿಗಳು [illegible] ಗಳುವಾಗಿಯೇ ರಚಿಸಲ್ಪಟ್ಟು ಅಷ್ಟು ಪ್ರಯೋಜನವಿಲ್ಲದವುಗಳು.

— ಸ್ವಾಮನ್ ಕಮಿಶನಿನೊಂದಿಗೆ ಸಹಕರಿಸಲು ಬಿಹಾರ ಲೆಜಿಸ್ಲೇಟಿವ್ ಕೌನ್ಸಿಲಿನ ಸದಸ್ಯರ ಒಂದು ಕಮಿಟಿಯು ಆರಿಸಲ್ಪಟ್ಟಿತು. ಸ್ವರಾಜ್ಯ ಪಾರ್ಟಿಯವರು ಇದರಲ್ಲಿ ಯಾವ ಭಾಗವನ್ನೂ ವಹಿಸಲಿಲ್ಲ.

— ಗುಜರಾತಿನ ಒಂದು ವಾರ ಪತ್ರಿಕೆಯ ಸಂಪಾದಕನಾದ ಸಿ. ಆರ್. ಜೋಶಿಯನ್ನೂ, ಮುದ್ರಕನಾದ ಎ ಪರಾಗ್ಜಿ ಎಂಬಿಬ್ಬರನ್ನೂ ಸರಕಾರದವರು ಕೈದು ಮಾಡಿರುವರು. ಅವರೆ ಜಾಮೀನಿನ ಮೇಲೆ ಬಿಡಲ್ಪಟ್ಟರು.

— ಬನಾರಸಿನ ಮುನಿಸಿಪಾಲಿಟಿಯ ಕಟ್ಟಡದ ಮೇಲೆ ರಾಷ್ಟ್ರೀಯ ಧ್ವಜವನ್ನು ಏರಿಸಬೇಕೆಂದು ನಿಶ್ಚಯವಾಗಿದ್ದಿತು. ಅಧಿಕಾರರ ಹೇಳಿಕೆಗನುಸಾರವಾಗಿ ಧ್ವಜವನ್ನೇರಿಸುವ ದಿನವನ್ನು ಮುಂದರಿಸಿದರೆಂದು ವರ್ತಮಾನ.

— ಬರುವ ತಿಂಗಳ ೨೪ನೇ ತಾರೀಕಿನ ದಿನ ಸ್ವಾಮನ್ ಕಮಿಟಿಯು ಮುಂಬಾಯಿಗೆ ಬಂದಿಳಿಯುವರು. ಆ ದಿನ ಅಖಂಡ ಹರತಾಳವನ್ನು ಸಮಗ್ರ ಮುಂಬಾಯಿ ಪಟ್ಟಣದಲ್ಲಿಯೂ ಆಚರಿಸಬೇಕೆಂದು ಮುಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ನಿರ್ಣಯಿಸಿದರು.

— ಶ್ರೀಮತಿ ಸರೋಜಿನಿ ನಾಯುಡುರವರು ಇದೇ ಬರುವ ಸಪ್ಟಂಬರ ತಿಂಗಳ ೧೨ನೇ ತಾರೀಕಿನ ದಿನ ಯುರೋಪು ಮತ್ತು ಅಮೇರಿಕಾ ಸಂಚಾರಕ್ಕಾಗಿ ಹೊರಟುಹೋಗುವರು. ಇವರು ಇಟಲಿ, ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್ ಈ ದೇಶಗಳನ್ನೂ, ಅಮೇರಿಕಾ ದೇಶವನ್ನೂ ಸಂಚರಿಸಿ ಮಿಸ್. ಮೆಯೋಳು ಹಿಂದುಗಳ ವಿಷಯ ಬರೆದುದನ್ನು ಖಂಡಿಸುವರು.

— ಕಲಕತ್ತಾ ಪಶುಶಾಲೆಯಲ್ಲಿ, ಬೌದ್ಧರು ತಮಗಿಂದ ಪೂಜಿಸಲ್ಪಡುತ್ತಿದ್ದ 'ಪೋವಾ' ಎಂಬ ಒಂದು ಬಿಳೆ ಆನೆಯು ಆಕಸ್ಮಿಕವಾಗಿ ಸತ್ತು ಹೋಯಿತು. ಸಾಯುವ ಮೂರು ಘಂಟೆಗಳ ಮೊದಲು ಅದು ಸ್ವಸ್ಥವಿಲ್ಲವೆಂದು ಕಂಡು ಬಂದಿತು. ಅದರ ರಕ್ತವು ವಿಷಮಿಶ್ರಿತವಾಗಿದ್ದಿತೆಂದು ಪರೀಕ್ಷಿಸಿದ ಮೇಲೆ ತಿಳಿಯಿತು. ಬೌದ್ಧರಿಗೆ ಪವಿತ್ರವಾದ ಆ ಆನೆಯನ್ನು ಹದಿನೆರಡು ರಕ್ಷಕರು ಸಾಕುತ್ತಿದ್ದರು. ಕಳೆದ ಶುಕ್ರವಾರ ಕೆಲವು ವಿರೋಧಕರು ಆನೆಗೆ ಚೆನ್ನಾಗಿ ಹಣ್ಣಾದ ಬಾಳೆಹಣ್ಣುಗಳನ್ನು ಕೊಟ್ಟರು. ಇದೇ ಅದರ ಮರಣಕ್ಕೆ ಕಾರಣವಾಯಿತು. ಅದರ ಶವವನ್ನು ಕಲಕತ್ತದಲ್ಲಿ ಒಣಗಿಸಿ, ಹಡಗಿನ ಮೂಲಕ ರಂಗೂನಿಗೆ ಕೊಂಡೊಯ್ಯುವರು. ಅದರ ಜೊತೆಯ ಹೆಣ್ಣಾನೆಯು ಬಹು ದುಃಖಿತವಾಗಿರುವುದು. ಈ ಆನೆಯು ೧೦ ವರುಷ ಪ್ರಾಯವನ್ನು ಮತ್ತು ೩ ಟನ್ ಭಾರವಿದ್ದಿತು.

— ಬಂಗಾಳದ ಪಹಾರಪುರವೆಂಬಲ್ಲಿ ಐತಿಹಾಸಿಕ ಶಾಸನಗಳೂ ಪ್ರತಿಮೆಗಳೂ ದೊರೆಯುತ್ತಿವೆ. ಗುಪ್ತರ ಕಾಲದ ಒಂದು ದೇವಾಲಯವು ಮಣ್ಣಿನಡಿಯಲಿದ್ದಿತು.

— ಕಲಕತ್ತದಲ್ಲಿ ನಡೆಯಲಿರುವ ಕಾಂಗ್ರೆಸ್ಸಿನ ಸಮಯದಲ್ಲಿ ಅಲ್ಲಿ ಒಂದು ವಸ್ತು ಪ್ರದರ್ಶನವನ್ನು ಜರಗಿಸಬೇಕೆಂದು ನಿರ್ಣಯವಾಗಿಯದೆ. ಈ ಪ್ರದರ್ಶನಕ್ಕೆ ಕಾರ್ಪೋರೇಶನಿನವರು ಗ್ರಾಂಟ ರೂಪವಾಗಿ ಒಂದು ಲಕ್ಷ ರೂಪಾಯಿ ಕೊಡಬೇಕೆಂದು ಅವರಿಗೆ ಅರಿಕೆ ಮಾಡಿದ್ದಾರೆ.

— ಅಖಿಲ ಭಾರತ ಕೊಪರೇಟಿವ್ ಕಾಂಗ್ರೆಸಿನ ಅಧಿವೇಶನವು ನವಂಬರ ತಿಂಗಳ ಕೊನೆಯ ವಾರದಲ್ಲಾಗಲಿ ಡಿಸಂಬರ ತಿಂಗಳ ಮೊದಲನೇ ವಾರದಲ್ಲಾಗಲೀ ಬೆಜವಾಡದಲ್ಲಿ ನಡೆಯುವದು. ಇದರ ಸ್ವಾಗತ ಮಂಡಳವಾಗಿ ಆಂಧ್ರಪ್ರಾಂತದ ಕೊಪರೇಟಿವ್ ಸಂಘದವರು ಆರಿಸಲ್ಪಟ್ಟರು.

— ಕಮಾ೯ದೇವಿಯು ಪೋಸ್ಟ್ ಆಫೀಸಿನಿಂದ ಒಬ್ಬ ಮಲ್ಯಾಳಿ ಹುಡುಗನು ರೂಪಾಯಿ ೧೯೦೦ರ ನೋಟುಗಳನ್ನು ಕಳವುಮಾಡಿದನು. ಆತನು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿರುವಾಗ ನೋಟಿನ ಕಟ್ಟು ಮೋಟಾರ ಡ್ರೈವರನ ಕಣ್ಣಿಗೆ ಬಿದ್ದಿತು. ಪೋಲೀಸರಿಗೆ ಈ ಸಂಗತಿಯನ್ನು ತಿಳಿಸಿ ಆತನು ಹುಡುಗನನ್ನು ಕೈದು ಮಾಡಿಸಿದನು.

— ಯುರೋಪು ಸಂಚಾರಕ್ಕೆ ಹೋಗಿದ್ದ ಶ್ರೀ ಶ್ರೀನಿವಾಸ ಅಯ್ಯಂಗಾರರು ಹಿಂದೂಸ್ಥಾನಕ್ಕೆ ಹಿಂತಿರುಗಿದರು. ಅವರನ್ನು ಮುಂಬಾಯಿಯಲ್ಲಿ ಬಹು ಸಂಭ್ರಮದಿಂದ ಸ್ವಾಗತೀಕರಿಸಿದುದಲ್ಲದೆ ಮದ್ರಾಸಿನಲ್ಲಿಯೂ, ಅವರಿಗೆ ಕೊಟ್ಟ ಸ್ವಾಗತವು ವಿಶೇಷ ರೀತಿಯದಾಗಿದ್ದಿತು.

— ಸ್ವಾಮನ್ ಕಮಿಶನಿಗೆ ಹಿಂದೂ ಸ್ತ್ರೀಯರ ಪರವಾಗಿ ಕಲಕತ್ತದ ಮಾಯಾದೇವಿಯವರು ಒಂದು ಮೆಮೋರಾಂಡಮನ್ನು ಸಮರ್ಪಿಸಿರುವರು. ಎಲ್ಲಾ ಸಂಸ್ಥೆಗಳಲ್ಲಿ ಸದಸ್ಯರಾಗಲು ಹೆಂಗಸರಿಗೆ ಹಕ್ಕು ಸ್ವಾತಂತ್ರ್ಯಗಳಿರಬೇಕೆಂದು ಆ ಮೆಮೊರಾಂಡಮಿನಲ್ಲಿ ಬರೆದಿದ್ದಿತು.

— ಎನ್. ಜಿ. ಎಸ್ ರೈಲ್ವೆ ಕಂಪೆನಿಯಲ್ಲಿ ಉಂಟಾದ ಮುಷ್ಕರವು ಈಗ ಶಾಂತವಾಗಿ ಮೊದಲಿನಂತೆ ಕೆಲಸವು ನಡೆಯುತ್ತಿದೆ.

— ನೆಹರು ಕಮಿಟಿಯ ರಿಪೋರ್ಟನ್ನು ಸರಕಾರದವರು ಚೆನ್ನಾಗಿ ಪ್ರಶಂಸಿಸುವರು. ಅಂತೆಯೇ, ಸ್ವಾಮನ್ ಕಮಿಶನು ಕೂಡ ಈ ರಿಪೋರ್ಟನ್ನು ಗೌರವಿಸುವದು. ನೆಹರು ಕಮಿಟಿಯ ವರದಿಯು ಪ್ರಕಟವಾದೊಡನೆ, ಸರಕಾರದವರು ಅದರ ಮೂವತ್ತು ಪ್ರತಿಗಳನ್ನು ಪಡಕೊಂಡು ಸರ್ ಜೋನ್ ಸ್ವಾಮನರ ವಿಶೇಷ ತಂತಿಯು ಬಂದ ಕಾರಣ, ೧೨ ಪ್ರತಿಗಳನ್ನು ಸ್ವಾಮನ್ ಕಮಿಶನಿಗೆ ಕಳುಹಿಸಿ ಕೊಟ್ಟರು.

— ಲಾಹೋರಿನ ಡೆಪ್ಯುಟಿ ಅಸಿಸ್ಟಾಂಟ್ ಇಂಜಿನಿಯರರ ಹದಿನೆರಡು ವರುಷ ಪ್ರಾಯದ ಹುಡುಗನನ್ನು ಯಾರೋ ಕೊಲೆಮಾಡಿರುವರು. ಅವರ ಮನೆಯ ಹಿಂದುಗಡೆಯೇ ಕತ್ತಿಗೆಯು ಕೊಯ್ಯಲ್ಪಟ್ಟ ಆ ಹುಡುಗನ ಶವವಿದ್ದಿತು.

— ಪೂನೆಯಲ್ಲಿ ಒಬ್ಬ ಶಾಲಿನ ಸಾಹುಕಾರನ ಮನೆಗೆ ಕಳ್ಳರು ನುಗ್ಗಿ ಸುಮಾರು ೧೩೦೦ ರೂಪಾಯಿ ಕ್ರಯ ಬಾಳುವ ಆಭರಣಗಳನ್ನು ಕಳವು ಮಾಡಿಕೊಂಡು ಹೋಗಿರುವರು.

— ಮುಂಬಾಯಿಯ ಹುಡುಗನೊಬ್ಬನು ಒಂದು ಸ್ಕಾಕಲನ್ನು ಬಾಡಿಗೆಗೆ ಪಡೆದು ಪೂನೆಯ ವರೆಗೆ ಹೋಗಿ, ಅಲ್ಲಿ ಆ ಸ್ಕಾಕಲನ್ನು ಮಾರಲು ನಿಶ್ಚಯಿಸಿದನು. ಹದಿಮೂರೇ ರೂಪಾಯಿ ಸಿಕ್ಕಿದರೆ ಸಾಕೆಂದೂ ಆ ಸ್ಕಾಕಲನ್ನು ಕ್ರಯಕ್ಕೆ ಪಡಕೊಳ್ಳಲೇ ಬೇಕೆಂದೂ ಆತನು ಒಬ್ಬ ಸ್ಕಾಕಲ್ ವ್ಯಾಪಾರಿಗೆ ಪತ್ರಾಯಗೊಳಿಸುತ್ತಿದ್ದಾಗ ಆತನ ಗುಟ್ಟು ರಟ್ಟಾಗಿ ಆತನು ಕೈದುಮಾಡಲ್ಪಟ್ಟನು. ಆತನ ತಂದೆಯೂ ಕೂಡ ಆತನಿಗೆ ಜಾಮೀನು ಕೊಡಲು ಒಪ್ಪಲಿಲ್ಲ.

— ಭಾವನಗರ ಸರಕಾರದವರು ಅಸ್ಪೃಶ್ಯರಿಗಾಗಿ ರಾಜ್ಯದಲ್ಲಿ ಭಾವಿಗಳನ್ನು ತೋಡಲು ವರ್ಷಕ್ಕೆ ರೂಪಾಯಿ ೩೪೦೦ ಖರ್ಚು ಮಾಡಬೇಕೆಂದು ನಿಶ್ಚಯಿಸಿರುವರು.

ಕೊಲ್ಲಾಪುರದ ಮಹಾರಾಜರು ಟೆಕ್ನಿಕಲ್ ವಿದ್ಯೆ ಕಲಿಯುವ ವಿದ್ಯಾರ್ಥಿಗಳಿಗೆ ವೇತನವಾಗಿ ಕೊಡಲು ವರ್ಷಕ್ಕೆ ४००० ರೂಪಾಯಿಗಳನ್ನು ಸೆಂಕ್ಷನ್ ಮಾಡಿರುವರು.

— ಪಾಟಿಯಾಲಾ ಎಂಬಲ್ಲಿ ಶ್ರಾವಣ ಮಾಸದಲ್ಲಿ ಪ್ರಾಣಿಹತ್ಯೆಯನ್ನು ಮಾಡಬಾರದು, ಬೇಟೆಯಾಡಬಾರದು, ರಾಜ್ಯದೊಳಗೆ ಮಾಂಸವನ್ನು ಮಾರಬಾರದು ಎಂದು ನಿಶ್ಚಯವಾಗಿರುತ್ತದೆ.

ಅಂಧ್ರ ಹಿಂದೂ ಸಂಘದವರು ಕಳೆದ ವಾರ ಸಭೆಕೂಡಿ ಸ್ವಾಮನ್ ಕಮಿಶನಿನೊಂದಿಗೆ ಸಹಕರಿಸಬೇಕೆಂದು ನಿರ್ಣಯಿಸಿರುವರು.

ದಕ್ಷಿಣ ಕನ್ನಡ

ಮಂಗಳೂರು: — ಇದೇ ಬರುವ ಸಪ್ಟಂಬರ ತಿಂಗಳ ತಾರೀಕು ೨ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೭—೩೦ಕ್ಕೆ ಶ್ರೀಯುತ ಗಂಗೊಳ್ಳಿ ಕೃಷ್ಣರಾಯರು ಮಂಗಳೂರ ಬ್ರಹ್ಮಸಮಾಜದವರ ಮಂದಿರದಲ್ಲಿ ದೇವಾರಾಧನೆ ಮತ್ತು ಧರ್ಮವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ.

ಈಗ ದಕ್ಷಿಣ ಕನ್ನಡಾ ಜಿಲೆಯಲ್ಲಿ ಕಲೆಕ್ಟರರಾಗಿರುವ ಮಿ. ಹರ್ಬರ್ಟರಿಗೆ ಮಲಬಾರಿಗೆ ವರ್ಗವಾಗಿರುತ್ತದೆ. ಅವರ ಬದಲಿಗೆ ಇಲ್ಲಿಗೆ [illegible] ವೆಲ್ಲರೀ ಬರುವರು.

[illegible] ಬರುವ ಸಪ್ಟಂಬರ ತಾರೀಕು ೨ನೇ ಆದಿತ್ಯವಾರ ದಿನ ಪ್ರಾತಃಕಾಲ ಘಂಟೆ ೭—೩೦ಕ್ಕೆ ಇಲ್ಲಿಯ ಆರ್ಯಸಮಾಜ ಮಂದಿರದಲ್ಲಿ ಶ್ರೀಯುತ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರು ದೇವಾರಾಧನೆ ಮತ್ತು ವೇದ ಉಪದೇಶ ಮಾಡುವರು. ತದನಂತರ ಸದಸ್ಯರ ವಿಶೇಷ ಸಭೆಯೊಂದು ಸೇರಿ ಸಮಾಜದ ಅಧ್ಯಕ್ಷರ ಮತ್ತು ಕಾರ್ಯದರ್ಶಿಗಳ ಚುನಾವಣೆಯಾಗುವದು.

ಹೊಸತಾಗಿ ಕಟ್ಟಿಸುತ್ತಿರುವ ಇಲ್ಲಿಯ ಹೆಂಗಸರ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ತನ್ನ ದಿವಂಗತ ಪತ್ನಿಯ ಸ್ಮರಣಾರ್ಥವಾಗಿ ನಾಲ್ಕು ಮಂಚಗಳನ್ನು ಹಾಕಿಸಲು ಮಿ. ಸಿ. ಎಚ್. ಮೋರ್ಗನರು ರೂಪಾಯಿ ೨೫೦೦ನ್ನು ದಾನಮಾಡಿರುವರೆಂದು ಕೇಳುತ್ತೇವೆ.

ಈ ದಿನ ಸಾಯಂಕಾಲ ಸನ್ಯಾಸಿ ಗುಡ್ಡೆಯಲ್ಲಿರುವ ಆರ್ಯಸಮಾಜ ಮಂದಿರದಲ್ಲಿ ಲೆಫ್ಟಿನೆಂಟ್ ಕರ್ನಲ್ ಡಿ. ಜಿ. ಕೃಗರವರು ಅಸ್ಪೃಶ್ಯತಾ ನಿವಾರಣೆಯ ಕುರಿತು ಭಾಷಣವನ್ನು ಮಾಡುವರು. ಸರ್ವರಿಗೂ ಸುಸ್ವಾಗತವಿರುವುದು.

ತಾರೀಕು ೨೫—೮—೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ४೫ ಮರಣಗಳೂ ४೭ ಜನನಗಳೂ ಆದವು. ಮರಣಗಳ ಪೈಕಿ ಸನ್ನಿಪಾತದಿಂದ ೩, ಕ್ಷಯರೋಗದಿಂದ ೫, ಅತಿಸಾರದಿಂದ [illegible], ಇತರ ಎಲ್ಲಾ ಕಾರಣಗಳಿಂದ ३೯, [illegible] ಮರಣಗಳು ೧೪.

ಮಂಗಳೂರ ಮುನಿಸಿಪಾಲಿಟಿಗೆ ಸದಸ್ಯರ ಚುನಾವಣೆಯು ಈ ಕೆಳಗೆ ನಮೂದಿಸಿದಂತೆ ನಡೆಯುವದು.

ಕೊಡಿಯಾಲ್‌ಬೈಲ್ ವೆಸ್ಟ್ ವಾರ್ಡಿಗೆ ಸಪ್ಟಂಬರ ತಾ ೨४ನೇ ಸೋಮವಾರ ಬೋಳೂರಿನ ಮಹಮ್ಮದೀಯರ ಶಾಲೆಯಲ್ಲಿ. ಮಾರ್ಕೆಟ್ ವಾರ್ಡಿಗೆ ತಾ ೨೬ನೇ ಬುಧವಾರ ವ್ಯಾಪಾರಿ ಹುಡುಗಿಯರ ಶಾಲೆಯಲ್ಲಿ. ಕೋಟೆ ವಾರ್ಡಿಗೆ ತಾ ೨೭ನೇ ಗುರುವಾರ ಮಿಶಾಗ್ರಿ ಶಾಲೆಯಲ್ಲಿ. ಬಪ್ಪವಾರ್ಡಿಗೆ ತಾ ೨೮ನೇ ಶುಕ್ರವಾರ ಬೋಳಾರ ಮುನಿಸಿಪಲ್ ಶಾಲೆಯಲ್ಲಿ. ನೋಮಿನೇಶನ್ ಪತ್ರಗಳನ್ನು ಸಪ್ಟಂಬರ ೧೨ನೇ ತಾರೀಕಿನ ದಿನ ಅಂಗೀಕರಿಸುವರು.

ಮುಬೈಯ ಹಿಂದೂಸ್ಥಾನಿ ಸೇವಾದಳದ ಸೆಕ್ರೆಟರಿಯವರಾದ ಡಾ. ನಾ. ಸು. ಹರ್ಡೀಕರರವರು ಚೀನಾದೇಶದ ಜನರಲ್ ಸೆಂಗರನ್ನು ಅಭಿನಂದಿಸಿ ಜೂನ್ ೧೬ನೇ ತಾರೀಕಿಗೆ ಬರೆದ ಪತ್ರವು ವಿಳಾಸದಾರರಿಗೆ ತಲಪದೆ ಬೇರೆಯವರಿಗೆ ತಲಪಿ ಅದರ ಉತ್ತರವು ಈ ಕೆಳಗಿನಂತೆ ಬಂದಿರುತ್ತದೆ.

ನೆನಕಿಂಗ್ ಆಗಸ್ಟ್ ೭

ಸೆಕ್ರೆಟರಿ ಜನರಲ್ ಆರ್ಮಿಯ ಜನರಲ್ ಸೆಂಗರಿಗೆ ಬರೆದ ಪತ್ರವು ಈ ದಿನ ಸಿಕ್ಕಿತು. ನನ್ನ ವಿಜಯದ ಕುರಿತು ನೀವು ಕಳುಹಿಸಿದ ಅಭಿನಂದನೆಗಳನ್ನು ಚೀನಿಯರ ಪರವಾಗಿ ನಾನು ಶ್ಲಾಘಿಸುವೆನು. ನಮ್ಮ ಮತ್ತು ನಿಮ್ಮ ದೇಶಗಳಿಗೆ ಸಮಾನವಾದ ಅನೇಕ ವಿಷಯಗಳಿರುವುದರಿಂದ ನಿಮ್ಮ ಅಭಿನಂದನೆಯನ್ನು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸುವೆವು. ಹಳೇ ಪಟ್ಟಣವಾದ ಪೆಕಿಂಗನ್ನು ಬಿಟ್ಟು ನೆನಕಿಂಗ್ ಪಟ್ಟಣವನ್ನು ಮುಖ್ಯ ಪಟ್ಟಣವನ್ನಾಗಿ ನಾವು ಮಾಡಿಕೊಂಡ ವಿಷಯವನ್ನು ನೀವು ಈ ಮೊದಲೇ ತಿಳಿದಿರಬಹುದು.

ನೀವು ಹಿಂದೂ ರಾಷ್ಟ್ರೀಯ ಸಭೆಯ ಪರವಾಗಿ ಮಾಡುವ ಕೆಲಸದಲ್ಲಿ ಚೀನಿಯರು ಸಮಭಿಪ್ರಾಯವುಳ್ಳವರಾಗಿ ಶ್ಲಾಘಿಸುತ್ತಿರುವರು. ಇಂತಿ,

(ಸಹಿ) ಚಂಗ್‌ಟಿಂಗ್ ಟಿ ವೆಂಗ್,
ಮಂತ್ರಿ

ಬಂಟವಾಳ — ಈಗ ಡಿಸ್ಟ್ರಿಕ್ಟ್ ಬೋರ್ಡಿನವರು, ಎಲ್ಲಾ ಮೋಟರು ಕಂಪೆನಿಗಳವರೂ ಮೈಲಿಗೆ ೯ ಪೈಯಂತೆ ದರವನ್ನಿಡಬೇಕೆಂದು ರೂಲ್ ಮಾಡಿರುವುದರಿಂದ ಮೋಟರುಗಳಲ್ಲಿ ಪ್ರಯಾಣಮಾಡುವ ಪ್ರಯಾಣಿಕರಿಗೆ ಹೆಚ್ಚು ಕಷ್ಟಗಳು ಬಂದೊದಗಿವೆ. ಮೋಟಾರು ಚಲಾವಣೆಯು ಹೆಚ್ಚಾಗಿ ಡಿಸ್ಟ್ರಿಕ್ಟ್ ಬೋರ್ಡಿಗೆ ಹೆಚ್ಚು ಲಾಭವು ಸಿಕ್ಕಲಾರಂಭಿಸಿಯದೆ. ಮೋಟಾರು ಬಸ್ಸುಗಳ ಕ್ರಯವೂ ಬಹಳ ತಗ್ಗಿಯದೆ. ಪೆಟ್ರೋಲಿನ ಕ್ರಯವು ಕೆಳಗಿಳಿದದೆ. ಹೀಗಿದ್ದರೂ ಡಿಸ್ಟ್ರಿಕ್ಟ್ ಬೋರ್ಡಿನವರು ಇನ್ನೂ ೯ ಪೈಯಂತೆ ದರ ಇಡಬೇಕೆಂದ ಪತ್ರಾಯಪಡಿಸುವುದು ವಿಷಾದಕರವಾಗಿದೆ. ಮೈಲಿಗೆ ೬ ಪೈಯಂತೆ ವಸೂಲುಮಾಡುವಂತೆ ಕ್ರಮಗಳನ್ನು ತಿದ್ದುಪಡಿಮಾಡಿ ಜನಸಾಮಾನ್ಯರಿಗೆ ಇರುವ ಕಷ್ಟಗಳನ್ನು ನಿವಾರಿಸಬೇಕೆಂದು ಇಲ್ಲಿಯ ನಿವಾಸಿಕರ ದೊಡ್ಡದೊಂದು ಮನವಿಯು ಜಿಲ್ಲಾ ಕಲೆಕ್ಟರ್ ದೊರೆಗಳವರಿಗೂ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರವರಿಗೂ ಕಳುಹಿಸಲ್ಪಟ್ಟಿದೆ. ಫಲಿತಾಂಶವನ್ನು ಕಾಯುತ್ತಿರುವರು.

ಇಲ್ಲಿಯ ಪೊಸಪೇಟೆಯ ಮಾರ್ಗವು ೧೯೨೪ನೇ ಇಸವಿ ನೆರೆಯ ನಂತರ ಮೊದಲನೇ ಸಾರಿ ದುರುಸ್ತಿ ೧೯೨೮ರಲ್ಲಿ ಆಯಿತು. ಭೂತದ ಓಣಿಯ ಮಾರ್ಗದಲಿ [illegible] ಹಾಕಿ ದುರುಸ್ತಿಮಾಡಿದ್ದರಿಂದ ಈ ಕೊಳಕ ಮಳೆಯಲ್ಲಿ ನಡೆದು ಕಾಲಿಗೆ ಹುಣ್ಣಾಗುವಂತೆ ಆಗಿಯದೆ. ಆದುದರಿಂದ ಜಲ್ಲಿಕಲ್ಲು ಹಾಕಿಸಲಿಕ್ಕೆ ಹಣವಿಲ್ಲದಿದ್ದರೆ ಮರಳಿನ ಹುಡಿಯನ್ನಾದರೂ ತರಿಸಿ ಹಾಕಿಸಿದರೆ ಉತ್ತಮವಿತ್ತು. ಇದರಲ್ಲಿ ವಿಶೇಷತರ ಗಾಡಿ ಮೋಟಾರ ಚಲಾವಣೆಯು ಇರುವುದಿಲ್ಲ. [illegible] ಸಂಚಾರವು ವಿಶೇಷವಾಗಿದೆ.

ಹ[illegible]ಯ ಶಾಲೆಯ ಕಂಪೌಂಡಿಗೆ ಕಳೆದ ವರುಷ ಇಡಿಸಿದ ಮುಳ್ಳಿನ ಗೋಡೆಯು ಈ ವರುಷ ಮಳೆಗೆ ಬಿದ್ದುಹೋಯಿತು. [illegible] ವರುಷ ಈ ಗೋಡೆಗಾಗಿ ಹಣ ಖರ್ಚುಮಾಡುವುದರ ಬದಲಾಗಿ ಕಲ್ಲಿನ ಗೋಡೆಯನ್ನಿಡಿಸಿದರೆ ಆಗುವುದಿಲ್ಲವೇ? ಗೋಡೆ ಸರಿಯಿಲ್ಲದೆ ಶಾಲಾ ತೋಟ ಮಾಡಲಿಕ್ಕೂ ಅಡಚಣೆಯಾಗಿದೆ.

ಮೂಡುಗ್ರಾಮದ ಮೊಡಂಕಾಪು [illegible] ಗದ್ದೆಗಳಿಗೆ ಹೋಗುವ ಮಾರ್ಗಕ್ಕೆ [illegible] ಬಂಟವಾಳ ವರೆಗೆ ತಾಲೂಕ ಬೋರ್ಡಿನವರು [illegible] ಉತ್ತಮವಿತ್ತು. ಬಂಟವಾಳ [illegible] ಮಾರ್ಗ ಮಾಡಿಸಿ [illegible] ತಾಲೂಕ ಬೋರ್ಡಿನವರು ಸ್ವಲ್ಪ ಹಣ ಖರ್ಚುಮಾಡಿ [illegible] ಮೊಡಂಕಾಪು ವರೆಗೆ [illegible] ಮೊದಲು [illegible] ಮಾರ್ಗ [illegible] ಆಗಲೂ [illegible] ವ್ಯಾಪಾರ ವಹಿವಾಟವು ಬಂಟವಾಳಕ್ಕೆ [illegible] ಅನುಕೂಲವಾಗುವುದು.

ಸುರತ್ಕಲ್ಲು — [illegible] ಶಾಲಾ [illegible] ಸೆಕ್ರೆಟರಿ [illegible] ಗ್ರಾಮಸ್ಥರು [illegible] ತಾಲೂಕು [illegible] ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗಿನ ರಾವುಗಳ [illegible] ಪಾಸುಮಾಡಲಾಯಿತು.

ಮಂಗಳೂರಿಗೂ [illegible] ಮಂಗಳೂರಿಗೂ [illegible] ಮೈಲು ದೂರದ [illegible] ಕಲ್ಲಿನಲ್ಲಿ [illegible] ಗ್ರಾಮಸ್ಥರ ಹಿತಕ್ಕಾಗಿ [illegible] ಪೋಲೀಸ್ [illegible] ಈ ಸಭೆಯು [illegible] ಬೇಡಿಕೊಳ್ಳುತ್ತದೆ.

ಮಂಗಳೂರ ಮತ್ತು ಮುಲ್ಕಿಗೆ ಮಧ್ಯ [illegible] ಪ್ರಯೋಜನಾರ್ಥವಾಗಿ ಕೆಲವು [illegible] ಪೋಲೀಸ್ ಔಟ್ ಪೋಸ್ಟ್ ಸ್ಟೇಷನ್ (Police out Post Station) [illegible] ಈ ಸಭೆಯು ಅಧಿಕಾರಿಗಳನ್ನು ಪ್ರಾರ್ಥಿಸುತ್ತದೆ.

[illegible] ಮಂಗಳೂರಿನ [illegible] ಈಗ [illegible] ಪೋಲೀಸ್ [illegible] ಪೋಲೀಸ್ [illegible] ಈ ಸಭೆಯು [illegible] ಪೋಲೀಸ್ ಆಫೀಸನ್ನು [illegible] ಪೋಲೀಸ್ [illegible] ಸಂಬಂಧಪಟ್ಟ ಅಧಿಕಾರಿಗಳ [illegible] ಈ ರರಾವನ್ನು ಕೂಡಾ ಸಭೆಯು ಸರ್ವಾನುಮತದಿಂದ [illegible] ಮಾಡಿತು.

[illegible] ರರಾವುಗಳನ್ನು [illegible] ಕಳುಹಿಸುವಂತೆ ಈ ಸಭೆಯ ಅಧ್ಯಕ್ಷರ [illegible] ಬೇಡಿಕೊಳ್ಳುತ್ತದೆ.

ಮಂಜೇಶ್ವರ ಇಲ್ಲಿಯ [illegible] ಪೋಲೀಸ್ [illegible] ಮೇಲಿನ ಮೊಕದ್ದಮೆಯಲ್ಲಿ ಅವರನ್ನು [illegible]ಯದೆ.

ಕುಂಜೀಪಳ್ಳ — ಇಲ್ಲಿಯ ಹೆಡ್ ಉಪಾಧ್ಯಾಯರ ಸಭೆಯು ಶಾಲಾ ಇನ್ಸ್‌ಪೆಕ್ಟರವರ ಅಧ್ಯಕ್ಷತೆಯಲ್ಲಿ [illegible] ಉಪಾಧ್ಯಾಯರ ಪ್ರಶ್ನಾ [illegible] ತೋರಿಸಿದರು. ಮಕ್ಕಳಿಗೆ ಹಿತಕರವಾಗಿ ಶಿಕ್ಷಣ ಕೊಡಬೇಕೆಂದು ಇನ್ಸ್‌ಪೆಕ್ಟರರು [illegible] ಹೀಗಾದರೆ ಪ್ರತಿ ಶಾಲೆಯ [illegible] ಹಾರ್ಮೋನಿಯಮ್ [illegible] ಮಾಡಿದರೆ ಶಾಲೆಗೆ ಉನ್ನತಿ ತಂದಂತಾ ಆದೀತಲ್ಲವೇ! ಪ್ರಥಮತಃ ಉಪಾಧ್ಯಾಯರನ್ನು ಇಂಥಾ ಕಲ್ಪನೆಗಳಲ್ಲಿ ತರಬೇತು ಹೊಂದಿಸಿ ಒಂದೊಂದು ಪಾಸ್ ಸರ್ಟಿಫಿಕೇಟು ಕೊಟ್ಟರೆ ಚಲೋದು.

ಮಾನ್ಯ ಡಿವಿಜನಲ್ ಆಫೀಸರವರು ಕೆಲವು ದಿನ ಇಲ್ಲಿ ಇದ್ದು ಇಲ್ಲಿಂದ ಪುತ್ತೂರಿಗೆ ಹೊರಟು ಹೋಗಿರುವರು. ದಯಾಳುಗಳಾದ ಇವರನ್ನು ಜನರು ಕೊಂಡಾಡುವದು ಆಶ್ಚರ್ಯವಲ್ಲ.

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಬುಕ್ಕಿ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನ್ನೂರು ಪ್ರಾಂತಗಳಿಗೂ ಯಾವ ವಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳ ರೋಡಾದ ಬುಕ್ಕಿ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಾಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 8-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎಸ್. ಹನುಮಂತಪ್ಪ, ಫ್ರ್ಯಾಮರೋಜ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್.

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕಂಬಳೆ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಾಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S. K. Mangalore.

PROPRIETOR—D. G. GORE

ಇತ್ತ ನೋಡಿರಿ!

ಸುಗಂಧಿ ಮತ್ತು ಔಷಧಿಗ[illegible]

ಕಾರಖಾನೆದಾರರಿಗೆ ಅಮೂಲ್ಯ[illegible]

ಪ್ರತಿಯೊಂದು ತರದ ಸುವಾಸಿಕ ಎಣ್ಣೆ, [illegible] ಊದಿನಕಡ್ಡಿ, ಸಾಬೂನು, ಜರ್ದಾ, ನಸ್ಯ, [illegible] ಲವೆಂಡರವಾಟರ್, ಅದರಂತೆಯೇ ಬಾಲಾಮೃ[illegible] ಮಿಕ್ಸ್ಚರ್, ಮುಲಾಮು, ಸಂಬತ್ತು, ದಾಮ[illegible] ಗಳನ್ನು ತಯಾರಿಸುವುದಕ್ಕಾಗಿ ಬೇಕಾಗುವ ಶುದ್ಧ [illegible] ಎಸೆನ್ಸ್, ಪರ್ಫ್ಯೂಮ್ಸ್, ಅರ್ಕ, ಆಸಿಡ್‌ಗಳು, ಶ್ರ[illegible] ಬಾಟಲಿಗಳು, ಬಣ್ಣಗಳು, ಪೆಪರಮಿಂಟ್, ಕ್ರಿಸ್ಟ[illegible] ಹೀಲಿಯೋಸೆಂಟ್ ಇತ್ಯಾದಿ ವಸ್ತುಗಳು ನಮ್ಮಲ್ಲಿ [illegible] ಸಿಗುವವು. ಕ್ಯಾಟಲಾಗು ಪುಕ್ಕಟೆಯಾಗಿ [illegible]

ತರತರದ ಸುಗಂಧ ದ್ರವ್ಯಗಳನ್ನು ತಯಾರಿಸುವ [illegible] ಗಳನ್ನೊಳಗೊಂಡ ಪುಸ್ತಕಕ್ಕೆ ಬೆಲೆ ರೂ. 1-8-0. [illegible] ಗಾರ್ಡುಗಳನ್ನು ಕ್ಕೆ ಆಣೆಯ ಟಪಾಲು ಚೀಟುಗಳನ್ನು [illegible] ರವಾನಿಸಲಾದೀತು.

ಟೀಪು—ಇಂಗ್ಲೀಷ, ಮರಾಠೀ ಹಾಗೂ ಗುಜರಾತಿಯಲ್ಲಿಯೇ ಪತ್ರ ಬರೆಯಿರಿ.

ಡಿ. ಜಿ. ಗೋರೆ,

16628 ಮಂಗಳದಾಸ ರೋಡ, ಮುಂಬಯಿ ನಂಬ್ರ 2.

Imitation Silk Sarees.

ಒಂದನ್ನು ತರಿಸಿ ನೋಡಿರಿ! ಒಂದನ್ನು ತರಿಸಿ ನೋಡಿರಿ!

ಆಲ್ ರಿಯಂ ಇಮಿಟೇಷನ್ ಸಿಲ್ಕ್ ಬನಾರಸ್ ಸೀರೆಗಳು.

ಈ ಇಮಿಟೇಷನ್ ರೇಷ್ಮೆ ಸೀರೆಗಳು ಗಜ ಮೊಳ ಉದ್ದವೂ 2½ ಮೊಳ ಅಗಲವೂ ಇರುವವು. ಉಡಲು ಧನಾಢ್ಯರಾಗಿಯೂ, ನಯವಾಗಿಯೂ, ಹೊಸ ನಮೂನೆಯಾಗಿಯೂ ಇರುವವು. ಕೆಂಪು, ಕರಿ ಮತ್ತು ನಸ್ಯದ ಬಣ್ಣಗಳಲ್ಲಿ ಇರುವವು. ಗಟ್ಟಿ ಬಣ್ಣ. ಇವನ್ನು ಪ್ರತಿ ದಿನವೂ ಒಗೆದು ಉಡಲು ಚೆನ್ನಾಗಿರುವುದಲ್ಲದೆ, ಅಸಲ್ ರೇಷ್ಮೆಯಂತೆ ಕಾಣಿಸುವವು. ಶ್ರೀಮಂತರಿಗೂ, ಗರೀಬರಿಗೂ ಉಡಲು ಲಾಯಖಾದದ್ದು.

ಕ್ರಯ ರೂ. 4-12-0.

ವಿಳಾಸ:— ಕೆ. ಎಸ್. ರಾಧಾಕೃಷ್ಣ ಬ್ರದರ್ಸ್, 118, ಚೈನಾ ಬಜಾರ್ ರೋಡ್, ಮದರಾಸು.

ಇಂಗ್ಲೀಷ್ ಹೇರ್ ಡಿಸ್ಟ್ರಾಯರ್ ಸೋಪ್.

ಶರೀರದ ಯಾವ ಭಾಗದಲ್ಲಿಯಾದರೂ ಕೂದಲನ್ನು ತೆಗೆಯಬೇಕಾದರೆ ಈ ಸೋಪನ್ನು ಸ್ವಲ್ಪ ಸವರಿದರೆ ಚರ್ಮಕ್ಕೆ ಯಾವ ತೊಂದರೆಯೂ ಇಲ್ಲದೆ ಕತ್ತರಿಸಿದ ಕ್ಷೌರಮಾಡಿಸಿಕೊಂಡದ್ದಕ್ಕಿಂತಲೂ ಚೆನ್ನಾಗಿ ಒಂದೇ ಒಂದು ನಿಮಿಷದಲ್ಲಿ ಕೂದಲನ್ನು ತೆಗೆದು ಬಿಡುವುದು.

3 ಸೋಪುಗಳ ಪೆಟ್ಟಿಗೆ 1ಕ್ಕೆ ರೂ. 1-4-0.
2 ಪೆಟ್ಟಿಗೆಗಳಿಗೆ ರೂ. 2-4-0.

ಸ್ಪಿರಿಟ್ ಸ್ಟೋವ್.

ಇವುಗಳನ್ನು ಹೊಸನಾದ ಪಿತ್ತಾಳೆಯಿಂದ ಮಾಡಿರುವರು. ಇವರಲ್ಲಿ ಬತ್ತಿಯ ಸಹಾಯವಿಲ್ಲದೆ ಅಡಿಗೆಯನ್ನು ಮಾಡಬಹುದು, ಇದರಿಂದ ಯಾವ ಕಷ್ಟವೂ ಇಲ್ಲ. ಸ್ವಲ್ಪ ಸೀಮೆ ಎಣ್ಣೆಯನ್ನು ಹಾಕಿ ಬಂದು ಮಾಡಿದರೆ ಸಾಕು. ಇದರಲ್ಲಿ ಎಷ್ಟುದುಂಡಗಾದರೂ ಅಡಿಗೆಯನ್ನು ಬಹು ಬೇಗನೆ ಮಾಡಬಹುದು. 1ಕ್ಕೆ ರೂ. 3-0-0.

ವಿಳಾಸ — ಲೀಗಲ್ ಟ್ರೇಡಿಂಗ್ ಕಂಪೆನಿ, ಪೋ. ಬಾಕ್ಸ್ ನಂಬ್ರ 243, ಮದರಾಸು.

ರೋಲ್ಡ್ ಗೋಲ್ಡ್ ಭಂಗಾರದ ಕೀಳಡ್ಡಿಗೆ ಪದಕ.

ಈ ಅಡ್ಡಿಗೆಗಳನ್ನು ರೋಲ್ಡ್ ಗೋಲ್ಡ್‌ನಿಂದ ತಯಾರಿಸಿ ಸಾವರಿನ್ ಭಂಗಾರದ್ದೆಂದು [illegible]. ಬಹು ಕೆಲಸ. ಇದರ ಪದಕವು ಕೆಂಪು, ಬಿಳಿ ಮತ್ತು ಹಸಿರು ಕಲ್ಲುಗಳನ್ನು ಇಟ್ಟು ಕಟ್ಟಿದ ಕಟ್ಟು. ನೋಡಲು ಲಕ್ಷಣವಾಗಿರುವಂತೆ ಮುತ್ತುಗಳನ್ನು ಸಹ ಕಟ್ಟಿದೆ. ಇದೊಂದು ಇದ್ದರೆ ಮನೆಯವರೆಲ್ಲರೂ ಉಪಯೋಗಿಸಬಹುದು. ಶ್ರೀಮಂತರಿಗೂ ಗರೀಬರಿಗೂ ಉಚಿತವಾದದ್ದು.

ಕ್ರಯ 1ಕ್ಕೆ ರೂ. 3-8-0.
ಕಿವಿಯಲ್ಲಿ ಹಾಕುವ 7 ಕಲ್ಲಿನ ಓಲೆ ಜೊತೆ 1ಕ್ಕೆ „ 2-8-0.
150 ಗಿಜ್ಜ ಕಟ್ಟಿದ ದಾಬು „ „ 4-8-0.

THE LEGAL TRADING Co.,
P. B. 243, Madras.

[illegible] ಪ್ರಯಾಣಿಕರ ಬಗ್ಗೆ ಎಂದರೆ ಶರೀರದ ಮೇಲೆ ರಾ। ಪವಳಸ್ವಾಮಿಯವರು [illegible] ಬಗ್ಗೆ ಹುಕ್ಕು ಸಮೇತ ಮೂಲಗೇಣಿ ಪೈಕಿ ರಾ। ಗಣಪತಿ [illegible] ಉಪಯೋಗಿಸಿ ಬರುತ್ತಾರೆ. ಪ್ರಯಾಣಿಕರಿಗೆ [illegible] ಸ್ಥಳ ಸಿಕ್ಕುವದಾಗಿಲ್ಲ. ಮೇಲಧಿಕಾರಿಗಳು ಸದರಿ [illegible] ಪ್ರಯಾಣಿಕರ ಬಗ್ಗೆ ಮೊದಲಿನ ಹಾಗೆಯೇ ಇರಗೊಡಿ [illegible] ಮಾಡದಿರಲಾರರೆಂದು ನಂಬುತ್ತೇವೆ.

[illegible] — ಒಡೆಯರ್‌ರವರ ಮ. ರಾ. ಕಾಳಪ್ಪ ಸೆಟ್ರು [illegible] ಅಂಕೋಲ ಸಹಕಾರಿ ಸಂಘದ ೨೭-೨೮ನೇ ವರ್ಷದ [illegible] ಸಂಶೋಧಿಸಿರುವರು ಸಂಘದಲ್ಲಿ ಕಾಯಿದೆ ದಾಟಿದ ಸಾಲಗಳು [illegible] ಕಳೆದ ಸಹಕಾರಿ ವರ್ಷದಲ್ಲಿ ೧೩. ೨೪೯-೬-೯ [illegible] ಬಂದಿರುವ ವಾರ್ತೆಯು ಶ್ಲಾಘನೀಯವಾದುದೇ। ಆದರೆ [illegible] ಮಂಡಲರು ಸಹಕಾರದ ಮೂಲತತ್ವಗಳನ್ನರಿತು ತಮ್ಮ [illegible] ದಾಟಿದ ಸಾಲಗಳು ಇಲ್ಲವೆಂಬಂತೆ ಪ್ರಯತ್ನಿಸಿದರೆ [illegible] ಅಭಿವೃದ್ಧಿಹೊಂದಿ ಹೆಚ್ಚು ಮನಾಫ ಪಡೆಯುವುದರಲ್ಲಿ ಏನು [illegible].

[illegible] — ಇಲ್ಲಿ ಹುಲಿಗಳ ಕಾಟವು ಮಿತಿಮೀರಿ ಬೆಳೆಯುತ್ತಿದೆ. ರಾತ್ರಿ ದಿನ ಹಟ್ಟಿ ಬೊತನೆ ಹುಲಿಗಳು ಗ್ರಾಮಗಳಿಗೆ ಬಂದು, ಸಿಕ್ಕಿದ ದನಕರುಗಳನ್ನೇ ಆಡು ಕುರಿಗಳನ್ನೋ ಕೊಂದು ತಿನ್ನುವವು. ಕಳೆದ ಆದಿತ್ಯವಾರ ರಾತ್ರಿ ಇಲ್ಲಿಯ ಸಮೀಪದ ಸ. [illegible] ಎಂಬಲ್ಲಿ ಒಬ್ಬರ ಎರಡು ಹುಲಿಗಳನ್ನು ಗುಂಡುಹೊಡೆದು ಕೊಂದರೆಂದ ವರ್ತಮಾನ ಬಂದಿರುತ್ತದೆ.

ಕಾರ್ಕಳ — ಇಲ್ಲಿಯ ಡಿಸ್ಟ್ರಿಕ್ಟ್ ಮನ್ಸಿಫ್ ಬಿ. ಗೋಪಾಲ ಕೃಷ್ಣರಾಯರಿಗೆ ಎಲ್ಲಾ ವಕೀಲರು, ಊರ ಸಭ್ಯಹಸ್ತರೊಡನೆ ಮತ್ತು ಸರಕಾರಿ ಅಧಿಕಾರಿಗಳೊಡನೆ ಸಂಭ್ರಮದಿಂದ ಫಲಹಾರದ ಸತ್ಕಾರ ಮಾಡಿದರು. ವಕೀಲರವರನ್ನು ಕಾನೆಂದೆಂದಿಗೂ ಮರೆಯಲಾರೆವು [illegible] ನುಡಿದರು. ತಾ. ೨೦ರಲ್ಲಿ ಇವರು [illegible] ತೆರಳಿದರು. ತಾ. ೧೮ರಲ್ಲಿ ಹೊಸ ಮುನ್ಸೀಫರಾದ ಲಕ್ಷ್ಮೀನಾರಾಯಣಪ್ಪ M A M.L. ರವರು ಚಾರ್ಜ್ ವಹಿಸಿದರು.

ಇದೇ ತಾ. ೨೪-೮-೨೮ರಲ್ಲು ಹಿಂದೂ ಬಾಲಿಕಾ ಪಾಠಶಾಲೆಯಲ್ಲಿ ದಿವಂಗತ ಸುಬ್ರಾಯ ಪೈಗಳವರ ಪುಣ್ಯತಿಥಿಯ ವರ್ಷಾಂತ ಉತ್ಸವವನ್ನು ಸಾಯಂಕಾಲ ೪ ಘಂಟೆಗೆ ಮನೋರಮಾಬಾಯಿ B A L T. ರವರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಊರ ಎಲ್ಲಾ ಸಭ್ಯಹಸ್ತರೂ ಹಾಜರಿದ್ದರು. ಪ್ರಥಮತಃ ಪ್ರಾರ್ಥನೆಯಾದ ನಂತರ ಯೋಗ್ಯ ವಿದ್ಯಾರ್ಥಿನಿಯರಿಗೆ ಹಲವು ತರದ ಬೆಲೆಯುಳ್ಳ ಬಹುಮಾನಗಳು ಹಂಚಲಾದವು. ಅಧ್ಯಕ್ಷರು ಕರ್ನಾಟಕ ಭಾಷೆಯ ಹೆಚ್ಚಿನ ಪರಿಚಯವಿಲ್ಲದರಿಂದ ಆಂಗ್ಲ ಭಾಷೆಯಲ್ಲಿ ಸುಮಾರು ಒಂದು ಘಂಟೆಯ ತನಕ ಸುರಸಭಾಷಣಮಾಡಿದರು. ನಂತರ ಮರಾಠಿಯಿಂದ 'ಸತೀಅನಸೂಯಾ' ವೆಂಬ ನಾಟಕವನ್ನು ೮, ೧೦, ೧೨ ವರ್ಷದೊಳಗಿನ ಚಿಕ್ಕ ಚಿಕ್ಕ ಬಾಲಿಕೆಯರು ಅಭಿನಯಿಸಿದರು. ಈ ಶಾಲೆಯ ಚಿಕ್ಕ ವಿದ್ಯಾರ್ಥಿನಿಗಳ ಅಭಿವೃದ್ಧಿ ಕಂಡು ಎಲ್ಲರೂ ಸಂತೋಷಪಟ್ಟರು.

ವಿವಿಧ ಸಮಾಚಾರಗಳು.

ಸಮ್ಮತಿ ವಯಸ್ಸು!

ಸಮ್ಮತಿ ವಯಸ್ಸಿಗೆ ಸಂಬಂಧಿಸಿದ ಕಾನೂನಿನಲ್ಲಿ ಇನ್ನಷ್ಟು ಅಭಿವೃದ್ಧಿಯು ಆಗತಕ್ಕದೆಂದು [illegible] ಮಹಾಸಭೆಯ [illegible] ಅಧಿವೇಶನದಲ್ಲಿ ಒಂದು ಠರಾವು ಮಾಡಲ್ಪಟ್ಟಿತು. ದೇಹಶಾಸ್ತ್ರದ ದೃಷ್ಟಿಯಿಂದ ನೋಡಿದರೆ ಹದಿನೆಂಟು ವರ್ಷ ವಯಸ್ಸಿನ ಬಾಲಕಿಯರೊಳಗೆ [illegible] ಇರುವುದಿಲ್ಲ. ಆದಕಾರಣ ಈ ವಯಸ್ಸನ್ನು ಏರಿಸುವದು ಕೇವಲ ದೇಹಪ್ರಕೃತಿಯ ಸಲುವಾಗಿ ಮಾತ್ರವಲ್ಲ, ಅದಕ್ಕೆ ಇನ್ನೂ ಹಲವು ಕಾರಣಗಳಿವೆ. [illegible] ಈ ವಯಸ್ಸನ್ನು ನಿರ್ಣಯಿಸಿದ್ದರು. ಆಗಿನ ಮತ್ತು ಈಗಿನ ಸಾಮಾಜಿಕ ಪರಿಸ್ಥಿತಿಗಳೊಳಗೆ ಅಜಗಜಾಂತರವಿದೆ. ಮೊದಲನೆಯದಾಗಿ ಹುಡುಗಿಯರ ಮದುವೆಯು ಕಾಲವು ಕ್ರಮಕ್ರಮವಾಗಿ ಏರುತ್ತಾ ಬಂದಿತು. ಇನ್ನು ಸ್ತ್ರೀ ವಿದ್ಯಾಪ್ರಚಾರದಿಂದ ಹೆಣ್ಣು ಹುಡುಗಿಯರು ತಾವು ಪ್ರೌಢಾವಸ್ಥೆಯನ್ನು ಪಡೆಯುವ ವರೆಗೆ ಮದುವೆಯಾಗದೆ ಉಳಿಯತೊಡಗಿದಾರೆ. ಹಿಂದೂಸ್ಥಾನದ ಆರ್ಥಿಕ ಪರಿಸ್ಥಿತಿಯು ದಿನೇ ದಿನೇ ಅವನತಿಯನ್ನು ಹೊಂದುತ್ತಾ ಬಂದಿರುವ ಕಾರಣ ಹೆಣ್ಣುಮಕ್ಕಳು ಗಿರಣಿಗಳಲ್ಲಿಯೋ, ಕಾರಖಾನೆಗಳಲ್ಲಿಯೋ ಕೆಲಸ ಹುಡುಕುವ ಪ್ರಸಂಗವು ಬಂದಿರುತ್ತದೆ. ಆದಕಾರಣ ಹೆಂಗಸರಿಗೆ ಸಲಿಗೆಯೂ ಬೆಳೆದಿದೆ. ಸ್ತ್ರೀಪುರುಷರ ಸಂಘಟನೆಗೆ ಮೊದಲು ಬಲವಾದ ನಿರೋಧವಿದ್ದಿತ್ತಾದರೂ ಈಗ ಅದು ಮೆಲ್ಲನೆ ಮಾಯವಾಗುತ್ತಿದೆ. ಹೆಂಗಸರು ಜವಾಬ್ದಾರ ಕೆಲಸಗಳಿಗೂ ಇಳಿಯುವರು. ಆದಕಾರಣ ಮದುವೆಯಾದವರಿಗೆ ಸಮ್ಮತಿ ವಯಸ್ಸು ೧೬ ಮತ್ತು ಅನ್ಯರಿಗೆ ೧೮ ಎಂದು ಕಾನೂನಾಗುವಂತೆ ಕಮಿಟಿಯು ಅಭಿಪ್ರಾಯಪಟ್ಟಿತು.

ಶ್ರೀ। ಶ್ರೀನಿವಾಸ ಅಯ್ಯಂಗಾರ್ಯರ ಆಗಮನ.

ಶ್ರೀ। ಶ್ರೀನಿವಾಸ ಅಯ್ಯಂಗಾರರು ತಮ್ಮ ಯುರೋಪ ಸಂಚಾರವನ್ನು ಮುಗಿಸಿ ಕಳೆದ ಶುಕ್ರವಾರ ದಿನ ಮುಂಬಾಯಿಗೆ ಬಂದಿಳಿದರು. ಶ್ರೀ। ಅಯ್ಯಂಗಾರರು ತಾವು ಯುರೋಪಿನ ಬೇರೆ ಬೇರೆ ರಾಷ್ಟ್ರಗಳನ್ನು ಸಂದರ್ಶಿಸಿ, ಭಾರತೀಯರ ಉದ್ದೇಶವನ್ನು ಅಲ್ಲಿಯ ಜನರಿಗೆ ವಿಶದವಾಗಿ ವ್ಯಕ್ತಪಡಿಸಿ ಅವರಿಂದ ಸತ್ಕಾರವನ್ನು ಹೊಂದಿ ಗೌರವಿಸಲ್ಪಟ್ಟರು. ಡಾ। ಅನ್ನಿಬೆಸೆಂಟಮ್ಮನವರೂ ಕೆಲವು ಸಮಯದ ವರೆಗೆ ಇಂಗ್ಲಾಂಡಿನಲ್ಲಿ ಉಳಕೊಂಡಿದ್ದವರು ಈಗ ಮುಂಬಾಯಿಗೆ ಬಂದಿರುವರು. ಇವರಿಬ್ಬರೂ ಒಟ್ಟಿಗೆ ಬಂದಿರುವರು. ಮುಂಬಾಯಿಯಲ್ಲಿ ಅವರಿಗೆ ಬಹು ಸಂಭ್ರಮದಿಂದ ಸ್ವಾಗತವನ್ನಿತ್ತರು. ಮುಂಬಾಯಿಯಲ್ಲಿ ಕೂಡಿದ ಜನಸಂದಣಿಯ ಮುಂದೆ ಅವರು ತಮ್ಮ ಯುರೋಪು ಸಂಚಾರದ ವರದಿಯನ್ನು ಕೆಲವೇ ಮಾತುಗಳಿಂದ ವಿವರಿಸಿ ಹೇಳಿದರು. ಯುರೋಪಿಯನರು ನಮ್ಮ ಯಾವ ಕೆಲಸವನ್ನು ಶ್ಲಾಘಿಸುವುದಿಲ್ಲವೆಂದೂ, ಸ್ಯಾಮನ್ ಕಮಿಶನಿಗೆ ಕೊಟ್ಟ ಬಹಿಷ್ಕಾರ ಮತ್ತು ಸ್ವಾತಂತ್ರ್ಯದ ಹೋರಾಟ ಇವೆರಡನ್ನು ಮಾತ್ರ ಪ್ರಶಂಸಿಸುವರೆಂದೂ ಅಂದರು. ಅಂತೆಯೇ ಇವೆರಡರುಗಳ ವಿಷಯದಲ್ಲಿ ಮಾತ್ರ ನಿರ್ಲಕ್ಷ್ಯರಾಗದೆ, ಇನ್ನಷ್ಟು ದೃಢಮನಸ್ಸಿನಿಂದ ವರ್ತಿಸಿ ಮುಂದೆಯೂ ಸ್ಯಾಮನರನ್ನು ಬಹಿಷ್ಕರಿಸಿ ಸ್ವಾತಂತ್ರ್ಯಕ್ಕಾಗಿ ಅವಿಶ್ರಾಂತವಾಗಿ ಹೋರಾಡಿ, ಅವರನ್ನು ಇನ್ನಷ್ಟು ದಿಗಿಲುಗೊಳಿಸಬೇಕೆಂದರು. ಅವರೊಡನಿದ್ದ ರಾ। ಷುಯ್ಕಿಬ್ ಚೆಟ್ಟಿಯವರೂ ಕೂಡ ತನಗೆ ಹೊಳೆದ ಅಭಿಪ್ರಾಯಗಳನ್ನು ಆ ಸಂದರ್ಭದಲ್ಲಿ ಸೂಚಿಸದಿರಲಿಲ್ಲ.

ಪೋಲೀಸರ ಕಳ್ಳತನ.

ದೇಶದಲ್ಲಿ ನಡೆಯುವ ಕಳ್ಳತನವನ್ನು ನಿಲ್ಲಿಸಲಿಕ್ಕಾಗಿಯೂ, ಕಳ್ಳರನ್ನು ಹಿಡಿದು ಶಿಕ್ಷಿಸುವ ಸಲುವಾಗಿಯೂ, ಸರಕಾರದವರು ಪೋಲೀಸರನ್ನು ನೇಮಿಸಿ, ಅವರಿಗೆ ಸಂಬಳ ಕೊಡುತ್ತಿರುವರು. ಆದರೆ ಈ ಪೋಲೀಸರಲ್ಲಿ ಹಲವರು ಕಳ್ಳರನ್ನು ಹಿಡಿಯುವ ಬದಲಿಗೆ ತಾವೇ ಕಳ್ಳತನವನ್ನು ಮಾಡುವರು. ದನಕರುಗಳು ಹಿತ್ತಿಲನ್ನು ಪ್ರವೇಶಿಸಿ, ಹಾಳುಮಾಡದಂತೆ ಬೇಲಿಯನ್ನು ಕಟ್ಟುವ ಸಾಂಪ್ರದಾಯವಿದೆ. ಆದರೆ ಆ ಬೇಲಿಯೇ ಹಿತ್ತಿಲನ್ನು ಮೇದಂತೆ ಈ ಪೋಲೀಸರು ಮಾಡುವರು. ಇಂಥದೇ ಒಂದು ಕಥೆಯು ಮೊನ್ನೆ ಕಲಕತ್ತದಲ್ಲಿ ನಡೆಯಿತು. ರಹೀಮ ಅಲಿಯೆಂಬವನು ಒಬ್ಬಂಟಿಗನಾಗಿ ಮಾರ್ಗದಲ್ಲಿ ನಿಂತುಕೊಂಡಿರುವಾಗ ಯಾರೋ ಒಬ್ಬನು ಮೆಲ್ಲನೇ ಹಿಂದಿನಿಂದ ಬಂದು ಆತನ ಅಂಗಿಯ ಕಿಸೆಯೊಳಗೆ ಕೈಹಾಕಿದಂತಾಯಿತು. ಆದರೆ ಸುತ್ತುಮುತ್ತು ನೋಡಲಾಗಿ ಯಾರೂ ಕಾಣಲಿಲ್ಲ. ಕೆಲವು ಹೆಜ್ಜೆಗಳ ಅಂತರದಲ್ಲಿ ಯಾವನೋ ಒಬ್ಬನು ನಡೆದುಕೊಂಡು ಹೋಗುತ್ತಿದ್ದನು. ಕಿಸೆಯಲ್ಲಿ ಕೈಹಾಕಿ ನೋಡಲಾಗಿ, ಹನ್ನೊಂದು ಆಣೆ ಪಾವಲಿಗಳೂ, ಒಂದು ಸಿಗರೇಟು ಉರಿಸುವ ಕೊಳವೆಯೂ, ಇರುವ ಪಾಕೇಟು ಇರಲಿಲ್ಲ. ತನ್ನ ಕಿಸೆಯಲ್ಲಿದ್ದುದನ್ನು ಕದ್ದಿಯೋ ಎಂದು ಹೋಗುವವನೊಡನೆ ಕೇಳಲು, ಥಕ್ಕನೆ ಅಲಿಗೆ ಧೈರ್ಯಬಾರದೆ ಆತನ ಹಿಂದೆಯೇ ನಡೆದುಕೊಂಡು ಹೋದನು. ಸ್ವಲ್ಪ ದೂರ ಹೋಗುವದರೊಳಗಾಗಿ ಒಬ್ಬ ಇಂಗ್ಲಿಷ ಸಾರ್ಜಂಟನು ಬರಲಾಗಿ, ರಹೀಮ ಅಲಿಯು ನಡೆದ ಸಂಗತಿಯನ್ನು ಆತನಿಗೆ ತಿಳಿಸಿದನು. ಸಾರ್ಜಂಟನು ಬೇಗನೇ ನಡೆದುಹೋಗಿ ಮುಂದೆ ಹೋಗುತ್ತಿದ್ದವನನ್ನು ಹಿಡಿದು ಪರೀಕ್ಷಿಸಲಾಗಿ, ಆತನ ಕಿಸೆಯಲ್ಲಿ ರಹೀಮ ಅಲಿಯು ಕಳೆದ ಪಾಕೇಟು ಇದ್ದಿತು. ಸಾರ್ಜಂಟನು ಆತನನ್ನು ಪೋಲೀಸು ಠಾಣ್ಯಕ್ಕೆ ಕೊಂಡುಹೋಗಲಾಗಿ ಆತನು ಠಾಣೆಯ [illegible] ಪೋಲೀಸನೆಂದು ತಿಳಿದು ಬಂತು. ಎಲ್ಲರಿಗೂ ಆಶ್ಚರ್ಯವಾಯಿತು. ಆತನ ವಿಚಾರಣೆಯು ಮಾತ್ರ ಇನ್ನೂ ನಡೆದಿಲ್ಲ.

ಆರೋಗ್ಯದ ಕೆಲವು ಸೂತ್ರಗಳು.

[illegible] ಕಿಟಕಿ ಬಾಗಿಲುಗಳನ್ನು ವಿಶಾಲವಾಗಿ ರಾತ್ರಿಯಲ್ಲಿ ತೆರೆದಿಟ್ಟು ಬಹಿರಂಗವಾದ ಸ್ಥಳದಲ್ಲಿ (ಸಾಧ್ಯವಾದಲ್ಲಿ ಅವರೆ ಆಕಾಶದ) ಕೆಳಗೆ ಮಲಗಬೇಕು.

ಮಲಗುವ ಕೋಣೆಯಲ್ಲಿ ದೀಪ ಉರಿಸಬಾರದು. ದೀಪವು ವಾಯುವನ್ನು ಕೆಡಿಸುವದು.

ನೀರನ್ನು ಕುಡಿಯುವದು ಆರೋಗ್ಯಕ್ಕೆ ಹಿತಕರ. ಮಿತಿಮೀರಿ ಕುಡಿದರೆ ಹಲ್ಲುಗಳು ಹಾಳಾಗಿ ಆರೋಗ್ಯಕ್ಕೆ ಹಾನಿಯುಂಟಾಗುವದು.

ಸ್ವಲ್ಪ ಸ್ವಲ್ಪ ವ್ಯಾಯಾಮವನ್ನು ಕ್ರಮವಾಗಿ ಮಾಡುವದರಿಂದ ಶರೀರಕ್ಕೆ ವ್ಯಾಯಾಮದ ಪ್ರಯೋಜನವಿದೆ. ಆದರೆ ಅತಿಯಾದ ವ್ಯಾಯಾಮ ಹಾನಿಕರ.

ಮಕ್ಕಳಿಗೆ ಮೊಲೆ ಹಾಲಿನಷ್ಟು ಉತ್ತಮ ಹಾಲಿಲ್ಲ. ಎರಡು ಗಂಟೆಗೊಮ್ಮೆ ಮಗುವಿಗೆ ಮೊಲೆ ಹಾಲನ್ನು ಕುಡಿಸಬೇಕು.

ಯಾವಾಗಲೂ ಚೆನ್ನಾಗಿ ಕುದಿಸಿದ ನೀರನ್ನೂ ಹಾಲನ್ನೂ ಕುಡಿದು, ಚೆನ್ನಾಗಿ ಬೇಯಿಸಿದ ಆಹಾರವನ್ನು ತಿನ್ನುವದರಿಂದ, ರೋಗಭೀತಿಯು ಇಲ್ಲವಾಗುವುದು.

ಕೆಲಕ್ಕೆ [illegible] ಕಟ್ಟಿದ ಹಾಗೆ ತಿಂದರೆ ಹಲ್ಲುಗಳು [illegible] ರಕ್ತವರ್ಧಕ. ಹೆಚ್ಚು ತಿಂದರೆ ನಿದ್ದೆ ಬರುವುದಿಲ್ಲ. ಆಹಾರವು ಜೀರ್ಣವಾಗುವುದಿಲ್ಲ.

ಸದಾ [illegible] ಒಳ್ಳೆಯ ವ್ಯಾಯಾಮವು ಬೇರೊಂದಿಲ್ಲ. ದಿನಕ್ಕೆ ಅನಿಷ್ಟಪಕ್ಷ ಒಂದು ಘಂಟೆಯಾದರೂ ನಡೆದು ಹೋಗಬೇಕು.

ರೋಗವು ಕ್ರಿಮಿಗಳಿಂದಲೂ ಮಸಿಗಳಿಂದಲೂ ಹಬ್ಬುವದು. ಕೆಲವು [illegible] ಉಪಯೋಗದಿಂದ ಮಸಿ, ತಗಣೆ, ಮೊದಲಾದುವು ಸತ್ತು ಹೋಗುವವು. ಸಾಬೂನು ೩ ಪಾಲು, ನೀರು ೧೫ ಪಾಲು, ಬಿಸಿನೀರು ಎಣ್ಣೆ ೬೨ ಪಾಲು, ಸಾಬೂನನ್ನು ಬಿಸಿನೀರಿನಲ್ಲಿ ಕಲಸಿ ಅ ಮೇಲೆ ಬಿಸಿನೀರು ಎಣ್ಣೆ ಹೊಯ್ಯಬೇಕು. ಇಂಥಾ ಪದಾರ್ಥವನ್ನು ಹಾಕುವದರಿಂದ ಎರಡೇ ನಿಮಿಷಗಳೊಳಗೆ ಮಸಿಗಳು ಸತ್ತುಹೋಗುವವು.

[illegible] ಕೋಟಲೆ ಮೊದಲಾದ [illegible] ಅಂಟುರೋಗಗಳಾಗಿರುವ [illegible] ರೋಗವು ಸೋಂಕಿದ ರೋಗಿಗಳ ಸಂಸರ್ಗದಲ್ಲಿ [illegible] ಬಾರದು.

ಸನ್ನಿಪಾತದ ಅಣುಗಳು ಎರಡು ಘಂಟೆಯ ಸೂರ್ಯನ ಬಿಸಿಲಿನಿಂದ ಸಾಯುವವು. ಕ್ಷಯರೋಗದ ಅಣುಗಳು ಒಂದೇ ಘಂಟೆಯ ಬಿಸಿಲಿನಿಂದ ಸಾಯುವವು. ಆದುದರಿಂದ ಈ ರೋಗಿಗಳು ಮುಟ್ಟಿದ ಜಿನಸಿಗಳನ್ನು ಬಿಸಿಲಿನಲ್ಲಿಟ್ಟು ಒಣಗಿಸುವುದರಿಂದ ಹಾನಿಯಿಲ್ಲ.

School Requisites.

BEST WHITE CRAYONS.
ENGLISH, & GERMAN,
ARE AVAILABLE AT CHEAP RATES.
FOR PRICES APPLY TO,

THE MANAGER,
The Mangalore Trading Association,
MANGALORE.

(೪ನೇ ಪೇಜಿನಿಂದ ಮುಂದುವರಿದುದು)

ಹೊಸ ಸುದ್ದಿಗಳು:—(೧) ಇಲ್ಲಿಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸಪ್ತಾಹವು ಎಂದಿನಂತೆ ಶ್ರಾವಣ ಶುದ್ಧ ಏಕಾದಶಿ ಪ್ರಾರಂಭವಾಗಿ ಗದ್ದಲವೇ ಗದ್ದಲ! ಆ ಗದ್ದಲದಲ್ಲಿ ಒಂದು ದಿನ ನಾನೂ ಭಾಗಿಯಾಗಿದ್ದೆ. ಭಜನಾಸ್ಥಾನವು ವಿವಿಧಾಲಂಕಾರಗಳಿಂದ ಸುಶೋಭಿತವಾಗಿದೆ ಮಂಟಪವು ಚಿತ್ತಾಕರ್ಷಕವಾಗಿದೆ. ಗಂಡಸರಂತೆ, ವಿವಿಧ ವಸ್ತ್ರಾಭರಣಗಳಿಂದಾಲಂಕೃತರಾದ ಸ್ತ್ರೀಯರೂ ಒಂದು ಕಡೆ ಬಂದು ಕೂಡುತ್ತಾರೆ. ಪರಜಾತೀಯ ಹಲಕೆಲವು ಪ್ರೇಕ್ಷಕರು ಅಲ್ಲಿಗೆ ಬಂದು ಮಾನಿತರಾಗುವುದರಿಂದ ಜಾತಿಭೇದದ ಗೊಂದಲವೂ ಅಲ್ಲಿ ಅಷ್ಟೊಂದು ತೋರಿಬರುವುದಿಲ್ಲ. ಇದೀಗ ಶ್ಲಾಘನೀಯ!

ಈ ಭಜನೆಯು (ಸಪ್ತಾಹದ) ಹಿತಾಹಿತದ ನಿಷ್ಕರ್ಷಗೆ ಹೋಗದೆ ಇದು ಅಭೂತಪೂರ್ವ ಉತ್ಸಾಹದಿಂದ—ಚಳೋ ರೀತಿಯಿಂದ ನಡೆಯುತ್ತಿದೆಯೆಂದು ಮಾತ್ರ ಹೇಳಿ ಈ ವಿಷಯವನ್ನು ಪ್ರಕೃತ ಮುಗಿಸಿ ಬಿಡುತ್ತೇನೆ.

(೨) ತಾ. ೩೭—೮—೨೮ನೇ ಸಂಜೆ ಗಲಾಟೆಯು ಆನೆಯನ್ನು ಸ್ನಾನಕ್ಕಾಗಿ ಕರೆಯಲ್ಪಟ್ಟ ಮಲಯಾಳಿ ಮಾವುತನು ಏನೊಂದೂ ಅಪಾಯವಿಲ್ಲದೆ ಆಯುಕ್ಕೆ ತಂದಿರುವನು. ಈ ಮಾವುತನ ಇದಿರಿನಲ್ಲಿ ನಾಯಿಯ ಮರಿಯಂತೆ ಬರುತ್ತಿದ್ದ ಆನೆಯನ್ನು ನೋಡಿ ನೆರೆದ ಒಂದಿಷ್ಟು ಸಾವಿರಾರು ಜನರು ಆಶ್ಚರ್ಯಪಟ್ಟದರಲ್ಲಿ ಆಶ್ಚರ್ಯವಿಲ್ಲ. ಅಂತೂ ಆನೆಯು ಈ ಗಲಾಟೆಯಿಂದ ಆನೆಯೂ ಮಾವುತನೂ ಪತ್ರಿಕೆಯಲ್ಲಿ ಬಂದರು! ಅಲ್ಲವಾದರೆ ಈ ಮಾವುತನನ್ನು ಸುವರ್ಣಗಳಿಂದಲಂಕರಿಸಿ ಇಷ್ಟೊಂದು ಮಾನಿಸುತ್ತಿದ್ದರೇ? ಅಥವಾ ಅವನ ಶಕ್ತಿಪ್ರದರ್ಶನವಾದರೂ ಆಗುತ್ತಿತ್ತೇ? ಆನೆಯನ್ನಾಗಲಿ ಆನೆಯಂಥಾ ಜನವೇ ಬೇಕಾಗಿರುವುದರಿಂದ ಮಾರಾಟಿಸತಿಗಳ ಅಂಕುಶವನ್ನು ಶಾಶ್ವತವಾಗಿ ಯಾರ ಕೈಯಲ್ಲಿರಿಸುವರೋ ನೋಡಬೇಕು. ಅಂತೂ ಇನ್ನು ಗಲಾಟೆ ಇಲ್ಲವಷ್ಟೆ!

(೩) ಶ್ರಾವಣ ಮಾಸವು ಪುಣ್ಯಕಾಲವೆಂದು ಪೌರಾಣಿಕಮತವಾದಿಗಳ ಮತ, ಅದುದರಿಂದ ಜನರು—ವಿಶೇಷವಾಗಿ ಹೆಂಗಸರು, ದಿನಂಪ್ರತಿ—(ವಿಶೇಷವಾಗಿ ಶುಕ್ರವಾರ ದಿನ) ಹಿಂಡುಗಟ್ಟಿ ಕುಂಜಾರು, ಕಡಿಯಾಳಿ ಮೊದಲಾದುವುಗಳಂತೆ ಇಲ್ಲಿಯ ಶ್ರೀ ಕೃಷ್ಣ, ಅನಂತೇಶ್ವರ ದೇವಸ್ಥಾನಗಳಿಗೂ ದರ್ಶನಾಪೇಕ್ಷಿಗಳಾಗಿ ಬರುತ್ತಾರೆ. ಈ ಮಾಸದಲ್ಲಿ ಅವರೂ ದರ್ಶನವೆಂಬುದೇ ಇಲ್ಲ. ಸದಾ ಸರ್ವದಾ ದರ್ಶನವೇ! ಯಾವಾಗಲೂ ಭಕ್ತ ಪ್ರದರ್ಶನವೇ! ಮನೋವಾಂಛಿತವು ಈಡೇರುವುದೊಂದೇ ಬಾಕಿ!

"ಮರಿದುಂಬಿ"

ಮೈಸೂರು ಸರ್ಕಾರ.

೧೯೨೮ನೆಯ ಇಸವಿಯ ಮೈಸೂರು ದಸರಾ (ಅಖಿಲ ಭಾರತೀಯ) ಸರ್ವವಸ್ತು ಪ್ರದರ್ಶನವು ಮೈಸೂರು ನಗರದಲ್ಲಿ ಖಾಯಂವಾಗಿ ನಿರ್ಮಿಸಿರುವ ಪ್ರದರ್ಶನ ಶಾಲೆಯಲ್ಲಿ ಇದೇ ಅಕ್ಟೋಬರು ತಿಂಗಳಲ್ಲಿ ೧೯ರಿಂದ ೩೧ನೇ ತಾರೀಕಿನ ವರೆಗೆ ನಡೆಯುವುದು. ಕಲಾಕೌಶಲ್ಯವನ್ನೂ ಕೈಗಾರಿಕೆಯ ವಿಷಯಕವಾದ ನೈಪುಣ್ಯವನ್ನೂ ತೋರಿಸುವ ವಸ್ತುಗಳನ್ನೂ ಮತ್ತು ವ್ಯವಸಾಯೋತ್ಪನ್ನ ವಸ್ತುಗಳನ್ನೂ ಸಂಪದಭಿವೃದ್ಧಿಗೆ ಸಾಧಕವಾದ ವಸ್ತು ಸಮುದಾಯಗಳನ್ನೂ ಅಲ್ಲಿ ಪ್ರದರ್ಶಿಸಲಾಗುವುದು. ಯಂತ್ರೋಪಕರಣಗಳ ಮುಂತಾದವುಗಳಿಂದ ಕೆಲಸ ಮಾಡಿಸಿ ಆಕಾಲದಲ್ಲಿ ಜನರಿಗೆ ತೋರಿಸುವುದಕ್ಕೆ ವಿದ್ಯುಚ್ಛಕ್ತಿಯೇನಾದರೂ ಅವಶ್ಯವಿದ್ದಲ್ಲಿ, ಅದನ್ನು ಮುಫತ್ತಾಗಿ ಒದಗಿಸಲಾಗುವುದು. ಪ್ರಕಟಣೆಯ ಕೆಲಸಕ್ಕೂ, ವ್ಯಾಪಾರಕ್ಕೂ, ನಾನಾ ವಿಷಯಗಳನ್ನೂ ಪರಿಶೀಲಿಸಿ ತಿಳಿದುಕೊಳ್ಳುವುದಕ್ಕೂ, ಇದು ಒಳ್ಳೆಯ ಸಮಯವಾಗಿದೆ.

ಪ್ರದರ್ಶನದಲ್ಲಿ ತಮ್ಮ ವಸ್ತುಗಳನ್ನಿಡುವುದಕ್ಕೆ ಸ್ಥಳವನ್ನು ಅಪೇಕ್ಷಿಸುವವರೂ ಮತ್ತು ಪ್ರದರ್ಶನದ ವಿಚಾರವಾಗಿ ಇತರ ವಿವರಗಳನ್ನು ತಿಳಿಯಲಪೇಕ್ಷಿಸುವವರೂ ಸಹ, ಮೈಸೂರು ದಸರಾ ಪ್ರದರ್ಶನದ ಸೆಕ್ರೆಟರಿಯವರಿಂದ ಪ್ರಸಿದ್ಧಪತ್ರಿಕೆಯನ್ನು (ಪ್ರಾಸ್ಪೆಕ್ಟಸ್) ಪಡೆಯಬಹುದು.

ಕೆ. ಅನಂತಸಾಮಿ ರಾವ್.
ಸೆಕ್ರೆಟರಿ,
ಮೈಸೂರು ದಸರಾ ಎಗ್ಸಿಬಿಷನ್, ಮೈಸೂರು ಸಿಟಿ.

ಉತ್ತಮ ತರದ ಇಂಗ್ಲೀಷು ಮತ್ತು ಜರ್ಮನಿ ಬಿಳಿ ಚೋಕ ಪಟ್ಟಿಗೆಗಳು ಮಾರಾಟಕ್ಕೆ ಸಿದ್ಧವಿದೆ.
ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಮೆನೇಜರ್,
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು.

ಕರ್ಣಾಟಕ ಎಗ್ಯೂಮಿಕ್ಸ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಝಾ, ಬಹು ದಿನದ ಜ್ವರ, ಹಾಡಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ ಬೆವರು ಬಂದು, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧-೪-೦, ಸಣ್ಣದಕ್ಕೆ ೦-೧೪-೦.

ಎಲ್ಲ ಕಡೆಗೂ ಔಷಧವನ್ನು ಮಾರುವಗೋಸ್ಕರ ಏಜಂಟರು ಬೇಕಾಗಿದ್ದಾರೆ!

ಏಜಂಟರು ದಿ ಊಲನ್ ಮಾರ್ಟ, ಮಂಗಳೂರು. | ಕರ್ಣಾಟಕ ಬ್ರದರ್ಸ, ಗಿರಿಗಾಂವ, ಮುಂಬಯಿ.

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.



ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ ೩,000 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಬಾಗ್ ಯಿಹು 800 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸ್‌ಗಳು, ಪ್ರತಿ ಒಬ್ಬರ ಕೈಲಿಹಿಡಿದುಕೊಂಡು ಹೋಗಲು ಅನುಕೂಲಿಸುವ ಚಂದ್ರಕಾಂತಿ 00 ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನ್‌ಗಳು, ಸ್ಟೌವ್‌ಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಕರೆಯು ಗುಂಡಿಗಳು, ರೋಜಾ ಹುವ್ವಗಳ ಕುರಾಯಿಗಳು, ಬ್ಯಾಟರಿಗಳು, ಬೆಂಕಿ ಇಲ್ಲದೆ ಬೀಡಿ ಮತ್ತು ಸಿಗರೆಟ್ ಹಚ್ಚಿಸುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳೆಲ್ಲವುಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.



ಕ್ರಯ ಪಟ್ಟಿಗೆ ತಪಶೀಲಿಗೆ ಈ ವಿಳಾಸಕ್ಕೆ ಬರೆಯಿರಿ:

ಎ. ಆರ್. ಖಲೀಲ್,
ಬೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,
18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರವಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ. ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ, ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,
—೯—೨೭ ಸಳಿಬೈಲ್ ಪೋಸ್ಟು, ಕಡೂರ್ ಡಿಸ್ಟ.

Batliwalla's Preparations Cover All Your Needs.
A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲ್ಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಎಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ಪರಿಹಾರ, ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.
ಬಾಟ್ಲಿವಾಲರ ಕಿಂಗ್ ಆಫ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೦.
ಬಾಟ್ಲಿವಾಲರ ಟೈಫಾಯಿಡ ಮಿಕ್ಸ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪
ಬಾಟ್ಲಿವಾಲರ ಕ್ವಿನೇನ ಟೀಕಡಿಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೀಕಡಿಗಳು ಇರುತ್ತವೆ
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧-೫-೦. ರೂ. ೧-೪-೦. ೧-೧೨-೦.
ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦-೬-೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦-೬-೦. LIBERAL DISCOUNT TO TRADE.

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ.
ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay, No. 14.

ಕೇಸರಿಯವರ ಲೋಧ್ರ

ಗರ್ಭಾಶಯ ರೋಗನಿವಾರಿಣೀ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ಆಭರಣ'ವೆಂದೂ, 'ಸರ್ವಾಭೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜನನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ.

ಇದು ಮುಟ್ಟುಶೂಲೆ, ಮುಟ್ಟುಸ್ರಾವದೋಷ, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಮುಟ್ಟುವು ನಾನಾ ಬಣ್ಣಗಳಿಂದ ಸ್ರವಿಸುವುದು, ಪ್ರದರ (ಮೇಹ) ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ಶರೀರದಲ್ಲಿ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ಉಬ್ಬಸ ಮೊದಲಾದ ವ್ಯಾಧಿಗಳೂ ಇತರ ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ಔಷಧಿ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— ಕೇಸರಿ ಕುಟೀರಂ,

TELEGRAMS:—'KESARI' ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

15-4-'27 ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಟೇಬಲ್ ಟೈಂಪೀಸ್ ಇನಾಂ.



ಈ ನಕ್ಷೆಯಲ್ಲಿ ಕಂಡ ಫೌಂಟೆನ್‌ಪೆನ್ನಾವು ವಿಲಾಯಿತಿಯಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟ್ಸ್ ಭಂಗಾರದಂಥ ನಿಬ್ಬು ಹಾಕಿದೆ. ಇದರಲ್ಲಿ ಬರೆಯುವವರಿಂದ ಅಕ್ಷರಗಳು ಬಹು ಚೆನ್ನಾಗಿ ಕಾಣುವವು. ಈ ಪೇನಾವನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಮೇಲ್ಕಂಡ ಟೇಬಲ್ ಟೈಂಪೀಸ್ ಇನಾಮಾಗಿ ಕೊಡುವೆವು.

ಟೈಂಪೀಸ್ ಸಹಿತ ಪೇನಾ 1ಕ್ಕೆ 2—8—0.

ವಿಳಾಸ:— ಪೀಟರ್ ವಾಚ್ ಕಂಪನಿ,
ಸೌಕಾರ ಪೇಟೆ, ಮದರಾಸು.

ಫ್ಯಾನ್ಸಿ ಲೀವರ್ ಪಾಕೆಟ್ ವಾಚ್

(15 ಬಹುಮಾನಗಳ ಸಹಿತ ರೂ. 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಲ್ಪಟ್ಟಿದೆ.



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಆದರವಾಗಿಯೂ ಇರುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ, ಹಿಂದುಗಡೆ ಚಿತ್ರಕೆಲಸ ಮಾಡಲ್ಪಟ್ಟಿರುವುದು. ಮತ್ತು ಒಳಗಡೆ ಕೆತ್ತಲ್ಪಟ್ಟ ಗಿಲ್ಟ್ ಮೂವೆಂಟ್ ಮಾಡಿರುವದು. ಫ್ಲಾಟ್, ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು ಬಹುಮಾನಗಳ ವಿವರ:- ಫೌಂಟನ್ ಪೇನಾ 1, ಹೇರಾಯಿಲ್ ಬಾಟಲ್ 1, ವಸ್ತ್ರದ ಗುಂಡಿಗಳು 4, ಪಾಕೆಟ್ ಕನ್ನಡಿ ೧, ಗಡಿಯಾರ ಸರಪಳಿ 1, ಸುವಾಸನೆ ಸೋಪು 1, ಪೇನಾ ಕತ್ತಿ 1, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ 1, ರೋಲ್ಡ್ ಗೋಲ್ಡ್ ಭಂಗಾರದ ಸೇಫ್ಟಿಪಿನ್ ಎಂಬ ಕತ್ತಿನ ಹಾರ 1, ದಂತದ ಬಾಚಣಿಗೆ 1, ಕೈಗುಂಡಿಗಳ ಸೆಟ್ ೧, ಕೈವಸ್ತ್ರ 1, ಈ 15 ಬಹುಮಾನಗಳು ಮತ್ತು ಎಲ್ಲಾ ಯಾವ 3 ವರ್ಷ ಗ್ಯಾರಂಟಿ ಸಹಿತ

ಗಡಿಯಾರ ಒಂದಕ್ಕೆ ಕ್ರಯ ರೂ. 4—8—0.

THE ENGLISH EMPORIUM,
P.O. box 105 MADRAS.

ಎಲ್ಲಾ ವಿಧದ ರಾಜಕೀಯ ಪಕ್ಷಗಳ ನ್ಯಾಯನ್. ಕಮಿಟಿಗೆ ಕಳುಹಿಸಿದ ಸ್ಕೀಮುಗಳು.

ಇಂಡಿಯಕ್ಕೆ ಯಾವ ತರದ ಸರಕಾರವು ಬೇಕಾಗಿದೆ.

ಇಂಡಿಯಕ್ಕೆ ಬ್ರಿಟಿಷ ಸಾಮ್ರಾಜ್ಯದ ಭಾಗಗಳಾದ ಡೊಮಿನಿಯನ್ ಒಫ್ ಕೆನಡಾ, ಕೊಮನ್ ವೆಲ್ತ್ ಒಫ್ ಆಸ್ಟ್ರೇಲಿಯಾ, ಡೊಮಿನಿಯನ್ ಒಫ್ ನ್ಯೂಜಿಲೆಂಡ್, ಯೂನಿಯನ್ ಒಫ್ ಸೌತ್ ಆಫ್ರಿಕಾ, ಐಯರಿಶ್ ಫ್ರೀಸ್ಟೇಟ್ ಇವುಗಳ ಸಮಾನವಾದ ಸರಕಾರವನ್ನು ಸ್ಥಾಪಿಸಿ ಅವುಗಳಿಗಿರುವ ಸ್ಥಾನ ಮಾನಮರ್ಯಾದೆಯು ಸಿಗಬೇಕು ಇಂಡಿಯದೊಳಗೆ ಶಾಂತಿ, ಕ್ರಮ, ಒಳ್ಳೇ ಸರಕಾರ ಇರುವಂತೆ ಕಾಯಿದೆ ಕಾನೂನು ಮಾಡುವುದಕ್ಕಾಗಿ ಒಂದು ಪಾರ್ಲಿಮೆಂಟು ಸಭೆಯನ್ನು ಸ್ಥಾಪಿಸಬೇಕು ಇದಕ್ಕೆ ಜವಾಬದಾರಿಯಾಗಿರುವ ಒಂದು ಮಂತ್ರಿಸಭೆಯು ಇರಬೇಕು ಇಂಡಿಯಕ್ಕೆ ಕೊಮನ್ ವೆಲ್ತ್ ಒಫ್ ಇಂಡಿಯಾ ಎಂಬ ಹೆಸರನ್ನು ಕೊಡಬೇಕು

ಮೇಲಿನ ಕ್ರಮದ ಪ್ರಕಾರ ಈ ಕ್ರಮವು ಜ್ಯಾರಿಯಲ್ಲಿರುವ ಸ್ಥಳ

ಈ ಆಕ್ಟು ಮತ್ತು ಕೊಮನ್ ವೆಲ್ತ್ ಪಾರ್ಲಿಮೆಂಟಿನವರು ಮಾಡುವ ಎಲ್ಲಾ ಕಾಯಿದೆಕಾನೂನುಗಳು ಇದರ ಸರಹದ್ದಿನೊಳಗಿರುವ ಎಲ್ಲಾ ಸಂಸ್ಥಾನಗಳಲ್ಲಿಯೂ ಇನ್ನು ಅದರ ಇತರ ಭಾಗಗಳಲ್ಲಿಯೂ ಇಂಡಿಯದ ಸುತ್ತಲೂ ಇರುವ ಸಮುದ್ರಗಳಲ್ಲಿಯೂ ಊರ್ಜಿತಸ್ಥಿತಿಯಲ್ಲಿರುವವು

ಸಿಟಿಜನ್ ಅಂದರೇನು?

ಈ ಆಕ್ಟು ಪ್ರಕಾರ ಸಿಟಿಜನ್ ಅಂದರೆ (೧) ಕೊಮನ್ ವೆಲ್ತ್ ಸರಹದ್ದಿನೊಳಗೆ ಹುಟ್ಟಿದವನು ಅಥವಾ ಯಾರ ತಂದೆಯು ಇಲ್ಲಿ ಹುಟ್ಟಿ ಕಾಯಂ ವಾಸ್ತವ್ಯ ಮಾಡಿಕೊಂಡಿರುವವನು ಆಗಿರುತ್ತಾನೆ ಇತರ ದೇಶದ ಸಿಟಿಜನ್ ಆಗಿ ದಾಖಲಾಗಿರುವವನು ಇಲ್ಲಿಯ ಸಿಟಿಜನ್ ಆಗಲು ಸಾಧ್ಯವಿಲ್ಲ (೨) ತತ್ಕಾಲಕ್ಕೆ ಇಂಡಿಯದಲ್ಲಿಯೇ ಇದ್ದು ಜ್ಯಾರಿಯಲ್ಲಿರುವ ಕಾಯಿದೆಕಾನೂನು ಪ್ರಕಾರ ನಡಿಯುವವನೂ ಆಗಿರುತ್ತಾನೆ ಅಂದರೆ ಇವನಿಗೆ ಕೊಮನ್ ವೆಲ್ತಿನ ಸರಹದ್ದಿನಲ್ಲಿ ಎಲ್ಲಾ ತರದ ಹಕ್ಕು ಸ್ವಾತಂತ್ರ್ಯವಿದ್ದು ಅದರ ಪ್ರಜೆಯಾಗಿರುತ್ತಾನೆ

ಹಕ್ಕು ಬಾಧ್ಯತೆಗಳು

(೧) ಸರಕಾರದ ಎಲ್ಲಾ ಅಧಿಕಾರಿಗಳು ಅಂದರೆ ನ್ಯಾಯವಿಧಾಯಕ ಕಾರ್ಯಕಾರಿ ಮತ್ತು ನ್ಯಾಯಸಂಬಂಧವಾದ ಅಧಿಕಾರಿಗಳು ಕೊಮನ್ ವೆಲ್ತಿನ ಪ್ರಜೆಗಳ ಹಕ್ಕಿನದಾಗಿರುತ್ತವೆ ಮತ್ತು ಈ ಆಕ್ಟಿಗನುಗುಣವಾಗಿ ಈ ಅಧಿಕಾರವು ಜ್ಯಾರಿಗೆ ತರಲ್ಪಡುವುದು. (೨) ಇದರ ಸರಹದ್ದಿನೊಳಗೆ ವಾಸಿಸಿಕೊಂಡಿರುವ ಪ್ರತಿ ಒಬ್ಬ ಮನುಷ್ಯನಿಗೆ ಇರುವ ಹಕ್ಕನ್ನಾಗಲೀ ಅವನ ವಾಸ್ತವ್ಯದ ಸ್ಥಳವನ್ನಾಗಲೀ ಅವನ ಆಸ್ತಿಯನ್ನಾಗಲೀ ಕಾಯಿದೆಗೆ ವಿರೋಧವಾಗಿ ಸರಕಾರವು ಬಲಾತ್ಕಾರದಿಂದ ತಮ್ಮ ಸ್ವಾಧೀನ ಪಡಿಸಿಕೊಳ್ಳ ಕೂಡದು (೩) ಪ್ರತಿ ಒಬ್ಬನಿಗೂ ತನ್ನ ಮತಕ್ಕನುಸಾರವಾಗಿ ನಡಿಯಲು ಸ್ವತಂತ್ರವಿರುವುದು (೪) ದೇಶಕ್ಕೆ ಹಿತಕರವಾದ ವಿಷಯ ಸಭೆಯನ್ನು ಕೂಡಿಸಿ ಮಾತನಾಡಲಿಕ್ಕೂ ಸಂಘಗಳನ್ನು ಸ್ಥಾಪಿಸಲಿಕ್ಕೂ ಹಕ್ಕು ಇರುವುದು (೫) ರಾಜ್ಯದ ಗಡಿಯೊಳಗಿರುವ ಪ್ರತಿ ಒಬ್ಬ ಪ್ರಜೆಗೂ ಧರ್ಮಾರ್ಥವಾದ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹಕ್ಕಿರುವುದು ಸರಕಾರದ ಸಹಾಯ ಹೊಂದುವ ಪ್ರತಿ ಒಂದು ಪ್ರಾಥಮಿಕ ಶಾಲೆಯಲ್ಲಿ ಎಲ್ಲಾ ಜಾತಿಮತದವರಿಗೂ ಕಲಿಯಲು ಎಡೆ ಇರುವುದು. (೬) ಪ್ರತಿ ಒಬ್ಬ ಪ್ರಜೆಯೂ ಸರಿಸಮಾನ ದೃಷ್ಟಿಯಿಂದ ನಡಿಸಲ್ಪಡುವನು. (೭) ಜಾತಿವಾರು ಕಾನೂನು ಕಾಯಿದೆಗಳಿಗೆ ಎಡೆ ಇರಲಾರದು (೮) ಯಾವನೊಬ್ಬ ಪ್ರಜೆಗೆ ದೇಶದಲ್ಲಿ ಜ್ಯಾರಿಯಲ್ಲಿ ಇಲ್ಲದೆ ಇರುವ ಕಾನೂನು ಪ್ರಕಾರ ಶಿಕ್ಷಿಸಕೂಡದು (೯) ನಾನಾ ತರದಲ್ಲಿ ಪೀಡಿಸಿ ಕೊಡುವ ಶಿಕ್ಷೆಯು ಜ್ಯಾರಿಯಲ್ಲಿರಲು ಸಾಧ್ಯವಿಲ್ಲ (೧೦) ದಂಗೆ ಉಂಟಾದ್ದರೆ ಪಾರ್ಲಿಮೆಂಟ ಸಭೆಯು ನಡಿಯುವ ಸಮಯದಲ್ಲಿ ಉಂಟಾದರೆ ಪಾರ್ಲಿಮೆಂಟಿಗೂ ಇತರ ಸಮಯಗಳಲ್ಲಾದರೆ ಗವರ್ನರ ಜನರಲರಿಗೂ ಕಾಯಿದೆ ಮಾಡುವ ಹಕ್ಕಿರುವುದು (೧೧), ಇಂಡಿಯದ ಕೊಮನ್ ವೆಲ್ತ್ ಸರಕಾರಕ್ಕಾಗಲೀ ಪ್ರಾಂತಿಕ ಸರಕಾರಕ್ಕಾಗಲೀ ರಾಜಮತ ಇರಲು ಸಾಧ್ಯವಿಲ್ಲ... (State Religion) ಸರಕಾರದವರು ಯಾವುದೇ ಒಂದು ಮತಸಂಸ್ಥೆಗಾಗಲೀ ಉಂಬಳಿಯನ್ನು ಬಿಡಲು ಸಾಧ್ಯವಿಲ್ಲ, (೧೨) ಸರಕಾರಿ ಗ್ರೇಂಟ ಸಿಕ್ಕುವ ಯಾವುದೊಂದು ಶಾಲೆಯಾದರೂ ಆ ಶಾಲೆಯ ಸ್ಥಾಪಕರು ಕಲಿಸುವ ಮತಶೋಧನಾ ಕಾರಕ್ಕೆ ಆ ಮತದವರಲ್ಲದ ಇತರರನ್ನು ಆ ಮತದ ವಿಷಯ ಕಲಿಯಲು ಒತ್ತಾಯ ಪಡಿಸಬಾರದು, (೧೩) ಎಲ್ಲಾ ಜಾತಿಮತದವರಿಗೂ ಸರಕಾರಗಳಿಗೂ ಹುದ್ದೆಗಳಿಗೂ ಹಕ್ಕಿರುವುದು, (೧೪) ಸಾರ್ವಜನಿಕ ಬಾವಿಗಳನ್ನೂ ಮಾರ್ಗಗಳನ್ನೂ ಇನ್ನು ಇತರ ಇದೇ ತರದ ಸಂಸ್ಥೆಗಳಿಗೂ ಎಲ್ಲಾ ಜಾತಿಮತದವರಿಗೂ ಸರಿಸಮಾನ ಹಕ್ಕಿರುವುದು, (೧೫) ಎಲ್ಲಾ ತರದ ಕೂಲಿಕಾರರಿಗೂ ಹೆಂಗಸರಿಗೂ ಮಕ್ಕಳಿಗೂ ಬೇಕಾದ ರೀತಿಯ ರಕ್ಷಣೆಯು ಸಿಗುವಂತೆ ಅನುಕೂಲ ಮಾಡಿಯದೆ (೧೬) ರಾಜ್ಯದ ಆಯಾ ಭಾಗಗಳಲ್ಲಿ ಪ್ರಚಾರದಲ್ಲಿರುವ ಕಾಯಿದೆ ಪ್ರಕಾರ ಎಲ್ಲಾ ಪ್ರಜೆಗಳಿಗೂ ಆಯುಧಗಳನ್ನು ಧರಿಸಲು, ಅಧಿಕಾರವಿರುವುದು (೧೭) ರಾಜ್ಯಭಾರದ ಎಲ್ಲಾ ಕಾರ್ಯಗಳಲ್ಲಿಯೂ ಗಂಡಸರಿಗೂ ಹೆಂಗಸರಿಗೂ ಸರಿಸಮಾನ ಹಕ್ಕುಗಳಿರುವವು

ಪಾರ್ಲಿಮೆಂಟ್ ಸಭೆ.

ನ್ಯಾಯವಿಧಾಯಕ ಕೆಲಸಗಳನ್ನು ಮಾಡುವುದಕ್ಕಾಗಿ ದೇಶದಲ್ಲಿ ಒಂದು ಪಾರ್ಲಿಮೆಂಟ ಸಭೆಯು ಸ್ಥಾಪಿಸಲ್ಪಡುವುವು ಇದರ ಮುಖ್ಯ ಘಟಕರು (೧) ಮಹಾರಾಜರು (೨) ಸಿನೆಟ್ (೩) ಪ್ರಜಾ ಪ್ರತಿನಿಧಿ ಸಭೆ ಈ ಮೂರು ಆಗಿರುವುದು ಪ್ರಜಾ ಪ್ರತಿನಿಧಿ ಸಭೆಗೆ ಪಾರ್ಲಿಮೆಂಟ ಸಭೆ ಎಂಬ ಹೆಸರಿರುವುದು ಇಂಡಿಯದಲ್ಲಿ ರಾಜರ ಪ್ರತಿನಿಧಿಯಾಗಿ ಗವರ್ನರ ಜನರಲರು ಇರುವರು ಇವರನ್ನು ಮಹಾರಾಜರೇ ನೇಮಿಸಿರುವರು ಇನ್ನು ಮಹಾರಾಜರಿಗೆ ಆಗಾಗ್ಗೆ ಸಂತೋಷ ತೋರುವ ಕೆಲವು ಅಧಿಕಾರಗಳನ್ನು ಈ ಗವರ್ನರ ಜನರಲರಿಗೆ ಕೊಡಬಹುದು

ಗವರ್ನರ ಜನರಲರ ಸಂಬಳಕ್ಕಾಗಿ ಇಂಡಿಯದ ತಿಜೋರಿಯದಿಂದ ಒಂದು ಅಂಶವು ಮಹಾರಾಜರಿಗೆ ಕೊಡಲ್ಪಡುವುದು ಇನ್ನು ಮುಂದೆ ಆಗುವ ಪಾರ್ಲಿಮೆಂಟ ಸಭೆಯು ಈ ಸಂಬಳದ ದರವನ್ನು ನಿರ್ಣಯಿಸುವ ವರೆಗೆ ಜ್ಯಾರಿಯಲ್ಲಿರುವ ಸಂಬಳವೇ ಕೊಡಲ್ಪಡುವುದು ಒಬ್ಬರು ಎಷ್ಟು ವರ್ಷದ ವರೆಗೆ ಗವರ್ನರ ಜನರಲರಾಗಿ ನೇಮಿಸಲ್ಪಡುತ್ತಾರೋ ಆ ಅವಧಿಯಲ್ಲಿ ಅವರ ಸಂಬಳವನ್ನು ಹೆಚ್ಚಿಸಲೂ ಕಡಿಮೆ ಮಾಡಲೂ ಕೂಡದು

ಸಿನೆಟ್ ಸಭೆಯಲ್ಲಿ ೨೦೦ ಮಂದಿ ಸಭಿಕರು ಇರುವರು ಇವರನ್ನು ಪ್ರಾಂತಿಕ ಸಭೆಗಳು ಚುನಾಯಿಸುವರು ಆಯಾ ಸಂಸ್ಥಾನದ ಜನಸಂಖ್ಯೆಯ ಅನುಸಾರವಾಗಿ ಈ ಸಭಿಕರ ಸಂಖ್ಯೆ ನಿರ್ಣಯಿಸಲಾಗುವುದು. ಪ್ರಾಂತಿಕ ಸಭೆಯು ಒಬ್ಬೊಬ್ಬ ಮೆಂಬರನಿಗೆ ಒಂದೊಂದು ಓಟಿನ ಪ್ರಕಾರ ಈ ಚುನಾವಣೆಯು ನಡಿಯುವುದು ಈ ಸಭೆಯ ಮೆಂಬರು ಚುನಾವಣೆಯು ೭ ವರ್ಷಗಳಿಗೊಮ್ಮೆ ಯಾಗುವುದು ಪ್ರಜಾ ಪ್ರತಿನಿಧಿ ಸಭೆ ಎಂಬ ಪಾರ್ಲಿಮೆಂಟ ಸಭೆಯಲ್ಲಿ ೫೦೦ ಮಂದಿ ಸಭಿಕರು ಇರುವರು ಇವರನ್ನು ಇಂಡಿಯದ ಸರಕಾರದ ಸರಹದ್ದಿನೊಳಗಿರುವ ಪ್ರಜೆಗಳು ಚುನಾಯಿಸುವರು ೨೧ ವರ್ಷ ಪ್ರಾಯ ಭರಿತವಾದ ಪ್ರತಿ ಒಬ್ಬ ಗಂಡಸಿಗೂ ಹೆಂಗಸಿಗೂ ಓಟು ಕೊಡುವ ಅಧಿಕಾರವು ಇರುವುದು ಅಗತ್ಯ ಇದ್ದಲ್ಲಿ ಸಭಿಕರ ಸಂಖ್ಯೆಯನ್ನು ಹೆಚ್ಚಿಸುವ ಅಧಿಕಾರವು ಪಾರ್ಲಿಮೆಂಟ ಸಭೆಗೆ ಇರುವುದು ಈ ಸಭೆಯ ಸಭಿಕರ ಚುನಾವಣೆಯು ೫ ವರ್ಷಗಳಿಗೊಮ್ಮೆ ನಡಿಯುವುದು ಈ ಎರಡು ಸಭೆಗಳ ಅವಧಿಯನ್ನು ಅಗತ್ಯ ಬಿದ್ದರೆ ಕಡಿಮೆ ಮಾಡಲಿಕ್ಕೂ ಹೆಚ್ಚಿಸಲಿಕ್ಕೂ ಗವರ್ನರ ಜನರಲರಿಗೆ ಅಧಿಕಾರವಿರುವುದು ಸಭೆಗಳನ್ನು ಕರೆಯುವ ಮುಚ್ಚುವ ಮುಂದರಿಸುವ ಸಮಯವನ್ನು ನಿರ್ಣಯಿಸುವ ಅಧಿಕಾರವೂ ಅವರಿಗೇ ಇರುವುದು

ಈ ಎರಡೂ ಸಭೆಗಳಿಗೂ ಸಭೆಯಿಂದಲೇ ಚುನಾಯಿಸಲ್ಪಟ್ಟ ಒಬ್ಬ ಅಧ್ಯಕ್ಷರು ಇರುವರು ಇದೇ ರೀತಿಯಲ್ಲಿ ಚುನಾಯಿಸಲ್ಪಡುವ ಒಬ್ಬ ಡಿಪ್ಯುಟಿ ಪ್ರೆಸಿಡೆಂಟರೂ ಇರುವರು

ಪಾರ್ಲಿಮೆಂಟಿನವರಿಗೆ ಎಲ್ಲಾ ತರದ ಕಾನೂನ ಕಾಯಿದೆಗಳನ್ನು ಮಾಡಿ ದೇಶದಲ್ಲಿ ಕ್ರಮವೂ ಶಾಂತತೆಯೂ ನೆಲೆಗೊಳ್ಳುವಂತೆ ಮಾಡುವ ಕೆಲಸವು ಪಾರ್ಲಿಮೆಂಟಿನ ಹಕ್ಕಿನದಾಗಿದೆ

ಪರರಾಜ್ಯಗಳೊಡನೆ ವ್ಯವಹಾರ ನಡಿಸುವ ಹಕ್ಕು ಇತರ ಡೊಮಿನಿಯನುಗಳಿಗಿರುವಷ್ಟೇ ಇರುವುದು ಪಾರ್ಲಿಮೆಂಟ ಸಭೆಗಳಲ್ಲಿ ಮಂಜೂರಾದ ಬಿಲ್ಲುಗಳು ಆಕ್ಟುಗಳಾಗಬೇಕಾದರೆ ಗವರ್ನರ ಜನರಲರ ಒಪ್ಪಿಗೆಯನ್ನು ಪಡಿಯಬೇಕು ಆದರೆ ಚರ್ಚೆಯಿರುವ ಸಂಗತಿಗಳಲ್ಲಿ ಮಹಾರಾಜರೇ ಎರಡು ಸಭೆಗಳಿಗೆ ತಿಳಿಸುವರು

ಪಾರ್ಲಿಮೆಂಟಿನ ಕಾರ್ಯಕಾರಿ ಸಭೆ (ಮಂತ್ರಿ ಸಭೆ).

ಪಾರ್ಲಿಮೆಂಟಿನ ಕಾಯಿದೆಗಳನ್ನು ಮಾಡುವ ಅಧಿಕಾರವು ಮಹಾರಾಜರಿಗೂ ಅವರ ಪ್ರತಿನಿಧಿಗಳಾದ ಗವರ್ನರ ಜನರಲರಿಗೂ ಇರುವುದು. ಪರಿಷ್ಟ ಸರಕಾರಕ್ಕೆ ಒಬ್ಬ ಮುಖ್ಯ ಮಂತ್ರಿಯೂ ೬ಕ್ಕೆ ಮಿಕ್ಕದ ಇತರ ಮಂತ್ರಿಗಳೂ ಇರುವರು ಮುಖ್ಯ ಮಂತ್ರಿಯವರನ್ನು ಗವರ್ನರ ಜನರಲರು ನೇಮಿಸುವರು. ಇನ್ನು ಇತರ ಮಂತ್ರಿಗಳನ್ನು ಮುಖ್ಯ ಮಂತ್ರಿಯ ಸೂಚನೆ ಪ್ರಕಾರ ಗವರ್ನರ ಜನರಲರೇ ನೇಮಿಸುವರು ಆಯಾ ಮಂತ್ರಿಗಳಿಗೆ ಕೊಡುವ ಇಲಾಖೆಗಳು ಸರಿಯಾಗಿ ನಡಸಲ್ಪಡಲಿಕ್ಕೆ ಇವರು ಪಾರ್ಲಿಮೆಂಟಿಗೆ ಜವಾಬದಾರರಾಗಿರುವರು. ಈ ಮಂತ್ರಿ ಸಭೆಯ ಇತರ ಹುದ್ದೆದಾರರನ್ನು ನೇಮಿಸುವ ಅಧಿಕಾರವೂ ಗವರ್ನರ ಜನರಲರಿಗೆ ಇರುವುದು ಭೂಸೈನ್ಯ, ಜಲಸೈನ್ಯ, ವಾಯುಸೈನ್ಯ ಇವುಗಳ ಸರ್ವ ಸೇನಾಧಿಪತಿಗಳ ಅಧಿಕಾರವು ಗವರ್ನರ ಜನರಲರಿಗೆ ಇರುವುದು

ಹೈಕಮಿಶನರೂ ಇತರ ದೇಶಕ್ಕೆ ಹೋಗುವ ರಾಯಭಾರಿಗಳೂ.

ಪರದೇಶಗಳಲ್ಲಿ ರಾಯಭಾರಿಗಳನ್ನೂ ಹೈಕಮಿಶನರನ್ನೂ ಕೆನಡಾ ಮತ್ತು ಇತರ ಡೊಮಿನಿಯನುಗಳಿಗೆ ಇರುವ ರೀತಿಯಲ್ಲಿಯೇ ನಿಯಮಿಸುವ ಹಕ್ಕು ಕೊಮನ್ ವೆಲ್ತ್ ಸರಕಾರಕ್ಕೆ ಇರುವುದು

ಹಣದ ಅಧಿಕಾರ.

ಹಣದ ಅಧಿಕಾರವನ್ನು ನೋಡಲಿಕ್ಕೆ ಒಬ್ಬ ಓಡಿಟರ ಜನರಲರನ್ನು ಗವರ್ನರ ಜನರಲರು ನೇಮಿಸುವರು

ಪ್ರಾಂತಿಕ ಸಭೆಗಳು.

ಪ್ರತಿ ಒಂದು ಸಂಸ್ಥಾನದ ಆಡಳಿತೆಗಾಗಿ ಕಾಯಿದೆ ಕಾನೂನು ಮಾಡುವ ಅಧಿಕಾರವು ಮಹಾರಾಜರಿಗೂ ಪ್ರಾಂತಿಕ ನ್ಯಾಯವಿಧಾಯಕ ಸಭೆಗೂ ಇರುವುದು

ಪ್ರತಿ ಒಂದು ಪ್ರಾಂತ್ಯಕ್ಕೆ ಒಬ್ಬೊಬ್ಬ ಗವರ್ನರರನ್ನು ಮಹಾರಾಜರೇ ನಿಯಮಿಸುವರು ಇವರ ಸಂಬಳಕ್ಕಾಗಿ ಪ್ರಾಂತಿಕ ಸರಕಾರದಿಂದ ಹಣವು ಮಹಾರಾಜರಿಗೆ ಒದಗಿಸಲ್ಪಡುವುದು ಪ್ರಾಂತಿಕ ನ್ಯಾಯವಿಧಾಯಕ ಸಭೆಯಲ್ಲಿ ಆಯಾ ಸಂಸ್ಥಾನಗಳಲ್ಲಿನ ಪ್ರತಿ ೧ ಲಕ್ಷ ಜನಸಂಖ್ಯೆಗೆ ಒಬ್ಬ ಮೆಂಬರನಂತೆ ಚುನಾಯಿಸುವರು ಆದರೆ ಕಡಿಮೆಯಾದರೆ ೧೦೦ಕ್ಕಿಂತ ಕಡಿಮೆ ಮೆಂಬರರು ಇರಕೂಡದು ಚುನಾವಣೆಯ ಕ್ರಮಗಳು ಮೇಲಿನ್ನಂತೆಯೇ ಇವೆ ಇವರ ಮೆಂಬರರು ೫ ವರ್ಷಕ್ಕೊಂದಾವರ್ತಿ ಚುನಾಯಿಸಲ್ಪಡುವರು ಈ ಸಭೆಗೂ ಒಬ್ಬ ಪ್ರೆಸಿಡೆಂಟ ಡೆಪ್ಯುಟಿ ಪ್ರೆಸಿಡೆಂಟರೂ ಇರುವರು

ಪ್ರಾಂತಿಕ ಮಂತ್ರಿ ಸಭೆ.

ಪ್ರಾಂತಿಕ ಮಂತ್ರಿ ಸಭೆಯಲ್ಲಿ ಐದಕ್ಕೆ ಮೀರದಷ್ಟು ಮಂತ್ರಿಗಳು ಇರಬೇಕಾಗಿದೆ ಗವರ್ನರರು ಮುಖ್ಯ ಮಂತ್ರಿಯನ್ನು ಚುನಾಯಿಸಿದ ಮೇಲೆ ಅವರ ಸೂಚನೆಯಂತೆ ಇತರ ಮಂತ್ರಿಗಳನ್ನು ನೇಮಿಸಬೇಕು

ಸುಪ್ರೀಮ ಕೋರ್ಟು

ಇಂಡಿಯದಲ್ಲಿ ಒಂದು ಸುಪ್ರೀಮ ಕೋರ್ಟನ್ನು ಇಡಬೇಕು ಇದರ ಅಧಿಕಾರದ ವಿಷಯ ಪಾರ್ಲಿಮೆಂಟಿನಲ್ಲಿ ನಿಶ್ಚಯವಾಗಬೇಕು ಇದಕ್ಕೆ ಮುಖ್ಯ ಅಧಿಕಾರಿಯಾಗಿ ಒಬ್ಬ ಲೋರ್ಡ ಪ್ರೆಸಿಡೆಂಟ ಇರಬೇಕು ಇನ್ನು ಇತರ ಎಷ್ಟು ಮಂದಿ ಜಡ್ಜಿ ಇರಬೇಕು ಎಂಬುದನ್ನು ಪಾರ್ಲಿಮೆಂಟಿನವರು ಸಮಯಾನುಸಾರವಾಗಿ ನಿರ್ಣಯಿಸಬೇಕು ಲೋರ್ಡ ಪ್ರೆಸಿಡೆಂಟರನ್ನೂ ಇತರ ಜಡ್ಜಿಗಳನ್ನೂ ಗವರ್ನರ ಜನರಲರು ನೇಮಿಸುವರು ಇವರ ಸಂಬಳವನ್ನು ಪಾರ್ಲಿಮೆಂಟಿನವರು ನಿರ್ಣಯಿಸಬೇಕು ಈ ಜಡ್ಜಿಗಳನ್ನು ಪಾರ್ಲಿಮೆಂಟಿನವರು ಗವರ್ನರ ಜನರಲರಿಗೆ ತಿಳಿಸಿದೊಡನೆ ಇವರನ್ನು ಕೆಲಸದಿಂದ ತಗಿಸಬೇಕು.

ಈ ಕೋರ್ಟಿನವರು (೧) ಪಾರ್ಲಿಮೆಂಟಿಗೂ ಕೊಮನ್ ವೆಲ್ತಿನೊಳಗೆ ಇರುವ ಯಾವನೇ ಮನುಷ್ಯನಿಗೂ ಇರುವ ವ್ಯಾಜ್ಯಗಳನ್ನೂ (೨) ಕೊಮನ್ ವೆಲ್ತಿನಲ್ಲಿರುವ ಇತರ ದೇಶದ ರಾಯಭಾರಿಗಳ ಸಂಬಂಧಪಟ್ಟ ನ್ಯಾಯಗಳನ್ನೂ (೩) ಒಂದು ಸಂಸ್ಥಾನಕ್ಕೂ ಇನ್ನೊಂದು ಸಂಸ್ಥಾನಕ್ಕೂ ಇರುವ ನ್ಯಾಯಗಳನ್ನೂ (೪) ಸಂಸ್ಥಾನಗಳಲ್ಲಿಯ ಹೈಕೋರ್ಟಿನ ತೀರ್ಪಿನ ಮೇಲೆ ತನಿಖೆ ಈ ಸುಪ್ರೀಮ ಕೋರ್ಟಿನವರ ತೀರ್ಪಿನ ಮೇಲೆ ಅಪೀಲು ಇರುವುದಿಲ್ಲ ಆದರೆ ಸುಪ್ರೀಮ ಕೋರ್ಟಿನವರೇ ತಮ್ಮಿಂದ ತೀರ್ಮಾನ ಮಾಡಲು ಸಾಧ್ಯವಿಲ್ಲವೆಂದು ಕಂಡುಬಂದರೆ ಮಾತ್ರ ಈ ಕೋರ್ಟಿನವರೇ ಮಹಾರಾಜರ ಕೌನ್ಸಿಲಿಗೆ ವ್ಯಾಜ್ಯಗಳನ್ನು ಕಳುಹಿಸಬಹುದು

ಹೈ ಕೋರ್ಟುಗಳು

ಈ ಕೋರ್ಟಿನಲ್ಲಿ ಒಬ್ಬ ಚೀಫ್ ಜಸ್ಟಿಸ್ ಇರುವರು. ಇನ್ನೂ ಆಯಾ ಸಮಯಕ್ಕನುಸಾರವಾಗಿ ಬೇಕಾದಷ್ಟು ಮಂದಿ ಇತರ ಜಡ್ಜಿಗಳನ್ನು ಗವರ್ನರ ಜನರಲರು ನೇಮಿಸಬೇಕು ಪ್ರತಿ ಒಂದು ಹೈ ಕೋರ್ಟಿನಲ್ಲಿ ಚೀಫ್ ಜಸ್ಟೀಸರೂ ಜಡ್ಜರ ಸಂಖ್ಯೆಯೂ ಕೂಡಿ ೫ಕ್ಕೆ ಮೀರಬಾರದು ಈ ಜಡ್ಜರಾಗತಕ್ಕವರು ಹೈ ಕೋರ್ಟಿನಲ್ಲಿ ಎಡ್ವೋಕೇಟರಾಗಿ ೧೦ ವರುಷಗಳ ಅನುಭವ ಉಳ್ಳವರಾಗಿರಬೇಕು ಇವರ ಸಂಬಳದ ದರವನ್ನು ಗವರ್ನರ ಜನರಲರು ನಿರ್ಣಯಿಸುವರು ಈ ಕೋರ್ಟಿನವರಿಗೆ ಎಲ್ಲಾ ಜಿಲ್ಲಾ ಜಡ್ಜರ ಕೋರ್ಟುಗಳ ಮೇಲು ತನಿಖೆ

(೧೫ನೇ ಪೇಜಿಗೆ ಮುಂದರಿಸಿಯದೆ)

ನಿಮ್ಮ ಕನಸು ನಿಜವಾಗುವುದು,

ಮಾತೃಪ್ರೇಮದ ಅನುಭವವನ್ನು ಪಡೆಯಬೇಕೆಂದು ಕುತೂಹಲಿಗಳಾಗಿರುವ ಹೆಂಡೆಂದಿರು ಸಾವಿರಾರು ಇರುವರು. ಮಗುವಿನ ಕೋಮಲ ಕರಗಳು ತನ್ನ ಮೈ ಮೇಲೆ ಆಡುತ್ತಿರಬೇಕೆಂದು ಪ್ರತಿಯೊಬ್ಬ ಸ್ತ್ರೀಯಲ್ಲಿಯೂ ಬಹಳ ಅಭಿಲಾಷೆ ಇದ್ದೇ ಇರುವುದು. ಆದರೆ, ಒಮ್ಮೊಮ್ಮೆ ಹೆಂಡೆಂದಿರಲ್ಲಿ ಅನಾರೋಗ್ಯವಿದ್ದರೆ ಅವರ ಈ ಅಭಿಲಾಷೆಯು ಫಲಿಸಲಾರದು. ಅನಾರೋಗ್ಯವನ್ನು ಹೋಗಲಾಡಿಸಿದರೆ ಅವರ ಕನಸು ನಿಜವಾಗುವದು. ಮದುವೆಯಾಗಿ ಹಲವು ವರ್ಷಗಳ ವರೆಗೆ ಮಕ್ಕಳಿಲ್ಲದೆ ಕೊರಗುತ್ತಿದ್ದು ಕೊನೆಗೆ ಮಕ್ಕಳಾದ ತಾಯಂದಿರಿಂದ ಹಲವು ಪತ್ರಗಳು ನಮಗೆ ಬಂದಿರುತ್ತವೆ. **ಹೆಂಗಸರಿಗಾಗಿಯೇ ಇರುವ ಫೆಲೂನಾ ಮಾತ್ರೆಗಳನ್ನು** ಉಪಯೋಗಿಸಿ ಪ್ರತಿಫಲವಾಗಿ ದೊರಕಿದ ಆರೋಗ್ಯವೇ ಇದಕ್ಕೆ ಕಾರಣವೆಂದು ಅವರೆನ್ನುವರು.

ಈ ಕೆಳಗಿನ ಪತ್ರವನ್ನು ಪ್ರಕಟಿಸಲು ನಾವು ಅಧಿಕಾರಹೊಂದಿರುತ್ತೇವೆ.

"ಫೆಲೂನಾ ಮಾತ್ರೆಗಳನ್ನು ಉಪಯೋಗಿಸಿ ನನ್ನ ಪತ್ನಿಗೆ ಲಭಿಸಿದ ಉಪಕಾರವನ್ನು ನಾನು ಎಂದಿಗೂ ಮರೆಯೆನು. ಅದನ್ನು ಉಪಯೋಗಿಸಲು ಪ್ರಾರಂಭಿಸಿದಂದಿನಿಂದ ಅವಳ ಜೀವನದಲ್ಲಿ ಒಂದು ಪರಿವರ್ತನೆಯೇ ಉಂಟಾಗಿ, ಅವಳು ಒಂದು ಅಂದವಾದ ಸುಖಿಯಾದ ಶಿಶುವನ್ನು ಪ್ರಸವಿಸಿರುವಳೆಂದು ತಿಳಿಸಲು ನಾನು ಸಂತೋಷಪಡುತ್ತೇನೆ ಅಳೆಯು ಎಂದಿಗೂ ತಾಯಿಯಾಗಳೆಂದು ನಾನು ತಿಳಿದಾಗ, ನೀವು ಇಂತಹ ಗುಣಕಾರಿಯಾದ ಔಷಧಿಯನ್ನು ಒದಗಿಸುವುದಕ್ಕಾಗಿ ನನ್ನ ಕೃತಜ್ಞತೆಯನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೆ!"

(ಸಹಿ) ಪಿ ಇ ರೆ ಸ್ಕ ಸ್.

(ವಿಳಾಸ) ಪಿ. ಜಿ. ಪಾರ್ವಿನ್, ಮೌಂಟ್ ಪ್ಲೆಜಂಟ್, ಸಿ. ಪಿ.

ಹೆಂಗಸರಿಗೆ ಹೆಚ್ಚಾಗಿ ಇರುವ ನೋವು, ಬೇನೆಗಳನ್ನು ಹೋಗಲಾಡಿಸಬೇಕಾದರೆ, ಮತ್ತು ದಣುವಾಗುವದನ್ನು ನಿಲ್ಲಿಸಬೇಕಾದರೆ ಈ ಔಷಧಿಯನ್ನು ಸೇವಿಸಬೇಕು ಇದರಿಂದ ಒಳ್ಳೆಯ, ಕಾಂತಿಯುಕ್ತವಾದ, ಉತ್ಕೃಷ್ಟವಾದ ಆರೋಗ್ಯವು ಲಭಿಸುವದು

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸ್‌ರಿಂದಲೂ ಮಾರಲ್ಪಡುವವು



ಬಾಟಲಿಗೆ ರೂ 2/4

ಮುಖ್ಯ ಏಜಂಟರ — ಪಟೇಲ್ ವ ಕ್ಟ ಧೊಂಡಿ ಪೋಸ್ಟ್ ಆಫೀಸ ಬಾಕ್ಸ 838, ಮುಂಬಾಯಿ

ಮದರಾಸು ಸಂಸ್ಥಾನಕ್ಕೆ—

ದಾದಾ ಎಂಡ್ ಕೊ.,

260 ಚೈನಾ ಬಜಾರ್ ರೋಡ್ ಮದರಾಸು

ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕೆಂಪು ಕಟ್ಟು [illegible]

Product of Graham Remedies Ltd., Cape Town, S A

ಕೆಮ್ಮಿನ ಔಷಧಿ.

ಕೆಮ್ಮು ಕಫ ಉಬ್ಬಸ ಗೂರಲು ಮೊದಲಾದ ರೋಗಗಳಿಗೂ, ಶ್ವಾಸನಾಳದ ವ್ಯಾಧಿಗಳಿಗೂ [illegible] ಔಷಧಿಯಾಗಿದ್ದು ಸ್ವಲ್ಪದರಲ್ಲಿ ಶಾಶ್ವತವಾದ ಗುಣಕೊಡುವುದು

ಅಲ್ಪ [illegible] ಉಚಿತವಾಗ [illegible] ಬಾಟಲಿಗೆ ರೂಪಾಯಿ 1 — 0

ಕ್ರಯದ ಪಟ್ಟಿಗೂ ಮಾಹಿತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಮ್. ಡಿ ವ್ಹೋರಾ ಮತ್ತು ಕಂಪೆನಿ.,

ಚಿಲ್ಲರೆ ಮತ್ತು ದಿನಸು ಔಷಧಿ ವ್ಯಾಪಾರಿಗಳು

P O ಬಾಕ್ಸ್ [illegible] ಮುಂಬಯಿ

ಮಂಗಳೂರಲ್ಲಿ ಸ್ಥಾಪಿಸಬೇಕಾದ ಹಿಂದೂ ಗಾಯನ ಶಾಲೆ

ಈಗಿನ ವಿದ್ಯಾಶಾಲೆಗಳಲ್ಲಿ ಗಾಯನ ವಿದ್ಯೆಯನ್ನು, ಚಿತ್ರಕಲೆಯ ವಿದ್ಯೆಯನ್ನು ಕೈಗಾರಿಕೆ ವಿದ್ಯೆಗಳನ್ನು ಕಲಿಸುವ ಕ್ರಮ ಬಾರದಿಲ್ಲ. ಎಲ್ಲಾ ವಿದ್ಯೆಗಳನ್ನು ಕಲಿಸಿದರೂ ಈ ಮೂರು ತರದ ವಿದ್ಯೆಗಳ ತಿಳುವಳಿಕೆ ಇಲ್ಲದಿದ್ದರೆ ರಕ್ತವಾಗಿರದಿಲ್ಲದ ಮನುಷ್ಯ [illegible] ಆಗೆವುದು. ಕೈಗಾರಿಕೆಯು ಮನುಷ್ಯನಿಗೆ ತನ್ನ ಊಟಕ್ಕೂ ಕೂಟ ಉಡುವಕ್ಕೂ ದಾರಿಯನ್ನು ತೋರಿಸುವದು. ಚಿತ್ರಕಲೆಯ ವಿದ್ಯೆಯು ಕೈಗಾರಿಕೆಗೆ ಬಹಳ ಉಪಯುಕ್ತವಾಗಿದೆ. ಚಿತ್ರಕಲೆಯ ಚರಿತ್ರೆ, ಭೂಗೋಳ, ಪ್ರಕೃತಿ ವಿಜ್ಞಾನ ಶಾಸ್ತ್ರ, ವೈದ್ಯಶಾಸ್ತ್ರ, ಇಂಜಿನಿಯರಿಂಗ ಯಂತ್ರ ಸಾಧನೆ ಇವುಗಳಲ್ಲಿ ಪ್ರತಿ ಒಂದಕ್ಕೂ ಅಗತ್ಯವಾಗಿದೆ. ಅದಲ್ಲದೆ ನಮ್ಮ ಮನೋಭಾವನೆಗಳನ್ನು ಚಿತ್ರಕಲೆಯ ಮೂಲಕ ತೋರಿಸಲು ಸಾಧ್ಯವಾಗುವದು. ಚಿತ್ರಕಲೆಯಿಂದ ಮನಸ್ಸಿನ ದುಃಖವನ್ನು ಹೋಗಲಾಡಿಸಬಹುದು. ಈಗ ಶಾಲೆಗಳಲ್ಲಿ ಕಲಿಸುವ ಚಿತ್ರಕಲೆಯೂ ಮೇಲಿನ ಯಾವ ಪ್ರಯೋಜನವನ್ನು ಪಡೆಯುವದು ಉನ್ನತ ಸ್ಥಿತಿಯನ್ನು ಪಡೆದಿರುವುದಿಲ್ಲ.

ಗಾಯನದ ಮಹತ್ವ

ಗಾಯನವು ಮನಸ್ಸಿಗೆ ಬಹಳ ಸಂತೋಷವನ್ನು ಉಂಟುಮಾಡುತ್ತದೆ. ದುಃಖಸಾಗರದಲ್ಲಿ ಮುಳುಗಿದ ಮನುಷ್ಯನು ದಾರಿಯಲ್ಲಿ ಹೋಗುವಾಗ ಎಲ್ಲಿಯಾದರೂ ಗಾನವನ್ನು ಕೇಳಿದರೆ ಕೂಡಲೇ ಅಲ್ಲಿಯೇ ನಿಂತುಬಿಟ್ಟು, ತನ್ನ ದುಃಖವನ್ನು ಒಂದು ಗಳಿಗೆಗಾದರೂ ಮರೆತುಬಿಡುವನು. ಮನುಷ್ಯರ ಎಲ್ಲಾ ತರದ ಸುಖಸಂತೋಷಗಳಿಗೂ ಗಾಯನವು ಅಗತ್ಯವಾಗಿದೆ. ಈಗ ಓಪರೇಶನ್ ಮುಂತಾದವುಗಳನ್ನು ಮಾಡುವಾಗ ಗಾನವನ್ನು ಮಾಡಿ ಓಪರೇಶನಿನ ನೋವು ತಿಳಿಯದಂತೆ ರೋಗಿಯ ಮನಸ್ಸನ್ನೇ ಆ ಕಡೆಗೆ ಎಳೆಯುವರು. ಈ ಸಂಗತಿಯಿಂದ ಸರಕಾರವೂ, ಜನಸಾಮಾನ್ಯರೂ ಗಾಯನದ ವಿದ್ಯೆಗೆ ಉತ್ತೇಜನವನ್ನು ಕೊಡಬೇಕಾದ ಸಮಯವು ಬಂದೊದಗಿದೆ. ವಿದ್ಯೆಯಲ್ಲಿ ಮೂರು ವಿಧಗಳಿವೆ. ಒಂದು ಯಾಂತ್ರಿಕ, ಎರಡು ಮಾನಸಿಕ ಮೂರು ಆತ್ಮೀಕ, ಗಾಯನವು ಮನುಷ್ಯನಿಗೆ ಈ ಮೂರು ವಿದೆಗಳೂ ಬೇಕಾಗಿವೆ. ಯಾಂತ್ರಿಕ ವಿದ್ಯೆಯು ಮನುಷ್ಯನಿಗೆ ಮೃಗಸ್ವಭಾವವನ್ನು ಕೊಡುತ್ತದೆ. ಸಾಹಿತ್ಯವು ಮನುಷ್ಯ ಸ್ವಭಾವವನ್ನು ಕೊಡುತ್ತದೆ, ಚಿತ್ರಕಲೆ ಮತ್ತು ಗಾನ ವಿದ್ಯೆಯು ದೇವತೆಗಳ ಸ್ವಭಾವವನ್ನುಂಟುಮಾಡುತ್ತದೆ. ಪ್ರತಿ ಒಂದರಲ್ಲಿಯೂ ಬೇರೆ ಬೇರೆ ಮೆಟ್ಟಿಲುಗಳಿವೆ. ಮೇಲಿನ ಮೆಟ್ಟಿಲನ್ನು ಹತ್ತಬೇಕಾದರೆ ಎಲ್ಲಾ ಮೆಟ್ಟಿಲುಗಳಲ್ಲಿ ಅತಿ ಉನ್ನತವಾದ ಮೆಟ್ಟಿಲು ತಿಳಿದ ಚಿತ್ರಕಲೆ ಮತ್ತು ಗಾಯನ ವಿದ್ಯೆಯ ಅಭಿವೃದ್ಧಿಯನ್ನು ಹೊಂದಬೇಕು. ಗಾಯನವು ಮನಸ್ಸಿನಲ್ಲಿ ಸದ್ಗುಣಗಳನ್ನುಂಟುಮಾಡುತ್ತದೆ. ಬಹು ಬಗೆಯ ಲೆಕ್ಕಗಳನ್ನು ಕಲಿಯುವುದರಿಂದ ಮನುಷ್ಯನ ಬುದ್ಧಿಶಕ್ತಿಯನ್ನು ಅಭಿವೃದ್ಧಿಪಡಿಸಿ ಧನ ಸಂಪಾದನೆಯ ದಾರಿಯನ್ನು ತೋರಿಸುತ್ತದೆ. ಆದರೆ ಗಾಯನ ವಿದ್ಯೆಯು ಸುಖಸಂತೋಷವನ್ನುಂಟುಮಾಡುವುದು.

ಹಿಂದೂ-ಮುಸಲ್ಮಾನ ರಾಜರ ಕಾಲದಲ್ಲಿ ಗಾಯನದ ಸ್ಥಿತಿ

ಪುರಾತನ ಕಾಲದ ಹಿಂದೂ ಗಾಯನ ವಿದ್ಯೆಯು ಉನ್ನತಾವಸ್ಥೆಯನ್ನು ಪಡೆದಿತ್ತು. ಹಿಂದೂರಾಜರು ಗಾಯನ ವಿದ್ಯೆಗೆ ಹೆಚ್ಚು ಪ್ರೋತ್ಸಾಹವನ್ನು ಕೊಡುತ್ತಿದ್ದರು. ಗಾಯಕರಿಗೂ ಭರತ ಶಾಸ್ತ್ರವನ್ನು ಕಲಿತವರಿಗೂ ರಾಜಾಸ್ಥಾನದಲ್ಲಿ ಹೆಚ್ಚು ಮರ್ಯಾದೆಯು ಸಿಕ್ಕುತ್ತಿತ್ತು. ಈ ವಿದ್ಯೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ ರಾಜರು ತಮ್ಮ ಸ್ವಂತ ಹಣವನ್ನು ಖರ್ಚು ಮಾಡುತ್ತಿದ್ದರು. ಪ್ರಾಚೀನರ ವೇದಗಳನ್ನೂ ಶಾಸ್ತ್ರಗಳನ್ನೂ, ಕ್ಷತ್ರಿಯರು ಯುದ್ಧವಿದ್ಯೆಯನ್ನು, ವೈಶ್ಯರು ವಾಣಿಜ್ಯ ಶಾಸ್ತ್ರವನ್ನೂ ಯಾವ ರೀತಿಯಲಿ ಕಲಿಯುತ್ತಿದ್ದರೋ ವೇಶ್ಯಾಸ್ತ್ರೀಯರು ತಮ್ಮ ಜೀವಕಾಲವನ್ನು ಗಾಯನ ವಿದ್ಯೆಯನ್ನು ಕಲಿಯುವದರಲ್ಲಿಯೂ ಭರತ ಶಾಸ್ತ್ರವನ್ನು ಕಲಿಯುವುದರಲ್ಲಿಯೂ ಕಳೆಯುತ್ತಿದ್ದರು. ಪ್ರತಿ ರಾಜಧಾನಿಯಲ್ಲಿಯೂ ಇವರ ಪ್ರತ್ಯೇಕ ಕೇರಿಗಳೇ ಇದ್ದವು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಂಗಳೂರಲ್ಲಿಯೂ ಬಾರಕೂರಿನಲ್ಲಿಯೂ ಬಸರೂರಿನಲ್ಲಿಯೂ ಇವರ ಕೇರಿಗಳು ಈಗಲೂ ಇರುವುದನ್ನು ನೋಡಬಹುದು. ಕೊಯಮುತ್ತೂರ ತಂಜಾವೂರ, ಮಧುರೆ, ತಿರುಚನಾಪಳ್ಳಿ, ತ್ರಿಶುರ ಈ ಊರುಗಳು ಪುರಾತನ ಕಾಲದ ರಾಜರ ರಾಜಧಾನಿಗಳಾಗಿದ್ದು ಗಾನವಿದ್ಯೆಯು ಉನ್ನತಿಯನ್ನು ಹೊಂದಿತ್ತು. ಈಗಲೂ ಅಲ್ಲಿರುವ ವೇಶ್ಯಾಸ್ತ್ರೀಯರಿಂದಲೇ ಈ ವಿದ್ಯೆಯು [illegible] ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ವಿದ್ಯೆಯು [illegible] ಯಾವ ತರದ ಪ್ರೋತ್ಸಾಹವೂ ಇಲ್ಲ.

ಮುಸಲ್ಮಾನ ಅರಸರು ಆಳುವ [illegible] ಗಾಯನ ವಿದ್ಯೆಯು ಕಡೆಗೆ ಮನಸ್ಸು ಕೊಡುವದು [illegible] ಮನಸ್ಸು ಚಲಿಸಿತು. ಗಾಯನ ವಿದ್ಯೆಯು [illegible] ಯಲಾರಂಭಿಸಿತು.

ಈಗಿನ ಅವಸ್ಥೆ

ಪಾಶ್ಚಿಮಾತ್ಯ ನಾಗರೀಕತೆಯು ಇಂಡಿಯಾದ [illegible] ಹರಡಲಾರಂಭಿಸಿದ ಮೇಲೆ ಇಂಡಿಯಾದ ಇತರ ಎಲ್ಲಾ [illegible] ಭಿನ್ನ ರೀತಿಯಲ್ಲಿಯೇ ಈ ವಿದ್ಯೆಯೂ ಮೂಲೆಗೆ [illegible] ಗಾಯನದ ಕಡೆಗಿರುವ ಮನಸ್ಸು ಬೋಲ್ಡ್‌ನಸ ಕಡೆಗೆ [illegible] ಸಿತು. ವೇಶ್ಯಾಸ್ತ್ರೀಯರು ಗಾಯನಮಾಡಿ [illegible] ಯಜಮಾನ ಯಜಮಾನಿಯರೆ ಡೆನ್ಸಮಾಡಲಾರಂಭಿಸಿ [illegible] ಗಾಯನ ಮಾಡಲಿಕ್ಕೆ ಹಾರಮೋನಿಯಮ್ ಬಂತು. ಗಾನಮಾಡುವ [illegible] ಹೋಯಿತು

ಈಗ ನಾಟಕ ಮಂಡಳಿಗಳು ಗಾಯನ ವಿದ್ಯೆಯನ್ನು ಸಾಯದಂತೆ ಬದುಕಿಸುತ್ತಿವೆಯಾದರೂ ಕ್ರಮವಾದ ಗಾಯನ ಕಲಿಸುವ ಸಂಸ್ಥೆಗಳಿಲ್ಲದೆ ರಾಗಗಳ ಜ್ಞಾನವೂ, ತಾಳಗಳ ಜ್ಞಾನವೂ ಸರಿಯಾಗಿ ಇಲ್ಲವಾಗಿ ಹಾಡುವವರು ಯಾವ ರಾಗ ಯಾವ ತಾಳದಲ್ಲಿ ಹಾಡುತ್ತಾರೆಂದು ತಿಳಿಯಲಿಕ್ಕೆ ಹಾಡುವವರಿಗೂ ಕೇಳುವವರಿಗೂ ಜ್ಞಾನವಿಲ್ಲದೆ ಸರಿಯಾವುದು, ತಪ್ಪುಯಾವುದೆಂದು ತಿಳಿಯಲು ಸಾಧ್ಯವಿಲ್ಲವಾಗಿದೆ. ಇಂಪಾದ ಸ್ವರದಿಂದ ಹಾಡಿದರೆ ಗಾಯನವು ಚಲೋದೆಂಧಾಯಿತು. ಭರತ ಶಾಸ್ತ್ರದ ಪುಸ್ತಕಗಳ ಗೆದ್ದಲ ಪಾಲಾದವು. ಈಗ ಯಾವ ರೀತಿಯಲ್ಲಿ ಕುಣಿದರೂ ಅದು ಕುಣಿತ ಗೆಜ್ಜೆಯ ಶಬ್ದವು ಕೇಳಿದರಾಯಿತು

ಒಟ್ಟಾರೆ ಈಗ ಗಾಯನ ವಿದ್ಯೆಗೆ ಇಂಡಿಯಾದಲ್ಲಿ ರಾಜಾಶ್ರಯವು ತಪ್ಪಿಹೋಗಿಯದೆ. ಪಾಶ್ಚಿಮಾತ್ಯರು ಹಿಂದು ಗಾಯನವು ಶಾಸ್ತ್ರೀಯವಲ್ಲವೆಂದು ಹೇಳುತ್ತಿರುವರು. ಕೆಲವು ವರುಷಗಳ ಹಿಂದೆ ಹಿಂದು ವೈದ್ಯವೇ ಶಾಸ್ತ್ರೀಯವಲ್ಲನೆಂದು ಸರಕಾರವು ಹೇಳುತ್ತಿತ್ತು. ಈಗ ಅವರೇ ಇದು ಶಾಸ್ತ್ರೀಯವಾದದೆಂದು ಒಪ್ಪಲಾರಂಭಿಸಿರುವರು. ಅಲ್ಲಲ್ಲಿರುವ ಆಯುರ್ವೇದಿಕ್ ಕೊಲೆಜ ಗಳನ್ನೂ ಶಾಲೆಗಳನ್ನೂ ಮಂಜೂರು ಮಾಡುತ್ತಿರುವರು. ಆಯುರ್ವೇದೀಯ ಆಸ್ಪತ್ರೆಗಳನ್ನಿಡುತ್ತಿರುವರು. ಖಗೋಳ ಶಾಸ್ತ್ರವು ಇದು ಎಂದು ಒಪ್ಪುತ್ತಿರುವರು. ರಾಮಾಯಣ ಭಾರತಗಳು ನಂಬಲಿಕ್ಕೆ ಅಯೋಗ್ಯವಾದ ಕಥೆಗಳೆಂದು ಹೇಳುತ್ತಿದ್ದರು. ಈಗ ಅವುಗಳು ನಿಜವಾಗಿ [illegible] ಚರಿತ್ರಾ ಸಂಗತಿಗಳೆಂದು ಒಪ್ಪುತ್ತಿರುವರು.

ಗಾಯನ ವಿದ್ಯೆಗೂ ಜನಸಾಮಾನ್ಯರು ಪ್ರೋತ್ಸಾಹವನ್ನು ಕೊಟ್ಟು ಅದನ್ನು [illegible] ಗಾಯನ ವಿದ್ಯೆಯು ಶಾಸ್ತ್ರೀಯ ರೀತಿಯಲ್ಲಿ ಇಂತಿ [illegible] ತೋರಿಸಿದರೆ ಸರಕಾರವು ಅದಕ್ಕೆ ಒಪ್ಪಿ ತಕ್ಕ ಪ್ರೋತ್ಸಾಹವನ್ನು ಕೊಡುವುದರಲ್ಲಿ ಸಂದೇಹವಿಲ್ಲ. ಆದರೆ ಅಂಗಡಿಯನ್ನು ಇಡೆ [illegible] ಬರಲಿಕ್ಕಿಲ್ಲ ಎಂಬ ಶಂಕೆಯೇ ಗಾಯನ ಶಾಲೆಯನ್ನು ಮೊದಲಾಗಿ [illegible] ನಂತರ ಪ್ರೋತ್ಸಾಹವು ತಾನಾಗಿಯೇ ದೊರಕುವದು.

ಗಾಯನ ಶಾಲೆಯ ಅಥವಾ ಗಂಧರ್ವ ವಿದ್ಯಾಲಯದ ಉದ್ದೇಶ್ಯ.

೧) ಗಾಯನ ಶಾಸ್ತ್ರವನ್ನು ಅಭಿವೃದ್ಧಿಗೊಳಿಸುವುದು ೨) ಪ್ರತಿವರುಷವೂ ಮೂರೆಯು ಸವ [illegible] ಈಗ ಕ್ರಿಸ್ತಮಸ್ ರಜಾ ಕಾಲದಲ್ಲಿಯಾಗಲೀ ಗಾಯನ ಸಭೆಗಳನ್ನು ಜರಗಿಸುವದು ೩) ಗಾಯನ ವಿದ್ಯೆಯ ಸಮ್ಬಂಧವಾದ ಗ್ರಂಥಗಳನ್ನು ಹಾಡುಗಳನ್ನು ಸಂಗ್ರಹಿಸಿ ಅವುಗಳನ್ನು ಅಚ್ಚುಹಾಕಿಸುವದು ೪) ಗಾಯನ ಸಮ್ಬಂಧವಾದ ಒಂದು ಪುಸ್ತಕ ಭಂಡಾರವನ್ನೂ ಗಾಯನ ಸಾಹಿತ್ಯಗಳ ಒಂದು ಸಂಗ್ರಹಾಲಯವನ್ನೂ ಸ್ಥಾಪಿಸುವುದು ೫) ಒಳ್ಳೇ ಗಾಯಕರಿಗೆ ಧನಸಹಾಯ ಮಾಡುವುದು. ಅವರನ್ನು ವಿದ್ಯಾವಂತರನ್ನಾಗಿ [illegible] ಸಾಧಿಸುವದು ೬) ಗಾಯನ ವಿದ್ಯೆಯಲ್ಲಿ [illegible] ೭) ಒಂದು ಮಂದಿರವನ್ನು ಕಟ್ಟಿಸಿ ಅದರಲ್ಲಿ ಗಂಧರ್ವ ವಿದ್ಯಾಲಯವನ್ನು ಇಟ್ಟು ವಸ್ತು ಸಂಗ್ರಹಾಲಯವನ್ನು ಪುಸ್ತಕ ಭಂಡಾರಾಲಯವನ್ನು ಆ ಮಂದಿರಕ್ಕೆ ಕೂಡಿಸುವದು.

ಈ ತರದ ಗಂಧರ್ವ ವಿದ್ಯಾಲಯಗಳನ್ನು ಇಡುವುದರಿಂದ ಹಲವು ತರದ ಪ್ರಯೋಜನಗಳಿವೆ. ಗಾಯನ ವಿದ್ಯೆಯ ಮಹತ್ವವು ಉಳಿಸಿದರೆ ಆಗವುದು. ನಾನಾ ತರದ ಮೂಲೆಗೆ ಬಿದ್ದ ಗಾಯನ ಸಾಮಗ್ರಿಗಳು [illegible] ಮೂಲೆಗೆ ಬಿದ್ದು ಗೆದ್ದಲು ಪಾಲಾದ ಸಂಗೀತ ಶಾಸ್ತ್ರದ ಪುಸ್ತಕಗಳು [illegible] ಬರುವವು. ಅಚ್ಚಾದ ಮೇಲೆ ಎಲ್ಲರಿಗೂ ಸಿಕ್ಕಲು [illegible] ಕೂಲವಾಗವುದು.

[illegible] ಗಂಧರ್ವ ವಿದ್ಯಾಲಯವನ್ನು ಸ್ಥಾಪಿಸುವುದಕ್ಕೆ ಎಲ್ಲರೂ ವಿರೋಧಿಗಳಾಗಿದ್ದರೂ [illegible] ವರುಷಗಳ ಈಚೆಗೆ ಒಂದು ಗಾಯನ ವಿದ್ಯಾಲಯವನ್ನು ಸ್ಥಾಪಿಸಿರುವರು. ಈಗ ಇಲ್ಲಿ ಮಹತ್ವದ ಕೆಲಸಗಳ [illegible] ಜರ್ಮನಿಯಲ್ಲಿಯೂ ಫ್ರಾನ್ಸ್ ದೇಶದಲ್ಲಿಯೂ, ಗಾಯನ ವಿದ್ಯಾಲಯಗಳೂ ಚಿತ್ರಕಲಾ ವಿದ್ಯಾಲಯಗಳೂ ಸಾಹಿತ್ಯ ವಿದ್ಯಾಲಯಗಳೂ ಹಲವು ಇವೆ. ಪುರಾತನ ಕಾಲದಲ್ಲಿ ಅರಸರು ಈ ವಿದ್ಯೆಗಳಿಗೆ ಯಾವ ತರದ ಮರ್ಯಾದೆಯನ್ನು ಕೊಡುತ್ತಿದ್ದರೋ ಅದೇ ತರದಲ್ಲಿ ಈಗ ಜನಸಾಮಾನ್ಯರು ಈ ತರದ ವಿದ್ಯಾಲಯಕ್ಕೆ ಮರ್ಯಾದೆಯನ್ನೂ ಧನಸಹಾಯವನ್ನೂ ಕೊಡುತ್ತಿರುವರು.

[illegible] ಮೈಸೂರ ಮಹಾರಾಜರೂ, ಬರೋಡಾ ಮಹಾರಾಜರೂ ಈ ವಿದ್ಯೆಗೆ ಹೆಚ್ಚು ಪ್ರೋತ್ಸಾಹವನ್ನು ಕೊಡುತ್ತಿರುವರು.

ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಇಟಲಿ ದೇಶಗಳಲ್ಲಿ ಇಂಥಾ ಗಂಧರ್ವ ವಿದ್ಯಾಲಯಗಳಿಗೆ ಸರಕಾರದಿಂದ ಧನಸಹಾಯವು ದೊರಕುತ್ತಿರುವುದು. ಒಸ್ಟ್ರಿಯಾ ದೇಶದಲ್ಲಿ ಸರಕಾರದಿಂದಲೇ ಸ್ಥಾಪಿಸಲ್ಪಟ್ಟ ಸಂಗೀತ ವಿದ್ಯಾಲಯಗಳಿವೆ. ಕಂದಾಯದ ಒಂದು ಪಾಲು ಹಣವನ್ನು ಈ ವಿದ್ಯೆಗಾಗಿ ಖರ್ಚು ಮಾಡಲೇ ಬೇಕೆಂಬುದೇ ಅವರ ಉದ್ದೇಶ್ಯಗಳಲ್ಲಿ ಒಂದಾಗಿದೆ

ಆದಿದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಮುಖ್ಯ ಪಟ್ಟಣವೂ ವಿದ್ಯಾವಂತರ ನೆಲೆವೀಡೂ ವಿದ್ಯಾಲಯಗಳ ಕೇಂದ್ರವೂ ಆದ ಮಂಗಳೂರಿನಲ್ಲಿ ಮೇಲಿನ ಉದ್ದೇಶ್ಯಗಳನ್ನು ಒಳಕೊಂಡಿರುವ ಒಂದು ಗಂಧರ್ವ ವಿದ್ಯಾಲಯವನ್ನು ಸ್ಥಾಪಿಸಲು ಪಟ್ಟಣಿಗರಿಗೆ ಉತ್ತೇಜನವನ್ನು ಪರಮಾತ್ಮನು ಕೊಡಲಿ

(ಗಣನೇ ಪೇಜಿನಿಂದ ಮುಂದುವರಿಸಿದ್ದು)

ಮಾಡುವ ಕೆಲಸವನ್ನು [illegible] ಕೊಟ್ಟ ತೀರ್ಪಿನ ಮೇಲಿನ ಅಪೀಲನ್ನು ಕೇಳತಕ್ಕ [illegible] ಅವರ ಕೋರ್ಟುಗಳ ಶಿಬಂದಿ ನೇಮಿಸುವ ಕೆಲಸವೂ ಇರುವುದು. ಅಗತ್ಯ ಕಂಡ ಕಡೆಗಳಲ್ಲಿ ಕೋರ್ಟುಗಳನ್ನು ಸ್ಥಾಪಿಸುವ ಅಧಿಕಾರವು ಗವರ್ನರ ಜನರಲರಿಗೆ ಇರುವುದು.

ಎಡ್ವೋಕೇಟ ಜನರಲ್

ಪ್ರತಿ ಒಂದು ಪ್ರಾಂತಿಕ ಸರಕಾರದವರು ಒಬ್ಬ ಎಡ್ವೋಕೇಟ ಜನರಲರನ್ನು ನೇಮಿಸುವರು.

ಆಸ್ತಿಗಳು, ಕಂದಾಯ ಮತ್ತು ಭಂಡಾರ

ಇಷ್ಟರ ವರೆಗೆ ೧೮೫೮, ೧೯೧೯, ೧೯೩೫ರ ಆಕ್ಟ ಪ್ರಕಾರ ಮಹಾರಾಜರ ಮತ್ತು ಸ್ಟೇಟ ಸೆಕ್ರೆಟರಿಯವರ ಸ್ವಾಧೀನವಿರುವಂಥಾ ಕೋಮನ್‌ವೆಲ್ತಿಗೆ ಸಮ್ಮಂಧಪಟ್ಟ ಆಸ್ತಿಗಳು ಇನ್ನು ಮುಂದೆ ಗವರ್ನರ ಜನರಲರ ಸ್ವಾಧೀನಕ್ಕೆ ಒಪ್ಪಿಸಲ್ಪಡುವವು. ಕೋಮನ್‌ವೆಲ್ತಿನ ಕಂದಾಯದ ಹಣವೆಲ್ಲವೂ ಕೋಮನ್‌ವೆಲ್ತಿಗಾಗಿ ಮಾತ್ರವೇ ಖರ್ಚುಮಾಡುವುದಕ್ಕಾಗಿ ಗವರ್ನರ ಜನರಲರ ಸ್ವಾಧೀನವಿರುವುದು.

ಪಾರ್ಲಿಮೆಂಟಿನವರು ಒಂದು ರೈಲ್ವೆ ಹಾರ್ಬರ ಫಂಡನ್ನು ಮಾಡಬೇಕಾಗುವುದು. ಈ ಹಣವು ರೈಲ್ವೇ ಟಪಾಲು ಮತ್ತು ಬಂದರುಗಳ ಇಲಾಖೆಗಳ ಕಂದಾಯದಿಂದ ಉತ್ಪತ್ತಿಯಾಗುವುದು ಮತ್ತು ಪಾರ್ಲಿಮೆಂಟಿನವರಿಂದ ಖರ್ಚುಮಾಡಲ್ಪಡುವುದು. ಈ ಹಣವು ಕೋಮನ್‌ವೆಲ್ತಿನ ಇತರ ಕೆಲಸಗಳಿಗಾಗಿ ಉಪಯೋಗಿಸಲ್ಪಡುವುದು. ಇಷ್ಟರ ವರೆಗೆ ೧೮೫೮ನೇ ಆಕ್ಟ ಪ್ರಕಾರ ಇಂಡಿಯಕ್ಕಾಗಿ ಈಸ್ಟ ಇಂಡಿಯಾ ಕಂಪೆನಿಯವರಿಗೆ ಇದ್ದ ಸಾಲ ೧೯೩೫ನೆ ಆಕ್ಟಿಗೆ ಅನುಸಾರವಾಗಿ ಇದ್ದ ಸಾಲ ಇನ್ನು ಮುಂದೆ ಇಂಡಿಯದ ಕಂದಾಯದಿಂದಲೇ ಕೊಡಬೇಕಾಗುವುದು.

ಕೋಮನ್‌ವೆಲ್ತು ಸ್ಥಾಪಿತವಾದೊಡನೆ ಕೋಮನ್‌ವೆಲ್ತಿನ ಮತ್ತು ಪ್ರತಿ ಒಂದು ಸಂಸ್ಥಾನದ ಪ್ರತಿನಿಧಿಗಳಿರುವ ಒಂದು ಕಮಿಶನನ್ನು ನೇಮಿಸಿ ಕೋಮನ್‌ವೆಲ್ತು ಸರಕಾರಕ್ಕೆ ಯಾವ ಯಾವ ಕಂದಾಯವು ಸಿಗಬೇಕ ಎಂಬವನ್ನು ಪ್ರಾಂತಿಕ ಸರಕಾರಕ್ಕೂ ಕೋಮನ್‌ವೆಲ್ತು ಸರಕಾರಕ್ಕೂ ಕಂದಾಯದ ವಿಷಯ ಯಾವ ತರದ ಸಮ್ಮಂಧವಿರಬೇಕ ಎಂಬುದನ್ನು ನಿರ್ಣಯಿಸಬೇಕು.

ಈ ಕಮಿಶನಿನವರು ನೆಲ ಜಲ, ವಾಯು ಸೈನ್ಯಕ್ಕಾಗಿ ಉದ್ಯೋಗಸ್ಥರ ತರಬೇತಿಯನ್ನು ಯಾವ ತರದಲ್ಲಿ ಮಾಡಬೇಕೆಂದು ನಿರ್ಣಯಿಸುವುದಕ್ಕಾಗಿ ಒಂದು ಕಮಿಟಿಯನ್ನು ನೇಮಿಸಬೇಕು. ಈ ಕಮಿಟಿಯವರು ಈ ತರಬೇತಿಗಾಗಿ ಎಷ್ಟು ಶಾಲೆಗಳು ಬೇಕು. ಎಷ್ಟು ಕೊಲೇಜುಗಳು ಬೇಕು ಎಂಬುದನ್ನೂ ಅವುಗಳ ಶಿಬಂದಿ ಇವುಗಳು ಎಲ್ಲಿರಬೇಕೆಂಬುದನ್ನೂ ಇವುಗಳಲ್ಲಿ ಕಲಿಸಬೇಕಾದ ವಿಷಯಗಳು ಯಾವವು ಎಂಬುದನ್ನು ನಿರ್ಣಯಿಸುವ.

ಕೋಮನ್‌ವೆಲ್ತಿನೊಳಗೆ ಪ್ರಾಥಮಿಕ ವಿದ್ಯೆಯನ್ನು ಯಾವ ರೀತಿಯಲ್ಲಿ ಅಭಿವೃದ್ಧಿಗೆ ತರಬಹುದು ಎಂಬುದನ್ನೂ ಹಿಂದುಳಿದವರನ್ನು ಮೇಲಕ್ಕೆ ತರುವ ಉಪಾಯಗಳು ಯಾವವು ಎಂಬುದನ್ನೂ ನಿರ್ಣಯಿಸುವುದಕ್ಕೆ ಒಂದು ಕಮಿಟಿಯನ್ನು ಮೇಲಿನ ಕಮಿಶನಿನವರು ನಿಯಮಿಸುವರು. ಇನ್ನು ಇತರ ಕಾರ್ಯಗಳಿಗಾಗಿ ಕಮಿಟಿಗಳನ್ನು ನೇಮಿಸುವ ಅಧಿಕಾರವು ಈ ಕಮಿಶನಿಗೆ ಇರುವುದು. ಈ ಕಮಿಶನಿನವರು ತನಿಖಿಯಾದ ನಂತರ ರಿಪೋರ್ಟನ್ನು ಗವರ್ನರ ಜನರಲರಿಗೆ ಕಳುಹಿಸುವರು. ಇವರು ತನ್ನ ಶಿಫಾರಸಿನೊಡನೆ ಇದನ್ನು ಪಾರ್ಲಿಮೆಂಟಿನ ಮುಂದೆ ಇಡುವರು. ಸಶೇಷ

ಅಮೇರಿಕದವರ ಕೈಗಾರಿಕೆ ಕ್ರಮಗಳಿಂದ ಇಂಡಿಯವು ಕಲಿತುಕೊಳ್ಳಬೇಕಾದ ಕೆಲವು ಸಂಗತಿಗಳು

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಯುರೋಪ ಖಂಡಕ್ಕೂ ಯುನೈಟೆಡ್ ಸ್ಟೇಟ್ಸಿಗೂ ಇನ್ನೊಂದು ವ್ಯತ್ಯಾಸವಿದೆ. ಯುರೋಪಿನಲ್ಲಿ ಹಲವು ತರದ ನಾಗರೀಕತೆಗಳು ಇವೆ. ಅಮೇರಿಕದಲ್ಲಿ ಒಂದೇ ನಾಗರೀಕತೆ ಆದುದರಿಂದ ಬೇರೆ ಬೇರೆ ನಾಗರೀಕತೆಗೆ ಬೇಕಾಗುವ ಹಲವು ವಿಧದ ವಸ್ತುಗಳನ್ನು ತಯಾರಿಸುವ ಅಗತ್ಯ ಬೀಳುವುದಿಲ್ಲ. ಒಂದೇ ನಾಗರೀಕತೆಯಾದುದರಿಂದ ಒಂದು ವಿಧದ ವಸ್ತುವನ್ನು ತಯಾರಿಸಿದರೆ ಸಾಕಾಗುತ್ತದೆ. ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹೋದರೂ ಎಲ್ಲಿ ಹೋದರೂ ಒಂದೇ ವಿಧದ ಸಾಮಾನು ಸಾಹಿತ್ಯಗಳು ಉಪಯೋಗಿಸಲ್ಪಡುತ್ತವೆ.

ಈ ಸೂತ್ರವನ್ನು ಅನುಸರಿಸಿ ಅಮೇರಿಕದ ಶ್ರೀಮಂತರು ಬಹಳ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಿರುವರು. ವ್ಯಾಪಾರದ ವಿಷಯ ಎಡವರಟೈಜ ಮಾಡುವುದರಲ್ಲಿ ಇವರನ್ನು ಮಿಗಿಲಾದವರೂ ಯಾರೂ ಇಲ್ಲ. ಇವುಗಳನ್ನು ಶಾಸ್ತ್ರೀಯ ರೀತಿಯಲ್ಲಿ ತಯಾರಿಸಿರುವರು. ಪ್ರತಿ ಒಂದು ಯುನಿವರ್ಸಿಟಿಯಲ್ಲಿಯೂ ಪ್ರಕಟನಾ ಮತ್ತು ಎಡವರಟೈಜಿಂಗ ಶಾಸ್ತ್ರಗಳನ್ನು ಕಲಿಸುವ ಕೊಲಿಜುಗಳೇ ಇವೆ. ಇದರಿಂದ ಈ ಶಾಸ್ತ್ರಗಳು ವೃದ್ಧಿಯಾದುದು ಮಾತ್ರವಲ್ಲ ಚಿತ್ರದ ಕೆಲಸವೂ ಬಣ್ಣದ ಕೆಲಸವೂ ಅಭಿವೃದ್ಧಿಯಾಗಿವೆ. ನಕ್ಷೆ ಕೆಲಸ ಕಲಿಸುವ ಕೊಲೇಜುಗಳೇ ಪ್ರತಿ ಒಂದು ಯುನಿವರ್ಸಿಟಿಯಲ್ಲಿ ಇವೆ. ಎಲ್ಲಿ ನೋಡಿದರೂ ವಿದ್ಯುಚ್ಛಕ್ತಿಯ ದೀಪಗಳ ಹತ್ತರ ನಾನಾ ವಿಧದ ಎಡವರಟೈಜಮೆಂಟುಗಳು, ಮಾಸಿಕ, ದೈನಿಕ, ಪತ್ರಿಕೆಗಳಲ್ಲಿಯೂ ಪ್ರತಿ ಒಂದು ಸ್ಟೇಶನಿನಲ್ಲಿಯೂ, ಓಣಿ ಓಣಿಗಳಲ್ಲಿಯೂ ಎಡವರಟೈಜುಗಳು ಕಂಡುಬರುತ್ತವೆ. ಇವುಗಳಲ್ಲಿ ವಸ್ತು ಗುಣ ರುಚಿ, ಪ್ರಯೋಜನಗಳನ್ನು ತೋರಿಸಿರುವರು. ಸ್ತ್ರೀರ ತೆಗಿಯುವಾಗಲೂ ಉಪಯೋಗಿಸುವ ನಾನಾ ತರದ ಸಾಬೂನುಗಳು, ಹಲ್ಲು ತಿಕ್ಕುವ ಬ್ರಶ್ಯಗಳು, ಮೋಟಾರು ಟಾಯರುಗಳು ಕಾಯಿಪಲ್ಯ ಹೆಚ್ಚುವ ಯಂತ್ರಗಳು ವಸ್ತ್ರ ಒಗೆಯುವ ಯಂತ್ರಗಳು ಇವುಗಳನ್ನು ಬೇರೆ ಬೇರೆ ಬಣ್ಣಗಳಿಂದ ಪ್ರೇಕ್ಷಕರ ಮನಸ್ಸನ್ನು ಎಳಕೊಳ್ಳುವ ರೀತಿಯಲ್ಲಿ ಚಿತ್ರಿಸಿರುವುದರಿಂದ ಅವುಗಳನ್ನು ನೋಡಿದ ಮಾತ್ರದಿಂದ ಅವುಗಳ ಕಡೆಗೆ ಮನಸ್ಸೆಳೆಯಲ್ಪಡುವದು. ಮಾರ್ಗಸ್ಥರ ಮನಸ್ಸನ್ನು ಅವುಗಳ ಕಡೆಗೆ ಸೆಳೆಯುವುದಕ್ಕಾಗಿ ಹೆಚ್ಚಾಗಿ ಸ್ತ್ರೀಯರ ನಾನಾ ಭಾವನೆಗಳನ್ನು ತೋರಿಸುವ ರೀತಿಯ ಚಿತ್ರಗಳು ಉಪಯೋಗಿಸಲ್ಪಟ್ಟಿವೆ. ಇವುಗಳನ್ನು ನೋಡಿದ ಕೂಡಲೇ ದಾರಿಯಲ್ಲಿ ಹೋಗುವವರು ಸ್ವಲ್ಪ ನಿಂತು ಓದಿಯೇ ಮುಂದರಿಯುವರು. ಬಸ್ಸುಗಳಲ್ಲಿಯೂ ಕಾರುಗಳಲ್ಲಿಯೂ ರೈಲ ಡಬ್ಬಿಗಳಲ್ಲಿಯೂ ಎಲ್ಲಾ ತರದ ನೋಟೀಸುಗಳೂ ಹಚ್ಚಲ್ಪಡುತ್ತವೆ. ಸಿನೆಮಾಗಳಲ್ಲಿ ಇವುಗಳು ತೋರಿಸಲ್ಪಡುತ್ತವೆ. ರೇಡಿಯೋ ಸ್ಟೇಶನುಗಳ ಮುಖಾಂತರ ಈ ಎಡವರಟೈಜಮೆಂಟುಗಳು ಪ್ರಕಟಿಸಲ್ಪಡುವುದರಿಂದ ಈ ಕಂಪನಿಗಳಿಗೆ ಹೆಚ್ಚು ಲಾಭವು ಸಿಕ್ಕುತ್ತದೆ. ಈ ರೀತಿಯಲ್ಲಿ ಅಮೇರಿಕವು ಜನರಿಗೆ ವ್ಯಾಪಾರ ವಿಷಯ ಅನುಭವಗಳನ್ನು ಕೊಡುತ್ತದೆ.

ಅಮೇರಿಕವು ಒಂದೇ ರಾಜ್ಯವಾಗಿರುವುದರಿಂದ ಎಡವರಟೈಜಮೆಂಟುಗಳ ಮುಖಾಂತರವೇ ಮಾತ್ರವೇ ಅಭಿವೃದ್ಧಿ ಹೊಂದುವುದಲ್ಲದೆ ಒಂದೇ ಕ್ರಮವು ದೇಶದ ಎಲ್ಲಾ ಭಾಗಗಳಲ್ಲಿಯೂ ಅನುಸರಿಸಲ್ಪಡುತ್ತದೆ. ಎಲ್ಲಾ ಪಟ್ಟಣಗಳೂ ಒಂದೇ ರೀತಿಯಲ್ಲಿ ಕಟ್ಟಲ್ಪಟ್ಟಿವೆ. ಎಲ್ಲಾ ರೈಲ ಮಾರ್ಗಗಳು ಒಂದೇ ರೀತಿಯಲ್ಲಿ ಕಟ್ಟಲ್ಪಟ್ಟಿವೆ. ಅಂಗಡಿಗಳ ಕ್ರಮವು ಒಂದೆ. ವರ್ತಮಾನ ಪತ್ರಿಕೆಗಳ ಕ್ರಮಗಳೂ ಒಂದೇ. ಪತ್ರಿಕೆಗಳನ್ನು ಮಾರುವ ಹುಡುಗರ ವಸ್ತ್ರ ಒಂದೇಯಾಗಿದೆ. ಪತ್ರಿಕೆಗಳು ಬೇಕೊ ಎಂದು ಕೇಳುವ ಶಬ್ದಗಳೂ ಒಂದೇ. ಇದರಿಂದ ಯಾವ ಪತ್ರಿಕೆಯೆಂದು ತಿಳಕೊಳ್ಳುವುದು ಸಹ ಕಷ್ಟವಾಗುತ್ತದೆ.

ಈ ರೀತಿಯಲ್ಲಿ ಎಲ್ಲಾ ವಿಧದ ಕ್ರಮಗಳು ದೇಶದ ಎಲ್ಲಾ ಭಾಗಗಳಲ್ಲಿಯೂ ಒಂದೇಯಾಗಿರುವುದರಿಂದ ತಯಾರಾಗುವ ಕೈಗಾರಿಕೆ ಸಾಮಾನುಗಳು ಹೆಚ್ಚಾಗಿ ತಯಾರಿಸಲ್ಪಡುತ್ತವೆ. ವ್ಯಯವು ಕಡಿಮೆಯಾಗುತ್ತದೆ. ಉಪಯೋಗಿಸುವ ಜನರ ಸಂಖ್ಯೆಯು ಹೆಚ್ಚಾಗುತ್ತದೆ. ಸಾಹುಕಾರರಿಗೆ ಸಿಕ್ಕುವ ಮುನಾಫೆಯು ಹೆಚ್ಚಾಗುತ್ತದೆ. ಕಂಪೆನಿಗಳ ಮಾಲೀಕರ ಐಶ್ವರ್ಯಕ್ಕೆ ಮಿತಿಯೇ ಇಲ್ಲ. ಕೆಲವು ಕೈಗಾರಿಕೆಗಳ ಯಜಮಾನರಿಗೆ ತಮ್ಮ ಐಶ್ವರ್ಯವು ಎಷ್ಟಿದೆ ಎಂದು ಗೊತ್ತೇ ಇಲ್ಲ. ವಿಪರೀತ ಗಳಿಕೆಯಿಂದ ತೆರಿಗೆಗಳನ್ನು ಸರಕಾರಕ್ಕೆ ಕೊಡುತ್ತಿರುವರು. ವಿಪರೀತ ಗಳಿಕೆಯಿಂದ ವಿದ್ಯಾ ಶಾಲೆಗಳಿಗೆ ದಾನ ಮಾಡುತ್ತಿರುವರು.

ಫೋರ್ಡ ಕಂಪೆನಿಯ ವಿಷಯ ಆಲೋಚಿಸಿದರೆ ಬಹಳ ವಿಶೇಷವಾಗಿದೆ. ಒಂದೊಂದು ಕೆಲಸಗಾರನು ಒಂದೊಂದೇ ಕೆಲಸವನ್ನು ಮಾಡುತ್ತಿರುವನು. ಹೀಗೆಯೇ ಒಬ್ಬನು ಅವನ ಜೀವನಕಾಲವೆಲ್ಲ ಒಂದೊಂದೇ ಕೆಲಸ ಮಾಡುತ್ತಿರುವನು. ಕೂಲಿಕಾರರ ಸಂಖ್ಯೆಯ ಕಡಿಮೆಯಾಗಿ ಅವರಿಗೆ ಕೊಡಬೇಕಾದ ಸಂಬಳವು ಹೆಚ್ಚಾದುದರಿಂದ ಯಂತ್ರಸಾಧನೆಗಳನ್ನು ಉಪಯೋಗಿಸಿ ಅವನ್ನು ಕಡಿಮೆ ಖರ್ಚಿನಿಂದ ಅವನ್ನು ಹೆಚ್ಚಿಗೆ ವಸ್ತುಗಳನ್ನು ತಯಾರಿಸುತ್ತಿರುವರು. ಫೋರ್ಡ ಕಂಪೆನಿಯ ಮೋಟಾರುಕಾರಿಗೆ ಇಷ್ಟು ವರೆಗೆ ೮೦೦ ಭಾಗಗಳು ಇದ್ದುವು. ಈಗ ಅವುಗಳನ್ನು ೩೦೦ ಭಾಗಗಳಿಂದಲೇ ಮಾಡುವ ಅಚ್ಚುಗಳ ಯಂತ್ರಗಳನ್ನು ಮಾಡಿರುವರು. ಮೊದಲು ಈ ಕಂಪೆನಿಯಲ್ಲಿ ಒಂದು ಯಂತ್ರದ ಹತ್ತರ ಒಬ್ಬ ಮನುಷ್ಯನನ್ನು ನಿಲ್ಲಿಸಿ ದಿನಕ್ಕೆ ೮ ಗಂಟೆ ಕೆಲಸ ಮಾಡುತ್ತಿದ್ದರು. ಆಗ ಒಂದು ದಿನಕ್ಕೆ ೨ ಸಾವಿರ ಮೋಟಾರುಕಾರುಗಳು ತಯಾರಾಗುತ್ತಿದ್ದುವು. ನಂತರ ಒಬ್ಬನಿಂದ ಎರಡು ಯಂತ್ರಗಳ ಹತ್ತರ ನಿಂತು ಕೆಲಸ ಮಾಡುವ ಯಂತ್ರಗಳನ್ನು ತಯಾರಿಸಿ ದಿನಕ್ಕೆ ೪ ಸಾವಿರ ಕಾರುಗಳನ್ನು ತಯಾರಿಸಿದರು. ಈಗ ಒಬ್ಬನನ್ನು ಮೂರು ಯಂತ್ರಗಳ ಹತ್ತರ ನಿಲ್ಲಿಸಿ ದಿನ ಒಂದಕ್ಕೆ ೧೧ ಸಾವಿರ ಮೋಟಾರುಗಳನ್ನು ತಯಾರಿಸುತ್ತಿರುವರು. ಕ್ರಯವನ್ನು ಬಹಳ ತಗ್ಗಿಸಿರುವರು. ಕಂತುಗಳಿಂದ ಮಾರಲಾರಂಭಿಸಿರುವರು. ಎಲ್ಲರಿಗೂ ತೆಗೆದುಕೊಳ್ಳಲು ಅನುಕೂಲವಾಯಿತು. ಇದೇ ರೀತಿಯಲ್ಲಿ ಪೆಟ್ರೊಲ್, ಚಿಮಣಿ ಎಣ್ಣೆ ತಯಾರಿಸುವ ರೊಕ್‌ಫೆಲರ್ ಕಂಪೆನಿಯವರು ಎಣ್ಣೆಯನ್ನು ತಯಾರಿಸುತ್ತಿರುವರು. ಸಿಂಗರ ಕಂಪೆನಿಯು ಹೊಲಿಗೆ ಯಂತ್ರಗಳನ್ನು ಕಂತುಗಳಿಂದ ಮಾರುತ್ತಿರುವುದು.

ಅಮೇರಿಕನ್ ಕಂಪೆನಿಗಳಲ್ಲಿ ಕೆಲಸ ನಡಿಸಲಿಕ್ಕೆ ಯುರೋಪಿಯನ್ ಕಂಪೆನಿಗಳಲ್ಲಿದ್ದಂತೆ ಒಬ್ಬ ಮೆನೇಜರನಿರುವುದಿಲ್ಲ. ಆಯಾ ಕೈಗಾರಿಕೆಯ ವಿಷಯವೇ ಚೆನ್ನಾಗಿ ಕಲಿತವರ ಒಂದು ಇಲಾಖೆಯೇ ಇದೆ. ಒಬ್ಬನಿಗೆ ಕೊಂಡುಕೊಳ್ಳುವುದೇ ಕೆಲಸ, ಒಬ್ಬನಿಗೆ ನೌಕರರ ಮೇಲ್‌ತನಿಖಿ ನೋಡಿ ಕೆಲಸ ನಡಿಸುವುದೇ ಕೆಲಸ, ಇನ್ನೊಬ್ಬನಿಗೆ ದೇಶದ ಒಳಗಡೆಯೂ ದೇಶದ ಹೊರಗಡೆಯೂ ಇರುವ ದೇಶಗಳಲ್ಲಿ ಎಲ್ಲಿ ಯಾವ ತರದ ಸಾಮಾನುಗಳು ಎಷ್ಟೆಷ್ಟು ಖರ್ಚಾಗುತ್ತವೆಂದು ತನಿಖಿ ನಡಿಸುವ ಒಂದೇ ಕೆಲಸ. ಈ ರೀತಿಯಲ್ಲಿ ಎಲ್ಲಾ ಕೆಲಸಗಳ ನಡಿಸಲ್ಪಡುತ್ತವೆ. ವಿದ್ವಾಂಸರನ್ನು ಇಟ್ಟು ಕೆಲಸ ನಡಿಸುವುದರಿಂದ ಕಂಪೆನಿಯ ಒಂದೇ ಒಂದು ವಸ್ತುವಾದರೂ ಹಾಳಾಗುವುದಿಲ್ಲ. ಪ್ರತಿ ಒಂದರಲ್ಲಿಯೂ ಕ್ರಯ ದೊರಿಯುತ್ತದೆ.

ಮೊದಲು ದ್ರಾಕ್ಷೆಗಳನ್ನು ಬಳ್ಳಿಗಳಿಂದ [illegible] ೭೮ ಪ್ಯಾಕಿಂಗ ಕಟ್ಟಿಗೆಯ ತಯಾರಿ [illegible] ಇವುಗಳಿಗಾಗಿ ೭೮ ಅಚ್ಚುಗಳ ಬೇಕಾಗಿದ್ದವು. ಈ ಎಲ್ಲಾ ತರದ ಅನುಕೂಲತೆಗಳಿಗೆ ಸರಿಯಾದಂತೆ ೧೧ [illegible] ಗಳನ್ನು ತಯಾರಿಸುತ್ತಿರುವ [illegible] ೧೧ ಅಚ್ಚುಗಳನ್ನು ತಯಾರಿಸಿದರೆ ಸಾಕಾಗುತ್ತದೆ. ಬೇರೆ ಬೇರೆ ವಿಧದ ಮೋಟಾರುಕಾರುಗಳಿಗೆ [illegible] ಚಕ್ರಗಳಿದ್ದವು. ಈಗ ಕ್ರಮ ಪಡಿಸಿ [illegible] ಚಕ್ರಗಳನ್ನು ಮಾತ್ರವೇ ತಯಾರಿಸಿ ಎಲ್ಲಾ ಮೋಟಾರುಕಾರುಗಳಿಗೂ ಉಪಯೋಗಿಸುತ್ತಿರುವರು. [illegible] ಬೇರೆ ಬೇರೆ ಉಪಯೋಗಕ್ಕಾಗಿ ತಯಾರಿಸುತ್ತಿದ್ದರು. ಈಗ ಎಲ್ಲದಕ್ಕೂ ಉಪಯೋಗವಾಗುವಂತೆ [illegible] ವಿಧ [illegible] ಮಾತ್ರವೇ ತಯಾರಿಸುತ್ತಿರುವರು. ಈ ರೀತಿಯ [illegible] ಯಂತ್ರಗಳನ್ನು ತೆಗೆದು [illegible] ಕಡಿಮೆ [illegible] ಉಪಯೋಗಕರವಾದ [illegible] ಕ್ಕೆ ಮಾರಲಾ [illegible] ಈ ಎಲ್ಲಾ ಕಾರ್ಯಕ್ಕೂ ಸಹಕಾರಿಯಾಗಿ [illegible] ಸರಕಾರವೂ [illegible] ಕೆಲಸ ಮಾಡುತ್ತದೆ.

ಈ ರೀತಿಯಲ್ಲಿ [illegible] ಅಮೇರಿಕ [illegible] ಸ್ಟೇಟ್ಸ್ ಭೂಲೋಕದ ಎಲ್ಲಾ [illegible] ಅತೀ ಉನ್ನತವಾದ [illegible] ಇದೆ.

ಇಂಡಿಯವು ಇದರಿಂದ [illegible] ಕೊಳ್ಳಬಹುದು. ಅಮೇರಿಕದಂತೆ [illegible] ದೇಶವಾಗಿದೆ. ಇಂಡಿಯದಲ್ಲಿ [illegible] ಸಾವಿರ [illegible] ಬೆಳೆಯುತ್ತವೆ. ವಸ್ತ್ರ ತಯಾರಿಸಲಿಕ್ಕೆ ಬೇಕಾದ ಹತ್ತಿ [illegible] ಬೇಕಾದಷ್ಟು ಇವೆ. [illegible] ಸಿಕ್ಕುತ್ತವೆ. [illegible] ಕೆಲಸ ನಡಿಸಲಿಕ್ಕೆ ಅನೇಕ [illegible] ಅನೇಕ ಇವೆ. ರೈಲು [illegible] ತಯಾರಿಸಲು ಬೇಕಾದಷ್ಟು [illegible] ಇವೆ. [illegible] ತಯಾರಿಸಲು ಬೇಕಾದ [illegible] ಇವೆ. ಸಾಬೂನ ತಯಾರಿಸಲಿಕ್ಕೆ [illegible] ನಾನಾ ವಿಧದ ಎಣ್ಣೆಗಳು [illegible] ಸಿಕ್ಕುವ [illegible] ರೀತಿಯ [illegible] ಎಲ್ಲಾ [illegible] ತಯಾರಿಸಲಿಕ್ಕೆ [illegible] ತಯಾರಿಸಲಿಕ್ಕೆ ಬೇಕಾದ [illegible] ಸಿಕ್ಕುತ್ತವೆ. [illegible] (ಪತ್ರ) [illegible] ಶ್ರೀಕೃಷ್ಣನನ್ನು [illegible] ಇದೆಲ್ಲವೂ [illegible] ಕಥೆಯಾಗಿದೆ.

ಎಲ್ಲಾ ವಸ್ತುಗಳ [illegible] ಭಾರತ [illegible] ವಿಶ್ವರ್ಯವಂತರ [illegible] ಜನರಿಗೆ ಊಟ ಕೊಡುವುದಕ್ಕಾಗಿ [illegible] ದೇಶಕ್ಕೆ ಬೇಕಾದ ಎಲ್ಲಾ ತರದ ಕೈಗಾರಿಕೆ ವಸ್ತುಗಳನ್ನು ತಯಾರಿಸುವ ಕಾರ್ಖಾನೆಗಳನ್ನು ಇಡುವುದರ [illegible] ಬದಲಾಗಿ ತಮ್ಮ [illegible] ಒಲಿಸುತ್ತಿರುವರು. ಲೋಹ ಕಲ್ಲವೂ [illegible] ಯೋ ಇವೆ. ಹತ್ತಿ ಗೋದಿ ಅಕ್ಕಿ ಮೆಂಗನೀಸ್ ಸಿಲ್ಕ್, [illegible] ಕೈಗಾರಿಕೆಗೆ ಯೋಗ್ಯವಾದ ವಸ್ತುಗಳೆಲ್ಲವೂ ಪರದೇಶಕ್ಕೆ ಹೋಗುತ್ತವೆ. ಎಷ್ಟು ಕಾಡುಗಳು ಇಲ್ಲಿ ಇದ್ದರೂ ರೈಲುವೆ ಸ್ಲೀಪರುಗಳ ಬಹ್ರೇದಿಯಿಂದ ಬರುತ್ತಲಿವೆ. [illegible] ಅಮೇರಿಕವಂತೆಯೇ ದೇಶವನ್ನು ಕೂಲಿಜನರ [illegible] ದೇಶದಲ್ಲಿ ಸಣ್ಣ [illegible] ಯಂತ್ರಸಾಧನೆಗಳನ್ನಿಟ್ಟು ಎಲ್ಲಾ ಜನರಿಗೆ ಕೆಲಸ ಒದಗಿಸುವಂತೆ ಆಗುತ್ತಿತ್ತು.



92D

Edited Printed & Published by V. S. Kamath at the ... SHARADA PRESS, MANGALORE.

ಸ್ವದೇಶಾಭಿಮಾನಿ

ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಕ್ವಚಿದ್ಭೂಮೌ ಶಯ್ಯಾ ... ನ ಗಣಯತಿ ದುಃಖಂ ನ ಚ ಸುಖಮ್ ॥ ... ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥

ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರನಿಗೆ ... ಹೆರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥

ಗರಲಕವರಂಜಿದರೆ! ಸುಧೆಯನು । ಮರೆತು ... ಬಲ್ಲರೆ! ತೊರೆಯು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೭ನೇ ಶುಕ್ರವಾರ ಸಪ್ಟಂಬರ ೧೯೨೮. (7-9-28.) ಸಂಚಿಕೆ ೩೬

THE CANARA BANKING CORPORATION, UDIPI, LIMITED.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್

Head office:—UDIPI.
ಹೆಡ್ ಆಫೀಸು:— ಉಡುಪಿ.

Branches:—COONDAPOOR.
" Mangalore.
ಶಾಖೆ:— ಕುಂದಾಪುರ.
" ಮಂಗಳೂರು

NOTICE

Is hereby given that the following rates of interest on Fixed Deposits will come into force from 1—9—'28. For 3 months 5% p.a. For 6 moths 5½% p.a. For 12 months 6¼% p.a. For 24 months 6½% p.a.

ನಿರಖು ಠೇವಣಾತಿಗಳ ಮೇಲೆ ತಾ. 1-9-28ರಿಂದ ಈ ಕೆಳಗೆ ನಮೂದಿಸಿದ ಬಡ್ಡಿಯ ದರಗಳು ಜ್ಯಾರಿಗೆ ಬರುವವು.

3 ತಿಂಗಳ ವಾಯಿದೆಗೆ ಸಾ. ಶೆ. 5 — 6 ತಿಂಗಳ ವಾಯಿದೆಗೆ ಸಾ. ಶೆ. 5½
12 ತಿಂಗಳ ವಾಯಿದೆಗೆ ಸಾ. ಶೆ. 6¼ — 24 ತಿಂಗಳ ವಾಯಿದೆಗೆ ಸಾ. ಶೆ. 6½

Office of the Corporation,
UDIPI, 13-8-'28.

N. ANANDA RAO.
Secretary

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ
— ಮುಲಾಮು. —

ತಲೆನೋವಿನಿಂದ ಬಳಲುವವ, ಶೀತದಿಂದ ನೆಗಡಿ ಹಿಡಿದವ, ಕೆಮ್ಮಿನಿಂದ ಪೀಡಿತರಾದವ, ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳ ಬಾಧೆಪಡುವ ಮನುಷ್ಯರಿಗೆ ತಕ್ಷಣದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ



... ಕಣ್ಣಿನ ರೋಗಗಳಿಗೆ—

ನಯನ ... ಮುಲಾಮು — ಎಲ್ಲಾ ... ಕಣ್ಣೆ ... ಮುಲಾಮು ... ಪೂರ್ಣ ... ಕ್ರಯ ಡಬ್ಬಿಗೆ ಆಣೆ ...

ದಂತಮಂಜನ — ... ಹಲ್ಲುಗಳ ... ಮಾಡಲ್ಪಟ್ಟ, ... ಕ್ರಯ ಡಬ್ಬಿ 1ಕ್ಕೆ ಆಣೆ ...

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್‌ಟೌನ್ ಮದ್ರಾಸು. — 249 ಫ್ರೇಯರ್ ರೋಡ್ ಮುಂಬಯಿ.

ಮಂಗಳೂರಲ್ಲಿ ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರೆ
ಇವರ
ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.

ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press.
Car-street, MANGALORE

ADVERTISE IN OUR WEEKLY
To Reach the Hearths & Homes of India's Masses
For Particulars Apply to:
The Manager,
SWADESHABHIMANI,
MANGALORE.



92D

Edited Printed & Published by V. S. Kamath at the M. F. A. Sharada Press, Mangalore.

ಸ್ವದೇಶಾಭಿಮಾನಿ

ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರಕ್ಷ್ಯಮರ್ಹಾರ್ಘ್ಯೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗೆಂ ? ಹರುಷವಾಯಿತೆ! ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಸ್ವಸ್ಥರ ತೆರದಿ ಕಳೆತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. | ಮಂಗಳೂರು, ತಾ. ೭ನೇ ಶುಕ್ರವಾರ ಸಪ್ಟಂಬರ ೧೯೨೮. (7–9–28.) | ಸಂಚಿಕೆ ೩೬

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್, ಉಡುಪಿ, ಲಿಮಿಟೆಡ್

Head office:—UDIPI.
ಹೆಡ್ ಆಫೀಸು:— ಉಡುಪಿ

Branches:—COONDAPOOR
" Mangalore
ಶಾಖೆ:— ಕುಂದಾಪುರ.
" ಮಂಗಳೂರು

NOTICE

Is hereby given that the following rates of interest on Fixed Deposits will come into force from 1—9—'28 For 3 months 5 % p a For 6 months 5½ % p a For 12 months 6½ % p a For 24 months 6½ % p a

ನಿರಖು ಠೇವಣಾತಿಗಳ ಮೇಲೆ ತಾ. 1–9 28ರಿಂದ ಈ ಕೆಳಗೆ ನಮೂದಿಸಿದ ಬಡ್ಡಿಯ ದರಗಳು ಜ್ಯಾರಿಗೆ ಬರುವವು.

3 ತಿಂಗಳ ವಾಯಿದೆಗೆ ಸಾ. 5 | 6 ತಿಂಗಳ ವಾಯಿದೆಗೆ ಸಾ. 5½
12 ತಿಂಗಳ ವಾಯಿದೆಗೆ ಸಾ. 6½ | 24 ತಿಂಗಳ ವಾಯಿದೆಗೆ ಸಾ. 6½

Office of the Corporation,
UDIPI, 13–8–'28.

N ANANDA RAO
Secretary

ಅಮೃತಾಂಜನ

ಕ್ಷಣಿಕ ಪ್ರಯೋಜನವಲ್ಲಿ ಪ್ರಸಿದ್ಧಪಟ್ಟ ನೋವಿನ
— ಮುಲಾಮು. —

ತಲೆನೋವಿನಿಂದ ಚಡಪಡಿಸುವ ಶೀತದಿಂದ ವಿಶ್ರಾಂತಿಯಿಲ್ಲದೆ ಕೆಮ್ಮಿನಿಂದ ಪೀಡಿತರಾದ ಗೆಂಟಿನಿಂದ ಕಷ್ಟಪಟ್ಟು, ವಾತದಿಂ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳ ಬಾಧಿತರಾಗಿರುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ ಕ್ರಯ ಡಬ್ಬಿಗೆ 10 ಆಣೆ ಟಪ್ಪಾಲು ಹಾಸಲು ಪ್ರತ್ಯೇಕ

ಈ ಕೆಳಗಿನ ವಸ್ತುಗಳಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು.— ಎಲ್ಲಾ ಶರೀರ ಗಜಕರ್ಣ ... ಇದು ... ಖಂಡಿತವಾದ ಔಷಧಿಯಾಗಿದೆ ಮೂರು ಸಲ ... ಪೂರ್ಣ ಗುಣವಾಗ ... ಕ್ರಯ ಡಬ್ಬಿಗೆ ಆಣೆ 6

ದಂತಮಂಜನ — ಉತ್ತಮ ... ಮತ್ತು ಸುವಾಸನೆಯ ದಂತಮಂಜನವನ್ನು ... ಹಲ್ಲುಗಳು ... ಮಾರ್ಪಟ್ಟು ಬಲಹೊಂದುವವು ಕ್ರಯ ಡಬ್ಬಿ 1ಕ್ಕೆ ಆಣೆ 2

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜಟೌನ್ ಮದ್ರಾಸು. 249 ಫ್ರೇಯರ್ ರೋಡ್ ಮುಂಬಯಿ,
ಮಂಗಳೂರಲ್ಲಿ ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರೆ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas
Postage Extra.
For copies apply to—
The M T A Sharada Press
Car-street, MANGALORE.

ADVERTISE IN OUR WEEKLY
To Reach the Hearths & Homes of India's Masses
For Particulars Apply to
The Manager,
SWADESHABHIMANI,
MANGALORE.

ಪತ್ರಪ್ರಪಂಚ

ಪತ್ರಿಕಾಲೇಖಕರ ಅಭಿಪ್ರಾಯಗಳಿಗೆ ನಾವು ಬಾಧ್ಯರಲ್ಲ.

ಅಯ್ಯಾ ಪತ್ರಕರ್ತರೇ!

ಈಚಾಗಿ ತಮ್ಮ ಕಳೆದ ಸಂಚಿಕೆಯೊಂದರಲ್ಲಿ ಹೊಸದುರ್ಗ ಪಂಚಾಯತಿ ಬೋರ್ಡ್ ಮೆಂಬರ ಚುನಾವಣೆಯು ಬೆಂಬಲವನ್ನು ಸತ್ಯವಾದಿಯು ತಂತು ದೃಷ್ಟಿಯಿಂದ ತೋರಿಸಲಾಗಿ ಕಾಣಿಸಿರುತ್ತಾನೆ. ಉಮೇದ್ವಾರರಿಬ್ಬರಿದ್ದು ಬಿಕ್ಕಟ್ಟಿನ ಬೆಂಬಲವನ್ನು ಮಂಗಲಕರವಾಗಿ ಕಂಗೊಳಿಸುವಂತೆ ವರ್ಣಿಸಿದ್ದು ಬಹಳ ಯುಕ್ತಕರವೆ. ಆದರೇನು! ಸತ್ಯವಾದಿಯು ಕೇವಲ ಪಕ್ಷಪಾತಿಯಾಗಿರುತ್ತಾನೆ. ಯಾಕೆಂದರೆ:— ಚುನಾವಣೆಯಲ್ಲಿ ಶಿಫಾರಸು ಮಾಡಲ್ಪಟ್ಟ ಉಮೇದ್ವಾರರ ಕುಂದುಕೊರತೆಗಳನ್ನು ಈ ಸತ್ಯವಾದಿಯು ಟೀಕಿಸದೆ ಇದ್ದದ್ದು ಬಹಳ ಸೋಜಿಗವೇ ಸರಿ. ರಾ. ಕೆಂಪಗಿರಿ ಶೆಟ್ಟರವರ ಪಕ್ಷವನ್ನು ಬಹುಶಃ ಈ ಸತ್ಯವಾದಿಯು ವಹಿಸಿಕೊಂಡು ಬೆಂಬಲ ಕೊಟ್ಟನೆಂಬದು ಯಾಕೆ ಖಂಡಿತವಾಗಲಾರದು!

"ಸೀತಾರಾಮ ಜಾಗೃತಿ" ಎಂಬ ಸಮಾನ ಸಂಧಿಯಲ್ಲಿ ರಹಸ್ಯದ ಪತ್ರಗಳು ಏನಾದರೂ ಇರುತ್ತವೋ, ಇನ್ನೂರ ಇಪ್ಪತ್ತೆಂಟು ವೋಟುಗಳ ಸಂಖ್ಯೆಯು ಕ್ಲಿಷ್ಟ ಸಮಯಕ್ಕೆ ಗಣನೆ ಆಗುವರೆ ಏನು ಕಾರಣ ಮತ್ತು ಹಿಂತೆ ಉಮೇದ್ವಾರರ ಪೈಕಿ ಕಿಕ್ಕಿರಿದವರು ಯಾರಾದರು ಇದ್ದರೋ ಎಂಬ ವಿವರವನ್ನು ಸತ್ಯವಾದಿಯು ಸತ್ಯವಂತನಾದರೆ ಅತ್ಯಂತ ಸಂಕ್ಷೇಪ ಕರವಾಗಿ ವಿವರಗಳನ್ನು ಈ ಪತ್ರಮುಖಾಂತರ ಸೂಚಿಸಿದ್ದಾದರೆ ಹೆಚ್ಚಿನ ಉಪಕಾರವಾಗುವದು.

ನಿಷ್ಪಕ್ಷಪಾತಿ.

ಉಡುಪಿ ತಾಲೂಕಿನ ಎಲಿಮೆಂಟರಿ ಶಾಲಾ ಉಪಾಧ್ಯಾಯ ಬಂಧುಗಳ ಅವಗಾಹನೆ ಬಗ್ಗೆ.

ಉಪಾಧ್ಯಾಯ ಬಂಧುಭಗಿನಿಯರೇ,

ಇತ್ತಲಾಗೆ ಸುಮಾರು ಎರಡುಮೂರು ತಿಂಗಳುಗಳಿಂದ ಉಡುಪಿ ತಾಲೂಕಿನಲ್ಲಿರುವ ಎಲಿಮೆಂಟರಿ ಶಾಲೆಗಳ ಖಾಸಗಿ ಶಾಲಾ ಉಪಾಧ್ಯಾಯರಿಗೂ, ಬೋರ್ಡ್ ಶಾಲಾ ಉಪಾಧ್ಯಾಯರಿಗೂ ಹಲವು ವಿಧದ ಚಟೀಗಳು ನಡೆದು ಎರಡೂ ಕಡೆಯವರು ಒಬ್ಬರನ್ನೊಬ್ಬರು ದೂಷಿಸಿ ಬರೆದ ಲೇಖನಗಳು ನವಯುಗ, ಕಂಠೀರವ, ಸ್ವದೇಶಾಭಿಮಾನಿ ಪತ್ರಿಕೆಗಳಲ್ಲಿ ಪ್ರತಿವಾರ ವೆಂಬಂತೆ ಕಂಡುಬರುತ್ತವೆ. ಈ ತರದ ಭೇದಗಳನ್ನು ಉಂಟುಮಾಡಿ ಎಲಿಮೆಂಟರಿ ಶಾಲಾ ಉಪಾಧ್ಯಾಯ ವರ್ಗಕ್ಕೆ ಸಿಕ್ಕುವ ಪ್ರಯೋಜನವೇನೆಂದು ತಿಂದುಬರುವುದಿಲ್ಲ.

ವಿದ್ಯಾಮಂತ್ರಿಗಳು ಮದರಾಸು ಸಂಸ್ಥಾನದ ಬೇರೆ ಬೇರೆ ಜಿಲ್ಲೆಗಳಿಗೆ ಸಂಚರಿಸಲಿಕ್ಕೆ ಹೋದಾಗ ಅಲ್ಲಲ್ಲಿರುವ ಎಲಿಮೆಂಟರಿ ಉಪಾಧ್ಯಾಯ ಸಂಘದವರು ಅವರನ್ನು ಆಮಂತ್ರಿಸಿ ಬಹುಮಾನ ಪತ್ರಗಳನ್ನು ಅರ್ಪಿಸಿದಾಗ 'ಉಪಾಧ್ಯಾಯರೇ ನೀವು ನಿಮ್ಮ ಸಂಘಗಳನ್ನು ಏರ್ಪಡಿಸಿದುದು ನನಗೆ ತುಂಬಾ ಸಂತೋಷವಾಗುತ್ತದೆ. ನಿಮ್ಮ ಸಂಘಗಳನ್ನು ಇನ್ನೂ ಬಲಪಡಿಸಿರಿ. ನಿಮ್ಮ ಕಾಲಹವಾಲೆಗಳನ್ನು ಸಂಘಗಳ ಮುಖಾಂತರ ನಮಗೆ ಕಳುಹಿಸಿರಿ' ಎಂದು ಮುಂತಾಗಿ ಬುದ್ಧಿವಾದಗಳನ್ನು ಹೇಳುತ್ತಿದ್ದರು. ಆದುದರಿಂದ ಉಡುಪಿ ತಾಲೂಕಿನ ಉಪಾಧ್ಯಾಯ ವರ್ಗದವರು ಈ ಮಾತುಗಳನ್ನು ಕೇಳಲಿಲ್ಲವೆಂದೇ ಹೇಳಬೇಕಾಗುತ್ತದೆ. ಕೇಳಿದರೆ ಅವರಲ್ಲಿ ಈ ತರದ ಭೇದಬುದ್ಧಿಯು ಉಂಟಾಗುತ್ತಿದ್ದಿಲ್ಲ. ಮಂಗಳೂರು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿದ ವಿದ್ಯಾವಸ್ತು ಪ್ರದರ್ಶನದ ಸಮಯ ಅದೇ ಶಾಲೆಯಲ್ಲಿ ಬೆಳಗ್ಗೆ ೮ ಗಂಟೆಯಿಂದ ೧೨ ಗಂಟೆಯ ವರೆಗೆ ರಾ। ಅಮ್ಮೆಂಬಳ ಶ್ರೀನಿವಾಸ ಪೈಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ವಿದ್ಯಾ ಇಲಾಖಾ ಅಧಿಕಾರಿಗಳು, ತಾಲೂಕು ಬೋರ್ಡುಗಳ ಪ್ರೆಸಿಡೆಂಟರುಗಳ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ಮುಂತಾದವರ ಸಮಕ್ಷಮದಲ್ಲಿ ಜರಗಿದ ಸಾಧಾರಣ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯ ಉಪಾಧ್ಯಾಯಿನಿಯರ ಸಭೆಯಲ್ಲಿ ರಾ। ಗಣಪಯ್ಯ ಶೆಟ್ಟಿ ಬೋರ್ಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ ಬೇರೆ ಖಾಸಗಿ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ ಬೇರೆ ಎಂಬ ಮಾತನ್ನು ಎತ್ತಿದೊಡನೆ ಜಿಲ್ಲಾ ಸೆಕ್ರೆಟರಿಯವರಾದ ರಾ। ಐರೋಡಿ ನರಸಿಂಹ ಹೆಬ್ಬಾರರು ಛೆಟ್ರೆ ಈ ತರದ ಭೇದಗಳನ್ನು ಉಂಟುಮಾಡಿ ಉಪಾಧ್ಯಾಯ ವರ್ಗವನ್ನು ಅಧೋಗತಿಗೆ ಇಳಿಸಬೇಡಿರಿ' ಎಂದು ಹೇಳಿದ ಮಾತುಗಳು ಆ ಸಭೆಗೆ ಹೋದ ಉಪಾಧ್ಯಾಯರ ಹೃದಯದಲ್ಲಿ ನಾಟಿಕೊಂಡಿತು. ಬಹುಶಃ ಈಗ ಭೇದಗಳನ್ನು ಹುಟ್ಟಿಸಿದ ಉಪಾಧ್ಯಾಯರು ಅಂದಿನ ಸಭೆಗೆ ಬರಲಿಲ್ಲವೆಂದು ತೋರುತ್ತದೆ.

ಎಲಿಮೆಂಟರಿ ಶಾಲಾ ಉಪಾಧ್ಯಾಯ ವರ್ಗದವರಿಗೆ ಹಲವು ತರದ ಕಷ್ಟಗಳು ಬಂದೊದಗಿಯದೆ. ಇತ್ತಲಾಗೆ ಹೊರಟ ಒಂದು ಸರಕಾರಿ ಹುಕುಮಿನ ಪ್ರಕಾರ ಎಲಿಮೆಂಟರಿ ಲೋವರ ಗ್ರೇಡಿನ ಉಪಾಧ್ಯಾಯರಿಗೆ ಯಾವ ತರದ ಉತ್ತೇಜನವೂ ಇನ್ನುಮುಂದೆ ಸಿಕ್ಕಲಾರದು ಎಂದು ಅದರಿಂದ ಕಾಣುತ್ತದೆ. ೧೯೩೩ನೇ ಇಸವಿಯಿಂದ ಲೋವರ ಗ್ರೇಡ್ ಟ್ರೈನಿಂಗ್ ಸಹ ತೆಗೆದುಹಾಕುವುದರಲ್ಲಿದ್ದಾರೆ. ಈಗ ಬೋರ್ಡ್ ಮತ್ತು ಖಾಸಗಿ ಎಲಿಮೆಂಟರಿ ಶಾಲೆಗಳಲ್ಲಿರುವ ಉಪಾಧ್ಯಾಯರಲ್ಲಿ ಹೆಚ್ಚಿನವರು ಲೋವರ ಎಲಿಮೆಂಟರಿ ಗ್ರೇಡಿನವರೇ ಆಗಿರುತ್ತಾರೆ. ಒಬ್ಬಾರೆ ಇನ್ನು ಮುಂದೆ ಲೋವರ ಎಲಿಮೆಂಟರಿ ಗ್ರೇಡಿನವರಿಗೆ ಪ್ರಮೋಶನ್ ಮುಂತಾದ್ದು ಸಿಕ್ಕುವುದು ಸಂದೇಹಾಸ್ಪದವಾಗಿದೆ. ಈ ವಿಷಯದಲ್ಲಿ ಉಪಾಧ್ಯಾಯರ ಸಂಘಗಳು ಒಗ್ಗಟ್ಟಿನಿಂದಿದ್ದು ಕೆಲಸಮಾಡುವ ಸಮಯವು ಬಂದೊದಗಿಯದೆ. ಕಲಹಕ್ಕೆ ಸಮಯವಲ್ಲ.

ತಾಲೂಕು ಬೋರ್ಡುಗಳ ಇರುವ ಶಾಲೆಗಳ ಸಂಖ್ಯೆಯು ಹೆಚ್ಚಾಗುತ್ತಾ ಬರುತ್ತದೆ. ಗ್ರಾಮಕ್ಕೆ ಒಂದರಂತೆ ಶಾಲೆಗಳಿರುವ ಬೋರ್ಡಿನಲ್ಲಿ ಹಣದ ಅಡಚಣೆಯುಂಟಾಗಿ ಬೋರ್ಡಿನವರ ಉಪಾಧ್ಯಾಯರ ಸಂಬಳವನ್ನು ಕಡಿಮೆ ಮಾಡುವುದರಲ್ಲಿದ್ದಾರೆ. ಕಾಸರಗೋಡು ತಾಲೂಕು ಬೋರ್ಡಿನಲ್ಲಿ ಶಾಲೆಗಳ ಸಂಖ್ಯೆಯು ಮಿತಿಮೀರಿ ಸಂಬಳಕ್ಕೆ ಹಣವಿಲ್ಲದೆ ಮೂರು, ಆರು ತಿಂಗಳಿಗೊಂದರಂತೆ ಕಡಿಮೆ ಕಡಿಮೆ ದರದ ಸ್ಕೇಲುಗಳಾಗುತ್ತಿವೆ. ಮಂಗಳೂರು ತಾಲೂಕು ಬೋರ್ಡಿಗೂ ಅದೇ ತರದ ಅಡಚಣೆಯು ಬಂದೊದಗಿಯದೆ. ಮೇಲೆ ಹೇಳಿದ ಸರಕಾರಿ ಜಿ. ಓ. ಅವರ ಬೆಂಬಲಕ್ಕೆ ಬಂದದೆ. ಈ ಪೆಟ್ಟು ಉಡುಪಿ ತಾಲೂಕಿಗೂ ತಗಲದೆ ಹೋಗಲಿಕ್ಕಿಲ್ಲ.

[illegible] ಸರಕಾರದವರು [illegible]

ನಮ್ಮ ಸಹ ಸಂಬಳ ನಿಶ್ಚಿತವು ಅಲ್ಪವಾಗಿದೆ. [illegible] ಶಾಲೆಗಳಲ್ಲಿ ಇವತ್ತಿದ್ದ ಉಪಾಧ್ಯಾಯರು ನಾಳೆ ಇದ್ದಾರೋ ಇಲ್ಲವೋ ಎಂಬುದು ಸಂಶಯಾಸ್ಪದವಾದ ಸಂಗತಿ. ಆದುದರಿಂದ ಇವೆಂಗೂ ಈ ಅವಸ್ಥೆಯಾಗದಂತೆ ಸಂಘಗಳ ಮೂಲಕ ಸಾಧಿಸುವ ಆಗತ್ಯವಿದೆ.

ಮದರಾಸು ವಿದ್ಯಾ ಇಲಾಖೆಯ ಮಾನ್ಯ ಡೈರೆಕ್ಟರ ಧೊರೆಗಳವರು ಈ ಜಿಲ್ಲೆಗೆ ಬೇಗನೆ ಬರುವುದರಲ್ಲಿದ್ದಾರೆ. ಆದುದರಿಂದ ಪ್ರತಿ ಒಂದು ತಾಲೂಕಿನ ಉಪಾಧ್ಯಾಯರ ಸಂಘಗಳು ಬೇಗನೇ ಸಭೆ ಸೇರಿ ಇಡೀ ಜಿಲ್ಲೆಯ ಆರು ತಾಲೂಕುಗಳ ಉಪಾಧ್ಯಾಯರ ಒಂದು ದೊಡ್ಡ ಸಭೆಯನ್ನು ಮಂಗಳೂರಿನಲ್ಲಿ ಜರಗಿಸಿ ಈ ಜಿಲ್ಲೆಯ ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗಿರುವ ಹಲವು ತರದ ಕಷ್ಟಗಳನ್ನು ಅವರ ಮುಂದಿಡುವ ಸಮಯವು ಬಂದೊದಗಿಯದೆ.

ಆದುದರಿಂದ ಉಡುಪಿ ತಾಲೂಕಿನ ಉಪಾಧ್ಯಾಯ ಬಂಧುಭಗಿನಿಯರೇ! ಬೋರ್ಡ್ ಖಾಸಗಿ ಎಂಬ ಭೇದವನ್ನು ಮರೆತು ಒಗ್ಗಟ್ಟಿನಿಂದ ಸಭೆಕೂಡಿ ಬಂದು ಆಗತ್ಯವಾದ ಠರಾವುಗಳನ್ನು ತಯಾರಿಸಿರಿ. ಪ್ರತಿನಿಧಿಗಳನ್ನು ಚುನಾಯಿಸಿ ತಯಾರುಮಾಡಿರಿ. ನಿಮ್ಮ ನೆರೆ ತಾಲೂಕುಗಳಾದ ಕುಂದಾಪುರ ಮತ್ತು ಕಾರ್ಕಳ ತಾಲೂಕಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರನ್ನು ಗಾಢನಿದ್ರೆಯಿಂದ ಎಬ್ಬಿಸಿರಿ. ಅವರು ಅವರಿಗಿರುವ ಕಾಲಹವಾಲೆಗಳನ್ನು ತಯಾರಿಸಿ ಪ್ರತಿನಿಧಿಗಳನ್ನು ಚುನಾಯಿಸುವಂತೆ ಅವರಿಗೂ ತಿಳಿಸಿರಿ.

ದಕ್ಷಿಣ ಭಾಗದ ಮೂರು ತಾಲೂಕುಗಳ ಎಲಿಮೆಂಟರಿ ಶಾಲಾ ಉಪಾಧ್ಯಾಯರುಗಳು ಎಲ್ಲಾ ವಿಷಯದಲ್ಲಿಯೂ ತಯಾರಾಗಿ ಮಾನ್ಯ ಡೈರೆಕ್ಟರವರ ಬರೋಣವನ್ನು ಕಾಯುತ್ತಿರುವರು.

ಆದುದರಿಂದ ಈ ವಿಷಯ ಎಲ್ಲಾ ವಾರ್ತೆಗಳನ್ನೂ ಠರಾವುಗಳನ್ನೂ ಜಿಲ್ಲೆಯಲ್ಲಿ ಕಂಠೀರವ, ನವಯುಗ, ರಾಷ್ಟ್ರಬಂಧು, ಸ್ವದೇಶಾಭಿಮಾನಿ ಮುಂತಾದ ಶ್ರೇಷ್ಠ ವಾರಪತ್ರಿಕೆಗಳಲ್ಲಿ ಪ್ರಕಟಿಸಿರಿ. ಎಲ್ಲಾ ತರದ ಭೇದಬುದ್ಧಿಯನ್ನು ಬಿಟ್ಟುಬಿಡಿರಿ.

ಉಪಾಧ್ಯಾಯ

ಹಳ್ಳಿಗಳೂ ಟಪ್ಪಾಲುಕಟ್ಟೆಗಳೂ

ಮಾನ್ಯಪತ್ರಿಕಾಕರ್ತರಿಗೆ

ನನ್ನ "ಹಳ್ಳಿಗಳೂ ಟಪ್ಪಾಲುಕಟ್ಟೆಗಳೂ" ಎಂಬ ಚಿಕ್ಕ ಲೇಖನವನ್ನು ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಹಳ್ಳಿ ಜನರ ಪ್ರಯೋಜನಾರ್ಥವಾಗಿ ಸರಕಾರದವರು ಮುಖ್ಯ ಮುಖ್ಯ ಹಳ್ಳಿಗಳಲ್ಲಿ ಟಪ್ಪಾಲುಕಟ್ಟೆಗಳನ್ನು ಸ್ಥಾಪಿಸಿದರು. ಅದೂ ಅಲ್ಲದೆ ಜನರಿಗೆ ಇನ್ನೂ ಹೆಚ್ಚಿನ ಪ್ರಯೋಜನವಾಗುವಂತೆ ಟಪ್ಪಾಲುಕಟ್ಟೆಗಳಿಲ್ಲದ ಹಳ್ಳಿಹಳ್ಳಿಗಳಲ್ಲಿಯೂ ಕೂಡಾ ಟಪ್ಪಾಲುಕಟ್ಟೆಗಳನ್ನು ಸ್ಥಾಪಿಸುವರೇ ಪರೀಕ್ಷಾರ್ಥ ಅಧೀನಗಳನ್ನು (xperimental) ಇಟ್ಟಿರುವರು ಮತ್ತು ಇಡಲಿಕ್ಕಿರುವರು.

ಇಂತಹ ಟಪ್ಪಾಲುಕಟ್ಟೆಗಳ ಪ್ರಯೋಜನಗಳು ಹೆಚ್ಚಾಗಿ ಸ್ಥಿರವಾಗುವಂತೆ ಆದರಿಂದ ಜನರಿಗಾಗುತ್ತಿದ್ದ ತೊಂದರೆಗಳೇ ಹೇಳಲಸಾಧ್ಯ. ಹಳ್ಳಿಯಲ್ಲಿರುವವರಿಗೂ ಯಾವ ತೊಂದರೆಗಳಿಲ್ಲವೇ ಮಾಡುವರೇ ಇವುಗಳು ಸರಕಾರದವರಿಂದ ಸ್ಥಾಪಿಸಲ್ಪಟ್ಟವು ಕೆಲವು ಹಳ್ಳಿ ಇಂತಹ ಟಪ್ಪಾಲು ಕಟ್ಟೆಗಳ ಇಲ್ಲದಿದ್ದರೆ ತುಂಬಾ ಉಪಕಾರ್ಯವುಂಟಾದ ಮಾತ್ರವಿರುತ್ತವೆ. ಮೇಲಾಧಿಕಾರಿಗಳ ಹೆಚ್ಚು ಇವುಗಳ ಸದಾ ನೋಡುವಂತಿಲ್ಲ. ಈ ಬ್ರಾಂಚ ಟಪ್ಪಾಲ ಮಾಸ್ತರರು ಕೊಡುವ ಉಪದ್ರವಗಳನ್ನು ಅವರ ಮಾಡುತ್ತಿರುವ ಸುಲಿಗೆಯನ್ನು ಹೇಳಲಸಾಧ್ಯ.

ಹಳ್ಳಿಯಲ್ಲಿರುವ ಟಪ್ಪಾಲುಕಟ್ಟೆಗಳ ಆಸು ಸೇವೆಯು

ಪಟ್ಟಣಗಳಲ್ಲಿರುವ ಟಪ್ಪಾಲು ಕಟ್ಟೆಗಳಂತೆ ಹಳ್ಳಿಯಲ್ಲಿರುವ ಟಪ್ಪಾಲು ಕಟ್ಟೆಗಳಿಗೆ ಸರಿಯಾದ ಅಧೀನ ಸಮಯವಿರುವುದು. ಟಿಕೆಟು ವಗೈರೆ ಬೇಕಾದರೆ ಟಪ್ಪಾಲು ಬರುವ ಸಮಯದಲ್ಲಿ ಕಾಸೆಂತು ಅವುಗಳನ್ನು ಪಡೆಯತಕ್ಕದ್ದು. ಇತರ ಸಮಯಗಳಲ್ಲಿ ಟಪ್ಪಾಲುಕಟ್ಟೆಗಳಿಗೆ ಹೋದರೆ ಯಾವ ತರದ ವಹಿವಾಟನ್ನು ನಡಿಸಬೇಕೆ ಅಸಾಧ್ಯ. ಅನೇಕ ವೇಳೆ ಟಪ್ಪಾಲು ಮಾಸ್ತರರ ಬಂದ ಜನರಿಗೆ ಬೇಸರಿಸುವುದುಂಟು.

ಹಳ್ಳಿ ಟಪ್ಪಾಲುಕಟ್ಟೆಗಳ ಬಟವಾಡೆ ಕ್ರಮ

ಪ್ರತಿ ಹಳ್ಳಿ ಟಪ್ಪಾಲಕಟ್ಟೆಯಲ್ಲಿ ಒಬ್ಬೊಬ್ಬ ಪೇದೆಯಿರುತ್ತಾನೆ. ಇಂತಹ ಒಂದು ಟಪ್ಪಾಲು ಕಟ್ಟೆಗೆ ಒಳಪಟ್ಟ ಹಲವು ಗ್ರಾಮ ಇರುವವು. ಒಂದೊಂದು ಗ್ರಾಮವನ್ನು ಈ ಪೇದೆಯು ಹದಿನೈದಕ್ಕೊಂದು ಸಂಚರಿಸುವನು. ಎಲ್ಲಾ ಕಾರ್ಯಗಳು ಸರಿಯಾಗಿ ವಿಚಾರಿಸಲ್ಪಟ್ಟಿ ಸಿಕ್ಕುತ್ತವೆಂದು ಹೇಳಲು ಸಾಧ್ಯವಿಲ್ಲ. ಪೇದೆಯವರಿಗೆ ಗುತ್ತಿಗೆ ಯಾರಾದರೊಬ್ಬನ ಹತ್ತಿರ ಕೊಡುವುದೂ ಉಂಟು. ಪತ್ರಿಕೆ ಮೊದಲಾದುವುಗಳ ಬಟವಾಡೆ ಹೇಳತೀರದು. ಪತ್ರಿಕೆಗಳು ವಾರದಲ್ಲಿ ಸರಿಯಾಗಿ ಸಿಕ್ಕುವುದು ಅಪೂರ್ವವಾಗಿದೆ. ಅನೇಕ ಸಾರಿ ಚಂದಾದಾರರಲ್ಲದವರ ಪ್ರತಿಕೆಗಳನ್ನು ಬಟವಾಡೆಮಾಡಿ ಅವರಿಂದ ಕಾಫಿ ಫಲಹಾರವನ್ನೂ ಪಡೆದುದುಂಟು. ಪತ್ರಿಕೆಗಳಿಗೆ ಮುದ್ದು ಕೊಡುವುದೂ ಒಬ್ಬರು ಓದಿದ್ದನ್ನು ಅನೇಕ ಸಾರಿ ಪೋಸ್ಟ ಮಾಸ್ತರರಾಗಲೀ ಪೇದೆಗಳಾಗಲೀ ತಪ್ಪಿಂತ ಉಪಯೋಗಕ್ಕೆ ತೆಗೆದು ಆ ವಾರದಲ್ಲಿ ಪತ್ರಿಕೆಯು ಬರಲೇ ಇಲ್ಲವೆಂದು ಪತ್ರಿಕಾಧಿಕಾರಿಗಳನ್ನು ದೂರುವುದೂ ಉಂಟು. ಹೀಗಾಗಿ ಪತ್ರಗಳ ಕಳ್ಳತನ, ತಮ್ಮ ಆಪ್ತಬಾಂಧವರಿಗೆ ಪತ್ರಗಳನ್ನು ಬರಿಯುವಾಗ ಬ್ಲಡ ಮಾಡಿ ರವಾನಿಸಿ ಕೊಡುವರು. ಅಂತೂ ಬಟವಾಡೆ ಕ್ರಮವು ಇದು.

ಇನ್ನು ಮನಿಯಾರ್ಡರಿನ ವಿಷಯ ಹೇಳುವುದಾದರೆ ತುಂಬಾ ಇರುವ ಹಳ್ಳಿಯ ತರುಣರು ಧನಾರ್ಜನೆಗಾಗಿ ಪರವೂರುಗಳಿಗೆ ಹೋದವರು ಬಾಂಧವರಿಗೆ ಪ್ರತಿ ತಿಂಗಳಲ್ಲಿಯೂ ಹಣವನ್ನು ರವಾನಿಸಿ ಕೊಡುವ ಪದ್ಧತಿಯು ಇರುವುದು. ಹೀಗೆ ಒಂದು ಹಳ್ಳಿಯ ಟಪ್ಪಾಲುಕಟ್ಟೆ ಒಂದು ವಾರದಲ್ಲಿ ಸುಮಾರು ಅಂದಾಜು ರೂಪಾಯಿ ಗಂಟಿಕ್ಕೆ ಕಮ್ಮಿ ದಷ್ಟು ಮನಿಯಾರ್ಡರ ಬರುವುದು. ಮನಿಯಾರ್ಡರಿನ ಆಸಾಮಿಯು ತನ್ನ ಹಣ ಬಂದರೂ ಎಂತ ಕೇಳಿದಲ್ಲಿ ಕೆಲವು ದಿವಸಗಳ ವರೆಗೆ ಪೋಸ್ಟ ಮಾತ್ರ ಬಂದುಇಲ್ಲವಾಗಿಯೂ ಹಣ ಬರಲಿಲ್ಲವಾಗಿಯೂ ಹೇಳಿ ಕೆಲವು ದಿವಸಗಳನ್ನು ಕಳೆಯುವರು. ೩-೪ ದಿವಸ ಕಳೆದ ನಂತರ ಬಂದು ಕೇಳಿದಲ್ಲಿ ಗುರ್ತದ ಸಾಕ್ಷಿಯ ಸಹಿ ಬೇಕೆನ್ನುವರು ಬರುತ್ತದೆ. ಮನಿಯಾರ್ಡರಿನ ಆಸಾ

[illegible]

ರಿಗೆ ಗುರುತು ಇರುವ ಸಾಕ್ಷಿಗಾರರು ಸಿಕ್ಕುವ ತನಕ ಹಣ ಬಟವಾಡೆ ಮಾಡುವುದಿಲ್ಲವಂತೆ. ಇಂತಹ [illegible] ಗಳು ದುರುಪಯೋಗವಾಗಿ ಅನೇಕ [illegible] ನಿವಾಸಿಗಳು ಇರುವರು. ಅಂತಹ [illegible] ರನ್ನು ಪಡಕೊಳ್ಳಬೇಕಾದರೆ ಬಹಳ [illegible] ಖರ್ಚಾಗುತ್ತದೆ. ಅನೇಕ ವೇಳೆ ಈ ಪೋಸ್ಟ [illegible] ವನ್ನು ಅಸ್ಥಾನಿಕ ವ್ಯಾಪಾರಸ್ಥರಿಗೆ ಕೈಕರವಾಗಿ [illegible] ವಸೂಲು ಮಾಡುವುದುಂಟು.

ಆದಪ್ರಯುಕ್ತ ಮಾನ್ಯ ಸರಕಾರದವರು [illegible] ಗಳು ಈ ವಿಷಯವನ್ನು ಗಮನಕ್ಕೆ ತಂದು, ಈ [illegible] ವಿಚಾರಣೆಯನ್ನು ನಡಿಸಿ ಅವಶ್ಯಕವಾದ ಒಂದು [illegible] ಯನ್ನು ನೇಮಿಸಿ ಸದ್ರಿ ಕಮಿಟಿಯ ಮೂಲಕ [illegible] ಇರುವ ಪೋಸ್ಟ ಆಫೀಸುಗಳಿಂದುಂಟಾಗುವ ಸಂಕಷ್ಟ [illegible] ಗರಿಗೆ ಕ್ರಮಪ್ರಕಾರ ಹಾಗೆ ಪತ್ರ ವಗೈರೆಗಳು [illegible] ಬೇಕಾಗಿ ಅಪೇಕ್ಷಿಸುವ,

ಹಳ್ಳಿಯವ.

ಮಹಾರಾಜಶ್ರೀ ಕಾರ್ಕಳ ತಾಲೂಕು ಬೋರ್ಡ್ ಪ್ರೆಸಿಡೆಂಟರವರ ಸನ್ನಿಧಾನಕ್ಕೆ

ಅಯ್ಯಾ!

ಈ ನಮ್ಮ ಅಜೆಕಾರಿನ ರಹಿತರಾದ ಶ್ರೀ ಕಾಂತು ಶೆಟ್ಟರವರು ಉಚಿತವಾಗಿ ಬೋರ್ಡಿಗೆ ಬಿಟ್ಟುಕೊಟ್ಟ ಕಟ್ಟಡವನ್ನು ಸದ್ಯದಲ್ಲೇ ಜೀರ್ಣೋದ್ಧಾರ ಮಾಡಿ, ಅದರಲ್ಲಿ ಒಂದು ಬಾಲಿಕಾ ಪಾಠಶಾಲೆಯನ್ನು ತೆರೆಯಬೇಕಾದ ವರ್ತಮಾನವನ್ನು ಕೇಳಿ ನಾವು ಆ ವಿಷಯ ಪ್ರಾರ್ಥಿಸಿಕೊಳ್ಳುವುದೇನೆಂದರೆ

ಬಾಲಿಕಾ ಪಾಠಶಾಲೆಯು ಇಲ್ಲಿ ಅಭಿವೃದ್ಧಿ ಹೊಂದುವುದಕ್ಕೆ ಅನೇಕ ತೊಡಕುಗಳಿವೆ. ಮುಖ್ಯವಾಗಿ ಶಾಲೆಯನ್ನು ತೆರೆಯುವಷ್ಟು ಸಾಕಷ್ಟು ಮಂದಿ ಬಾಲಿಕೆಯರ ಸಂಖ್ಯೆಯು ಎಂದಿಗೂ ಸಿಗಲಾರದು. ಹತ್ತಿರವಿರುವ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳಿರುವುದರಿಂದ ಈ ಶಾಲೆಗೆ ವಿದ್ಯಾರ್ಥಿನಿಯರು ಬರುವಂತಿಲ್ಲ. ಅಲ್ಲದೆ ಬಾಲಿಕೆಯರು ಒಂದೆರಡು ವರ್ಷ ವ್ಯಾಸಂಗಿಸಿ ನಂತರ ಗೃಹಕೃತ್ಯದ ಕಡೆಗೆ ಲಕ್ಷ್ಯಕೊಡುವರು. ಹಿಂತೆ ನವನಾಗರಿಕತೆಯು ಇನ್ನೂ ಈ ಪರ್ವತ ಪ್ರದೇಶಗಳಲ್ಲಿ ಮೊಳೆತಿಲ್ಲ. ಅದ್ದರಿಂದ ಈ ಊರಲ್ಲಿ ಬಾಲಿಕಾ ಪಾಠಶಾಲೆಯು ಅಗತ್ಯವಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

ಈ ಮೂರು ಪ್ರಾಂತ್ಯದಲ್ಲಿ ಹೆಚ್ಚಿನ ವಿದ್ಯಾಭ್ಯಾಸವನ್ನು (Higher education) ಮಕ್ಕಳು ಸುಲಭದಿಂದ ಪಡೆಯುವ ರೀತಿಯಲ್ಲಿ ಯೋಗ್ಯವಾಗ ವಂತೆ ಒಂದು ಹಾಯರ್ ಎಲಿಮೆಂಟರಿ ಶಾಲೆಯು ಇಲ್ಲದಿರುವುದೇ ತುಂಬಾ ಶೋಚನೀಯ. ಈ ಊರಾದರೋ ಬರೇ ಮೂರು ಮೈಲಿ ಸುತ್ತಳತೆಯ ಅಂಡಾರ, ಶಿರ್ಲಾಲು, ಹೆಮ್ಮುಂಡ ಹಿರ್ಗಾನ, ಕುಕ್ಕುಂದೂರ ಕಸ್ಬಾ ಮತ್ತು ಮಾರ್ಗ ಮುಂತಾದ ಗ್ರಾಮಗಳಿಗೆ ಮಧ್ಯಸ್ಥಳವಾಗಿರುವುದು. ಈ ಗ್ರಾಮಗಳ ಬಡವರ್ಗಕ್ಕೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ದೂರವಾದ ಪೇಟೆಪಟ್ಟಣಗಳಿಗೆ ಕಳುಹಿಸುವುದು ಧನದ ಅಭಾವದಿಂದ ಎಲ್ಲರಿಗೂ ಸುಲಭಸಾಧ್ಯವಾದ ಕಾರ್ಯವಲ್ಲ. ಆದ್ದರಿಂದ ಇಲ್ಲಿ ಅತ್ಯಗತ್ಯವಾದ ಹಾಯರ್ ಎಲಿಮೆಂಟರಿ ಶಾಲೆಯನ್ನು ಹೊಸ ಮಂದಿರದಲ್ಲಿ ತೆರೆದರೆ ವಿದ್ಯಾರ್ಥಿಗಳು ಕಿಕ್ಕಿರಿದು ಎಲ್ಲಾ ದಿಕ್ಕುಗಳಿಂದಲೂ ಇದಕ್ಕೆ ಬರುವುದರಲ್ಲಿ ಏನೂ ಸಂದೇಹವಿಲ್ಲ.

ಈ ಕಾರಣ ದಯಾಳುಗಳಾದ ಬೋರ್ಡಿನವರು ನಮ್ಮ ಮೇಲಿನ ಅರಿಕೆಗಳನ್ನು ಲಾಲಿಸಿ ಇಲ್ಲಿ ಅತ್ಯಗತ್ಯವಾದ ಹಾಯರ್ ಎಲಿಮೆಂಟರಿ ಶಾಲೆಯನ್ನು ಶೀಘ್ರದಲ್ಲಿಯೇ ತೆರೆಯಬೇಕಾಗಿ ಪ್ರಾರ್ಥಿಸುತ್ತೇವೆ.

ಅಜೆಕಾರು, ೯-೧೨-೩೨

ಇತಿ,
ಅಜೆಕಾರು ಗ್ರಾಮಸ್ಥರು.

ಪ್ರೆಸ್ಸ್ ಕೊಮ್ಯುನಿಕು.

ಫೋರ್ಟ್ ಸೈಂಟ್ ಜೋರ್ಜ—ಆಗಸ್ಟ್ ೩೧, ೧೯೩೨.

ಮದರಾಸಿನಲ್ಲಿರುವ ಗವರ್ನಮೆಂಟ್ ಇಂಡಸ್ಟ್ರಿಯಲ್ ಇನ್ಸ್ಟಿಟ್ಯೂಟಿನಲ್ಲಿ ಇದುವರೆಗೆ ತಯಾರಿಸಿದ ಕೆಲವು ಶಾಯಿ, ಶಾಯಿಪುಡಿ, ಶಾಯಿ ಗುಳಿಗೆಗಳು ಕ್ರಿಯಾತ್ಮಕವಾಗಿ ಬಹು ಅಭಿವೃದ್ಧಿಯನ್ನು ಹೊಂದಿರುತ್ತದೆ. ಹೋಗಿನ ಬರಹ ಕಾಯಿಯನ್ನೂ ಉತ್ತಮ ತರವಾಗಿರುವ ಶಾಯಿಯು ಇಲ್ಲಿ ತಯಾರಾಗುತ್ತದೆಂಬವನ್ನು ಜನರಿಗೆ ತೋರಿಸುವ ಸಲುವಾಗಿ ಸರಕಾರದವರು ಈ ಸಂಸ್ಥೆಯನ್ನು ಸ್ಥಾಪಿಸಿದ್ದಾಗ್ಯೂ, ಈಗ ಅಲ್ಲಿ ಉತ್ತಮ ತರ ಬರೆಯುವ ಶಾಯಿ, ನೀಲಿ ಶಾಯಿ, ಫೌಂಟನ್‌ಪೆನ್ನಿನ ಶಾಯಿ, ಬಣ್ಣಗಳ ಶಾಯಿ, ಶಾಯಿ ಹುಡಿಗಳು ತಯಾರಾಗುತ್ತವೆ. ಒಳ್ಳೆಯ ಉತ್ಪನ್ನವಾದ ಒಂದು ಸಂಸ್ಥೆಯು ಇದನ್ನು ಪಡೆದುಕೊಂಡು ಕೆಲಸ ಮಾಡಿ ಲಾಭಹೊಂದಿದರೆ ಉತ್ತಮವೆಂದು ಸರಕಾರದವರು ಬಯಸುವರು. ಸರಕಾರದವರು ಇದನ್ನು ಡೆಸ್ಟಾಗಿ ಪ್ರಾರಂಭಿಸಿರುವರು. ಅದಕ್ಕೆ ಈಗ ಇದರಿಂದ ನಿವೃತ್ತಿಹೊಂದಿ ಒಂದು ಪ್ರತ್ಯೇಕ ಸಂಸ್ಥೆಯು ಇದನ್ನು ಪಡಕೊಳ್ಳಬೇಕೆನ್ನುವರು. ಆದ ಕಾರಣ ಮದರಾಸು ಸಂಸ್ಥಾನದ ಪ್ರೈವೇಟ್ ಸಂಸ್ಥೆಗಳಿಂದ ಇದನ್ನು ಕೊಂಡುಕೊಳ್ಳಲು ಟೆಂಡರುಗಳನ್ನು ಕಳುಹಿಸಬೇಕು. ಇದನ್ನು ಮಾರುವ ಶರ್ತಗಳು ಮತ್ತು ಇತರ ವಿವರಗಳನ್ನು ಕೈಗಾರಿಕೆಗಳ ಡೈರೆಕ್ಟರರು ಕಳುಹಿಸುವರು. ಟೆಂಡರುಗಳನ್ನು ಬಂದುಮಾಡಿ 'ಪ್ರೊಪೊಸಲ್ ಫೋರ್ ಗವರ್ನಮೆಂಟ ಶಾಯಿ ಕಾರ್ಖಾನೆಯನ್ನು ಕೊಂಡುಕೊಳ್ಳುವ ಟೆಂಡರು' ಎಂದು ಇಂಗ್ಲಿಷಿನಿಂದ ಮೇಲೆ ಬರೆದು ಅಕ್ಟೋಬರ ಒಂದನೇ ತಾರೀಕಿನ ಒಳಗೆ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಇವರಿಗೆ ಕಳುಹಿಸತಕ್ಕದ್ದು. ಹೆಚ್ಚಿಗೆ ಹಣದ ಟೆಂಡರುಗಳನ್ನೆ ಮಾತ್ರ ಸರಕಾರದವರು ಸ್ವೀಕರಿಸುವ ಶರ್ತವಿಲ್ಲದ್ದಾಗಿದೆ. ಕಾರಖಾನೆಯನ್ನು ಸಂತೋಷ ತೋರಿದವರಿಗೆ ಮಾರುವ ಹಕ್ಕನ್ನು ಇಟ್ಟುಕೊಂಡಿರುವರು.

(*Sd*) Mog. C. Tampoe,
Secretary to Government.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಶಂಕವು ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅನೇಕರಿಗೆ ಅನುಭವವಾದ ಈ ತೈಲವು ಚಿಕ್ಕಮಕ್ಕಳಿಂದ ಮುದುಕರವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯು ಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನ ವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ವನ್ನೀಯುವ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!

ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಕಲ್ಮಷವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡು ವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿ ಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗ ಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಧರ್ಗ ಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿ ಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆಯುರ್ವೇದ ರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೆ ಕಳುಹಿಸಿಬರುತ್ತೇವೆ. ನಾನಾ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ಸ್ವಚ್ಛ ಮತ್ತು ಸರಳ ದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ವುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಆಂಡ್ ಸನ್ಸ್,
ಸರಾಫು ವ್ಯಾಪಾರ,
24-8-'28 ಶಿವ್ವಾಪೇಟೆ. ಸೇಲಂ (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೀ ರೂಪಾಯಿ 1/- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ

ಬರೆಯಿರಿ—

ಆತಂಕನಿಗ್ರಹ ಅವುಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸ್ಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. [illegible]00,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds ,, 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟು ಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6¼% for 2 Years, 6% ,, 1 Year	ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವಳಗೆ ವ್ಯಾಪೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Canara Bank Ld.
Mangalore, 16th Fe 1928.

K. Venkat Rao,
Secretary.

THE PANGAL NAYAK BANK, LTD., UDIPI, S. K.

ಸ್ಥಾಪಿತವಾದದ್ದು 1920.

ದಿ ಪಾಂಗಾಳ್ ನಾಯಕ್ ಬೇಂಕ್ ಲಿಮಿಟೆಡ್, ಉಡುಪಿ, ದ. ಕ.

ಬೇಂಕರು—
ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪಾಯಿ 2,00,000/-	ಆಪದ್ಧನ ಇತ್ಯಾದಿ ನಿಧಿಗಳು ರೂ 1,00,600/-
ಚಂದಾ ಮೂಲಕ ಕೊಡಲ್ಪಟ್ಟ ವಸೂಲ್ ಮೂಲಧನ ರೂ. 1,60,000/-	ಕಾಯಂ ಠೇವಣಾತಿಗಳು ,, 7,33,880/-

ಹೊರಗೆ ಒಟ್ಟು ಸಾಲ ದೇಣೆ ರೂ. 10,77,816—0—0.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ. ಶೇ. 5½ದಂತೆಯೂ, 6 ಮತ್ತು 9 ತಿಂಗಳುಗಳಿಗೆ 6 ದಂತೆಯೂ, 12, 15, 18, ಮತ್ತು 21 ತಿಂಗಳುಗಳಿಗೆ 6¼ದಂತೆಯೂ, ಮತ್ತು 24 ತಿಂಗಳುಗಳಿಗೆ 7ದಂತೆಯೂ, ಪ್ರತಿ ಶತ. ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸುವದು.

ಮುಸಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೆಗೆ,) ಕಂತು ಠೇವಣಾತಿಗಳು, ಅಲ್ಪಾವಧಿ ಠೇವಣಾತಿ ಗಳು, ಸೇವಿಂಗ್ ಬೇಂಕ್ ಠೇವಣಾತಿಗಳು ಮತ್ತು ಚಾಲ್ತಿ ಠೇವಣಾತಿಗಳು ಸಹಾ ಬಹಳ ಪ್ರಯೋಜನಕರವಾದ ದರಗಳಲ್ಲಿ ಅಂಗೀಕರಿಸಲ್ಪಡುವವು.

ಸಾಲಗಳು ಸ್ಥಿರ ಜವಾಬ್ದಾರಿಗಳ ಮೇಲೂ, ಸ್ಥಿರಾಸ್ತಿಗಳ ಆಧಿನ ಮೇಲೂ ಕೊಡಲ್ಪಡುವವು. ಹುಂಡಿಗಳು ಮತ್ತು ಡ್ರಾಫ್ಟು ಗಳು ದಸ್ಕತ್ತು, ವಟ್ಟಾ, ವಸೂಲು ಮಾಡುವದಲ್ಲದೆ, ಬೇಂಕಿಗೆ ಸಮ್ಮಂಧಪಟ್ಟ ಇತರ ಎಲ್ಲಾ ವಹಿವಾಟುಗಳು ಕೂಲಧಾರೆಯಿಂದ ನಡಿಸಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ತಪಸೀಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು

ಬೇಂಕಿನ ಆ., ಉಡುಪಿ,
ತಾ. 1/2—'28.

ಪಾಂಗಾಳ ಪರಮೇಶ್ವರ ನಾಯಕ್,
ಸೆಕ್ರೆಟರಿ.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಖಾರಿಯಾಗುತ್ತಿದ್ದರೆ, ದಿನ್ನಿನ ನರಗಳು ಸೇಮುತ್ತಿದ್ದರೆ, ಶರೀರ ಲವಲವಿಕೆಯುಳ್ಳದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವ ವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ಒಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕರ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದು ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನು ವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ಒಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್ಜಾ, ಪ್ಲೇಗುಜ್ವರ,

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ೧ಕ್ಕೆ ೧—೪—೦, ೧೦ ಸೀಸೆಗೆ ೨—೭—೦, ೩೦ ಸೀಸೆಗೆ ೪—೧೧—೦. ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ, ಮಂಗಳೂರು ಟವುನಿಗೆ ಮಾತ್ರ.

ಮಧ್ಯಪ್ರಾಂತ್ಯದ ಮಂತ್ರಿಮಂಡಳ.

ಡಾ॥ ದೇಶಮುಖರೂ, ಶ್ರೀ ರಾಘವೇಂದ್ರ ರಾಯರೂ ಮಧ್ಯಪ್ರಾಂತ್ಯದ ಮಂತ್ರಿಮಂಡಳದಿಂದ ಪಕ್ಷಗಳೊಳಗಿನ ಅಂತಃಕಲಹಗಳ ಕಾರಣದಿಂದ ತಮ್ಮ ಮಂತ್ರಿಪದವಿಗೆ ರಾಜೀನಾಮೆ ಕೊಟ್ಟರು, ಈಗ ಅವರಲ್ಲಿ ಶ್ರೀ ರಾಘವೇಂದ್ರ ರಾಯರು ಪುನಃ ಮಂತ್ರಿಯಾಗಿ ನೇಮಿಸಲ್ಪಟ್ಟಿರುವರು. ಈ ದ್ವಿದಳ ರಾಜ ಪದ್ಧತಿಯಲ್ಲಿ, ರಿಸ್ಪಾನ್ಸಿವಿಸ್ಟರ ಪ್ರಬಲ ಕೇಂದ್ರವಾಗಿದ್ದ ಮಧ್ಯಪ್ರಾಂತ್ಯ ಕೌನ್ಸಿಲಿನಲ್ಲಿಯೂ ಕೂಡ ಸಾರ್ವಜನಿಕ ಅಭಿಪ್ರಾಯವು ನಡೆಯುವುದಿಲ್ಲವೆಂದೂ, ಸರಕಾರದ ತಂತ್ರೋಪಾಯಗಳಿಗೆ ಹಿಂದೀ ಧುರೀಣರು ಸುಲಭವಾಗಿ ಬಲಿಬೀಳುವರೆಂದೂ ಸ್ಪಷ್ಟವಾಗಿ ಕಂಡುಬರುತ್ತದೆ. ಹುದ್ದೆಗಳು ರಾಷ್ಟ್ರೀಯತ್ವವನ್ನು ಕೆಡಿಸುತ್ತಿವೆ ಎಂಬುದು ಇದರಿಂದಲಾದರೂ ತಿಳಿಯಬಹುದು. ಮಧ್ಯಪ್ರಾಂತ್ಯದ ಈ ಗಡಿಬಿಡಿಗಳಲ್ಲಿ ಕೇಳಕರರೂ ಜಯಕರರೂ ಒಂದಾದರೂ ಮಾತಿಲ್ಲದೆ ಸುಮ್ಮನಿದ್ದುದು ಆಶ್ಚರ್ಯಕರ. ತಾಂಬೆಯವರ ಪಕ್ಷದ್ರೋಹವು ನಡೆದ ಕೌನ್ಸಿಲಿನಲ್ಲಿ ರಾಘವೇಂದ್ರರಾಯರು ಲಾಗ (Somersault) ಹೊಡೆಯುವುದಾದರೂ ಆಶ್ಚರ್ಯಕರವಲ್ಲ. ಸ್ಯಾಮನ್ ಕಮಿಶನ್ನಿನ ಬಗ್ಗೆ ಸಹಕಾರವು, ಇವರು ತಾವು ಅಸಹಕಾರಿಗಳೆಂದು ದೃಢಪಡಿಸುವ ಸಮಯದಲ್ಲಿಯೇ ಇವರ ಮೂಗಿನ ಕೆಳಗೆಯೇ ಇವರ ಸೆಕ್ರೆಟರಿಗಳ ಮೂಲಕ ನಡೆಯುವಾಗ ಮಧ್ಯಪ್ರಾಂತ್ಯದ ಈ ಮಂತ್ರಿಗಳು ಕೌನ್ಸಿಲು ಸದಸ್ಯರೊಡನೆ ಕಣ್ಣುಮುಚ್ಚಾಟಕ್ಕೆ ಪ್ರಾರಂಭಿಸಿರುವರೆಂದು ತೋರುವುದು. ಈ ಕೌನ್ಸಿಲಿನ ಮುಂದಿನ ಘಟನಾವಳಿಗಳು ಮತ್ತೂ ಉತ್ತೇಜಕವಿರಲು ಕಾರಣವಿದೆ.

ಹಿಂದೂಸ್ಥಾನದೊಳಗಿನ ಮಜೂರ ಮುಷ್ಕರಗಳೂ ಸರಕಾರದ ಹೊಸ ಕಾನೂನೂ

ಹಿಂದೂಸ್ಥಾನದೊಳಗೆ ಒಂದೇ ಸಮಯದಲ್ಲಿ ಪ್ರಸರಿಸಿಬಿಟ್ಟ ಮಜೂರ ಮುಷ್ಕರಗಳು ಸರಕಾರವನ್ನು ಎಚ್ಚರಿಸಿಬಿಟ್ಟಿವೆ. ಸರಕಾರವು ಈ ಬಗ್ಗೆ ಹೊಸದೊಂದು ಕಾನೂನನ್ನು ಮಾಡಲು ನಿಶ್ಚಯಿಸಿದಾಗಿ ತಿಳಿದುಬರುತ್ತಿದೆ. ಹಿಂದೀಯರಾಗಿರದೆ ಹಿಂದೀ ಮಜೂರರನ್ನು ಹುರಿದುಂಬಿಸುವ ಪರದೇಶೀಯರನ್ನು ದೇಶದಿಂದ ಹೊರದಬ್ಬುವುದೇ ಇದರ ಉದ್ದೇಶ. ಮಜೂರ ಚಳವಳಿಯಲ್ಲಿ ಅನ್ಯದೇಶೀಯರು ಧುರೀಣತ್ವವನ್ನು ವಹಿಸುವುದು ದೇಶ ಹಿತದ ದೃಷ್ಟಿಯಿಂದ ಒಳ್ಳೆಯದಲ್ಲವೆಂದು ಎಲ್ಲರೂ ಒಪ್ಪುವ ಮಾತೇ ಆಗಿದೆ. ಏಕೆಂದರೆ ಮಜೂರ ಚಳವಳಿಗಳು ದೇಶದ ಅಂತಃಕಲಹಗಳ ಒಂದು ರೂಪ ಮಾತ್ರ ಆಗಿರುವುದರಿಂದ ದೇಶದವರೇ ಅದರ ವಿಷಯವಾಗಿ ಆಲೋಚಿಸತಕ್ಕದ್ದಾಗಿದೆ. ಆದುದರಿಂದ ಸರಕಾರದವರು ತರಲಿಚ್ಛಿಸುವ ಈ ಕಾನೂನು ಒಂದು ರೀತಿಯಲ್ಲಿ ಪ್ರಯೋಜನಕಾರಿಯಾಗುವ ಸಂಭವವಿದೆ. ಆದರೆ ಇದು ಈಗಿನ ಅನ್ಯ ದೇಶೀಯರಿಂದ ನಡೆಸಲ್ಪಡುವ ನಮ್ಮ ಸರಕಾರದಿಂದ ಯಾವ ದುರುಪಯೋಗಕ್ಕೆ ಹಾಕಲ್ಪಡುತ್ತದೆಂದು ಹೇಳಬರುವುದಿಲ್ಲ. ಆದುದರಿಂದ ಸರಕಾರವು ಒಂದು ಕಮಿಟಿಯನ್ನು ನೇಮಿಸಿ ಹಿಂದೂಸ್ಥಾನದೊಳಗೆ ನಡೆದ ಎಲ್ಲಾ ಮುಷ್ಕರಗಳ ಪೂರ್ವಾಪರಗಳನ್ನು ವಿಚಾರಿಸಿ ಈ ಮುಷ್ಕರಗಳ ಮೂಲಕಾರಣಗಳನ್ನು ಹುಡುಕಿ ತೆಗೆದು, ಅವುಗಳಿಗೆ ಸರಿಯಾದ ಕಾನೂನನ್ನು ಮಾಡಿದರೆ ಧಾಂಡಿಗರಿಗೂ, ಮಜೂರ ಮತ್ತು ಸರಕಾರ ಈ ಮೂವರಿಗೂ ಇದರಿಂದ ಉಪಕಾರವಾಗುವುದು. ಅಲ್ಲದೆ ಒಂದೇ ಬಾರಿ ನಡೆಯುವ ಮುಷ್ಕರಗಳ ಕ್ರಮವನ್ನೂ, ತಾತಾ ಕಂಪೆನಿ, ಮುಂಬಯಿ ಗಿರಣಿಗಳಲ್ಲಿ ಕಾಣಬರುವ ಮಜೂರ ಧನಿಗಳ ಹೆದರಿಸುವಿಕೆಗಳನ್ನೂ ನೋಡಿದರೆ ಮುಷ್ಕರಗಳ ಕಡೆಗೆ ತಿಂತಕರ ಅಂದಾಜಿನ ಪ್ರಯೋಗಗಳನ್ನು ಮಾಡಿದರೆ ಯಾವ ಲಾಭವೂ ಆಗಲಿಕ್ಕಿಲ್ಲವೆಂದು ತೋರುವುದು. ಅಲ್ಲದೆ ಈ ಮುಷ್ಕರಗಳಿಂದ ರಾಷ್ಟ್ರೀಯ ಸಂಪತ್ತು ಸೂರೆಹೋಗಿ ರಾಷ್ಟ್ರೀಯ ಕೈಗಾರಿಕೆಗಳು ಕೆಡುವುವೆಂಬುದನ್ನೂ ಮರೆಯಲಾಗುವುದಿಲ್ಲ. ಅಲ್ಲದೆ ಹಿಂದೀ ಕಾರ್ಖಾನೆಗಳು ಪಾಶ್ಚಾತ್ಯ ಕಾರ್ಖಾನೆಗಳಿಂದ ಶತಮಾನದಷ್ಟು ಹಳೇ ಕ್ರಮದವುಗಳಾಗಿದ್ದು ಒಮ್ಮಿಂದೊಮ್ಮೆ ಮಜೂರ ಸ್ಥಿತಿಯನ್ನು ಸುಧಾರಿಸಲು ಶಕ್ತರಾಗಿಲ್ಲವೆಂಬುವನ್ನೂ ಆಲೋಚಿಸಬೇಕಾಗುವುದು. ಆದುದರಿಂದ ಸರಕಾರವು ಮಜೂರರ ವಿರೋಧವೆಂದೂ ಅಭಿಪ್ರಾಯ ಹುಟ್ಟಿಸಬಹುದಾದ ಈ ಕಾನೂನನ್ನು ಜಾರಿಗೆ ತರುವ ಮೊದಲು ಇಕ್ಕಡೆಯ ಸ್ಥಿತಿಗತಿಗಳನ್ನೂ ಚಳವಳಿಗಳ ಪೂರ್ವಾಪರಗಳನ್ನೂ ಕಮಿಟಿ ಮೂಲಕ ವಿಚಾರಿಸುವುದು ಅಗತ್ಯವಿದೆ.

ಕೆನರಾ ಬಾಲಿಕಾ ಪಾಠಶಾಲೆ

ಈ ಪಾಠಶಾಲೆಯ ಪರವಾಗಿ ಕಳೆದ ನಮ್ಮ ಕೆಲವು ಸಂಚಿಕೆಗಳಲ್ಲಿ ಪ್ರಕಟವಾದ ಪತ್ರವ್ಯವಹಾರಗಳನ್ನು ನಾವು ಚೆನ್ನಾಗಿ ಅವಲೋಕಿಸಿರುವೆವು. "ಹೆಣ್ಮಕ್ಕಳ ತಂದೆ"ಯವರು ಶಾಲೆಯ ಅಭಿವೃದ್ಧಿಯ ಅವಶ್ಯಕತೆಗಳನ್ನೂ, ಆ ಅಭಿವೃದ್ಧಿ ಬಗ್ಗೆ ತೋರುವ ಸಾಧ್ಯತೆಗಳನ್ನೂ ವಿವರಿಸಿ ವ್ಯವಸ್ಥಾಪಕರನ್ನು ಹುರಿದುಂಬಿಸಲು ಪ್ರಯತ್ನಿಸಿರುವರು. ಇತ್ತ ಪಾಠಶಾಲೆಯ ಹಿತಚಿಂತಕರೊಬ್ಬರು ಶಾಲೆಯ ಸ್ಥಳಾಭಾವ, ಧನಾಭಾವ ಮತ್ತು ವಿದ್ಯಾರ್ಥಿನಿಗಳ ಅಭಾವ, ಹೀಗೆ ಅಭಾವತ್ರಯಗಳನ್ನು ವಿವರಿಸಿ, ಇವುಗಳನ್ನು ಪರಿಹರಿಸುವ ಬಗ್ಗೆ ವಿಜ್ಞಾಪಿಸಿಕೊಂಡಿರುವರು. 'ಹೆಣ್ಮಕ್ಕಳ ತಂದೆ' ಯವರು ಮಂಗಳೂರಲ್ಲಿ ಅನುಭವವಾಗುವ ಒಂದು ಅಭಾವವನ್ನು ತೋರಿಸಿರುವರು. ಊರಲ್ಲಿ ಗವರ್ನಮೆಂಟ್ ಟ್ರೈನಿಂಗ್ ಸ್ಕೂಲೆಂದೂ, ಸೈಂಟ್ ಎನ್ಸ್ ಹೈಸ್ಕೂಲ್ ಎಂದೂ, ಸೈಂಟ್ ಆಗ್ನೆಸ್ ಕಾಲೇಜೆಂದೂ ದೊಡ್ಡದೊಡ್ಡ ವಿದ್ಯಾಸಂಸ್ಥೆಗಳು ಹುಡುಗಿಯರಿಗಾಗಿ ನಡೆಯುತ್ತಿರುವಾಗ ಹಿಂದೂ ಗೃಹಲಕ್ಷ್ಮಿಗಳು ಸರಸ್ವತೀ ಪ್ರಸನ್ನತೆಯನ್ನು ಈ ಪರಸಂಸ್ಥೆಗಳಿಂದಲೇ ಪಡೆಯಬೇಕಾಗಿದೆಯೆಂಬುದು ಅತ್ಯಂತ ಶೋಚನೀಯವಾದದು. ಈ ಶಾಲೆಗಳಿಗೆ ವಿವಾಹವಾಗುವ ಮೊದಲೇ ಹೋಗಿ ಶಿಕ್ಷಣ ವಿದ್ಯಾಭ್ಯಾಸವನ್ನು ಪಡೆವ ವಿದ್ಯಾರ್ಥಿನಿಗಳ ಸಂಖ್ಯೆಯನ್ನು ನೋಡಿದರೆ—ವಿದ್ಯಾರ್ಥಿನಿಗಳ ಅಭಾವವೆಂಬ ಒಂದು ಅಭಾವ, ಕಾಲ್ಪನಿಕವಾದುದಲ್ಲದೆ ನಿಜವಲ್ಲವೆನ್ನಬೇಕಾಗುವದು. ಮೇಲೆ, ಅಕಾಲ ವೈಧವ್ಯದ ನಂತರ ಸಂಸಾರದಿಂದ ತಿರಸ್ಕೃತರಾಗಿ ದಯಾಧ್ಯಾಸದ ಆಶ್ರಯಕ್ಕಾಗಿ ಹಾತೊರೆಯುವ ಆ ಹಲವು ಭಗಿನಿಯರ ಹಿತವನ್ನುದ್ದೇಶಿಸುವುದಾದರೂ ಪ್ರೌಢ ವಿದ್ಯಾಭ್ಯಾಸಕ್ಕೆ ವಿದ್ಯಾರ್ಥಿನಿಗಳ ಅಭಾವವು ಉಂಟಾಗಲಾರದು. ಕೆನರಾ ಹೈಸ್ಕೂಲಿಗೆ, ಗವರ್ನಮೆಂಟ್ ಕೊಲೇಜು, ಎಲೋಸಿಯಸ್ ಕೊಲೇಜು, ಇನ್ನಿತರ ಹೈಸ್ಕೂಲುಗಳ ಆಕರ್ಷಣೆಯನ್ನು ಬಿಟ್ಟು ನೂರು ಮಂದಿ ಹುಡುಗರು ಬಂದು ಸೇರಬಲ್ಲರಾದರೆ, ಅದೇ ರೀತಿಯಲ್ಲಿ ಅದೇ ಉತ್ಸಾಹದಿಂದ ಕೆನರಾ ಬಾಲಿಕಾ ಪಾಠಶಾಲೆಯು ವ್ಯವಸ್ಥೆಗೊಳಿಸಲ್ಪಟ್ಟರೆ ಶಾಲೆಯು ವಿದ್ಯಾರ್ಥಿನಿಗಳ ಸಲುವಾಗಿ ಯೋಚನೆ ಪಡಬೇಕಾದುದೇ ಇಲ್ಲ. ಕೆನರಾ ಹೈಸ್ಕೂಲಿನ ಆರ್ಥಿಕ ಸ್ಥಿತಿಯು ಇಷ್ಟು ಚೆನ್ನಾಗಿದ್ದು ಅದರ ಒ ಹೊಸಸ್ಥಳಗಳನ್ನೂ ಹೊಸಕಟ್ಟಡಗಳನ್ನೂ, ಹೊಸ ಉಪಕರಣಗಳನ್ನೂ ಪಡೆಯಲು ಸಾವಿರಾರು ರೂಪಾಯಿಗಳು ಕೂಡಬಹುದಾದರೆ ಬಾಲಿಕಾ ಪಾಠಶಾಲೆಗೆ ಅದು ಅಸಾಧ್ಯವೆಂದು ಹೇಳಲಾಗುವುದಿಲ್ಲ. ಕೆನರಾ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳೆಂದು ಹುಡುಗರು ಮಾತ್ರವಲ್ಲ, ಹೆಣ್ಣು ಹುಡುಗಿಯರನ್ನೂ ಸ್ವಂತವಾಗಿ ಪಡೆದಂಥವರಾಗಿರುವರು. ಅವರ ಔದಾರ್ಯವೂ ಅಲ್ಮಾಮೇಟರ (Almamater)ನ ಹುಡುಗರ ಕಡೆಗೆ ಮಾತ್ರವಲ್ಲ, ಅದಕ್ಕಿಂತಲೂ ಮಾರ್ದವದ ಕಲ್ಪನೆನ್ನು ಉಂಟುಮಾಡಬಲ್ಲ ಹುಡುಗಿಯರ ಶಾಲೆಯ ಕಡೆ ಪ್ರಸ್ಫುಟಿಸಬಲ್ಲದೆಂದು ನಾವು ನೆನಸುವೆವು. ಮುಖ್ಯಾಗಿ ಹುಡುಗಿಯರಿಗಾಗಿ ಹಿಂದೂಗಳಲ್ಲಿ ಪುರುಷರಿಗೆ ಯ ಸಹಾನುಭೂತಿಯೂ ಉಂಟಾಗುವುದಿಲ್ಲವೋ ಎಂದು ನನ ಅನಾದರವು ತೋರುವುದು. ಕೆನರಾ ಹೈಸ್ಕೂಲಿನ ಸ್ಥಾಪಕರ ಲಕ್ಷ್ಯವನ್ನು ನಾವು ಹೃತ್ಪೂರ್ವಕವಾದ ಉತ್ಸಾಹದಿಂದ ಈ ಕಡೆಗೆ ಸೆಳೆಯಲು ಈ ಮೂಲಕ ಪ್ರಯತ್ನಿಸಿರುವ

ಬರುವಾಗ ಬಹಿಷ್ಕಾರ ಹಾಕಿದವರೇ ಬಹಿಷ್ಕಾರ ದೈನ್ಸಲು ಪ್ರಾರಂಭಿಸಿದ್ದಾರೆ.

• • • •

ಮದ್ರಾಸಿನ ಹಿಂದೂ ಪತ್ರಿಕೆಯಲ್ಲಿ ಬೆಂಗಳೂರು ಗಣಪತಿಯ ಗಲಾಟೆಯ ಕುರಿತು ಸರಕಾರದ ಸುಳ್ಳು ಹೇಳಿಕೆಗಳನ್ನು ಪ್ರಕಟಿಸಿ ನಿಜವಾದ ಸಂಗತಿಯನ್ನು ಪ್ರಕಟಿಸಿದ ಇಮ್ಮಡಿಕ್ಕಾಗಿ ಮೈಸೂರು ಲಾಯರ್ ಸಂಘದವರ ಒಡ್ಡೋಲಗದ ಗಣಪತಿಯ ಕಣ್ಣು ಹಿಂದೂ ಪತ್ರಿಕೆಯ ಮೇಲೂ ಬಿತ್ತು.

• • •

ಮದ್ರಾಸಿನ ಒಬ್ಬ ಮೋಟಾರ್ ಡ್ರೈವರನಿಗೆ ಟ್ರಾಫಿಕ್ ಪೋಲೀಸಿನವನ ಟ್ರಾಫಿಕ್ ಸಿಗ್ನಲನ್ನು ಉಲ್ಲಂಘಿಸಿದ ಪರಃ ಮೊಕದ್ದಮೆಗೆ ಗುರಿಮಾಡಿದ್ದರು. ಈ ಟ್ರಾಫಿಕ್ ಡ್ಯೂಟಿ ನಿಂತ ಪೋಲೀಸಿನವರು ತಮ್ಮ ಸರಿಯಾದ ಸ್ಥಳದಲ್ಲಿ ನಿಲ್ಲದೆ ಇತರರ ಕೂಡೆ ಮಾತನಾಡುವ ಕ್ರಮವು ಕೆಲವರಲ್ಲಿ ಇರುವುದರಿಂದ ಡ್ರೈವರನಿಗೆ ಶಿಕ್ಷೆಕೊಡಲು ಸಾಧ್ಯವಿಲ್ಲವಾಗಿ ಮ್ಯಾಜಿಸ್ಟ್ರೇಟರ ಹೇಳಿಕೆ.

ನೋಟಗಳು
NOTES

ಮಡಿಕೇರಿಯ "ಕೊಡಗು" ಪತ್ರಿಕೆಯಲ್ಲಿ [illegible] ಪ್ರಯಾಣಿಕರು 'ಬಸ್ಸುಗಳ ಓಡಾಟ- ಆಡುಗಳ ಸಾಯುವಿಕೆ' [illegible] ಲೇಖನವನ್ನು ಸಮ್ಬಂಧಪಟ್ಟ ಅಧಿಕಾರಿಗಳ ಗಮನಕ್ಕೆ [illegible] ಬರೆದಿರುವರು. ಲೇಖಕರು ರಾಜಾಸ್ತ್ರೆಯನ್ನು [illegible] ಮೈದಾನೆಂದು ಎಣಿಸಿದ್ದಾರೊ ಏನೊ?

• • •

ಮಡಿಕೇರಿಯಿಂದ ಸಂಪಾಜೆ ವರೆಗೆ ಕೆಲವರ್ಷಗಳ [illegible] ರಸ್ತೆಯು ಬಹು ಚೆನ್ನಾಗಿತ್ತು. ಈಗ ಕಳೆದ ಎರಡು [illegible] ಗಳಿಂದೀಚೆಗೆ ಮಾರ್ಗದ ಎರಡು ಬದಿಯಲ್ಲಿಯೂ ಗಿಡಬಳ್ಳಿಗಳು [illegible] ಅರ್ಧ ಮಾರ್ಗವನ್ನು ಆಕ್ರಮಿಸಿಕೊಂಡಿರುತ್ತವೆ.

• • •

ಮಾರ್ಗಕ್ಕೆ ಆಕ್ರಮಿಸಿರುವ ಗಿಡಬಳ್ಳಿಗಳ [illegible] ಟಂದ ಆಡುಗಳು ಮಾರ್ಗದ ಬದಿಯಲ್ಲಿದ್ದು ಬಸ್ಸುಗಳು [illegible] ವಾಗ ಹೆದರಿ ಆಚೆ ಪಕ್ಕದಿಂದ ಈಚೆ ಪಕ್ಕಕ್ಕೆ [illegible] ಬಂದರೆ ಡ್ರೈವರರು ಯಾವ ತರದ ಬ್ರೇಕನ್ನು ಉಪಯೋಗಿಸುವದು?

• • •

ಲೇಖಕರು ಆಡುಗಳ ಸಾಯುವಿಕೆಯನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವ ಬದಲಿಗೆ ಕಳೆದ ಎರಡು ವರುಷಗಳಿಂದ ಮಡಿಕೇರಿಯಿಂದ ಎರಡು ಮೈಲು ಈಚೆಗೆ ಬಿದ್ದಿರುವ ಕಲ್ವರ್ಟನ್ನು ದುರುಸ್ತಿ ಮಾಡಲಿಕ್ಕೂ ಮಾರ್ಗಗಳ ಬದಿಯಲ್ಲಿ ಬೆಳೆದಿರುವ ಗಿಡಬಳ್ಳಿಗಳನ್ನು ತೆಗೆಸುವ ಬಗ್ಗೆ ಬರೆದಿದ್ದರೆ ಆಡುಗಳ ಸಾಯುವಿಕೆ ಕಮ್ಮಿಯಾಗುತ್ತಿತ್ತಲ್ಲವೇ.

• • • •

ಮುಂಬಾಯಿಯಲ್ಲಿ ದೃಷ್ಟಿಚಿಕಿತ್ಸಕ ಡಾಕ್ಟರಾದ ಬಾರ್ಟನ ಎಂಬವರು ಒಬ್ಬ ಪಾರ್ಸಿ ತರುಣಿಯ ಕಣ್ಣುಗಳನ್ನು ಪರೀಕ್ಷಿಸುವಾಗ ಅವಮಾನಪಡಿಸಿದ್ದಕ್ಕೆ ಡಾಕ್ಟರರಿಗೆ ಒಂದು ತಿಂಗಳ ಸಜೆ ಮತ್ತು ೧,೦೦೦ ರೂಪಾಯಿ ಜುರುಮಾನೆ.

• • •

ಬೆಂಗಳೂರು ಗಣಪತಿಯ ಗಲಭೆ ಇನ್ನೂ ಮುಗಿದಿಲ್ಲ; ವಿದ್ಯಾರ್ಥಿಗಳ ಮೇಲೆ ಬಿಟ್ಟ ನೂರನಾಲ್ವತ್ತನಾಲ್ಕನೆ ಪ್ರಕರಣ ಇನ್ನೂ ಮುಗಿದಿಲ್ಲ.

• • • •

ನೂರನಾಲ್ವತ್ತನಾಲ್ಕನೆ ಪ್ರಕರಣವನ್ನು ಸಾರಲಿಕ್ಕೆ ೫೦ ಜನ ಪೋಲೀಸ್, ಬಂದೂಕು ರಿಜರ್ವ ಪೋಲೀಸ, ಸಿಟಿ ಮೆಜಿಸ್ಟ್ರೇಟರು ಸ್ವತಹಾ ಹಾಜರು ಜನಗಳ ಗುಂಪು ೨೦೦೦,

• • • •

ಗುಡಿ ಬಂಡೆಯ ರಾಮಲಿಂಗೇಶ್ವರ ಪಾರ್ವತಿ ಅಮ್ಮನವರ ಗುಡಿಯ ಮೇಲೂ ಕಳ್ಳಕಾಕರ ಹಾವಳಿ.

• • • •

ಕೆಲವರ ಹೇಳಿಕೆ ಮುಸಲ್ಮಾನರ ಹಾವಳಿ ಎಂದು, ಆದರೆ ಪತ್ತೆ ಮಾಡುವ ಆಫಿಸರ್ ಮುಸಲ್ಮಾನ ಸಾಹೇಬರು

• • • •

ಇಷ್ಟರ ವರೆಗೆ ಬೆಂಗಳೂರಿನಲ್ಲಿ ಗಣಪತಿಯ ಮೇಲೆ ಮಾತ್ರ ಮುಸಲ್ಮಾನರ ಹಾವಳಿ. ಈಗ ಇಡೀ ಮೈಸೂರು ಜಿಲ್ಲೆಯಲ್ಲಿ ತಲೆದೋರಿದ ಹಾಗೆ ಕಾಣುತ್ತೆ.

• • • •

ಹುಡುಗರು ತಂಬಾಕೋದರೆಂದು ಕೆಲ ಇಂಗ್ಲಿಷ ಪತ್ರಿಕೆಗಳ ಭಾವನೆ ತಂಬಾಕೋರ ಹುಡುಗರಿಗೆ ಮುಸಲ್ಮಾನರ ಜಟಾಪಟಿಯ!

* * * *

ಬೆಂಗಳೂರ ದೊಡ್ಡದೊಡ್ಡ ಸರಕಾರೀ ನೌಕರರಿಗೆ ರಾತ್ರಿಯಲ್ಲಿ ಬೀಳುವುದಿಲ್ಲ ನಿದ್ರೆ ಹಗಲಲ್ಲಿ ಬಾಯಿಗೆ ರುಚಿಸುವುದಿಲ್ಲ ಊಟ.

• • • •

ನೈಜಾಮ ರಾಜ್ಯದಲ್ಲಿ ಒಂದು ಹೆಂಗಸು ಮೂರು ಸಲ ಪ್ರಸವಿಸಿದಾಗಲೂ ಅವಳ ಮಕ್ಕಳು ಕಾಣೆಯಾಗುತ್ತಿದ್ದುವಂತೆ. ಈ ಸಲ ನಿಜತ್ವವನ್ನು ಕಂಡುಹಿಡಿಯಲು ಪೋಲೀಸು ಕಾವಲು ಇಟ್ಟಿರಂತೆ. ಈ ಸಲದ ಮಗುವು ಭದ್ರವಾಗಿ ಇರುವುದಂತೆ. ದೆವ್ವ ಭೂತ, ಪಿಶಾಚಿಗಳಿಗೂ ಪೋಲಿಸರ ಹೆದರಿಕೆ ಉಂಟಾಯಿತು.

* * * *

ಸ್ಯಾಮನ್ ಕಮಿಷನು ಹಿಂದೂಸ್ಥಾನಕ್ಕೆ ಬಂದಾಗ ಬಹಿಷ್ಕಾರದ ಮಳೆ. ಬಂದವರು ಮರಳಿ ಹೋಗಿ [illegible]

[illegible]ನೆಯ ವಿಭವ ಸಂವತ್ಸರದ ನಿ. ಶ್ರಾವಣ [illegible] ಶನಿವಾರದಿಂದ ವಿಭವ ಸಂವತ್ಸರದ ನಿ. ಶ್ರಾವಣ [illegible] ಶುಕ್ರವಾರದ ವರೆಗಿನ ಪಂಚಾಂಗ

([illegible]ನೆಯ ಸಿಂಹ (ಸೋಣ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ
8	[illegible]	[illegible]	[illegible]	ಮೃಗಶಿರಾ	[illegible]	[illegible]	6.21	6 36
9	[illegible]	[illegible]	[illegible]	ಆರ್ದ್ರಾ	[illegible]	[illegible]	6 21	6 36
10	[illegible]	[illegible]	[illegible]	ಪುನರ್ವಸು	[illegible]	[illegible]	6.21	6 35
11	[illegible]	[illegible]	[illegible]	ಆಶ್ಲೇಷಾ	[illegible]	[illegible]	6 22	6.34
12	[illegible]	[illegible]	[illegible]	ಮಘಾ	[illegible]	[illegible]	6 22	6.34
13	[illegible]	[illegible]	[illegible]	ಪುಬ್ಬಾ	[illegible]	[illegible]	6.22	6 33
14	[illegible]	●	[illegible]	ಉತ್ತರಾ	[illegible]	[illegible]	6.22	6.33

ಮಂಗಳೂರಿನ ವಾಯುಸ್ಥಿತಿ.

Date ತಾರೀಕು	Temperature. ಉಷ್ಣ (ಕಾವು) Maximum ಅಧಿಕ	Minimum ಅಲ್ಪ	Rainfall ಮಳೆ ದಿನದ ಮಳೆ	ಒಟ್ಟು ಮಳೆ.
31	83— 7	75— 2	0—86	—
1	82— 8	73— 9	1—61	—
2	85— 8	74— 2	0—56	—
3	85— 8	74— 5	0—19	—
4	85— 1	73— 3	0—01	—
5	75— 3	74— 3	0—01	—
6	85— 0	72— 4	0—04	—
[illegible]				105-77

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ಕತಿ	...	7— 8	8— 6
ಸಾಡ್ಲು	...	6—14	7— 8
ಸುಗ್ಗಿ	...	6— 6	7— 2
ರಾಶಿ	...	6— 6	6— 14
ಊರ ಅನ್ನಲ್ ಬೆಸ್ತಿಗೆ	...	7— 8	8 — 14
ರಂಗೂನು ಬೆಸ್ತಿಗೆ ಗೋಣಿ ೧ಕ್ಕೆ	...	12—12	13
ಎಲ್ಲೂರು ಬೆಸ್ತಿಗೆ ಮುಡಿ ೧ಕ್ಕೆ	...	7— 8	7—1[illegible]
ಗೋಧಿ ಗೋಣಿ ೧ಕ್ಕೆ	...	[illegible]	19 0
ಹುರಳಿ ಗೋಣಿ ೧ಕ್ಕೆ	...	8— 8	11 0
ಕಡ್ಲೆ ಗೋಣಿ ೧ಕ್ಕೆ	...	13— 8	15 0
ತೊಗರಿ ಗೋಣಿ ೧ಕ್ಕೆ	...	15— 4	15 8
ತೊಗರಿಬೇಳೆ ಗೋಣಿ ೧ಕ್ಕೆ	...	18— 0	27 — 0
ಉದ್ದು ಗೋಣಿ ೧ಕ್ಕೆ	...	14— 8	14 12
ಹೆಸರು ಗೋಣಿ ೧ಕ್ಕೆ	...	13— 0	14— 8
ಊರು ಬೆಲ್ಲ ಖಂಡಿ ೧ಕ್ಕೆ	...	80— 0	75 0
ಉಪ್ಪು ಗೋಣಿ ೧ಕ್ಕೆ	...	4— 8	5 — 4
ಚೋಲ್ಪು ಖಂಡಿ ೧ಕ್ಕೆ	...	130— 0	-
ಚೋಲ್ಪು ಹಿಂಡಿ ಖಂಡಿ ೧ಕ್ಕೆ	...	46— 8	47— 8
ಎಳ್ಳಿಂಡಿ ಖಂಡಿ ೧ಕ್ಕೆ	...	42— 8	45— 0
ಚೋಲ್ಪು ಎಣ್ಣೆ ಮುಡಿ ೧ಕ್ಕೆ	...	8— 8	9— 8
ಎಳ್ಳೆಣ್ಣೆ ಮುಡಿ ೧ಕ್ಕೆ	...	8— 4	8— 6
[illegible] ಬೆಸ್ತಿಗೆ ೧ಕ್ಕೆ	...	7— 2	8 0
[illegible] ಸಕ್ಕರೆ ಮುಡಿ ೧ಕ್ಕೆ	...	4— 0	—
ಊರ ಮೆಣಸಿನ ಕಾಯಿ ಮುಡಿ ೧ಕ್ಕೆ	...	4— 0	6— 0
ಸಾಸಿವೆ ಮುಡಿ ೧ಕ್ಕೆ	...	8— 0	8— 4
ಕೊತ್ತಂಬರಿ ಮುಡಿ ೧ಕ್ಕೆ	...	6— 0	7— 8
[illegible] ಕಾಫಿ ಖಂಡಿ ೧ಕ್ಕೆ	...	340— 0	410— 0
[illegible] ಅಡಿಕೆ ಖಂಡಿ ೧ಕ್ಕೆ	...	170— 0	210— 0
[illegible] ಖಂಡಿ ೧ಕ್ಕೆ	...	510— 0	520 —
[illegible] ಮುಡಿ ೧ಕ್ಕೆ	...	70— 0	80— 0
[illegible] ಮುಡಿ ೧ಕ್ಕೆ	...	4— 8	4 —7
[illegible] ಖಂಡಿ ೧ಕ್ಕೆ	...	37— 8	40— 0
ತೆಂಗಿನ ತಗಡು ೧ಕ್ಕೆ	...	15— 0	16— 8
ತೆಂಗಿನ [illegible] ಮುಡಿ ೧ಕ್ಕೆ	...	20— 0	21 —
[illegible] ೧ಕ್ಕೆ	...	16— 0	—
[illegible] ತಗಡು ಮುಡಿ ೧ಕ್ಕೆ	...	15 —	16— 8
[illegible] ೧ಕ್ಕೆ	...	13—0	13— 9
[illegible] ಖಂಡಿ ೧ಕ್ಕೆ	...	75—80	95 —

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ಅಪಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರವಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಔಷಧವಾಗಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0

ಇವನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮುದ್ರಾಸು.

ಮಂಗಳೂರು ಏಜಂಟರು:— [illegible] ಗೂಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ "ಬಿತ್ರೊ"



ನಮ್ಮ ಕಾರಖಾನೆಯಲ್ಲಿ ತಯಾರಾದ ದೀಪವು ಸೂರ್ಯ[illegible] ಪ್ರಕಾಶವನ್ನು ಕೊಡುವದು. ಬೆಳಗಾವಿಯಲ್ಲಿ ನಡೆದ [illegible] ಹಿಂದೀ ರಾಷ್ಟ್ರೀಯ ಮಹಾಸಭೆಯು ನಮ್ಮ ಈ ದೀಪಗಳ ಶ್ರೇಷ್ಠತ್ವವನ್ನು ನೋಡಿ ಬಂಗಾರದ ಪದಕವನ್ನು ಕೊಟ್ಟಿರುವದು. [illegible] ಕಡೆಗಳಲ್ಲಿ [illegible] ಮಾಲನ್ನು [illegible] ನಮ್ಮ [illegible] ಏಜಂಟರ [illegible] ಕ್ರಯ [illegible] ಪಟ್ಟಿಯನ್ನು [illegible] ಕಳುಹಿಸುವೆವು.

ನಮ್ಮ ಸ್ಪಿರಿಟ್ ದೀಪಗಳು ಉಪಯೋಗಕ್ಕೆ ಬಹಳ ಉತ್ತಮವಿದೆ.

ಶೋರೂಮ್ ಸ್ಥಾಪಿತವಾದದ್ದು ಟೆಲಿಫೋನ್ [illegible]
99 ನಾಗದೇವಿ ರಸ್ತೆ, 1910 23374

ದಿ. ಬೊಂಬೇ ಇನ್‌ಕೆಂಡೆಸೆಂಟ್ ಲೈಟ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂಬ್ರ [illegible],

ಜಿ. ಪಿ. ಓ. ಬೊಂಬೈ—1.



ಆರೋಗ್ಯವೆಂಬ ಧನಸಂಪತ್ತನ್ನು ಕಳಕೊಳ್ಳಬೇಡಿ!

ರೋಗವೆಂಬ ವಿಧಪತ್ತನ್ನು — ಪರಿಹರಿಸಿಕೊಳ್ಳಿರೋಡಿ

ಮಲೇರಿಯಾನ ಸರ್ವಜ್ವರಸಂಹಾರಿಣಿ

ಬಂಧುಗಳೇ ನಿಮ್ಮನ್ನು ಮಲೈಜರವು ಕಾಡುತ್ತಿದೆಯೇ?

ಹಾಗಾದರೆ ಮಲೇರಿಯಾನವೇ ನಿಮಗೆ ಬೇಕಾದದ್ದು.

ಕ್ರಯ:—[illegible] ಬಾಟ್ಲಿ 1ಕ್ಕೆ 1—8—0, ½ ಡಜನ್ ರೂ. 8—8—0; ಡಜನ್ 16—8—0

ಭಗಿನಿಗಳೇ!

ಕೊರುವ ಶಿಶುವಿನ ನೋಟವು [illegible] ಯಮಕೊಂಡಾ

ಆರೋಗ್ಯ ಪುಷ್ಟಿಯುಳ್ಳ ಮಗುವಿನ ಅಂದವು ತಾಯಿತಂದೆಗೆ ವೈಕುಂಠಾ.

ಬೇಬಿ ಟೋನ

[illegible] ಚಿರಂಜೀವಿಗಳ. ಅಜೀರ್ಣದ ರೋಗಕ್ಕೆ ಒಳಪಟ್ಟು ವಿವಿಧ ರೋಗಗಳಲ್ಲಿ ನರಳುತ್ತಿರುತ್ತಾರೋ

ಹಾಗ ಒಡನೆ ಹಸುಕೂಸುಗಳ ವ ಮಕ್ಕಳ ಅಮೃತವಾದ ಬೇಬಿ ಟೋನೆಂಬ ಮದ್ದನ್ನು ತರಿಸಿ ಅಗತ್ಯ ಕುಡಿಸಿರಿ. ಆಗ ಜೀರ್ಣದ ಶಕ್ತಿ, ದೇಹದ ಪುಷ್ಟಿಯೂ ಉಂಟಾಗಿ, ಜೋಲುಬಿದ್ದ ಮಾಂಸವು [illegible] ನವನಾಡಿ ಗಟ್ಟಿಯಾಗಿ ರಕ್ತತುಂಬಿ ಆರೋಗ್ಯದಲ್ಲಿ ಬೆಳೆದು ಸುಖದಲ್ಲಿ ಬಾಳುವಲು.

ಕ್ರಯ 4 ಔನ್ಸ ಬಾಟ್ಲಿ 1ಕ್ಕೆ 1—4—0.

ಹೆಚ್ಚಿನ ಮಾಹಿತಿಗೂ ಇತರ ಎಲ್ಲಾ ರೋಗಗಳ ಮದ್ದಿನ ವಿವರಕ್ಕೆ ಬಗ್ಗೆ ಪಮಾಣಪತ್ರದ ದೊಡ್ಡ ಕೆಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮಲೇರಿಯಾನ ಕಂಪೆನಿ,

2628 ನಂಬ್ರ 2. ಮಂಗಳೂರು ದ. ಕ.

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. ಸಪೋಟಿಲ್ಲಾ.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪೋಟಿಲ್ಲಾ, ದೇರಳೆ, ಚಿಕ್ಕು, ದಾಳಿಂಬೆ, ಚಂಪಕ, ಧಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳೂ ಸಿಗುವುವು. ಗಿಡಗಳು ನಮ್ಮಲ್ಲಿಯೇ ತಯಾರಾದುವು ಆಗುವುದರಿಂದ ಸಂದೇಹ ವಿಲ್ಲದೆ ಚೆನ್ನಾಗಿ ಫಲಿಸುವುವು. [illegible], ದೇಶೀಯ ಕಸಿಗಳು. [illegible] ಫಲ ಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು [illegible] ಮಾಡಿಯುವರಲ್ಲಿ ದೊರೆಯುವುವು.

ಕೆ ಮುದ್ದಣ್ಣ ಶೆಟ್ಟಿ
ದಿ. ಕೆನರಾ ನರ್ಸರಿ,
ರಿಸರ್ಚ್ ಗಾರ್ಡನ್, [illegible]
13192

C/o ಕೆ. ವಾಮನ ಶೆಟ್ಟಿ
ಕೆನರಾ ಛಾಪಖಾನೆ,
[illegible] ಮಂಗಳೂರು ದ. ಕ.



ರೂಪಾಯಿ 35 ಮತ್ತು ಅದಕ್ಕೆ ಮೇಲಿನ ಎಸ್. ಬಿ ಬಿ. ಎಲ್. ಕೋವಿಗಳು.

ರೂ. 45 ಮತ್ತು ಅದಕ್ಕೆ ಮೇಲಿನ ಡಿ. ಬಿ. ಬಿ. ಎಲ್. ಕೋವಿಗಳು.

ರೂ. 33 ಮತ್ತು ಅದಕ್ಕೆ ಮೇಲಿನ ಬೆಲೆಯ, ಒಂದು ನಳಿಗೆಯ ಮತ್ತು ಜೋಡು ನಳಿಗೆ ಕೋವಿಗಳೂ, ರೂಪಾಯಿ 37ಕ್ಕೆ ಮೇಲಿನ ಬೆಲೆಯ ರಿವಾಲ್ವರುಗಳೂ, ಪಿಸ್ತೂಲುಗಳೂ, ಎಲ್ಲಾ ತರದ ಕೋವಿ ಮತ್ತು ಅವುಗಳ ಮದ್ದು, ಸಾಮಾನು ಗಳೂ ಕಡಿಮೆ ಕ್ರಯದಲ್ಲಿ ಸಿಕ್ಕುವುವು.

ಕ್ಯಾಟಲಾಗಿಗೆ ಬರೆದಲ್ಲಿ ಕಳುಹಿಸಲಾಗುವದು.

ದಿ ಬೊಂಬೆ ಆರ್ಮರಿ,

331 ಅಬ್ದುಲ್ ರಹಿಮಾನ್ ರಸ್ತೆ,

ಮುಂಬಾಯಿ 3.

ಅನುಕ್ರಮಣಿಕೆ.

ಅಗ್ರಲೇಖ | ಪುಟ
ಲಕ್ನೋ ಪರಿಷತ್ತು ೬
ವಿದೇಶ ವರ್ತಮಾನ . ,,
ಸ್ಫುಟವಿಚಾರಗಳು . ೪
ಸೀಟಗಳು . ,,
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ ೩
ದಕ್ಷಿಣ ಕನ್ನಡ—ಮಂಗಳೂರು, ಮೂಲ್ಕಿ, ಕಾಪು, ಮಂಜೇಶ್ವರ . ,,
ವಿವಿಧ ಸಮಾಚಾರಗಳು ೯
ಬಂಟವಾಳ ಸೆಂಟರಿನ ಉಪಾಧ್ಯಾಯರ ಸಭೆಯ ವರದಿ ೯
ಇಂಡಿಯದ ಎಲ್ಲಾ ವಿಧದ ರಾಜಕೀಯ ಧುರೀಣರು ಸ್ಯಾಮನ್ ಕಮಿಶನ್ನಿಗೆ ಕಳುಹಿಸಿದ ಸ್ಟೇಟುಮೆಂಟುಗಳು ೧೧
ಶಾಲೆಗಳಲ್ಲಿ ಸಿವಿಕ್ಸ ಪಾಠಗಳನ್ನು ಕಲಿಸುವುದರ ಉದ್ದಿಶ್ಯ ಮತ್ತು ಪ್ರಯೋಜನ
ಮುಂಬಯಿ ಬಂಟರ ಯಾನೆ ನಾಡವರ ಸಂಘ ೧೨
ದ ಕ ಜಿಲ್ಲಾ ಟೀಚರ್ ಮೆನೇಜರರ ಸಂಘ ,
ಪತ್ರವ್ಯವಹಾರ, ೧, ೨ ೩, ೪ ೨
ಪ್ರೆಸ್ಸು ಕೊಮ್ಯುನಿಕ .
ಶಿಶು ರಕ್ಷಣೆ ೧೩
ಹಾವು ಕಡಿತ
ಉಡುಪಿಯ ಪತ್ರ . ,

ಸ್ವದೇಶಾಭಿಮಾನಿ.

ತಾರೀಕು ೭ನೇ ಶುಕ್ರವಾರ ಸಪ್ಟಂಬರ ೧೯೨೮.

ಲಕ್ನೋ ಪರಿಷತ್ತು.

ಕಳೆದ ಮೂರು ಸಂಚಿಕೆಗಳಲ್ಲಿ ನಾವು ನೆಹರು ಕಮಿಟಿಯ ವರದಿಯ ಪ್ರಮುಖ ವಿಷಯಗಳನ್ನೆತ್ತಿ ಚರ್ಚಿಸಿದೆವು ಅಲ್ಲದೆ ಸರಕಾರ ರಚನೆಯನ್ನೂ ಆ ವರದಿಯಿಂದ ಅನುವಾದಿಸಿ ಕಳೆದ ಸಂಚಿಕೆಯಲ್ಲಿ ಕೊಟ್ಟಿರುವೆವು ಇವುಗಳಿಂದ ನೆಹರು ಕಮಿಟಿಯ ಶ್ರಮವೂ, ಅವರು ತೋರಿಸಿರುವ ಮಹತ್ವದ ಪ್ರತಿಭೆಯೂ ಕರ್ನಾಟಕ ವಾಚಕರಿಗೆ ತಿಳಿದುಬಂದಿರಬಹುದು ಆ ವರದಿಯ ವಿಷಯವಾಗಿ ಸ್ಪಷ್ಟವಾದ ಠರಾವನ್ನು ಮಾಡುವ ಬಗ್ಗೆ ಲಕ್ನೋದಲ್ಲಿ ಎಲ್ಲಾ ಪಕ್ಷಗಳ ಧುರೀಣರ ಪರಿಷತ್ತು ಕಳೆದ ಆಗೋಸ್ತು ೨೮ ಇರಲ್ಲು ಕೂಡಿತು

ನೆಹರು ಕಮಿಟಿಯ ವರದಿಗೆ ಎಲ್ಲಾ ಕಡೆಗಳಿಂದಲೂ ಪ್ರೋತ್ಸಾಹ ಸಿಕ್ಕಿದುದೇ ಪರಿಷತ್ತಿಗೆ ಒಂದ ಶ ಭರವಸ ವಾಯಿತು ಹಿಂದೀ ಆಶಯಗಳಿಗೆ ವಿರೋಧಿಗಳಾಗಿ ಎವ ಎಂಗ್ಲೋ ಇಂಡಿಯಾನರೂ ಬ್ರಿಟಿಷ ಕನ್ಸರ್ವೆಟಿವ್ ಪಕ್ಷದವರೂ ಇದನ್ನು ಉಪಹಾಸಕ್ಕೆ ಗುರಿಮಾಡಲು ಪ್ರಯತ್ನಿಸಿದರಾದರೂ ಹಿಂದೂಸ್ಥಾನದ ಎಲ್ಲಾ ಧುರೀಣರೂ ಏಕ ಕಂಠದಿಂದ ಇದನ್ನು ಪ್ರಶಂಸಿದುದರಿಂದ ಬ್ರಿಟಿಷರಿಗೂ ಎಂಗ್ಲೋ ಇಂಡಿಯಾನರಿಗೂ ಹೆಚ್ಚು ಹಾನಿಯನ್ನು ಮಾಡಲು ಅವಕಾಶ ದೊರಿಯಲಿಲ್ಲ

ಸಾಮಾನ್ಯವಾಗಿ ಇದಕ್ಕೆ ಎಲ್ಲರ ಒಪ್ಪಿಗೆಯಿರುವಾಗ, ಅಭಿಪ್ರಾಯ ಭೇದವಿಲ್ಲದ ಹಿಂದೀಯರು ಇರಲಿಲ್ಲವೆನ್ನಲಿಕ್ಕೂ ಸಾಧ್ಯವಿಲ್ಲ. ರಾಜಕೀಯ ಕಾರಣಗಳಿಂದ ಅಲ್ಪಸ್ವಲ್ಪ ಮಟ್ಟಿಗೆ ಕಾಂಗ್ರೆಸಿನ ಸ್ವಾತಂತ್ರ್ಯ ವಾದಿಗಳಿಂದಲೂ ಬಹುಮಟ್ಟಿಗೆ ಕೊಮ್ಯುನಿಷ್ಟ ಅಂದರೆ ತೀಕ್ಷ್ಣ ಮಜೂರ ಪಕ್ಷದ ಕಡೆಯಿಂದಲೂ ನಿಷೇಧವಿತ್ತು, ಆದರೆ ಹೆಚ್ಚಿನ ನಿರೋಧವು ಜಾತೀಯ ಕಾರಣಗಳಿಂದ ಒಂದು ಕಡೆ ಮುಸ್ಲಿಮ್ ಲೀಗಿನಿಂದಲೂ ಇನ್ನೊಂದು ಕಡೆ ಹಿಂದೂ ಮಹಾಸಭೆಯಿಂದಲೂ ನಿರೋಧವಿದ್ದಿತು ಪಂಜಾಬ, ಬಂಗಾಳ ಮತ್ತು ಸಿಂಧ ಪ್ರಾಂತಗಳ ಸಮಸ್ಯೆಯೇ ಬಲವಾಗಿ ಲಕ್ನೋ ಪರಿಷತ್ತಿನ ಕಾರ್ಯಕಾರಿತೆಯ ಮೇಲೆ ಮೊದಲು ನ ನೂರ್ತಗಳಲ್ಲಿ ಅನುಮಾನವು ಉಂಟುಮಾಡಲ್ಪಟ್ಟಿದ್ದಿತು ಆದರೆ ಎಲ್ಲರಲ್ಲಿಯೂ ವಿನಾದರೊಂದು ಸರ್ವಸಮ್ಮತವಾದ ತೀರ್ಮಾನವು ಬೇಕೆಂದು ತೋರಿಬರುತ್ತಿದ್ದ ಆಶಯವು ಈ ಸಂದರ್ಭದಲ್ಲಿ ಶುಭಚಿಹ್ನೆಯಾಗಿದ್ದಿತು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂಲ್ಕಿ ಕಾಪು ಮಾರ್ಗವಾಗಿಯೂ ಎರಡನೇ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲುಸಿರುವ

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಶರಾವತಿ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary.

PROPRIETOR:—D. G. GORE.

ಇತ್ತ ನೋಡಿರಿ!

ಸುಗಂಧಿ ಮತ್ತು ಔಷಧಿಗಳ

ಕಾರಖಾನೆದಾರರಿಗೆ ಅವಶ್ಯಕ

ಪ್ರತಿಯೊಂದು ತರದ ಸುವಾಸಿಕ ಎಣ್ಣೆ, [illegible] ಊದಿನಕಡ್ಡಿ, ಸಾಬೂನು, ಜದಾರ್ಕ್, ನಸ್ಯ, [illegible] ಲವೆಂಡರವಾಟರ, ಅದರಂತೆಯೇ [illegible] ಮಿಕ್ಸ್ಚರ್, ಮುಲಾಮು, ಸಂಬತ್ತು, [illegible] ಗಳನ್ನು ತಯಾರಿಸುವುದಕ್ಕಾಗಿ ಬೇಕಾಗುವ [illegible] ಎಸೆನ್ಸ್, ಪರ್ಫ್ಯೂಮ್ಸ್, ಅರ್ಕ, ಆಸಿಡ್‌ಗಳು, [illegible] ಬಾಟಲಿಗಳು, ಬಣ್ಣಗಳು, ಪೆಪರಮಿಂಟ್, [illegible] ಹೀಲೋಸೆಂಟ್ ಇತ್ಯಾದಿ ವಸ್ತುಗಳು ನಮ್ಮಲ್ಲಿ [illegible] ಸಿಗುವವು. ಕ್ಯಾಟಲಾಗು ಪುಕ್ಕಟೆಯಾಗಿ [illegible]

ತರತರದ ಸುಗಂಧ ದ್ರವ್ಯಗಳನ್ನು ತಯಾರಿಸುವ [illegible] ಗಳನ್ನೊಳಗೊಂಡ ಪುಸ್ತಕಕ್ಕೆ ಬೆಲೆ ರೂ. 1—8—0. [illegible] ಗಾರ್ಡುಗಳನ್ನು 4 ಆಣೆಯ ಟಪ್ಪಾಲು ಚೀಟುಗಳನ್ನು [illegible] ರವಾನಿಸಲಾಗುವುದು

ಟೀಪು—ಇಂಗ್ಲೀಷ, ಮರಾಠೀ ಹಾಗೂ ಗುಜರಾಥಿಯಲ್ಲಿಯೇ ಪತ್ರ ಬರೆಯಿರಿ.

ಡಿ. ಜಿ. ಗೋರೆ,

15628 ಮಂಗಳದಾಸ ರೋಡ, ಮುಂಬಯಿ ನಂಬ್ರ 2.

ಫೋಟೋ ಕ್ಯಾಮರಾ.

ಈ ಕ್ಯಾಮರಾಗಳು ಹೊಸದಾಗಿ ಬಂದವು. ಇವರಲ್ಲಿ ಒಬ್ಬರ ಸಹಾಯವಿಲ್ಲದೆ ಎಷ್ಟು ಜನಗಳಾದರೂ ಫೋಟೋಗಳನ್ನು ತೆಗೆಯಬಹುದು. ಈ ಕ್ಯಾಮರಾ ಒಂದು ಇದ್ದರೆ ಬೇಕಾದವರಿಗೆ ಫೋಟೋಗಳನ್ನು ತೆಗೆದು ಹಣ ಸಂಪಾದನೆ ಮಾಡಬಹುದು. ಪೋಸ್ಟ್‌ಕಾರ್ಡಿನ ಸೈಜಿನಲ್ಲಿ ಫೋಟೋ ತೆಗೆಯುವದು. ಫೋಟೋ ತೆಗೆಯಲು ತಿಳಿಯದವರೂ ಸಹ ಇದರಲ್ಲಿ ತೆಗೆಯಬಹುದು, ಫೋಟೋ ತೆಗೆಯುವ ವಿಧಾನವನ್ನು ಕ್ಯಾಮರಾ ಜೊತೆಯಲ್ಲಿ ಕಳುಹಿಸುವೆವು.



ಕ್ರಯ 1ಕ್ಕೆ 4—8—0.

ವಿಳಾಸ:— ಕೆ. ಎನ್. ರಾಧಾಕೃಷ್ಣ ಅಂಡ್ ಬ್ರದರ್ಸ್, 148 ಚೈನಾ ಬಜಾರ್ ರೋಡ್, ಮದರಾಸು.

ಓಗ್ರೆ ಗ್ರಾಮೋಫೋನ್.

ಎಂಬ ಹಾಡುಗಾರಿಕೆಯ ಯಂತ್ರವು.

ಮೊದಲಿನ ಕ್ರಯ 35 ರೂ. ಈಗಿನ ಕ್ರಯ ರೂ. 10—8—0.

ಈ ಯಂತ್ರವು ವಿಲಾಯಿತಿಯಲ್ಲಿ ತಯಾರಾದದ್ದು, ಇಂಗ್ಲೀಷು, ಕನ್ನಡ, ಹಿಂದೂಸ್ಥಾನಿ, ಇಂಗ್ಲೀಷ ವಾದ್ಯ ಮುಂತಾದ ಪದಗಳನ್ನು ಹೇಳುವದು. ಲಗ್ನದ ಮನೆ, ನಾಟಕಶಾಲೆ ಮುಂತಾದ ಜನಕೂಡುವ ಸ್ಥಳದಲ್ಲಿ ಉಪಯೋಗಿಸಲು ಬಹಳ ಚೆನ್ನಾಗಿದೆ. ನೋಟಕ್ಕೆ ಲಕ್ಷಣವಾಗಿರುವಂತೆಯೂ, ಕ್ರಯದಲ್ಲಿ ಸುಲಭವಾಗಿಯೂ ಇರುವಂತೆ ಬಹು ಬಲಿಷ್ಠವಾದ ಸಾಮಾನುಗಳಿಂದ ಈ ಯಂತ್ರವನ್ನು ತಯಾರಿಸಿದೆ. ಸುಂದರವಾದ ಮೆಟಲ್ ಹಾರನ್ ಎಂಬ ಪದ ಕೇಳುವ ಕೊಳವೆ ಇದ ನಿದಾನವಾಗಿಯೂ, ಜಾಗ್ರತೆಯಾಗಿಯೂ, ಪದ ಕೇಳಲು ಸಾಧ್ಯ ಇದೆ. ಈ ಯಂತ್ರವನ್ನು ಎಲ್ಲಿ ಬೇಕಾದರೂ ಕೈಯಲ್ಲಿ ಹಿಡಿದುಕೊಂಡು ಹೋಗಲು ಅನುಕೂಲವಾದಂಥಾ ಸುಂದರವಾದ ಕೈ ಪೆಟ್ಟಿಗೆಯಲ್ಲಿಟ್ಟದೆ.

ಡಬ್ಬಲ್ ಸೈಡು ಎರಡು ಕಡೆಯೂ ಪದವಿರುವ 1 ರೆಕಾರ್ಡ ಸಹಿತ ಕ್ರಯ 10—8—0.

ಹೆಚ್ಚಿಗೆ ರೆಕಾರ್ಡ ಬೇಕಾದರೆ, ಪ್ರತ್ಯೇಕ ರೆಕಾರ್ಡ 1ಕ್ಕೆ ರೂ. 2—0—0

ಬೇಕಾದವರು 2 ರೂಪಾಯಿಗಳನ್ನು ಅಡ್ವಾನ್ಸಾಗಿ ಕಳುಹಿಸಿರಿ. ಬಾಕಿ ಮೊಬಲಿಗೆ ವಿ. ಪಿ. ಮೂಲಕ ಕಳುಹಿಸುತ್ತೇವೆ. ಟಪ್ಪಾಲು ಖರ್ಚು ಇಲ್ಲ.

ವಿಳಾಸ — ಲೀಗಲ್ ಟ್ರೇಡಿಂಗ್ ಕಂಪೆನಿ, ಪೋ ಬಾಕ್ಸ್ ನಂಬ್ರ 243, ಮದರಾಸು.

ಪುತ್ರಸಂಥಾನದ ಎಣ್ಣೆ.

ಈ ಔಷಧವನ್ನು ಒಬ್ಬ ಮಹಾತ್ಮರಿಂದ ತಯಾರಿಸಿದ್ದು. ಪುತ್ರ ಸಂಥಾನವಿಲ್ಲದ ಹೆಂಗಸರು ಈ ಎಣ್ಣೆಯನ್ನು ಋತು ದಿನಗಳು ಉಪಯೋಗಿಸಿದರೆ ಗರ್ಭವು ನಿಂತು ಪುತ್ರಸಂಥಾನವಾಗುವುದು. ಮತ್ತು ಪ್ರತಿ ತಿಂಗಳಲ್ಲಿಯೂ ಹೆಂಗಸರು ಮುಟ್ಟಾಗುವುದಕ್ಕೆ ಮೊದಲಾದರೂ ಅಥವಾ ನಂತರವಾದರೂ ಉಂಟಾಗುವ ಎಲ್ಲಾ ವಿಧವಾದ ವ್ಯಾಧಿಗಳನ್ನು ಹಿಂದಿಸಿ ಗುಣಪಡಿಸಿ ಗರ್ಭವನ್ನು ನಿಲ್ಲಿಸಿ ನವಮಾಸದಲ್ಲಿ ಮಕ್ಕಳನ್ನು ಪಡೆಯಬಹುದು. ಮದರಾಸು ಮತ್ತು ಮುಂಬಾಯಿ ಅಧಿಪತ್ಯಗಳಲ್ಲಿ ಈ ಎಣ್ಣೆಯನ್ನು ಉಪಯೋಗಿಸಿ ಅನೇಕರು ಪುತ್ರಸಂಥಾನವನ್ನು ಪಡೆದಿರುವರು. ಒಂದು ಬಾಟಲ್ ತರಿಸಿ ಪರೀಕ್ಷಿಸಿರಿ ಉಪಯೋಗಿಸುವ ವಿಧ ಔಷಧದ ಜೊತೆಯಲ್ಲಿ ಕಳುಹಿಸುವೆವು.

ಕ್ರಯ ಬಾಟ್ಲು ಒಂದಕ್ಕೆ ರೂ. 2—8—0

ವಿಳಾಸ:— ಕೆ. ನಾಥಮುನಿ ಎಂಡ್ ಸನ್ಸ್, 168 ಚೈನಾ ಬಜಾರ್ ರೋಡ್ ಮದರಾಸು.

[illegible] ಎಲ್ಲಾ ವಿಧದ ರಾಜಕೀಯ [illegible] ಸೈಮನ್ ಕಮಿಶನ್ನಿಗೆ ಕಳುಹಿಸಿದ ಸ್ಕೀಮುಗಳು.

(ಕಳೆದ ಸಂಚಿಕೆಯಿಂದ ಮುಂದರಿಸಿರುವುದು)

ರಾಜ್ಯದ ಭದ್ರತೆ.

[illegible] ಜನರಲರು ಕೋಮನ್ ವೆಲ್ತಿನ ಭದ್ರತೆಗಾಗಿ ಒಂದು [illegible] ಕಮಿಟಿಯನ್ನು ನೇಮಿಸುವರು. ಇದರಲ್ಲಿ (೧) ಮುಖ್ಯ ಮಂತ್ರಿಗಳು, (೨) ಡಿಫೆನ್ಸ ಮಂತ್ರಿಗಳು, (೩) ಅನ್ಯ ದೇಶೀಯ ಸರಕಾರದೊಡನೆ ವಹಿವಾಟ ನಡೆಸುವ ಮಂತ್ರಿ, (೪) ಸರ್ವ ಸೇನಾಧಿಪತಿ, (೫) ವಿಮಾನ ಸೈನ್ಯದ ಕಮಾಂಡರ್, (೬) ನೌಕಾ ಸೈನ್ಯದ ಕಮಾಂಡರ್, (೭) ಜನರಲ್ ಸ್ಟಾಫಿನ ಮುಖ್ಯಸ್ಥರು, (೮) ಇನ್ನು ಇತರ ಇಬ್ಬರು ಈ ರೀತಿ ೯ ಮಂದಿ ಮೆಂಬರರು ಇರುವರು. ಮುಖ್ಯ ಮಂತ್ರಿಗಳು ಈ ಕಮಿಟಿ ಪ್ರೆಸಿಡೆಂಟರಾಗಿರುವರು. ಇಂಡಿಯದ ಭದ್ರತೆಗಾಗಿ ಆಯಾ ಭದ್ರತೆಯ ಇಲಾಖೆಯ ವಿಷಯ ಸರಕಾರಕ್ಕೆ ಅನುಭವ ಕೊಡುವುದೇ ಇವರ ಮುಖ್ಯ ಕೆಲಸವಾಗಿದೆ

ಶತ್ರುಗಳು ಇಂಡಿಯದ ಮೇಲೆ ದಂಡೆತ್ತಿ ಬರುವ ಸಂದರ್ಭದಲ್ಲಿ ಬೇಕಾದ ಹಣವನ್ನು ಒದಗಿಸುವ ಅಧಿಕಾರವು ಗವರ್ನರ ಜನರಲರಿಗೆ ಇರುವುದು.

ಸಿವಿಲ್ ಸರ್ವಿಸ್.

ಕೋಮನ್ ವೆಲ್ತ ಸ್ಥಾಪನೆಯಾದೊಡನೆ ಪಬ್ಲಿಕ್ ಸರ್ವಿಸ್ಸಿನ ಎಲ್ಲಾ ನೌಕರರು ಕೋಮನ್ ವೆಲ್ತಿನ ನೌಕರರೆಂತ ಎಣಿಸಲ್ಪಡುವರು. ಗವರ್ನರ ಜನರಲರು ಇದನ್ನು ಕ್ರಮ ಪಡಿಸುವುದಕ್ಕಾಗಿ ಒಂದು ಪಬ್ಲಿಕ್ ಸರ್ವಿಸ್ ಕಮಿಶನನ್ನು ನೇಮಿಸುವರು. ಪಬ್ಲಿಕ್ ಸರ್ವಿಸ್ ಕಮಿಶನಿನ ಮೆಂಬರರಿಗೆ ೫ ವರ್ಷಗಳ ಅವಧಿ ಇರುವುದು

ಸೈನ್ಯದ ಸರ್ವಿಸ್.

ನೆಲ, ಜಲ, ರೊಯಲ್ ಇಂಡಿಯನ್ ಮೆಂಡ್ಮೆನ್, ವಿಮಾನ ಸೈನ್ಯದಲ್ಲಿ ಕೆಲಸ ಮಾಡಿಕೊಂಡಿರುವ ಎಲ್ಲಾ ಬ್ರಿಟಿಷ್ ಮತ್ತು ಇಂಡಿಯನ್ ಉದ್ಯೋಗಸ್ಥರ ಸ್ಥಿತಿಯು ಕೋಮನ್ ವೆಲ್ತ ಸ್ಥಾಪನೆಯಾಗುವಾಗ ಯಾವ ರೀತಿಯಲ್ಲಿತ್ತೊ, ಅದೇ ಸ್ಥಿತಿಯಲ್ಲಿರುವುದು, ಪೆನ್ಶನ್ ಪಡೆದ ಉದ್ಯೋಗಸ್ಥರಿಗೂ ಅವರಿಗೆ ಸಲ್ಲಬೇಕಾದ ಪೆನ್ಶನ್ ಅವರವರಿಗೆ ಮೊದಲಿನ ವರದಲ್ಲಿ ಯೋಜಿಸಲ್ಪಡುವುದು

ಆಶ್ರಿತ ರಾಜ್ಯಗಳು.

ಇಷ್ಟರ ವರೆಗೆ ಆಶ್ರಿತ ರಾಜ್ಯಗಳಿಗೂ ಬ್ರಿಟಿಷ ಸರಕಾರಕ್ಕೂ ಯಾವ ತರದ ಸಂಬಂಧವಿದ್ದಿತೊ ಅದೇ ತರದ ಸಂಬಂಧವು ಇನ್ನುಮುಂದೆಯೂ ಇರುವುದು ಈ ಎರಡು ಸರಕಾರಗಳೊಳಗೆ ಬರಬಹುದಾದ ನ್ಯಾಯಗಳನ್ನು ತೀರ್ಮಾನ ಮಾಡುವ ಅಧಿಕಾರವು ಸುಪ್ರೀಮ್ ಕೋರ್ಟಿಗೆ ಇರುವುದು

ಹೊಸ ಸಂಸ್ಥಾನಗಳು.

ಹೊಸ ಪ್ರಾಂತ್ಯಗಳನ್ನು ಭಾಷಾವಾರು ಪ್ರಾಂತ್ಯಗಳಾಗಿ ಮಾಡಬೇಕೆಂದು 'ಆಯಾ ಪ್ರದೇಶದ ಪ್ರಜೆಗಳ ಅಪೇಕ್ಷೆಯು ಇದೆ. ಸಿಂಧೂ ದೇಶವನ್ನು ಮುಂಬಾಯಿ ಸಂಸ್ಥಾನದಿಂದ ಪ್ರತ್ಯೇಕಿಸಿ ಒಂದು ಪ್ರತ್ಯೇಕ ಪ್ರಾಂತ್ಯವಾಗಿ ಮಾಡಬಹುದು ಈಗ ಮುಂಬಾಯಿ ಮತ್ತು ಮದರಾಸು ಸಂಸ್ಥಾನದಲ್ಲಿರುವ ದಕ್ಷಿಣ ಕನ್ನಡ, ಉತ್ತರ ಕನ್ನಡ, ಧಾರವಾಡ, ಬಿಜಾಪುರ, ಬಳ್ಳಾರಿ, ಅನಂತಪುರ ಜಿಲ್ಲೆಗಳನ್ನು ಒಟ್ಟುಕೂಡಿಸಿ ಒಂದು ಕರ್ನಾಟಕ ಪ್ರಾಂತ್ಯವನ್ನು ಮಾಡುವುದು ಅಗತ್ಯವಾಗಿದೆ. ಕೊಯಮುತ್ತೂರು, ನೀಲಗಿರಿ ಅಂಶಗಳು ದೂರವಿರುವುದರಿಂದ ಅವುಗಳನ್ನು ಕರ್ನಾಟಕಕ್ಕೆ ಕೂಡಿಸಲು ಸಾಧ್ಯವಿರುವುದಿಲ್ಲ. ವಾಯುವ್ಯ ಗಡಿ ಪ್ರಾಂತ್ಯವನ್ನು ಒಂದು ಸಂಸ್ಥಾನವಾಗಿ ಮಾಡಬೇಕು. ಎಲ್ಲಾ ಸಂಸ್ಥಾನಗಳ ಕ್ರಮಗಳು ಒಂದೇ ವಿಧವಾಗಿರಬೇಕು.

ಇದಕ್ಕೆ ಸಹಿ ಹಾಕಿದವರು (೧) ಮೋತಿಲಾಲ ನೆಹರು, (೨) ಅಲಿ ಇಮಾಮ್, (೩) ತೇಜ್ ಬಹದ್ದೂರ್ ಸಪ್ರು, (೪) ಎಮ್. ಎಸ್. ಅಣೆ, (೫) ಮಂಗಳಸಿಂಗ್, (೬) ಶುಯಾಬ ಕುರೇಶಿ, (೭) ಸುಭಾಸ ಚಂದ್ರ ಬೋಸ್, (೮) ಜಿ. ಆರ್. ಪ್ರಧಾನ.

ಶಾಲೆಗಳಲ್ಲಿ ಸಿವಿಕ್ಸ ಪಾಠಗಳನ್ನು ಕಲಿಸುವುದರ ಉದ್ದಿಶ್ಯ ಮತ್ತು ಪ್ರಯೋಜನ.

ಇಂಡಿಯದಲ್ಲಿ ವಾಸಿಸಿರುವ ಗಂಡಸರೂ ಹೆಂಗಸರೂ ರಾಜ್ಯದಾಡಳಿತೆಯಲ್ಲಿ ಸಮಭಾಗಿಗಳಾಗಬೇಕೆಂದು ಸಾರುವುದರಿಂದ ರಾಜ್ಯಭಾರದ ಸೂತ್ರಗಳನ್ನು ಕಲಿತುಕೊಳ್ಳುವ ಸಮಯವು ಬಂದದೆ. ಪಾಶ್ಚಿಮಾತ್ಯ ದೇಶಗಳಲ್ಲಿ ಕೆಳಗಿನ ದರ್ಜೆಗಳಲ್ಲಿ ಸಿವಿಕ್ಸ ಪಾಠಗಳನ್ನು ಕಲಿಸುತ್ತಿರುವರು. ರಾಜ್ಯಭಾರದ ವಿಷಯ ಕಲಿಸುವ ಪ್ರತ್ಯೇಕ ಪೊಲಿಟಿಕಲ್ ಶಾಲೆಗಳು ಇವೆ. ಆದರೆ ಇಂಡಿಯದಲ್ಲಿ ಇಷ್ಟರ ವರೆಗೆ ಇದ್ದ ಶಾಲೆಗಳಲ್ಲಿ ಕೆಳಗಿನ ಕ್ಲಾಸುಗಳಲ್ಲಿ ಸಿವಿಕ್ಸನ್ನೂ ಮೇಲಿನ ದರ್ಜೆಗಳಲ್ಲಿ ರಾಜ್ಯತಂತ್ರಗಳನ್ನೂ ಕಲಿಸದೆ ಇದ್ದುದರಿಂದ ಈಗ ತಾಲೂಕು ಬೋರ್ಡುಗಳಿಗೂ ಮ್ಯುನಿಸಿಪಾಲಿಟಿಗಳಿಗೂ ನ್ಯಾಯವಿಧಾಯಕ ಸಭೆಗಳಿಗೂ ಹೋಗುವ ಮೆಂಬರರು ರಾಜತಂತ್ರಗಳನ್ನು ಏನೊಂದೂ ತಿಳಿಯದೆ ಅವರು ಸಭೆಯಲ್ಲಿ ಕೇಳಿದ ಪ್ರತಿ ಒಂದು ಪ್ರಶ್ನೆಗಳಿಗೂ ರಾಜತಂತ್ರ ಪ್ರವೀಣರಾದ ಇಂಗ್ಲಿಷ್ ಎಕ್ಸಿಕ್ಯೂಟಿವ್ ಕೌನ್ಸಿಲ ಮೆಂಬರುಗಳು ಅವುಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಟ್ಟು ಇವರಿಗೆ ಮುಂದಿನ ಪ್ರಶ್ನೆಗಳನ್ನು ಕೇಳಲಿಕ್ಕಾಗದಂತೆ ಇಂಥಾ ಪ್ರಶ್ನೆಯ ಉತ್ತರ ನೋಡಿರಿ. ಇಂಥಾ ಅಕ್ಟು ನೋಡಿರಿ ಬೇಕಾದ ಅನುಭವ ಮೇಜಿನ ಮೇಲೆ ಇಟ್ಟಿದೆ ಅದು ತನಖೆಯಲ್ಲಿದೆ ಇದು ನಮ್ಮ ಆಲೋಚನೆಯಲ್ಲಿ ಮೊದಲೇ ಇರುವುದರಿಂದ ಪ್ರಶ್ನೆಯೇ ಅಗತ್ಯವಿಲ್ಲ ಎಂದು ಮುಂತಾದ ರಾಜತಂತ್ರ ಭರಿತವಾದ ಉತ್ತರಗಳನ್ನು ಕೊಡುತ್ತಿರುವರು. ಇಂಡಿಯದಲ್ಲಿ ರಾಜತಂತ್ರ ಪ್ರವೀಣರು ಬರೇ ಬೆರಳಿನಲ್ಲಿ ಎಣಿಕೆಮಾಡುವಷ್ಟು ಜನರು ಇರುವರು. ಮಹಾತ್ಮಾ ಗಾಂಧಿಯವರು, ಮೋತಿಲಾಲ ನೆಹರುರವರು, ಲಜಪತರಾಯರು, ಪಂಡಿತ ಮಾಲವೀಯರು, ದೇಶಬಂಧು ದಾಸರು ಇವರು ಪಾಶ್ಚಿಮಾತ್ಯ ದೇಶಗಳಲ್ಲಿ ಸಂಚರಿಸಿ ಅವರ ರಾಜತಂತ್ರದ ಗೂಢಾರ್ಥವನ್ನು ಕಲಿತಿರುವರು. ಲಾಲಾ ಲಜಪತರಾಯರು ಪಂಜಾಬಿನಲ್ಲಿ ಒಂದೇ ಪೊಲಿಟಿಕಲ್ ಸ್ಕೂಲನ್ನು ತಮ್ಮ ಸ್ವಂತ ಖರ್ಚಿನಿಂದ ಇಟ್ಟಿರುವರು.

ಮೇಲಿನ ಎಲ್ಲಾ ಸಂಗತಿಗಳಿಂದ ಸಿವಿಕ್ಸ ಪಾಠವು ಎಷ್ಟು ಪ್ರಯೋಜನಕಾರಿಯಾದುದೆಂದು ಬೇರೆ ಹೇಳಬೇಕಾಗಿಲ್ಲ. ವಿದ್ಯಾ ಇಲಾಖೆಯವರು ಈ ವಿಷಯಕ್ಕೆ ಇತ್ತಲಾಗೆ ಸ್ವಲ್ಪ ಗಮನಕೊಡಲು ತೊಡಗಿರುವರು. ತಮಿಳು, ತೆಲಗು, ಕನ್ನಡ, ಮಲೆಯಾಳಿ ಭಾಷೆಗಳಲ್ಲಿ ಎಲಿಮೆಂಟರಿ ಭಾಷೆಗಳಲ್ಲಿ ಕಲಿಸಬೇಕಾದ ಕ್ಲಾಸುವಾರು ಸಿವಿಕ್ಸ ಪುಸ್ತಕಗಳನ್ನು ಕೆಲವು ಮಂದಿ ಉಪಾಧ್ಯಾಯರು ತಯಾರಿಸಿರುವರು. ಆದರೆ ಎಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರು ಈ ಕಡೆಗೆ ಗಮನ ಕೊಡದೆ ಇರುವುದರಿಂದ ಎಲ್ಲಾ ಎಲಿಮೆಂಟರಿ ಶಾಲೆಗಳಲ್ಲಿ ಸಿವಿಕ್ಸ ಕಲಿಸುತ್ತಾರೆಂದು ಹೇಳಲು ಸಾಧ್ಯವಿಲ್ಲ. ಸಿವಿಕ್ಸ ಪುಸ್ತಕಗಳನ್ನು ಟೆಕ್ಸ್ಟ್ ಬುಕ್ ಕಮಿಟಿಯವರು ಮಂಜೂರು ಮಾಡಿದಾಗ್ಯೂ ಉಪಾಧ್ಯಾಯರ ಗಮನಕ್ಕೆ ಈ ವಿಷಯ ಬಂದಿಲ್ಲ

ಸುಮಾರು ೧೯೦೭ರ ವರೆಗೆ ಹೈಸ್ಕೂಲುಗಳಲ್ಲಿ ಫಿಪ್ತ್ ಫೋರ್ಮದವರು ಸಿಟಿಜನ್ ಒಫ್ ಇಂಡಿಯಾ ಎಂಬ ಪುಸ್ತಕವನ್ನು ಕಲಿಸುತ್ತಿದ್ದರು. ನಂತರ ಆ ವಿಷಯವು ಮಾಯವಾಯಿತು. ಈಗಿನ ಹೈಸ್ಕೂಲ್ ಕರಿಕ್ಯುಲಮಿನಲ್ಲಿ (ಪಾಠಪಟ್ಟಿಯಲ್ಲಿ) ಸಿವಿಕ್ಸಿನ ಪ್ರಸಂಗವೇ ಇರುವುದಿಲ್ಲ. ಆದುದರಿಂದ ಅದನ್ನು ಕಲಿಸುವುದೇ ಇಲ್ಲ. ಮದರಾಸು ಸಂಸ್ಥಾನದ ವಿದ್ಯಾ ಇಲಾಖೆಯಲ್ಲಿ ಅದರ ಮೇಲಧಿಕಾರಿಗಳಲ್ಲಿ ಈ ವಿಷಯ ಏನೊಂದೂ ಆಲೋಚನೆಯು ಕಂಡುಬರುವುದಿಲ್ಲ. ಮುಂಬಾಯಿ ಸಂಸ್ಥಾನದಲ್ಲಿ ಇಂಟರ್ಮಿಡಿಯೇಟ್ ಕೋರ್ಸಿಗೆ ಇಂಡಿಯದ ರಾಜ್ಯಭಾರದ ವಿಷಯವನ್ನು ಪಾಠಪಟ್ಟಿಯಲ್ಲಿ ಸೇರಿಸಿರುವರು

ಇಂಗ್ಲೆಂಡ ಮತ್ತು ಉತ್ತರ ಐಯರ್ಲೆಂಡಿನಲ್ಲಿ ಲೀಗ್ ಒಫ್ ನೇಶನ್ಸಿನ ವಿಷಯವಾಗಿ ಶಾಲೆಗಳಲ್ಲಿ ಕಲಿಸುವ ಸಿವಿಕ್ಸಿಗೆ ಕೂಡಿಸಬೇಕೆಂದು ಇತ್ತಲಾಗೆ ಅಲ್ಲಿ ವಿದ್ಯಾ ಇಲಾಖೆಯವರು ನಿರ್ಣಯಿಸಿರುವರು.

ಸಿವಿಕ್ಸನ್ನು ಚರಿತ್ರೆಯ ಪಾಠದಿಂದ ವಿಂಗಡಿಸುವ ಆವಶ್ಯಕತೆ.

ಚರಿತ್ರೆಯ ಪಾಠದೊಂದಿಗೆ ಸಿವಿಕ್ಸ ಪಾಠವನ್ನು ಕಲಿಸಲಿಕ್ಕೆ ಸಾಧ್ಯವೇ ಇಲ್ಲ. ಒಟ್ಟಿಗೆ ಕಲಿಸಿದರೆ ಎರಡೂ ಪಾಠಗಳ ವಿಷಯ ಜ್ಞಾನವು ಬರಲಾರದು. ಮೊಂಟೇಗ ಚೆಮ್ಸ ಫೋರ್ಡ ರಿಫೋರ್ಮುಗಳ ವಿಷಯ ಕಲಿಸುವದಾದರೆ ಅದರ ಮೂಲ ಸೂತ್ರವಾದ "ರಾಜ್ಯಭಾರದ ವಿಷಯ ಒಂದೊಂದೇ ಮೆಟ್ಟು ಮೇಲಕ್ಕೇರಿ ಕ್ರಮೇಣ ಸ್ವರಾಜ್ಯಕ್ಕೆ ಯೋಗ್ಯರಾಗಿ ಮಾಡುವುದು" ಎಂಬುದನ್ನು ಮಾತ್ರವೇ ಕಲಿಸಲು ಸಾಧ್ಯವಿದೆ. ಆದರೆ ಅದರ ಟ್ರೆನ್ಸಫರ್ಡ, ರಿಜರ್ವಡ್ ಸಬ್‌ಜೆಕ್ಟುಗಳ ಒಟ್ಟರು ಯಾರ್‍ಯಾರಾಗಬಹುದು. ಮೆಂಬರರು ಯಾರ್‍ಯಾರಾಗಬಹುದು ಮುಂತಾದ ಹಲವು ವಿಷಯಗಳ ಕುರಿತು ಚರಿತ್ರಾ ಪಾಠದಲ್ಲಿ ಕಲಿಸಲು ಸಾಧ್ಯವಾಗುವುದೇ ಇಲ್ಲ.

ಸಿವಿಕ್ಸ ಕಲಿಸುವುದರ ಉದ್ದಿಶ್ಯ.

ಸಿವಿಕ್ಸ ಪಾಠದ ಮೂಲ ಉದ್ದಿಶ್ಯವು ಸರಕಾರದ ಎಲ್ಲಾ ಅಂಗಗಳ ವಿಷಯ ಕಲಿಸುವುದೇ ಆಗಿದೆ. ಯಾವ ಯಾವ ಇಲಾಖೆಯವರಿಗೆ ಯಾವ ಯಾವ ಅಧಿಕಾರಗಳವೆ. ಪ್ರಜೆಗಳ ಹಕ್ಕು ಸ್ವಾತಂತ್ರ್ಯಗಳು ಯಾವವು. ಲೋಕಲ್ ಬೋರ್ಡುಗಳು ಅಂದರೇನು. ಅವುಗಳ ಕರ್ತವ್ಯಗಳು ಯಾವವು. ಮ್ಯುನಿಸಿಪಾಲಿಟಿಗಳ, ಗ್ರಾಮಪಂಚಾಯತುಗಳ, ಯೂನಿಯನ್ನುಗಳ ಕರ್ತವ್ಯಗಳು ಯಾವವು. ಪ್ರಾಂತಿಕ ಸರಕಾರವೆಂದರೇನು. ವರಿಷ್ಠ ಸರಕಾರವೆಂದರೇನು. ಪಾರ್ಲಿಮೆಂಟ ಸಭೆ ಅಂದರೇನು. ಇಂಡಿಯಾ ಕೌನ್ಸಿಲು ಅಂದರೇನು. ಇದಕ್ಕೂ ಇಂಡಿಯ ಸರಕಾರಕ್ಕೂ ಇರುವ ಸಂಬಂಧವೇನು ಎಂಬ ಮುಂತಾದ ವಿಷಯಗಳನ್ನು ಕಲಿಸುವುದೇ ಮುಖ್ಯ ಉದ್ದೇಶವಾಗಿದೆ. ಈಗಿರುವ ಸರಕಾರೀ ಸಂಸ್ಥೆಗಳನ್ನೂ ಹಿಂದೂ ರಾಜರ ಕಾಲದಲ್ಲಿಯೂ ಮುಸಲ್ಮಾನ ರಾಜರ ಕಾಲದಲ್ಲಿಯೂ ಯಾವ ರೀತಿಯಲ್ಲಿ ರಾಜ್ಯಭಾರವು ನಡೆಯುತ್ತಿತ್ತು ಎಂಬುದನ್ನೂ ಕಲಿಸಬಹುದು. ಒಂದು ಜನಾಂಗವು ರಾಜತಂತ್ರಗಳನ್ನು ಕಲಿಯದೆ ಇದ್ದರೆ ಅದು ವೃದ್ಧಿಯಾಗಲಾರದು.

ಶಾಲಾ ಮಕ್ಕಳಿಗೆ ರಾಜ್ಯದ ಪ್ರತಿ ಒಂದು ಇಲಾಖೆಯ ಕೆಲಸಗಳು ಯಾವುವೆಂದು ತಿಳಿಸಬೇಕಾಗಿದೆ. ಸರಕಾರದ ಜವಾಬುದಾರಿಯು ಯಾವ ರೀತಿಯಲ್ಲಿದೆ ಎಂದು ಗೊತ್ತಾಗುವುದು. ಒಂದು ಜನಾಂಗವು ಎಷ್ಟರ ಮಟ್ಟಿಗೆ ರಾಜತಂತ್ರಗಳ ತಿಳಿಯುವಿಕೆಯಲ್ಲಿ ಮುಂದರಿದ್ದದೆಯೋ ಅಷ್ಟಕ್ಕೆ ಆ ಜನಾಂಗವು ರಾಜ್ಯಧುರಂಧರತ್ವಕ್ಕೆ ಯೋಗ್ಯತೆಯನ್ನು ಪಡೆಯುತ್ತದೆ. ಆದುದರಿಂದ ಶಾಲೆಗಳಲ್ಲಿ ಸಿವಿಕ್ಸನ್ನು ಕಲಿಸಿ ಜನಾಂಗವನ್ನು ರಾಜತಂತ್ರಗಳಲ್ಲಿ ಪ್ರವೀಣತೆ [illegible] ಅಗತ್ಯವಾಗಿದೆ. ಸೆಕಂಡರಿ ಹೈಸ್ಕೂಲುಗಳಲ್ಲಿ ಕಲಿತ ವಿದ್ಯಾರ್ಥಿಗಳು ಶಾಲೆಯನ್ನು ಬಿಟ್ಟ ಮೇಲೆ ರಾಷ್ಟ್ರದಾದ ಬೇರೆ ಬೇರೆ ಕೆಲಸಗಳಿಗೆ ಭಾಗಿಗಳಾಗುವುದರಿಂದ ಅವರಿಗೆ ಸಿವಿಕ್ಸನ್ನು ಕಲಿಸುವ ಅವಶ್ಯಕತೆಯು ಇದ್ದೇ ಇದೆ. ಸಿವಿಕ್ಸ ಕಲಿಸುವುದರಿಂದ ಮನಸ್ಸಿನ ಸ್ವಾರ್ಥತ್ಯಾಗವು ಉಂಟಾಗುತ್ತದೆ. ಸಮಾಜದ ಮೇಲೆ ಪ್ರೀತಿಯನ್ನುಂಟುಮಾಡುತ್ತದೆ. ದೇಶೋದ್ಧಾರದ ಕೆಲಸಗಳಲ್ಲಿ ಕೈಹಚ್ಚಲು ಮನಸ್ಸುಂಟುಮಾಡುತ್ತದೆ. ಇಷ್ಟೇ ಅಲ್ಲದೆ ತಮ್ಮ ಹಕ್ಕು ಸ್ವಾತಂತ್ರ್ಯಗಳು, ಕರ್ತವ್ಯಗಳು ಏನೆಂಬುದು ಗೊತ್ತಾಗುತ್ತದೆ.

ರಾಜ್ಯಭಾರದ ಕರ್ತವ್ಯಗಳು ಯಾವವು ಎಂದು ಹುಡುಗರಿಗೆ ತಿಳಿಯುತ್ತದೆ. ಜನಾಂಗದ [illegible] ವಿಷಯದಲ್ಲಿ ರಾಜ್ಯಭಾರವು ಸರಿಯಾಗಿ ನಡೆಯುತ್ತದೋ ಇಲ್ಲವೋ ಎಂದು ತಿಳಿಯುತ್ತದೆ. ದೇಶದ ಸರಕಾರವು ಮಾಡುವ ಕಾನೂನು ಕಾಯಿದೆಗಳಲ್ಲಿ ಯಾವುವು ಜನತೆಯ ಹಕ್ಕು ಬಾಧ್ಯತೆಗಳಲ್ಲಿ ಕೈಯಿಕ್ಕುವ [illegible] ಬಾಧಕವು [illegible] ಎಂದು ತಿಳಿಯುತ್ತದೆ. [illegible] ಜಾತಿಯ [illegible] ಹಕ್ಕು ಬಾಧ್ಯತೆಗಳಿಗೂ [illegible] ಸಂರಕ್ಷಿಸಿಕೊಳ್ಳುವ ಶಕ್ತಿಯು ಬರುತ್ತದೆ. ದೇಶದ ಸರಕಾರವು ಮಾಡುವ ಕಾಯಿದೆ ಕಾನೂನುಗಳ ಪ್ರಕಾರ ಆ ದೇಶದ ಪ್ರತಿ ಒಬ್ಬ ಪ್ರಜೆಯು ನಡೆದುಕೊಳ್ಳಲು ಕಲಿಯಬೇಕು. [illegible] ಆಡಳಿತೆಯು [illegible] ಒಟ್ಟು ಕೊಟ್ಟ [illegible] ಮೇಲೆ ಹೊಂದಿಕೊಂಡಿರುತ್ತದೆಂದು ತಿಳಿಯುತ್ತದೆ. ಮೇಲಿನ ಎಲ್ಲಾ ಸಂಗತಿಗಳು ತಿಳಿದ ಮಾತ್ರವೇ ಅಂಥವರು ದೇಶಸೇವೆಯನ್ನು ಮಾಡಲಿಕ್ಕೆ ಯೋಗ್ಯತೆಯನ್ನು ಪಡೆಯುವರು. ಅವುಗಳನ್ನು ಚೆನ್ನಾಗಿ ಕಲಿತು ಅವುಗಳನ್ನು ಉಪಯೋಗಕ್ಕೆ ತಂದನಂತರವೇ ಪ್ರಜಾಸತ್ತಾತ್ಮಕ ರಾಜ್ಯಭಾರಕ್ಕೆ ಯೋಗ್ಯತೆಯುಂಟಾಗುವುದು.

ಮೇಲಿನ ಎಲ್ಲಾ ವಿಷಯಗಳನ್ನು ಕಲಿತೊಡನೆಯೇ ದೇಶವಾತ್ಸಲ್ಯವು ಉಂಟಾಗುತ್ತದೆ. ಇಂಡಿಯದ ಚರಿತ್ರೆಯನ್ನು ಬರೆಯುವ ಗ್ರಂಥಕರ್ತರಲ್ಲಿ ದೇಶವಾತ್ಸಲ್ಯವು ಇಲ್ಲದೆ ಇದ್ದರೆ ಅವರು ಬರೆದ ಚರಿತ್ರೆಯು ದೇಶದ ಏಳಿಗೆಗೆ ಪ್ರಯೋಜನಕಾರಿಯಾಗದು. ಅಮೇರಿಕದಲ್ಲಿ ಶಾಲಾ ಮಕ್ಕಳಲ್ಲಿ ದೇಶವಾತ್ಸಲ್ಯವು ಹುಟ್ಟಿಸಲಿಕ್ಕಾಗುವಂತೆ ಅವರಿಗೆ ಸಿವಿಕ್ಸ ಪಾಠಗಳನ್ನು ಉತ್ತಮ ರೀತಿಯಲ್ಲಿ ಕಲಿಸುತ್ತಿರುವರು. ಇಂಡಿಯದ ಶಾಲೆಗಳಲ್ಲಿಯೂ ಅದೇ ರೀತಿಯಲ್ಲಿ ಕಲಿಸಿದರೆ ಮಕ್ಕಳಿಗೆ ರಾಜ್ಯಭಾರದ ಕ್ರಮಗಳು ಸರಿಯಾಗಿ ತಿಳಿದುಬರುವವು

ನಿಮ್ಮ ಕನಸು ನಿಜವಾಗುವುದು.

ಮಾತೃಪ್ರೇಮದ ಅನುಭವವನ್ನು ಪಡೆಯಬೇಕೆಂದು ಕುತೂಹಲಿಗಳಾಗಿರುವ ಹೆಂಡಂದಿರು ಸ್ವಾಭಾವಿಕವಾಗಿ ಇರುವರು. ಮಗುವಿನ ಕೋಮಲ ಕರಗಳು ತನ್ನ ಮೈ ಮೇಲೆ ಆಡುತ್ತಿರಬೇಕೆಂದು ಪ್ರತಿಯೊಬ್ಬ ಸ್ತ್ರೀಯಲ್ಲಿಯೂ ಬಹಳ ಅಭಿಲಾಷೆ ಇದ್ದೇ ಇರುವುದು. ಆದರೆ, ಒಮ್ಮೊಮ್ಮೆ ಹೆಂಡಂದಿರಲ್ಲಿ ಅನಾರೋಗ್ಯವಿದ್ದರೆ ಅವರ ಈ ಅಭಿಲಾಷೆಯು ಫಲಿಸಲಾರದು. ಅನಾರೋಗ್ಯವನ್ನು ಹೋಗಲಾಡಿಸಿದರೆ ಅವರ ಕನಸು ನಿಜವಾಗುವದು. ಮದುವೆಯಾಗಿ ಹಲವು ವರ್ಷಗಳ ವರೆಗೆ ಮಕ್ಕಳಿಲ್ಲದೆ ಕೊರಗುತ್ತಿದ್ದು ಕೊನೆಗೆ ಮಕ್ಕಳಾದ ತಾಯಂದಿರಿಂದ ಹಲವು ಪತ್ರಗಳು ನಮಗೆ ಬಂದಿರುತ್ತವೆ. **ಹೆಂಗಸರಿಗಾಗಿಯೇ ಇರುವ ಫೆಲೂನಾ ಮಾತ್ರೆಗಳನ್ನು** ಉಪಯೋಗಿಸಿ ಪ್ರತಿಫಲವಾಗಿ ದೊರಕಿದ ಆರೋಗ್ಯವೇ ಇದಕ್ಕೆ ಕಾರಣವೆಂದು ಅವರೆನ್ನುವರು.

ಈ ಕೆಳಗಿನ ಪತ್ರವನ್ನು ಪ್ರಕಟಿಸಲು ನಾವು ಅಧಿಕಾರಹೊಂದಿರುತ್ತೇವೆ.

"ಫೆಲೂನಾ ಮಾತ್ರೆಗಳನ್ನು ಉಪಯೋಗಿಸಿ ನನ್ನ ಪತ್ನಿಗೆ ಲಭಿಸಿದ ಉಪಕಾರವನ್ನು ನಾನು ಎಂದಿಗೂ ಮರೆಯೆನು. ಅವನ್ನು ಉಪಯೋಗಿಸಲು ಪ್ರಾರಂಭಿಸಿದಂದಿನಿಂದ ಅವಳ ಜೀವನದಲ್ಲಿ ಒಂದು ಪರಿವರ್ತನೆಯೇ ಉಂಟಾಗಿ, ಅವಳು ಒಂದು ಅಂದವಾದ ಸುಖಿಯಾದ ಶಿಶುವನ್ನು ಪ್ರಸವಿಸಿರುವಳೆಂದು ತಿಳಿಸಲು ನಾನು ಸಂತೋಷಪಡುತ್ತೇನೆ. ಆಕೆಯು ಇಂದಿಗೆ ತಾಯಿಯಾಗಿಳೆಂದ ನಾನು ತಿಳಿದಾಗ ನೀವು ಇಂತಹ ಗುಣಕಾರಿಯಾದ ಔಷಧಿಯನ್ನು ಒದಗಿಸುದುದಕ್ಕಾಗಿ ನನ್ನ ಕೃತಜ್ಞತೆಯನ್ನು ಎಷ್ಟು [illegible] ಸ್ವಲ್ಪವೇ!"

(ಸಹಿ) ಹಿನ್ ಇ ರೆ ಸ್ಸ ಸ್

(ವಿಳಾಸ) ಪಿ. ಟಿ. ಪಾಂ'ವಿವ್, ಮೌಂಟ್ ಪ್ಲೆಜಂ, ಸಿ ಪಿ

ಹೆಂಗಸರಿಗೆ ಹೆಚ್ಚಾಗಿ ಇರುವ ನೋವು, ಬೇನೆಗಳನ್ನು ಹೋಗಲಾಡಿಸಬೇಕಾದರೆ, ಮತ್ತು ದಣಿವಾಗುವದನ್ನು ನಿಲ್ಲಿಸಬೇಕಾದರೆ ಈ ಔಷಧಿಯನ್ನು ಸೇವಿಸಬೇಕು. ಇದರಿಂದ ಒಳ್ಳೆಯ, ಕಾಂತಿಯುಕ್ತವಾದ, ಉತ್ಕೃಷ್ಟವಾದ ಆರೋಗ್ಯವು ಲಭಿಸುವದು.

ಇಂಡಿಯಾ, ಬರ್ಮಾ ಸಿಲೋನ ಗಳ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸಿಂದಲೂ ಮಾರಲ್ಪಡುವವು



ಬಾಟಲಿಗೆ ರೂ 2/4
ಮಾಪು ಎಡಚಿಬ —
ಪಬೋಲ್ ವ ಕ್ಕ ಧೋಂಡಿ
ಪೋಸ್ಟ್ ಆಫೀಸ
ಬೋಕ್ಸ 838,
ವ ಂಬಿ ಯಿ

ಮದರಾಸು ಸಂಸ್ಥಾನಕ್ಕೆ—

ದಾದಾ ಎಂಡ್ ಕೊ,

260 ಬ್ರಾಡ್ವೆ ಬಜಾರ್ ರೋಡ್ ಮ ದ ರಾ ಸು

ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕೆ ಪ್ರ ಕಟ್ಟುಗಳಲ್ಲಿ ಸಿಕ್ಕುವವು

Product of Graham Remedies Ltd Cape Town S 4 85

ಮುಂಬಯಿ ಬಂಟರ ಯಾನೆ ನಾಡವರ ಸಂಘ.

ಮುಂಬಾಯಿ ಬಂಟರ ಯಾನೆ ನಾಡವರ ಸಂಘದ [illegible] ವಿಶೇಷ ಸಭೆಯು ಕಳೆದ ತಿಂಗಳ ತಾ ೧೯ನೇ ಆದಿತ್ಯ[illegible] ಘಂಟೆ ೨ಕ್ಕೆ ಮ|| ರಾ| ಮುಂಡ್ಕೂರು ಶ್ಯಾಮರಾಯ [illegible] ಯಲ್ಲಿ ಜರಗಿತು.

ಈ ಸಭೆಗೆ ಮ|| ರಾ| ಕಾನಾಡ್ಕರು, ದ್ರಿ [illegible] ಕಾಳು ಶೆಟ್ರು, ಲೋಕಯ ಶೆಟ್ರು, ಕಾವು ಕಾಂತಪ್ಪ [illegible] ಕೆ. ಶ್ಯಾಮಶೆಟ್ರು ಇವರೇ ಮೊದಲಾದ ಸುಮಾರು ೧೦೦ ಮಂದಿ [illegible] ಹಾಜರಿದ್ದರು. ಈ ಕೆಳಗಿನ ನಿರ್ಣಯಗಳು [illegible] ಮಂಜೂರಾದ ನಂತರ ಸಭಾಧ್ಯಕ್ಷರಿಗೆ ಉಪಕಾರ ಸ್ಮರಣೆಯನ್ನು [illegible] ಶೀನಶೆಟ್ರು ಸೂಚಿಸಿದರು. ಅದನ್ನು ಓಂತಿಬೆಟ್ಟು ಸದಾಶಿವ [illegible] ಇವರು ಅನುಮೋದಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಸಭೆಯಲ್ಲಿ ಮಂಜೂರಾದ ಠರಾವುಗಳು.

ಮುಂಬಾಯಿ ಗಿರಗಾಂವಿನಲ್ಲಿರುವ ವನಿತಾವಿಶ್ರಮದಲ್ಲಿ [illegible] ೧೯೨೮ನೇ ಇಸವಿ ಆಗೋಸ್ತ ೧೯ನೇ ತಾರೀಖು ೨ ಘಂಟೆಗೆ [illegible] ಕೂಡಿ ಬಂದ ಬಂಟರ ಯಾನೆ ನಾಡವರ ಸಂಘದ ಮೆಂಬರರು ಈ ಕೆಳಗಿನ ನಿರ್ಣಯಗಳನ್ನು ಸರ್ವಸಮ್ಮತಿಯಿಂದ ಪಾಸುಮಾಡಿ ಅವನ್ನು ೧೯೨೮ನೇ ಫೆಬ್ರವರಿ ಮೊದಲಿನ್ನ ಕಮಿಟಿಗೆ ಕಳುಹಿಸಿರುವರು.

೧) ಇಲ್ಲಿ ಕೂಡಿರುವ ಸದಸ್ಯರು ಈಗಿರುವ ಆಡ್ಹಾಕ ಕಮಿಟಿಯು ನಿಯಮಕ್ಕನುಸಾರವಾಗಿ ಅಂದರೆ ಪ್ರತಿಯೊಬ್ಬ ಮೆಂಬರನಿಗೆ ೫ ದಿವಸದ ಮುಂಚೆಯೇ ನೋಟೀಸು ಕೊಡದೆ ವಾರ್ಷಿಕ ಸಭೆಯಲ್ಲಿ ಕಮಿಟಿಯ [illegible] ನಾವು ನಿರಾಕರಿಸಿರುತ್ತೇವೆ. ಅಲ್ಲದೆ ಈ ಕಮಿಟಿಯು ನಿಯಮಕ್ಕೆ ವಿರೋಧವಾಗಿ ಚುನಾಯಿತ ಆದು ಮಾಡಿದ ಎಲ್ಲಾ ಕಾರ್ಯಗಳನ್ನು ನಿರಾಕರಿಸಿರುತ್ತೇವೆ.

೨) ಈ ಪತ್ರವು ತಲ್ಪಿದ ೧೫ ದಿವಸಗಳೊಳಗೆ ಮುಂಚಿನ್ನ ಅಂದರೆ, ೧೯೨೮ನೇ ಇಸವಿ ಫೆಬ್ರವರಿ ೬ ತಾ ವರೆಗೆ ಮೆಂಬರರ ವಿಳಾಸ ಪಟ್ಟಿಯಲ್ಲಿ [illegible] ವರೆಗೆ ನಿಯಮಕ್ಕನುಸಾರವಾಗಿ [illegible] ಮೆಂಬರರಿಗೆ ಸಂಘದ ೧೫ನೇ ನಿಯಮ ( ) [illegible] ಕೊಟ್ಟು ವಾರ್ಷಿಕ ಸಭೆಯನ್ನು [illegible] ಭವನ (ಹಾಲ್) ದಲ್ಲಿ ಕರೆಯತಕ್ಕದ್ದು.

೩) ಈ ಮೇಲಿನ ನಿರ್ಣಯಗಳ ಪ್ರತಿ ೧೯೨೮ನೇ ಫೆಬ್ರವರಿ ಮೊದಲಿನ್ನ ಕಮಿಟಿಗೆ ರಿಜಿಸ್ಟ್ರಿ ಮೂಲಕ ಕಳುಹಿಸುವುದೆಂದು ಸರ್ವಸಮ್ಮತಿಯ [illegible] ನಿರ್ಣಯಿಸಿರುವವು. [illegible] ಅಧ್ಯಕ್ಷರು ಕಳುಹಿಸುವಂತೆ ಅವರಿಗೆ ಅಧಿಕಾರಕೊಟ್ಟಿರುವವು.

ದ. ಕ. ಜಿಲ್ಲಾ ಟೀಚರ ಮನೇಜರರ ಸಂಘ.

ಈ ಸಂಘದ ಆಡಳಿತೆ ಮಂಡಳಿಯ ಸಭೆಯು ತಾ ೨೪-೮-೨೮ ರಲ್ಲಿ ಮಂಗಳೂರ [illegible] ಟ್ರೈನಿಂಗ್ ಶಾಲೆಯಲ್ಲಿ ಜರಗಿ ಈ ಕೆಳಗಿನ ನಿರ್ಣಯಗಳು ಮಂಜೂರು ಮಾಡಲ್ಪಟ್ಟವು.

೧) ಬರ್ಡ್ವುಡ್ ಜಿಲ್ಲಾ ಎಜ್ಯುಕೇಶನಲ್ ಕೌನ್ಸಿಲಿನ ಪ್ರೆಸಿಡೆಂಟರವರು [illegible] ಮನೇಜರರ ಸಂಘದ್ವಾರ ಸಂಬಂಧ [illegible] ಕೇಳಬೇಕಾಗಿ, ನಮ್ಮ ಜಿಲ್ಲೆ [illegible] ಮುಖಾಂತರ ಬರೆ [illegible] ಪ್ರತಿಯನ್ನು ಕಳು [illegible]

೨) [illegible] ವರೇಗೆ [illegible] ಉಡುಪಿ ತಾಲೂಕು [illegible] ಮಂಗಳೂರು ತಾಲೂಕು [illegible] ಕುಂದಾಪುರ ತಾಲೂಕು [illegible] ಇರುತ್ತವೆ [illegible], ಮಂಗಳೂರು [illegible] ಟೀಚರ್ ಮನೇಜರರು [illegible] ವಂತಿಗೆಯನ್ನು ಕೆಟ್ಟ [illegible] ಟೀಚರ್ ಮನೇಜ [illegible] ಪ್ರಕಾರ ವರು [illegible] ಹಾಪತಿಮಾಡಿ ಸಂಘದ [illegible] ಸರಾಯಿತು.

೩) [illegible] ಡೈರೆಕ್ಟರ್ ಧೊರೆಗಳ [illegible] ಬರುವ ಒಕ್ಟೋಬರ್ [illegible] ವರ್ತಮಾನವಿರುವುದ [illegible] ಕನ್ನಡ ಜಿಲ್ಲಾ ಟೀಚರ್ ಮನೇಜ [illegible] ಎಲಿಮೆಂಟರಿ ಟ್ರೈನಿಂಗ್ [illegible] ಆ ಸಭೆಗೆ ಸದ್ರಿ ಮಹನೀಯರನ್ನು [illegible] ಅವರಿಗೆ [illegible] ಮಾನಪತ್ರವನ್ನು ಅರ್ಪಿಸಿ [illegible] ಶ್ರೀಯುತ ಎ. ಬಿ. [illegible] ಅಧ್ಯಕ್ಷತೆಯಿಂದ ಜಿಲ್ಲಾ ಸಂಘದ [illegible] ನಂತರ ಸರಕಾರದಿಂದ [illegible] ನಿವೇದಿಸಿಕೊಳ್ಳಬೇಕಾಗಿಯೂ, ಈ ಕಾರ್ಯ [illegible] ಜಿಲ್ಲಾ ಮನೇಜರರ ಸಂಘವನ್ನು [illegible] ನಿರ್ಣಯ ಸಲಾಯಿತು.

ಕಂದ ಕಾಲು ಗಣಪಯ್ಯ ಶೆಟ್ಟಿ.
(ಎಜ್ಯುಕೇಶನಲ್ ಕೌನ್ಸಿಲ್ ಮೆಂಬರ್)
ಪ್ರೆಸಿಡೆಂಟ್,
ದಕ್ಷಿಣ ಕನ್ನಡ ಜಿಲ್ಲಾ ಟೀಚರ್ ಮನೇಜರರ ಸಂಘ

ಮೈಸೂರು ಸರ್ಕಾರ

೧೯೨೮ನೆಯ ಇಸವಿಯ ಮೈಸೂರ ದಸರಾ (ಅಖಿಲ ಭಾರತೀಯ) ಸರ್ವವಸ್ತು ಪ್ರದರ್ಶನವು ಮೈಸೂರು ನಗರದಲ್ಲಿ ಖಾಯಮಾಗಿ ನಿರ್ಮಿಸಿದ ಪ್ರದರ್ಶನ ಶಾಲೆಯಲ್ಲಿ ಇದೇ ಅಕ್ಟೋಬರು ತಿಂಗಳಿನಲ್ಲಿ ೧೫ರಿಂದ [illegible] ತಾರೀಖಿನ ವರೆಗೆ ನಡೆಯುವುದು. ಕಲಾಕೌಶಲ್ಯವನ್ನೂ ಕೈಗಾರಿಕೆಯ ವಿಷಯಕವಾದ ನೈಪುಣ್ಯವನ್ನೂ ತೋರಿಸುವ ವಸ್ತುಗಳನ್ನೂ ಮತ್ತು ವ್ಯವಸಾಯೋತ್ಪನ್ನ ವಸ್ತುಗಳನ್ನೂ ಸಂಪದಭಿವೃದ್ಧಿಗೆ ಸಾಧಕವಾದ ವಸ್ತು [illegible] ಪ್ರದರ್ಶಿಸಲಾಗುವುದು. ಯಂತ್ರೋಪಕರಣಗಳೇ ಮೊದಲಾದವುಗಳಿಂದ ಕೆಲಸ ಮಾಡಿಸಿ ಆಕಾಲದಲ್ಲಿ ಜನರಿಗೆ ತೋರಿಸುವುದಕ್ಕೆ [illegible] ಅವಶ್ಯವಿದ್ದಲ್ಲಿ [illegible] ಒದಗಿಸಲಾಗುವುದು. ಪ್ರಕಟನೆಯ ಕೆಲಸಕ್ಕೂ ವ್ಯಾಪಾರಕ್ಕೂ, ನಾನಾ ವಿಷಯಗಳನ್ನೂ ಪರಿಶೀಲಿಸಿ ತಿಳಿದುಕೊಳ್ಳುವುದಕ್ಕೂ ಇದು ಒಳ್ಳೆಯ ಸಮಯವಾಗಿದೆ.

ಪ್ರದರ್ಶನದಲ್ಲಿ ತಮ್ಮ ವಸ್ತುಗಳನ್ನಿಡುವುದಕ್ಕೆ ಸ್ಥಳವನ್ನು ಅಪೇಕ್ಷಿಸುವವರೂ ಮತ್ತು ಪ್ರದರ್ಶನದ ವಿಚಾರವಾಗಿ ಇತರ ವಿವರಗಳನ್ನು ತಿಳಿಯಲಪೇಕ್ಷಿಸುವವರೂ ಸಹ, ಮೈಸೂರು ದಸರಾ ಪ್ರದರ್ಶನದ ಸೆಕ್ರೆಟರಿಯ ವರಿಂದ ಪ್ರಸಿದ್ಧಪತ್ರಿಕೆಯನ್ನು (ಪ್ರಾಸ್ಪೆಕ್ಟಸ್) ಪಡೆಯಬಹುದು.

ಕೆ ಅನಂತಸಾಮಿ ರಾವ್
ಸೆಕ್ರೆಟರಿ
ಮೈಸೂರ [illegible] ಮೈಸೂರು ಸಿಟಿ

ತಯಾರಾಗಿವೆ! ತಯಾರಾಗಿವೆ

ಐದನೇ ದರ್ಜೆಯ

ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ

ಶಾರದಾ ಛಾಪಖಾನೆ, SHARADA PRESS,
ಕಳಾಚಿದ ಮಂಗಳೂರು MANGALORE

The Canara Bank Ltd, Mangalore
ದಿ ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡೆದಿರುತ್ತಾರೆ. [illegible] ಕೊಡದೆ [illegible] ಪೈಕಿ 1ನೇಯ ವರಿಗೆ ಕೊಟ್ಟ [illegible] ರಿಜಿಸ್ಟ್ರಿ ನೋಟೀಸು [illegible] ಬಂದಿದ್ದ ಕಾರಣ ಮತ್ತು 2ನೇಯ ವರಿಗೆ ಒಡ್ಡಿ ನೋಟೀಸು ಈ ವರೇಗೆ ವಾಪಸು ಬಾರದೆ [illegible] ಆಭರಣಗಳನ್ನು ತಾ 25 9 28 ನೇ ಮಂಗಳ ವಾರ ದಿವಸ ಮಧ್ಯಾಹ್ನ ಘಂಟೆ 12ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡುವರು.

[illegible] ಮಂಗಳೂರು ಶಹಾರ ಪೈಕಿ [illegible] ಹಸೆಬ್ಬ [illegible] ವರೆಗೆ ಬಡ್ಡಿ ವಗೈರೆ 3 1 0

[illegible] ಗರಡೆ ಪೋಸ್ಟು [illegible] ವರೆಗೆ ಬಡ್ಡಿ ವಗೈರೆ 19 [illegible]

ಈ ನೋಟೀಸು ಖರ್ಚ ಕೊಡಬೇಕಾಗುತ್ತದೆ.

The Canara Bank Ltd Mangalore 5 9—28

K. Venkat Rao,
Secretary

School Requisites.

BEST WHITE CRAYONS
ENGLISH, & GERMAN,
ARE AVAILABLE AT CHEAP RATES
FOR PRICES APPLY TO,

THE MANAGER,
The Mangalore Trading Association,
MANGALORE

ಉತ್ತಮ ತರದ ಇಂಗ್ಲೀಷು ಮತ್ತು ಜರ್ಮನಿ
ಬಿಳಿ ಚೋಕ ಪಟ್ಟಿಗೆಗಳ ಮಾರಾಟಕ್ಕೆ ಸಿದ್ಧವಿದೆ.
ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ ನೇ ಜ ರ್,
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಮಂಗಳೂರು

ಶಿಶು ರಕ್ಷಣೆ.

(ಈ ಕೆಳಗಿನ ಸಂಗತಿಗಳನ್ನು ಓದಿ ನೆನಸಿನಲ್ಲಿಡುವುದರಿಂದ [illegible] ಆರೈಕೆಯು ಸುಲಭವಾಗಿ ಪರಿಣಮಿಸಬಹುದು.)

[illegible] ಬೇಸಿಗೆ ಕಾಲವು ಬಹು ಅಪಾಯಕರವಾದುದು. ಅದು ಕಾರಣ ಬೇಸಿಗೆ ಕಾಲದ ದಿನಗಳಲ್ಲಿ ಹೇಗೆ [illegible]ಬುದನ್ನು ಈ ಕೆಳಗೆ ವಿವರಿಸಿಯುದೆ.

ಆಹಾರ ಕೊಡುವಿಕೆ:—ಮಗುವು ನಿದ್ರೆಯಿಂದೆದ್ದ ಕೂಡಲೆ ಏನು ಮಾಡಬೇಕೆಂಬುದನ್ನು ಆಲೋಚಿಸೋಣ. ಅದು ಸಾಮಾನ್ಯವಾಗಿ ಸಂತೋಷದಿಂದಿದೆ ತಾಯಿಗಿಂತಲೂ ಮೊದಲೇ ಎದ್ದಿರುತ್ತದೆ. ಆಗ ಮೊದಲನೆಯದಾಗಿ ಮಾಡಬೇಕಾದ ಕೆಲಸವೇ ಅದಕ್ಕೆ ಆಹಾರವನ್ನು ಕೊಡುವಿಕೆ. ಮೊಲೆ ಹಾಲನ್ನೇ ಅದಕ್ಕೆ ಕೊಡಲು ಒಮ್ಮೆಗೆ ಅನುಕೂಲವಿಲ್ಲದಿದ್ದರೆ ಹಾಲು ಕೊಡುವಂತಹ ಬಾಟ್ಲಿಯನ್ನಾದರೂ ಉಪಯೋಗಿಸಬೇಕು. ಬಾಟ್ಲಿಯನ್ನೂ, ಅದರ ನಿಪ್ಪಲ ಎಂಬ ರಬ್ಬರಿನ ಕೊಳವೆಯನ್ನೂ ನೀರಿನಲ್ಲಿ ಹಾಕಿ ಚೆನ್ನಾಗಿ ಕಾಯಿಸಬೇಕು. ಹೀಗೆ ಮಾಡುವುದರಿಂದ ಬಾಟ್ಲಿಯಲ್ಲಿರಬಹುದಾದ ರೋಗದ ಅಣುಗಳು ನಾಶವಾಗುವವು.

[illegible] ಹಾಲು ಬಹು ನಿರ್ಮಲವಾಗಿಯೂ ದಪ್ಪವಾಗಿಯೂ ರುಚಿಯುಳ್ಳದ್ದಾಗಿರಬೇಕು. ಹಾಲಿನ ವಿಷಯ ಅಜಾಗರೂಕರಾದರೆ, ಅದರಲ್ಲಿ ಬಹು ಬೇಗನೆ ರೋಗದ ಅಣುಗಳುಂಟಾಗಿ ಮಗುವಿನ ಶರೀರ ಪ್ರಕೃತಿಯನ್ನೇ ಕೆಡಿಸಿಬಿಡುವುದು.

ಮನಸ್ಸಿಗೆ ತೋರಿದಾಗ ಮಗುವಿಗೆ ಆಹಾರ ಕೊಡುವ ಪದ್ಧತಿಯು ಕೆಲವರಲ್ಲಿದೆ. ಇಂತಿಷ್ಟೇ ಸಮಯಕ್ಕೊಮ್ಮೆ ಮಗುವಿಗೆ ಆಹಾರವನ್ನು ಕೊಡುವುದೆಂಬುದು ಮೊದಲೇ ನಿರ್ಣಯ ಮಾಡಿಟ್ಟುಕೊಳ್ಳಬೇಕು. ಅಧಿಕವಾದ ಆಹಾರವನ್ನು ಕೊಡಬಾರದು. ಆಹಾರದ ಅಂತರದಲ್ಲಿ ಬಿಸಿನೀರನ್ನು ತಣಿಸಿ ಮಗುವಿಗೆ ಕೊಡುವುದು ಒಳ್ಳೆಯದು. ಹಾಲಿಗಿಂತಲೂ ನೀರು ಬೇಕಾದಾಗ ಮಕ್ಕಳು ಕೂಗುವವು. ಮಗುವಿಗಾಗಿ ಹಾಲನ್ನು ಯಾವಾಗಲೂ ಮುಚ್ಚಿಯೇ ಇಡುವುದಲ್ಲದೆ ತಂಪಾದ ಸ್ಥಳದಲ್ಲಿ ಇಡಬೇಕು. ಮಣ್ಣಿನಿಂದ ಮಾಡಿದ ಪಾತ್ರೆಯಲ್ಲಿಟ್ಟರೆ ಉತ್ತಮ. ಐಸ್ ಸಿಕ್ಕದೆ ಹೋದರೆ ಮಗುವಿನ ಹಾಲಿನ ಪಾತ್ರೆಯನ್ನು ತಣ್ಣೀರಿನಲ್ಲಿ ಇಡಬೇಕು. ಹಾಲನ್ನು ತಣ್ಣಗಾಗಿ ಇಡಬೇಕು. ಪ್ರತಿಯೊಮ್ಮೆ ಹಾಲು ಕುಡಿಸುವಾಗಲೂ ಹಾಲಿನ ಬಾಟ್ಲಿ ಮತ್ತು ರಬ್ಬರಿನ ಕೊಳವೆಯನ್ನು ಬಿಸಿಮಾಡಲು ಮರೆಯಬಾರದು. ಇದರಿಂದ ಮಗುವಿನ ಉದರದಲ್ಲಿ ಉಂಟಾಗಬಹುದಾದ ರೋಗವನ್ನು ತಡೆಯಬಹುದಾಗುತ್ತದೆ.

ಉಡಿಗೆ:—ಮಗುವಿನ ಉಡಿಗೆಯು ತಂಪಾದುದೂ ಸಾಧಾರಣ ತರದ್ದೂ ಆಗಿರಬೇಕು. ಸೆಕೆಯು ಬಹಳ ಇರುವ ಸಮಯದಲ್ಲಿ ಮಗುವಿಗೆ ತೆಳುವಾದ ಫ್ಲಾನೆಲಿನ ಅಂಗಿಯನ್ನು ಮಾತ್ರ ತೊಡಿಸಬೇಕು. ಗುಂಡಿಗಳ ಬದಲಿಗೆ ಸೇಫ್ಟಿ ಪಿನ್ನುಗಳನ್ನು ಉಪಯೋಗಿಸಬೇಕು. ಮಗುವಿನ ಉಡಿಗೆಗಳನ್ನು ಸದಾ ನಿರ್ಮಲವಾಗಿರಿಸಬೇಕು. ಕೊಳಕಾದ ಉಡಿಗೆಯನ್ನು ಒಡನೆಯೇ ತೆಗೆದುಹಾಕಬೇಕು. ಒದ್ದೆಯಾದ ಮತ್ತು ಮಲಿನವಾದ ಅಂಗಿಯನ್ನು ಬಿಸಿನೀರಿನಿಂದ ಆದಷ್ಟು ಬೇಗನೆ ತೊಳೆದು ಹಾಕಬೇಕು. ಅವುಗಳನ್ನು ಪುನಃ ಉಪಯೋಗಿಸಬೇಕಾದರೆ ಚೆನ್ನಾಗಿ ಒಣಗಿಸಬೇಕು. ಮಗುವಿಗೆ ಹಿತಕರವಲ್ಲದ ಉಡಿಗೆಯನ್ನು ತೊಡಿಸಲೇ ಬಾರದು. ಕೈಕಾಲುಗಳ ಚಲಾವಣೆಗೆ ಅಡ್ಡಿಯಾಗದಂತೆ ಉಡಿಗೆಯು ಸಡಿಲಾಗಿರಬೇಕು. ಮಗುವಿನ ಪಾದಗಳನ್ನು ಬಿಸಿಯಾಗಿರಿಸಿ ತಲೆಯನ್ನು ಮಾತ್ರ ತಣ್ಣಗಾಗಿರಿಸಬೇಕು.

ಸ್ನಾನ:—ಮಗುವಿಗೆ ೧೦ ದಿವಸಗಳಾದ ಮೇಲೆ ದಿನಕ್ಕೆ ಒಂದಾವರ್ತಿಯಾದರೂ ಸ್ನಾನವು ಅಗತ್ಯವು. ಅಸ್ವಸ್ಥವು ಆಗಿದ್ದರೆ ಮಾತ್ರ ಸ್ನಾನಮಾಡಿಸಬಾರದು. ಪ್ರತಿ ದಿನವೂ ಒಂದೇ ಸಮಯದಲ್ಲಿ ಸ್ನಾನ ಮಾಡಿಸಬೇಕು. ಆಹಾರವನ್ನು ಕೊಟ್ಟೊಡನೆ ಸ್ನಾನಮಾಡಿಸಬಾರದು. ಸೆಕೆಕಾಲದಲ್ಲಿ ಎರಡಾವರ್ತಿ ಸ್ಪಂಜಿನಿಂದ ಮಗುವಿನ ಮೈ ತೊಳೆಯುವುದು ಒಳ್ಳೆಯದು.

ನಿದ್ರೆ:—ಮಕ್ಕಳಿಗೆ ಹೇರಳವಾದ ನಿದ್ರೆಯು ಅಗತ್ಯವು. ಅವು ಯಾವಾಗಲೂ ಶಾಂತವಾದ ವಾತಾವರಣದಲ್ಲಿ ಇರಬೇಕು. ಬಹು ಸಣ್ಣ ಮಕ್ಕಳನ್ನು ಹೊತ್ತಾಗಿ ಕೈಯಲ್ಲಿ ಹಿಡಿದು ಆಡಿಸುವುದು ಉತ್ತಮವಲ್ಲ. ಮೂರು ವರ್ಷಗಳ ವರೆಗೆ ರಾತ್ರಿ ೧೨ ಘಂಟೆಯ ನಿದ್ರೆಯೂ, ಹಗಲಿನ ಬೆಳಗ್ಗೆ ಮತ್ತು ಸಾಯಂಕಾಲ ನಿದ್ರೆಯೂ, ಅತ್ಯಾವಶ್ಯಕವು. ಬಹಿರಂಗವಾದ ವಾಯುಸ್ಥಳದಲ್ಲಿ ಅವನ್ನು ಮಲಗಿಸಿ, ನೊಣಗಳು ಅದನ್ನು ಪೀಡಿಸದಂತೆ ಜಾಗ್ರತೆಯಿಂದಿರಬೇಕು. ಸುಮ್ಮನೆ ಮಲಗಿರಬೇಕೆಂದು ಮಗುವಿಗೆ ಅಮಲು ಪದಾರ್ಥವನ್ನು ಎಂದಿಗೂ ಕುಡಿಸಬಾರದು.

ಅತಿಸಾರ:—ಇದು ಬಹು ಭಯಂಕರವಾಗಿದೆ. ಮಗುವಿಗೆ ಅಹಿತವಾದ ಆಹಾರವನ್ನು ಕೊಟ್ಟೊಡನೆ ಅತಿಸಾರವುಂಟಾಗುವುದು. ಮಲವು ಹಸುರು ಬಣ್ಣವುಳ್ಳದಾದರೆ ಒಡನೆ ವೈದ್ಯನನ್ನು ಕರೆಯಲೇ ಬೇಕು. ಅತಿಸಾರವು ಅಹಿತ ಆಹಾರದಿಂದಲೂ, ಹಾಳಾದ ಆಹಾರದಿಂದಲೂ ಉಂಟಾಗುವದು. ಅತಿಸಾರದ ಸೂಚನೆಯು ತೋರಿದೊಡನೆ ಆಹಾರ ಕೊಡುವುದನ್ನು ನಿಲ್ಲಿಸಬೇಕು. ಮಗುವನ್ನು ವೈದ್ಯನಿದ್ದಲ್ಲಿಗೆ ಕೊಂಡು ಹೋಗದೆ ವೈದ್ಯನನ್ನೇ ಮಗು ಇದ್ದಲ್ಲಿಗೆ ಕರೆತರಬೇಕು.

ಮಲಬದ್ಧತೆ:—ಮಲಬದ್ಧತೆಗೆ ಹರಳೆಣ್ಣೆಯನ್ನು ಉಪಯೋಗಿಸಬಾರದು. ವೈದ್ಯನನ್ನು ವಿಚಾರಿಸಿ ಬೇಕಾದ ಆಹಾರವನ್ನೇ ಕೊಡಬೇಕು. ಔಷಧವನ್ನು ಕೊಡುವ ಮೊದಲೇ ಈ ಕೆಳಗಿನ ಪ್ರಥಮ ಚಿಕಿತ್ಸೆಯನ್ನು ಮಾಡಬಹುದು. ಆಹಾರಗಳ ಅಂತರದಲ್ಲಿ ಕೊಡುವ ನೀರಿನ ಪರಿಮಾಣವನ್ನು ಹೆಚ್ಚಿಸಬೇಕು. ಆಹಾರದ ತರುವಾಯ ಒಂದು ಚಮಚ ಬೇಕ ವೃಕ್ಷದ ಎಣ್ಣೆ (Olive Oil)ಯನ್ನು ಸ್ವಲ್ಪ ಸಕ್ಕರೆಯನ್ನು ಬೆರಸಿ ಕೊಡಬಹುದು.

ವಾಂತಿ:—ಮಗುವು ವಾಂತಿಮಾಡಿದೊಡನೆ ಅದು ಭಯಂಕರವಾಗಿ ಅಸ್ವಸ್ಥವಾಗಿದೆ ಎಂದು ನೆನಸಬಾರದು. ಆಗಾಗ್ಗೆ ವಾಂತಿ ಮಾಡುವ ಕಾರಣವು ಅಧಿಕವಾದ ಮತ್ತು ಆಗಾಗ ಕೊಡುವ ಆಹಾರದ ನಿಮಿತ್ತವಾಗಿರಬಹುದು. ಕೆಲವು ಸಲ ಆಹಾರ ಕೊಡುವಾಗ ಮಗುವನ್ನು ಕೈಯಲ್ಲಿ ಹಿಡಿಯುದು ಸರಿಯಾಗದಿದ್ದರೆ ಅದು ವಾಂತಿ ಮಾಡುವುದು. ಆಹಾರ ಕೊಡುವಾಗಲೂ ಕೊಟ್ಟ ಮೇಲೂ ಮಗುವನ್ನು ಸ್ವಸ್ಥವಾಗಿರಿಸದೆ ಅದರ ಅವಯವಗಳನ್ನು ಚಲಿಸಿದರೆ ವಾಂತಿಯಾಗುವುದು.

ಸಾಮಾನ್ಯ ಸೂಚನೆಗಳು:—ನೊಣಗಳು ಮಗುವನ್ನೂ ಮಗುವಿನ ಆಹಾರವನ್ನೂ ಸೋಂಕದಂತೆ ಮಾಡಬೇಕು. ಕೊಳಕು ಅಂಗಿಯನ್ನು ಬೇಯಿಸದೆ ಒಗೆಯಬಾರದು. ಒಗೆಯುವಾಗ ಸಾಬೂನನ್ನುಪಯೋಗಿಸಬಾರದು. ಮಗುವಿನ ಆಹಾರವನ್ನು ತಯಾರಿಸುವಾಗ ಕೈಯನ್ನು ಚೆನ್ನಾಗಿ ತೊಳೆಯಬೇಕು. ಕಾಯಿಲೆಯ ಸೂಚನೆಯು ತೋರಿದೊಡನೆ ಅದನ್ನು ಅಲಕ್ಷಿಸದೆ ವೈದ್ಯರನ್ನು ಕರೆಯಬೇಕು. ಮೊಲೆಹಾಲನ್ನು ನಮಗೆ ತೋರಿದಂತೆ ನಿಲ್ಲಿಸದೆ ವೈದ್ಯರ ಅಭಿಪ್ರಾಯವನ್ನು ವಿಚಾರಿಸಿ, ವೈದ್ಯರು ನಿಲ್ಲಿಸಹೇಳಿದರೆ ಮಾತ್ರವೇ ನಿಲ್ಲಿಸಬೇಕು. ಸಣ್ಣ ಮಕ್ಕಳಿಗೆ ಗಟ್ಟಿ ಪದಾರ್ಥವನ್ನು ತಿನ್ನಿಸಬಾರದು. ಹೆಚ್ಚಾಗಿ ಆಹಾರವನ್ನು ಕೊಡಬಾರದು. ಕಡಿಮೆ ಆಹಾರವನ್ನು ಕೊಡುವದರ ಫಲಿತಾಂಶವಾಗಿ ಸಿಕ್ಕುವ ಕಷ್ಟಗಳಿಗಿಂತಲೂ ಹೆಚ್ಚು ಕಷ್ಟಗಳು ಹೆಚ್ಚಿಗೆ ಆಹಾರವನ್ನು ಕೊಡುವುದರಿಂದ ಉಂಟಾಗುವವು.

ಹಾವು ಕಡಿತ.

(ವಿಚಾರಕೋಶದಿಂದ)

ಹಿಂದೂಸ್ಥಾನದಲ್ಲಿ ಕೇವಲ ಹಾವು ಕಡಿತದಿಂದ ಸುಮಾರು ೨೦ ಸಾವಿರ ಜನರು ಸತ್ತುಹೋಗುತ್ತಿರುವರು. ಹಾವು ಕಡಿತಕ್ಕೆ ಯಾವ ಔಷಧಿಯನ್ನು ಪ್ರಯೋಗಿಸಬೇಕು, ಏನು ಮಾಡಬೇಕು ಎಂಬುದನ್ನು ಜನರು ತಿಳಿದಿದ್ದರೆ, ಇಂತಹ ಮರಣದ ಸಂಖ್ಯೆಯು ಕಡಿಮೆಯಾಗುವುದರಲ್ಲಿ ಸಂಶಯವಿಲ್ಲ.

ಹಿಂದೂಸ್ಥಾನದಲ್ಲಿ ಹಲವು ಜಾತಿಯ ಹಾವುಗಳಿವೆ. ಅವುಗಳಲ್ಲಿ ೩೭ ಜಾತಿಯವುಗಳು ವಿಷವುಳ್ಳವುಗಳು. ಇವುಗಳಲ್ಲಿ ಏಳು ಜಾತಿಯ ಹಾವುಗಳು ಮಾತ್ರವೇ ಹೆಚ್ಚಾಗಿ ಕಚ್ಚುವವು. ಹಾವುಗಳ ಜಾತಿಯನ್ನು ಕಂಡುಹಿಡಿಯಲು ಪ್ರತಿಯೊಬ್ಬನು ಕಲಿಯಬೇಕು. ವಿಷವಿಲ್ಲದ ಹಾವುಗಳು ಕಡಿದರೂ ಕೂಡ ಒಮ್ಮೊಮ್ಮೆ ಭಯಪಡುವುದರಿಂದ ಮೂರ್ಛೆ ಹೊಂದುವರು.

ವಿಷವುಳ್ಳ ಹಾವು ಮತ್ತು ವಿಷವಿಲ್ಲದ ಹಾವು ಇವುಗಳ ಕಡಿತಗಳೊಳಗೆ ಭೇದವಿದೆ. ಕಡಿತದಲ್ಲಿ ಎರಡು ಹಲ್ಲುಗಳ ಗುರುತು ಇದೆಯಾದರೆ ವಿಷವುಳ್ಳ ಹಾವಿನ ಕಡಿತವೆಂದೂ ಹಲವು ಹಲ್ಲುಗಳ ಗುರುತಿದೆಯಾದರೆ ವಿಷವಿಲ್ಲದ ಹಾವಿನ ಕಡಿತವೆಂದೂ ತಿಳಿಯಬೇಕು.

ವಿಷವುಳ್ಳ ಹಾವು ಕಡಿದುದಾದರೆ ಒಡನೆ ಉರಿಯೂ ಪ್ರಾರಂಭವಾಗಿ ಗಾಯವು ಕೆಂಪಾಗಿ ರಕ್ತವು ಬರುವುದು. ಆ ಭಾಗವು ಕಪ್ಪು ಬಣ್ಣವಾಗಿ ಉಬ್ಬುವುದು. ಕಡಿಯಲ್ಪಟ್ಟ ಮನುಷ್ಯನು ಅಮಲು ಕುಡಿದವನಂತೆ ನಿದ್ರೆಗೊಳಗಾಗುವನು. ಕಾಲಿನಲ್ಲಿ ಒಂದು ತರದ ನರಗಳ ಚಲನೆಯು ಕಂಡುಬರುವುದಲ್ಲದೆ ವಾಂತಿಯಾಗುವುದು. ಮಾತನಾಡುವ ಶಕ್ತಿಯು, ನುಂಗುವ ಶಕ್ತಿಯು ಮಾಯವಾಗುವುದು. ಬೆವರು ಬರುವುದು. ಕೆಲವು ಜಾತಿಯ ಹಾವುಗಳಿಂದ ಕಡಿಯಲ್ಪಟ್ಟರೆ, ಸ್ಮೃತಿಯು ತಪ್ಪಿ, ಶರೀರವು ತಣ್ಣಗಾಗಿ, ನರಗಳ ಬಡಿತವು ಕಡಿಮೆಯಾಗಿ ಬಾಯಿಯಿಂದ ರಕ್ತವು ಸೋರುವುದು.

ಹಾವುಗಳು ಅಧಿಕವಾಗಿರುವ ಸ್ಥಳಗಳಲ್ಲಿ ವಾಸಿಸುವವರು ಈ ಕೆಳಗಿನ ಸೂಚನೆಗಳನ್ನು ನೆನಪಿನಲ್ಲಿಡಬೇಕು.

ಯಾವಾಗಲೂ ಹಾಸಿಗೆಯ ಮೇಲೆಯೇ ಮಲಗಬೇಕು. ರಾತ್ರಿಯಲ್ಲಿ ಹಾಸಿಗೆಯನ್ನು ಬಿಚ್ಚಬೇಕಾದರೆ ದೀಪ ಹಚ್ಚಿ ಸುತ್ತಲೂ ನೋಡಿಕೊಳ್ಳಬೇಕು. ರಾತ್ರಿಕಾಲ, ಅದರಲ್ಲೂ ಮಳೆಗಾಲದಲ್ಲಿ ಕಾಲುಗಳಿಗೆ ಪಾದರಕ್ಷೆಗಳನ್ನು ಸಿಕ್ಕಿಸದೆಯೂ ದೀಪವನ್ನು ಹೊತ್ತಿಸದೆಯೂ ಹೊರಗೆ ಹೋಗಬಾರದು.

ಮನೆ ಸುತ್ತು ಉದ್ದವಾದ ಹುಲ್ಲು ಮತ್ತು ಪೊದರುಗಳನ್ನು ಇರಗೊಡಿಸಬಾರದು. ಸಾಧ್ಯವಿದ್ದರೆ ಮನೆಯ ಸುತ್ತಲೂ ಒಂದೆರಡು ಗಜಗಳಿಗೆ ಸಣ್ಣ ಸಣ್ಣ ಕಲ್ಲುಗಳನ್ನು ಹಾಸಿದರೆ ಹಾವುಗಳು ಬರಲಾರವು. ಮನೆಯ ಸಮೀಪ ಇಲಿಗಳನ್ನೂ, ಕಪ್ಪೆಗಳನ್ನೂ ಇರಗೊಡಿಸಿದರೆ ಅವು ಹಾವುಗಳನ್ನು ಆಕರ್ಷಿಸುವವು.

ಒಬ್ಬ ಮನುಷ್ಯನು ಹಾವಿನಿಂದ ಕಚ್ಚಲ್ಪಟ್ಟರೆ ಕಡಿತದ ಮೂರು ಅಂಗುಲಗಳ ಮೇಲೆ ಒಂದು ಹಗ್ಗವನ್ನಾಗಲಿ ವಸ್ತ್ರದ ಚಿಂದಿಯನ್ನಾಗಲಿ ಬಲವಾಗಿ ಬಿಗಿದು ಕಟ್ಟಿ ಅಲ್ಲಿ ರಕ್ತವು ಚಲಿಸದಂತೆ ಜಾಗರೂಕರಾಗಿರಬೇಕು. ತದನಂತರ ಒಂದು ಹರಿತವಾದ ಚೂರಿಯಿಂದ ಗಾಯದ ಮೇಲೆ ಉದ್ದಾಕ್ಕೆ ಬರೆಗಳನ್ನೆಳೆದು ಗಾಯಗಳನ್ನು ಕೊಂಡ ಪೊಟೆಶಿಯಮ್ ಪರಮೆಂಗನೇಟ ಎಂಬ ಔಷಧಿಯಿಂದ ಉಜ್ಜಬೇಕು. ಇದಕ್ಕಾಗಿ ಯಾವಾಗಲೂ ಒಂದು ಹರಿತವಾದ ಚೂರಿಯನ್ನು ಪೊಟೆಶಿಯಮ್ ಪರಮೆಂಗನೇಟಿನ ತಂಡಿಗೆಯನ್ನು ಮಲಗುವಾಗ ಹತ್ತಿರವೇ ಇಟ್ಟುಕೊಳ್ಳಬೇಕು. ಪೊಟೆಶಿಯಮ್ ಪರಮೆಂಗನೇಟ ಇಲ್ಲದೆ ಇದ್ದರೆ ಗಾಯದ ಮಾಂಸವನ್ನು ಚೂರಿಯಿಂದ ಕೆತ್ತಿ ತೆಗೆದು ಬಿಸಿಯಾದ ಅಂಗಾರದಿಂದಾಗಲಿ ಬಿಸಿಯಾಗಿ ಕುದಿಯುವ ಎಣ್ಣೆಯಿಂದಾಗಲಿ ಕೆಂಪಗಾದ ಕಬ್ಬಿಣದ ಸರಳಿನಿಂದಾಗಲಿ ಗಾಯವನ್ನು ಸುಡಬೇಕು.

ಅರ್ಧ ಘಂಟೆಯ ವರೆಗೆ ವಿಷವೇರುವ ಚಿಹ್ನೆಯು ತೋರದಿದ್ದರೆ ಬಂಧನವನ್ನು ಸ್ವಲ್ಪ ಸಡಿಲಾಗುವಂತೆ ಮಾಡಬೇಕು. ಇಲ್ಲದಿದ್ದರೆ ಕೆಳಗಿನ ಭಾಗವೇ ಸತ್ತುಹೋಗುವುದು.

ಕಚ್ಚಲ್ಪಟ್ಟವನ ಶರೀರವು ಶೀತವಾಗಿರುವುದಾದರೆ ತಲೆಯನ್ನು ಕೆಳಗಿನಲ್ಲಿಟ್ಟು ಕಾಲುಗಳನ್ನು ಶರೀರಕ್ಕೆ ಸಮಕೋನವಾಗುವಂತೆ ಚಾಚಬೇಕು. ಎರಡೂ ಕಾಲುಗಳನ್ನು ಚೆನ್ನಾಗಿ ಕಟ್ಟಬೇಕು. ಹೃದಯದ ಮೇಲೆ ಸಾಸಿವೆಯ ಲೇಪನವನ್ನು ಹಾಕಬೇಕು. ಬಿಸಿನೀರಿನ ಶೇಕ ಕೊಡಬೇಕಾದುದರಿಂದ ಬಿಸಿನೀರು ತಯಾರಾಗುವ ವರೆಗೆ ಬಿಸಿಯಾದ ಶುಂಠಿ ಮತ್ತು ಸಾಸಿವೆಯನ್ನು ತಿಕ್ಕುತ್ತಿರಬೇಕು. ಕನಿಷ್ಠ ಪಕ್ಷ ೬ ಬಾಟ್ಲಿಗಳಲ್ಲಾದರೂ ಬಿಸಿ ನೀರನ್ನು ತುಂಬಿಸಿ ಶೇಕ ಕೊಡಬೇಕು. ಶೇಕವನ್ನು ಕೊಟ್ಟ ಮೇಲೆ ಆತನನ್ನು ಒಂದು ದಪ್ಪವಾದ ಕಂಬಳಿಯಿಂದ ಹೊದಿಸಬೇಕು.

ಆಲ್ಕೊಹಾಲನ್ನು ಕೊಡುವವರಿದ್ದಾರೆ. ಆದರೆ ಆಲ್ಕೊಹಾಲನ್ನು ಎಂದಿಗೂ ಕೊಡಬಾರದು. ಸುಣ್ಣವನ್ನೂ ನವಸಾಗರವನ್ನೂ ಒಂದೇ ರೀತಿ ಪ್ರಮಾಣದಲ್ಲಿ ಬೆರೆಸಿಮಾಡಿದ ಔಷಧಿಯನ್ನು ಮೂಸುತ್ತಾ ಇರುವುದು ಒಳ್ಳೆಯದು.

ಕಚ್ಚಲ್ಪಟ್ಟವನಿಗೆ ಬಿಸಿಯಾದ ಮೇಲೋಗರ, ಬಿಸಿಯಾದ ಹಾಲು ಅಥವಾ ಚಾ ಕೊಡಬೇಕು. ಇವುಗಳನ್ನು ಕಾಲು ಘಂಟೆಗಳಿಗೊಮ್ಮೆಯಾದರೂ ಕೊಡುವುದು ಬಹು ಒಳ್ಳೆಯದು.

ಕಚ್ಚಲ್ಪಟ್ಟ ಮನುಷ್ಯನಿರುವ ಕೋಣೆಗೆ ಬರುವ ವಾಯುವನ್ನು ತಡೆಗಟ್ಟಬಾರದು. ಆತನು ಚಲಿಸದೆ ಪೂರ್ಣ ವಿಶ್ರಾಂತಿಯನ್ನು ಪಡೆಯಬೇಕು. ಇವುಗಳಿಂದಲೇ ತೃಪ್ತರಾಗದೆ ವೈದ್ಯರನ್ನು ಕರೆತಂದು ಇವುಗಳೊಂದಿಗೆ ಬೇರೆ ಚಿಕಿತ್ಸೆಗಳನ್ನು ಮಾಡಬೇಕು.

ಉಡುಪಿಯ ಪತ್ರ.

ತುಣುಕು ಮಿಣುಕು

೧) ಇಲ್ಲಿಯ [illegible]

೨) ಇಲ್ಲಿಯ [illegible]

೩) ಈ ೩೦–೮–೨೮ರಲ್ಲಿ [illegible] "[illegible]" ಎಂಬ ನಾಟಕವನ್ನಾಡಿ ತೋರಿಸಿದರು.

೪) ಈ [illegible]

೫) ೨೦–೮–೨೮ರಲ್ಲಿ ಇಲ್ಲಿಯ ಸಂಸ್ಕೃತ ಕಾಲೇಜಿನ [illegible]

೬) [illegible] ಕೃಷ್ಣ [illegible]

೧–೯–'28 "ಮಾರಿದುಂಬಿ"

The Kanara Watch House Udipi, S. K.

ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸಗಳೂ, ಎಲಿಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮಪೀಸು, ಫೊನೋಗ್ರಾಫು, ಮತ್ತ ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಪಟ್ಟಿ ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೂ. — ನಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊರೆ [illegible] ಕೊಡಿಸಿ [illegible] ಸಂಬಂಧದ ಸಮಯವು ದೊರಕುವುದು

[illegible]



ದಯೆ ಇಟ್ಟು ಮೇಲಣ ಸಾಮಾನುಗಳ [illegible] ಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿ [illegible] ನಿಮಗೆ ಆದರಿಂದ ಪ್ರಯೋಜನವಿದೆ ಅಗ್ಗವೂ ಅತ್ಯುತ್ಕೃಷ್ಟ [illegible] ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ [illegible] ಗನ್ನು ಕಳುಹಿಸುತ್ತೇವೆ

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್,

ಮತ್ತು ಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.
210, ಅಬ್ದುಲ್‌ರಹಿಮಾನ ಸ್ಟ್ರೀಟ್ ಮುಂಬಯಿ

ಇನ್ನೂ ಹೆಚ್ಚಿನ ಕಾರಣಗಳು!

ಪೆರೆಡೈಸ್ ಟೋನಿಕ್ ಪಿಲ್ಸ್

ಎಂಬ, ಕಸ್ತೂರಿ, ಶಿಲಾರಾಳ, ಬಂಗಾರ ಮೊದಲಾದ ಅಮೌಲ್ಯ ಪದಾರ್ಥಗಳಿಂದಾಗುವ ಈ ನಿಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವ ಘಟಿಸುವ ಈ ಮಾತ್ರೆಗಳು ಇಡೀ ಶರೀರದ ಚೇತನವನ್ನು ವೃದ್ಧಿಮಾಡುವವು. ದೇಹಶಕ್ತಿಯನ್ನೂ, ಸ್ನಾಯುಗಳ ಬಲವನ್ನೂ, ಹೆಚ್ಚಿಸಿ, ಕಾಂತಿಯನ್ನೂ ತೇಜವನ್ನೂ ಅತಿಯಾಗಿ ಕಳೆಕೊಂಡಿರುವವರಿಗಾದರೂ ಸ್ಥೈರ್ಯವಲ್ಲೇ

— ಕೊಡುವುದು —

61 ಮಾತ್ರೆಗಳುಳ್ಳ ಸೀಸೆಗೆ ಬೆಲೆ 7 [illegible] ಮಾತ್ರ

ಆರ್. ಘೋಟಾಲಾಲ್ ಎಂಡ್‌ಕೋ,
(K) ಪ್ರಿನ್ಸೆಸ್‌ಸ್ಟ್ರೀಟ್ ಬೊಂಬಾಯಿ ನಂಬ್ರ 2

ಆದರ್ಶ ಶಕ್ತಿವರ್ಧಕವು

[illegible] ಎಲಿಕ್ಟ್ರಿಕ್ ನರ್ವಾಸ್ [illegible] ಕಳಕೊಂಡ ಶಕ್ತಿಯನ್ನು ತಿರುಗಿ ತಂದು [illegible] ಯವಾಗಿ ಮಾಡುವ [illegible] ಚಟುವಟಿಕೆಯನ್ನು ಹೊಂದಿ ಉತ್ಸಾಹ ಭರಿತರಾಗು.

೨೦ ಬಾಟಲಿಗೆ ಕ್ರಯ ರೂಪಾಯಿ 5

ಕ್ರಯದ ಪಟ್ಟಿಗೂ ಮಾಹಿತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಮ್ ಡಿ ಪ್ರೋದಾ ಮತ್ತು ಕಂಪನಿ

ಚಿಲರೆ ಮತ್ತು ರಖಮು ಔಷಧ ವ್ಯಾಪಾರಿಗಳು

P. O. ಬೋಕ್ಸ್ ನಂ. 1003 [illegible] ಬಾಯಿ ನಂ. [illegible]

ಸನ್ ೧೯೨೭-೨೮ರಲ್ಲಿ ಹೊಸತಾಗಿ ತಯಾರಾದ
ಸಮಸ್ತರಿಗೂ ಚೆನ್ನಾಗಿ ಮಾಹಿತಿಯುಳ್ಳ

'ಸೂರ್ಯ' ಗುರುತುಳ್ಳ ಪತ್ರಕೇಶರಿ

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್

ಅತ್ಯುತ್ಕೃಷ್ಟವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು

ಸೂರ್ಯಮಾರ್ಕಿನ ಉತ್ತಮ ಕೇಶರವನ್ನು ಕೆಳಗೆ ವಿಳಾಸ ಕೊಟ್ಟವರಿಂದ ಪಡೆಯಿರಿ

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾತಲಿನದ ಒಂದು ರಾತಲಿನ ಡಬ್ಬಿ ಇರುತ್ತಿಲ್ಲ. ಆದರೆ ಅತಿ ಕಡಿಮೆಯೆಂದರೆ ಒಂದು ಔನ್ಸ್ ಭಾರದಷ್ಟನ್ನಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ,
28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಪರೀಕ್ಷಿಸಿರಿ! ಶಾಶ್ವತವಾಗುವದು!!
ಕಿಮ್ಮತ್ತು ಅಗ್ಗ ಫಲಪ್ರದ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲೆ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

[illegible] ವೈದ್ಯ ಪರಂಪರೆಯಲ್ಲಿ ಮುಖ್ಯವಾಗಿ [illegible] 'ವೈದ್ಯ ಶ್ರೀ ವೈದ್ಯ' [illegible]

[illegible]

ಮ್ಯಾನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

Calcutta Exhibition

1928

Organised by the 43rd Session of the INDIAN NATIONAL CONGRESS.

UNIQUE OPPORTUNITY

For Manufacturers, Producers, Merchants Dealers Show Men concerned with Swadeshi goods and products, Artists Craftsmen etc. CALCUTTA EXHIBITION will remain open from the middle of December 1928 to the middle of January 1929

Space will be allotted in the General Booths or for the erection of Exhibitor's own Pavilions in strict rotation. The site of the Exhibition will be PARK CIRCUS.

Apply for Particulars to

N. R. Sarkar,
Secretary,
8A Hogg Street, CALCUTTA

Edited Printed & Published by V. S. Kamath at the M. F. A. SHARADA PRESS, MANGALORE.

[illegible] ವರ್ಷ ಒಂದಕ್ಕೆ ರೂಪಾಯಿ 2–0-0 **Registered No. M. 489** ಟಪ್ಪಾಲು ಹಾಸಲು ಸೇರಿ ರೂಪಾಯಿ 2–18–0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ತರುಷವಾಯಿತೆ! ಮತ್ತೆ ವಿಷ್ಟವ ಸುರುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಪಡೆತ ತನ್ನಿರ ತೆರದಿ ಕುಳಿತರೆ ತೆರಳೆ ಎಲ್ಲರ! ತೊರೆಯ ಧೀರರು ನಿಶ್ಚಿತಾರ್ಥವನು ॥ ೧ ।

ಪುಸ್ತಕ ೨೨. ಮಂಗಳೂರು, ತಾ ೧೪ನೇ ಶುಕ್ರವಾರ ಸಪ್ಟಂಬರ ೧೯೨೮ (14–9–28) ಸಂಚಿಕೆ ೩೭

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:–UDIPI.
ಹೆಡ್ ಆಫೀಸು: – ಉಡುಪಿ

Branches:–COONDAPOOR Mangalore
ಶಾಖೆ. – ಕುಂದಾಪುರ
ಮಂಗಳೂರು

Statement of Affairs of the Canara Banking Corporation Udipi, Limited as at 31st August 1928

	CAPITAL AND LIABILITIES			PROPERTY AND ASSETS	
1	Paid up Capital	Rs 1 99 650-0- 0	1	Premises Building Furniture &c	Rs 9 49 2 0
2	Reserve Fund and other funds	96 600 0 0	2	Investments on G P Notes	2 54 210 5 0
3	Deposits	17 537 49 4 11	3	Investments on Approved Securities	17 26 132 2 9
4	Overdraft with Bankers	1 4713 4 5	4	Bills for collection as per Contra	1 45 8 9 0
5	Sundry Persons A C as per Contra	45 58 9 0	5	Sundries including P & L items	5 905 1 9
6	Sundries including P & L items	12 1607 8 5	6	Cash in hand & with Bankers	3 9575 6 4
	Total	22 00 878 10 10		Total	22 00 8 5 10 10

Office of the Corporation
UDIPI 11–9–'28

N ANANDA RAO
Secretary

ಅಮೃತಾಂಜನ

ಕ್ಷಣಿಕ ಪ್ರಯೋಜನವಲ್ಲಿ ಪ್ರಸಿದ್ಧಪಟ್ಟ ನೋವಿನ
– ಮುಲಾಮು –

ತಲೆನೋವಿನಿಂದ ಚಡಪಡಿಸುವ ಶೀತದಿಂದ ವಿಶ್ರಾಂತಿಯಿಲ್ಲದ ಕೆಮ್ಮಿನಿಂದ ಪೀಡಿತರಾದ ಸಂಧಿಗಳಿಂದ ಕಟ್ಟಲ್ಪಟ್ಟ ವಾತದಿಂದ ನರಳುವ ಮತ್ತು ಇತರ ಯಾವ ವಿಧದ ನೋವು ವ [illegible] ಬೇನೆಗಳಿಂದ ಬಾಧಿತ ರಾಗಿರುವ ಮನುಷ್ಯರಿಗೆ ಶೀಘ್ರವಾದ ಔಷಧಿಯಾಗಿದೆ

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ ಕ್ರಯ ಡಬ್ಬಿಗೆ 10 ಆಣೆ ಟಪ್ಪಾಲು ಹಾಸಲು ಪ್ರತ್ಯೇಕ



ನಿಮ್ಮ ಉಪಯೋಗಕ್ಕಾಗಿ ವರ್ತಮಾನ ನೋಡಬೇಕೆಂದಿರಿ—

ಗಜಕರ್ಣದ ಮುಲಾಮು – ಎಲ್ಲಾ ತರದ ಗಜಕರ್ಣ ಕಜ್ಜಿ ಗಳಿಗೂ, ಸಂದಿಗೆಯ ಮತ್ತು ಬಂಗು ಕಪ್ಪಾದ ಔಷಧಿಯಾಗಿದೆ ಮೂರು ದಿನ ಹಚ್ಚಿದರೆ ಪೂರ್ಣ ಗುಣವಾಗುವುದು ಕ್ರಯ ಡಬ್ಬಿಗೆ ಆಣೆ 6

ದಂತಮಂಜನ – ಉತ್ತಮ ವಸ್ತು [illegible] ವಾದ ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ ಹಲ್ಲು ಗಟ್ಟಿಯಾಗಿಯೂ ಬಿಳಿಯದಾಗಿಯೂ ಉಳಿಯುವವು ಕ್ರಯ ಡಬ್ಬಿ 1ಕ್ಕೆ ಆಣೆ 2

ಅಮೃತಾಂಜನ ಡಿಪೊ

೬, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜಟೌನ್, ಮದ್ರಾಸು , 249 ಫ್ರೇಯರ್ ರೋಡ್ ಮುಂಬಯಿ
ಮಂಗಳೂರಲ್ಲಿ – ಊಲನ್ ಮಾರ್ಟ್, ಹಂಪನಕಟೆ, ಇವರಲ್ಲಿಯೂ ದೊರಕುವುದು

ಮಕ್ಕಳಿಗೆ ಸಲುವಾಗಿ,

ಡೋಂಗರ ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು ದಿ ಊಲನ್ ಮಾರ್ಟ್, ಮಂಗಳೂರು.

Ready for Sale

THE
MADRAS HINDU RELIGIOUS ENDOWMENT ACT
No II of 1927
Price 8 annas
Postage Extra
For copies apply to—
The M T A Sharada Press
Car street. MANGALORE

ADVERTISE IN OUR WEEKLY
To Reach the Hearths & Homes of India's Masses
For Particulars Apply to
The Manager,
SWADESHABHIMANI,
MANGALORE.

ಪತ್ರವ್ಯವಹಾರ

[illegible] ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ

ಪ್ರಿಯ ಸಂಪಾದಕ ಮಹಾಶಯರೇ,

ಕಳೆದ ತಾರೀಖು ೧೬-೮-೨೮ನೆಯ ನವಯುಗದ ಸಂಚಿಕೆಯಲ್ಲಿ "ಜಾಗರಿಸ ಗುಟ್ಟು ತಿವನ ಬಳ್ಳಿ" ಎಂಬ ಶಿರೋಲೇಖದಿಂದ ಪ್ರಕಟಿಸಿ ಹೊರಡಿಸಿದ ಪ್ರಕಾರ "ಅಭಿಮನ್ಯು ರೋವರ್ಸ್" ಸಂಗಡದ ವಿದ್ಯಾದಾಯಿನಿಗೆ ಸಂಬಂಧಿಸಿ ಎರಡು ಜನ ಮೆಂಬರರು ರಾ। ಅಮೀನರ ಕಾರ್ಯದ ಖಂಡನೆಗೋಸ್ಕರ ರಾಜಿನಾಮೆಯನ್ನು ಕೊಟ್ಟಿದ್ದಾರೆ. ಇನ್ನೂ ಹಲವರು ಕಳವಳಕರ ಹೃದಯರಾಗಿರುತ್ತಾರೆ, ಎಂಬ ಸಂಗತಿಯು ಶೀರಾ ತಪ್ಪು.

ಇಂದಿನ ಮಟ್ಟಿಗೆ ಒಬ್ಬಿಬ್ಬರು ಒಂದು ಸಂಗಡದಿಂದ ತೊಲಗಿಹೋದಲ್ಲಿ ಸದರಿಯವರು ರಾ। ಅಮೀನರ ಕಾರ್ಯದ ಖಂಡನೆಗೋಸ್ಕರ ಬಿಟ್ಟುಹೋದರೆಂದು ಹೇಳುವರೇ ಸಾಧ್ಯವೋ? ಹಾಗಾದರೆ ಅದೇ ದಿವಸ ವಿದ್ಯಾದಾಯಿನಿಗೆ ಸಂಬಂಧಿಸಿದ ನಾಲ್ಕು ಜನ ಹೊಸ ಮೆಂಬರರು ಬಂದು ಸೇರಿದ್ದರಿಂದ ತಿಳಿಸಿದರೆ ಸದರಿಯವರು ರಾ। ಅಮೀನರ ಕಾರ್ಯಕಲಾಪಕ್ಕೆ ಮೆಚ್ಚಿ ಸೇರಿದ್ದರೆಂದು ಆಗುವುದೇ? ಇಲ್ಲ. ಹಾಗೆ ಆಗಬೇಕಾದರೆ ಬಿಟ್ಟು ಹೋಗುವ ಮತ್ತು ಸೇರುವ ಮೆಂಬರರು ನಮ್ಮ ಸಂಗಡಕ್ಕೆ ಅವರು ಬರೆದಿರುವ ಪತ್ರವ್ಯವಹಾರದಲ್ಲಿ ಸಂಪೂರ್ಣವಾದ ಅಭಿಪ್ರಾಯವನ್ನು ತಿಳಿಸುತ್ತಿದ್ದರು. ಅದೇನೂ ಅಲ್ಲದೆ ತಮ್ಮ ಕೆಲಸದ ಅಡಚಣೆಯಿಂದಲೋ, ಮುಂದಕ್ಕೆ ಸದರಿ ನಮ್ಮ ಸಂಗಡದಲ್ಲಿ ಸೇರಿ ಕೆಲಸಮಾಡುವರೇ ಸಾಧ್ಯವಿಲ್ಲವೆಂತಲೋ ರಾಜಿನಾಮೆಯನ್ನು ಕೊಟ್ಟಲ್ಲಿ ರಾ। ಅಮೀನರ ಕಾರ್ಯದ ಖಂಡನೆಗೋಸ್ಕರ ಕೊಟ್ಟರೆಂದು ಹೇಳುವರೆ ಸಾಧ್ಯವಿಲ್ಲ. ಹಾಗೆ ಒಬ್ಬಿಬ್ಬರು ಏನೋ ಕಾರಣದಿಂದ ರಾಜೀನಾಮೆ ಕೊಟ್ಟಲ್ಲಿ ಅಭಿಮನ್ಯು ರೋವರ್ಸ್ ಸ್ಕೌಟಿನ ಮೆಂಬರರು ಕಳವಳಕ ಹೃದಯರಾಗುವರೇ? ೧೯೧೪ನೆಯ ಇಸವಿಯಲ್ಲಿ ಪ್ರಾರಂಭವಾದ ಮಹಾಯುದ್ಧದ ಗುಂಡಿನಂತೆ ನಮ್ಮಲ್ಲಿ ಯಾವ ಗುಂಡಿನ ಭಯವೂ ಇರುವುದಿಲ್ಲ. ಇವುಗಳನ್ನು ಸರಿಯಾಗಿ ಆಲೋಚಿಸದೆ ಅಥವಾ ತಿಳಿಯದೆ ತನ್ನ ಪತ್ರವ್ಯವಹಾರಕ್ಕೆ ಬಾಲವು ಹುಟ್ಟುವಂತೆ ತನಗೆ ಅಗತ್ಯವಿಲ್ಲದ ಬೇರೆ ವಿಷಯಗಳನ್ನು ಮೂಲೆಯಿಂದ ಹೆಕ್ಕಿತೆಗೆದು ಪ್ರಕಟಿಸಿದ್ದನ್ನು ನೋಡುವಾಗ ಮಿಸ್ ಕೆ ಮೇಯೊ ಎಂಬ ಒಬ್ಬ ಅಮೇರಿಕದ ಮಹಿಳೆಯಂತೆ ಬರಿಯ ಕಲ್ಪನೆಯ ವಾರ್ತೆಯನ್ನು ಪ್ರಕಟಿಸುವರೇ ಈ ಬಾತ್ಮಿದಾರರು ಯಾವಲ್ಲಿಂದ ಬಂದಿರುವರೋ ಎಂಬ ಸಂಶಯ.

ಎನ್. ಟಿ ಸುವರ್ಣ,

ಮುಂಬಾಯಿ. ಸ್ಕೌಟ್‌ಮಾಸ್ತರ್,

೨೫-೮-೨೮ ಅಭಿಮನ್ಯು ರೋವರ್ಸ್ ಸ್ಕೌಟ್ಸ್ (೮ನೇ ಮುಂಬ್ಯೆ)

ಕ್ಯೊಪಾಡಿ ಪಂಚಾಯತಿ ಕೋರ್ಟಿನವರಿಗೊಂದು ಬಹಿರಂಗ ಪತ್ರ.

ಕುಂಬಳೆ ಕ್ಯಾಹಾಂನಲ್ಲಿರುವ ಮೇಲ್ಕಂಡ ಕೋರ್ಟಿನಲ್ಲಿರುವ ಪ್ರೆಸಿಡೆಂಟರಾಗಲೀ ಮೆಂಬರರಾಗಲೀ ದಯಮಾಡಿ ಈ ಪತ್ರಿಕೆಯ ಮೂಲಕ ಕೆಳಗೆ ವಿವರಿಸಿದ ಸವಾಲುಗಳಿಗೆ ಉತ್ತರ ಕೊಡುವಿರಾ?

೧ ನಿಮ್ಮ ಕೋರ್ಟಿನಲ್ಲಿ ಪ್ರತೀ ಕ್ಯವೇತಿಗೆ ಎಂಟಾಣೆಯಂತೆ ಕೋರ್ಟಿನವರು ಫೀಸು ವಸೂಲು ಮಾಡುವುದು ನಿಜವೋ?

೨ ಅಮಲ್‌ದಾರಿಗಳಲ್ಲಿ ಡಿಕ್ರಿಗೆ ಒಂದುವರೆ ರೂಪಾಯಿ ವಸೂಲು ಮಾಡುವದು ನಿಜವೋ?

೩ ಈ ರೀತಿ ವಸೂಲು ಮಾಡಿದ ಹಣವು ಪ್ರೆಸಿಡೆಂಟರಿಗೋ ಯಾ ಮೆಂಬರರಿಗೆ ಸೇರುತ್ತದೋ? ಇದು ವಸೂಲು ಮಾಡುವುದು ನ್ಯಾಯವೋ?

೪ ಮೆಂಬರರ ಸ್ಥಿತಿ ಯಾರಾದರೂ ಕೋರ್ಟಿನ ಎಲ್ಲಾ ಪ್ರೊಸಿಡಿಂಗ್ಸ ವಗೈರೆ ಬರೆಯುವದುಂಟೋ? ಇದೇ ಮೆಂಬರರು ಕ್ಯವೇತುಗಳನ್ನು ಸಹಾ ಬರೆದು ಕಕ್ಷಿಗಾರರಿಂದ ಫೀಸು ವಸೂಲು ಮಾಡುವದುಂಟೋ? ಇದು ಕೋರ್ಟಿನವರ ತಿಳುವಳಿಕೆಗೆ ಬಂದದ್ದುಂಟೋ?

೫ ಡಿಕ್ರಿಯ ನಕ್ಕಲುಗಳನ್ನು ಕಕ್ಷಿಗಾರರಿಗೆ ಕೊಡಬೇಕಾದರೆ ಅವರಿಂದ ೬ ಯಾ ೮ ಆಣೆ ವಸೂಲು ಮಾಡುವದು ನ್ಯಾಯವೋ? ಇಂಥಾ ನಕ್ಕಲು ಡಿಕ್ರಿ ಆದ ದಿವಸವೇ ಕಕ್ಷಿಗಾರರಿಗೆ ಧರ್ಮಾರ್ಥವಾಗಿ ಕೊಡಬೇಕೆಂತ ನಿಮ್ಮ ಕೋರ್ಟಿಗೆ ಸರ್ಕಾರದ ಬಂದವಸ್ತಿಂದುಂಟೋ?

ಕುಂಬಳೆ, ತಾ ೬-೯-'೨೮ "ಕಕ್ಷಿಗಾರರಲ್ಲೊಬ್ಬ"

ಬ್ಯಾಬಲಿನಲ್ಲಿರುವ ಪ್ರವಾದಿಗಳ ಹೆಸರುಗಳ ಮೂಲವು ಸುಮೇರಿಯನ್ ಭಾಷೆಯಿಂದ ಬಂದುದೆಂಬುದಕ್ಕೆ ಆಧಾರಗಳು

ಬ್ಯಾಬಲಿನಲ್ಲಿ ಹೇಳಿರುವ ಜೇಕೊಬ ಜೋಸೆಫ್ ಇಸ್ರಯೇಲ್, ಅಬ್ರಹಾಮ್ ಡೆವಿಡ್, ಮೋಸಸ್ ಎಂಬ ಹೆಸರುಗಳನ್ನು ಎಲ್ಲರೂ ಕೇಳಿರಬಹುದು ಆದರೆ ಈ ಶಬ್ದಗಳ ಮೂಲವು ಎಲ್ಲಿಂದ ಬಂದಿತು? ಬ್ಯಾಬಲನ್ನು ಬರೆಯುವುದಕ್ಕಿಂತಲೂ ಮೊದಲು ಈ ಹೆಸರುಗಳ ಉಪಯೋಗವಿದ್ದಿತ್ತೋ ಅಥವಾ ಬ್ಯಾಬಲನ್ನು ಬರೆಯುವಾಗ ಈ ಹೆಸರುಗಳನ್ನು ಉಂಟುಮಾಡಿದರೋ? ಅಥವಾ ಇದೆ ಸಮಯದಲ್ಲಿ ಪೆಲೆಸ್ತೀನ ದೇಶದಲ್ಲಿಯಾಗಲೀ ಅಥವಾ ಅದರ ನೆರೆ ದೇಶಗಳಲ್ಲಿಯಾಗಲೀ ವಾಡಿಕೆಯಲ್ಲಿದ್ದ ಹೆಸರುಗಳೋ? ಎಂಬ ವಿಷಯವು ವಿಚಾರಿಸಬೇಕಾದ ವಿಷಯವಾಗಿದೆ.

ಇತ್ತಲಾಗೆ ಬೆಬಿಲೋನ್ ಪಟ್ಟಣವನ್ನು ಅಗೆದು ನೋಡಿದಾಗ ಪ್ರಾಚ್ಯ ಶೋಧನಗಾರರಿಗೆ ಹಲವು ಶಾಸನಗಳು ಸಿಕ್ಕಿರುವವು ಈ ಶಾಸನಗಳನ್ನು ಮಣ್ಣಿನಿಂದ ಮಾಡಿದ ಹಲಗೆಗಳ ಮೇಲೆ ಬರೆದಿರುತ್ತಾರೆ ಇವುಗಳಿಂದ ಯೇಸುಕ್ರಿಸ್ತರು ಹುಟ್ಟುವ ಎರಡು ಮೂರು ಸಾವಿರ ವರುಷಗಳ ಹಿಂದಿನ ಸಂಗತಿಗಳು ತಿಳಿಯಬರಲಿಕ್ಕೆ ಆಧಾರಗಳು ಸಿಕ್ಕಿರುವವು ಈ ಆಧಾರಗಳ ಪ್ರಕಾರ ಮೇಲೆ ಹೇಳಿದ ಹೆಸರುಗಳು ಸುಮೇರಿಯ ಭಾಷೆಯ ಶಬ್ದಗಳಿಂದ ತಿಳಿದುಬರುತ್ತದೆ. ಈ ಶಾಸನಗಳಲ್ಲಿ ಕೆಲವು ಬೇರೆ ಬೇರೆಯವರು ಬರೆದುಕೊಟ್ಟ ಕರಾರುಗಳಾಗಿವೆ, ಇವುಗಳಿಗೆ ಯಾಜಕರ ಸಾಕ್ಷಿಗಳು ಇವೆ ಯಾವ ಅರಸರ ಕಾಲದಲ್ಲಿ ಬರೆಯಲ್ಪಟ್ಟವು ಎಂಬುದಕ್ಕೆ ಆ ಅರಸರ ಹೆಸರುಗಳು, ವರುಷಗಳು ಬರೆಯಲ್ಪಟ್ಟಿವೆ. ಬೆಬಿಲೋನ್ ರಾಜ್ಯಭಾರವು [illegible] ಕರಾರುಗಳನ್ನು ಬರೆದು ಅವುಗಳಿಗೆ ಬಹಳ ಸಾಕ್ಷಿ ಹಾಕಿದ ಅನೇಕ [illegible]. ಮೇಲೆ ಹೇಳಿದ ಹೆಸರುಗಳ ವಿಷಯವು ಈ ಶಾಸನಗಳಿಂದ ತಿಳಿದು ಬಂದ ಕೆಲವು ಸಂಗತಿಗಳನ್ನು ಇಲ್ಲಿ ಬರೆದಿವೆ.

ಜೇಕೊಬ್—ಕ್ರಿ ಪೂ ೨೧೬೯-೨೧೨೩ರ ವರೆಗೆ ಆಳಿದ ಹಮ್ಮುರಬ್ಬಿಯ ರಾಜವಂಶದ ಅಪ್ಪಿಲ್-ಸಿನ್ ಅರಸರು ಆಳುವ ಕಾಲದಲ್ಲಿ ಆದ ಒಂದು ಕರಾರಿಗೆ ಎರಡು ಸಾಕ್ಷಿಗಳಿವೆ. ಒಂದು ಸಾಕ್ಷಿ ಶುಬನಾ ಇಲು, ಮತ್ತೊಂದು ಸಾಕ್ಷಿ ಯಮುಕ್ ಇಲು ಇವರು ತಮ್ಮ ತಂದೆಯ ಹೆಸರನ್ನು ಕೊಟ್ಟಿರುವರು ಶುಬನಾ ಇಲುವಿನ ತಂದೆಯ ಹೆಸರು ಯಾಕುಬ್ ಇಲು ಇಮುಕ್ ಇಲುವಿನತಂದೆಯ ಹೆಸರು ಜಿಕೊಬೆಲ್ ಎಂದು ಇದೆ ಇನ್ನು ಮೇಲೆ ಹೇಳಿದ ರಾಜವಂಶದ ಇನ್ನು ಇಬ್ಬರು ಅರಸರು ಆಳುವ ಕಾಲದಲ್ಲಿ ಆದ ಕರಾರುಗಳಲ್ಲಿ ಲಾಮಜ್ ಮತ್ತು ಸಿನ್‌ಅರ್‌ಬ್ಲಾಮ್ ಎಂಬ ಎರಡು ಸಾಕ್ಷಿಗಳಿವೆ ಇವರಲ್ಲಿ ಲಾಮುಜನ ತಂದೆಯ ಹೆಸರು ಯಾಕುಬ್‌ಯಿಲು ಸಿನರ್‌ಬ್ಲಾಮನ ತಂದೆ ಹೆಸರು ಯಾಕುಬ್ ಎಂದಿದೆ ಕ್ರಿ ಪೂ ೧೪೭೫-೧೪೪೭ರ ವರೆಗೆ ಆಳಿದ ಇಜಿಪ್ತುದೇಶದ ರಾಜನಾದ ಮೂರನೇ ತೊತಮಸನು ಪೆಲೆಸ್ತೀನ್ ದೇಶದ ಯಾಕಬ-ರಾ ಎಂಬ ಪಟ್ಟಣವನ್ನು ಹಿಡಿದಿರುವನೆಂದು ಈ ಶಾಸನದಿಂದ ಕಾಣುತ್ತದೆ ಯಾಕಬರಾ ಶಬ್ದವು ಇಜಿಪ್ತ ಭಾಷೆಯಲ್ಲಿ ಜಿಕೊಬೆಲ್ ಎಂದಾಗುತ್ತದೆ ಇದರಿಂದ ಬ್ಯಾಬಲಿನಲ್ಲಿ ಹೇಳಿದ ಜೇಕೊಬ ಎಂಬ ಹೆಸರಿಗೂ ಬೆಬಿಲೋನಿಯದ ಯಾಕಬೆಲ್ ಎಂಬ ಶಬ್ದಕ್ಕೂ ಸಂಬಂಧವಿರಬೇಕೆಂದು ಕಾಣುತ್ತದೆ

ಜೊಸೆಫ್—ಮೇಲಿನ ರೀತಿಯ ಶಾಸನಗಳಿಂದ ಬೆಬಿಲೋನನ್ನು ಆಳಿದ ಮೊದಲನೇ ವಂಶದ ರಾಜನ ಕಾಲದಲ್ಲಿ ಆದ ಇನ್ನೊಂದ ಕರಾರಿನ ಪ್ರಕಾರ ಸಾಕ್ಷಿಗಾರನ ಹೆಸರು ಯಾಕುಬ ಯಿಲ ಅಥವಾ (ಬಿನ್) ಜೊಸೆಫೆಲ್ ಎಂದು ಇದೆ ಈ ಸಮಯದಲ್ಲಿ ಇಜಿಪ್ತುದೇಶವನ್ನು ಆಳಿದ ಮೂರನೆ ತೊತಮಸ್ ಎಂಬ ಅರಸನು ಪೆಲೆಸ್ತೀನ್ ದೇಶದ ಯಾಕಬರಾ ಎಂಬ ಪಟ್ಟಣವನ್ನು ಹಿಡಿದನೆಂದು ಕಾಣುತ್ತದೆ ಈ ಪಟ್ಟಣಕ್ಕೆ ಈಗ ಜೊಸೆಫಿಲ್ ಎಂಬ ಹೆಸರಿದೆ, ಇದರಿಂದ ಬ್ಯಾಬಲಿನ ಜೊಸೇಫ್ ಶಬ್ದದ ಮೂಲವು ತಿಳಿಯುವುದು

ಡೇವಿಡ್—ಇಜಿಪ್ತ ದೇಶವನ್ನು ಕ್ರಿ ಪೂ ೧೪೧೧-೧೩೭೫ರ ವರೆಗೆ ಆಳಿದ ಅರಸನಾದ ಮೂರನೆ ಮತ್ತು ನಾಲ್ಕನೇ ಎಮಿನೊಫಿಸ್ ಎಂಬ ಅರಸರ ಕಾಲದಲ್ಲಿ ಪೆಲೆಸ್ತೀನ್ ಮತ್ತು ಸಿರಿಯಾ ದೇಶಗಳ ಈ ಅರಸರ ಅಧಿಕಾರಿಗಳಾಗಿದ್ದವರು ಬರೆದ ಎಲ್ ಅಮೊರಾ ಪತ್ರಗಳ ಹಲವು ಇವೆ ಇವುಗಳಲ್ಲಿ ಎರಡು ಪತ್ರಗಳಲ್ಲಿ, ಒಂದರಲ್ಲಿ ಇಜಿಪ್ತನಲ್ಲಿರುವ ದದು ಎಂಬ ರಾಜಾಧಿಕಾರಿಗೆ ಅಜಿರು ಎಂಬವನು ಬರೆದ ಪತ್ರಗಳ ಮೊದಲನೇ ಮೂರು ಸಂಕ್ತಿಗಳಲ್ಲಿ ಹೀಗೆ ಇದೆ—೧) ನನ್ನ ತಂದೆಯಾದ ದದು ಪ್ರಭುಗೆ ೨) ನಿನ್ನ ಮಗನಾದ ಅಜಿರು ಮಾತಾಡುತ್ತಾನೆ ನಿನ್ನ ಸೇವಕನಾದ ೩) ನಾನು ತಂದೆಯಾದ ನಿನ್ನ ಕಾಲಡಿಗೆ ಬೀಳುತ್ತೇನೆ ಇದರಲ್ಲಿ ಹೇಳಿದ ದದು ಎಂಬ ಶಬ್ದವು ಸೆಮಿಟಿಕ್ ಭಾಷೆಯ ಶಬ್ದವಾಗಿದೆ ಆದುದರಿಂದ ಡೇವಿಡ್ ಎಂಬ ಶಬ್ದವು ದದು ಎಂಬ [illegible] ಬಂದುದಾಗಿರುತ್ತದೆ ಎಂದು ಭಾವಿಸಬಹುದು

ಇಸ್ರಯೇಲ್—ಕ್ರಿ ಪೂ ೨೪೮೦-೨೪೦೦ ವರೆಗೆ ಬೆಬಿಲೋನಿನಲ್ಲಿ ಆಳಿದ ಅಗದೆ ಅಥವಾ ಅಕ್ಕಾದಿಯ ಎಂಬ ರಾಜನ [illegible] ಒಂದು ರಾಜಮುದ್ರೆಯಲ್ಲಿ ಕೊಂಬುಗಳಿರುವ ಒಂದು ಎತ್ತಿನೊಡನೆ ಹೋರಾಡುವ ಒಬ್ಬ ವೀರನ ಚಿತ್ರವು ಇದೆ ಈ ರಾಜಮುದ್ರೆಯಲ್ಲಿ ರಿಶ್ ಡೂನಿಯ ಮಗ ಇಸ್ರಯೇಲ್ ಎಂದಿದೆ ಇದೇ ಇಸ್ರಯೇಲ್ ಎಂಬ ಶಬ್ದವು ಇಜಿಪ್ತದೇಶದ ಅರಸನಾದ [illegible] ಕಾಲದ ಶಾಸನದಲ್ಲಿ ಇಸ್ರಯೇಲ್ ಎಂಬ ಜನಾಂಗದ ಹೆಸರಿದೆ

ಅಬ್ರಹಾಮ್—ಕ್ರಿ ಪೂ ೧೯೬೫ರ ಒಂದು ದಸ್ತಾವೇಜಿನಲ್ಲಿ ಬೆಬಿಲೋನಿನ ಮೊದಲನೆ ವಂಶದ [illegible]ನೇ ಅರಸನಾದ ಅಮ್ಮಿ ಜಡುಗ್ಗಾ ಎಂಬ ಅರಸನು ಆಳುತ್ತಿದ್ದನೆಂದೂ ಅಬರಾಮೂ ಮತ್ತು ಅಬಮ್‌ರಾಮು (ಅಬ್ರಹಾಮ್) ಎಂಬ [illegible] ಹೆಸರೂ ಇದೆ [illegible] ಬೇಸಾಯಗಾರನು ಒಬ್ಬ ವರ್ತಕನ [illegible] ಸ್ಥಳವನ್ನು [illegible] ಪಡೆದನೆಂದೂ ಒಂದು ಎತ್ತನ್ನು [illegible] ಕೊಡುತ್ತೇನೆಂದು ಬರೆದಿದೆ [illegible] ಶಾಸನ [illegible] ಹೀಗಿದೆ ೧) [illegible] ೨) ಸಿನ್ ಯಮ್ ಗುರಾನಿಯ ಮಗನಾ ಇದ್ದಿಸಿನ್ [illegible] ೩) ಇದ್ದಿಸಿನ್‌ನಿಂದ, ೪) [illegible] ೫) [illegible] ಮಗ ೬) ಅವೇಲ್ ಇಸ್ತಾರ್ ಮಗ ಅಬರಾಮ ೭) ಒಂದು ತಿಂಗಳ ಮಾತಿಗೆ [illegible] ಇದರಲ್ಲಿ [illegible] ಅಬ್ರಹಾಮನೂ ಬ್ಯಾಬಲಿನಲ್ಲಿ ತೋರುವ ಅಬ್ರಹಾಮನೂ ಒಬ್ಬನೇ ಆಗಲಾರನು. ಯಾಕೆಂದರೆ ಬ್ಯಾಬಲಿ ಅಬ್ರಹಾಮು [illegible] ಹೆಸರು ಶೇರಾ, ಸಹೋದರನ ಹೆಸರು ನಾಹೋರ್ ಬೆಬಿಲೋನಿ ಅಬ್ರಹಾಮನ ತಂದೆಯ ಹೆಸರು ಅವೇಲ್ ಇಸ್ತಾರ್ ಸಹೋದರನ ಹೆಸರು [illegible] ಈ ಅಬ್ರಹಾಮ ಎಂಬ ಹೆಸರು ಇನ್ನೆರಡು [illegible]ವೇಜುಗಳಲ್ಲಿಯೂ ಕಂಡುಬರುತ್ತದೆ [illegible] ಒಂದು [illegible] ಅಬರಾಮನ ಹೊಲಯಿದೆ ಎಂದು ಬರೆದಿದೆ

ಮೋಜಸ್—ಬ್ಯಾಬಲಿನ ಹಳೆ ಒಡಂಬಡಿಕೆಯ [illegible] (Exodus) ಎಂಬ ಪುಸ್ತಕದ ೨ನೇ ಅಧ್ಯಾಯದ [illegible] ಪ್ರಕರಣಗಳಲ್ಲಿ ಮೋಸೆಯ ಜನನದ ವಿಷಯ ಹೇಳಿಯದೆ [illegible] ಪ್ರಕಾರ ಲೇವಿ [illegible] ಗುಟ್ಟಿನಿಂದ ಗರ್ಭವತಿಯಾಗಿ ಒಂದು [illegible] ಗಂಡು ಮಗವನ್ನು ಹೆತ್ತಳು ಮೂರು ತಿಂಗಳ ವರೆಗೆ ಮಗುವನ್ನು ಗುಟ್ಟಿನಿಂದ ಸಾಕಿದಳು, ಇನ್ನು ಹೆಚ್ಚು ಸಮಯ ಅಡಗಿಸಲಾರದೆ ಹುಲ್ಲಿನ ತೊಟ್ಟಿಲನ್ನು ಮಾಡಿ ಅದರಲ್ಲಿ ಮಗುವನ್ನು ಮಲಗಿಸಿ ನದಿಯಲ್ಲಿ ಬಿಟ್ಟಳು. ಫರೋಂನ ಮಗಳು ನದಿತೀರದಲ್ಲಿ ಮೀಯುವಾಗ ಈ ತೊಟ್ಟಿಲನ್ನು ಅವಳು ಹಿಡಿದು ಮಗವನ್ನು ಸಾಕಿದಳು ನಂತರ ಇವನನ್ನು ತನ್ನ ಸಾಕಣೆ ಮಗುವಾಗಿ ತೆಕ್ಕೊಂಡಳು ಈ ಸಿಕ್ಕಿರುವ ಒಂದು ಶಾಸನದಲ್ಲಿ ಕ್ರಿ ಪೂ ೨೮೭೦-೨೮೦೦ರ ವರೆಗೆ ಆಳಿದ ಅಗದೆ (ಅಕ್ಕಾದಿಯಾ) ವಂಶದ ಅರಸನಾದ ಮಹಾ ಪರಾಕ್ರಮಶಾಲಿ ಸಾರಗೋನನ ಜನನದ ವಿಷಯದಲ್ಲಿ ಇದೇ ತರದ ಕಥೆಯು ಬರೆಯಲ್ಪಟ್ಟಿದೆ

೧ ಅಗದೆ ವಂಶದ ಮಹಾ ಪರಾಕ್ರಮಶಾಲಿಯಾದ ಸಾರಗೋನ ಎಂಬ ಅರಸನು ನಾನೇ ಆಗಿರುತ್ತೇನೆ (೫ನೇ ಪಂಕ್ತಿ) ನನ್ನ ಪ್ರಿಯ ತಾಯಿಯು ಗುಟ್ಟಿನಿಂದ ಗರ್ಭವತಿಯಾಗಿ ನನ್ನನ್ನು ಹೆತ್ತು ಗುಟ್ಟಿನಿಂದ ಸಾಕಿದಳು. (೬) ಇವಳು ನನ್ನನ್ನು ಹುಲ್ಲಿನ [illegible] ಮುಚ್ಚಿ ಅರಗಿನಿಂದ ಮುಚ್ಚಿದಳು. (೭) [illegible] ನದಿಯಲ್ಲಿ ತೇಲಬಿಟ್ಟಳು (೮) ಅಕ್ಕಿ ಎಂಬವನು [illegible] ವಾಗ ತೇಲಿ ಬರುವ ತೊಟ್ಟಿಲನ್ನು ಹಿಡಿದು ನನ್ನನ್ನು [illegible] ಸಾಕಿದನು.

ಮೇಲಿನ ಸಂಗತಿಯೂ ಮೋಸೆಯ ಜನನದ [illegible] ಯಲ್ಲಿವೆ. (ಕರ್ಣನ ಜನನ, ನಾಮದೇವನ [illegible] ಕಥೆಗಳೂ ಹೀಗೆಯೇ ಇವೆ) ಮೋಸೆಯು ಸಾರಗೋ[illegible] ಎರಡು ಸಾವಿರ ವರುಷಗಳ ತರುವಾಯ ಹುಟ್ಟಿದನು.

ಯಾಕುಬ್, ಯೂಸುಫ್, ದುದು, ಇಸ್ರಯೇ[illegible] ಮೋಜಸನ ಜನನದ ಕಥೆ ಇವುಗಳೆಲ್ಲವೂ ಸುಮೇ[illegible] ನಾಗರೀಕತೆಯ ಕಾಲದವುಗಳು ಆ ಸಮಯದಲ್ಲಿ [illegible] ನಾಗರೀಕತೆಯು ಅಸ್ತಮಾನದಲ್ಲಿ ದೀನಾವಸ್ಥೆಗೆ ಬಂದಿ[illegible]

ಸೆಮೆಟಿಕ್ ವಂಶದವರು ಕ್ರಿ. ಪೂ. [illegible] ಉನ್ನತಾವಸ್ಥೆಯಲ್ಲಿದ್ದರೂ ಸುಮೇರಿಯದ ನಾಗರೀ[illegible] ಯನ್ನು ಹೊಂದಿತ್ತು ಅಕ್ಕೇಡಿಯ ನಾಗರೀಕತೆಯೂ [illegible] ಹೊಂದಿತ್ತು ಪೆಲೆಸ್ತೀನ ದೇಶದಲ್ಲಿ ಬ್ಯಾಬಲಿನ [illegible] ಲನೇ ನಾಗರೀಕತೆಯ ಪ್ರಾಚ್ಯ ಶೋಧಗಳು ಸಿಕ್ಕಿಯವೆ. ಕ್ರಿ. ಪೂ. ೧೯೫೦ರಲ್ಲಿ ಸುಮೇರೂ ದ್ರಾವಿಡ ಜನಾಂಗವೂ ನಾಗರೀಕತೆಯೂ ಅಭಿವೃದ್ಧಿಗೆ ಬಂದಿತ್ತು ಆದುದರಿಂದ ಮೇಲಿನ ಹೆಸರುಗಳು ಸುಮೇರಿ[illegible] ದ್ರಾವಿಡ ಕಾಲದವುಗಳಾಗಿವೆ ಈ ನಾಗರೀಕತೆಯು ಸಿಂಧೂನದಿಯ ವರೆಗೆ ಹರಡಿತ್ತು

"ಶೋಧಕ"

ಕ್ಷಣಿಂ ಪ್ರತಿ ಉತ್ತರ

ಕುತರ್ಕ ವಾಚಸ್ಪತಿಯಾದ ನಿಷ್ಪಕ್ಷಪಾತಿ[illegible]

ಅಯ್ಯಾ,

ಚತುರನಾದ ನಿಷ್ಪಕ್ಷಪಾತಿಯು ಬಿದಿರಿನ ಕೊಳವೆಯನ್ನೇ ಉಪಯೋಗಿಸಿ ಮೇಲು ನಾ[illegible] ಚಿಬ್ಬರಕ್ಕೆ ಶಂಖುಸ್ವನಿಯನ್ನು ಅಡಗಿಸುವರೆ ಅಪ್ಪಾತ[illegible] ವಾದ ಗಹಾಕಾರ[illegible] ಪ್ರಶ್ನೆಗಳ[illegible] ಪತ್ರನುಖಾಂತರ ಸೂಚಿಸಿಕೊಂಡರೆ ಸತ್ಯವಾದಿಯ ಲೇಖನಿಯು ಸತ್ಯಹಾದಿಯಲ್ಲಿ ತಿರುಗದೆ ನಿಂತುಕೊಳ್ಳಬಹುದಾ[illegible] ಇದರ [illegible] ಎಷ್ಟು ಮಾತ್ರಕ್ಕೂ ಘುಷ್ಟೀಕರಿಸಬೇಕಾಗಲಿಕ್ಕಿಲ್ಲಾ ಇತರರ [illegible] ಕೊರತೆಗಳನ್ನು ಹುಡುಕಿ ತೆಗೆಯುವದು ಸತ್ಯವಾದಿಯ ಸ್ವಭಾವವೇ ಅಲ್ಲಾ! ಅಂದಬಳಿಕ ನಿಷ್ಪಕ್ಷಪಾತಿಯು [illegible] ಉಪ[illegible] ನಿಷ್ಪಯೋಜಕ ಸತ್ಯವಾದಿಯು ಒಂದು ಪಕ್ಷದ ನಾಯಕನೇ [illegible] ತನೆಮಾಡಿದರೆ ನಿಷ್ಪಕ್ಷಪಾತಿಯು ಕ್ಯಾಸ ಖರ್ಚು ಮಾಡುವ [illegible] ಅವನು ಬೆಂಬಲಾರ್ಥಿಯಾಗಲಿ ಕರಪಾರ್ಥಿಯಾಗಲಿ ಚುನಾವಣೆ ಸೂಟಗನ್ನು ನೋಡುವರೆ ಬಂದ ಒಬ್ಬ ಸಂಚಾರಾರ್ಥಿಯೆಂತಲೇ ನೆನಸಿಕೊಳ್ಳುವಾ

[illegible] ಪತ್ರದ ಪತ್ರದ ಪೋಟಗಳು ೨೧೮ ಪೊತ್ತ ಯಿಡಸುವಾಗ ಆಚೆಕಡೆ ಅಷ್ಟು ಇರಲಿಕ್ಕಿಲ್ಲವೆಂಬ ಮೂಢಭಾವನೆಯಿಂದ [illegible] ತಳದ [illegible] ಸ್ಮರಣೆಯಿಂ[illegible] ಅಧ್ಯಕ್ಷರು ಅದನ್ನು ಜಾಗ್ರತೆ [illegible] ಅಗದ[illegible] ಏಕೋಭಾವದಿಂದ "[illegible] ಜಾಗ್ರತೆ [illegible] ಇರಿಸಿದನು. ಇದಕ್ಕೆ ಬೇರೆ [illegible] ಕಾರಣವಿಲ್ಲ ಅಥವಾ ಇನ್ನದೆ ಪತ್ರಕರ್ತರು ಅಂಥಾ ವಿಷಯಗಳನ್ನು ಪ್ರಕಟಿಸಲಾರದೆ [illegible] ಸೂಚನೆಯು ಪತ್ರದಲ್ಲಿಯೇ ಇದ್ದುದು [illegible] ಗೋಚರಿಸದೆ [illegible] ಬಹಳ ಆಶ್ಚರ್ಯವಷ್ಟೇ! ೨೧೮ ಪೋಟುಗಳಲ್ಲಿ [illegible] ಅಪ್ರಾಯಸ್ಥರ ಸಂಖ್ಯೆಗಳೆಲ್ಲಾ [illegible] ಕೃಷ್ಣಸಮಾಯಕ್ಕೆ ಪೋಟುಗಳು ೧೮೫ ಮಾತ್ರ [illegible] ವಿವರವು ನಿಷ್ಪಕ್ಷಪಾತಿ ಮರೆಯುಕೂಡದಾಗಿ ಒಂದು ಸೂಚನೆ [illegible] ಯೆನಂ[illegible] ಪಂಚ್ಯಾತ ಕೋರ್ಟಿನಲ್ಲಿ ಮೊಕದ್ದಮೆ ನಡೆದ ಪ್ರತಿ ಒಬ್ಬ ಮೆಂಬರರ ತಿಳಿಸಿಕೊಂಡರೆ ಇವ್ವವನಾದರೂ [illegible] ಕೆಲಕ್ಕೆ ಕೂಡದಾಗಿ ಅಕ್ಕನಲ್ಲಿಯೇ ಇದೆ. ನಿಷ್ಪಕ್ಷಪಾತಿಯು ಈ ಪ್ರಶ್ನೆಯನ್ನು ನ್ಯಾಯಾರ್ಥದಲ್ಲಿ ಕೇಳುವನಾದರೆ [illegible] ಉತ್ತರಕ್ಕೆ ಕ್ರಿಮಿನಲ್ ಕೋರ್ಟುಗಳಲ್ಲಿ ಹುಡುಕೋಣವನು ಕಟ್ಟಿ ತಂದುಕೊಳ್ಳಲಿ [illegible] ಯಾವದರಲ್ಲಿಯೂ ಪಕ್ಷವಿರುವುದಿಲ್ಲ [illegible] ಅದರ ಎತ್ತಿನ ಬಾಲಮುರಿಯುವನನ್ನು ಕಂಡರೆ ಮಾತ್ರ ಪಕ್ಷಪಾತಿಯಾಗುತ್ತಾನೆ ಸಕೇಮ

ಸತ್ಯವಾದಿ

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ

O. P. ನಂಬ್ರ [illegible]/1928.

ಉಪೇಂದ್ರ (ವೈದ್ಯನರ) ಕೂಡಾ—ಅರ್ಜಿದಾರರು.

ಮತ್ತು

ಸುಂದರಿ ಮಗನ ನೇತ್ರಾವತಿ—ರೆಸ್ಪೋಂಡೆಂಟರು.

ಮಂಗಳೂರು ಶಹರು ಗಣಪತಿ ಹ್ಯಾಸ್ಕೂಲು ರಸ್ತೆಯಲ್ಲಿ [illegible] ಗುರುಪುರದ ಕೃಷ್ಣ ಕಿಣಿಯರ ಮಗ [illegible] ಪಟ್ಟ ಸರ್ವೋತ್ತಮ ಕಿಣಿಯರ ಬಾಬ್ತು ಸಾಲ ವಸೂಲಿ [illegible] ವ್ಯಾನರ 1ನೇ ಅರ್ಜಿದಾರನ ಬಗ್ಗೆ 2ನೇ ಅರ್ಜಿದಾರ [illegible] ಹನುಮಂತ ಕಿಣಿಯರ ಸರ್ಟಿಫಿಕೇಟು [illegible] ಮಾಡಿದ ಮೇಲಣ ಅರ್ಜಿಯು ತಾ. 26—9—1928[illegible] ಪೂರ್ವಾರ್ಣ್ಣ ಘಂಟೆ 11ಕ್ಕೆ ತನಿಕೆ [illegible] ವುಳ್ಳಂತವರು ಅವರ ಹೇಳಿಕೆಯನ್ನು [illegible] ಮಾಡಿಕೊಳ್ಳಬಹುದು

ಮಂಗಳೂರು,
ತಾ. 12-9-1928

B. V. [illegible]
[illegible]

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅವ್ಯಕ್ತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟಿದ್ದು. ಅಧ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತು ನರ್‍ವ್ಯೂಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನ ವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿ ಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿತ್ರರೂ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಹೊಲಸನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭ ಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡು ವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿ ಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗ ಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭ ಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿ ಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು
ಕ್ರಯ ಬಾಟ್ಲಿ 1ಕ್ಕೆ 2 0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ "ಆಯುರ್ವೇದ ರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ

ಮೊದಲ್‌ತರವಾದ ಬೆಳ್ಳಿ ಪುಡಿದಾರಹಗ್ಗ.

ESTD 1896

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. ... ನಮ್ಮ ಪುಡಿದಾರ ಹಗ್ಗಗಳ ಕೆಲಸ ನೈಸರ್ಗಿಯೂ, ಬಾರಣೆ ಸರದ ದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ಪಶ್ಚಿಮ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳ ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಣೆ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಪುಡಿದಾರ ವ್ಯಾಪಾರ,
24-8-'28 ಕಿವಾಪ್ಪೇಟೆ ಸೇಲಂ (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು
ಆತಂಕನಿಗ್ರಹ ಮಾತ್ರೆಗಳನ್ನು
ಉಪಯೋಗಿಸಿರಿ

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1|- ಮಾತ್ರ
ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ
ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು—
ಮೆಸ್ಸರ್ಸ್ ಶೇಖಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs 300,000-0-0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ 300,000—0—0
Reserve and other sinking Funds ,, 338,500-0-0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G P Notes Rs. 228,898-2-0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟು ಗಳಲ್ಲಿ ಹಾಕಿದ ರೂ 228,898-2-0
Rates of interest on fixed deposits at Head Office 6¼ for 2 Years, 6% ,, 1 Year	ಹೆಡ್ ಆಫೀಸಿನಲ್ಲಿ ಠಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1 ವರುಷಕ್ಕೆ ಶೇ 6
Season deposits of Rs. 1000/- & above terminable by the end of June are received at 6¼% p a.	ಜೂನ್ ಅಂತ್ಯದ ವರೆಗೆ ವ್ಯಾಪಿ ಆಗುವ ರೂ 1000/- ದ ಮೇಲ್ಪಟ್ಟ ಮುದ್ದತಿ ಠೇವಣಾತಿಗಳಿಗೆ ಬಡ್ಡಿ ದರ ಶೇಕಡಾ 6¼.

Canara Bank Ltd
Mangalore, 16th Feb 1928.

K. Venkat Rao,
Secretary.

THE PANGAL NAYAK BANK, LTD.,
UDIPI, S. K.

ಸ್ಥಾಪಿತವಾದದ್ದು 1920.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡುಪಿ, ದ. ಕ.

ಬೇಂಕರರು—
ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪಾಯಿ 2,00,000/-	ಆಪದ್ಧನ ಇತ್ಯಾದಿ ನಿಧಿಗಳು ರೂ 1,00,000/-
ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1 50 000/	ಠಾಯಂ ಠೇವಣಾತಿಗಳು ,, 7,33 880/-

ಹೊರಗೆ ಕೊಟ್ಟ ಸಾಲ ಬಾಕಿ ರೂ 10 77 618-0-0

ಠಾಯಂ ಠೇವಣಾತಿಗಳು 3 ತಿಂಗಳ ಗಡಿಗೆ ಶೇ. 4 ದರದಿಂದಲೂ, 6 ವ 9 ತಿಂಗಳುಗಳಿಗೆ 6 ದರದಿಂದಲೂ, 12 15, 18, ಯಾ 21 ತಿಂಗಳುಗಳಿಗೆ 6¼ ದರದಿಂದಲೂ, ಮತ್ತು 24 ತಿಂಗಳುಗಳಿಗೆ 7 ದರದಿಂದಲೂ ಪ್ರತೀ ಆರು ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು

ಮಾಸಿಕ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೆಗೆ) ಕರಂಟು ಠೇವಣಾತಿಗಳು, ಅಲ್ಪಾವಧಿ ಠೇವಣಾತಿ ಗಳು, ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಮತ್ತು ಚಾಲ್ತಿ ಠೇವಣಾತಿಗಳು ಸಹಾ ಬಹಳ ಪ್ರಯೋಜನಕರವಾದ ದರಗಳಲ್ಲಿ ಅಂಗೀಕರಿಸಲ್ಪಡುವವು

ಸಾಲಗಳು ಸ್ಥಿರ ಜಂಗಮ ಸೊತ್ತುಗಳ ಮೇಲೂ, ಸ್ವರ್ಣಾಸ್ತಿಗಳ ಆಧಾರ ಮೇಲೂ ಕೊಡಲ್ಪಡುವವು. ಹುಂಡಿಗಳೂ ಮತ್ತು ಡ್ರಾಫ್ಟು ಗಳು ವಸೂಲು ... ವಸೂಲ ಮಾಡಲ್ಪಡುವವು, ... ಇತರ ಎಲ್ಲಾ ವಹಿವಾಟುಗಳ ಕಟ್ಟುಪಾಡಿನಿಂದ ನಡಿಸಲ್ಪಡುವವು

ಕಾರ್ಯಕ್ರಮಗಳ ಮತ್ತು ಹೆಚ್ಚಿನ ತಪಸೀಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಹೆಡ್ ಆಫೀಸ್, ಉಡುಪಿ,
ತಾ 1-4-'28

ಪಾಂಗಾಳ ಪರಮೇಶ್ವರ ನಾಯಕ್,
ಸೆಕ್ರೆಟರಿ

'ಸಾರಸ್ವತಾಸವ.'

ಒಮ್ಮೆ ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ದೆಸ್ಸಿನ ನರಗಳು ಸೇಯುತ್ತಿದ್ದರೆ, ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದವಂತಿರುವ ಸಾರಸ್ವತಾಸವ ವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಶೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಬೋಧಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ, ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಿಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಬೋಧಯವು ಗುಣಪಡಿಸಿ ಮಕ್ಕಳಿಗೆ ಬಲವನ್ನು ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಶೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲೂಯೆನ್ಜಾ, ಪ್ಲೇಗುಜ್ವರ

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ ಗೋಸ್ತ್ರೀಯರಿಗೂ ಕುಳಿತಿರದೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೮ ಆಣೆ, ೧ಕ್ಕೆ ೧—೪—೦, ೧೨ ಸೀಸೆಗೆ ೩—೭—೦, ೨೪ ಸೀಸೆಗೆ ೮—೧೦—೦. ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ,
ಮಂಗಳೂರು ಟಿವಾಗೆ ಮಾತ್ರ.

ಪತ್ರಿಕಾಭಿಪ್ರಾಯಗಳು

ಬೆಂಗಳೂರು ಗಲಭೆಯ ಧ್ವನಿ

ಇದು ಇನ್ನೂ ಅಳಿದು ಹೋಗುವುದಿಲ್ಲ. ಸರಕಾರದ ಪತ್ರಿಕೆಗಳಿಗೆ ಕೆಲವು ವರ್ತನೆಗಳು ಸ್ವಲ್ಪ ಮಟ್ಟಿಗೆ ಮೀರಿ ವಿರೋಧವುಗಳೆಂದೆನ್ನಬೇಕಾಗುತ್ತಿದೆ. ಇವೆಲ್ಲಾ ಗಡಿಬಿಡಿಗೆ ಕಾರಣವಾದ ಆ ಅಕಾರಣ ಕೃತ್ಯದ ಕರ್ತರ ಕಡೆಗೆ ಸರಕಾರದ ದೃಷ್ಟಿಯೇ ಇಲ್ಲದಿರುವುದು ಆಶ್ಚರ್ಯ. ಗಡಿಬಿಡಿಗಳ ಸಮಯದಲ್ಲಿ ನಡೆದ ಮುಸಲ್ಮಾನರ ಅತ್ಯಾಚಾರದ ಕಾರ್ಯಗಳು ಹಾಗಿರಲಿ ಆ ಮೇಲಿನ ಪ್ರಶಾಂತ ವಾತಾವರಣದಲ್ಲಿಯೂ ಬೆದರಿಕೆಗಳೂ, ತೊಂದರೆಗಳೂ, ವೈಯಕ್ತಿಕ ಆಘಾತಗಳೂ ಮುಸಲ್ಮಾನರಿಂದ ಬಹಿರಂಗವಾಗಿ ಉಂಟಾದರೂ, ಸರಕಾರವು ಅದನ್ನು ಗಮನಿಸದೆ, ಬದಲಾಗಿ ಶ್ರೀಮನ್ಮಹಾರಾಜರಿಗೆ ವಿಜ್ಞಾಪನೆಯನ್ನು ಬರೆದ ಪುರ ನಿವಾಸಿಗಳಿಗೆ ಯಾವ ರೀತಿಯಲ್ಲಿ ಶಿಕ್ಷಿಸಬಹುದೆಂಬ ಕಠಿಣ ಪ್ರಶ್ನೆಯನ್ನೇ ಆಲೋಚಿಸುತ್ತ ಇದೆ ಎಂದು ಕೇಳಿದರೆ ಆಶ್ಚರ್ಯವಾಗುತ್ತದೆ. ಮಹಾರಾಜರ ಕಡೆಗೆ ಸಾಮಾನ್ಯ ವಿಜ್ಞಾಪನೆಯನ್ನು ಕಳುಹಿಸುವಷ್ಟು ಸಾಧಾರಣ ಕಾರ್ಯ ಸ್ವಾತಂತ್ರ್ಯವು ಕೂಡ ಇವರಿಗಿಲ್ಲವೇ? ಇದು ದಿವಾನರವರ ಆಳುವಿಕೆಯೋ? ದಬ್ಬಾಳಿಕೆಯೋ? ಹಿಂದೂ ಪತ್ರಿಕೆಯಲ್ಲಿ Coverland ಎಂಬ ಯುರೋಪಿಯನರೊಬ್ಬರು ಸ್ವಂತ ಹೆಸರಿನಲ್ಲಿಯೇ ಮುಸಲ್ಮಾನ ಪುಂಡರು ಕೆಲವರು ಒಬ್ಬ ಹಿಂದೂ ವಿದ್ಯಾರ್ಥಿಯನ್ನು ಹೊಡೆಯಲು ಹೋದುದನ್ನೂ, ತಾನು ಅವರನ್ನು ಗದರಿಸಿ ಕಳುಹಿಸಿದುದನ್ನೂ ತಿಳಿಸಿರುವರು. ಆದರೂ ಸರಿಯಾದ ಶಾಸನ ಕ್ರಮವೇ ತೋರಿ ಬರದೇ, ವಿದ್ಯಾರ್ಥಿಗಳ ಮೇಲೂ, ಮಹಾರಾಜರ ಕಡೆಗೆ ವಿಜ್ಞಾಪನೆಯನ್ನು ಕಳುಹಿಸಿದವರ ಮೇಲೂ, ರಾಜದೃಷ್ಟಿ (ಸರಕಾರದ ದೃಷ್ಟಿಯು) ಬಿದ್ದಂತೆ ತೋರುತ್ತಿದೆ. "ವೀರಕೇಸರಿ" ಎಂಬ ಈ ಊರ ದೈನಿಕ ಪತ್ರಿಕೆಯಲ್ಲಿ ಮುಸಲ್ಮಾನ ಪುಂಡಾಟಿಕೆಯ ಹಲವು ವರ್ತಮಾನಗಳು ಬಂದಿವೆ. ಇಂಥ ವರ್ತಮಾನಗಳು ಹೆಚ್ಚು ಹೆಚ್ಚಾಗಿ ಬರುವ ಸಮಯದಲ್ಲಿ, ಈ ಹಿಂದೂ ರಾಜ್ಯದಲ್ಲಿ ಮುಸಲ್ಮಾನ ದರ್ಬಾರಿನ ಶೇಷಾಂಶವು ಹೊಳೆಯುತ್ತದೆಂಬ ಭ್ರಮೆಯು ಹುಟ್ಟದಂತೆ ಮಾಡುವುದು ದಿವಾನರ ಕೆಲಸವಾಗಿದೆ.

ಮದ್ರಾಸು ಕೌನ್ಸಿಲೂ, ಸ್ಯಾಮನ್ ಸಹಕಾರವೂ

ಎಸ್ ಐ ಆರ್ ಮುಷ್ಕರದ ಸಮಯ ತಿರುಚಿನಾಪಳ್ಳಿಯ ರೈಲ್ವೇ ಲೆವಲ್ ಕ್ರಾಸಿಂಗ್‌ನಲ್ಲಿ ಒಂದು ಮೋಟರ ಲೋರಿಯ ಮೇಲೆ ಇಂಜಿನ್ ಓಡಿ ಏಳ ಜನರು ಸತ್ತದ್ದು ಕಡೆ. ಇತ್ತಲಾಗೆ ಮಂಗಳೂರಿನಲ್ಲಿ ಕೂಡ ಎರಡು ಮೋಟಾರ ಲೋರಿಗಳು ಲೆವಲ್ ಕ್ರಾಸಿಂಗ್‌ನ ಹತ್ತಿರ ಟ್ರೈನಿನ ಅಡಿಯಲ್ಲಿ ಬಿದ್ದು ದೊಡ್ಡ ದೊಡ್ಡ ಅನಾಹುತಗಳು.

• • • •

ಮೊನ್ನೆ ತಾನೆ ವಿಲಾಯತಿಯಲ್ಲಿ ಎರಡು, ಕೊಲೊಂಬೊದಲ್ಲಿ ಒಂದು ಅಪಘಾತಗಳು ನಡೆದವು. ತಪ್ಪು ರೈಲಿನವರದೂ ಅಲ್ಲ ಮೋಟಾರಿನವರದ್ದೂ ಅಲ್ಲ.

• • • •

ಬಂತು ನಮ್ಮ ಮಂಗಳೂರು ಮುನ್ಸಿಪಾಲಿಟಿಯವರಿಗೆ ಚುನಾವಣೆಯ ಹಬ್ಬದ ದಿವಸಗಳು. ತಾ. ೫ರಿಂದ ಓಟಿನ ಗಲಾಟೆ ಪ್ರಾರಂಭ.

• • •

ತಂಜಾವೂರಿನಲ್ಲಿ ಒಬ್ಬ ತಾಲೂಕು ಬೋರ್ಡ ಹೆಡ್ ಕ್ಲಾರ್ಕ ಮೇಲೆ ಕ್ರಿಮಿನಲ್ ಮೊಕದ್ದಮೆ.

• • • •

ಈಗ ಸದ್ಯದಲ್ಲೇ ನಡೆಯಲಿರುವ ಚುನಾವಣೆಯ ರಿಕಾರ್ಡನ್ನು [illegible] ಪಡಿಸಿದ್ದಕ್ಕೆ.

• • • •

ತಿರುನಲ್ವೇಲಿಯಲ್ಲಿ ಒಂದು ಕ್ರಿಮಿನಲ್ ನಂಬ್ರದ ವಿಚಾರಣೆ ನ್ಯಾಯಾಲಯದಲ್ಲಿ ಮೆಜಿಸ್ಟ್ರೇಟರು ವಿಚಾರಣೆ ಮಾಡುತ್ತಿರುವಾಗ ಮುದ್ದೆಯಾಳಿ ವಕೀಲರು ನಂಬ್ರವು ರಾಜಿಯಾಗುತ್ತದೆ ಎಂಬ ಹೇಳಿಕೆಯನ್ನು ಮುದ್ದೆಯಾಳಿಯಿಂದ ಹೇಳಿಸಿದ್ದಕ್ಕೆ ಕೋರ್ಟಿನ ರೂಲ್ಸುಗಳಿಗೆ ವಿರೋಧವಾಗಿ ವಕೀಲರು ನಡೆದರೆಂದು ವಕೀಲರಿಗೆ ಜುಲುಮಾನೆ ರೂಪಾಯಿ ಒಂದು.

[illegible] ಗಳಿಗೆನೆಯ ವಿಭವ ಸಂರದ ಭಾದ್ರಪದ [illegible] ವಾರದಿಂದ ವಿಭವ ಸಂರದ ಭಾದ್ರಪದ [illegible] ೧೮ ಶುಕ್ರವಾರದ ವರೆಗಿನ ಪಂಚಾಂಗ (ಗ[illegible]ಲನೆಯ ಕನ್ಯಾ (ಸಿರಾಗಲ)

[illegible]	[illegible]	[illegible]	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ
[illegible]	[illegible]	[illegible]	೪೪೪. ೧	ಮೂಲಾ	೪೯ ೨೫	೬	6 22	6 27
[illegible]	[illegible]	[illegible]	೪೬.೩೩	ಪೂ. ಷಾ	೪೪ ೧೩	೭	6 22	6 26
[illegible]	[illegible]	೧೦	೪೦. ೩	ಉ. ಷಾ.	೪೮ ೧೪	೮	6 22	6 25
[illegible]	[illegible]	೧೧	೪೧.೧೪	ಶ್ರವಣಾ	೫೦ ೪೪	೯	6 22	6.24
26	[illegible]	೧೨	೪೧. ೨	ಧನಿಷ್ಠಾ	೫೨. ೨	೧೦	6 22	6 24
27	ಗುರು	೧೩	೪೯.೪೬	ಶತಭಿಷಾ	೫೩ ೧೪	೧೧	6.22	6 23
28	ಶುಕ್ರ	೧೪	೪೭.೧೯	ಪೂ. ಭಾ.	೫೧.೧೩	೧೨	6,22	6.22

ಮಂಗಳೂರಿನ ವಾಯುಸ್ಥಿತಿ.

Date	Temperature ಉಷ್ಣ (ಕಾವು) Maximum		Minimum		Rainfall ಮಳೆ ದಿನದ ಮಳೆ	ಜಮಾದ ಮಳೆ
14	85—	5	78 –	8	0—08	—
15	85—	0	72—	7	0—52	—
16	83—	1	78—	2	0—28	—
17	82—	6	73—	3	0—20	—
18	84—	7	73—	7	0—25	—
19	85—	9	74 –	1	–	
20	86—	3	78—	8	0—39	— 107-82

ಮಂಗಳೂರಿನ ಪೇಟೆ ಧಾರಣೆ.

ಜೀನಸು	ಇಂದ ರೂ.	ಆ	ವರೆಗೆ ರೂ.	ಆ
ಮುಸ್ಕಿ	7–	4	8 –	4
ಗೋಧಿ	6 –	14	7 –	4
ಸುಗ್ಗಿ	6 –	6	7–	7
ಕಾತಿ	6 –	6	6 –	14
ಊರ ಅಷ್ಟಲ್ ಬೆಳ್ತಿಗೆ	7 –	8	8	14
ರಂಗೂನು ಬೆಳ್ತಿಗೆ ಗೋಣಿ ಗಳ್ಳಿ	12 –	12	13	
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳಿ	7 –	8	7 –	[illegible]
ಗೋದಿ ಗೋಣಿ ಗಳ್ಳಿ	8 –	[illegible]	10	8
ಹುರುಳಿ ಗೋಣಿ ಗಳ್ಳಿ	8 –	0	11	[illegible]
ಕಡಲೆ ಗೋಣಿ ಗಳ್ಳಿ	13 –	8	15 –	[illegible]
ತೊಗರಿ ಗೋಣಿ ಗಳ್ಳಿ	14 –	0	15	0
ತೊಗರಿಬೇಳೆ ಗೋಣಿ ಗಳ್ಳಿ	19 –	0	2[illegible]	0
ಉದ್ದು ಗೋಣಿ ಗಳ್ಳಿ	14 –	8	14	12
ಹೆಸರು ಗೋಣಿ ಗಳ್ಳಿ	13 –	0	14	8
ಊರು ಬೆಲ್ಲ ಖಂಡಿ ಗಳ್ಳಿ	75 –	0	80 –	0
ಉಪ್ಪು ಗೋಣಿ ಗಳ್ಳಿ	4 –	8	5 –	4
ಕೊಬ್ಬರಿ ಖಂಡಿ ಗಳ್ಳಿ	130 –	0	–	
ಕೊಬ್ಬರಿ ಹಿಂಡಿ ಖಂಡಿ ಗಳ್ಳಿ	47 –	0	49 –	0
ಎಳ್ಳಿಂಡಿ ಖಂಡಿ ಗಳ್ಳಿ	34 –	0	42 –	8
ಕೊಬ್ಬರಿ ಎಣ್ಣೆ ಮುಡಿ ಗಳ್ಳಿ	8 –	4	8	8
ಎಳ್ಳೆಣ್ಣೆ ಮುಡಿ ಗಳ್ಳಿ	8 –	4	8 –	6
ಚಿಮಿಣಿಎಣ್ಣೆ ಪೆಟ್ಟಿಗೆ ಗಳ್ಳಿ	7 –	2	8	0
ಮೋರಿಸ ಸಕ್ಕರೆ ಮುಡಿ ಗಳ್ಳಿ	3 –	15	4	
ಊರ ಮುಡಿ ಕಾಯಿ ಮುಡಿ ಗಳ್ಳಿ	3 –	8	8	0
ಸಾಸಿವೆ ಮುಡಿ ಗಳ್ಳಿ	8 –	4	8 –	8
ಕೊತ್ತಂಬರಿ ಮುಡಿ ಗಳ್ಳಿ	7 –	0	7 –	4
[illegible] ಖಂಡಿ ಗಳ್ಳಿ	400 –	0	405 –	0
[illegible] ಖಂಡಿ ಗಳ್ಳಿ	170 –	0	210 –	0
[illegible] ಖಂಡಿ ಗಳ್ಳಿ	510 –	0	520 –	
[illegible] ಗಳ್ಳಿ	70 –	0	80 –	0
[illegible] ಗಳ್ಳಿ	4 –	0	4 –	4
[illegible] ಗಳ್ಳಿ	37 –	8	40 –	0
[illegible] ಗಳ್ಳಿ	15 –	0	16 –	8
[illegible] ಮುಡಿ ಗಳ್ಳಿ	20 –	0	21 –	
[illegible] ಗಳ್ಳಿ	16 –	0	–	
[illegible] ಮುಡಿ ಗಳ್ಳಿ	15 –		16 –	8
[illegible] ಗಳ್ಳಿ	13 –	8	13 –	8
[illegible] ಖಂಡಿ ಗಳ್ಳಿ	70 –		75 –	

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯ ವಾಗಲಿ ಅಂಚೆಹಾಸಲು ಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು, ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕ್ತ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಔಷಧವು 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ 1 – 0 – 0

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ತೈನಾ ಬಜಾರು, ಮದ್ರಾಸು

ಮಂಗಳೂರು ಏಜಂಟರು — ವಿ. ಗೂಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ

ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ 'ಬಿಲ್ಕೊ"



ನಮ್ಮ ಕಾರಖಾನೆಯಲ್ಲಿ ತಯಾರಾದ ದೀಪವು ಸೂರ್ಯನಂತೆ ಪ್ರಕಾಶವನ್ನು ಕೊಡುವದು [illegible]

ನಮ್ಮ ಸ್ಪೆಶಿಯಲ್ [illegible]

ದಿ ಬೊಂಬೇ ಇನ್‌ಕೆಂಡೆಸೆಂಟ್ ಲೈಟ್ ಕಂಪೆನಿ,

[illegible]

ಜಿ. ಪಿ. ಓ ಬೊಂಬೈ—1



ಆರೋಗ್ಯವೆಂಬ ಧನಸಂಪತ್ತನ್ನು ಕಳಕೊಳ್ಳಬೇಡಿ!

ರೋಗವೆಂಬ ವಿಧಿಆಪತ್ತನ್ನು — ಪರಿಹರಿಸಿಕೊಳ್ಳಿನೋಡಿ

ಮಲೇರಿಯಾನ ಸರ್ವಜ್ವರಸಂಹಾರಿಣಿ

ಬಂಧುಗಳೇ ನಿಮ್ಮನ್ನು ಮಲ್ಪೆಜರವು ಕಾಡುತ್ತಿದೆಯೇ?

ಹಾಗಾದರೆ ಮಲೇರಿಯಾನವೇ ನಿಮಗೆ ಬೇಕಾದದ್ದು.

ಕ್ರಯ—8 ಔನ್ಸಿನ ಬಾಟ್ಲಿ 1ಕ್ಕೆ 1—[illegible], 12 ಡಜನ್ ರೂ [illegible], ಡಜನ್ 16—8—0

ಭಗಿನಿಗಳೇ!

ಕೊರಗಿರುವ ಶಿಶುವಿನ ನೋಟವು
[illegible]ತ್ರವರಿಗೆ ಯಮಕೊಂಡಾ
ಆರೋಗ್ಯ ಪುಷ್ಟಿಯುಳ್ಳ ಮಗುವಿನ ಅಂದವು
ಮಾತಾಪಿತರಿಗೆ ವೈಕುಂಠಾ

ಬೇಬಿ ಟೋನ

ನಮ್ಮ ಚಿರಂಜೀವಿಗಳು ಅಜೀರ್ಣ – ರೋಗಕ್ಕೆ ಒಳಪಟ್ಟು ವಿವಿಧ ರೋಗಗಳಲ್ಲಿ ನರಳುತ್ತ ಕ್ಷಾರೋಗಿ

ಹಾಗಾದರೆ ಒಡನೇ ಪಸುಕೂಸುಗಳ ವಕ್ಕರ ಅದ್ಭುತವಾದ ಬೇಬಿ ಟೋನ್ ಎಂಬ ಮದ್ದನ್ನು ತರಿಸಿ ಆಗತ್ಯ ಕುಡಿಸಿ ಆಗ ಜೀರ್ಣ ಶಕ್ತಿಯೂ ದೇಹದ ಪುಷ್ಟಿಯೂ ಉಂಟಾಗಿ, ರೋಗವಿಲ್ಲದ ಮಾಂಸವು ಮತ್ತು ನರನಾಡಿ ಘಟ್ಟಿಯಾಗಿ ರಕ್ತಕಂಬು ಆರೋಗ್ಯದಲ್ಲಿ ಬೆಳದು ಸುಖದಲ್ಲಿ ಬಾಳುವರು

ಕ್ರಯ—4 ಔನ್ಸಿನ ಬಾಟ್ಲಿ 1ಕ್ಕೆ 1—4—0

ಹೆಚ್ಚಿನ ಮಾಹಿತಿಗೂ ಇತರ ಎಲ್ಲಾ ರೋಗಗಳ ಮದ್ದಿನ ವಿವರಗಳ ಬಗ್ಗೆ ಧರ್ಮಾರ್ಥದ ಪುಸ್ತಕ ಬೇಕಾದಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮಲೇರಿಯಾನ ಕಂಪೆನಿ,

22628 ನಂಬ್ರ 2. ಮಂಗಳೂರು ದ. ಕ.

ದಿ ಕೆನರಾ ನರ್ಸರಿ.

ಕಸಿ ಮಾವಿನ ಗಿಡಗಳು. ಸಪ್ಪೋಟಾ

ನಮ್ಮಲ್ಲಿ ಈ ದೇಶದ ಪ್ರಸಿದ್ಧ ಮಾವಿನ ಮರಗಳ ಕಸಿಗಳೂ, ಸಪ್ಪೋಟಾ, [illegible] ಚಿಕ್ಕು, ದ್ರಾಕ್ಷೆ, ಅಂಜೂರ ದಾಳಿಂಬೆ, [illegible] ಕಸಿಗಿಡಗಳೂ ಸಿಗುವವು. [illegible] ಸಂದೇಹವಿಲ್ಲದೆ [illegible] ಫಲ [illegible]

ಕೆ. ವಾದ್ಯಣ್ಣ ಶೆಟ್ಟಿ } ಕೆ. ವಾಮನ ಶೆಣೈ
ದಿ ಕೆನರಾ ನರ್ಸರಿ C/o ಕೆನರಾ ಫಾರ್ಮಸಿ,
[illegible] ಮಂಗಳೂರು [illegible]
13|1|25



ರೂಪಾಯಿ 35 ಮತ್ತು ಅದಕ್ಕೆ ಮೀರಿದ ಎಸ್ ಬಿ ಬಿ ಎಲ್ ಕೋವಿಗಳು.

ರೂ 45 ಮತ್ತು ಅದಕ್ಕೆ ಮೀರಿದ ಡಿ. ಬಿ. ಬಿ. ಎಲ್. ಕೋವಿಗಳು

ರೂ 33 ಮತ್ತು ಅದಕ್ಕೆ ಮೀರಿದ ಬೆಲೆಯ, ಒಂದು ನಳಿಗೆಯ ಮತ್ತು ಜೋಡು ನಳಿಗೆಯ ಕೋವಿಗಳೂ, ರೂಪಾಯಿ 37ಕ್ಕೆ ಮೀರಿದ ಬೆಲೆಯ ರಿವೊಲ್ವರುಗಳೂ, ಪಿಸ್ತೂಲುಗಳೂ, ಎಲ್ಲಾ ತರದ ಕೋವಿ ಮತ್ತು ಅವುಗಳ ಮದ್ದು, ಸಾಮಾನುಗಳೂ ಕಡಿಮೆ ಕ್ರಯದಲ್ಲಿ ಸಿಕ್ಕುವವು

ಕ್ಯಾಟಲಾಗಿಗೆ ಬರೆದಲ್ಲಿ ಕಳುಹಿಸಲಾಗುವದು.

ದಿ ಬೊಂಬೆ ಆರ್ಮರಿ,
331 ಅಬ್ದುಲ್ ರಹಿಮಾನ್ ರಸ್ತೆ,
ಮುಂಬಾಯಿ 3.

ಅನುಕ್ರಮಣಿಕೆ.

ಅಗ್ರಲೇಖ,	ಪುಟ
ಮುಸಲ್ಮಾನ ಮತಾಭಿಮಾನ	೬
ವಿದೇಶ ವರ್ತಮಾನ	,,
ಸ್ಫುಟಾಚಾರಗಳು	೪
ಸೂಚನೆಗಳು	,,
ವರ್ತಮಾನ ಸಂಗ್ರಹಗಳು	
ಒಳದೇಶ ವರ್ತಮಾನ	೭
ದಕ್ಷಿಣ ಕನ್ನಡ—ಮಂಗಳೂರು, ಕಾರ್ಕಳ, ಕುಂದಾಪುರ, ಉಪ್ಪಳ, ಪುತ್ತೂರು, ಬಂಗಾಳ,	೭
ವಿವಿಧ ಸಮಾಚಾರಗಳು	೯
ಅಮೇರಿಕನ್ ಕೆಲಸಗಾರರ ಅಭಿವೃದ್ಧಿ	೧೨
ಬಾಲ್ಯ ವಿವಾಹ,	,,
ಹಿಂದೂಸ್ಥಾನದಲ್ಲಿ ಕೃಷಿಯ ಶಿಕ್ಷಣ,	೧೪
ಪತ್ರವ್ಯವಹಾರ, ೧, ೨, ೩, ೪	೨–೧೪
ದಿವಂಗತ ಅಡಿಗೆ ಪದ್ಮನಾಭಯ್ಯನವರು	೧೧

ಸ್ವದೇಶಾಭಿಮಾನಿ.

ತಾರೀಕು ೨೧ನೇ ಶುಕ್ರವಾರ ಸಪ್ಟಂಬರ ೧೯೨೮.

ಮುಸಲ್ಮಾನ ಮತಾಭಿಮಾನ

ಮೂಲ ಮುಸಲ್ಮಾನರಿಗಿಂತಲೂ ಹಿಂದೂಸ್ಥಾನದ ಮುಸಲ್ಮಾನರಿಗೆ ಮತ ಭಕ್ತಿ ಹೆಚ್ಚಾಗಿರುತ್ತದೆ. ತುರ್ಕಿಯಲ್ಲಾದರೂ ಮುಸಲ್ಮಾನರಲ್ಲಿ ಬಹಳ ಸುಧಾರಣೆಗಳಾದವು. ಅಲ್ಲಿನ ಮುಸಲ್ಮಾನವು ರಾಷ್ಟ್ರೀಯ ಏಳಿಗೆಗೆ ಪ್ರಾಶಸ್ತ್ಯವನ್ನು ಕೊಟ್ಟಿತು. ಹಿಂದೀ ಮುಸಲ್ಮಾನರು ಪ್ರಾವಣ್ಯತೆಯನ್ನು ಕೊಟ್ಟ ಖಿಲಾಫತ್ತು ತುರ್ಕಿಗೆ ತನ್ನ ರಾಜಕೀಯ ಉನ್ನತಿಗೆ ವಿರೋಧವಿದೆಯೆಂದು ತಿಳಿದ ಕೂಡಲೇ ಅದನ್ನು ತೆಗೆದು ಹಾಕಿತು, ಮತ್ತು ಕೆಲ ಸಮಯ ಮತವನ್ನು ರಾಜಕೀಯ ಆವಶ್ಯಕತೆಗಳಿಗೆ ಅಧೀನವಾಗಿಯೇ ಅಲ್ಲಿಯ ಸರಕಾರವು ಇರಿಸಿತು. ಒಬ್ಬ ಮುಸಲ್ಮಾನನು ಈಗ ಹೆಚ್ಚು ಹೆಂಡರನ್ನು ಮಾಡಿಕೊಳ್ಳಲಿಕ್ಕಿಲ್ಲ, ಯಾರೊಬ್ಬನೂ ೨೫ ವರ್ಷದ ಮೇಲೆ ಅವಿವಾಹಿತನಾಗಿರಲಿಕ್ಕಿಲ್ಲ, ಸ್ತ್ರೀಯು ಘೋಷೆಯನ್ನು ತೊಟ್ಟು ಒಳಗೆ ಕೂತುಕೊಳ್ಳಬೇಕಾಗಿಲ್ಲ. ಇತ್ಯಾದಿ ಎಷ್ಟೋ ಸುಧಾರಣೆಗಳು ಅಲ್ಲಿ ನಡೆದು ಹೋದುವು.

ಅಲ್ಲಿ ಮಾತ್ರವಲ್ಲ. ಹೊಸ ರಾಜನ ಕೈಕೆಳಗೆ ಪರ್ಶಿಯವು ತನ್ನ ಮತದ ಅನಾವಶ್ಯಕ ಪ್ರತಿಬಂಧಗಳನ್ನು ಮೀರಿ ಮುನ್ನಡೆಯಿತು. ಈಗ ಅಫಘಾನಿಸ್ಥಾನದ ಅಮೀರನೂ ನೂತನ ಸುಧಾರಣೆಗಳ ಆವಶ್ಯಕತೆಯನ್ನು ಕಂಡು ಹೊಸ ಕಟ್ಟಳೆಗಳನ್ನು ರಚಿಸಿರುವನು. ಯುರೋಪಿನಲ್ಲಿ ಅಮೀರನು ಬೆಳಸಿದ ಪ್ರವಾಸವು ವ್ಯರ್ಥವಾಗಲಿಲ್ಲ. ಪರದೇಶದಲ್ಲಿ ರಾಜ್ಯಾಡಳಿತೆಯು ಯಾವ ರೀತಿಯಲ್ಲಿ ನಡೆದದೆಯೆಂದೂ, ಪಾಶ್ಚಾತ್ಯ ರಾಷ್ಟ್ರಗಳು ಯಾಕೆ ಇಷ್ಟು ಶ್ರೇಷ್ಠತೆಯನ್ನು ಪಡೆದಿವೆಯೆಂದೂ ಅಫಘಾನಿಸ್ಥಾನದ ಅಮೀರನು ಕಂಡಿರುವನು. ವತ್ತು ದೇಶದ ಹಿತದ ಉದ್ದೇಶದಿಂದ ಮತದ ಅನುಜ್ಞೆಯನ್ನಾದರೂ ವಿರೋಧಿಸಿ ಜನರ ಆಚರಣೆಗಳ ಬಗ್ಗೆ ನೂತನ ಕಟ್ಟಳೆಗಳನ್ನು ಅವನು ರಚಿಸುತ್ತಿರುವನು. ಅವನು ಸಪತ್ನೀಯಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಂಚರಿಸುತ್ತಿದ್ದಾಗ ಅವನ ಪತ್ನಿಯು ಘೋಷೆಯನ್ನು ತಿರಸ್ಕರಿಸಿ ಪಾಶ್ಚಾತ್ಯ ಉಡುಪಿನಲ್ಲಿ ಹೊರಗೆ ಬರಲು ಹಿಂಜರಿಯಲಿಲ್ಲ. ರಾಷ್ಟ್ರಹಿತದ ಉದ್ದೇಶದಿಂದ ಸುಧಾರಣೆಗಳ ಮೇಲೆ ಚಳವಳ ಹೂಡುವ ಮೌಲ್ವಿಗಳನ್ನು ಶಿಕ್ಷಿಸಲಿಕ್ಕೂ ಅಫಘಾನಿಸ್ಥಾನದ ಅಮೀರನು ಹಿಂದೆಗೆಯುವುದಿಲ್ಲ. ಐಗುಪ್ತ್ಯ ದೇಶವು ಕೂಡ ಸುಧಾರಣೆಯ ಕಡೆಗೇನೇ ನಡೆಯುತ್ತಿದೆ. ಹೀಗೆ ಸ್ವತಂತ್ರವಿರುವ ಯಾವ ಮುಸಲ್ಮಾನ ರಾಷ್ಟ್ರವನ್ನು ನೋಡಿದರೂ ರಾಷ್ಟ್ರಹಿತವು ಮತಾಭಿಮಾನದಿಂದ ಬಾಧಿಸಲ್ಪಡದಂತೆ ಎಚ್ಚರ ತೆಗೆದುಕೊಳ್ಳೋಣಾಗುತ್ತದೆ.

ನಮ್ಮ ದೇಶದಲ್ಲಿ ಮಾತ್ರ ಮುಸಲ್ಮಾನರು ಮೌಲ್ವಿಗಳಿಂದಲೂ, ಉಲೇಮಾರಿಂದಲೂ ಮೌಲಾನಾರಿಂದಲೂ ಮತದ ಅಂಧ ಶ್ರದ್ಧೆಯಲ್ಲಿ ಪ್ರೇರಿತರಾಗಿ ದೇಶದ ಅಭಿವೃದ್ಧಿಗೆ ಪ್ರಚಂಡ ತಡೆಯುಂಟಾಗಿಯದೆ. ಕೊರಾನ್ ಎಂಬುದು ಪವಿತ್ರ ಗ್ರಂಥವೆನೊ ನಿಜ. ಆದರೆ, ಯಾವ ಮತ ಗ್ರಂಥವು ನೆರೆ ಹೊರೆಯೊಡನೆ ಚಿರಕಾಲವೂ ಕಲಹದಿಂದಿರುವುದನ್ನು ಉತ್ತೇಜಿಸಬಾರದು. ಮುಸಲ್ಮಾನ ಮತವು ಪವಿತ್ರವಾದುದೇನೋ ನಿಜ. ಆದರೆ ಇತರ ಮತಗಳೂ ಅಪವಿತ್ರವೆನ್ನುವುದು ಹಿಂದಿನ ಅನಾಗರಿಕ ಕಾಲಗಳಲ್ಲಿ ಒಪ್ಪಲ್ಪಟ್ಟಿದ್ದಿರಬಹುದಾದರೂ, ಈಗ ಯಾರೂ ಅದನ್ನು ಒಪ್ಪಲಾರರು. ಹಾಗೂ ಮುಸಲ್ಮಾನರು ಇತರ ಮತೀಯರೊಡನೆಯೂ, ಇತರ ಮತೀಯರು ಮುಸಲ್ಮಾನರೊಡನೆಯೂ ಸೌಹಾರ್ದದಿಂದಿರುವುದು ಅವಶ್ಯ. ಮತದ ಹಿತವೇ ಪ್ರಮುಖವಲ್ಲದ ಕಡೆಗಳಲ್ಲಿ ತಾನು ಮುಸಲ್ಮಾನನೆಂಬುದನ್ನಾಗಲೀ ತಾನು ಹಿಂದೂವೆಂಬುದನ್ನಾಗಲಿ ಪ್ರತಿ ಒಬ್ಬನೂ ಮರೆತು ತಾವೆಲ್ಲರೂ ಹಿಂದೀಯರೆಂಬುದನ್ನೇ ನೆನಪಿನಲ್ಲಿಟ್ಟುಕೊಂಡರೆ ಹಿಂದೀಯರ ಹಲವು ಸಮಸ್ಯೆಗಳು ಸುಲಭವಾಗಿ ತೀರ್ಮಾನವಾಗಬಹುದು.

ಹಿಂದೂಗಳಲ್ಲಿ ಮತ ಶ್ರದ್ಧೆಯೂ, ಅಂಧ ಶ್ರದ್ಧೆಯೂ ಇಲ್ಲವೆಂದಿಲ್ಲ. ಆದರೆ ಮುಸಲ್ಮಾನರಲ್ಲಿ ನವೀನ ನಾಗರಿಕತೆಗೆ ಅನುಗುಣವಾದ ಸುಧಾರಣೆಗಳುಂಟಾಗಲು ಇನ್ನೂ ಎಡೆ ಸಿಕ್ಕಿಲ್ಲವೆಂಬುದನ್ನು ಮಾತ್ರ ಹೇಳಲೇಬೇಕಾಗುವುದು. ಅವರಲ್ಲಿ ಈಗಲೂ ಕಾಣುವ ಪ್ರತ್ಯೇಕತೆಯು ರಾಷ್ಟ್ರೀಯತ್ವವನ್ನು ಕೆಡಿಸಿಬಿಟ್ಟಿರುತ್ತದೆ.

ಮುಸಲ್ಮಾನರು ಮತದ ವಿಷಯದಲ್ಲಿ ಬಹಳ ನಾಜೂಕು (delicate) ಭಾವನೆಯುಳ್ಳವರಾಗಿರುತ್ತಾರೆಂದು ಹಿಂದೂಸ್ಥಾನದ ಹಲವು ಪ್ರಾಂತಗಳಲ್ಲಿ ನಡೆದ ಗಡಿಬಿಡಿಗಳ ಮೂಲ ಕಾರಣವನ್ನು ಶೋಧಿಸಿದರೆ ತಿಳಿ ಬರುತ್ತದೆ. ಈಗ ಬೆಂಗಳೂರಿನ ಗಲಭೆಗಳೂ ವಿನಾಕಾರಣವೂ, ಅನಾವಶ್ಯಕವೂ ಆದ ಮುಸಲ್ಮಾನರ ಈ ನಾಜೂಕ ಭಾವನೆಯಿಂದಲೇ ನಡೆದುವೆಂದು ಕಾಣಬರುವುವು. ವಿನಾಯಕನಿಗೆ ನೂತನ ಆಸನವನ್ನು ಕೊಡುವಾಗ ಶಾಲೆಯ ಹುಡುಗರಿಗೆ ವಿನಾಯಕನ ಭಕ್ತಿ ಮಾತ್ರವೇ ಮನಸ್ಸಿನಲ್ಲಿತ್ತಲ್ಲದೆ ಮುಸಲ್ಮಾನ ಮತ ಭಾವನೆಯನ್ನು ನೋಯಿಸಬೇಕಾಗಿ ಅವರು ಕನಸು ಮನಸ್ಸಿನಲ್ಲಿಯೂ ಎಣಿಸಿರಲಿಲ್ಲವೆಂಬುವುದು ಸ್ಪಷ್ಟವಿದೆ. ಆದರೆ ಮದರಸಾ ಶಾಲೆಯ ಅಂಗಳದಲ್ಲಿ ನಿರ್ವ್ಯಾಜ್ಯವಾಗಿ ಪ್ರತಿಷ್ಠಿತನಾದ ವಿನಾಯಕನಿಂದ ಮುಸಲ್ಮಾನರಿಗೆ ಯಾವ ಮತದೋಷವು ತಗಲತೆಂದು ಮುಸಲ್ಮಾನೀ ಭಾವನೆಯುಳ್ಳವರೇ ತಿಳಿಯಬೇಕಲ್ಲದೆ ಇತರರಿಗೆ ಅದು ತಿಳಿಯಲಾರದು. ಅಲ್ಲದೆ ಈ ಗಲಾಟೆಗಳಲ್ಲಿ ಸಂಬಂಧಿಸಿದ ಅಷ್ಟು ವಿದ್ಯಾವಂತ ಮತ್ತು ಮಾನಿತ ಗೃಹಸ್ಥರು ಕೂಡ ಇಷ್ಟು ಸುಲಭವಾಗಿ ಈ ಅಂಧಶ್ರದ್ಧೆಗೆ ಒಳಬೀಳುವರೆಂಬುದನ್ನು ತಿಳಿಯುವಾಗ ಮುಸಲ್ಮಾನ ಧರ್ಮಾತ್ಮವು ಏಕೆ ಇನ್ನೂ ಅಂಧಶ್ರದ್ಧೆಯಿಂದ ಹೊರಬರುವುದಿಲವೆಂದು ಕಂಡು ಬರುವುದು.

ಮಶೀದಿ ಹತ್ತಿರದ ದೇವಸ್ಥಾನಗಳು ಘಂಟೆ ಬಾರಿಸಬಾರದು. ಹತ್ತಿರದ ಮದುವೆ ಮೊದಲಾದ ಶುಭಕಾರ್ಯಗಳ ವಾದ್ಯ ಘೋಷವು ಇರಬಾರದು ಮೊದಲಾದ ಅತ್ಯಂತ ಸಂಕುಚಿತ ಮಾನಸಿಕತೆಯು ಸಾಧನೆಗಳು ಇದೇ ಅಂಧಶ್ರದ್ಧೆಯನ್ನೇ ತೋರಿಸುವವು. ಪ್ರಕೃತ ಹಿಂದೂಗಳೆಂಬ ದೊಡ್ಡ ಸಮಾಜದ ಬಳಿಯಿಂದ ಮುಸಲ್ಮಾನ ಪಂಗಡವು ಸರಕಾರದಿಂದ ಬಹುಮಾನಿತವಾಗಿ ನೋಡುತ್ತಿದೆ. ಮತ್ತು ಸರಕಾರವು ಯುಕ್ತಿ ಪೂರ್ವಕ ತೋರಿಸುವ ಮೃಗ ತೃಷ್ಣಿಕೆಗೆ ಮುಸಲ್ಮಾನರು ಮೋಸ ಹೋಗುತ್ತಾರೆ. ಆದರೆ ಇದರಿಂದ ಮುಸಲ್ಮಾನರಿಗೆ ತಾತ್ಕಾಲಿಕ ಲಾಭವಾಗಬಹುದಾದರೂ ಐಕ್ಯತೆಯಲ್ಲಿ ಇದ್ದರೂ ನಷ್ಟಹೊಂದಬೇಕಾಗುವುದೆಂಬುದನ್ನು ಮರೆಯಲಾಗುವುದಿಲ್ಲ.

ಹಿಂದೂಗಳಲ್ಲಿ ದೋಷಗಳಿಲವೆಂದು ನಾವು ಹೇಳುವದಲ್ಲ. ಆದರೆ ಅವರೊಳಗಿನ ಸುಧಾರಣೆಯು ಒಂದೇ ಸವನೆ ನಡೆಯುತ್ತಿದೆ. ಅವರೊಳಗೆ ಉದಾರ ಭಾವನೆಗಳನ್ನು ಪ್ರೇರಿಸಲು ಪ್ರಯತ್ನಗಳನ್ನು ಮಾಡುವವರೂ ಇದ್ದಾರೆ. ಆದರೆ ಮುಸಲ್ಮಾನರಲ್ಲಿ ಇಂತಹ ಪ್ರಯತ್ನಗಳು ವಿರಳ. ಇನ್ನಾದರೂ ಹಿಂದೂಸ್ಥಾನದ ಮುಸಲ್ಮಾನರು ತುರ್ಕಿ ಅಫಘಾನಿಸ್ಥಾನ ಐಗುಪ್ತ್ಯ ಪರ್ಶಿಯಾ ಮೊದಲಾದ ರಾಷ್ಟ್ರಗಳ ಅನುಕರಣ ಮಾಡಿ ರಾಷ್ಟ್ರಹಿತದ ಕಡೆಗೆ ಹೆಚ್ಚು ಗಮನವನ್ನು ಕೊಡುವುದು ಅವಶ್ಯವಿದೆ.

ವಿದೇಶ ವರ್ತಮಾನ

— ನ್ಯೂಯೋರ್ಕಿನ ಪೋಲೀಸು ಆಸ್ಪತ್ರೆಗೆ ಮೂವರ ಗಡಿಬಿಡಿಯಲ್ಲಿ ಬಂದು ತಮ್ಮಲ್ಲಿಯ ಒಬ್ಬನಿಗೆ ಅತೀವ ಜ್ವರು ಚಿಕಿತ್ಸೆಯಾಗಬೇಕೆಂದರು. ಒಳಗೆ ಹೋದೊಡನೆ ಒಬ್ಬನು ಪೋಲೀಸನನ್ನು ಕಂಡು "ಇವನೇ ಆತನು" ಎಂದ ಬೊಬ್ಬೆ ಹಾಕಿದನು. ಆಗ ಇನ್ನೊಬ್ಬನು ಒಂದು ಗುಂಡಿನಿಂದ ಆ ಪೋಲೀಸನ ತಲೆಗೆ ಗುರಿಯಿಟ್ಟು ಹೊಡೆದನು. ಮೂವರೂ ಅಲ್ಲಿಂದ ಓಡಿ ಮೋಟಾರ ಕಾರಿನಲ್ಲಿ ಕುಳಿತು ಎತ್ತಲೋ ಮಾಯವಾದರಂತೆ.

— ವೆಸ್ಟ್ ಇಂಡೀಸಿನಲ್ಲಿ ಘಂಟೆಗೆ ೧೩೨ ಮೈಲು ವೇಗದ ಬಿರುಗಾಳಿಯು ಕಳೆದ ವಾರದಲ್ಲಿ ಬಂದಿತು. ಸತ್ತವರ ಸಂಖ್ಯೆಯು ೧೧, ಶಂತಿನೊವಲಾಮನುಗಳು ಕೆಡಿಯಲ್ಪಟ್ಟವು. ಭಂಗವಾಗಿದ್ದಿತು.

— ಕೆನಡದಲ್ಲಿ ಒಂದು ಧಾನ್ಯಗಳ ಉಗ್ರಾಣಕ್ಕೆ ಬೆಂಕಿ ಹತ್ತಿ ೫೦ ಸಾವಿರ ಪವನು ಕ್ರಯಬಾಳುವ ಧಾನ್ಯ ಸುಟ್ಟು ಹೋಯಿತು. ಕೆಲವು ಸಮಯಗಳ ವರೆಗೆ ಕೆನಡದಲ್ಲಿ ಹಿಟ್ಟಿಗೆ ತುಟ್ಟಿಯಾಗಬಹುದೆಂದು ಸಂಶಯವಿದೆ.

— ಪೆಕೋಟೋ ಪಟ್ಟಣದ ಸಮೀಪದ ಒಂದು ಶಾಲೆಯ ಉಪಾಧ್ಯಾಯಿನಿಯು ಸುಂಟರಗಾಳಿಗೆ ಸಿಕ್ಕಬಹುದಾದ ಮಕ್ಕಳ ಗಳನ್ನು ಬಹು ಸಾಹಸದಿಂದ ಬದುಕಿಸಿದಳು. ತರಗತಿಯಲ್ಲಿ ಮಕ್ಕಳಿದ್ದರು ಸುಂಟರಗಾಳಿಯು ಬರುವ ಸೂಚನೆಯಾಯಿತು. ಉಪಾಧ್ಯಾಯಿನಿಯು, ಮಕ್ಕಳು ಕೈಕೈ ಹಿಡಿದು ನೆಲದ ಮೇಲೆ ಮಲಗಬೇಕೆಂದು ಹೇಳಿದಳು. ಮಕ್ಕಳನ್ನು ಸಂತಯಿಸುವದಕ್ಕಾಗಿ ಪಿಯಾನೊ ಬಾರಿಸುತ್ತಾ ಕುಳಿತುಕೊಂಡಳು. ಸುಂಟರಗಾಳಿಯು ಬಂದೊಡನೆ ಗೋಡೆಯು ಕುಸಿದು ಮಾಡು ಕೆಳಕ್ಕೆ ಬಿದ್ದಿತು. ಎಲ್ಲರೂ ಮಲಗಿದ್ದ ಕಾರಣ ಒಬ್ಬ ಚಿಕ್ಕ ಹುಡುಗಿಯ ಹೊರತು ಉಳಿದವರು ಸುರಕ್ಷಿತವಾಗಿಯೇ ಇದ್ದರು. ಆದರೆ ಉಪಾಧ್ಯಾಯಿನಿಗೆ ಮಾತ್ರ ಸ್ವಲ್ಪ ಜಖಮಾಯಿತು.

ಒಟಾವಾದಲ್ಲಿ ಈ ವರುಷದಷ್ಟು ಗೋಧಿಯು ಇನ್ನು ಯಾವ ವರುಷವೂ ಆಗಿದ್ದಿಲ್ಲವಂತೆ. ಅಂದರೆ ಒಟ್ಟು ಬೆಳೆದ ಗೋಧಿಯು ೫೫ ೪೮೨, ೦೦ ಬುಶೆಲುಗಳ. ಕಳೆದ ವರುಷಕ್ಕಿಂತ ೯೦೦೦೦,೦೦೦ ಬುಶೆಲುಗಳು ಹೆಚ್ಚಾದ ಹಾಗಾಯಿತು.

ನ್ಯೂಯೋರ್ಕಿನಿಂದ ಪ್ಲಿಮತಿಗೆ ಒಂದು ವಿಮಾನವು ಐದು ದಿನಗಳೊಳಗೆ ಹಾರಿದವು. ಇಷ್ಟು ಬೇಗ ಬೇರೆ ವಿಮಾನಗಳು ಹಾರಿದುದು ಅತಿವಿರಳ.

ಮಾರ್ಗದಲ್ಲಿ ಸಂಚರಿಸುವಾಗ ಹೆಂಗಸರ ಕಡೆಗೆ ನೋಡುವುದು ತಪ್ಪೆಂದು ಸ್ಪೈನಿನಲ್ಲಿ ನಿರ್ಧಾರವಾಗಿದೆ. ಈ ತಪ್ಪಿಗೆ ಐದರಿಂದ ಹತ್ತು ದಿನಗಳ ವರೆಗಿನ ಶಿಕ್ಷೆಯೂ ೫೦ರಿಂದ ೫೦೦ ಪೆಸೆಟಾಸಿನ ವರೆಗಿನ ಜುಲ್ಮಾನೆಯೂ ವಿಧಿಸಲ್ಪಡುವುದು.

— ಕ್ಯಾರೊ ಪಟ್ಟಣಕ್ಕೆ ತಲಪಿದ ನವ್ಯ ಯುವರಾಜರನ್ನು ಅಲ್ಲಿನ ಜನರು ಬಹು ಸಂಭ್ರಮದಿಂದ ಸತ್ಕರಿಸಿದರು.

ಫ್ರೆಡೆರಿಕ ಹಾರ್ಬರ ಎಂಬಲ್ಲಿ ಕೆಲವು ದಿನಗಳ ಹಿಂದೆ ಒಂದು ... ಗೆಯಾಯಿತು.

ಈ ವರುಷದ ಫ್ರೆಂಚ ಬಜೇಟಿನಲ್ಲಿ ವಿಮಾನಗಳಿಗಾಗಿ ಒಂದು ವಿಲಿಯ ಸ್ಟರ್ಲಿಂಗಗಳನ್ನು ಹೆಚ್ಚಿಸಿರುವರು.

... ದಸಿಲ್ಲಿ ಆಲ್ಬರ್ಟ ಮೆರ್ಡಸನೆಂಬವನ ಪತ್ನಿಯು ಅಸ್ವಸ್ಥವಾಗಿ ... ಮಗುವನ್ನು ಪ್ರಸವಿಸಿದಳು. ಅಂದಿನಿಂದ ಆವಳ ಅಸ್ವಸ್ಥತೆ ಬಲಿಸುತಾ ಬಂದಿತು. ಇದರಿಂದ ವ್ಯಥೆಪಟ್ಟು ಮೆರ್ಡಸನು ಮರಕ್ಕೆ ನೇಣು ಹಾಕಿ ಆತ್ಮಹತ್ಯವನ್ನು ಮಾಡಿಕೊಂಡನು. ಹೆಂಡತಿಯ ಸ್ಥಿತಿಯು ... ಆತನು ಹುಟ್ಟಿದ ಹಾಗಾಗಿದ್ದನಂತೆ.

ಮಸ್ಕತಿನ ಸುಲ್ತಾನರು ಏನೋ ಒಪರೇಶನನ್ನು ಮಾಡಿಸಿಕೊಳ್ಳಲು ... ಗೆ ಹೋದವರು ಒಪರೇಶನನ್ನು ಮಾಡಿಸಿ ಸೌಖ್ಯವಾಗಿ ಈಗ ... ಇರುವರು.

— ಕೊಲಿಯೊ ಬೋರ್ನ್ ಒಂದು ಗೂಡ್ಸ್ ಟ್ರೈನು ಒಂದು ಮೋಟಾರ ಲೊರಿಗೆ ಡಿಕ್ಕೆ ಹೊಡೆದು ಒಬ್ಬನು ಮೃತಪಟ್ಟನು. ನಾಲ್ವರಿಗೆ ಜಖಮಾಗಿರುತ್ತದೆ.

— ಕಾಬೂಲಿನಲ್ಲಿ ... ಮಂತ್ರಿಯಾಗಿದ್ದವನ ಪತ್ನಿಯು ಮೃತಪಟ್ಟಳೆಂದು ಕಾಬೂಲ ವಾರ್ತೆಯಿಂದ ಬಿದಿರುತ್ತದೆ.

— ವಿಸೆಲ್ ಪ್ರೆಸಿಡೆಂಟ್ ವತ್ತು ಕಮಾಂಡರ್ ಇನ್ ಚೀಫರಾದ ... ಸ್ಕಾಟ್ ರೆಂಬವರು ಇದೇ ೨೩ನೇ ತಾರೀಕಿಗೆ ಹಿಂದೂಸ್ಥಾನಕ್ಕೆ ಬಂದು ... ವಲ್ಲಿ ... ಇಷ್ಟು ವ್ಯಾಸರಾಯರ ಅತಿಥಿಗಳಾಗುವರು.

— ... ಜಗದ್ಗುರು ... ಸರವರು ಕ್ಯಾರೋ ಪಟ್ಟಣದಲ್ಲಿ ... ಶೋಧಗಳ ಕುರಿತು ಭಾಷಣಗಳನ್ನು ಕೊಡುತ್ತಾ ಇರುವರು.

... ಒಂದು ಪತ್ರಿಕೆಯು ಸರಕಾರಕ್ಕೆ ವಿರುದ್ಧವಾಗಿ ಏನೋ ... ಬರೆದ ಕಾರಣವಾಗಿ ಪತ್ರಿಕೆಯನ್ನು ನಾಲ್ಕು ತಿಂಗಳುಗಳ ವರೆಗೆ ... ಹುಕುಮ ಕೊಟ್ಟಿರುವರು. ಹೀಗೆಯೇ ನಾಲ್ಕು ಪತ್ರಿಕೆಗಳನ್ನು ಅಲ್ಲಿ ನಿಲ್ಲಿಸಿರುವರು.

... ಯಲ್ಲಿ ಒಂದು ಸುಂಟರ ಗಾಳಿಯು ಬಂದು ಹಲವು ... ನಾಶಮಾಡಿತು.

ಕೇಲಿಫೋರ್ನಿಯದಲ್ಲಿ ಯಾವನೋ ಒಬ್ಬ ಮರಾಠ್ಯನು ನಾಲ್ವರು ಹುಡುಗರನ್ನು ... ಕೊಂಡು ಹೋಗಿ ಅವರನ್ನು ಸಜೀವವಾಗಿ ಹುಗಿದನು. ... ಅಗೆದು ನೋಡಲಾಗಿ ನಾಲ್ವರ ಹೆಣಗಳೂ ಸಿಕ್ಕವು. ಕೊಲೆಪಾತಕಿಯು ಮಾತ್ರ ಇದು ವರೆಗೂ ಸಿಕ್ಕಿಲ್ಲ.

— ಕೆಲ್ಲೊಗ್ ಶಾಂತಿ ಒಪ್ಪಂದಕ್ಕೆ ಇದುವರೆಗೆ ೫೧ ರಾಷ್ಟ್ರಗಳು ಸಹಿ ಹಾಕಿರುವವು. ಕೊನೆಗೆ ದಸ್ಕತ ಹಾಕಿದುದು ಮೆಕ್ಸಿಕೋ ರಾಷ್ಟ್ರ. ಇನ್ನೂ ಸಹಿ ಹಾಕಲು ೧೪ ರಾಷ್ಟ್ರಗಳು ಉಳಿದಿವೆ. ಪರ್ಶಿಯದವರೂ ದಸ್ಕತು ಹಾಕಬೇಕೆಂದು ನಿಶ್ಚಯಿಸಿರುವರು.

— ಇಂಗ್ಲೆಂಡಿನಲ್ಲಿಯೂ ಬಾಲ್ಯವಿವಾಹವು ಅಸ್ತಿತ್ವದಲ್ಲಿಯೆಂದು ಗೊತ್ತಾಗಿ ಕಂಡುಬಂದಿದೆ. ೧೯೨೬ನೇ ಇಸವಿಯಲ್ಲಿ ಮದುವೆಯ ... ಮಿತಿಯಲ್ಲಿ ೧೫—೧೬ರಂತೆ. ಇದರಿಂದ ೨೫,೦೦೦ ಮದುವೆಗಳು ಹೆಚ್ಚಾಗಿ ಆದಾಯಿತು. ೨೧ ವರುಷಕ್ಕೆ ಒಳಗಿನ ದಂಪತಿಗಳ ಸಂಖ್ಯೆಯು ೫೮೦೦ ಉಳಿದವರಲ್ಲಿ ಹೆಚ್ಚಾಗಿ ವಧುವು ೩೩ ವರುಷದವರು. ೧೬ ವರುಷದಲ್ಲಿ ಮದುವೆಯಾದ ೩೪ ಹುಡುಗಿಯರಿದ್ದರು. ೧೬ ವರುಷ ಪ್ರಾಯದ ೧೨ ಹುಡುಗರಿದ್ದರು. ವಿಧವಾವಿವಾಹ ನಡೆದುದು ಬಲೀ ೩೩ ಮಾತ್ರ. ಆದರ ಸಂಖ್ಯೆಯು ೪೦,೦೦೦ಕ್ಕೆ ಕಡಿಮೆಯಾಗಿರುತ್ತದೆ.

— ಕಳೆದ ಅಕ್ಟೋಬರ ತಿಂಗಳಿನಲ್ಲಿ ಇಂಗ್ಲೆಂಡನ್ನು ಬಿಟ್ಟು ಹೊರಟ ನಾಲ್ಕು ಸೀಪ್ಲೇನ್ ವಿಮಾನಗಳು ೨೩,೦೦೦ ಮೈಲುಗಳ ಪ್ರಯಾಣವನ್ನು ಮುಗಿಸಿ ಸಿಂಗಪುರಕ್ಕೆ ತಲುಪಿರುವವು.

[illegible]ದೇಶ ವರ್ತಮಾನ.

[illegible] ಸಂಸ್ಥಾನದಲ್ಲಿ ಹಳ್ಳಿಗರ ಆರೋಗ್ಯ ಅಭಿವೃದ್ಧಿ [illegible] ಆಫ್ ಪಬ್ಲಿಕ್ ಹೆಲ್ತ್ ಇವರು ಒಂದು ಆಲೋಚನೆ [illegible]ವರು. ಪ್ರತಿ ಹಳ್ಳಿಯ ಇಬ್ಬರು ಹುಡುಗರನ್ನು ಆರಿಸಿ [illegible] ಚಿಕಿತ್ಸೆ ಮತ್ತು ಆರೋಗ್ಯ ರಕ್ಷಣೆಯ ಕುರಿತು ಪಾಠ [illegible] ತರಬೇತು ಮಾಡುವುದು. ಡಾಕ್ಟರರು ಬರುವ ಮೊದಲು [illegible]ಯನ್ನು ಮಾಡಲು ಅವರು ಸಿದ್ಧರಾಗಿರತಕ್ಕದ್ದಂತೆ. [illegible] ವಾಗಿಂಸುವಿಕೆ, ಶುದ್ಧವಾದ ನೀರನ್ನು ಒದಗಿಸುವಿಕೆ, [illegible] ವಿಷಯಗಳಲ್ಲಿಯೂ ಸರಿಯಾದ ವ್ಯವಸ್ಥೆಯನ್ನು ಮಾಡಲು [illegible]ವರು.

—[illegible] ವರುಷದ ಆಖೈರಿಯ ಸುಮಾರಿಗೆ ಕೊಲೊಂಬೋವಿನಲ್ಲಿ [illegible] ನಾಟಕಶಾಲೆಯನ್ನು ಕಟ್ಟುವರು. ಇದಕ್ಕೆ ನಾಲ್ಕು ಲಕ್ಷ ರೂಪಾಯಿ [illegible]ವಾಗುವದಂತೆ. ಈ ನಾಟಕಶಾಲೆಯಲ್ಲಿ ಒಟ್ಟು ೩ ಸಾವಿರ [illegible] ಕುಳಿತುಕೊಳ್ಳಲು ಅನುಕೂಲವಾಗುವುದಂತೆ.

—ಹೊನರೇಬಲ್ ಕ್ಷೇಟ್ ಗೋವಿಂದ ದಾಸ್ ಜಬಲ್‌ಪೋರ್ [illegible] ಪುತ್ರಿಯವರಾದ ಶ್ರೀಮತಿ ರತ್ನಕುಮಾರಿ ದೇವಿ ಎಂಬ ಹದಿನೈದು ವರುಷ ಪ್ರಾಯದ ಯುವತಿಯು ಸಂಸ್ಕೃತದ ಅತೀ ದೊಡ್ಡ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿರುವಳಂತೆ. ಮಾರವಾಡಿ ಹೆಂಗಸರುಗಳಲ್ಲಿ ಇಂತಹ ಪರೀಕ್ಷೆಗೆ ಹೋದವಳು ಇವಳೊಬ್ಬಳೇ.

—ಅಹಮದಾಬಾದಿನ ಒಬ್ಬ ಬನಿಯಾರನು ಖೋಟಾ ರೂಪಾಯಿ ನಾಣ್ಯಗಳನ್ನು ತಯಾರಿಸುತ್ತಿದ್ದನಂತೆ. ಒಂದು ದಿನ ಆತನ ಮನೆಯಲ್ಲಿ ಪರೀಕ್ಷಿಸಿ ನೋಡಲಾಗಿ ಮೂರು ಸಾವಿರ ಖೋಟಾ ನಾಣ್ಯಗಳು ದೊರೆತವು. ಆತನನ್ನು ಇದಕ್ಕಾಗಿ ಕೈದುಮಾಡಿರುವರು. ಇನ್ನು ದೇವೊಜಿ ಎಂಬಲ್ಲಿಯೂ ಒಬ್ಬ ಬನಿಯಾನು ಇಂತಹ ಖೋಟಾ ನಾಣ್ಯಗಳನ್ನು ಮಾಡುವಾಗ ೩೦೦ ನಾಣ್ಯಗಳು ಪೊಲೀಸರಿಗೆ ಸಿಕ್ಕವು. ಆತನೂ ಕೈದು ಮಾಡಲ್ಪಟ್ಟಿರುವನು.

—ಹಿಂದೀ ರಾಜಕೀಯ ಮಂಡಲದ ಬರುವ ಅಧಿವೇಶನವು ಬರುವ ವರುಷದ ಫೆಬ್ರುವರಿ ತಿಂಗಳಿನ ತಾರೀಕು ೧೧ರಿಂದ ೧೬ನೇ ದಿನಗಳ ವರೆಗೆ ಹೊಸ ದಿಲ್ಲಿಯಲ್ಲಿ ನಡೆಯಲಿರುವದು.

—ಅಹಮದಾಬಾದಿನ ಎರಡು ಶಾಲೆಗಳ ಹುಡುಗರೊಳಗೆ ಒಂದು ಆಟದ ಬಯಲಿನ ವಿಷಯವಾಗಿ ಚರ್ಚೆ. ಇದರಿಂದ ಅವರೊಳಗೆ ಕಡೆಗೆ ಜಗಳವಾಗಿ ಒಬ್ಬ ಹುಡುಗನು ಸತ್ತುಹೋದನು. ಹಲವರಿಗೆ ಗಾಯ ಮಾಯಿತು. ಇದಕ್ಕಾಗಿ ಶಾಲೆಯ ಮುಖ್ಯೋಪಾಧ್ಯಾಯರ ಮೇಲೆ ತಪ್ಪು ಆರೋಪ.

—ಮುಂಬಾಯಿಯಲ್ಲಿ ಹುಡುಗರ ಸಂಬಳವನ್ನು ಏರಿಸಬೇಕೆಂದು ಒಮ್ಮೆ ಆಲೋಚನೆಯಾಗಿತ್ತು. ಅವರ ಸಂಬಳವನ್ನು ಏರಿಸಿದರೆ ಬಡವರಿಗೂ ಮಧ್ಯಮ ತರಗತಿಯವರಿಗೂ ವೃಥಾ ಕಷ್ಟವಾಗುವುದರಿಂದ ಹಾಗೆ ಮಾಡಲಾಗದೆಂದು ಮುಂಬಾಯಿ ಸರಕಾರದವರು ನಿಶ್ಚಯಿಸಿರುವರು.

—ತ್ರಿವೇಂದ್ರಮಿನ ಲೋ ಕೊಲೇಜಿನ ವಿದ್ಯಾರ್ಥಿಯೊರ್ವನು ಆತ್ಮಹತ್ಯವನ್ನು ಮಾಡಿಕೊಂಡನು. ಆತನು ಒಂದು ತಿಂಗಳ ಹಿಂದೆ ಥಿಯೋಸೋಫಿಕಲ್ ಸೊಸೈಟಿಗೆ ಸೇರಿದ್ದನು. ಅದರ ಸೂತ್ರಗಳು ಆತನನ್ನು ಮರುಳು ಮಾಡಿದ್ದವು. ಆದಷ್ಟು ಬೇಗನೆ ಪರಮಾತ್ಮನ ಸನ್ನಿಧಿಯನ್ನು ಸೇರಲು ಆತನಿಗೆ ಮನಸ್ಸಿದ್ದಿತೆಂದು ಆತನ ಆತ್ಮಹತ್ಯವನ್ನು ಮಾಡಿಕೊಳ್ಳುವಾಗ ಬರೆದಿಟ್ಟ ಕಾಗದದಲ್ಲಿತ್ತು.

—ಜಮಶೆದಪುರದ ಟಾಟಾ ಕಂಪೆನಿಯ ಮುಷ್ಕರಗಾರರೆಲ್ಲರೂ ಪುನಃ ಕೆಲಸಕ್ಕೆ ಸೇರಿರುವರು. ಕೆಲಸ ಬಿಟ್ಟು ಮನೆಗೆ ಹೋದವರಿಗೆ ಪುನಃ ಕೆಲಸಕ್ಕೆ ಬರಲು ತಂತಿಯ ಮೂಲಕ ತಿಳಿಸಿದರು.

—ಭಗವಾನಪುರದಲ್ಲಿ ತೆರಿಗೆಯನ್ನು ಕೊಡುವುದಿಲ್ಲವೆಂದು ಜನರು ಸತ್ಯಾಗ್ರಹವನ್ನು ಆಚರಿಸುತ್ತಿರುವರು.

—ತಿರುವಲೂರು ಮತ್ತು ಪಾಳೆಯತ್ತೂರು ರೈಲ್ವೇ ಸ್ಟೇಶನುಗಳ ನಡುವೆ ರೈಲು ಓಡುತ್ತಿರುವಾಗ ಒಬ್ಬ ೬೦ ವರುಷ ಪ್ರಾಯದ ಹೆಂಗಸು ರೈಲುಬಂಡಿಯಿಂದ ಕೆಳಕ್ಕೆ ಹಾರಿದಳು. ಒಡನೆ ರೈಲನ್ನು ನಿಲ್ಲಿಸಲಾಯಿತು. ಅವಳನ್ನು ಪರೀಕ್ಷಿಸಲಾಗಿ ಅವಳು ಹಟ್ಟಿಯಿಂದ ತಿಳಿದು ಬಂದುದರಿಂದ ಪೋಲೀಸರ ವಶದಲ್ಲಿಟ್ಟು ಅವಳನ್ನು ದಸ್ತಗಿರಿ ಮಾಡಿದರು.

—ಮದರಾಸಿನ ಸ್ತ್ರೀಯರು ಕಳೆದ ಗುರುವಾರ ದಿನ ಇಂದೂರಿನ ಮಹಾರಾಣಿಯವರಾದ ಅಹಲ್ಯಾಬಾ ಹೋಳ್ಕರರವರ ವರ್ಧಂತಿಯನ್ನು ಆಚರಿಸಿದರು. ಸಭೆಗೆ ಹಲವು ಪ್ರತಿಷ್ಠಿತ ಮಹಿಳೆಯರು ಬಂದು ಕೂಡಿದರು. ಅಲ್ಲಿ ಶ್ರೀ ಸರ್ದಾರರವರ ಬಾಲ್ಯ ವಿವಾಹ ನಿಷೇಧದ ಮಸೂದೆಯನ್ನು ಸಮರ್ಥಿಸಿ ಒಂದು ಠರಾವನ್ನು ಮಂಜೂರ ಮಾಡಿದರು.

—ಅಖಿಲ ಹಿಂದೂಸ್ಥಾನ ವೈಶ್ಯ ಸಮ್ಮೇಲನದ ೧೯ನೇ ಅಧಿವೇಶನವು ನಾಸಿಕದಲ್ಲಿ ಜರಗುವುದು. ಈ ಅಧಿವೇಶನಕ್ಕೆ ಬರುವ ಉತ್ತಮ ಉಪನ್ಯಾಸಕ್ಕೆ ರೂಪಾಯಿ ೫೦೦ನ್ನು ಇನಾಮವಾಗಿ ಕೊಡಲು ನಿಶ್ಚಯಿಸಿರುವರು.

—ಪೂನೆಯ ಸಾರ್ವಜನಿಕ ಸಭಾಮಂದಿರದಲ್ಲಿ ಗೃಹಸ್ಥರ ಸಭೆ ಕೂಡಿ, ಬರುವ ತಿಂಗಳಲ್ಲಿ ಪೂನೆಗೆ ಸ್ಯಾಮುವೆಲ್ ಹೋರ್ ಬಂದಾಗ ಸರ್ವರೂ ಏಕಮನಸ್ಸಿನಿಂದ ಅವನ್ನು ಬಹಿಷ್ಕರಿಸಬೇಕೆಂದು ನಿರ್ಣಯಿಸಿದರು. [illegible] ಸಭೆಗಳನ್ನು ಏರಿಸಿ ಅಲ್ಲಲ್ಲಿ ಬಹಿಷ್ಕಾರದ ಸಲುವಾಗಿ ಸಭೆಗಳನ್ನು ಜರಗಿಸಬೇಕೆಂದು ನಿಶ್ಚಯಿಸಿದರು.

—ಜಬಲ್‌ಪುರದಲ್ಲಿ ಒಂದು ರೈಲುಬಂಡಿಯು ಕಂಬಿಗಳಿಂದ ತಪ್ಪಿ ಹೋಯಿತು. ಆದರೆ ಜಖಮಾಗಲಿ, ಪ್ರಾಣಹಾನಿಯಾಗಲಿ, ಉಂಟಾಗಲಿಲ್ಲ.

—ತಿರುಪತಿಯ ಬ್ರಹ್ಮೋತ್ಸವವು ಸಮೀಪಿಸುತ್ತಾ ಬರುತ್ತಿದೆ. ಕೋಲೆರಾ ರೋಗವು ಪ್ರಬಲಿಸಿ ನೀರು ಸಿಕ್ಕುವುದೇ ದುರ್ಲಭವಾಗಿರುತ್ತದೆ. ಆದಕಾರಣ ಯಾತ್ರಿಕರು ಅಲ್ಲಿಗೆ ಹೋಗುವದು ಹಿತಕರವಲ್ಲವು.

—[illegible]ಪುರದಲ್ಲಿ ಅಖಿಲ ಭಾರತೀಯ ಯುವಕರ ಪರಿಷತ್ತನ್ನು ಜರಗಿಸಬಾರದೆಂದು [illegible]ದ ಅದಾಲತದಾರರು ಹುಕುಂ ಕೊಟ್ಟಿರುವರು.

—ಕ್ರಿಸಮಸಿನ ಸಮಯದಲ್ಲಿ ಅಜಮೀರದಲ್ಲಿ ಅಖಿಲಭಾರತೀಯ ಮುಸಲ್ಮಾನ ಎಡ್ಯುಕೇಶನಲ್ ಕೊನ್ಫರೆನ್ಸು ಜರಗುವದು.

—ಖರಗಪುರದಲ್ಲಿ ಒಂದು ವರುಷಗಳ ವರೆಗೆ ಹೆಚ್ಚಿಗೆ ಪೋಲೀಸರನ್ನು ಇಟ್ಟು ಅವರ ಖರ್ಚಿಗಾಗಿ ಹಣವನ್ನು ಜನರಿಂದ ವಸೂಲು ಮಾಡುವರು. ಈಗಲೂ ಅಲ್ಲಿಯ ಕಲಹವು ಶಾಂತಿಯನ್ನು ಹೊಂದಿಲ್ಲ. ಕಳೆದ ಸೋಮವಾರ ದಿನ ರಾತ್ರಿ ಒಬ್ಬ ಹಿಂದುವು ತಿವಿದು ಕೊಲ್ಲಲ್ಪಟ್ಟನು. ಮಾರ್ಗಗಳಲ್ಲೆಲ್ಲ ಗುರ್ಖಾ ಸೈನಿಕರಿರುವರು. ಯುರೋಪಿಯನ್ ಮಿಲಿಟರಿ ಸೈನಿಕರು ಇರುವುದಿಲ್ಲ. ಕೆಲವು ಹಿಂದುಗಳೂ ಮುಸಲ್ಮಾನರೂ ಖರಗಪುರವನ್ನು ಬಿಟ್ಟು ಹೋಗಬೇಕೆಂದು ಹುಕುಂ ಹೊರಟಿರುವದು. ಹಿಂದೂ ಸಭೆಯ ಪ್ರಮುಖ ಮೆಂಬರನಾದ ಕಾಬಲ್ ರಾಮ ಸನ್ಯಾಸಿ ಎಂಬಾತನು ಕೈದು ಮಾಡಲ್ಪಟ್ಟನು.

—ಈ ತಿಂಗಳ ಅಖೈರಿಯೊಳಗೆ ಮದರಾಸಿನ ಮುಖ್ಯ ಸರಕಾರಿ ಆಫೀಸರರು ಉದಕಮಂಡಲಕ್ಕೆ ತೆರಳುವರು. ಹಲವು ಆಫೀಸರರು ಈಗಲೇ ಉದಕಮಂಡಲದಲ್ಲಿರುವರು.

—ತಿನ್ನವೆಲ್ಲಿಯಲ್ಲಿ ಇಬ್ಬರು ಒಂದು ಕಾಡಿಗೆ ಹೋಗಿ ಎತ್ತರದ ಮರದಲ್ಲಿ ಬೆಳೆದಿದ್ದ ಜೇನು ಗೂಡಿನಿಂದ ಜೇನನ್ನು ತೆಗೆಯಲು ಬಿದಿರಿನ ಏಣಿಯನ್ನು ಮರಕ್ಕೆ ತಗಲಿಸಿಟ್ಟು ಮೇಲಕ್ಕೆ ಹತ್ತಿದರು. ಸುಮಾರು ೩೦ ಅಡಿ ಎತ್ತರ ಹೋದೊಡನೆ ಏಣಿಯು ಮುರಿದು ಇಬ್ಬರೂ ಕೆಳಕ್ಕೆ ಬಿದ್ದು ಅಲ್ಲಿಯೇ ಸತ್ತುಹೋದರು.

—ಘೋರಕಪುರದಲ್ಲಿ ಒಬ್ಬ ಲೇಬರ್ ನಾಯಕನು ರೈತರನ್ನು ಕೂಡಿಸಿ ಭಾಷಣವನ್ನು ಕೊಡುತ್ತಿರುವಾಗ ಹಲವು ಪುಂಡರು ಬಂದು ಆತನನ್ನು ಹಿಂಸಿಸಿದರು.

—ಬಿರಾರಿನ ಅಕೋಲಾ ಎಂಬಲ್ಲಿ ಜನರು ಸಭೆಕೂಡಿ ಈಗಿನ ಮಧ್ಯಪ್ರಾಂತದ ಮಂತ್ರಿಗಳ ಮೇಲೆ ‘ನೋ ಕೊನ್ಫಿಡೆನ್ಸ್’ ಠರಾವನ್ನು ಮಂಜೂರು ಮಾಡಿ ಅವರು ಮಂತ್ರಿತನಕ್ಕೆ ರಾಜಿನಾಮೆಯನ್ನು ಕೊಡಲೇ ಬೇಕೆಂದು ನಿರ್ಣಯಿಸಿದರು.

—ಬಿ ಕೆ ಪಾಲ್ ಮತ್ತು ಕಂಪೆನಿಯ ಹರಿಶಂಕರಪಾಲನೆಂಬವನು ಚಿನ್ಸೂರದಲ್ಲಿ ತನ್ನ ಅಜ್ಜನ ಹೆಸರಿನಲ್ಲಿ ಒಂದು ವ್ಯವಸಾಯ ಶಾಲೆಯನ್ನು ತೆರೆವ ಸಲುವಾಗಿ ಬಂಗಾಳ ಸರಕಾರದ ವ್ಯವಸಾಯ ಇಲಾಖೆಗೆ ೫೦ ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟಿರುವನಂತೆ.

ಯಮುನಾ ನದಿಯಲ್ಲಿ ಸಪ್ಪಲ್ಲಿಯೇ ನೆರೆಬರುವ ಪ್ರಕೋಪ [illegible] ಹಾವಳಿಯಾಗಬಹುದೆಂಬ ಸಂಶಯವಿದೆ.

ದಕ್ಷಿಣ ಕನ್ನಡ

ಮಂಗಳೂರು: — ಮಹಿಳಾಸಭೆಯ ಕಾರ್ಯದರ್ಶಿಗಳು ಶ್ರೀಮತಿ ನಮಂಪಳ್ಳಿ ಲಲಿತಾಬಾಯಿ ಮತ್ತು ಶ್ರೀಮತಿ ಮಂಜೇಶ್ವರ ಅಂಬಾಬಾಯಿ ಇವರು ನಮಗೆ ಈ ರೀತಿ ಬರೆಯುತ್ತಾರೆ.

ಸಭೆಯಲ್ಲಿ ವೆಂಕಟ ಎಂಟರ್‌ಟೈನಮೆಂಟು ಮತ್ತು ಫೆನ್ಸಿ ಸೇಲು' ಈ ತಿಂಗಳ ಅಂತ್ಯಕ್ಕೆ ಜರುಗಿಸಬೇಕೆಂದು ನಿಶ್ಚಯಿಸಿದ್ದೇವೆ. ಸರಿಯಾದ ತಾರೀಕು ಹಿಂದಿನಿಂದ ತಿಳಿಸಲಾಗುವುದು. ಈ ವರೆಗೆ ಹಣದಿಂದಲೂ ಮನೋರಂಜನೆಗಿಂತ ಕಳೆ ಹಿಡಿದ ವಸ್ತುಗಳಿಂದಲೂ ಸಹಾಯ ಮಾಡಿದ ಈ ಕೆಳಗೆ ನಮೂದಿಸಿದ ಗೃಹಸ್ಥರನ್ನು ಮತ್ತು ಗೃಹಿಣಿಯರನ್ನು ನಾವು ತುಂಬಾ ಅಭಿನಂದಿಸುತ್ತೇವೆ. ಸಭೆಗೆ ಕೊಟ್ಟ ಪ್ರತಿ ಒಂದು ಪೈಯೂ ಸಭೆಯ ಸತ್ಕಾರ್ಯಗಳನ್ನು ಹೆಚ್ಚಿಸುವುದಕ್ಕೆ ವಿನಿಯೋಗಿಸಲ್ಪಡುವುದೆಂದು ಬೇರೆ ಹೇಳಬೇಕಾದ್ದಿಲ್ಲ. ಇದುವರೆಗೂ ಈ ತನಕ ಸಹಾಯ ಮಾಡದೆ ಇದ್ದ ಸಭೆಯ ಮೆಂಬರರೂ ಇತರ ಹಿತಚಿಂತಕರೂ ತಮ್ಮಿಂದಾಗುವಷ್ಟು ಸಹಾಯವನ್ನು ಇನ್ನಾದರೂ ಮಾಡಬೇಕೆಂದು ಕೋರುತ್ತೇವೆ. ಅಂತಹ ಸಹಾಯವನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವುದು. ಸಭೆಯ ಆಯವ್ಯಯದ ಪಟ್ಟಿಯನ್ನು ಲೆಕ್ಕಪರಿಶೋಧನೆಗೆ ಒಳಪಟ್ಟ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

ಸಭೆಗೆ ಈ ತನಕ ಸಹಾಯಮಾಡಿದವರ ಹೆಸರುಗಳು —

ಮಿಸೆಸ್ ಕಾರ್ನಾಡ ಕಲ್ಯಾಣಿಬಾಯಿ, ಮಿಸೆಸ್ ಬಿ ಕಲ್ಯಾಣಿ ಅಮ್ಮ, ಮಿಸೆಸ್ ಎನ್ ಎಸ್ ಪ್ರಭು, ಮಿಸೆಸ್ ಮಂಜೇಶ್ವರ ಅನಂತ ಕೃಷ್ಣ ರಾವ್, ಮಿಸೆಸ್ ಪದ್ಮನಾಭ ಭಟ್, ಮಿಸೆಸ್ ವಿಟ್ಠಲ ಭಟ್, ಮಿಸೆಸ್ ಕೋನ್ನಿ ಮಂಗೇಶ ರಾವ್, ಮಿಸೆಸ್ ಎನ್ ಲಕ್ಷ್ಮೀಬಾಯಿ, ಮಿಸೆಸ್ ಯು ಅಂಬಾಬಾಯಿ, ಮಿಸೆಸ್ ಲಲಿತಾಬಾಯಿ, ಮಿಸೆಸ್ ಜಾನ್ಹವಿಬಾಯಿ, ಮಿಸೆಸ್ ರಾವ್, ಮಿಸೆಸ್ ಫರೆಶ್ವರ ರಾಮ ರಾವ್, ಮಿಸೆಸ್ ಎಚ್ ಸುಶೀಲಾಬಾಯಿ (ಕೋಕಣಾಡ), ಮಿಸೆಸ್ ಬಸಪ್ಪಾ, ಮಿಸೆಸ್ ನಿಯಂಪಳ್ಳಿ ರಾಮರಾವ್ (ಮುಂಬಯಿ), ಮಿಸೆಸ್ ನಿಯಂಪಳ್ಳಿ ಸುಬ್ಬರಾವ್ (ಮಂಗಳೂರು), ಮಿಸೆಸ್ ಸುಬ್ಬರಾಯನ್ (ಕುಮಾರ ಮಂಗಲದ ಜಮೀನ್ದಾರಿಣಿ), ಮಿಸೆಸ್ ನಗರ ಶ್ರೀನಿವಾಸ ರಾವ್, ಮಿಸೆಸ್ ಕರಂಜಿ ರಾವ ರಾವ್, ಮಿಸೆಸ್ ಭಟ್, ಮಿಸೆಸ್ ಅಮ್ಮಂತಾಯಿ (ಮದ್ರಾಸು), ಮಿಸೆಸ್ ಕುಮುದಬಾಯಿ ರಂಗನಾಥನ್ (ಮದ್ರಾಸು), ಮೆಸರ್ಸ್ ನಗರಕಾರ್, ಮೆಸರ್ಸ್ ಗುರು ಪ್ರಕಾಶ್, ಮೆಸರ್ಸ್ ಶಾರದಾ ಬ್ರದರ್ಸ್, ಮತ್ತು ಮಿಸ್ಟರ್ ಮಂಕಿಕ ರಾಮರಾವ್.

ದಕ್ಷಿಣ ಕನ್ನಡ ಜಿಲ್ಲಾ ಬನವೆ ಪರಿಷತ್ತಿನ ಸ್ವಯಂಸೇವಕರ ನಿಯಮಗಳು — ೧ ಸ್ವಯಂಸೇವಕರ ಪರಿಷತ್ತಿನ ಕೆಲಸವನ್ನು ಮಾಡುತ್ತಿರುವ ಸಮಯದಲ್ಲಿ ಖಾದಿ ಧರಿಸಿದವರಾಗಿರಬೇಕು. ೨ ಯಾವತ್ತು ಪರಿಷತ್ತಿನ ಕೆಲಸಗಳನ್ನು ವಿಶ್ವಾಸಪೂರ್ವಕ ನೆರವೇರಿಸುತ್ತ ಮೇಲಧಿಕಾರಿಗಳ ಆಜ್ಞೆಗೆ ಬದ್ಧರಾಗಿರತಕ್ಕದ್ದು. ೩ ಸ್ವಯಂಸೇವಕರು ತಮ್ಮ ಖರ್ಚುಗಳನ್ನು ತಾವೇ ಕಾಣಲು ಸಿದ್ಧರಾಗಿರತಕ್ಕದ್ದು. ೪ ಯಾವ ತರದ ಕಾರಣವನ್ನು ಕೊಡದೆ ಸ್ವಯಂಸೇವಕರನ್ನು ಸೇರಿಸಿಕೊಳ್ಳದೆ ಇರುವ ಅಧಿಕಾರವು ಮತ್ತು ಸೇರಿಸಿಕೊಂಡ ಸ್ವಯಂಸೇವಕರನ್ನು ಕೂಡಾ ಕಾರಣ ಕೊಡದೆ ಅಗತ್ಯಕಂಡಲ್ಲಿ ತಳ್ಳಿಹಾಕುವ ಅಧಿಕಾರವು ಸಂಬಂಧಪಟ್ಟ ಅಧಿಕಾರಿಗಳಿಗೆ ಇರತಕ್ಕದ್ದು. ೫ ಈ ಸ್ವಯಂಸೇವಕ ದಳವು ಪರಿಷತ್ತು ಮುಗಿಯುವ ವರೆಗೆ ಜಾರಿಯಲ್ಲಿರತಕ್ಕದ್ದು. ಪರಿಷತ್ತಿನ ಸ್ವಾಗತ ಕಮಿಟಿಯವರು ಪ್ರತಿಯೊಬ್ಬ ಸ್ವಯಂಸೇವಕರಿಗೆ ಅವರು ಅಪೇಕ್ಷಿಸಿದ್ದಲ್ಲಿ ಯೋಗ್ಯತಾ ಪತ್ರವನ್ನು ಕೊಡತಕ್ಕದ್ದು.

ಮಂಗಳೂರು ಸರ್ಕಲಿನ ದೇವಸ್ಥಾನ ಕಮಿಟಿಯ ಸಭೆಯು ಇದೇ ಬರುವ ತಾರೀಕು ೨೩ನೇ ಆದಿತ್ಯವಾರ ದಿನ ಜರಗುವದು.

ಮಂಗಳೂರಲ್ಲಿ ಇನ್ನೊಂದು ಸಬ್ ಕೋರ್ಟನ್ನು ತೆರೆಯಬೇಕೆಂದು ಹೈ ಕೋರ್ಟಿನ ಶಿಫಾರಸು ಆಗಿರುತ್ತದಂತೆ.

ಹಜೂರು ಶಿರಸ್ತೇದಾರರಾದ ಶ್ರೀ ಕೆ. ರಾಮಪಯ್ ರಾಜರು ಹಂಗಾಮಿ ಡಿಪ್ಯುಟಿ ಕಲೆಕ್ಟರರಾಗಿ ಕೊಯಮುತ್ತೂರಿಗೆ ವರ್ಗ ಹೊಂದುವರು. ರಜೆಯ ಮೇಲಿರುವ ಡಿ. ಬಿ. ಇಂಜಿನಿಯರಾದ ಶ್ರೀಯುತ ಯು. ಸಂಜೀವರಾಯರಿಗೂ ಕೊಯಮುತ್ತೂರಿಗೆ ವರ್ಗವಾಗುವದು.

ದಿ ಕೆನರಾ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳ ಸಂಘದವರು ತಿರುಚಿನಾಪಳ್ಳಿಯ ಕಲೆಕ್ಟರರಾದ ರಾಯಬಹದ್ದೂರ್ ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಭವನದಲ್ಲಿ ಮೊನ್ನೆ ಬುಧವಾರ ಘಂಟೆ ೫-೩೦ಕ್ಕೆ ದಿವಂಗತ ಅಡಿಗೆ ಪದ್ಮನಾಭಯ್ಯನವರ ನಿಧನದಿಂದ ತಮಗಾದ ದುಃಖವನ್ನು ಪ್ರಕಟೀಕರಿಸಲು ಕೂಡಿಸಿದರು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡ ಮೆಂಬರರ ಬರುವ ಸಾಧಾರಣ ಸಭೆಯು ಡಿಸ್ಟ್ರಿಕ್ಟ್ ಬೋರ್ಡು ಆಫೀಸಿನಲ್ಲಿ ಇದೇ ಬರುವ ೨೯ನೇ ಶನಿವಾರ ಮಧ್ಯಾಹ್ನ ಘಂಟೆ ೨ ಕ್ಕೆ ನಡೆಯುವದು. ಈ ಮೀಟಿಂಗಿನ ಮುಂದೆ ೧೯೩೦ ೩೧ನೇ ವರ್ಷದ ಆಡಳಿತೆಯ ವರದಿಯು ತರಲ್ಪಡುವುದು.

ದಿ ಮುಂಬಾಯಿ ಸ್ಟೀಮ್ ನೆವಿಗೇಶನ್ ಕಂಪೆನಿಯ ಸ್ಟೀಮರ ಮೊದಲನೆಯ ಸಾರಿ ನಿನ್ನೆ ಬಂದಿರುತ್ತದೆ.

ಇಲ್ಲಿಯ ಕೊಡಿಯಾಲಬೈಲ ಪ್ರೆಸ್ಸಿನಲ್ಲಿ ಮೊದಲು ಮನೇಜರರಾಗಿದ್ದು ಕೆಲವು ಸಮಯದ ಹಿಂದೆ ನಿವೃತ್ತರಾದ ಮಿ. ಜೆ. ಎಮ್. [illegible] ಕಳೆದ ಶುಕ್ರವಾರ [illegible] ಸ್ವರ್ಗಸ್ಥರಾದರು.

ಮದರಾಸು ಸರಕಾರದ ಮುಖ್ಯ ಮಂತ್ರಿಗಳಾಗಿರುವ ರಾಜಾ ಬೊಬ್ಬಿಲಿ ರಾಯರು ಇದೇ ಬರುವ ೨೮ನೇ ತಾರೀಕಿಗೆ ಮಂಗಳೂರನ್ನು [illegible] ಸುವರೆಂಬ ವಾರ್ತೆ ಇದೆ.

ಮಂಗಳೂರ ತಾಲೂಕು ಬೋರ್ಡ ಮೆಂಬರರ ಬರುವ ಸಾಧಾರಣ ಸಭೆಯು ಮಂಗಳೂರಿನಲ್ಲಿರುವ ತಾಲೂಕು ಬೋರ್ಡ ಆಫೀಸಿನಲ್ಲಿ ಇದೇ ಬರುವ ೨೭ನೆ ಗುರುವಾರ ಮಧ್ಯಾಹ್ನ ಘಂಟೆ ೨ಕ್ಕೆ ಜರಗುವದು.

ಇಲ್ಲಿಗೆ ಕಲೆಕ್ಟರರಾಗಿ ವರ್ಗವಾಗಲ್ಪಟ್ಟ ಮಿ. [illegible] ಮೊರೆಗಳವರ ನಿನ್ನೆ ದಿವಸ ಚಾರ್ಜನ್ನು ವಹಿಸಿಕೊಂಡಿರುವರು.

ಕುಂಜಿಲ್ ಪಳ್ಳಿ — [illegible] ಸ್ವದೇಶಾಭಿಮಾನಿ'ಯಲ್ಲಿ ಪ್ರಕಟಿಸೋಣಾದ [illegible]

ಪುತ್ತೂರು — [illegible]

ಉಚ್ಚಿಲ — [illegible]

ಕಾಪು — [illegible]

ಇಲ್ಲಿ ಮೊದಲು ಒಂದು ಬೆಟ್ ಪೋಲೀಸ್ ಸ್ಟೇಶನ ಇತ್ತು. ಆದರೆ ಕೆಲವು ವರುಷಗಳಿಂದ ಇದನ್ನು ತೆಗೆದಿರುವರು. [illegible] ದೊಂಬಿಗಳಿಗೆ ಕೋರ್ಟುಗಳಲ್ಲಿ ವ್ಯವಹರಣೆಯಾಗಿ [illegible]ಯಾದ ಸಂಗತಿಯು ಎಲ್ಲರೂ ಬಲ್ಲರಷ್ಟೇ. ಈಗ ಇಂಥಾ ದೊಂಬಿಗಳ ಸ್ವಲ್ಪ ಮಟ್ಟಿಗೆ ನಿಂತಿರುತ್ತವಾದರೂ ಜುಗಾರಾಟವು ತುಂಬಾ ಪ್ರಬಲವಾಗಿರುತ್ತದೆ. ಪೇಟೆಯಲ್ಲಿ ಮನೆ ದಿವಸಂತೆ ರಾತ್ರಿಗಳಲ್ಲಿ ಜುಗಾರಾಟವು ನಡೆಯುತ್ತಿರುವದೆ. ಪೋಲೀಸರು ಬರುತ್ತಾರೆ ಹೋಗುತ್ತಾರೆ. ಅನೇಕ ವೇಳೆ ನೋಡಿದರೂ ನೋಡದ ಹಾಗೆಯೇ ಹೋಗುವುದೂ ಉಂಟು. ಕಾರಣ ಬೇಲಿಯೇ

ಕರ್ನಾಟಕ ಎಗ್ಯು ಮಿಕ್ಸ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯಂಝಾ, ಬಹು ದಿನದ ಜ್ವರ, ಹಾಡಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು ಇದರಿಂದ ಬೆವರು ಬಂದು, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ

ದೊಡ್ಡ ಬಾಟ್ಲಿ ಕಿಮ್ಮತು ೧—೪—೦, ಸಣ್ಣದಕ್ಕೆ ೦—೧೪—೦

ಎಲ್ಲ ಕಡೆಗೂ ಔಷಧವನ್ನು ಮಾರುವಗೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು ದಿ ಊಲನ್ ಮಾರ್ಟ್, ಮಂಗಳೂರು	ಕರ್ನಾಟಕ ಬ್ರದರ್ಸ್, ಗಿರಿಗಾಂವ, ಮುಂಬಯಿ

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.



ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 500 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಗಾಯ್ತು 300 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸುಗಳು, ಪ್ರತಿ ಒಬ್ಬರ ಕೈಲಿಹಿಡಿದುಕೊಂಡು ಹೋಗಲು ಅನುಕೂಲಿಸುವ ಚಂದ್ರಕಾಂತಿ 10 ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನುಗಳ ಸ್ಟವ್‌ಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು ಎಲೆಕ್ಟ್ರಿಕ್ ಕರೆಗಂಟೆ ಗುಂಡಿಗಳು ರೋಜಾ ಹುವ್ವಿನ ಕುರಾಯಿಗಳು, ಬ್ಯಾಟರಿ ಬೆಂಕಿಕಡ್ಡಿ ಇಲ್ಲದೆ ಬೀಡಿ ಮತ್ತು ಸಿಗರೆಟ್ ಹಚ್ಚುವ ಎಲೆಕ್ಟ್ರಿಕ್ ದೀಪಗಳ ಮತ್ತು ಇವುಗಳ ಬಿಡಿ ಭಾಗಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ



ಕ್ರಯ ಪಟ್ಟಿಗೆ ಕಾಗದ ಬರೆಯಿರಿ ಈ ವಿಳಾಸಕ್ಕೆ ಬರೆಯಿರಿ—

ಎ ಆರ್ ಖಲೀಲ್,

ಟೈಸಿಕಲ್ ಸ್ಟವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು

18 11 27) ನಗರ್ತಪೇಟೆ, ಬೆಂಗಳೂರು ಸಿಟಿ

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ ಕಾರ್ಯಾರ್ಜನ ಕೂಲವನ್ನೀಯುವದು. ಅನೇಕರಿಗೆ ನಮ್ಮ ತಾಯಿತ್ ನಂಬಿಕೆಯನ್ನುಂಟು ಮಾಡಿರುತ್ತದೆ

೧ನೇ ನಂಬ್ರ ೧॥ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ ಸ್ಪೆಷಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ ಪ್ರತೀಕ್ಷೆಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು ಟಪಾಲು ಖರ್ಚು ಬೇರೆ

ಶಿವರಾಮ ಭಟ್ಟ ತೆಂಗಿನಮನೆ,

೯—೨೭ ಸಳ್ಳೆಕೈಲ್ ಪೋಸ್ಟು ಕಡೂರ್ ಡಿಸ್ಟ್ರಿಕ್ಟ

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಫಿವರ್ ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಕ ರೂ ೧

ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪

ಬಾಟ್ಲಿವಾಲರ ಕಊರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೪

ಬಾಟ್ಲಿವಾಲರ ಕ್ಲೋರಿಡಿನ ಮಿಕ್ಸ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ ಆಣೆ ೧೪

ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ್ ಗುಳಿಗೆಗಳು—ಧಾತು ಪುಷ್ಟಿಕರ ರೂ ೧—೮—೦ ರೂ ೧—೪—೦ ೧—೧೨—೦

ಬಾಟ್ಲಿವಾಲರ ಹುಳ ಕಡ್ಡಿ ಔಷಧ ರೂ ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ ರೂ ೦—೬—೦ LIBERAL DISCOUNT TO TRADE.

ಕಾರಖಾನೆ,—CAWASHAPUR, BOMBAY

ಎಲ್ಲಾ ಕಡೆಗಳಲ್ಲಿ ಡಾ. ಯಚ್ ಎಲ್ ಬಾಟಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

ಏಜಂಟರು ಬೇಕಾಗಿದ್ದಾರೆ. Sayani Road P O Cadell Road, Bombay No 14.

ಕೇಸರಿಯ ಪ್ರದರ ಲೋಧ್ರ

ಗರ್ಭಾಶಯ ರೋಗನಿವಾರಿಣೀ

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, ಬಂಗಾರಕ್ಕೆ ಸುವಾಸನೆಯಾದುದು ಎಂದೂ ಇನ್ನು ಕೆಲವರು 'ರತ್ನಖಚಿತವಾದ ಆಭರಣ'ವೆಂದೂ 'ಸರ್ವಾಭೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು

ಈ ಔಷಧರಾಜವನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ

ಇದು ಋತುಕಾಲದ ಋತುಸ್ರಾವದೋಷ, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು ಋತುವು ನಾನಾ ಬಣ್ಣಗಳಿಂದ ಸ್ರವಿಸುವುದು ಪ್ರದರ (ಬಿಳುಪು) ರೋಗ ಸೂತಿಕಾವಾತವು ಸಂತಾನಹೀನತೆ ಗರ್ಭ ಪಿಶಾಚಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ಶರೀರದಲ್ಲಿ ರಕ್ತಹೀನವಾಗಿರುವುದು ಅಜೀರ್ಣ ಮಲಬದ್ಧತೆ ಸೊಂಟನೋವು, ಕಾಲುಸೆಳೆತ, ಉಬ್ಬಸ ಮೊದಲಾದ ವ್ಯಾಧಿಗಳೂ ಇತರ ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು

ಈ ಲೋಧ್ರವು ಔಷಧ ವ್ಯಾಪಾರಿಗಳಲ್ಲೆಲ್ಲಾ ದೊರೆಯುವು ದೊಡ್ಡ ಸೀಸೆ 1ಕ್ಕೆ 3 ರೂಪಾಯಿ, ಚಿಕ್ಕದು ರೂ 1—10—0

ವಿಳಾಸ— ಕೇಸರೀ ಕುಟೀರಂ,

TELEGRAMS – KESARI ಆಯುರ್ವೇದ ಔಷಧಶಾಲಾ P B 752 ಎಗ್ಮೋರು, ಮದರಾಸು.

15-4-27 ಬ್ರಾಂಚ್ — 18 ಬಳೆಪೇಟೆ, ಬೆಂಗಳೂರು

ಮಂಗಳೂರ ಏಜಂಟರು — ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.



ನಮ್ಮ ಕಡಿಮೆ ಕ್ರಯವನ್ನು ನೆನಪಿನಲ್ಲಿಡಿರಿ.

ಜಗತ್ಪ್ರಸಿದ್ಧವಾದ "ಜಿಗ್—ಜೇಗ್" ಗಡಿಯಾರ

ಸ್ಯಾಜು 8 x 4½ ಇಂಚುಗಳು ರೂಪಾಯಿ 3—0—0

ಮೂರು ವರುಷಗಳಿಗೆ ಗ್ಯಾರಂಟಿಯುಳ್ಳದ್ದು ಸರಿಯಾದ ಸಮಯ ಕೊಡುವದು ಗಟ್ಟಿಯಾದ ಯಂತ್ರಗಳಿಂದ ಮಾಡಲ್ಪಟ್ಟದ್ದು ನೋಡಲು ಬಹು ಅಂದವಾಗಿದ್ದು ಚಿತ್ರದಲ್ಲಿ ತೋರುವಂತೆ ಮನೋಹರವಾದ ಸ್ಟ್ಯಾಂಡಿನ ಮೇಲೆ ನಿಲ್ಲಿಸಲ್ಪಟ್ಟಿರುತ್ತದೆ ಹಲವರು ಉಪಯೋಗಿಸಿ ತೃಪ್ತಿಹೊಂದಿರುವರು ಬಹು ಚಿತ್ತಾಕರ್ಷಕ ಮತ್ತು ಶೃಂಗಾರಿತವಾದುದು

ಕ್ರಯ ರೂಪಾಯಿ 3—0—0

ಏಜಂಟರು—

ಥರಿಯಾ ಲಕ್ಷ್ಮೀ ಆಂಡ್ ಕಂಪೆನಿ

ಪೋಸ್ಟ್ ಬಾಕ್ಸ್ 265, ಮದರಾಸು

ಫ್ಯಾನ್ಸಿ ಲೀವರ್ ಪಾಕೆಟ್ ವಾಚ್

(15 ಬಹುಮಾನಗಳ ಸಹಿತ ರೂ 4—8—0)

ಈ ಗಡಿಯಾರವು ಬಹುಮಾನಗಳಿಗೆ ಪ್ರತ್ಯೇಕವಾಗಿ ತಯಾರಿಸಿ ಇಡಲ್ಪಟ್ಟಿದೆ



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅವಶ್ಯವಾಗಿಯೂ ಇರುವಂತೆ ತಿಕ್ಕ ಸ್ಟೈಲಿನಲ್ಲಿ ತಯಾರಿಸಿ, ಹಿಂದುಗಡೆ ಚಿತ್ರಕೆಲಸ ಮಾಡಲ್ಪಟ್ಟಿರುವುದು ಮತ್ತು ಒಳಗಡೆ ಕೆಂಪು ಕೆತ್ತಲ್ಪಟ್ಟ ಗಿಲ್ಟ್ ಮೂವ್ಮೆಂಟ್ ಮಾಡಿರುವದು ಫಾಳಿ, ಬಿಳಿ ಸೆಕೆಂಡ್ ಹಿಂಭಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು, ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟಿನಿಂದ ಈ ಗಡಿಯಾರವನ್ನು ತಯಾರಿಸಿದೆ ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ಕೊಳ್ಳುವವರಿಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು ಬಹುಮಾನಗಳ ವಿವರ: ಫೌಂಟನ್ ಪೆನ್ನು 1 ಹೇರಾಯಿಲ್ ಬಾಟಲ್ 1, ವಜ್ರದ ಗುಂಡಿಗಳು 4 ಪಾಕೆಟ್ ಕನ್ನಡಿ ೧, ಗಡಿಯಾರ ಸರಪಣಿ 1, ಸುವಾಸನೆ ಸೋಪು ಪೆನ್ನು ಕತ್ತಿ 1, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ, ರೋಲ್ಡ್ ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1 ವಂತದ ಬಾಚಣಿಗೆ 1, ಕೈಗುಂಡಿಗಳ ಸೆಟ್ ೧, ಕೈಚೀಲ 1, ಈ 15 ಬಹುಮಾನಗಳು ಮತ್ತು ಹಾಗೂ ಯಾವ 3 ವರ್ಷ ಗ್ಯಾರಂಟಿ ಸಹಿತ

ಗಡಿಯಾರ ಒಂದಕ್ಕೆ ಕ್ರಯ ರೂ 4—8—0.

THE ENGLISH EMPORIUM,

P. O. box 105 MADRAS.

[illegible] ಇಂಥ ಕೆಲಸಗಳಿಗೆ ಕೈಯಿಕ್ಕಿದರೆ [illegible] ಪೋಲೀಸು ಅಧಿಕಾರಿಗಳು ಇಂಥ [illegible] ಜಾಗ್ರತೆ ವಹಿಸುವದು ಉತ್ತಮ

[illegible]

ಪಾಂಗಾಳ: — ಈ ಗ್ರಾಮಕ್ಕೆ [illegible]

ಮೂಲ್ಕಿ — [illegible] Bearing of Psychology on Education ಎಂಬ ವಿಷಯ [illegible]

ವಿವಿಧ ಸಮಾಚಾರಗಳು.

ಸಮ್ಮತಿಯ ವಯಸ್ಸು.

[illegible]

ಜಮಶೆಡ್‌ಪುರದ ಮುಷ್ಕರದ ಸಮಾಪ್ತಿ.

ಜಮಶೆಡ್‌ಪುರದ [illegible]

ಕರ್ನಾಟಕ ಭಾಷೆಯಲ್ಲಿ ಕನ್ನಡಿಗರ ಬಗ್ಗೆ.

THE MOTORIST.

ಮೋಟರಿಸ್ಟ.

Edited by —V. S. KUDVA Esqr,
Worksmanager, C. P. C. Co, Ltd, Mangalore

Manager—V. K. Kamath Esqr,
Sharada Press, Mangalore

ಸಂಪಾದಕರು— ವಿ ಎಸ್ ಕುಡುವಾ,
ವರ್ಕ್ಸ್‌ಮೆನೇಜರ, ಸಿ ಪಿ ಸಿ ಕಂಪನಿ, ಲಿಮಿಟೆಡ್, ಮಂಗಳೂರು

ಮೆನೇಜರ್ — ವಿ ಕೆ ಕಾಮತ್,
ಶಾರದಾ ಛಾಪಖಾನೆ ಮಂಗಳೂರು

ನೂತನ ಪತ್ರಿಕೆ. ಎರಡು ತಿಂಗಳಿಗೊಂದು ಬಾರಿ ಹೊರಡುವುದು.

ಪ್ರಥಮ ಸಂಚಿಕೆ— ಜನವರಿಯಲ್ಲಿ.

ಸರಿಯಾಗಿ ವ್ಯವಸ್ಥೆಗೊಳಿಸಲ್ಪಟ್ಟ ಮೇಲೆ ಪ್ರತಿ ತಿಂಗಳಿಗೊಂದು ಬಾರಿ ಹೊರಡುವುದು.

ಉದ್ದೇಶ— 1 ಕರ್ನಾಟಕ ಭಾಷೆಯಲ್ಲಿಯೇ ಮೋಟರ ವಾಹನಗಳ ಯಂತ್ರಿಕ ಪರಿಜ್ಞಾನವು ಮೋಟರ ಗಾಡಿಯನ್ನು ನಡಿಸುವ ಪ್ರತಿಯೊಬ್ಬನಿಗೂ ಉಂಟಾಗುವಂತೆ ಮಾಡುವುದು.

2 ಮೋಟರ ಗಾಡಿಗಳಲ್ಲಿ ಉಂಟಾಗುವ ಸುಧಾರಣೆಗಳನ್ನು ಕರ್ನಾಟಕೀಯರ ತಿಳುವಳಿಕೆಗೆ ಕೂಡಲೇ ತರುವುದು.

3 ಮೋಟಾರ ಗಾಡಿಗಳ ಮಾರ್ಕುಗಳ ಬಗ್ಗೆ [illegible] ಕೊಡುವುದು.

4 ಮೋಟಾರ ಗಾಡಿಗಳನ್ನೋಡಿಸುವ ಕಲೆಯನ್ನು ಅಭಿವೃದ್ಧಿಪಡಿಸುವುದು.

5 ಮೋಟಾರ ಬಸ್ಸುಗಳ ವ ಬಕ್ಸುಗಳ ಸರ್ವೀಸುಗಳ ವ್ಯವಸ್ಥೆ ಬಗ್ಗೆ ಉಪಯುಕ್ತ ಸೂಚನೆಗಳನ್ನು ಕೊಡುವುದು.

6 ಮೋಟಾರ ಕಾನೂನಿನ ವಿಷಯ ಉಪಯುಕ್ತ ವಾದವನ್ನು ನಡಿಸುವುದು.

7 [illegible] ಕೋರ್ಟುಗಳಲ್ಲಿ [illegible] ಗಳ ನ್ಯಾಯಾನ್ಯಾಯಗಳನ್ನು ತರ್ಕಿಸುವುದು.

8 ಮೋಟಾರ ವೃತ್ತಿಯಲ್ಲಿ ನಿರತರಾದವರೆಲ್ಲರಿಗೂ ಹಿತಕರವಾದ ವಿಷಯಗಳನ್ನು ಪ್ರಸ್ತಾಪಿಸುವುದು.

ಚಂದಾಹಣ— ವರ್ಷಕ್ಕೆ ರೂಪಾಯಿ ಮೂರು. ಬಿಡಿಸಂಚಿಕೆಗೆ ಆಣೆ ಹದಿನೆರಡು.

ಪ್ರತಿ ಸಂಚಿಕೆಯಲ್ಲಿಯೂ ಯಂತ್ರಿಕ ಪರಿಜ್ಞಾನದ [illegible] ಚಿತ್ರಗಳು [illegible] ಚಂದಾ ಹಣದ ಅಧಿಕಾಂಶವು ಚಿತ್ರಗಳನ್ನು [illegible] ಮೋಟಾರನ್ನು [illegible] ಟಸ್ಸನವ್ಯಾಪೀಕರು, ಮೋಟರ ಮಿಕೆನಿಕ್ [illegible] ಇವರಿಗೆ ಬಹಳ ಉಪಕಾರಿ [illegible]

ಪ್ರಥಮ ಸಂಚಿಕೆಯಿಂದ "ಮೋಟರ ಕೈಪಿಡಿ" (Motor Manual) ಎಂಬ ಚಿತ್ರಸಹಿತವಾದ ಪುಸ್ತಕವು ಪ್ರತ್ಯೇಕ ಪುಟ ಸಂಖ್ಯೆಯಿಂದ ಕ್ರಮವಾಗಿ ಪ್ರಕಟಿಸಲ್ಪಡುವುದು.

ಈ ಪತ್ರಿಕೆಯ ವಿಷಯ [illegible] ಬರೆದು ತಿಳಿಯಬಹುದು.

THE MANAGER,
THE MOTORIST,
Car Street, Mangalore

ಮೋಟರಿಸ್ಟ ಪತ್ರಿಕೆಯ ವ್ಯವಸ್ಥಾಪಕರು
[illegible]
[illegible]

[illegible]

ಬಾಲ್ಯವಿವಾಹ ನಿರೋಧ ಮಸೂದೆ.

[illegible] ಬಾಲ್ಯವಿವಾಹ ನಿರೋಧ ಮಸೂದೆಯ [illegible]

ಲಾಹೋರು ಮುಸಲರ ಸಭೆ

[illegible]

[illegible]

ಎಸೆಂಬ್ಲಿಯ ಪ್ರೆಸಿಡೆಂಟರು.

[illegible]

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೆ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ-ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11 45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವಾ 1-30ಕ್ಕೂ ಬೆಳ್ತಂಗಡಿಗೆ 1 45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟ್ಯಾಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನ್ನೂರು ಪ್ರಾಂತಗಳಿಗೂ ಯಾವ ವಿಧವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12 30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2 30ಕ್ಕೆ ಕೊಟ್ಟಿಗೆಹಾರಕ್ಕೂ ಮಧ್ಯಾಹ್ನ 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಾಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8 30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ. ಎನ್. ಹನುಮಂತಪ್ಪ, ಫ್ಯೂರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ. ಸಿ. ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕಂಬಳ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S. K. Mangalore.

ನೋಟೀಸು.

ಪುತ್ತೂರು ತಾಲೂಕು ಬೆಳ್ಳಾರೆ ಮಾಗಣೆ [illegible] ಗ್ರಾಮದ ಮುದ್ದ ಫಕೀರ ಗೌಡನ ಹೆಂಡತಿ [illegible] ಈ ಮೂಲಕ ಸಮಸ್ತ ಜನರಿಗೆ ತಿಳಿಸುವದೇನೆಂದರೆ

ನನ್ನನ್ನು ಪಾಣಿಗ್ರಹಣ ಮಾಡಿದ ಗಂಡನಾದ ಮುದ್ದ [illegible] ಗೌಡನು ಈಗ ಕೆಲವು ಕಾಲದಿಂದ ಚಿತ್ತಭ್ರಮೆಯ [illegible] ಅವನಿಗೆ ಚಿಕಿತ್ಸೆ ಮಾಡಿ ಇರುತ್ತಿದ್ದೆ ಆದರೆ ಅವನು [illegible] ಮಾಡಿಸುವ ಮುಂಚೆಯೇ ಮನೆ ಬಿಟ್ಟು ಓಡಿ [illegible] ತಿರುಗುಳಿಯಾಗಿರುತ್ತಾನೆ ನಮಗೆ ಸ್ವಲ್ಪ [illegible] ಆಸ್ತಿ ವ ಬೇರೆ ಹರಸೂತ್ತು ನೋಟಿನ ಮೇಲೆ [illegible] ಇರುತ್ತದೆ. ಅವನಿಂದ ಕೆಲವು ಜನರು ಪುಸಲಾಯಿ [illegible] ದಸ್ತಾವೇಜುಗಳು ಯಾ ಮೇಲು ಚೀಟುಗಳು [illegible] ಪ್ರಯತ್ನಿಸುವದಾಗಿ ತಿಳಿಯುತ್ತೇನೆ ಈ ಪ್ರಕಾರ [illegible] ದರೂ ದಸ್ತಾವೇಜುಗಳು ಬರಸಿಕೊಂಡವಕ್ಷಕ್ಕೆ ಅವು [illegible] ತಕ್ಕವುಗಳಲ್ಲ ವ ನಮಗೆ ಯಾ ಆತನ ಸ್ಥಿರಚರ [illegible] ಬದ್ಧಪಡಿಸುವಂತಾದ್ದು ಅಲ್ಲ ಎಂಬುದು ಈ ಮೂಲಕ ತಿಳಿಸಲಾಗುತ್ತದೆ

॥ ಈ ಗೆರೆ ಅಕ್ಕು ಹೆಂಗಸಿನ ರುಜು

ಮೈಸೂರು ಸರ್ಕಾರ.

ಗ್ಯಾಲನೆಯ ಇಸವಿಯ ಮೈಸೂರು ದಸರಾ (ಅಖಿಲ ಭಾರತೀಯ) ಸರ್ವವಸ್ತು ಪ್ರದರ್ಶನವು ಮೈಸೂರು ನಗರದಲ್ಲಿ ಖಾಯಮಾಗಿ ಏರ್ಪಡಿಸಿರುವ ಪ್ರದರ್ಶನ ಶಾಲೆಯಲ್ಲಿ ಇದೇ ಅಕ್ಟೋಬರು ತಿಂಗಳಿನಲ್ಲಿ ೧೫ರಿಂದ ೩೧ನೇ ತಾರೀಖಿನ ವರೆಗೆ ನಡೆಯುವುದು ಕಲಾಕೌಶಲ್ಯವನ್ನು ಕೈಗಾರಿಕೆಯ ವಿಷಯ ಕವಾದ ನೈಪುಣ್ಯವನ್ನೂ ತೋರಿಸುವ ವಸ್ತುಗಳನ್ನೂ ಮತ್ತು ವ್ಯವಸಾಯೋತ್ಪನ್ನ ವಸ್ತುಗಳನ್ನೂ ಸಂಪದಭಿವೃದ್ಧಿಗೆ ಸಾಧಕವಾದ ವಸ್ತು ಸಂಪ್ರದಾಯಗಳನ್ನೂ ಅಲ್ಲಿ ಪ್ರದರ್ಶಿಸಲಾಗುವುದು ಯಂತ್ರೋಪಕರಣಗಳೇ/ಮುಂತಾದವುಗಳಿಂದ ಕೆಲಸ ಮಾಡಿಸಿ ಆ ಕಾಲದಲ್ಲಿ ಜನರಿಗೆ ತೋರಿಸುವುದಕ್ಕೆ ವಿದ್ಯುಚ್ಛಕ್ತಿಯೇನಾದರೂ ಅವಶ್ಯವಿದ್ದಲ್ಲಿ, ಅದನ್ನು ಮುಫತ್ತಾಗಿ ಒದಗಿಸಲಾಗುವುದು ಪ್ರಕಟಣೆಯ ಕೆಲಸಕ್ಕೂ, ವ್ಯಾಪಾರಕ್ಕೂ, ನಾನಾ ವಿಷಯಗಳನ್ನೂ ಪರಿಶೀಲಿಸಿ ತಿಳಿದುಕೊಳ್ಳುವುದಕ್ಕೂ ಇದು ಒಳ್ಳೆಯ ಸಮಯವಾಗಿದೆ

ಪ್ರದರ್ಶನದಲ್ಲಿ ತಮ್ಮ ವಸ್ತುಗಳನ್ನಿಡುವುದಕ್ಕೆ ಸ್ಥಳವನ್ನು ಅಪೇಕ್ಷಿಸುವವರೂ ಮತ್ತು ಪ್ರದರ್ಶನದ ವಿಚಾರವಾಗಿ ಇತರ ವಿವರಗಳನ್ನು ತಿಳಿಯಲಪೇಕ್ಷಿಸುವವರೂ ಸಹ, ಮೈಸೂರು ದಸರಾ ಪ್ರದರ್ಶನದ ಸೆಕ್ರೆಟರಿಯವರಿಂದ ಪ್ರಸಿದ್ಧ ಪತ್ರಿಕೆಯನ್ನು (ಪ್ರಾಸ್ಪೆಕ್ಟಸ್) ಪಡೆಯಬಹುದು

ಕೆ ಅನಂತಸಾಮಿ ರಾವ್,

ಸೆಕ್ರೆಟರಿ,

ಮೈಸೂರು ದಸರಾ ಎಗ್ಜಿಬಿಷನ್, ಮೈಸೂರು ಸಿಟಿ.

Wanted.

Young, energetic and trained (under present system) teachers of the S. S. L. C and Higher Elementary grades for the Shri Madananteshwar Temple Higher Elementary School Manjeshwar. Applications with testimonials should reach to the undermentioned address by the 15th October 1928 Gowd Saraswat Brahmin community applicants only need apply

Address — **M. Vaikunta Bhakta,**

Managing Trustee,

SHRI MADANANTESHWAR TEMPLE,

Manjeshwar.

ಆರೋಗ್ಯಶಾಲಿಯಾದ ಹುಡುಗಿಯು ಸುಖಿಯಾದ ತಾಯಿಯಾಗುವಳು.

ಇಂದಿನ ಹುಡುಗಿಯೇ ಮುಂದಿನ ತಾಯಿಯು ಸಣ್ಣ ಹುಡುಗಿಯಾಗಿದ್ದು ಹೆಂಗಸಾಗಲು ತೊಡಗುವಾಗಲೇ ಆರೋಗ್ಯ ಸೂತ್ರಗಳಿಗನುಸಾರವಾಗಿ ವರ್ತಿಸಿದರೆ ಮುಂದಕ್ಕೆ ಸುಖಿಯಾಗಿ ಬಾಳಬಹುದು ತಾವು ಮದುವೆಯಾದೊಡನೆ ಸಣ್ಣವರಾಗಿರುವಾಗ "ಫೆಲೂನಾ ಮಾತ್ರೆಗಳು ಹೆಂಗಸರಿಗೆ ಮಾತ್ರ" ದೊರೆಯಲಿಲ್ಲವೆಂದು ಪಶ್ಚಾತ್ತಾಪಬಟ್ಟು ಹಲವು ಸ್ತ್ರೀಯರು ನಮಗೆ ಪತ್ರಬರೆದಿರುವರು ಈ ವಿಷಯವನ್ನು ಚೆನ್ನಾಗಿ ನೆನಪಿಗೆ ತಂದು ಹೆತ್ತವರು ತಮ್ಮ ಮಕ್ಕಳು ಚಿಕ್ಕವರಾಗಿರುವಾಗಲೇ ಜಾಗರೂಕರಾಗಿರಬೇಕು.

ಫೆಲೂನಾ ಮಾತ್ರೆಗಳು

ಹೆಂಗಸರಿಗೆ ಮಾತ್ರ. ಎಲ್ಲಿಡೆಯಲ್ಲಿಯೂ, ಹೆಂಗಸರ ಸಂಖ್ಯೆಯನ್ನು ಗಣಿಸಿದೆ ಎಲ್ಲಾ ಪ್ರಾಯದ(ಚಿಕ್ಕವರು, ನಡು ಪ್ರಾಯದವರು, ವೃದ್ಧರು) ಸ್ತ್ರೀಯರಿಂದ ಬರುವ ಅಸಂಖ್ಯಾತ ಕೃತಜ್ಞತಾ ಪತ್ರಗಳಿಂದ, ಅವುಗಳಿಂದಾಗುವ ಅತ್ಯಾಶ್ಚರ್ಯ ಪರಿಣಾಮವು ವಿಶದವಾಗುವದು. ಸೌಖ್ಯಕೋರುವ ಆಶೆಯನ್ನೇ ತೋರಿಸುವಾಗ ಈ ಮಾತ್ರೆಗಳು ಮಾಡಿದ ವಿಶೇಷ ಸೌಖ್ಯತೆಯನ್ನು ವಿವರಿಸಲು ಸಾಧ್ಯವಿಲ್ಲ.

ಸ್ತ್ರೀಯರ ಔಷಧಿಯು.

ಸ್ತ್ರೀಯರ ಕೋಮಲ ಇಂದ್ರಿಯಗಳನ್ನು ಸಂಪಡಿಸಿ ಬಲಪಡಿಸುವವು **ಫೆಲೂನಾ ಮಾತ್ರೆಗಳು ಹೆಂಗಸರಿಗೆ ಮಾತ್ರ** ಹೆಂಗಸಿನ ಆ ಪ್ರಾಯ ಈ ಪ್ರಾಯಕ್ಕೆಂದು ಮಾಡಲ್ಪಡದೆ ಚಿಕ್ಕಂದಿನಿಂದ ಕಡೆಯ ವರೆಗೂ ಸೇವಿಸಲು ಅನುಕೂಲವಾಗಿ ಮಾಡಲ್ಪಟ್ಟಿವೆ ಅವು ಸಂಸಾರ ಜೀವನದಲ್ಲಿ ಹೆಂಗಸನ್ನು ಸುಸಜ್ಜಿತಳನ್ನಾಗಿಯೂ ಸುಖಿಯಾಗಿಯೂ ಮಾಡುವವಲ್ಲದೆ ಭವಿಷ್ಯಜ್ಜೀವನದಲ್ಲಿ ಅವಳೊಂದಿಗೆ ಇದ್ದು ಉತ್ಸಾಹಿತ ಸಂತೋಷ ಪೂರ್ಣ ಮತ್ತು ಸ್ಥಿರವಾದ ಆರೋಗ್ಯವನ್ನು ಒದಗಿಸುವವು

ಸ್ತ್ರೀ ಜಾತಿಗೆ ಸರ್ವಸಾಧಾರಣವಾಗಿ ಇದ್ದೇ ಇರುವ ಕಾಹಿಲೆಯಿಂದ ಪೀಡಿತರಾದ ಸ್ತ್ರೀ ವಾಚಕರು, ಇವುಗಳನ್ನು ಉಪಯೋಗಿಸುವುದರಿಂದ ತ್ವರಿತ ಗುಣವನ್ನು ಹೊಂದುವರು ಫೆಲೂನಾ ಮಾತ್ರೆಗಳು ಹುಡುಗಿಯ ಗಲ್ಲಗಳ ಮೇಲೆ ಗುಲಾಬಿ ಬಣ್ಣವನ್ನು ತಂದು ತಾಯಿಯಾಗಬೇಕೆಂಬ ಆತುರದ ಅವಳ ಮನೋರಥವನ್ನು ಪೂರೈಸಿ, ಪುಷ್ಪಳನ್ನಾಗಿ ಮಾಡಿ ಸಂತೋಷಮಯವಾದ ಆರೋಗ್ಯವನ್ನು ಕೊಟ್ಟು ಸುಖಿಯನ್ನಾಗಿ ಮಾಡುವವು

ಇಂಡಿಯಾ, ಬರ್ಮಾ ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸರಿಂದಲೂ ಮಾರಲ್ಪಡುವವು.

ಬಾಟಲಿಗೆ ರೂ 2/4

ಮುಖ್ಯ ಏಜಂಟರು— ಪಟೇಲ್ ಮತ್ತು ಧೊಂಡಿ ಪೋಸ್ಟು ಆಫೀಸು ಬೋಕ್ಸ್ 888 ಮುಂಬಾಯಿ

ಮದ್ರಾಸು ಸಂಸ್ಥಾನಕ್ಕೆ—

ದಾದಾ ಎಂಡ್ ಕೋ,
260 ಛೈನಾ ಬಜಾರ್ ರೋಡ್ ಮದರಾಸ್

ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕಟ್ಟುಗಳಲ್ಲಿ ಸಿಕ್ಕುವವು

Product of Graham Remedies Ltd Cape Town S A 86

ಮೆಕ್ ಕೋರ್ಮಿಕ್ ಡೀರಿಂಗ್

ಚಟ್ಟನೂಗಾ ಕಬ್ಬಿನ ಗಾಣಗಳು.

ಚಟ್ಟನೂಗಾ ಕಬ್ಬಿನ ಗಾಣಗಳು

ಕಬ್ಬುಬೆಳೆಸಲ್ಪಡುವ ಎಲ್ಲಾ ಸ್ಥಳಗಳಲ್ಲಿಯೂ, ಬಾಳುವಿಕೆ, ಹೆಚ್ಚು ರಸವನ್ನೆಳೆಯುವ ಶಕ್ತಿ, ಗಟ್ಟಿತನಗಳು ಇವುಗಳಿಗಾಗಿ ಹೆಸರು ಹೊಂದಿರುತ್ತವೆ

ಗಂಟೆಗೆ 88ರಿಂದ 250 ಗೆಲನು ರಸವೆಳೆಯುವ ರೀತಿಯ ಅನೇಕ ನಮೂನೆಗಳಲ್ಲಿ ಕಟ್ಟಲ್ಪಟ್ಟಿರುತ್ತವೆ

ಎತ್ತಿನ ಅಥವಾ ಬೆಲ್ಟು ಪವರುಗಳಿಗೆ ಅನುಕೂಲವಾಗಿದೆ

VOLKART BROS ENGINEERS

ಎಲ್ಲಾ ತರದ ಕೃಷಿ ಸಾಮಾನುಗಳು ದಾಸ್ತಾನು ಇವೆ

ARMENIAN STREET, MADRAS

ದಿವಂಗತ ಅಡಿಗೆ ಪದ್ಮನಾಭಯ್ಯನವರು.

ಕೆನರಾ ಹೈಸ್ಕೂಲಿನ ಮಾಜಿ ಮುಖ್ಯೋಪಾಧ್ಯಾಯರಾಗಿದ್ದು ತನ್ನ ಮುದಿತನದ ದೆಸೆಯಿಂದ ಕಳೆದ ಎರಡು ವರುಷಗಳ ಹಿಂದೆ ಕೆಲಸದಿಂದ ನಿವೃತ್ತರಾದ ಶ್ರೀಯುತ ಅಡಿಗೆ ಪದ್ಮನಾಭಯ್ಯನವರು ಕಳೆದ ಶುಕ್ರವಾರ ಪ್ರಾತಃಕಾಲ ದೈವಾಧೀನರಾದುದನ್ನು ತಿಳಿಸಲು ಬಹು ಸಂತಾಪ ಪಡುತ್ತೇವೆ

ಶ್ರೀಯುತರು ಗೌಡಸಾರಸ್ವತ ಬ್ರಾಹ್ಮಣರ ಒಂದು ಉಚ್ಚ ಕುಟುಂಬಕ್ಕೆ ಸೇರಿದವರು ಇವರು ೧೮೬೦ನೇ ಇಸವಿಯಲ್ಲಿ ಜನಿಸಿದರು ತನ್ನ ವಿದ್ಯಾಭ್ಯಾಸವನ್ನು ಗವರ್ನಮೆಂಟುಕೋಲೇಜಿನಲ್ಲಿ ಮುಗಿಸಿ ಮಿಶನ್ ಶಾಲೆಯಲ್ಲಿ ಉಪಾಧ್ಯಾಯ ವೃತ್ತಿಯನ್ನು ಅವಲಂಬಿಸಿದರು, ೧೮೯೧ನೇ ಇಸವಿಯಲ್ಲಿ ಕೆನರಾ ಹೈಸ್ಕೂಲು ತೆರೆಯಲ್ಪಟ್ಟೊಡನೆ ಮಿಶನ್ ಶಾಲೆಯನ್ನು ತ್ಯಜಿಸಿ ಕಡಿಮೆ ಸಂಬಳದ ಮೇಲೆ ಕೆನರಾ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಸೇರಿ ಕೆನರಾ ಹೈಸ್ಕೂಲಿನ ಅಭಿವೃದ್ಧಿಗಾಗಿ ತನಗಾದ ಕಷ್ಟಗಳನ್ನು ಲೆಕ್ಕಿಸದೆ ಅವಿಶ್ರಾಂತವಾಗಿ ೩೫ ವರುಷಗಳ ವರೆಗೆ ಕೆಲಸ ಮಾಡಿದರು ಕೆನರಾ ಹೈಸ್ಕೂಲಿನಲ್ಲಿರುವಾಗ ಇವರು ಖಾಸಗಿಯೇ ಕಲಿತು ಬಿ ಎ ಮತ್ತು ಎಲ್ ಟಿ ಪರೀಕ್ಷೆಗಳಿಗೆ ಕುಳಿತು ಉತ್ತೀರ್ಣರಾದರು ೧೯೧೧ನೇ ಇಸವಿಯಲ್ಲಿ ಇವರಿಗೆ ಮುಖ್ಯೋಪಾಧ್ಯಾಯ ಪದವಿಯು ದೊರಕಿತು ಇವರು ಶಾಲೆಯ ಅಭಿವೃದ್ಧಿಯಲ್ಲಿ ಕಂಕಣಬದ್ಧರಾಗಿ ರಾತ್ರಿ ಹಗಲು ಶಾಲೆಗಾಗಿ ಕೆಲಸ ಮಾಡಿದರು ಇವರು ತನ್ನ ಶಿಕ್ಷಣಾ ಚಾತುರ್ಯ ಮತ್ತು ಸೌಜನ್ಯದಿಂದ ಸಾವಿರಾರು ವಿದ್ಯಾರ್ಥಿಗಳ ಮತ್ತು ಇತರ ಹಲವು ವಿಶೇಷ ಸದ್ಗುಣಗಳಿಂದ ಸದ್ಗೃಹಸ್ಥರೆಲ್ಲರ ಪ್ರೀತಿಗೆ ಪಾತ್ರರಾಗಿದ್ದುದರಿಂದ ಇವರ ಮರಣದ ದೆಸೆಯಿಂದ ಸರ್ವರಿಗೆ ಏಕ ಪ್ರಕಾರವಾಗಿ ದುಃಖವುಂಟಾಗಿದೆಯೆನ್ನಬೇಕು ಇಂತಹ ಶಿಕ್ಷಕರೂ ಹಿತಚಿಂತಕರೂ ಕೆನರಾ ಹೈಸ್ಕೂಲಿಗೆ ಸುಲಭವಾಗಿ ಸಿಕ್ಕಲಾರರು ದಿವಂಗತ ಶ್ರೀಯುತರ ಆತ್ಮಕ್ಕೆ ಶಾಂತಿಯು ಲಭಿಸಿ ಅವರ ಶೋಕತಪ್ತ ಕುಟುಂಬಕ್ಕೆ ಸಮಾಧಾನವುಂಟಾಗಲೆಂದು ನಾವು ಭಗವಂತನೊಡನೆ ಪ್ರಾರ್ಥಿಸುವೆವು

ಸರ್ಕ್ಯುಲರು

[illegible]

ತಯಾರಾಗುತ್ತಲಿದೆ! ತ್ವರೆಮಾಡಿರಿ!

ಮೂರನೇ ದರ್ಜೆಯ ಮಕ್ಕಳಿಗಾಗಿ

ಪ್ರಕೃತಿಶಾಸ್ತ್ರ ಸಾಮಾನ್ಯ ತಿಳುವಳಿಕೆ

ಡಿಸ್ಟ್ರಿಕ್ಟ್ ಎಜುಕೇಶನಲ್ ಕೌನ್ಸಿಲ್ ತಯಾರಿಸಿದ ಹೊಸ ಪಾಠಪಟ್ಟಿಗನುಸಾರವಾಗಿ

ಎಮ್ ಜಿ ಪಿಗಳ್ ಇವರಿಂದ ರಚಿಸಲ್ಪಟ್ಟಿತು

ದೊರೆಯುವ ಸ್ಥಳ—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು,

ಅಮೇರಿಕನ್ ಕೆಲಸಗಾರರ ಅಭಿವೃದ್ಧಿ.

ಐಶ್ವರ್ಯದಲ್ಲಿ ಅಮೇರಿಕಕ್ಕೆ ಸರಿಹೋಲುವ ದೇಶವು ಮತ್ತೊಂದು ಇರಲಿಕ್ಕಿಲ್ಲ. ಅಲ್ಲಿಯ ಜನರು ಇತರ ದೇಶದ ಜನರಿಗಿಂತ ಸುಖಿಗಳಾಗಿರುವರು. ಇಂಗ್ಲೀಷರು ಮೊದಲು ಅಲ್ಲಿಗೆ ಹೋದೊಡನೆ ಅವರಿಗೆ ಯಾವ ಸಾಮಗ್ರಿಯನ್ನು ತಯಾರಿಸಲೂ ಸ್ವಾತಂತ್ರ್ಯವಿಲ್ಲದಿದ್ದರೂ ಕೊನೆಗೆ ಸ್ಥಿತಿಯು ಬದಲಿಸಿ, ಈಗ ಇಂಗ್ಲಿಷರಿಗೆ ಬೇಕಾದ ಹಲವು ಸಾಮಾನುಗಳು ಅಮೇರಿಕದಲ್ಲಿಯೇ ಉಂಟುಮಾಡಲ್ಪಡುತ್ತಿವೆ.

ಔದ್ಯೋಗಿಕ ಕಲೆಯಲ್ಲಿ ಅಮೇರಿಕವು ಪ್ರಥಮ ಸ್ಥಾನವನ್ನು ಪಡೆದಿದೆಯೆಂದು ಧೈರ್ಯವಾಗಿ ಹೇಳಬಹುದು. ಬಹು ಅಲ್ಪ ಸಮಯದೊಳಗೆ ಅವರು ಅಧಿಕವಾದ ಅಭಿವೃದ್ಧಿಯನ್ನು ಹೊಂದಿರುವರು. ಹೊಸ ಹೊಸ ತರದ ಮೆಶಿನರಿಯನ್ನು ತಯಾರಿಸುವುದು, ಖರ್ಚನ್ನು ಇಳಿಸುವುದು, ಎಲ್ಲರೂ ಐಕ್ಯದಿಂದಿದ್ದು ಕೆಲಸಮಾಡುವದು. ಈ ರೀತಿಯಲ್ಲಿ ಅವರ ಐಶ್ವರ್ಯವು ಬೆಳೆದಿರುತ್ತದೆ. ಅದರಲ್ಲೂ ಕೆಲಸಗಾರರ ಐಶ್ವರ್ಯವು ದಿನೇ ದಿನೇ ಬೆಳೆಯುತ್ತಾ ಬರುತ್ತಿದೆ. ನಮ್ಮ ಹಿಂದೂಸ್ಥಾನದಲ್ಲಿ ಇಂತಹ ಅಭಿವೃದ್ಧಿಯಾಗುವ ಸಂಭವವಿಲ್ಲ. ಅಲ್ಲಿ ಜಾತಿ ಬೇಧವಿಲ್ಲ, ಪರಸ್ಪರ ವೈಮನಸ್ಸಿಲ್ಲ. ಅದು ಕಾರಣವೇ ಅಲ್ಲಿ ಸರ್ವರೂ ಏಕಪ್ರಕಾರವಾಗಿ ಅಭಿವೃದ್ಧಿಯನ್ನೈದುತ್ತಲಿರುವರು.

ಅಮೇರಿಕದ ಕೆಲಸಗಾರರ ಪ್ರತ್ಯೇಕ ಜಾತಿಯೆಂಬುದಿಲ್ಲ. ಅಲ್ಲಿಯ ಕೆಲಸಗಾರರು ಅನ್ಯರಲ್ಲ. ಬ್ರಿಟನ್ನಿನಲ್ಲಿ ಹೆಚ್ಚಾಗಿ ಬರುತ್ತಿದ್ದ ಜನಸಂಖ್ಯೆಯೇ ಅಮೇರಿಕಕ್ಕೆ ಹೋಗಿ ಉಳಕೊಂಡವರು. ಅವರೇ ವಿಧವಿಧದ ಕೆಲಸಗಳನ್ನು ಹುಡುಕಿ ತೆಗೆದರು. ಯಾವನಾದರೂ ಅಲ್ಲಿ ಹುಟ್ಟಿದಂದಿನಿಂದ ಸಾಯುವವರೆಗೆ ಒಂದೇ ತರದ ಕೆಲಸದಿಂದ ತೃಪ್ತನಾಗುವುದಿಲ್ಲ. ತನ್ನ ಸ್ಥಿರ ಪ್ರಯತ್ನದಿಂದಲೂ ಮೇರೆಯಿಲ್ಲದ ಸಾಹಸದಿಂದಲೂ, ಹೆಚ್ಚು ಹೆಚ್ಚು ಯೋಗ್ಯತೆಯ ಕೆಲಸಗಳನ್ನು ಕಂಡು ಹಿಡಿದು ಸಮಾಜದಲ್ಲಿ ಉನ್ನತವಾದ ಸೋಪಾನವನ್ನೇರಲು ಪ್ರಯತ್ನಿಸುವನು. ಆದರೆ ಇತರ ಕೆಲಸಗಾರರ ಆತನಿಗಿಂತಲೂ ಉನ್ನತವಾದ ಪದವಿಯನ್ನು ಹೊಂದಲು ಪ್ರಯತ್ನಿಸಿ ಆತನಿಗಿಂತಲೂ ಹೆಚ್ಚಿನ ಕೆಲಸಗಳನ್ನು ಮಾಡುವರು. ಇದರಿಂದ ಅಭಿವೃದ್ಧಿಯು ಉಂಟಾಗುವುದು. ಅಮೇರಿಕನ್ ಕೆಲಸಗಾರರೆಂದರೆ ಇತರರಲ್ಲ, ಇಂಗ್ಲೆಂಡಿನಿಂದ ಹೊರಟು ಹೋದ ಮತ್ತು ಹೋಗುತ್ತಿರುವ ಬ್ರಿಟಿಷರೇ. ಅಮೇರಿಕನರ ಉದ್ಯೋಗವು ಮೆಶಿನರಿಗಳ ಮೇಲೆ ಅವಲಂಬಿಸಿದೆ. ಹಳೆ ಅಮೇರಿಕನರು ಕೈಯಿಂದಲೇ ಕೆಲಸ ಮಾಡಿ ಅಭಿವೃದ್ಧಿಯನ್ನು ಪಡೆದಿದ್ದರು. ಅವರಿಗಿಂತ ಇವರು ಅತ್ಯಧಿಕವಾದ ಅಭಿವೃದ್ಧಿಯನ್ನು ಹೊಂದಿರುವರೆಂದು ನಿಸ್ಸಂಶಯವಾಗಿ ಹೇಳಬಹುದು.

ಅಮೇರಿಕಕ್ಕೆ ಬರುವ ಕೆಲಸಗಾರರು ಬೇರೆ ಬೇರೆ ದೇಶಗಳಿಂದ ಬರುವರು. ಅದು ಕಾರಣ ಅವರು ಮಾಡುವ ಕೆಲಸಗಳು ಬೇರೆ ಬೇರೆ ತರದವುಗಳಾಗಿದ್ದು ಅವು ನಮ್ಮ ಹಿಂದೂಸ್ಥಾನದ ಜಾತಿ ಭೇದಗಳಂತೆ ಬೇಧಮಯವಾಗಿರುತ್ತವೆ. ಇಟೆಲಿಯದಿಂದ ಬರುವ ಇಟೆಲಿಯನನು ತನ್ನ ಊರಿನ ಕೈಗಾರಿಕೆಯನ್ನೂ, ಇಂಗ್ಲೆಂಡಿನಿಂದ ಬರುವ ಬ್ರಿಟನನು ತನ್ನೂರಿನ ಕೈಗಾರಿಕೆಯನ್ನೂ ಅಲ್ಲಿ ಪ್ರಾರಂಭಿಸುವನು. ಹೀಗೆ ಅಲ್ಲಿ ಬೇರೆ ಬೇರೆ ತರದ ಎರಡು ಕೈಗಾರಿಕೆಗಳು ಹುಟ್ಟಿಕೊಂಡಿರುವವು. ಅದು ಕಾರಣ ಅಮೇರಿಕಕ್ಕೆ ಒಂದೇ ತರದ ವ್ಯಾಪಾರವೂ ಇರದೆ ಹಲವು ರೀತಿಯ ಕೈಗಾರಿಕ[illegible]ಗಳು ಉತ್ಪನ್ನವಾಗುತ್ತಿವೆ. ಹಲವು ತರದ ವ್ಯಾಪಾರ ವಹಿವಾಟುಗಳಿವೆ. ಉದಾಹರಣಾರ್ಥವಾಗಿ ನಿಗ್ರೋ ಮತ್ತು ಮೆಕ್ಸಿಕನರು ಹತ್ತಿಯನ್ನು ಬೆಳೆಸುವರು. ಇಟೆಲಿಯಾನರು ದ್ರಾಕ್ಷೆಯನ್ನು ಬೆಳೆಸುವರು. ಸ್ಪಾನಿಯರು ಸೀಬೆ ಹಣ್ಣುಗಳನ್ನೂ ಜಪಾನರು ಬಟ್ಟಂಗಾಯಿಯನ್ನೂ, ಹಿಂದೂಗಳು ಅಕ್ಕಿಯನ್ನೂ, ಜರ್ಮನಿ ಮೊದಲಾದ ದೇಶದ ಜನರು ದನ ಕರುಗಳನ್ನು ಸಾಕಿ ಹಾಲು, ತುಪ್ಪ ಮೊದಲಾದವುಗಳನ್ನು ತಯಾರಿಸುವರು. ಫ್ರೆಂಚರು ಮತ್ತು ಗ್ರೀಕರು ಊಟದ ಹೊಟಲುಗಳನ್ನಿಡುವರು. ಮೆಕ್ಸಿಕನರೂ, ಇಟೆಲಿಯಾನರೂ ಕಬ್ಬಿಣದ ಕೆಲಸವನ್ನು ಮಾಡುವರು. ಹೀಗೆ ಹಲವರು ಹಲವು ತರದ ವೃತ್ತಿಯನ್ನು ಕೈಕೊಳ್ಳುವರು.

ಕೆಲಸಗಾರರ ಸಂಖ್ಯೆಯು ಇಳಿದೊಡನೆ ಅವರ ಸಂಬಳವು ಏರಬೇಕಾದುದು ಸಹಜವಾಗಿದೆ. ಈಗೀಗ ಅಮೇರಿಕದಲ್ಲಿ ಕೆಲಸಮಾಡಲು ಅನ್ಯದೇಶಿಯರನ್ನು ಅಧಿಕ ಸಂಖ್ಯೆಯಲ್ಲಿ ಬಿಡದಂತೆ ಕಾನೂನಾಗಿದೆ. ಅದು ಕಾರಣ ಈಗಿನ ಕೆಲಸಗಾರರ ಸಂಬಳದ ಹಣವು ಹೆಚ್ಚಾಗಿರುತ್ತದೆ. ಸಾಧಾರಣ ತರದ ಕೆಲಸಗಾರನು (ಕೂಲಿಯವ) ದಿನಕ್ಕೆ ಒಂಭತ್ತರಿಂದ ಹದಿನೈದು ರೂಪಾಯಿಗಳ ವರೆಗೆ ಸಂಪಾದಿಸುವನು. ಸುರಿತ ಕೆಲಸಗಾರನಾದರೆ ಇನ್ನೂ ಹೆಚ್ಚಿಗೆ ಸಂಪಾದಿಸುವನು. ಯಾವ ದೇಶದಲ್ಲಿಯೂ ಕೆಲಸಗಾರರಿಗೆ ಇಷ್ಟು ಕೂಲಿಯು ದೊರಕಲಾರದು. ಮಹಾ ಯುದ್ಧದ ತರುವಾಯ ಇಂಗ್ಲಾಂಡಿನ ಕೂಲಿಗಳ ಸಂಬಳವು ಏರಿತಾದರೂ ಅಲ್ಲಿ ಮೊದಲಿಗಿಂತ ಹೆಚ್ಚು ಸಾಮಗ್ರಿಯು ಉತ್ಪನ್ನವಾಗುವದಿಲ್ಲ. ಯುನೈಟೆಡ್ ಸ್ಟೇಟ್ಸಿನಲ್ಲಿ ಹಾಗಲ್ಲ. ಹೆಚ್ಚು ಹೆಚ್ಚು ಸಾಮಗ್ರಿಯನ್ನು ಕೂಲಿಗಳು ಹುಟ್ಟಿಸುವರು. ಹೆಚ್ಚು ಸಂಬಳವನ್ನು ಕೊಡಬೇಕೆನ್ನುವರು. ಇದರಿಂದ ಕೆಲಸ ಕೊಡುವವರಿಗೆ ನಷ್ಟವಾಗುವ ಹಾಗಿಲ್ಲ. ಅಮೇರಿಕನ್ ಕೆಲಸಗಾರರು ಮನಃಪೂರ್ವಕವಾಗಿ ಕೆಲಸಮಾಡುವರೆಂದು ನಿಸ್ಸಂದೇಹವಾಗಿ ಹೇಳಬಹುದು.

ಇನ್ನು ಕೆಲಸವನ್ನು ಒದಗಿಸುವವನು ಕುಶಾಗ್ರಬುದ್ಧಿಯವನು. ತನ್ನ ಕೆಲಸಗಾರನು ಚೆನ್ನಾಗಿ ಕೈಗಾರಿಕೆಯನ್ನು ಕಲಿಯಲು ಆತನಿಗೆ ಪ್ರೋತ್ಸಾಹವನ್ನಿತ್ತು ಆತನಿಗೆ ತುಂಬಾ ಸಂಬಳವನ್ನು ಕೊಡುವನು. ಇದರಿಂದ ಕೆಲಸಗಾರನ ಉತ್ಪತ್ತಿಯೂ ಹೆಚ್ಚಿತು, ಧನಿಯ ಕೆಲಸವೂ ಹೆಚ್ಚಿತು.

ಕೆಲಸಗಾರರಿಗೆ ಸಂಬಳವು ಬಹುವಾಗಿ ಹೆಚ್ಚಿದ ಕಾರಣ ಅವರ ನಿತ್ಯದ ಜೀವನವು ಬಹು ಉತ್ತಮ ತರದಲ್ಲಿ ನಡೆಯುವದು. ಅದಕ್ಕೆ ಸಮಾನತೆಯಿರುವುದಿಲ್ಲ. ಇಂಗ್ಲಾಂಡಿನ ಐಶ್ವರ್ಯದ ಉಪಕರಣವು ಅಮೇರಿಕನರಿಗೆ ನಿತ್ಯಜೀವನದ ಆವಶ್ಯಕತೆಯಾಗಿದೆ. ನಾವು ಯಾವುದನ್ನು ಕೇವಲ ಧನಿಕರ ಉಪಯೋಗದ ಸಾಮಗ್ರಿಗಳೆಂದೆಣಿಸುವೆವೋ ಅಲ್ಲಿ ಅವು ಕೂಲಿಕಾರನ ಉಪಯೋಗದ ವಸ್ತುಗಳಾಗಿವೆ. ಅಮೇರಿಕವು ದುಂದುಗಾರಿಕೆಯಿಂದ ವೃಥಾ ವ್ಯಯಿಸುವ ಹಣದಿಂದ ಅನ್ಯಖಂಡದ ಒಂದು ಇಡೀ ದೇಶದ ಜನರನ್ನು ಸಾಕಬಹುದು. ಇತರ ದೇಶಗಳಲ್ಲಿ ಒಬ್ಬಿಬ್ಬರಿಗೆ ಸಾಧ್ಯವಾಗದಿರುವ ಜೀವನವನ್ನು ಯುನೈಟೆಡ್ ಸ್ಟೇಟಿನ ಅಧಿಕ ಸಂಖ್ಯಾಕ ಜನರು ಕೈಕೊಳ್ಳುವರು. ನಿಗ್ರೋಗಳ ಹೊರತು ಉಳಿದವರು ವಾಸಿಸುವ ಮನೆಗಳ ವಿದ್ಯುದ್ದೀಪಗಳು, ಟೆಲಿಫೋನುಗಳು, ಬಚ್ಚಲು ಮನೆಗಳು ಮೊದಲಾದವುಗಳಿಂದ ಕೂಡಿರುತ್ತವೆ. ಟೆಲಿಫೋನು ಬಡವನ ಉಪಯೋಗಕ್ಕೂ ಬರುತ್ತಿದೆ. ಪ್ರತಿಯೊಂದು ಮನೆಗೂ ಟೆಲಿಫೋನಿನ ಸಂಬಂಧವಿದೆ. ಇಂಗ್ಲೆಂಡಿನಲ್ಲಿ ನೂರರಲ್ಲಿ ಇಬ್ಬರು ಮಾತ್ರ ಟೆಲಿಫೋನಿಗಾಗಿ ಹಣ ಖರ್ಚು ಮಾಡುವಂತಾದರೆ ಅಮೇರಿಕದಲ್ಲಿ ಹದಿನೈದು ಜನರಿರುವರು. ದಿನಕ್ಕೆ ೪೫,೦೦೦,೦೦೦ ಟೆಲಿಫೋನ ವಾರ್ತೆಗಳು ಸಂಚರಿಸುವವೆಂದು ಗೊತ್ತಾಗಿದೆ. ಇದರಿಂದ ಟೆಲಿಫೋನು ಹೇಗೆ ಉಪಯೋಗಿಸಲ್ಪಡುವದೆಂದು ವಿಶದವಾಗಿ ತಿಳಿಯುವುದು. ಜಗತ್ತಿನಲ್ಲಿರುವ ಟೆಲಿಫೋನಿನ ಶೇಕಡಾ [illegible] ಯುರೋಪಿನಲ್ಲಿದೆಯಾದರೆ ಯುನೈಟೆಡ್ ಸ್ಟೇಟ್ಸಿನಲ್ಲಿ ಮಾತ್ರವೇ ಶೇಕಡಾ ೬೧ ರಷ್ಟಿದೆ. ಯುನೈಟೆಡ್ ಸ್ಟೇಟ್ಸಿನ ಈ ಟೆಲಿಫೋನಿಗೆ ಏನಾದರೂ ಅಘಾತವುಂಟಾದರೆ ಅಮೇರಿಕನರು ಬಹು ಗಡಿಬಿಡಿಯುಂಟಾಗುವದು.

ಕೆಲಸಗಾರರ ಇಂತಹ ಅಭಿವೃದ್ಧಿಗೆ ಅಮೇರಿಕದ ಮೋಟಾರ ಕೈಗಾರಿಕೆಯೇ ಮೂಲಕಾರಣವೆನ್ನಬೇಕಾಗುವದು. ಅವರ ಐಶ್ವರ್ಯವು ಮೋಟಾರ ಕೈಗಾರಿಕೆಯಿಂದ ದಿನೇ ದಿನೇ ತುಂಬುತ್ತ ಬರುವುದು. ಗತಿಸಿದ ಇಸವಿಯಲ್ಲಿ ಜಗತ್ತಿನಲ್ಲಿ ಒಟ್ಟು [illegible] ೦೦೦ ಮೋಟಾರ ಕಾರುಗಳು ತಯಾರಾದವು. ಇವುಗಳಲ್ಲಿ [illegible] ೦೦೦ ಕಾರುಗಳು ಯುನೈಟೆಡ್ ಸ್ಟೇಟ್ಸಿನಲ್ಲಿ ಮಾತ್ರವೇ ತಯಾರಾದವು. ಜಗತ್ತಿನಲ್ಲಿ ತಯಾರಾಗುವ ಕಾರುಗಳ ಶೇಕಡಾ [illegible] ಯುನೈಟೆಡ್ ಸ್ಟೇಟ್ಸಿನಲ್ಲಿ ಮಾತ್ರವೇ ತಯಾರಾಗುತ್ತಿವೆಯೆಂದು ಹೇಳಬಹುದು. ಕೆಲಸಗಾರರ ಕಾರಖಾನೆಗಳಲ್ಲಿ ಕಲಸಕ್ಕೆ ಹೋಗಲಿಕ್ಕೂ ಕೂಡಾ ತಮ್ಮ ಸ್ವಂತ ಮೋಟಾರ ಕಾರುಗಳಿವೆ. ಇದು ಸಾಧಾರಣ ಆಶ್ಚರ್ಯವನ್ನುಂಟುಮಾಡುವಂತಹ ಸಂಗತಿಯಲ್ಲ. ಒಂದು [illegible] ಕಟ್ಟುತ್ತಿರುವರಾದರೆ ಸುತ್ತಲೂ ಕೆಲಸಗಾರರ ಮೋಟಾರ ಕಾರುಗಳು ಕಿಕ್ಕಿರಿದು ನೆರೆದಿರುವವು. ಒಟ್ಟಾರೆ ಹೇಳುವದಾದರೆ ಅಮೇರಿಕನ ಕೆಲಸಗಾರರಲ್ಲಿ ಪ್ರತಿಯೊಬ್ಬನಿಗೂ ಒಂದೊಂದು ಮೋಟಾರು ಕಾರು ಇದೆಯೆನ್ನಬಹುದು.

ಇದು ಮಾತ್ರವಲ್ಲ ಯುದ್ಧ ಮೊದಲು ಕೆಲಸಗಾರನ ಜೀವನವು ಕೂಡ ಸುಸೂತ್ರವಾಗಿ ಸಾಗುತ್ತಿತ್ತು. ಆದರೆ ಈಗ ಕೆಲಸಗಾರನಿಗೆ ಸ್ವಂತ ಮೋಟಾರಕಾರಿದೆ. ಸುಂದರವಾದ ಮತ್ತು ಸುಸಜ್ಜಿತವಾದ ಮನೆಯಿದೆ. ಅಲ್ಲದೆ ತನ್ನ ದಿನದ ಸಂಬಳದಿಂದ ಸುಖವಾದ ಸಂಸಾರವನ್ನು ನಡೆಯಿಸಿ, ಹಣವನ್ನು ಉಳಿಸುವನು. ಪ್ರತಿಯೊಬ್ಬ ಕೆಲಸಗಾರನೂ ಬೇಂಕಿನಲ್ಲಿ ಹಣವನ್ನು ಠೇವಣಾತಿಯಾಗಿ ಇಡುತ್ತಾ ಬರುವನು. [illegible]ಗಳನೇ ಇಸವಿಯಲ್ಲಿ ಒಟ್ಟು [illegible] ಮಿಲಿಯ ಡೊಲ್ಲರುಗಳು ಠೇವಣಾತಿಯಾಗಿಡಲ್ಪಟ್ಟಿದ್ದವು. ಹತ್ತು ವರುಷಗಳೊಳಗೆ ಈ ಸಂಖ್ಯೆಯು [illegible] ಮಿಲಿಯಕ್ಕೇರಿತು. ಠೇವಣಾತಿಯು ಕೂಡ ದುಪ್ಪಟ್ಟಾಗಿದೆ. ಠೇವಣಾತಿಯಾಗಿಡುವ ಜನಸಂಖ್ಯೆಯು ಮೊದಲಿಗಿಂತ ಮೂರು ಪಾಲಾಗಿದೆ. [illegible]ನೇ ಇಸವಿಯಲ್ಲಿ [illegible],೦೦೦,೦೦೦ ಭೀಮ ವಿಮೆಯ ಪೋಲಿಸಿಗಳಿದ್ದವು. ಇದರ ಹಣವು ಒಟ್ಟು [illegible]೦,೦೦೦,೦೦೦ ಡೊಲ್ಲರುಗಳಾಗುತ್ತಿದ್ದವು. ಈ ಪೋಲಿಸಿಗಳಲ್ಲಿ ಕೆಲಸಗಾರರ ಪೋಲಿಸಿಗಳೇ ಮೂರನೇ ಎರಡು ಅಂಶಕ್ಕಿಂತ ಹೆಚ್ಚಿಗಿದ್ದವು.

ಕಾರಖಾನೆಯ ಧನಿಗಳು ಕೆಲಸಗಾರರ ಐಶ್ವರ್ಯವನ್ನು ಹೆಚ್ಚಿಸಿ, ತಮ್ಮ ಕಾರಖಾನೆಯ ಪಾಲುಗಳನ್ನು ಅವರು ಕೊಂಡುಕೊಳ್ಳುವಂತೆ ಮಾಡುವರು. ಅಮೇರಿಕದ ಕೆಲಸಗಾರರು, ಟ್ರೇಮುವೇ ಮತ್ತು ಟೆಲಿಫೋನ್ ಕಂಪೆನಿಗಳಲ್ಲಿ ಪಾಲುಗಾರರು ಆಗಿರುವರು. [illegible]ನೇ ಇಸವಿಯಲ್ಲಿ ರೈಲ್ವೇ ಕಂಪೆನಿಗಳಲ್ಲಿ ೩೦೦,೦೦೦ ಪಾಲುಗಾರರಿದ್ದರು. ಈಗ ಸುಮಾರು [illegible],೦೦೦ ಪಾಲುಗಾರರಿರುವರೆಂದು ತಿಳಿದು ಬಂದಿರುತ್ತದೆ. [illegible] ಮಾರ್ಗದ ಕೆಲಸಗಾರರೇ ರೈಲುಕಂಪೆನಿಯ ಪಾಲುಗಾರರಾಗಿ ಸೇರಿರುವರು. ಕೆಲಸಗಾರರು ಕಂಪೆನಿಯ ಪಾಲುಗಳನ್ನು [illegible] ಕೊಳ್ಳುವದರಿಂದ ಕೆಲಸದ ಧನಿಗಳೊಳಗೂ ಕೆಲಸಗಾರರೊಳಗೂ ಒಂದು ಅಭೇದ್ಯವಾದ ಸಂಬಂಧವು ಉಂಟಾಗುವದು. [illegible] ಮುಷ್ಕರಗಳು ಉಂಟಾಗಲಾರವು. ಅಮೇರಿಕದಲ್ಲಿ [illegible]ವೆಂಬುದಿಲ್ಲ. ಕೆಲಸಗಾರರು [illegible] ಹಣವನ್ನುಳಿಸುತ್ತಾ [illegible] ಕಾರಣ ಅವರಿಗೆ ಊಟಕ್ಕಿಲ್ಲದ ದಿನವೇ ಇಲ್ಲ. ಯುರೋಪಿನ ಕೆಲಸದ ಕ್ರಮಗಳು ಅಮೇರಿಕನರಿಗೆ ಸರಿಬೀಳುವುದಿಲ್ಲ. ಅದು ಕಾರಣವೇ ಯುರೋಪಿನಲ್ಲಿದ್ದಷ್ಟು ನಿರುದ್ಯೋಗಿಗಳ ಸಂಖ್ಯೆಯು ಅಮೇರಿಕದಲ್ಲಿರುವುದಿಲ್ಲ. ಅಮೇರಿಕನ ಕೆಲಸಗಾರರ ಇಂತಹ ಅಭಿವೃದ್ಧಿಯಿಂದ ಪ್ರಜಾಪ್ರಾತಿನಿಧ್ಯವು ಬೆಳೆದ ದೇಶವು ಇನ್ನೂ ಉನ್ನತಾವಸ್ಥೆಯನ್ನು ಸ್ವಲ್ಪ ಕಾಲದೊಳಗೆ ಪಡೆಯುವದೆಂಬುದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಬಾಲ್ಯ ವಿವಾಹ.

ಹಿಂದೂದೇಶವು ಅಭಿವೃದ್ಧಿಯನ್ನು ಹೊಂದಬೇಕೆಂದು ಬಯಸುವುದು ಪ್ರತಿಯೊಬ್ಬ ಭಾರತೀಯನ ಕೆಲಸವಾಗಿದೆ. ಹಿಂದೂದೇಶದ ಅಭಿವೃದ್ಧಿಯಾಗಬೇಕಾದರೆ ಹಿಂದೂ ಸ್ತ್ರೀಯರ ಅಭಿವೃದ್ಧಿಯಾಗಬೇಕು. ಇದಕ್ಕಾಗಿ ಕೆಲವು ಹಳೇ ಪದ್ಧತಿಗಳನ್ನು ಆಚರಣೆಯಿಂದ ತೊಲಗಿಸಬೇಕು. ಇದರ ಹೊರತು ಅಭಿವೃದ್ಧಿ ಹೊಂದಿದ ಇತರ ರಾಜ್ಯಗಳನ್ನು ಸಮೀಪಿಸಲು ನಮಗೆ ಅಧಿಕಾರವಿರದು.

ಅವುಗಳಲ್ಲಿ ಹಿಂದೂಸ್ಥಾನದ ಅಭಿವೃದ್ಧಿಗೆ ಯಾವದು ಕಾರಣವಾಗಿವೆಯೋ ಅವುಗಳನ್ನು ನೆರವೇರಿಸಲು ನಾವು ಮನಮುಟ್ಟಿ ಪ್ರಯತ್ನಿಸಬೇಕು. ಮೊದಲನೆಯದೆಂದರೆ ಬಾಲ್ಯವಿವಾಹ ಪದ್ಧತಿ. ಚಿಕ್ಕ ಹುಡುಗಿಯರಿಗೆ ಚಿಕ್ಕಂದಿನಲ್ಲಿ ಮದುವೆಯನ್ನು ಮಾಡಿಬಿಟ್ಟರೆ ಅವರ ಬುದ್ಧಿಯು ವಿಕಾಸಹೊಂದುವುದಿಲ್ಲ. ಅವರು ಕೇವಲ ಪಶುಗಳಂತಿರುವರು. ಬಾಲ್ಯವಿವಾಹವು ಶಾಸ್ತ್ರೋಕ್ತವಾಗಿದೆಯೆನ್ನಬಹುದು. ಶಾಸ್ತ್ರೋಕ್ತವಾದ ಕ್ರಮಗಳನನುಸಾರವಾಗಿ ವರ್ತಿಸುವವನ [illegible] ಅಂತೆಯೇ ಈ ವಿಷಯದಲ್ಲಿಯೂ ಕೂಡ ಅಂತಹ ಶಾಸ್ತ್ರಕ್ಕೆ ವಿರುದ್ಧವಾಗಿ ಏಕೆ ವರ್ತಿಸಬಾರದು? ಶಾಸ್ತ್ರಕ್ಕೆ ವಿರುದ್ಧವಾಗಿ ಪರದೇಶ ಸಂಚಾರವನ್ನು ಮಾಡುವುದಿಲ್ಲವೇ? ಜಾತಿಬೇಧವನ್ನು ತ್ಯಜಿಸಲಿಲ್ಲವೇ? ಗಂಡಸರು ನಾಗರಿಕರಾಗಲು ಬಯಸುವರು. ಆದರೆ ಹೆಂಗಸರು ಮೂಢರಾಗಿಯೇ ಇರುವದು ಉಚಿತವಲ್ಲ. ಅವರು ಕೂಡ ನಾಗರಿಕತೆಯನ್ನು ಹೊಂದಲೇಬೇಕು. ಚಿಕ್ಕಂದಿನಲ್ಲಿ ಅವರಿಗೆ ಮದುವೆಯಾಗಿ ಬಿಟ್ಟರೆ ಅವರು ನಾಗರಿಕರಾಗಲು ಎಡೆಯಿರುವುದಿಲ್ಲ.

ಸ್ತ್ರೀ ವಿದ್ಯಾಭ್ಯಾಸವೆಂದ ಹಲವರು ಕಂಠಶೋಷಣೆ ಮಾಡುತ್ತಿ[illegible] ಇಂತಹ ಬಾಲ್ಯವಿವಾಹ ಪದ್ಧತಿಯನ್ನು ಇರಗೊಡಿಸಿದರೆ ಸ್ತ್ರೀ ವಿದ್ಯಾಭ್ಯಾಸವು ಪ್ರಸಾರಿತವಾಗುವುದೆಂತು? ಮದುವೆಯಾದ [illegible] ಹುಡುಗಿಯರು ಶಾಲೆಗೆ ಹೋಗುವುದಿಲ್ಲ. ಶಾಲೆಗೆ ಹೋಗುವ ಪ್ರಾಯವು ಬರುವುದರೊಳಗೆ ಮದುವೆಯನ್ನು ತೀರಿಸಿಬಿಟ್ಟರೆಂದರೆ, ಅವರು ವಿದ್ಯೆಯನ್ನು ಕಲಿಯುವುದೆಂತು? ಮದುವೆಯಾದ ಮೇಲೆ ಅವರು ಸಂಸಾರ [illegible] ನಿರತರಾಗುವುದೇ? ಮಕ್ಕಳನ್ನು ಪರಿಪಾಲಿಸುವುದೇ? ವಿದ್ಯೆ ಕಲಿಯುವುದೇ? ಮನೆಯಲ್ಲಿಯೇ ವಿದ್ಯೆಯನ್ನು ಕೊಡುವದು ಸುಲಭವೆಂದು ಹಲವರು ಹೇಳಬಹುದಾದರೂ ಮನೆಕೆಲಸ ಮಾಡುವ ಸಮಯದಲ್ಲಿ ಆ ವಿದ್ಯೆಯು ಕಡೆಗೆ ಮನಸ್ಸು ನಿಲ್ಲಲಾರದು. ಆ ಮೇಲೆ ವಿದ್ಯೆಯೂ ಮನಸ್ಸಿಗೆ ಸರಿಯಾಗಿ ಹತ್ತಲಾರದು. ಇನ್ನು ಮನೆಯಲ್ಲಿಯೇ ಕೊಡುವ [illegible] ವಿದ್ಯೆಯು ಬಹು ಸ್ವಲ್ಪವು. ಇಂತಹ ವಿದ್ಯೆಯು ನಮ್ಮ ಹೆಂಗಸರಿಗೆ ಸಾಲದು. ಅವರಿಗೆ ಅಧಿಕವಾದ ವಿದ್ಯೆಯು ಆವಶ್ಯಕತೆಯಿದೆ. ಮನೆಕೆಲಸಗಳನ್ನು ಮಾಡಲಿಕ್ಕೂ ಅಡಿಗೆ ಮಾಡಲಿಕ್ಕೂ ಕಲಿತುಕೊಂಡರೆ ಸಾಕು. ಅದರಿಂದ ಗಂಡನನ್ನು ತೃಪ್ತಿಗೊಳಿಸುವುದು, ಮಕ್ಕಳನ್ನು ಸಾಕಬಹುದು ಎಂದು ತಿಳಿಯಬಹುದು. ಇಷ್ಟರಿಂದಲೇ ಹೆಂಗಸಿನ ಕೆಲಸ ಮುಗಿಯಲಿಲ್ಲ. ಹೆಂಗಸಿಗೆ ತುಂಬ ಮಾಹೀತಿಯಿರಬೇಕು. ಇದಕ್ಕಾಗಿ ಅವಳಿಗೆ ಹೆಚ್ಚಿನ ವಿದ್ಯಾಭ್ಯಾಸದ ಅಗತ್ಯವಿದೆ. ಆದಕಾರಣ ಹುಡುಗಿಯರಿಗೆ ಮೊದಲು ವಿದ್ಯೆಯನ್ನು ಕಲಿಸಿ, ಅವರು ಪ್ರಾಯಭರಿತರಾಗಿ ಸಂಪೂರ್ಣ ಜ್ಞಾನವನ್ನು ಪಡೆದುಕೊಂಡು ವಿಚಾರಿಗಳಾದ ತರುವಾಯವೇ ಅವರಿಗೆ ಮದುವೆಯನ್ನು ಮಾಡಬೇಕು. ಹುಡುಗಿಯರಿಗೆ ಚಿಕ್ಕಂದಿನಲ್ಲಿ ಸ್ವಲ್ಪವಾದರೂ ಸ್ವಾತಂತ್ರ್ಯವಿಲ್ಲ. ಸರಿಯಾಗಿ ಬುದ್ಧಿ ತಿಳಿಯುವದರೊಳಗೆ ಮದುವೆ ಮಾಡಿ ಗಂಡನ ವಶಕ್ಕೆ ಕೊಟ್ಟುಬಿಡುವರು. ಆ ಮೇಲೆ ಹುಡುಗಿಯು ಗಂಡನ ಅಡಿಗೊಂಡಿದೆಯು, ಗಂಡನ ಮನಸ್ಸಿಗೆ ವಿರುದ್ಧವಾಗಿ ನಡೆಯಬಾರದು. ಗಂಡಸರಿಗಾದರೋ

ಸ್ವಾತಂತ್ರ್ಯವಿದೆ. ಅಂತೆಯೇ ಹುಡುಗಿಯರಿಗೂ ಶಿಕ್ಷಣದಲ್ಲಿ ಸ್ವಾತಂತ್ರ್ಯವನ್ನು ಅನುಭವಿಸಲು ಎಡೆ ಕೊಡಬೇಕು. ಶಿಕ್ಷಣವೆಳೆಗ್ಗಿರುವವಾಗ ತನಷ್ಟು ಸಂತೋಷವೂ ಆಗಿದ್ದರೆ ವರೋತ್ತಮನೇ ಮುಂದೆ ಹೆಂಗಸಾದ ಮೇಲೆ ಅವಳು ಸಂತೋಷದಿಂದಲೇ ಇರುವಳು. ಆದರೆ ಚಿಕ್ಕಂದಿನಲ್ಲಿ ನಿರ್ಬಂಧ ಪಡಿಸಿ ಮನಸ್ಸಿಗೆ ನೋವನ್ನುಂಟುಮಾಡಿದರೆ ಮುಂದೆ ಅವಳಿಗೆ ಸಂತೋಷವೇ ದುರ್ಲಭವಾಗುವುದು

ಇಂಗ್ಲಿಷ ವಿದ್ಯೆಯನ್ನು ನಮ್ಮ ಹುಡುಗಿಯರು ಕಲಿತ ಮಾತ್ರದಿಂದ ಅವರ ನಡತೆಯು ಕೆಟ್ಟುಹೋಗುವುದು, ಅವರು ಅವಿಧೇಯರಾಗುವರು ಎಂದು ನಮ್ಮ ಮತಾಭಿಮಾನಿಗಳು ಹೇಳುವುದು. ಆದರೆ ಗಂಡಸರು ಇಂಗ್ಲಿಷ ವಿದ್ಯೆಯಿಂದ ಹಾಳಾಗುವುದಿಲ್ಲವಾದರೆ ಹೆಂಗಸರು ಮಾತ್ರ ಕೆಡುವರೆಂಬುದು ಕೇವಲ ತಪ್ಪು. ಅದುಕಾರಣ ಬಾಲ್ಯವಿವಾಹವೆಂಬ ಸಮಾಜ ಘಾತಕವಾದ ಕಟ್ಟಳೆಯನ್ನು ತ್ಯಜಿಸಿ ಹುಡುಗಿಯು ವಿದ್ಯೆಯನ್ನು ಕಲಿತು ದೊಡ್ಡವಳಾದ ಮೇಲೆಯೇ ಅವಳ ಮದುವೆಯನ್ನು ಮಾಡಬೇಕು.

ಹಿಂದೂಸ್ಥಾನದಲ್ಲಿ ಕೃಷಿಯ ಶಿಕ್ಷಣ.

ಕೃಷಿಯ ಕುರಿತು ಕೊಡಬೇಕಾದ ಶಿಕ್ಷಣವನ್ನು ಮೂರು ವಿಭಾಗಗಳನ್ನಾಗಿ ಮಾಡಬಹುದು (೧) ಕೃಷಿಕರ ಮಕ್ಕಳಿಗೆ ಕೊಡಬೇಕಾದ ಎಲಿಮೆಂಟರಿ ವಿದ್ಯಾಭ್ಯಾಸ (೨) ಕೃಷಕರಿಗೆ ಬೇಕಾದ ವಿದ್ಯಾಭ್ಯಾಸ, (೩) ಕೃಷಿಯ ಕುರಿತು ಶಿಕ್ಷಣ

೧. ಎಲಿಮೆಂಟರಿ ವಿದ್ಯಾಭ್ಯಾಸ

ಹಿಂದೂಸ್ಥಾನದ ಕೃಷಿಯನ್ನು ಸುಧಾರಿಸಿ, ಉತ್ಪತ್ತಿಯನ್ನು ಹೆಚ್ಚಿಸಬೇಕೆಂದಾದರೆ ಹೊಲಗಳಲ್ಲಿ ಕೆಲಸಮಾಡುವವರು ಓದುಬರಹವನ್ನು ಕಲಿತವರಾಗಿರಬೇಕು. ಕೃಷಿ, ಕೈಗಾರಿಕೆ, ವ್ಯಾಪಾರ ಇವುಗಳೆಲ್ಲ ಏಕಮಾತ್ರ ವಿದ್ಯೆಯನ್ನು ಕಲಿಯದೆ ಪ್ರಯೋಜನವಿಲ್ಲವೆಂದು ಶ್ರೀ ಗೋಖಲೆಯವರು ಹೇಳಿದ್ದರು. ಎಲಿಮೆಂಟರಿ ವಿದ್ಯಾಭ್ಯಾಸವು ಅತಿ ಪ್ರಾಮುಖ್ಯವಾಗಿದೆ. ನಮ್ಮೂರಿನ ಕೃಷಕರಲ್ಲಿ ಓದುಬರಹ ಗೊತ್ತಿದ್ದವರ ಸಂಖ್ಯೆಯನ್ನು ಲೆಕ್ಕ ಹಾಕಿದರೆ ಅದು ಬಹು ಕಡಿಮೆಯಾಗಿ ಕಾಣಬಹುದು. ಇದಕ್ಕೆ ಪ್ರಾಥಮಿಕ ಶಾಲೆಗಳು ಇಲ್ಲದಿರುವುದೂ, ಇದ್ದರೂ ಸರಿಯಾದ ವ್ಯವಸ್ಥೆಯಿಲ್ಲದಿರುವದೂ, ಕಾರಣವಾಗಿದೆ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೊಂದು ಪ್ರಾಥಮಿಕ ಶಾಲೆಯು ಇರಲೇಬೇಕು

ಇನ್ನು ಇಂಥ ಪ್ರಾಥಮಿಕ ಶಾಲೆಗಳಲ್ಲಿ ಕಲಿಸುವ ಕ್ರಮಗಳಲ್ಲಿಯೂ ಹಲವು ಕುಂದುಗಳಿವೆ. ಮೊದಲನೆಯದಾಗಿ ಕಲಿಸುವ ಉಪಾಧ್ಯಾಯರು ಚತುರರಿರುವದಿಲ್ಲ. ಸಂಬಳವನ್ನು ಸರಿಯಾಗಿ ಕೊಟ್ಟಲ್ಲದೆ ಚತುರರಾದ ಉಪಾಧ್ಯಾಯರು ಈ ಕೆಲಸಕ್ಕೆ ಸೇರುವಂತಿಲ್ಲ. ವಿದ್ಯೆಯ ಕುರಿತು ಮಕ್ಕಳಲ್ಲಿ ಅಭಿರುಚಿಯನ್ನು ಹುಟ್ಟಿಸಲು ಕೂಡ ಅವರಿಗೆ ಸಾಮರ್ಥ್ಯವಿರುವುದಿಲ್ಲ. ಎರಡನೆಯದಾಗಿ ಪಠ್ಯಪುಸ್ತಕಗಳೂ ಶಿಕ್ಷಣಾಕ್ರಮವೂ ಸರಿಯಿರುವುದಿಲ್ಲ. ಮಕ್ಕಳಲ್ಲಿ ಕೃಷಿಯ ಕುರಿತ ಅಭಿರುಚಿಯನ್ನು ಹುಟ್ಟಿಸುವಂತಹ ಪಾಠಗಳು ಪಠ್ಯಪುಸ್ತಕದಲ್ಲಿ ಇರತಕ್ಕದ್ದು. ಒಂದೇ ಮಾತಿನಲ್ಲಿ ಹೇಳುವುದಾದರೆ ಸರ್ವವಿಧದಲ್ಲಿಯೂ ಕೃಷಿಯ ಕುರಿತಾಗಿ ಅನುಭವವನ್ನು ಮಕ್ಕಳಿಗೆ ಕೊಡುವಂತಹ ಪಾಠಗಳನ್ನು ಕಲಿಸಬೇಕು

೨. ಕೃಷಕರಿಗೆ ಬೇಕಾದ ವಿದ್ಯಾಭ್ಯಾಸ

ಈಗಿನ ಎಲಿಮೆಂಟರಿ ಶಿಕ್ಷಣಾಕ್ರಮದಲ್ಲಿ ಸುಧಾರಣೆಯೂ ಆದನ್ನು ವಿಶ್ವಾಸಪೂರ್ವಕವಾಗಿ ನಡಿಸುವ ಕ್ರಮವೂ ಆದರೆ ಮುಂದಿನ ಕೃಷಕರೆಲ್ಲರೂ ತಾವಾಗಿಯೇ ವಿದ್ಯಾವಂತರಾಗುವರು. ಸಹಕಾರ ಸಂಘಗಳ ತತ್ವಗಳನ್ನು ಅವಿದ್ಯಾವಂತರಾದ ಕೃಷಕರು ಅರಿಯದಿರುವ ಕಾರಣ ಅವರು ಕೃಷಿಗೆ ಬೇಕಾದ ಸಾಲಗಳನ್ನು ಕೊಡಲು ಸಹಕಾರ ಸಂಘದವರು ಒಪ್ಪುವದಿಲ್ಲ. ಅದರಂತೆಯೇ ಹೊಸ ರೀತಿಯ ಕೃಷಿಯ ಕ್ರಮಗಳನ್ನು ಕಲಿತುಕೊಳ್ಳಲು ಅವರಿಗೆ ಸಾಧ್ಯವಿರುವುದಿಲ್ಲ. ಅವುಗಳನ್ನು ಸ್ವೀಕರಿಸಲಿಕ್ಕೂ ಅವರಿಗೆ ಧೈರ್ಯವಿರುವುದಿಲ್ಲ. ಯಾವ ಸುಧಾರಣೆಯನ್ನು ಮಾಡಬೇಕಾದರೂ ಮೊದಲು ಕೃಷಕರಿಗೆ ವಿದ್ಯೆಯು ಅತ್ಯಗತ್ಯವಿದೆ. ಹೊಸ ಸಂಗತಿಯನ್ನು ಅವರು ಥಟ್ಟನೆ ತಿಳಿದುಕೊಳ್ಳುವಂತೆ ಸರಿಯಾಗಿ ಅವರಿಗೆ ವಿದ್ಯೆ ಕಲಿಸಬೇಕು. ಇದನ್ನು ಮಾಯಾ ಲಾಂದ್ರಗಳ ಮೂಲಕವೂ, ಪ್ರದರ್ಶನಗಳ ಮೂಲಕವೂ, ಸುಲಭವಾಗಿ ಮಾಡಬಹುದು ಪ್ರತಿ ವರ್ಷವೂ ಕೃಷಕನಿಗೆ ಮೂರು ತಿಂಗಳುಗಳ ವಿರಾಮವಿದೆ. ಈ ಮೂರು ತಿಂಗಳುಗಳೇ ಕೃಷಕನ ಶಿಕ್ಷಣಕ್ಕೆ ತಕ್ಕದಾದ ಸಮಯವಾಗಿದೆ. ಶಿಕ್ಷಣ ಕೊಡುವುದರಲ್ಲಿ ಚೆನ್ನಾಗಿ ಅರಿತವರಿಂದಲೇ ಈ ಸಮಯದಲ್ಲಿ ವಿದ್ಯಾಭ್ಯಾಸವನ್ನು ಕೊಡಿಸಬೇಕು.

೩. ಕೃಷಿಯ ಶಿಕ್ಷಣ

ಈ ಶಿಕ್ಷಣೆಯನ್ನು ಮೂರು ರೀತಿಗಳಲ್ಲಿ ಕೊಡಬೇಕು. ಈಗ ಕೃಷಿ ಶಾಲೆಗಳೂ, ಕೊಲೇಜುಗಳೂ, ರಿಸರ್ಚ ಕೊಲೇಜುಗಳೂ ಇರುವವು. ನಮ್ಮವರಲ್ಲಿ ಕೆಲವು ಮಂದಿ ಜನರಿಗೆ ಕೃಷಿಯೇ ಜೀವನೋಪಾಯವಾಗಿರುವುದರಿಂದ ಈಗಿರುವ ಕೃಷಿ ಶಾಲೆಗಳು ಸಾಲವು. ಕೃಷಿ ಶಾಲೆಯಲ್ಲಿ ಕಲಿತು ಕೆಲಸ ಸಿಗದೆ ಇರುವ ಹಲವು ಜನರಿರುವರೆಂದೂ, ಇನ್ನೂ ಇನ್ನೂ ಕೃಷಿಶಾಲೆಗೆ ಹೋಗುವುದು ಅನಗತ್ಯವೆಂದೂ ತಿಳಿಯುವುದು ತಪ್ಪು. ಕೃಷಿಶಾಲೆಯಲ್ಲಿ ತರಬೇತಿಯನ್ನು ಹೊಂದುವುದು ಸರಕಾರಿ ಕೆಲಸವನ್ನು ಪಡೆಯುವ ಸಲುವಾಗಿ ಅಲ್ಲ, ಕೃಷಿಯನ್ನು ಚೆನ್ನಾಗಿ ಮಾಡಲಿಕ್ಕೆ.

ಅವರು ಕೃಷಿ ಶಾಲೆಯನ್ನು ಬಿಟ್ಟು ತಮ್ಮ ತಮ್ಮ ಊರಿಗೆ ಹೋಗಿ ಹೊಲಗಳಲ್ಲಿ ತಾವು ಕಲಿತ ರೀತಿಯ ಬೆಳೆ ಬೆಳೆಸಿ ಲಾಭಹೊಂದಬೇಕು. ಮೊದಲನೆಯದಾಗಿ ಬೇಕಾದುದೇ ಕೃಷಿ ಶಾಲೆಗಳ ಸಂಖ್ಯೆಯನ್ನು ಏರಿಸುವುದು. ಮುಂಬಾಯಿ ಇಲಾಖೆ ಸಂಸ್ಥಾನದಲ್ಲಿ ಪೂನೆಯಲ್ಲಿ ಒಂದು ಎಗ್ರಿಕಲ್ಚರಲ್ ಕೊಲೇಜೂ, ೬ ಎಗ್ರಿಕಲ್ಚರಲ್ ಶಾಲೆಗಳೂ ಇರುವವು. ಇವುಗಳಲ್ಲಿ ಹೆಚ್ಚಿನ ಶಿಕ್ಷಣೆಯೂ ದೊರೆಯುವುದಿಲ್ಲ

ಕೃಷಿ ಶಾಲೆ ಮತ್ತು ಕೊಲೇಜುಗಳೊಳಗೆ ಹೆಚ್ಚಿನ ಸಂಬಂಧವಿರುವುದಿಲ್ಲ. ಸಾಧಾರಣ ವಿದ್ಯೆಯಲ್ಲಿ ಮೂರು ಬೇಧಗಳಿವೆ. ಪ್ರಾಥಮಿಕ ವಿದ್ಯೆ, ಸೆಕೆಂಡರಿ ವಿದ್ಯೆ, ಕೊಲೇಜು ವಿದ್ಯೆ, ಇವುಗಳೊಳಗೆ ಪರಸ್ಪರ ಸಂಬಂಧವಿದೆ. ಇದೇ ರೀತಿಯಲ್ಲಿ ಕೃಷಿಯ ವಿಷಯವಾಗಿ ಪ್ರಾಥಮಿಕ ಶಾಲೆ, ಸೆಕೆಂಡರಿ ಶಾಲೆ, ಮತ್ತು ಕೊಲೇಜುಗಳನ್ನು ಕ್ರಮಪ್ರಕಾರವಾಗಿ ತೆರೆಯಬೇಕು. ಪ್ರಾಥಮಿಕ ಶಾಲೆಯ ಶಿಕ್ಷಣೆಯು ಕೇವಲ ಕೃಷಿಗೆ ಮಾತ್ರ ಸಂಬಂಧಿಸಿರದೆ ಇತರ ವಿಷಯಗಳನ್ನು ಅಲ್ಲಿ ಕಲಿಸಬೇಕು. ಕೃಷಿ ಕೊಲೇಜಿಗೆ ಈಗ ಕೊಲೇಜಿನಲ್ಲಿ ಪಾಸಾದ ಮಕ್ಕಳನ್ನು ಮಾತ್ರವೇ ಸೇರಿಸಿಕೊಳ್ಳುವರು. ಆದರೆ ಹಾಗೆ ಮಾಡದೆ ಕೃಷಿಯ ಮೊದಲಿನ ಎರಡು ಶಾಲೆಗಳ ಶಿಕ್ಷಣ ಹೊಂದಿದವರನ್ನು ಕೊಲೇಜಿಗೆ ಸೇರಿಸಿಕೊಳ್ಳಬೇಕು

ಕೃಷಿ ಶಿಕ್ಷಣೆಯ ಕುರಿತು ಈ ಮೇಲಿನವುಗಳು ಕೆಲವು ಸೂಚನೆಗಳಾಗಿವೆ. ಈಗಿನ ಕ್ರಮವನ್ನು ಬಿಟ್ಟು ಹೊಸ ಕ್ರಮವನ್ನು ಅವಲಂಭಿಸಬೇಕಾದರೆ ಬಹು ಹಣ ಬೇಕೆಂದೇನೋ ನಿಜ. ಆದರೆ ಸುಧಾರಣೆ ಆಗಬೇಕೆಂದಾದರೆ ಹಣವನ್ನು ಖರ್ಚುಮಾಡಲೇಬೇಕು.

(continued from 2nd page)

The C. P. C. Co. applied for a license to run its buses between Mangalore & Udipi via Karkul and the D. B. President refused same. This fact is not denied even by Mr. I. C. This C. P. C. Co. has amongst its shareholders many poor people from all castes. In fact the Company has justified its name and existence for the benefit of the public. As such an extension of its line ought to have been most welcome to all and the public fail to see what motive prompted the D. B. President to refuse it a license. We doubt not that the D. B. President is an honorable man but his honor will not be a guarantee of correctness for all his actions right or wrong. (Is it not height of folly to say that Brutus' honor would be a justification of Caesar's murder by him.) Come friend I. C. the public will not be satisfied by your negative challenge. The D. B. President is a public man and his one aim should be public good. Did the D. B. President fear he would be doing a positive disservice to the public by granting a license to the C. P. C. Co.? You seem to be in his confidence. Why then be silent. Out with his motives for refusing the license and let the public be the judges.

Mr. I. C. perhaps you are aware that the C. P. C. Co. was the first in the field and as a business Company it has every right to extend its scope of business. When it was refused a license by the D. B. President it was forced to purchase the other two Concerns as a result of this refusal. Quite natural and logical too. Why then twist your arguments and throw mud at the C. P. C. Co.?

As for Mr. I. C.'s statement that the C. P. C. Co. took undue advantage over the K. M. S. & G. M. S. the share holders of these two Concerns are better judges. Your uncalled for solicitude for these two concerns is rather curious in as much as it amounts to saying, that the share holders of these two concerns were foolish people who could not distinguish between a good and bad bargain. It is a preposterous statement. There is, however one redeeming feature in it and that is that there were other bidders for the two concerns besides the C. P. C. Co. Naturally the public will infer that the C. P. C. Co. was the *highest* bidder and this absolves the C. P. C. Co. of your false insinuation.

As for South Kanara being a hot bed of malice why, you yourself are not above this and the public will not be wrong in inferring that your articles under review are proofs conclusive of your statement.

ARTICLE NO. 2.

In this Mr. I. C. says

(1) The reduction of motor fares by the C. P. C. Co. would mean the ruin of proprietory motor concerns.

(2) The motive behind this reduction of fares is one of ambition—to get enriched at the expense of others.

(3) Prays for the intervention of the D. B. President to refuse permission to the C. P. C. to reduce the fares and if this is not possible to reduce the District Board levy.

While we congratulate Mr. I. C. for his solicitude for the welfare of proprietory motor concerns (can it be that he is one such? Of course the Editor of the '*Kanteerava*' in which the article finds place is the proprietor of one service) we really fail to see any sense in his arguments attributing evil motives to the C. P. C. Co. for reduction in motor fares.

The public are fully aware that last year when the motor fare was 9 pies per mile the C. P. C. Co. paid a Dividend & Bonus of 22% to its Shareholders. If now the travelling public demand a reduction in motor fares, the C. P. C. is bound to do it without running the risk of losing by such action. In fact the D. B. President himself should have moved in the matter. This limited concern has by this time amply repaid its Shareholders capital and interest and the time has now come when it should not be mad after huge profits at the expense of the travelling public. It is true that the C. P. C. Co. is the bearer of the capital of many but it is equally true that the *profits* also have gone into the pockets of many. In the case of proprietory concerns it is *one* man that gets himself enriched at the expense of the travelling public.

Now then if it pays the C. P. C. Co. to reduce its fares why should it not do so? And again why should proprietory concerns clammer after higher rates and huge profits to the detriment of the travelling public. Surely the D. B. President who is also a lawyer by profession will not allow himself to be thus humoured by Mr. I. C. If it finds that it pays the C. P. C. Co. to reduce its fares he cannot as in duty bound grant I. C. his prayer as such action on his part would then mean the swindling of the travelling public by these motor concerns. Surely there must be a limit to profits earned by these motor concerns.

It may be urged that proprietory motor concerns are often losing. The cause is gross mismanagement in invariably all cases. As for competition the public know well enough the tactics of these proprietory concerns whose agents have unbridled authority to issue tickets as they please without running the risk of detection. The agents of the C. P. C. Co. on the other hand are helpless against such agents of rival Companies.

Sir Editor, your readers along with your good self will thus agree with me when I say that my friend Mr. I. C. has some eye trouble—presumably shortsighted. Permit me to advise him through your columns to get himself treated by an Optician before he attempts again to estimate others through his own window.

Someshwar,
16th Sept. 1928

"N"

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವತ್ತಿಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೊನೋಗ್ರಾಫ, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ ಕ.

ಸೂ. ಸೂ. – ನಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆ ಮಾನಸ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು

ಇನ್ನೂ ಹೆಚ್ಚಿನ ಕಾರಣಗಳು!

ಪೆರೆಡ್ಯಾಸ್ ಟೋನಿಕ್ ಪಿಲ್ಸ್

ಎಂಬ್ರಕಸ್ತೂರಿ, ಶಿಲಾರಾಳ, ಬಂಗಾರ ಮೊದಲಾದ ಅಮೌಲ್ಯ ಪದಾರ್ಥಗಳಿಂದಾಗುವ ಈ ನಿರ್ಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವನ್ನು ಘಟಿಸುವ ಈ ಮಾತ್ರೆಗಳು ಇಡೀ ಶರೀರದ ಚೇತನವನ್ನು ವೃದ್ಧಿ ಮಾಡುವುವು ದೇಹಶಕ್ತಿಯನ್ನೂ ಸ್ನಾಯುಗಳ ಬಲವನ್ನೂ ಹೆಚ್ಚಿಸಿ, ತ್ರಾಣವನ್ನೂ ತೇಜವನ್ನೂ ಅತಿಯಾಗಿ ಕೆಳೆಕೊಂಡಿರುವವರಿಗಾದರೂ ಸ್ವಲ್ಪ ಕಾಲದಲ್ಲೇ

— ಕೊಡುವುವು —

60 ಮಾತ್ರೆಗಳುಳ್ಳ ಸೀಸೆಗೆ ಬೆಲೆ 7–8–0 ಮಾತ್ರ

ಆರ್. ಛೋಟಾಲಾಲ್ ಎಂಡ್ ಕೋ,
(K) ಪ್ರಿನ್ಸೆಸ್‌ಸ್ಟ್ರೀಟ್, ಬೊಂಬಾಯಿ ನಂಬ್ರ 2

ಮಲೇರಿಯಾ ಸ್ಪೆಸಿಫಿಕ್.

ಮಲೇರಿಯಾ ಮತ್ತು ಇತರ ಎಲ್ಲಾ ಜ್ವರಗಳಿಗೂ, ಉತ್ತಮ ಔಷಧಿಯೆಂದ, ಎಲ್ಲಾ ವೈದ್ಯರಿಂದ ಶಿಫಾರಸ ಹೊಂದಿರುತ್ತದೆ ಸ್ವಲ್ಪ ಸಮಯದೊಳಗಾಗಿ ಗುಣವನ್ನೊದಗಿಸುವದು ಮತ್ತು ಜ್ವರದಿಂದ ಮೇಲೆ ಕೆಲವು ದಿನಗಳ ವರೆಗೆ ಸೇವಿಸುವದರಿಂದ ಶಕ್ತಿಯು ಬೆಳೆಯುವುದು

ಕ್ರಯದ ಪಟ್ಟಿಗೂ ಮಾಹಿತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಮ್. ಡಿ ವ್ಹೋರಾ ಮತ್ತು ಕಂಪೆನಿ
ಚಿಲರೆ ಮತ್ತು ಒಟ್ಟಾಗಿ ಔಷಧಿ ವ್ಯಾಪಾರಿಗಳು
P O ಬೋಕ್ಸ್ ನಂಬ್ರ 2109 ಬೊಂಬಾಯಿ ನಂ 2

ಸನ್ ೧೯೨೭-'೨೮ರಲ್ಲಿ ಹೊಸತಾಗಿ ತಯಾರಾದ
ಸಮಸ್ತರಿಗೂ ಚೆನ್ನಾಗಿ ಮಾಹಿತಿಯುಳ್ಳ

'ಸೂರ್ಯ' ಗುರುತುಳ್ಳ ಪವಿತ್ರ ಕೇಶರ

ರಿಜಿಸ್ಟರ್ಡ್ ಟ್ರೇಡ್‌ಮಾರ್ಕ್



ಅತ್ಯುತ್ತಮವಾದ ದುರ್ಲಭ ವನಸ್ಪತಿಗಳಿಂದ ತಯಾರಿಸಿದ್ದು.

'ಸೂರ್ಯ'ಮಾರ್ಕಿನ ಉತ್ತಮ ಕೇಶರವನ್ನು ಕೆಳಗೆ ವಿಳಾಸ ಕೊಟ್ಟಿರುವವರಿಂದ ಪಡೆಯಿರಿ

ಸೂರ್ಯಮಾರ್ಕಿನ ಕೇಶರದ ಡಬ್ಬಿಯು ಎರಡು ರಾತಲಿನದು ಒಂದು ರಾತಲಿನ ಡಬ್ಬಿ ಇರುವುದಿಲ್ಲ ಆದರೆ ಅತಿ ಕಡಿಮೆಯೆಂದರೆ ಒಂದು ಔನ್ಸ್ ಧಾರದಲ್ಲಾದರೂ ಮಾರಲಾಗುತ್ತದೆ.

ವಿಳಾಸ— ಎಸ್. ನಾರಾಯಣ ಮತ್ತು ಕಂಪೆನಿ,
28, ಹಮಾಮ್ ಸ್ಟ್ರೀಟ್, ಫೋರ್ಟ್, ಮುಂಬಯಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು

ದಯ ಇಟ್ಟು ಮೇಲಣ ಸಾಮಾನುಗಳನ್ನು [illegible] ಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ [illegible] ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ [illegible]ಗನ್ನು ಕಳುಹಿಸುತ್ತೇವೆ

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್
ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.
210, ಅಬ್ದುಲ್ ರಹಿಮಾನ್ ರಸ್ತೆ, ಮುಂಬಾಯಿ.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡು (ದ ಕ)
ರೈಲ್ವೆ ಸ್ಟೇಶನ್ ಕಾಂಞಂಗಾಡು (S I R)

ಆಯುರ್ವೇದೀಯ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ [illegible] 'ವೈದ್ಯರತ್ನ' ಯೆಂಬ [illegible] ಪ್ರಸಿದ್ಧರಾದ 'ಧನ್ವಂತರಿ ಶ್ರೀ ವೈದ್ಯ [illegible]' ಅವರುಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ [illegible]

[illegible]

ವಾರಕ್ಕೆ ಪ್ರತಿ ಶನಿವಾರ ಎಂದು ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡು (ದ. ಕ.

Calcutta Exhibition

1928

Organised by the 43rd Session of the INDIAN NATIONAL CONGRESS.

UNIQUE OPPORTUNITY

For Manufacturers, Producers, Merchants, Dealers, Show Men concerned with Swadeshi goods and products, Artists Craftsmen etc. CALCUTTA EXHIBITION will remain open from the middle of December 1928 to the middle of January 1929

Space will be allotted in the General Booths or for the erection of Exhibitors own Pavilions in strict rotation The site of the Exhibition will be PARK CIRCUS.

Apply for Particulars to

N. R. Sarkar
Secretary,
3A, Hogg Street, CALCUTTA.

Edited Printed & Published by V. S. Kamath at the M. T. A. SHARADA PRESS, MANGALORE.

ವರ್ಷ ಒಂದಕ್ಕೆ ರೂಪಾಯಿ 2-0-0 Registered No. M. 489 ಟಪ್ಪಾಲು ಹಾಸಲು ಸೇರಿ ರೂಪಾಯಿ 2-18-0

ಸ್ವದೇಶಾಭಿಮಾನಿ.

ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ | ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ || ೧ ||
ದೊರೆಯಲನುಪಮರತ್ನಗಳು ಸಾ | ಗರವ ಮಥಿಸಲು ಸುರರಿಗದರಿಂ | ತೆರುತವಾಯಿತೆ? ಮತ್ತೆ ವಿಷವ ಸುಡುತ ಬರುತಿರುವ ||
ಗರಳಕವರಂಜಿದರೆ? ಸುಧೆಯನು | ಪಡೆತು ಸ್ತುದ್ದ ತೆರದಿ ಕಳೆತರೆ ತೆರಳ ಬಲ್ಲರೆ? ತೊರೆದು ಧೀರರು ನಿಶ್ಚಿತಾರ್ಥವನು || ೧ ||

ಪುಸ್ತಕ ೨೨. ಮಂಗಳೂರು, ತಾ ೨೮ನೇ ಶುಕ್ರವಾರ ಸಪ್ಟಂಬರ ೧೯೨೮. (28-9-28.) ಸಂಚಿಕೆ ೩೯

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು: — ಉಡುಪಿ

Branches:—COONDAPOOR
, Mangalore
ಶಾಖೆ: — ಕುಂದಾಪುರ.
" ಮಂಗಳೂರು

Statement of Affairs of the Canara Banking Corporation Udipi, Limited as at 31st August 1928

	CAPITAL AND LIABILITIES				PROPERTY AND ASSETS		
1	Paid up Capital	Rs	1,99,650-0-0	1	Premises Building Furniture &c	Rs	9 491 2 6
2	Reserve Fund and other funds	,	96 600-0 0	2	Investments on G P Notes	,	3 34 216 5 0
3	Deposits		17 53 749 4 11	3	Investments on Approved Securities	,	17 26 132 2 9
4	Overdraft with Bankers		14,713 4 8	4	Bills for collection as per Contra		14,558 9 0
5	Sundry Persons A/C as per Contra		14 558 9 0	5	Sundries including P & L items	,	7 905 1 9
6	Sundries including P & L items	,	1 21 607 8 5	6	Cash in hand & with Bankers		39,573 6 4
		Total	22 00 878 10 10			Total	22 00 8 8 10-10

Office of the Corporation
UDIPI, 11-9-'28.

N ANANDA RAO
Secretary

ಅಮೃತಾಂಜನ

ಕ್ಷಣಿಕ ಪ್ರಯೋಜನವಲ್ಲ ಪ್ರಸಿದ್ಧವಪ್ಪ ನೋವಿನ
— ಮುಲಾಮು. —

ತಲೆನೋವಿನಿಂದ ಜಡಪಡುವ [illegible] ಶೀತದಿಂದ ವಿಶಾಂತಿಯಿಲ್ಲದ ಕೆಮ್ಮಿನಿಂದ ಪೀಡಿತರಾದ ಜ್ವರದಿಂ ಕಷ್ಟಪಟ್ಟ ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು [illegible] ರೋಗಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ ಕ್ರಯ ಡಬ್ಬಿಗೆ 10 ಆಣೆ ಟಪ್ಪಾಲು ಹಾಸಲು ಪ್ರತ್ಯೇಕ

ವಿ ಸೂ — [illegible] ಮೋಸಹೋಗದಿರಿ —

ಗಜಕರ್ಣದ ಮುಲಾಮು — ಎಲ್ಲಾ [illegible] ಗಜಕರ್ಣಗಳು, ಕಜ್ಜಿಗಳು, ನಂಜಿಗೆಯ [illegible] ಖಂಡಿತವಾದ ಔಷಧಿಯಾಗಿದೆ ಮೂರು ದಿನದಲ್ಲಿ [illegible] ಪೂರ್ಣ ಗುಣವಾಗುವುದು ಕ್ರಯ ಡಬ್ಬಿಗೆ ಆಣೆ 6

ದಂತಮಂಜನ — [illegible] ಬರುವಿಕೆಯು ನಿಂತ, ಹಲ್ಲುಗಳ [illegible] ಮಾರ್ಪಟ್ಟು ಬಲಗೊಂಡುವವು ಕ್ರಯ ಡಬ್ಬಿ 1ಕ್ಕೆ ಆಣೆ 2

ಅಮೃತಾಂಜನ ಡಿಪೋ,
6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜಟೌನ್, ಮದ್ರಾಸು. 249 ಫ್ರೇಯರ್ ರೋಡ್ ಮುಂಬಯಿ,
ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,



ಡೋಂಗರೆ
ಇವರ
ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No II of 1927
Price 8 anna
Postage Extra
For copies apply to—
The M T A Sharada Press
Car st eet, MANGALORE

ADVERTISE IN OUR WEEKLY
To Reach the Hearths & Homes of India's Masses
For Particulars Apply to
The Manager,
SWADESHABHIMANI,
MANGALORE.

ಪತ್ರವ್ಯವಹಾರ

ಪತ್ರವ್ಯವಹಾರದ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಉತ್ತರ ಕನ್ನಡ ಜಿಲ್ಲೆಯ ನಾಡವರಿಗೂ, ದಕ್ಷಿಣ ಕನ್ನಡ ಜಿಲ್ಲೆಯ ಬಂಟರಿಗೂ ಇರುವ ಸಂಬಂಧವೇನು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಪರಿವಾರ ಬಂಟರು—ಈ ಜಾತಿಯವರು ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲೂಕಿನ ಪಾವೂರು, ಕುಂಬಳೆಯ ನೆರೆಕರೆಯ ಗ್ರಾಮಗಳು, ಕಾಸರಗೋಡಿನ ನೆರೆಕರೆಯ ಗ್ರಾಮಗಳಲ್ಲಿರುತ್ತಾರೆ. ಇವರು ಮಕ್ಕಳ ಸಂತಾನ ಕಟ್ಟನ್ನು ಆಚರಿಸುತ್ತಾರೆ. ಭೂತಾಳಪಾಂಡ್ಯ ಕಟ್ಟಿನಲ್ಲಿ ಕೊಟ್ಟಿರುವ ಅಳಿಯ ಸಂತಾನ ಜಾತಿ ಪಟ್ಟಿಯಲ್ಲಿ ೧೩ನೇ ಜಾತಿಯವರು ಪರಿವಾರದವರು ಎಂದು ಕೊಟ್ಟದ್ದು ತಪ್ಪಾಗಿದೆ. ಯಾಕೆಂದರೆ ಈ ಜಿಲ್ಲೆಯಲ್ಲಿ ಪರಿವಾರ ಬಂಟರು ಅಳಿಯ ಸಂತಾನ ಕಟ್ಟನ್ನು ಯಾವ ಭಾಗದಲ್ಲಿಯೂ ಆಚರಿಸುವುದಿಲ್ಲ. ಇವರಿಗೂ ಬಂಟರಿಗೂ ಊಟ ಉಪಚಾರಗಳು ಆಗುತ್ತವೆ. ಪರಿವಾರದವರು ಬಂಟರ ಮನೆಯಲ್ಲಿ ಊಟಮಾಡಿದರೆ ಊಟಮಾಡಿದ ಎಲೆಯನ್ನು ಅವರೇ ತೆಗೆಯಬೇಕಾಗುತ್ತದೆ. ಬಂಟರು ಪರಿವಾರದವರಲ್ಲಿ ಊಟಮಾಡಿದರೆ ಬಂಟ್ರ ಎಲೆಯನ್ನು ಪರಿವಾರದವರೇ ತೆಗೆಯಬೇಕೆಂಬ ಪದ್ಧತಿಯದೆ. ಈಗ ಬಂಟರು ಪರಿವಾರದವರಲ್ಲಿ ಊಟಮಾಡುವದಿಲ್ಲ. ಪರಿವಾರದವರು ಬಂಟರಲ್ಲಿ ಊಟಮಾಡುವದಿಲ್ಲ. ಪರಿವಾರದವರಲ್ಲಿ ರೈ, ಆಳ್ವ, ಹೆಗ್ಡೆ, ಶೆಟ್ಟಿ, ಭಂಡಾರಿ ಮುಂತಾದ ಮೇಲು ಹೆಸರುಗಳು ಇರುವುದಿಲ್ಲ. ನಾಯಕ ಎಂಬ ಒಂದೇ ಮೇಲು ಹೆಸರು ಮಾತ್ರವೇ ಇದೆ. ನಾಯಕ ಎಂಬ ಮೇಲು ಹೆಸರು ಬಂಟರಲ್ಲಿಯೂ ಇದೆ. ಬಂಟರಿಗೂ ಪರಿವಾರದವರಿಗೂ ನೆಂಟಸ್ತಿಕೆಯಾಗುವದಿಲ್ಲ.

ಪರಿವಾರದವರು ಅಂದರೆ ಅರಸರ ಪರಿವಾರದವರೆಂದು ಊಹಿಸಬೇಕಾಗುತ್ತದೆ. ಗುತ್ತಿನವರ ಪರಿವಾರದವರೆಂದು ಹೇಳಲು ಸಾಧ್ಯವಿಲ್ಲ. ಯಾಕೆಂದರೆ ಗುತ್ತಿನವರಿಗೆ ಪರಿವಾರದವರಿಲ್ಲ. ಒಂದು ವೇಳೆ ಇವರು ಗುತ್ತಿನವರ ಪರಿವಾರದವರಾದರೆ ಈ ತರದ ಭೇದಗಳು ಉಂಟಾಗುತ್ತಿರಲಿಲ್ಲ. ಇವರ ಆನೆಗೊಂದಿಯ ಅರಸರ ಪರಿವಾರದವರೆಂದು ಹೇಳುತ್ತಾರೆ. ಆನೆಗೊಂದಿ ರಾಜ್ಯವು ವಿಜಯನಗರ ರಾಜ್ಯವು ಸ್ಥಾಪನೆಯಾಗುವ ೭೦೦ ವರುಷಗಳ ಮೊದಲಿನಿಂದಲೆ ತುಂಗಭದ್ರಾ ನದಿಯ ಉತ್ತರ ದಿಕ್ಕಿನಲ್ಲಿ ಸ್ಥಾಪನೆಯಾಗಿತ್ತು. ಈ ರಾಜವಂಶದ ಮೂಲ ಪುರುಷನು ನಂದಮಹಾರಾಯನು. ಇವನ ಮಗ ಚಾಲುಕ್ಯ. ಇವನ ಮಗ ವಿಜಯಧ್ವಜ. ವಿಜಯನಗರ ಪಟ್ಟಣವನ್ನು ಮೊದಲನೇ ಸಾರಿ ಸ್ಥಾಪಿಸಿದವನು ಇವನೇ. ಇವನ ಮಗ ನರಸಿಂಹದೇವರಾಯ. ಇವನ ಮಗ ರಾಮದೇವರಾಯ. ಇವನ ಮಗ ಪ್ರತಾಪರಾಯ. ಇವನ ಮಗ ಜಂಬುಕೇಶ್ವರರಾಯ. ಇವನು ಕ್ರಿ. ಶ. ೧೩೩೪ರಲ್ಲಿ ಕಾಲವಾದನು. ಇವನ ತರುವಾಯ ವಿದ್ಯಾರಣ್ಯರ ಇದೇ ವಿಜಯನಗರವನ್ನು ರಾಜಧಾನಿಯಾಗಿ ಮಾಡಿ ಬುಕ್ಕರಾಯನಿಗೆ ಪಟ್ಟ ಕಟ್ಟಿದನು. ಪರಿವಾರದವರು ಈ ಆನೆಗುಂದಿಯ ಅರಸರ ಪರಿವಾರದವರಾಗಿದ್ದು ಈ ಅರಸರ ತುಳುರಾಜ್ಯಕ್ಕೆ ಬಂದಾಗ ಅವರ ಸೇನಾಧಿಪತಿಗಳಾಗಿ ಬಂದು ತುಳುರಾಜ್ಯದ ಗಡಿಯಾಗಿರುವ ಕಾಸರಗೋಡಿನ ಸುತ್ತುಮುತ್ತಲಿನ ಗ್ರಾಮಗಳಲ್ಲಿ ಉಳುಕೊಂಡವರೇ ಎಂದು ಊಹಿಸಲು ಆಸ್ಪದವಿದೆ. ಪಯಸ್ವಿನಿಯ ಆಚೆಯಲ್ಲಿ ತುಳು ರಾಜ್ಯದ ಗಡಿಯಾಗಿತ್ತು. ಪರಿವಾರದವರು ಪಯಸ್ವಿನಿಯ ಪಶ್ಚಿಮ ದಿಕ್ಕಿನಲ್ಲಿ ಕಂಡುಬರುವದಿಲ್ಲ. ಇವರು ಐಶ್ವರ್ಯವಂತರಾಗಿದ್ದರು. ಪರಿವಾರದವರು ಭೂತಾಳಪಾಂಡ್ಯನು ಆಳುವ ಕಾಲದಲ್ಲಿ ಅವನ ರಾಜ್ಯದ ಗಡಿಯ ಒಳಗೆ ಇರುತ್ತಿದ್ದರೆ ಬಲಿಷ್ಠನಾದ ಈ ಅರಸನ ಆಜ್ಞೆಗೂ ಅಳಿಯ ಸಂತಾನ ಕಟ್ಟನ್ನು ಆಚರಿಸಬೇಕೆಂದು ಒತ್ತಾಯ ಪಡಿಸದೆ ಇರುತ್ತಿದ್ದಿಲ. ಇದರಿಂದ ಪರಿವಾರದವರು ಭೂತಾಳಪಾಂಡ್ಯನ ಮರಣಾನಂತರವೇ ಇಲ್ಲಿ ಬಂದವರಾಗಿರಬೇಕೆಂದು ಊಹಿಸಬೇಕಾಗುತ್ತದೆ.

ಕೌಳದ ಮತಿಯನಾ ತಿಮ್ಮನೆಂಬವನು ದಕ್ಷಿಣ ಕನ್ನಡದಿಂದ ಹೋಗಿ ವಿಜಯನಗರವನ್ನು ಆಳಿದನು. ಇವನ ಪತ್ನಿಯಾದ ದೇವಕಿಯಿಂದ ಈಶ್ವರನೂ ಈಶ್ವರ ಮತ್ತು ಬುಕ್ಕಮ್ಮನಿಂದ ನರಸನಾಯಕನೂ ಇವನಿಂದ ಕೃಷ್ಣದೇವರಾಯನೂ ಜನಿಸಿದರೆಂದೂ ತಿಳಿಯಬರುತ್ತದೆ ಎಂದು ಒಂದು ಪ್ರಶ್ನೆಯಾಗಿದೆ.

ವಿಜಯನಗರದಲ್ಲಿ ಮೂರು ವಂಶಗಳ ಅರಸುಗಳು ಆಳಿರುವರು. ೧ನೇ ವಂಶವು ಸಂಗಮ ವಂಶವಾಗಿದೆ. ೨ನೇ ವಂಶವು ಸಾಳ್ವನರಸಿಂಹನದಾಗಿದೆ. ೩ನೇ ವಂಶವು ಕೃಷ್ಣದೇವರಾಯನ ಮಗಳಾದ ತಿರುಮಲಮ್ಮನ ವಂಶವಾಗಿದೆ.

ಮೇಲೆ ಬರೆದ ಪ್ರಶ್ನೆಯು ೨ನೇ ವಂಶದ ಅರಸರಿಗೆ ಸಮ್ಮಂಧಪಟ್ಟದ್ದಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಎಂಬ ಶಬ್ದವನ್ನು ಉಪಯೋಗಿಸುವುದು ಸರಿಯಾಗುವುದಿಲ್ಲ. ಈ ಜಿಲ್ಲೆಗೆ ದಕ್ಷಿಣ ಕನ್ನಡ ಎಂಬ ಹೆಸರು ಬಂದುದು ಇಂಗ್ಲೀಷರು ಕನ್ನಡ ಜಿಲ್ಲೆಯನ್ನು ಎರಡು ತುಂಡು ಮಾಡಿದ ಮೇಲೆ. ಟಿಪ್ಪುಸುಲ್ತಾನನ ಕಾಲದಲ್ಲಿ ಕನ್ನಡ ಜಿಲ್ಲೆ ಎಂಬ ಹೆಸರಿತ್ತು. ಕನ್ನಡ ಜಿಲ್ಲೆಯೆಂಬ ಹೆಸರನ್ನು ಕೊಟ್ಟವರು ಕೆಳದಿ ನಾಯಕರು. ಇಕ್ಕೇರಿ ನಾಯಕರ ಮೊದಲು ಈ ಜಿಲ್ಲೆಯನ್ನು ಆಳಿದ ವಿಜಯನಗರದ ಅರಸರ ರಾಜ್ಯಭಾರದ ಅಂತ್ಯಕಾಲದ ವರೆಗೆ ಇದಕ್ಕೆ ತುಳು ರಾಜ್ಯವೆಂಬ ಹೆಸರಿತ್ತು. ತುಳು ರಾಜ್ಯದಲ್ಲಿ ಸಾಳ್ವ ದೇಶ ಅಥವಾ ಸಾಳ ನಾಡು ಇರುವುದಿಲ್ಲ. ಆದರೆ ತುಳುವ ಜೈನ ರಾಜರ ಭಾರಸ ಕುಟುಂಬದ ಅರಸರ ರಾಜ್ಯದಲ್ಲಿ ಉತ್ತರ ಕನ್ನಡದಲ್ಲಿ ಸಾಳನಾಡು ಎಂಬ ಭಾಗವಿದೆ. ಈ ಭಾರಸ ಕುಟುಂಬದವರು ಉತ್ತರ ಕನ್ನಡ ಜಿಲ್ಲೆಯ ಹಾಡುವಳ್ಳಿ ಅಥವಾ ಸಂಗೀತಪುರದಲ್ಲಿ ಆಳುತ್ತಿದ್ದರು. ಈ ಅರಸರಿಗೆ ಸಾಳ್ವಮಲ್ಲ ಎಂಬ ಹೆಸರಿತ್ತು. ೧೫೫೦ರಲ್ಲಿ ಈ ರಾಜ್ಯವನ್ನು ಸಾಳ್ವದೇವರಾಯನು ಆಳುತ್ತಿದ್ದನು. ಆದರೆ ಇವರು ಜೈನರಾಜರು. ೧೫೬೪ರಲ್ಲಿ ತುಳು ರಾಜ್ಯದಲ್ಲಿ ಪ್ರಯಾಣ ಮಾಡಿದ ಸಿಸರ್ ಫ್ರೆಡರಿಕ್ ಎಂಬ ಪೋರ್ತುಗೀಸ ಪ್ರಯಾಣಿಕನು ತುಳುನಾಡು ಹೊನ್ನಾವರದಿಂದ ಪಯಸ್ವಿನಿ ನದಿಯ ವರೆಗೆ ವಿಸ್ತರಿಸಿಕೊಂಡಿತ್ತೆಂದು ಹೇಳುತ್ತಾನೆ.

ಆದುದರಿಂದ ತಿಮ್ಮನೆಂಬವನು ತುಳುದೇಶದ ಸಾಳನಾಡಿನವನಾಗಿರಬಹುದೆಂದು ಊಹಿಸಬಹುದು. ವಿಜಯನಗರದಲ್ಲಿ ಸಾಳ್ವನರಸು ೨ನೇ ವಂಶದ ಮೊದಲನೇ ಅರಸನಾಗಿ ಆಳಿರುವನು. ಇವನಿಗೆ ನರಸನಾಯಕ ಅಥವಾ ಸಾಳ್ವನರಸಿಂಹನೆಂಬ ಹೆಸರೂ ಇತ್ತು. ಇವನಿಗೆ ಮೂವರು ಹೆಂಡಂದಿಯರಿದ್ದರು. ಮೊದಲನೆಯವಳು ತಿಪ್ಪಾದೇವಿ. ಇವಳ ಮಗ ವೀರನರಸಿಂಹ (ಭುಜಬಲರಾಯ) ಇವನು ೧೫೦೫—೧೫೦೯ರ ವರೆಗೆ ಆಳಿದನು. ಎರಡನೇ ಹೆಂಡತಿ ನಾಗಲಾದೇವಿ. ಇವಳ ಮಗ ಪ್ರಖ್ಯಾತಿಪಟ್ಟ ಕೃಷ್ಣದೇವರಾಯ. ಇವನು ೧೫೦೯—೧೫೩೦ರ ವರೆಗೆ ಆಳಿದನು. ಮೂರನೆ ರಾಣಿ ಓಬಾಂಬಿಕಾದೇವಿ. ಇವಳಿಗೆ ರಂಗ ಮತ್ತು ಅಚ್ಯುತರಾಯ. ಅಚ್ಯುತರಾಯನಿಗೂ ರಂಗನಿಗೂ ಜಗಳವಾಗಿ ಅಚ್ಯುತರಾಯನು ೧೫೩೦-೪೨ರವರೆಗೆ ಆಳಿದನು. ನಂತರ ರಂಗನ ಮಗನಾದ ಸದಾಶಿವರಾಯನು ೧೫೪೨—೧೫೬೫ರ ವರೆಗೆ ಆಳಿದನು. ಈ ವಂಶಾವಳಿಯು ಎಲ್ಲಾ ತರದ ಕುಂದುಕೊರತೆಗಳನ್ನು ಹುಡುಕಿ ತೆಗೆದು ತಯಾರಿಸಿದ ಹೊಸ ಪಟ್ಟಿ. ಇದಕ್ಕೆ ನೂರಾರು ಶಾಸನಗಳ ಆಧಾರಗಳಿವೆ.

ಇದರಿಂದ ತಿಮ್ಮನೂ ಇವನ ಪತ್ನಿ ದೇವಕಿಯಿಂದ ಈಶ್ವರನೂ, ಈಶ್ವರ ಮತ್ತು ಬುಕ್ಕಮ್ಮನಿಂದ ನರಸನಾಯಕನೂ, ಇವನಿಂದ ಕೃಷ್ಣದೇವರಾಯನೂ ಹುಟ್ಟಿದನೆಂದು ಮೇಲೆ ಹೇಳಿದ ಸಂಗತಿಯು ತಪ್ಪಾಗಿರುತ್ತದೆ.

ವಿಜಯನಗರದಲ್ಲಿ ಆಳಿದ ಸಾಳ್ವನರಸನಾಯಕನಿಗೆ ಇದೇ ಸಾಳ್ವ ದೇಶದ ತಿಮ್ಮನೆಂಬ ಬ್ರಾಹ್ಮಣನು ಮುಖ್ಯ ಮಂತ್ರಿಯೂ ಸೇನಾಧಿಪತಿಯೂ ಆಗಿದ್ದನು. ಅರಸನಾದ ಸಾಳ್ವನರಸನಾಯಕನು ಬ್ರಾಹ್ಮಣನಲ್ಲ.

ನವಯುಗದಲ್ಲಿ ಕೊಟ್ಟ ಪ್ರಶ್ನೆಯು ಸಾಳ್ವನರಸನಾಯಕನ ಬ್ರಾಹ್ಮಣ ಮಂತ್ರಿಯಾದ ಸಾಳ್ವ ತಿಮ್ಮನಿಗೆ ಸಮ್ಬಂಧಿಸುತ್ತದೆ. ಮಂತ್ರಿ ತಿಮ್ಮನ ಪತ್ನಿ ದೇವಕಿಯಾಗಿದ್ದಳು. ಈ ದೇವಕಿಯ ಮಗ ಈಶ್ವರ, ಈಶ್ವರನ ಹೆಂಡತಿ ಬುಕ್ಕಮ್ಮನಿಂದ ನರಸನಾಯಕನು ಹುಟ್ಟಿದನು. ಇಲ್ಲಿವರೆಗೆ ಮೇಲಿನ ಪ್ರಶ್ನೆಗೆ ತಾಳೆ ಬೀಳುತ್ತದೆ. ನರಸನಾಯಕನ ಮಗ ಸಾಳ್ವಕ್ಷ್ಮ ಎಂಬವನಾಗಿರುತ್ತಾನೆ. ಇವನು ಅಚ್ಯುತರಾಯನ ಮಂತ್ರಿ, ಕೃಷ್ಣದೇವರಾಯನು ತಿಮ್ಮನ ವಂಶದವನಲ್ಲ.

ಸಾಳ್ವನರಸಿಂಹನು ೧೪೮೬ರಿಂದ ೧೪೯೩ರ ವರೆಗೆ ವಿಜಯನಗರದಲ್ಲಿ ಆಳಿದ ವಿರೂಪಾಕ್ಷರಾಯನ ಪರಿವಾರದ ಸರದಾರರಲ್ಲಿ ಒಬ್ಬನಾಗಿದ್ದನು. ವಿರೂಪಾಕ್ಷರಾಯನ ಅಯೋಗ್ಯನೂ ಹೇಡಿಯೂ ದುರ್ಬಲನೂ ಆಗಿದ್ದನು. ಇದರಿಂದ ವಿಜಯನಗರದ ಹೆಚ್ಚಿನ ಭಾಗವು ಮುಸಲ್ಮಾನರ ಕೈಸೇರಿತು. ರಾಜ್ಯದಲ್ಲಿ ದಂಗೆಗಳಾದವು. ಕಡೆಗೆ ವಿರೂಪಾಕ್ಷನ ಹಿರೀ ಮಗನು ತಂದೆಯನ್ನು ಕೊಂದನು. ಇವನ ತಮ್ಮನಾದ ಪದ್ಮರಾಯನು ತಂದೆಯನ್ನು ಕೊಂದ ಅಣ್ಣನನ್ನು ಕೊಂದನು. ಮತ್ತು ಪಟ್ಟಕ್ಕೆ ಬಂದನು. ಆಗ ಇವರ ಪರಿವಾರದ ಸರದಾರರಲ್ಲಿ ಒಬ್ಬನಾದ ಸಾಳ್ವನರಸಿಂಹನು ಪಟ್ಟವನ್ನೇರಿದನು. ಈ ಸಾಳ್ವನರಸಿಂಹನು ಯದುಕುಲದವನೆಂದು ಹೇಳುತ್ತಾರೆ. ವಿಜಯನಗರ ರಾಜರ ಮೊದಲು ಹೊಯ್ಸಳ ಯಾದವ ಬಲ್ಲಾಳರು ಕರ್ನಾಟಕ ದೇಶವನ್ನು ತುಳು ದೇಶವನ್ನು ಆಳುತ್ತಿದ್ದರು. ಇದರಿಂದ ಈ ಸಾಳ್ವನರಸಿಂಹನು ಯಾದವ ಬಲ್ಲಾಳ ವಂಶದವನಾಗಿರಬಹುದೆಂದು ಊಹಿಸಬೇಕಾಗುತ್ತದೆ. ಇವನು ವಿಜಯನಗರದ ಅರಸರ ಪರಿವಾರ ಸರದಾರನಾಗಿದ್ದನು. ಪರಿವಾರ ಬಂಟರೂ ಬಲ್ಲಾಳ ವಂಶದವರೆಂದು ಹೇಳುವುದರಿಂದ ಇವರು ಹೊಯ್ಸಳ ಯಾದವ ಬಲ್ಲಾಳರ ವಂಶದವರಾಗಿರಬೇಕೆಂದು ಹೇಳಬಹುದು. ಆದುದರಿಂದ ಈ ಜಿಲ್ಲೆಯಲ್ಲಿರುವ ಪರಿವಾರ ಬಂಟರ ಯಾದವ ಬಲ್ಲಾಳ ವಂಶದವನಾದ ಸಾಳ್ವದೇಶದ ಸಾಳ್ವನರಸನಾಯಕನ ಸಮ್ಬಂಧಿಕರಾಗಿರಬೇಕೆಂದು ಹೇಳಬಹುದು. ಸಾಳ್ವನರಸಿಂಹನು ವಿಜಯನಗರದ ಅರಸರ ಪರಿವಾರ ಸೇನಾಧಿಪತಿ ಅಥವಾ ವೀರ ಎಂಬುದರಿಂದ ಇವರ ಪರಿವಾರದ (ವೀರ) ಬಂಟ ಎಂಬ ಹೆಸರನ್ನು ಧರಿಸಿರಬಹುದು. ಸಾಳ್ವನರಸನು ನಾಯಕನು (ಸೇನಾಧಿಪತಿ) ಆದುದರಿಂದ ಇವರ ನಾಯಕ ಎಂಬ ಒಂದು ಬಿರುದನ್ನು ಮಾತ್ರವೇ ಇಟ್ಟುಕೊಂಡಿರುವರು. ಇದರಿಂದ ವಿಜಯನಗರದಲ್ಲಿ ಆಳಿದ ಎರಡನೇ ವಂಶದ ಸಾಳ್ವನರಸಿಂಹನ ವಂಶವು ಪರಿವಾರ ಬಂಟರ ವಂಶವಾಗಿರುತ್ತದೆಂದೂ ಇವರು ಉತ್ತರ ಕನ್ನಡ ಜಿಲ್ಲೆಯ ಸಂಗೀತಪುರದ ಅರಸರ ರಾಜ್ಯದ ಒಂದು ಭಾಗವಾದ ಸಾಳ್ವನಾಡಿನವರೆಂದೂ ಬಂಟರಲ್ಲವೆಂದೂ ಸಾಳ್ವತಿಮ್ಮ, ಈಶ್ವರ, ನರಸನಾಯಕ ಮುಂತಾದವರು ಬ್ರಾಹ್ಮಣ ಮಂತ್ರಿಗಳು ಮಾತ್ರವೇ ಆಗಿರುವರೆಂದೂ ಅರಸರಾಗಿ ವಿಜಯನಗರದಲ್ಲಿ ಆಳಲಿಲ್ಲವೆಂದೂ ತಿಳಿಯಬಹುದು.

ಮೇಲಿನ ಸಂಗತಿಗಳಿಗೆ ಆಧಾರಗಳು ಬೇಕಾಗಿದ್ದರೆ "ಕಾಪಿ ಡಿಯಸ್ ಇನ್ಸ್‌ಕ್ರಿಪ್‌ಶನ್ಸ್ (ಶಾಸನಗಳ) ಪೋರ್ತುಗೀಸ ಚರಿತ್ರೆ ಲಿಸ್ಟ್ ಸೋರ್ಸ್ ಟು ದಿ ಹಿಸ್ಟರಿ ಒಫ್ ವಿಜಯನಗರ ಹಿಸ್ಟರಿ (ಕೃಷ್ಣಸ್ವಾಮಿ ಅಯ್ಯಂಗಾರ್) ದಿ ಥರ್ಡ್ ಡೈನಾಸ್ಟಿ ರೂಲರ್ ಒಫ್ ವಿಜಯನಗರ ಲೈಫ್ ಟೈಮ್ ಆಫ್ ಕೃಷ್ಣದೇವರಾಯ ಒಫ್ ವಿಜಯನಗರ ಸಂಗೀತಪುರ ಅರಸರ ಚರಿತ್ರೆ, ಭಟ್ಟಾಕಳಂಕದೇವ ರಚಿತಕಾವ್ಯಗಳ ಸಾಳ್ವಭಾರತ, ಹೊಯ್ಸಳ ಬಲ್ಲಾಳರ ಚರಿತ್ರೆ ಮುಂತಾದ ಗ್ರಂಥಗಳನ್ನು ಪರಿಶೀಲಿಸಿ ನೋಡಿದರೆ ಮನಸ್ಸಿಗೆ ಸಮಾಧಾನವಾಗುವುದು.

ಚರಿತ್ರಾನ್ವೇಷಕ.

ಅಯ್ಯಾ ಸ್ವದೇಶಾಭಿಮಾನಿ ಪತ್ರಿಕಾಕರ್ತರೆ

ನಿಮ್ಮ ೩೧—೮—೩೮ನೇ ಕುಟಾಪಳ್ಳ ಬಂಗ್ಲೆಯ ವಾರ್ತೆಯು ಕೇವಲ ನಿರಾಧಾರವಾಗಿರುವದಾಗಿಯೂ ಪ್ರಯಾಣಿಕರಿಗೆ ಮೊದಲಿಗಿಂತ ಸೌಕರ್ಯವಾಗಿ ಇರಲಾಗಿಯದಾಗಿಯೂ ಕಳೆದ ಸಂಚಿಕೆಯಲ್ಲಿ [illegible] ವರ್ತಮಾನ ಪ್ರಕಟವಾಗಿಯದೆ. ಇದಕ್ಕೆ ವರ್ತಮಾನ ಕೊಟ್ಟವರು ಕೆಳಗಿನ ಸವಾಲುಗಳಿಗೆ ಉತ್ತರ ಕೊಡುವರೇ? ಯಾ ಮೌನವಾಗುವರೇ?

೧. ಬಂಗ್ಲೆಯ ಯಾವ ತಾರೀಕಿನಿಂದ ಪ್ರಯಾಣಿಕರಿಗೆ ಬಿಟ್ಟುಕೊಡಲಾಗಿದೆ?

೨. ಸದ್ರಿ ಬಂಗ್ಲೆಯನ್ನು ಮದ್ರಾಸು ಗವರ್ನಮೆಂಟಿನಿಂದ ತೆಗೆದಯವರು ಎಷ್ಟು ಕಾಲ ಇಟ್ಟಿದ್ದರು?

೩. ಈಗ ಇದಕ್ಕೆ ಬೀಗ ಹಾಕಿ ಅದರಲ್ಲಿ ಅವರ ಸ್ವಂತ ಸಾಮಾನು ಇಟ್ಟುಕೊಂಡಿಲ್ಲವೇ? ಬಂಗ್ಲೆಯಲ್ಲಿ ಪ್ರಯಾಣಿಕರ ಬಗ್ಗೆ ಯಾವ್ಯಾವ ಸಾಮಾನು ಇಟ್ಟಿದೆ?

೪. ಮೊದಲಿಗಿಂತ ಹೆಚ್ಚಿನ ಸೌಕರ್ಯ ಯಾವದು? ಈಗಿನ ಕಾಲದ ಬಂಗ್ಲೆಗೋ ಯಾ ತೆಂಗಿನ ಮರಗಳಿಗೋ?

೫. ಬಂಗ್ಲೆಯಲ್ಲಿ ಕಳೆದ ೩ ತಿಂಗಳುಗಳಿಂದ ಎಷ್ಟು ಜನ ಪ್ರಯಾಣಿಕರು ತಂಗಿರುವರು? ಎಷ್ಟು ಫೀಸು ವಸೂಲಾಗಿದೆ?

೬. ಈಗ ಯಾವ ದರದಲ್ಲಿ ಫೀಸ ವಸೂಲ ಮಾಡುತ್ತಲಿದ್ದಾರೆ?

ಈ ಸವಾಲುಗಳಿಗೆ ಉತ್ತರ ದೊರೆತಿದ್ದಾದರೆ ಕಳೆದ ಸಂಚಿಕೆಯಲ್ಲಿ ಪ್ರಕಟವಾದ ನಿಮ್ಮ ವರ್ತಮಾನ ಸುಳ್ಳೋ ಯಾ ೩೧—೮—'೩೮ರ ವಾರ್ತೆಯು ನಿರಾಧಾರವಾದದ್ದೋ ಎಂಬದನ್ನು ಹಿಂದಿನಿಂದ ತರ್ಕಿಸುವೆನು.

ಕುಟಾಪಳ್ಳ, } ಇತಿ "ವಾರ್ತಾದಾರ"
೨೫—೯—'೩೮

ಚರಕವನ್ನು ನಾನು ಹೇಗೆ ಕಂಡುಹಿಡಿದೆನು

ಮಹಾತ್ಮಾಜಿಯವರು 'ಯಂಗ್ ಇಂಡಿಯಾ'ಯಲ್ಲಿ ಈ ರೀತಿ ಬರೆಯುತ್ತಿರುವರು:—

"ಓಲ್ ಇಂಡಿಯಾ ಸ್ಪಿನ್ನರ್ಸ್ [illegible] ನೂಲುವದನ್ನು ಕಲಿಯುವ ನನ್ನ ಸ್ನೇಹಿತ [illegible] ಕೈನೂಲು ಮತ್ತು ವಸ್ತ್ರವು ವಿಶೇಷವಾಗಿ [illegible] ಸುಮಾರು ಒಂದು ಸಾವಿರ ನೂಲುವವರು [illegible] ಹಳ್ಳಿಗಳಲ್ಲಿ ಸಂಚರಿಸಿದಾಗ ಅಲ್ಲಿಯೂ [illegible] ಗುಡಿಸಲುಗಳಲ್ಲಿ ಸಂತೋಷದಿಂದ ಕೆಲಸ [illegible] ಕಂಡೆನು. ಮಹಾತ್ಮಾಜೀಯವರು ಈ ನೂಲುವ [illegible] ಯಾವಾಗ ಕಂಡು ಹಿಡಿದರೆಂದು ತಿಳಿಸಿದರೆ [illegible] ವಾಗುವುದು. ಚರಕವು ನೋಡಲು ಬಹು ಸಣ್ಣ [illegible] ತ್ತಿದ್ದರೂ ಅದರ ಮಹತ್ವವು ಅಷ್ಟಿಷ್ಟಲ್ಲ. [illegible] ಜನರಿಗೆ ಎಷ್ಟು ಪ್ರೀತಿಯ ವಸ್ತುವಾಗಿದೆ! [illegible] ಮಾಡಿದ ನೂಲನ್ನು ಹೆಂಗಸರು ಮಾರಲಿಕ್ಕೆ ತರುವಾಗ ಅವರಿಗದರ ಮೇಲೆ ಎಷ್ಟು ಅಭಿಮಾನವಿದೆ! ಖಾದಿಯು ಹಿಂದೂಸ್ಥಾನದ ಕಳೆದುಹೋದ ಐಶ್ವರ್ಯವನ್ನು ಮೆಲ್ಲನೆ ಹಿಂದಿರುಗಿ ತರುತ್ತಿದೆಯೆಂದರೆ ಅತಿಶಯೋಕ್ತಿಯಾಗಲಾರದು." ಎಂದಿರುವರು.

ನಾನು ೧೯೦೮ನೇ ಇಸವಿಯಲ್ಲಿ ಲಂಡನಿನಲ್ಲಿದ್ದಾಗ ಈ ನೂಲುವ ಚರಕವನ್ನು ಕಂಡುಹಿಡಿದೆನು. ದಕ್ಷಿಣ ಆಫ್ರಿಕದ ಒಂದು ಡೆಪ್ಯುಟೇಶನಿನ ನಾಯಕನಾಗಿ ನಾನು ಲಂಡನಿಗೆ ಹೋಗಿದ್ದೆನು. ಆಗ, ಲಂಡನಿನಲ್ಲಿ ಬೇಕಾದಷ್ಟಿದ್ದ ಹಲವು ಹಿಂದೀ ಹುಡುಗರನ್ನು ಕಂಡೆನು. ಹಿಂದೂಸ್ಥಾನದ ಕುರಿತು ಅವರೊಂದಿಗೆ ಬಹಳ ಸಮಯದ ವರೆಗೆ ಸಂಭಾಷಿಸಿದುದರಿಂದ ಹಿಂದೂಸ್ಥಾನವು ಆಗ ಬಹಳ ಅವನತಿಯನ್ನು ಹೊಂದಿತೆಂದು ತಿಳಿದೆನು. ಆಗ ಥಟ್ಟನೆ "ನೂಲುವ ಚರಕದ ಹೊರತು ಹಿಂದೂಸ್ಥಾನಕ್ಕೆ ಸ್ವರಾಜ್ಯವು ಪ್ರಾಪ್ತಿಯಾಗದು" ಎಂಬ ಭಾವನೆಯು ನನ್ನ ಮನಸ್ಸಿಗೆ ಹೊಳೆಯಿತು. ಪ್ರತಿಯೊಬ್ಬರು ನೂಲುವದು ಅತ್ಯಗತ್ಯವೆಂದು ನಾನು ತಿಳಿದೆನು. ಆಗ ಚರಕ ಮತ್ತು ಕೈಮಗ್ಗಗಳಲ್ಲಿ ಭೇದವು ನನಗೆ ತೋರದೆ ಚರಕವನ್ನು ಕೈಮಗ್ಗವೆಂದು ಹೆಸರಿಸಿಯೇ ನಾನು ಹಲವು ಕಡೆಗಳಲ್ಲಿ ಬರೆದು [illegible] ಪ್ರತಿಯೊಬ್ಬ ಹಿಂದೀಯನು ನೂಲುವುದು ಅಗತ್ಯವೆಂದೂ ಅದರಿಂದ ಉಂಟಾಗಬಹುದಾದ ಸತ್ಪರಿಣಾಮಗಳನ್ನೂ ವಿವರಿಸಿ ನಾನೊಂದು ಚಿಕ್ಕ ಪುಸ್ತಕವನ್ನು ಬರೆದೆನು. ಅದರ ಫಲಿತಾಂಶವಾಗಿ ಇಂದು ವಕೀಲರು, ವೈದ್ಯರು, ಇನ್ನೂ ಹಲವರು ತಾವು ಸ್ವತಃ ನೂಲುತ್ತಿರುವಲ್ಲದೆ ನೂಲುವ ಕಲೆಯ ವಳಕ್ಕೆ ತಮ್ಮಿಂದಾದಷ್ಟು ಸಹಾಯವನ್ನು ಮಾಡುತ್ತಿರುವರು. ಆದರೆ ಈಗ ಬಡತನದಿಂದ ನರಳುತ್ತಿರುವ ಮಿಲಿಯಗಟ್ಟಲೆ ಜನರಿಗೆ ಅನ್ನವನ್ನೊದಗಿಸಬೇಕಾದರೆ ಈಗಿನಷ್ಟು ಜನರು ಮಾತ್ರ ನೂಲುತ್ತಿದ್ದರೆ ಸಾಲದು. ಬಹು ಸಂಖ್ಯಾಕ ಜನರು ಇನ್ನೂ ನೂಲುತ್ತಿರುವುದಿಲ್ಲ. ಆದರೆ ನಮ್ಮೂರಿನಲ್ಲಿ ಉಪವಾಸ ಬಿದ್ದಿರುವ ಮಿಲಿಯಗಟ್ಟಲೆ ಜನರಿಗೆ ಊಟಕ್ಕೆ ಸಿಕ್ಕಲು ಹಾದಿಯು ಉಂಟಾಗದಿದ್ದರೆ ಸ್ವರಾಜ್ಯವು ದುರ್ಲಭವೆಂಬುದನ್ನು ನೆನಪಿನಲ್ಲಿಡಬೇಕಾಗಿದೆ.

ಚರಕವು ೧೯೦೮ನೇ ಇಸವಿಯಲ್ಲಿ ಕಂಡುಹಿಡಿಯಲ್ಪಟ್ಟರೂ ೧೯೧೮ನೇ ಇಸವಿಯವರೆಗೆ ಅದು ಕೆಲಸದಲ್ಲಿ ಹಾಕಲ್ಪಡಲಿಲ್ಲ. ೧೯೧೮ರಲ್ಲಿ ಮಾತ್ರ ಅದರಲ್ಲಿ ನೂಲುವ ಕಲೆ ಆರಂಭವಾಯಿತು. ೧೯೧೯ರಲ್ಲಿ ಬಹು ಅಂದವಾದ ನೂಲು ಚರಕದಲ್ಲಿ ತಯಾರಿಸಲ್ಪಟ್ಟಿತು. ೧೯೨೦ನೇ ಇಸವಿಯ ಮಹಾಸಭೆಯ ಅಧಿವೇಶನದಲ್ಲಿ ಚರಕವು ಪ್ರಾಮುಖ್ಯತೆಯನ್ನು ಪಡೆಯಿತು. ಅಂದಿನಿಂದ ಚರಕವು ಪ್ರಸಿದ್ಧಿಯನ್ನು ಪಡೆದು ಸುಮಾರು ೭೦ ಸಾವಿರ ಜನರು ಈಗ ಚರಕದಲ್ಲಿ ನೂಲನ್ನು ತಯಾರಿಸಿ ಜೀವನವನ್ನು ಮಾಡುತ್ತಿರುವರು. ಇನ್ನೂ ಇನ್ನೂ ಚರಕ ಪ್ರಚಾರವಾಗಬೇಕಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ನೂಲುವ ಕೆಲಸವನ್ನು ಕೈಕೊಳ್ಳಬೇಕಾಗಿದೆ. ಒಂದು ಚರಕದಿಂದ ಎಷ್ಟು ಉತ್ಪತ್ತಿಯಿದೆಯೆಂದು ತಿಳಿದು ಅದಕ್ಕೆ ನೂರು ಮಿಲಿಯದಿಂದ ಗುಣಿಸಿದರೆ ಇಡೀ ಹಿಂದೂಸ್ಥಾನದಲ್ಲಿ ಚರಕ ಪ್ರಚಾರವಾದ ಮೇಲೆ ಎಷ್ಟು ಹಣವು ಉತ್ಪನ್ನವಾಗಬಹುದೆಂದು ತಿಳಿಯಬಹುದು. ಇದನ್ನು ಬಾಯಿಯಿಂದ ಹೇಳುತ್ತಿದ್ದರೆ ಅಥವಾ ಕಾಗದದ ಮೇಲೆ ಬರೆಯುತ್ತಿದ್ದರೆ ಪ್ರಯೋಜನವಿಲ್ಲವು. ಪ್ರತಿಯೊಬ್ಬನೂ ಕಾರ್ಯಕ್ಕೆ ಪ್ರವರ್ತಿಸಿದರೆ ಮಾತ್ರವೇ ಮೇಲೆ ಹೇಳಿದಷ್ಟು ಪ್ರಯೋಜನ ಉಂಟಾಗಬಹುದು. ತಾಳ್ಮೆಯಿಲ್ಲದೆ ಚರಕದ ಮೇಲೆ ನೂಲುವ ಕೆಲಸವು ಸಾಧ್ಯವಾಗುವದಿಲ್ಲ. ಸಂಕುಚಿತವಾದ [illegible] ಯಿಂದ ತೃಪ್ತರಾಗದೆ ಅನುದಿನವೂ ಬಿಡದೆ ಚರಕದಲ್ಲಿ ಕೆಲಸ ಮಾಡಿ ಅದರ ನಿಜವಾದ ಫಲವನ್ನು ಪಡೆಯುವ ವರೆಗೆ ದಣಿಯಬೇಕು.

ಶಾಸ್ತ್ರೀಯ ಅಮೂಲ್ಯ ಔಷಧಗಳು.

...ತೈಲ—ಇದು ಪುನರ್ವಸು ... ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ... ಈ ತೈಲವು ಚಿಕ್ಕಮಕ್ಕಳಿಂದ ... ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ... ವುದು, ಮೆದುಳು ಮತ್ತು ಸ್ನಾಯು ... ಸಾಮರ್ಥ್ಯವನ್ನೀಯುವುದು. 6 ಔನ್ಸಿನ ... ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

...ಚ್ಯವನನೆಂಬ ವೃದ್ಧ ಮಹರ್ಷಿಗೆ ... ಗಳು ಪ್ರಯೋಗಿಸಲ್ಪಟ್ಟ ಮಹಾರಸಾಯನ ... ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ದೋಷವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲು ಬೇಕಾಗುವುದು.
ಕ್ರಯ ಬಾಟ್ಲು 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.
ಬೇಕಾದವರಿಗೆ "ಆತಂಕರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ಪುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರು ಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. ... ಅನುಭವದ ಮೇಲೆ ನಮ್ಮ ಪುಡಿದಾರ ಹಗ್ಗಗಳು ... ದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಜಂರಿ ವ್ಯಾಪಾರ,
24-8-28 ಶಿವ್ವಾಪೇಟೆ. ಸೇಲಂ (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು
ಆತಂಕನಿಗ್ರಹ ಮಾತ್ರೆಗಳನ್ನು
ಉಪಯೋಗಿಸಿರಿ.
32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1/- ಮಾತ್ರ.
ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ
ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸ್ಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds " 338,500—0—0	ಕ್ಷೇಮನಿಧಿ ಮತ್ತು ಇತರ ಫಂಡುಗಳು 338,500—0—0
of which amount invested on G. P. Notes Rs. 228,898—2—0	ಇದರ ಪೈಕಿ ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 228,898-2-0
Rates of interest on fixed deposits at Head Office 6¼% for 2 Years, 6% " 1 Year	ಹೆಡ್ ಆಫೀಸಿನಲ್ಲಿ ಖಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1 ವರುಷಕ್ಕೆ ಶೇ. 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ಒಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮೂಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Canara Bank Ltd.
Mangalore, 16th Feb. 1928.

K. Venkat Rao,
Secretary.

THE PANGAL NAYAK BANK, LTD.,
UDIPI, S. K.

ಸ್ಥಾಪಿತವಾದದ್ದು 1920.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡ್ಪಿ, ದ. ಕ.

ಬೇಂಕರರು—
ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪಾಯಿ 2,00,000/-	ಆಪದ್ಧನ ಇತ್ಯಾದಿ ನಿಧಿಗಳು ರೂ 1,00,000/-
ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1,50,000-	ಖಾಯಂ ಠೇವಣಾತಿಗಳು " 7,31,735-

NOTICE.

With effect from 1—10—1928, interest on Fixed Deposits will run at the following rates per annum, payable every 3 months:—

For 3 months at 5%; for 6 or 9 months at 5½%; for 12, 15, 18 or 21 months at 6¼%; for 24 months at 6½%. On Season Deposits at 6% and on Short-Notice Deposits at 4½%.

ತಾರೀಕು 1—10—1928ರಿಂದ ಖಾಯಂ ಠೇವಣಾತಿಗಳ ಮೇಲೆ ಈ ಕೆಳಗೆ ... 3 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು.

3 ತಿಂಗಳ ವಾಯಿದೆಗೆ ಸಾ. ಶೆ. 5; 6 ಯಾ 9 ತಿಂಗಳ ವಾಯಿದೆಗೆ ಸಾ. ಶೆ. 5½; 12, 15, 18 ಯಾ 21 ತಿಂಗಳ ವಾಯಿದೆಗೆ ಸಾ. ಶೆ. 6¼; 24 ತಿಂಗಳ ವಾಯಿದೆಗೆ ಸಾ. ಶೆ. 6½. ಮೂಸಂ ಠೇವಣಾತಿಗಳ ಮೇಲೆ ಸಾ. ಶೆ. 6; ಅಲ್ಪಾವಧಿ ಠೇವಣಾತಿಗಳ ಮೇಲೆ ಸಾ. ಶೆ. 4½.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ತಪಸೀಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಬೇಂಕಿನ ಆಫೀಸು, ಉಡ್ಪಿ,
ತಾ. 13—9—'28.

ಪಾಂಗಾಳ ಪರಮೇಶ್ವರ ನಾಯಕ್,
ಸೆಕ್ರೆಟರಿ.

ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ದಿನ್ನನ ... ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದವಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ 1ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ... ಬಲವರ್ಧಕ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ 1ಕ್ಕೆ ಬೆಲೆ ೦—೧೪—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.



ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಸೆಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಶಾಸ್ತ್ರೀಯರಿಗೂ ಕುಳಿತಿರದೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೮ ಆಣೆ, ಒಕ್ಕೆ ೧—೪—೦, ೧೨ ಸೀಸೆಗೆ ೩—೭—೦, ೨೪ ಸೀಸೆಗೆ ೮—೧೦—೦. ಪೋಸ್ಟೇಜು ಬೇರೆ.

"ಭಿಷಕ್‌ರತ್ನ" ಮಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾಂರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ;
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ ಸೋಡಾ ಫ್ಯಾಕ್ಟರಿ
ಮಂಗಳೂರು ಟವರಿಗೆ ಮಾತ್ರ.

ಉಪವಿಚಾರಗಳು

ಹಿಂದೀ ರಾಜಕೀಯ ಸುಧಾರಣೆಯೂ ಮುಸಲ್ಮಾನರೂ

ಹಿಂದೀ ರಾಜಕೀಯ ಸುಧಾರಣೆಯಲ್ಲಿ ಮುಸಲ್ಮಾನರು ಬಿಡಿಸಲಾಗದ ಸಮಸ್ಯೆಯಾಗಿಯೇ ಪರಿಣಮಿಸುತ್ತಿರುವರು. ಎಲ್ಲಾ ಪಕ್ಷಗಳ ಪರಿಷತ್ತು ಹಲವು ಬಾರಿ ಕೂಡಿ ಹಲವು ಬಾರಿ ಚರ್ಚಿಸಿ ನೆಹರು ಕಮಿಟಿಯನ್ನು ಮಾಡಿ, ಬಹಳ ಕಷ್ಟದಿಂದ ಹಿಂದೂಸ್ಥಾನದ ಮುಂದಿನ ಸರಕಾರಕ್ಕಾಗಿ ಒಂದು ರಚನೆಯನ್ನು ತಯಾರಿಸಿತು. ಅದರಲ್ಲಿ ಹಿಂದೂ-ಮುಸಲ್ಮಾನ ಸಮಸ್ಯೆಯು ಬಹಳ ವಿಸ್ತಾರವಾಗಿಯೂ, ನಿಷ್ಪಕ್ಷಪಾತವಾಗಿಯೂ, ಚರ್ಚಿಸಲ್ಪಟ್ಟಿದ್ದಿತು ಪ್ರಥಮತಃ ಎಲ್ಲಾ ಮುಸಲ್ಮಾನರು ಕೂಡ ಈ ರಚನೆಯ ಕಡೆಗೆ ತಮ್ಮ ಒಪ್ಪಿಗೆಯನ್ನು ಸೂಚಿಸಿದ್ದರು ಆ ಮೇಲೆ ಲಕ್ನೋದಲ್ಲಿ ಪುನಃ ಎಲ್ಲಾ ಪಕ್ಷಗಳ ಪರಿಷತ್ತು ಕೂಡಿ ಹಿಂದೂ-ಮುಸಲ್ಮಾನರೊಳಗಿನ ಉಳಿದ ಭೇದಾಂಶಗಳನ್ನು ತೀರಿಸಿ ನೆಹರು ವರದಿಯನ್ನು ಮಂಜೂರು ಮಾಡಿದ್ದಿತು. ಆದರ ತೃಪ್ತಿಯೆಂಬುದನ್ನು ಮತಾಭಿಮಾನದಿಂದಲೇ ತುಂಬಿಕೊಂಡಿರುವ ಮುಸಲ್ಮಾನರೊಳಗೆ ಕಾಣಲಾಗುವುದಿಲ್ಲ ಮಹಾತ್ಮಾ ಗಾಂಧಿಯವರೊಡನೆ ಒಂದು ಸಮಯದಲ್ಲಿ ಹಾಲು ನೀರಂತಿದ್ದ ಶೌಕತ್ ಅಲ್ಲಿಯವರೇ ಅಪಸ್ವರವನ್ನೆಬ್ಬಿಸಿದರು. ಮುಸಲ್ಮಾನರಿಗೆ ಜಾತೀಯ ಸ್ವಾರ್ಥಕ್ಕೆ ಮೇರೆಯೇ ಇಲ್ಲ ಹಿಂದೂಗಳಲ್ಲಿಯೂ ಸ್ವಾರ್ಥವಿದೆ ಹಿಂದೂ ಮಹಾಸಭೆಯೂ ತನ್ನ ವಿರೋಧವನ್ನು ಬಲಪಡಿಸಲೆತ್ನಿಸಿತು ಆದರೆ ಹ್ಯಾಗೂ ಕಷ್ಟದಿಂದ ಅದನ್ನು ಅಲ್ಲಿಗಲ್ಲಿಗೆ ನಿಂದಿಸಿ ಹಿಂದೂ ಮುಸಲ್ಮಾನ ಒಪ್ಪಿಗೆಯು ಮುಗಿದೋಹಾಗಿತ್ತು ಆದರೆ Heads you loose and Tails I win ಎಂಬ ಇಂಗ್ಲೀಷ ನಾಣ್ಣುಡಿಯಂತೆ ಮುಸಲ್ಮಾನರು ಪುನಃ 'ನಮ್ಮದೂ ನಮ್ಮದು, ನಿಮ್ಮದೂ ನಮ್ಮದೂ' ಎಂದೆನ್ನಲಾರಂಭಿಸಿರುವರು ನೆಹರು ವರದಿಯು ಇಷ್ಟು ಮುಂಜಾಗ್ರತೆಗಳುಳ್ಳ ರಚನೆಯು ಅವರ ವಿಶ್ವಾಸಕ್ಕೆ ಅರ್ಹವಾಗದೆ, ಜಾತೀಯ ಪ್ರಾತಿನಿಧ್ಯಕ್ಕಾಗಿ ಅವರು ಪುನಃ ಚಳವಳನೆಬ್ಬಿಸುತ್ತಿರುವರು ಲೆಜಿಸ್ಲೇಟಿವ್ ಎಸೆಂಬ್ಲಿಯ ಡೆಪ್ಯುಟಿ ಪ್ರೆಸಿಡೆಂಟರಾಗಿರುವ ಮಹಮ್ಮದ್ ಯಾಕೂಬರು ಮಿ. ಜಿನ್ನಾರವರು ಲಕ್ನೋದಲ್ಲಿ ಹಾಜರಿಲ್ಲದೆ ಮುಸಲ್ಮಾನ ಹಿತವನ್ನು ಕಾಯುವಲ್ಲಿ ಯಾರೂ ಅಲ್ಲಿ ಯೋಗ್ಯರಾಗಲಿಲ್ಲವೆಂದೂ ಮುಸಲ್ಮಾನ ಪ್ರತಿನಿಧ್ಯವನ್ನು ಹಿಂದೆ ಹಾಕಿ ಹಿಂದೂಸ್ಥಾನವು ಸ್ವರಾಜ್ಯವನ್ನು ಹೊಂದುವ ದಿನವನ್ನು ಮುಂದೆ ಹಾಕಬಾರದಾಗಿ ಇವರು ಸೂಚಿಸುವರು ಮೆಲ್ಲನೆ ಇದೇ ತರದ ಅಭಿಪ್ರಾಯವೂ ಹೆಚ್ಚು ಹೆಚ್ಚು ಪ್ರಸಾರವಾಗಲಾರಂಭಿಸಿರುವುದು ನೆಹರು ಕಮಿಟಿಯ ವಿವರಪೂರ್ವಕವಾದ ನೂತನ ರಚನೆ (constitution) ತಯಾರಾಗಿ, ಪುನಃ ಎಲ್ಲಾ ಪಕ್ಷಗಳ ಪರಿಷತ್ತು ಕೂಡಿದಾಗ ಆಗಿನ ಧುರೀಣರ ಮತವು ಹೇಗೆ ನಿಲ್ಲುವುದೆಂದು ಹೇಳುವುದು ಅಸಾಧ್ಯವಾಗಿದೆ ಮುಸಲ್ಮಾನರು ಇದೇ ರೀತಿಯಲ್ಲಿ ಜಾತೀಯ ಸ್ವಾರ್ಥವನ್ನೇ ರಾಷ್ಟ್ರೀಯ ಸ್ವಾರ್ಥಕ್ಕಿಂತ ಹೆಚ್ಚಾಗಿ ಮಾಡಿದರೆ ದೇಶಹಿತದ ವಿಷಯಗಳಲ್ಲಿ ಬಹಳ ಆಶಿಸಲಾಗುವುದಿಲ್ಲ

ಎಸೆಂಬ್ಲಿಯಲ್ಲಿ ಸರಕಾರದ ಕ್ಷಮಾಯಾಚನೆ

ಬ್ರಿಟಿಷರಲ್ಲಿ ಶಕ್ತಿಗೆ ಗೌರವವಿದೆ ಎಂಬುದನ್ನು ಶ್ರೀ ಪಟೇಲರು ಎಸೆಂಬ್ಲಿಯಲ್ಲಿ ತೋರಿಸುತ್ತಿರುವ ಸ್ವತಂತ್ರ ವರ್ತನವನ್ನು ನೋಡಿದರೆ ತಿಳಿಯುವದು ಪ್ರಾಂತಿಕ ಕೌನ್ಸಿಲುಗಳಲ್ಲಿ ಎಷ್ಟೋ ಅಧ್ಯಕ್ಷರು ಸರಕಾರದ ಕೃಪಾದೃಷ್ಟಿಯನ್ನೇ ಅಪೇಕ್ಷಿಸುತ್ತಿರುವವರಾಗಿ ಹಲವು ಬಾರಿ ಅವರ ವರ್ತನವು ಸಂದೇಹಾತ್ಮಕವಿರುತ್ತದೆ ಆದರೆ ಶ್ರೀಯುತ ಪಟೇಲರು ಎಸೆಂಬ್ಲಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಂದಿನಿಂದ, ಸರಕಾರವನ್ನು ಇತರ ಪಕ್ಷಗಳೊಡನೆ ಸಮಾನತೆಯಿಂದ ಕಾಣಿಕೆಕ್ಕೆ ಹೋಗಿ ಸರಕಾರದ ಅವಕೃಪೆಯನ್ನು ದೊರಕಿಸಿಕೊಂಡಿರುವರಾದರೂ, ಸಂಧಿಗ್ಧ ಸಮಯಗಳಲ್ಲಿ ಜಾಣತನದಿಂದಲೂ ಶಕ್ತಿಯಿಂದಲೂ ವರ್ತಿಸಿ ಸರಕಾರದ ಕಡೆಯಿಂದ ಗೌರವವನ್ನೇ ಪಡೆಯುತ್ತಿರುವರು ಎಸೆಂಬ್ಲಿಯ ಕಾರ್ಯನಿರ್ವಾಹಕ ಆಫೀಸನ್ನು ಪ್ರತ್ಯೇಕಿಸುವುದರ ವಿಷಯದಲ್ಲಿ ಅವರಿಗೂ ಸರಕಾರಕ್ಕೂ ನಡೆದ ವಾದವು ಈ ಮೊದಲೇ ತಿಳಿಸಲ್ಪಟ್ಟಿದೆ ಅಲ್ಲಿಯೂ ಎಸೆಂಬ್ಲಿಯಲ್ಲಿ ವಾದಗಳು ನಡೆದು, ವ್ಯಾಸರಾಯರೊಡನೆ ಖಾಸಗಿ ಚರ್ಚೆಗಳು ನಡೆದು, ಪ್ರೆಸಿಡೆಂಟ ಪಟೇಲರು ನಿಶ್ಚಿತ ಧ್ಯೇಯವನ್ನು ಪಡೆಯುತ್ತಿರುವರು ಇತ್ತೀಚೆ ಮೊನ್ನೆ "ಪಬ್ಲಿಕ್ ಸೇಫ್ಟಿ ಬಿಲ್ಲು" ಎಂಬ ಮಸೂದೆಯನ್ನು ಸರಕಾರವು ತಂದ ಸಮಯದಲ್ಲಿ ಪಟೇಲರ ಮೇಲೆ ಪ್ರಸರಿಸಲ್ಪಡುತ್ತಿದ್ದ ಅಪವಾದಗಳನ್ನು ಪಟೇಲರು ಎಸೆಂಬ್ಲಿ ಮುಂದೆ ತಂದು ಖಂಡಿಸಿದುದರಿಂದ, ಸರಕಾರವು ಇಲ್ಲಿಯೂ ಪಟೇಲರಿಗೆ ಬಗ್ಗಬೇಕಾಯಿತು. ಪ್ರಥಮತಃ ಸರಕಾರದ ಕಡೆಯಿಂದ ಕ್ರೇರಾರರು ಬರೇ ಉಪಚಾರಿಕ ಮಾತುಗಳಿಂದ ಸಮಾಧಾನಪಡಿಸಲೆತ್ನಿಸಿದರೂ, ಅದು ಸಾಗದೆ, ಈಗ ಅವರು ಅಧ್ಯಕ್ಷರಿಗೆ ಸರಕಾರದ ಕಡೆಯಿಂದ ಕ್ಷಮಾಯಾಚನೆಯನ್ನು ಮಾಡಿರುವರು. ಅಲ್ಲದೆ ಅಧ್ಯಕ್ಷರ ಕಡೆಗೆ ತಮಗೆ ಸಂಪೂರ್ಣ ಗೌರವಭಕ್ತಿಯಿದೆಯೆಂದೂ, ಅವರ ನಿಷ್ಪಕ್ಷಪಾತತೆಯ ಮೇಲೆ ಪೂರ್ಣ ವಿಶ್ವಾಸವಿದೆಯೆಂದೂ ಅಂದಿರುವರಲ್ಲದೆ, ಪಟೇಲರು ಅಧ್ಯಕ್ಷಸ್ಥಾನದ ಗೌರವರಕ್ಷಣೆಗಾಗಿ ಸಂಬಂಧಪಟ್ಟ ಪತ್ರ ಪ್ರತಿನಿಧಿಗಳಿಗೆ ಕೊಡಬಹುದಾದ ಶಿಕ್ಷಾರೂಪವಾದ ಹುಕುಮಿಗೆ ಸರಕಾರದ ಸಂಪೂರ್ಣ ಬೆಂಬಲವಿದೆಯಾಗಿಯೂ ಕ್ರೇರಾರರು ತಿಳಿಸಿದರು

ಕರಾವಳಿಯ ಹಡಗಿನ ವ್ಯಾಪಾರ

ಮಿ ಹಾಜಿ ಎಂಬವರು ಹಿಂದೀ ಹಡಗಿನ ವ್ಯಾಪಾರವನ್ನು ಅಭಿವೃದ್ಧಿಪಡಿಸುವ ಬಗ್ಗೆ ಒಂದು ಮಸೂದೆಯನ್ನು ಎಸೆಂಬ್ಲಿಯ ಮುಂದೆ ತಂದಿರುವರು ಹಿಂದೀ ಕರಾವಳಿ ವ್ಯಾಪಾರವು ಹಿಂದೀ ಕಂಪೆನಿಗಳದ್ದೇ ಆದ ಹಡಗಿನಲ್ಲಿ ಸಾಗಬೇಕಾಗಿ ಆ ಮಸೂದೆಯ ತಾತ್ಪರ್ಯವಿದೆ ಬ್ರಿಟಿಷ ಮತ್ತು ಇತರ ರಾಷ್ಟ್ರಗಳ ಹಡಗುಗಳು ಬಂದ ಮೇಲೆ ಹಿಂದೀ ಹಡಗಿನ ವ್ಯಾಪಾರವು ಕೊಲಲ್ಪಟ್ಟಿತು ಸಾವಿರಾರು ಜನರು ಹಡಗುಗಳಲ್ಲಿ ಕೆಲಸಮಾಡಿಕೊಂಡು ಜೀವಿಸುತ್ತಿದ್ದರು. ಈಗ ಆ ಕೆಲಸವಿಲ್ಲದೆ ಇತರ ವೃತ್ತಿಗಳನ್ನು ಸೇರಿ ಹಿಂದೂಸ್ಥಾನದ ಬಡತನವು ಹೆಚ್ಚಿತು ಇದು ಮಾತ್ರವಲ್ಲದೆ ವ್ಯವಹಾರದ ಸೌಕರ್ಯವು ಪರದೇಶೀಯರ ಕೈಯೊಳಗಾಗಿ ಹೋದ ಬಳಿಕ ಹಿಂದೀ ವ್ಯಾಪಾರದ ಅಭಿವೃದ್ಧಿಗೂ ತೊಡಕುಂಟಾಯಿತು ಒಂದು ಬಾರಿ ಯಾವುದೊಂದು ಹಿಂದೀ ಕಂಪೆನಿಯು ಒಂದು ಹಡಗಿನ ವ್ಯವಹಾರಗಳನ್ನು ಆರಂಭಿಸಿತೆಂದರೆ, ಈ ಪರಕೀಯ ಕಂಪೆನಿಗಳ ಇವರೊಡನೆ ಅನ್ಯಾಯದ ಸ್ಪರ್ಧೆಯನ್ನು ಬೆಳಸಿ ಅವುಗಳನ್ನು ನಷ್ಟಕ್ಕೆ ಗುರಿಪಡಿಸಿ ನಾಶಮಾಡುತ್ತವೆ ಸರಕಾರವೂ ಹಿಂದೀ ಹಡಗುಗಳ ಕಡೆಗೆ ಅವರ ಕೃಪೆಯನ್ನೇ ತೋರಿಸಿರುತ್ತದೆ ಈಗ ಸ್ವಲ್ಪ ಪ್ರಮುಖ ಹಿಂದೀ ಹಡಗಿನ ಕಂಪೆನಿಯೆಂದರೆ ಸಿಂಧಿಯಾ ಸ್ಟೀಮ್ ನೆವಿಗೇಶನ್ ಕಂಪೆನಿಯೆಂಬುದು ಇದಲ್ಲದೆ, ಕರಾವಳಿಯಲ್ಲಿ ಹತ್ತಿರ ಹತ್ತಿರದ ಬಂದರುಗಳಲ್ಲಿ ವಹಿವಾಟು ನಡೆಸುವ ಸಣ್ಣ ಕಂಪೆನಿಗಳೂ ಹಲವು ಇವೆ ಆದರೆ ಹೆಚ್ಚಿನ ವಹಿವಾಟವು ಪರದೇಶೀಯ ಸ್ಟೀಮರುಗಳಿಂದಲೇ ನಡೆದು ದೇಶೀಯ ಸ್ಟೀಮರ ಕಂಪೆನಿಗಳು ಬಹಳ ಕಷ್ಟ ಸ್ಥಿತಿಯಲ್ಲಿವೆ ಆದುದರಿಂದ ಹಿಂದೂಸ್ಥಾನವು ಒಂದೆ ಸ್ವತಂತ್ರವಾದ ವ್ಯಾಪಾರೀ ನೌಕಾ ಪಡೆಯನ್ನು ಸ್ಥಾಪಿಸಲು ಅನುಕೂಲವಾಗುವಂತೆ ಸರಕಾರವು ಈ ಮಸೂದೆಯನ್ನು ಅಂಗೀಕರಿಸುವುದು ಅವಶ್ಯವಿದೆ ಆದರೆ ಬ್ರಿಟಿಷ ವ್ಯಾಪಾರಿಗಳ ಹಿತವನ್ನು ಲಕ್ಷಿಸಿ ಸರಕಾರವು ಇದನ್ನು ವಿರೋಧಿಸಿದೆ ಸರಕಾರವು ವಿರೋಧಿಸಿದರೂ ಎಸೆಂಬ್ಲಿಯು ಮಸೂದೆಯ ಪಕ್ಷಕ್ಕೆ ಪತಿಯಾಗಿ ಅದು ಮತದಿಂದ ಮಂಜೂರಾತಿಯನ್ನು ಹೊಂದಿ ... ಪುನಃ ರೂಪಿಸಿ ... ಪುನಃ ಎಸೆಂಬ್ಲಿ ಮುಂದೆ ತರಲಾಗುವುದು.

ಹಿಂದೀ ವ್ಯಾಪಾರಿಗಳ ಭಾಗ್ಯವು ಬ್ರಿಟಿಷ ವ್ಯಾಪಾರಿಗಳ ಕೈಯಲ್ಲಿ!

ಇದೀಗ ಈಗಿನ ಹಿಂದೀ ಸರಕಾರದ ಫಲ ಇಂಗ್ಲೆಂಡಿನ ಒಂದವರಾಗಿ ಇಂಗ್ಲೆಂಡಿನ ಸರಕಾರದಿಂದ ನೇಮಿಸಲ್ಪಟ್ಟವರಾಗಿ ಇಂಗ್ಲೆಂಡಿನ ಪ್ರಜೆಗಳ ತಕ್ಕೆ ಜವಾಬ್ದಾರರಾಗಿ ಸ್ವಾಧೀನತಃ ಸರಕಾರದ ಕಾರ್ಯಕರ್ತರ ಹಿಂದೀ ಅಭಿವೃದ್ಧಿಯ ಸಮಸ್ಯೆಯು ಒಂದಾಗ ಹೋಮಿ (Home)ನ ಕಡೆಗೆ ದೃಷ್ಟಿಸುವವರನ್ನು ಮಾಡಿ ... ಇಂಗ್ಲೆಂಡಿನ ಸಾಹುಕಾರರೂ ಹಿಂದೂಸ್ಥಾನವು ಸಮಗ್ರವಿಲ್ಲದವನ ತರ ಬೆಳಗಿನ ಸಂತೆಯಾಗಿದೆಯಾಗಿದೆ ತಿಳಿದಿರುವ ಹಿಂದೂಸ್ಥಾನವು ತನ್ನ ರೈಲುಗಳಿಗಾಗಿ ಒಂದು ಸಾಮಾನನ್ನು ಇತರ ದೇಶದಿಂದ ತಂದರೆ ಸರಿ ಕೂಡ ಹೌಸ್ ಒಫ್ ಕಾಮನ್ಸಿನಲ್ಲಿ ಪ್ರಶ್ನೆ ಯಾಕೆ ಅದನ್ನು ಇಂಗ್ಲೆಂಡಿನಿಂದಲೇ ತರಿಸಿಕೊಳ್ಳಲಿಲ್ಲ? ಬೇರೆ ದೇಶಗಳ ಸಾಮಾನಿನ ಗುಣವು ಉತ್ತಮವಿರಲಿ ಕಯ ಕಡಿಮೆಯಿರಲಿ, ಅದರ ಲಕ್ಷ್ಯವಿಲ್ಲ ಕ್ರಯ ಹೆಚ್ಚು ಕಡಿಮೆ ನೋಡದೆ ಸರಕಾರವು ತನಗೆ ಬೇಕಾದುದೆಲ್ಲವನ್ನೂ ಇಂಗ್ಲೆಂಡಿನಿಂದಲೇ ಪಡೆಕೊಳ್ಳಬೇಕು ದಕ್ಷಿಣ ಆಫ್ರಿಕವು ಯುನೈಟೆಡ್ ಸ್ಟೇಟ್ಸಿನಿಂದ ಸಾಮಾನನ್ನು ತರಿಸುವುದು ಆಸ್ಟ್ರೇಲಿಯವು ಜರ್ಮನಿಗೆ ಕಂಟ್ರಾಕ್ಟುಗಳನ್ನು ಕೊಡುವುದು, ಆದರೆ ಹಿಂದೂಸ್ಥಾನವು ಇಂಗ್ಲೆಂಡಿನಿಂದಲೇ ಕೊಂಡುಕೊಳ್ಳಬೇಕು! ಇದಲ್ಲವೇ ಪರಾಧೀನತೆಯ ಫಲ? ಈಗ ಮಿ. ಹಾಜಿಯವರ ಕರಾವಳಿ ಹಡಗಿನ ವ್ಯಾಪಾರದ ಮಸೂದೆಯ ಒಂದರ ಹೇತು, ಫಡರೇಶನ್ ಒಫ್ ಬ್ರಿಟಿಷ ಇಂಡಸ್ಟ್ರೀಸ್ ಎಂಬ ಬ್ರಿಟಿಷ ಕೈಗಾರಿಕೆ ಸಂಸ್ಥೆಗಳ ಕಡೆಯಿಂದ ಬರ್ಕನ್ ಹೆಡ್ಡರಿಗೆ ದೊಡ್ಡದೊಂದು ನಿವೇದನವು ಹೋಗಿಯದೆ. "ಹಿಂದೂಸ್ಥಾನದಲ್ಲಿ ರಾಷ್ಟ್ರೀಯ ಸಮ್ಮೇಲನಗಳಲ್ಲಿ ಮಾತ್ರವಲ್ಲದೆ ಪ್ರಾಂತಿಕ ಮತ್ತು ಮುನ್ಸಿಪಲ್ ಸಭೆಗಳಲ್ಲಿ ವ್ಯಕ್ತಪಡಿಸುತ್ತಿರುವ ಭೇದಾತ್ಮಕ ಮತ್ತು ಹಗೆತನದ ವರ್ತನದ ಇದು ಇನ್ನೊಂದು ಉದಾಹರಣೆಯಾಗಿರುತ್ತದೆ" ಎಂದು ಮಿ. ಹಾಜಿಯವರ ಮಸೂದೆಯ ವಿಷಯದಲ್ಲಿ ಹೇಳಿ, ಇದನ್ನು ಸರಕಾರವು ನಿರೋಧಿಸಲು ಹಿಂದೀ ಸರಕಾರವು ಮಾಡುವ ಎಲ್ಲಾ ಪ್ರಯತ್ನಗಳಿಗೆ ಇಂಗ್ಲೆಂಡಿನ ಸರಕಾರವು ಬೆಂಬಲವನ್ನೀಯಬೇಕಾಗಿ ಕೇಳಿಕೊಳ್ಳುತ್ತಿದೆ. ಸರಕಾರವೂ, ಇನ್ನು ವಾಚಕರೇಯರಂತೆಯೇ ಸರಕಾರದ ತಾಳಕ್ಕೆ ಕುಣಿಯುವ ಹಿಂದೀಯರೂ ಮುಂದೆ ತಂದ ಕಾರಣಗಳು ನಿಜವಾದುವುವಲ್ಲವೆಂದೂ, ನಿಜವಾದ ಕಾರಣವು ಇಲ್ಲಿದೆಯೆಂದೂ ಬೇರೆ ಹೇಳಬೇಕಾಗಿಲ್ಲ.

ನೋಟಗಳು
NOTES.

ಕಳೆದ ತಾ. ೨೧ಕ್ಕೆ ಕೊಡಿಯಾಲ್‌ಬೈಲ್ ವಾರ್ಡಿನ ಮುನ್ಸಿಪಲ್ ಚುನಾವಣೆ ಚುನಾವಣೆಗೆ ಬರಲು ವೋಟರರಿಗೆ ಹೊಸ ಹೊಸ ಕಾರುಗಳು ವೋಟರರ ಪುಣ್ಯ.

ತಾ. ೨೩ಕ್ಕೆ ಮಾರ್ಕೆಟ್‌ವಾರ್ಡಿನ ಚುನಾವಣೆ ಆಯಿತು, ಚುನಾವಣೆಗೆ ಸಹಾಯ ಮಾಡಲು ದೊಡ್ಡ ದೊಡ್ಡ ನೀಯರೇ ಹಾಜರು.

ಇವತ್ತಿನ ದಿನ ತಾ ೨೮—೧—೨೯ಕ್ಕೆ ಜಪ್ಪು ವಾರ್ಡಿನ ಚುನಾವಣೆ ಈ ವಾರ್ಡಿಗೆ ಎರಡು ಮತದ ಉಮೇದ್ವಾರರಲ್ಲಿ ಒಂದೇ ಮತದವರೊಳಗೆ ಜಟಾಪಟಿ

ಚುನಾವಣೆಯ ಫಲ ತಾ ೨೮ಕ್ಕೆ ತಿಳಿಯುವುದು. ಗೆದ್ದವರ ಕಡೆ ಟೀಪಾರ್ಟಿ ಸತ್ಕಾರ ನೋಡಲಿದೆ.

ಮಂಗಳೂರಿನಲ್ಲಿ ಇತ್ತಲಾಗೆ ಜುಗಾರಿ ಸೆಂಟ್ರುಗಳ ಪತ್ತೆ ಜೋರು ಇಷ್ಟಾದರೂ ಆಡುವರ ಸಂಖ್ಯೆ ಏನೂ ಕಡಿಮೆಯಾಗಿಲ್ಲ

ಕೆಲ ಸಮಯದಿಂದೀಚೆಗೆ ಮೈಸೂರಿನ ಕಣಿಯರ ಪತ್ರಿಕೆಯು ಕೈಬರಹದಲ್ಲಿ ಪ್ರಕಟಿಸಲ್ಪಡುತ್ತಿತ್ತು. ಕಳೆದ ತಾ ೨೦ಕ್ಕೆ ಈ ಪತ್ರಿಕೆ ಅಚ್ಚಾಗಿ ಹೊರಟಿದೆ ಈ ಸಲ ಅಧಿಕಾರಿಗಳು ಪ್ರೆಸ್ ಅಥವಾ ಪತ್ರಿಕೆಯನ್ನು ಕಿತ್ತುಕೊಳ್ಳಲು ಇರಲಿಲ್ಲ. ಕಾರಣ ಅಧಿಕಾರಿಗಳೆಲ್ಲಾ ಗಣಪತಿ ಗಲಾಟೆಯಲ್ಲಿ ರಬಹುದು.

ಅಂತೂ ಮೈಸೂರಲ್ಲಿ ಪ್ರೆಸ್ ಏಕ್ಟ್ ತೆಗೆದುಹಾಕಿದ್ದರೂ ಕಣಿಯರ ಪತ್ರಿಕೆಯ ಮೇಲಿನ ಆಕ್ಟ್ ಹೋಗಿಲ್ಲವಾಗಿತ್ತು.

ದಾವಣಗೆರೆಯಲ್ಲಿ ಕಳೆದ ತಾ. ೨೧ಕ್ಕೆ ಕಾಲಾ ಹುದುಗರ ಗಣಪತಿಯ ಮೆರವಣಿಗೆಯು ಮುಸಲ್ಮಾನರ ಪಳ್ಳಿಯ ಹತ್ತಿರದಿಂದ ಬ್ಯಾಂಡ್ ವಾದ್ಯದಿಂದ ಹೋಗುವಾಗ ಪಳ್ಳಿಯ ಒಳಗಿನಿಂದ ಮುಸಲ್ಮಾನರು ... ಕಡೆಗೆ ಜಟಾಪಟಿ ಪ್ರಾರಂಭ ಜಟಾಪಟಿ ... ಪಳ್ಳಿಯನ್ನು ಹಾದುಹೋಗುವಾಗ ಬೇಂಡು ವಾದ್ಯ ನಡಿಸಿದ್ದಕ್ಕೆ

ಗಲಾಟೆಯಲ್ಲಿ ಗಣಪತಿಯ ವಿಗ್ರಹಕ್ಕೂ ಮತ್ತು ಮಹಾರಾಜರ ಚಿತ್ರಕ್ಕೂ ಎಣ್ಣೆಯ ಸ್ನಾನ, ಅಗ್ನಿಯಿಂದ ನಿರ್ಮೂಲನ.

ತಾ ೨೧ಕ್ಕೆ ಹಿಂದೂ ಮುಸಲ್ಮಾನರೊಳಗೆ ಹೊಡೆದಾಟ ತಾ ೨೪ಕ್ಕೆ ಹಿಂದೂ ಮುಸಲ್ಮಾನರೊಳಗೆ ರಾಜಿಯಾಗಿ ಹಿಂದೂ ಮುಸಲ್ಮಾನರು ಕೂಡಿ ಗಣಪತಿಯ ಉತ್ಸವ

ಮುಸಲ್ಮಾನರು ಗಣಪತಿಯ ವಿಗ್ರಹಕ್ಕೆ ಹೂವಿನ ಮಾಲೆಯನ್ನು ಸಲ್ಲಿಸಿದಂತೆ ಇನ್ನು ಮುಸಲ್ಮಾನರ ಉತ್ಸವದ ದಿವಸ ಹಿಂದೂಗಳು ಮುಸಲ್ಮಾನರ ದೇವರಿಗೆ ಹೂವಮಾಲೆಗಳನ್ನು ಅರ್ಪಿಸಿದರೆ ಹಿಂದೂ ಮುಸಲ್ಮಾನ ಐಕ್ಯ ಮೈಸೂರಿನಲ್ಲಿ ಆಗಬಹುದು

ಸೊಸೈಟಿ. ನವ್ಯ ಸ್ವಾಮಿನ್ ಸಾಹೇಬರ ಕಮಿಟಿ. ಈ ನೆಹರೂ ಸಾಹೇಬರ ಕಮಿಟಿಯು ಇಂಡಿಯಾದಲ್ಲಿ ಏಳು ತಿಂಗಳು ಕ್ಯಾಂಪ್ ಮಾಡುವದು

ಇಷ್ಟು ದಿನ ನಿದ್ರಾವಸ್ಥೆಯಲ್ಲಿದ್ದ ಮುಂಬಾಯಿ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯು ಈಗ ನಿದ್ರಾವಸ್ಥೆಯಿಂದ ಎದ್ದಿದೆ. ಇವರಿಗೆ ನಿದ್ರೆ ಬಿಟ್ಟ ಸಮಯವು ಆಸೆಯು ಮತ್ತು ಮೊಲದ ಕಥೆ ಸರಿಯಾಗಿದೆ

[illegible]ನೆಯ ವಿಭವ ಸಂವತ್ಸರದ ಭಾದ್ರಪದ
[illegible]ವಾರದಿಂದ ವಿಭವ ಸಂ|ರದ ಭಾದ್ರಪದ
[illegible] ಶುಕ್ರವಾರದ ವರೆಗಿನ ಪಂಚಾಂಗ.
([illegible]ನೆಯ ಕನ್ಯಾ (ಶಿರಾ[illegible])

[illegible]	[illegible]	ತಿಥಿ	ನಕ್ಷತ್ರ	ಯೋಗ	[illegible]	ಸೂರ್ಯ. ಉ	ಅಸ್ತ
[illegible]	[illegible]	೧೩ ೪೬	ಉ. ಭಾ	೪೯ ೧೪	೧೩	6 22	6 22
[illegible]	[illegible]	೧೫.೧೫	ರೇವತಿ	೪೩ ೩೦	೧೪	6 22	6 21
[illegible]	[illegible]	೩೩.೧೪	ಅಶ್ವಿನಿ	೪೩ ೦	೧೫	6 22	6 21
[illegible]	[illegible]	೩೧೮ ೪೬	ಭರಣಿ	೩೯ ೧೪	೧೬	6 22	6.20
[illegible]	[illegible]	೪೧.೨ ೪೬	ಕೃತ್ತಿಕಾ	೩೫.೧೬	೧೭	6 22	6 19
4	[illegible]	೬.೪೫	ರೋಹಿಣಿ	೩೦ ೨	೧೮	6 22	6 19
5	ಶುಕ್ರ	೧. ೨	ಮೃಗಶಿರಾ	೨೬.೧೨	೧೯	6.22	6.18

ಮಂಗಳೂರಿನ ವಾಯುಸ್ಥಿತಿ.

Date	Temperature ಉಷ್ಣ (ಕಾವು) Maximum ಹೆಚ್ಚೆಂದರೆ	Minimum ಕಡಿಮೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ
21	85— 4	74— 8	0—16	—
22	86— 4	74— 8	—	—
23	86— 2	75— 5	0—82	—
24	87— 6	74— 6	0—97	—
25	87— 7	74— 8	0—04	—
26	86— 9	73— 8	0—10	—
27	86— 3	74— 9	0—23	—
				109-64

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ	ವರೆಗೆ ರೂ. ಆ
[illegible]ಸ್ಯತ	7— 4	8— 4
[illegible]ಡ್ಲು	6—14	7— 4
[illegible]ಗ್ಗಿ	6— 6	7— 2
[illegible]	6— 6	6— 14
[illegible]ರ ಅವ್ವಲ್ ಬೆಳ್ತಿಗೆ	7—8	8—14
[illegible] ಬೆಳ್ತಿಗೆ ಕೋಣ ಗಳ್ಳೆ	12— 8	12 12
[illegible] ಬೆಳ್ತಿಗೆ ಮುಡಿ ಗಳ್ಳೆ	7— 6	7— 8
[illegible] ಗೋಣಿ ಗಳ್ಳೆ	8— 0	19— 8
[illegible] ಗೋಣಿ ಗಳ್ಳೆ	8— 0	10— 0
[illegible] ಗೋಣಿ ಗಳ್ಳೆ	13—12	15— 8
[illegible] ಗೋಣಿ ಗಳ್ಳೆ	14— 0	15— 0
[illegible] ಗೋಣಿ ಗಳ್ಳೆ	16— 8	27— 0
[illegible] ಗೋಣಿ ಗಳ್ಳೆ	14— 8	14—12
[illegible] ಗೋಣಿ ಗಳ್ಳೆ	13— 0	14 4
[illegible] ಬೆಲ್ಲ ಖಂಡಿ ಗಳ್ಳೆ	65— 0	70— 0
[illegible] ಗೋಣಿ ಗಳ್ಳೆ	4— 8	5— 4
[illegible] ಖಂಡಿ ಗಳ್ಳೆ	130 0	-
[illegible] ಖಂಡಿ ಗಳ್ಳೆ	48— 0	48— 0
[illegible] ಖಂಡಿ ಗಳ್ಳೆ	32— 8	40— 0
[illegible] ಮುಡಿ ಗಳ್ಳೆ	8— 4	9— 4
[illegible] ಮುಡಿ ಗಳ್ಳೆ	8— 4	8— 6
[illegible] ಬೆಳ್ತಿಗೆ ಗಳ್ಳೆ	7— 2	8 0
[illegible] ಮುಡಿ ಗಳ್ಳೆ	3—14	3—13
[illegible] ಮುಡಿ ಗಳ್ಳೆ	3— 8	6— 0
[illegible] ಮುಡಿ ಗಳ್ಳೆ	9— 4	8— 8
[illegible] ಮುಡಿ ಗಳ್ಳೆ	6— 0	7— 0
[illegible] ಖಂಡಿ ಗಳ್ಳೆ	400— 0	405— 0
[illegible] ಖಂಡಿ ಗಳ್ಳೆ	170— 0	210— 0
[illegible] ಖಂಡಿ ಗಳ್ಳೆ	510— 0	520 —
[illegible] ಮುಡಿ ಗಳ್ಳೆ	70— 0	80— 0
[illegible] ಮುಡಿ ಗಳ್ಳೆ	3—15	4 —0
[illegible] ಖಂಡಿ ಗಳ್ಳೆ	37— 8	40— 0
[illegible] ಗಳ್ಳೆ	15— 0	15— 8
[illegible] ಮುಡಿ ಗಳ್ಳೆ	20— 0	21 —
[illegible] ಗಳ್ಳೆ	16— 0	—
[illegible] ಮುಡಿ ಗಳ್ಳೆ	15 —	16— 8
[illegible] ಗಳ್ಳೆ	13— 8	13— 0
[illegible] ಖಂಡಿ ಗಳ್ಳೆ	70—	75 —

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ಸಿಸ್ಯಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯ ವಾಗಲಿ || ಅಂಚೆಹಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ನಡರಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರವಮಾಡುವ ಮತ್ತು ಸಿಹಾರಣವಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು
ಮಂಗಳೂರು ಏಜಂಟರು — ಡಿ. ಜ್ಯೂಲಸ್ ಮಾರ್ಟಿನ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ "ಬಿಲ್ಕೊ"

ನಮ್ಮ ಕಾರಖಾನೆಯಲ್ಲಿ ತಯಾರಾದ ದೀಪವು ಸೂರ್ಯನಂತೆ ಪ್ರಕಾಶವನ್ನು ಕೊಡುವದು. ಬೆಳಗಾವಿಯಲ್ಲಿ ನಡೆದ ?೯ನೇ ಹಿಂದೀ ರಾಷ್ಟ್ರೀಯ ಮಹಾಸಭೆಯು ನಮ್ಮ ಈ ದೀಪಗಳ ಉತ್ಕೃಷ್ಟವನ್ನು ನೋಡಿ ಭಂಗಾರದ ಪದಕವನ್ನು ಕೊಟ್ಟಿರುವರು ಬೇರೆ ಕಡೆಗಳಲ್ಲಿ ತಕಾರಿ ಮಾಲನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿ ತಿಳಿಯಿರಿ ಕ್ರಯದ ಪಟ್ಟಿಯನ್ನು ಧರ್ಮಾರ್ಥವಾಗಿ ಕಳುಹಿಸುವೆವು

ನಮ್ಮ ಸ್ಪೆಶಿಯಲ್ ಮೆಂಟಲು ಉಪಯೋಗಕ್ಕೆ ಬಹು ಉತ್ತಮವಿದೆ

ಶೋರೂಮ್	ಸ್ಥಾಪಿತವಾದದ್ದು	ಟೆಲಿಫೋನ್ ನಂ
99 ನಾಗಾದೇವಿ ರಸ್ತೆ	1909	23374

ದಿ ಬೊಂಬೇ ಇನ್‌ಕೆಂಡೆಸೆಂಟ್ ಲೈಟ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 288,
ಜಿ. ಪಿ. ಓ ಬೊಂಬೈ—1

ಇಂಟರ್ ನೇಶನಲ್ ಹಾರ್ವೆಸ್ಟರ್.



ಕಲ್ಟಿವೇಟರ್.

ಉಳುವುದಕ್ಕೆ ಅಗತ್ಯವಾದ ಮತ್ತು ಹೆಸರು ಹೊಂದಿದ ಯಂತ್ರವು. ಮುಖ್ಯತಃ ಕಬ್ಬು, ನೆಲಗಡಲೆ, ಹತ್ತಿ ಮೊದಲಾದುವುಗಳಿಗೂ, ತೋಟಗಳಿಗೂ, ಉಪವನಗಳಿಗೂ, ಉಪಯುಕ್ತವಾದುದು.

ಸುಲಭ ರೀತಿಯಲ್ಲಿ ಉಳಲಿಕ್ಕಾಗುವ ನೆಲಕ್ಕನುಗುಣವಾಗಿ ರಚಿಸಲ್ಪಟ್ಟಿವೆ
ಒಂದು ಜೋಡು ಸಣ್ಣ ಎತ್ತುಗಳಿಂದಾದರೂ ಸುಲಭವಾಗಿ ಎಳೆಯಲ್ಪಡುವುದು.

ಇತರ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

VOLKART BROS ENGINEERS

ಎಲ್ಲಾ ತರದ ಕೃಷಿ ಸಾಮಾನುಗಳು ದಾಸ್ತಾನು ಇವೆ

ARMENIAN STREET MADRAS

ಅನುಕ್ರಮಣಿಕೆ.

ಅಗ್ರಲೇಖ	ಪುಟ
ಬ್ರಿಟಿಷ ಸಾಮ್ರಾಜ್ಯವೂ ಹಿಂದೂಸ್ಥಾನವೂ	೬
ವಿದೇಶ ವರ್ತಮಾನ	,,
ಸ್ಥಳೀಯ ಸಮಾಚಾರಗಳು	೪
ಸೂಚನೆಗಳು	,,
ವರ್ತಮಾನ ಸಂಗ್ರಹಗಳು	
ಒಳದೇಶ ವರ್ತಮಾನ	೬-೭
ದಕ್ಷಿಣ ಕನ್ನಡ—ಮಂಗಳೂರು, ಮಂಜೇಶ್ವರ, ಕುಂಬಳೆ, ಬದಿಯಡ್ಕ, ಕಾಸರಗೋಡು, ಉಪ್ಪಿನಂಗಡಿ, ಮೂಲ್ಕಿ ಪಾಣೆಮಂಗಳೂರು ಕಾಪು	,,
ವಿವಿಧ ಸಮಾಚಾರಗಳು	೯
ದಿವಂಗತ ಶ್ರೀ ಗುರು ನಾರಾಯಣ ಸ್ವಾಮಿ	೧೦
ಕಲ್ಲಡ್ಕ ಸೆಂಟರಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ವರುಷಾವಧಿ ಮಹಾಸಭೆಯ ವರದಿ	೧೩ ೧೪
ಶ್ರೀ ಅವನೀಂದ್ರನಾಥ ಠಾಗೋರರವರು	,,
ಆರೋಗ್ಯದ ಹತ್ತು ನಿಯಮಗಳು	೧೪
ಉಪಾಧ್ಯಾಯರೂ ರಜಾಕಾಲವೂ	,,
ಪತ್ರವ್ಯವಹಾರ, ೧, ೨,	೨
ಆರಕವನ್ನು ನಾನು ಹೇಗೆ ಕಂಡುಹಿಡಿದೆನು?	,,

ಸ್ವದೇಶಾಭಿಮಾನಿ.

ತಾರೀಕು ೨೮ನೇ ಶುಕ್ರವಾರ ಸಪ್ಟಂಬರ ೧೯೨೮.

ಬ್ರಿಟಿಷ ಸಾಮ್ರಾಜ್ಯವೂ ಹಿಂದೂಸ್ಥಾನವೂ.

ಹಿಂದೂಸ್ಥಾನವು ತನ್ನ ಮನೆಯನ್ನು ಸರಿಪಡಿಸಿಕೊಳ್ಳುವಾಗ ಬ್ರಿಟಿಷ ಸಾಮ್ರಾಜ್ಯದ ಅನ್ಯಾನ್ಯ ಭಾಗಗಳ ಅಭಿಪ್ರಾಯಗಳನ್ನು ಎಷ್ಟರ ಮಟ್ಟಿಗೆ ಮಾನಿಸಬೇಕು? ಎಂಬದೊಂದು ಪ್ರಶ್ನೆಯು ಇಸೆಂಬ್ಲಿಯಲ್ಲಿ ಕರಾವಳಿ ಹಡಗಿನ ವ್ಯಾಪಾರ ವಿಷಯವಾದ ಮಿ ಹಾಜಿಯವರ ಮಸೂದೆಯ ಚರ್ಚೆಯ ಸಮಯದಲ್ಲಿ ಮುಂದೆ ಬಂದಿತು ಈ ಮಸೂದೆಯ ಹಿತಾಹಿತ ಪರಿಣಾಮಗಳ ವಿಷಯದಲ್ಲಿ ನಾವು ಇತರ ಕಡೆಯಲ್ಲಿ ಚರ್ಚಿಸಿರುವೆವು ಆದರೆ, ಆ ಮಸೂದೆಯಿಂದ ದಕ್ಷಿಣ ಆಫ್ರಿಕದೊಡನೆ ಹಿಂದೂಸ್ಥಾನಕ್ಕೆ ನಿಷ್ಠುರವಾಗಬಹುದೆಂಬ ಸರಕಾರದ ಅಂದೋಲನವನ್ನೂ, ಮಿ ವಾಜಪೇಯವರ ವ "ಇತರ ದೇಶದಲ್ಲಿ ವಾಸಿಸುವ ಹಿಂದೀಯರಿಗೆ ಸಮಾನತೆಯ ಗೌರವವನ್ನು ಪಡೆಯಲಿಕ್ಕಾಗಿ ಹಿಂದೀ ಸರಕಾರವು ಹಿಂದೀ ನ್ಯಾಯವಿಧಾಯಕ ಸಭೆಗಳ ಸಹಾಯದಿಂದ ಮಾಡುವ ಪ್ರಯತ್ನಗಳಿಗೆ ಬಹಳ ಬಾಧೆ ಕೊಡಬಹುದು" ಎಂಬುದನ್ನೂ ಇಲ್ಲಿ ನಾವು ಸಮಾಲೋಚಿಸಬೇಕಾಗಿದೆ.

ಹಿಂದೂಸ್ಥಾನದ ಸ್ವಾತಂತ್ರ್ಯದ ಇಷ್ಟು ದೀರ್ಘ ಕಾದಾಟದ ಮೇಲೆ ಸಾಮ್ರಾಜ್ಯದೊಡನೆ ಪ್ರಣಯ ಬೆಳೆಸಬೇಕಾಗಿ ಹೇಳುವವರು ಇನ್ನೂ ಇರುವರೆಂಬುವುದೇ ಆಶ್ಚರ್ಯಕರ ಹಿಂದೂಸ್ಥಾನದ ಹಿತವು ಬ್ರಿಟಿಷ, ಅರ್ಥಾತ್, ಸಾಮ್ರಾಜ್ಯದ ಅಹಿತವೆಂದ ಮೇಲೆ ಹಿಂದೂಸ್ಥಾನವು ತನ್ನ ಅಭಿವೃದ್ಧಿಗಾಗಿ ಮಾಡುವ ಪ್ರತಿಯೊಂದು ಪ್ರಯತ್ನವೂ ಸಾಮ್ರಾಜ್ಯದಿಂದ ವಿರೋಧಿಸಲ್ಪಡಲೇ ಬೇಕು ಆದುದರಿಂದ ಅವರ ಅಭಿಪ್ರಾಯಗಳನ್ನು ಹಿಂದೂಸ್ಥಾನವು ಮಾನಿಸಬೇಕಾದರೆ, ತನ್ನ ಯಾವ ಹಿತವನ್ನೂ ತಾನು ಸಾಧಿಸಬಾರದೆ ಸುಮ್ಮನೆ ಇರಬೇಕಾಗುವುದು

"ಸಮಾನತೆ" ಎಂಬ ಈ ಪೊಳ್ಳು ಅಭಿದಾನವು ಹಿಂದೀಯರ ಮುಂದೆ ಹೇಳಲ್ಪಡುತ್ತಿದೆಯೇ ವಿನಹ ಅದರಲ್ಲಿಯೂ ಹಿಂದೀಯರಿಗೆ ಲಾಭವಾಗುವುದೂ ಇಲ್ಲ, ಲಾಭವಾಗುವ ಸಂಭವವೂ ತೋರುವುದಿಲ್ಲ ಹಿಂದೂಸ್ಥಾನದ ರಾಜಕೀಯ ಪ್ರತಿನಿಧಿಯಾಗಿ ದಕ್ಷಿಣ ಆಫ್ರಿಕಕ್ಕೆ ಹೋಗಿರುವ, ಶ್ರೀಯುತ ಶ್ರೀನಿವಾಸ ಶಾಸ್ತ್ರಿಗಳಿಗೆ ಬಹಿರಂಗ ಸಭೆಯಲ್ಲಿಯೇ ಅವಮಾನ ವಾಯಿತೆನ್ನುವಾಗ, ಅದರಲ್ಲೂ, ಈ ಅವಮಾನಕ್ಕೆ ಒಬ್ಬ ಪ್ರಮುಖ ನಾಗರಿಕನೇ ಕಾರಣನಾದವೆನ್ನುವಾಗ, ದಕ್ಷಿಣ ಆಫ್ರಿಕದಲ್ಲಿ ಹಿಂದೀಯರು ಎಷ್ಟನ್ನು ನಿರೀಕ್ಷಿಸಬಹುದು ಎಂದು ತಿಳಿಯುವುದು. ಜನರಲ್ ಹಾರ್ಟ್‌ಜೋಗರು ಕ್ಷಮಾಯಾಚನೆ ಮಾಡಿರುವರೆಂಬುದೇನೋ ನಿಜ ಆದರೆ ಇಂತಹ ಕೃತ್ಯಗಳು ಇಷ್ಟು ಸುಲಭವಾಗಿ ನಡೆಯಬಲ್ಲ ವಾತಾವರಣವು ಅಲ್ಲಿ ಇದೆ ಎಂಬುದೇ ಮುಖ್ಯವಾದುದು.

ಇನ್ನು ದಕ್ಷಿಣ ಆಫ್ರಿಕದಲ್ಲಿ ಹಿಂದೀಯರಿಗೆ ಸಮಾನತೆಯು ಸಿಕ್ಕಬೇಕು. ಆದರೆ ಮುಂದೆ ಹಿಂದೀಯರಿಗೆ ಅಲ್ಲಿ ಪ್ರವೇಶ ವಿಲ್ಲವೆಂಬುದನ್ನೂ, ಒಂದುಬಾರಿ ಒಬ್ಬ ಹಿಂದೀಯನು ಅಲ್ಲಿಂದ ಹಿಂದೂಸ್ಥಾನಕ್ಕೆ ಹಿಂದಿರುಗಿ ಬಂದರೆ ಪುನಃ ವಾಪಾಸು ಅದನ್ನು ಸೇರಲಾರನೆಂಬುದನ್ನು ನಾವು ಮರೆಯಬಾರದು. ಇದರಿಂದ ಆಖೈರಿಯ ಪರಿಣಾಮವು ಅಲ್ಲಿಯ ಹಿಂದೀಯರಿಗೆ ಹಿಂದೂಸ್ಥಾನದ ಸಂಬಂಧವು ಕಡಿದುಹೋಗಿ ಅವರು ಮುಂದೆ ಹಿಂದೀಯರೆನ್ನುವುದಕ್ಕಿಂತ ದಕ್ಷಿಣ ಆಫ್ರಿಕದವರೇ ಎನ್ನಿಸಿಕೊಳ್ಳುವುದಾಗಿದೆ. ದಕ್ಷಿಣ ಆಫ್ರಿಕದೊಡನೆ ಹಿಂದೂಸ್ಥಾನವು ಮಾಡಿದ ಕರಾರಿನ ಪರಿಣಾಮವು ಇದಾಗಿರುವಾಗ ದಕ್ಷಿಣ ಆಫ್ರಿಕದ ಸರಕಾರದಿಂದ ಹಿಂದೂಸ್ಥಾನಕ್ಕೆ ಲಾಭವಾಗುವ ಪ್ರಚಂಡ ವಿಷಯವೇನೂ ಇಲ್ಲವೆಂಬುವುದು ತೋರಿಬರುವುದು.

"ಮಸೂದೆಯ ಅಂಗೀಕಾರವು ದಕ್ಷಿಣ ಆಫ್ರಿಕದ ಹಿಂದೀಯರ ಪರಿಸ್ಥಿತಿಯನ್ನು ಕೆಡಿಸುವುದೆಂಬುದು ಹಾಸ್ಯಾಸ್ಪದವಾದುದಲ್ಲದೆ ಸಾರವಿಲ್ಲದ ತರ್ಕವಾಗಿದೆ" ಎಂದು ಲಾಲಾ ಲಜಪತರಾಯರು ಹೇಳಿದರು. "ಹಿಂದೂಸ್ಥಾನದಲ್ಲಿಯೇ ಹಿಂದೀಯರಿಗೆ ಸಮಾನತೆಯಿಲ್ಲ ವರ್ಣಭೇದವು ರೈಲ್ವೇಗಳಲ್ಲಿ, ವ್ಯಾಪಾರದಲ್ಲಿ, ಮತ್ತಿತರ ಎಲ್ಲಾ ವಿಷಯಗಳಲ್ಲಿಯೂ ಇದೆ" ಎಂದು ಲಾಲಾಜಿಯವರು ಅಂದರು ನ್ಯಾಯಸ್ಥಾನಗಳಲ್ಲಿಯ ನ್ಯಾಯ ದೇವತೆಯು ಕೂಡ ನಿಷ್ಪಕ್ಷಪಾತಿಯಾಗಿರಲಾರಳು ಇವಕ್ಕೆಲ್ಲಾ "ರಾಜಭಕ್ತ"ರು ಕಣ್ಣುಮುಚ್ಚಿ ಪ್ರಯೋಜನವಾಗುವುದಿಲ್ಲ

ಲೀಗ್ ಒಫ್ ನೇಶನ್ಸಿನಲ್ಲಿ ಪ್ರತಿನಿಧಿಗಳೇನೋ ಕೆಲವು ಬಾರಿ ಹಿಂದೀಯರಿರುವರು. ಆದರೆ ಪ್ರಮುಖ ಸಮಸ್ಯೆಗಳ ವಾದದ ಸಮಯಕ್ಕೆ ಹಿಂದೀ ಅಭಿಪ್ರಾಯಗಳು ಬ್ರಿಟನ್ನನೆ ಕೊಡಬೇಕಾಗುವುದು ಕೆಲವು ದಿನಗಳ ಹಿಂದೆ ಸಹಿ ಹಾಕಲ್ಪಟ್ಟ "Kellog pact" ಎಂಬ ಯುದ್ಧ ನಿವಾರಣೆಯ ಸಂಧಿಗೆ ಹಿಂದೂಸ್ಥಾನದ ಕಡೆಯಿಂದ ಸಹಿಹಾಕಲಿಕ್ಕೆ ಹಿಂದೀಯನು ಬ್ರಿಟಿಷ ಸರಕಾರಕ್ಕೆ ಸಿಕ್ಕಲಿಲ್ಲ, ಬ್ರಿಟಿಷರ ಉನ್ನತವಾದ ಕನ್ಸರ್ವೆಟಿವ್ ಪಕ್ಷದ ಪ್ರತಿನಿಧಿ ಯಾ ಪಾರ್ಲಿಮೆಂಟಿನ ಸೇರಲಿಚ್ಛಿಸಿ ಹಿಂದೀ ಧುರೀಣರನ್ನು ಮನಸ್ವೀ ದೂಷಿಸುತ್ತಿರುವ ಬರ್ಡವಾನ ಮಹಾರಾಜರು ಕೂಡ ಇಂಗ್ಲೆಂಡಿಗೆ ಸಿಕ್ಕಲಿಲ್ಲ ಹಿಂದೂಸ್ಥಾನವನ್ನು ಒಬ್ಬ ಬ್ರಿಟಿಷನೇ ಪ್ರತಿನಿಧಿಸಬೇಕಾಯಿತು

ಸಾಮ್ರಾಜ್ಯದಲ್ಲೆಲ್ಲಿಯೂ ಹಿಂದೀಯರಿಗೆ ಪ್ರವೇಶವಿಲ್ಲ. ರಾಜಕೀಯ ಕಾರಣಗಳಲ್ಲಿ ತಲೆಹಾಕದ ಕವಿ ಸಾರ್ವಭೌಮರಾದ ಶ್ರೀಯುತ ರವೀಂದ್ರನಾಥ ಠಾಕೂರರು ಕೂಡ ಈ ವಿಷಯದ ನಿಮಿತ್ತಾತ್ಮಕವಾಗಿ ಕೆನಡಾ ದೇಶಕ್ಕೆ ಬರಲಿಕ್ಕಿದ್ದ ಆಮಂತ್ರಣವನ್ನು ತಿರಸ್ಕರಿಸಿ ಆ ದೇಶಕ್ಕೆ ಹೋಗದೆ ಯೇ ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕವನ್ನು ಸಂಚರಿಸಿ ಅವರು ಹಿಂದೆ ಬಂದರು

ಸಾಮ್ರಾಜ್ಯದಲ್ಲಿ ಹಿಂದೂಸ್ಥಾನಕ್ಕೆ ಇಷ್ಟೇ ಗೌರವವಿದ್ದೆ, ಅದಕ್ಕೆ ಇನ್ನು ಮುಂದೆ ಇಷ್ಟೇ ಸಿಕ್ಕೀತು ಎಂಬುದು ಸರಿಯಾಗಿ ಗೊತ್ತಾಗುತ್ತಿದೆ ಇದನ್ನು ಇನ್ನೂ ಇನ್ನೂ ಚರ್ಚಿಸಿ ಫಲವಿಲ್ಲ ಆದರೆ ಕೆಲವರು ಇನ್ನೂ ಇನ್ನೂ ಇದನ್ನೇ ಆಕಾಶ ಕುಸಿವಂತೆ ಮುಂದೆ ಚಾಚಿ ಹಿಂದೀಯರು ಇದನ್ನು ನಂಬುವರೆಂದು ಎಣಿಸುವುದೇ ಆಶ್ಚರ್ಯಕರವಾಗಿದೆ

ಹಿಂದೂಸ್ಥಾನದ ರಾಜಕೀಯ ಮತ್ತು ಸಾಂಪತ್ತಿಕ ವಿಕಾಸದಲ್ಲಿ ಸಾಮ್ರಾಜ್ಯದ ಸಮ್ಮತಿ ಮತ್ತು ಅಸಮ್ಮತಿಗಳನ್ನು ಲೆಕ್ಕಿಸಿ ಪ್ರಯೋಜನವಿಲ್ಲ ಹಿಂದೂಸ್ಥಾನದ ಅಭಿವೃದ್ಧಿಯೂ ಸ್ವತಂತ್ರವಾಗಿಯೇ ನಡೆಯತಕ್ಕದಿದೆ

ವಿದೇಶ ವರ್ತಮಾನ.

ಅಫಘಾನದ ಅಮೀರರಾದ ಅಮಾನುಲ್ಲಾ ದೊರೆಗಳವರು ಅಫಘಾನದ ದಕ್ಷಿಣ ಪ್ರಾಂತಗಳನ್ನು ಸಂಚರಿಸುವ ಸಲುವಾಗಿ ಕಳೆದ ೧೬ನೇ ತಾರೀಕಿನ ದಿನ ರಾಜಧಾನಿಯನ್ನು ಬಿಟ್ಟು ಹೊರಟಿರುವರು

— ಪ್ಯಾರಿಸ್ ಬೇಸಿನಲ್ಲಿ ಒಂದು ವಿಮಾನವು ಸುಮಾರು ೬ ೦ ಸಾವಿರ ಎತ್ತರದಲ್ಲಿ ಹಾರುತ್ತಿತ್ತು ಅದರಲ್ಲಿ ಒಬ್ಬಳೇ ಒಬ್ಬ ಹೆಂಗಸಿದ್ದಳು ಆಕಸ್ಮಾತ್ತಾಗಿ ವಿಮಾನದ ಬಾಗಿಲು ತೆರೆದು ಕೆಳಗೆ ಬಿದ್ದು ವಿಮಾನದಿಂದ ಕೆಳಕ್ಕುರುಳಿತು ಆದರೆ ವಿಮಾನಕ್ಕೆ ಬದಿಗಳಲ್ಲಿ ರೆಕ್ಕೆಯ ರೀತಿಯ ಭಾಗಗಳನ್ನು ಕೂಡಿಸಿದ್ದರಿಂದ ಅದು ಒಮ್ಮೆಯೇ ಕೆಳಕ್ಕೆ ಬಿದ್ದು ಚೂರು ಚೂರಾಗದೆ, ಮೆಲ್ಲನೆ ಇಳಿಯುತ್ತಾ ಬಂದು ನೆಲದ ಮೇಲೆ ಕೂತಿತು

— ವೆಸ್ಟ್ ಇಂಡೀಸಿನಲ್ಲಿ ಉಂಟಾದ ಸಂಟರ ಗಾಳಿಯಿಂದ ಸತ್ತವರ ಸಂಖ್ಯೆಯು ಸುಮಾರು ೨೦೦೦ಕ್ಕೆ ಮಿಕ್ಕಿರುವದೆಂದು ಅಂದಾಜು ಮಾಡಲಾಗಿಯದೆ, ಆಸ್ತಿಪಾಸ್ತಿಗಳಿಗೆ ಸಂಭವಿಸಿದ ಅಪಾರ ನಷ್ಟಕ್ಕೆ ಲೆಕ್ಕವಿಲ್ಲ ಸುಮಾರು ೬೦೦,೦೦೦ ಜನರು ಮನೆಯಿಲ್ಲದೆ ಅನಾಥರಂತೆ ತಿರುಗುತ್ತಿರುವರು.

— ಸ್ಪೈನಿನ ಅರಸರು ಕಳೆದ ವಾರ ಸ್ಕೋಟಲೆಂಡನ್ನು ಸಂದರ್ಶಿಸಿದರು.

— ಸೆಪ್ಪದಲ್ಲಿಯೇ ನಡೆದ ಅಂತರ್ರಾಷ್ಟ್ರೀಯ [illegible] ವರ ಪರಿಷತ್ತಿನಲ್ಲಿ ಈ ಕೆಳಗಿನ ನಿರ್ಣಯವಾಗಿರುತ್ತದೆ [illegible] ಕೋದನ್ನು ಎರಡು ವಿಭಾಗಗಳನ್ನಾಗಿ ಮಾಡುವರು, [illegible] ಅಕ್ಷರಗಳಿಗೆ ಮೀರಿದ ಶಬ್ದಗಳಿರಬೇಕು ಇನ್ನೊಂದರಲ್ಲಿ [illegible] ಗಳಿಗೆ ಮೀರಿದ ಶಬ್ದಗಳಿರಬೇಕು. ಮೊದಲನೇ ವಿಭಾಗದ [illegible] ಐದು ಅಕ್ಷರಗಳ ಶಬ್ದದಲ್ಲಿ ಒಂದು ಸ್ವರವೂ, ಆರು [illegible] ರಗಳುಳ್ಳ ಶಬ್ದದಲ್ಲಿ ಎರಡು ಸ್ವರಗಳೂ ಇರತಕ್ಕದ್ದು [illegible] ಅಕ್ಷರಗಳ ಶಬ್ದದಲ್ಲಿ ಮೂರು ಸ್ವರಗಳಿರತಕ್ಕದ್ದು. [illegible] ಶಬ್ದಗಳಿಗೆ ಯಾವ ತರದ ಶರ್ತಗಳೂ ಇರುವುದಿಲ್ಲ [illegible] ಗದ ತಂತಿಗಳಿಗೆ ಈಗಿನಷ್ಟೇ ಚಾರ್ಜು ಎರಡನೇ ವಿಭಾಗ [illegible] ಈಗಿನದ್ದಕ್ಕಿಂತ ಮೂರನೇ ಎರಡಂಶ

— ಇಂಗ್ಲಾಂಡಿನಲ್ಲಿ ಒಬ್ಬ ಹೆಂಗಸು ವಿಮಾನದಲ್ಲಿ [illegible] ಡುತ್ತಿರುವಾಗ ವಿಮಾನವು ಕೆಳಕ್ಕೆ ಬಿದ್ದು ಮಡಿದಳು. [illegible] ವರೆಗೆ ಇಂಗ್ಲಾಂಡಿನಲ್ಲಿ ವಿಮಾನಗಳ ದೆಸೆಯಿಂದ ಹೆಂಗಸರು ಸತ್ತಿರಲಿಲ್ಲ.

ಲಂಡನಿನ ಬೆರ್ನಾರ್ಡ್ ಬೆರನ್‌ರೆಂಬವರು ಆಸ್ಪತ್ರೆಗಳ [illegible] ಯೋಗಾರ್ಥವಾಗಿ ಸುಮಾರು ಅರ್ಧ ಮಿಲಿಯ ಸ್ಟರ್ಲಿಂಗುಗಳನ್ನು ದಾನವಾಗಿ ಕೊಟ್ಟಿರುವರು ಈ ಹಣದ ಮುಕ್ಕಾಲು ಪಾಲು ಕ್ರೈಸ್ತ ಸಂಸ್ಥೆಗಳಿಗೂ ಉಳಿದವು ಜ್ಯೂವಿಶ್ ಸಂಸ್ಥೆಗಳಿಗೂ ವಿನಿಯೋಗಿಸಲ್ಪಡ ಬೇಕೆಂದು ದಾತರ ಅಪೇಕ್ಷೆ.

— ಬಗದಾದಿನಲ್ಲಿ ಟ್ರಾಮು ಕಾರುಗಳನ್ನು ಓಡಿಸಿ, ವಿದ್ಯುಚ್ಛಕ್ತಿಯ ದೀಪಗಳನ್ನು ಉರಿಸಲು ಬ್ರಿಟಿಷ ಸಿಂಡಿಕೇಟಿನವರಿಗೆ ಅಪ್ಪಣೆಯು ದೊರಕಿರುತ್ತದೆ ಇದಕ್ಕೆ ಕೆಲವರ ವಿರೋಧವಿದ್ದಿತಾದರೂ ಈ ಮಸೂದೆಯು ಬಹುಪಕ್ಷವಾಗಿ ಮಂಜೂರು ಮಾಡಲ್ಪಟ್ಟಿತು

— ಹವಾನಾದಲ್ಲಿ ಒಂದು ಅಂತರ್ರಾಷ್ಟ್ರೀಯ ಪರಿಷತ್ತು ಜರಗುವದು ಆಗ ಸಕ್ಕರೆಯ ಉತ್ಪತ್ತಿಯ ಮೇಲೆ ನಿರ್ಬಂಧ ಮತ್ತು ಸಕ್ಕರೆ ವ್ಯಾಪಾರದ ಕುರಿತು ಹೊಸ ಕಾನೂನು ಇವುಗಳ ವಿಷಯವಾಗಿ ಚರ್ಚಿಸುವರು

— ರಷ್ಯದ ಉಕ್ರೈನ ಎಂಬಲ್ಲಿ ಬೆಳೆ ಬೆಳೆಯದೆ ಇದ್ದ ಕಾರಣ ಸೋವಿಯಟ್ ಸರಕಾರದವರು ೮ ೦,೦೦೦ ಜನರಿಗೆ ಅನ್ನ ಕೊಡುವ ಆಲೋಚನೆಯನ್ನು ಮಾಡಿರುವರು ೩೧ ಮಿಲಿಯ ರುಬುಲುಗಳನ್ನು ಆಹಾರದ ಸಲುವಾಗಿ ಇಟ್ಟಿರುವರು. ಅಮೇರಿಕದಿಂದ ಇತ್ತೀಚೆಗೆ ತರಿಸಿದ ೨೦೦,೦೦೦ ಟನ್ ಧಾನ್ಯದ ಮುಕ್ಕಾಲು ಅಂಶವನ್ನು ಬಿತ್ತುವ ಸಲುವಾಗಿ ಜನರಿಗೆ ಹಂಚಿದ್ದರು ಆದರೆ ಹಸಿದ ಜನರು ಬೀಜ ಬಿತ್ತುವ ಬದಲು ಅವುಗಳನ್ನು ತಾವೇ ತಿಂದು ಹೊಟ್ಟೆಗೆ ಧಾನ್ಯವನ್ನು ಕೇಳುತ್ತಿರುವರು.

— ಅಮೇರಿಕದಲ್ಲಿ ನಡೆದ ಪೀಸ್ ಕಾನ್ಫರೆನ್ಸಿಗೆ ಹೋಗಿ ಸಿ, ಎಫ್, ಆಂಡ್ರೂಸರವರು ಲಂಡನಿಗೆ ಬಂದಿರುವರು ಅವರು ಲಂಡನಿನಿಂದ ಅಮೇರಿಕಕ್ಕೆ ಹೋಗಿ ಮಿಸ್ ಮೆಯೋಳು ತನ್ನ ಪುಸ್ತಕದಿಂದ, ಹಿಂದೂಗಳ ಕುರಿತು ಪ್ರಕಟಿಸಿದ ಮತಾಭಿಪ್ರಾಯಗಳನ್ನು ಖಂಡಿಸುವರು. ಅಲ್ಲಿಂದ ಮತ್ತೆ ದಕ್ಷಿಣ ಆಫ್ರಿಕಕ್ಕೆ ತೆರಳುವರು

— ೫ ವರುಷಗಳ ವರೆಗೆ ನೀರಲ್ಲಿಯನ್ನು ಕುಡಿದು ಜೀವನ ಮಾಡಿದ ಬಲು ಧನಿಕನಾದ ಲಂಡನಿನ ಪೀಟರ್ ಟೈಲರನೆಂಬವನು ಸತ್ತುಹೋದನು. ಅವನು ಸಾಯುವಾಗ ಆತನೊಡನೆ ೭೦೦೦ ಪವನುಗಳಿದ್ದವು ಆತನ ಹೆಂಡತಿಯು ತನ್ನ ಗಂಡನ ನೀರಾಳ್ವಿಕೆಯನ್ನು ಸುಳಿಯುವಾಗ ಅತ್ತುದಿಲ್ಲ ವಿನಃ ಹತ್ತು ಯಾ ಹದಿನೆಂಟು ಹಂಡ್ರೆಡ್‌ವೇಟ್ ನೀರುಳ್ಳಿಯನ್ನು ನನ್ನ ಗಂಡನು ಸುಲಿಯಬಲ್ಲವನಾಗಿದ್ದನು ಎಂದು ಹೇಳುವಳು.

— ಆಫ್ರಿಕದಲ್ಲಿ ೬೦ ವರೆ ವರ್ಷ ಪ್ರಾಯದವರು ಜಡ್ಜರ ಕೆಲಸನೋಡ ಬಾರದೆಂದ ಹುಕುಮು ಮೊದಲು ೭೫ ರ ವರೆಗೆ ಕೆಲಸ ಮಾಡುತ್ತಿದ್ದರು. ಈ ಕಾನೂನಿನ ಪರಿಮಿತಿಯ ಜಡ್ಜರ ಕೆಲಸ ಬಿಡಬೇಕಾಯಿತು

— ಹಿಂದೂಸ್ಥಾನದಲ್ಲಿ ತಯಾರಾದ 'ಶಿರಾಜ' ಎಂಬ ಫಿಲ್ಮನ್ನು ಮೊನ್ನೆ ಲಂಡನಿನಲ್ಲಿ ಪ್ರದರ್ಶಿಸಿದರು. ತಾಜಮಹಾಲಿನ ಕಥೆಯು ಅದರಲ್ಲಿ ಅಡಕವಾಗಿದೆ ಅದನ್ನು ಪಾಶ್ಚಾತ್ಯರು ಬಹಳವಾಗಿ ಪ್ರಶಂಸಿಸಿದರು.

ಇಟಲಿ ಮುಸ್ಸೋಲಿನಿಯೂ ಗ್ರೀಸಿನ ವೇನಿಜೆಲೋಸರೂ ಸ್ನೇಹದ ಕರಾರಿಗೆ ಸಹಿ ಹಾಕಿ ಒಪ್ಪಂದವನ್ನು ಮಾಡಿಕೊಂಡಿರುವರು,

— ಮ್ಯಾಡ್ರಿಡಿನ ಒಂದು ನಾಟಕ ಗೃಹದಲ್ಲಿ ಬೆಂಕಿಯುಂಟಾಗಿ ಕಟ್ಟಡಕ್ಕೆ ಬೆಂಕಿ ತಗಲಿ ನೂರಾರು ಜನರು ಸುಟ್ಟುಹೋದರು ಜನರು ಹೊರಗೆ ಹೋಗಲು ಸಾಕಷ್ಟು ದ್ವಾರಗಳಿರಲಿಲ್ಲ

— ಸ್ಕೋಟಲೆಂಡಿನ ಆಡಲು ಹೋಗಿದ್ದ ೧೬ ವರುಷ ಪ್ರಾಯದ ಬಟ್ಲರ್‌ನೆ ಬವನು ಬ್ಯಾಂಕನ್ನು ಇಲ್ಲದೆ ಕಾರನ್ನು ಓಡಿಸಿ ಒಬ್ಬ ಶಾಲಾ ಹುಡುಗನ ಮೇಲೆ ಕಾರನ್ನು ಓಡಿಸಿ, ಆತನನ್ನು ಕೊಂದ ಕಾರಣ, ಆತನಿಗೆ ೫೦೦ ಪೌಂಡರ ಜುರ್ಮಾನೆ ವಿಧಿಸಲ್ಪಟ್ಟಿತು.

— ಸುಮಾತ್ರಾ ದ್ವೀಪದಲ್ಲಿ ಕುಷ್ಠರೋಗಿಗಳು ಯಾವುದೋ ಒಂದು ಚಿಕಿತ್ಸೆಗೆ ಒಳಪಡಬೇಕೆಂದು ಅಸಿಸ್ಟಂಟ ಕಮಿಶನರು ಹೇಳುವಾಗ ರೋಗಿಗಳು ಕೇಳದೆ ಸುಮಾರು ೫೦ ರೋಗಿಗಳು ಅವರನ್ನು ಆಕ್ರಮಿಸಿದರು ಆಗ ಅವರು ಗುಂಡು ಬಿಟ್ಟು ಸುಮಾರು ೧೦ ರೋಗಿಗಳನ್ನು ಕೊಲ್ಲಲೇ ಬೇಕಾಯಿತು

ಒಳದೇಶ ವರ್ತಮಾನ.

ಈ ಮಹಾಸಭೆಯು ಇದೇ ತಿಂಗಳ ತಾ. ೩೦ನೇ ಶನಿವಾರ ಮಂಗಳೂರು ತಾಲೂಕು ಬೋರ್ಡ್ ಪ್ರೆಸಿಡೆಂಟರಾದ ಡಾ ಕೆ. ಸದಾಶಿವ ಆಳ್ವರವರ ಅಧ್ಯಕ್ಷತೆಯಲ್ಲಿ ಜರಗಿತು ಶಾಲಾ ಕಟ್ಟೋಣವನ್ನು ಬಹಳ ಅಂದವಾಗಿ ಅಲಂಕರಿಸಿದ್ದರು ಕಲ್ಲಡ್ಕ ಮತ್ತು ಸುತ್ತುಮುತ್ತಲಿನ ಗ್ರಾಮಗಳ ದೊಡ್ಡ ಮನಿತನಗಳ ಮಹನೀಯರುಗಳು ಬಂದಿದ್ದರು ಬಂಟವಾಳ ಸೆಂಟರಿನ ಎಲ್ಲಾ ಉಪಾಧ್ಯಾಯರೂ ಉಪಾಧ್ಯಾಯಿನಿಯರೂ ಬಂದಿದ್ದರು ಅರ್ಕುಳ ಸೆಂಟರಿನ ಸೆಕ್ರೆಟರಿಯವರಾದ ರಾಮಾಹೆಗಡೆಯವರೂ ಇತರ ಉಪಾಧ್ಯಾಯರೂ, ಅಲ್ಲದೆ, ಹತ್ತಿರದಲ್ಲಿದ್ದ ಸೆಂಟರುಗಳ ಸೆಕ್ರೆಟರಿಗಳೂ ಹಲವು ಮಂದಿ ಉಪಾಧ್ಯಾಯರೂ ಬಂದಿದ್ದರು ಎಲ್ಲಾ ಸೆಂಟರುಗಳ ಉಪಾಧ್ಯಾಯರು ಸುಮಾರು ೧೭೫ ಮಂದಿ ಉಪಾಧ್ಯಾಯ ಉಪಾಧ್ಯಾಯಿನಿಯರು ಹಾಜರಿದ್ದರು

ವಸ್ತುಪ್ರದರ್ಶನ—ಎಲಿಮೆಂಟರಿ ಶಾಲಾ ಮಕ್ಕಳಿಗೆ ಕಲಿಸುವುದಕ್ಕೆ ಯೋಗ್ಯವಾದ ಮೊದಲುಗಳು, ಚಾರ್ಟುಗಳು ಮುಂತಾದವುಗಳ ಪ್ರದರ್ಶನವೂ ಇತ್ತು ಈ ಪ್ರದರ್ಶನಕ್ಕೆ ತಂದ ವಸ್ತುಗಳಲ್ಲಿ ಕಲ್ಲಡ್ಕ ಶಾಲೆಯ ಕ್ರಾಸ್ತ ಎಂಬ ಒಬ್ಬ ಉಪಾಧ್ಯಾಯರು ಬಾಲಕ ದರ್ಜೆಗೆ ಕಲಿಸಲು ಯೋಗ್ಯವಾದ ಚಲೋ ಪಟಗಳನ್ನು ತಯಾರಿಸಿ ತಂದಿದ್ದರು, ಮುಖ್ಯವಾಗಿ ಬಂಟವಾಳ ಸೆಂಟರಿನ ಸೆಕ್ರೆಟರಿಯವರಾದ ಎಂ. ಪ ಬಿಗಳರು ಪಶ್ಚಿಮ ಕರಾವಳಿಯಲ್ಲಿ ಪ್ರತಿ ತಿಂಗಳಲ್ಲಿ ಕಾಣುವ ನಕ್ಷತ್ರಗಳ ಅರ್ಧಗೋಲಗಳ ದೊಡ್ಡ ಪಟಗಳನ್ನೂ ಪ್ರತಿಯೊಂದು ನಕ್ಷತ್ರ ರಾಶಿಯ ಮತ್ತು ೨೭ ನಕ್ಷತ್ರಗಳ ಪ್ರತ್ಯೇಕ ಪಟಗಳನ್ನೂ, ಮನುಷ್ಯನ ಶರೀರದೊಳಗಿರುವ ಎಲ್ಲಾ ಭಾಗಗಳನ್ನು ತೋರಿಸುವ ದೊಡ್ಡ ಚಿತ್ರವನ್ನೂ, ಎಕ್ಕಲಿ, ಕಪ್ಪೆಯ ಜೀವನ ಚರಿತ್ರೆಯ ಪಟಗಳನ್ನೂ ಕೋಳಿಯ ಮೊಟ್ಟೆಯೊಳಗಿರುವ ಬೇರೆ ಬೇರೆ ಭಾಗಗಳನ್ನು ತೋರಿಸುವ ಪಟಗಳನ್ನೂ ಸಂದಾವರ, ಬೇಕಲ ಚಂದ್ರಗಿರಿ ಕೋಟೆಗಳ ಮತ್ತು ಮೂಡಬಿದರೆ, ಸುರಾಲ ಅರಮನೆಗಳ, ಕೆಲವು ಶಾಲೆಗಳ ಗ್ರ್ಯಾಂಡ್‌ಪ್ಲೇನ್ ಮತ್ತು ಕಟ್ಟೋಣದ ಪ್ಲೇನುಗಳನ್ನೂ, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ರಾಜ್ಯಗಳ ಬಣ್ಣ ಹಾಕಿ ಬಿಡಿಸಿದ ಪಟವನ್ನೂ ಕಲ್ಲಡ್ಕ, ಪಾಣೆಮಂಗಳೂರು ಗ್ರಾಮಗಳ ಪಟಗಳನ್ನೂ ರೈಲ್ವೇ ಸ್ಟೇಷನ್, ಡೋಕ್‌ಯಾರ್ಡಿನ ಮೊದಲುಗಳನ್ನೂ ತಯಾರಿಸಿ ತಂದಿದ್ದರು ಪಾಣೆಮಂಗಳೂರು ಎಸ್ ಪಿ ಎಸ್. ಶಾಲೆಯ ಉಪಾಧ್ಯಾಯರಾದ ರಾ ಚಂದಪ್ಪ ಶೆಟ್ಟಿ ಬಂಟವಾಳ ಸೆಂಟರಿಗೆ ಸೇರಿದ ಎಲ್ಲಾ ಗ್ರಾಮಗಳ ನಕ್ಷೆಗಳನ್ನೂ ಗ್ರಾಮದಲ್ಲಿರುವ ಪ್ರತಿಯೊಂದು ಮನೆಗಳ ಯಜಮಾನರ ಹೆಸರು ಬರೆದಿರುವ ಪಟಗಳನ್ನೂ, ಭೂಪ್ರಕೃತಿಯ ಒಂದು ಮೊದಲನ್ನೂ ಬಂಟವಾಳದ ಲೇಬಲುಗಳ ಒಂದು ಆಲ್ಬಮನ್ನೂ ಪಾಣೆಮಂಗಳೂರು ಸೇತುವೆಯ ಬಹಳ ಅಂದವಾದ ಸ್ಕೇಲು ಪ್ರಕಾರವಿರುವ ಮೊದಲನ್ನೂ ಹಿಂದೂದೇಶದ ಚರಿತ್ರೆಯ ವೀರಪುರುಷರ ಚಿತ್ರಗಳನ್ನು ತಂದಿದ್ದರು. ಬಂಟವಾಳ ದೇವಸ್ಥಾನ ಶಾಲೆಯ ಶಾ ಬಿ ಪಕೀರ ಮಾಸ್ತರರು ಅಟ್ಟೆಗೆ ಪೆಟ್ಟಿಗೆಯಿಂದ ಮಾಡಿದ ಆಸನಗಳು, ಮಾನಸ್ತಂಭ ಸಹಿತ ವಿಠಲ ದೇವಾಲಯ, ಗೋಮಟೇಶ್ವರ ಸ್ವಾಮಿಯವರ ಆವೆಮಣ್ಣಿನ ಮೊದಲನ್ನೂ, ತಟ್ಟೆಯಲ್ಲಿ ಕತ್ತರಿಸಿ ತಯಾರಿಸಿದ ಮನುಷ್ಯದೇಹದ ಅಸ್ತಿಪಂಜರವನ್ನೂ ಬಂಟವಾಳ ಬೋರ್ಡು ಶಾಲೆಯ ಮಂಜಪ್ಪ ಮಾಸ್ತರರು ಎರಡು ದ್ವಿದಳಗಳ ಭಾಗಗಳನ್ನು ತೋರಿಸುವ ಬಣ್ಣಹಾಕಿ ತಯಾರಿಸಿದ ಚಲೋ ಪಟಗಳನ್ನೂ ದಕ್ಷಿಣ ಕನ್ನಡ ಜಿಲ್ಲೆಯ ಭಾಷೆಗಳು, ಉತ್ಪತ್ತಿಗಳು, ವ್ಯಾಪಾರ ಕೈಗಾರಿಕೆ ಮುಂತಾದುವುಗಳನ್ನು ತೋರಿಸುವ ಬಣ್ಣದ ಪಟಗಳನ್ನು ತಂದಿದ್ದರು ಬಂಟವಾಳ ದೇವರ ಶಾಲೆಯ ತಿಮ್ಮಯ್ಯ ಮಾಸ್ತರರ ನಾನಾತರದ ಬಣ್ಣದ ಬಳೆಯ ತುಂಡುಗಳಿಂದ ಪಕ್ಷಿಗಳ ಮತ್ತು ಮೃಗಗಳ ಚಿತ್ರಗಳನ್ನೂ ಗೆರಟೆಯಿಂದ ಮಾಡಿದ ಗುಬ್ಬಿಗಳನ್ನೂ, ಬಣ್ಣ ಚೀಟಿ ಕಡ್ಡಿಗಳ ತಯಾರಿಸಿದ ಕೋಳಿಯುಕ್ಷ, ವಸ್ತ್ರ ಕ್ರೀಡೆಗಳಿಗಾಗಿ ಪ್ರತಿಗಳನ್ನೂ ಒಂದು ಗೇಸ್‌ಲ್ಯಾಟ್ ಮೊದಲನ್ನೂ ತಂದಿದ್ದರು. ಎಂ ಪಿ ಬಿಗಳರು ಶಾಲೆಗಳಿಗಾಗಿ ತಯಾರಿಸಿದ್ದ ಪ್ರಾಚೀನ ಇತಿಹಾಸ, ಪೆಟ್ಟಿಗೆ ಮತ್ತು ಆಲ್ಬಮು ತಯಾರಿಸುವ ವಿಧಾನದ ಪುಸ್ತಕಗಳು ತುಳು ಪಾಠ್ಯಪುಸ್ತಕಗಳು ಮಂಜೇಶ್ವರ ಗೋವಿಂದ ಪೈಗಳು, ಕಾರಂತ ಮುಂತಾದವರ ಕೆಲವು ಪುಸ್ತಕಗಳು, ಚರಿತ್ರೆ ಕಥೆಗಳು, ಪ್ರಾಥಮಿಕ ಆರೋಗ್ಯಶಾಸ್ತ್ರದ ಪುಸ್ತಕಗಳೂ ಶಾರದಾ ಪ್ರೆಸ್ಸಿನ ಆಧ್ಯಾತ್ಮಿಕ ಪತ್ರಿಕೆಗಳೂ ಪ್ರದರ್ಶಿಸಲ್ಪಟ್ಟಿದ್ದವು. ಈ ಪ್ರದರ್ಶನದಲ್ಲಿ ಎಂ ಪಿ ಬಿಗಳಿಗೆ ಒಂದನೇ ತರಗತಿಯ ಬೆಳ್ಳಿಯ ಪದಕವೂ ಚಂದಪ್ಪ ಶೆಟ್ಟಿಗೆ ಎರಡನೇ ತರಗತಿಯ ಬೆಳ್ಳಿಯ ಪದಕವೂ, ಪಕೀರಮಾಸ್ತರಿಗೆ ಎರಡನೇ ತರಗತಿಯ ಬೆಳ್ಳಿಯ ಪದಕವೂ ಕೊಡಲ್ಪಟ್ಟವು.

ಸಭಾಕಾರ್ಯ—ಮೊದಲು ದೇವರ ಪ್ರಾರ್ಥನೆಯಾಗಿ, ಅಧ್ಯಕ್ಷರ ಚುನಾವಣೆಯಾಯಿತು ಸೆಕ್ರೆಟರಿಯವರಾದ ರಾಮರಾಯರು ಸ್ವಾಗತ ಭಾಷಣವನ್ನು ಮಾಡಿದರು ನಂತರ ಸಂಘದ ವರುಷಾವಧಿ ರಿಪೋರ್ಟು ಓದಲಾಯಿತು ಬಾಲಕ ದರ್ಜೆಯ ಮಕ್ಕಳಿಗೆ ಓದು ಬರೆ ಕಲಿಸುವ ಮಾದರಿ ಪಾಠವನ್ನು ಯೋಗ್ಯರೀತಿಯಲ್ಲಿ ರಾಮಣ್ಣ ಶೆಟ್ಟಿ ಕೊಟ್ಟರು. ಅದೇ ಶಾಲೆಯ ಸಹಾಯಕ ಉಪಾಧ್ಯಾಯರೊಬ್ಬರು ಸರಳ ಬಡ್ಡಿ ಲೆಕ್ಕಗಳನ್ನು ಕಲಿಸುವ ಮಾದರಿ ಪಾಠಗಳನ್ನು ಕೊಟ್ಟರು. ನಂತರ ಎಂ ಪಿ ಬಿಗಳರು ಹಳ್ಳಿಯ ವಿದ್ಯಾಭಿವೃದ್ಧಿಯ ವಿಷಯವೂ ಟೆಂಪಲ್ ಸೆಕೆಂಡರಿ ಶಾಲೆಯ ಹೆಡ್‌ಮಾಸ್ಟರ್ ಅಧ್ಯಾಪಕರಾದ ಪಿ ಲಕ್ಷ್ಮಣರಾಯರು ಮಕ್ಕಳಿಗೆ ಆಟದ ಆವಶ್ಯಕತೆ ಎಂಬ ವಿಷಯವೂ ಎರಡು ಭಾಷಣಗಳನ್ನು ಕೊಟ್ಟರು.

ಕಲ್ಲಡ್ಕ ಶಾಲೆಯ ಮಕ್ಕಳು ಕೃಷ್ಣಸಂಧಾನದ ಒಂದು ಭಾಗದ ಯಕ್ಷಗಾನವನ್ನು ಮಾಡಿದರು ಭಾಗವತರು, ಮದ್ದಳೆಗಾರರು, ಅರ್ಥಗಾರರು ಸಣ್ಣ ಹುಡುಗರೇ ಆಗಿದ್ದರು ಭಾಗವತರಿಗೆ ೩ ರೂಪಾಯಿ ಇನಾಮು ಸಿಕ್ಕಿತು ಅರ್ಥಗಾರರಿಗೆ ಪುಸ್ತಕಗಳ ಇನಾಮು ಸಿಕ್ಕಿತು. ಅನಂತರ ಹುಡುಗರ ಪಂದ್ಯಾಟಗಳಾಗಿ ಅವರಿಗೆ ಇನಾಮುಗಳು ಹಂಚಲಾದವು. ಇದಾದಮೇಲೆ ನೋಟ್ಸ್ ಆಫ್ ಲೆಸ್ಸನ್ನ ಬರೆಯುವಂತೆ ವಿದ್ಯಾಇಲಾಖೆಯವರು ವಿಧಿಸಿದ ಸರ್ಕಾರರಿಂದ ಒಬ್ಬರಾಗಲಿ, ಇಬ್ಬರಾಗಲಿ ಉಪಾಧ್ಯಾಯರಿದ್ದು ನಾಲ್ಕೈದು ಕ್ಲಾಸುಗಳಿರುವ ಶಾಲೆಗಳ ಉಪಾಧ್ಯಾಯರಿಗೆ ಪಟ್ಟಿಲ್ಲ ನೋಟ್ಸ್ ಬರೆಯಲಿಕ್ಕೆ ಬಹಳ ಕಷ್ಟವಾಗುತ್ತದೆಂದೂ, ಟ್ರೈನಿಂಗ್ ಶಾಲೆಯಲ್ಲಿ ಗಂಗ,

[illegible] ತಿಂಗಳಿಗೆ ಸಂಬಳವಿಲ್ಲ ಬೇಕಾದಷ್ಟು ಬೇರೆ [illegible] ಕೂಡ್ಲನೇ ಸಾಧ್ಯವಿದಯೆಂದೂ ಚರ್ಚೆಗಳು [illegible] ಶಾಲೆಗಳಲ್ಲಿ ಡಿಟ್ಟೆಲ್ಲ ನೋಟ್ಸು ಬರೆಯುವುದ [illegible] ಪ್ರೆಸನ್ನು ಪ್ರತಿ ಒಂದು ಉಪಾಧ್ಯಾಯನಿಯು ಪ್ರತಿ [illegible] ಯಾ ಒಳೇ ತಾರೀಖಿನೊಳಗೆ ಕಳುಹಿಸಬೇಕೆಂದು [illegible] ಇನ್ಸ್‌ಪೆಕ್ಟರ್‌ರವರ ಹುಕುಮಿನಿಂದ ಉಪಾಧ್ಯಾಯನಿ [illegible] ಶಕ್ತಿಯೂ ನೋಟ್ಸು ಮತ್ತು ಪ್ರೊಗ್ರೆಸ್ ಬರೆಯುವುದ [illegible] ವರಿಂದ ಉಪಾಧ್ಯಾಯನಿಯರನ್ನು ಈ ತರದ ಕಷ್ಟ [illegible] ಸರಿಯಲ್ಲವೆಂದು ಡಿಟ್ಟೆಲ್ಲ ಪ್ರೊಗ್ರೆಸ್ ಅನಾವಶ್ಯಕ [illegible].

[illegible] ಅಧ್ಯಕ್ಷರ ಭಾಷಣವಾಯಿತು. ಈ ಭಾಷಣದಲ್ಲಿ [illegible] ಸಂಘಗಳಿಂದ ಉಪಾಧ್ಯಾಯರೊಳಗೆ ಪರಸ್ಪರ ಪ್ರೀತಿ [illegible] ಕಲಿಸುವ ಕ್ರಮಗಳ ಅಭಿವೃದ್ಧಿಯನ್ನು ಹೊಂದು [illegible] ಮೇಲಾಧಿಕಾರಿಗಳಿಗೆ ಬರತಕ್ಕದೆಂದೂ, ಸರ್ಕಾರ [illegible] ಸಂಘಕ್ಕೆ ಸೇರಿದ ಎಲ್ಲಾ ಶಾಲೆಗಳಲ್ಲಿ ಅಭಿವೃದ್ಧಿ [illegible] ಇದರಿಂದ ದೇಶೋದ್ಧಾರವಾಗತಕ್ಕದೆಂದೂ ಬೋರ್ಡ್ [illegible] ಯರ ವರ್ಗಾವರ್ಗಿಗಳನ್ನು ಆದಷ್ಟು ಕಡಿಮೆ ಮಾಡಲು [illegible] ತಾತ್ಕಾಲಿಕ ಉಪಾಧ್ಯಾಯರ ಮೇಲಿನ ಪ್ರೀತಿಪೂರ್ವಕ [illegible] ದರು. ನಂತರ ಬಂದ ಸಭಿಕರಿಗೆ ಪುಷ್ಪ, ವೀಳ್ಯ, [illegible] ಸತ್ಕಾರಗಳಾಗಿ, ಶಾಖೆಫಲಾಹಾರವಾಗಿ, ಪ್ರೆಸಿಡೆಂಟರಿಗೂ [illegible], ಉಪಾಧ್ಯಾಯ ಸಂಘಗಳಿಗೂ ಧನ್ಯವಾದಗಳನ್ನು [illegible] ಹಾಡಿ ಸಭೆಯು ಮುಕ್ತಾಯವಾಯಿತು.

ಆರೋಗ್ಯದ ಹತ್ತು ನಿಯಮಗಳು.

೧. ದೇಹದ ಆರೋಗ್ಯವು ಮನುಷ್ಯನಿಗೆ ದೊಡ್ಡ ಆಶೀರ್ವಾದವಾಗಿರುವುದು. ಅದು ಕಾರಣ ಅಂತಹ ಆರೋಗ್ಯವನ್ನು ಕಾಪಾಡಲಿಕ್ಕೂ, ಅದರಿಂದ ಸುಖವನ್ನು ಹೆಚ್ಚಿಸಲಿಕ್ಕೂ, ಮನುಷ್ಯನು ಸದಾ ಪ್ರಯತ್ನಿಸಬೇಕು. ಆರೋಗ್ಯಕ್ಕೆ ಹಾನಿಯನ್ನುಂಟುಮಾಡುವಂತಹ ಅಭ್ಯಾಸಗಳನ್ನು ದೂರ ಮಾಡಬೇಕು. ಈ ಕುರಿತು ಚೆನ್ನಾಗಿ ಆಲೋಚಿಸಿ ವರ್ತಿಸಬೇಕು.

೨. ಆರೋಗ್ಯವನ್ನು ಕಾಪಾಡಲು ಮೊದಲನೆಯದಾಗಿ ಅಗತ್ಯವಾದುದೇ ಸ್ವಚ್ಛತೆ. ಪ್ರತಿಯೊಂದರಲ್ಲಿಯೂ ಸ್ವಚ್ಛತೆಯಿಲ್ಲದಿರೆ ರೋಗವನ್ನುಂಟುಮಾಡುವಂತಹ ಸಣ್ಣ ಅಣುಗಳು ನಮ್ಮ ಶರೀರವನ್ನು ಪ್ರವೇಶಿಸಲು ಅನುಕೂಲವಿರುವುದಿಲ್ಲ. ರೋಗದ ಅಣುಗಳು ಬರೀ ಕಣ್ಣಿಗೆ ಕಾಣಲಾರವು. ಅವು ಒಬ್ಬನಿಂದ ಇನ್ನೊಬ್ಬನ ಶರೀರದೊಳಕ್ಕೆ ಬಹುಬೇಗನೇ ಪ್ರವೇಶಿಸುವವು. ಶರೀರವನ್ನು ಸರಿಯಾಗಿ ತಿಕ್ಕಿ ತೊಳೆಯಬೇಕು. ಅಂಗಿ ಚಲ್ಲಣಗಳನ್ನು ಹಾಕಿ, ಅವುಗಳಿಂದ ಮುಚ್ಚಲ್ಪಟ್ಟ ಭಾಗಗಳನ್ನು ತೊಳೆಯದೆ ಕೈ ಮತ್ತು ಕಾಲಿನ ಪಾದಗಳನ್ನೂ ಮುಖವನ್ನೂ ತೊಳೆದಂತಾಯಿತೆನ್ನುವುದು ತಪ್ಪು. ಇಡೀ ಶರೀರವನ್ನು ದಿನಕ್ಕೊಮ್ಮೆಯೂ, ಕೈ, ಕಾಲು, ಮುಖವನ್ನು ಆಗಾಗಲೂ ತೊಳೆಯುತ್ತಿರಬೇಕು. ಉಗುರಿನ ಎಡೆಗಳನ್ನು ಸ್ವಚ್ಛವಾಗಿರಿಸಬೇಕು. ಮನೆಯು ಚೊಕ್ಕಟವಾಗಿರಬೇಕು. ಮನೆಯ ನೆಲವನ್ನು ಒದ್ದೆ ವಸ್ತ್ರದಿಂದ ದಿನಕ್ಕೊಮ್ಮೆಯಾದರೂ ಉಜ್ಜುತ್ತಿರಬೇಕು. ಮನೆಯೊಳಗೆ ಬೆಳಕೂ ವಾಯುವೂ ಧಾರಾಳವಾಗಿ ಪ್ರವೇಶಿಸಬೇಕು. ಮಲಗುವಾಗ ಕಿಟಕಿಗಳನ್ನು ಪೂರ್ಣ ತೆರೆದಿರಬೇಕು.

೩. ಶರೀರವನ್ನು ಯೋಗ್ಯವಾದ ಅಂಗಸಾಧನೆಯಿಂದ ಗಟ್ಟಿಮುಟ್ಟಾಗಿ ಮಾಡಿಕೊಳ್ಳಬೇಕು. ಪ್ರತಿ ದಿನ ಬೆಳಗ್ಗೆ ಮತ್ತು ಸಾಯಂಕಾಲ ಕೋಣೆಯೊಳಗೆ ವ್ಯಾಯಾಮವನ್ನು ಮಾಡಬೇಕು. ಆಟಗಳು, ಕಸರತ್, ಸ್ನಾನ, ಈಜಾಡುವಿಕೆ, ಇವುಗಳು ಶರೀರವನ್ನು ಗಟ್ಟಿಪಡಿಸಿ, ಶಕ್ತಿಯನ್ನು ತರುವವು.

೪. ಸಣ್ಣಂದಿನಿಂದಲೇ ಹಲ್ಲುಗಳ ಕುರಿತು ಜಾಗರೂಕರಾಗಿರಬೇಕು. ತಾಯಂದಿರು ತಮ್ಮ ಮಕ್ಕಳ [illegible] ಜಾಗ್ರತೆಯನ್ನು ನೋಡಿಕೊಳ್ಳುವದು ಅಗತ್ಯವು. ಬೆಳಿಗ್ಗೆ ಮತ್ತು ಸಾಯಂಕಾಲ ಹಲ್ಲುಗಳನ್ನು ನೀರಿನಿಂದ ತಿಕ್ಕಿ ತೊಳೆಯಬೇಕು. ಸಾಧ್ಯವಿದ್ದರೆ ಪ್ರತಿ ಊಟದ ತರುವಾಯ ಹಲ್ಲುಗಳನ್ನು ತಿಕ್ಕಿ ತೊಳೆಯುತ್ತಿರಬೇಕು. ವರುಷಕ್ಕೆ ಎರಡು ಸಲವಾದರೂ ಹಲ್ಲುಗಳನ್ನು ದಂತವೈದ್ಯನಿಗೆ ತೋರಿಸಿ, ಪರೀಕ್ಷೆ ಮಾಡಿಸಿ, ಅವುಗಳ ಗುಣಗಳನ್ನು ತಿಳಿದು ತಕ್ಕ ಚಿಕಿತ್ಸೆ ಮಾಡುತ್ತಿರಬೇಕು.

೫. ಕಾಯಿಪಲ್ಯಗಳನ್ನೂ, ಹಣ್ಣುಹಂಪಲುಗಳನ್ನೂ ತಿನ್ನುತ್ತಿರುವದು ಹಿತಕರವು. ಕಾಯಿಪಲ್ಯಗಳನ್ನು ಬೇಯಿಸಿದ ನೀರನ್ನು ಬಿಸಾಡದೆ ಅದನ್ನು ಆಹಾರವಾಗಿ ಉಪಯೋಗಿಸಬಹುದು. ಕೆಲವು ಹಣ್ಣುಗಳನ್ನು ಹಸಿಯಾಗಿ ತಿನ್ನಬಹುದು. ಮಾಂಸವನ್ನು ಭಕ್ಷಿಸುವದು ಅಷ್ಟು ಉತ್ತಮವೆನ್ನಲಾಗುವುದಿಲ್ಲ. ಸ್ವಲ್ಪ ಸ್ವಲ್ಪ ತಿಂದರೂ ಕೆಡುಕುಂಟಾಗುವುದಿಲ್ಲ. ಮಕ್ಕಳಿಗೆ ಮಾಂಸವನ್ನು ತಿನ್ನಲೇ ಬಾರದು. ಮಾಂಸವನ್ನೇ ಪ್ರತಿದಿನವೂ ತಿನ್ನುತ್ತಿರುವುದು ಕೆಡುಕು. ಬೆಣ್ಣೆಯನ್ನೂ, ಹಾಲು, ಮೊಸರನ್ನೂ ಉಪಯೋಗಿಸುವುದು ಅತ್ಯಂತ ಹಿತಕರ. ಹಾಲಿನ [illegible] ಆರೋಗ್ಯವನ್ನು ಕಾಪಾಡುವದು. ಕಾಫಿಯನ್ನು ಮಿತವಾಗಿ ಕುಡಿದರೆ ಒಳ್ಳೆಯದು. ಆದರೆ ಅತಿಯಾಗಿ ಕುಡಿದರೆ ಕೆಡುಕು. ಕಾಫಿಯ ಬದಲಾಗಿ, ಧಾನ್ಯಗಳನ್ನು ಹುರಿದು ಮಾಡಿದ ಪುಡಿಯ ಕಾಫಿಯನ್ನು ಕುಡಿಯುವದು ಲೇಸು.

೬. ಆಲ್ಕೊಹಾಲ್ ಮಿಶ್ರಿತವಾದ ದ್ರಾವಕವನ್ನು ಕುಡಿಯದಿರಬೇಕು. ಆಲ್ಕೊಹಾಲ ಮಿಶ್ರಿತವಾದ ಅಮಲು ಪದಾರ್ಥಗಳನ್ನು ಸೇವಿಸುವುದರಿಂದ, ಆರೋಗ್ಯವು ಕೆಡುವುದು ಮಾತ್ರವಲ್ಲದೆ ಮಾನಸಿಕ ಬಲವೂ ಕುಂದುವುದು. ಬುದ್ಧಿಸ್ವಾಸ್ಥ್ಯತೆಯು ತಪ್ಪಿಹೋಗಿ ಅಲ್ಲದಸಲ್ಲದ ಅನಾಹುತಗಳನ್ನುಂಟುಮಾಡಿಸುವುದು. ಪಾಪಕೃತ್ಯಗಳನ್ನೂ ಮಾಡಿಸುವುದು. ಅಮಲು ಪದಾರ್ಥದ ಸೇವನೆಯಿಂದ ದೇಹದೊಳಗಿನ ಇಂದ್ರಿಯಗಳು ಶಿಥಿಲವಾಗಿ ಮುಂದಿನ ಜನಾಂಗವು ಬಲಹೀನವಾಗುವುದು.

೭. ಮೇಹ ವ್ಯಾಧಿಗಳ ಕುರಿತು ಬಹು ಜಾಗರೂಕರಾಗಿರಬೇಕು. ಜಾಗ್ರತೆಯಿಂದ ವರ್ತಿಸುವ ಮನುಷ್ಯನು ಇಂತಹ ರೋಗಗಳನ್ನು ತಪ್ಪಿಸಬಹುದು. ಏನಾದರೂ ಸಂಶಯ ತೋರಿದರೆ ಒಡನೆ ವೈದ್ಯನಲ್ಲಿಗೆ ಹೋಗಿ ತಕ್ಕ ಚಿಕಿತ್ಸೆಯನ್ನು ಮಾಡಿಸಬೇಕು. ಇವು ಅಂಟುರೋಗವಾದ ಕಾರಣ ಆ ರೋಗಕ್ಕೆ ತುತ್ತಾದವನು ಬಹು ಜಾಗ್ರತೆಯಿಂದಿದ್ದು ಇತರರಿಗೆ ಇದು ಹರಡದಂತೆ ಮಾಡಬೇಕು.

೮. ಕ್ಷಯ ರೋಗವು ಅಂಟುರೋಗವೆಂಬುದನ್ನು ಮರೆಯದಿರಬೇಕು. ಕ್ಷಯ ರೋಗಿಯ ಕೆಮ್ಮುವಾಗ ರೋಗದ ಅಣುಗಳು ಹೊರಗೆ ಬಂದು ಪ್ರಸರಿಸುವವು. ಸವಿಾಪದಲ್ಲಿ ಯಾರಾದರೂ ಇದ್ದರೆ ಕ್ಷಯ ರೋಗಿಯು ಕೆಮ್ಮುವುದು ಒಳಿತಲ್ಲ. [illegible], ಇನ್ನು ನೆಲದ ಮೇಲೆ ಉಗಿಯಬಾರದು. ಯಾವದಾದರೂ ಒಂದು ಪಾತ್ರೆಯಲ್ಲಿ ಉಗಿದು, ಉಗಿದ ಪದಾರ್ಥವನ್ನು ಸುಟ್ಟು ಹಾಕಬೇಕು. ಇತ್ಯಾದಿ ಮರೆ [illegible] ಪದಾರ್ಥಗಳು ಇವುಗಳ ಕ್ಷಯ ರೋಗಕ್ಕೆ ಆಶ್ರಯವನ್ನು ಕೊಡುವವು. ಚಿಕ್ಕಮಕ್ಕಳನ್ನು ಕ್ಷಯ ರೋಗಿ ಇದ್ದಲ್ಲಿಗೆ ಹೋಗಗೊಡಬಾರದು. ಹಲವು ಮನುಷ್ಯರು ತಾವು ರೋಗವನ್ನು ವಿಸ್ತರಿಸುವರೆಂಬುದನ್ನು ತಿಳಿಯದೆ ಕೆಮ್ಮುತ್ತ ಇತರರಿಗೆ ಕ್ಷಯ ರೋಗವನ್ನು ಉಂಟುಮಾಡುವರು. ಈ ಕುರಿತು ಚೆನ್ನಾಗಿ ಜಾಗರೂಕರಾಗಿರಬೇಕು.

೯. ಮುಂದಿನ ಜನಾಂಗವನ್ನು ಕಾಪಾಡುವದು ಮುಖ್ಯ ಕೆಲಸವಾಗಿದೆ. ಜಾಗ್ರತೆಯಿಂದ ಆಹಾರ ಕೊಟ್ಟು ಮಕ್ಕಳನ್ನು ಸಾಕಿಸುವದರಿಂದ ಶಿಶುಮರಣಗಳನ್ನು ಕಡಿಮೆ ಮಾಡಬಹುದು. ತಾಯಂದಿರು ತಮ್ಮ ಮಕ್ಕಳನ್ನು ತಾವೇ ಪೋಷಿಸಬೇಕು. ಮಗುವು ಅಸೌಖ್ಯವಾಗಿದ್ದರೆ ಒಡನೆ ವೈದ್ಯನನ್ನು ಕರೆಯಿಸಬೇಕು. ಚಿಕ್ಕಂದಿನಲ್ಲಿ ಆರೋಗ್ಯದ ಕುರಿತಾಗಿ ಜಾಗರೂಕರಾಗಿದ್ದರೆ ಮಾತ್ರವೇ ಮುಂದಿನ ಜೀವನವು ಸುಖಕರವಾಗುವದು.

೧೦. ದಿನನಿತ್ಯದ ಕೆಲಸವನ್ನು ಆರೋಗ್ಯಸೂತ್ರಗಳಿಗನುಸಾರವಾಗಿ ಮಾಡಬೇಕು. ಎಂಟು ಗಂಟೆಯು ಕೆಲಸ, ಎಂಟು ಗಂಟೆಯು ನಿದ್ರೆ, (ಮಕ್ಕಳಿಗೆ ಹೆಚ್ಚಿಗೆ ನಿದ್ರೆಯು ಅವಶ್ಯಕ) ಎಂಟು ಗಂಟೆಯು ವಿಶ್ರಾಂತಿ ಇದರಿಂದ ಆರೋಗ್ಯವು ಅಭಿವೃದ್ಧಿಯಾಗುವದು. ರಾತ್ರಿ ಕೆಲಸ ಮಾಡಬಾರದು. ಎಂತಹ ಕೆಲಸವಿದ್ದರೂ ರಾತ್ರಿಗೆ ಇಡದೆ ನಿದ್ರಿಸಲೇ ಬೇಕು.

ಉಪಾಧ್ಯಾಯರೂ ರಜಾಕಾಲವೂ.

ಜೀವನವು ಸಂತೋಷಮಯವಾಗಬೇಕಾದರೆ ಕೆಲಸವೂ ವಿರಾಮವೂ ಅತ್ಯಗತ್ಯವಾಗಿವೆ. ಕೆಲಸವನ್ನೇ ಮಾಡುತ್ತ ವಿರಾಮವನ್ನು ಹೊಂದದೆ ಇರುವುದು ಬಹು ಅಪಾಯಕರವು. ವಿರಾಮವನ್ನು ಪಡೆಯದೆ ಮನುಷ್ಯನು ಸಂಪೂರ್ಣ ಶಕ್ತಿಯನ್ನು ಪಡೆಯಲಾರನು. ನಮ್ಮ ನಿತ್ಯದ ಕೆಲಸವಾದೊಡನೆ ವಿರಾಮವು ಅಗತ್ಯವೆಂದು ತಾನಾಗಿಯೇ ತಿಳಿಯುವುದು. ವಿರಾಮವನ್ನು ಹೊಂದುವುದರಿಂದ ನಮ್ಮ ವೇಳೆಯು ನಿರರ್ಥಕವಾಗಿ ಕಳೆದುಹೋಗುವುದೆಂದು ತೋರಬಹುದಾದರೂ ಅದರಿಂದ ಬಹಳ ಲಾಭವಿದೆ. [illegible] ನಮ್ಮ ಮನಸ್ಸನ್ನು ಪುನಃ ಸರಿಪಡಿಸಲು ಕೆಲಸಮಾಡಿ ಬಳಲಿದ ಅವಯವಗಳನ್ನೂ, ದೇಹದೊಳಗಿನ ಅಂಗಗಳನ್ನೂ, ಸರಿಯಾದ ಸ್ಥಿತಿಗೆ ತರಲು ವಿರಾಮವು ಅತ್ಯಗತ್ಯ. ವಿರಾಮ ಕಾಲದಲ್ಲಿ ನಮ್ಮ ಮನಸ್ಸನ್ನು ಆಹ್ಲಾದಗೊಳಿಸುವ ಸಲುವಾಗಿಯೇ ಹಿಂದಣ ಲೇಖಕರೂ, ಕವಿಗಳೂ, ಕಥೆಗಳನ್ನೋ, ಕಾವ್ಯಗಳನ್ನೋ, ಬರೆದುದರಿಂದ ನಮಗವರ ಮಹಾತ್ಮೆಯಂತೆ ತೋರುವದು. ವಿರಾಮದಲ್ಲಿದ್ದು ಆಲೋಚಿಸುವದರಿಂದಲೇ ದೈವಿಕ ಜ್ಞಾನವುಂಟಾಗಿ ಭಗವಂತನ ಕಡೆಗೆ ಮನಸ್ಸು ಹರಿದು ಆತನ ಅನಂತ ಆಕಾರಗಳು ಮನಸ್ಸಿನಲ್ಲಿ ಮೊಳೆದೋರಿ ಕೊನೆಗೆ ಮನಸ್ಸು ಆತನಲ್ಲಿಯೇ ತಲ್ಲೀನವಾಗಿ ಹೋಗುವದು. ಇದರಿಂದ ನಮ್ಮ ಬುದ್ಧಿಯು ಶಾಂತಸ್ವಭಾವವನ್ನು ಹೊಂದಿ ದುರ್ವರ್ತನೆಗಳ ಕಡೆಗೆ ಗಮಿಸದು.

ಎಲ್ಲಾ ಕೆಲಸಗಾರರಿಗಿಂತಲೂ ಉಪಾಧ್ಯಾಯರಿಗೆ ಹೆಚ್ಚಿನ ವಿರಾಮಕಾಲದ ಅಗತ್ಯವಿದೆ. ಉಪಾಧ್ಯಾಯ ವೃತ್ತಿಯಿಂದ ಮೆದುಳಿಗೂ, ಶ್ವಾಸಕೋಶಗಳಿಗೂ ಮಿತಿಮೀರಿದ ದಣುವುಂಟಾಗುವುದು. ಅವುಗಳಿಗೆ ದಣುವನ್ನೇ ಉಂಟುಮಾಡುತ್ತಾ ಇದ್ದರೆ, ಅವುಗಳು ಶಕ್ತಿ ಕುಂದಿ ಕೆಡುವ ಸಂಭವವಿದೆ. ಆದಕಾರಣ ವಿರಾಮವನ್ನು ಅನುಭವಿಸಿ, ಅವುಗಳಿಗೆ ಪುನಃ ಶಕ್ತಿ ತುಂಬಬೇಕು. ಐದಾರು ದಿನಗಳ ವರೆಗೆ ಅವಿಶ್ರಾಂತವಾಗಿ ಕೆಲಸಮಾಡುವ ಉಪಾಧ್ಯಾಯನಿಗೆ ಒಂದೆರಡು ದಿನಗಳ ರಜಾಕಾಲವು ಬಹು ಅಲ್ಪವೆಂದು ಕಂಡುಬರುವುದು ಸಹಜವಾಗಿದೆ. ಬೇಸಿಗೆ ಕಾಲದ ಎರಡು ತಿಂಗಳುಗಳ ರಜಾಕಾಲವು ಎಂದಿಗೆ ಸಮಾಪಿಸುವುದೋ, ಎಂದು ಉಪಾಧ್ಯಾಯರು ಹಾತೊರೆಯುತ್ತಿರುವದು ಸ್ವಾಭಾವಿಕವಾಗಿದೆ. ಅವರ ವೃತ್ತಿಯಿಂದ ಅವರಿಗೆ ವಿಶೇಷ ಬಳಲಿಕೆಯುಂಟಾಗುವುದರಿಂದ ರಜಾಕಾಲವು ಅವರಿಗೆ ಸ್ವರ್ಗ ಸುಖವನ್ನೀಯುವದು. ಎರಡು ತಿಂಗಳುಗಳ ವರೆಗೆ ವಿರಾಮವನ್ನು ಹೊಂದಿದರೂ ಮತ್ತು ಹಲವು ಉಪಾಧ್ಯಾಯರಿಗೆ ತೃಪ್ತಿಯಾಗುವುದಿಲ್ಲ.

ಉಪಾಧ್ಯಾಯನಿಗೆ ಹೆಚ್ಚಿಗೆ ವಿರಾಮವು ಅಗತ್ಯವಿದೆಯೆಂದಿರುತ್ತದೆ. ಇನ್ನು ವೈದ್ಯನು ತನಗೆ ವಿರಾಮವೇ ಇಲ್ಲವೆಂದೂ, ತನ್ನದೆಂದು ಹೇಳಲನುಕೂಲವಾದ ಒಂದೇ ಒಂದು ನಿಮಿಷವಾದರೂ ಇಲ್ಲವೆಂದು ಗುಣುಗುಟ್ಟಬಹುದು. ಅಂತೆಯೇ ವ್ಯಾಪಾರಿಯೂ, ನಟನೂ ಕವಿಯೂ, ಶೋಧಕನೂ ತಮಗೆ ಹೆಚ್ಚು ವಿರಾಮವು ಅವಶ್ಯಕವೆನ್ನಬಹುದು. ನಾವು ಅಲ್ಲವೆನ್ನುವುದಿಲ್ಲ. ಆದರೆ ಇವರೆಲ್ಲರಿಗಿಂತಲೂ ಉಪಾಧ್ಯಾಯನ ವಿರಾಮದ ಆವಶ್ಯಕತೆಯು ಹೆಚ್ಚು.

ರಜಾಕಾಲದಲ್ಲಿ ವಿರಾಮವನ್ನು ಅನುಭವಿಸುವದು ಪ್ರತಿಯೊಬ್ಬ ಉಪಾಧ್ಯಾಯನ ಕರ್ತವ್ಯವಾಗಿದೆ. ರಜಾಕಾಲದಲ್ಲಿಯೂ ಕೆಲಸ ಮಾಡಿ ಮತ್ತೂ [illegible] ಉಪಾಧ್ಯಾಯನ ಅವನತಿಯು ಉಂಟಾಗುವದು ಮಾತ್ರವಲ್ಲ ಆತನಿಂದ ಕಲಿಸಲ್ಪಡುವ ಮಕ್ಕಳೂ ಅಭಿವೃದ್ಧಿಯನ್ನು ಹೊಂದಲಾರರು. ಉಪಾಧ್ಯಾಯನು ಯಾವಾಗಲೂ ಚಟುವಟಿಕೆಯುಳ್ಳವನಾಗಬೇಕು. ಹಸನ್ಮುಖಿಯಾಗಬೇಕು. ಉತ್ಸಾಹ ಶಾಲಿಯಾಗಿರಬೇಕು. ಇಂತಹ ಉಪಾಧ್ಯಾಯನ ಸಂಸರ್ಗದಲ್ಲಿರುವುದರಿಂದಲೇ ಮಕ್ಕಳೂ ಚಟುವಟಿಕೆಯನ್ನು ಹೊಂದಿ ಕಲಿಯುವ ಸಲುವಾಗಿ ಅವರಲ್ಲಿ ಉತ್ಸಾಹವು ತುಂಬಿ ತುಳುಕುವುದು. ಅವರು ಚೆನ್ನಾಗಿ ಕಲಿತು ಬುದ್ಧಿಶಾಲಿಗಳಾಗುವರು. ಆದರೆ ಉಪಾಧ್ಯಾಯನೇ ಮಂದವರ್ತನೆಯವನೂ ಸೋಮಾರಿಯೂ ಆಗಿದ್ದರೆ ಮಕ್ಕಳು ಅವನಂತೆಯೇ ಆಗುವರು. [illegible] ಶಿಷ್ಯ ತಂದೆಯಂತೆ ಮಗ ಎಂಬ ನಾಣ್ಣುಡಿಯು ಎಂದಿಗೂ ಸುಳ್ಳಾಗಲಾರದು. ಉಪಾಧ್ಯಾಯನು ಚಟುವಟಿಕೆಯುಳ್ಳವನಾಗಿರಬೇಕಾದರೆ ಕೆಲಸದ ತರುವಾಯ ಆತನು ಸಂಪೂರ್ಣ ವಿಶ್ರಾಂತಿಯನ್ನು ಅನುಭವಿಸಬೇಕು. ಕೆಲಸ ಮಾಡುತ್ತಾ ಇದ್ದರೆ, ಮನಸ್ಸು ದಣಿದು ಉತ್ಸಾಹವು ಕುಗ್ಗುವದು. ಎರಡನೆ ವಿಶ್ರಾಂತಿಯನ್ನನುಭವಿಸುವುದರಿಂದ ಉತ್ಸಾಹವು ಪುನಃ ತುಂಬುವುದು. ಇದಕ್ಕಾಗಿಯೇ ಉಪಾಧ್ಯಾಯನಿಗೆ ವಿಶ್ರಾಂತಿಯು ಅತ್ಯಗತ್ಯವೆನ್ನುವದಕ್ಕೆ ಕಾರಣವು.

ಮಳೆ ಬಂದೊಡನೆ ಸಂಗ್ರಹಿತವಾಗಿ ಅಲ್ಲಲ್ಲಿ ಹೊಂಡಗಳಲ್ಲಿ ನಿಲ್ಲುವ ನೀರು ಸೂರ್ಯನ ಬಿಸಿಲ ಬೇಗೆಯಿಂದ ಹೇಗೆ ನಿಲ್ಲದೆ ಮಾಯವಾಗುವುದೋ ಹಾಗೆಯೇ ಶಾಲೆ ಇದ್ದ ದಿನ ಕಲಿಸಿ ಕಲಿಸಿ ಹೋದ [illegible] ಉತ್ಸಾಹವು ರಜಾ ದಿನಗಳಲ್ಲಿ ಪುನಃ ಒಂದುಗೂಡುವದು. ಹಲವರು ರಜಾ ದಿನಗಳಲ್ಲಿ ವಿಶ್ರಾಂತಿ ಹೊಂದದೆ, ತಮ್ಮ ಶರೀರಕ್ಕೆ [illegible] ವಿಶ್ರಾಂತಿಯ ಆವಶ್ಯಕತೆಯು ಅವರಿಗೆ ತಿಳಿದಿಲ್ಲ ಎಂದೆನಿಸುವದು. ದಿನಾಲು ರಜೆಯಂದು ವಿಶ್ರಾಂತಿಯನ್ನು ಹೊಂದದಿದ್ದರೂ ವಿಶ್ರಾಂತಿಯನ್ನು ಹೊಂದಬೇಕಾದ [illegible] ಪಡೆಯುವ [illegible] ಇರಬೇಕು.

ಆದುದರಿಂದ ಉಪಾಧ್ಯಾಯರು ರಜಾಕಾಲವನ್ನು ಸುಮ್ಮನೆ ಕಳೆದು ಬಿಡದೆ ಸಂಪೂರ್ಣ ವಿಶ್ರಾಂತಿಯನ್ನು ಹೊಂದಿ ಉತ್ಸಾಹಿಗಳಾಗತಕ್ಕದ್ದು.

ಕಲಕತ್ತಾ ಎಗ್ಝಿಬಿಷನು.

1928

ಹಿಂದೀ ರಾಷ್ಟ್ರೀಯ ಮಹಾಸಭೆಯ 43ನೇ ಅಧಿವೇಶನದ ಸಮಯದ ವ್ಯವಸ್ಥೆ ಪಡಿಸಲ್ಪಟ್ಟುದು.

ಅಪೂರ್ವ ಸುಸಂದರ್ಭ.

ಸ್ವದೇಶಕ್ಕೆ ಸಂಬಂಧಿಸಿದ ಮಹಾಉದ್ಯಮಿಗಳು ಮಾಡುವ [illegible], ಸಾಮಾನುಗಳಿಗೂ, ವ್ಯಾಪಾರಿಗಳಿಗೂ ಪ್ರದರ್ಶಕರಿಗೂ ಚಿತ್ರಕಾರರಿಗೂ, ಕಲಾಕೋವಿದರಿಗೂ, ಅನುಕೂಲವಾಗುವಂತೆ, ಕಲಕತ್ತಾ ಎಗ್ಝಿಬಿಷನು 1928ನೇ ಡಿಸೆಂಬರ ತಿಂಗಳ ಮಧ್ಯದಿಂದ 1929ನೇ ಇಸವಿ ಜನವರಿ ತಿಂಗಳ ಮಧ್ಯದ ವರೆಗೆ ತೆರೆಯಲ್ಪಡುವದು.

ಎಗ್ಝಿಬಿಷನ ಕಟ್ಟಡಗಳಲ್ಲಿ ಪ್ರತ್ಯೇಕವಾಗಿ [illegible] ಗಳನ್ನು ಕಟ್ಟಿಸುವ ಸಲುವಾಗಿಯೂ [illegible] ಎಗ್ಝಿಬಿಷನ ಸಾರ್ಟ್‌ಸರ್ಕಸ್ ಎಂಬ [illegible] ನಡೆಯುವದು.

ಪೂರ್ಣ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

N. R. Sarkar
Secretary,
The Calcutta Exhibition
3A Hogg Street, CALCUTTA.

The Kanara Watch House Udipi, S. K.

ಗ್ಯಾರಂಟಿಯುಳ್ಳ ವಾಚುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲಾಕುಗಳೂ, ಟೈಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೊನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ ನಾವು ಅವುಗಳನ್ನು ಕಡಿಮೆ. ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು ರಿಪೇರಿ ಮಾಡುವಾಗ ನಂಬಿಗೆಯು ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ. — ನಮ್ಮ ವಾಚು ರಿಪೇರಿ ಮಾಡಿದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸಚ್ಛವಾಗಿಸುವುದರಿಂದ ಸರಿಯಾದ ಸಮಯವು ದೊರಕುವುದು

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲೆ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಞಂಗಾಡ (S. I. R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯ... 'ವೈದ್ಯರತ್ನ'ಯೆಂಬ ಬಿರುದು ಪಡೆದ ಪ್ರಸಿದ್ಧ ... ರತ್ನ ಪರಮೇಶ್ವರ ಮುಸ್ಸಾದ' ಅವರ ಕೈಕೆಳಗೆ ... ಅನುಭವಶಾಲಿಯಾದ ಕೆಲ್ಲು ಶಾಸ್ತ್ರ ವೈದ್ಯರಿಂದ ... ಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ... ಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ ... ಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ... ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ... ಇರುವವು ಅನುಕೂಲಸ್ಥರಾದ ದೂರ ದೇಶದ ರೋಗಿಗಳು ... ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ... ರದ ಕ್ರಮ, ವೃತ್ತಿ ಹಿಂದೆ ಮೊದಲಾದ ಆಮಲು ಪದಾರ್ಥಗಳ ... ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ... ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಶಾಕ್ಯವರೋ ಎಂಬ ... ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು ... ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ... ಮದ್ದು ಬಂದು ಸಂವಹಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ... ಪತ್ರವ್ಯವಹಾರ ನಡಿಸಿದಲ್ಲಿ ಶಕ್ಯ ನಿಗಾ ಕೊಡೋಣಾಗುವದಲ್ಲದೆ ... ಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ... ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ... ಎಲ್ಲಾ ಶೋಧನೆಗಳನ್ನು ತಿಳಿಸುವರೆಯೂ ಇವರ ಈ ವೈದ್ಯಶಾಲೆಯು ... ಗಳೂ ಸಿದ್ಧವಾಗಿರುವದು ಅಗತ್ಯಪಡುವವರಿಗೆ ಮದ್ದುಗಳನ್ನು ... ಕೊಡುವರೆ ಕೂಡ ಏರ್ಪಾಡುಗಳ ಇವೆ ಹೆಚ್ಚಿನ ವಿವರಕ್ಕೆ ... ಮುಖಾಂತರ ವ್ಯವಹಾರ ನಡಿಸಬಹುದು

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

ಕರ್ನಾಟಕ ಭಾಷೆಯಲ್ಲಿ ಕನ್ನಡಿಗರ ಬಗ್ಗೆ

THE MOTORIST.

ಮೋಟರಿಸ್ಟ.



Edited by —V. S. KUDVA Esqr, Worksmanager C P C Co Ltd Mangalore

Manager—V. K. Kamath Esqr, Sharada Press Mangalore

ಸಂಪಾದಕರು — ಶ್ರೀ ವಿ ಎಸ್ ಕುಡುವಾ, ವರ್ಕ್ಸ್‌ಮೆನೇಜರ ಸಿ ಪಿ ಸಿ ಕಂಪೆನಿ ಲಿಮಿಟೆಡ್ ಮಂಗಳೂರು

ಮೆನೇಜರ್ — ಶ್ರೀ ವಿ ಕೆ ಕಾಮತ್, ಶಾರದಾ ಛಾಪಖಾನೆ ಮಂಗಳೂರು

ನೂತನ ಪತ್ರಿಕೆ. ಎರಡು ತಿಂಗಳಿಗೊಂದು ಬಾರಿ ಹೊರಡುವದು.

ಪ್ರಥಮ ಸಂಚಿಕೆ—ಜನವರಿಯಲ್ಲಿ

ಸರಿಯಾಗಿ ವ್ಯವಸ್ಥೆಗೊಳಿಸಲ್ಪಟ್ಟ ಮೇಲೆ ತಿಂಗಳಿಗೊಂದುಬಾರಿ ಹೊರಡುವುದು

ಉದ್ದೇಶ — 1 ಕರ್ನಾಟಕ ಭಾಷೆಯಲ್ಲಿಯೇ ಮೋಟರು ಹಾಂಕುವವರ ಯಾಂತ್ರಿಕ ಪರಿಜ್ಞಾನವು ಮೋಟಾರಿನ ... ಕಾಯುವದನ್ನು
2 ಮೋಟರ ಗಾಡಿಗಳಲ್ಲಿ ಉಂಟಾಗುವ ಹೊಸ ಧೋರಣೆಗಳನ್ನು ಕರ್ನಾಟಕೀಯರಿಗೆ ತಿಳಿವಳಿಕೆಗೆ ಕೂಡಲೇ ಕೊಡುವು
3 ಮೋಟಾರ ಗಾಡಿಗಳ ದುರುಸ್ತಿಗಳ ಬಗ್ಗೆ ತಕ್ಕ ಮಾಹಿತಿಯನ್ನು ಕೊಡುವುದು
4 ಮೋಟಾರ ಗಾಡಿಗಳನ್ನೋಡಿಸುವ ಕಲೆಯನ್ನು ಅಭಿವೃದ್ಧಿಪಡಿಸುವುದು
5 ಮೋಟಾರ ಬಸ್ಸುಗಳ ವ ಟೆಕ್ಸಿಗಳ ಸರ್ವಿಸಗಳ ವ್ಯವಸ್ಥೆ ಬಗ್ಗೆ ಉಪಯುಕ್ತ ಸೂಚನೆಗಳನ್ನು ಕೊಡುವುದು
6 ಮೋಟಾರ ಕಾನೂನಿನ ವಿಷಯ ಉಪಯುಕ್ತ ವಾದವನ್ನು ನಡಿಸುವು
7 ಮೆಜಿಸ್ಟ್ರೇಟ ಕೋರ್ಟುಗಳಲ್ಲಿ ಆಗಿಂದಾಗ್ಯೆ ಬ್ಯಾರಣೆ ಮೇಲೆ ಕೊಡೋಣಾಗುವ ತೀರ್ಮಾನಗಳ ನ್ಯಾಯನಿರ್ಣಯಗಳನ್ನು ಪ್ರಕಟಿಸುವುದ
8 ಮೋಟಾರ ವೃತ್ತಿಯಲ್ಲಿ ನಿರತರಾದವರೆಲ್ಲರಿಗೂ ಹಿತಕರ ವಿಷಯಗಳನ್ನು ಪ್ರಸ್ತಾಪಿಸುವು

ಚಂದಾಹಣ — ವರ್ಷಕ್ಕೆ ರೂಪಾಯಿ ಮೂರು   ಬಿಡಿಸಂಚಿಕೆಗೆ ಆಣೆ ಹದಿನೆರಡು.

ಪ್ರತಿ ಸಂಚಿಕೆಯಲ್ಲಿಯೂ ಯಾಂತ್ರಿಕ ಪರಿಜ್ಞಾನವನ್ನುಂಟುಮಾಡುವ ಚಿತ್ರಗಳು ತಪ್ಪದೆ ಬರುವವು ಚಂದಾಹಣದ ಅಧಿಕಾಂಶವು ಚಿತ್ರಗಳನ್ನೊದಗಿಸಲು ವಿನಿಯೋಗಿಸಲ್ಪಡುವುದು ಸ್ವಂತ ಮೋಟಾರನ್ನು ಇಟ್ಟುಕೊಂಡವರು ಡ್ರೈವರುಗಳು ಬಸ್ಸ ಮಾಲೀಕರು, ಮೋಟರ ಮೆಕೆನಿಕ್ ಮತ್ತು ಫಿಟ್ಟರುಗಳು ಇವರಿಗೆ ಬಹಳ ಉಪಕಾರಿಯಾದದ್ದು.

ಪ್ರಥಮ ಸಂಚಿಕೆಯಿಂದ "ಮೋಟರ ಕೈಪಿಡಿ" (Motor Manual) ಎಂಬ ಚಿತ್ರಸಹಿತವಾದ ಪುಸ್ತಕವು ಪ್ರತ್ಯೇಕ ಪುಟ ಸಂಖ್ಯೆಯಿಂದ ಕ್ರಮವಾಗಿ ಪ್ರಕಟಿಸಲ್ಪಡುವುದು.

ಈ ಪತ್ರಿಕೆಯ ವಿಷಯ ಪತ್ರವ್ಯವಹಾರವನ್ನು ನಡಿಸಲಿಚ್ಛಿಸುವವರು ಮತ್ತು ಚಂದಾದಾರರಾಗಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆದು ತಿಳಿದುಕೊಳ್ಳಬಹುದು.

THE MANAGER,
THE MOTORIST,
Car Street, Mangalore

ಮೋಟರಿಸ್ಟ ಪತ್ರಿಕೆಯ ವ್ಯವಸ್ಥಾಪಕರು,
ರಥಬೀದಿ,
ಮಂಗಳೂರು.

Edited Printed & Published by V. S. Kamath at the M. T. A. Sharada Press, Mangalore.

[illegible] — ವರ್ಷಕ್ಕೊಂದಕ್ಕೆ ರೂಪಾಯಿ 2-0-0 Registered No. M. 489 ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಕ್ಷೇತ್ರೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾನ್ವಿರಮಂತಿ ಧೀರಾ ॥ ೧ ॥
ದೊರೆಯಲು ಅನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಳಕವರಂಜಿದರೆ! ಸುಧೆಯನು । ಮರೆತು ಕ್ಷುದ್ರತ ತೆರದಿ ತುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೫ನೇ ಶುಕ್ರವಾರ ಅಕ್ಟೋಬರ ೧೯೨೮. (5-10-28.) ಸಂಚಿಕೆ ೪೦

THE CANARA BANKING CORPORATION, UDIPI, LIMITED.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Statement of Affairs of the Canara Banking Corporation Udipi, Limited as at 31st August 1928

	CAPITAL AND LIABILITIES.			PROPERTY AND ASSETS	
1	Paid up Capital	Rs. 1,99,650-0-0	1	Premises Building Furniture &c.	Rs. 9,491-2-0
2	Reserve Fund and other funds	" 96,600-0-0	2	Investments on G. P. Notes	" 3,34,218-5-0
3	Deposits	" 17,53,749-4-11	3	Investments on Approved Securities	" 17,2[illegible],132-2-9
4	Overdraft with Bankers	" 14,713-4-8	4	Bills for collection as per Contra	" 14,558-9-0
5	Sundry Persons' A/C as per Contra	" 14,558-9-0	5	Sundries including P & L items	" 7[illegible],905-1-9
6	Sundries including P & L items	" 1,21,607-8-3	6	Cash in hand & with Bankers.	" 39,573-6-4.
	Total	22,00,878-10-10		Total	22,00,878-10-10.

Office of the Corporation,
UDIPI, 11-9-'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ
— ಮುಲಾಮು, —

ತಲೆನೋವಿನಿಂದ ತತ್ತರಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—[illegible]

ಗಜಕರ್ಣದ ಮುಲಾಮು — ಎಲ್ಲಾ [illegible] ಗಜಕರ್ಣ [illegible] ಕಜ್ಜಿಗಳು, ನಂಜಿಗೆಯು ಮತ್ತು [illegible] ಔಷಧಿಯಾಗಿದೆ. [illegible] ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ — [illegible] ಮತ್ತು [illegible] ದಂತಮಂಜನವನ್ನು ಉಪಯೋಗಿಸುವುದರಿಂದ, [illegible] ಬಿಳಿಯದಾಗಿಯೂ ಗಟ್ಟಿಯಾಗಿಯೂ ಬಲಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜಟೌನ್, ಮದ್ರಾಸು. 249 ಫ್ರೇಯರ್ ರೋಡ್ ಮುಂಬಯಿ,
ಮಂಗಳೂರಲ್ಲಿ—ಊಲನ್ ಮಾರ್ಟ್, ಹಂಪನಕಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

[illegible]ರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.
ಏಜಂಟರು.—ದಿ. ಊಲನ್ ಮಾರ್ಟ್, ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas
Postage Extra.
For copies apply to—
The M. T. A. Sharada Press,
Car-street, MANGALORE.

ADVERTISE IN OUR WEEKLY
To Reach the Hearths & Homes of India's Masses
For Particulars Apply to:
The Manager,
SWADESHABHIMANI,
MANGALORE.

ಪತ್ರವ್ಯವಹಾರ

[illegible]

ಎಲ್ಲಾ ತರದ ಭೇದಬುದ್ಧಿಯನ್ನು ಬಿಟ್ಟು ಬಿಡಿರಿ.

ಮಾನ್ಯ ಸಂಪಾದಕರೇ!

ಉಡುಪಿ ತಾಲೂಕಿನ ಬೋರ್ಡ್ ಎಲಿಮೆಂಟರಿ ಶಾಲೆ ಉಪಾಧ್ಯಾಯರು, ತಮ್ಮ ವೈಜ್ಞಾನಿಕ ಮತ್ತು ಸಾಂಪತ್ತಿಕ ಉನ್ನತಿಗೋಸ್ಕರ ಬೋರ್ಡ್ ಆಡಳಿತೆಗೊಳಪಟ್ಟ ಉಪಾಧ್ಯಾಯ ಉಪಾಧ್ಯಾಯಿನಿಯರ ಸಂಘವನ್ನು ಕಟ್ಟಿಕೊಂಡು ತನ್ಮೂಲಕ ಎಲ್ಲರೂ ಸಮುದಾಯಿಕವಾಗಿಯೇ ಅದಕ್ಕೆ ಪ್ರಯತ್ನಪಡಬೇಕೆಂಬ ಒಂದು ನಿರ್ಣಯ; ಇದಕ್ಕಾಗಿ ತಾಲೂಕು ಬೋರ್ಡ್ ಉಪಾಧ್ಯಾಯರು ಸಂಘ ಕೂಡುವ ದಿನ, ಸಭಾದಿನದ ಕಾರ್ಯಕ್ರಮ ಮುಂತಾದುವನ್ನು ನಿರ್ಣಯಮಾಡಿ, ಆ ಸಂಸ್ಥೆಯ ಉಪಾಧ್ಯಾಯ ಉಪಾಧ್ಯಾಯಿನಿಗೆ ಆಮಂತ್ರಣ ಕೊಡುವುದಕ್ಕೋಸ್ಕರ ಹಂಗಾರಕಟ್ಟೆ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯರು ಆಗಿರುವ ರಾ। ಶೀತಗಿರಿ ನಾವಡರು (Convener) ಕನ್ವೀನರಾಗಿರಬೇಕೆಂದು ಮತ್ತೊಂದು ನಿರ್ಣಯ. ಹೀಗೆ ಎರಡು ನಿರ್ಣಯಗಳು ತಾ. ೪-೮-೧೯೨೮ನೇ ದಿನ ಉಡುಪಿಯಲ್ಲಿ ಜರಗಿದ ಉಡುಪಿ ತಾಲೂಕು ಎಲಿಮೆಂಟರಿ ಶಾಲೋಪಾಧ್ಯಾಯರ ಮಹಾಸಭೆಯಲ್ಲಿ ಮಂಜೂರಾಗಿ ದೆಯಂತೆ.

ಆದರೆ ತಾ ೭-೯-೧೯೨೮ನೇ 'ಸ್ವದೇಶಾಭಿಮಾನಿ'ಯ ಪತ್ರವ್ಯವಹಾರದಲ್ಲಿ "ಎಲಿಮೆಂಟರಿ ಶಾಲಾ ಉಪಾಧ್ಯಾಯ ಬಂಧುಗಳ ಅವಗಾಹನೆ ಬಗ್ಗೆ" ಎಂಬ ಶಿರೋಲೇಖದ ಕೆಳಗೆ ಎಲಿಮೆಂಟರಿ ಶಾಲೋಪಾಧ್ಯಾಯ ಉಪಾಧ್ಯಾಯಿನಿಯರ ಪುರೋಹಿತರಂತಿರುವ ಒಬ್ಬ ಉಪಾಧ್ಯಾಯರು ಬರೆದಿರುವ ಒಂದು ಲೇಖನವು ವಾಚಕ ಮಹಾಶಯರ ಅವಗಾಹನೆಗೂ ಬಂದಿರಬಹುದು. ನೀತಿಬೋಧಕವಾದ ಮಾತುಗಳನ್ನು ಗರ್ಭೀಕರಿಸಿಕೊಂಡು ಉಲ್ಲೇಖಿಸಲ್ಪಟ್ಟಿರುವ ಸುಭಾಷಿತಕಾರರಾದ ಆ ಉಪಾಧ್ಯಾಯರ ಲೇಖನದ ಧೋರಣೆಯನ್ನು ಕುಂದಿಸದೆ 'ಪೃಥ್ವೀಯಾಂ ತ್ರೀಣಿರತ್ನಾನಿ ಜಲಮನ್ನಂ ಸುಭಾಷಿತಂ' ಎಂಬ ವಿವೇಕಿಗಳೋಕ್ತಿಯು ಇರುವುದರಿಂದ ಉಡುಪಿ ತಾಲೂಕಿನ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯ ಉಪಾಧ್ಯಾಯಿನಿಯರು ಆ ನೀತಿವಚನಗಳಿಗೋಸ್ಕರ ಬಾಯಿ ನೀರ ಸುರಿಸಲೇಬೇಕು ಎಂದು ನಾನೂ ಒತ್ತಿ ಹೇಳುತ್ತೇನೆ. ಇಷ್ಟರಲ್ಲೇ ಮುಗಿಯಿತೆಂದಲ್ಲ. 'ಶ್ರುತಿಗುರೂಕ್ತಿಗಳ ಕಡೆಗಾಣದಿರು' ಎಂದಿರುವುದರಿಂದ ಗುರುಸ್ಥಾನವನ್ನು ಪಡೆದಿರುವ ಆ ಉಪಾಧ್ಯಾಯರು ಬೋಧಿಸಿದ ನೀತಿವಚನಗಳನ್ನು ಸಂಗ್ರಹಿಸಿ, ಗ್ರಹಿಸಲಿಕ್ಕಸದಿದ್ದರೆ ಸರ್ವಾಧಿಕೃತವನ್ನು ಹೊಂದಿದ ಪ್ರಾಯಶ್ಚಿತ್ತರಲ್ಲಿ ಜನ್ಮವೆತ್ತಿ ಉಪಾಧ್ಯಾಯ ವೃತ್ತಿಯಲ್ಲಿ ತೊಡಗಿರುವರ ಗೌರವಕ್ಕೆ ಒಂದು ಕುಂದು, ಬೋಧಿಸಲ್ಪಟ್ಟ ನೀತಿವಚನಗಳಿಗೆ ಒಂದು ಕಳಂಕ ಎಂಬಂತಾಗದಿರದು. ಹಾಗಾದಂತೆ ಮಾಡಲಿಕ್ಕಿರುವುದೇ ಈ ಲೇಖನದ ಸದುದ್ದೇಶವಲ್ಲದೆ ಯಾರನ್ನಾದರೂ ಒಂ[illegible] ಅವಹೇಳನಕ್ಕೆ ಗುರಿಪಡಿಸಲಿಕ್ಕಿರುವ ಸುರಭಿಮಾನದಿಂದ ಲೇಖನ ತೊಡಗಿರುವದಲ್ಲ. ಇರಲಿ.

ಉಡುಪಿ ತಾಲೂಕಿನ ಬೋರ್ಡಂತಲ್ಲ, ಎಲ್ಲಾ ತಾಲೂಕ ಬೋರ್ಡ್ ಸಂಸ್ಥೆಯ ಉಪಾಧ್ಯಾಯ ಬಂಧುಭಗಿನಿಯರು ಅವರೋನ್ನತಿಗಾಗಿ ಬೇರೆ ಸಂಘಗಳನ್ನು ಮಾಡಿಕೊಳ್ಳುವ ಅಗತ್ಯ ಉಂಟೋ! ಇತರ ಸಂಸ್ಥೆಯವರೊಂದಿಗೆ ಸೇರಿಕೊಂಡು ತಮ್ಮೋನ್ನತಿಯನ್ನು ಮಾಡಿಕೊಳ್ಳಲು ಆತಂಕವಿದೆಯೇ? ಪ್ರಕೃತ ಸ್ಥಿತಿಯಲ್ಲಿ ಎಲ್ಲಾ ಸಂಸ್ಥೆಯ ಉಪಾಧ್ಯಾಯರು ಒಟ್ಟಾಗಿ ತಮ್ಮೋನ್ನತಿಯನ್ನು ಸಾಧಿಸುತ್ತಿದ್ದಾರೆಯೇ? ನೀತಿವಚನಗಳನ್ನು ಬೋಧಿಸುವ ಉಪಾಧ್ಯಾಯರ ಸೂಚನೆಯಂತೆ ವರ್ತಿಸುವ ಬಗೆ ಹೇಗೆ ಎಂಬುದೇ ಈ ಲೇಖನದ ಪ್ರಸ್ತಾವನೆ?

ಮನುಷ್ಯರು ತಮ್ಮ ಕಾರ್ಯಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲಾರಂಭಿಸಿದಾಗ ತಮ್ಮ ಉನ್ನತಿ ದರ್ಶನೆಗಳನ್ನು ಮನೋನ್ನತ ಪದವಿಗೆ ಏರಿಸುವುದರಲ್ಲಿ ಹೆಣಗಾಡಿ ಕಾರ್ಯಸಿದ್ಧಿ ಮಾಡಿಕೊಳ್ಳುವುದು ಅಗತ್ಯ. ಅದರಲ್ಲಿ ವೈಯಕ್ತಿಕ ಪ್ರಯತ್ನದ ಫಲವು ಸಿದ್ಧಿಸುವುದಕ್ಕಿಂತ ಸಮುದಾಯಿಕ ಪ್ರಯತ್ನಫಲವು ಸಿದ್ಧಿಸುವುದು ಬೇಗ. ಕಾಲವಿಳಂಬಕ್ಕೆ ಫ[illegible]ಕ್ಕೆ ನೀಡುವ ಇಚ್ಛೆಯು ಯಾರಿಗೆ ತಾನೆ ಇದ್ದೀತು! ಅಂದಬಳಿಕ ಸಮುದಾಯಿಕವಾಗಿಯೇ ಪ್ರಯತ್ನಪಡುವುದಕ್ಕೆ ಮನದೊತ್ತಿ ಬರುವುದರಲ್ಲಿ ವಿಚಾರಶೀಲರು ಎಂದೂ ಶಂಕಿಸರು. ಸುಭಾಷಿತಕಾರರಾದ ಉಪಾಧ್ಯಾಯರು, ಈ ಬಗೆಗೆ ಉಡುಪಿ ತಾಲೂಕಿನ ಉಪಾಧ್ಯಾಯ ಬಂಧು ಭಗಿನಿಯರನ್ನು ಹುರಿದುಂಬಿಸುವುದು ಶ್ಲಾಘನೀಯವಾದ ವಿಷಯ. ಉದ್ಯೋಗಿಕ ಬಂಧುಪ್ರೇಮವೆಂದರೆ ಇದು. ಸಹೋದ್ಯೋಗಸ್ಥರ ಭ್ರಾತೃಸ್ನೇಹವು ಇವರಲ್ಲಿ ನೈಜವಾಗಿಕೊಂಡಿದ್ದ ಎಂದರೆ ಅತಿಶಯೋಕ್ತಿಯಾಗದು.

ಆದರೆ ಇನ್ನೊಂದು ಎಚ್ಚರಿಕೆಯ ಮಾತುಂಟು. ಅದಾವುದೆಂದರೆ ಸದ್ಯಸ್ಥಿತಿಯ ಮೂಲವಿದ್ಯಾಭ್ಯಾಸದ ಕಾರ್ಯಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪಾಧ್ಯಾಯಿನಿಯರು ಒಂದೇ ಆಡಳಿತೆ ಮಂಡಲಿಗೆ ಸೇರದೆ, ಸರಕಾರಿ, ಲೋಕಲ್, ಫಿರ್ಕಾ ಲೋಕಲ್‌ಬೋರ್ಡ್ ಖಾಸಗಿ ಎಂಬಿವೇ ತಾರತಮ್ಯದ ಆಡಳಿತೆ ಸಂಸ್ಥೆಗೊಳಪಟ್ಟವರಾಗಿರುತ್ತಾರೆ. ಮಾತ್ರವಲ್ಲ ಖಾಸಗಿಯಲ್ಲಿ ಮಿಶ್ಯನ್ ಮತ್ತು ನಾನ್‌ಮಿಶ್ಯನ್, ಏಡೆಡ್ ಮತ್ತು ಟೀಚರ್ ಮೆನೇಜರ್ ಎಂಬ ಅಂತರ್ವಿಭಾಗಗಳೂ ಇವೆ. ಇಂತಿರಲು ಒಂದು ಆಡಳಿತೆಯೊಳಗಿರುವ ಉಪಾಧ್ಯಾಯಿನಿಯರು ಮತ್ತೊಂದರ ಅಧಿಕಾರ, ಹಕ್ಕು ಬಾಧ್ಯತೆಗೆ ಎಂದೂ ಒಳಪಡುವುದಿಲ್ಲ. ಹಾಗೆಯೇ ಒಂದು ಸಂಸ್ಥೆಯೊಳಗಿನ ಉಪಾಧ್ಯಾಯರ ಸಂಬಳವು ಮತ್ತೊಂದು ಸಂಸ್ಥೆಯ ಉಪಾಧ್ಯಾಯರ ಸಂಬಳದ ತರದಾಗಿಲ್ಲ. ಹೀಗೆ ಒಂದು ಸಂಸ್ಥೆಯ ಉಪಾಧ್ಯಾಯರ ವ ಶಾಲೆಗಳ ಉನ್ನತಿಗೋಸ್ಕರ ಮತ್ತೊಂದು ಸಂಸ್ಥೆಯವರು ಮಾಡರು. ತಮ್ಮ ತಮ್ಮ ಉನ್ನತಿ ರಕ್ಷಣೆಗೋಸ್ಕರ ಪ್ರತಿಯೊಬ್ಬನೂ ಪ್ರಯತ್ನಪಡುವುದು ಅಗತ್ಯವಾಗಿರುವಲ್ಲಿ ಒಂದೊಂದು ಸಂಸ್ಥೆಗೊಳಪಟ್ಟ ಉಪಾಧ್ಯಾಯಿನಿಯರು ಅವರವರ ಉನ್ನತಿಗೋಸ್ಕರ ಪ್ರಯತ್ನಪಡುವುದು ಅಸಮಾಂಜಸವೆಂದು ಹೇಳಲು ಮುಂದೊತ್ತಿ ಬರುವ ತಿಳಿಗೇಡಿ ಮಾನವನು ಯಾರಿರಬಹುದು? ನಿಷ್ಪಕ್ಷಪಾತ ಬುದ್ಧಿಯಿಂದ ವಿಚಾರಿಸುವುದಾದರೆ ಪ್ರತಿಯೊಂದು ಸಂಸ್ಥೆಯ ಉಪಾಧ್ಯಾಯ ಉಪಾಧ್ಯಾಯಿನಿಯರು ಅವರ ಉನ್ನತಿ ರಕ್ಷಣೆಗೋಸ್ಕರ ಪ್ರಯತ್ನಮಾಡುವುದು ಅವರ ಮುಖ್ಯ ಕರ್ತವ್ಯ.

ಹೀಗಿರುವಾಗ ಸುಭಾಷಿತಕಾರರಾದ ಉಪಾಧ್ಯಾಯರು ಬೋರ್ಡ್ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ ಬೇರೆ, ಖಾಸಗಿ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ ಬೇರೆ, ಎಂಬ ಭೇದವನ್ನು [illegible] ಎಂದು ಹೇಳುವ ಶಬ್ದದ ಪ್ರಭಾವವು ಯಾವ ಸ್ವರೂಪದಲ್ಲಿರುತ್ತದೆ ಎಂಬುದು ವಿಚಾರಣೀಯವಾದ ವಿಷಯ.

ಖಾಸಗೀ ಎಲಿಮೆಂಟರಿ ಶಾಲೆಗಳ ಪೈಕಿ ಮಿಶ್ಯನ್ ಶಾಲೆಗಳ ಆಡಳಿತೆಯ ಸಂಸ್ಥೆಯು ದಿಸ್ತಾರದ್ದು ಮತ್ತು ಶ್ರೀಮಂತರದ್ದು. ಆ ಸಂಸ್ಥೆಯ ಕೆಳಗಿರುವ ಉಪಾಧ್ಯಾಯ ಉಪಾಧ್ಯಾಯಿನಿಯರ ವೈಜ್ಞಾನಿಕ ಮತ್ತು ಸಾಂಪತ್ತಿಕ ಉನ್ನತಿಗಾಗಿ ಆ ಆಡಳಿತೆಯಲ್ಲೇ ಮೊರೆಯಿಡಬೇಕು. ಅದಲ್ಲದೆ ಬೋರ್ಡಿನವರನ್ನು ಆಶ್ರಯಿಸಿದರಾಗದು. ಹಾಗೆ ಬೋರ್ಡ್ ಸಂಸ್ಥೆಯ ಉಪಾಧ್ಯಾಯರ ಉನ್ನತಿಗಾಗಿ ಇತರ ಸಂಸ್ಥೆಯವರಿಗೆ ಮೊರೆಯಿಡಲಾಗದು. ಮಾತ್ರವಲ್ಲ ಒಂದು ಸಂಸ್ಥೆಯ ಶಾಲೆಗಳ ಉಪಾಧ್ಯಾಯರು ತಮ್ಮ ಹಾಲಹವಾಲಿಗಳನ್ನು ಅವರ ಅಧಿಕಾರಿಗಳಿಗೆ ನಿವೇದಿಸಿಕೊಳ್ಳುವಾಗ ಇತರರನ್ನು ಕೂಡಿಕೊಂಡು ಮೊರೆಯಿಟ್ಟಲ್ಲಿ ಹೇಗಾದೀತು ಎಂದು ವಾಚಕರೇ ತೀರ್ಮಾನಿಸಲಿ. ಆದುದರಿಂದ ಒಂದೊಂದು ಸಂಸ್ಥೆಯ ಉಪಾಧ್ಯಾಯರು ಅವರವರ ಮೇಲಾಧಿಕಾರಿಗಳು ಹಾಕುವ ತಾಳಕ್ಕೆ ಸರಿಯಾಗಿ ಕುಣಿದು, ತಮ್ಮ ತಮ್ಮ ಉನ್ನತಿಗಾಗಿ ಹೋರಾಡುವುದಕ್ಕೆ ಪ್ರಾರಂಭಿಸುವುದೇ ಶ್ರೇಷ್ಠ. ಇದಕ್ಕೆ ಬದಲಾಗಿ ಎಲಿಮೆಂಟರಿ ಶಾಲಾ ಉಪಾಧ್ಯಾಯರೆಲ್ಲಾ ಒಟ್ಟಾಗಿ ಎಲ್ಲರ ಉನ್ನತಿಯು ಏಕರೀತಿಯಲ್ಲಿ ಉಂಟುಮಾಡಿಕೊಳ್ಳುವುದಕ್ಕೆ ಬೇರೆ ಬೇರೆ ಸಂಸ್ಥೆಯವರನ್ನು ಮೊರೆಯಿಟ್ಟು ಒಲಿಸುವುದಕ್ಕೆ ಯೋಚಿಸ ಬಗೆಯುವುದು ಪ್ರಕೃತ ಸ್ಥಿತಿಯಲ್ಲಿ ಉಚಿತವಾಗದು.

ಎಲಿಮೆಂಟರಿ ಶಾಲಾ ಉಪಾಧ್ಯಾಯರಾದ "ಟೀಚರ್ ಮೆನೇಜರ್" ಸ್ವತಂತ್ರಿಗರಾದ ಉಪಾಧ್ಯಾಯರಾದರೂ 'ಬೆಕ್ಕಿಗೆ ಬಿಡಾರ ಬೇರೆಯೆ' ಎಂಬಂತೆ "ಟೀಚರ್ ಮೆನೇಜರರ ಸಂಘ"ವೆಂಬ ಒಂದು ಹೊಸಪರಿಯ ಸಂಘವನ್ನು ನಿರ್ಮಿಸಿಕೊಂಡುದು ಸರ್ವಸಾಮಾನ್ಯರಾದವರಿಗೆಲ್ಲಾ ಮನವರಿಕೆಯಾದ ವಿಷಯ. ಇವರು ಈ ಸಂಘದ ಮೂಲಕ ತಮ್ಮ ಉನ್ನತಿಯನ್ನು ಬೇಕಾ ಬೇಕಾದಂತೆ ಅಭಿವೃದ್ಧಿಮಾಡಿಕೊಳ್ಳುತ್ತಾ ಮುಂದರಿಯುವುದು ಸಂತೋಷವೇ. ಸುಭಾಷಿತಕಾರರಾದ ಉಪಾಧ್ಯಾಯರ ಸೂತ್ರದಂತೆ ಇವರು ಎಲ್ಲಾ ಸಂಸ್ಥೆಯ ಉಪಾಧ್ಯಾಯರೊಂದಿಗೆ ಒಟ್ಟಾಗಿ ಇರುತ್ತಿದ್ದರೆ ಅವರು ಇಷ್ಟು ಉನ್ನತಿಗೆ ಬರಲು ಸಾಧ್ಯವೇ ಇರುತ್ತಿದ್ದಿಲ್ಲ. ಅವರ ಈ ಸನ್ನರ್ತನೆಗೆ ಎಲಿಮೆಂಟರಿ ಶಾಲೋಪಾಧ್ಯಾಯರೆಲ್ಲಾ ತಲೆವಾಗಲೇ ಬೇಕು.

ಮತ್ತೊಂದು ವಿಚಾರ. ದಕ್ಷಿಣದ ಮೂರು ತಾಲೂಕುಗಳಲ್ಲಿರುವ ಎಲಿಮೆಂಟರಿ ಶಾಲೋಪಾಧ್ಯಾಯರ ಸಂಘಗಳು ಸುವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದ್ದು ಅತ್ತಕಡೆಯ ಉಪಾಧ್ಯಾಯರೆಲ್ಲಾ ಎಲ್ಲಾ ವಿಷಯ [illegible] ತಯಾರಿರುವರೆ ಎಂದು [illegible] ಆದರೆ ಅಜ [illegible] ದ್ವೆಲ್ಲಾ [illegible] ಉದಾಹರಣೆ [illegible] ಎಂಬುತೆ ಬೋರ್ಡ್ ಶಾಲೋಪಾಧ್ಯಾಯರೆಲ್ಲಾ ಅವರೊಂದಿಗೆ ಪ್ರಯತ್ನ[illegible] ಇತರರ [illegible] ಗಾಯಿತು. [illegible] ಬೋರ್ಡ್ ಶಾಲೆಗಳಿಗೆ [illegible] ಮಾಡಿದ ವ್ಯವಸ್ಥೆಗಳು ಯಾವವು? [illegible] ವಿಚಾರಗಳು ನೀತಿಬೋಧನೆಗೆ ಉದಾಹರಣೆಯಾಗಿ [illegible] ಉಡುಪಿ ತಾಲೂಕಿನ ಉಪಾಧ್ಯಾಯರು ಬೋಧಕ [illegible] ಪರದ ಪ್ರಸಾದದ ಮ ಶಿರಸಾವಹಿಸುವುದಕ್ಕೆ [illegible] ಮುಂದೆ ಎಂದು ಮುಂದೊತ್ತಿ ಬರುವುದಕ್ಕೆ [illegible] ಯೋಚಿಸಿ ತಿಳಿದರೆ ನೀತಿವಚನಗಳ ಮ [illegible] ಬೋರ್ಡ್ ಶಾಲೆಗಳ ಉಪಾಧ್ಯಾಯರಿಗೆಲ್ಲಾ [illegible] ತನ್ನ ಬೇಳೆಯ ಕಾಳನ್ನು ಬೇಯಿಸಿಕೊಳ್ಳುವ [illegible] ಕೂಡಿರುತ್ತದೆ ಮ ವಿಚಾರಶೀಲರು ಹೇಳದಿರರು.

ಆದುದರಿಂದ ತಾಲೂಕು ಬೋರ್ಡ್ ಸಂಸ್ಥೆಯ [illegible] ಶಾಲೋಪಾಧ್ಯಾಯ ಬಂಧುಭಗಿನಿಯರು [illegible] ಪಡಿಯಬೇಕು" ಎಂದು ಇರುವ [illegible] ಗಾಹನೆಗೆ ತಂದುಕೊಂಡು ಯೋಚಿಸಿರಿ. [illegible] ನಿಮ್ಮ ಕೈಯಲ್ಲೇ ಇರುತ್ತದೆ' ಎಂಬುದನ್ನು [illegible] ಬೋರ್ಡ್ ಸಂಸ್ಥೆ [illegible] ಶಾಲೋಪಾಧ್ಯಾಯರ ಸಂಘವು ಅವರ ಉನ್ನತಿ ಸಾಧಿಸಲಿಕ್ಕೆ [illegible] ಇದಕ್ಕಾಗಿ ಎಲ್ಲರೂ ಯೋಚಿಸಿರಿ, ತಯಾರ ಮಾಡಿ.

"ಉಪಾಧ್ಯಾಯ [illegible]"

ವಾಚಕ ಮಹಾಶಯರೆ,

ಬಿ ವಿದ್ಯಾದಾಯಿನಿ ಸ್ಟೂಡೆಂಟ್ಸ್ ಫುಟ್‌ಬಾಲ್ ಕ[illegible] ನೆಯು ಇತ್ತೀಚೆಗೆ ಆಯಿತು. ಇವರ ಸಾಹಸವು ಸಾಮಾನ್ಯವಾದುದಲ್ಲ. ಇವರ ಗೈದಿರುವ ಸಾಹಸಗಳನ್ನು ನೋಡೋಣ. ಇವರ [illegible]

ಈ ಕಬ್ಬಿನ [illegible] ದಿನದ ಸ್ಥಿತಿಯಂತೆ [illegible] ಪಳಕಿಯಂತೆ ಮುಂದಾಳುವಾಗಿಯೂ [illegible] ತನು ಮನ ಧನಗಳ ಸಹಾಯ ಮಾಡುತ್ತಾ [illegible] ಅವರ ಗೌರವಕಾರ್ಯದರ್ಶಿಯವರಾ [illegible] ಯನ್ [illegible] ರೆ ಧನ್ಯರು.

ನಿರಪರಾಧಿಯಾದ ಅಮೀನರನ್ನು ಶಾಲೆಯಿಂದ ಹೊರಹಾಕಲ್ಪಟ್ಟ ಸಂದರ್ಭದಲ್ಲಿ ವಿಚಾರವಂತರಾದ [illegible] ವಿದ್ಯಾರ್ಥಿಗಳು 'ಅನ್ಯಾಯದ ಕಡೆಗೆ ನಾವು ಸೇರತಕ್ಕವರಲ್ಲ' ಎಂದು ನಿರ್ಧರಿಸಿ ಅವರ [illegible] ಸೇರಲು ಅವರ ವಿದ್ಯಾರ್ಜನೆಗೆ ತಕ್ಕ ಏರ್ಪಾಡನ್ನು ಮಾಡಿದ [illegible] ಘನಕಾರ್ಯ ಎಂಬುದನ್ನು ವರ್ಣಿಸಬೇಕೇ!

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದ ಹೆಚ್ಚು ಮುಂದಿಯು. ಈ ಮುಂಬಾಯಿ ಎಂಬ ಮನೋಹರವಾದ ನಗರದಲ್ಲಿ ವಾಸಿಸಿಕೊಂಡು ಅನೇಕ ಸಂಗಡಿಗರಾಗಿ ಆಟಗಳನ್ನು ಆಡುವರಾದರೂ [illegible] ಉತ್ಕರ್ಷತೆಗೆ ಕರುವನ್ನರ ಆಲೋಚನೆಯ ಮೊಳಕೆಯು ಯಾರಲ್ಲೂ ಮೊಳೆತು ಬಾರದಿದ್ದುದನ್ನು ಕಂಡು ಶ್ರೀಯುತ ಅಮೀನರು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರು ಇಂಥಾ ಆಟಗಳಲ್ಲಿ ಪ್ರವೀಣರಾಗಿ ಕೀರ್ತಿಯನ್ನು ಪಡೆಯಲು ತಕ್ಕದಾದ ಅನುಕೂಲತೆಯನ್ನು ಅಂದರೆ ಒಂದು 'ಕಪ್'ನ್ನು ತಮ್ಮ ಕ್ಲಬ್ಬಿನ ಹೆಸರಲ್ಲಿ ಇಟ್ಟು ನಮ್ಮ ಜಿಲ್ಲೆಯ ಎಲ್ಲಾ ಆಟದ ಪಂಗಡದವರಿಗೆ ಪತ್ರವಾಹೀನ ತಿಳಿಸಿ ಒಪ್ಪಿದ ಪ್ರಮಾಣಭಾವದಿಂದ ಬ್ಯಾಕ್ತಭಾವದಿಂದ ಆಟಕ್ಕೆ ಕರೆದರು. ಇಲ್ಲಿಯ ಕಷ್ಟಗಳನ್ನು ನೋಡುವಾಗ್ಯೆ ಅಲ್ಪ ಸಾಹಸಿಗಳಾದರೆ ಅಂದೇ ಆ ಕಾರ್ಯವನ್ನು ಮುಂದುವರಿಸದೆ ತೊರೆದು ಬಿಡುತ್ತಿದ್ದರು. ಮೈದಾನ ದೊರೆಯುವುದೇ ದುರ್ಲಭ, ತಕ್ಕ ಸಮಯಕ್ಕೆ ತಕ್ಕ ಏರ್ಪಾಡನ್ನು ಮಾಡುವುದು ಇನ್ನೊಂದು ಸಂಕಷ್ಟ, ಮತ್ತೊಂದೆಡೆಯಲ್ಲಿ ಘೋರಡವಿಯಿಂದ ಕ್ರೂರವಾದ ಹುಲಿಯಂತೆ ಬಾಯಿ

ಹಿಂದುಸ್ಥಾನೀ ಸೇವಾದಲ.

ಹಿಂದುಸ್ಥಾನಿ ಸೇವಾದಲವು ಹುಟ್ಟಿ ೫ ವರುಷಗಳು [illegible] ಬಂದವು. ಈ ಅವಧಿಯಲ್ಲಿ ಉದ್ಯೋಗಕರನ್ನು [illegible] ಸಂಸ್ಥೆಯ ಚಾಲಕರು ತಮ್ಮ ಕೈಯಿಂದಾದಷ್ಟು ಕೆಲಸವನ್ನು [illegible] ಆ ಕೆಲಸಗಳನ್ನು ಮಾಡುವಾಗ್ಗೆ ಅನುಭವದ ಮೂಲಕ [illegible] ಎಷ್ಟು ತಪ್ಪುಗಳಾಗಿರಬಹುದು. ಆದರೂ ಕೆಲಸವು ಮು[illegible] ದೆಂಬ ಮಾತು ಕರ್ನಾಟಕದೊಳಗಿನ ಜನತೆಗೆ ತಿಳಿದಂ[illegible].

ಈ ಸಂಸ್ಥೆಗೆ ಬರುವ ದೆಸೆಂಬರದಲ್ಲಿ ೫ ವರುಷ [illegible] ವರುಷವು ಪ್ರಾರಂಭವಾಗುವುದು. ಆ ಕಾಲಕ್ಕೆ ನಾವು [illegible] ಸೇವಾದಳವುಮಾಡಿದ ಎಲ್ಲಾ ಕಾರ್ಯಗಳ ವರದಿಯ [illegible] ಕೂಡುವ ಐದನೇ ಪರಿಷತ್ತಿನ ಮುಂದೆ ಇಡುವೆವು. [illegible]ಯಲ್ಲಿ ಇಲ್ಲಿಯವರೆಗೆ ಬಂದ ಎಲ್ಲಾ ಅನುಭವಗಳ ವಿಚಾರ[illegible]ರುವ ಸೇವಾದಲದ ಘಟನೆ (Constitution)ಯನ್ನು [illegible] ವವು. ಘಟನೆಯಲ್ಲಾಗುವ ಬದಲಾವಣೆಯ ಪ್ರಕಾರ ಮುಂದಿನ [illegible] ಕೆಲಸ ಸಾಗಿಸುವೆವು.

ಸಧ್ಯಕ್ಕಿರುವ ಸೇವಾದಲದ ಘಟನೆಯು [illegible] ಕೆಲವರಿಗೆ ಸರಿಬೀಳುತ್ತಿಲ್ಲೆಂದು ಕಂಡುಬರುತ್ತದೆ. [illegible] ಬದಲಾವಣೆಯ ಸೂಚನೆಗಳನ್ನು ನಮ್ಮ ಕಡೆಗೆ ಬರುವ ನವೆಂಬರ ೧೫ನೇ ತಾರೀಖಿನೊಳಗಾಗಿ ಕಳುಹಿಸಬೇಕು ಮತ್ತು ಯಾರಿಗಾದರೂ ಸೇವಾದಲದ ವಿಷಯವಾಗಿ ಏನಾದರೂ ಹೇಳತಕ್ಕದಿದ್ದರೆ ಅವರೂ ಅದೇ ಸಮಯದೊಳಗಾಗಿ ತಿಳಿಸಬೇಕು. ಹಾಗೆ ಮಾಡಿದರೆ ಆ ಸೂಚನೆಗಳನ್ನು ಅಖಿಲ ಭಾರತ ಸೇವಾದಳದವರಿಗೆ ಇಡಲು ಅನುಕೂಲವಾಗುವುದು.

ಬಾಗಿಲುಕೋಟೆಯಲ್ಲಿ ಕಟ್ಟಿದ ವ್ಯಾಯಾಮ ವಿದ್ಯಾಪೀಠದ ಮುಂದಿನ ವ್ಯವಸ್ಥೆಯ ಸಲುವಾಗಿಯಾದರೂ ಏನಾದರು ಸೂಚನೆಗಳಿದ್ದರೆ ಸರ್ವರೂ ಸಹಾ ತಮ್ಮ ಸೂಚನೆಗಳನ್ನು ಅದೇ ಅವಧಿಯೊಳಗಾಗಿ ತಿಳಿಸಬೇಕು.

ಹಿಂದುಸ್ಥಾನ ಸೇವಾದಲವು ಕರ್ನಾಟಕಸ್ಥರಿಂದಲೇ ಸ್ಥಾಪಿಸಲ್ಪಟ್ಟಿದೆ. ಅದಕ್ಕೆ ಕರ್ನಾಟಕದವರೇ ಹೆಚ್ಚು ಸಹಾಯ ಮಾಡಿದ್ದಾರೆ. ಅದರಂತೆ ಕರ್ನಾಟಕದಲ್ಲಿಯೇ ಅದರ ಕಾರ್ಯವು ಬಹಳವಾಗಿದೆ. ಅಲ್ಲದೆ ಕರ್ನಾಟಕದ ತರುಣರೇ ಹೆಚ್ಚು ಸಂಖ್ಯೆಯಿಂದ ಅದರಲ್ಲಿ ಸೇರಿ ಅದರ ಉದ್ದೇಶಗಳನ್ನು ಕೊನೆಗಾಣಿಸಲು [illegible] ಬಂದಿದ್ದಾರೆ. ಅದ್ದರಿಂದ [illegible] ಕರ್ನಾಟಕಸ್ಥರು ಸೇವಾದಲಕ್ಕೆ [illegible] ಅಗತ್ಯ ವಿನಂತಿಯಿದೆ.

[illegible] ಘಟನೆಯ ಪ್ರತಿಗಳು ಬೇಕಾದವರು ೩ ಆಣೆ [illegible] ಕಳುಹಿ ಕೊಟ್ಟಲ್ಲಿ ನಾವು ಅವರಿಗೆ ಅದರ [illegible] ಕಳುಹಿಸುವೆವು. ಕನ್ನಡ ಪ್ರತಿಗಳು ಮಾತ್ರ [illegible]

[illegible] ನಾ. ಸು. ಹರ್ಡೀಕರ,
[illegible] ಕಾರ್ಯದರ್ಶಿ ಹಿಂ. ಸೇ. ದಲ.

THE CANA[R]A [B]ANKING CORPORATION, UDIPI, LTD UDIPI

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ [illegible] ಬ್ಯಾಂಕಿನಿಂದ [illegible] ಮೇಲೆ ಪಡೆದ ಮೊಬ[illegible] ವಾಯಿದೆಗೆ ಕೊಡದೆ [illegible], ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು [illegible] ಆಗದೆ ವಾಪಾಸು [illegible] ಯಾ ಅವರ ವಾರೀಸು [illegible] ತಮ್ಮ [illegible] ಬ್ಯಾಂಕಿಗೆ ದೃಢಪಡಿಸು [illegible], ನೋಟೀಸು ಮುಖ್ಯ [illegible] ಇದೇ 1928ನೇ ಇಸವಿ ಅಕ್ಟೋಬರ ತಿಂಗಳ ತಾರೀಕು 17ನೇ ಬುಧವಾರದೊಳಗೆ ಪಾವತಿ [illegible] ಬಿಡಿಸಿಕೊಂಡು ಹೋಗ [illegible] ಇದೇ 1928ನೇ ಇಸವಿ ಅಕ್ಟೋಬರ ತಿಂಗಳ ತಾರೀಕು 24ನೇ [illegible]ವಾರ ದಿವಸ ಮಧ್ಯಾಹ್ನ [illegible] ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ವಿಲೇ[illegible]

ಸಾಲ ನಂ.	ಹೆಸರು	ಮೊಬಲು.
460	[illegible] ಬೆಟ್ಟು ವಾದಿರಾಜ ಸರಳಾಯ	ರೂ 150/-
[illegible]14	[illegible] ಬೆಟ್ಟು ವಾದಿರಾಜ ಸರಳಾಯ	,, 250/-
1[illegible]	[illegible] ಆಚಾರ್ಯ	,, 15/-
1[illegible]	[illegible]	,, 15/-
4	[illegible] ಬೇರಾಯ	,, 20/-
[illegible]8	[illegible]	,, 15/-
71[illegible]	[illegible] ಅಹ್ಮದ್ ಸಾಹೇಬ	,, 45/-
34[illegible]	[illegible] ಉಮ್ಮರ ಸಾಹೇಬ	,, 15/-
34	[illegible] ದಲಾಲ ಉಮ್ಮರ ಸಾಹೇಬ	,, 20/-
5[illegible]	[illegible] ರಾಯ ಪೂಜಾರಿ	,, 50/-

ಕೊಡ್ಪುರಿ [illegible] ಆಫೀಸು
[illegible]

N Ananda Rao,
ಸೆಕ್ರೆಟರಿ.

[illegible] ಬರುವ ಕೆಲವು ವಿಘ್ನಗಳು — ಇವೆಲ್ಲಕ್ಕೂ ತಾನೇ ಆಹುತಿಯಾಗವೆ [illegible] ಧೈರ್ಯಗೆಡದೆ ತಾನು ಸಾಧಿಸಬೇಕೆಂದಿರುವ ಕಾರ್ಯಾರ್ಥವಾಗಿ [illegible] ಸಿದ್ಧನಾಗಿದ್ದೇನೆಂದು ಮಾನಗುಂದದೆ ಸಾಧಿಸಿ [illegible] ಅಮೀನರ ತಮ್ಮ ಪುರುಷಾರ್ಥವನ್ನು ಪ್ರತ್ಯಕ್ಷಪಡಿಸಿದರೆಂದ ಮೇಲೆ ಧೀರರೇ ಸರಿ.

ಭಾರತಮಾತೆಯೇ, ಇಂಥಾ ಧೀರ ಬಾಲಕರನ್ನನೇಕರನ್ನು ಹಡೆದು [illegible] ಕೀರ್ತಿಯನ್ನೇರೆ ಹಚ್ಚ ಸರಾದ ಅಮೀನರಂಥಾ ಸಾಧಕರಿಗೆ ಇನ್ನಷ್ಟು ಧೈರ್ಯವನ್ನಿತ್ತು ಚಿರಕಾಲ ಬದುಕೀರ್ತಿಯನ್ನು ಪಡೆಯುವಂತೆ ವರಪ್ರಸಾದವನ್ನೀಯುವಂತೆಯೂ, ಆ ಕಪ್ಪನ್ನು [illegible] ಶೀಲರಾಗಿ ಪಡೆಕೊಂಡ ಮೊಗವೀರ ಸ್ಟೂಡೆಂಟ್ಸ್ ಫುಟ್ ಬಾಲ್ ಕ್ಲಬ್ಬಿನವರು ಮತ್ತಷ್ಟು ಸಾಧನೆಯಿಂದ ಲೋಕಪ್ರಖ್ಯಾತಿಯನ್ನು ಪಡೆಯುವಂತೆಯೂ ನನ್ನ ಪ್ರಾರ್ಥನೆ. ಯು. ಬಿ. [illegible]

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಶ್ವಗಂಧಾದಿ ತೈಲ—ಇದು ಪುನರ್ವಸು ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ... ಶರೀರ ಪುಷ್ಟಿಗೂ ಬಹಳ ಅನುಕೂಲ ಮತ್ತು ... ಕೊಡುವುದು. ಮೆದುಳು ಮತ್ತು ಸ್ನಾಯು ... ಸಾಮರ್ಥ್ಯವನ್ನೀಯುವುದು 6 ಔನ್ಸಿನ ... ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ... ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನ ... ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ. ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಪುರಸ್ಕರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ... ಹೊರಗೆ ಹಾಕಿ ಪ್ರಸವದಿಂದ ಭ್ರಷ್ಟವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು

ಕ್ರಯ ಬಾಟ್ಲಿ 1ಕ್ಕೆ 2-0-0 ಪೋಸ್ಟೇಜು ವಗೈರೆ ಬೇರೆ

ಹೆಚ್ಚಿನ ಮಾಹಿತಿಗೆ "ಆಯುರ್ವೇದ ಚಿಕಿತ್ಸಾರಹಸ್ಯ" ಎಂಬ ಪುಸ್ತಕಕ್ಕೆ ಬರಕೊಳ್ಳಿ

ಯಮ್. ಎ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ ಕನ್ನಡ

ಮುದಲ್‌ತರವಾದ ಬೆಳ್ಳಿ ಪುಡಿದಾರಹಗ್ಗ.

ESTD 1896

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ... ಮೇಲೆ ನಮ್ಮ ಪುಡಿದಾರ ಹಗ್ಗಗಳು ... ದಾರವೂ ... ಸರಕಿನ ನಾಣ್ಯದಲ್ಲಿಯೂ ... ಹೆಸರು ಪಡೆದಿದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ... ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರಗಳ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಆಂಡ್ ಸನ್ಸ್,
ಹೋಲ್ಸೇಲು ವ್ಯಾಪಾರ,
24-8-28 ಕಿನ್ನಿಗೋಳಿ ... (ದಕ್ಷಿಣ ಕನ್ನಡ)

ಅಪೂರ್ವ ಸುಸಂದರ್ಭ

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1/- ಮಾತ್ರ,

ಹೆಚ್ಚಿನ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ

ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 96, ಬ್ರಾಡ್ವೇ, ಮದರಾಸು.

ಏಜಂಟರು—
ಮೆಸ್ಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು

Branches: Karkal, Kasaragod, Cochin, Udipi, & Gangolli.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ ಮತ್ತು ಗಂಗೊಳ್ಳಿ.

Authorised and fully paid up Capital Rs 300,000—0—0
Reserve and other sinking Funds „ 338,500—0—0
of which amount invested on G P Notes Rs 228,898—2—0
Rates of interest on fixed deposits at Head Office 6½% for 2 Years
6% „ 1 Year
Season deposits of Rs. 1000/- & above terminable by the end of June are received at 6½% p a.

ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
ರಿಸರ್ವ ಮತ್ತು ಇತರ ಫಂಡುಗಳು
338,500—0—0
ಇದರ ಪೈಕಿ ಗವರ್ನಮೆಂಟ್ ಪ್ರಾಮಿಸರಿ ನೋಟು ಗಳಲ್ಲಿ ಹಾಕಿದ ರೂ. 228,898-2-0
ಹೆಡ್ ಆಫೀಸಿನಲ್ಲಿ ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1 ವರುಷಕ್ಕೆ ಶೇ 6
ಜೂನ್ ಅಂತ್ಯದ ವರೆಗೆ ವ್ಯಾಪ್ತಿ ... ರೂ 1000/- ವ ಮೇಲ್ಪಟ್ಟ ... ಡಿಪಾಜಿಟುಗಳಿಗೆ ಬಡ್ಡಿ ದರ ಶೇಕಡಾ 6½

Canara Bank Ltd
Mangalore, 16th Feb 1928

K. Venkat Rao,
Secretary

THE PANGAL NAYAK BANK, LTD.,
UDIPI, S. K.

ಸ್ಥಾಪಿತವಾದದ್ದು 1920.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್, ಉಡುಪಿ, ದ. ಕ.

ಬೇಂಕರರು—
ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ

ನಿಯಮಿತ ಮೂಲಧನ ರೂಪಾಯಿ 2,00,000/	ಆಪದ್ಧನ ಇತ್ಯಾದಿ ನಿಧಿಗಳು ರೂ 1 00,000
ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1 50 000-	ಕಾಯಂ ಠೇವಣಾತಿಗಳು „ 7,31 735-

NOTICE.

With effect from 1—10—1928 interest on Fixed Deposits will run at the following rates per annum, payable every 3 months —

For 3 months at 5%, for 6 or 9 months at 5½% for 12 15 18 or 21 months at 6¼% for 24 months at 6½%. On Season Deposits at 6% and on Short Notice Deposits at 4½%.

ತಾರೀಕು 1—10—1928ರಿಂದ ಕಾಯಂ ಠೇವಣಾತಿಗಳ ಮೇಲೆ ಈ ಕೆಳಗೆ ಬರೆದಿರುವ ದರದಲ್ಲಿ ... ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು

3 ತಿಂಗಳ ವಾಯಿದೆಗೆ ಸಾ. ಶೆ 5, 6 ಯಾ 9 ತಿಂಗಳ ವಾಯಿದೆಗೆ ಸಾ. ಶೆ 5½ 12 15 18 ಯಾ 21 ತಿಂಗಳ ವಾಯಿದೆಗೆ ಸಾ. ಶೆ 6¼ 24 ತಿಂಗಳ ವಾಯಿದೆಗೆ ಸಾ. ಶೆ 6½ ಮುದ್ದತಿ ಠೇವಣಾತಿಗಳ ಮೇಲೆ ಸಾ. ಶೆ 6 ಅಲ್ಪಾವಧಿ ಠೇವಣಾತಿಗಳ ಮೇಲೆ ಸಾ. ಶೆ 4½

ಕಾರ್ಯಕ್ರಮಗಳ ಮತ್ತು ಹೆಚ್ಚಿನ ತಪಸೀಲು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳತಕ್ಕದ್ದು

ಬೇಂಕಿನ ಆಫೀಸ, ಉಡುಪಿ,
ತಾ 18—9—'28

ಪಾಂಗಾಳ ಪರಮೇಶ್ವರ ನಾಯಕ್,
ಸೆಕ್ರೆಟರಿ

'ಸಾರಸ್ವತಾಸವ.

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಹಾಲಸ್ಯವಾಗುತ್ತಿದ್ದರೆ, ದಿನ್ನ ನ ವರ್ಗದ ... ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ 1ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ

ಬಾಲಸುಧೋದಯ

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯ ಪ ಗುಣದಾಯಕ ಮಕ್ಕಳಿಗೆ ಬಲವನ್ನು ರಕ್ತವೃದ್ಧಿಯನ್ನು ಉಂಟು ಮಾಡುತ್ತದೆ ಸೀಸೆ 1ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.



ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್ಜಾ, ಪ್ಲೇಗುಜ್ವರ

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷ್ಠಾಸ್ತ್ರೀಯರಿಗೂ ಉಳಿತಿಂದೇಕ. ... ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ, ಒಕ್ಕೆ ೧—೪—೦, ೧೫ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೨—೦ ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ
ಹೆಡ್‌ಆಫೀಸ್ ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು
ಅತ್ತಾವರ ಸೋಮಯ್ಯ ಮತ್ತು ಕಂಪೆನಿ ಸೋಡಾ ಫಾಕ್ಟರಿ,
ಮಂಗಳೂರು ಜಿಲ್ಲೆಗೆ ಮಾತ್ರ.

ವಿಚಾರಗಳು

ಮುಷ್ಕರಗಳು.

ಮುಷ್ಕರಗಳು ಯಾರಿಗೂ ಲಾಭಮಾಡುವುದಿಲ್ಲವೆಂದೂ, ಬದಲಿಗೆ ಅವುಗಳಿಂದ ಮಜೂರರಿಗೂ, ಧನಿಗಳಿಗೂ, ರಾಷ್ಟ್ರಕ್ಕೂ ಬಹಳ ಹಾನಿಯುದಯೆಂದೂ ಕಳೆದ ಕೆಲವು ವರ್ಷಗಳಲ್ಲಿ ಲೋಕದೊಳಗೆ ನಡೆದ ಮಜೂರ ಮುಷ್ಕರಗಳನ್ನು ನೋಡಿದರೆ ತಿಳಿದು ಬರುವುದು. ಇಂಗ್ಲೆಂಡಿನ ಜನರಲ್ ಸ್ಟ್ರೈಕ್ ಎಂಬುದು ಯಾರಿಗೂ ಪ್ರಯೋಜನಕಾರಿಯಾಗಲಿಲ್ಲ. ಬದಲಿಗೆ ಮಜೂರರಿಗೆ ಮಜೂರಿ ನಷ್ಟವೂ, ಧನಿಗಳಿಗೆ ಲಾಭ ಮತ್ತು ಇತರ ನಷ್ಟವೂ ಸಂಭವಿಸಿದ್ದು ಮಾತ್ರವಲ್ಲದೆ, ಇಂಗ್ಲೆಂಡು ಹೊರದೇಶದಿಂದ ಕೋಟ್ಯಾವಧಿ ರೂಪಾಯಿಯ ಕಲ್ಲಿದ್ದಲನ್ನು ತರಿಸಿಕೊಳ್ಳಬೇಕಾಯಿತು. ಕಬ್ಬಿಣದ ಕಾರ್ಖಾನೆಗಳು ಹಲವು ಸಮಯ ಕೆಲಸಮಾಡದೆ ಇರಬೇಕಾಯಿತು, ಜನಾಂಗವು ಆ ಮುಷ್ಕರದ ಸಮಯದಲ್ಲಿ ಬಹಳ ಕಷ್ಟವನ್ನು ಅನುಭವಿಸಬೇಕಾಯಿತು, ಮಾತ್ರವಲ್ಲದೆ ಇಂತಹ ಜವಾಬ್ದಾರಿಯಿಲ್ಲದ ಮುಷ್ಕರಗಳು ನಡಿಯದ ಕಠಿಣವಾದ ಕಾನೂನು ಸಹ ಪಾರ್ಲಿಮೆಂಟಿನಲ್ಲಿ ಮಂಜೂರಾತಿಯನ್ನು ಹೊಂದಿತು. ಇಂತಹ ಮುಷ್ಕರಗಳಿಂದ ದೇಶಕ್ಕೆ ಉಂಟಾದ ಕಷ್ಟನಷ್ಟದ ಇದಿರಿಯಲ್ಲಿ ಪ್ರತಿ ಕ್ರಿಯೆ (reaction)ಯನ್ನುಂಟುಮಾಡಿ ಫೆಸಿಸ್ಟ ಸಂಗಡವನ್ನು ಬೆಳಸಿತು. ಜರ್ಮನಿಯಲ್ಲಿ ಕೂಡ ಈ ಮುಷ್ಕರಗಳಿಗೆ ಮಿತಿಹಾಕಲ್ಪಟ್ಟದೆ, ಫ್ರಾನ್ಸಿನಲ್ಲಿ ಮಜೂರ ಚಳವಳಿಕ್ಕೇನಿ ಬಹಳ ಪ್ರತಿರೋಧವಿದೆ. ಹೀಗಿರುತ್ತಾ ಹಿಂದೂಸ್ಥಾನದಲ್ಲಿ ಕೈಗಾರಿಕೆಯು ಇನ್ನೂ ಮೊಳಕೆಯಲ್ಲಿಯೇ ಇರುವ ಸಮಯದಲ್ಲಿ ಮಜೂರ ಧನಿಗಳ ಸೌಹಾರ್ದ ಅತ್ಯಾವಶ್ಯಕವಾದುದಾಗಿದೆ. ಆದುದರಿಂದ ಎಸೆಂಬ್ಲಿಯಲ್ಲಿ ಈಗ ಬಂದಿರುವ Trade Disputes Bill ಎಂಬುದನ್ನು ಚೆನ್ನಾಗಿ ಆಲೋಚಿಸುವುದು ಅಗತ್ಯವಿದೆ. ಆದರೆ ಇಂತಹ ಮಸೂದೆಗಳಲ್ಲಿ ಮಜೂರರನ್ನು ಧನಿಗಳ ಸ್ವೇಚ್ಛೆಗೆ ಬಿಟ್ಟುಕೊಡದಂತೆಯೂ, ಮಜೂರರು ಆಗಾಗ ಲಕ್ಷ್ಯಕ್ಕೆ ತರುವ ನ್ಯಾಯವಾದ ಕಷ್ಟಗಳು ಸರಿಯಾಗಿ ವಿವೇಚಿಸಲ್ಪಡುವಂತೆಯೂ ತಕ್ಕ ಕಾನೂನು ಇದರಲ್ಲಿ ಗರ್ಭೀಕರಿಸಲ್ಪಡುವುದು ಅವಶ್ಯವಿದೆ. Trade Disputes Bill ಎಂದು ಮಜೂರರ ಚಳವಳಿಯನ್ನು ನಿರ್ಬಂಧಿಸಲು ಬಿಡಬಾರದು. ಅದೇ ಸಮಯಕ್ಕೆ ಮಜೂರರ ಮತ್ತು ದೇಶದ ಹಿತಾಹಿತಗಳನ್ನು ಲಕ್ಷಿಸದೆ ಅಸ್ವಾಭಾವಿಕ ಧುರೀಣತ್ವವನ್ನು ಸಂಪಾದಿಸಿಕೊಳ್ಳಲಿಕ್ಕೆ ಸುಮ್ಮನೆ ಚಳವಳಿಯು ಮುಂದೆ ಸಾಗಬಾರದು. ಹಿಂದೂಸ್ಥಾನದ ಈಗಿನ ಮಜೂರ—ಧನಿಗಳೊಳಗಿನ ಕೆಡಲ್ಪಟ್ಟ ಸಂಬಂಧದ ಸ್ಥಿತಿಯಲ್ಲಿ ಇಂತಹದೊಂದು ಕಾನೂನ ಅಗತ್ಯವಿದೆಯೆಂದು ಬೇರೆ ಹೇಳಬೇಕಾಗಿಲ್ಲ.

ಇನ್ನೂ ಬರುತ್ತಿವೆ

ಹಿಂದೂ ಮುಸಲ್ಮಾನ ಕಲಹಗಳು ಇನ್ನೂ ನಿಂಗಿಯುವುದಿಲ್ಲ. ಒಂದರ ಮೇಲೊಂದಾಗಿ ಕಲಹಗಳ ಸುದ್ದಿಗಳು ಬರುತ್ತಾ ಇವೆ. ಎಲ್ಲವುಗಳಿಗಿಂತಲೂ ಗೋಧ್ರಾ ಎಂಬ ಮುಂಬಾಯಿ ಪ್ರಾಂತದ ಪಟ್ಟಣದಲ್ಲಿ ನಡೆದ ಕಲಹವೇ ಹೃದಯವಿದಾರಕವಾದುದು. ಕಲಹಗಳು ವೈಸರಾಯರ ಮನಗೆರೆಯಲ್ಲಿಯೂ, ಮುಂಬಾಯಿಯ ಸೂರತ್ತಿನಲ್ಲಿಯೂ ಇದ್ದುವು. ಒಬ್ಬರ ಮೇಲೊಬ್ಬರು ಹಗೆ ಸಾಧಿಸುವುದೇ ದೇವರ ಪ್ರೀತಿಯನ್ನು ಸಂಪಾದಿಸುವ ಉಪಾಯವೆಂದು ಈ ಜನರು ಭಾವಿಸುವಂತೆ ಕಾಣುತ್ತಿದೆ. ಗೋಧ್ರದಲ್ಲಿ ನಡೆದ ಕಲಹಕ್ಕೆ ಮುಸಲ್ಮಾನ ಪುಂಡಾಟಿಕೆಗೆ ಯಾವ ಕಾರಣವೂ ಕಂಡುಬರುವುದಿಲ್ಲ. ಜೈನ ಮೆರವಣಿಗೆಯು ಊರೊಳಗೆ ಹೊರಟಾಗ, ಜೈನ ಮುಖಂಡರು ಮಸೀದಿ ಮುಂದೆ ಯಾವ ತರದ ವಾದ್ಯ ಗಾಯನಗಳನ್ನೂ ಮಾಡುವುದಿಲ್ಲವೆಂದು ಮುಸಲ್ಮಾನರಿಗೆ ಭರವಸೆಯಿತ್ತರೂ ಮುಸಲ್ಮಾನರು ಸ್ವಸ್ತ್ರಾಗಲಿ ಮುಸಲ್ಮಾನರ ವಿನಾಕಾರಣ ಪುಂಡಾಟಿಕೆಯು ಆಶ್ಚರ್ಯಕರದ್ದಾಗಿದೆ. ಆದರೆ ಅದಕ್ಕಿಂತಲೂ, ಆಶ್ಚರ್ಯಕರವಾದ ವಿಷಯವೆಂದರೆ ಅಧಿಕಾರಿಗಳ ಅಲಕ್ಷ್ಯ. ಮುಸಲ್ಮಾನರು ಮಾಡುತ್ತಿದ್ದ ತಯಾರಿಯ ಸಮಾಚಾರವನ್ನು ಜಿಲ್ಲಾಧಿಕಾರಿಗೆ ಮುಂದಾಗಿಯೇ ಜೈನ ಮತ್ತು ಹಿಂದೂ ಮುಖಂಡರು ಕೊಟ್ಟಿದ್ದರು. ಆದರೆ ಊರಲ್ಲಿ ಪುಂಡಾಟಿಕೆಯು ಉಂಟಾಗದಂತೆ ಮುಂಜಾಗ್ರತೆಯನ್ನು ತೆಗೆದುಕೊಳ್ಳುವ ಆವಶ್ಯಕತೆಯೇ ಈ ಮಹನೀಯರಿಗೆ ತೋರಿಬರಲಿಲ್ಲ. ಸರಕಾರವೊಂದಿದೆ, ಪೋಲೀಸರೆಂಬ ಕಾಂತಿರಕ್ಷಕರುಂಟು ಎಂಬ ವಿಷಯವನ್ನೂ ಬಿಡಿ ಆ ಊರವರಿಗೆ ತಿಳಿಯಲಿಲ್ಲ. ಪುನಃ ಜಿಲ್ಲಾಧಿಕಾರಿಗಳನ್ನು ಕಾಣುವೆವೆಂದು ಹೊರಟ ಮಹನೀಯರ ಮೇಲೆಯೇ ಹಾದಿಯಲ್ಲಿ ಮುಸಲ್ಮಾನರು ಹಾಯ್ದು ಬಂದರು. ಅವರೊಳಗೆ ಸ್ಥಳೀಕ ಹಿಂದೂ ಧುರೀಣರಾದ ಶ್ರೀ| ಶಾಹಾ ಎಂಬವರು ತನ್ನ ಸಂಗಾತಿಗಳಿಗೆ "ಹೆಂಗಸರಾಗಬೇಡಿರಿ" ಎಂದು ವೀರತ್ವವನ್ನು ಪ್ರೇರಿಸಿ ಮುಸಲ್ಮಾನರಿಗೆ "ನೀವು ನಮ್ಮನ್ನು ಕೊಲ್ಲಲು ನಿಶ್ಚಯಿಸಿರುವಿರಿ. ಆದರೆ ನಮ್ಮ ರಕ್ತವು ನಿಮ್ಮ ಮೇಲೆ ಪ್ರತೀಕಾರವನ್ನು ತಾರದೆ ಇರದು" ಎನ್ನುತ್ತ ಧೈರ್ಯವಾಗಿ ನಿಂತು ಮುಸಲ್ಮಾನ ಸಾದಿಗಳ ಚೆಟ್ಟಿಗೆ ತಲೆಕೊಟ್ಟರು. ಆ ವೀರಪುರುಷನು ಮತ್ತೆ ಬದುಕಲಿಲ್ಲ.

ಸರಕಾರವೇನು ಮಾಡುತ್ತಿದೆ?

ಗೋಧ್ರದ ಕತೆಯನ್ನೂ, ಸೂರತ್ತಿನ ಕತೆಯನ್ನೂ, ನೋಡಿದರೆ, ಅಲ್ಲದೆ ಈ ಮೊದಲು ದೇಶದಲ್ಲಿ ನಡೆದ ಕಲಹಗಳ ಪೂರ್ವಾಪರಗಳನ್ನು ನೋಡಿದರೂ, ಸರಕಾರದ ಮೇಲೆ ಅನುಮಾನದ ಭಾವನೆಯು ಉಂಟಾಗುತ್ತಿದ್ದೆ. ಹಿಂದೂ ಮುಸಲ್ಮಾನ ಕಲಹಗಳು ಊರಿಗೆ ಹೊಸದಲ್ಲ. ಅವುಗಳ ಅನುಭವವು ಸರಕಾರಕ್ಕೆ ಕಳೆದ ಹಲವು ವರುಷಗಳಿಂದಲೂ ಇದೆ. ಹಿಂದೂ ಮುಸಲ್ಮಾನ ಕಲಹದ ಪೂರ್ವ ಚಿಹ್ನೆಯೇನು? ಅಂತಹ ಕಲಹವು ಪರಸ್ಪರ ಬಡಿದಾಟದಲ್ಲಿ ಪರಿಣಾಮ ಹೊಂದದಂತೆ, ಯಾವ ಮುಂಜಾಗ್ರತೆಯನ್ನು ತೆಗೆದುಕೊಳ್ಳಬೇಕು? ಎಂಬುದರ ಸರಿಯಾದ ಪರಿಜ್ಞಾನವು ಸರಕಾರಕ್ಕಿರಬೇಕು. ಪ್ರತಿ ಬಡಿದಾಟದಲ್ಲಿಯೂ ತಯಾರಿಯು ಹಲವು ಸಮಯದಿಂದ ನಡಿಯುತ್ತಲೇ ಇದೆ. ಅರಾಜಕ ಸಂಸ್ಥೆಗಳನ್ನೂ, ರಾಜದ್ರೋಹಿಗಳನ್ನೂ ಸಾಧ್ಯವಲ್ಲದ ಮೂಲೆಗಳಿಂದಲಾದರೂ ಹುಡುಕಬಲ್ಲ ಸಿ ಐ ಡಿ ಅಧಿಕಾರಿಗಳಿಗೆ ಈ ಹಿಂದೂ ಮುಸಲ್ಮಾನ ಜಗಳಗಳ ಪೂರ್ವಜ್ಞಾನವು ಉಂಟಾಗದೇ? ಗೋಧ್ರದಲ್ಲಿ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಹಲವು ಬಾರಿ ತಿಳಿಸಲಾಯಿತು; ಸೂರತ್ತಿನಲ್ಲಿ ಮೊದಲೇ ಅವರಿಗೆ ಗೊತ್ತಿತ್ತು. ಆದರೂ ಘಟನೆ ಘಟಿಯಾಗುವುದು. ಮನೆಸುಡುವುದು, ಜನರನ್ನು ಕೊಲ್ಲುವುದು, ಇತ್ಯಾದಿ ಅನಾಚಾರಗಳು ತಡೆಯಲ್ಪಡದೇ ನಡೆಯುತ್ತಿವೆ. ಹಿಂದೂಸ್ಥಾನವು ಸ್ವರಾಜ್ಯಕ್ಕೆ ಅರ್ಹವಲ್ಲವೆಂಬುದಕ್ಕೆ ಉದಾಹರಣೆಗಳನ್ನು ತಯಾರಿಸುವುದೋ? ಸರಿಯಾದ ಪೋಲೀಸರೂ ಸಾಲದಾದರೆ ಮಿಲಿಟರಿ ಸೈನ್ಯವೂ ತಯಾರಿರುವುದಾದರೆ ಇಂತಹ ಜಗಳಗಳು ಎಂದಿಗೂ ನಡೆಯಲಾರವು.

ಭದ್ರಾವತಿಯ ಕಬ್ಬಿಣದ ಕಾರ್ಖಾನೆ

ಭದ್ರಾವತಿಯ ಕಬ್ಬಿಣದ ಕಾರ್ಖಾನೆಯು ಮೈಸೂರು ಸರಕಾರಕ್ಕೆ ಗೌರವವನ್ನು ತರತಕ್ಕದ್ದೆಂಬುದನ್ನು ನಾವು ಈ ಮೊದಲಿನಿಂದಲೂ ಸೂಚಿಸುತ್ತಿದ್ದೆವು. ಮೈಸೂರಿನ ಇದನ್ನು ಧ್ವಂಸಾತ್ಮಕ ರೀತಿಯಲ್ಲಿ ಖಂಡಿಸುವುದನ್ನು ನಾವು ಲಕ್ಷಿಸುವೆವು. ಇದು ಜನರನ್ನು ಸಹಾನುಭೂತಿಪೂರ್ವಕವಾಗಿ ಪರಿಶೀಲಿಸಿ ಆ ಮುಂದೆಯಾದರೂ ಅಭಿವೃದ್ಧಿಗೆ ಬರಲೆಂದ ಎಂಬ ಸದುದ್ದೇಶದಿಂದ ಅದರ ಕೆಲಸಗಳ ಮೇಲೆ ಟೀಕಿಸುವ ಅವಶ್ಯವಿದೆಯೆಂಬುದನ್ನು ನಾವು ಹೇಳುವೆವು. ಆದರೆ ಧ್ವಂಸಾತ್ಮಕ ಟೀಕೆಯು ಇದ್ದೇ ಇದೆ. ಇಂತಹ ಟೀಕೆಗಾರರೂ ಸಹ ಪರಕವಾದ ಪತ್ರವನ್ನು ಮೈಸೂರು ಸರಕಾರವು ತರಿಸಿಕೊಳ್ಳುತ್ತಿದೆಯೆಂದು ವಾದಿಸಬಹುದು. ಆದಿನಿಂದ ಇದು ವಾಗದೆ ಮೈಸೂರು ಸರಕಾರವು ಪುನಃ ಈ ಕಾರ್ಖಾನೆಯ ಕಾರ್ಯಕಾರಿತೆಯ ವಿಷಯದಲ್ಲಿ ಇನ್ನೊಂದು ಪ್ರಕಟನೆಯನ್ನು ತೆಗೆದಿದೆ. ಈ ಕಾರ್ಖಾನೆ ಸಾಕಷ್ಟು ಸಾಧಿಸಿಕೊಳ್ಳಲಿಕ್ಕಿಲ್ಲವೆಂಬ ಅಭಿಪ್ರಾಯವು ತಪ್ಪೆಂಬುದನ್ನು ಇದರಲ್ಲಿ ತೋರಿಸಿದೆ. ವರ್ಷ ತಯಾರಾದ ಕಬ್ಬಿಣಕ್ಕೆ ಗಿರಾಕಿಯಿಲ್ಲವೆಂದೂ ನಿರ್ದಿಷ್ಟವಾಗಿ ಸಲ್ಲಿಸಬೇಕೆಂದೂ, ಈಗಿನ ಆದಾಯವು ದೊರೆತ ಅದರ ಲೆಕ್ಕಕ್ಕೆ ... ವರ್ಷಗಳ ಲಕ್ಷ ರೂಪಾಯಿ ನಷ್ಟವಾಗಿದೆಯೆಂದೂ, ಗ್ರಾಂಟು—ಡಿಪ್ರಿಸಿಯೇಷನ್ ನಷ್ಟ ಸಂಭವಿಸಲಿಲ್ಲವೆಂದೂ, ಗ್ರಾಂಟು—ಅಲ್ಲಿ ಒಂದು ಲಕ್ಷ ಹತ್ತು ಸಾವಿರ ರೂಪಾಯಿ ಉಳಿತಾಯವಿದೆಯೆಂದೂ ಮೈಸೂರು ಸರಕಾರವು ತೋರಿಸುತ್ತಿದೆ. ತಯಾರಾದ ಕಬ್ಬಿಣವು ಹಿಂದೂಸ್ಥಾನದಲ್ಲಿಯೇ ಖರ್ಚಾಗಿ ಹೋಗಿ ಇತರ ದೇಶಗಳಿಗೆ ರಫ್ತು ಮಾಡಲು ಸಿಕ್ಕುವುದೇ ಇಲ್ಲವೆಂಬುದನ್ನು ಈ ಪ್ರಕಟನೆಯಲ್ಲಿ ಮೈಸೂರು ಸರಕಾರವು ತಿಳಿಸುತ್ತಿದೆ. ಇದೊಂದು ರಾಷ್ಟ್ರೀಯ ಕೈಗಾರಿಕೆಯೆಂದು ಮೈಸೂರಿನವರು ಇದರ ಅಭ್ಯುದಯವನ್ನು ಕೋರುವುದು ಅವಶ್ಯವಿದೆ.

ಪಬ್ಲಿಕ್ ಸೇಫ್ಟಿ ಬಿಲ್ಲು

ಹೊರದೇಶದ ಬೊಲ್ಶೆವಿಕರನ್ನು ಹಿಂದೂಸ್ಥಾನದಿಂದ ಹೊರಗೆ ಹಾಕಲಿಕ್ಕೆಂದು ಸರಕಾರವು ಎಸೆಂಬ್ಲಿಯಲ್ಲಿ ತಂದ ಮೇಲಿನ ಹೆಸರಿನ ಬಿಲ್ಲು ರಾಷ್ಟ್ರೀಯ ಪಕ್ಷದ ನಿರೋಧದಿಂದ ಬಿದ್ದುಹೋಯಿತು. ದೇಶದಲ್ಲಿಯ ಕೈಗಾರಿಕೆಗಳ ಈಗಿನ ಸ್ಥಿತಿಯಲ್ಲಿ ಇಂತಹ ಕಾನೂನೊಂದು ಇದ್ದರೆ ಉತ್ತಮವಿತ್ತು. ಆದರೆ ಅದನ್ನು ಸರಕಾರವು ಹೇಗೆ ಉಪಯೋಗಿಸಬಲ್ಲದೆಂಬ ವಿಷಯದಲ್ಲಿ ಪ್ರಜಾಪಕ್ಷಗಳವರೊಳಗೆ ಸರಿಯಾದ ವಿಶ್ವಾಸವಿಲ್ಲ. ಹಿಂದೀ ಸರಕಾರವು ಹೊರಗಿನ ತೋರಿಕೆಗೆ ಪ್ರಜಾಹಿತವನ್ನೇ ತೋರಿಸಿ ಒಳ ಕಾರ್ಯದಲ್ಲಿ ತನ್ನ ಅಸ್ತಿತ್ವವನ್ನೂ ಬ್ರಿಟಿಷ ಹಿತವನ್ನೂ ಉದ್ದೇಶಿಸುತ್ತಿದೆಯೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದುದರಿಂದ ಇಂತಹ ಮಸೂದೆಯನ್ನು ಮಂಜೂರುಮಾಡಲು ಧುರೀಣರು ಒಪ್ಪದೆ ಇದ್ದುದು ಆಶ್ಚರ್ಯವಲ್ಲ. ಮೊದಲನೇ ಬಾರಿ ಮಸೂದೆಯನ್ನು ಪ್ರಕಟಿಸುವುದಕ್ಕೆ ಸಿಲೆಕ್ಟ ಕಮಿಟಿಗೆ ಕಳುಹಿಸಲಾಯಿತು. ಆದರೆ ಅಲ್ಲಿಯೂ ಸರಕಾರವು ಪ್ರಜಾಪಕ್ಷಗಳಲ್ಲಿ ತನ್ನ ಮೇಲೆ ವಿಶ್ವಾಸವು ಉಂಟಾಗುವಂತೆ ಮಾಡುವ ಬದಲಾಗಿ ಸ್ವರಾಜ್ಯ ಪಕ್ಷೀಯರೊಬ್ಬರನ್ನು ಕಮಿಟಿಯ ಮೆಂಬರರನ್ನಾಗದಂತೆ ಮಾಡಿ ಆ ವಿಶ್ವಾಸವನ್ನು ಕಳಕೊಂಡಿತು. ಈ ಸಭೆಯಲ್ಲಿ ಕಾಂಗ್ರೆಸ್ ಕಡೆಯಿಂದ ಎಸೆಂಬ್ಲಿ ಮೆಂಬರರಾಗಿ ಆರಿಸಲ್ಪಟ್ಟ ಎಮ್ ಕೆ ಆಚಾರ್ಯರೆಂಬವರು ಸಂಪೂರ್ಣವಾಗಿ ಸರಕಾರದ ವಶವರ್ತಿಯಾದುದು ಆಶ್ಚರ್ಯಕರ. ಇವರು ಈಗ ಸ್ವರಾಜ್ಯ ಪಕ್ಷದಲ್ಲಿ ರಾಜೀನಾಮೆ ಕೊಟ್ಟಿರುವರು.

ನೋಟಗಳು

NOTES.

ನಮ್ಮ ಮಂಗಳೂರು ಮುನ್ಸಿಪಾಲಿಟಿಯ ಚುನಾವಣೆಯು ಕಳೆದ ಶನಿವಾರ ಅತಿ ಸಂಭ್ರಮದಿಂದ ಮುಗಿಯಿತು. ... ಚುನಾವಣೆಯಲ್ಲಿ ನಡೆದಷ್ಟು ಸಂಭ್ರಮ ಇನ್ನು ಯಾವ ಚುನಾವಣೆಯಲ್ಲೂ ನಡೆಯಲಿಕ್ಕಿಲ್ಲ.

ಇಷ್ಟು ವರುಷ ವೋಟರರು ಜಯಶೀಲರಿಂದ ... ಬಟ್ಟೆಗೆ ಬೇಂಡುವಾದ್ಯದಿಂದ ಗಲ್ಲಿಗಲ್ಲಿಗಳಲ್ಲಿ ... ಇದ್ದಿಲ್ಲ. ಈ ವರುಷ ಹೊಸಕ್ರಮ.

ಎಂಟಾಣೆ ವೃತ್ತಿಕರಿಗೆ ಕೊಟ್ಟು ವೋಟುಗಾರರಾಗುತ್ತಿದ್ದುದು ಲೇಸು. ಜನರಿಗೆ ಅಷ್ಟೊಂದು ನಷ್ಟವಾಗಲಿಕ್ಕಿಲ್ಲ. ಮುನ್ಸಿಪಾಲಿಟಿಯವರಿಗೆ ಕೊಟ್ಟ ಹಣಕ್ಕಿಂತ ಎರಡು ಪಾಲಿನಷ್ಟು ... ಹಣವು ತಿರಿಗಿ ಬರುವುದು.

ಇನ್ನು ಯಾರೂ ವೃತ್ತಿಕರಿಗೆಯನ್ನು ಕೊಡಲು ಹಿಂಜರಿಯಲಿಕ್ಕಿಲ್ಲ. ವೃತ್ತಿಕರಿಗೆಯನ್ನು ಕೊಡುವುದರಿಂದ ಕೈತುಂಬಾ ಹಣವು ಸಿಕ್ಕುವುದು. ಬಿಲ್ ಕಲೆಕ್ಟರರು ಹೋಗುವುದೇ ತಡ, ಮುನ್ಸಿಪಲ್ ಹಣವು ಬೇಗನೆ ವಸೂಲಾಗುವುದು.

ಮುನ್ಸಿಪಲ್ ಚುನಾವಣೆಗಳು ಇನ್ನೂ ಮುಗಿಯುವ ಹಾಗೆ ತೋರುವುದಿಲ್ಲ. ಕೋರ್ಟುವಾರ್ಡಿನ ಒಬ್ಬ ಮೆಂಬರರು ರಾಜೀನಾಮೆ ಕೊಟ್ಟಿರುವರಂತೆ. ವೋಟರರಿಗೆ ಪುನಃ ಸುಗ್ಗಿಯಾಗುವ ಸಮಯ ಬಂದೊದಗಿತಾಗಿ ಹೇಳಬಹುದು.

ಮಳೆಗಾಲದ ಸಮಯ ನಮ್ಮ ಮಂಗಳೂರಿನ ಕೆಲವು ಬೀದಿಗಳು ಒಳ್ಳೆ ದುರವಸ್ಥೆಯಲ್ಲಿ ಇರುವವು. ಮೋಟಾರು ಕಂಪೆನಿಯವರು ಟಿಕೇಟಿನ ದರಗಳನ್ನು ಇಳಿಸುವ ರೀತಿಯಲ್ಲಿ ಕಮ್ಮಿ ಮಾಡಿದ್ದರು.

ಬೇಂಕಿನವರ ಒಳ್ಳೆ ಕಠಿಣ ಮಾಡದ್ದು ಈ ಸಲದ ಮುನ್ಸಿಪಲ್ ಚುನಾವಣೆಗೆ ಬಹಳ ಉಪಕಾರಕ್ಕೆ ಬಿತ್ತು.

ಸ್ವದೇಶಿ ಮಂಗಳೂರಿನಲ್ಲಿ ಇನ್ನೊಂದು ಬ್ಯಾಂಕು ಹೆ. ತಲೆಕ್ಕಿರ ವರ ... ಇಲ್ಲಿಯ ವ್ಯಾಪಾರಸ್ಥರ ಪುಣ್ಯ. ನಂತರ ಒಳ್ಳೆ ದರಗಳ ಜಟಾಪಟಿ ನೋಡಲಿದೆ.

ಉಡುಪಿ ತಾಲೂಕ ಬೋರ್ಡಿನಲ್ಲಿ ಪ್ರೆಸಿಡೆಂಟ್-ಮೆಂಬರರ ಗಲಾಟೆ ಇನ್ನೂ ಮುಗಿದಿಲ್ಲ. ಮೆಂಬರರ ಇಂಟರ್ ಪೆಲ್ಲೇಶನ್ ಕಮ್ಮಿ ಪ್ರೆಸಿಡೆಂಟ ಸಾಹೇಬರಿಗೆ ರಾತ್ರಿ ಹಗಲೂ ಕೆಲಸ.

ಬೆಂಗಳೂರಿನ ಗಲಾಟೆಯ ಸಮ್ಮಂಧ ನಮೂದಿಸಿದ ಕವಿ ಓಯ ರ ವಿಚಾ ಹೇಮ ಪ್ರಾಸಿಡಿಂಗ್ಸ ಪತ್ರಿಕೆಗಳಲ್ಲಿ ದಿನ ತಪ್ಪದೆ ಬರುತ್ತಿವೆ. ಇದ ಅಭ್ಯಿರಿಯಾಗುವಾಗ ಎಷ್ಟು ಪುಟದ ರಿಪೋರ್ಟು ತಯಾರಾಗುತ್ತಿದೆ ಎಂದು ನೋಡಲಿದೆ.

ಕೆಲ ಪತ್ರಿಕೆಗಳ ಬ್ರಾಹ್ಮಣರ ಮೇಲೆ ಆರೋಪಣೆಗಳನ್ನು ಮಾಡುತ್ತಿವೆ. ಬ್ರಾಹ್ಮಣರ ಮೇಲೆ ಹೊರಿಸಿದ ಆರೋಪಣೆಗಳನ್ನು ಖಂಡಿಸಿ ಬೆಂಗಳೂರಿನಲ್ಲಿ ಸಭೆಗಳ ಸುಗ್ಗಿ.

ಜರ್ಮನಿಯಲ್ಲಿ ಎವತ್ತು ಸಾವಿರ ಡೋಕ್ ಕೂಲಿಗಳು ತಮ್ಮ ಕೆಲಸಕ್ಕೆ ಮುಷ್ಕರ ಹಾಕುತ್ತಿದ್ದರಂತೆ. ಆಸ್ಟ್ರೇಲಿಯಾದಲ್ಲಿ ಡೋಕ್ ಕೂಲಿಗಳೆಲ್ಲಾ ಮುಷ್ಕರ ಹಾಕಿ, ದೊಂಬಿ ನಡೆಯಿತು. ಪೋಲೀಸರ ಸಹಾಯ ನಿಷ್ಪ್ರಯೋಜಕವಾಗಿತ್ತು.

[illegible] ಭಾದ್ರಪದ [illegible] ಶನಿವಾರದಿಂದ ವಿಭವ ಸಂವತ್ಸರದ ಭಾದ್ರಪದ [illegible] ಶುಕ್ರವಾರದ ವರೆಗಿನ ಪಂಚಾಂಗ

(ಗ್ರಹಣನೆಯು ಕನ್ಯಾ (ನಿರಾಯಣ))

[illegible]	[illegible]	[illegible]	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ
6	[illegible]	[illegible]	[illegible]	ಆರ್ದ್ರಾ	[illegible]	[illegible]	6 22	6 18
7	[illegible]	[illegible]	[illegible]	ಪುನರ್ವಸು	[illegible]	[illegible]	6 22	6 17
8	[illegible]	[illegible]	[illegible]	ಪುಷ್ಯಾ	[illegible]	[illegible]	6 22	6 16
9	[illegible]	[illegible]	[illegible]	ಆಶ್ಲೇಷಾ	[illegible]	[illegible]	6 22	6 1o
10	ಬುಧ	[illegible]	[illegible]	ಮಘಾ	[illegible]	[illegible]	6 22	6 14
11	ಗುರು	[illegible]	[illegible]	ಹುಬ್ಬಾ	[illegible]	[illegible]	6 22	6 14
12	ಶುಕ್ರ	[illegible]	[illegible]	ಉತ್ತರಾ	[illegible]	[illegible]	6 22	6.13

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature ಉಷ್ಣ (ಕಾವು) Maximum ಹೆಚ್ಚೆಂದರೆ	Minimum ಕಡಿಮ್ಮೆಂದರೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ
28	84— 8	74— 8	0—21	—
29	88— 6	73— 2	0—30	—
30	86— 3	72— 5	—	—
1	86— 5	78— 1	0—04	—
2	86— 1	73— 7	0—08	—
3	84— 5	78— 2	0—31	—
4	85— 5	72— 7	2—89	—
				113

ಮಂಗಳೂರಿನ ಪೇಟೆ ಧಾರಣಿ.

ದೇಣಸು	ಇಂದ ರೂ ಆ	ವರೆಗೆ ರೂ ಆ
ಮುಕ್ಕಿ	7— 4	8— 4
ಗೋಧಿ	6 14	7 4
ಸುಗ್ಗಿ	6—10	7 12
ರಾಗಿ	6— 6	6—14
ಊರ ಅವ್ವಲ್ ಬೆಳ್ತಿಗೆ	7— 8	8—14
ರಂಗೂನು ಬೆಳ್ತಿಗೆ ಗೋಣಿ ಒಕ್ಕೆ	12— 8	12 1.
ಎಲ್ಲೂರು ಬೆಳ್ತಿಗೆ ಮುಡಿ ಒಕ್ಕೆ	7— 6	7—12
ಗೋಧಿ ಗೋಣಿ ಒಕ್ಕೆ	8— [illegible]	20 0
ಮುರಾಳ ಗೋಣಿ ಒಕ್ಕೆ	7 8	10 [illegible]
ಕಡಲೆ ಗೋಣಿ ಒಕ್ಕೆ	13—1.	1[illegible] 8
ತೊಗರಿ ಗೋಣಿ ಒಕ್ಕೆ	14— [illegible]	15 8
ತೊಗರಿಬೇಳೆ ಗೋಣಿ ಒಕ್ಕೆ	18— [illegible]	2 — 0
ಉದ್ದು ಗೋಣಿ ಒಕ್ಕೆ	14— 8	14 12
ಹೆಸರು ಗೋಣಿ ಒಕ್ಕೆ	13— 0	14 4
ಊರ ಬೆಲ್ಲ ಖಂಡಿ ಒಕ್ಕೆ	65— 0	70— 0
ಉಪ್ಪು ಗೋಣಿ ಒಕ್ಕೆ	4— 8	5— 4
ಕೊಬ್ಬರಿ ಖಂಡಿ ಒಕ್ಕೆ	130 0	
ಕೊಬ್ಬರಿ ಹಿಂಡಿ ಖಂಡಿ ಒಕ್ಕೆ	48— 0	50— 0
ಎಳ್ಳಿಂಡಿ ಖಂಡಿ ಒಕ್ಕೆ	35— 8	42— 0
ಕೊಬ್ಬರಿ ಎಣ್ಣೆ ಮುಡಿ ಒಕ್ಕೆ	8— 4	9
ಎಳ್ಳೆಣ್ಣೆ ಮುಡಿ ಒಕ್ಕೆ	8— 0	8— 6
[illegible] ಒಕ್ಕೆ	7— 2	8 0
[illegible] ಮುಡಿ ಒಕ್ಕೆ	3—12	3—14
[illegible] ಮುಡಿ ಒಕ್ಕೆ	3— 0	6— 0
ಸಾಸಿವೆ ಮುಡಿ ಒಕ್ಕೆ	9— 8	8—12
ಕೊತ್ತಂಬರಿ ಮುಡಿ ಒಕ್ಕೆ	5— 8	7— 0
[illegible] ಖಂಡಿ ಒಕ್ಕೆ	40[illegible]	405
[illegible] ಖಂಡಿ ಒಕ್ಕೆ	170	2 0— 0
[illegible] ಖಂಡಿ ಒಕ್ಕೆ	610	520
ಮೆಣಸು ಮುಡಿ ಒಕ್ಕೆ	40— 0	45— 0
[illegible] ಮುಡಿ ಒಕ್ಕೆ	3—12	4 —0
[illegible] ಖಂಡಿ ಒಕ್ಕೆ	37— 8	40— 0
[illegible] ಒಕ್ಕೆ	16— 0	16 8
[illegible] ಮುಡಿ ಒಕ್ಕೆ	20— 0	21 —
[illegible] ಒಕ್ಕೆ	16— 0	—
[illegible] ಮುಡಿ ಒಕ್ಕೆ	14— 3	15—8
[illegible] ಒಕ್ಕೆ	13— 8	13—8
[illegible] ಖಂಡಿ ಒಕ್ಕೆ	70—	85—

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ —

ಕ್ರಯವಾಗಲಿ ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ಎಷವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ ದೌರ್ಬಲ್ಯ [illegible] ಮುಂತಾದ ಸಾಧಾರಣ ವ್ಯಾಧಿಗಳನ್ನು [illegible] ಸವಲಿಕೆ, ಮೂತ್ರಕೋಶ ವ್ಯಾಧಿ [illegible] ಮತ್ತು [illegible] 4 [illegible] 1 ಡಬ್ಬಿ ಕ್ರಯ [illegible] 1 — [illegible]

ಇವನು [illegible]

ರಾಜವೈದ್ಯ ನಾರಾಯಣಜಿ ಕೇಶವಜಿ, 1 34 [illegible]

ಮಂಗಳೂರು ಏಜಂಟ್ — ವಿ ಗೂಲಮ್‌ವಾಹಬ್ [illegible] ಮಂಗಳೂರು [illegible]



ರಿಜಿಸ್ಟರ್ಡ್ ಟ್ರೇಡ್ ಮಾರ್ಕ್ ಜಿತ್ರೊ

[illegible]

ವಿ ಬೊಂಬಾಯಿ ಇನ್‌ಕೆಂಡೆಸೆಂಟ್ ಲೈಟ್ [illegible],

[illegible] ಬೊಂಬಾಯಿ—1

ಇನ್ನೂ ಹೆಚ್ಚಿನ ಕಾರಣಗಳು!

ಪೆರೆಡೈಸ್ ಟೋನಿಕ್ ಪಿಲ್ಸ್

ಎಂಬ ಕಸ್ತೂರಿ ಶಿಲಾಜಿತ, ಬಂಗಾರ ಮೊದಲಾದ ಅಪ[illegible] ಪದಾರ್ಥಗಳಿಂದಾಗುವ ಈ ನಿರ್ಬಲಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನ ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾ

ವೃದ್ಧಾಪ್ಯವನು [illegible] ಅತಿಯಾಗಿ [illegible]

— [illegible] —

[illegible] ಮಾತ್ರೆಗಳುಳ್ಳ ಸೀಸೆಗೆ ಬೆಲೆ [illegible]

ಆರ್ ಛೋಟಾಲಾಲ ಎಂಡ್ ಕೋ

(R) ಪ್ರಿನ್ಸೆಸ್ ಸ್ಟ್ರೀಟ್ [illegible]

ಮಲೇರಿಯಾ ಸ್ಪೆಸಿಫಿಕ

ಮಲೇರಿಯಾ ಮತ್ತು [illegible] ಜ್ವರಗಳಿಗೂ ಉತ್ತಮ ಔಷಧಿ [illegible] ಸ್ವಲ್ಪ ಸಮಯದೊಳಗಾಗಿ [illegible] ಶಕ್ತಿಯು ಬೆಳೆವುವು

ಕ್ರಯದ ಪಟ್ಟಿಗೂ ಮಾದರಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಮ್. ಡಿ. ವ್ಹೋರಾ ಮತ್ತು ಕಂಪೆನಿ

ಚಿಲ್ಲರೆ ಮತ್ತು [illegible] ಔಷಧಿ ವ್ಯಾಪಾರಿ[illegible]

P O ಬೊಕ್ಸ್ ನಂಬ್ರ 13 [illegible]

ಅನುಕ್ರಮಣಿಕೆ

ಅಗ್ರಲೇಖ | ಪುಟ
ಸ್ತ್ರೀ ಸಮಾಜದ ಸುಧಾರಣೆ | ೩
ವಿದೇಶ ವರ್ತಮಾನ | „
ಸ್ಥಳೀಯಚಾರಗಳು | ೪
ನೋಟಿಗಳು | „

ವರ್ತಮಾನ ಸಂಗ್ರಹಗಳು
ಸ್ಥಳೀಯ ವರ್ತಮಾನ | ೩-೭
ದಕ್ಷಿಣ ಕನ್ನಡ—ಮಂಗಳೂರು, ಕುದುರಾಲು, ಸೋಮೇಶ್ವರ, ಕಾರ್ಕಳ, ಕಲ್ಲಿಗೆ ಪೋಲೀಸ್‌ವರ್ಗ, ಮುಂಡಾಜೆ, ಬೆಳ್ತಂಗಡಿ, ಕಲ್ಯ, ಹೊಸದೆಟ್ಟು, ಕಲ್ಲಿಗೆಪರೋಡಿ, ಉಪ್ಪಿನಂಗಡಿ, ಬಂಟ್ವಾಳ, ಕಾಪು | ೭-೯
ವಿವಿಧ ಸಮಾಚಾರಗಳು | ೯
ಉಡುಪಿಯ ವಿಶೇಷ ಪತ್ರ | ೧೦
ಮುಂಬಾಯಿಯ ಪತ್ರ | ,
ಸಂಸ್ಕೃತ ಅರಬಿ ಮುಂತಾದ ಭಾಷೆಗಳ ಪ್ರಾಚ್ಯ ಶೋಧನಾಲಯಗಳು | ೧೪
ಪತ್ರವ್ಯವಹಾರ, ೧, ೨ | ೨
ಹಿಂದೂಸ್ಥಾನಿ ಸೇವಾದಲ

ಸ್ವದೇಶಾಭಿಮಾನಿ.

ತಾರೀಕು ೫ನೇ ಶುಕ್ರವಾರ ಅಕ್ಟೋಬರ ೧೯೨೮

ಸ್ತ್ರೀ ಸಮಾಜದ ಸುಧಾರಣೆ

ಸಮಾನತೆಯ ಕೂಗು ಪಾಶ್ಚಾತ್ಯ ರಾಷ್ಟ್ರದಲ್ಲೆಲ್ಲಾ ಹಬ್ಬಿ, ಅದರ ಫಲವು ಈಗ ತೋರಲಾರಂಭಿಸಿಯದೆ. ಪಾಶ್ಚಾತ್ಯ ಸ್ತ್ರೀಯು ಪುರುಷರಂತೆ ಹೇಗೆ ತೋರಿಕೊಳ್ಳುವುದೆಂಬ ಪ್ರಯತ್ನದಲ್ಲಿಯೇ ಮಗ್ನಳು. ಲಜ್ಜೆ, ಶೀಲ ಇವು ಹಳೆಯ ಲಕ್ಷಣಗಳಾಗಿ ತೋರಿಬರುತ್ತಿವೆ. ಪುರುಷರ ವ್ಯವಸಾಯಗಳ ಅನುಕರಣೆಯು ಒಂದೇ ಸವನೆ ನಡಿಯುತ್ತಿದೆ. ಯುದ್ಧ ಪೂರ್ವದಲ್ಲಿ ಸಪ್ರಜೆಟ್ಟ ಚಳವಳವೆಂದು ಎದ್ದ ಸ್ತ್ರೀಯರ ಗೊಂದಲವು ಈಗ ಪೂರ್ಣ ತನ್ನ ಉದ್ದೇಶವನ್ನು ಲಾಭಮಾಡಿಕೊಂಡದೆ. ಪುರುಷರಂತೆ ಸ್ತ್ರೀಯು ಅರ್ಜನೆಯಲ್ಲಿ ಆಸಕ್ತಳು. ಪುರುಷರಂತೆ ಸಾಹಸ ಕಾರ್ಯಗಳಲ್ಲಿ ಅನುರಕ್ತಳು, ಪುರುಷರಂತೆ ವೇಷಭೂಷಗಳನ್ನು ತೊಟ್ಟುಕೊಳ್ಳುವುದರಲ್ಲಿ ಪ್ರೀತಳು. ಸ್ತ್ರೀ ಬೆರಿಸ್ಟರ, ಸ್ತ್ರೀ ಮೆಜಿಸ್ಟ್ರೇಟ ಸ್ತ್ರೀ ಪಾರ್ಲಿಮೆಂಟ ಮೆಂಬರು ಇತ್ಯಾದಿ ಸಮಸ್ತ ಪ್ರಮುಖ ವ್ಯವಸಾಯಗಳಲ್ಲಿ ಸ್ತ್ರೀಯರ ಪ್ರವೇಶವಿರುವುದು.

ಮಾತ್ರವಲ್ಲದೆ ವಿಜ್ಞಾನ ವಿಕಾಸಗಳಲ್ಲೂ ಸ್ತ್ರೀಯರು ತಮ್ಮ ಭಾಗವನ್ನು ವಹಿಸಿಕೊಂಡಿರುವರು. ವಿಮಾನ ಪ್ರಯಾಣಗಳಲ್ಲೂ, ವಿಮಾನ ಸಂಚಾಲನದಲ್ಲೂ ಹಲವು ಸ್ತ್ರೀಯರು ಹೆಸರುವಾಸಿಯಾಗಿರುವರು, ಮತ್ತು ಹಲವರು ಪ್ರಾಣವನ್ನು ಕಳಕೊಂಡಿರುವರು. ಸ್ತ್ರೀಯರಿಗೆ ಪುರುಷರಂತಾಗಬೇಕೆಂಬ ಲವಲವಿಕೆಯು ದಿನೇದಿನೇ ಬೆಳೆಯುತ್ತಾ ಬರುತ್ತಿದೆ.

ಪುರುಷರಂತೆ ತಲೆ ಕೂದಲನ್ನು ಕಡಿದು ಕ್ರೋಪ್ ಮಾಡಿಕೊಳ್ಳುವುದು, ಪುರುಷರಂತೆ ಕೋಟು ಇಜಾರುಗಳನ್ನು ತೊಟ್ಟು, ಗೊಲ್ಪ ಫೂಟಬೋಲ್‌ಗಳನ್ನು ಆಡಲು ಹೋಗುವುದು, ಇವು ಸ್ತ್ರೀಯರೊಳಗೆ ತಲದೋರುವ ಆ ಅಸಂಯಮಿತ ವರ್ತನಗಳ ಲಕ್ಷಣವಾಗಿದೆ. ಸ್ತ್ರೀ ಮಾರ್ದವವೆಂಬ, ಸಂಸಾರದಲ್ಲಿ ಮಹತ್ವದ, ನೈಸರ್ಗಿಕ ವಿಷಯವೊಂದು ಪಾಶ್ಚಾತ್ಯ ಸಮಾಜದೊಳಗಿಂದ ಮೆಲ್ಲನೆ ವಿಲುಪ್ತವಾಗಲಾರಂಭಿಸಿಯದೆಂಬುದಕ್ಕೆ ಹಲವು ನಿದರ್ಶನಗಳು ಕಾಣುತ್ತಿವೆ.

ಪಾಶ್ಚಾತ್ಯ ರಾಷ್ಟ್ರಗಳ ಈ ಸಮಾನತೆಯ ಕೂಗ ನಮ್ಮ ದೇಶದಲ್ಲೂ ಪ್ರತಿಧ್ವನಿಯನ್ನು ಹೊಂದದೆ ನಿಲ್ಲಲಿಲ್ಲ. ಪ್ರೌಢ ವಿದ್ಯಾಭ್ಯಾಸವೂ, ಪ್ರೌಢ ವಿವಾಹವೂ ಈಗ ಸಾಮಾನ್ಯವಾದ ವಿಷಯವಾಗಿ ಹೋಗಿದೆ. ಸ್ತ್ರೀ ವಕೀಲರೂ ಮೆಜಿಸ್ಟ್ರೇಟರೂ, ಕೌನ್ಸಿಲ್ ಮೆಂಬರರೂ ಲೋಕಲ್ ಬೋರ್ಡು ಮೆಂಬರರೂ ಹೆಚ್ಚಾಗುತ್ತಾ ಬರುತ್ತಾರೆ. ಸ್ತ್ರೀ ಸಮಾಜದ ಸುಧಾರಣೆಗಾಗಿ ಬಹುವಾಗಿ ಪ್ರಯತ್ನಿಸುತ್ತ ಇರುವ ಸಮಾಜ ಸೇವಿಕೆಯರ ಸಂಖ್ಯೆಯೂ ಹೆಚ್ಚುತ್ತಾ ಬರುತ್ತಿದೆ. ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆಯ ತತ್ವಗಳು ತಡೆಯಿಲ್ಲದೆ ಪ್ರಸರಿಸಲ್ಪಡುತ್ತಾ ಇವೆ. ಇದಕ್ಕಾಗಿ ಪ್ರತಿಭಾಶಾಲಿ ಸ್ತ್ರೀಯರೂ ದೃಢ ಸಂಕಲ್ಪದಿಂದ ಕೆಲಸಮಾಡುತ್ತಾ ಇದ್ದಾರೆ.

ಆದರೆ ಈ ಸ್ವಾತಂತ್ರ್ಯದ ಪ್ರಯತ್ನಕ್ಕೂ ಈ ಸಮಾನತೆಯ ಕೂಗಿಗೆ ಎಲ್ಲಿಯಾದರೂ ಒಂದು ಮೇರೆ ಇದೆಯೆ ಎಂಬುದನ್ನು ಚಿಂತಿಸಲೇ ಬೇಕು. ಪುರುಷರು ವಿಶೃಂಖಲ ವರ್ತನದವರಾಗಿರುವರೆಂಬ ಮಾತು ಸ್ತ್ರೀಯರಿಗೆ ವಿಶೃಂಖಲ ವೃತ್ತಿಯಲ್ಲಿ ಪ್ರೇರಿಸಲು ಸಾಕಾದ ಕಾರಣವಾಗಿರಲಾರದು. ಅದರಿಂದ ಪುರುಷ ಸಮಾಜದ ಸುಧಾರಣೆಯು ಆವಶ್ಯಕತೆಯು ತೋರುತ್ತಿದೆಯೇ ವಿನಹ ಸ್ತ್ರೀಯರು ಅದನ್ನು ಅನುಕರಿಸುವುದರ ಆವಶ್ಯಕತೆಯು ಅದರಿಂದ ತೋರಿಬರುವುದಿಲ್ಲ.

ಪಾಶ್ಚಾತ್ಯ ಸಮಾಜಗಳಲ್ಲಿ ಕೂಡ ಈ ಪರಿವರ್ತನದ ಕಡೆಗೆ ವಿಚಾರಿ ಜನರ ಆಲೋಚನೆಯು ಆಕರ್ಷಿಸಲ್ಪಟ್ಟದೆ. ನಿಸರ್ಗದಲ್ಲಿ ಉಂಟಾದ ವಿಭಾಗಣೆಗಳಲ್ಲಿ ಪ್ರತಿ ಒಂದಕ್ಕೂ ತನ್ನ ವೈಶಿಷ್ಟ್ಯಕ್ಕೆ ಒಪ್ಪು ಕರ್ತವ್ಯಗಳಿರುವಂತೆ ಸ್ತ್ರೀಗೂ ತನ್ನ ವೈಶಿಷ್ಟ್ಯಕ್ಕೆ ಒಪ್ಪು ಕರ್ತವ್ಯಗಳಿವೆ, ಅವು ಪುರುಷರ ಕರ್ತವ್ಯಗಳಾಗಿರಲಾರವು ಎಂಬುದನ್ನು ಈಗಾಗಲೇ ಪಾಶ್ಚಾತ್ಯರು ಆಲೋಚಿಸಲಾರಂಭಿಸಿರುವರು. ಸ್ತ್ರೀಯರ ವಿಷಯ ಹಲವು ಪಾಶ್ಚಾತ್ಯ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡಲು ಆರಂಭವಾದ ಉಪನ್ಯಾಸಗಳು ಈ ನೂತನ ಭಾವಪರಿವರ್ತನದ ಮಾರ್ಗವನ್ನು ತೋರಿಸುತ್ತಿವೆ.

ಹಿಂದೀ ಸ್ತ್ರೀ ಸಮಾಜದಲ್ಲಿ ಸಮಾನತೆಯ ಕಡೆಗಿನ ಹಲವು ಸುಧಾರಣೆಗಳು ಆಗುವ ಆವಶ್ಯಕತೆಯದೆ. ಆದರೆ ಅಂತಹ ಆವಶ್ಯಕ ಸುಧಾರಣೆಗಳ ಎಲ್ಲಾ ಕಡೆಗಳಲ್ಲಿ ಪ್ರಚಾರ ಹೊಂದುವ ಮೊದಲೇ ಸುಧಾರಕರು ಅವಸರದಿಂದ ಮತ್ತೂ ದೊಡ್ಡವುಗಳೂ ಸ್ತ್ರೀ ಸ್ವಭಾವಕ್ಕೆ ಅನ್ಯಸಗಿ [illegible] ಸುಧಾರಣೆಗಳನ್ನು ವಹಿಸುಯುವಡಿಸುವುದೇ ವಿಷಾದಕರವಾದ ಸಂಗತಿಯಾಗಿದೆ.

ಸ್ತ್ರೀಯರಿಗೆ ಪುರುಷರಂತೆಯೇ ಹಲವು ವಿಷಯಗಳಲ್ಲಿ ಪತಿಭ ಇದೆ ನಿಜ. ಆದರೆ ಪುರುಷ ಕರ್ತವ್ಯಕ್ಷೇತ್ರದಲ್ಲಿ ಸ್ತ್ರೀಯು ಬಹುಮಟ್ಟಿಗೆ ಮುಂದರಿಯುವುದು ಹಿತಕರವಾಗಲಾರದು. ಪಾಶ್ಚಾತ್ಯ ಸಮಾಜಗಳನ್ನು ಲಕ್ಷಿಸಿದರೆ ಅವುಗಳಲ್ಲಿ [illegible] ಸಂಪತ್ತಿನ ಮೋಹವೇ ಅಲ್ಲದೆ ಸಂಸಾರ [illegible] ಸುಖವೂ ಕಂಡುಬರುವುದಿಲ್ಲ. ಸ್ತ್ರೀ ಪುರುಷನ ವಿವಾಹವೆಂಬ ಸಮ್ಮಿಲನವು [illegible] ಸುಲಭವೊ ಅವರ ಡೈವೋರ್ಸು ವಿಚ್ಛೇದವೂ ಅಷ್ಟೇ ಸುಲಭವಾಗಿದೆ. ಹಿಂದೂ ಸಮಾಜ ವಿಧವಾ ವಿವಾಹ ನಿಷೇಧವು ಒಂದು ಕುಂದಿರುವ, ಪಾಶ್ಚಾತ್ಯರ ವಿಚ್ಛೇದ ಮತ್ತು ಪುನರ್ವಿವಾಹವು ಇನ್ನೊಂದು [illegible] ಈ ಎರಡು ಸಮಾಜಗಳಲ್ಲಿ ತೋರುವ ಹಾನಿಕರವಾದ ವರ್ತನದ ಎರಡು ತುದಿಗಳಾಗಿವೆ. ಒಂದರ ಹಾನಿಯನ್ನು ತಪ್ಪಿಸತ್ತೇವೆ [illegible] ಇನ್ನೊಂದನ್ನು ಪ್ರಚಾರಕ್ಕೆ ತರುವ ಅಷ್ಟೇ ಹಾನಿಕರವಾಗಿದೆ. ಕಾರ್ಯತಃ ಹಿಂದೂಸ್ಥಾನದ ಸಮಾಜ ಸುಧಾರಣೆಗಳು ಆ ತರದ ಹಾನಿಕರವಾದ ವಿಧದ ಹೊಸ ಉತ್ಸಾಹದಿಂದಲೇ ನಡೆಯುತ್ತಿವೆ.

ಸ್ತ್ರೀಯರಿಗೆ ವಿಧಿಸೋಣಗ ವ [illegible] ವೃತ್ತಿಯನ್ನು ನಾವು ಹಿಂದೂ ಸಮಾಜದಲ್ಲಿ ಹೇಗ ನಿಷೇಧಿಸವೆವೊ ಹಾಗೆಯೇ ಪಾಶ್ಚಾತ್ಯ ಸಮಾಜಗಳಲ್ಲಿ ಬೆಳ [illegible] ಈ ವಿಶೃಂಖಲ ವೃತ್ತಿಯನ್ನೂ ನಾವು ಅಷ್ಟೇ ತೀವ್ರವಾಗಿ ನಿಷೇಧಿಸಬೇಕು. ಪಾಶ್ಚಾತ್ಯ ರಾಷ್ಟ್ರಗಳನ್ನೇ ನಾವು ಆದರ್ಶಗಳಾಗಿ ತೋರಿಸುವೆವು. ಅಲ್ಲಿಯ ಸಂಸಾರ ಸುಖದುಃಖಗಳ ಪರಿಮಾಣವನ್ನೂ ಇಲ್ಲಿಯ ಸಂಸಾರಗಳ ಸುಖದುಃಖಗಳ ಪರಿಮಾಣವನ್ನೂ ಸಂಶೋಧಿಸಿದರೆ ನಮ್ಮವುಗಳಲ್ಲಿ ಒಳ್ಳೆಯದಾದ ಅಂಶಗಳು ಅಧಿಕವೆಂದು ತೋರಿಬಾರದಿರದು. [illegible] ಅಂಶಗಳನ್ನು ಒಳ್ಳೆಯದಾಗಿ ಮಾಡುವುದೇ ನಮ್ಮ ಸುಧಾರಣೆಯ ಉದ್ದೇಶವಾಗಿಬೇಕು.

ವಿದೇಶ ವರ್ತಮಾನ

ಕಳೆ ವರುಷ ಗಣಿಗಳ ಕೆಲಸದ ಪದ್ಧತಿಯಲ್ಲಿ ಒಟ್ಟಾರೆ [illegible] ಅಪಘಾತಗಳ [illegible] ೨೦೧೯ ಜನ [illegible] ಸತ್ತುಹೋದರು [illegible] ಹೆಂಗಸರು.

ಮೆಕ್ಸಿಕೊದ [illegible] ಕಾಲವಳಿಯಲ್ಲಿ ನೆರೆ ಬಂದು [illegible] ನಷ್ಟ [illegible] ಉಂಟಾಗಿರುತ್ತದೆ. [illegible] ಮನೆಯು ಉರುಳಿ [illegible] ೧೫ ಜನರು ಸತ್ತುಹೋದರು.

—ಕಳೆದ ವಾರ ಜಂಕ್ ಎಂಬಲ್ಲಿ ಭಯಂಕರವಾದ ಅಗ್ನಿ ಪ್ರಸಂಗದಿಂದ ಸುಮಾರು ೨೦೦೦ ಮನೆಗಳ ಸುಟ್ಟು ಬೂದಿಯಾದವು. ಬೆಂಕಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಹಲವರ ಅಲ್ಲಲ್ಲಿನ ಕೊಳಗಳಲ್ಲಿಯೂ ನದಿಗಳಲ್ಲಿಯೂ ಮುಳುಗಿ ಪ್ರಾಣ ಕಳಕೊಂಡರು. ಸುಮಾರು ೬೦೦೦ ಜನರು ಮನೆಯಿಲ್ಲದೆ ನಿರ್ಗತಿಕರಾಗಿ ಅಲೆದಾಡುತ್ತಿರುವರು.

—[illegible] ಎಂಬಲ್ಲಿ ಸುರಂಗ [illegible] ಕೆಲ್ಸ ಮಾಡುವಾಗ ಬೆಂಕಿ ಹಿಡಿದು ಸುಮಾರು ೫೦ [illegible] ೩೦೦ ಜನರು ಬಹಳವಾಗಿ ಗಾಯವನ್ನು ಹೊಂದಿದರು.

—ಐ. ಸಿ. ಎಸ್. ಪರೀಕ್ಷೆಗೆ ನಿಂತ ಬ್ರಿಟಿಷ ಹುಡುಗ[illegible]ಗರ ಸಂಖ್ಯೆಯು ಇಷ್ಟು ವರುಷಗಳಿಗಿಂತಲೂ ಈ ವರುಷ [illegible] ರುವವು. ಒಟ್ಟಾರೆ ಪರೀಕ್ಷೆಗೆ ಕುಳಿತ ಬ್ರಿಟಿಷ ಹುಡುಗರ [illegible] ೧೮೩, ಕಳೆದ ವರುಷ ೧೧೨, ೧೯೨೩ರಲ್ಲಿ ೯೩, [illegible] ಈ ವರುಷ ಪರೀಕ್ಷೆಗೆ ಕುಳಿತವರಲ್ಲಿ ೧೫೨ ಹಿಂದೀಯರು, [illegible] ಸಿಲೋನಿನವರು ಆಯಕಾಲಿಗಳಾದವರು ಒಟ್ಟು ೪೩ [illegible] ಮತ್ತು ೧೩ ಹಿಂದೀಯರು ಮಾತ್ರ.

—ಜಪಾನದ ಸಿಂಹಾಸನಾಧೀಶ್ವರನಾಗತಕ್ಕಂತಹ [illegible] ಲಂಡನಿನಲ್ಲಿರುವ ಜಪಾನ ಪ್ರತಿನಿಧಿಯ ಮಗಳನ್ನು ಮದುವೆ[illegible].

—ನ್ಯೂಯೋರ್ಕಿನ ಇಂಟರ್ ಬರೊ ರೆಪಿಡ್ ಟ್ರಾನ್ಸಿಟ್ [illegible] ಎಂಬ ರೈಲುವೇ ಕಂಪೆನಿಯ ಡ್ರೈವರನೊಬ್ಬನು ಕಂಪೆನಿಯ [illegible]ನಾಗಿ ಚುನಾಯಿಸಲ್ಪಟ್ಟಿರುವನು. ಈತನು ೪೩ ವರುಷಗಳಿಂದ [illegible] ಡ್ರೈವರ ಕೆಲಸವನ್ನು ಮಾಡಿಕೊಂಡಿದ್ದನಂತೆ. ಈತನು [illegible]ದ್ದಾಗ್ಯೂ ರೈಲು ಓಡಿಸುವ ಕೆಲಸವನ್ನು ಬಿಡುವುದಿಲ್ಲ. [illegible] ಇಸವಿಯಲ್ಲಿ ಇದೇ ಕಂಪೆನಿಯಲ್ಲಿ ನಡೆದ ಮುಷ್ಕರದಲ್ಲಿ [illegible] ಸೇರಲಿಲ್ಲ.

—ಜರ್ಮನಿಯ ಬಂದರುಗಳಲ್ಲಿ ಕೆಲಸ ಮಾಡುವವರ ಸಂಬಳವನ್ನು ಏರಿಸಬೇಕೆಂಬ ಪ್ರಶ್ನೆಗೆ ಅಧಿಕಾರಿಗಳು ಕಿವಿಗೊಡದಿರುವ ಕಾರಣ ಕಳೆದ ಸೋಮವಾರದಿಂದ ಸುಮಾರು ೫೦,೦೦೦ ಕೆಲಸಗಾರರು ಕೆಲಸವನ್ನು ತ್ಯಜಿಸಿರುವರು.

—ಮಾಸ್ಕೋ ಎಂಬಲ್ಲಿ ಒಂದು ಜೋರಾಗಿ ಓಡುವ ರೈಲು ಮೆಲ್ಲನೆ ಓಡುತ್ತಿದ್ದ ರೈಲ ಬಂಡಿಗೆ ಢಕ್ಕೆಹೊಡೆದು ೧೨ ಜನರು ಸತ್ತರು, ೨೪ ಜನರು ಗಾಯಹೊಂದಿದರು. ಎರಡು ಮೊದಲನೆ ತರಗತಿಯ ಬಂಡಿಗಳೂ ನುಚ್ಚುನೂರಾಗಿವೆಯಂತೆ.

—ಮೊಂಬಾಸದಲ್ಲಿ ನಮ್ಮ [illegible] ಯುವರಾಜರನ್ನು ಬಹು ಸಂಭ್ರಮದಿಂದ ಸತ್ಕರಿಸಿದರು. [illegible] ಮಾರ್ಗಗಳನ್ನು ಅಂದವಾಗಿ ಶೃಂಗರಿಸಿದ್ದರು, ನಿಗ್ರೋಜನರು [illegible] ವಾಗಿ ನೃತ್ಯವನ್ನು ಜರಗಿಸಿ ಯುವರಾಜರನ್ನು ಆನಂದಪಡಿಸಿದರು.

[illegible] ಹೊಸ ಲೋರ್ಡ ಮೆಯೋರರು ಆರಿಸಲ್ಪಟ್ಟಿರುವರು.

—[illegible] ಯುವರಾಜ ಕೆರೋಲರನ್ನು ರುಮೇನಿಯದ ಬಿಟ್ಟು [illegible] ವಿದೇಶಗಳಲ್ಲಿಯೂ ಹಿಂಬಾಲಿಸಿಕೊಂಡಿದ್ದನು. ಈ ಸಂಗತಿಯು ಯುವರಾಜರಿಗೆ ತಿಳಿಯಿತು. ಯುವರಾಜರು ಆತನೊಡನೆ ಸ್ನೇಹ [illegible] ಮೋಟಾರಕಾರಿನಲ್ಲಿ ಆತನನ್ನು ಎಮರಾಗೆಡೆಯಲ್ಲಿ ಕುಳ್ಳಿರಿಸಿ ತಾನು [illegible] ಕುಳಿತರು. ಗುಪ್ತಚಾರನು ಇನ್ನೊಬ್ಬ ಜೊತೆ [illegible] ಮಗ್ನನಾಗಿದ್ದಾಗ, ಯುವರಾಜರು ಥಟ್ಟನೆ [illegible] ಕೆಳಕ್ಕೆ ಹಾರಿ ಎತ್ತಲೋ ಮಾಯವಾದರು. [illegible] ಪೋಲೀಸ [illegible] ವಿಲ ಬಡಿದಿದೆ.

—[illegible] ಪ್ಲೇನ್ ವಿಮಾನವು ಸಂಚರಿಸುತ್ತಿರುವಾಗ [illegible] ಗೆ ತಗಲಿತು. ಒಡನೆ ಬೆಂಕಿಯುಂಟಾಗಿ ವಿಮಾನ [illegible] ಕೆಳಕ್ಕೆ [illegible] ಮೂವರು ಸತ್ತುಹೋದರು. ಇಬ್ಬರಿಗೆ ಗಾಯವಾಗಿರುತ್ತದೆ.

—[illegible] ಎಲ್ಲಾ ಭಾಗಗಳಲ್ಲಿರುವ ಗಿರಣಿ ಕೂಲಿಕಾರರು [illegible] ಸಂಬಳವನ್ನು ಏರಿಸಬೇಕೆಂದು ಅಧಿಕಾರಿಗಳ [illegible] ಅಧಿಕಾರಿಗಳು ಇದಕ್ಕೆ ಒಪ್ಪದ ಕಾರಣ, ಸ್ವಲ್ಪ [illegible] ಇದಕ್ಕಾಗಿ ೪೦,೦೦೦ ಕೆಲಸಗಾರರು ಕೆಲಸದ ಹೊರಗೆ ಹಾಕಲ್ಪಟ್ಟಿರುವರು.

—[illegible] ೩೦೦೦ ಎಕ್ರೆ ಆಸ್ತಿಯನ್ನು ಬಡ ರೈತರಿಗೆಲ್ಲ [illegible] ಆಸ್ತಿಗಳ ಕುರಿತು ಸುಧಾರಣೆ ಮಾಡು[illegible] ಒಪ್ಪಂದವನ್ನು ಮಾಡು[illegible] ಹೊಂದಿಕೆಯಾಗಿರುವವಂತೆ.

[illegible] ಕಾಲವಳಿಯಲ್ಲಿ ಕಳೆದ ವರುಷ ಹಾವಳಿಯನ್ನುಂಟುಮಾಡಿದ [illegible] ಬಂದರು. ಸಿಂಗಪೂರದಿಂದ [illegible] ಹೊಂಗಕೊಂಗಿಗೆ ಹೋಗುತ್ತಿದ್ದ [illegible] ಬ್ರಿಟಿಷ ಹಡಗಿನಲ್ಲಿ ನಾಲ್ವತ್ತು ಕಳ್ಳರು ಪ್ರಯಾಣಿಕರ [illegible] ಹಾದಿಯಲ್ಲಿ ಕಳ್ಳರು ತೊಡಗಳನ್ನು ಗುಂಡು ಹೊಡೆದು [illegible] ಇತರ ಅಧಿಕಾರರನ್ನು ಬೀಳಿಸಿ ಪ್ರಯಾಣಿಕರ [illegible] ದೋಚಿ ಎತ್ತಲೋ ಮಾಯವಾದರಂತೆ.

ವಿಮಾನ [illegible] ಅಂದರ್ ಸೆಕ್ರೆಟರಿಯಾಗಿರುವ ಸರ್. [illegible] ಬವರು ೧೬೦೦೦ ಮೈಲು ಪ್ರಯಾಣಕ್ಕಾಗಿ ಇಂಡಿಯಾ[illegible] ಹೊರಟಿರುವರು. ಇವರ ಹಾದಿಯಲ್ಲಿ ೨೦ ಬ್ರಿಟಿಷ್ ಸ್ಟೇಷನುಗಳಲ್ಲಿ ಇಳಿಯಲಿರುವರು.

—ಜಪಾನಿನಲ್ಲಿ ಜೂರಿ ಕ್ರಮವನ್ನು ಕೈಕೊಂಡಿರುವರು. [illegible] ವರೆಗೆ ಅಲ್ಲಿ ಇರಲಿಲ್ಲ.

[illegible] ಎಂಬವನು [illegible] ಗೊಳಿಸಲ್ಪಟ್ಟು ವ್ಯಕಸಲ್ಪನು. ಆತನ ಹಿರಿಯ [illegible] ಕೊಲ್ಲಲ್ಪಟ್ಟಿದ್ದನು. [illegible] ಒಪರೇಶನು ಮಾಡಿಸು[illegible] ಯಲ್ಲಿ ಸತ್ತುಹೋಗಿದ್ದನು.

ಕೆನಿಯಾ [illegible] ಪತ್ರಿಕೆಯು [illegible] ಹಿಂದೂಸ್ಥಾನದ ಪತ್ರಿಕೆಗಳ ಸಂಪಾದಕರು [illegible] ರಾದರೆ ಅವರು ಅಲ್ಲಿಯ ವರೆಗೆ ಧರ್ಮಾರ್ಥವಾಗಿ ಹೋಗಿ ಬರುವ ಅವರು ವ್ಯವಸ್ಥೆಯನ್ನು ಮಾಡುವರು ಎಂದು

[illegible]ದೇಶ ವರ್ತಮಾನ.

[illegible] ಇಂಡಿಯನ್ ರೈಲ್ವೆಯ ಕೆಲಸಗಾರರ ನಾಯಕನಾದ [illegible] ಎಂಬವನು ಒಂದು ಕೆಟ್ಟ ಬಂಗಡದ ಮುಖ್ಯಸ್ಥ [illegible] ಆತನಿಗೆ ಕಲ್ಕತ್ತದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು [illegible] ಶಿಕ್ಷೆಯನ್ನು ವಿಧಿಸಿದರು ಎಪ್ಪೀಲು ಮಾಡ[illegible] ಆತನನ್ನು ಬಿಟ್ಟುಬಿಟ್ಟರು. ಇದರ ಮೇಲೆ [illegible]ದವರು ಆತನನ್ನು ಕೈದು ಮಾಡಿಸಿದರು

— [illegible]ದಲ್ಲಿ ದೇವಸ್ಥಾನದಿಂದ ಆನೆಯೊಡನೆ ಮೆರವಣಿಗೆ [illegible] ಹೋಗುತ್ತಿರುವಾಗ ಆನೆಯು ಅಕಸ್ಮಾತ್ತಾಗಿ [illegible] ಉದ್ರೇಕಿಸಿ ಸಿಕ್ಕಿದ ಸಾಗಿಗಳನ್ನು ಧ್ವಂಸಪಡಿಸಿ ಜೀವ [illegible] ಬಹು ಅನಾಹುತಗಳನ್ನು ಉಂಟುಮಾಡಿತು [illegible] ಆನೆಯನ್ನು ಬಂಧಿಸಿ ಕಾಡಿಗೆ ಕೊಂಡುಹೋಗ [illegible] ಪಡಬೇಕಾಯಿತು

— [illegible] ಜಿಲ್ಲೆಯ ಸಾಸ್ವಾದ ಮುನಿಸಿಪಾಲಿಟಿಯಲ್ಲಿ ತೆರಿಗೆಯು [illegible] ಹಣವಿಲ್ಲದಿರುವದರಿಂದಲೂ, ಕೆಲಸ ಸರಿಯಾಗಿ ನಡೆಯು[illegible] ಮುನಿಸಿಪಾಲಿಟಿಯವರು ೧೯೪೧ನೇ ಇಸವಿಯ ವರೆಗೆ [illegible] ಮಾಡಬೇಕೆಂದು ಮುಂಬಾಯಿ ಸರಕಾರದವರು ಹುಕುಮು [illegible]ರುವರು.

— [illegible]ಬದ ಫ್ಲಡ್ ರಿಲೀಫ್ ಫಂಡಿಗೆ ನವ್ಯ ವ್ಯಾಸರಾಯರು [illegible] ರೂಪಾಯಿಗಳನ್ನು ದಾನವಾಗಿ ಕೊಟ್ಟಿರುವರು

— ಕುರುಕ್ಷೇತ್ರದ ಪವಿತ್ರವಾದ ಕೆರೆಗಳನ್ನೂ ಇತರ ಪುರಾಣ ಪ್ರಸಿದ್ಧವಾದ ಸ್ಥಳಗಳನ್ನೂ ಸಂರಕ್ಷಿಸುವ ಬಗ್ಗೆ ಏರ್ಪಡಿಸಿದ ಸಂಘಕ್ಕೆ [illegible] ರೂಪಾಯಿಗಳನ್ನು ಕೊಟ್ಟಿರುವರು ಕುರುಕ್ಷೇತ್ರವನ್ನು ಅವರು ಸಂದರ್ಶಿಸಿ ಬಹು ಆನಂದಪಟ್ಟರು.

— ಕೈಟ್ಟಾದ ಒಬ್ಬ ಜಾಡಮಾಲಿಗೆ ಸೋಡ್ತಿಯಲ್ಲಿ ೧೨೫,೦೦೦ ರೂಪಾಯಿಗಳು ದೊರಕಿವೆಯಂತೆ ಆತನಿಗೆ ತಿಂಗಳಿಗೆ ೧೪ ರೂಪಾಯಿ ಸಂಬಳವಿದ್ದಿತು

— ಕಳೆದ ವಾರದಲ್ಲಿ ಲಕ್ನೋವಿನಲ್ಲಿ ಬುದ್ಧನ ವಾರ್ಷಿಕ ವರ್ಧಂತಿ ಉತ್ಸವವು ಆಚರಿಸಲ್ಪಟ್ಟಿತು ಈ ಸಂದರ್ಭದಲ್ಲಿ ಬುದ್ಧನ ವಿಶೇಷ ಕಾರ್ಯಗಳ ಕುರಿತು ಚಿಲೋ ಭಾಷಣಗಳು ನಡೆದುವು

— ಮುಂಬಾಯಿ ಗಿರಣಿಯ ಮುಷ್ಕರಗಾರರೊಳಗೂ ಗಿರಣಿ ಅಧಿಕಾರಿಗಳೊಳಗೂ ಕಳೆದ ವಾರ ನಡೆಯಬಹುದೆಂದು ತೋರಿದ ರಾಜಿಪಂಚಾಯಿತಿಯು ನಿಷ್ಫಲವಾಯಿತು ಶೇಕಡಾ ೮೦ಯಷ್ಟು ಸಂಬಳವಿಳಿಸಬೇಕೆಂದು ಅಧಿಕಾರಿಗಳು ಹೇಳುವರಾದರೂ, ಕೆಲಸಗಾರರು ಒಪ್ಪುವುದಿಲ್ಲ ಶೇಕಡಾ [illegible]ಯನ್ನು ಕಡಿಮೆಮಾಡಬಹುದೆಂದು ಕೆಲಸಗಾರರು ಹೇಳುವರಾದರೂ ಅಧಿಕಾರಿಗಳೊಪ್ಪುವದಿಲ್ಲ ಅಂತೂ ಇಂತೂ ಸಂಧಿಯಾಗುವ ಸಂಭವವಿಲ್ಲ

— ಹೈದರಾಬಾದದ ಸಮೀಪ ಸಿಕ್ಕರಿಗೂ ಮುಸಲ್ಮಾನರಿಗೂ ಬಲವಾದ ಜಗಳವಾಯಿತು ಎರಡು ವರುಷಗಳ ಹಿಂದೆ ಸಿಕ್ಕರಿಗೆ ಪವಿತ್ರವಾದ ಒಂದು ಸ್ಥಳದಲ್ಲಿ ಮಹಮ್ಮದೀಯರು ತಮ್ಮ ಫಕೀರನೊಬ್ಬನನ್ನು ದಫನಮಾಡಿದ್ದರು ಅಂದಿನಿಂದ ಪರಸ್ಪರರೊಳಗೆ ವೈಮನಸ್ಸು ಬೆಳೆದು ಜಗಳಗಳಾಗುತ್ತಲೇ ಇದ್ದವು ನೊನ್ನೆಯ ಜಗಳವು ಮಾತ್ರ ವಿಶೇಷವಾಗಿ ಪರಿಣಮಿಸಿ ಹಲವರಿಗೆ ಪ್ರಾಣ ನಷ್ಟವುಂಟಾಯಿತು

— ಪಂಜಾಬಿನ ರಾಜಕೀಯ ಪರಿಷತ್ತಿನ ಮಂದಿರದಲ್ಲಿಯೇ ರೈತರ ಒಂದು ಪರಿಷತ್ತು ಲಾಹೋರಿನ ನೇಶನಲ್ ಕೋಲೇಜಿನ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಜರಗಿತು

— ಥಾನಾ ಜಿಲ್ಲೆಯ ಕರ್ಜಾಯಿ ನದಿಯಲ್ಲಿ ಒಂದು ದೋಣಿಯು ಕವಚಿ ಬಿದ್ದು ನಾಲ್ವರು ನೀರಿಗೆ ಆಹುತಿಯಾದರು ನದಿಯಲ್ಲಿ ನೆರೆ ಬಂದಿದ್ದರೂ ಮೂವರು ಎಂಗ್ಲೋ ಇಂಡಿಯನರು ತಮ್ಮ ಸ್ನೇಹಿತರ ಬೋಧನೆಯನ್ನು ತಿರಸ್ಕರಿಸಿ, ನದೀ ವಿಹಾರಕ್ಕಾಗಿ ಒಂದು ದೋಣಿಯಲ್ಲಿ ಕುಳಿತು ಇನ್ನೊಬ್ಬನೊಂದಿಗೆ ಹೊರಟರು ಮಧ್ಯದಲ್ಲಿ ದೋಣಿಯು ಮುಳುಗಿ ಮೂವರು ಸತ್ತುಹೋದರು ಒಬ್ಬನ ಪ್ರಯಾಸದಿಂದ ದಡವನ್ನು ಸೇರಿದನು.

— ಮುಂಬಾಯಿಯ ಸಮೀಪ ಶಿಕಾರಿ ಮಾಡುತ್ತಾ ಹೊಡೆದ ಗುಂಡು ಒಬ್ಬ ಹದಿನಾರು ವರುಷ ಪ್ರಾಯದ ಹುಡುಗನಿಗೆ ತಗಲಿ ಹುಡುಗನು ಸತ್ತುಹೋದನು

— ಬೆಂಗಳೂರಿನಲ್ಲಿ ಗಿರಣಿಯ ಕೂಲಿಗಳ ಫ್ಲಳಿತ ಶನಿವಾರ ಭಜನೆಯನ್ನು ಮಾಡುತ್ತಾ ಮಾರ್ಗದಲ್ಲಿ ಹೋಗುತ್ತಿರುವಾಗ ಮುಸಲ್ಮಾನರ ಕುಳಿತ ಒಂದು ಜಟ್ಕಾ ಬಂಡಿಯು ಎದುರ ಬಂದಿತು ಅವರೊಳಗೆ ಜಗಳವಾಗಿ, ಕೊನೆಗೆ ಹೇಗಾದರೂ ಸಮಾಧಾನವುಂಟಾಯಿತು

— ಪಾಲಘಾಟಿನಲ್ಲಿ ಕುಡಿಯಲಿಕ್ಕೆ ನೀರಿಲ್ಲವು ಬೆಳೆಗಳು ಎಲ್ಲವೂ ಹಾಳಾಗಿರುವುದರಿಂದ ಬರಬೀಳುವ ಸಂಭವವಿದೆಯೋ ಏನೋ!

— ಬಿಜಾಪುರದ ದೇಶಭಕ್ತ ಎಂಬ ಪತ್ರಿಕೆಯ ಸಂಪಾದಕನನ್ನು ಕೈದು ಮಾಡಿರುವರು. ಸಪ್ಟಂಬರ ಮೂರನೇ ತಾರೀಕಿನ ದಿನ ಪತ್ರಿಕೆಯಲ್ಲಿ ಸಂಪಾದಕರು ಸೈದ್ದಾನಂದರಿಗೆ ಸಂಬಂಧಿಸಿದ ಲೇಖನವನ್ನು ಬರೆದುದು ತಪ್ಪಾಯಿತೆಂದು ಸರಕಾರದವರ ಅಭಿಪ್ರಾಯ

— [illegible]ರಿನ ರೈಲು ಅಪಘಾತದ ಸಂಬಂಧವಾಗಿ ಕೈದುಮಾಡಿದ ಅಬ್ದುಲ್ ರೆಹಮಾನ್ ಮತ್ತು ಇತರ ೧೭ ಜನರನ್ನು ಬಿಡುಗಡೆ ಮಾಡಿರುವರು

— ಮುಂಬಾಯಿಯ ಬೆಂಡಿಬಜಾರ ಎಂಬ ವಸ್ತಿಯಿದ್ದ ಜನಸಂದಣಿಯ ಮಾರ್ಗದಲ್ಲಿದ್ದ ಮೂರು ಮಾಳಿಗೆಗಳ ಒಂದು ಮನೆಗೆ ಬೆಂಕಿ ಹಿಡಿಯಿತು. ಮನೆಯಲ್ಲಿ ಹಿಂದುಗಳೇ ವಾಸಿಸುತ್ತಿದ್ದರು ಮುಸಲ್ಮಾನರು ಬೆಂಕಿ ನಂದಿಸಲು ಪ್ರಯತ್ನಿಸಿ, ಹಲವು ಹೆಂಗಸು ಮಕ್ಕಳನ್ನು ರಕ್ಷಿಸಿದರು. ಮೂರನೇ ಮಾಳಿಗೆಯು ಸುಟ್ಟುಹೋಗುವ ವರೆಗೆ ಬೆಂಕಿಯನ್ನು ನಂದಿಸಲಾಗಲಿಲ್ಲ.

— ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರ ಸಭೆಯೊಂದು ಅಕ್ಟೋಬರ ೧೫ಕ್ಕೆ ಕೂಡಬೇಕೆಂದು ನಿಶ್ಚಯವಾಗಿದ್ದಿತು. ಆದರೆ ಆ [illegible] ಕಾರಣದಿಂದ ಅದರ ಸಮಯವನ್ನು ಮುಂದರಿಸಿಟ್ಟಿರುವರು

— ಗುಜ್ರಾನವಾಲಾ ಎಂಬಲ್ಲಿ ಒಬ್ಬ ಕೈದಿಯನ್ನು ಮೂವರು ಪೋಲೀಸರು ಹಿಂಡಿಸಿ, ಆತನಿಗೆ ಮರಣವನ್ನುಂಟುಮಾಡಿದ ಸಲುವಾಗಿ ಮೆಜಿಸ್ಟ್ರೇಟರು ಅವರಿಗೆ ಏಳು, ನಾಲ್ಕು ಮತ್ತು ಮೂರು ವರುಷಗಳ ಕಠಿಣ ಸಜೆಯನ್ನು ವಿಧಿಸಿರುವರು

— ನೀಲ್‌ಬಾ ಎಂಬಲ್ಲಿ ಹಲವು ಕೈದಿಗಳನ್ನು ಕೋಳಗಳಿಂದ ಬಂಧಿಸಿ ಪೋಲೀಸ್ ಪಹರೆಯಿಂದ ಇಟ್ಟಿದ್ದರು ನಾಲ್ವರು ಪೋಲೀಸರ ಅಕೃತ್ಯಗಳನ್ನು ಕಂಡು ತಡೆಯಲಾರದೆ ೧೬ ಕೈದಿಗಳು ಪೋಲೀಸರನ್ನು ಆಕ್ರಮಿಸಿ ಅವರನ್ನು ತುಂಬಾ ಜಖಮುಪಡಿಸಿದರು ಪೋಲೀಸರನ್ನು ಆಸ್ಪತ್ರೆಗೆನೇ ಕೊಂಡುಹೋಗಬೇಕಾಯಿತು

— ಕಲ್ಕತ್ತದಲ್ಲಿ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರಿಂದ ವ್ಯವಸ್ಥಾಪಿಸಲ್ಪಟ್ಟ ಖಾದಿ ವಸ್ತು ಪ್ರದರ್ಶನವನ್ನು ಶ್ರೀ ಸಿ ಆರ್ ದಾಸರವರ ಪತ್ನಿಯಾದ ಶ್ರೀಮತಿ ವಸಂತಿ ದೇವಿಯವರು ತೆರೆದರು ಶ್ರೀ ಸುಭಾಸ ಚಂದ್ರಬೋಸರು ರಾಷ್ಟ್ರೀಯ ಧ್ವಜವನ್ನೇರಿಸಿದರು.

— ಖರಗಪುರದ ಕಲಹವು ಸ್ವಲ್ಪ ಮಟ್ಟಿಗೆ ನಿವಾರಣವಾಗಿದೆಯೆನ್ನಬಹುದು ಹಿಂದುಗಳೂ ಮುಸಲ್ಮಾನರೂ ಒಟ್ಟಾಗಿ ಕೆಲಸಕ್ಕೆ ಬರುತ್ತಿರುವರು

— ನಾಸಿಕದಲ್ಲಿಯೂ ಗಣಪತಿಯ ಗಲಾಟೆ ಮುಸಲ್ಮಾನರ ಮಸೀದಿ ಎದುರು ಮೆರವಣಿಗೆಯನ್ನು ಕೊಂಡೊಯ್ಯುವಾಗ ಸಂಗೀತವನ್ನು ಮಾಡುವದಿಲ್ಲವೆಂದು ಮೆಜಿಸ್ಟ್ರೇಟರಿಗೆ ಹಿಂದುಗಳು ಪ್ರತಿಜ್ಞೆಯನ್ನು ಮಾಡಿದ್ದರು ಇದಕ್ಕೆ ವಿರೋಧವಾಗಿ ಹಿಂದೂಗಳು ವರ್ತಿಸಿದ್ದರಿಂದ ಮುಸಲ್ಮಾನರು ಸಿಟ್ಟಿಗೆದ್ದು ಮಸೀದಿಯೊಳಗಿನಿಂದಲೇ ಕಲ್ಲುಗಳನ್ನು ಬಿಸಾಡಿ ಹಿಂದುಗಳನ್ನು ದಿಗಿಲಗೊಳಿಸಿದರು ಅವರು ಹೊರಗೆ ಬಂದು ಯಾವ ಗಲಭೆಯನ್ನು ಉಂಟುಮಾಡಲಿಲ್ಲ

— ಮೈಸೂರಿನ 'ತಾಯಿನಾಡು' ಮತ್ತು ಮೈಸೂರ್ ಸ್ಟಾರ್' ಎಂಬ ಪತ್ರಿಕೆಗಳು ದೈನಿಕ ಪತ್ರಿಕೆಗಳಾಗಿ ಮಾರ್ಪಟ್ಟುವೆಂದು ವರ್ತಮಾನವಿದೆ

— ಮೈಸೂರಿನಲಿ ಬ್ರಾಹ್ಮಣೇತರರ ಒಂದು ಪರಿಷತ್ತನ್ನು ಜರಗಿಸಬೇಕೆಂದು ನಿಶ್ಚಯವಾಗಿತ್ತು ಆದರೆ ಸದ್ಯದ ಮೈಸೂರಿನ ಪರಿಸ್ಥಿತಿಯಲ್ಲಿ ಇಂತಹ ಪರಿಷತ್ತನ್ನು ಜರಗಿಸುವದು ಅಪಾಯಕರವಾಗಬಹುದಾದ ಕಾರಣ ಪರಿಷತ್ತು ಕೂಡುವದು ಬೇಡವೆಂದು ಒಬ್ಬ ಚಾಲಕರ ಅಭಿಪ್ರಾಯ

ನೀಲಗಿರಿಯಲ್ಲಿ ನೀರು ಕಡಿಮೆಯಾಗಿರುತ್ತದೆ ಈಗ ಸದ್ಯಕ್ಕೆ ಕುಡಿಯಲು ನೀರ ಸಾಕಷ್ಟಿದೆಯಾದರೂ ಇನ್ನು ಕೆಲವು ಸಮಯದೊಳಗೆ ನೀರೆಲ್ಲವೂ ಮುಗಿದು ಕಷ್ಟಪಡಬೇಕಾಗುವದೋ ಎಂದು ಸಂಶಯವಿದೆ

— ಸಿಮ್ಲಾದಲ್ಲಿ ಆಲ್ ಇಂಡಿಯಾ ಕೋಪರೇಟಿವ್ ಕೊನ್ಫರೆನ್ಸ್ ಜರಗಿತು ಹಲವು ನಿರ್ಣಯಗಳು ಅಲ್ಲಿ ಮಂಜೂರಾತಿಯನ್ನು ಹೊಂದಿದವು

ಲಕ್ನೋ ಪರಿಷತ್ತಿನಲ್ಲಿ ಆದ ನಿರ್ಣಯಗಳನ್ನು ಮುರಿದಿಕ್ಕುವ ಸಲುವಾಗಿ ಮುಸಲ್ಮಾನ ಧುರೀಣರನೇಕರು ಒಂದು ಪ್ರತ್ಯೇಕ ಪರಿಷತ್ತನ್ನು ಜರಗಿಸಬೇಕೆಂದು ನಿಶ್ಚಯಿಸಿದ್ದರು ಆದರೆ ಮಹಮೂದಾಬಾದದ ಮಹಾರಾಜರು ಈ ನಿಶ್ಚಯವನ್ನು ಖಂಡಿಸಿ ಪ್ರತಿಯೊಬ್ಬ ಮುಸಲ್ಮಾನನೂ ಲಕ್ನೋ ಪರಿಷತ್ತಿನ ನಿರ್ಣಯಗಳನ್ನು ಅಂಗೀಕರಿಸಬೇಕೆಂದು ಸೂಚನೆಯನ್ನಿತ್ತಿರುವರು

— ಪಿರಿ ಎಂಬಲ್ಲಿ ಪಂಡಿತ ಜವಾಹಿರಲಾಲ ನೆಹರುಗಳವರ ಅಧ್ಯಕ್ಷತೆಯಲ್ಲಿ ಒಂದು ಪರಿಷತ್ತು ಜರಗಿ ಸ್ವಾವತ್ ಕಮಿಶನನ್ನು ಬಹಿಷ್ಕರಿಸಬೇಕೆಂಬ ಠರಾವುಗಳಾದವು ಮತ್ತು ಎಲ್ಲಾ ಪಕ್ಷಗಳ ಪರಿಷತ್ತಿನಲ್ಲಿ ಆದ ನಿರ್ಣಯಗಳನ್ನು ಇವರು ಸಮರ್ಥಿಸಿದರು

ದಕ್ಷಿಣ ಕನ್ನಡ.

ಮಂಗಳೂರು: — ಮಂಗಳೂರ ಮುನಿಸಿಪಾಲಿಟಿಯ ಸದಸ್ಯರ ಚುನಾವಣೆಯು ನಡೆದು ಉಮೇದುವಾರರಿಗೆ ಕೆಳಗೆ ನಮೂದಿಸಿದಂತೆ ವೋಟುಗಳು ದೊರೆತವು

ಕೊಡಿಯಾಲಬೈಲು ವೆಸ್ಟ್ ವಾರ್ಡಿಗೆ ತಾ ೨೪ನೇ ಸೋಮವಾರ ದಿನ ಚುನಾವಣೆಯು ನಡೆದ ಉಮೇದುವಾರರಾಗಿದ್ದ ಡಾಕ್ಟರ್ ಎಮ್ ನಾಗಪ್ಪಯ್ಯನವರಿಗೆ [illegible] ಮತ್ತು ಶ್ರೀ ಕೆ ಆರ್ ಕಾರಂತ ಎಮ್ ಎಲ್ ಸಿ ಇವರಿಗೆ ೨೩೮ ವೋಟುಗಳು ದೊರೆತವು. ಬೆಲೆಯಿಲ್ಲದ ವೋಟುಗಳು ೯

ಬುರುಡಿನ ಮಾರ್ಕೆಟ್ ವಾರ್ಡಿನ ಚುನಾವಣೆಯು ನಡೆದು ರಾ। ಉಳ್ಳಾಲ ಸಂಜೀವರಾಯರಿಗೆ ೨೦೫ ವೋಟುಗಳು ಡಾ। ಎಲ್ ಪಿ ಫೆರ್ನಾಂಡಿಸರಿಗೆ ೧೩೦ ವೋಟುಗಳೂ ದೊರೆತವು ಬೆಲೆಯಿಲ್ಲದ ವೋಟುಗಳು ೪

ಕೋರ್ಟು ವಾರ್ಡ ಚುನಾವಣೆಯಲ್ಲಿ ರಾಯ ಸಾಹೇಬ ಎ ಜೆ ಲೋಬೊ ಬಿ ಎ ಬಿ ಎಲ್ ಇವರಿಗೆ ೧೦೮ ವೋಟುಗಳೂ ಮಿ ಎ ಸಿ ಗೊನ್ಸಾಲ್ವಿಸರಿಗೆ ೨ ವೋಟುಗಳೂ ದೊರೆತವು ಬೆಲೆಯಿಲ್ಲದ ವೋಟು ೧

ಜೆಪ್ಪು ವಾರ್ಡಿನ ಚುನಾವಣೆಯಲ್ಲಿ ರಾ। ಬಿ ಎನ್ ಡಿ ಸೋಜರವರಿಗೆ ೩೭೩ ವೋಟುಗಳೂ, ಮಿ ನೊರೊಂಞಾರವರಿಗೆ ೪೫೩ ವೋಟುಗಳೂ ದೊರೆತವು ಬೆಲೆಯಿಲ್ಲದ ವೋಟುಗಳು ೧೩

ಗೋಳಿಕಟ್ಟೆ ವಾರ್ಡಿನ ಚುನಾವಣೆಯಲ್ಲಿ ವಿರೋಧಪಕ್ಷದವರಿಲ್ಲದೆ ರಾ। ಮಣೇಲ್ ಅಣ್ಣಪ್ಪನಾಯಕರೂ, ರಾ। ಬಾವಾ ಸಾಹೇಬರೂ, ಇಪಿ ಸಿ. ಮಹಮ್ಮದರವರೂ ಚುನಾಯಿಸಲ್ಪಟ್ಟರು ಒಟ್ಟಾರೆ ವಿಜಯಿಗಳಾದವರು, ಕೊಡಿಯಾಲಬೈಲ್ ವೆಸ್ಟ್ ವಾರ್ಡಿಗೆ ಡಾ। ಎಮ್ ನಾಗಪ್ಪಯ್ಯ ಮಾರ್ಕೆಟ್ ವಾರ್ಡಿಗೆ ರಾ। ಉಳ್ಳಾಲ ಸಂಜೀವ ರಾವ್, ಕೋರ್ಟು ವಾರ್ಡಿಗೆ ರಾವ್‌ಸಾಹೇಬ ಎ ಜೆ ಲೋಬೊ. ಜೆಪ್ಪು ವಾರ್ಡಿಗೆ ಮಿ ನೊರೊಂಞಾ,

ಇದೇ ಅಕ್ಟೋಬರ ತಿಂಗಳಿನಲ್ಲಿ ಮಂಗಳೂರು ಮುನಿಸಿಪಾಲಿಟಿಯ ದೀಪಗಳು ತಾರೀಖು ೧೧, ೧೨, ೧೩, ೧೪ ಮತ್ತು ೧೫ ಈ ದಿನಗಳಲ್ಲಿ ಇಡೀ ರಾತ್ರೆಯೂ ಉಳಿದ ದಿನಗಳಲ್ಲಿ ಸಮಯೋಚಿತ ಸಾರವೂ ಉರಿಸಲಾಗುವದು ಗ್ಯಾಸ್ ದೀಪಗಳನ್ನು ರಾತ್ರೆ ೧೨ ಘಂಟೆಯ ವರೆಗೂ ಸ್ಮಶಾನ ದೀಪ, ಬೀಕನ್ ದೀಪ ಮತ್ತು ಅಪಾಯಸೂಚಕ ದೀಪಗಳನು ಇಡೀ ರಾತ್ರೆಯೂ ಉರಿಸಲಾಗುವದು.

— ದ ಕ. ಜಿಲ್ಲಾ ಪರಿಷತ್ತಿನ ಸ್ವಾಗತ ಮಂಡಲಿಯ ದ್ವಿತೀಯ ಮಹಾಸಭೆಯು ಇದೇ ಅಕ್ಟೋಬರ ತಾ ೭ನೇ ಅಪರಾಹ್ನ ಘಂಟೆ ೩ ಕ್ಕೆ ಮಂಗಳೂರಲ್ಲಿ ಜಿಲ್ಲಾ ಕಾಂಗ್ರೆಸು ಕಮಿಟಿ ಕಚೇರಿಯಲ್ಲಿ ಜರಗುವದು

ಮಂಗಳೂರು ಸರ್ಕಲ್ ಸಹಕಾರಿ ಸಂಘಗಳ ಅಸಿಸ್ಟಂಟ್ ರಿಜಿಸ್ಟ್ರಾರರವರ ಆಫೀಸಿನಲ್ಲಿ ಇನ್‌ಸ್ಪೆಕ್ಟರರ ಮತ್ತು ಸುಪರ್‌ವೈಜರರ ಸಭೆಯು ತಾರೀಕು ೩-೧೦-೧೯೨೮ರಿಂದ ತಾರೀಕು ೫-೧೦-'೨೮ರ ವರೆಗೆ ನಡೆಯಿತು.

ಕೊರೊನೇಶನ್ ಕ್ರಿಕೆಟ್ ಕಪ್ ಮೇಚಿನಲ್ಲಿ ನೂರ ಸ್ಕೋರು ಗಳನ್ನು ತೆಗಿಯದ ಆಟಗಾರನಿಗೆ ಡಿಸ್ಟ್ರಿಕ್ಟ್ ಬೋರ್ಡ ಮೆಂಬರರಾದ ರಾ। ನರಿಕೊಂಬು ರಾಮರಾಯರು ಒಂದು ಸುವರ್ಣ ಪದಕವನ್ನು ಕೊಡಲಿರುವರೆಂದು ತಿಳಿದುಬರುತ್ತದೆ

ಕಾಲೇಜ್ ಹೆಡ್ ಅಕೌಂಟಂಟ್ ಶ್ರೀ ಕೃಷ್ಣಾಡ ನರಸಿಂಗರಾಯರ ರಜೆಗಾಗಿ ಹೊಂದಿದವರು ಅವರ ಬದಲಿಗೆ ಶ್ರೀ ಹೊ ನರಸಿಂಗರಾಯರವರ ಆ ಸ್ಥಾನಕ್ಕೆ ಬರುವರು

ಹಜೂರ್ ಶಿರಸ್ತೆದಾರರಾಗಿ ಶ್ರೀ ಎಮ್ ಗಣೇಶರಾಯರವರೂ, ಶ್ರೀ ಎನ್ ಕೃಷ್ಣಪ್ಪನವರ ಮಂಗಳೂರು ತಹಸೀಲದಾರರಾಗಿಯೂ ನೇಮಕ ಹೊಂದಿರುವರು

ಕಳೆ ಒಂದನೇ ತಾರೀಕಿನಿಂದ ಇಲ್ಲಿಯ ಸೈನ್ ಮೈದಾನಿನಲ್ಲಿ ಬೇರೆ ಬೇರೆ ಶಾಲೆಗಳೊಳಗೆ ಜೂನಿಯರ್ ಕ್ರಿಕೆಟ್ ಪಂದ್ಯಾಟಗಳು ನಡೆದವು [illegible] ಕಾಂಟಿನೆಂಟಲ್ ಮತ್ತು ಮಿಶನ್ ಹ್ಯಾಸ್ಕೂಲು ಮತ್ತು ಗಣಪತಿಯೊ ಸರ್ಕಾರಿ ಶಾಲೆಗಳೊಳಗೆ ಪಂದ್ಯಾಟವು ನಡೆದು ಮಿಶನ್ ಹ್ಯಾಸ್ಕೂಲು ವಿಜಯಿಯಾಯಿತು ತಾರೀಕು ೧೦ನೇ ದಿನ ಗಣಪತಿ ಹ್ಯಾಸ್ಕೂಲು ಮತ್ತು ಕೆನರಾ ಹ್ಯಾಸ್ಕೂಲುಗಳೊಳಗೆ ನಡೆದು ಗಣಪತಿ ಹ್ಯಾಸ್ಕೂಲು ಗೆದ್ದಿತು ತಾರೀಕ ೩ನೇ ಬುಧವಾರ ಗವರ್ನಮೆಂಟ್ ಕೊಲೇಜು ಮತ್ತು ಎಲೋಸಿಯಸ್ ಕೊಲೇಜುಗಳೊಳಗೆ ಪಂದ್ಯಾಟವು ನಡೆದು ಗವರ್ನಮೆಂಟ್ ಕೊಲೇಜಿನವರು ವಿಜಯಿಗಳಾದರು

ಮಂಗಳೂರು ತಾಲೂಕ ಕೊಂಗ್ರೆಸು ಕಮಿಟಿಯ ಒಂದು ಜರೂರು ಮಹಾಸಭೆಯು ಇದೇ ಬರುವ ಅಕ್ಟೋಬರ ತಾ ೧೫ನೇ ಸೋಮವಾರ ಅಪರಾಹ್ನ ಘಂಟೆ ೫ಕ್ಕೆ ಮಂಗಳೂರು ಜಿಲ್ಲಾ ಕಾಂಗ್ರೆಸು ಕಮಿಟಿ ಕಚೇರಿಯಲ್ಲಿ ಜರಗುವುದು [illegible] ಬರಬೇಕಾಗಿ ವಿನಂತಿ

ಕಾರ್ಯಕ್ರಮ ೧) ಬರುವ ಕಲ್ಕತ್ತಾ ಕೊಂಗ್ರೆಸಿಗೆ ಪ್ರಾಂತಿಕ ಕಮಿಟಿಗೆ ಮತ್ತು ಜಿಲ್ಲಾ ಕಮಿಟಿಗೆ ಪ್ರತಿನಿಧಿಗಳ ಆರಿಸುವಿಕೆ ೨) ಲೆಕ್ಕಪತ್ರ ಶೋಧಕರ ನೇಮಕ ೩) ಸಭ್ಯರು ತಾ ೧೫ ೧೦ '೨೮ರ ಒಳಗೆ ಬರಬಹುದಾದ ಸೂಚನೆಗಳ [illegible] ೪) ಅಧ್ಯಕ್ಷರ ಅನುಮತಿಯಿಂದ ಸಭೆಯಲ್ಲಿ [illegible] ಇತರ ಜರೂರು ವಿಷಯಗಳು ಎಂದು ಮಂಗಳೂರು ತಾಲೂಕ ಕಾಂಗ್ರೆಸು ಕಮಿಟಿಯ ಕಾರ್ಯದರ್ಶಿಯವರು ತಿಳಿಸುತ್ತಾರೆ

ಮಿ ಇ [illegible] ರಜೆ ಮುಗಿದು ಬಂದ ಮೇಲೆ ಕುಂದಾಪುರ ಡಿವಿಜನ್ ಅಸಿಸ್ಟೆಂಟ್ ಕಲೆಕ್ಟರ್ ಮತ್ತು ಮೆಜಿಸ್ಟ್ರೇಟರಾಗಲು ನೇಮಕಹೊಂದಿರುವರು

ಇಲ್ಲಿಯ ಮುನಿಸಿಪಾಲಿಟಿಗೆ ಕೊಟ್ಟ ರಾಜೀನಾಮೆ [illegible] ಮುಂಬರ [illegible] ಮಸ್ಕರೇನ್ಹಾಸರವರು ತಮ್ಮ [illegible] ರಾಜೀನಾಮೆಯನ್ನು ಕೊಟ್ಟಿರುವರೆಂದು ತಿಳಿಯುತ್ತದೆ

ಕುರುಕಾಲು — ಇಲ್ಲಿಯ [illegible] ಮಹೇಶ್ವರಿ ದೇವಸ್ಥಾನಕ್ಕೆ ತಾ ೧೯-೯-೨೮ನೇ ರಾತ್ರಿ ಕಳ್ಳರು ಒಳಹೊಕ್ಕಾಗ, ಕಾವಲಿದ್ದ ಜನರ ಮೋಟ್ರು ಕಾಣಲು ಕಳ್ಳರಿಗೆ ಯಾವ ಸೊತ್ತನ್ನೂ ಕೊಂಡುಹೋಗಲಿಕ್ಕೆ ಸಮಯವಾಗದೆ ಪಲಾಯನ ಮಾಡಿದರು ಅದೇ ರಾತ್ರಿ ಸಮೀಪದಲ್ಲಿದ್ದ ಶ್ರೀ [illegible] ದೇವಸ್ಥಾನಕ್ಕೂ [illegible] ಒಡವೆ ವಸ್ತುಗಳೇನೂ [illegible] ೧೯-೯-೨೮ನೇ ರಾತ್ರಿ ಬೆಳ್ಳಿ [illegible] ಮತ್ತು [illegible] ಒಳಪ್ರವೇಶಿಸಿದರೂ ಸೊತ್ತು ಕಳವಾಗಲಿಲ್ಲ ತಾ ೧೩-೯-೨೮ನೆ ರಾತ್ರಿ ಬೆಳ್ಳಿ ಬುಡಾವತಿ ದೈವಸ್ಥಾನ [illegible] ಕೆಲವು ಹಿತ್ತಾಳೆಯ ಮತ್ತು ಕಂಚಿನ ಸಾಮಾನುಗಳನ್ನು ಕೊಂಡು ಹೋಗಿದರೆ [illegible] ಪೇಟೆಯಲ್ಲಿ [illegible] ಒಳನುಗ್ಗಿ ಚಿಲ್ಲರೆ ಕಳವುಗಳನ್ನು ಮಾಡಿ ಪರಾರಿಯಾದರು ರಾತ್ರಿ ನಿತ್ಯವೂ ನಾಲ್ಕಾರು [illegible] ಬಹಳ ಭದ್ರವಾದ ಕಂಜಾರು ದೇವಸ್ಥಾನಕ್ಕೆ ಪ್ರವೇಶ [illegible] ಕಳ್ಳರ ಗುಂಪು ದೊಡ್ಡದಿರಬಹುದೆಂಬುದಾಗಿ [illegible] ಈಗ ಈ ದೇವಸ್ಥಾನದಲ್ಲಿ ರಾತ್ರಿ ೨೫ ಮಂದಿ [illegible] ಏರ್ಪಾಡು ಆಗಿದೆ ಆದ್ದರಿಂದ ಪೋಲೀಸ್ [illegible] ಕಳ್ಳರ ಗುಂಪನ್ನು ಕುರಿತು ಈ ಕಾಲ [illegible] ಕೊಳ್ಳಬೇಕಾಗಿದೆ

ಸೋಮೇಶ್ವರ — ಇಲ್ಲಿ ಉಳ್ಳಾಲ ರೈಲೆ ಗೇಟಿನ ಬಳಿಯಲ್ಲಿ ಕೆಲವು ದಿವಸದ ಹಿಂದೆ ರಾತ್ರಿಯಲ್ಲಿ ಮಂಜಪ್ಪ [illegible] ಬೀಗ ಮುರಿದು ಒಳಹೊಕ್ಕು ಕಳವು ಮಾಡುತ್ತಿದ್ದ [illegible] ಎಂಬವನನ್ನು ಸವರಿ ಮಂಜಣ್ಣನವರ ಬಹಳ ಜಾಗ್ರತೆಯಿಂದ ಹಿಡಿದು ಪೋಲೀಸರ ವಶಕ್ಕೆ ಕೊಟ್ಟು ನಂಬ್ರ ತನ್ನಿಯಾಗಲಾಗಿ [illegible] ಬ್ಯಾರಿಗೆ ಆರು ತಿಂಗಳ ಸಜೆಯನ್ನು ವಿಧಿಸಲಾಯಿತು

ತಾಳಿಪಾಡಿ — ಇಲ್ಲಿ [illegible] ತಾಲೂಕ ಬೋರ್ಡಿನವರು ಬಂದು ಹುದ್ದೆ ಗಿಯರ ಶಾಲೆಯನ್ನು ತೆರೆದಿರುವರು

ಕಲ್ಲಿಗೆ ಪೊಳಲಿಮಾರ್ಗ — ಈ ಮಾರ್ಗದ ಮೊದಲನೆ ಎರಡು ಮೈಲು ದುರುಸ್ತಿ ಬಗ್ಗೆ ರೂಪಾಯಿ ೭೫೦ ಸೆಂಕ್ಷನಾಗಿರುವುದು ಕಲ್ಲಿಗೆ ಬಂಗ್ಲೆಯಿಂದ ತೆಂಗಿನ ಮರಕ್ಕೆ ಹತ್ತಿದಂತೆ ಮೇಲಕ್ಕೇರುವ ಚಡಾವಿನ ಬದಲಾಗಿ ಸಮತಟ್ಟಾದ ಕೆಳಗಿನ ಭಾಗದ ಗುಡ್ಡೆ ಬದಿಯಿಂದ ಮಾರ್ಗ

ಕರ್ಣಾಟಕ ಎಗ್ಯೂಮಿಕ್ಶ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲ್ಯುಯಂಝಾ, ಬಹು ದಿನದ ಜ್ವರ, ಚಳಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು ಇದರಿಂದ ಬೆವರು ಬಂದು, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ

ದೊಡ್ಡ ಬಾಟ್ಲಿ ಕಿಮ್ಮತು ೧—೪—೦, ಸಣ್ಣದಕ್ಕೆ ೦—೧೪—೦

ಎಲ್ಲ ಕಡೆಗೂ ಔಷಧವನ್ನು ಮಾರುವಗೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು ದಿ ಊಲನ್ ಮಾರ್ಟ್, ಮಂಗಳೂರು	ಕರ್ಣಾಟಕ ಬ್ರದರ್ಸ, ಗಿರಿಗಾಂವ, ಮುಂಬಯಿ

ಮಿತವಾದ ಬೆಲೆಗೆ ಅಮಿತವಾದ ಬೆಳಕು

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.



(ಬಾಡಿಗೆಗೆ ಕೊಟ್ಟು ಲಾಭ ಪಡೆಯು)ವವರಿಗೆ ಅನುಕೂಲಿಸುವ 2,100 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳ, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಗ್ ಯಿತು 800 ಕ್ಯಾಂಡಲ್ ಪವರಿನ ಶೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸುಗಳು, ಪ್ರತಿ ಒಬ್ಬರ ಕೈಲಿ ಹಿಡಿದುಕೊಂಡು ಹೋಗಲು ಅನುಕೂಲಿಸು ವಲಾಂದ್ರಕಾಂತಿ 10 ಕ್ಯಾಂಡಲ್ ಪವರಿನ ಗ್ಯಾಸ ಲ್ಯಾಂಟರ್ನಗಳ ಸ್ಟೌವ್‌ಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು ಎಲೆಕ್ಟ್ರಿಕ್ ಕರೆಯು ಗುಂಡಿಗಳು ಸೋಡಾ ಹುವ್ವುಗಳ ಹುರುಯುಗಳು, ಬ್ಯಾಟರಿಗಳ, ಬೆಂಕಿಯಿಲ್ಲದೆ ಬೀಡಿ ಮತ್ತು ಸಿಗರೆಟ್ ಹಚ್ಚುವ ಎಲೆಕ್ಟ್ರಿಕ್ ದೀಪಗಳ ಮತ್ತು ಇವುಗಳಿಗೆ ಬೇಕಾಗುವ ಸಾಮಾನುಗಳ ಸಹ ಅತಿ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುವವು ದಯವಿಟ್ಟು ಪರೀಕ್ಷಿಸಿ ಸ್ಪಷ್ಟಪಡಿ



ಕೃಪಾ ಪತ್ರದ ಕಡೆಯಿಂದ ಈ ವಿಳಾಸಕ್ಕೆ ಬರೆಯಿರಿ —

ಎ ಆರ್ ಖಲೀಲ್,

ಪೆಟ್ರೋಮ್ಯಾಕ್ಸ ಗ್ಯಾಸ್ ಲೈಟ್ ವ್ಯಾಪಾರಿಗಳು

18-11-27) ನಗರ್ತಪೇಟೆ, ಬೆಂಗಳೂರು ಸಿಟಿ

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು ಲಾಭ, ಜಯ ಕಾರ್ಯಾನುಕೂಲವನ್ನೀಯುವದು ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೩೦೦ ರೂಪಾಯಿ ವರೆಗೆ ದೈವೀಶಕ್ತಿಯು, ಒಂದು ಸಾರಿ ಧರಿಸಿ ನೋಡಿದರೆ ತಮಗೆ ತಿಳಿಯುವದು ಟಪಾಲು ಖರ್ಚು ಬೇರೆ

ಶಿವರಾಮ ಭಟ್ಟ ತೆಂಗಿನಮನೆ,

ಶೆಳ್ಳಿಕೆಲ್ ಪೋಸ್ಟ್ ಕರೂರ್ ಡಿಸ್ಟ್ರಿಕ್ಟ್

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಜಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಕ. ರೂ. ೧ -

ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪

ಬಾಟ್ಲಿವಾಲರ ಕಾಲರ್ ಅಲ್ ಮಿಕ್ಸ್ಚರ್—ಕಲಿಶೂಲ, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೪

ಬಾಟ್ಲಿವಾಲರ ಟೈರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ ಆಣೆ ೧೪

ಬಾಟ್ಲಿವಾಲರ ಕ್ವಿನೀನ ಟೇಬ್ಲೆಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟುಗಳು ಇರುತ್ತವೆ

ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ ರೂ. ೧—೩—೦ ರೂ ೧—೪—೦. ೧—೧೨—೦.

ಬಾಟ್ಲಿವಾಲರ ಹುಳ ಕಡ್ಡಿ ಔಷಧ ರೂ ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ ರೂ ೦—೬—೦. LIBERAL DISCOUNT TO TRADE.

ಕಾರಿನಪಕ್ಕ -CAWASHAPUR, BOMBAY

ಎಲ್ಲಾ ಕಡೆಗಳಲಿ ಡಾ. ಯಚ್ ಎಲ್ ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

ಏಜಂಟರು ಬೇಕಾಗಿದ್ದಾರೆ. Sayani Road. P O Cadell Road Bombay No 14

ಕೇಸರಿಯ ವರ ಲೋಧ್ರ

ಗರ್ಭಾಶಯ ರೋಗನಿವಾರಿಣೀ

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ಪ್ರಸಿದ್ಧವಾದ ಔಷಧವು ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ ಬಂಗಾರಕ್ಕೆ ಸಮಾನವೆಂದೂ ಎಂದೂ ಇನ್ನು ಕೆಲವರು 'ರತ್ನಖಚಿತವಾದ ಆಭರಣ'ವೆಂದೂ, 'ಸರ್ವಾಭೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು

ಈ ಔಷಧರಾಜವನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ

ಇದು ಋತು ಶೂಲೆ, ಋತು ಸ್ರಾವದೋಷ, ಋತು ಸ್ರಾವವು ಹೆಚ್ಚು ಕಮ್ಮಿಯಾಗುವುದು ಋತುವು ನಾನಾ ಬಣ್ಣಗಳಿಂದ ಸ್ರವಿಸುವುದು ಪ್ರದರ (ಬಿಳಿ ಹೋಕು) ರೋಗ ಸೂತಿಕಾವಾತವು ಸಂತಾನಹೀನತೆ ವಾಯು ಪಿಶಾಚಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ಶರೀರವು ಕೃಶವಾಗುವುದು ಅಜೀರ್ಣ ಮಲಬದ್ಧತೆ ಸೊಂಟನೋವು, ಕಾಲುಸೆಳೆತ, ಉಷ್ಣದ ಮೊದಲಾದ ವ್ಯಾಧಿಗಳೂ ಇತರ ಮೂತ್ರವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು

ಈ ಲೋಧ್ರವು ಔಷಧ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು ದೊಡ್ಡ ಸೀಸೆ 1ಕ್ಕೆ 3 ರೂಪಾಯಿ, ಚಿಕ್ಕದು ರೂ 1—10—0

ವಿಳಾಸ — ಕೇಸರೀ ಕುಟೀರಂ,

TELEGRAMS —"KESARI" ಆಯುರ್ವೇದ ಔಷಧಶಾಲಾ P B 702 ಎಗ್ಮೋರು, ಮದರಾಸು.

ಬ್ರಾಂಚ್ — 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರ — ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.



8 × 14 ಇಂಚು ... 3—0—0

ಕ್ರಯ ರೂಪಾಯಿ 3—0—0

ನಂಬರ್ 265, ಮದರಾಸು

ಫ್ಯಾನ್ಸಿ ಲೀವರ್ ಪಾಕೆಟ್ ವಾಚ್.

(15 ಬಹುಮಾನಗಳ ಸಹಿತ ರೂ 4—8—0)

ಈ ಗಡಿಯಾರವು ನವ ಗಣಿ ಸ್ಪ್ರಿಂಗ್‌ದಿಂದ ಕ್ಕೆ ಕ್ಷೇತ್ರವಾಗಿ ತಯಾರಿಸಿ ಇದೆ



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅವಕಾಶವಾಗುವಂತೆ ಚಿಕ್ಕ ಸೈಜಿನಲ್ಲಿ ತಯಾರಿಸಿ, ಹೊರಭಾಗದ ಚಿತ್ರಕೆಲಸ ಮಾಡಲ್ಪಟ್ಟಿರುವುದು ಮತ್ತು ಒಳಗಡೆ ಕೆಲಸವು ಕೆತ್ತಲ್ಪಟ್ಟ ಗಿಲ್ಟ್ ಮಾಡಿರುವದು ಫಾಲ್, ಫೋಲ್ಡಿಂಗ್ ಹಿಂಭಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್‌ಮೆಂಟ್‌ನಿಂದ ಈ ಗಡಿಯಾರವನ್ನು ತಯಾರಿಸಿದೆ ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವದಕ್ಕಾಗಿ ಈ 3 ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು ಬಹುಮಾನಗಳ ವಿವರ:— ಫೌಂಟನ್ ಪೆನ್ 1 ಹೇರಾಯಿಲ್ ಬಾಟಲ್ 1, ವಸ್ತ್ರದ ಗುಂಡಿಗಳು 4 ಪಾಕೆಟ್ ಕನ್ನಡಿ 1, ಗಡಿಯಾರದ ಸರಪಣಿ 1, ಸುವಾಸನೆ ಸೋಪು 1 ಪೆನ್ನಾ ಕತ್ತಿ 1, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ 1, ರೋಲ್ಡ್ ಗೋಲ್ಡ್ ಭಂಗಾರದ ನೆಕ್ಲೇಸ್ ಎಂಬ ಕತ್ತಿನ ಸಾಲ 1, ವಂಕದ ಬಾಚಣಿಗೆ 1, ಕೈಗುಂಡಿಗಳ ಸೆಟ್ 1 ಕೈವಸ್ತ್ರ 1, ಈ 15 ಬಹುಮಾನಗಳು ಮತ್ತು ವಾಚು ಯಾವ 3 ವರ್ಷ ಗ್ಯಾರಂಟಿ ಸಹಿತ

ಗಡಿಯಾರ ಒಂದಕ್ಕೆ ಕ್ರಯ ರೂ. 4—8—0.

THE ENGLISH EMPORIUM,

P. O box 105 MADRAS.

[illegible] ಬರುವ ಅಕ್ಕಿಸಿರುವ ಸಂಕಪ ಹತ್ತಿರ ಕಟ್ಟಿಸಿದರೆ [illegible] ಹರೋದಾಗುತ್ತಿತ್ತು ಮಂಗಳೂರು ತಾಲೂಕು [illegible] ಪ್ರೆಸಿಡೆಂಟರವರು ಇಂಜನಿಯರರೊಡನೆ ಈ ಅವಸ್ಥೆಯನ್ನು [illegible] ಈ ಮಾರ್ಗವನ್ನು ಸರಿಪಡಿಸಿದರೆ ಕೆಲ ವರುಷಗಳಿಂದ [illegible]ಯನ್ನು ಹೋಗಲಾಡಿಸಿದಂತಾಗುವುದು

[illegible] ನಿಡಿಗಲ್ — ಈ ಗ್ರಾಮದ ಪಡುಪಾರ್ಶ್ವ [illegible] ಹೋಗುವ ನೇತ್ರಾವತಿ ನದಿಯ ಮೇಲ್ಗಡೆ ನಿಡಿಗಲ್ [illegible] ವರ್ಗ ಸ್ಥಳದಲ್ಲಿ ಮ ರಾ ರಾ ನಿಡಿಗಲ್ [illegible] ತನ್ನ ಸ್ವಂತ ಖರ್ಚಿನಿಂದ ನೂತನವಾಗಿ ಕಟ್ಟ[illegible] ಶ್ರೀ ಮಹಾ ಗಣಪತಿ ದೇವರನ್ನು ಕಳೆದ [illegible]ರಲ್ಲಿ ಚಿತ್ರಪಾವನ ಬ್ರಾಹ್ಮಣರಿಂದ ಪ್ರತಿಷ್ಠೆ ಮಾಡಿ[illegible] ಎರಡು ಜನ ಬ್ರಾಹ್ಮಣರಿಂದ ದಿವಸಕ್ಕೆ ೨ ಸಲ [illegible] ವ ಪಂಚ ಪರ್ವಗಳು ನಂದಾ ದೀಪ ಸದಾ [illegible] ನಡೆಸಲ್ಪಡುತ್ತವೆ. ಅರ್ಚಕರಿಬ್ಬರಿಗೆ ನಿವಾಸಕ್ಕೆ ಯೋಗ್ಯ [illegible] ಭಾವಣಿ ಮನೆ ಇದೆ ೪೪ ಮುಡಿ ಬೆಳ್ತಿಗೆ ಅಕ್ಕಿ [illegible] ಮತ್ತು ಬೆಲ್ಲ ೯೦ ರೂಪಾಯಿಗಳೂ ಕೂಡಾ [illegible] ನಿಶ್ಚೈಸಿದೆ ಈ ಗ್ರಾಮದಲ್ಲಿ ಲಕ್ಷ್ಮೀನಾರಾಯಣ [illegible] ದೇವಸ್ಥಾನಗಳು ಇರುತ್ತವೆ ಈ ಮಹಾಶಯರ ಸ್ವಂತ [illegible] ಶ್ರೀ ಮಹಾ ಗಣಪತಿ ದೇವರನ್ನು ಪ್ರತಿಷ್ಠೆ ಮಾಡಿ ಮೇಲಿನ ವಿನಿಯೋಗವನ್ನು ಅವರೊಬ್ಬರೇ ನಡಿಸಿಕೊಂಡು ಬರುವುದು ಸ್ತುತ್ಯ ಈ ಮಹಾಶಯರಿಗೆ ಶ್ರೀ ಮಹಾಗಣಪತಿಯು ಆಯುರಾರೋಗ್ಯವನ್ನೂ ಐಶ್ವರ್ಯವನ್ನೂ ಕೊಡಬೇಕಾಗಿ ನಮ್ಮ ಪ್ರಾರ್ಥನೆ

[illegible]: — ಟಿಪ್ಪಾಲು ಇಲಾಖೆಯವರು ಅರ್ಲ ಕ್ಕೊಲ ಮತ್ತು ಸಂಪಿಗೆ ಈ ಮೂರು ಗ್ರಾಮಗಳಿಗೆ ಕೊಯ್ಲದಲ್ಲಿ ಒಂದು ಬ್ರಾಂಚ್ ಪೋಸ್ಟ್ ಆಫೀಸನ್ನು ಗತ ತಾರೀಕಿನಿಂದ ತೆರೆದಿರುವರು

ಕಳ್ಳಿಗೆ ಪೆರೋಡಿ: — ಇದು ಗ್ರಾಮದ ಮಧ್ಯ ಸ್ಥಳವಾಗಿದ್ದು ಜನಭರಿತವಾದ ಪ್ರದೇಶವಾಗಿದೆ ಗ್ರಾಮದವರು ಒಂದು ಶಾಲೆಯನ್ನು ತೆರೆದು ರೆಕಗ್ನಿಶನಿಗೆ ಅರ್ಜಿ ಮಾಡಿದ್ದರು ಇಲ್ಲಿ ಶಾಲೆ ಇಟ್ಟದ್ದು ಎಷ್ಟು ಇನ್ನ ಪೆಕ್ಟರವರಿಗೆ ಸರಿಕಾಣಲಿಲ್ಲವಂತೆ ಈ ಶಾಲೆಯನ್ನು ಇಟ್ಟವರು ಹಿಂದೂಗಳಾಗಿರುತ್ತಾರೆ ಪಾದ್ರಿ ಸಾಹೇಬರು ಇಟ್ಟದ್ದಾದರೆ ಕೂಡಲೇ ರೆಕಗ್ನಯ್ಜ ಆಗುತ್ತಿತ್ತೆಂದು ಕಾಣುತ್ತದೆ ಈ ಶಾಲೆಯಿಂದ ಸುತ್ತುಮುತ್ತಲಿನ ಯಾವ ಶಾಲೆಗೂ ಬಾಧಕವಿಲ್ಲ ಈ ಶಾಲೆಯ ವಿಷಯ ಆಲೋಚಿಸುವುದಕ್ಕಾಗಿ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ಸಿದ್ಧಪಡಿಸಿದ ಪಟ್ಟಿ ಕಾಗದ ಪತ್ರಗಳನ್ನು ಮಂಗಳೂರ ತಾಲೂಕು ಪ್ರೆಸಿಡೆಂಟರವರ ಬಳಿಗೆ ಕಳುಹಿಸಿರುವರು ಮಾನ್ಯ ತಾಲೂಕ್ ಬೋರ್ಡ್ ಪ್ರೆಸಿಡೆಂಟರವರು ಈ ವಿಷಯ ಸ್ಥಳ ತನಿಖೆ ನಡೆಸಿದರೆ ಶಾಲೆಯು ಇಲ್ಲಿ ಎಷ್ಟು ಅಗತ್ಯವಾಗಿದೆ ಎಂದು ತಿಳಿದು ಬರುವುದುಂಟು. ಕೊಡಿಮಜಲು ಶಾಲೆಗಳು ತೆರೆದಂದಿನಿಂದ ಈ ಸ್ಥಳದಲ್ಲಿ ಶಾಲೆಯನ್ನು ಇಡಬೇಕೆಂದು ಗ್ರಾಮದವರು ಸಾಧಿಸುತ್ತಿರುವರು ರಾ ಮಂಗಳೂರು ತಾಲೂಕು ಬೋರ್ಡ್ ಪ್ರೆಸಿಡೆಂಟರು ಗ್ರಾಮದವರ ಮನಸ್ಸನ್ನು ಸಂತೋಷ ಪಡಿಸಿ ಇಲ್ಲಿ ಶಾಲೆ ಸ್ಥಾಪನೆಯಾಗುವಂತೆ ಮಾಡುವುದು ಒಳ್ಳೇದೆಂದು ತೋರುತ್ತದೆ.

ಉಪ್ಪಿನಂಗಡಿ — ಇಲ್ಲಿಂದ ಸಮಾರು ಇಪ್ಪತ್ತು ಮೈಲ ದೂರದಲ್ಲಿರುವ ಶಿರಾಡಿಗೆ ಚಂದಪಟ್ಟಿಯಿಂದೊಬ್ಬ ಮ ದಿಕೇರಿಯಿಂದೊಬ್ಬ ಹೀಗೆ ಇಬ್ಬರು ಯುರೋಪಿಯನರು ಶಿಕಾರಿಗೋಸ್ಕರ ಬಂದಿರುತ್ತಾರೆ ಇವರು ಬರುವಾಗ ಎರಡು ಬರ್ಬಿ ದೋಣಿಗಳನ್ನೂ ತಂದಿರುತ್ತಾರೆ ಇವರಲ್ಲಿ [illegible] ಗಾಳ ಹಾಕಿ ಮೀನಗಳನ್ನು ಹಿಡಿಯುತ್ತಾರೆ ಇವರ ಬಂದೂಕು ತಪ್ಪಿದ ದೂರ ದಿವಸವೇ ಶಿರಾಡಿ ಪಟೇಲರೂ, ಗೆಟಿನವರೂ ಕೂಡಿ ದೊಡ್ಡದೊಂದು ಹೆಬ್ಬುಲಿಯನ್ನು ಸವಾರು ಮಧ್ಯಾಹ್ನ ಒಂದು ಗಂಟೆ ಹೊತ್ತಿಗೆ ಕೊಂದರು ಹುಲಿಯನ್ನು ಕೊಲ್ಲುವಾಗ ತಮ್ಮನ್ನು ಕರೆಯಲಿಲ್ಲವೆಂದು ಯುರೋಪಿಯನರು ಬೇಸರಪಟ್ಟಿರುವರು

ಬಂಟವಾಳ — ಬೆಳಕಂಗಡಿ ಹೆಲ್ತ್ ಇನ್ಸ್‌ಪೆಕ್ಟರರು ಇಲ್ಲಿಯ ಎಲ್ಲಾ ಶಾಲೆಗಳ ಮಕ್ಕಳನ್ನು ಬಂಟವಾಳ ಬೋರ್ಡ್ ಹುಡುಗಿಯರ ಶಾಲೆಯಲ್ಲಿ ಮಾಯಾಲಾಂದ್ರದಲ್ಲಿ ಬೇರೆ ಬೇರೆ ರೋಗಗಳಿಂದ ಉಂಟಾಗುವ ಕೇಡುಗಳ ವಿಷಯ ಸೂಚಿಸುವ ಚಿತ್ರಗಳನ್ನು ತೋರಿಸುವ ಪರಿ ಕಥಾ ರೂಪದಲ್ಲಿ ಜನರಿಗೆ ಮನದಟ್ಟಾಗುವಂತೆ ತಿಳಿಸುವರು

ಇಲ್ಲಿಯ ನೆರೆಗ್ರಾಮವಾದ ಬಡಗಬೆಳ್ಳೂರಿನಲ್ಲಿ ಸಿಡುಬು ರೋಗವು ತಲೆದೋರಿದ್ದುದರಿಂದ ಜಿಲ್ಲಾ ಹೆಲ್ತ್ ಆಫೀಸರರು ಇಲ್ಲಿಗೆ ಬಂದು ಗ್ರಾಮವನ್ನು ಸಂದರ್ಶಿಸಿ ಹೋದರು

ಬಂಟವಾಳ ಪೇಟೆಯಲ್ಲಿ ಸುಮಾರು ಮುಕ್ಕಾಲು ಮೈಲು ವರೆಗೆ ಪೇಟೆಯು ಬೆಳೆದಿದೆ ಆದರೆ ಇಲ್ಲಿ ಒಂದು ಪಾಯಿಖಾನೆಯಿಲ್ಲದೆ ಜನರು ಮಲವಿಸರ್ಜನೆಗಾಗಿ ಬಹಳ ಕಷ್ಟಪಡುತ್ತಿರುವರು ಸರಳಿನಲ್ಲಿ ಇರುವ ಒಂದು ಪಾಯಿಖಾನೆಯಿಂದ ಅಲ್ಲಿ ಏನೂ ಪ್ರಯೋಜನವಿಲ್ಲ ಆ ಪಾಯಿಖಾನೆಯನ್ನು ಅಲ್ಲಿಂದ ತೆಗೆದು ಪೇಟೆಗೆ ಒಯ್ದರೆ ಜನರಿಗೆ ಬಹಳ ಪ್ರಯೋಜನವಾಗುತ್ತಿತ್ತು.

[illegible] — ಈ ಮಂಗಳ ಉಡುಪಿಯಲ್ಲಿ ಜರಗಿದ ವ್ಯಾಯಾಮ ಸ್ಪರ್ಧೆಯಲ್ಲಿ ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯು ಹಿರಿಯ ಮತ್ತು ಕಿರಿಯ ಬಹುಮಾನಗಳೆರಡನ್ನೂ ಪಡೆದ ಸಂತೋಷವು ಜನಜನಿತವಾಗಿದೆ. ಅದರೆ ಬಹುಮಾನಗಳ ಮೆರವಣಿಗೆಯನ್ನು ಶ್ರಾವಲು ಕೆಲವರು ನಿರೀಕ್ಷಿಸುತ್ತಲಿದ್ದರು ನೊನ್ನೆ ಮಂಗಳವಾರ ಅವರ ಆಶೆಯು ಈಡೇರಿತ್ತು [illegible] ಮೆರವಣಿಗೆಯು ಶಾಲೆಯಿಂದ ಹೊರಟು ಮೂರು ಮಾರ್ಗಗಳನ್ನು ಸಂದರ್ಶಿಸಿ ಪೇಟೆಯಲ್ಲಿ ಕಾಲಿಟ್ಟಿತು ಅಂಗಡಿಗಳಲ್ಲಿ [illegible] ಸಂಭ್ರಮವನ್ನು ಕಾಣಲು ಆಬಾಲವೃದ್ಧ ಸ್ತ್ರೀಪುರುಷರು ನೆರೆದಿದ್ದರು [illegible] ಮಾಂದಿ ಹತ್ತು ಹತ್ತು ಮುದುಕರು ನಾಯಿಲ್ಲಿ [illegible] ಏನೆಯಿಲ್ಲದೆ ಪಿಪಿಪಿಪಿ ನೋಡುತ್ತಿದ್ದರು ಎಂತು [illegible] ಶಾಲೆಯನ್ನು ಪ್ರವೇಶಿಸಿತು

[illegible] ಬಂದ ಅಭ್ಯಾಗತರಿಗೆಲ್ಲಾ, ಸದರಿ ಶಾಲೆಯ [illegible]ರಾದ ಶ್ರೀಯುತ ಮಟ್ಟಿ ಗೋವಿಂದರಾಯರಿಂದ ಫಲಾಹಾರಾದಿ ಸತ್ಕಾರ ಸಮಾರಂಭಗಳು ಜರಗಿದವು ಶ್ರೀ ರಾಯರು ತಿಂಗಳಲ್ಲಿ ತಪ್ಪದೆ ಶಾಲೆಗೆ ಬರುವ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು [illegible] ಯನ್ನು ತಾವೇ ವಹಿಸಿಕೊಂಡಿರುವರು.

ವಿ ವಿ ಧ ಸ ಮಾ ಚಾ ರ ಗ ಳು.

ಸ್ಯಾಮನ್ ಬಹಿಷ್ಕಾರದ ತಯಾರಿ.

ಕಳೆದ ಆದಿತ್ಯವಾರ ಮುಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರ ಒಂದು ಸಭೆ ಜರಗಿತು ಸ್ಯಾಮನ್ ಸಪ್ತಕರು ಈ ತಿಂಗಳಲ್ಲಿ ಹಿಂದೂದೇಶಕ್ಕೆ ಬರುವಾಗ ಹೇಗೆ ವರ್ತಿಸಬೇಕೆಂಬುದನ್ನು ನಿರ್ಣಯಿಸುವುದೇ ಸಭೆಯ ಮುಖ್ಯ ಉದ್ದೇಶ ಸ್ಯಾಮನರು ಬರುವ ದಿನ ಮುಂಬಾಯಿಯಲ್ಲೆಲ್ಲಾ ಹರತಾಳವನ್ನಾಚರಿಸಬೇಕೆಂದು ಮೊದಲೊಮ್ಮೆ ನಿಶ್ಚಯವಾಗಿದ್ದಿತು ಆದರೆ ಕಮಿಟಿಯ ಕೌನ್ಸಿಲಿನವರು ಅಭಿಪ್ರಾಯಪಟ್ಟರೇನೆಂದರೆ ಹರತಾಳವನ್ನು ಆಚರಿಸಬಾರದು ಒಂದು ಡಿಮೊನ್‌ಸ್ಟ್ರೇಶನನ್ನು ಜರಗಿಸಬೇಕು ಎಂದು ಈ ನಿರ್ಣಯವು ಕೂಡ ಮೊನ್ನೆಯ ಸಭೆಯಲ್ಲಿ ತೆಗೆದುಹಾಕಿದರು

ಕಳೆದ ಸಭೆಯಲ್ಲಿ ಮಿ। ನಿಂಬಾಳಕರರು ಹರತಾಳವನ್ನಾಚರಿಸಬಾರದೆಂಬ ಠರಾವನ್ನು ಮುಂದಕ್ಕೆ ತಂದರೇ ಹಲವರು ಅದನ್ನು ನಿರೋಧಿಸಿ, ಹರತಾಳವನ್ನಾಚರಿಸಲೇಬೇಕೆಂದು ವಾದಿಸಿ ಮತಗಣನೆ ಆಯಿತು ಹರತಾಳವನ್ನು ಆಚರಿಸದೆ ಸ್ಯಾಮನ್ ಕಮಿಶನನ್ನು ಖಂಡಿಸುವಂತಹ ಡಿಮೊನ್ಸ್ಟ್ರೇಶನನ್ನು ಆಚರಿಸಬೇಕೆಂದಾಯಿತು ಇದನ್ನೆ ಸಮರ್ಥಿಸಿ ಪೂನೆಯ ಮಹಾರಾಷ್ಟ್ರ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರೂ ಸಭೆ ಜರಗಿಸಿದರು.

* * *

ಫೋರ್ವರ್ಡ್ ಪತ್ರಿಕೆಯ ಮೇಲಿನ ಮೊಕದ್ದಮೆ

ಬೇಲೂರಿನಲ್ಲುಂಟಾದ ರೈಲ್ವೆ ಅಪಘಾತದ ಕುರಿತಾಗಿ ಸವಿಸ್ತಾರವಾದ ಲೇಖನವನ್ನು ಬರೆದುದರ ಸಲುವಾಗಿ ಫೋರ್ವರ್ಡ್ ಪತ್ರಿಕೆಯ ಸಂಪಾದಕರ ಮೇಲೂ ಮುದ್ರಕರ ಮೇಲೂ ಮೊಕದ್ದಮೆಯಾಗಿತ್ತಷ್ಟೆ ಆದರ ಸಂಪಾದಕರಾದ ಡಾ। ಎಸ್ ಆರ್ ಬಕ್ಷಿಯವರಿಗೆ ಮೂರು ತಿಂಗಳುಗಳ ಸಾದಾ ಸಜೆ, ೧೦೦೦ ರೂಪಾಯಿ ಜುಲ್ಮಾನೆ ಮುದ್ರಕರಾದ ಪುಲಿನ ಬಿಹಾರಿಧರ ಇವರಿಗೆ ೧೦೦೦ ರೂಪಾಯಿ ಜುಲ್ಮಾನೆ ವಿಧಿಸಲಾಯಿತು ಮ್ಯಾಜಿಸ್ಟ್ರೇಟರು ಬರೆದುದೇನೆಂದರೆ ಇವರ ಕೇವಲ ಜಾತಿವಿರೋಧದಿಂದಲೇ ಇಂತಹ ಲೇಖನವನ್ನು ಬರೆದಿಲ್ಲದೆ ಬೇರೆಯಲ್ಲ ಹಿಂದೀಯರಿಗೆ ಪಾಶ್ಚಿಮಾತ್ಯರ ಮೇಲೆ ವಿರೋಧಭಾವವನ್ನು ಹುಟ್ಟಿಸುವುದೇ ಇವರ ಉದ್ದೇಶವಾಗಿತ್ತು ಅದಲ್ಲದೆ ಮುಕ್ತ ಇವರ ಆಪಾದಿತರ ತನಿಖೆ ನಡೆಸುವಾಗ ಇವರು ಹಾಜರಾಗದೆ ತಪ್ಪುಗಾರರೆಂದು ತೋರಿಸಿಕೊಟ್ಟಿರುವರು ಎಂದು ಇವರು ಅಪೀಲು ಮಾಡುವ ತನಕ ಸಂಪಾದಕರನ್ನು ಜಾಮೀನಿನ ಮೇಲೆ ಬಿಟ್ಟಿರುವರು

* * *

ಪಂಜಾಬದ ರಾಜಕೀಯ ಪರಿಷತ್ತು

ಪಂಜಾಬದಲ್ಲಿ ನಡೆದ ರಾಜಕೀಯ ಪರಿಷತ್ತಿನಲ್ಲಿ ನೆಹರು ಕಮಿಟಿಯ ವರದಿಯು ಅಂಗೀಕರಿಸಲ್ಪಟ್ಟು, ಲಕ್ನೋ ಪರಿಷತ್ತಿನ ನಿರ್ಣಯಗಳ ಸಮರ್ಥಿಸಲ್ಪಟ್ಟವು ಡಾ। ಅನ್ಸಾರಿಯವರೂ ಲಾಲಾ ಲಜಪತರಾಯರವರೂ ಮಂಡಿತವನ್ನು ಪ್ರವೇಶಿಸಿದೊಡನೆ ವಂದೇ ಮಾತರಂ ಎಂಬ ಜಯಘೋಷವೆದ್ದಿತು ಮೌಲಾನಾ ಅಬ್ದುಲ್ ಖಾದಿರರ ನೆಹರು ಕಮಿಟಿಯ ವರದಿಯನ್ನೂ ಲಕ್ನೋ ಪರಿಷತ್ತಿನ ನಿರ್ಣಯಗಳನ್ನೂ ಅಂಗೀಕರಿಸಬೇಕೆಂಬ ಠರಾವನ್ನು ಮುಂದಕ್ಕೆ ತಂದರು ಆಗ ಡಾ। ಅನ್ಸಾರಿಯವರು ಎದ್ದು ನಿಂತು ನೆಹರು ಕಮಿಟಿಯ ಯೋಗ್ಯತೆಯನ್ನು ವಿವರಿಸಿ ಅದಕ್ಕೆ ವಿರೋಧವಾಗಿರುವ ಮತಪ್ರಚಾರದಿಂದ ಯಾವ ಫಲ ಸಾಧ್ಯವಿಲ್ಲವೆಂಬ ಸತ್ಯವನ್ನೂ ಅದನ್ನು ಸರಿಯಾಗಿ ವಿವರಿಸಿ ಅದಕ್ಕೆ ಸರಿಯಾಗಿ ವರ್ತಿಸಬೇಕೆಂದೂ ಹೇಳಿದರು ಕೊನೆಗೆ ಲಾಲಾ ಲಜಪತರಾಯರವರು ಎದ್ದು ನಿಂತು ಲಕ್ನೋ ಪರಿಷತ್ತಿನಲ್ಲಿ ಆದ ಕಮಿಟಿಯ ವರದಿಗೆ ಪಂಜಾಬಿನ ಅಲ್ಪಸಂಖ್ಯಾಕ ಹಿಂದೂಗಳ ನಿರೋಧವಿದ್ದಿತೆಂದೂ ಸರಿಯಲ್ಲವೆಂದೂ ಅದನ್ನು ಸರ್ವರೂ ಸಮರ್ಥಿಸಬೇಕೆಂದೂ ಹೇಳಿದರು

ಎರಡು ಘಂಟೆಗಳ ಚರ್ಚೆಯ ತರುವಾಯ ಈ ಠರಾವು ಮಂಜೂರಾತಿಯನ್ನು ಹೊಂದಿತು ಇನ್ನು ಸ್ಯಾಮನ್ ಕಮಿಶನನ್ನು ಬಹಿಷ್ಕರಿಸಬೇಕೆಂದೂ ವಲ್ಲಭಭಾಯಿಯವರ ಉದಾಹರಣೆಯನ್ನನುಸರಿಸಿ ಧೈರ್ಯದಿಂದ ವರ್ತಿಸಿದರೆ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವು ಸುಲಭವಾಗಿ ಲಭಿಸುವುದೆಂದೂ ಹಲವು ನಿರ್ಣಯಗಳಾದವು

* * *

ಸೂರತಿನಲ್ಲಿ ಗಣಪತಿಯ ಗಲಾಟೆ

ಕಳೆದ ೨೯ನೇ ತಾರೀಕಿನ ದಿನ ಸೂರತಿನಲ್ಲಿ ವಿನಾಯಕನ ಮೆರವಣಿಗೆಯ ಸಮಯ ಹಿಂದೂಗಳು ದಾವಣಗೆರೆಗಳಲ್ಲಿ ನಡೆದ ರೀತಿಯ ಗಲಭೆಯು ನಡೆಯಿತು. ಮುಖ್ಯ ಮಾರ್ಗದಲ್ಲಿ ಮೆರವಣಿಗೆಯು ಮುಂದರಿಸುತ್ತಾ ಹೋಗಿ ಗೋಲವಾಲಾ ಮಸೀದಿಯ ಎದುರು ಬಂದಿತು ಅಲ್ಲಿ ಯಾವ ಗಲಭೆಯೂ ಉಂಟಾಗಲಿಲ್ಲ ಮುಂದೆ ಇನ್ನೊಂದು ಮಸೀದಿಯ ಎದುರು ಸಂಗೀತವನ್ನು ನಿಲ್ಲಿಸದಿದ್ದುದಕ್ಕಾಗಿ ಮುಸಲ್ಮಾನರು, ಲಾಠಿ ಕತ್ತಿ ಮೊದಲಾದವುಗಳನ್ನು ಹಿಡಿದು ಹೊರಕ್ಕೆ ಬಂದು, ಹಲವು ಹಿಂದೂಗಳನ್ನು ಹಿಂಸಿಸಿದರು ಒಬ್ಬ ಹಿಂದೂವು ಎದೆಯಲ್ಲಿ ತಿವಿಯಲ್ಪಟ್ಟನು ಸರಕಾರಿ ಅಧಿಕಾರಿಗಳು ಬಂದರೂ ಜಗಳವನ್ನು ನಿಲ್ಲಿಸಲು ಆಗಲಿಲ್ಲ ಹೇಗಾದರೂ ಮಾಡಿ ಗಣಪತಿಯ ಪ್ರತಿಮೆಯನ್ನು ನಿರ್ವಿಘ್ನವಾಗಿ [illegible] ನದಿಯಲ್ಲಿ ಹಾಕಿದರು. ಇಷ್ಟಾದರೂ ಗಲಭೆಯು ಶಾಂತವಾಗದೆ ಸುಮಾರು ನೂರಾರು ಜನರು ಜಖಮ ಹೊಂದಿರುವರು

ಮಾರನೆ ದಿನ ಆದಿತ್ಯವಾರ ಶಾಂತಿಯನ್ನು ಕಾಪಾಡಬೇಕಾದರೆ ಸರಕಾರದವರು ಅತ್ಯಂತ ಕಷ್ಟಪಟ್ಟರು ಕೆಲ ಜನರನ್ನು ಹಿಡಿದು ಕೈದುಮಾಡಿದರು ಆಯುಧಗಳನ್ನು ಹಿಡಿದು ಸಂಚರಿಸಬಾರದೆಂದೂ, ಪತ್ರಿಕೆಗಳಲ್ಲಿ ಇದಕ್ಕೆ ಸಂಬಂಧಿಸಿದ ಯಾವ ಸಂಗತಿಗಳನ್ನೂ ಪ್ರಕಟಿಸಬಾರದೆಂದೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು ಹುಕುಂ ಕೊಟ್ಟಿರುವರು

ಇದೇ ರೀತಿಯಲ್ಲಿ ನಾಸಿಕದಲ್ಲಿಯೂ ಗಣಪತಿಯ ಗಲಾಟೆ ಹಿಂದೂ ಮುಸಲ್ಮಾನರೊಳಗೆ ಜಗಳ ಮುಸಲ್ಮಾನರು ಮಸೀದಿಯ ಒಳಗಡೆ ಪ್ರಾರ್ಥನೆಯನ್ನು ಮಾಡುತ್ತಿರುವಾಗ ಹೊರಗಿನಿಂದ ಹಿಂದೂಗಳ ಮೆರವಣಿಗೆಯು ಸಂಭ್ರಮದಿಂದ ಹೋಗುವುದನ್ನು ಕಂಡು ಮುಸಲ್ಮಾನರು ಕೆರಳಿ ಹೊರಕ್ಕೆ ಬಂದು ಜಗಳಕ್ಕೆ ನಿಂತರು ಹಿಂದೂಗಳ ಕಲ್ಲುಬಿಸಾಡಿ [illegible] ಮಸೀದಿಯ ಕನ್ನಡಿ ಬಾಗಿಲುಗಳನ್ನು ಪುಡಿಮಾಡಿದರು. ಜಗಳವು ಪ್ರಬಲವಾಗುವದರೊಳಗೆ ಪೋಲೀಸರು ಪ್ರಯತ್ನದಿಂದ ಜನಸಂದಣಿಯು ಚದರುವಂತೆ ಮಾಡಿದರು ಒಟ್ಟಾರೆ ನೋಡಿದರೆ ಈ ವರುಷ ಗಣಪತಿಗೆ ಹಿಂದೂ ಮುಸಲ್ಮಾನರ ಕಲಹ ನೋಡಿ ಆನಂದಿಸುವ ಮನಸ್ಸಾಗಿದೆಯೋ ಏನೋ!

ಬೆಂಗಳೂರು ವಿಚಾರಣೆ.

ಬೆಂಗಳೂರಿನ ಗಣಪತಿಯ ಗಲಾಟೆಯ ಕುರಿತ ತಕ್ಕ ವಿಚಾರಣೆಯನ್ನು ನಡೆಸುವ ಸಲುವಾಗಿ ನಿಶ್ಚೈಸಲ್ಪಟ್ಟ ಕಮಿಟಿಯ ಸೇವಕವಾಗಿ, ಇದ ವರೆಗೆ ಹಲವರ ವಿಚಾರಣೆಯು ನಡೆದು ಹೋಯಿತು ಮೊನ್ನೆ ಸೋಮವಾರ ದಿನ ಮಿ। ಅಬ್ದುಸಲಾಮರ ವಿಚಾರಣೆಯು ಪ್ರಾರಂಭವಾಯಿತು ಇವರ ಸಾಕ್ಷ್ಯಗಳನ್ನು ಕೇಳುವ ಸಲುವಾಗಿ ವಿಚಾರಣಾ ಮಂದಿರದಲ್ಲಿ ಕಿಕ್ಕಿರಿದು ನೆರೆದಿದ್ದ ಜನರೂ ವಿದ್ಯಾರ್ಥಿಗಳೂ ಅಸಂಖ್ಯಾತರಾಗಿದ್ದರು ಗುಲ್ಲು ಮಾಡಬಾರದಾಗಿ ಅಧ್ಯಕ್ಷರು ಕೂಡಿದವರೊಡನೆ ಪದೇ ಪದೇ ಪ್ರಾರ್ಥಿಸಿಕೊಳ್ಳುತ್ತಿದ್ದರು

ಮಿ। ಅಬ್ದುಸಲಾಮರ [illegible] — ಗಲಾಟೆಯಲ್ಲಿ ತಾನು ಯಾವ ಭಾಗವನ್ನು ವಹಿಸಲಿಲ್ಲ ಅಲ್ಲದೆ ತನ್ನ ಮನೆಯಲ್ಲಿ [illegible] ಆಸಕ್ತಿ ಇಲ್ಲ ಆದರೆ ಒಬ್ಬಿಬ್ಬ [illegible] ತಾನು [illegible] ತನ್ನ ಮನೆಯಲ್ಲಿ ತಾನು ಯಾವ ಆಯುಧಗಳನ್ನೂ [illegible] ಅವರು ಗುಂಪು ಗುಂಪಾಗಿ [illegible] ಗಲಭೆಯುಂಟಾಗಿದ [illegible] ಮುಸಲ್ಮಾನರನ್ನು [illegible] ವಿಚಾರಣೆಯು ಅಂದಿಗೆ ಕೊನೆಗಾಣಿಸಲ್ಪಟ್ಟಿತು

[illegible] ವಿಚಾರಣೆಯು [illegible] ಗಲಭೆಯಲ್ಲಿ [illegible] ಅವರು ಹೇಳಿದರು

ಜಾತೀಯ ಕಲಹಗಳು

ಲಕ್ನೋದಲ್ಲಿ ಎಲ್ಲಾ [illegible] ಹಿಂದೂ ಮುಸಲ್ಮಾನರ [illegible] ಸಿವಿಸ [illegible] ದಾವಣಗೆರೆ [illegible] ಮುಸಲ್ಮಾನರ [illegible] ಬೆಂಗಳೂರು [illegible] ವಿಷಯ ವಿದದ

ಡಾ। ಬಿಸೆಂಟಮ್ಮನವರ ಜನ್ಮದಿನಾಚರಣೆ

[illegible] ಡಾ। ಬಿಸೆಂಟಮ್ಮನವರ [illegible] ಅರ್ಜಿ [illegible] ಡಾ। ಬಿಸೆಂಟಮ್ಮನವರು ಹಿಂದೂ [illegible] ಹಿಂದೂ ಯುವಕರೆಲ್ಲರೂ ಬಿಸೆಂಟಮ್ಮನವರ ಇಂತಹ ಅಪೂರ್ವ ಗುಣಗಳನ್ನು ಅನುಕರಿಸುವುದಾದರೆ ಬಹಳೇ ಲಾಭವಿದೆ [illegible] ಇದೇ ರೀತಿಯಲ್ಲಿ ಹಿಂದೂಸ್ಥಾನದ ಇತರ ಹಲವು ಪ್ರಮುಖ ಸ್ಥಳಗಳಲ್ಲಿಯೂ ಈ ದಿನವು ಆಚರಿಸಲ್ಪಟ್ಟಿತು

ಸಿಮ್ಲಾದಲ್ಲಿ ನಡೆದ ಕೃಷಿಯ ಪರಿಷತ್ತು

ಕಳೆದ ಸೋಮವಾರ [illegible] ಸಿಮ್ಲಾದಲ್ಲಿ ಕೃಷಿಯ ಪರಿಷತ್ತನ್ನು ತೆರೆದರು [illegible] ಹಲವು ಕಡೆಯ ಪ್ರತಿನಿಧಿಗಳು [illegible] ಬಂದವರೆಲ್ಲರಿಗೆ ಕೃತಜ್ಞತೆಯನ್ನು [illegible] ಕಮಿಟಿಯ ವರದಿಯನ್ನು ಪ್ರಶಂಸಿಸಿದರು ಕಮಿಟಿಯು ಸೂಚಿಸಿದ [illegible] ಒಂದು ಸೆಂಟ್ರಲ್ [illegible] ಸರಕಾರದವರು [illegible] ಕೃಷಿಯ ಅಭಿವೃದ್ಧಿಗೆ ಬೇಕಾಗುವ ಸರ್ವ ಸಾಧನಗಳನ್ನು ಒದಗಿಸಲು ಸರಕಾರದವರು ತಯ್ಯಾರಿದ್ದಾರೆ ಎಂದು ಅವರು ಹೇಳಿದರು ಅವರ ಭಾಷಣದ [illegible] ಅವರ ಭಾಷಣವಾಯಿತು [illegible] ಪ್ರತಿನಿಧಿಗಳು ಕೃಷಿಯ ಅಭಿವೃದ್ಧಿಯ ಕುರಿತು [illegible] ಸರ್ವ ಸಮ್ಮತಿಯಿಂದ [illegible] ಸಬೇಕೆಂದು ಅವರು ಹೇಳಿದರು ಅದೇ ದಿನ [illegible] ಪ್ರತಿನಿಧಿಗಳೆಲ್ಲರೂ ಸರ್ [illegible] ಪ್ರತಿಯೊಬ್ಬ ಪ್ರತಿನಿಧಿಯನ್ನು [illegible] ಕಾರ್ಯಕ್ರಮಗಳ ಕುರಿತು ಅವರೊಡನೆ ಮಾತನಾಡಿದರು [illegible] ಮುಂದಿನ ಕಾರ್ಯಕಲಾಪಗಳು ಪ್ರಕಟವಾಗಿಲ್ಲ

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ಟೆಲಿಗ್ರಾಮ್ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M. Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಲವು ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದ್ರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11 45ಕ್ಕೂ ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಬೆಳ್ತಂಗಡಿ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4 30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10 30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12 30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2 30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಾಂತಿ ತೆಗೆದುಕೊಳ್ಳಲು ಅವಕಾಶವಿಡಲ್ಪಟ್ಟಿದೆ ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6 30ಕ್ಕೆ ಮತ್ತು 7 30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ದಿನ 8 ಘಂಟೆ ಒಳಗೆ ಹುಬ್ಬಳ್ಳಿಗೂ ಗದಗ್ ಪಂಡ್ರಾಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೆಂಗಳೂರು ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು

ಬಿ. ಎನ್. ಹನುಮಂತಪ್ಪ, ಪ್ಯಾರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ. ಸಿ ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು ಮೈಸೂರು, ಕೊಡಗು ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕರಾವಳಿ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ ಮಂಗಳೂರಿನಿಂದ ಬಸ್ಸುಗಳ ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪವಾದ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary

The Canara Public Conveyance Co., Ltd., S. K. Mangalore. 20626

ದಿ ಕೆನರಾ ನ[illegible]

ಕಸಿ ಮಾವಿನ ಸಸಿಗಳು.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ [illegible] ಗಳೂ, ಸಪೋಟಾ, ಪೇರಳೆ, [illegible] ದಾಳಿಂಬ, ಪನ್ನೇರಳೆ ಮುಂತಾದ [illegible] ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪ[illegible] ಎಲ್ಲದೆ ಚೆನ್ನಾಗಿ ಫಲಬಿಡುವವು [illegible] ಗಳು ಕರಾವಳಿ ಹವೆಗೂ ಘಟ್ಟಗೂ [illegible] ಬಿಡುವುದಿಲ್ಲ. ಕ್ರಯ ಪಟ್ಟಿಗೆ [illegible] ಬರೆಯಿರಿ. ಗಿಡಗಳು ಮಂಗಳೂರು [illegible] ಯಾಡ್ಡೆಯವರಲ್ಲಿ ದೊರೆಯುವವು.

ಕೆ ಮುದ್ದಣ್ಣ ಶೆಟ್ಟಿ
ದಿ. ಕೆನರಾ ನರ್ಸರಿ,
ಏಷರ್ ಗಾರ್ಡನ್ಸ್, ಕಾಪು ದ. ಕ.
131028

C/o [illegible]
[illegible]

ಮೈಸೂರು ಸರ್ಕಾರ

ಗಾಂಜಿಲನೆಯ ಇಸವಿಯ ಮೈಸೂರು ದಸರಾ (ಅಖಿಲ ಭಾರತೀಯ) ಸರ್ವವಸ್ತು ಪ್ರದರ್ಶನವು ಮೈಸೂರು ನಗರದಲ್ಲಿ ಖಾಯಮಾಗಿ ಏರ್ಪಡಿಸಿರುವ ಪ್ರದರ್ಶನ ಶಾಲೆಯಲ್ಲಿ ಇದೇ ಅಕ್ಟೋಬರ ತಿಂಗಳಿನಲ್ಲಿ ಗ೫ರಿಂದ ಟಿನೇ ತಾರೀಖಿನ ವರೆಗೆ ನಡೆಯುವುದು ಕಲಾಕೌಶಲ್ಯವನ್ನೂ ಶೃಂಗಾರಿಕೆಯ ವಿಷಯಕವಾದ ನೈಪುಣ್ಯವನ್ನೂ ತೋರಿಸುವ ವಸ್ತುಗಳನ್ನೂ ಮತ್ತು ವ್ಯವಸಾಯೋತ್ಪನ್ನ ವಸ್ತುಗಳನ್ನೂ ಸಂಪದಭಿವೃದ್ಧಿಗೆ ಸಾಧಕವಾದ ವಸ್ತು ಸಮುದಾಯಗಳನ್ನೂ ಅಲ್ಲಿ ಪ್ರದರ್ಶಿಸಲಾಗುವುದು ಯಂತ್ರೋಪಕರಣಗಳೇ ಮುಂತಾದವುಗಳಿಂದ ಕೆಲಸ ಮಾಡಿಸಿ ಆ ಕಾಲದಲ್ಲಿ ಜನರಿಗೆ ತೋರಿಸುವುದಕ್ಕೆ ವಿದ್ಯುಚ್ಛಕ್ತಿಯೇನಾದರೂ ಅವಶ್ಯವಿದ್ದಲ್ಲಿ, ಅದನ್ನು ಮುಫತ್ತಾಗಿ ಒದಗಿಸಲಾಗುವುದು ಪ್ರಕಟಣೆಯ ಕೆಲಸಕ್ಕೂ ವ್ಯಾಪಾರಕ್ಕೂ ನಾನಾ ವಿಷಯಗಳನ್ನೂ ಪರಿಶೀಲಿಸಿ ತಿಳಿದುಕೊಳ್ಳುವುದಕ್ಕೂ, ಇದು ಒಳ್ಳೆಯ ಸಮಯವಾಗಿದೆ

ಪ್ರದರ್ಶನದಲ್ಲಿ ತಮ್ಮ ವಸ್ತುಗಳನ್ನಿಡುವುದಕ್ಕೆ ಸ್ಥಳವನ್ನು ಅಪೇಕ್ಷಿಸುವವರೂ ಮತ್ತು ಪ್ರದರ್ಶನದ ವಿಚಾರವಾಗಿ ಇತರ ವಿವರಗಳನ್ನು ತಿಳಿಯಲಪೇಕ್ಷಿಸುವವರೂ ಸಹ ಮೈಸೂರು ದಸರಾ ಪ್ರದರ್ಶನದ ಸೆಕ್ರೆಟೆರಿಯವರಿಂದ ಪ್ರಸಿದ್ಧ ಪತ್ರಿಕೆಯನ್ನು (ಪ್ರಾಸ್ಪೆಕ್ಟಸ್) ಪಡೆಯಬಹುದು

ಕೆ ಅನಂತಸಾಮಿ ರಾವ್.
ಸೆಕ್ರೆಟರಿ,
ಮೈಸೂರು ದಸರಾ ಎಗ್ಸಿಬಿಷನ್, ಮೈಸೂರು ಸಿಟಿ

ದಿಟನಂಬು! ಪುಟ್ಟನಾಗು!! ನೆಟ್ಟಗಾಗು!!!

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಯುವಕನೇ ನಿನ್ನ ಬೆಲೆ ಯಾವುದರಲ್ಲಿದೆ? ಸೌಮ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ?

ಆರೋಗ್ಯವಿಲ್ಲವೆ? ದೇಹವು ಕ್ಷೀಣವಾಗಿದೆಯೋ? ಮನಸಂತೋಷ ತಪ್ಪಿದೆಯೇ? ಜ್ಞಾಪಕ ಶಕ್ತಿ ಕುಂದಿರುವುದೇ? ತುಂಗೋಷ ಶಕ್ತಿ ಇದೆಯೇ? ಆಲಸ್ಯ ತುಂಬಿರುವದೇ? ಚುರುಕು ಚಟುವಟಿಕೆ ಇಲ್ಲವೇ? ವ್ಯಾಕುಲತೆಯಿಂದ ಮರಗುತ್ತೀಯೋ? ಸುಖವಾಗಬೇಕೆಂಬ ಇಚ್ಛೆ ಇದೆಯೇ? ಹಾಗಾದರೆ ಇಗೋ ಬಹು ಗುಣಕರವಾದ [illegible] ನಿರತ ಸಾಲಿಕವನ್ನೆಂಬ ಅವ್ಯತವನ್ನೇ ಸೇವಿಸು ಆವಾಗ ಮೇಲಿನ ಅವಲಕ್ಷಣತೆಗಳು ಶೀಘ್ರವಾಗಿ ಬಹು ಆರೋಗ್ಯವೂ ಶರೀರ ದಾರ್ಢ್ಯವೂ ಉಂಟಾಗಿ ನಿನ್ನ ಬೆಲೆ ಆರೋಗ್ಯದಲ್ಲಿಯೇ ಇದೆಯೆಂದು ನಿನಗೇ ತೋರಿ ಬರುವುದು

ಕ್ರಯ 8 ಔನ್ಸ್ ಸೀಸೆಗೆ ರೂ. 3—8—0.

ಯುವತಿಯೇ ನಿನ್ನ ಸುಂದರವಾದ ಉಡುಪು ಯಾವುದು? ಅಚ್ಚುಗಟ್ಟಾಗಿ ಹೊಳೆವ ನಿನ್ನ ಆರೋಗ್ಯದ [illegible] ಅಲ್ಲವೇ?

ದೇಹವು ಅಚ್ಚುಗಟ್ಟಾಗಿಲ್ಲವೇ? ರೂಪಕ್ಕೆ [illegible] ಮುಖ ಕಳೆಗುಂದಿದೆಯೇ? ಕೈಕಾಲು ಬಚ್ಚುವದೇ? ಎದೆ [illegible] ಉಂಟೋ? ರಕ್ತ ಛಾಯೆ ಇಲ್ಲವೇ? ಅಜೀರ್ಣವಿದೆಯೋ? [illegible] ಉಂಟೋ? ತಲೆತಿರುಗಲು ಉಸುರುವುದೇ? [illegible] ಸರಿಯಿಲ್ಲವೇ? ಕಟ್ಟಳೆ ಅಕ್ರಮವಾಗಿದೆಯೇ? [illegible] ಇವರಿಂದ ಬಿಡುಗಡೆ ಹೊಂದಲು ಇಚ್ಛೆ [illegible] ಸೇವಕಿಯರಿರುವ ಕಂಪೌಂಡು ನಿರತ [illegible] ಅಂಗೀಕರಿಸು ಈಳೆ ಗುಪ್ತಹಿಂಸೆಯಿಂದ [illegible] ಯಾಗುವಂತೆಯೂ ಮುಖಕಳೆಗಳು [illegible] ಸಿಗುವಂತೆಯೂ ಖಂಡಿತ ಸಹಾಯ [illegible] ವುಳ್ಳ ದೇಹವೇ ಹೊಳೆಸುವ ನಿನ್ನ [illegible] ಎಂದು ನಿನಗೇನೇ ಖಚಿತವಾಗುವುದು.

ಕ್ರಯ 8 [illegible] ರೂ. 3—8—0.

ಕಟಲಾಗಿಗೆ ಬರೆಯಿರಿ—

ಮಲೇರಿಯಾನ ಕಂಪೆನಿ,
[illegible]

ಉಡುಪಿಯ ವಿಶೇಷ ಪತ್ರ.

ಉಡುಪಿ, ತಾ. ೧–೧೦–'೨೮

ಭೀಕರ ಕೊಲೆ:—ಉಡುಪಿಯ ತೆಂಕಣ ಕಡೆಗೆ ಉದ್ಯಾವರ ಹೊಳೆ ದಾಟಿ ಮಟ್ಟು ಎಂಬ ಹಳ್ಳಿಯಿದೆ. ಅಲ್ಲಿ ಒಬ್ಬ ಬ್ರಾಹ್ಮಣ ವಿಧವೆ, ಆಸ್ತಿವಂತೆ, ಅಪುತ್ರಸ್ಥೆ! ಮಗಳೊಬ್ಬಳಿದ್ದರೂ ಅವಳೊಡನೆ ಸರಿಯಿಲ್ಲದುದರಿಂದ ಆಸ್ತಿಯ ಹಕ್ಕನ್ನು ತನ್ನ ಜೀವಮಾನದ ವರೆಗೆ ಒಬ್ಬ ಸಂಬಂಧಿಕನಿಗೆ ಬಿಟ್ಟುಕೊಟ್ಟಿದ್ದಳು. ಮಗಳ ಕಡೆಯಿಂದ ಅವಳ ಗಂಡನೂ ಮಗಳ ಮಗನಿಗೆ ದತ್ತು ಕೊಟ್ಟವನೂ ಆಸ್ತಿಗಾಗಿ ಬಹಳ ಪೇಚಾಟಪಟ್ಟರು. ವಿಧವೆಯನ್ನು ಬೆದರಿಸಿ ನೋಡಿದರು, ಸಂಕಾರದೊಡನೆ ವಾದಿಸಿ ನೋಡಿದರೂ ಬೇಗೆ ಹರಿಯಲಿಲ್ಲ! ದಂಡೋಪಾಯವೊಂದೇ ಬಾಕಿಯಿದ್ದಿತು. ಅದಕ್ಕೂ ಅವರು ಹಿಂಜರಿಯದೆ ಸಮಯ ಕಾಯುತ್ತಿದ್ದರು. ವಿಧವೆಯನ್ನು ವಧಿಸುವ ಹಂಚಿಕೆಯು ಗುಪ್ತವಾಗಿ ನಡಿಯುತ್ತಿದ್ದಿತು. ಅಂತೂ ವಧೆಯೂ ಆಯಿತು. ಚೂರಿಯಿಂದ ಇರಿಯಲ್ಪಟ್ಟಿದ್ದ ಹೆಣವು ಬತ್ತದ ಗದ್ದೆಯಲ್ಲಿ ಕಾಣಿಸಿತ್ತು. ಹಿಂದಿನ ರಾತ್ರಿ ವಿಧವೆಯನ್ನು ಮಗಳ ಮಗನಿಗೆ ಹೆಣ್ಣು ಕೊಟ್ಟಾತನು ತನ್ನ ಮನೆಗೆ ಉಪಾಯಾಂತರದಿಂದ ಆಹ್ವಾನಿಸಿ ಅಂದೇ ರಾತ್ರಿ ಕೊಲೆಮಾಡಿದಂತೆಯೂ ಮಗಳ ಗಂಡನು ಮೊದಲೇ ಪರವೂರಿಗೆ ಹೋಗಿದ್ದ ಹಲವು ಕೆಲಸಕೊಂಡು ತೆಯೂ ತಿಳಿದುಬರುತ್ತದೆ. ಮಗಳನ್ನೂ ಕನ್ಯಾಪಿತನನ್ನೂ ಕೈದುಮಾಡಿ ಇಲ್ಲಿಗೆ ತಂದಿರುವರು. ವಿಚಾರಣೆಯು ನಡೆಯುತ್ತಿದೆ. ನಿಪುಣರಾದ ವಿಚಾರಣಾವಾದಿಗಳು ಸತ್ಯವನ್ನು ಹೊರಗೆಡಹಲಿರುವರಂತೆ! ಹಲವು ಕುರುಹುಗಳು ಸಿಕ್ಕಿವೆಯಂತೆ. ಪರಿಣಾಮವನ್ನು ನಾವು ಹಿಂದಿನಿಂದ ಕೇಳುವೆವಂತೆ! ಇರಲಿ. ಕೆಲವು ಶುಷ್ಕ ಧಾರ್ಮಿಕ ವಿಧಿಗಳಿಗೆ ಬಲಿಬಿದ್ದು ಪ್ರೌಢವಿವಾಹ, ವಿಧವಾ ವಿವಾಹ ಮೊದಲಾದುವುಗಳ ಕಡೆಗೆ ತಮ್ಮ ನಿಷೇಧದ ತೀಕ್ಷ್ಣ ಖಡ್ಗ ಹತಿಯನ್ನು ಮಾಡುವ "ಗುರುವರ್ಯ"ಗಳು ಇಂಥಾ ಕೊಲೆ, ಪಾತಕ, ಅನ್ಯಾಯಾದಿಗಳು ನಡೆವಲ್ಲಿ ಕಂಡೂ ಕಾಣದಂತಿರುವುದು ಎಷ್ಟೊಂದು ಶ್ಲಾಘನೀಯವೋ!

ಪೈರಿನ ಗದ್ದೆಯು ಕುರುಕ್ಷೇತ್ರವಾಯಿತು—ಐನ್ನಂಜೆಯ ಬಳಿ ಒಂದು ಗದ್ದೆ! ಅದರಲ್ಲಿ ಪೈರು ಬೆಳೆಸಿದ್ದು ಒಬ್ಬರು! ಪೈರು ಕಟಾವಿಗೆ ಬಂದದ್ದು ಇನ್ನೊಬ್ಬರು! ಪೈರು ಬೆಳೆಸಿದವರು ಗೇಣಿಗೆ ಪಡಕೊಂಡವರು, ಕಟಾವಿಗೆ ಬಂದವರು ಅದರ ಹಕ್ಕನ್ನು ಕ್ರಯಕ್ಕೆ ಪಡಕೊಂಡವರು! ಅದನ್ನು ವಿಕ್ರಯಿಸಿದವರ ಕೈಯು ಇದರಲ್ಲಿ ಇಂಬೋ ಇಲ್ಲವೋ ಗೊತ್ತಿಲ್ಲ, ಜಗಳವಾಯಿತು; ಕೆಲವರಿಗೆ ಜಖಂ ಆಯಿತು! ಜಖಂ ಆದವರಿಗೆ ಆಸ್ಪತ್ರೆಯ ಸುಖ ದೊರೆಯಿತು! ಇದಕ್ಕೆ ಕಾರಣ ಭೂತರಾದವರಿಗೆ ಜೈಲಿನ ಸುಖ ದೊರೆಯಿತು! ಪೋಲೀಸಿನವರಿಗೊಂದು ಕೆಲಸ ದೊರೆಯಿತು! ನನಗೊಂದು ವಾರ್ತೆ ದೊರೆಯಿತು.

ತುಳುವ ಸಂಘದ ಶಂಕುಸ್ಥಾಪನೆ—ಯಾರು ಏನೆಂದರೂ, ಉತ್ಸಾಹೀ "ತುಳುತನಯ"ರು ತನ್ನ ಕೆಲವು ಮಿತ್ರರೊಂದಿಗೆ ಕಾಂಗ್ರೆಸ್ ಕಚೇರಿಯಲ್ಲಿ ಒಂದು ಸಭಕೂಡಿ ತುಳುವ ಸಂಘದ ಶಂಕುಸ್ಥಾಪನೆಯನ್ನಂತೂ ಮಾಡಿಸಿಯೇ ಬಿಟ್ಟರು! ಡಾ| ಯು. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಅನುಕೂಲವಾದ ಕೆಲವು ಠರಾವುಗಳು ಠರಾಯಿಸಲ್ಪಟ್ಟವಂತೆ. ಒಂದು ಕಾರ್ಯಕಾರಿ ಮಂಡಳ: ರಾ| ಅಂಚಾರು ರಾಮಣ್ಣ ಹೆಗ್ಡೆಯರು ಅಧ್ಯಕ್ಷರು. ರಾ| ಎಸ್. ಯು. ಪಣಿಯಾಡಿಯವರು ಕಾರ್ಯದರ್ಶಿಯವರು. ನವಂಬರದೊಳಗಾಗಿ ಮಹಾಸಭೆಯೊಂದು ಜರಗಬೇಕಂತೆ! ಆಗಾಮಿ ವತ್ಸರದಲ್ಲಿ ಒಂದು ತುಳು ಪತ್ರಿಕೆಯನ್ನು ಹೊರಡಿಸಲಿರುವರಂತೆ.

ದೇವಸ್ಥಾನದಲ್ಲಿಯೂ ಕಳ್ಳರು—ಕುಂಜಾರಿನ ದುರ್ಗಾ ಪರಮೇಶ್ವರಿ ಮತ್ತು ಪರಶುರಾಮ ದೇವಸ್ಥಾನಗಳಿಗೆ ದರೋಡೆ ಕಳ್ಳರು ನುಗ್ಗಿರುವರಂತೆ. ಅಲ್ಲಿಂದ ಸಾಮಾನೇನೂ ಕಳವಾಗದಿದ್ದರೂ, ಬೆಳ್ಳೆ, ಇಗರ್ಜಿ, ಕುಂಜಾರು ಕಾಲ ಬೆಳ್ಳೆ ದೇವಸ್ಥಾನಗಳಿಗೆ ನುಗ್ಗಿದರೂ ದೈವಸ್ಥಾನದಿಂದ ಸ್ವಲ್ಪವೇ ಸಾಮಾನು ಹೋದರೂ, ಆ ಊರಿನವರಿಗೆ ಅತಿರೇಕ ಭಯವು ಉಂಟಾದರೂ, 'ಶಾಸನ ಇಲ್ಲದೆ ಹಿಂದೂಸ್ಥಾನಕ್ಕೆ ದಿಕ್ಕೇ ಇಲ್ಲ' ಎಂದು ನಮ್ಮ ಘನ ಸರಕಾರವು ಹೇಳಿದರೂ ಕಳ್ಳರ ಬಾಧೆಯು ಜನರಿಗೆ ಮಾತ್ರವಲ್ಲ—ದೇವಸ್ಥಾನಗಳಿಗೂ ಕೂಡ ತಪ್ಪಲಿಲ್ಲವೆಂದರೆ ಅದೆಂತಹ ಶೋಚನೀಯ! ಎಷ್ಟೊಂದು ಲಾಂಛನಾಸ್ಪದ!! ಪೋಲೀಸಿನವರು ಇದರ ಕುರಿತು ವಿಚಾರಿಸುವುದು ಅವಶ್ಯವಿದೆ.

ಹರಿಕಥೆ:—(೨೩—೯—೨೮) ಶ್ರೀ ಕೃಷ್ಣ ದೇವಸ್ಥಾನದಲ್ಲಿ ಶಿವಮೊಗ್ಗ ಹಡೆ ಶ್ರೀಪಾದ ದಾಸರವರ "ಸತೀ ಅನಸೂಯಾ" ಕಥೆಯಾಯಿತು. ಪತಿವ್ರತಾಗ್ರೇಸರಳಾದ ಅನಸೂಯೆಯ ನಮ್ಮ ಕಾಣಿಯವಳಲ್ಲವೋ?

ಮರಿದುಂಬಿ

ಖಾಸಗಿ

ಅತೀ ಮಹತ್ವದ ಸೋಡ್ತಿ.

ಕೆನರಾ ಹ್ಯಾಸ್ಕೂಲ್ ಮತ್ತು ಕೆನರಾ ಗರ್ಲ್ಸ ಸ್ಕೂಲ್

ಇವುಗಳ ಸಹಾಯಾರ್ಥವಾಗಿ

ಕೆನರಾ ಹ್ಯಾಸ್ಕೂಲಿಗೆ ಧನಸಹಾಯವನ್ನು ಒದಗಿಸುವ ಬಗ್ಗೆ 1923ನೇ ಇಸವಿಯಲ್ಲಿ ತೆಗೆದ ಸೋಡ್ತಿಯಿಂದ ಸಿಕ್ಕಿದ ಹಣ ಕಾಲಕ್ರಮೇಣ ಅಭಿವೃದ್ಧಿಯಾಗಿ ಬರುತ್ತಿರುವ ಈ ಸಂಸ್ಥೆಯ ಹೆಚ್ಚುತ್ತಾ ಬರುವ ಖರ್ಚಿಗೆ ಸಾಲದೆ ಹೋದ್ದರಿಂದ ಈ ಸಂಸ್ಥೆಯ ಬಗ್ಗೆಯೂ ಕೆನರಾ ಗರ್ಲ್ಸ ಸ್ಕೂಲಿನ ಬಗ್ಗೆಯೂ ಹೆಚ್ಚಿನ ಹಣವನ್ನು ಕೂಡಿಸಲಿಕ್ಕೆ ಶಾಲಾ ಕೌನ್ಸಿಲ್ ಮೆಂಬರರು ದಕ್ಷಿಣ ಕನ್ನಡಾ ಜಿಲ್ಲಾ ಮೇಜಿಸ್ಟ್ರೇಟರವರ ಅಪ್ಪಣೆ ಪಡೆದು ಪುನಃ ಈ ವರ್ಷವೂ ಇನ್ನೊಂದು ಸೋಡ್ತಿಯನ್ನು ತೆಗಿಯುವರೆ ನಿಶ್ಚಯಿಸಿರುತ್ತಾರೆ. ಈ ಸೋಡ್ತಿಯ ಆಡಳಿತೆ ಶಾಲಾ ಕೌನ್ಸಿಲ್ ಮೆಂಬರರಷ್ಟೆ ಧೋರಣೆಯುಳ್ಳ ಸದ್ಗೃಹಸ್ಥರಿಂದ ನಡಿಸಲ್ಪಡುವುದು.

ಉದ್ದೇಶ.

1 ಶಾಲೆಗಳ ಮೂಲ ಧನವನ್ನು ವೃದ್ಧಿಪಡಿಸಲಿಕ್ಕೆ

2 ಔದ್ಯೋಗಿಕ ಶಿಕ್ಷಣದ ಬಗ್ಗೆ ಈಗ ಶಾಲೆಯ ಸ್ವಾಧೀನ ಇರುವ 5000 ರೂಪಾಯಿಯ ಮೂಲ ಧನವನ್ನು ಹೆಚ್ಚಿಸಲಿಕ್ಕೆ

3 ಎರಡು ಶಾಲೆಗಳ ಬಗ್ಗೆ ಮತ್ತು ಮುಖ್ಯವಾಗಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿ ಸ್ಥಳ ಇಕ್ಕಟ್ಟಾಗಿರುವ ಬಾಲಿಕಾ ಶಾಲೆಯ ಬಗ್ಗೆ ಹೆಚ್ಚಿಗೆ ಕಟ್ಟೋಣಗಳನ್ನು ಒದಗಿಸಿಕೊಡುವ ಬಗ್ಗೆ

ಜಮೆಯಾಗುವ ಒಂದು ಲಕ್ಷ ರೂಪಾಯಿಗಳಲ್ಲಿ ರೂಪಾಯಿ 15000ವನ್ನು ಸೋಡ್ತಿಯ ಖರ್ಚಿಗಾಗಿ ತೆಗೆದಿಟ್ಟು ಉಳಿದ ಹಣದಲ್ಲಿ ರೂಪಾಯಿ 40000ವನ್ನು ಶಾಲೆಗಳ ವಿನಿಯೋಗಕ್ಕಾಗಿ ಇಟ್ಟು ಉಳಿದ 45000ವನ್ನು ಈ ಕೆಳಗಿನ ಬಹುಮಾನಗಳಾಗಿ ಹಂಚಲಾಗುವದು

1ನೇ ರೂಪಾಯಿ **12,500,** 2ನೇ ರೂಪಾಯಿ **5,000,**

ರೂಪಾಯಿ 1000 ದರದ 2, ರೂಪಾಯಿ 500 ದರದ 3 ರೂಪಾಯಿ 250 ದರದ 6,

ರೂಪಾಯಿ 100 ದರದ 10, ರೂಪಾಯಿ 50 ದರದ 20, ರೂಪಾಯಿ 20 ದರದ 100,

ರೂಪಾಯಿ 10 ದರದ 800, ರೂಪಾಯಿ 5 ದರದ 2100

ಟಿಕೇಟುಗಳು 250 ಪುಸ್ತಕಗಳಾಗಿ ದೊರೆಯುವುವು. ಒಂದು ಇಡೀ ಪುಸ್ತಕದಲ್ಲಿನ ಟಿಕೇಟುಗಳನ್ನು ಮಾರಿದವರು, ರೂ 250 ಬದಲಾಗಿ 24 ರೂಪಾಯಿಗಳನ್ನು ಮಾತ್ರವೇ ಪಾವತಿ ಮಾಡಿದರೆ ಸರಿಯಾಗುವುದು. ಉಳಿದೊಂದು ರೂಪಾಯಿಯನ್ನು ಅವರ ಮೆಹನತಿನ ಬಗ್ಗೆ ಅವರು ಇಟ್ಟುಕೊಳ್ಳಬಹುದು. ಇದರಿಂದ ಟಿಕೇಟು ಮಾರುವವರು ಶಾಲೆಗಳಿಗೆ ಸಹಾಯ ಮಾಡುವುದರೊಂದಿಗೆ ಅವರು ಕೂಡಿಸಿದ ಹಣದಲ್ಲಿ ಸೇಕಡಾ 4ರ ಪ್ರತಿಫಲವನ್ನೂ ದೊರಕಿಸಿಕೊಂಡಂತಾಗುವುದು. ಇದಲ್ಲದೆ ಅತಿ ಹೆಚ್ಚು ಸಂಖ್ಯೆಯ ಟಿಕೇಟು ಪುಸ್ತಕಗಳನ್ನು ಮಾರುವವರಿಗೆ ಮಾರಾಟದಲ್ಲಿ ಸ್ಪರ್ಧೆಯ ಬೆಲೆ ಹಾಗೆ, ಬೇರೆ ಬಹುಮಾನಗಳು ಪ್ರತ್ಯೇಕವಿವೆ.

ಟಿಕೇಟು ಮಾರಾಟವು 1929ನೇ ಇಸವಿ ಜನವರಿ ತಾ 4ಕ್ಕೆ ಮುಗಿಯುವುದು. ಸೋಡ್ತಿಯನ್ನು 1929ನೆ ಇಸವಿ ಜನವರಿ ತಾ 26 ಮತ್ತು ಅದೇ ದಿನ ಮುಗಿಯದಿದ್ದಲ್ಲಿ ಅದರ ನಂತರದ ದಿನಗಳಲ್ಲಿ ತೆಗಿಯಲಾಗುವುದು

ಹಣವನ್ನು ಪಾವತಿಮಾಡುವುದಕ್ಕೂ, ಇತರ ಪತ್ರವ್ಯವಹಾರಕ್ಕೂ ವಿಳಾಸ –

ಬಿ. ಮಂಜುನಾಥ ಬಾಳಿಗಾ,
ಒನರೆರಿ ಸೆಕ್ರೆಟರಿ, ರೆಫಲ್ ಆಫೀಸ ಬ್ರಿಟೋಲೀ ಪಲೇಸ್
ಮಂಗಳೂರು, ದ. ಕ

ಮುಂಬಾಯಿಯ ಪತ್ರ.

(ಮುಂಬಾಯಿ ವಾಲಕೇಶ್ವರದ ವರ್ತಮಾನಗಳು)

ತಾ ೨೪–೯–'೨೮

ಹಳೆಯ ಸುದ್ದಿಗಳು—ಇಲ್ಲಿಯ ಶ್ರೀ ಕಾಶೀಮಠದಲ್ಲಿ ರಾಮಾಂಜನೇಯ ಭಜನಾ ಮಂಡಳಿಯ ಮುಖ್ಯ ಚಾಲಕರಾದ ಪಡುಬಿದ್ರಿ ಶ್ರೀ ಲಕ್ಷ್ಮೀನಾರಾಯಣ ಸುಬ್ರಾಯ ಶ್ಯಾನುಭೋಗರ ಉತ್ಸಾಹದಿಂದ ಕಳೆದ ನಿಜಶ್ರಾವಣ ಶುದ್ಧ ಷಷ್ಠಿಯಿಂದ ಶುದ್ಧ ಏಕಾದಶೀ ವರೆಗೆ ಸಪ್ತಾಹವು ನಡೆದು ದ್ವಾದಶೀ ದಿವಸ ಸಪ್ತಾಹದ ಮಂಗಳಾಚರಣೆಯು ಬಹಳ ವಿಜೃಂಭಣೆಯಿಂದ ಜರಗಿ ಮುಗಿಯಿತು. ಬ್ರಾಹ್ಮಣ ಸಂತರ್ಪಣೆಗೆ ಸುಮಾರು ಐನೂರಕ್ಕೆ ಮಿಕ್ಕಿದ ಜನರು ಬಂದಿದ್ದರು. ಸಪ್ತಾಹದ ಸಲುವಾಗಿ ಕಾಲಬದ್ದುಕ್ಕೆ ನಮ್ಮನವಾಗ ವಿಚಾರವೆನೆಂದರೆ ಮಠದ ಚಾವಡಿಯಲ್ಲಿರುವ ಕಂಭವೊಂದನ್ನು ತೆಗೆದರೆ ಬಹಳ ಉಪಕಾರವಾಗುತ್ತಿತ್ತು ಎಂದು ಕುಣಿದಾಡಲಿಕ್ಕೆ ಅಡಚಣೆಯಾದ್ದರಿಂದ ಕಂಭವನ್ನು ತೆಗೆಯಬೇಕೆಂದು ಠರಾವು ಸಭೆಯವರ ಚರ್ಚೆಗೆ ಬಂದು ತೆಗೆಯುವುದು ಬೇಡವೆಂಬ ಠರಾವು ಬಹುಮತ ವಿರೋಧದಿಂದ ಅಂಗೀಕರಿಸಲ್ಪಡಲಿಲ್ಲ. ಭಜನಾ ಮಂಡಳಿಯವರ ಸಪ್ತಾಹದ ಮೊದಲಿನ ವರುಷದಲ್ಲೇ ಕಂಭದ ಮೇಲೆ ದೃಷ್ಟಿ ಬಿದ್ದುದು ಆಶ್ಚರ್ಯ. ಬರುವ ವರುಷವಂತೂ ಯಾವುದರ ಮೇಲೆ ದೃಷ್ಟಿ ಬೀಳಲಿಕ್ಕಿದೆ ಎಂಬುದನ್ನು ನೋಡಬೇಕಾಗಿದೆ.

(೨) ವಾಲುಕೇಶ್ವರದಲ್ಲಿರುವ ಭಾನು ಗಂಗಾವೆಂಬ ಕೆರೆಯ ತೀರದಲ್ಲಿರುವ ಪ್ರಸಿದ್ಧಿ ಹೊಂದಿದ ಶ್ರೀ ಮಹಾದೇವರ ದೇವಸ್ಥಾನದಲ್ಲಿ ಪದ್ಧತಿಯಂತೆ ನಡೆಯುತ್ತಿರುವ ಜಾತ್ರೆಯು ಕಳೆದ ನಿಜಶ್ರಾವಣ ಅಮಾವಾಸ್ಯೆ ದಿವಸ ಬಹಳ ವಿಜೃಂಭಣೆಯಿಂದ ಜರಗಿತು. ಜನಸ್ತೋಮವು ೫೦ ಸಾವಿರಕ್ಕೆ ಮಿಕ್ಕಿ ನೆರೆದಿತ್ತು. ಶಾಂತತಾ ಭಂಗವಾಗದಂತೆ ಸರಕಾರವು ಇಪ್ಪತ್ತೈದು ಜನ ಕುದುರೆ ಸವಾರರನ್ನೂ, ಮಿಲಿಟರಿಯವರನ್ನೂ, ಪೋಲಿಸಿನವರನ್ನೂ ಚೌಪಾಟಿಯಿಂದ ಭಾನುಗಂಗಾ ವರೆಗೆ ಆಯಾಯ ಯೋಗ್ಯ ಸ್ಥಳದಲ್ಲಿ ನಿಲ್ಲಿಸಿದ್ದರು. ಸರಕಾರದವರು ಇಷ್ಟು ಸಿದ್ಧತೆ ಮಾಡಿದ್ದರೂ ಕೆಲವು ಬೀದಿಯ ಭಿಕಾರಿಗಳು ತಮಗೆ ಧರ್ಮ ಕೊಡಲಿಲ್ಲವೆಂದು ಕೆಲವು ಜಾತಿ ದೊಡ್ಡ ಮನುಷ್ಯರ ಮೇಲೆ ಬಿದ್ದು ದಾಂಧಲ ಮಾಡಿದರು. ಕಣ್ಣು ಎಂದೋಟಿಸುತ್ತ ಇದ್ದುದರಿಂದ ಕೆಲವರನ್ನು ಹಿಡಿದು ಕೈದು ಮಾಡಿದ್ದಾರೆ. ವಿಚಾರಣೆಯು ನಡೆಯುತ್ತಿದೆ. ಭಿಕಾರಿಗಳಂತೂ ಸಾಧಾರಣ ಮನುಷ್ಯರಲ್ಲ. ಇಡೀ ಹಿಂದೂಸ್ಥಾನದಲ್ಲಿ ಇವರನ್ನು ಬಿಟ್ಟರೆ ಬೇರೆ ಇಲ್ಲವೆಂದು ಹೇಳಬಹುದು.

(೩) ಕೆಲವು ದಿವಸದಿಂದ ನಳದ [illegible] ದಿಂದ ಬರುತ್ತಿದೆ. ಇಲ್ಲಿಯ ಭಾನು ಗಂಗೆಯ ಕರೆಯಲ್ಲಿ ೩೦ ಫೀಟು ನೀರು ಮೇಲಕ್ಕೆ ಬಂದಿದೆ. ನಳ ಗಾಳಿಗೇನೂ ಕಡಿಮೆ ಇಲ್ಲ. ದಿನಾಲು ಈಗ ಅಗತ್ಯವಾಗಿ ಬೇಕಾಗಿದೆ. ಸೂರ್ಯನಾರಾಯಣನು ತಕ್ಕ ಕಡೆ ದಯೆ ತೋರಿಸಿದರೆ ಆಗುತ್ತಿತ್ತು ಎಂದು ನಮ್ಮ ಕೋರಿಕೆ.

(೪) ಕಳೆದ ಆರು ತಿಂಗಳ ಹಿಂದೆ ಇಲ್ಲಿಯ ಕಾಶೀ ಮಠದ ಮಾಳಿಗೆಯಿಂದ ಸುಮಾರು ೮೦ ರೂಪಾಯಿ ಬೆಲೆ ಬಾಳುವ ಸೀರೆಗಳನ್ನೂ ಇನ್ನು ಕೆಲವು ಸಾಮಾನುಗಳನ್ನೂ ಕಳವು ಮಾಡಿಕೊಂಡು ಹೋದ ಕೊಚ್ಚಿಯ ಗೌಡ ಸಾರಸ್ವತ ಬ್ರಾಹ್ಮಣ ವೃಂದಕ್ಕೆ ಸೇರಿದ ಪದ್ಮನಾಭನೆಂಬವನನ್ನು ಯಾವುದೋ ಒಂದು ಗುಮಾನಿನ ಮೇಲೆ ಚಿತ್ರ ಬಜಾರು ಪೋಲಿಸಿನವರು ಹಿಡಿದು ಕೈದು ಮಾಡಿದ್ದಾರೆ. ಕೆಲವು ಗೃಹಸ್ಥರಿಂದ ತಿಳಿದು ಬಂದಿದೆ. ವಿಚಾರಣೆ ನಡೆಯುತ್ತಿದೆ.

(೫) **ಹೊಸ ಸುದ್ದಿಗಳು**—ಮುಂಬಾಯಿಯಲ್ಲಿ ಗಣೇಶ ಚತುರ್ಥಿ ನಿಮಿತ್ತ ಜನ್ಮಾಷ್ಟಮಿ ಉತ್ಸವಗಳು ಮೆರವಣಿಗೆಗಳು ಯಾವ ತರದ ಗಲಾಟೆಯೂ ಇಲ್ಲದೆ ಬಹಳ ವಿಜೃಂಭಣೆಯಿಂದ ಜರಗಿ ಮುಗಿದವು. ಶಾಂತತಾ ಮಾರ್ಗವನ್ನು ಅನುಸರಿಸಿ, ಸರಕಾರದವರು ಆಯಾಯ ಭಾಗಗಳಲ್ಲಿ ಮುಖ್ಯ ಮುಖ್ಯ ಭಾಗಗಳಲ್ಲಿ ಕುದುರೆ ಸವಾರರನ್ನೂ, ಮಿಲಿಟರಿಯವರನ್ನೂ, ರಿಜರ್ವ ಪೋಲಿಸಿನವರನ್ನೂ ನಿಲ್ಲಿಸಿ ತಮ್ಮ ಗೌರವಕ್ಕೆ ಕುಂದುಬಾರದಂತೆ ಗೌರವವನ್ನು ಕಾಪಾಡಿಕೊಂಡದ್ದಕ್ಕಾಗಿ ವಂದನೆಗಳು.

B. K G B.



ಎಫ್. ಮುಲ್ಲರರ
ಒಯಿಲ್ ಎಕ್ಸ್‌ಪೆಲ್ಲರ್.

ಎಣ್ಣೆ ಬೀಜಗಳಿಂದಲೂ, ಎಣ್ಣೆಯುಳ್ಳ ಹಣ್ಣುಗಳಿಂದಲೂ, ಎಣ್ಣೆಯನ್ನು ತೆಗೆಯಲಿಕ್ಕೆ ಅದ್ವಿತೀಯ ಉಪಕರಣ.

ಕಾರ್ಯದಲ್ಲಿ ಸುಲಭ—ಸಂಪೂರ್ಣ ಸ್ವತಶ್ಚಲನ—ಕಡಿಮೆ ಖರ್ಚು ಕಡಿಮೆ ಪವರಿನ ವ್ಯಯ—ಹೆಚ್ಚಿನ ಎಣ್ಣೆಯ ಲಾಭ.

VOLKART BROS ENGINEERS

Armenian Street, MADRAS.

ರೋಲರ್ ಮಿಲ್ಲುಗಳು, ಡಿಸ್‌ಇಂಟಿಗ್ರೇಟರುಗಳು, ಫಿಲ್ಟರ್ ಪ್ರೆಸ್‌ಗಳು, ಆಯಿಲ್ ಪಂಪುಗಳು, ಹರಳ ಬೀಜವನ್ನು ಒಡೆಯುವದಕ್ಕೆ ತಕ್ಕದಾದ ಸಣ್ಣ ಹೈಡ್ರೂಲಿಕ್ ಪ್ರೆಸ್ ಪ್ಲೇಂಟುಗಳನ್ನೂ ನಾವು ಒದಗಿಸುವೆವು.

ಎಲ್ಲಾ ಎಣ್ಣೆಯ ಮಿಲ್ಲುಗಳ ಕುರಿತು ಒಳ್ಳೆಯ ಸಲಹೆಗಳನ್ನು ಕೊಡುವೆವು.

ನಿಮ್ಮ ಕನಸು ನಿಜವಾಗುವುದು.

ಮಾತೃಪ್ರೇಮದ ಅನುಭವವನ್ನು ಪಡೆಯಬೇಕೆಂದು ಕುತೂಹಲಿಗಳಾಗಿರುವ ಹೆಂಡಂದಿರು ಸಾವಿರಾರು ಇರುವರು. ಮಗುವಿನ ಕೋಮಲ ಕರಗಳು ತನ್ನ ಮೈ ಮೇಲೆ ಆಡುತ್ತಿರಬೇಕೆಂದು ಪ್ರತಿಯೊಬ್ಬ ಸ್ತ್ರೀಯಲ್ಲಿಯೂ ಬಹಳ ಅಭಿಲಾಷೆ ಇದ್ದೇ ಇರುವುದು. ಆದರೆ, ಒಮ್ಮೊಮ್ಮೆ ಹೆಂಡಂದಿರಲ್ಲಿ ಅನಾರೋಗ್ಯವಿದ್ದರೆ ಅವರ ಈ ಅಭಿಲಾಷೆಯು ಫಲಿಸಲಾರದು. ಅನಾರೋಗ್ಯವನ್ನು ಹೋಗಲಾಡಿಸಿದರೆ ಅವರ ಕನಸು ನಿಜವಾಗುವುದು. ಮದುವೆಯಾಗಿ ಹಲವು ವರ್ಷಗಳ ವರೆಗೆ ಮಕ್ಕಳಿಲ್ಲದೆ ಕೊರಗುತ್ತಿದ್ದು, ಕೊನೆಗೆ ಮಕ್ಕಳಾದ ತಾಯಂದಿರಿಂದ ಹಲವು ಪತ್ರಗಳು ನಮಗೆ ಬಂದಿರುತ್ತದೆ, **ಹೆಂಗಸರಿಗಾಗಿಯೇ ಇರುವ ಫೆಲೂನಾ ಮಾತ್ರೆಗಳನ್ನು** ಉಪಯೋಗಿಸಿ ಪ್ರತಿಫಲವಾಗಿ ದೊರಕಿದ ಆರೋಗ್ಯವೇ ಇದಕ್ಕೆ ಕಾರಣವೆಂದು ಅವರೆನ್ನುವರು.

ಈ ಕೆಳಗಿನ ಪತ್ರವನ್ನು ಪ್ರಕಟಿಸಲು ನಾವು ಅಧಿಕಾರಹೊಂದಿರುತ್ತೇವೆ.

"ಫೆಲೂನಾ ಮಾತ್ರೆಗಳನ್ನು ಉಪಯೋಗಿಸಿ ನನ್ನ ಪತ್ನಿಗೆ ಲಭಿಸಿದ ಉಪಕಾರವನ್ನು ನಾನು ಎಂದಿಗೂ ಮರೆಯೆನು. ಅದನ್ನು ಉಪಯೋಗಿಸಲು ಪ್ರಾರಂಭಿಸಿದಂದಿನಿಂದ ಆವಳ ಜೀವನದಲ್ಲಿ ಒಂದು ಪರಿವರ್ತನೆಯೇ ಉಂಟಾಗಿ, ಅವಳು ಒಂದು ಅಂದವಾದ ಸುಖಿಯಾದ ಶಿಶುವನ್ನು ಪ್ರಸವಿಸಿರುವಳೆಂದು ತಿಳಿಸಲು ನಾನು ಸಂತೋಷಪಡುತ್ತೇನೆ, ಆಕೆಯು ಎಂದಿಗೂ ತಾಯಿಯಾಗಳೆಂದು ನಾನು ತಿಳಿದಾಗ, ನೀವು ಇಂತಹ ಗುಣಕಾರಿಯಾದ ಔಷಧಿಯನ್ನು ಒದಗಿಸುದುದಕ್ಕಾಗಿ ನನ್ನ ಕೃತಜ್ಞತೆಯನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ!!"

(ಸಹಿ) ಪಿ. ಇ ರೆಸ್ಮಸ್.

(ವಿಳಾಸ) ಪಿ. ಜಿ. ಪಾರ್‌ವಿವ್, ಮೌಂಟ್ ಪ್ಲೆಜರ್, ಸಿ. ಪಿ.

ಹೆಂಗಸರಿಗೆ ಹೆಚ್ಚಾಗಿ ಇರುವ ನೋವು, ಬೇನೆಗಳನ್ನು ಹೋಗಲಾಡಿಸಬೇಕಾದರೆ, ಮತ್ತು ದಣುವಾಗುವದನ್ನು ನಿಲ್ಲಿಸಬೇಕಾದರೆ ಈ ಔಷಧಿಯನ್ನು ಸೇವಿಸಬೇಕು. ಇದರಿಂದ ಒಳ್ಳೆಯ, ಕಾಂತಿಯುಕ್ತವಾದ, ಉತ್ಕೃಷ್ಟವಾದ ಆರೋಗ್ಯವು ಲಭಿಸುವದು.

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸರಿಂದಲೂ ಮಾರಲ್ಪಡುವವು.



ಬಾಟಲಿಗೆ ರೂ. 2/4.
ಮುಖ್ಯ ಏಜಂಟರು— ಪಟೇಲ್ ಮತ್ತು ಧೊಂಡ ಫೋಸ್ಟು ಆಫೀಸು ಬೋಕ್ಸ್ 838. ಮುಂಬಾಯಿ.

ಮದ್ರಾಸು ಸಂಸ್ಥಾನಕ್ಕೆ—

ದಾದಾ ಎಂಡ್ ಕೋ,
360 ಚೈನಾ ಬಜಾರ್ ರೋಡ್, ಮದರಾಸ್.

ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕಟ್ಟುಗಳಲ್ಲಿ ಸಿಕ್ಕುವವು.

Product of Graham Remedies Ltd., Cape Town, S. A. 85.

ಕಾವಳಕಟ್ಟೆ, ಎಲಿಮೆಂಟರಿ ಶಾಲಾ ಉಪಾಧ್ಯಾಯ ಸಂಘದ ವರುಷಾವಧಿ ವರ್ಧಂತಿಯ ವರದಿ.

ಈ ಸೆಂಟರಿನ ಉಪಾಧ್ಯಾಯ ಸಂಘದ ವರುಷಾವಧಿ ಮಹಾಸಭೆಯು ಸಪ್ಟಂಬರ ತಿಂಗಳ ತಾರೀಕು 29ನೇ ಶನಿವಾರ ಮಧ್ಯಾಹ್ನ 2 ಗಂಟೆಯಿಂದ 6 ಗಂಟೆಯ ವರೇಗೆ ಮಂಗಳೂರು ತಾಲೂಕು ಬೋರ್ಡು ಮೆಂಬರರಾದ ರಾ ಬಂಟವಾಳ ವೆಂಕಟ್ರಾಯ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಕಟ್ಟೋಣವನ್ನು ಬಹಳ ಅಂದವಾಗಿ ಅಲಂಕರಿಸಿದ್ದರು. ಸಭೆಗೆ ಈ ಸೆಂಟರಿಗೆ ಸೇರಿದ ಎಲ್ಲಾ ಉಪಾಧ್ಯಾಯರೂ ಅಲ್ಲದೆ ಶಾಲೆ ಇರುವ ಕಾವಳ ಮೂಡೂರು ಗ್ರಾಮದ ಮಹನೀಯರೆಲ್ಲರೂ, ಸುತ್ತಮುತ್ತಲಿನ ಗ್ರಾಮದ ದೊಡ್ಡ ವರ್ಗದಾರರೂ ಬಂದಿದ್ದರು.

ಅಧ್ಯಕ್ಷರ ಚುನಾವಣೆಯಾದೊಡನೆ ಕಾವಳ ಮೂಡೂರು, ಶಾಲೆಯ ಹೆಣ್ಮಕ್ಕಳು ದೇವತಾ ಪ್ರಾರ್ಥನೆಯನ್ನು ಮಾಡಿದರು. ಬಂಟ್ವಾಳ ಬೋರ್ಡು ಹುಡುಗಿಯರ ಶಾಲೆಯ ಮುಖ್ಯ ಉಪಾಧ್ಯಾಯಿನಿಯರಾದ ಇಸಬೆಲ್ ಕ್ಕೊಲೋರವರು ಸ್ವಾಗತ ಹಾಡನ್ನು ಹಾರಮೋನಿಯಮ್ ಬಾರಿಸಿ ಹಾಡಿದರು. ನಂತರ ಎಂ. ಜಿ ಬಂಗೇರರು ಸ್ವಾಗತ ಭಾಷಣವನ್ನು ಕೊಟ್ಟರು. ಸೆಕ್ರೆಟರಿಯವರಾದ ನರಸಿಂಹಯ್ಯನವರು ಸಂಘದ ವರುಷಾವಧಿ ರಿಪೋರ್ಟನ್ನು ಓದಿದರು. ಶ್ರೀಮತಿ ಐ. ಕೊಲೋಸರವರು ಉಪಾಧ್ಯಾಯರ ಸಂಘಗಳ ಉದ್ದಿಶ್ಯ ಮತ್ತು ಕಾರ್ಯಗಳ ಕುರಿತು ಒಂದು ಹಾಡನ್ನು ಚಲೋದಾಗಿ ಹಾಡಿದರು. ನಂತರ ಎಂ. ಜಿ. ಬಂಗೇರರು ಗ್ರಾಮಾಭಿವೃದ್ಧಿಯನ್ನು ಗ್ರಾಮಸ್ಥರು ಯಾವ ರೀತಿಯಲ್ಲಿ ಮಾಡಬಹುದು ಎಂಬುವರ ವಿಷಯ ಒಂದು ಭಾಷಣವನ್ನು ಕೊಟ್ಟನಂತರ ಚಲೋದಾದ ಕೋಲಾಟ ಗಾಯನ, ಹಾರ್ಮೋನಿಯಮ್ ಗಾಯನವಾಯಿತು. ಇದಾದ ಮೇಲೆ ಹಳ್ಳಿ ಶಾಲೆಗಳನ್ನು ಯಾವ ರೀತಿಯಲ್ಲಿ ಅಭಿವೃದ್ಧಿಪಡಿಸಬಹುದು ಎಂಬುವರ ಕುರಿತು ಅಜಿಬೆಟ್ಟು ಶಾಲೆಯ ಮುಖ್ಯ ಉಪಾಧ್ಯಾಯರು ಒಂದು ಉಪನ್ಯಾಸವನ್ನು ಓದಿದರು. ಕೊಂಡಾಡಿ ಎಳಚಿತ್ತಾಯರು ಉತ್ತಮ ರೀತಿಯಲ್ಲಿ ಹಾರ್ಮೋನಿಯಮ್ ಬಾರಿಸಿ ತ್ಯಾಗರಾಜ ಕೃತಿಗಳನ್ನು ಹಾಡಿದರು. ಹುಡುಗಿಯರು ಒಂದು ಇಂಗ್ಲಿಷ ಹಾಡನ್ನು ಹಾಡಿದರು. ಹುಡುಗರ ವಿದ್ಯಾಭ್ಯಾಸಕ್ಕಾಗಿ ಇನಾಮು ಹಂಚಲಾಯಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಗ್ರಾಮಗಳು ಅಭಿವೃದ್ಧಿಯಾಗಬೇಕಾದರೆ ಗ್ರಾಮಸ್ಥರೆಲ್ಲರೂ ಒಟ್ಟುಕೂಡಿ ಕೆಲಸಮಾಡಬೇಕೆಂದು ಗ್ರಾಮದಲ್ಲಿರುವ ಪ್ರತಿ ಒಂದು ಮನೆಯವರು ತಮ್ಮ ಗಂಡು ಮಕ್ಕಳನ್ನು ಶಾಲೆಗಳಿಗೆ ಕಳುಹಿಸಿ ವಿದ್ಯಾಭಿವೃದ್ಧಿಯಾಗುವಂತೆ ಸಾಧಿಸಬೇಕೆಂದೂ, ಗ್ರಾಮದಲ್ಲಿ ಕುಡಿಕತನ, ಜುಗಾರಾಟ, ಮುಕದ್ದಮೆಗಳು ಮುಂತಾದ ಜನಾಂಗದ ಏಳಿಗೆಗೆ ರೋಗದ ಬಾಧೆಗಳಂತಿರುವ ಈ ಕೊರತೆಗಳನ್ನು ತೆಗೆದು ಹಾಕಲು ಸಾಧಿಸಬೇಕೆಂದೂ, ವರ್ಗದಾರರೆಲ್ಲರೂ ದನಗಳ ಸ್ಥಿತಿಯು ಅಭಿವೃದ್ಧಿಯಾಗಿ ಹಾಲು ಸಿಕ್ಕುವಂತೆ ಮಾಡುವುದಕ್ಕಾಗಿ ದನಗಳ ಸಂತತಿ ಅಭಿವೃದ್ಧಿಗಾಗಿ ಬೀಜದ ಎತ್ತುಗಳನ್ನು ಸಾಕಬೇಕೆಂದೂ ಪರಸ್ಪರ ಸಹಾಯಕ ಸಂಘಗಳನ್ನು ಸ್ಥಾಪಿಸಿ ಬೇಸಾಯಗಾರರಿಗೆ ಧನಸಹಾಯ ಮಾಡಬೇಕೆಂದೂ, ರಾತ್ರಿ ಶಾಲೆಗಳನ್ನು ತೆರೆಯಬೇಕೆಂದೂ, ಬೇಸಾಯ ಅಭಿವೃದ್ಧಿಪಡಿಸಿ ಗ್ರಾಮದಲ್ಲಿ ಬಂಜರು ಸ್ಥಳಗಳೇ ಇಲ್ಲದಂತೆ ಮಾಡಬೇಕೆಂದೂ, ಹಾಳುಬಿದ್ದ ಕೆರೆಗಳನ್ನು ಗ್ರಾಮಸ್ಥರೆಲ್ಲರೂ ಕೂಡಿ ದುರುಸ್ತಿಪಡಿಸಬೇಕೆಂದೂ, ಗ್ರಾಮದಲ್ಲಿ ನೇಯಿಗೆಯನ್ನು ಅಭಿವೃದ್ಧಿಪಡಿಸಿ ಗ್ರಾಮಸ್ಥರಿಗೆ ಬೇಕಾದ ವಸ್ತ್ರವನ್ನೂ ತಯಾರಿಸಿ ವಸ್ತ್ರಕ್ಕಾಗಿ ಇತರರ ಮೇಲೆ ಆಧರಿಸಿಕೊಂಡಿರದಂತೆ ಮಾಡಬೇಕೆಂದೂ, ಎಲ್ಲಾ ವಿಧಗಳಲ್ಲಿಯೂ ಪಟ್ಟಣಗಳು ಅಭಿವೃದ್ಧಿಯಾದಂತೆ ಗ್ರಾಮಗಳನ್ನು ವೃದ್ಧಿಪಡಿಸಬೇಕೆಂಬ ಹಲವು ವಿಷಯಗಳನ್ನೊಳಕೊಂಡಿರುವ ಒಂದು ದೀರ್ಘ ಭಾಷಣವನ್ನು ಕೊಟ್ಟರು.

ನಂತರ ಗ್ರಾಮದವರೂ ನೆರೆಗ್ರಾಮದ ವರ್ಗದಾರರೂ, ಅವರವರ ಗ್ರಾಮಗಳಲ್ಲಿ ಮಾಡಿಸಬೇಕಾದ ಭಾವಿ, ಕೆರೆ ದುರುಸ್ತಿ, ಹೊಸ ಶಾಲಾ ಸ್ಥಾಪನೆ, ಇದ್ದ ಶಾಲೆಗಳಲ್ಲಿ ಮೇಲಿನ ತರಗತಿಗಳನ್ನು ತೆರೆಯುವದರ ವಿಷಯ ತಾಲೂಕು ಬೋರ್ಡು ಮೆಂಬರರೊಡನೆ ಮಾತಾಡಿದರು. ಬಗ್ಗೆಟ್ಟಿನಿಂದ ದಸ್ಕತು ಹಾಕಿದ ಅರ್ಜಿಗಳನ್ನು ತಾಲೂಕು ಬೋರ್ಡಿಗೆ ಕಳುಹಿಸಿದರೆ ಅವರ ವಿಷಯ ಸಾಧಿಸುತ್ತೇನೆಂದು ಮೆಂಬರರು ಪ್ರತ್ಯುತ್ತರವನ್ನು ಕೊಟ್ಟರು. ನಂತರ ಧನ್ಯವಾದ ರಾಷ್ಟ್ರಗೀತ ಹಾಡು, ಹಾರ್ಮೋನಿಯಂ ಸಮ್ಮರ್ದನಾಗಿ ಸಭಾಕಾರ್ಯವು ಮುಗಿಯಿತು. ಆನಂತರ ಬಂದ ಉಪಾಧ್ಯಾಯ ವರ್ಗದವರಿಗೂ ಗ್ರಾಮಸ್ಥರಿಗೂ ಫಲಾಹಾರಗಳಾದವು.

ರಾತ್ರಿ 'ಕುಮಾರ ವಿಜಯ' ಯಕ್ಷಗಾನವಾಯಿತು. ಗ್ರಾಮದ ದೊಡ್ಡ ವರ್ಗದಾರರೂ ಇದರಲ್ಲಿ ಭಾಗಿಗಳಾಗಿದ್ದರು. ಬಿಯನದ್ಯ ರಾ ವೆಂಕಟ್ರಮಣಾಚಾರ್ಯರು ಭಾಗವತರು, ರಾ ಕೃಷ್ಣಾಚಾರ್ಯರ ಮದ್ದಳೆ, ಕೊಂಡಾಡಿ ಅನಂತ ಎಳಚಿತ್ತಾಯರೂ, ರಾ ಕೇಶವ ಜಲರೂ ಅರ್ಥಗಾರರು, ಉಪಾಧ್ಯಾಯರಲ್ಲಿ ಹಲವರು ಅರ್ಥಗಾರರಾಗಿದ್ದರು. ರಾತ್ರಿ ಮೂರು ಗಂಟೆಗೆ ಯಕ್ಷಗಾನ ಮುಗಿದು ಧನ್ಯವಾದಗಳಾಗಿ ಅಂದಿನ ಸಭಾಕಾರ್ಯಗಳು ಮುಗಿದವು.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. ನಂಬ್ರ 104/1928.

ಅಪ್ಪಯ್ಯ ಗೌಡ — ಅರ್ಜಿದಾರ.

ಮತ್ತು

ಹೊನ್ನಮ್ಮ — ರೆಸ್‌ಪೊಂಡೆಂಟ.

ಮೇಲ್ಕಂಡ ಅರ್ಜಿದಾರರನು ತನ್ನನ್ನು ಮೃತ ಚನಿಯಪ್ಪ ಗೌಡನ ಮಕ್ಕಳ ಮಕ್ಕಳು ಕೃಷ್ಣಪ್ಪ, ಲಕ್ಷ್ಮಿ, ಶಿವಣ್ಣ ಮತ್ತು ಲಿಂಗಪ್ಪ ಇವರ ದೇಹದ ವ ಆಸ್ತಿಯ ಗಾರ್ಡಿಯನನಾಗಿ ನೇಮಿಸಬೇಕಾಗಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 2—11—1928ಕ್ಕೆ ತನ್ನಿಗೆ ಇಟ್ಟಿದೆ. ಆ ಸಮ್ಮಂಧ ಯಾರಾದರೂ ಆಕ್ಷೇಪಿಸುವವರಿದ್ದರೆ ತಮ್ಮ ಆಕ್ಷೇಪಗಳನ್ನು ಮೇಲ್ಕಂಡ ವ್ಯಾದಿಗೆ ಸದ್ರಿ ಕೋರ್ಟಿನಲ್ಲಿ ಹಾಜರುಪಡಿಸತಕ್ಕದ್ದೆಂತು ಈ ಮೂಲಕ ಸರ್ವರಿಗೂ ತಿಳಿಸಲಾಗಿರುತ್ತದೆ.

Mangalore
2—10—'28

Gangolly Krishna Rao,
Pleader for Petr.

ಸಂಸ್ಕೃತ ಅರಬಿ ಮುಂತಾದ ಭಾಷೆಗಳ ಪ್ರಾಚ್ಯ ಶೋಧನಾಲಯಗಳು.

[illegible] ಸಂವತ್ಸರದ ಭಾದ್ರಪದ [illegible] ವಾರದಿಂದ ವಿಭವ ಸಂವತ್ಸರದ ಭಾದ್ರಪದ [illegible] ಶುಕ್ರವಾರದ ವರೆಗಿನ ಪಂಚಾಂಗ.
(ಗ್ರಾಹಕರ ಕನ್ಯಾ (ನಿರಾಕಾರ)

[illegible]	[illegible]	[illegible]	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ. ಉ	ಅಸ್ತ
13	[illegible]	●	[illegible]	ಹಸ್ತಾ	[illegible]	[illegible]	6.22	6.13
14	[illegible]	೧	[illegible]	ಚಿತ್ರಾ	[illegible]	[illegible]	6 22	6.12
15	[illegible]	[illegible]	[illegible]	ಸ್ವಾತೀ	[illegible]	[illegible]	6.23	6.12
16	[illegible]	[illegible]	[illegible]	ವಿಶಾಖಾ	[illegible]	[illegible]	6 23	6.11
17	[illegible]	[illegible]	[illegible]	ಅನುರಾಧಾ	[illegible]	೧	6 23	6.11
18	[illegible]	[illegible]	[illegible]	ಜ್ಯೇಷ್ಠಾ	[illegible]	[illegible]	6.23	6.10
19	ಶುಕ್ರ	[illegible]	[illegible]	ಮೂಲಾ	[illegible]	[illegible]	6.23	6.10

ಮಂಗಳೂರಿನ ವಾಯುಸ್ಥಿತಿ.

Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು		Minimum ಕಡಿಮೆ		Rainfall ಮಳೆ ದಿನದ ಮಳೆ	ಒಟ್ಟು ಮಳೆ
5	83—	3	71—	4	0—44	...
6	83—	9	72—	7	0—01	—
7	84—	3	73—	0	0—41	—
8	85—	2	74—	1	0—72	—
9	84—	0	74—	2	0—21	—
10	85—	8	74—	1	—	
11	87—	5	73—	3	—	
						115-26

ಮಂಗಳೂರಿನ ಪೇಟೆ ಧಾರಣೆ.

ಜಿನಸು	ಇಂದ ರೂ. ಆ.	ವರೆಗೆ ರೂ. ಆ.
ಮುಸ್ತಾಕ	7— 4	8— 4
ಗುಡ್ಡ	6—14	7— 4
ಸುಗ್ಗಿ	6—10	7 12
ರಾಶಿ	6— 6	6—14
ಊರ ಅನ್ವಲ್ ಬೆಳ್ತಿಗೆ	7— 8	8—14
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	12— 8	12 12
ಎಲ್ಲೂರು ಬೆಳ್ತಿಗೆ ತುಪ್ಪ ಗಳ್ಳೆ	7— 6	7—12
ಗೋಧಿ ಗೋಣಿ ಗಳ್ಳೆ	8— 0	20 - 0
ಹುರುಳಿ ಗೋಣಿ ಗಳ್ಳೆ	7— 8	10 0
ಕಡಲೆ ಗೋಣಿ ಗಳ್ಳೆ	13—12	15 8
ತೊಗರಿ ಗೋಣಿ ಗಳ್ಳೆ	14 8	15 8
ತೊಗರಿಬೇಳೆ ಗೋಣಿ ಗಳ್ಳೆ	18— 0	26 0
ಉದ್ದು ಗೋಣಿ ಗಳ್ಳೆ	14— 8	14 12
ಹೆಸರು ಗೋಣಿ ಗಳ್ಳೆ	13— 0	14 4
ಊರು ಬೆಲ್ಲ ಖಂಡಿ ಗಳ್ಳೆ	65— 0	79— 0
ಉಪ್ಪು ಗೋಣಿ ಗಳ್ಳೆ	4— 8	5— 4
ಬೊಂಬ್ರ ಖಂಡಿ ಗಳ್ಳೆ	130— 0	
ಕೊಬ್ರಿ ಹಿಂಡಿ ಖಂಡಿ ಗಳ್ಳೆ	47— 8	49 0
ಎಳ್ಳೆಂಡಿ ಖಂಡಿ ಗಳ್ಳೆ	35— 8	47— 4
ಕೊಬ್ರಿ ಎಣ್ಣೆ ಮುಡಿ ಗಳ್ಳೆ	8— 0	9 4
ಎಳ್ಳೆಣ್ಣೆ ಮುಡಿ ಗಳ್ಳೆ	8— 0	8— 6
ಹರಳೆಣ್ಣೆ ಬೆಳ್ತಿಗೆ ಗಳ್ಳೆ	7— 2	8 0
ಮೋರಿಸ ಸಕ್ಕರೆ ಮುಡಿ ಗಳ್ಳೆ	3—12	3—14
ಊರ ಮೆಣಸಿನ ಕಾಯಿ ಮುಡಿ ಗಳ್ಳೆ	3— 0	5— 0
ಸಾಸಿವೆ ಮುಡಿ ಗಳ್ಳೆ	8— 8	8—12
ಕೊತ್ತಂಬರಿ ಮುಡಿ ಗಳ್ಳೆ	5— 8	7— 0
[illegible] ಖಂಡಿ ಗಳ್ಳೆ	390— 0	400— 0
[illegible] ಖಂಡಿ ಗಳ್ಳೆ	180—	195— 0
[illegible] ಖಂಡಿ ಗಳ್ಳೆ	525— 4	525— 8
[illegible] ಗಳ್ಳೆ	40— 0	—
[illegible] ಮುಡಿ ಗಳ್ಳೆ	3—12	4 —0
[illegible] ಖಂಡಿ ಗಳ್ಳೆ	42— 0	42 8
[illegible] ಗಳ್ಳೆ	16— 0	16 8
[illegible] ಮುಡಿ ಗಳ್ಳೆ	20—	21
[illegible] ಗಳ್ಳೆ	15— 0	—
[illegible] ಮುಡಿ ಗಳ್ಳೆ	14— 8	15— 8
[illegible] ಗಳ್ಳೆ	13— 8	—
[illegible] ಖಂಡಿ ಗಳ್ಳೆ	70—	85—

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಪ್ರಿಯವಾಗಲಿ ಅಂಚೆಹಾಸಲುಆಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ್ಯ ದೃಢಗಾತ್ರರಾಗಿರಿಸುವ
ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮೃತಿ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನಂಗೆಳ ಸಡಲಿಕೆ, ಮೂತ್ರರೋಗ ವ್ಯಾಧಿಗಳು, ಸರ್ವಾಂಗಶಕ್ತಿ ಇವುಗಳನ್ನು ಪರಿಹಾರವಾಗುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0
ಇವನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಚಿನ್ನಾ ಬಜಾರು, ಮದ್ರಾಸು.
ಮಂಗಳೂರು ಏಜೆಂಟರು:— ವಿ. ಗೂಲಸ್ ವರ್ಟರ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ



ತಯಾರಾಗುತ್ತಲಿದೆ! ತ್ವರೆಮಾಡಿರಿ!!

ಮೂರನೇ ದರ್ಜೆಯ ಮಕ್ಕಳಿಗಾಗಿ

ಪ್ರಕೃತಿಶಾಸ್ತ್ರ ಸಾಮಾನ್ಯ ತಿಳುವಳಿಕೆ.

[illegible] ಎಲಿಮೆಂಟರಿ ಎಜ್ಯುಕೇಶನಲ್ [illegible]
ಹೊಸ ಪಾಠಪಟ್ಟಿಗನುಸಾರವಾಗಿ

ಎಸ್. ಜಿ. [illegible]
ದೊರೆಯುವ ಸ್ಥಳ

ಶಾರದಾ ಛಾಪಖಾನೆ.
ರಥಬೀದಿ, ಮಂಗಳೂರು.

ಇನ್ನೂ ಹೆಚ್ಚಿನ ಕಾರಣಗಳು!

ಪೆರೆಡೈಸ್ ಟೋನಿಕ್ ಪಿಲ್ಸ್

ಎಂಬ ಕಸ್ತೂರಿ, ಶಿಲಾಜಿತ, ಬಂಗಾರ ಮೊದಲಾದ ಅಮೂಲ್ಯ ಪದಾರ್ಥಗಳಿಂದಾಗುವ ಈ ನಿರ್ಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳು ಇಡೀ ಶರೀರದ ಚೇತನವನ್ನು ವೃದ್ಧಿಮಾಡುವವು. ದೇಹಶಕ್ತಿಯನ್ನೂ ಸ್ನಾಯುಗಳ ಬಲವನ್ನೂ ಹೆಚ್ಚಿಸಿ, ಪ್ರಾಣವನ್ನೂ ತೇಜವನ್ನೂ ಅತಿಯಾಗಿ ಕಳೆಕೊಂಡಿರುವವರಿಗಾದರೂ ತೃಪ್ತಿಕರವಲ್ಲೇ
— ಕೊಡುವುದು. —

60 ಮಾತ್ರೆಗಳುಳ್ಳ ಸೀಸೆಗೆ ಬೆಲೆ 7—8—0 ಮಾತ್ರ
ಆರ್. ಛೋಟಾಲಾಲ್ ಎಂಡ್ ಕೋ.,
(K) ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂಬ್ರ 2

ಆದರ್ಶ ಶಕ್ತಿವರ್ಧಕವು.

[illegible] ಸಂಸಾರ [illegible] ಬಳಲಿದ [illegible] "ಎಲಿಕ್ಸರ್ [illegible]" ಎಂಬುದು, ನೀವು ಕಳಕೊಂಡ ಶಕ್ತಿಯನ್ನು ಪುನಃ ತುಂಬಿಸಿ, ನಿಮ್ಮ ಜೀವನವನ್ನು ಸುಖಮಯವಾಗಿ ಮಾಡುವದು.
ಮೂರು ಬಾಟಲಿಗಳನ್ನು ಕ್ರಮವಾಗಿ ಸೇವಿಸುವುದರಿಂದ ನೀವು ಚಟುವಟಿಕೆಯನ್ನು ಹೊಂದಿ ಉತ್ಸಾಹಭರಿತರಾಗುವಿರಿ. ಬಾಟಲಿಗೆ ಕ್ರಯ ರೂಪಾಯಿ 5.

ಕ್ರಯದ ಪಟ್ಟಿಗೂ ಮಾಹಿತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಸ್. ಡಿ. ವೋರಾ ಮತ್ತು ಕಂಪೆನಿ.
ಚಿಲ್ಲರೆ ಮತ್ತು ರಖಮು ಔಷಧಿ ವ್ಯಾಪಾರಿಗಳು.
P. O. ಬಾಕ್ಸ್ ನಂಬ್ರ 2003 ಬೊಂಬಾಯಿ ನಂ. 2

ವಿಷಯ ಸೂಚಿಕೆ

[illegible]

ಹಿಂಸೆ ಮತ್ತು ಅಹಿಂಸೆ . . . ೬

ವಿದೇಶ ವರ್ತಮಾನ . . . ೯

[illegible]ಗಳು . . . ೯

[illegible]ಗಳು . . . ೧೦

ವರ್ತಮಾನ ಸಂಗ್ರಹಗಳು

ಜಿಲ್ಲೆಯ ವರ್ತಮಾನ . . . ೬-೭

ದಕ್ಷಿಣ ಕನ್ನಡ — ಮಂಗಳೂರು, ಕಲ್ಯಾಣಪುರ, ಪಾಣೆಮಂಗಳೂರು, ಬೆಳ್ತಂಗಡಿ, ಕಾರ್ಕಳ, ಕುಂಬಳೆ, ಮಂಜೇಶ್ವರ

ಹೆರಾಲು ಪುರಕಳೆ . . . ೭-೮

ವಿವಿಧ ಸಮಾಚಾರಗಳು . . . ೯

ಬಿಲ್ಲವರ ಹಿತವರ್ಧಕ ಸಂಘ ಮುಂಬಾಯಿ . . . „

ಹಿಂದೂಸ್ಥಾನದಲ್ಲಿ ವ್ಯವಸಾಯದ ಸುಧಾರಣೆ . . . ೧೧

ಪ್ರತೀಕಾರ . . . ೧೩-೧೧

ಪತ್ರವ್ಯವಹಾರ, ೧, ೨, ೩. . . . ೩

ಸ್ವದೇಶಾಭಿಮಾನಿ.

ತಾರೀಕು ೧೨ನೇ ಶುಕ್ರವಾರ ಅಕ್ಟೋಬರ ೧೯೨೮

ಹಿಂಸೆ ಮತ್ತು ಅಹಿಂಸೆ.

ಮಹಾತ್ಮಾಜಿಯವರ ಸಬರ್ಮತಿ ಆಶ್ರಮದಲ್ಲಿ ಕೋತಿಗಳ ಕಾಟ ಬಹಳ ಹೆಚ್ಚಾಗಿದೆಯೆಂದು ಈ ಕಾಟವನ್ನು ಸಹಿಸುವುದೇ ಅಸಾಧ್ಯವಾಗಿ ಕೋತಿಗಳಿಗೆ ಹಿಂಸಾಕರವಾಗದ ಯಾವ ರೀತಿಯಲ್ಲಿ ಇವರಿಂದ ತಪ್ಪಿಸಿಕೊಳ್ಳಬಹುದೆಂದೂ ಅಹಿಂಸಾ ವಾದಿಗಳಿಗೆ ಮಹಾತ್ಮಾಜೀಯವರು ಈಗ ಕೊಟ್ಟಿರುವ ಹೊಸ ಸಮಸ್ಯೆಯಾಗಿದೆ. ಹಿಂಸಾ ತತ್ವನಿರ್ದೇಶದಲ್ಲಿ ಮಹಾತ್ಮಾಜೀಯವರ ಅಭಿಪ್ರಾಯಗಳು ನೂತನ ಅನುಭವಗಳೊಡನೆ ಬದಲಾವಣೆ ಹೊಂದುತ್ತಿವೆಯೋ ಅಥವಾ ಅವರ ಮೂಲ ತತ್ವಗಳನ್ನು ಕಾರ್ಯಕಾರಿತೆಯ ಕಡೆಗೆ ಸರಿಹೊಂದಿಸಲು ಅವರ ಅನುಯಾಯಿಗಳು ಅಸಮರ್ಥರಾದರೊ ಎಂಬ ವಿಷಯವನ್ನು ನಾವಿಲ್ಲಿ ತರ್ಕಿಸುವುದಿಲ್ಲ. ಆದರೆ ಹಿಂಸೆ ಮತ್ತು ಅಹಿಂಸೆಗಳೊಳಗಿನ ಪ್ರಭೇದವನ್ನು ಸ್ಥಾಪಿಸಲು ಮಹಾತ್ಮಾಜೀಯವರು ಪಡುವಷ್ಟು ಶ್ರಮವನ್ನು ಅವರ ಅನುಯಾಯಿಗಳು ಪಡೆಯ ಹೋಗುವುದಿಲ್ಲವೆಂಬುವುದು ಮಾತ್ರ ಮಹಾತ್ಮಾಜೀಯವರ ನೂತನ ಅಭಿಪ್ರಾಯಗಳನ್ನು ಮನನ ಮಾಡಿದರೆ ತಿಳಿಯಬರುವುದು.

ಅಸಹಕಾರದ ಆರಂಭದ ಚಳವಳಿಯಲ್ಲಿ ಅಹಿಂಸಾ ತತ್ವವು ಬಹಳ ಸುಲಭವಾಗಿ ಉಪದೇಶಿಸಲ್ಪಟ್ಟಿದ್ದಿತು. ಅದರ ಪರಿಜ್ಞಾನವೂ ಬಹಳ ಸುಲಭವಾಗಿಯೇ ಉಂಟಾಗುವುದೆಂದು ಅನುಯಾಯಿಗಳು ನೆನಸಿಕೊಂಡಿದ್ದರು; ಆ ಸಮಯದಲ್ಲಿ ತಗಣೆಗಳ ಕಾಟವನ್ನು ಪರಿಹರಿಸುವ ಸಾಮಾನ್ಯ ರೂಢಿಯ ಉಪಾಯದಲ್ಲಿ ಕೂಡ ಅಹಿಂಸಾ ವಾದಿಗಳಿಗೆ ಖಂಡನೀಯ ವಿಷಯವಿದ್ದಿತು. ಮೈ ಚುಚ್ಚಿ ಬೇನೆ ಕೊಟ್ಟ ಸೊಳ್ಳೆಯನ್ನು ಹೊಡೆದು ಕೊಂದ ಆ ಹತ್ಯಾಕಾರಿಯ ವರ್ತನವನ್ನು ಹಿಂಸೆಯಲ್ಲಿ ಸೇರಿಸಬೇಕೋ ಅಥವಾ ಅಹಿಂಸೆಯಲ್ಲಿ ಸೇರಿಸಬೇಕೋ ಎಂಬುವದರ ವಿಷಯ ದೀರ್ಘವಾದವು ಕೂಡ ಆಗಾಗ ಉಂಟಾಗುತ್ತಿದ್ದಿತು; ಅಸಹಕಾರದಿಂದ ಸ್ವರಾಜ್ಯವು ಲಾಭವಾದ ಮೇಲೆ ಯಾವುದೊಂದು ಜನಾಂಗವು, ಉದಾಹರಣಾರ್ಥವಾಗಿ ಅಫ್ಘಾನಿಸ್ಥಾನವು ಹಿಂದೂಸ್ಥಾನದ ಮೇಲೆ ದಾಳಿ ಬಂದರೆ? ಎಂದು ಒಬ್ಬ ಅಸಹಕಾರ ವಾದಿಯನ್ನು ಕೇಳಿದರೆ, "ಸತ್ಯಾಗ್ರಹವನ್ನಾಚರಿಸಿ" ಎಂಬ ಅತ್ಯಂತ ಧೈರ್ಯಪರ ಉಪದೇಶವನ್ನು ಎಷ್ಟೋ ಮಂದಿಗಳು ಮನಃಪೂರ್ವಕವಾಗಿ ಕೊಟ್ಟದುಂಟು. ಮಹಾತ್ಮಾ ಗಾಂಧೀಜೀಯವರೇ ಶ್ರೀಮದ್ಭಗವದ್ಗೀತೆಯೊಳಗಿನ ಅಹಿಂಸಾ ತತ್ವವನ್ನು ಶೋಧಮಾಡಿ ಹೊರಗೆ ತೆಗೆಯಲು ಶ್ರಮಿಸಿ ಹೆಚ್ಚು ಸಮಯವಾಗಲಿಲ್ಲ.

ಒಂದು ವರ್ಷದ ಉತ್ತೇಜಕತೆ (Excitement)ಯೂ ಒಂಭತ್ತು ವರ್ಷಗಳ ಸೌಮ್ಯತೆ (Sobriety)ಯೂ ಇನ್ನೂ ಈ ಹಿಂಸೆ—ಅಹಿಂಸೆಯೊಳಗಿನ ಭೇದವನ್ನು ಸ್ಥಾಪಿಸಲು ಶಕ್ತವಾಗಿಲ್ಲ. ಅಹಿಂಸೆಯ ತತ್ವವು ಇತ್ತೀಚೆಗಿನದಲ್ಲ. ಗೌತಮ ಬುದ್ಧನು ಅಹಿಂಸಾ ತತ್ವವನ್ನು ಮೊದಲು ಕಂಡು ಹಿಡಿದನು. ಅನಂತರ ಹಿಂದೂ ಧರ್ಮವೂ ಈ ನೂತನ ತತ್ವವನ್ನು ಬಹು [illegible] ಹಿಂದೂ ಧರ್ಮದ ಪ್ರತಿಭಾಗದಲ್ಲಿಯೂ ಪ್ರವೇಶಿಸಿ ಹಿಂದೂ ಧರ್ಮವನ್ನು ಅಧಿಕರಿಸಿತು. ಈ ದಿನ ಹಿಂದೂಗಳಲ್ಲಿ ಇದೇ ಹಿಂಸಾ—ಅಹಿಂಸಾ, ಇವುಗಳೊಳಗಿನ ನಿಜವಾದ ತಾರತಮ್ಯದ ಜ್ಞಾನವಿಲ್ಲದ ಅಹಿಂಸಾ ಭಾವದ ನಿರ್ವೀರ್ಯಕ ಪರಿಣಾಮವು ಕಂಡುಬರುತ್ತಿದೆ.

ಅಸಹಕಾರ ಚಳವಳಿಯು ದೇಶದಲ್ಲಿ ರಾಜಕೀಯ ವಿಜ್ಞಾನವನ್ನು ಜನಜನಿತವಾಗಿ ಮಾಡಿ ದೇಶವನ್ನು ಜಾಗೃತಿಯ ಕಡೆಗೆ ಒಯ್ದಿರಬಹುದು. ಆದರೆ ಮಹಾತ್ಮಾಜೀಯವರು ಜನತೆಯೊಳಗೆ ಅಹಿಂಸಾತ್ಮಕ ಭಾವವನ್ನು ಉಂಟುಮಾಡಲು ಉಪಯೋಗಿಸಿದ ಉಪಾಯದ ಹಾನಿಯು ಮಾತ್ರ ಬಹು ಕಾಲದ ವರೆಗೆ ಇರಲಾರದೆ ಹೋಗದು. ರಾಜಕೀಯ ಉದ್ದೇಶಕ್ಕಾಗಿ ರಾಜಕೀಯ ಉಪಾಯವಾಗಿ ಅಹಿಂಸಾ ತತ್ವವನ್ನು ಬೋಧಿಸಿದ್ದಾದರೆ ಚಿಂತೆಯಿರಲಿಲ್ಲ. ಆದರೆ ಅದು ರಾಜಕೀಯ ಆವಶ್ಯಕತೆಯಲ್ಲದೆ ಅದನ್ನು ತನುಮನಗಳಲ್ಲಿ ಪ್ರೇರಿಸಿ ದಿನ ನಿತ್ಯದ ಮತಭ್ರಾಂತಿಯಾಗಿ ಅದನ್ನು ಪರಿವರ್ತಿಸಿದುದು ಮಾತ್ರ ಅಹಿಂಸಾ ತತ್ವಕ್ಕೂ, ಜನತೆಯ ಜೀವನ ಕ್ರಮಕ್ಕೂ ಹಿತಕರವಾಗಲಿಲ್ಲವೆಂಬುದನ್ನು ಹೇಳಬೇಕಾಗುವುದು. ಅದರ ಪರಿಣಾಮವನ್ನು ಈಗಲೂ ನೋಡಬಹುದು.

ಅಹಿಂಸಾ ತತ್ವದ ಪರೀಕ್ಷಣವು ಸಬರ್ಮತಿ ಆಶ್ರಮದಲ್ಲಿಯೇ ನಡೆಯಿತು. ಬಹಳ ಸಮಯದಿಂದ ರೋಗದಿಂದ ನರಳುತ್ತಿದ್ದ ಒಂದು ಕರುವಿಗೆ ಯಾವ ಮದ್ದಿನಿಂದಲೂ ಗುಣ ಮಾಡಲು ಸಾಧ್ಯವಾಗಲಿಲ್ಲ. ಹಾಗೆಯೇ ಅದನ್ನು ನರಳಲು ಬಿಡುವುದೇ ಅಥವಾ ಅದನ್ನು ಕೊಲ್ಲಿಸಿ ಅದರ ವೇದನೆಯನ್ನು ಕೊನೆಗಾಣಿಸುವುದೇ ಎಂಬ ಆಲೋಚನೆಯು ಉಂಟಾಯಿತು. ಮಹಾತ್ಮಾಜೀಯವರು ಬಹಳವಾಗಿ ಆಲೋಚಿಸಿದರು. ಕಟ್ಟಕಡೆಗೆ ಅದರ ಪ್ರಾಣಕ್ಕೆ ಮುಕ್ತಿಯನ್ನು ತೋರಿಸಿ ದೈಹಿಕ ವೇದನೆಯನು ಅಂತ್ಯಪಡಿಸುವುದೇ ಉತ್ತಮವೆಂದು ನಿಶ್ಚಯಿಸಲಾಯಿತು. ಇಂತಹ ಸಾಳವಿಕೆಯಲ್ಲಿ ಮನುಷ್ಯನಾದರೆ ಏನು ಮಾಡಬಹುದೆಂಬ ಪ್ರಶ್ನೆಯು ಉಂಟಾಗುವುದು.

ಇಂತಹ ಒಂದು ಘಟನೆಯು ಕೆಲವು ಸಮಯದ ಹಿಂದೆ ಅಮೇರಿಕೆಯಲ್ಲಿ ನಡೆಯಿತು. ಒಬ್ಬ ಡಾಕ್ಟರರಿಗೆ ಒಬ್ಬ ಮಗಳಿದ್ದಳು. ಅವಳು ಪದಾರ್ಥ[illegible] ಇದ್ದಳು. ಕಾಯಿಲೆಯು ಗುಣವಾಗದ ರೀತಿಯದಾಗಿತ್ತು. ಡಾಕ್ಟರರು ಪ್ರಾಯ ಕಳೆದವರಾದುದರಿಂದ ತಾನು ಸತ್ತ ಮೇಲೆ ತನ್ನ ಮಗಳನ್ನು ಇಷ್ಟೇ ಪ್ರೀತಿಯಿಂದ ಯಾರು ಸಾಕುವರೆಂಬ ಚಿಂತೆಯು ಹತ್ತಿ, ಇನ್ನು ಹಾಗೆಯೇ ನರಳಿ ವ್ಯಥೆಪಡುವುದಕ್ಕಿಂತ ಅವಳನ್ನು ಕೊಲ್ಲುವುದೇ ಮೇಲೆಂದು ಅವಳಿಗೆ ವಿಷಪ್ರಯೋಗ ಮಾಡಿದರು. ಹುಡುಗಿಯನ್ನು ಕೊಂದ ಅಪರಾಧಕ್ಕಾಗಿ ಡಾಕ್ಟರರ ವಿಚಾರಣೆಯು ಕೋರ್ಟಿನಲ್ಲಿ ನಡೆಯಿತು. ಎಲ್ಲಾ ವಿಷಯಗಳನ್ನು ಕೇಳಿದ ಮೇಲೆ ಅವರು ನಿರಪರಾಧಿಯೆಂದು ಜೂರಿಯವರೆಲ್ಲ ಒಪ್ಪಿ ಬಿಡಲಾಗಿ ಮಾಡಲ್ಪಟ್ಟರು.

ಈ ತರ್ಕವನ್ನು ಹೀಗೆಯೇ ಮುಂದರಿಸಿದರೆ ಏನಾದೀತೆಂದು ನಾವು ಇಲ್ಲಿ ಮುಂದೆ ಚರ್ಚಿಸುವುದಿಲ್ಲ; ಅಲ್ಲದೆ ಬರೇ ಕಾರ್ಯಕಾರಿತೆಯನ್ನು ನೋಡಿ ಸಣ್ಣ ನಿಮಿತ್ತ ಕೂಡಲೇ ಹಿಂಸೆಗೆ ಕ್ಷಮಿಸಬಹುದೆಂದೂ ಮೇಲಿನ ಉದಾಹರಣೆಗಳನ್ನು ತಿರುವಿ ತಪ್ಪು ಅಭಿಪ್ರಾಯಗಳನ್ನು ಕಲ್ಪಿಸಿಕೊಳ್ಳಕೂಡದು. ನಮ್ಮ ವಿಚಾರಣೀಯವಾದ ವಿಷಯವೆಂದರೆ ಹಿಂಸೆ ಮತ್ತು ಅಹಿಂಸೆ ಎಂದು ವ್ಯಕ್ತಿಯ ಕರ್ಮಗಳನ್ನು ಪ್ರತ್ಯೇಕವಾದ ಸ್ಪಷ್ಟ ವಿಭಾಗಗಳಾಗಿ ವಿಭಜಿಸಲಾಗುವುದಿಲ್ಲ.

ಗುಜರಾತಿನಲ್ಲಿ ಗೋ ಭಕ್ತಿಯವರು ಬಹಳ ಮಂದಿ ಇದ್ದಾರೆ. ಮೇಲಾಗಿ ಈ ಹಲವು ವರುಷಗಳಿಂದ ತಮ್ಮವರೇ ಧುರೀಣರಾಗಿರುವ ಮಹಾತ್ಮಾಜೀಯವರಿಂದ ಅವರು ಅಹಿಂಸೆಯ ಪಾಠಗಳನ್ನು ಪಡೆದಿರುವವರಾಗಿದ್ದರು. ಹೀಗಾಗಿ ಮಹಾತ್ಮಾಜೀಯವರ ಈ ನೂತನ ಪರಿವರ್ತನದಿಂದ ಅವರು ತಬ್ಬಿಬ್ಬಾಗಿ ಹೋಗಿರುವರು. ಕರುವೇ ಪವಿತ್ರವಾದುದು; ಅದರ ಮೇಲೆಯೇ ಹಿಂಸೆಯನ್ನಾಚರಿಸುವದೆಂದರೆ! ಅದನ್ನು ಅವರು ಕಲ್ಪಿಸಿ ಕೂಡ ತಿಳಿಯಲಾರರು!

ಯುರೋಪಿನಿಂದ ಅಮೇರಿಕಕ್ಕೆ ಹಲವು ವೈಮಾನಿಕರು ಹಾರಲು ಪ್ರಯತ್ನಿಸಿದರು. ಅವರೊಳಗೆ ಜರ್ಮನಿಯ ಇಬ್ಬರು ವೈಮಾನಿಕರು ಒಬ್ಬ ಐರ್ಲೆಂಡಿನವನೊಡನೆ ಅತ್ಲಾಂಟಿಕವನ್ನು ಉಲ್ಲಂಘಿಸಲು ಪ್ರಯತ್ನಿಸಿದರು. ಅಮೇರಿಕದ ಹತ್ತಿರ ಬಂದಾಗಲೇ ಎಲ್ಲಿಯೋ ಕೆಳಗೆ ಇಳಿಯಬೇಕಾಗಿತ್ತು. ಎಲ್ಲಿ ಇಳಿದುದೆಂದು ಗೊತ್ತಾಗದೆ ಇನ್ನು ಉಪವಾಸವಿದ್ದು ಆ ಭಯಂಕರ ಪ್ರದೇಶದಲ್ಲಿ ಸಾಯುವುದಕ್ಕಿಂತ ಶಾವಾಗಿ ಸಾಯಲೆಂದು ಎಲ್ಲರೂ ಒಬ್ಬರನ್ನೊಬ್ಬರು ಗುಂಡು ಹೊಡೆವುದರಲ್ಲಿದ್ದರು. ಅಷ್ಟರಲ್ಲಿ ಅಮೇರಿಕದ ಹತ್ತಿರವೇ ತಾವಿರುವುದೆಂದು ತಿಳಿದು ಈ ಹತ್ಯೆಯನ್ನು ನಿಲ್ಲಿಸಿದರು. ಆದರೆ ಪಾಶ್ಚಾತ್ಯರ ತತ್ವ ವಿಷಯವಾದ ಭಾವನೆಯು [illegible] ಇದರಿಂದ ನಾವು ತಿಳಿದುಕೊಳ್ಳಬಹುದು.

ಹಿಂಸೆ ಮತ್ತು ಅಹಿಂಸೆಯನ್ನು [illegible]ವಾದ ಕ್ರಮಗಳಿಲ್ಲವೆಂದೂ, ಪ್ರತಿ ಒಂದು [illegible] ಕಾರ್ಯದ ಕ್ಷೇತ್ರ ಮತ್ತು ಕಾಲದೊಡನೆ [illegible] ಹೊರತು ಹಿಂಸೆ—ಅಹಿಂಸೆಗಳ ಮಾನದಿಂದ [illegible]ದಿಲ್ಲವೆಂದೂ ಮೇಲಿನ ವಿಚಾರಗಳಿಂದ ತಿಳಿಯುವುದು.

ವಿದೇಶ ವರ್ತಮಾನ

— ಕುಷ್ಠರೋಗವು ಅಂಟುರೋಗವಲ್ಲವೆಂಬುದನ್ನು [illegible] ರೀಗಾ ಎಂಬೂರಿನ ಡಾಕ್ಟರ ಸ್ಮಿಥ್ ಎಂಬವರು ಪ್ರಯೋಗಿಸಿರುವರು. ಕುಷ್ಠರೋಗಿಯ ರೋಗದ ಕೀವನ್ನು ತೆಗೆದು ಪಾತಿಕ್ಷೆ [illegible] ಒಬ್ಬ ಕೈದಿಯ ಶರೀರದೊಳಗೆ ಅವರು ಇಂಜೆಕ್ಷನ್ ಮಾಡಿ ಪರೀಕ್ಷಿಸಿರುವರು. ಕೈದಿಯ ಪಾತಿಕ್ಷೆಯು ಸಮ್ಮತಿ ಮನ್ನಾಮಾಡಲ್ಪಟ್ಟು ಆತನು [illegible] ಇರಬಹುದೆಂದು ಹುಕುಮಾಗಿರುತ್ತದೆ.

— ವೇಲ್ಸಿನ ಒಬ್ಬ ಯುವಕನು ಇಂಗ್ಲಾಂಡಿನಿಂದ ಬಗ್ದಾದಿನ ವರೆಗೆ ಏಳು ಕುದುರೆಶಕ್ತಿಯ ಒಂದು ಸಣ್ಣ ಮೋಟಾರು ಕಾರಿನಲ್ಲಿ ಪ್ರಯಾಣ ಬೆಳೆಸಿ, ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿರುವನು. ಆತನು ಇಂಗ್ಲಾಂಡಿನಿಂದ ಹೊರಟು ಕೆಲ್ಸ್, ವಿಯನ್ನಾ, ಬೆಲ್‌ಗ್ರೇಡ್, ಕಾನ್‌ಸ್ಟಾಂಟಿನೋಪಲ, ಸೋಫಿಯಾ, ಆಲೆಕ್ಸಾಂಡ್ರೆಟ್ಟಾ, ಡೀರ್ ಮತ್ತು ಡಮಾಸ್ಕಸ್ ಈ ಪಟ್ಟಣಗಳನ್ನು ದಾಟಿ ಬಗ್ದಾದಿಗೆ ತಲುಪಿದನು. ಅಲ್ಲಿಂದ [illegible] ಲಿವಿಗೂ, ಇಜಿಪ್ತಕ್ಕೆ ಹೋಗಲು ನಿಶ್ಚಯಿಸಿರುವನು.

— ಶಾಂಘಾಯಿಯಲ್ಲಿ ಪ್ರಾರಂಭವಾದ ಟಪ್ಪಾಲು ಕೆಲಸಗಾರರ ಮುಷ್ಕರವು ಕೊನೆಗೊಂಡಿತು. ಪುನಃ ಕೆಲಸಮಾಡಲು ಕೆಲಸಗಾರರು ಒಪ್ಪಿರುವರು.

— ಇಂಗ್ಲಾಂಡಿನಿಂದ ಸುವರ್ಣ ಒಂದು ಮೀಲಿಯ ಸ್ಪರ್ಧೆಯಲ್ಲಿ ಗೆದ್ದ ಗೆಲುವಿನ ಚಿನ್ನವನ್ನು ಮಾರಿದರು. ಈ ಚಿನ್ನವನ್ನು ಅಮೇರಿಕಕ್ಕೆ ಕೊಂಡೊಯ್ಯುವರಂತೆ.

ಲೆಂಬರ್ ಲೇ[illegible] ರನ್ನು ಮೆಕ್ಡೊನಾಲ್ಡರವರು ವಿಯನ್ನಾ, ಪ್ರೇಗ ಮೊದಲಾದ ಪಟ್ಟಣಗಳನ್ನು ಸಂದರ್ಶಿಸುವರು.

— ಸೆನೆಕಿಂಗ್ ಪಟ್ಟಣದಲ್ಲಿ ಆಗುತ್ತಿದ್ದ ಗಲಭೆಗಳು ಇನ್ನೂ ಶಾಂತವಾಗಿಲ್ಲ. ಸಂಕೇತದ ಕವಿ ಶರದಾದ ಒಬ್ಬ ಪ್ರಂಚ ಮನುಷ್ಯನು ತನ್ನ ಆಫೀಸಿನಿಂದ ಮನೆಗೆ ಹೋಗುತ್ತಿರುವಾಗ ರಾಷ್ಟ್ರೀಯ ಉಡುಪುಗಳನ್ನು ಧರಿಸಿದ ನಾಲ್ವರು ಅವರನ್ನು ಹಿಂದಿನಿಂದ ಆಕ್ರಮಿಸಿ, ಬಲವಾಗಿ ಹೊಡೆದು ಕೆಡವಿ ಸತ್ತನೆಂದು ತಿಳಿದು ಪಲಾಯನ ಮಾಡಿದರು. ದೈವವಶಾತ್ ಅವರು ಮೆಲ್ಲನೆ ಕಣ್ತೆರೆದು ಚೇತರಿಸಿ ಒಂದು ಮೈಲು ದೂರವಿರುವ ತನ್ನ ಮನೆಯನ್ನು ಬಹು ಪ್ರಯಾಸದಿಂದ ಸೇರಿದರು. — ಅಪರಾಧಿಗಳು ಸಿಕ್ಕಿಲ್ಲ.

— ಕಿಂಬರ್ಲಿ ಎಂಬಲ್ಲಿ ಒಬ್ಬ ಕೂಲಿಗೆ ೨೮೩ ಕೆರೆಟು ಭಾರವಿರುವ ಕೋಳಿಮೊಟ್ಟೆಯಷ್ಟು ದೊಡ್ಡ ಒಂದು ವಜ್ರವು ದೊರಕಿತು. ಅದನ್ನು ಒಬ್ಬ ವಜ್ರ ವ್ಯಾಪಾರಿಯು ೪೫,೦೦೦ ಪವನುಗಳಿಗೆ ಕೊಂಡುಕೊಂಡನು.

— ಸ್ಯಾಸ್ಕತ್ ವೇಲ್ಸಿನ [illegible] ದೊಡ್ಡ ಕಾಡಿಗೆ ಬೆಂಕಿ ಹಿಡಿದು ಭಯಂಕರವಾಗಿ ಪರಿಣಮಿಸಿ ಕಾಡಿನಲ್ಲಿದ್ದ ಒಂದು ಕಾಗದದ ಗಿರಣಿಯು ಸುಟ್ಟು ಹೋಯಿತು.

— ಒಹಿಯೊ ಪಟ್ಟಣದಲ್ಲಿ ಕೈದಿಗಳನ್ನು ಬಂಧಿಸಿಟ್ಟಿದ್ದ ಕಾರಾಗೃಹಕ್ಕೆ ಬೆಂಕಿ ತಗಲಿ ೧೩ ಜನ ಕೈದಿಗಳು ಸುಟ್ಟುಹೋದರು. ೭ ಕೈದಿಗಳು ಕಾಣೆಯಾಗಿರುವರು.

— ಅಟ್ಲಾಂಟಿಕ್ ಸಾಗರದಲ್ಲಿ ಕಳೆದ ವಾರ ಭಯಂಕರವಾದ ಬಿರುಗಾಳಿಯಿದ್ದಿತು. ಹಡಗುಗಳು ಮುಂದರಿದು ಹೋಗಬೇಕಾದರೆ ಬಹು ಕಷ್ಟವುಂಟಾಯಿತು.

— ರಷ್ಯಾದೇಶದ [illegible] ಪಟ್ಟಣಗಳಲ್ಲಿ ಲೋಹ ಮಾರ್ಗಗಳನ್ನು ಹಾಕುವುದಕ್ಕೂ, ವಿದ್ಯುತ್ ಶಕ್ತಿ [illegible] ಸರಬರಾಯಿ, ಗ್ಯಾಸ್‌ಧೀಪ ಮೊದಲಾದ ಸೌಕರ್ಯಗಳನ್ನು ಒದಗಿಸುವುದಕ್ಕೂ ಸರಕಾರದವರು ೪೦ ಕೋಟಿ ರೂಪಾಯಿಗಳನ್ನು ವೆಚ್ಚಮಾಡಲಿರುವರು.

ಅಮೇರಿಕದಲ್ಲಿ ಜೆ. ಡಿ. ರಾಕ್‌ಫೆಲ್ಲರ್ ಎಂಬ ಶ್ರೀಮಂತನ ೮೯ನೇ ವಾರ್ಷಿಕ ವರ್ಧಂತಿ ಉತ್ಸವವು ಮೊನ್ನೆ ತಾನೆ ನಡೆಯಿತು. ಇವರಿಗೆ ಮಕ್ಕಳು, ಮೊಮ್ಮಕ್ಕಳು, ಅಲ್ಲದೆ ಮರಿಮಕ್ಕಳು ಕೂಡ ಇರುವರು. ಇವರು ಇನ್ನೂ ಗಟ್ಟಿಮುಟ್ಟಾಗಿ ದೃಢಕಾಯರಾಗಿರುವರು. ಇವರು ಬಹು ಉದಾರಿ. ದಾನಶೂರರು. ಇದು ವರೆಗೆ ೧೧ ಕೋಟಿ ಪವನುಗಳ ಧರ್ಮವು ಇವರಿಂದ ನಡೆದಿರುತ್ತದೆ. ಕಲಿಯುಗದ ಕರ್ಣನೆಂದು ಇವರನ್ನು ಸಂಬೋಧಿಸಿದರೆ ಅತಿಶಯೋಕ್ತಿಯಾಗಲಾರದು.

ಸ್ವದೇಶ ವರ್ತಮಾನ.

— ಮುಂಬಾಯಿ ಮಾಸ್ತರರ ಒಂದು ಸಭೆಯು ನಡೆದು ಒಪ್ಪಂದದ ಶರ್ತಗಳಿಗೆ ಒಪ್ಪಿಗೆಯು ದೊರೆಯಿತು. ಕಳೆದ ಸೋಮವಾರದಿಂದ ಪುನಃ ಕೆಲಸಕ್ಕೆ ಪ್ರಾರಂಭವಾಗಿರುತ್ತದೆ.

— ಲಾಹೋರಿನಲ್ಲಿ ನಡೆದ ವಿದ್ಯಾರ್ಥಿಗಳ ಪರಿಷತ್ತಿಗೆ ಮಹಾತ್ಮಾ ಗಾಂಧಿಗಳವರು ಈ ಕೆಳಗಿನ ವಾರ್ತೆಯನ್ನು ಕಳುಹಿಸಿದ್ದರು:— 'ನಮ್ಮ ನಾಡಿಗೆ ಇಷ್ಟ ಬರುವ ಸರಕಾರಕ್ಕಾಗಲಿ, ಇನ್ನಾರಿಗಾಗಲಿ ಹೆದರಬೇಡಿರಿ, ಪ್ರಯತ್ನಪಟ್ಟು ಸಂಪಾದಿಸಿ, ಅವಿದ್ಯಾವಂತರಾದ ಬಡರೈತರ ಗ್ರಾಮಸ್ಥರ ಅಭಿವೃದ್ಧಿಯನ್ನು ಮಾಡಿರಿ' ಎಂದು.

— ಡಿಲ್ಲಿಯ ಜಾಡಮಾಲಿಗಳ ಸಂಬಳವನ್ನು ಮುನಿಸಿಪಾಲಿಟಿಯವರು ಏರಿಸಲಿಲ್ಲೆಂದು ಹರತಾಳವನ್ನು ಆಚರಿಸಬೇಕೋ ಯಾ ಆಚರಿಸಬಾರದೋ ಎಂಬುದನ್ನು ವಿಚಾರಿಸುವ ಸಲುವಾಗಿ ಅವರು ಒಂದು ಸಭೆ ಕೂಡಲಿರುವರು.

— [illegible] ಮುಂಬಾಯಿಗೆ ಅಫಘಾನಿಸ್ತಾನದ ಸುಮಾರು ನೂರು [illegible] ಯುವತಿಯರು ಬಂದಿದ್ದರು. ಅಲ್ಲಿಂದ ಅವರು ವಿಲಾ[illegible] [illegible]ಗಳ ವಿಧಗಳ ಉಪಯೋಗವನ್ನು ಕಲಿತುಕೊಳ್ಳುವ [illegible] ಕಾನ್‌ಸ್ಟಂಟಿನೋಪಲಿಗೆ ತೆರಳಿದರು. ಅವರನ್ನು ಮುಂಬಾ[illegible]ಯಲ್ಲಿರುವವರು ಸತ್ಕರಿಸಿ, ಮಿ: ಜಯಕರರು ಅವರಿಗೆ [illegible] ಬಯಸಿದರು.

— [illegible] ಜಿಲ್ಲೆಯ ಒಂದು ಹಳ್ಳಿಯ ಚಿಕ್ಕ ಮನೆಯಲ್ಲಿ ಒಬ್ಬ [illegible] ಹೆಂಡತಿ ಮಕ್ಕಳೊಂದಿಗೆ ಮಲಗಿದ್ದನು. ರಾತ್ರಿ [illegible] ಎಂಟುವರ್ತಿ(?) ಮನೆಯನ್ನು ಪ್ರವೇಶಿಸಿ ಅವರೆಲ್ಲ [illegible] ಯುಕ್ತಮಾಡಿ ಐದು ಜನರನ್ನು ಕಠಿಣವಾಗಿ ಇರಿದರು. [illegible] ಇಬ್ಬರು ಆಸ್ಪತ್ರೆಯಲ್ಲಿ ಸತ್ತುಹೋದರು. ಈ ಕ್ರೂರ [illegible] ಕಾರಣವೇನೆಂಬುದು ಇನ್ನೂ ತಿಳಿದು ಬಂದಿಲ್ಲ.

— ಮುಂಬಾಯಿಯ ಇಬ್ಬರು ಸೂಳೆಯರು ತಮ್ಮ ನೆರೆಮನೆಯವನು [illegible] ಹಿಡಿದು ಮೂರನೇ ಮಾಳಿಗೆಯ ಕಿಟಿಕಿಯಿಂದ ಕೆಳಕ್ಕೆ [illegible]ದಿಂದ ಅವನು ಕೆಳಕ್ಕೆ ಬಿದ್ದು ಆಗಲೇ ಸತ್ತುಹೋದನು. [illegible]ಯಾಗಿ, ಇಬ್ಬರು ಸೂಳೆಯರಿಗೂ ಜಾವ ಶಿಕ್ಷೆ ವಿಧಿಸ[illegible].

— ಬರುವ ಕಲಕತ್ತಾ ಕಾಂಗ್ರೆಸಿಗೆ ಮೆಂಬರರನ್ನು ಸೇರಿಸುವ ಕೆಲಸವು ಭರದಿಂದ ಸಾಗುತ್ತಿದೆ. ೫೦ ಸಾವಿರ ಜನರು ಕುಳಿತುಕೊಳ್ಳ[illegible] ಒಂದು ಮಂಟಪವನ್ನು ಸ್ವಾಗತ ಮಂಡಳಿಯವರು ರಚಿಸು[illegible]. ಕಾಂಗ್ರೆಸಿನ ಪ್ರದರ್ಶನವನ್ನು ಬಹು ಉತ್ತಮ ತರದಲ್ಲಿ [illegible] ಪ್ರಯತ್ನಗಳು ನಡೆಯುತ್ತಿವೆ.

— ಕಳೆದ ಸೋಮವಾರ ದಿನ ಮುಂಬಾಯಿಯ ಗವರ್ನರರು [illegible] ಹೋಗಿ ಶಿವಾಜಿ ಮಹಾರಾಜರ ಒಂದು ಪ್ರತಿಮೆಯ ಅನಾವರಣ ಸಮಾರಂಭವನ್ನು ಜರಗಿಸಿದರು.

— ಅಲ್ಲಹಾಬಾದಿನಿಂದ ಮುಂಬಾಯಿಗೆ ಹೋಗುತ್ತಿದ್ದ ಒಂದು ರೈಲು ಬಂಡಿಯ ಮೂರನೇ ತರಗತಿಯ ಗಾಡಿಯಲ್ಲಿ ಒಂದು ಬಾಂಬು ಒಡೆದು ಹೋಗಿ, ಮೂರನೇ ತರಗತಿಯ ಮೂವರು ಪ್ರಯಾಣಿಕರು ಸತ್ತುಹೋದರು. ಇನ್ನು ೮ ಜನರಿಗೆ ಗಾಯವಾಯಿತು. ಬಾಂಬು ಒಡೆಯಲು ಕಾರಣವೇನೆಂಬುದು ಇನ್ನೂ ಗೊತ್ತಾಗಿಲ್ಲ. ಎರಡು ಗಾಡಿಗಳಿಗೆ ಮಾತ್ರ ಸ್ವಲ್ಪ ಹಾನಿಯಾಯಿತು. ಪೋಲೀಸರ ತನಿಖೆಯು ನಡೆಯುತ್ತಲಿದೆ.

— ಡಾ| ಅನ್ನಿಬೆಸೆಂಟಮ್ಮನವರ ಅಧ್ಯಕ್ಷತೆಯಿಂದ ಗುಂಟೂರಿನಲ್ಲಿ ಒಂದು [illegible] ಪಕ್ಷಗಳ ಪರಿಷತ್ತು ಜರಗುವದು. ಲಕ್ನೋ ಪರಿಷತ್ತಿನ ನಿರ್ಣಯಗಳನ್ನು ಸಮರ್ಥಿಸುವವರು ಈ ಪರಿಷತ್ತಿಗೆ ಬರಬೇಕೆಂದು ಚಾಲಕರ ಅಭಿಪ್ರಾಯ.

— ಮೈಸೂರು ರಾಜ್ಯದ ಆಸ್ಪತ್ರೆಗಳಲ್ಲಿ ಅಲ್ಲೇ ತಯಾರಾದ ಖಾದಿ ವಸ್ತ್ರವನ್ನು ಉಪಯೋಗಿಸಬೇಕೆಂದು ನಿಶ್ಚಯಿಸಿರುವರು.

— ಕಳೆದ ಸೋಮವಾರದಿಂದ ಮುಂಬಾಯಿ ಮುಷ್ಕರಗಾರರಲ್ಲಿ ಸುಮಾರು ೧೦,೦೦೦ ಜನರು ಪುನಃ ಕೆಲಸವನ್ನು ಪ್ರಾರಂಭಿಸಿದರು. ಇವರು ಸುಮಾರು ೨೫ ವಾರಗಳಿಂದ ಕೆಲಸ ಮಾಡದೆ ಮುಷ್ಕರ ಹೂಡಿದ್ದರು. ಹಾಕಾ ಕೆಟ್ಟಿದ್ದ ಕಾರಖಾನೆಯಲ್ಲಿ ಕೆಲಸವನ್ನು ಮೊದಲಿಗಿಂತಲೂ ಹೆಚ್ಚಿಗೆ ಮಾಡಬೇಕೆಂಬ ಸುಳ್ಳು ಸುದ್ದಿಯಿದ್ದ ಕಾರಣ ಕೆಲಸಗಾರರು ಹಲವು ತಾಸುಗಳ ವರೆಗೆ ಗಿರಣಿಯ ಹೊರಗಡೆ ನೆರೆದಿದ್ದವರು ಮತ್ತೆ ಕೆಲಸವನ್ನು ಪ್ರಾರಂಭಿಸಿದರು.

— ಮುಂಬಾಯಿಯ ಒಂದು ಆಸ್ಪತ್ರೆಗೆ ಶೇಟ್ ದೇವಿದಾಸ, ಪ್ರಭುದಾಸ ಕೋಠಾರಿ ಎಂಬ ಸಾಹುಕಾರರು ಒಂದು ಲಕ್ಷ ರೂಪಾಯಿಗಳನ್ನು ದಾನವಾಗಿ ಕೊಟ್ಟಿರುವರು.

— ಪೂನೆಯ ಸ್ವದೇಶಿ ಪ್ರದರ್ಶನವು ಇದೇ ತಿಂಗಳ ೧೪ನೇ ತಾರೀಕಿನ ವರೆಗೆ ತೆರೆಯಲ್ಪಡುವದು. ಈ ವಾರದಲ್ಲಿ ದಿನವೂ ಹಲವು [illegible] ಕಾಲೇಜುಗಳ ಜನರು ಪ್ರದರ್ಶನವನ್ನು ಸಂದರ್ಶಿಸುತ್ತಾರಂತೆ.

— ಮುಂಬಾಯಿಗೆ ಚೀನಾ ದೇಶದ ಒಬ್ಬ ವಿದ್ವಾಂಸರಾದ ಕವಿ[illegible] ಬಂದಿಳಿದಿರುವರು. ಡಾ| ರವೀಂದ್ರನಾಥ ಠಾಗೋರರನ್ನು ಸಂದ[illegible] ಅವರಿಗೆ ಮರ್ಯಾದೆಯನ್ನು ತೋರಿಸಬೇಕೆಂಬುದೇ ಇವರು ಬಂದ ಕಾರಣ. ಡಾ| ಠಾಗೋರರ ಕಾವ್ಯಗಳನ್ನೋದಿ ಇವರು ಮುಗ್ಧರಾಗಿರುವರು.

— ಕಾನಪುರದ ಕಮ್ಮಸಿಂಗ ಎಂಬ ಒಬ್ಬ ಪೋಲೀಸ ಕಾನ್‌ಸ್ಟೇಬಲನು ಒಬ್ಬ ಯುರೋಪಿಯನನಿಗೆ ತೊಂದರೆ ಕೊಟ್ಟದ್ದರಿಂದ ಆತನಿಗೆ ೫೦ ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿದ್ದಿತು. ಇದರಿಂದ ಕರಕರೆ ಹೊಂದಿ ಆತನು ತನಗೆ ತಾನೇ ಗುಂಡು ಹೊಡೆದು ಆತ್ಮಹತ್ಯವನ್ನು ಮಾಡಿಕೊಂಡನು.

— ಸುಕ್ಕೂರಿನಲ್ಲಿ ಇತ್ತೀಚೆಗೆ ನಡೆದ ಗಲಭೆಯ ಸಂಬಂಧ, ಇನ್ನೂ [illegible]ವರು ಮಹಮ್ಮದೀಯರನ್ನು ಕೈದು ಮಾಡಿರುವರು. ಒಬ್ಬನು ಒಬ್ಬ ಹಿಂದೂ ಶಾಲಾ ಉಪಾಧ್ಯಾಯನನ್ನು ಕೊಂದಿದ್ದನಂತೆ. ಇನ್ನಿಬ್ಬರು ಒಬ್ಬ ಸಾಧುವನ್ನು ವಧಿಸಿದ್ದರು. ಇದುವರೆಗೆ ೨೬ ತಪ್ಪುಗಳು ಪ್ರಕಟವಾಗಿವೆ. ತಪ್ಪುಗಳನ್ನು ಮಾಡಿದವರಲ್ಲಿ ಹಲವರು ಪಲಾಯನ ಮಾಡಿರುವರು.

— ಪಂಜಾಬಿನ ಫ್ಲಡ್ ರಿಲೀಫ್ ಕಮಿಟಿಗೆ ರೆಡ್‌ಕ್ರಾಸ್ ಸೊಸೈಟಿಯವರು ೫ ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟಿರುವರು.

— ಮಾನಿಕಜಂಗದಲ್ಲಿ ಪೋಲೀಸರ ಪಕ್ಷ ಮತ್ತು ಹಲವು ಹಳ್ಳಿಗರೊಳಗೆ ಜಗಳವಾಗಿ ಪೋಲೀಸರು ಗುಂಡುಗಳನ್ನು ಬಿಡಬೇಕಾಯಿತು. [illegible] ಮಾಡುವದಕ್ಕಾಗಿ ಹಳ್ಳಿಯ ಒಬ್ಬ ಮನುಷ್ಯನನ್ನು ಪೋಲೀಸರು [illegible] ಬಂದಾಗ ಪರಸ್ಪರರಲ್ಲಿ ಜಗಳವಾಯಿತು. ನಗರ[illegible] ಒಬ್ಬ ಹಳ್ಳಿಗನಿಗೂ ಒಬ್ಬ ಪೋಲೀಸನಿಗೂ ಚೆನ್ನಾಗಿ ಗಾಯವಾಗಿ[illegible].

— [illegible] ಎಕ್ಸಿಕ್ಯೂಟಿವ್ ಕೌನ್ಸಿಲಿನ ಲಾ ಮೆಂಬರರಾದ [illegible] ದಾಸರು ಕಠಿಣ ಕಾಹಿಲೆಯಲ್ಲಿರುವರು. ಅವರ [illegible] ವಿಲಾಯತಿಯಲ್ಲಿರುವವರಿಂದ, ಅವರು ಹಿಂದೂಸ್ಥಾನಕ್ಕೆ [illegible] ಹೋಗಿರುತ್ತದೆ. ಕೌನ್ಸಿಲು ಮೆಂಬರಿಕೆಗೆ [illegible]ವರು [illegible]ತಾರಂತೆ.

— ಗೋಧ್ರಾ ಎಂಬಲ್ಲಿ ನಡೆದ ಹಿಂದೂ ಮುಸಲ್ಮಾನರ ಕಲಹದ ಕುರಿತು ಸರಕಾರದವರು ಒಂದು ಪ್ರಕಟನೆಯನ್ನು ಹೊರಡಿಸಿರುವರೇನಂದರೆ, 'ಮುಸಲ್ಮಾನರು ಜೈನರ ದೇವಾಲಯಗಳನ್ನು ಆಕ್ರಮಿಸಿಸುದಿಲ್ಲ, ಮನೆಗಳಿಗೆ ಹೋಗಿ ಹಿಂದೂ ಹೆಂಗಸರುಗಳನ್ನು ಪೀಡಿಸಿಸುದಿಲ್ಲ' ಎಂದು.

— ಪಂಜಾಬಕ್ಕೆ ಸೇರಿದ ಆದಮಾಬಾದದಲ್ಲಿ ಒಂದು ಶಾಲೆಯ ಮುಖ್ಯೋಪಾಧ್ಯಾಯರ ಮನೆಗೆ ಹತ್ತು ಜನ ದರೋಡೆಕಾರರು ಒಮ್ಮೆಯೇ ನುಗ್ಗಿದರು. ಆ ಸಂದರ್ಭದಲ್ಲಿ ಆ ಮನೆಯ ಒಬ್ಬ ಹೆಂಗಸು ಒಂದು ಗುಂಡನ್ನು ಹಿಡಿದು ಗುಂಡು ಹಾರಿಸಿ ಒಬ್ಬ ದರೋಡೆಕಾರನನ್ನು ಕೊಂದು ಕೆಡವಿದಳು. ಇನ್ನೊಬ್ಬ ದರೋಡೆಕಾರನೂ ಗಾಯವನ್ನು ಹೊಂದಿದನು. ಇದನ್ನು ಕಂಡು ಉಳಿದ ದರೋಡೆಕಾರರು ಹೆದರಿ ಕಾಲಿಗೆ ಬುದ್ಧಿ ಹೇಳಿದರು. ಹೆಂಗಸಿನ ಅದ್ಭುತ ಸಾಹಸವು ಪ್ರಶಂಸನೀಯವಿದೆ.

— ಸಿನ್ನಿಯಿಂದ ರೂಪಾಯಿಗೆ ೧ ಶಿಲಿಂಗ್ ೬ ಪೆನ್ಸ್ ಮತ್ತು ಪೌಂಡಿಗೆ ೧೩ ರೂಪಾಯಿ ೪ ಆಣೆ ಕ್ರಯವಾಗಿರುತ್ತದೆ.

ತೇನಾಲಿಯ ಒಂದು ಕೋರ್ಟಿನಲ್ಲಿ ಕಕ್ಷಿಗಾರನು ಕೊಟ್ಟ ಡಿಕ್ರಿ ಹಣದ ರಸೀದಿಯು ಕೋರ್ಟಿನ ರಿಕಾರ್ಡು ಕೋಣೆಯೊಳಗಿಂದ ಕಳವಾಗಿರುತ್ತದೆ. ಇದಕ್ಕಾಗಿ ರಿಕಾರ್ಡು ಕೀಪರನನ್ನು ರಿಮಾಂಡಿನಲ್ಲಿಟ್ಟಿರುವರು.

ಮದರಾಸಿನಲ್ಲಿ ಹೊರಡುತ್ತಿರುವ "ಹಿಂದೂ" ಎಂಬ ಹೆಸರಿನ ದೈನಿಕ ಪತ್ರಿಕೆಯ ೫೦ನೇ ವರ್ಷದ ಸುವರ್ಣ ಮಹೋತ್ಸವವು ಕಳೆದ ಆದಿತ್ಯವಾರ ದಿನ ಬಹು ಸಂಭ್ರಮದಿಂದ ಜರಗಿತು. ಇದು ದಕ್ಷಿಣ ಹಿಂದೂಸ್ಥಾನದಲ್ಲಿ ಹೆಸರುಹೋದ ಇಂಗ್ಲಿಷ ದೈನಿಕ ಪತ್ರಿಕೆಯಾಗಿರುತ್ತದೆ.

— ೧೮೯೯ನೇ ಇಸವಿಯಿಂದ ೧೯೦೮ನೇ ಇಸವಿ ವರೆಗೆ ಮುಂಬಾಯಿ ಹೈಕೋರ್ಟಿನಲ್ಲಿಯೂ ೧೯೦೯ರಿಂದ ೧೯೧೫ರ ವರೆಗೆ ಕಲ್ಕತ್ತಾ ಕೋರ್ಟಿನಲ್ಲಿಯೂ ಚೀಫ್ ಜಸ್ಟಿಸರಾಗಿದ್ದ ಸರ್ ಲೋರೆನ್ಸ್ ಜಂಕಿನ್ಸ್ ಎಂಬವರು ಕಳೆದವಾರ ಮರಣಹೊಂದಿದರು.

— ಹಿಂದೂಸ್ಥಾನದ ಪ್ರಥಮ ರಿಪಬ್ಲಿಕನ್ ಸೈನ್ಯದ ಜನರಲ್ ಅವಾರಿಯವರ ಪಟ್ಟದ ಅನಾವರಣ ಸಮಾರಂಭವನ್ನು ಶ್ರೀ ಸುಭಾಸ ಚಂದ್ರಭೋಸರವರು ನಾಗಪುರದಲ್ಲಿ ಜರಗಿಸಿದರು.

ನೆಹರು ಕಮಿಟಿಯ ವರದಿಯನ್ನು ತಾನು ಪೂರ್ಣವಾಗಿ ಅನುಮೋದಿಸುವೆನೆಂದು ಮಹಾತ್ಮಾಜಿಯವರು ಹೇಳಿದರು.

— ಬ್ರಿಟಿಷ ಜನರಿಗೂ ಬಟ್ಲರ್ ಕಮಿಟಿಗೂ, ಹಿಂದೂ ರಾಜ್ಯಗಳ ಪ್ರಜೆಗಳ ಸ್ಥಿತಿಯನ್ನು ತಿಳಿಯಪಡಿಸುವ ಸಲುವಾಗಿ ದಿವಾನ ಬಹದೂರ್ ರಾಮಚಂದ್ರರಾಯರೆಂಬವರು ಇಂಗ್ಲಾಂಡಿಗೆ ಹೊರಟು ಹೋಗಿರುವರು.

— ಕಲ್ಕತ್ತೆಯಲ್ಲಿ ತಾರೀಕು ೧೫ನೇ ದಿನ ನಡೆಯಬೇಕಾಗಿದ್ದ ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯ ಸಭೆಯನ್ನು ಮುಂದರಿಸಿರುವರು.

ದಕ್ಷಿಣ ಕನ್ನಡ.

ಮಂಗಳೂರು: — ಕಾಲಂಪ್ರತಿ ನಡೆಯುವಂತೆ ಇಲ್ಲಿಯ ಬ್ರಹ್ಮಸಮಾಜದ ಶಾಲೆಯ ವಾರ್ಷಿಕ ವರ್ಧಂತಿ ಉತ್ಸವವು ಇದೇ ತಾರೀಕು ೧೪ನೇ ಆದಿತ್ಯವಾರ ಪ್ರಾರಂಭಗೊಂಡು ತಾ: ೨೧ನೇ ಆದಿತ್ಯವಾರದ ವರೆಗೆ ನಡೆಯುವದು. ಈ ಸಂದರ್ಭದಲ್ಲಿ ಸಂಕೀರ್ತನೆ, ದೇವಾರಾಧನೆ, ಉಪನ್ಯಾಸ, ಧರ್ಮ ಸಂಭಾಷಣೆ, ಭಾಷಣ, ಭಜನೆ ಮೊದಲಾದವುಗಳು ನಡೆಯುವವು. ಸರ್ವರಿಗೂ ಸುಸ್ವಾಗತವಿದೆ.

ಮಂಗಳೂರಿನಲ್ಲಿ ಇದೇ ಬರುವ ವಿಜಯ ದಶಮಿಯಂದು, ಅಖಿಲ ಕರ್ನಾಟಕದಲ್ಲಿ ಆರ್ಯ (ಹಿಂದೂ) ಧರ್ಮ ತತ್ವಗಳನ್ನು ಬೋಧಿಸುವ ಸಚಿತ್ರ ಕರ್ನಾಟಕ ಮಾಸಪತ್ರಿಕೆಯೊಂದು ಹೊರಡುವದು. ಶ್ರೀ ಶಂಕರ ವರ್ಮದೇವ ವಿದ್ಯಾವಾಚಸ್ಪತಿಯವರು ಇದರ ಪ್ರಧಾನ ಸಂಪಾದಕರು. ವಾರ್ಷಿಕ ಚಂದಾ ರೂ ೧-೮-೦ ಮಾತ್ರ.

ಯೂನಿಯನ್ ಕ್ರಿಕೆಟ್ ಕೊರೊನೇಶನ್ ಕಪ್ ಮ್ಯಾಚು ಗಣಪತಿ ಹೈಸ್ಕೂಲು ಮತ್ತು ಗವರ್ನಮೆಂಟು ಕಾಲೇಜುಗಳೊಳಗೆ ನಡೆದು ಗಣಪತಿ ಹೈಸ್ಕೂಲು ವಿಜಯಿಯಾಗಿ ಕಪ್ ಪಡೆಯಿತು.

ಕಳೆದ ಮಂಗಳವಾರ ಮತ್ತು ಬುಧವಾರ ಎಮ್. ಸಿ. ಸಿ. ಮತ್ತು ಎಕ್ಸೆಲ್ಸಿಯರ್ಸ್, ಈ ಟೀಮುಗಳೊಳಗೆ ಮ್ಯಾಚು ನಡೆದು ಎಮ್. ಸಿ. ಸಿ. ಟೀಮು ಗೆದ್ದು ಮಿ: ಪಿ. ಎಸ್. ಅಲ್ಬುಕರ್ಕರ ಕಪ್ಪನ್ನು ಪಡೆದಿರುವರು.

ಇದೇ ತಿಂಗಳ ಮೂರನೇ ವಾರದಲ್ಲಿ ವಿದ್ಯಾ ಇಲಾಖಾ ಡೈರೆಕ್ಟರರವರು ಮಂಗಳೂರಿಗೆ ಬರುವರೆಂದು ವಾರ್ತೆ ಇದೆ.

ಬೊಂಬಾಯಿಂದ ಇಲ್ಲಿಗೆ ಬಂದ ಬೊಂಬಾಯಿ ಸ್ಟೀಮ್ ನೇವಿಗೇಶನ್ ಕಂಪೆನಿಯ ಸ್ಟೀಮರಿನಲ್ಲಿ ಬರುತ್ತಿದ್ದ ಕೆ. ಶ್ರೀನಿವಾಸ ವಾಮನ ಶೆಟ್ಟಿ ಎಂಬವರು ಕಳೆದ ತಾ. ೭ನೇ ರಾತ್ರೆ ಸಮುದ್ರಕ್ಕೆ ಬಿದ್ದು ಮೃತರಾದರೆಂದು ಕೇಳುತ್ತೇವೆ.

ಭಾರತ ಯುವಕ ಸಂಘದವರು ಮಹಾತ್ಮಾಜಿಯವರ ೫೯ನೇ ಜನ್ಮ ದಿನಾಚರಣೆಯನ್ನು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ರಾ| ಕಾರ್ನಾಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಮುನ್ಸಿಫ್ ರಾ| ಸಿ. ಆರ್. ಕೃಷ್ಣರಾವ್ ಮತ್ತು ರಾ| ಎಮ್. ಎಸ್. ಏಕಾಂಬರರಾಯರು ಈ ಸಂದರ್ಭದಲ್ಲಿ ಮಹಾತ್ಮಾಜಿಯವರ ಗುಣಕಥನ ಮಾಡಿದ ನಂತರ ಅಧ್ಯಕ್ಷರ ಭಾಷಣವಾಯಿತು.

ಮಹಿಳಾ ಸಭೆಯ ಮೆಂಬರರ ಬಾಬತು ಒಂದು ಜನರಲ್ ಸಭೆಯನ್ನು ಇದೇ ಬರುವ ತಾ. ೨೭-೧೦-೧೯೨೮ನೇ ಶನಿವಾರ ದಿವಸ ಪೂರ್ವಾಹ್ನ ಘಂಟೆ ೫ಕ್ಕೆ ಸರಿಯಾಗಿ ಸದ್ರಿ ಸಭೆಯ ಮಂದಿರದಲ್ಲಿ ಜರಗಿಸಲಾಗುವುದು. ಸದ್ರಿ ಸಭೆಯಲ್ಲಿ ಮಹಿಳಾ ಸಭೆಯ ರಿಪೋರ್ಟು ಓದಲಾಗುವುದು. ಮತ್ತು ಕಳೆದ ಜನರಲ್ ಸಭೆಯಲ್ಲಿ ಆಲೋಚಿಸಲಾದ ಮಹಿಳಾ ಸೇವಾಶ್ರಮದ ವಿಷಯ ವ ಇತರ ಸಂಗತಿಗಳು ಕೂಡಾ ಆಲೋಚಿಸಲಾಗುವುದು.

ಮಹಿಳಾ-ಸಭೆಯ ಎಲ್ಲಾ ಮೆಂಬರರು ಸದ್ರಿ ಸಭೆಗೆ ದಯವಿಟ್ಟು ಬರಬೇಕಾಗಿ ಸೆಕ್ರೆಟರಿಗಳವರು ಅಪೇಕ್ಷಿಸುತ್ತಾರೆ.

ಕಳೆದ ತಿಂಗಳ ಅಂತ್ಯಕ್ಕೆ ಜರಗಬೇಕೆಂದು ನಿಶ್ಚಯಿಸಿದ್ದ [illegible] ಎಂಟರ್‌ಟೈನ್‌ಮೆಂಟು ಮತ್ತು ಫೆನ್ಸಿ ಸೇಲು ಕಾರಣಾಂತರಗಳಿಂದ ನವೆಂಬರ ತಿಂಗಳ ಮೊದಲನೆಯ ವಾರಕ್ಕೆ ಮುಂದರಿಸಲ್ಪಟ್ಟಿದೆ. ಆದುದರಿಂದ ಸಭೆಗೆ ಈ ತನಕ ಸಹಾಯ ಮಾಡದೇ ಇದ್ದ ಮೆಂಬರರಿಗೆ ಮತ್ತು ಇತರ ಹಿತಕಾಂಕ್ಷಿಗಳಿಗೆ ಈ ತಿಂಗಳ ಕಡೆಯ ತಾರೀಕಿನ ವರೆಗೆ ತಮ್ಮಿಂದಾಗುವಷ್ಟು ಸಹಾಯವನ್ನು ಮಾಡಲಿಕ್ಕೆ ಅವಕಾಶವುಂಟು. ಅಂತಹ ಸಹಾಯವನ್ನೆಲ್ಲ ಆದರದಿಂದ ಸ್ವೀಕರಿಸಿ, ಸಹಾಯವನ್ನು ಮಾಡಿದ ಮಹನೀಯರ ಮತ್ತು ಮಹಿಳೆಯರ ಹೆಸರುಗಳನ್ನು ಸಂದರ್ಭಾನುಸಾರ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸಭೆಗೆ ಸಹಾಯವನ್ನು ಹಣದ ರೂಪವಾಗಲಿ ಇಲ್ಲವೆ ಫೆನ್ಸಿ ಸೇಲಿಗೋಸ್ಕರ ವಸ್ತುಗಳ ರೂಪವಾಗಲಿ ಮಾಡಬಹುದು. ಎಂದು, ಮಹಿಳಾ ಸಭೆಯ ಸೆಕ್ರೆಟರಿಗಳಾದ ಶ್ರೀಮತಿ ಎಸ್. ಅಲಕಾಬಾಯಿ ಮತ್ತು ಶ್ರೀಮತಿ ಎಮ್. ಅಂಬಾಬಾಯಿ ಇವರು ನಮಗೆ ಬರೆಯುತ್ತಾರೆ.

ಸುರತಕಲ್ಲು: — ಇಲ್ಲಿಯ 'ಇಷ್ಟ ವಿದ್ಯಾದಾಯಿನೀ ಶಾಲಾ' ಮಂದಿರದಲ್ಲಿ ವರ್ಷಂಪ್ರತಿ ಜರಗುವ ದಸರಾ ಮಹೋತ್ಸವವು ಈ ವರ್ಷ ಇದೇ ಬರುವ ತಾ. ೧೫ನೇ [illegible] ಬೆಳಗ್ಗೆ ಮೊದಲ್ಗೊಂಡು ಶಾರದಾ ಮೂರ್ತಿ ಸ್ಥಾಪನೆ, ಪೂಜೆ, ಪ್ರಸಾದ ವಿನಿಯೋಗ ಮೊದಲಾದ ಕಾರ್ಯಕ್ರಮಗಳಿಂದ ಪ್ರಾತಃ ಸಾಯಂಕಾಲಗಳಲ್ಲಿ ತಾ. ೨೩-೧೦-೨೮ನೇ ಮಂಗಳವಾರದ ವರೆಗೆ ನಡೆಯಲಿರುವುದು. ಆ ದಿನ ಶಾರದಾ ದೇವಿಯ ವಿಸರ್ಜನೆಯೊಂದಿಗೆ ದಸರಾ ಉತ್ಸವವು ಕೊನೆಗೊಳ್ಳುವುದು. ಆ ದಿನಗಳಲ್ಲಿ ಶಾಲಾ ವಿದ್ಯಾರ್ಥಿಗಳೂ ಹೆತ್ತವರೂ, ಊರವರೂ ಊರ ಗೃಹಸ್ಥರೂ ದಯವಿಟ್ಟು, ಈ ಪೂಜೆಗೆ ಸಹಭಾಗಿಗಳಾಗಿ [illegible] ಕೊಡಬೇಕಾಗಿ ಅರಿಕೆ. ಸರ್ವರಿಗೂ ಸುಸ್ವಾಗತವಿದೆ.

ದಕ್ಷಿಣ ಕನ್ನಡಾ ಜಿಲ್ಲಾ ನೋನ್ ಮಿಶ್ಶನ್ ಎಯ್ಡೆಡ್ ಶಾಲಾ ಮಾಸ್ತರರ ಸಂಘವು ತಾ. ೬-೧೦-೧೯೨೮ರಲ್ಲು 'ಇಷ್ಟ ವಿದ್ಯಾದಾಯಿನೀ ಶಾಲಾ' ಮಂದಿರದಲ್ಲಿ ಮ. ರಾ. ರಾಮಚಂದ್ರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

ಕಲ್ಯಾಣಪುರ: — ಇಲ್ಲಿ ಕಳೆದ ಗಣೇಶಚತುರ್ಥಿಯನ್ನು ಭಾದ್ರಪದ ಶು ೪ಯ [illegible] ಚಂದ್ರವಾರ [illegible] ಮಂಗಳವಾರ ಒಪ್ಪೊತ್ತೂ ಆಚರಿಸಿದ್ದರು. ಸಾರ್ವಜನಿಕವಾಗಿ ಪ್ರತಿ ಊರಲ್ಲಿ ಎರಡೆರಡು ಹಬ್ಬವನ್ನು ಆಚರಿಸದೆ [illegible] ಆದೆಲ್ಲವೂ ಆ ವಿನಾಯಕನ ಇಚ್ಛೆಯೆಂದೇ ನಾವು ಭಾವಿಸಬೇಕು.

ಚೌತಿಯ ದಿವಸದ ಇಲ್ಲಿಯ ಹಿಂದೂ ಶಾಲೆಯ ವರ್ಷವರ್ಧಂತಿ. ಈ ದಿನ ಶಾಲೆಯಲ್ಲಿ [illegible] ಗೃಹಸ್ಥರ ಸಭೆ ಸೇರಿತ್ತು. ಮ. ರಾ. ಸಗ್ರಿ ರಾಮಚಂದ್ರ ರಾಯರು ಸಭಾಧ್ಯಕ್ಷರಾಗಿದ್ದರು. ಶಾಲಾ ಮಕ್ಕಳಿಗೆ ಇಲ್ಲಿಯ ಪ್ರೈಮರಿ [illegible] ಬಳಿಕ ಭಾಷಣವಾದ ನಂತರ ಅದರ ಮಕ್ಕಳ ಬಗ್ಗೆ [illegible] ಬಹುಮಾನ ವಿತರಣೆಯಾಯಿತು. ಮ. ರಾ. ಕೆ. ರಾಮಕೃಷ್ಣ [illegible] ತಮ್ಮ ಕೊಳಲ ಗಾಯನದಿಂದ ಸಭಿಕರ ಮನಸ್ಸನ್ನು ಸಂತೋಷಗೊಳಿಸಿದರು. ನಂತರ ಶಾಲಾ [illegible] ಕಪ್ಪುಗಳನ್ನು ಹಂಚಿದನಂತರ, ಶಾಲಾ ಮುಖ್ಯ ಉಪಾಧ್ಯಾಯರಾದ ರಾ. ಟಿ. [illegible] ಸಭಾಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸಿದ ಮೇಲೆ ಸಭೆಯು ಮುಕ್ತಾಯವಾಯಿತು.

ಇಲ್ಲಿಗೆ ಒಬ್ಬ [illegible] ಬಂದ. ರಾ. [illegible] ಗೋವಿಂದ ಪ್ರಭುಗಳವರ ಅತಿಥಿಗಳಾಗಿರುವರು. ಇವರು ತನ್ನ ನಿವಾಸ ಅಯೋಧ್ಯೆಯೆಂತಲೂ, [illegible] ದಾಸಯ್ಯನೆಂತಲೂ ಹೇಳುತ್ತಾರೆ. ಇವರು [illegible] ಗೀತೆಯ ತತ್ವಗಳನ್ನು ಬೋಧಿಸುತ್ತಾ ಅಲ್ಲದೆ ಇವರ [illegible] ಹೋಗುತ್ತಾರಂತೆ.

ಪಾಣೆಮಂಗಳೂರು: — ಬಂಟವಾಳ ರೇಂಜಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ಪಾಣೆಮಂಗಳೂರು ಬೋ. ಎ. ಎಲ್. ಎಲಿಮೆಂಟರಿ ಶಾಲೆಯಲ್ಲಿ [illegible] ಮಂಗಳೂರು ರೇಂಜ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಬಿ. ವೆಂಕಟರಮಣರವರ ಅಧ್ಯಕ್ಷತೆಯಲ್ಲಿ ಜರಗಿತು. [illegible] ಉಪಾಧ್ಯಾಯರ [illegible]. ಈ ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳು [illegible] (೧) [illegible] ಶಾಲೆಯ ಉಪಾಧ್ಯಾಯರು ಉಪಾಧ್ಯಾಯ ಸಂಘದ ಮೆಂಬರರು ಆಗಬೇಕು. ಆದರೆ [illegible] ಸಂಘಕ್ಕೆ ಆ ಶಾಲೆಯು ಸೇರಬೇಕೆಂಬ ಸ್ವತಂತ್ರವು ಉಪಾಧ್ಯಾಯರಿಗೆ ಇರಬೇಕಲ್ಲದೆ [illegible]. [illegible] ಬೋರ್ಡ ಸೈಸಿಂಟಿ(?) [illegible] ಶಾಲಾ ಮಾನೇಜರುಗಳಿಗೆ ಇರಕೂಡದು. (೨) ಹಾಡಿಗಳ(?) ಶಾಲೆಗಳಲ್ಲಿ [illegible] ಟೀಚಿಂಗ್ ಸರ್ಟಿಫಿಕೇಟುಗಳನ್ನು [illegible] ಇನ್ಸ್‌ಪೆಕ್ಟರರಿಗೆ ಕಳುಹಿಸುವುದು [illegible] ಸಂಗತಿಯನ್ನು [illegible] ಇನ್ಸ್‌ಪೆಕ್ಟರವರಿಗೆ ಬರೆಯಬೇಕು. (೩) ಎಲಿಮೆಂಟರಿ ಶಾಲೆಯ ಮಕ್ಕಳು ಒಂದು ಶಾಲೆಯಿಂದ ಇನ್ನೊಂದು ಶಾಲೆಗೆ ಹೋಗುವಾಗ ಟ್ರಾನ್ಸ್‌ಫರ್ ಸರ್ಟಿಫಿಕೇಟು ಅಗತ್ಯವಿಲ್ಲವೆಂದೂ ಎಲಿಮೆಂಟರಿ ಶಾಲೆಗಳಿಗೆ ಮಕ್ಕಳನ್ನು ವರ್ಷದ ಯಾವ ಸಮಯದಲ್ಲಿಯೂ ಸೇರಿಸಬಹುದು ಬೆಂತಲೂ, (೪) ಮದ್ರಾಸು ವಿದ್ಯಾ ಇಲಾಖಾ ಮಂತ್ರಿಯವರು ಬರುವ ನವಂಬರ ತಿಂಗಳಲ್ಲಿ ಬರುವಾಗ, ಉಪಾಧ್ಯಾಯರ ವಿಷಯ ಬಗ್ಗೆಯೂ ಪ್ರಾಥಮಿಕ ವಿದ್ಯಾಭ್ಯಾಸದ ವಿಷಯ ಬಗ್ಗೆಯೂ ಬೇಕಾದ ತರಾಹಗಳನ್ನು ತಯಾರಿಸಲಿಕ್ಕೆ ಬಂಟವಾಳ, ಅತೂರ(?), ಅರ್ಲ(?), ಕಾವಳಕಟ್ಟೆ, ಪೊಳಲಿ, ಕಲ್ಲಡ್ಕ ಸೆಂಟರುಗಳ ಪ್ರತಿನಿಧಿಗಳ ಸಭೆಯನ್ನು ಬಂಟವಾಳದಲ್ಲಿ ಕರೆಯ ಬೇಕೆಂದೂ ನಿರ್ಣಯಗಳಾದವು.

ಫರಂಗಿಪೇಟೆ: — ಈ ಸೆಂಟರಿನ ೧೩ನೇ ಸಭೆಯು ತಾರೀಕು ೨೯-೯-೨೮ರಲ್ಲು [illegible] ರಾವ್ ಸಾಹೇಬ್ ಎಲಿಮೆಂಟರಿ ಶಾಲೆಯಲ್ಲಿ ಮಂಗಳೂರು ರೇಂಜ್ ಡೆಪ್ಯುಟಿ ಇನ್ಸ್‌ಪೆಕ್ಟರ್ ರಾ| ಬಿ. ವೆಂಕಟ್ರಮಣರವರ ಅಧ್ಯಕ್ಷತೆಯಲ್ಲಿ ಜರಗಿತು. ಹಿಂದಿನ ಸಭೆಯ ಪ್ರೊಸಿಡಿಂಗ್ಸುಗಳನ್ನು ಓದಿ ಮಂಜೂರ ಮಾಡಿ ಈ ಸೆಂಟರಿಗೆ [illegible], ಅಮ್ಮಾಡಿ, ಪುದುಮಾಪಿಳ್ಳ(?), [illegible], ಪೊಳಲಿಯೂರು(?), ಸಜೀಪ, ಗದ್ದೆ(?), ತುಂಬೆ ಮತ್ತು ಕಲ್ಲಿಗೆ ಬೋರ್ಡು ಶಾಲೆಗಳ ಉಪಾಧ್ಯಾಯರೆಲ್ಲಾ ಸೇರುವ ಹಾಗೆ ನಿರ್ಣಯಿಸಲ್ಪಟ್ಟಿತು.

ಕ ರ ಣಾ ಕ ರ | ಎ ಗ್ಯು ಮಿ ಕ್ಸ ರ್

ಕರ್ಣಾಟಕ ಎಗ್ಯೂ ಮಿಕ್ಸ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಝಾ, ಬಹು ದಿನದ ಜ್ವರ, ಚಾಡಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ ಬೆವರು ಬಂದು, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧—೪—೦, ಸಣ್ಣದಕ್ಕೆ ೦—೧೪—೦.

ಎಲ್ಲ ಕಡೆಗೂ ಔಷಧವನ್ನು ಮಾರುವಗೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು
ದಿ ಊಲನ್ ಮಾರ್ಟ್, ಮಂಗಳೂರು. | ಕರ್ಣಾಟಕ ಬ್ರದರ್ಸ್, ಗಿರಿಗಾಂವ, ಮುಂಬಯಿ.

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಅಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಣ, ರೂ. ೧.

ಬಾಟ್ಲಿವಾಲರ ಬಾಳಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

ಬಾಟ್ಲಿವಾಲರ ಟೂತ್ ಆಕ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೪.

ಬಾಟ್ಲಿವಾಲರ ಕೈರಿಯಾ ಮಿಕ್ಸ್ಚರ—ಅತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪.

ಬಾಟ್ಲಿವಾಲರ ಕ್ವಿನೈನ ಟೇಬುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೩—೦. ರೂ. ೧—೪—೦. ೧—೧೨—೦.

ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE

ಕಾರಖಾನೆ.—CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಹೆಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay, No. 14.

ಕೇಸರಿಯ ಪ್ರದರ ಲೋಧ್ರ

ಗರ್ಭಾಶಯ ರೋಗನಿವಾರಿಣೀ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ಪ್ರಸಿದ್ಧವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, 'ಬಂಗಾರಕ್ಕೆ ಪರಿಮಳವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ಆಭರಣ'ವೆಂದೂ, 'ಸರ್ವಾಭೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜನನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ.

ಇದು ಋತುಶೂಲೆ, ಋತುಸ್ರಾವದೋಷ, ಋತುಸ್ರಾವದ ಕಷ್ಟ, ಕಡಿಮೆಯಾಗುವುದು, ಋತುವು ನಾನಾ ಬಣ್ಣಗಳಿಂದ ಸ್ರವಿಸುವುದು, ಪ್ರದರ (ಬಿಳುಪು) ರೋಗ, ಸೂತಿಕಾರೋಗವು. ರಕ್ತಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ಶರೀರದಲ್ಲಿ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ಉಬ್ಬಸ ಮೊದಲಾದ ವ್ಯಾಧಿಗಳೂ ಇತರ ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ಔಷಧ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— ಕೇಸರೀ ಕುಟೀರಮ್,

TELEGRAMS:—"KESARI" ಆಯುರ್ವೇದ ಔಷಧಶಾಲಾ, P. B: 752, ಎಗ್ಮೋರು, ಮದರಾಸು.

..-4-'27

ಬ್ರಾಂಚ್— 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.



ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,000 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಂದ್ರಗಳು 300 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸ್‌ಗಳು, ಪ್ರತಿ ಒಬ್ಬರ ಕೈಲಿಹಿಡಿದುಕೊಂಡು ಹೋಗಲು ಅನುಕೂಲಿಸುವ ಪಚಂದ್ರಕಾಂತಿ 10 ಕ್ಯಾಂಡಲ್ ಪವರಿನ ಗ್ಯಾಸ್ ಟಾರ್ಚ್‌ಗಳು, ಸ್ಟವ್‌ಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಕರೆಯುವ ಗಂಟೆಗಳು, ಕೋಟಾ ಹುಷ್ಟುಗಳ ಹುರಾಯುಗಳು, ಬ್ಯಾಟರಿಗಳು, ಬೆಂಕಿಕಡ್ಡಿ ಇಲ್ಲದೆ ಬೀಡಿ ಮತ್ತು ಸಿಗರೆಟ್ ಹಚ್ಚುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳಿಗೆ ಬೇಕಾಗುವ ಸಾಮಾನುಗಳು ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.



ಕ್ರಯ ಪಟ್ಟಿಗೆ ಬರೆಯಿರಿ ಈ ವಿಳಾಸಕ್ಕೆ ಬರೆಯಿರಿ.

ಎ. ಆರ್. ಖಲೀಲ್,

ಮೈಸಿಕಲ್, ಸ್ಟವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

18-11-27) ನಗರ್ತಪೇಟೆ, ಬೆಂಗಳೂರು. ಸಿಟಿ

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಗ್ರಹಚಾರ ದೋಷದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯ ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

—೯—೨೭. ಸ್ಟಳ್ಳಿಟ್ಟರ್ ಪೋಸ್ಟು ಕಡೂರ್ ಡಿಸ್ಟ್ರಿಕ್ಟ್



ಅತ್ಯುತ್ತಮ ...

ಪ್ರಖ್ಯಾತವಾದ "ಜಿಗ್—ಜಿಗ್" ಗಡಿಯಾರ

ಸೈಜು 8×4½ ಅಂಗುಲಗಳು ಬೆಲೆ ರೂ. 3—0—0

ಕ್ರಯ ರೂಪಾಯಿ 3—0—0

ವಿಳಾಸ:—

ಪೋಸ್ಟ್ ಬಾಕ್ಸ್ 265, ಮದರಾಸು.

ಫ್ಯಾನ್ಸಿ ಲೀವರ ಪಾಕೆಟ್ ವಾಚ್

(15 ಬಹುಮಾನಗಳ ಸಹಿತ ರೂ. 4—8—0)

ಈ ಗಡಿಯಾರವು ... ತಯಾರಿಸಿ ಡಲ್ಪಟ್ಟಿದೆ.



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಚೆಲುವಾಗಿಯೂ ಇರುವಂತೆ ಚಿತ್ರ ಕೈದಿನಲ್ಲಿ ತಯಾರಿಸಿ, ಹಿಂದುಗಡೆ ಚಿತ್ರಕೆಲಸ ಮಾಡಲ್ಪಟ್ಟಿರುವುದು. ಮತ್ತು ಒಳಗಡೆ ಕೆತ್ತಲ್ಪಟ್ಟ ಗಿಲ್ಟ್ ಮೂವ್ಮೆಂಟ್ ಮಾಡಿರುವದು. ಧೂಳು ಸೇರದಂತೆ ಹಿಂಭಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತೆ ಲೀವರ್ ಮೂವ್ಮೆಂಟಿನಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವದಕ್ಕಾಗಿ, ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ: ಫೌಂಟನ್ ಪೇನಾ 1, ಸೆಂಟಿನ ಬಾಟಲ್ 1, ಶರ್ಟಿನ ಗುಂಡಿಗಳು 4, ಪಾಕೆಟ್ ಕನ್ನಡಿ 1, ಗಡಿಯಾರ ಸರಪಳಿ 1, ಸುವಾಸನೆ ಸೋಪು 1, ಪೇನಾ ಕತ್ತಿ 1, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ 1, ರೋಲ್ಡ್ ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1, ದಂತದ ಬಾಚಣಿಗೆ 1, ಕೈಗುಂಡಿಗಳ ಸೆಟ್ 1, ಕೈವಸ್ತ್ರ 1, ಈ 15 ಬಹುಮಾನಗಳು ಮತ್ತು ವಾಚಿಯಾದ 3 ವರ್ಷ ಗ್ಯಾರಂಟಿ ಸಹಿತ

ಗಡಿಯಾರ ಒಂದಕ್ಕೆ ಕ್ರಯ ರೂ. 4—8—0.

THE ENGLISH EMPORIUM,
P. O. box 305 MADRAS.

[illegible] ಕ್ರಮವನ್ನು ಬರುವ ನವೆಂಬ್ರ ತಿಂಗಳಲ್ಲಿ ಫರಂಗಿ[illegible] ಈ ಬಗ್ಗೆ ೯ ಮಂದಿ ಮೆಂಬರುಗಳಿಂದ [illegible] ಕರೆಯಬೇಕಾಗಿಯೂ ನಿರ್ಣಯಿಸಲ್ಪಟ್ಟಿತು. ಉಪಾಧ್ಯಾ[illegible] ಇಟ್ಟುಕೊಳ್ಳಬೇಕಾದ ನೋಟ್ಸ್ 'ಆಫ್ ಲೆಸನ್ಸ'ಗಳ [illegible] ವರೆಗೆ ಚರ್ಚೆಗಳು ನಡದು ಸಭೆಯವರ [illegible] ಪಡೆದದ್ದರಿಂದ ಇದರ ಕುರಿತು ಮುಂದಿನ ಸಭೆ [illegible] ವರೆಗೆ ಮುಂದರಿಸಲ್ಪಟ್ಟಿತು. ಅಧ್ಯಕ್ಷರು ಸಭೆಯ [illegible] ತಮ್ಮ ಅನುಭವಗಳನ್ನು ತಿಳಿಯಪಡಿಸಿ [illegible] ಉಪಾಧ್ಯಾಯರು ನೋಟ್ಸು ಆಫ್ ಲೆಸನ್ಸ್ [illegible] ಆದರೆ ಸಾಧ್ಯ ಅಸಾಧ್ಯದ ಕುರಿತು ಇನ್ನೂ [illegible]ಯವನ್ನು ತಿಳಿಸಬೇಕಾಗಿಯೂ ಮುಂತಾದ ಭಾಷ[illegible] ಉಪಕಾರ ಸ್ಮರಣೆಯನ್ನು ಮಾಡಿ ರಾಜಗೀತ [illegible] ವಿಸರ್ಜಿಸಲ್ಪಟ್ಟಿತು.

[illegible] ಸಭೆಯು ತಾ. ೨೭—೧೦—೧೬ರಲ್ಲು ಫರಂಗಿಪೇಟೆ [illegible] ಶಾಲೆಯಲ್ಲಿಯೇ ಜರಗಿಸಬೇಕಾಗಿ ನಿರ್ಣಯವಾಯ್ತು.

[illegible]:— ಇಲ್ಲಿಗೆ ಸಮೀಪ ಇರುವ ಮಂಗಲವಾಡಿ [illegible] ದಿವಸಗಳೊಳಗೆ ಎರಡು ಮನೆಗಳಲ್ಲಿ ಕಳ್ಳರು ಹೊಕ್ಕು [illegible]. ಮಂಜೇಶ್ವರ ಪೋಲೀಸ ಸಬ್ ಇನ್ಸಪೆಕ್ಟರವರು [illegible] ಕಳ್ಳರನ್ನು ಹುಡುಕಿ ತೆಗೆದರು. ಕಳ್ಳರ ಪೈಕಿ ಒಬ್ಬ[illegible] ಯ [illegible]ದಾರರು ಆಶ್ರಯ ಕೊಟ್ಟಿದ್ದರು. ಪೋಲೀಸಿನವರಿಗೆ [illegible] ಕಳ್ಳನು ಸಿಕ್ಕಿದೊಂದು ದೊಡ್ಡ ಪುಣ್ಯ. ದೇಶ[illegible] ಇದಲ್ಲವೇ?

[illegible]ಯಲ್ಲಿ ನೂರಾರು ಚಿಲ್ಲರೆ ಕಳವು ಮಾಡಿದ್ದ ಉದ್ಯಾವರ [illegible] ಒಬ್ಬ ಮಾಪಿಳ್ಳೆ ಸಿಕ್ಕಿರುವನು. ಈತನು ಕದಿಯದ ಮನೆಯಿಲ್ಲ [illegible] ಜನರಿಲ್ಲ, ಮಾಡದ ವ್ಯಾಪಾರವೂ ಇಲ್ಲ. ಸಬ್ ಇನ್ಸ[illegible] ಸಾಧನೆಯು ಶ್ರೇಯಸ್ಕರವಾಗಿದೆ.

ವ್ಯಾಪಾರಸ್ಥರ ಅನುಕೂಲಕ್ಕಾಗಿ ಇಲ್ಲಿ ರೈಲ್ವೆ ಆಫೀಸಿನಲ್ಲಿ ಇನ್ನೊಂದು [illegible] ತೆರೆಯುವ ಆಲೋಚನೆಯಾಗಿದೆ. ಈ ಊರಿಗೆ [illegible] ಅಗತ್ಯವೆಂಬವಕ್ಕೆ ಸಂದೇಹವಿಲ್ಲ.

ಉಪ್ಪಳ ಗ್ರಾಮಕ್ಕೆ ಸೇರಿದ್ದ ಆದ ಬಾಲಿಕಾ ಪಾಠಶಾಲೆಯನ್ನು ಮಂಗಲವಾಡಿ ಗ್ರಾಮದ ಒಂದು ಮೂಲೆಯಲ್ಲಿಟ್ಟಿದ್ದಾರೆ. ಶಾಲಾ ಇನ್ಸ ಪೆಕ್ಟ್ರೆಸವರು ಸಂದರ್ಶಿಸಿ ಕುರ್ಚಿಪಳ್ಳದಲ್ಲಿಯೇ ಇಡಿಸುವ ಏರ್ಪಾಡು ಮಾಡುತ್ತೇನೆಂದು ಭರವಸೆ ಇತ್ತುದು ತುಂಬಾ ಸಂತೋಷಕರದ ವಾರ್ತೆ.

ಕುಂಬಳೆ:— ಪಂಚಾಯತ ಕೋರ್ಟುಗಳು ಪ್ರೆಸಿಡೆಂಟ ವ ಮೆಂಬರರು ಕೂಡಿ ತಮ್ಮ ಅನಾನುಕೂಲತೆಗಳ ಕುರಿತು ಸರಕಾರಕ್ಕೆ ಕೇಳಿ ಕೊಳ್ಳುವ ಬಗ್ಗೆ ಇದೇ ತಾ. ೨೮ನೇ ರವಿವಾರ ದಿನ ಹಗಲು ೯ ಗಂಟೆ ಸಮಯ ಇಲ್ಲಿ ಒಂದು ಸಭೆ ಕರೆಯುತ್ತಾರಾಗಿ ಕೇಳಬರುತ್ತದೆ.

ದೀರ್ಘಕಾಲದಿಂದ ವಸೂಲಾಗದೆ ಬಾಕಿ ನಿತ್ತ ಸಹಕಾರಿ ಸಂಘದ ಹಣವನ್ನು ಈಗಣ ಪ್ರೆಸಿಡೆಂಟರು ಬಹಳ ಶ್ರಮಪಟ್ಟು ವಸೂಲುಮಾಡುತ್ತಿದ್ದಾರೆ. ಇದು ಸಂಘದ ಏಳಿಗೆಗೆ ಮುಖ್ಯ ಕಾರಣವೇ ಸರಿ.

ಮಂಜೇಶ್ವರ:— ಇಲ್ಲಿಯ ಡಾಕ್ಟರವರ ಮೇಲೆ ಅರ್ಜಿ ಮಾಡಿದವರ ಪೈಕಿ ಕೊಗ್ಗ ಕೇರಿಗಾರನೆಂಬವನು ಪ್ರಾಯಶ್ಚಿತ್ತಕ್ಕಾಗಿ ಆತ್ಮ ಹತ್ಯಮಾಡಿಕೊಂಡನೆಂತ ಕೇಳಬರುತ್ತದೆ. ಈತನು ದೀರ್ಘಕಾಲದಿಂದ ಇಲ್ಲಿಯ ದೇವಸ್ಥಾನದ ಸೇವೆಯನ್ನು ನಡಿಸಿಕೊಂಡು ಬರುತ್ತಿದ್ದ.

ಪೆರಡಾಲು:— ಇಲ್ಲಿನ ಬೋರ್ಡು ಶಾಲೆಯಲ್ಲಿ ಈಚೆಗೆ ಮೂರು ತಿಂಗಳುಗಳಲ್ಲೇ ಇಬ್ಬರು ಉಪಾಧ್ಯಾಯರು ಸರದಿಯಂತೆ ನಿಯಮಿಸಲ್ಪಟ್ಟು, ಬಾಲಕರ ಪೂರ್ಣಪಂಚತಿಯೊದಗುವ ಮೊದಲೇ (ವರ್ಗ) ಸ್ಥಾನಾಂತರವನ್ನು ಹೊಂದಿಸಲ್ಪಟ್ಟರು. ಹೀಗೆ ಅಲ್ಪಾವಧಿಯಲ್ಲೇ ಅನೇಕ ವರ್ಗಾವರ್ಗಗಳಿಂದ ಶಾಲೆಯು ಸರ್ವಥಾ ಉನ್ನತಿಯನ್ನೊಂದಲಾರ ದೆಂಬುದು ವಿಚಾರಿಗಳಿಗೆಲ್ಲಾ ವೇದ್ಯವಿರುವ ವಿಷಯ. ಆದುದರಿಂದ ಇದ ಕ್ಕೆ ಮೊದಲು ಸುಮಾರು ೨೦ ವರುಷಗಳವರೆಗೆ ತ್ರಿಕರಣ ಪೂರ್ವಕವಾಗಿ ಉದ್ಯೋಗವನ್ನು ಸಾಗಿಸಿ, ತನ್ನ ಶಿಕ್ಷಣ ಚಾತುರ್ಯದಿಂದ ಈ ಶಾಲೆಯನ್ನು ಉತ್ತಮ ಸ್ಥಿತಿಗೆ ತಂದ ಪ್ರಕೃತ ವಿಟ್ಲ ಹಾಯರ್ ಎಲಿಮೆಂಟರಿ ಶಾಲೋಪಾಧ್ಯಾಯರಾಗಿರುವ ರಾ। ಕೆ. ಕೃಷ್ಣಪೈಗಳನ್ನು ಮರಳಿ ಇಲ್ಲಿಗೆ ನಿಯಮಿಸಿ ಶಾಲೋನ್ನತಿಗೆ ಸಹಕಾರಿಗಳಾಗ ಬೇಕೆಂದು ಮಾನ್ಯ ಪ್ರೆಸಿಡೆಂಟು ಮತ್ತು ಕಾಸರಗೋಡು ತಾಲೂಕು ಬೋರ್ಡು ಪ್ರೆಸಿಡೆಂಟರುಗಳಿಗೆ ಊರ ವರು ಇತ್ತೀಚೆಗೆ ಮನವಿಗಳನ್ನು ಮಾಡಿಕೊಂಡಿರುವರು. ಫಲಿತಾಂಶವನ್ನು ನಿರೀಕ್ಷಿಸುತ್ತಾ ಇದ್ದೇವೆ. ಸದರಿ ಉಪಾಧ್ಯಾಯರು ಇಲ್ಲಿಗೆ ತಿರಿಗಿಬಂದು ಕಾರ್ಯವನ್ನು ಕೈಗೊಳ್ಳುವ ವಿಚಾರದಲ್ಲಿ ಬಹಳ ಉತ್ಸಾಹದಿಂದಲೂ ಇರುವರು. ಕಾರಣ ದಯಾಳು ಪ್ರೆಸಿಡೆಂಟರೀರ್ವರೂ ಸಹಕರಿಸಿ ಜನತೆಯ ಪ್ರಾರ್ಥನೆಯನ್ನು ಪೂರ್ತಿಸಿಕೊಡುವುದರೊಂದಿಗೆ ಶಾಲೆಯ ವಿದ್ಯಾಭಿವೃದ್ಧಿಯ ಶ್ರೇಯಸ್ಸಿಗೆ ಪಾತ್ರರಾಗದಿರರೆಂದು ಪೂರ್ಣನಂಬಿರುವೆವು.

ಬಿಲ್ಲವರ ಹಿತವರ್ಧಕ ಸಂಘ ಮುಂಬಾಯಿ.

[illegible] ಶ್ರೀ ನಾರಾಯಣ ಸ್ವಾಮಿ ಪರಮಹಂಸರು ತನ್ನ ೭೪ನೇ ಪ್ರಾಯದಲ್ಲಿ ಕಳೆದ ತಿಂಗಳ ೨೦ನೇ ತಾರೀಖಿಗೆ ವರ್ಕಾಲದಲ್ಲಿರುವ ಶಿವಗಿರಿಯಲ್ಲಿ ಸಮಾಧಿಯಾದರೆಂಬ "ದುಃಖಕರವಾದ ವರ್ತಮಾನವು ಸಿಕ್ಕಿದಾಕ್ಷಣವೇ ಮೇಲ್ಕಾಣಿಸಿದ ಸಂಘವು ತಾ. ೨೯ — ೯ — ೧೯೨೮ನೇ ಸಾಯಂಕಾಲ ೬ ಘಂಟೆಗೆ ಚರ್ಚಗೇಟ್ ರಸ್ತೆಯಲ್ಲಿರುವ ತಿಮ್ಮನಿ ಮೇನ್ಷನಿನಲ್ಲಿ ತಮ್ಮ ದುಃಖವನ್ನು ಸೂಚಿಸುವುದಕ್ಕಾಗಿ ಒಂದು ಸಭೆಯನ್ನು ಶ್ರೀಯುತ ಬಿ. ದಾಮುಣರಾಯರ ಅಧ್ಯಕ್ಷತೆಯಲ್ಲಿ ಜರಗಿಸಿ, ಅಧ್ಯಕ್ಷರು, ಗುರುಸ್ವಾಮಿಯವರು ಹಿಂದುಳಿದ ಸಮಾಜಗಳ ಉನ್ನತಿಗಾಗಿ ಪಟ್ಟ ಶ್ರಮಗಳನ್ನೂ, ಅವರು ಮಂಗಳೂರಲ್ಲಿ ಮಾಡಿದ ಕೆಲಸಗಳನ್ನೂ ವಿವರಿಸಿ ಕೂಡಿದವರ ಹೃದಯದಲ್ಲಿ ಗುರು ಸ್ವಾಮಿಯವರ ವಿಷಯಕ್ಕಾಗಿ ಭಕ್ತಿಭಾವ [illegible]. ನೆರೆದವರ ಪೈಕಿ ಶ್ರೀಮತಿ ಸಹದೇವಿಬಾಯಿ [illegible] ಕೋರುಕಾರ್, ಅಪ್ಪಾಜಿ ಸುವರ್ಣ, ಲಕ್ಷ್ಮಣ [illegible] ಮುಖ್ಯ ಅಸ್ಪೃಶ್ಯನವರು ಶ್ರೀ ಗುರುಸ್ವಾಮಿಯವರ ಗುಣಕೀರ್ತನೆಗಳನ್ನು ಮಾಡಿದರು. ಕೂಡಿದವರಲ್ಲೆಲ್ಲರು ಸ್ವಾಮಿಯವರ ನಾಮವು [illegible] ಶಾಶ್ವತವಾಗಿ ಉಳಿಯುವಂತೆ ಅವರ ಶಿಲಾ ಪ್ರತಿಮೆಯೊಂದನ್ನು ಮುಂಬಾಯಿಯಲ್ಲಿ ಮಾಡಿಸಿ, ಯೋಗ್ಯ ಸ್ಥಳದಲ್ಲಿ ಇಡಬೇಕಾಗಿ [illegible] ಏಕಮತದಿಂದ ಮಂಜೂರಾಯಿತು. ಶಿವ [illegible] ಪ್ರಾರ್ಥನೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ವಿವಿಧ ಸಮಾಚಾರಗಳು.

ಲಾಹೋರದ ವಿದ್ಯಾರ್ಥಿಗಳ ಪರಿಷತ್ತು.

ಲಾಹೋರದ ವಿದ್ಯಾರ್ಥಿಗಳ ಪರಿಷತ್ತು ಕಳೆದ ಆದಿತ್ಯವಾರಕ್ಕೆ ಕೊನೆಗಂಡಿತು. ಹಲವು ಠರಾವುಗಳು ಅಲ್ಲಿ ಮಂಜೂರಾತಿಯನ್ನು ಹೊಂದಿದುವು. ನೆಹರು ಕಮಿಟಿಯ ವರದಿಯನ್ನು ಪ್ರಶಂಸಿಸಿ ಒಂದು ಠರಾವು ಮಂಜೂರಾಯಿತು. ಆದರೆ ಪೂರ್ಣ ಸ್ವಾತಂತ್ರ್ಯವೇ ಪಂಜಾಬದ ಯುವಕರನ್ನು ತೃಪ್ತಿಗೊಳಿಸಬಲ್ಲದೆಂದೂ, ಸರಕಾರದವರು ಭಿನ್ನಾಭಿಪ್ರಾಯವಿಲ್ಲದೆ ವಿದ್ಯಾರ್ಥಿಗಳಿಗೆ ಮಿಲಿಟರಿ ಕ್ಲಾಸುಗಳನ್ನು ತೆರೆಯ ಬೇಕೆಂದೂ, ಪರಂತು ಯುದ್ಧಕ್ಕೆ ಸೇರುವ ಪ್ರಸ್ತಾಪವನ್ನು ಮಾಡಬಾರ ದೆಂದೂ, ಜಾತೀಯ ಕಲಹಗಳಿಗೆ ಎಡೆಕೊಡುವಂತಹ ಪತ್ರಿಕೆಗಳಿಗೆ ವಿದ್ಯಾರ್ಥಿ ಸಂಘದವರು ಪ್ರೋತ್ಸಾಹವನ್ನು ಕೊಡಬಾರದೆಂದೂ ನಿರ್ಣಯಗಳಾದವು. ಶಾಲೆಗಳಲ್ಲಿ ವೆರ್ನಾಕ್ಯುಲರನ್ನೇ ಮುಖ್ಯ ಭಾಷೆಯನ್ನಾಗಿ ಮಾಡಬೇಕೆಂಬುದೇ ಮುಕ್ತ್ಯಂದು ಠರಾವು. ಮತ್ತು ರಾ। ಖರಗ ಬಹ ದೂರ್ ಸಿಂಗರ ಸ್ವಾರ್ಥತ್ಯಾಗವನ್ನು ಪ್ರಶಂಸಿಸಿ ಅವರು ಆದಷ್ಟು ಬೇಗನೆ ಬಿಡುಗಡೆ ಹೊಂದುವ ಸಲುವಾಗಿ ಪ್ರಾರ್ಥಿಸಿಕೊಳ್ಳಬೇಕೆಂದೂ ನಿಶ್ಚಯಿಸಿದರು.

* * *

ಅಫಘಾನಿ ವಿದ್ಯಾರ್ಥಿಗಳು.

ಅಫಘಾನದ ೧೦೧ ಜನ ವಿದ್ಯಾರ್ಥಿಗಳೂ, ೧೫ ಜನ ವಿದ್ಯಾರ್ಥಿನಿಯರೂ ಕಳೆದ ಶನಿವಾರ ಮುಂಬಾಯಿಯಿಂದ ಹೊರಟು ಕಾನ್‌ಸ್ಟಂಟಿನೋಪಲಿಗೆ ಪ್ರಯಾಣ ಬೆಳಸಿದರು. ಅವರ ನಾಯಕರೇ ಮಿ। ಮಹಮದ ಇಸ್ಮಾಯಿಲ್‌ಖಾನರು. ವಿದ್ಯಾರ್ಥಿಗಳು ೨೦ರಿಂದ ೧೬ ವಯಸ್ಸಿನ ಪ್ರಾಯದೊಳಗಿನವರು. ಸಾಧಾರಣ ವಿದ್ಯಾಭ್ಯಾಸವನ್ನು ಪಡೆದ ತರುವಾಯ ಮಿಲಿಟರಿ ತರಬೇತಿಯನ್ನು ಹೊಂದುವರು. ವಿದ್ಯಾರ್ಥಿನಿಯರು ಔಷಧಗಳ ಉಪಯೋಗಗಳನ್ನೂ, ಶುಶ್ರೂಷೆ ಮಾಡುವದನ್ನೂ ಕಲಿಯುವರು. ಇವರೆಲ್ಲರೂ ಒಂದೇ ಶಾಲೆಯ ವಿದ್ಯಾರ್ಥಿಗಳಲ್ಲ. ಅಫಘಾನಿಸ್ಥಾನದ ಬೇರೆ ಬೇರೆ ಶಾಲೆಗಳಿಂದ ಬಂದವರು. ಈ ಶಾಲೆಗಳೆಲ್ಲದರ ಮೇಲ್ವಿಚಾರಣೆಯನ್ನು ಸ್ವತಃ ಅಮೀರರೇ ಮಾಡುತ್ತಿದ್ದರು. ದೊಡ್ಡ ದೊಡ್ಡ ಹುದ್ದೇದಾರರ ಮಕ್ಕಳು ಹಲವರಿರುವರು. ಇವರು ಕಾನ್‌ಸ್ಟಂಟಿನೋಪಲಿನಲ್ಲಿ ಹದಿನೊಂದು ವರುಷಗಳ ತನಕ ಇರುವರು. ಇವರ ಖರ್ಚೆಲ್ಲವನ್ನೂ ಅಫಘಾನ ಸರಕಾರದವರೇ ಕೊಡುವರು. ಅಮೀರರಿಗೆ ವಿದ್ಯಾಭ್ಯಾಸದಲ್ಲಿ ಬಹು ಅಭಿರುಚಿ. ತಮ್ಮೂರಿನ ಮಕ್ಕಳನ್ನು ಅವರು ರಶ್ಯ, ಜರ್ಮನಿ, ಫ್ರಾನ್ಸ ಮೊದಲಾದ ದೇಶಗಳಿಗೆ ಕಳುಹಿಸಿದ್ದರು. ಇವರೊಂದಿಗಿರುವ ಹೆಣ್ಣು ಹುಡುಗಿಯರು ಪರದೆಯನ್ನು ಉಪಯೋಗಿಸುವುದಿಲ್ಲ. ಇನ್ನು ಮುಂದೆಯೂ ಉಪಯೋಗಿಸುವುದಿಲ್ಲವಂತೆ.

* * *

ಅಮಾನುಲ್ಲರ ಸುಧಾರಣೆಗಳು.

ಅಫಘಾನದ ಅಮೀರ ಅಮಾನುಲ್ಲಾರವರು ನಡೆಯಿಸಿದ ದೊಡ್ಡದೊಂದು ಸಭೆಯಲ್ಲಿ ಈ ಕೆಳಗಿನ ಸುಧಾರಣೆಗಳು ಅಫಘಾನಿಸ್ಥಾನದಲ್ಲಿ ಆಗಬೇಕೆಂದು ಆಜ್ಞಾಪಿಸಿದರು. ಉತ್ಸವ ಕಾಲದಲ್ಲಿ ಪರಸ್ಪರ ಉಡುಗೊರೆಗಳನ್ನು ಕೊಡಬಾರದು. ಎಲ್ಲಾ ಹುದ್ದೇದಾರರಿಗೆ ಬರೆಯುವಾಗ, ಅಂದರೆ ಅರಸ ಅರಸಿಗಳಿಗೂ ಬರೆಯುವಾಗ ಮೊದಲು "ನನ್ನ ಪ್ರೀತಿಯ" ಎಂದು ಬರೆಯಬೇಕು. ಮೌಲವಿಗಳನ್ನು ಧರಿಸಬಾರದು. ಮಿಲಿಟರಿ ಸರ್ವಿಸಿನಲ್ಲಿ ಸಿಕ್ಕಿದ ಪದಕಗಳನ್ನು ಮಾತ್ರವೇ ಧರಿಸಿಕೊಳ್ಳಬಹುದು. ಅಫಘಾನದ ರಾಜ್ಯಾಂಗ ಎಸೆಂಬ್ಲಿಗೆ ಸರಕಾರಿ ಅಧಿಕಾರಿಗಳು ಚುನಾಯಿಸಲ್ಪಡಬಾರದು. ಯಾವನೇ ಒಬ್ಬನು ಸರಕಾರಿ ಕೆಲಸಕ್ಕೆ ಸೇರಿದೊಡನೆ ಅವನ ಆಸ್ತಿಯ ಲೆಕ್ಕ ತೆಗೆಯಬೇಕು. ಅವನ ದಿನಚರಿಯ ಜಮಾಖರ್ಚನ್ನು ಬರೆದಿಡಬೇಕು. ಈ ಪಟ್ಟಿಗೆ ಸರಿಯಾಗಿ ಅವನ ಹಣ ಸಿಲ್ಕು ಇಲ್ಲದೆ ಅಧಿಕವಾಗಿದ್ದರೆ, ಅವನು ಮೋಸದಿಂದ ಹಣವನ್ನು ತಿಂದುಹಾಕಿದನೆಂದೂ, ಅಥವಾ ಜನರಿಂದ ಲಂಚವನ್ನೂ ಪಡೆದನೆಂದೂ ಅವನನ್ನು ವ್ಯವಹಾರಕ್ಕೆ ಒಳಪಡಿಸಬಹುದು. ಹೀಗೆ ಮಾಡುವುದೇಕೆಂದರೆ ಕೆಲವು ವರುಷಗಳ ಹಿಂದೆ ಅಫಘಾನಿಸ್ಥಾನದ ಒಬ್ಬ ಆಫೀಸರನಿಗೆ ಬಹು ಸಾಲವಿದ್ದಿತು. ಅವನ ಸಂಬಳವೇನೂ ಹೆಚ್ಚಾಗಿರಲಿಲ್ಲ. ಆದರೂ ಒಂದೆರಡು ವರುಷಗಳಲ್ಲಿಯೇ ಅವನು ಸಾಲವೆಲ್ಲವನ್ನೂ ತೀರಿಸಿ, ಬಹು ಹಣವನ್ನು ಗಳಿಸಿ ದೊಡ್ಡ ಧನಿಕನಾದನು. ಅವನು ಸತ್ಯದ ಹಾದಿಯಿಂದ ಈ ರೀತಿ ಹಣ ಗಳಿಸಿರಲಿಲ್ಲವೆಂದು ಖಂಡಿತವಾಗಿ ಕಂಡುಬಂದಿದೆ. ಇನ್ನು ಮುಂದೆಯೂ, ಇತರರು ಹೀಗೆ ಮಾಡ ಬಾರದೆಂದು ಅಮೀರರ ಆಲೋಚನೆ.

* * *

ಪೂನಾ ಪೋಲಿಸ ಸುಪರಿಂಟೆಂಡೆಂಟರ ಹುಕುಮು.

ತಾ. ೧೭ನೇ ಸಿದ ಸೈಮನ್ ಕಮಿಶನು ಪೂನೆಗೆ ಬರುವುದರಿಂದ ಅಂದು ಯಾರಾದರೂ ಹರತಾಳವನ್ನೂ, ಮೆರವಣಿಗೆಯನ್ನೂ ಆಚರಿಸ ಬಹುದೆಂದು ನೆನಸಿ, ಅಂತಹ ಸಂಗತಿಗಳೇ ನಡೆಯುವಂತೆ ಪೂನೆಯ ಪೋಲಿಸ್ ಸುಪರಿಂಟೆಂಡೆಂಟರು ಈ ಕೆಳಗಿನ ಹುಕುಮನ್ನು ಹೊರಡಿಸಿರುವರು.

೧ ಸಭೆಗಳೂ, ಮೆರವಣಿಗೆಗಳೂ, ಜನರ ಸಂಗ್ರಹಗಳೂ, ಗಾಯನವಿದ್ಯಾಗಳ ಇಲ್ಲದಾಗಲಿ, ಪೂನಾನಗರ, ಯಾ ಸಮೀಪದ ಸ್ಥಳಗಳಲ್ಲಿಯೂ, ಪೋಲೀಸ ಇನ್ಸಪೆಕ್ಟರರಿಂದ ಪಾಸನ್ನು ಪಡೆಯದೆ ನಡೆಯ ಬಾರದು. ಪಾಸನ್ನು ಪಡಕೊಂಡರೂ ಅದರಲ್ಲಿ ನಮೂದಿಸಿದ ಕಾನೂನಿಗೆ ಸರಿಯಾಗಿ ವರ್ತಿಸಬೇಕು. ಪಾಸುದೊರಕುವ ಸಲುವಾಗಿ ಕನಿಷ್ಟಪಕ್ಷ ಮೂರು ದಿನಗಳ ಮೊದಲೇ ಬರೆದುಕೊಳ್ಳಬೇಕು. ಅರ್ಜಿಯಲ್ಲಿ ೧ ಚಾಲಕರ ಹೆಸರು, ೨ ಯಾವ ಸ್ಥಳದಿಂದ ಹೊರಟು ಯಾವ ಸ್ಥಳಕ್ಕೆ ಹೋಗುವುದು, ೩ ಯಾವ ಹೊತ್ತಿಗೆ ಪ್ರಾರಂಭಿಸಿ, ಯಾವ ಹೊತ್ತಿಗೆ ಕೊನೆಗಾಣುವುದು, ೪ ಯಾವ ಹಾದಿಯಾಗಿ ಹೋಗುವುದು. ಎಂಬೀ ವಿಷಯಗಳನ್ನು ವಿವರವಾಗಿ ತಿಳಿಸಬೇಕು. ಚಾಲಕರು ಸಭೆಯ ಮತ್ತು ಮೆರವಣಿಗೆಗಳ ಅಪ್ಪಂತದ ವರೆಗೆ ಇದ್ದು, ಯಾವ ಸುರಾಚಾರಗಳೂ ನಡೆಯದಂತೆ ಜಾಗ್ರತೆಯಿಂದ ಇರಬೇಕು. ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸುವವರು ವ್ಯವಹಾರಕ್ಕೆ ಅರ್ಹರಾಗಿರುತ್ತಾರೆ. ಈ ಹುಕುಮು ಕೇವಲ ಅನ್ಯಾಯದ್ದೆಂದು ನಿರ್ಣಯಿಸಿ ಪೂನೆಯಲ್ಲಿ ಒಂದು ಬಹಿರಂಗವಾದ ಸಭೆ ನಡೆಯಿತು. ಈ ಹುಕುಮಿದ್ದರೂ ಹರತಾಳವನ್ನು ಆಚರಿಸದೆ ಇರ ಬಾರದೆಂದೂ ಸಭೆಯಲ್ಲಿ ನಿರ್ಣಯಗಳಾದವು.

* * *

ಮುಂಬಾಯಿ ಗಿರಣಿಯಾಳುಗಳ ವಿಜಯ.

ಕಳೆದ ಆರುತಿಂಗಳಿಂದ ಮುಂಬಾಯಿಯ ಗಿರಣಿಯ ಕೂಲಿಕಾರರು ಮುಷ್ಕರವನ್ನು ಹಿಡಿದು ಕೆಲಸಕ್ಕೆ ಬಾರದೆ ಬಹು ಕಷ್ಟಪಟ್ಟಿದ್ದರು. ಹಲವರು ಊಟಕ್ಕಿಲ್ಲದೆ ತಾವೂ ಉಪವಾಸವಿದ್ದುದಲ್ಲದೆ ತಮ್ಮ ಹೆಂಡಿರು ಮಕ್ಕಳನ್ನೂ ಉಪವಾಸ ಹಾಕಿದ್ದರು. ಆದರೂ ಕಟ್ಟಕಡೆಗೆ ಮುಷ್ಕರಗಾರರೇ ವಿಜಯಿಗಳಾದರಲ್ಲದೆ ಗಿರಣಿಗಳ ಅಧಿಕಾರಿಗಳಲ್ಲ. ಮುಷ್ಕರಗಾರರ ಕೈಯಲ್ಲಿ ಹಣವಿರಲಿಲ್ಲ. ಆದರೆ ಗಿರಣಿ ಮಾಲೀಕರು ಹಣವಂತರೂ ಬುದ್ಧಿವಂತರೂ ಆಗಿದ್ದರಲ್ಲದೆ ಮುಷ್ಕರಗಳನ್ನು ಮುರಿದಿಕ್ಕುವ ಸಾಮರ್ಥ್ಯವುಳ್ಳ ಜನರನ್ನೊಳಕೊಂಡವರಾಗಿದ್ದರು. ಮುಷ್ಕರವು ಪ್ರಾರಂಭವಾದಂದಿನಿಂದ ಅವರು ಕಡಿವಾಣತ್ತರಾಗಿ ಕೂಲಿಗಳು ಉಪವಾಸ ಬೀಳಲಿ ಬೇಕೆಂದು ಅವರು ನಿಶ್ಚಯಿಸಿದ್ದರು. ತಾವು ಕೂಲಿಗಾರರ ಶರ್ತಗಳಿಗೆ ಒಪ್ಪುವದಿಲ್ಲವೆಂದೇ ಕೂಗಿಕೊಂಡಿದ್ದರು. ಆದರೆ ಕೊನೆಗೆ ಕೂಲಿಗಳ ಕಡೆಯವರ ಶರ್ತಗಳಿಗೆ ಗಿರಣಿ ಅಧಿಕಾರಿಗಳು ಶಲಿವಾಗಬೇಕಾಯಿತು. ಕೂಲಿಯವರ ಸಂಬಳವನ್ನು ಕಡಿಮೆಮಾಡಬೇಕೆಂದು ಅಧಿಕಾರಿಗಳು ಅಂದು ನಿಶ್ಚಯಿಸಿದ್ದರು. ಹಾಗೆ ಮಾಡಬಾರದೆಂದಾಗಿ ಅವರೀಗ ಒಪ್ಪಿರುವರು. ನಿಶ್ಚಿತ ಕ್ರಮದಲ್ಲಿಯೇ ಕೆಲಸಗಾರರಿಗೆ ಮುಂಗಡ ಸಂಬಳವನ್ನು ಕೊಡಲೊಪ್ಪಿರುವರು. ಈ ಶರ್ತಗಳ ಮೇಲೆ ಕಳೆದ ಸೋಮವಾರದಿಂದ ಮುಷ್ಕರಗಾರರು ಪುನಃ ಕೆಲಸವನ್ನು ಪ್ರಾರಂಭಿಸಿದರು. ಈ ರೀತಿಯಲ್ಲಿ ಒಪ್ಪಂದವಾಗುವಂತೆ ಪ್ರಯತ್ನಪಟ್ಟ ಶ್ರೀಯುತರುಗಳಾದ ಎನ್. ಎಮ್. ಜೋಶಿ, ಜಿಂಬಕರ್, ಡಾಂಗೆ, ಮಿರಜಕರ, ಜೋಗಳೇಕರ ಇವರ ಸಾಹಸವು ಪ್ರಶಂಸನೀಯವಿದೆ.

* * *

ನೆಹರು ವರದಿಯೂ ಮುಸಲ್ಮಾನರ ವಿರೋಧವೂ.

ನೆಹರು ವರದಿಗೂ ಸ್ವರಾಜ್ಯ ರಚನೆಗೂ, ಎಲ್ಲರೂ ತಮ್ಮ ಬೆಂಬಲವನ್ನು ಕೊಟ್ಟಿರುವರು. ಮದರಾಸ ಮೊದಲಾದ ಸ್ಥಳಗಳಲ್ಲಿ ನಡೆದ ಎಲ್ಲಾ ಪಕ್ಷಗಳ ಪರಿಷತ್ತಿನಲ್ಲಿ ಇದನ್ನು ಸಮರ್ಥಿಸಿರುವರು. ಆದರೆ ಮುಸಲ್ಮಾನ ಪುರಾಣಿಕರು ಇದಕ್ಕೆ ತಮ್ಮ ಒಪ್ಪಿಗೆಯನ್ನು ತೋರ್ಪಡಿಸುವುದಿಲ್ಲ. ಇದಕ್ಕೆ ವಿರೋಧವಾಗಿ ಮುಸಲ್ಮಾನರ ಒಂದು ಪ್ರತ್ಯೇಕ ಪರಿಷತ್ತು ನಡೆಯುವ ಅಟ್ಟಹಾಸ. ಆ[illegible] ಮಹಮದಾಬಾದದ ಮಹಾರಾಜರು, ಮುಸಲ್ಮಾನರು ನೆಹರು ವರದಿಗೆ ವಿರೋಧಿಗಳಾಗಿರಲು ಯಾವ ಪ್ರಯೋಜನವೂ ಇಲ್ಲವೆಂದೂ, ಅದರಿಂದ [illegible] ಅಭಿವೃದ್ಧಿಗೆ ತಡೆಯನ್ನುಂಟುಮಾಡಿದ ಹಾಗಾಗುವದೆಂದೂ ಪ್ರಕಟಿಸಿದರು. ಮಿ। [illegible] ಮೊದಲಾದ ಹಲವು ವಕೀಲ್ಲರು ಮುಸಲ್ಮಾನ ಮುಖಂಡರು, ತಮ್ಮ ಜಾತಿಯವರು ಹೀಗೆ ಮಾಡುವದು ಎಂದೆಂದಿಗೂ ನ್ಯಾಯವಾಗಲಾರದೆಂದು ಸೂಚಿಸಿರುವರು. ಅದಲ್ಲದೆ ಸರ್. ಅಲಿ ಇಮಾಮ್ ರು ಅಸ್ಸಾಂಬ್ಲಿಯ ಪ್ರೆಸಿಡೆಂಟರಿಗೆ "ಹಿಂದೀ ಸ್ವಾತಂತ್ರ್ಯವು ನೆಹರು ವರದಿಯ ಸ್ವೀಕಾರದ ಮೇಲೆಯೇ ಅವಲಂಬಿಸಿದೆ" ಎಂದು ತಂತಿ ಬಿಟ್ಟಿದ್ದಾರೆ. ಈ ಧೀರೋದಾತ್ತರೆಲ್ಲರ ಮಾತುಗಳನ್ನೂ, ಅಭಿಪ್ರಾಯಗಳನ್ನೂ ಮುಸಲ್ಮಾನರು ನಿಸ್ವಾರ್ಥ ಬುದ್ಧಿಯಿಂದ ಸ್ವೀಕರಿಸಿದರೆ ಎಷ್ಟೋ ಉಪಕಾರವಾಗಬಹುದು. ಮಿ। ಶೌಕತ್ ಅಲಿಯವರೂ, ಸಿಂಧಿನ ಮಿ। ಬುಖೋರವರು ನೆಹರು ವರದಿಗೆ ವಿರೋಧಿಸುತ್ತಿರುವರು. ಆದರೆ ಅವರು ಹೀಗೆ ಮಾಡುವುದರಿಂದ ದೇಶಹಿತದ ಕಾರ್ಯಕ್ಕೆ ಎಷ್ಟು ಹಾನಿಯನ್ನುಂಟುಮಾಡುತ್ತಾರೆಂಬುದನ್ನು ಇನ್ನಾದರೂ ಯೋಚಿಸುವರು ಮೇಲು.

* * *

ಕವಿ ಶೇಕ್ಸ್‌ಪಿಯರನ ಶಯನಗೃಹ.

ಕವಿ ಶೇಕ್ಸ್‌ಪಿಯರನ ಕುರಿತು ಯಾವ ಇಂಗ್ಲೆಂಡದವನೂ ಅರಿಯಲ್ಲವೆಂದು ಹೇಳಿದರೆ ಇಪ್ಪತ್ತು ವರುಷಗಳ ಮೊದಲು ತಿಳಿದಿದ್ದನು. ಆದರೆ ಸ್ಟ್ರೇಟ್‌ಫೋರ್ಡ್ ಎಂಬಲ್ಲಿ ರೆಡ್‌ಹಾರ್ಸ ಮಾರ್ಗದ ಕೊನೆಯಲ್ಲಿ ಒಂದು ಊಟದ ಹೋಟೇಲು ಇದೆ. ಅದು ಸಮೀಪವೇ ಶೇಕ್ಸಪಿಯರನ ತಂದೆಯ ಮಾರ್ಗ[illegible]. ಈ ಹೋಟೆಲು ಶೇಕ್ಸಪಿಯರನ ಶಯನಗೃಹವಾಗಿತ್ತೆಂದು ಈಗ [illegible]. ಆ ಹೋಟೇಲಿನ ಗೋಡೆಗಳ ಮೇಲೆ ೨೦೦ ವರುಷಗಳ ಹಿಂದೆ ಬರೆದ ಚಿತ್ರಗಳನ್ನು [illegible] ವರ್ಣಗಳಲ್ಲಿ ಬರೆದಿದ್ದರು. ಸ್ತ್ರೀ ಪುರುಷರ, ಮೃಗಪಕ್ಷಿಗಳ, ಗಿಡಬಳ್ಳಿಗಳ ಚಿತ್ರಗಳನ್ನು ಬರೆದಿದ್ದರು. ಕಳೆದ ವರುಷ ಈ ಕಟ್ಟಡವನ್ನು ಸರಿಪಡಿಸುವಾಗ ಮೇಲೆ ಮುಚ್ಚಿಕೊಂಡಿದ್ದ ಹಳೆ ಬಣ್ಣಗಳನ್ನು ತೆಗೆಯಲು ಚಿತ್ರಗಳು ಗೋಚರಿಸಿದವು. ಚಿತ್ರಗಳು ಮಾತ್ರವಲ್ಲದೆ, ಶೇಕ್ಸ್‌ಪಿಯರನಿಗೆ ಪ್ರಿಯವಾಗಿದ್ದ ಹಲವು ಇಂಗ್ಲಿಷ ಶ್ಲೋಕಗಳೂ ಅಲ್ಲಿ ಬರೆದಿರುತ್ತವೆ. ಶೇಕ್ಸ್‌ಪಿಯರನು ರಾತ್ರಿ ಮಲಗುವಾಗಲೂ ಬೆಳಗ್ಗೆ ಎದ್ದೊಡನೆಯೂ ಆ ಶ್ಲೋಕಗಳನ್ನು ಪಠಿಸುವ ಅಭ್ಯಾಸವುಳ್ಳವನಾದ ಕಾರಣ ಅವನು ಅದೇ ಕೋಣೆಯಲ್ಲಿ ಮಲಗುತ್ತಿದ್ದನೆಂಬುದು [illegible]. ಶೇಕ್ಸ್‌ಪಿಯರನ ಕಾಲದಲ್ಲಿ ಇಂತಹ ಚಿತ್ರಗಳನ್ನು ಗೋಡೆಗಳ ಮೇಲೆ ಚಿತ್ರಿಸುವ ಪದ್ಧತಿ ಇದ್ದಿತು. ಆದುದರಿಂದ ಇದು ಶೇಕ್ಸ್‌ಪಿಯರನ ಶಯನಗೃಹವೆಂದು ತಿಳಿಯಲ್ಪಟ್ಟಿದೆ.

* * *

ಮದರಾಸಿನ ಎಲ್ಲಾ ಪಕ್ಷಗಳ ಪರಿಷತ್ತು.

ಎಲ್ಲಾ ಪಕ್ಷಗಳ ಪರಿಷತ್ತೊಂದು ಮದರಾಸಿನಲ್ಲಿ ಕಳೆದ ರವಿವಾರ ಡಾ। ಅನ್ನಿ ಬೆಸೆಂಟಮ್ಮನವರ ಅಧ್ಯಕ್ಷತೆಯಲ್ಲಿ ಗೋಖಲೆ ಹಾಲಿನಲ್ಲಿ ಜರಗಿತು. ಕೂಡಿದವರೆಲ್ಲರೂ ಏಕಭಾವದಿಂದ ಮತ್ತು ಐಕಮತ್ಯದಿಂದ ಪೂರ್ಣ ವಿಜಯಿಯಾಗುವಂತೆ ಮಾಡಿದರು. ಈ ಪರಿಷತ್ತಿನಲ್ಲಿ ನೆಹರು ಕಮಿಟಿಯ ವರದಿಯು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮಾತ್ರವಲ್ಲದೆ ಎಲ್ಲಾ ರಾಜಕೀಯ ಪಕ್ಷಗಳೂ ಅದರ ಪ್ರಚಾರಕ್ಕಾಗಿ ಪ್ರಯತ್ನಿಸಬೇಕೆಂದು [illegible] ಕಾಂಗ್ರೆಸಿನ ಪ್ರೆಸಿಡೆಂಟರಾದ ಡಾ। ಅನ್ಸಾರಿಯವರೂ, ಪಂ। ಮೋತಿಲಾಲನೆಹರುಗಳವರೂ ತಮ್ಮ ಸ್ವಾಭಾವಿಕ ಅಭಿನಂದನೆಗಳನ್ನು ಕಳುಹಿ ಈ ಪರಿಷತ್ತು ನಡೆದುದಕ್ಕೆ ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದರು. ಅದು ಅಲ್ಲದೆ ಪತ್ರಿಕೆಗಳನ್ನು ಎಲ್ಲಾ ಪಕ್ಷದವರಿಗೂ, ಎಲ್ಲಾ ಸಂಸ್ಥೆಗಳಿಗೂ ಕಳುಹಿದ್ದರು.

ಇದೇ ರೀತಿಯ ಪರಿಷತ್ತೊಂದು ಕಲ್ಲಿಕೋಟೆಯಲ್ಲಿ ಬರುವ ಆದಿತ್ಯವಾರ ಜರಗಲಿರುವುದು. ಅಲ್ಲಿಯೂ ಡಾ। ಅನ್ನಿಬೆಸೆಂಟಮ್ಮನವರು ಅಧ್ಯಕ್ಷರಾಗಲು ಒಪ್ಪಿರುವರು.

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವೀಸ್

ಚಿಕ್ಕಮಗಳೂರು

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನರ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗೋಸ್ಕರ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇತರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು, ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು, ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೆ ಸೇರಿ, ಅಲ್ಲಿಂದ ಕೂಡಲೇ ಹೊರಟು ಪುತ್ತೂರು ಸ್ಟೇಶನ್ ಅಥ ಧರ್ಮಸ್ಥಳ ರೋಡಿಗೆ ಎಂ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಪ್ರಯಾಣಕ್ಕೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳ ರೋಡಿನ ಗುತ್ತಿ, ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮರುದಿನ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಾಪುರ್ ಗೋವಾ, ಮಿರಜ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೆಂಗಳೂರು ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಸ್ಯೂರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪ್ರಾಂತ್ಯಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕರಾವಳಿ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ಸಂದರ್ಶಿಸಬೇಕಾದರೆ ಏಳೇ ಘಂಟೆಗಳೊಳಗೆ ಸುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತಂಕರೆ ಮಾರ್ಗವಾಗಿ ಶಿಮೊಗ್ಗೆಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S. K. Mangalore.

ದಿ ಕೆನರಾ ನರ್ಸರಿ [illegible]

ಕಸಿ ಮಾವಿನ ಸಸಿಗಳು.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ [illegible] ಗಳು, ಸಪೋಟಾ, ಪೇರಳೆ, ಕಿತ್ತಳೆ, [illegible] ದಾಳಿಂಬೆ, ಪನ್ನೇರಳೆ ಮುಂತಾದ [illegible] ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟ [illegible] ಎಲ್ಲದೆ ಬೇಗನೆ ಫಲಬಿಡುವವು [illegible] ಗಳು ಕರಾವಳಿ ಹವೆಗೂ ಮಟ್ಟಗೂ [illegible] ಬಿಡುವುದಿಲ್ಲ. ಕ್ರಯ ಪಟ್ಟಿಗೆ [illegible] ಬರೆಯಿರಿ. ಗಿಡಗಳು ಮಂಗಳೂರು [illegible] ಯಾಜಿಯವರಲ್ಲಿ ದೊರೆಯುವುವು.

ಕೆ. ಮುದ್ದಣ್ಣ ಶೆಟ್ಟಿ,
ದಿ. ಕೆನರಾ ನರ್ಸರಿ,
ರಿಸರ್ಚ್ ಗಾರ್ಡನ್ಸ್, ಕಾಪು ದ.ಕ.
C/o [illegible]
131028

ಮೈಸೂರು ಸರ್ಕಾರ

ಗಾಜಿಲನೆಯ: ಇಸವಿಯ ಮೈಸೂರು ದಸರಾ (ಅಖಿಲ ಭಾರತೀಯ) ಸರ್ವವಸ್ತು ಪ್ರದರ್ಶನವು ಮೈಸೂರು [illegible] ಖಾಯಮಾಗಿ ಏರ್ಪಡಿಸಿರುವ ಪ್ರದರ್ಶನ ಶಾಲೆಯಲ್ಲಿ [illegible] ಅಕ್ಟೋಬರ ತಿಂಗಳನಲ್ಲಿ ಗಾರಿಂದ ಜಾನೇ [illegible] ವಿಗೆ ನಡೆಯುವುದು. ಕಲಾಕೌಶಲ್ಯವನ್ನೂ [illegible] ವಿಷಯಕವಾದ ನೈಪುಣ್ಯವನ್ನೂ ತೋರಿಸುವ ವಸ್ತುಗಳನ್ನೂ ಮತ್ತು ವ್ಯವಸಾಯೋತ್ಪನ್ನ ವಸ್ತುಗಳನ್ನೂ [illegible] ಸಾಧಕವಾದ ವಸ್ತು ಸಮುದಾಯಗಳನ್ನೂ ಅಗ್ಗ ಪ್ರದರ್ಶಿಸಲಾಗುವುದು. ಯಂತ್ರೋಪಕರಣಗಳೇ ಮೊದಲಾದವುಗಳಿಂದ ಕೆಲಸ ಮಾಡಿಸಿ ಆ ಕಾಲವಲ್ಲಿ ಜನರಿಗೆ ತೋರಿಸುವುದಕ್ಕೆ ವಿದ್ಯುಚ್ಛಕ್ತಿಯೇನಾದರೂ ಅವಶ್ಯವಿದ್ದಲ್ಲಿ, ಅದನ್ನು ಮುಫತ್ತಾಗಿ ಒದಗಿಸಲಾಗುವುದು. ಪ್ರಕಟಣೆಯ ಕೆಲಸಕ್ಕೂ, ವ್ಯಾಪಾರಕ್ಕೂ, ನಾನಾ ವಿಷಯಗಳನ್ನೂ ಪರಿಶೀಲಿಸಿ ತಿಳಿದುಕೊಳ್ಳುವುದಕ್ಕೂ, ಇದು ಒಳ್ಳೆಯ ಸಮಯವಾಗಿದೆ.

ಪ್ರದರ್ಶನದಲ್ಲಿ ತಮ್ಮ ವಸ್ತುಗಳನ್ನಿಡುವುದಕ್ಕೆ ಸ್ಥಳವನ್ನು ಅಪೇಕ್ಷಿಸುವವರೂ ಮತ್ತು ಪ್ರದರ್ಶನದ ವಿಚಾರವಾಗಿ ಇತರ ವಿವರಗಳನ್ನು ತಿಳಿಯಲಪೇಕ್ಷಿಸುವವರೂ ಸಹ, ಮೈಸೂರು ದಸರಾ ಪ್ರದರ್ಶನದ ಸೆಕ್ರೆಟರಿಯವರಿಂದ ಪ್ರಸಿದ್ಧ ಪತ್ರಿಕೆಯನ್ನು (ಪ್ರಾಸ್ಪೆಕ್ಟಸ್) ಪಡೆಯಬಹುದು.

ಕೆ. ಅನಂತಸ್ವಾಮಿ ರಾವ್,
ಸೆಕ್ರೆಟರಿ,
ಮೈಸೂರು ದಸರಾ ಎಗ್ಜಿಬಿಷನ್, ಮೈಸೂರು ಸಿಟಿ.

ದಿಟನಂಬು! ಪುಷ್ಟನಾಗು!! ನೆಟ್ಟಗಾಗು!!!

ಮಲೇರಿಯಾನ

ಸರ್ವಜ್ವರಸಂಹಾರಿಣಿ

ಯುವಕನೇ ನಿನ್ನ ಬೆಲೆ ಯಾವದರಲ್ಲಿದೆ? ಸೌಮ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ?

ಆರೋಗ್ಯವಿಲ್ಲವೇ? ದೇಹವು ಕ್ಷೀಣವಾಗಿದೆಯೇ? ಮನಸಂತೋಷ ತಪ್ಪಿದೆಯೇ? ಜ್ಞಾಪಕ ಶಕ್ತಿ ಕುಂದಿರುವುದೇ? ಮುಂಗೋಪ ಜಾಸ್ತಿ ಇದೆಯೇ? ಆಲಸ್ಯ ತುಂಬಿರುವದೇ, ಚುರುಕು ಚಟುವಟಿಕೆ ಇಲ್ಲವೇ? ವ್ಯಾಕುಲತೆಯಿಂದ ಮರುಗುತ್ತೀಯೋ? ಸುಖವಾಗಬೇಕೆಂಬ ಇಚ್ಛೆ ಇದೆಯೇ? ಹಾಗಾದರೆ ಇಗೋ ಬಹು ಗುಣಕರವಾದ ಕಂಪೌಂಡ ಸಿರಪ್ ಮಲೇರಿಯಾನವೆಂಬ ಅಮೃತವನ್ನೇ ಸೇವಿಸು. ಆವಾಗ ಮೇಲಿನ ಅವಲಕ್ಷಣತೆಗಳು ತೀರ ಗುಣವಾಗಿ ಬಹು ಆರೋಗ್ಯವೂ ಶರೀರ ಪುಷ್ಟಿಯೂ ಉಂಟಾಗಿ ನಿನ್ನ ಬೆಲೆ ಆರೋಗ್ಯದಲ್ಲಿಯೇ ಇದೆಯೆಂದು ನಿನಗೆನೇ ತೋರಿಬರುವುದು.

ಕ್ರಯ 8 ಔನ್ಸ್ ಸೀಸೆಗೆ ರೂ. 3—8—0.

ಯುವತಿಯೋ ನಿನ್ನ ಸುಂದರವಾದ ಉಡುಪು ಯಾವುದು? ಅಚ್ಚುಗಟ್ಟಾಗಿ ಹೊಳೆಪುವ ನಿನ್ನ ಆರೋಗ್ಯದ ದೇಹವಲ್ಲವೇ?

ದೇಹವು ಅಚ್ಚುಗಟ್ಟಾಗಿಲ್ಲವೇ? ರೂಪಕ್ಕೆ ಕಳೆ ಬಂತೇ? ಮುಖ ಕಳೆಗುಂದಿದೆಯೇ? ಕೈಕಾಲು ಬಚ್ಚುವದೇ? ಎದೆ ನಡುಗು, ಆಯಾಸ ಉಂಟೋ? ರಕ್ತ ಛಾಯೆ ಇಲ್ಲವೇ? ಅಜೀರ್ಣವಿದೆಯೇ? ಸೊಂಟ ನೋವು ಉಂಟೋ? ತಲೆಕೂದಲು ಉದುರುವುದೇ, ತಲೆಬೇನೆ ಉಂಟೋ? ದೃಷ್ಟಿ ಸರಿಯಿಲ್ಲವೇ? ಕಟ್ಟಳೆ ಅಕ್ರಮವಾಗಿದೆಯೇ? ಆವಾಗ ಉಪದ್ರ ಜಾಸ್ತಿಯೇ? ಇವರಿಂದ ಬಿಡುಗಡೆ ಹೊಂದಲು ಇಚ್ಛೆ ಇದೆಯೇ? ಹಾಗಾದರೆ ಗುಪ್ತ ಸೇವಕಿಯಂತಿರುವ ಕಂಪೌಂಡು ಸಿರಪು ಸಹೀನ ಸಹಾಯಕೆಂಬುದನ್ನು ಅಂಗೀಕರಿಸು. ಈಕೆ ಗುಪ್ತಹಿಂಸೆಯಿಂದ ನಿನ್ನನ್ನು [illegible] ಯಾಗುವಂತೆಯೂ ಮುಖಕಳೆಗಳು ಆಳಗುವಂತೆಯೂ ದೇಹ ಪುಷ್ಟಿ ಸಿಗುವಂತೆಯೂ ಖಂಡಿತ ಸಹಾಯಮಾಡುವಳು. ಆವಾಗ ಆರೋಗ್ಯವುಳ್ಳ ದೇಹವೇ ಹೊಳೆಯುವ ನಿನ್ನ ಸುಂದರವಾದ ಉಡುಪಾಗಿದೆ ಎಂದು ನಿನಗೆನೇ ಖಚಿತವಾಗುವದು.

ಕ್ರಯ 8 ಔನ್ಸಿನ ಬಾಟ್ಲಿಗೆ ರೂ. 3—8—0.

ಕೆಟಲಾಗಿಗೆ ಬರೆಯಿರಿ—

ಮಲೇರಿಯಾನ ಕಂಪೆನಿ,

ಮಂಗಳೂರು, ದ. ಕ.

22628

ಹಿಂದೂಸ್ಥಾನದಲ್ಲಿ ವ್ಯವಸಾಯದ ಸುಧಾರಣೆ.

ಹಿಂದೂಸ್ಥಾನವು ಬಹು ಪುರಾತನ ಕಾಲದಿಂದಲೂ ವ್ಯವಸಾಯದ ಮೇಲೆ ಆಧರಿಸಿರುವ ದೇಶವಾಗಿರುತ್ತದೆ. ಹಿಂದೂಸ್ಥಾನದ ನಿವಾಸಿಕರಲ್ಲಿ ಶೇಕಡಾ ೭೫ರಷ್ಟು ಜನರಿಗೆ ಕೃಷಿಯೇ ಮುಖ್ಯ ವೃತ್ತಿಯಾಗಿದೆಯೆಂದು ಹೇಳಬಹುದು. ಹಿಂದೂಸ್ಥಾನದ ಅಭಿವೃದ್ಧಿಯಾಗಬೇಕಾದರೆ, ಹಿಂದೂಸ್ಥಾನದ ಕೃಷಿಯು ಅಭಿವೃದ್ಧಿಯಾಗಬೇಕೆಂದು ಬೇರೆ ಹೇಳಬೇಕಾಗಿಲ್ಲ. ದಿನದಿನಕ್ಕೆ ಕೃಷಿಯೇ ಹಿಂದೂಗಳ ಮುಖ್ಯ ಕೈಗಾರಿಕೆಯಾಗುತ್ತಿರುವುದರಿಂದ, ಅದು ಚೆನ್ನಾಗಿ ಸುಧಾರಣೆಯನ್ನು ಹೊಂದಿ ಪ್ರಥಮಸ್ಥಾನವನ್ನು ಪಡೆಯುವಂತೆ ಪ್ರಯತ್ನಿಸಬೇಕು. ಕೃಷಿ ಮಾಡುವ ರೈತರಿಂದಲೇ ನಮ್ಮ ಸರಕಾರಕ್ಕೆ ಹೆಚ್ಚಿನ ಕಂದಾಯವು ಸಿಗುತ್ತದೆ. ಅವರು ಬೆಳೆ ಬೆಳೆಸುವದರಿಂದಲೇ ರೈಲ್ವೇ ಮತ್ತು ಸ್ಟೀಮರ್ ಕಂಪೆನಿಗಳಿಗೆ ಕೆಲಸ ದೊರಕುತ್ತದೆ. ಆದಕಾರಣ ಕೃಷಿಕರ ಅಭಿವೃದ್ಧಿಯು ಎಷ್ಟರ್ಕೆ ಆಗುವದೋ ಅಷ್ಟಕ್ಕೆ ರಾಜ್ಯದ ಅಭಿವೃದ್ಧಿಯೂ ಆಗುವದೆಂದು ನಿಸ್ಸಂಶಯವಾಗಿ ಹೇಳಬಹುದು.

೧೮೬೬ನೇ ಇಸವಿಯಲ್ಲಿ ಬಂಗಾಳ ಮತ್ತು ಒರಿಸ್ಸಾ ದೇಶಗಳಲ್ಲಿ ಬರಬಂದ ಕಾರಣವಾಗಿ ನೇಮಕವಾದ ಕಮಿಶನಿನೊಡನೆ ವ್ಯವಸಾಯಕ್ಕೆ ಒಂದು ಪ್ರತ್ಯೇಕ ಇಲಾಖೆಯು ಏರ್ಪಟ್ಟಿತು. ಇದು ಅನಗತ್ಯವೆಂದು ಬಿಟ್ಟು ತೆಗೆದು ಹಾಕಲ್ಪಟ್ಟು ತರುವಾಯ ೧೮೮೧ನೇ ಇಸವಿಯಲ್ಲಿ ಪುನಃ ಪ್ರಾರಂಭಿಸಲ್ಪಟ್ಟು ಆಗ ನೇಮಿಸಲ್ಪಟ್ಟ ಕಮಿಶನಿನೊಡನೆ ಬಲವಾದ ಶಕ್ತಿಯು ಪ್ರಾಂತಗಳಲ್ಲಿ ಪ್ರತ್ಯೇಕ ಕೃಷಿ ಇಲಾಖೆಗಳು ಇರುವದು ಅತ್ಯಗತ್ಯವೆಂದಾಯಿತು. ಆದರಿಂದ ೧೮೮೨ನೇ ಇಸವಿಯ ಮೊದಲುಗೊಂಡು ಇಂಡಿಯಾ ಸರಕಾರಕ್ಕೆ ರೆವಿನ್ಯು, ಎಗ್ರಿಕಲ್ಚರ್ ಕಾಮರ್ಸ್ ಇವುಗಳ ಒಂದು ಇಲಾಖೆಯು ಪ್ರಾರಂಭವಾಯಿತು. ೧೯೦೦ರ ವರೆಗೆ ಈ ಇಲಾಖೆಯಿಂದ ವ್ಯವಸಾಯದ ಯಾವದೊಂದು ಅಭಿವೃದ್ಧಿಯೂ ಆಗಲಿಲ್ಲ. ೧೯೦೦ನೇ ಇಸವಿಯಲ್ಲಿ ಕೃಷಿಯ ಪ್ರಾಮುಖ್ಯತೆಯು ತಿಳಿದು ಬಂದು ಕೆಲವು ಕಾನೂನುಗಳನ್ನು ಮಾಡಿದುದರಿಂದ, ಕೃಷಿಯ ಅಭಿವೃದ್ಧಿಗೆ ಸ್ವಲ್ಪ ಅವಕಾಶ ಸಿಕ್ಕಿದಂತಾಯಿತು. ೧೯೦೫ನೇ ಇಸವಿಯ ವರೆಗೆ ಸಮಯವು ಕೃಷಿಯ ಅಭಿವೃದ್ಧಿಗಾಗಿ ಪರಿಷತ್ತುಗಳನ್ನೋ, ಸಭೆಗಳನ್ನೋ, ಏರ್ಪಡಿಸುವದರಲ್ಲಿಯೇ ಕಳೆದು ಹೋಯಿತಲ್ಲದೆ, ಯಾವದೊಂದು ಅಭಿವೃದ್ಧಿಯು ಕಾರ್ಯತಃ ನಡೆಯಲಿಲ್ಲ. ೧೯೦೫ನೇ ಇಸವಿಯಲ್ಲಿ ನೇಮಿಸಲ್ಪಟ್ಟ ಕಮಿಶನು ಮಾತ್ರವೇ, ಕೃಷಿ ಇಲಾಖೆಗಳಿಗಾಗಿ ನಿಪುಣ ಉದ್ಯೋಗಿಗಳನ್ನು ನೇಮಿಸಬೇಕಾಗಿಯೂ, ಜರ್ಮನಿಯಲ್ಲಿರುವಂತೆ ಕೃಷಕರ ಸಹಾಯಕ್ಕಾಗಿ ಸಹಕಾರಿ ಸಂಘಗಳನ್ನು ತೆರೆಯಬೇಕಾಗಿಯೂ ಶಿಫಾರಸು ಮಾಡಿತು. ಈ ಶಿಫಾರಸುಗಳಿಗೆ ೧೯೦೫ನೇ ಇಸವಿಯಲ್ಲಿ ಲಾರ್ಡ್ ಕರ್ಜನರು ಕಿವಿಗೊಟ್ಟು ಕಮಿಶನಿನವರು ಹೇಳಿದಂತೆ ತಕ್ಕಮಟ್ಟಿಗೆ ವ್ಯವಸ್ಥೆಗಳನ್ನು ಮಾಡಿದರು. ಕೃಷಿಯ ಶೋಧನೆಯ ಅಭಿವೃದ್ಧಿಗಾಗಿ, ಅವರು ೨೦ ಲಕ್ಷ ರೂಪಾಯಿಗಳನ್ನು ಸೆಂಕ್ಷನ್ ಮಾಡಿದರು. ಇದೇ ಸಮಯದಲ್ಲಿ ಮಿ. ಹೆನ್ರಿ ಫಿಪ್ಸರೆಂಬವರು ಕೃಷಿಯ ವಿದ್ಯೆಯನ್ನು ಕಲ್ಪಿಸುವ ಸಲುವಾಗಿ ೩೦ ಸಾವಿರ ಪವನುಗಳನ್ನು ದಾನವಾಗಿ ಕೊಟ್ಟರು. ಲಾರ್ಡ್ ಕರ್ಜನರು ಪೂಸಾ ಎಂಬಲ್ಲಿ ಒಂದು ಡೆಮೋನ್‌ಸ್ಟ್ರೇಶನ್ ಫಾರ್ಮ್ ಮತ್ತು ಕೃಷಿಯ ಇನ್ಸ್ಟಿಟ್ಯೂಟ್ ಮೊದಲಾದವುಗಳನ್ನು ತೆರೆದು, ತನ್ನ ಮಟ್ಟಿಗೆ ಆದಷ್ಟು ಅಭಿವೃದ್ಧಿಯನ್ನುಂಟು ಮಾಡಲು ಪ್ರಯತ್ನಿಸಿದರು. ವ್ಯವಸಾಯದ ಅಭಿವೃದ್ಧಿಯನ್ನು ಮಾಡುವ ಸಲುವಾಗಿ ಸರಕಾರದವರು ಕೊನೆಯದಾಗಿ ಒಂದು ರೋಯಲ್ ಕಮಿಶನನ್ನು ನೇಮಿಸಿದರು. ಈ ಕಮಿಶನಿನವರು ಮಾಡಿದ ಕೆಲಸಗಳು ಪ್ರಕಟವಾಗಿ ಪುಸ್ತಕ ರೂಪದಲ್ಲಿ ಈಗಲೂ ಇರುವವು. ಇವರ ಕೆಲಸದ ವರದಿಯಲ್ಲಿ ಹಲವು ಮುಖ್ಯಾಂಶಗಳು ಕಂಡುಬರುವವು. ಒಟ್ಟಾರೆ ಹೇಳುವದಾದರೆ ೧೮೬೬ನೇ ಇಸವಿಯಿಂದ ಮುಂದಿನ ಅರ್ಧ ಶತಮಾನದ ವರೆಗೆ ಕೃಷಿಯ ಹೆಚ್ಚಿನ ಅಭಿವೃದ್ಧಿಯಾಗಲೇ ಇಲ್ಲ. ಅನೇಕ್ಕ ಸನ್ನಾಹಗಳು ಮಾತ್ರವೇ ನಡೆದುವು. ಕಮಿಶನಿನವರು ಹಿಂದೂಸ್ಥಾನದಲ್ಲಿ ಕೆಲವೇ ಕೃಷಿಯ ಶಾಲೆಗಳನ್ನು, ಡೆಮೋನ್‌ಸ್ಟ್ರೇಶನ್ ಕೃಷಿಕ್ಷೇತ್ರಗಳನ್ನೂ ತೆರೆದರು. ಅವು ಅನೇಕ್ಕೆಂದು ಫಲಕಾರಿಯಾಗಲಿಲ್ಲ.

ಹಿಂದೂ ಕೃಷಕನು ಬ್ರಿಟಿಷರ ಆಳ್ವಿಕೆಯ ೧೫೦ ವರುಷಗಳ ಕಾಲ ಯಾವ ಸುಧಾರಣೆಯನ್ನು ಹೊಂದಿಲ್ಲವೆಂದಾಯಿತು. ವ್ಯವಸಾಯದ ದೃಷ್ಟಿಯಿಂದ ನೋಡುವದಾದರೆ ಈಗಣ ಕೃಷಿಕನಿಗೂ ಶತಮಾನಗಳ ಹಿಂದಿನ ಕೃಷಕನಿಗೂ ಅಷ್ಟೊಂದು ವ್ಯತ್ಯಾಸವು ಕಾಣಲಾರದು. ಹಳೇ ಕೃಷಕರ ಉಪಕರಣಗಳೇ ಈಗಲೂ ಉಪಯೋಗಿಸಲ್ಪಡುವವು. ಉಪಯೋಗಿಸುವ ಗೊಬ್ಬರ, ಬಿತ್ತುವ ಬೀಜ, ವ್ಯವಸಾಯದ ವಿಧಾನ, ಇವು ಒಂದಿಷ್ಟಾದರೂ ಪರಿವರ್ತನವಾಗದೆ ಅಂದಿನಂತೆಯೇ ಪ್ರಚಾರದಲ್ಲಿವೆ. ಕೃಷಕನ ಬಡತನಕ್ಕೆ ಮುಖ್ಯವಾದ ಕಾರಣಗಳೆಂದರೆ ಮೊದಲನೆಯದಾಗಿ ಕಂದಾಯದ ವಿಷಯಕ ಮತ್ತು ಎರಡನೆಯದಾಗಿ ಹಳೆಯ ಕ್ರಮಗಳಲ್ಲಿ ಸುಧಾರಣೆಯಾಗದಿರುವಿಕೆ.— ರೈತರಿಗೆ ಸಾಲ ಕೊಡುವದರಿಂದ ಅವರು ಹಾಳಾಗುವರೆಂದೂ ಅವರ ಬಡತನಕ್ಕೆ ಸಾಲಕೊಡುವವರೇ ಮುಖ್ಯ ಕಾರಣಕರ್ತರಾಗುವರೆಂದೂ ಕೆಲವರ ಅಭಿಪ್ರಾಯವಿರುತ್ತದೆ. ಆದರೆ ಈ ಅಭಿಪ್ರಾಯವು ಸರಿಯೆನ್ನಲಾಗುವುದಿಲ್ಲ. ಸಾಲಗಾರರಿಂದ ಅವರಿಗೆ ಕೊಂಚ ಕೆಡುಕಿದೆಯೆನ್ನುವುದು ನಿಜವಾದುದು. ಸರಕಾರದವರೇ ರೈತರಿಗೆ ಕಡಿಮೆ ಬಡ್ಡಿಯ ಮೇಲೆ ಸಾಲಕೊಡುವ ವರೆಗೆ ರೈತರು ಹಳ್ಳಿಯ ಸಾಹುಕಾರರಿಂದ ಹೆಚ್ಚಿನ ಬಡ್ಡಿಯ ಮೇಲೆ ಸಾಲವನ್ನು ಪಡಕೊಳ್ಳದೆ ಬೇರೆ ಉಪಾಯವಿರುವುದಿಲ್ಲ.

ರೈತರು ಸಾಹುಕಾರರಿಂದ ಸಾಲ ಪಡೆಯಲು ಮೂರು ಸಂದರ್ಭಗಳಿವೆ. ಕೃಷಿಗೆ ಅಗತ್ಯವಿರುವ ಹಣ, ಬೀಜ, ಯಾ ಪಶುಗಳು ಬೇಕಾಗುವ ಸಂದರ್ಭ ಒಂದು, ಸರಕಾರದ ತೆರಿಗೆಯನ್ನು ಕೊಡುವ ಸಂದರ್ಭವಿನ್ನೊಂದು, ಗೃಹಕೃತ್ಯಕ್ಕಾಗಿ ಹಣದ ಅವಶ್ಯಕತೆಯ ಸಂದರ್ಭವು ಮತ್ತೊಂದು. ಇಂತಹ ಸಂದರ್ಭಗಳಲ್ಲಿ ರೈತನಿಗೆ ಸಾಲವು ಸಿಕ್ಕದೆ ಇದ್ದರೆ ಆತನು ನಿರುಪಾಯನಾಗುವನು, ಅದರಲ್ಲೂ ಸರಕಾರದ ಕಂದಾಯವನ್ನು ಕೊಡದಿದ್ದರೆ ಆತನ [illegible] ಆಸ್ತಿಯೇ ಮೂರು ಕಾಸು ಬೆಲೆಗೆ ಏಲಮ್ ಆಗಿ ಹೋಗುವುದು. ಸರಕಾರದವರು ರೈತನಿಗೆ ಕಡಿಮೆ ಬಡ್ಡಿಯ ಮೇಲೆ ಸಾಲಕೊಡುವ ಏರ್ಪಾಡನ್ನು ಇನ್ನೂ ಮಾಡದಿದ್ದರೆ ರೈತರು ದಿನ ಹೋದಷ್ಟಕ್ಕೆ ಅಧೋಗತಿಗಿಳಿಯಬೇಕೆಂಬುದರಲ್ಲಿ ಸಂಶಯವಿಲ್ಲ. ಹೆಚ್ಚಿನ ಬಡ್ಡಿಯ ಮೇಲೆ ಸಾಲ ಪಡೆಯಬೇಕು, ಇಲ್ಲವೇ ಆಸ್ತಿ ಏಲಮಾಗುವದನ್ನು ನಿಂತು ನೋಡಬೇಕು. ಇವೆರಡರಲ್ಲಿ ಮೊದಲನೆಯದೇ ರೈತನಿಗೆ ಸ್ವಲ್ಪ ಉತ್ತಮವೆಂದು ಕಾಣುವದು. ಬಡ್ಡಿಯು ಎಷ್ಟು ಹೆಚ್ಚಾದರೂ ಮುಂದೆ ಒಂದಲ್ಲ ಒಂದು ರೀತಿಯಲ್ಲಿ ಅದನ್ನು ತೀರಿಸೇನೆಂಬ ಭರವಸೆಯು ಆತನಲ್ಲಿ ಮೊಳೆದೋರುವುದು. ಇದರಿಂದ ಅವನ ಅವನತಿಯು ಮೆಲ್ಲನೆ ಉಂಟಾಗುವದಾದರೂ ಕಠಿಣ ಪ್ರಸಂಗದಲ್ಲಿ ಅದು ಆತನಿಗೆ ವೇದನೆಯಾಗುವುದಿಲ್ಲ.

ಸ್ವಾಮಿ ವಿವೇಕಾನಂದರು ಕೆಲವು ಬೌದ್ಧರ ಮತಾಭಿಮಾನದ ಒಂದು ಸಣ್ಣ ಕತೆಯನ್ನು ಹೇಳಿರುವರು. ಬೌದ್ಧರು ಅಧಿಕ ಸಂಖ್ಯಾತರಾಗಿರುವ ಒಂದು ಊರಲ್ಲಿ ಕೆಲವು ಹಿಂದೂಗಳು ಸಭೆ ಸೇರಿದ್ದರಂತೆ. ಅಹಿಂಸೆಯೇ ಮತವಾಗಿ ಉಳ್ಳ ಅಲ್ಲಿನ ಕೆಲವು ಬೌದ್ಧರು ಗುಂಪು ಕೂಡಿ, ದೊಣ್ಣೆಗಳನ್ನು ಸಂಪಾದಿಸಿ ಸಭೆಗೆ ಬಂದು ಮತಾಭಿಮಾನದಿಂದ ಉನ್ಮತ್ತರಾಗಿ, ಹೊಡೆದು ಹಿಂದೂಗಳನ್ನು ಚದರಿಸಿದರಂತೆ! ಇಂತಹ ಅಹಿಂಸಾತ್ಮಕತೆಯ ಉನ್ಮತ್ತತೆಯು ಅಹಮದಾಬಾದಿನ ಕೆಲವು ಜೈನರೊಳಗೆ ಉಂಟಾಗಿರುವುದು. ಮಹಾತ್ಮಾಜಿಯವರು ಸಂಕಟದಲ್ಲಿದ್ದ ಕರುವಿಗೆ ಮುಕ್ತಿಯನ್ನು ಕೊಟ್ಟು ಅದನ್ನು ಸಮರ್ಥಿಸಿದಂದಿನಿಂದ ಈ ಮತಾಭಿಮಾನಿಗಳಿಗೆ ಸಂತಾಪವೇ ಉಂಟಾಗಿಯದೆ. ಮರಣೋನ್ಮುಖವಾಗಿದ್ದ ಕರುವಿನ ಕಡೆಗಿನ ಅತಿಶಯ ಕರುಣೆಯು ಮುಂದೆ ಇವರಿಗೆ ಸಜೀವ ಮನುಷ್ಯನ ಕಡೆಗೆ ತೋರಿಸಬೇಕಾದ ಕರುಣೆಯೇ ಮರೆತುಹೋಗಿದೆ. ಮಹಾತ್ಮಾಜಿಯವರಿಗೆ ಹಲವರು ಹಲವು ತರದಲ್ಲಿ ಬುದ್ಧಿವಾದವನ್ನು ಹೇಳುವರು. ಒಬ್ಬರು— ಅಹಿಂಸೆಯ ಕ್ಷೇತ್ರದಿಂದಲೇ ಹೊರಸರಿಯಬೇಕೆನ್ನುವರು. ಇನ್ನೊಬ್ಬರು ಅವರು ಅಹಿಂಸೆಯ ಅಭಿಪ್ರಾಯಗಳನ್ನೇ ಪಾಶ್ಚಾತ್ಯರಿಂದ ಆಮದು ಪಡೆದಿದ್ದೆಂದು ಒಪ್ಪಿಕೊಳ್ಳಬೇಕೆನ್ನುವರು. ಮತ್ತೊಬ್ಬರು—ಇಂತಹ ಅಭಿಪ್ರಾಯಗಳನ್ನು ದುರುಪಯೋಗ ಮಾಡಲು ಸಾಧ್ಯವಿರುವುದರಿಂದ ಅವು ಸರಿಯಾದರೂ ಅವನ್ನು ಹೇಳಿಕೊಳ್ಳಬಾರದಾಗಿ ಹೇಳುವರು. ಈ ರೀತಿಯಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯಾಗಿ ಹೇಳುವರು. ಇನ್ನು ಕೆಲವು ಅಹಿಂಸಾವಾದಿಗಳು ಶಬ್ದಗಳ ಮೂಲಕವೂ ಹಿಂಸೆ ಮಾಡಲು ಸಾಧ್ಯವಿದೆಯೆಂಬುದನ್ನು ಮರೆತೇ ಬಿಟ್ಟಂತೆ ತಮ್ಮ ವಿರೋಧವನ್ನು ಹೀನ ಶಬ್ದಗಳಿಂದ ಪ್ರಕಟಿಸುವರು. ಈ ತತ್ವೋಪದೇಶದ ರೀತಿಯಲ್ಲಿ ಪಾಶ್ಚಾತ್ಯರ ಅಹಿಂಸೆಯ ಮಹತ್ವವನ್ನು ಯಾರೂ ತಿಳಿಯಲಾರರು. ನಮ್ಮ ದೇಶದವರ ಕ್ರೌರ್ಯ ಪ್ರವೃತ್ತಿಯಲ್ಲಿ ನಡೆಯುವಷ್ಟು ಹಿಂಸೆಯು ಪಾಶ್ಚಾತ್ಯರ ವಿಚಾರವಾದದ ವಾತಾವರಣದಲ್ಲಿ ಎಂದಿಗೂ ನಡೆಯುವುದಿಲ್ಲ.

ಗೋಮಾತೆಯ ಭಕ್ತಿ.

ಹಿಂದೂ ಮತದಲ್ಲಿ ಗೋದೇವಿಗೆ ಬಹಳ ಪ್ರಾಶಸ್ತ್ಯವಿದೆ. ವರ್ಷದಲ್ಲಿ ಒಂದು ದಿನವೇ ಅವಳ ಉಪಾಸನೆಗಾಗಿ ವಿಂಗಡಿಸಲ್ಪಟ್ಟಿದೆ. ಗೋದೇವಿಯಲ್ಲಿ ಕೋಟ್ಯಾವಧಿ ದೇವರೂ ಅಂತರ್ಗತರಾಗಿರುವರೆಂಬ ನಂಬಿಕೆಯೂ ಇದೆ. ಆದುದರಿಂದ ಹಿಂದುಗಳಿಗೆ ಗೋವಿನ ಮೇಲೆ ಬಹಳ ಶ್ರದ್ಧೆ. ಅವಳನ್ನು ಪೂಜಿಸಿ ಪುಣ್ಯವನ್ನು ಗಳಿಸಿಕೊಳ್ಳಬೇಕೆಂಬ ಹವಣಿಕೆ ಬಹಳ. ಆದರೆ ಈ ಪುಣ್ಯ ಸಂಪಾದನೆಯ ಆತುರದಲ್ಲಿ ಗೋವಿನ ಸ್ವಂತ ಹಿತದ ಕಡೆಗೆ ಈ ವಿಶಾಲ ಭಕ್ತ ಮಂಡಳಿಯ ಲಕ್ಷ್ಯವೆಷ್ಟಿದೆ? ಅದಕ್ಕಾಗಿ ಅವರ ಪ್ರಯತ್ನಗಳೇನಿವೆ? ಎಂಬ ಪ್ರಶ್ನೆಯು ಬಂದಾಗ ಮಾತ್ರ ಈ ಗೋಭಕ್ತ ಮಂಡಳಿಯ ಪೊಳ್ಳುತನವು ಹೊರಗೆಡುವುದು. ಗೋವಿನ ಉಪಾಸನೆಯಲ್ಲಿ ತೋರುವ ಉತ್ಸಾಹದ ಅರ್ಧಾಂಶದಷ್ಟು ಗೋವಿನ ರಕ್ಷಣೆ ಬಗ್ಗೆ ತೋರಿದ್ದಾದರೆ ಹಿಂದೂಸ್ಥಾನದ ಹಾಲಿನ ಮತ್ತು ಕೃಷಿಗೊಬ್ಬರ ಪ್ರಶ್ನೆಯು ಎಷ್ಟೋ ಸಲೀಸಾಗುತ್ತಿತ್ತು. ಮಾತ್ರವಲ್ಲ, ಹಿಂದೂಸ್ಥಾನದ ಗೋವೃಂದವು ಈಗಿರುವುದಕ್ಕಿಂತ ಎಷ್ಟೋ ಚೆನ್ನಾಗಿ ಬೆಳೆದು ಉಪಕಾರಿಯಾಗುತ್ತಿತ್ತು. ಹಿಂದೂ ಗೃಹಗಳಲ್ಲಿ ಪಾಲಿತವಾಗುವ ಗೋವುಗಳ ಸ್ಥಿತಿಯನ್ನು ನೋಡಿದರೆ ಗೋವುಗಳ ಸಂತಾಪದಿಂದ ಮಾನವರಿಗೆ ಬಾಧೆ ಬರುವುದು ಆಹುದಾದರೆ ಹಿಂದೂ ಜನಾಂಗವು ಇಷ್ಟರೊಳಗೆ ದಗ್ಧವಾಗಿ ಹೋಗಬೇಕಿದ್ದಿತು. ಮತ್ತೆ ಕೆಲವು ದೇವರ ಮೇಲಿನ ಭಕ್ತಿಯ ದೇವರಿಗೆ ದಾನವೆಂದು ಗೋವುಗಳನ್ನು ಮಠದೇವಸ್ಥಾನಗಳಿಗೆ ಬಿಟ್ಟುಕೊಡುವುದುಂಟು. ಅಲ್ಲಿನ ಅವುಗಳ ಸ್ಥಿತಿಯನ್ನು ದೇವರೇ ಬಲ್ಲ. ಆದರೂ ನಾವು ಗೋಭಕ್ತರೆಂದು ಹೆಸರು ಹೊಂದಿರುವೆವು. ಗೋಮಾತೆಯ ಹಾಲನ್ನು ಕರೆಯುವದನ್ನು ನಿಲ್ಲಿಸುವುದೇ ತಡ, ಆಗ ನಮ್ಮ ಭಕ್ತಿಯು ಎಲ್ಲಿ ಹೋಗುವದೆಂದು ತಿಳಿಯುವುದಿಲ್ಲ. ಯಾರದಾದರೂ ದನವನ್ನು ಯಾರಾದರೂ ಕಟುಕರು ಕೊಂಡರೆ ನಮ್ಮ ಮತಾಭಿಮಾನವು ಉದ್ರೇಕವನ್ನು ಹೊಂದುವುದು. ಆದರೆ ನಮ್ಮ ಮನೆಯಲ್ಲಿ ಜೀವನ್ಮೃತಾವಸ್ಥೆಯಲ್ಲಿ ಇಟ್ಟ ದನಗಳ ಕಡೆಗೆ ಕನಿಕರವು ನಮ್ಮಲ್ಲಿ ಉಂಟಾಗುವುದೇ ಇಲ್ಲ. ಇದಲ್ಲವೇ ಹಿಂದೂಗಳ ಗೋಭಕ್ತಿ!

ಅವರು ಕಳ್ಳರಂತೆ ಬರುವರು.

ಸೈಮನ್ ಕಮಿಶನು ಅತ್ಯವಸರಪಟ್ಟು ಒಂದು ದಿನ ಮುಂಚಿತವಾಗಿ ಬಂದು ಮುಂಬಯಿಯಲ್ಲಿ ರಾತ್ರಿಯಲ್ಲಿಯೇ ಇಳಿಯಬೇಕಿತ್ತೇಕೆ? ಇಷ್ಟು ದೊಡ್ಡ ಶಹರು; ಸಾಮ್ರಾಜ್ಯದಲ್ಲಿ ದ್ವಿತೀಯ ಸ್ಥಾನವನ್ನು ಪಡೆದದ್ದು; ಇಲ್ಲಿನ ಸ್ವಾಗತದ ಸಂಭ್ರಮವನ್ನು ಅನುಭವಿಸದೆ ರಾತ್ರಿಯಲ್ಲಿ ಬಂದು ರಾತ್ರಿಯಲ್ಲಿಯೇ ಪಲಾಯನ ಮಾಡಲು ಕಾರಣವೇನು! ಕೌನ್ಸಿಲುಗಳಲ್ಲಿ ಸಹಕಾರದ ಠರಾವನ್ನು ಮಂಜೂರು ಮಾಡಿಸಿ ಜನರ ಬಲವು ಈ ಸೈಮನ್ ಸಮಿತಿಗೆ ಇದೆಯೆಂದು ಹೇಳಿಸಿದ ಮೇಲೆ ಸರಕಾರವು ಈಗ ಈ ಸೈಮನ್ ಸಮಿತಿಯನ್ನು ಮುಂಬಯಿ ಸ್ವಾಗತದಸಂಭ್ರಮದಿಂದ ಗೌರವಿಸಬೇಕಿತ್ತು. ಪ್ರಾಯಶಃ "ಸೈಮನ್‌ನೇ ಹಿಂದೆ ಹೋಗು" ಎಂದು ದೊಡ್ಡ ಅಕ್ಷರಗಳಿಂದ ಅನಿಷ್ಟ ಅತಿಥಿಗೆ ಕೊಡುವ ಆ ಸದುಪದೇಶದ ಪ್ರದರ್ಶನವು ಪುನಃ ಆಗಬಹುದೆಂದು ಸರಕಾರಕ್ಕೆ ತೋರಿರಬಹುದು. ಕಾರ್ಯತಃ ಸೈಮನರು ತಮ್ಮ ನೂತನ ರಂಗಿನ ಬದಿಲಾವಣೆಗಳಿಂದಲಾದರೂ ಜನರಿಂದ ಇದಕ್ಕಿಂತ ಹೆಚ್ಚಿನ ಸ್ವಾಗತವನ್ನು ಹೊಂದಲಾರರಾದರು. ರಾತ್ರಿಯ ನೀರವತೆಯಲ್ಲಿ ಮುಂಬಾಯಿಯ ಗೌರವದ ಸ್ವಾಗತವನ್ನು ಅವರು ಹೊಂದುವೆವೆಂದು ನೆನಸಿದ್ದಿರಬಹುದು. ಆದರೆ ಅಂತಹ ಸ್ವಾಗತವು ಕೂಡ ಅವರ ಪಾಲಿನದ್ದಾಗಿರಲಿಲ್ಲ. ಅವರು ಬರುವ ಮುಂಚಿತವಾಗಿಯೇ ಮುಂಬಾಯಿಯ ಜನಪದವು ಕಪ್ಪು ಪತಾಕೆಗಳಿಂದ "Simon go back" ಎಂಬ ದೊಡ್ಡಕ್ಷರಗಳ ತೋರಣದಿಂದ ಸಿದ್ಧವಾಗಿದ್ದಿತು. ಸೈಮನರನ್ನು ಹುರಿದುಂಬಿಸಲು ಅವರ ಮಾರ್ಗದ ಇಕ್ಕೆಡೆಯಲ್ಲಿಯೂ ಕೂಡಿದ್ದರು. "ಸೈಮನ್ ಹಿಂದೆ ಹೋಗು" ಎಂಬ ಉದ್ಗಾರದಿಂದ ಆಕಾಶವು ತುಂಬಿಹೋಗಿದ್ದಿತು. ಇಂತಹ ಸ್ವಾಗತದಿಂದ ಅತಿಥಿಗಳಿಗೆ ಎಷ್ಟು ಸಂತೋಷವಾಗುವುದೆಂದು ಹೇಳಲಾಗುವುದಿಲ್ಲ. ಅಂತೂ ಸೈಮನರಿಗೇನೂ ಬಹಳ ತೃಪ್ತಿಯಾಗಿರಬೇಕು. ಏಕೆಂದರೆ ಹೊರಗಿನಿಂದ "ಹೋಗು" ಎಂಬ ಉಪದೇಶವು ಕೇಳಬಂದರೂ ಒಳಗೆ "ಆಜ್ಞಾ, ಮಹಾರಾಜಾ" ಎಂದು ಕ್ಷಣಾರ್ಧವೂ ಸಲಾಮು ಹಾಕಲು ತಯ್ಯಾರಿರುವ ಕೆಲವು ಮಂದಿಗಳಾದರೂ ಇದ್ದರು. ಅವರೊಳಗೆ ಕೆಲವು ಮುಸಲ್ಮಾನ ಧುರೀಣರಿಗೇ ಯಶಸ್ಸು ಹೆಚ್ಚು. ಪೂನೆಯಲ್ಲಂತೂ ಸ್ವಾಗತ ಸಮಾರಂಭವು ತಯ್ಯಾರಾಗಿಯೇ ಇದ್ದಿತು. ನಿರ್ಬಂಧದ ಪೋಲೀಸ ಹುಕುಮಿಗೆ ಕೂಡ ಮಾನ್ಯತೆಯಿರಲಿಲ್ಲ.

ಕಮಿಟಿಯ ಕಾರ್ಯಾರಂಭ.

ಸೈಮನ್ ಸಮಿತಿಯು ಪೂನೆಯನ್ನು ಮುಟ್ಟಿತು. ಮುಂಬಯಿ ಕೌನ್ಸಿಲಿನ ಸಹಕಾರ ಸಮಿತಿಯು ಪೂನೆಯಲ್ಲಿಯೇ ಇದೆ. ಸರ್ ಶಂಕರನ್ ನಾಯರರವರು ಅಧ್ಯಕ್ಷರಾಗಿರುವ ಸೆಂಟ್ರಲ್ ಲೆಜಿಸ್ಲೇಚರ್ ಕಮಿಟಿಯೂ ಪೂನೆಯಲ್ಲಿದೆ. ಕೆಲಸ ಪ್ರಾರಂಭವಾಗುವ ಮೊದಲೆ ಸೆಂಟ್ರಲ್ ಕಮಿಟಿಯ ದುಡ್ಡಿನ ಆಶೆಯು ಪ್ರಾರಂಭವಾಗಿದೆ. ದಿನ ಒಂದಕ್ಕೆ ರೂ ೧೦೦ ಅಂದರೆ ತಿಂಗಳಿಗೆ ಸಾಧಾರಣ ೩೦೦೦ ರೂಪಾಯಿಯ "ಭಕ್ತಿ"ಯು ಸ್ವರಾಜ್ಯವನ್ನು ಗಳಿಸಲಿಕ್ಕೆ ಹೋಗಿರುವ ದೇಶಸೇವಕರಿಗೆ ಸಾಕಾಗಲಿಲ್ಲವಂತೆ; ಇನ್ನೂ ಹೆಚ್ಚು ಸಿಕ್ಕಬೇಕಂತೆ! ಸರಕಾರದವರು ಇಷ್ಟೇ ಸಾಕೆಂದು ತಿಳಿಸಿದ್ದಾರೆ. ಹೆಸರೂ ಈ ಕಮಿಟಿಗೆ ಸಾಧಾರಣದ್ದು ಸಾಕಾಗಲಿಲ್ಲ. ಇಂಡಿಯನ್ ಪಾರ್ಲಿಮೆಂಟರಿ ಕಮಿಟಿ ಎಂದು ತಮ್ಮನ್ನು ಕರೆಯಬೇಕೆಂದು ಇವರ ಹೇಳಿಕೆ. ಹಿಂದೂಸ್ಥಾನಕ್ಕೆ ಪಾರ್ಲಿಮೆಂಟು ಇಲ್ಲದಿದ್ದರೂ ಹೆಸರಾದರೂ ಬೇಕು! ಶಬ್ದ ಸ್ವರಾಜ್ಯವನ್ನು ಹೊಂದಲಿಕ್ಕೆ ಹೋರುವರಿವರು. ಇದನ್ನು ಕೂಡ ಸರಕಾರವು ನಿರಾಕರಿಸಿಯದೆ. ಇನ್ನು ಆ ಸಮಾನತೆಯ ಮರ್ಯಾದೆ ಸೈಮನ್ ಕಮಿಟಿಯೊಡನೆ ಹಿಂದೀ ಕಮಿಟಿಗಳಿಗೆ ಸಮಾನತೆಯಿದೆ. ಆದರೆ ಗುಪ್ತ ರಿಪೋರ್ಟುಗಳು ಪ್ರತ್ಯೇಕವೇ. ಅವನ್ನು ಮುಟ್ಟುವ ಅಧಿಕಾರವು ಈ ಹಿಂದೀ ಕಮಿಟಿಗಳಿಗೆ ಇರುವುದಿಲ್ಲ. "ಮನೆಯೆಲ್ಲಾ ನಿಮ್ಮದೇ, ಬಟ್ಟಲು ತಂಬಿಗೆ ಮಾತ್ರ ಮುಟ್ಟಬೇಡಿ" ಎಂಬ ತರದ ಸಮಾನತೆಯ ಗೌರವದಲ್ಲಿ ಹಿಂದೀ ಕಮಿಟಿಗಳು ಮೈಮರೆತು ಹೋಗಿದ್ದಾವೆ. ಸರ್ ಶಂಕರನ್ ನಾಯರರು ಒಂದೊಂದು ಸಮಯದಲ್ಲಿ ಸ್ವತಂತ್ರವಾಗಿ ವರ್ತಿಸಲು ಹಿಂಜರಿಯುವವರಲ್ಲ. ಹಿಂದೀ ಕಮಿಟಿಗಳ ಮೇಲೆ ಒಂದರ ಮೇಲೆ ಒಂದಾಗಿ ಹೊರಿಸಲ್ಪಡುವ ಈ ತರದ ಅವಮಾನಗಳನ್ನು ಅವರು ಸುಮ್ಮನೆ ಕೂತು ಅನುಭವಿಸುವರೇ ಇಲ್ಲವೇ "ನಮ್ಮ ಕೆಲಸದಿಂದ ನಮ್ಮನ್ನು ತಿಳಿಯಿರಿ" ಎಂಬ ವೀರ ಉದ್ಗಾರವನ್ನು ನಿಜ ಮಾಡುವರೇ ಎಂದು ನೋಡಬೇಕಾಗಿದೆ. ಗುಪ್ತ ರಿಕಾರ್ಡು ಬಹಿರಂಗದ ರಿಕಾರ್ಡು, ಎಂಬ ಪ್ರಭೇದಗಳನ್ನು ಪುನಃ ಉಂಟು ಮಾಡಿರುದರಿಂದ, ಸಮಾನತೆಯ ಹಕ್ಕುಗಳನ್ನು ಹಿಂದೀ ಕಮಿಟಿಗೆ ಕೊಡುವ ಆಲೋಚನೆಯು ಸೈಮನರಿಗೆ ಇಲ್ಲವೆಂದು ಸ್ಪಷ್ಟವಾಗುವುದು.

ನೋಟಗಳು.
NOTES

ಹಿಂದೂಸ್ಥಾನವು ಸನಾತನ ಧರ್ಮದ [illegible]. ಸಾಧುಗಳೂ, ಸನ್ಯಾಸಿಗಳೂ ಈ ಧರ್ಮದ ಉಜ್ವಲ [illegible]ಗಳು.

• • •

ಈ ಉಜ್ವಲ ಜ್ಯೋತಿಗಳಿಂದ ಈಗಿನ [illegible] ಸನಾತನ ಧರ್ಮದ ಪ್ರಕಾಶವನ್ನು ಕಾಣುವುದಾದರೆ [illegible]ಸ್ಥಾನವು ಅತ್ಯಂತ ಪ್ರಕಾಶಮಾನವಾಗಿರುವುದೆಂದು ಅನಿಸಬೇಕಾಗುವುದು. ಏಕೆಂದರೆ ಈ ಸಾಧು ಸನ್ಯಾಸಿಗಳ ಸಂಖ್ಯೆಯು ಬಹಳವಾಗಿ ಏರುತ್ತಾ ಬರುತ್ತಿದೆ.

• • •

ಇವರ ಸಂಖ್ಯೆಯಲ್ಲಿಯೇ ಇವರ ಮಹತ್ವವಲ್ಲ. ಇವರಿಗೆ ಬಹು ಬೇಗನೆ ವಿಸ್ತಾರವಾದ ಭಕ್ತ ಮಂಡಳಿಯನ್ನು ಹೊಂದಲು ಸಾಧ್ಯವಾಗುವುದೆ ಇವರ ಮಹತ್ವಿಕೆಯ [illegible] ಚಿಹ್ನೆಯಾಗಿದೆ.

• • • •

ಇದಕ್ಕಿಂತಲೂ ಹೆಚ್ಚಿನ ಮಹತ್ವದ ವಿಷಯವೆಂದರೆ ಇವರಿಗೆ ಸ್ತ್ರೀ ಭಕ್ತ ಮಂಡಳಿಯಲ್ಲಿ ಹೆಚ್ಚಿನ ಪ್ರಾಧಾನ್ಯ ಸಿಕ್ಕುವುದು. ಪ್ರಾಯಶಃ ಆಧುನಿಕ ಪುರುಷ ವೃಂದವು ಆಧುನಿಕ ವಿದ್ಯಾಭ್ಯಾಸದಿಂದ ಕೆಟ್ಟು ಹೋಗಿರಬೇಕು!

• • • •

ಮುಂಬಯಿಯಲ್ಲಿಯೂ ಇಂತಹ ಒಬ್ಬ ಧರ್ಮ ಜ್ಯೋತಿಯು ಒಮ್ಮಿಂದೊಮ್ಮೆ ಪ್ರಕಾಶಕ್ಕೆ ಬಂದಿದ್ದಾನೆ. ಇವನಿಗೆ ಪೂರ್ವ ಜನ್ಮಗಳ ಸ್ಮೃತಿಯು ಚೆನ್ನಾಗಿ ಇದೆ. ಈ ತ್ರಿಕಾಲಜ್ಞನು ಒಂದು ದಿನ ಭೂತಾವಲೋಕನವನ್ನು ಮಾಡುತ್ತಿದ್ದಾಗ ಹಠಾತ್ತಾಗಿ ತಾನು ಒಂದು ಜನ್ಮದಲ್ಲಿ ನೇಪಾಳದ ಮಹಾರಾಜನಾಗಿದ್ದನೆಂದು ಕಂಡು ಬಂತು.

• • • •

ಮುಂದೆ ಮಹಾರಾಣಿಯಾರೆಂದು ಕಾಣುವುದೇ ಬಾಕಿ ಉಳಿಯಿತು. ಒಂದು ದಿನ ಒಬ್ಬ ತರುಣನು ತಾಯಿ ಮತ್ತು ಹೆಂಡತಿಯೊಡನೆ ಭಕ್ತಿಯನ್ನರ್ಪಿಸಲಿಕ್ಕೆ ಈ ಸಾಧುವಿನಲ್ಲಿ ಬಂದನು. ಹೆಂಡತಿಯು ಅತ್ಯಂತ ಸುಂದರಿಯಾದ ಷೋಡಶಿಯಾಗಿದ್ದಳು. ಸಾಧುವಿಗೆ ಕೂಡಲೇ ತಿಳಿಯಿತು; ಈ ಕಿಶೋರಿಯೇ ತಾನು ನೇಪಾಳದ ಮಹಾರಾಜನಾಗಿದ್ದಾಗ ತನ್ನ ಮಹಾರಾಣಿಯಾಗಿದ್ದಳೆಂದು.

• • • •

ಸಕಾಲದಲ್ಲಿ ಈ ವಿಷಯವು ಹುಡುಗಿಗೆ ತಿಳಿಸಲ್ಪಟ್ಟಿತು. ಕೆಲವು ಹೆಚ್ಚು ದಿನಗಳ ಭಕ್ತಿ ಸಮರ್ಪಣೆ, ಮತ್ತೊಂದು ದಿನ ಸಾಧುವಿನ ಶಿಷ್ಯ ವೃಂದದ ಆಹ್ವಾನದಿಂದ ಬೇರೆ ಕ್ವಾರ್ಟರ್ಸ ಹೆಂಡತಿಯು ರಾಣಿ ಪದವಿಯನ್ನಲಂಕರಿಸಲು ಹೊರಟಳು! ಮನೆಯಲ್ಲಿ ರಾತೆ! ಧರ್ಮಪ್ರೀತ ಹಿಂದೂಸ್ಥಾನ! ಪ್ರತಿ ರಕ್ತ ಬಿಂದುವಿನಲ್ಲಿಯೂ ಧರ್ಮವನ್ನು ಸ್ಪಂದಿಸುವ ಮಹಾನ್ ಹಿಂದೂ! ವಿಶೃಂಖಲ ಪಾಶ್ಚಾತ್ಯ ವಿಹಾರಕ್ಕಿಂತಲೂ ನಿನ್ನ ಪಾರಮಾರ್ಥವೇ ಮೇಲಾಗಿರಬೇಕು!!

• • • •

ಬೆಂಗಳೂರಿನ ಗಲಭೆಯ ಮೇಲೆ "ನವಯುಗ"ದ ತೀರ್ಮಾನ. ಈ ಗಲಾಟೆಯಲ್ಲಿ ಮುಸಲ್ಮಾನ ಪುಂಡರು ತಲೆಗೆಟ್ಟು ಎಂತಹ ಅತ್ಯಾಚಾರ ಬೇಕಾದರೂ ಮಾಡಿರಲಿ, ಗಣಪತಿ ವಿಗ್ರಹ ಪ್ರತಿಷ್ಠಾಪನಾ ಚಳವಳವು ಅದೊಂದು ಪಂಗಡಿಗರ ಗುಪ್ತ ಉದ್ದೇಶ ಸಾಧನೆಗಾಗಿ ನಡಿಸಲ್ಪಟ್ಟಿರುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

• • • •

ಇದಕ್ಕೆ "ನವಯುಗ"ದ ಆಧಾರ—ಮೈ. ಅಬ್ಬಾಸ ಖಾನರನ್ನು ನಿಂದೆಗೀಡುಮಾಡುವ ಉದ್ದೇಶದಿಂದ ಈ ಚಳವಳವು [illegible]ದೊಂದು ಪಂಗಡದ ಜನರಿಂದ ಹೂಡಲ್ಪಟ್ಟಿತೆಂದು ಇನ್ಸ್ಪೆಕ್ಟರ್ ಜನರಲ್‌ರವರು ಅಭಿಪ್ರಾಯ ಎತ್ತಿರುವರು.

• • •

ವಿಶ್ವೇಶ್ವರಯ್ಯ ಸಮಿತಿಯು ಮುಂದೆ ಈ ಇನ್ಸ್ಪೆಕ್ಟರ್ ಜನರಲ್ಲದೆ ಇತರ ಹಲವರೂ ಸಾಕ್ಷ್ಯವಿತ್ತಿರುವರಾಗಿ ನಾವು [illegible]ಪೂರ್ವಕವಾಗಿ ನೆನಸುತ್ತೇವೆ.

[illegible] ನೆಯ ವಿಭವಸಂದ ಅಶ್ವೀಜ [illegible] ವಾರದಿಂದ ವಿಭವ ಸಂದ ಅಶ್ವೀಜ [illegible] ಶುಕ್ರವಾರದ ವರೆಗಿನ ಪಂಚಾಂಗ.

([illegible] ನೆಯ [illegible] (ಡೊಂಶೆಲ್)

[illegible]	[illegible]	[illegible]	ನಕ್ಷತ್ರ	ಘಳಿಗೆ	[illegible]	ಸೂರ್ಯ. ಉ	ಅಸ್ತ
[illegible]	[illegible]	[illegible]	ಉ. ಭಾ.	[illegible]	[illegible]	6.25	6. 5
[illegible]	[illegible]	[illegible]	ರೇವತೀ	[illegible]	[illegible]	6 25	6. 5
[illegible]	[illegible]	[illegible]	ಅಶ್ವಿನೀ	[illegible]	[illegible]	6.25	6. 4
[illegible]	[illegible]	[illegible]	ಕೃತ್ತಿಕಾ	[illegible]	[illegible]	6 26	6. 4
[illegible]	[illegible]	[illegible]	ರೋಹಿಣೀ	[illegible]	[illegible]	6.26	6. 4
1	[illegible]	[illegible]	ಮೃಗಶಿರಾ	[illegible]	[illegible]	6.26	6. 3
2	[illegible]	[illegible]	ಆರ್ದ್ರಾ	[illegible]	[illegible]	6,26	6. 3

ಮಂಗಳೂರಿನ ವಾಯುಸ್ಥಿತಿ.

Date	Temperature ಉಷ್ಣ (ಕಾವು) Maximum		Minimum		Rainfall ಮಳೆ ದಿನದ ಮಳೆ	ಒಟ್ಟು ಮಳೆ
19	88—	1	76 —	9	0 - 01	--
20	87—	2	73 —	8	0 10	—
21	86—	6	73—	7	0 — 30	—
22	86—	6	75—	2	0 — 04	—
23	86—	7	75 —	8	1 —18	—
24	87—	8	72—	7	0 — 51	
25	86—	2	74—	2	0—01	--
						128-33

ಮಂಗಳೂರಿನ ಪೇಟೆ ಧಾರಣಿ.

ಜಿನಸು		ಇಂದ ರೂ.	ಆ.	ವರೆಗೆ ರೂ.	ಆ.
ಮಕ್ಕಿ	...	7—	8	8—	4
[illegible]		7—	0	7—	6
ಸುಗ್ಗಿ	...	6—	10	7—	2
[illegible]	...	6—	6	6—	14
ಊರ ಅಕ್ಕಿ ಬೆಳ್ತಿಗೆ	...	7—	8	8—	14
ರಂಗೂನು ಬೆಳ್ತಿಗೆ ಗೋಣಿ ಗೆ	...	12—	8	12	12
[illegible] ಬೆಳ್ತಿಗೆ ಮುಡಿ ಗೆ		7—	6	7—	12
ಗೋಧಿ ಗೋಣಿ ಗೆ	...	18—	0	20	0
ಹುರುಳಿ ಗೋಣಿ ಗೆ		7—	8	10	8
ಕಡಲೆ ಗೋಣಿ ಗೆ	...	13—	12	15	8
ತೊಗರಿ ಗೋಣಿ ಗೆ	...	14—	8	15	8
ತೊಗರಿಬೇಳೆ ಗೋಣಿ ಗೆ	...	18—	0	[illegible]	0
ಉದ್ದು ಗೋಣಿ ಗೆ		14—	8	14	12
ಹೆಸರು ಗೋಣಿ ಗೆ	--	13—	0	14	4
ಊರು ಬೆಲ್ಲ ಖಂಡಿ ಗೆ	...	65—	0	70	[illegible]
ಉಪ್ಪು ಗೋಣಿ ಗೆ		4—	8	5—	4
ಕೊಬ್ರಿ ಖಂಡಿ ಗೆ		130—	0		
[illegible] ಖಂಡಿ ಗೆ	...	47—	8	49	0
[illegible] ಖಂಡಿ ಗೆ	...	35—	8	50—	4
[illegible] ಮುಡಿ ಗೆ	...	7—	12	9	0
[illegible] ಮುಡಿ ಗೆ		8—	6	8—	6
[illegible] ಗೆ		7—	2	8	0
[illegible] ಮುಡಿ ಗೆ		3—	12	3—	14
ಊರ ಮೆಣಸಿನ ಕಾಯಿ ಮುಡಿ ಗೆ		3—	0	5—	0
ಸಾಸಿವೆ ಮುಡಿ ಗೆ	...	9—	8	8—	12
[illegible] ಮುಡಿ ಗೆ	...	5—	8	7—	0
[illegible] ಖಂಡಿ ಗೆ	...	390—	0	400—	0
[illegible] ಖಂಡಿ ಗೆ		180—		195—	0
[illegible] ಖಂಡಿ ಗೆ	...	625—	4	625—	8
[illegible] ಗೆ	...	50—	0	55—	[illegible]
[illegible] ಮುಡಿ ಗೆ	...	3—	12	4—	0
[illegible] ಖಂಡಿ ಗೆ		42—	0	42—	8
[illegible] ಗೆ	...	16—	0	16—	8
[illegible] ಗೆ	...	20—	0	21—	
[illegible] ಗೆ	...	15—	0	—	
[illegible] ಗೆ	...	14—	8	16—	8
[illegible] ಗೆ		13—	8	—	
[illegible] ಖಂಡಿ ಗೆ	...	70—		85—	

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಪ್ರಯವಾಗಲಿ ಅಂಚೆಹಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, [illegible], [illegible] ಸಂಭವಿಸುವ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು ನಷ್ಟಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣವಾಗುವ ಅರ್ಜುನ [illegible] 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0

ಇದನ್ನು ಸೇವಿಸುವುದೇ.

[illegible] 1/94 [illegible] ಬಜಾರು, ಮದ್ರಾಸು.

[illegible] — ಎ. [illegible], [illegible], ಮಂಗಳೂರು. ದ. ಕನ್ನಡ



ತಯಾರಾಗುತ್ತಲಿದೆ! ತ್ವರೆಮಾಡಿರಿ!

ಮೂರನೇ ದರ್ಜೆಯ ಮಕ್ಕಳಿಗಾಗಿ

ಪ್ರಕೃತಿಶಾಸ್ತ್ರ ಸಾಮಾನ್ಯ ತಿಳುವಳಿಕೆ.

[illegible] ಎಲಿಮೆಂಟರಿ ಎಜುಕೇಶನಲ್ [illegible] ಹೊಸ ಪಾಠಪಟ್ಟಿಗನುಸಾರವಾಗಿ

ಎಮ್. ಜಿ. ವಿ. [illegible] ರಚಿಸಲ್ಪಟ್ಟಿತು

ದೊರೆಯುವ ಸ್ಥಳ

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಇನ್ನೂ ಹೆಚ್ಚಿನ ಕಾರಣಗಳು!

ಪೆರೆಡೈಸ್ ಟೋನಿಕ್ ಪಿಲ್ಸ್

ಎಂಬ ಕಸ್ತೂರಿ, ಶಿಲಾರಾಳ, ಬಂಗಾರ ಮೊದಲಾದ ಅಮೂಲ್ಯ ಪದಾರ್ಥಗಳಿಂದಾಗುವ ಈ ನಿರ್ಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳು ಇಡೀ ಶರೀರದ ಚೇತನವನ್ನು ವೃದ್ಧಿ ಮಾಡುವುವು. ದೇಹಶಕ್ತಿಯನ್ನೂ ಸ್ನಾಯುಗಳ ಬಲವನ್ನೂ ಹೆಚ್ಚಿಸಿ, ತ್ರಾಣವನ್ನೂ ತೇಜವನ್ನೂ ಅತಿಯಾಗಿ ಕಳಕೊಂಡಿರುವವರಿಗಾದರೂ ಸ್ವಲ್ಪ ಕಾಲದಲ್ಲೇ

— ಕೊಡುವುವು. —

60 ಮಾತ್ರೆಗಳುಳ್ಳ ಸೀಸೆಗೆ ಬೆಲೆ 7—8—0 ಮಾತ್ರ.

ಆರ್. ಛೋಟಾಲಾಲ್ ಎಂಡ್ ಕೋ.,

(K) ಪ್ರಿನ್ಸೆಸ್‌ಸ್ಟ್ರೀಟ್, ಬೊಂಬಾಯಿ ನಂಬ್ರ 2.

ಕೆಮ್ಮಿನ ಔಷಧಿ

ಕೆರೆಸುವ ಕೆಮ್ಮು, ಉಬ್ಬಸ, ಗೂರುಬ್ಬಸ, ಮೊದಲಾದ ರೋಗಗಳಿಗೂ, ಶ್ವಾಸದ ಇತರ ವ್ಯಾಧಿಗಳಿಗೂ, ಖಂಡಿತವಾದ ರುಚಿಕರವಾದ ಔಷಧಿಯಾಗಿದ್ದು ಶೀಘ್ರವಾಗಿ ಶಾಶ್ವತವಾದ ಗುಣಕೊಡುವುದು.

ಅಲ್ಪ ಖರ್ಚಿನ ಮಾದರಿಯಿಂದ ಖಚಿತವಾಗುವುದು. ಬಾಟಲಿಗೆ ರೂಪಾಯಿ 1—0—0.

ಕ್ರಯದ ಪಟ್ಟಿಗೂ ಮಾಹಿತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಮ್. ಡಿ. ವೋರಾ ಮತ್ತು ಕಂಪೆನಿ.

ಚಿಲ್ಲರೆ ಮತ್ತು ರಖಮು ಔಷಧಿ ವ್ಯಾಪಾರಿಗಳು.

P. O. ಬೋಕ್ಸ್ ನಂಬ್ರ 2003 ಬೊಂಬಾಯಿ ನಂ. 2.

ಅನುಕ್ರಮಣಿಕೆ.

ವಿಷಯ	ಪುಟ
ಅಸಹಕಾರ ಚಳವಳದ ದೊಡ್ಡ ತಪ್ಪು	೬
ವಿದೇಶ ವರ್ತಮಾನ	[illegible]
[illegible]	[illegible]
[illegible]	[illegible]
ವರ್ತಮಾನ ಸಂಗ್ರಹಗಳು:	
ಸ್ವದೇಶ ವರ್ತಮಾನ	೬-೭
ದಕ್ಷಿಣ ಕನ್ನಡ—ಮಂಗಳೂರು, ಉಪ್ಪಿನಂಗಡಿ, ಹೊಸದುರ್ಗ, [illegible], ಕುಂಬಳೆ, ಕಾಪು, [illegible], [illegible], ಉಡುಪಿ, [illegible]	೮-೯
ಉಡುಪಿಯ ಪತ್ರ, ಮುಂಬಾಯಿಯ ಪತ್ರ	೯
ವಿವಿಧ ಸಮಾಚಾರಗಳು	೨
ಸ್ಥಾನದ ಅವಶ್ಯಕತೆ	೧೧,೧೨
ಚೆಂಗರಾಳು (ಚಿಕ್ಕ ಕಥೆ)	೧೪
ಪತ್ರವ್ಯವಹಾರ, ೧,	೨

ಸ್ವದೇಶಾಭಿಮಾನಿ.

ತಾರೀಕು ೨೬ನೇ ಶುಕ್ರವಾರ ಅಕ್ಟೋಬರ ೧೯೨೮

ಅಸಹಕಾರ ಚಳವಳದ ದೊಡ್ಡ ತಪ್ಪು.

ಮಹಾತ್ಮಾಗಾಂಧಿಯವರು ತಮ್ಮ ಆತ್ಮವೃತ್ತದ ಒಂದು ಕಡೆಯಲ್ಲಿ "ನಾನು ಮುಸಲ್ಮಾನರ ನಿಜವಾದ ಸ್ನೇಹಿತನಾಗಬೇಕಾದರೆ ಅಲ್ಲೀ ಬಂಧುಗಳ ಬಿಡುಗಡೆ ಬಗ್ಗೆಯೂ, ಖಿಲಾಫತ್ತಿನ ನ್ಯಾಯವಾದ ತೀರ್ಮಾನದ ಬಗ್ಗೆಯೂ ಸಾಧ್ಯವಿದ್ದ ಎಲ್ಲಾ ಸಹಾಯವನ್ನು ಕೊಡಬೇಕೆಂದು ನನಗೆ ಅನ್ನಿಸಿತು. ಈ ಪ್ರಶ್ನೆಯಲ್ಲಿ ದುರ್ನೀತಿ (immoral) ಇಲ್ಲವೆಂದರೆ, ಅದರ ಉಪಕಾರಿತೆ (merits)ಯ ವಿಷಯ ವಾದಿಸುವುದು ನನ್ನ ಕೆಲಸವಾಗಿರಲಿಲ್ಲ. ಎಂದು ಹೇಳುವರು. ಇದರಲ್ಲಿ ಕಡೆಯ ವಾಕ್ಯವು ಸ್ವಲ್ಪ ಮುಖ್ಯವಾದುದರಿಂದ ಅದರ ಇಂಗ್ಲೀಷ ಮೂಲವನ್ನೇ ಇಲ್ಲಿ ಕೊಡುವೆವು—It was not for me to enter into the absolute merits of the question, provided there was nothing immoral in their demands" ಪುನಃ ಖಿಲಾಫತ್ತಿಗಾಗಿ ತಾನು ಮುಸಲ್ಮಾನರಿಗೆ ಕೊಟ್ಟ ಸಹಕಾರಕ್ಕಾಗಿ ತಾನು ಪಶ್ಚಾತ್ತಾಪ ಪಡುವಂತಹುದುದೇನೂ ಇಲ್ಲವೆಂದೂ, ಇಂತಹ ಇನ್ನೊಂದು ಸಂದರ್ಭವು ಬಂದರೆ ತಾನು ಇನ್ನೂ ಹಾಗೆಯೇ ಮಾಡುವೆನೆಂದೂ ಮಹಾತ್ಮಾಜೀಯವರು ಹೇಳುವರು.

ಮಹಾತ್ಮಾಜೀಯವರು ತಮ್ಮ ಅಭಿಪ್ರಾಯವೇ ಸರಿಯೆನ್ನಿಸುವ ಸಮಯದಲ್ಲಿ ಅನುಸರಿಸುವ ತರ್ಕ ಕ್ರಮವು ಸಾಧಾರಣವಾಗಿ ಇದೇ ಆಗಿದೆ. ಪ್ರಶ್ನೆಯ ಉಪಕಾರಿತೆಯ ವಿಷಯದಲ್ಲಿ ಸ್ಪಷ್ಟವಾದ ಅಭಿಪ್ರಾಯವನ್ನು ಕೊಡುವ ಇಚ್ಛೆಯು ಮಹಾತ್ಮಾಜಿಯವರಿಗಿಲ್ಲವೆಂದು ಮೇಲಿನ ಮಾತಿನಿಂದ ತಿಳಿದು ಬರುತ್ತದೆ; ಫಲತಃ ಆ ವಿಷಯದಲ್ಲಿ ಅವರ ಸಂದೇಹವೂ ಉಂಟಾಗಿಯದೆಂದು ನಾವು ಊಹಿಸಬೇಕಾಗುತ್ತದೆ. ಉಪಕಾರಿತೆಯನ್ನೇ ಲಕ್ಷಿಸದೆ, ನೀತಿ ಅನೀತಿಯ ಮಾನದಿಂದಲೇ ಕಾರ್ಯ ಸಾಧನೆಗಳಿಗೆ ಹೋಗುವುದಾದರೆ, ವ್ಯಕ್ತಿಯ ಕಾರ್ಯಗಳ ಪರಿಣಾಮವು ಬಹಳ ಹಾನಿಕರವಾಗದೆ ಇರದು. ಮೇಲಿನ ತರ್ಕವನ್ನು ಓದಿದ ಮಾತ್ರದಿಂದಲೇ ಮಹಾತ್ಮಾಜೀಯವರು ಅಸ್ಥಿರವಾದ ಆಧಾರಗಳನ್ನು ಸಮರ್ಥಿಸಲು ಯತ್ನಿಸುತ್ತಿರುವರೆಂದು ಭಾಸವಾಗುವುದು. ಈ ರೀತಿಯಲ್ಲಿ ಅವರು ತಮ್ಮ ತರ್ಕದ ಆಧಾರದ ಅಸ್ಥಿರತೆಯನ್ನು ಮನಸ್ಸಿನಲ್ಲಿ ಅನುಭವಿಸಿಯೂ "ಇಂತಹ ಸಂದರ್ಭದಲ್ಲಿ ಇನ್ನೂ ಹಾಗೆಯೇ ಮಾಡುವೆನೆಂಬ" ಅವರ ಮನೋ ನಿರ್ಧಾರವು ಸದ್ವಿವೇಚನೆಯನ್ನು ತೋರಿಸಲಾರದೆಂದು ಹೇಳಬೇಕಾಗುತ್ತದೆ.

ಖಿಲಾಫತ್ತಿನ ಚಳವಳದಲ್ಲಿ ಅನೀತಿಯು ಇರಲಿಲ್ಲವೆಂಬುವುದನ್ನು ಒಪ್ಪುವೆವು. ಆದರೆ ಅಷ್ಟೇ ಆ ಚಳವಳದ ಪ್ರೋತ್ಸಾಹವನ್ನು ಸಮರ್ಥಿಸಲು ಸಾಕಾಗಲಾರದು. ಅನೀತಿಕರವಲ್ಲವಾದರೂ, ಪ್ರೋತ್ಸಾಹನೀಯವಲ್ಲದ ಕಾರ್ಯಗಳು ಹಲವು ಇರುತ್ತವೆ. ಖಿಲಾಫತ್ತಿನ ಚಳವಳದಿಂದ ಹಿಂದೂಸ್ಥಾನದ ಮೇಲೆ ಉಂಟಾದ ಪರಿಣಾಮವನ್ನು ನೋಡಿದರೆ ಈ ಚಳವಳವೂ ಪ್ರೋತ್ಸಾಹನೀಯವಲ್ಲದ ಒಂದು ಚಳವಳವಾಗಿತ್ತೆಂದು ತೋರುವುದು.

ಯುದ್ಧದ ಗಾಬರಿಗಳ ಸಮಯದಲ್ಲಿ, ರಾಷ್ಟ್ರೀಯ ಆಂದೋಲನದ ಉತ್ತೇಜಕತೆಯಲ್ಲಿ, ಹಿಂದೂ—ಮುಸಲ್ಮಾನ ಐಕ್ಯದ ಮೋಹಾವೇಶದಲ್ಲಿ, ಖಿಲಾಫತ್ತು ಒಂದು ಅತ್ಯುತ್ತಮ ಚಳವಳವೆಂದು ತೋರಿದ್ದಿತು. ನಾವಾದರೂ ಆ ಸಮಯದಲ್ಲಿ ಹಾಗೆಯೇ ತಿಳಿದಿದ್ದೆವು. ಆದರೆ ದೂರದರ್ಶಿಗಳಾದವರು ಇದ್ದಿದ್ದರೆ ಖಿಲಾಫತ್ತಿಗೆ ಕೈ ಹಾಕಬೇಡಿ ಎಂದು ಒತ್ತಾಯದಿಂದ ಹೇಳುತ್ತಿದ್ದರು. ಅಷ್ಟು ದೂರದರ್ಶಿಗಳಾದವರು ಯಾರೂ ಆ ಸಮಯದಲ್ಲಿ ಇರಲಿಲ್ಲ; ಇದ್ದರೂ ಮುಂದೆ ಬಂದು ತಮ್ಮ ಅಭಿಪ್ರಾಯವನ್ನು ಉಪದೇಶಿಸಲು ಧೈರ್ಯ ಪಡುವಂತಹವರು ಯಾರೂ ಇರಲಿಲ್ಲ; ಹಾಗೆ ಕೆಲವರು ಇದ್ದಿರಬಹುದಾಗಿದ್ದರೂ, ಅವರ ಮಾತುಗಳಿಗೆ ಕಿವಿಗೊಡುವವರು ಯಾರೂ ಇರಲಿಲ್ಲ.

ಖಿಲಾಫತ್ತಿನ ಚಳವಳಕ್ಕೆ ಸಂಪೂರ್ಣ ಎಡೆಕೊಟ್ಟ ಮೇಲೆ ಅದರ ಪರಿಣಾಮವನ್ನು ನಾವು ಈ ದಿನಗಳಲ್ಲಿ ಅನುಭವಿಸುವಾಗ ಇನ್ನಾದರೂ ಕಲಿತ ಪಾಠವನ್ನು ತಿಳಿದುಕೊಳ್ಳುವುದು ಅಗತ್ಯವಿದೆ. ಮಹಾತ್ಮಾಜೀಯವರು ಖಿಲಾಫತ್ತಿನಿಂದ ಸುಲಭವಾಗಿ ಹಿಂದೂ ಮುಸಲ್ಮಾನ ಐಕ್ಯತನ್ನು ಕಟ್ಟುವೆನೆಂದು ನೆನೆಸಿದ್ದರು. ಕಾರ್ಯತಃ ಕೆಲ ಸಮಯದ ವರೆಗೆ ಹಿಂದೂ ಮುಸಲ್ಮಾನ ಐಕ್ಯವು ಘಟ್ಟಿಯಾಯಿತೆಂದೇ ನೆನಸಲ್ಪಟ್ಟಿದ್ದಿತು. ಆದರೆ ಮಳಲಿನ ಇಟ್ಟಿಗೆಯು ಹೆಚ್ಚು ಹೊತ್ತು ನಿಲ್ಲಲಿಲ್ಲ. ಹಿಂದೂ—ಮುಸಲ್ಮಾನ ಐಕ್ಯದ ಭವ್ಯ ಭವನವು ಒಂದೇ ಬಿರುಗಾಳಿಯ ಹೊಡೆತದಿಂದ ಬಿದ್ದು ಹೋಯಿತು. ಇವನ್ನು ಕಟ್ಟಿ ಸುಖವಾಸಿಗಳಾಗುವೆವೆಂದು ನೆನಸಿದ ಮಹಾತ್ಮಾಜಿಯವರೂ, ಅಲ್ಲಿ ಬಂಧುಗಳೂ ಈ ಮಂದಿರದ ವಿಚ್ಛೇದದೊಡನೆ ನಿರಾಶ್ರಯವಾಗಿ ವಿಭಾಜಿತರಾಗಬೇಕಾಯಿತು. ಇದು ಮಹಾತ್ಮಾಜಿಯವರಿಗೆ ಸಾಕಾದ ಅನುಭವವಾಗಲಾರದೆ ಇನ್ನಾವ ವಿಷಯವೂ ಅವರನ್ನು ತಿದ್ದುಪಡಿ ಮಾಡಲಾರದು.

ಪಂಜಾಬದ ಅತ್ಯಾಚಾರದಿಂದ ಉದ್ವಿಗ್ನವಾಗಿ ಕೇಳಿದ್ದ ಭಾರತೀಯ ಶಕ್ತಿಯು ಏಕತ್ರವಾಗಿ ಮಾತೆಯ ಉಪಾಸನೆಯಲ್ಲಿಯೇ ಪ್ರೇರಿಸಲ್ಪಡಬೇಕಿದ್ದಿತು. ಈ ಶಕ್ತಿಯಲ್ಲಿ ಹಿಂದೂವೂ, ಮುಸಲ್ಮಾನನೂ, ಕ್ರಿಸ್ತೀಯನೂ, ಪಾರ್ಸಿಯೂ, ಸಮಸ್ತರೂ ಕೇಂದ್ರೀಕರಿಸಲ್ಪಡಬೇಕಿದ್ದರು. ಈ ರೀತಿಯಲ್ಲಿ ಎಲ್ಲರನ್ನೂ ಒಟ್ಟುಗೂಡಿಸಲಿಕ್ಕೆ ಬಹಳ ಕಷ್ಟವಾಗಬಹುದಿತ್ತು; ಆದರೆ ಆ ಕಷ್ಟಗಳು ಸಫಲವಾದುದಾದರೆ ಭಾರತೀಯ ದಿವ್ಯ ಆಶಯದ ಸಂಪೂರ್ಣತೆಯು ಉಂಟಾಗಿ ಜನಾಂಗರಚನೆಯ ಅಡಿಗಟ್ಟು ಸ್ಥಿರವಾಗುತ್ತಿದ್ದಿತು. ಮತ್ತು ಆ ತರದ ಪ್ರಯತ್ನಗಳು ಜನತೆಗೆ ಹೆಚ್ಚು ಸ್ವಾಭಾವಿಕವಾಗುತ್ತಿದ್ದವು. ಒಂದು ಬಾರಿ ಅಂತಹ ಪ್ರಯತ್ನಗಳು ನಿಷ್ಫಲವಾಗಿ ಹೋದದ್ದಾದರೂ ಅದರಿಂದ ತತ್ಕಾಲದ ಆಂದೋಲನವು ವಿಫಲವಾಗಬಹುದಿತ್ತೇ ಅಲ್ಲದೆ ಅದರಿಂದ ರಾಷ್ಟ್ರೀಯ ಚಳವಳದ ಪ್ರಗತಿಯ ಮೇಲೆ ಯಾವ ತರದ ದುಷ್ಪರಿಣಾಮವು ಉಂಟಾಗುತ್ತಿರಲಿಲ್ಲ.

ಅಂತಹ ಮುಖ್ಯವಾದ ಸಮಯದಲ್ಲಿಯೇ ರಾಷ್ಟ್ರೀಯ ಕ್ಷೇತ್ರದಲ್ಲಿ ಅನ್ಯಸರ್ಗಕವಾದ ಚಳವಳಕ್ಕೆ ಪ್ರಾಧಾನ್ಯವು ಕೊಡಲ್ಪಟ್ಟು, ಐಕ್ಯದ ಹೆಸರಿನಲ್ಲಿ ವಿಭಜನೆಯ ಕೆಲಸವು ಮುಂದೆ ಸಾಗಿತು. ಹಿಂದೂ ಮತ್ತಿತರ ಮತೀಯರ ದೃಷ್ಟಿಯನ್ನು ರಾಷ್ಟ್ರೀಯ ಚಳವಳದ ಕಡೆಗೆ ಎಳೆದರು; ಮುಸಲ್ಮಾನರ ದೃಷ್ಟಿಯು ರಾಷ್ಟ್ರೀಯ ಚಳವಳಕ್ಕೆ ಒಲಿಯಲಾರದೆಂಬ ಭಯದಿಂದ, ಹೇಗಾದರೂ ಅವರನ್ನು ಹತ್ತಿರ ತಾರದೇ ಉಪಾಯವಿಲ್ಲವೆಂದು, ಅದನ್ನು ಖಿಲಾಫತ್ತಿನ ಕಡೆಗೆ ಎಳೆದು, ಖಿಲಾಫತ್ತಿನ ದರ್ಶನವು ಚೆನ್ನಾಗಿ ಆಗಬೇಕಾದರೆ ರಾಷ್ಟ್ರೀಯ ಕ್ಷೇತ್ರವೇ ಒಳ್ಳೆಯದೆಂದು ಹೇಳಿ, ರಾಷ್ಟ್ರೀಯ ಕ್ಷೇತ್ರಕ್ಕೆ ಅವರನ್ನು ಖಿಲಾಫತ್ತಿಗಾಗಿ ಇಳಿಸಿದರು. ಮುಂದೆ ಕೊಂಡು ಹೋಗಬೇಕಾದ ಒಂದು ಗಾಡಿಗೆ ಕಟ್ಟಬೇಕಾದ ಎರಡು ಎತ್ತುಗಳಲ್ಲಿ, ಒಂದು ಎತ್ತು ಇನ್ನೊಂದರ ಹತ್ತಿರ ನಿಲ್ಲಲಿಕ್ಕೆ ಕೇಳದಿರಲು, ಗಾಡಿಯ ಹಿಂಭಾಗದಲ್ಲಿದ್ದ ಹುಲ್ಲಿನ ರಾಶಿಯನ್ನಾದರೂ ನೋಡಿ ಹತ್ತಿರ ನಿಲ್ಲಲೆಂದು ತಲೆ ಗಾಡಿ ಕಡೆಗೆ ತಿರುಗಿಸಿ ಎತ್ತನ್ನು ಕಟ್ಟಿದಂತೆ, ಮುಸಲ್ಮಾನರನ್ನು ಅಸಹಕಾರದ ರಥಕ್ಕೆ ಕಟ್ಟಿದರು.

ಹಿಂದೂ ಮುಸಲ್ಮಾನರ ವಿಚ್ಛೇದವು ಇಂದಿನದಲ್ಲ. ಅದು ಅಸಹಕಾರ ಸಮಯದಲ್ಲಿಯೇ ಸಾಧಿಸಲ್ಪಟ್ಟಿತು. ಮುಸಲ್ಮಾನರ ದೃಷ್ಟಿಯನ್ನು ರಾಷ್ಟ್ರೀಯ ಚಳವಳದಿಂದ ತೆಗೆದು, ಖಿಲಾಫತ್ತಿನ ಕಡೆಗೆ ತಿರುಗಿಸಿದಾಗಲೇ ಹಿಂದೂ ಮುಸಲ್ಮಾನ ವಿಚ್ಛೇದವು ಸ್ಥಿರವಾಗಿ ಮಾಡಲ್ಪಟ್ಟಿತು. ರಾಷ್ಟ್ರಪ್ರೇಮದ ಬದಲಿಗೆ ಹೊರ ರಾಷ್ಟ್ರಪ್ರೇಮವು ಇಂತಹ ಹೊರ ರಾಷ್ಟ್ರಪ್ರೇಮದ ಒಂದು ಜನಾಂಗದ ಒಂದು ವಿಭಾಗದಲ್ಲಿ ಎಂದಿನ ವರೆಗೆ ಪ್ರಥಮ ಪ್ರಾಧಾನ್ಯವನ್ನು ಪಡೆಯುವುದೋ ಅಂದಿನ ವರೆಗೆ ಅದು ಸ್ವರಾಷ್ಟ್ರದ ಉದ್ಧಾರದಲ್ಲಿ ಪ್ರಬಲ ನಿರೋಧವಾಗಿಯೇ ನಿಲ್ಲುವುದು.

ನಿಜವಾಗಿ ನೋಡಿದರೆ ಅಸಹಕಾರದ [illegible] ರಾಷ್ಟ್ರೀಯ ಚಳವಳಕ್ಕೆ ಉಂಟಾದಷ್ಟು ಬಾಧಕವು [illegible] ಯಾವುದರಿಂದಲೂ ಆಗಲಿಲ್ಲವೆಂದು ಈ ಮೇಲಿನ [illegible] ತಿಳಿಯದಿರಲಾರದು.

ವಿದೇಶ ವರ್ತಮಾನ

— ಪ್ಯಾರಿಸಿನಲ್ಲಿ ಆರುಮಾಳಿಗೆಗಳ ಒಂದು ಕಟ್ಟೋಣವನ್ನು ಕಟ್ಟುತ್ತಿರುವಾಗ, ಇಡೀ ಕಟ್ಟೋಣವೇ ಕುಸಿದು ಬಿದ್ದು ೨೦ ಮಂದಿ [illegible]ರರು ಸಜೀವವಾಗಿ ಹುಗಿಯಲ್ಪಟ್ಟರು. ಅವರಲ್ಲಿ ಐದು ಜನರು [illegible] ಸಂರಕ್ಷಿಸಲ್ಪಟ್ಟಿರುವರು. ಮೂವರು [illegible] ಸಿಕ್ಕಿರುತ್ತವೆ. ಕೆಲಸದ ಮುಂದಾಳು ಹೇಳುವದೇನೆಂದರೆ [illegible] ನಾಲ್ಕನೇ ಮಾಳಿಗೆಗೆ ಹೋಗಿದ್ದೆನು. ಆಗ ಕಲ್ಲಿನ ಕೆಲಸದ [illegible]ಗಾರರು ತನ್ನನ್ನು ಕರೆದುದರಿಂದ ಕೆಳಕ್ಕೆ ಬಂದೆನು. ಕೆಳಗೆ ಬಂದು ಮುಟ್ಟುವಾಗ ಕಟ್ಟೋಣವು ಅಲುಗಾಡುವಂತೆ ಭಾಸವಾಯಿತು. [illegible]ನೆಯೇ ಬಿದ್ದುಹೋಯಿತು'ಎಂದು. ಕೆಲಸವನ್ನು ಕಂಟ್ರಾಕ್ಟಿಗೆ ತೆಗೆದುಕೊಂಡವನು ಪೋಲೀಸ್ ಸ್ಟೇಶನಿನಲ್ಲಿ ಆತ್ಮಹತ್ಯವನ್ನು ಮಾಡಲು ಪ್ರಯತ್ನಿಸಿದನು. ಆತನು ಉಪಯೋಗಿಸಿದ ಸಿಮೆಂಟನ್ನು ಪರೀಕ್ಷಿಸುತ್ತಿರುವರು.

— ತುರ್ಕಿ ಸ್ಥಾನದಲ್ಲಿ ಹಿರಿಯರಿಗೆ ವಿದ್ಯಾಭ್ಯಾಸವನ್ನು ಮಾಡಿಸಬೇಕೆಂಬ ನಿರ್ಣಯವನ್ನುಮಾಡಿ, ವಿದ್ಯಾ ಮಂತ್ರಿಗಳಿಂದ ಅದನ್ನು ಪ್ರಕಟಿಸಿರುವರು. ೧೬ ವರ್ಷಕ್ಕೆ ಮೇಲ್ಪಟ್ಟ ಸ್ತ್ರೀ ಪುರುಷರಿಗೆ ಓದು ಬರಹವನ್ನು ಕಲಿಸುವ ಸಲುವಾಗಿ ಸುಮಾರು ೧೨ ಸಾವಿರ ಮಂದಿ ಉಪಾಧ್ಯಾಯರು ನೇಮಿಸಲ್ಪಡುವರು.

— ಲೋರ್ಡ್ ಬರ್ಕನ ಹೆಡ್ಡರಿಗೆ ಜಿ. ಸಿ. ಎಸ್. ಐ. ಎಂಬ ಬಿರುದು ಕೊಡಲ್ಪಟ್ಟಿರುವದು.

— [illegible] ಸೇವನಿಯೆಂಬಲ್ಲಿಯ ೭೫ ವರುಷ ಪ್ರಾಯದ ಮಾರ್ಕ್ವಿಸನು ಲಂಡನಿನಲ್ಲಿ ೫೯ ವರುಷ ಪ್ರಾಯದ ಒಬ್ಬ ಹೆಂಗಸನ್ನು ಇತ್ತೀಚೆಗೆ ಮದುವೆಯಾದನು. ಇದು ಆತನಿಗೆ ಮೂರನೆಯ ಮದುವೆ. ಆತನ ಮೊದಲನೆಯ ಹೆಂಡತಿಯು ೧೮೮೦ನೇ ಇಸವಿಯಲ್ಲಿ ಸತ್ತು ಹೋಗಿದ್ದಳು. ಎರಡನೆಯ ಹೆಂಡತಿಯು ಕಳೆದ ವರುಷ ಮೃತಪಟ್ಟಳು.

— ಕಾಬೂಲಿನ ಮುಖ್ಯ ಖಾಜಿಯೂ ಇತರ ಮೂವರೂ ಅಪರಾಧಿಗಳೆಂದು ಕಂಡುಬಂದುದರಿಂದ ಅವರಿಗೆ ಮರಣ ಶಿಕ್ಷೆಯನ್ನು ವಿಧಿಸಲಿರುವರು.

— ರೀಗಾ ಎಂಬಲ್ಲಿ ಕುಷ್ಠ ರೋಗಿಗಳನ್ನು ಗುಣ ಪಡಿಸುವ ಸಲುವಾಗಿ ಉಪಾಯವನ್ನು ಕಂಡುಹಿಡಿಯಲು ಡಾಕ್ಟರ್ ಫೆಲ್ಡರೆಂಬವರು ೧೯೧೦ನೇ ಇಸವಿಯಿಂದ ಕೈಕೊಂಡ ಪ್ರಯತ್ನಗಳು ಈಗ ಪೂರ್ತಿ ಸಫಲವಾಗಿರುವವು. ಓಸೆಲ್ ಎಂಬ ದ್ವೀಪದ ಕುಷ್ಠರೋಗಿಗಳ ಆಸ್ಪತ್ರೆಯಲ್ಲಿ ಅವರು ತನ್ನ ಔಷಧಿಯನ್ನು ಪ್ರಯೋಗಿಸಿ ನಾಲ್ವರು ರೋಗಿಗಳನ್ನು ಸಂಪೂರ್ಣವಾಗಿ ಗುಣಪಡಿಸಿರುವರು. ಈಗ ಅವರು ಬೇರೆ ಆಸ್ಪತ್ರೆಗಳಲ್ಲಿಯೂ ರೋಗಿಗಳನ್ನು ಗುಣಪಡಿಸಲು ಪ್ರಯತ್ನಿಸುತ್ತಿರುವರು.

— ರಷ್ಯಾ ದೇಶದ ಮಾಜಿ ಚಕ್ರವರ್ತಿನಿಯು ಮೃತಪಟ್ಟಳೆಂದು ವಾರ್ತೆಯು ಬಂದಿರುತ್ತದೆ.

— ಪಾಟಿಯಾಲದ ಮಹಾರಾಜರು ಇದೇ ಶುಕ್ರವಾರ ಲಂಡನಿನಿಂದ ಹೊರಟು ಸ್ಪೇನ್ ರಾಜ್ಯಕ್ಕೆ ಪ್ರಯಾಣವನ್ನು ಬೆಳೆಸುವರು.

— ಪ್ರಿನ್ಸ್ ಒಫ್ ವೇಲ್ಸರವರು ಆಫ್ರಿಕದ ಎಲಿಫೆಂಟ್‌ಕಂಟ್ರಿ ಎಂಬ ರಾಜ್ಯಕ್ಕೆ ತಲಪಿರುವರು. ಈ ರಾಜ್ಯದಲ್ಲಿ ಆನೆಗಳು ಬಹಳ. ಪತ್ರಿಕೆಗಳ ಪ್ರತಿನಿಧಿಗಳು ಅವರನ್ನು ಸಮೀಪಿಸಬಾರದೆಂದು ಹುಕುಂ ಕೊಟ್ಟಿರುತ್ತದೆ.

— ಆಸ್ಟ್ರೇಲಿಯದಲ್ಲಿ ಪ್ರಾರಂಭವಾಗಿದ್ದ ಧಕ್ಕೆಕೂಲಿಗಳ ಮುಷ್ಕರವು ಸಂಪೂರ್ಣವಾಗಿ ನಿಂತುಹೋಗಿ ಕಳೆದ ೧೯ನೇ ತಾರೀಕಿನಿಂದ ಎಲ್ಲಾ ಬಂದರುಗಳಲ್ಲಿಯೂ ಪುನಃ ಕೆಲಸವು ಪ್ರಾರಂಭವಾಗಿರುತ್ತದೆ.

— ಅಟ್ಲಾಂಟಿಕ್ ಸಿಟಿ ಎಂಬಲ್ಲಿ ಎನೋ ಒಂದು ಪ್ರದರ್ಶನಕ್ಕಾಗಿ ಬಂದಿದ್ದ ಕೆಲ ಜನ [illegible]. ವಿನೋದಕ್ಕಾಗಿ ಒಂದು ವಿಮಾನದಲ್ಲಿ [illegible] ಅಡಿ ಎತ್ತರದಲ್ಲಿ ಹಾರುತ್ತಿರುವಾಗ ಅಕಸ್ಮಾತ್ತಾಗಿ ವಿಮಾನವು ಕೆಳಕ್ಕೆ ಬಿದ್ದು ಇಬ್ಬರು [illegible] ಸತ್ತುಹೋದರು. ಇದು [illegible] ವಿಪರೀತವಾದ [illegible]ವಾಗಿರುತ್ತದೆ.

— ಬುಡಾಪೆಸ್ಟಿನಲ್ಲಿ ಮಾರ್ಗದ ಲೆವಲಿಂಗ ಒಂದು ಗುಡ್ಡೆಯಲ್ಲಿ ೧೮೦೦ ವರುಷಗಳ ಹಿಂದಿನ ಒಂದು ರೋಮನ್ ಸ್ಮಶಾನವು ಕಂಡುಹಿಡಿಯಲ್ಪಟ್ಟಿರುವದು. ಹಿಂದೆ ಅಲ್ಲಿ ರೋಮನರ ಒಂದು ಪ್ರಸಿದ್ಧ ಪಟ್ಟಣವು ಇದ್ದಿತಂತೆ. ಈ ಸ್ಮಶಾನದಲ್ಲಿ ಇದುವರೆಗೆ ೮೦ ಗೋರಿಗಳು ದೊರೆತಿವೆ. ಈ ಗೋರಿಗಳಲ್ಲಿ ಸುವಾಸನಾದ್ರವ್ಯಗಳ ಪಾತ್ರೆಗಳೂ, ಕನ್ನಡಿಗಳೂ ಅಮೂಲ್ಯವಾದ ಆಭರಣಗಳೂ, ವೈದ್ಯಕೀಯ ಉಪಕರಣಗಳೂ ಇವೆ. ಒಂದು ಗೋರಿಯಲ್ಲಿ ಕನ್ನಡಿಯನ್ನು ಹಿಡಕೊಂಡು ತನ್ನ ಅಂದವನ್ನು ನೋಡುತ್ತಿರುವ ಒಬ್ಬ ಹೆಂಗಸಿನ ದೇಹವು ಇದ್ದಕ್ಕಿದ್ದಹಾಗೆಯೇ ದೊರಕಿರುತ್ತದೆ.

— ಚೀನಾದೇಶದ ಕರಾವಳಿಯಲ್ಲಿ ಉಂಟಾಗುವ ಸಮುದ್ರ ಕಳ್ಳತನಕ್ಕೆ ಇನ್ನೆಂದೂ ನಿವರ್ತನಗಳು ದೊರೆತಿವೆ, ಕಳ್ಳತನವು ಅಲ್ಲಿ ದಿನಹೋದಷ್ಟಕ್ಕೆ ಬೆಳೆಯುತ್ತಾ ಬರುತ್ತದೆ.

ಇದುವರೆಗೆ ಬ್ರಹ್ಮಚಾರಿಯಾಗಿ ಉಳಿದಿದ್ದ ಲಂಡನಿನ ಒಬ್ಬ ವಕೀಲನಾದ ಜಸ್ಟಿಸ್ ಕ್ರೈಟನೆಂಬವನು ತನ್ನ [illegible] ವಯಸ್ಸಿನಲ್ಲಿ [illegible] ಮದುವೆಯಾಗಿರುವನು. ಆತನ ಹೆಂಡತಿಯು ಕುಮಾರಿ [illegible] ಎಂಬವಳು. ಕೆಲವು ತಿಂಗಳುಗಳ ಹಿಂದೆ ಈ ವಕೀಲನು ಬೇಟೆಗೆ ಹೋಗಿದ್ದಾಗ ಈ ವಧುವನ್ನು ಕಂಡು ಮೋಹಿತನಾದನು. ಆದರೂ ಇದನ್ನು ಪ್ರಕಟಿಸದೆ ಇಷ್ಟು ಥಟ್ಟನೆ ಆಕೆಯನ್ನು ಮದುವೆಯಾಗಿ ಸ್ನೇಹಿತರೆಲ್ಲರನ್ನೂ ಆಶ್ಚರ್ಯಗೊಳಿಸಿರುವನು.

— ಬ್ಯಾಬಲಿನಲ್ಲಿರುವ ಅನುಪಯುಕ್ತವಾದ ಭಾಗಗಳನ್ನು ತೆಗೆದು ಒಂದು ಹೊಸ ರೀತಿಯ ಬ್ಯಾಬಲನ್ನು [illegible].

ಹೊಸ ವರುಷದ ಅಂಕ.

ಸ್ವದೇಶಾಭಿಮಾನಿಯ ಹೊಸ ವರುಷದ ಅಂಕವು ... ಮೊದಲಿನ ಶುಕ್ರವಾರ ದಿನ ಕಳೆದ ವರ್ಷದ ... ಹೆಚ್ಚು ಪುಟಗಳೊಡನೆ ಪ್ರಕಟಿಸಲ್ಪಡುವುದು. ಸಂಚಿಕೆಯಲ್ಲಿ ತುಂಬಾ ಚಿತ್ರಗಳು ಈ ಸಂಚಿಕೆಗಾಗಿ ವಿಶೇಷವಾಗಿ ದೊರಕಿಸಲ್ಪಟ್ಟು ಪ್ರಕಟಿಸಲ್ಪಡುವುವು. ... ಲೇಖಕರಿಗೆ ಕೃತಜ್ಞತಾಪೂರ್ವಕವಾಗಿ ... ಸಚಿತ್ರವಾದ ಲೇಖನಗಳಿಗೆ ಹೆಚ್ಚಿನ ... ಸಲ್ಲುವುದು. ಚಿತ್ರಗಳನ್ನು ಲೇಖಕರು ... ಅವುಗಳ ಬ್ಲೋಕನ್ನುನಾವೇ ತರಿಸಿಕೊಳ್ಳುತ್ತೇವೆ. ಲೇಖಗಳು ಸ್ವದೇಶಾಭಿಮಾನಿಯ ಓದುಗರಿಗೆ ... ವಿಚಾರದಿದ್ದರೆ ಉತ್ತಮ. ನವಂಬರ ಅಂತ್ಯದೊಳಗಾಗಿ ಲೇಖಗಳು ನಮ್ಮ ಕೈಸೇರಿದರೆ ಬ್ಲೋಕುಗಳನ್ನು ತಯಾರಿಸಲಿಕ್ಕೂ, ಮುದ್ರಣವನ್ನು ಸಂಪಾದಿಸಲಿಕ್ಕೂ ಅನುಕೂಲವಾಗುವುದು. ಚಿಕ್ಕ ಕತೆ ಕಾವ್ಯ ... ಬೇಕಾಗಿರುತ್ತವೆ. ಕರ್ನಾಟಕದ ಸುಪ್ರಸಿದ್ಧ ಲೇಖಕರು ಈ ನಮ್ಮ ಕೆಲಸದಲ್ಲಿ ಸಹಾಯ ಮಾಡಬೇಕಾಗಿ ವಿನಂತಿ.

ಮೆನೇಜರ್.

ಇತರ ದೇಶ ವರ್ತಮಾನ.

— ನಾಗಪುರ ಜಿಲ್ಲೆಯಲ್ಲಿ ವಕೀಲ ಕೆಲಸವನ್ನು ಮಾಡುವವರ ಸಂಖ್ಯೆಯು ಬಹು ಬೆಳೆದಿರುವುದರಿಂದ ಸರಕಾರಿ ಹುದ್ದೆದಾರರು ಪೆನ್ಶನ್ ಹೊಂದಿದ ತರುವಾಯ ವಕೀಲ ವೃತ್ತಿಯನ್ನು ಕೈಕೊಳ್ಳಬಾರದಂತೆ ಸರಕಾರದವರು ಒಂದು ಕಾನೂನು ಮಾಡುವದು ಅಗತ್ಯವೆಂದು ನಾಗಪುರದ ಜಿಲ್ಲೆಯ ವಕೀಲರ ಸಂಘದವರು ಸಭೆಕೂಡಿ ನಿಶ್ಚಯಿಸಿರುವರು.

— ಸಂಯುಕ್ತ ಪ್ರಾಂತದ ಪತಿತ ಜನರ ಪರಿಷತ್ತು ಕಳೆದ ೨ನೇ ತಾರೀಕಿನ ದಿನ ... ಜರಗಿತು. ಇದಕ್ಕೆ ಸಂಯುಕ್ತ ಪ್ರಾಂತದ ಎಲ್ಲಾ ಕಡೆಗಳಿಂದಲೂ ಪ್ರತಿನಿಧಿಗಳು ಬಂದಿದ್ದರು.

— ಮುಂಬಯಿಯ ಮ್ಯುನಿಸಿಪಾಲಿಟಿ ಶಾಲೆಗಳಲ್ಲಿ ಮಕ್ಕಳಿಗೆ ಕುಡಿಯುವ ಸಲುವಾಗಿ ನೀರನ್ನು ಪಾತ್ರೆಗಳಲ್ಲಿ ತುಂಬಿಸಿ ಇಡಬೇಕೆಂತಲೂ, ಅಲ್ಲಿ ಜಾತಿ ಭೇದವನ್ನು ಎಣಿಸಬಾರದೆಂತಲೂ ಮುನಿಸಿಪಾಲಿಟಿಯವರ ನಿರ್ಣಯವಾಗಿದ್ದಿತು. ಆದರೆ ಮಹಮ್ಮದೀಯರಿಗೆ ಈ ನಿರ್ಣಯ ಸೇರಲಿಲ್ಲ. ಅವರು ಮಾಧವ ಭಾಗ ಎಂಬಲ್ಲಿ ಒಟ್ಟಾಗಿ ಮುನಿಸಿಪಾಲಿಟಿಯವರು ಹೀಗೆ ಮಾಡುವದು ಹಿಂದೂ ಧರ್ಮಕ್ಕೆ ವಿರುದ್ಧವೆಂದೂ, ತಮ್ಮ ಸೂಚನೆಗೆ ಕಿವಿಗೊಡದೆ ಮುನಿಸಿಪಾಲಿಟಿಯವರು ಮುಂದರಿಸಿದರೆ ಅವರ ಮೇಲೆ ವ್ಯವಹರಿಸಲು ಹಣ ಕೂಡಿಸಬೇಕೆಂದೂ ನಿಶ್ಚಯಿಸಿದರು.

— ಮುಂಬಯಿ ಗಿರಣಿಯೊಳಗಿನ ಮುಷ್ಕರದ ಸಲುವಾಗಿ ವಿಚಾರಣೆಯು ನಡೆಯಬೇಕೆಂದು ಸರಕಾರದವರು ಒಂದು ಕಮಿಟಿಯನ್ನು ನೇಮಿಸಿದ್ದರು. ಈ ಕಮಿಟಿಯವರು, ಮುಷ್ಕರದ ಆಳುಗಳ ಪ್ರತಿನಿಧಿಗಳೂ, ಗಿರಣಿ ಮಾಲೀಕರ ಪ್ರತಿನಿಧಿಗಳೂ ಸಭೆಕೂಡಿ ವಿಚಾರಣೆಯನ್ನು ಇದೇ ಬರುವ ೨ನೇ ತಾರೀಕಿನಿಂದ ಪ್ರಾರಂಭಿಸಬೇಕೆಂದು ನಿಶ್ಚಯಿಸಿದರು. ಎರಡು ಪಕ್ಷಗಳ ಹೇಳಿಕೆಯೆಲ್ಲವನ್ನು ೨೫ನೇ ತಾರೀಕಿನೊಳಗೆ ವಿಚಾರಣಾ ಕಮಿಟಿಗೆ ಸಮರ್ಪಿಸಬೇಕೆಂದಾಯಿತು.

— ಇಂಪೀರಿಯಲ್ ಏರ್ ಸರ್ವಿಸಿನವರ ಲಂಡನ್ ಇಂಡಿಯ ವಿಮಾನ ಸರ್ವಿಸು ಬರುವ ಎಪ್ರಿಲ್ ತಿಂಗಳಿನಿಂದ ಪ್ರಾರಂಭವಾಗುವದು. ಲಂಡನಿನಿಂದ ಹೊರಡುವ ವಿಮಾನವು ಬುಶಾಯರ್, ಬಗದಾದ್, ಅಲೆಕ್ಸಾಂಡ್ರಿಯಾ, ಈ ಮೂರು ಸ್ಥಳಗಳಲ್ಲಿ ಕಲ್ಲಿದ್ದಲಿನ ಸಲುವಾಗಿಯೂ, ಬಸರಾ, ಕೈರೋ, ಜಿನೋವಾ ಈ ಮೂರು ಸ್ಥಳಗಳಲ್ಲಿ ರಾತ್ರಿ ವಿರಾಮದ ಸಲುವಾಗಿಯೂ ತಂಗುವದು. ಸೀದಾ ಲಂಡನಿನಿಂದ ಹಿಂದೂಸ್ಥಾನಕ್ಕೆ ಬರಲು ಗ... ಪವನು ಚಾರ್ಜು ಕೊಡಬೇಕು.

— ಪಿಠೋನಿ ಎಂಬಲ್ಲಿ ಜೈನರು ಒಂದು ಸಭೆಕೂಡಿ, ಮಹಾತ್ಮಾಜಿಯವರು ಸಬರಮತಿ ಆಶ್ರಮದಲ್ಲಿ ರೋಗದಿಂದ ನರಳುತ್ತಿದ್ದ ಕರುವಿಗೆ ಮುಕ್ತಿಯನ್ನು ಕೊಟ್ಟದು ತಪ್ಪಾಯಿತೆಂದು ನಿರ್ಣಯಿಸಿದರು. ಅಲ್ಲದೆ ಗಾಂಧಿಜಿಯವರಿಗೆ ಮಹಾತ್ಮರೆನ್ನಬಾರದೆಂದೂ, ಅವರ ಈ ಹೊಸ ತತ್ವವನ್ನು ಹಿಂದೂಗಳೂ ಜೈನರೂ ಏಕರೀತಿಯಲ್ಲಿ ವಿರೋಧಿಸಬೇಕೆಂದೂ ಒಪ್ಪಿಕೊಂಡರು.

ನಗೋಡದ ಸರ್. ಉಮೂರ್ ಹಯತ್ ಖಾನರು ಇಂಡಿಯದ ಸೆಕ್ರಟರಿ ಒಫ್ ಸ್ಟೇಟ್ ಇವರ ಮೇಲೆ ನಾಲ್ಕು ಲಕ್ಷಕ್ಕೆ ನಷ್ಟದ ವ್ಯಾಜ್ಯವನ್ನು ಹೂಡಿರುವರು. ಸೆಕ್ರಟರಿ ಒಫ್ ಸ್ಟೇಟ್ ಇವರು ನಗೋಡದಿಂದ ತಹಾತುರದವರೆಗೆ ಹಾಕಿಸಿದ ರೈಲುವೇ ಮಾರ್ಗದಿಂದ ತನ್ನ ಆಸ್ತಿಗೆ ಸ್ವಾಭಾವಿಕವಾಗಿ ಬರುತ್ತಿದ್ದ ನೀರಿನ ಪ್ರವಾಹವನ್ನು ತಡೆಗಟ್ಟಿದಹಾಗಾಯಿತೆಂದೂ, ಇದರಿಂದ ತನಗೆ ಅಪಾರ ನಷ್ಟವುಂಟಾಗಿರುತ್ತದೆಂದೂ ಸರ್. ಹಯತ್ ಖಾನರ ಹೇಳಿಕೆ.

— ನಾಸಿಕದ ಛಾಪಖಾನೆಯಲ್ಲಿ ನೂರು ರೂಪಾಯಿಯ ನೋಟುಗಳನ್ನು ಛಾಪಿಸಿರುವರು. ಇವು ಸದ್ಯದಲ್ಲಿಯೇ ಹೊರಬೀಳಲಿರುವವು. ಈ ನೋಟು ನೋಡಲು ಹೊಸದಿನ ನೋಟಿನ ಹಾಗೆಯೇ ಇದೆ. ಆದರೆ ರೂಪಾಯಿ ಸಂಖ್ಯೆಯು ಬಣ್ಣವನ್ನು ಮಾತ್ರ ಬದಲಾಯಿಸಿರುವರು.

— ಬರುವ ನವಂಬರ ೧ನೇ ತಾರೀಕಿನಿಂದ ೧೯೨೫ನೇ ಇಸವಿಯ ಇಂಡಿಯನ್ ... ಎಕ್ಟ್ ಎಂಬ ಒಂದು ಕಾನೂನು ಜ್ಯಾರಿಗೆ ಬರಲಿರುವದು.

— ಮುಂಬಯಿಯ ಗವರ್ನರರು ಹೊಸಯ ಸೇವಾಸದನವನ್ನು ಕಳೆದವಾರ ಸಂದರ್ಶಿಸಿದರು, ಮತ್ತು ಸೂಲಗಿತ್ತಿಯವರ ಸಲುವಾಗಿ ಕಟ್ಟಲಿಕ್ಕಿರುವ ಸರ್. ಲೆಸ್ಲಿ ವಿಲ್ಸನ್ ಹೋಮ್ ಎಂಬ ಕಟ್ಟಡದ ವಾಸ್ತುಕಲ್ಲನ್ನು ಹಾಕಿದರು.

— ಲೋಕಮಾನ್ಯ ಬಾಲಗಂಗಾಧರ ತಿಲಕರವರ ಒಂದು ಪ್ರತಿಮೆಯನ್ನು ನಾಗಪುರದಲ್ಲಿ ಸ್ಥಾಪಿಸಿ, ಕಾಂಗ್ರೆಸ್ ಅಧ್ಯಕ್ಷರಾಗಿರುವ ಡಾಕ್ಟರ್ ಅನ್ಸಾರಿಯವರು ಅದರ ಅನಾವರಣ ಸಮಾರಂಭವನ್ನು ಕಳೆದ ಆದಿತ್ಯವಾರ ಜರಗಿಸಿದರು.

— ಕಳೆದವಾರದಲ್ಲಿ ಕೊಚ್ಚಿ ಬಂದರದಲ್ಲಿ ಸುಮಾರು ೨೦೦ ಜನ ಕೂಲಿಗಳು ಕೆಲಸಕ್ಕೆ ಬರಲೇ ಇಲ್ಲ. ಅದುಕಾರಣ ಲಂಗರು ಹಾಕಿದ ನಾಲ್ಕು ಸ್ಟೀಮರುಗಳು ನಿಲ್ಲದೆ ಹಿಂತಿರಬೇಕಾಯಿತು. ಅವರ ಸಂಬಳವನ್ನು ಅಧಿಕಾರಿಗಳು ಇಳಿಸುವ ಆಲೋಚನೆಯನ್ನು ಮಾಡಿದರು. ಇದಕ್ಕೆ ಕೂಲಿಗಳು ಒಪ್ಪಲಿಲ್ಲ. ಆದರೆ ಈಗ ಅವರೊಳಗೆ ರಾಜಿ ಸಂಧಾನಿಕೆಯು ನಡೆಯುತ್ತಲಿದೆ.

— ಆಸ್ಸಾಮದಿಂದ ಕೆಲಸಕ್ಕಾಗಿ ತರಪೂರಗಳಿಗೆ ತೆರಳಿದವರ ಸಂಖ್ಯೆಯು ಕಳೆದ ವರುಷಕ್ಕಿಂತಲೂ ಈ ವರುಷ ಇಳಿದಿರುವದು. ಈ ವರುಷ ಬರೇ ೫೯೮೦ ಮಾತ್ರ ಆದರೆ ಕಳೆದ ವರುಷ ೭೦೬೬. ಇವರಲ್ಲಿ ೪೬೨೯ ಗಂಡಸರು ೧೩೫೧ ಹೆಂಗಸರು.

ದಕ್ಷಿಣ ಕನ್ನಡ.

ಪಾಂಗಾಳ ನಾಯಕ ಬೇಂಕಿನ ಮಂಗಳೂರು ಶಾಖೆಯ ತೆರಿಯುವಿಕೆ.

ಉಡುಪಿಯಲ್ಲಿ ಸನ್ ೧೯೨೦ರಲ್ಲಿ ಸ್ಥಾಪಿಸಲ್ಪಟ್ಟ ಈ ಬೇಂಕಿನ ಶಾಖೆಯು ಮಂಗಳೂರಲ್ಲಿ ತೆರೆಯಲ್ಪಟ್ಟದು ಬಹಳ ಸಂತೃಪ್ತಿಯಾಗಿದೆ. ೧೪ ಲಕ್ಷ ರೂಪಾಯಿಯ ಮೂಲಧನದಿಂದ ಹೊರಟ ಈ ಬೇಂಕು ಬರೇ ಏಳು ವರುಷಗಳೊಳಗೆ ಒಂದು ಲಕ್ಷ ರೂಪಾಯಿಯ ಆಪದ್ಧನ ಇತ್ಯಾದಿಯನ್ನು ಏಂಗಡಿಸಲು ಶಕ್ತವಾಯಿತೆಂಬುದು ಈ ಬೇಂಕಿನ ಉತ್ತಮ ಆಡಳಿತೆಯ ಚಿಹ್ನೆಯಾಗಿದೆ. ಇದರ ಮಂಗಳೂರು ಶಾಖೆಯ ಸ್ಥಾಪನೆಯಿಂದ ಈ ಬೇಂಕು ಇನ್ನೂ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿಸಲು ಸಂದೇಹವಿಲ್ಲ. ಹಾಗೆಯೇ ಇದು ವ್ಯಾಪಾರ ವಹಿವಾಟುಗಳಲ್ಲಿ ಜನರಿಗೆ ಬಹಳ ಸಹಾಯ ಮಾಡಿ ನಮ್ಮ ಜಿಲ್ಲೆಯ ವ್ಯಾಪಾರ ಮತ್ತು ಕೈಗಾರಿಕೆಗಳ ಬೆಳವಣಿಗೆಗೆ ಕಾರಣವಾಗಲೆಂದು ಆಶಿಸುತ್ತೇವೆ.

ಮಂಗಳೂರು: — ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಬರುವ ಸಾಧಾರಣ ಸಭೆಯು ಮಂಗಳೂರಿನಲ್ಲಿರುವ ಬೋರ್ಡಿನ ಆಫೀಸಿನಲ್ಲಿ ಇದೇ ಬರುವ ೩ನೇ ಮಂಗಳವಾರ ಅಪರಾಹ್ನ ಘಂಟೆ ೨-೩೦ಕ್ಕೆ ಜರಗುವುದು. ಬರುವ ನವಂಬರ ೧೫ನೇ ತಾರೀಕಿನಿಂದ ೧೮ನೇ ತಾರೀಕಿನೊಳಗೆ ನಮ್ಮ ಜಿಲ್ಲೆಯನ್ನು ಸಂದರ್ಶಿಸಲಿರುವ ಮದರಾಸಿನ ಮುಖ್ಯ ಮಂತ್ರಿಯವರಿಗೆ ಡಿಸ್ಟ್ರಿಕ್ಟ್ ಬೋರ್ಡಿನ ಪರವಾಗಿ ಮಾನಪತ್ರವನ್ನು ಸಮರ್ಪಿಸುವ ಪ್ರಶ್ನೆಯು ಈ ಸಭೆಯಲ್ಲಿ ಚರ್ಚಿಸಲ್ಪಡುವದು.

ತಾ ೨೦-೧೦-೧೯೨೭ರಕ್ಕೆ ಅಂತ್ಯವಾಗುವ ಪಕ್ಷದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಉಂಟಾದ ಮರಣಗಳು ೩೬, ಜನನಗಳು ೭೦, ಮರಣಗಳ ಪೈಕಿ ಮಲೇರಿಯದಿಂದ ೨, ಅತಿಸಾರದಿಂದ ೩, ಶ್ವಾಸಕೋಶದ ರೋಗದಿಂದ ೯, ಇತರ ಎಲ್ಲಾ ಕಾರಣಗಳಿಂದ ೨೨.

ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ಇವರು ಕಳೆದ ೧೬ನೇ ತಾರೀಕಿನ ದಿನ ಕಾಸರಗೋಡಿಗೆ ಬಂದಿದ್ದರು. ತಾ. ೨೦ಕ್ಕೆ ಮಂಗಳೂರಿಗೆ ಬಂದು, ೨೨ನೇ ತಾರೀಕಿನ ದಿನ ಹೊಸ್ಟೆಲುಗಳನ್ನೂ, ಗವರ್ನಮೆಂಟು ಕೊಲೇಜು, ಸೈಂಟ್ ಎಲೋಸಿಯಸ್ ಕೊಲೇಜು, ಇವುಗಳನ್ನು ಸಂದರ್ಶಿಸಿದರು. ತಾ. ೨೩ನೇ ದಿನ ಗಣಪತಿ ಹೈಸ್ಕೂಲ್, ಕೆನರಾ ಹೈಸ್ಕೂಲ್, ಗವರ್ನಮೆಂಟ್ ಟ್ರೈನಿಂಗ್ ಸ್ಕೂಲ್, ಇವುಗಳನ್ನು ಸಂದರ್ಶಿಸಿದರು. ತಾರೀಕು ೨೨ನೆಯ ದಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರೂ ಮತ್ತು ಟೀಚರ್ ಮೆನೇಜರರ ಸಂಘದವರೂ ಅವರಿಗೆ ಒಂದು ದೆಪ್ಯುಟೇಶನನ್ನು ಸಮರ್ಪಿಸಿದರು. ತಾ. ೨೪ಕ್ಕೆ ಮೂಡಬಿದರೆ, ಕಾರ್ಕಳ ಇವುಗಳನ್ನು ಸಂದರ್ಶಿಸಿ ಹಿಂತಿರುಗಿ ಬಂದು, ತಾ. ೨೫ನೇ ದಿನ ಪಾಲಘಾಟಿಗೆ ಪ್ರಯಾಣವನ್ನು ಬೆಳಸಿದರು. ಉಡುಪಿ, ಕಲ್ಯಾಣಪುರ, ಬ್ರಹ್ಮಾವರ ಈ ಊರುಗಳನ್ನು ಅವರು ಸಂದರ್ಶಿಸುವರೆಂದು ನಿಶ್ಚಯವಾಗಿದ್ದಿತ್ತಾದರೂ ಏನೋ ಕಾರಣಗಳಿಂದ ಅವರು ಸಂದರ್ಶಿಸಲಿಲ್ಲ.

ಮದರಾಸು ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರಾದ ರಾ॥ ಸತ್ಯಮೂರ್ತಿಯವರು ಈ ದಿನ ನಾಲ್ಕುವರೆ ಘಂಟೆಗೆ ಇಲ್ಲಿನ ಗವರ್ನಮೆಂಟ ಕೊಲೇಜಿನಲ್ಲಿ ಭಾಷಣವನ್ನು ಕೊಡುವರು. ತದನಂತರ ಘಂಟೆ ೬ಕ್ಕೆ ನೆಶನಲ್ ಗರ್ಲ್ಸ್ ಸ್ಕೂಲಿನಲ್ಲಿ ಸ್ವಾಮಿನ್ ಅಧಿಸ್ಥಾನದ ಕುರಿತು ರಾ. ಕೆ. ಆರ್. ಕಾರಂತರವರ ಅಧ್ಯಕ್ಷತೆಯಲ್ಲಿ ಭಾಷಣವನ್ನು ಕೊಡುವರು.

ಉಡುಪಿಯ ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್ ಇವರ ಶಾಖೆಯೊಂದನ್ನು ಮಂಗಳೂರಿನ ದಿ ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ ಲಿಮಿಟೆಡ್ ಇವರ ಸಮೀಪವೇ ಕಳೆದ ತಾರೀಕು ೧೫ನೇ ಸೋಮವಾರ ತೆರೆದಿರುವರು.

ಮಂಗಳೂರಿನ ಗಣಪತಿ ಹೈಸ್ಕೂಲಿನಲ್ಲಿ ಎಂದಿನಂತೆ ದಸರಾ ಮಹೋತ್ಸವವು ಬಹು ವಿಜೃಂಭಣೆಯಿಂದ ನಡೆಯಿತು. ತಾ. ೧೯ನೇ ಶುಕ್ರವಾರ ಬೆಳಗ್ಗೆ ಶಾರದಾಪೂಜೆಯು ಪ್ರಾರಂಭಿಸಿ, ತಾ. ೨೦ ಮತ್ತು ೨೧ನೇ ದಿನ ಆಟಗಳು, ೨೨ನೇ ಸೋಮವಾರ ಶ್ರೀಮತಿ ಎಸ್. ಆನಂದಿ ಬಾಯಿಯವರ ಅಧ್ಯಕ್ಷತೆಯಲ್ಲಿ ಗೃಹಿಣಿಯರ ಸಮ್ಮೇಳನ, ೨೩ನೇ ಮಂಗಳವಾರ ಬೆಳಗ್ಗೆ ವಿದ್ಯಾರ್ಥಿಗಳ ಸಭೆ, ೨೪ನೇ ಬುಧವಾರ ಶ್ರೀಯುತ ಶಾಮರಾವ್ ಎಸ್. ಕರಂಜಿ ಇವರ ಅಧ್ಯಕ್ಷತೆಯಲ್ಲಿ ಗೃಹಸ್ಥರ ಸಭೆ, ಮೊದಲಾದವುಗಳು ನಡೆದವು.

ತಾ. ೧೨ಕ್ಕೆ ಆರಂಭವಾಗಿದ್ದ ಗವರ್ನಮೆಂಟ್ ಕೊಲೇಜು ಮತ್ತು ಎಲೋಸಿಯಸ್ ಕೊಲೇಜುಗಳೊಳಗಿನ ಇಂಟರ್ ಸ್ಕೂಲ್ ಕಪ್ ಮೇಚು ತಾ. ೧೭ಕ್ಕೆ ಕೊನೆಗಂಡು ಗವರ್ನಮೆಂಟು ಕೊಲೇಜಿನವರೇ ಜಯಶಾಲಿಗಳಾದರು, ಎರಡು ಇನ್ನಿಂಗುಗಳಲ್ಲಿ ಒಟ್ಟು ಗವರ್ನಮೆಂಟು ಕೊಲೇಜಿನವರಿಗೆ ೪೩೩ ಮತ್ತು ಎಲೋಸಿಯಸ್ ಕೊಲೇಜಿನವರಿಗೆ ೩೫೦ ರನ್ನುಗಳು ದೊರೆತವು.

ಕಳೆದ ೨ನೇ ಶನಿವಾರ ರಾತ್ರಿ ಇಲ್ಲಿನ ಎಸ್. ಆರ್. ಎಸ್. ಹೋಪ್ ಡ್ರಾಮೆಟಿಕ್ ಸೊಸೈಟಿಯವರು ಬಂಟರ ಯೂನಿಯನ್‌ ನಾಡವರ ಬಡ ವಿದ್ಯಾರ್ಥಿ ಫಂಡಿನ ಸಹಾಯಾರ್ಥವಾಗಿ ಕೆನರಾ ಹೈಸ್ಕೂಲಿನ ಧ್ರುವ ಸೇಂದ್ರ ಸಭಾಸದನದಲ್ಲಿ 'ನಿಜದಾಂಪತ್ಯ'ವೆಂಬ ನವೀನ ಸಾಮಾಜಿಕ ನಾಟಕವೊಂದನ್ನು ಬಹು ರಮಣೀಯವಾದ ರೀತಿಯಲ್ಲಿ ಅಭಿನಯಿಸಿ ತೋರಿಸಿದರು.

ಇಲ್ಲಿಯ ವಕೀಲರೊಬ್ಬರಾಗಿದ್ದ ರಾ॥ ಮಿಜಾರ ಸುಬ್ರಾಯ ಪೈಗಳವರು ಕಳೆದ ೧೭ನೇ ತಾರೀಕಿನ ದಿನ ರಾತ್ರೆ ದೈವಾಧೀನರಾದರೆಂದು ತಿಳಿಸಲು ತುಂಬಾ ವ್ಯಸನಪಡುತ್ತೇವೆ.

ಕಳೆದ ೧೯ನೇ ಶುಕ್ರವಾರ ದಿನ ಇಲ್ಲಿಯ ಕುದ್ರೋಳಿಯಲ್ಲಿ ಹೊಸತಾಗಿ ಕಟ್ಟಿಸಿದ ದಿ ಶಾಂತಿ ಆಶ್ರಮ ಛತ್ರದ ಕಾರ್ಯಾರಂಭವು (opening ceremony) ಅತಿ ವಿಜೃಂಭಣೆಯಿಂದ ಜರಗಿತು.

ಉಪ್ಪಿನಂಗಡಿ: — ಇಲ್ಲಿ ಒಂದು ಮನೆಯಲ್ಲಿ ಒಂದು ಕುದಿಯುತ್ತಿದ್ದ ನೀರಿನ ಮಡಕೆಯು ಒಡೆದುಹೋಗಿ ಸಮೀಪದಲ್ಲಿದ್ದ ಒಂದು ಮಗುವಿನ ಮೈಮೇಲೆಲ್ಲಾ ನೀರು ಬಿದ್ದು ಬೊಕ್ಕೆಗಳೆದ್ದು ಮರುದಿನ ಕಾಲವಶವಾಯಿತು.

ಹೊಸದುರ್ಗ: — ಇಲ್ಲಿಯ ವರದ ರಾಜ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ನಡಿಯುವ ಕಾಲಾವಧಿ ನವರಾತ್ರಿ ಸಮಾರಂಭವು ಹೆಚ್ಚಿನ ವಿಜೃಂಭಣೆಯಲ್ಲಿ ಕೊನೆಗೊಂಡಿತು. ಊರ ಪರವೂರ ಭಕ್ತವೃಂದವು ತಂಡ ತಂಡವಾಗಿ ಉದಯವಾಗಿತ್ತು ಮೇಳ ತಾಳ ಸಹಾ ತನ್ನ ಬಹು ರಂಗಳಲಿ ಸಹಿತವಾಗಿ ಬಂದಿತು. ದಿವಸ ವಿನಹಾ ಇತರ ದಿವಸಗಳ ಸಂತರ್ಪಣೆಗೂ ಮಹಾ ಪೂಜೆಗೂ ನಿಯಮವಿದ್ದಿತು. ಆದರೆ ಮಹಾ ಪೂಜೆಯ ಹೊತ್ತಿನಿಂದ ಸಮ್ಮರ್ದವೂ ಏನೋ ಸುತರಾ ಮಾಯವಾಗಿದ್ದಿತು. ಭಗವತಿಯ ಮಹಿಮೆಯು ಅಪಾರವಾದದ್ದು.

ಇಲ್ಲಿಯ ದೇವಸ್ಥಾನದ ಗೋಪುರವು ನವೀನವಾಗಿ ಕಟ್ಟಲ್ಪಡುತ್ತದೆ. ಕೆಲಸವು ಸಂಪೂರ್ಣವಾಗಿರಲಿಲ್ಲ ಸ್ಥಾಪನೆಗೆ ಸಮ್ಮಂಧಪಟ್ಟ ಸ್ಥಳೀಕ ಗೃಹಸ್ಥರು ಪ್ರಯತ್ನಿಸಿ. ಈಗ ಪರ ಊರಿನಲ್ಲಿ ಚಾಕರಿಯಲ್ಲಿರುವವರೂ ತಮ್ಮ ಶಕ್ತಿಗೆ ಅನುಸರಿಸಿ ಈ ಕಾರ್ಯದಲ್ಲಿ ಭಾಗಿಗಳಾಗಬೇಕಾಗಿ ಮಂಜೂರ ಆಗಿಯದೆ ಜನ್ಮ ಊರಿನ ವಾತ್ಸಲ್ಯವನ್ನು ನಿವಾಸಿಕರ ಜಾತಿಗೃಹಸ್ಥರೊಂದಿಗೆ ಪ್ರಕಾಶಪಡಿಸುವರಾಗಿ ತುಂಬಾ ಭರವಸೆ ಪಡುತ್ತೇವೆ.

ಕುಂಬಳೆ: — ಬೋರ್ಡು ಬಾಲಿಕಾ ಪಾಠಶಾಲೆಯನ್ನು ಕುಂಬಳೆಯಲ್ಲಿ ತೆರೆಯುವದೆಂದಾದರೆ ಈ ಬಗ್ಗೆ ಯೋಗ್ಯ ಬಾಡಿಗೆಯನ್ನು ತೆತ್ತರೆ ತಾನು ಕಟ್ಟೋಣ ಕಟ್ಟಿಸಿ ಕೊಡುವೆನಾಗಿ ಶ್ರೀ. ಮಂಜಪ್ಪ ಆಳ್ವರು ವಾಗ್ದಾನ ಮಾಡುತ್ತಾರೆ. ಬೋರ್ಡಿನವರ ಈ ಕಡೆ ನಿಗಾಕೊಡುವರೇ?

ಮೈಲು ಬಂದಿ ನಿಲ್ಲಿಸಬೇಕಾಗಿ ಕೇಳಿದರು. ಮಾಡಿದ ಅರ್ಜಿಯು ತನಿಖೆಗೆ ಬಂದು ತಿರಸ್ಕಾರವಾಯಿತು. ಟಿಕೇಟಿನ ಆದಾಯ ಹೆಚ್ಚಿಲ್ಲವೆಂದು ಇದಕ್ಕೆ ಕಾರಣ.

ಉಪ್ಪಳ ಗ್ರಾಮದ ಮೊಹಿಯ್ಯಾದಿ ಎಂಬವನು ಕಳ್ಳಾಟಿಕೆ ಬಗ್ಗೆ ಬಂದಿದ್ದಂತ ತನ್ನ ನೆಂಟನೊಬ್ಬನನ್ನು ಬಂಧಿಸಿ ಸ್ಟೇಶನಿನ ಪಟೇಲರ ರಿಪೋರ್ಟು ದಾಖಲಿಸಿದ ತನಿಕೆಯಲ್ಲಿ ತಪ್ಪೆಂತ ಕಂಡುಬಂದು ಫಿರ್ಯಾದಿ ಕೊಟ್ಟವನು ಹೇರಳ ಪ್ರತಿಫಲ ಕೊಟ್ಟು ಮರ್ಯಾದೆ ಕಾಪಾಡಬೇಕಾಯಿತು. ಈತನ ಫಿರ್ಯಾದಿ ಸುಳ್ಳೆಂತ ತೆಗೆದುಹಾಕಲಾಗಿದೆ.

ಮಂಗಲಪಾಡಿ ಗ್ರಾಮದಲ್ಲಿ ಪತ್ತೆ ಆದ ಕಳವಿನ ಮೊಕದ್ದಮೆಗಳು ತಾ. ೨೬ ಮತ್ತು ೨೭ಕ್ಕೆ ಕಾಸರಗೋಡ ಮೇಜಿಸ್ಟ್ರೇಟರವರ ಮುಂದೆ ತನಿಕೆಗೆ ನಿಶ್ಚಯಿಸಲ್ಪಟ್ಟಿದೆ.

ಕುಂಬಳೆ: — ಇಲ್ಲಿಯ ಬಾಲಿಕಾ ಪಾಠಶಾಲೆಯಲ್ಲಿಯೂ, ಕೈಲ್ಮೆ ಸ್ಟೇಶನಿನಲ್ಲಿಯೂ ಶಾರದಾ ಪೂಜೆಯು ಬಹಳ ವಿಜೃಂಭಣೆಯಿಂದ ನಡೆಯಿತು. ಸ್ಟೇಶನ ಮಾಸ್ತರರಿಗೆ ಇಲ್ಲಿಂದ ವರ್ಗವಾದ ಸಂಗತಿ ಕೇಳಲು ತುಂಬಾ ವಿಷಾದಪಡಬೇಕಾಗುತ್ತದೆ.

ಇಲ್ಲಿ ಸದ್ಯದಲ್ಲೇ ೨, ೩ ನಾಟಕಗಳಾಗುವದರ ಬಗ್ಗೆ ಪ್ರೇಕ್ಷಕರ ಆಗುತ್ತದೆ. ಟಿಕೇಟು ಮೂಲಕ ಆಡುವದರಿಂದ ಬಾರ್ಬದಾರರಲ್ಲಿ ಒಂದೆರಡು ಸ್ತ್ರೀ ರತ್ನಗಳೂ ಬರುವದರಲ್ಲಿದೆಯಂತೆ. ಊರವರ ಭಾಗ್ಯೋದಯವೇ ಸರಿ.

ಇಲ್ಲಿಯ ಪೋಸ್ಟ ಮಾಸ್ತರರಾಗಿದ್ದು ದೀರ್ಘ ಕಾಲದಿಂದ ರಜೆಯಲ್ಲಿದ್ದ ರಾ. ಲಕ್ಷ್ಮಣ ಪ್ರಾನಭಾಗರವರು ಮಂಗಳವಾರ ದಿನ ರಾತ್ರೆ ದೈವಾಧೀನರಾದರೆಂತ ತಿಳಿಸಲು ವಿಷಾದಪಡುತ್ತೇವೆ.

ಕಾಪು: — ಇಲ್ಲೂರ ಮಾರಿಗುಡಿಗಳಲ್ಲಿ, ವರ್ಷಂಪ್ರತಿ ನವರಾತ್ರಿ ಸಮಯ ಜರಗತಕ್ಕ "ದೇವಿಮಹಾತ್ಮ್ಯ" ಪಾರಾಯಣವೂ ಕಳೆದ ಮಂಗಳವಾರ ಚಂಡಿಕಾ ಪೂರ್ಣಾಹುತಿಯೂ ಬಹಳ ವಿಜೃಂಭಣೆಯಿಂದ ಜರಗಿದವು. ಎಂದಿನಂತೆ ಜಗದಾಂಬೆಯ ಭಕ್ತ ಶಿರೋಮಣಿಗಳೆಲ್ಲರೂ ನೆರೆದ್ದರು.

ಈ ಮೊದಲು ಇಲ್ಲಿ ತೀರ್ಥಕ್ಕೆಗೆ ಒಯ್ಯಲು ಟಪ್ಪಾಲು ಕಟ್ಟೆಯು ಬರುವ ತಿಂಗಳ ಒಂದನೇ ತಾರೀಕಿಗೆ ಪೇಟೆಗೆ ಬರುವುದೆಂದು ವದಂತಿ ಇದೆ.

ಎಮಾರ್ಗಳ್: — ಇಲ್ಲಿಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ಶುಕ್ರವಾರ ರಾತ್ರಿ, ಶಾಲಾ ಬಾಲಕರಿಂದ "ಚಂದ್ರಹಾಸ" ಎಂಬ ನಾಟಕವು ಪ್ರದರ್ಶಿಸಲ್ಪಟ್ಟಿತು. ವಿದ್ಯಾರ್ಥಿಗಳ ಸಾಹಸವು ಸ್ತೋತ್ರಾರ್ಹವಾಗಿತ್ತು.

ಕೋಟೇಶ್ವರ: — ಇಲ್ಲಿಯ ವಿದ್ಯಾ ಪ್ರಚಾರಿಣೀ ಹಾಯ್ಯರ್ ಎಲಿಮೆಂಟರಿ ಶಾಲೆಯ ಶಾರದಾ ಪೂಜಾ ಸಮಾರಂಭವು ಇದೇ ಅಕ್ಟೋಬರ ತಿಂಗಳ ತಾರೀಕು ೧೯ನೇ ಶುಕ್ರವಾರ ಘಂಟೆ ೧೦ಕ್ಕೆ ಜರಗಿತು.

ಮರುದಿನ ಶನಿವಾರ ಇದೇ ಶಾಲೆಯ ತೃತೀಯ ವಾರ್ಷಿಕ ವರ್ಧಂತ್ಯುತ್ಸವವು ಬಹು ವಿಜೃಂಭಣೆಯಿಂದ ವಿಕ್ಟನ್ ಶಾಲಾ ಹೆಡ್ ಮಾಸ್ತರರಾದ ರಾ॥ ಬಂಗೇರ ಬಿ. ಎ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹಳೆ ವಿದ್ಯಾರ್ಥಿಗಳಲ್ಲೊಬ್ಬರಾದ ರಾ॥ ನರಸಿಂಹ ಕಮ್ತಿಯವರು ಶಾಲೆಯನ್ನು ಸನ್ಮಂಗಲವಾಚನೆಯಿಂದ ಅಭಿನಂದಿಸಿದರು. ಆ ಬಳಿಕ ಶಾಲ್ಲಾ ಹೆಡ್ ಮಾಸ್ತರರು ಸದರಿ ಶಾಲೆಯ ಗತವರ್ಷದ ರಿಪೋರ್ಟನ್ನು ಸಭೆಯ

ಕರ್ನಾಟಕ ಎಗ್ಯೂ ಮಿಕ್ಸ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲೂಯೆಂಝಾ, ಬಹು [illegible] ಜ್ವರ, ಚಾಳಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ ಜ್ವರವು ಬಿಡುವದಲ್ಲದೆ ಕೆಟ್ಟುಹೋದ ರಕ್ತವು ಸುಧಾರಿಸುವದು.

[illegible] ಬಾಟ್ಲಿ ಕಿಮ್ಮತ್ತು ೧-೯-೦, ಸಣ್ಣದಕ್ಕೆ ೦-೧೪-೦.

[illegible] ಔಷಧವನ್ನು ಮಾರುವವರು ಬೇಕಾಗಿದ್ದಾರೆ!

ಏಜಂಟರು ಬೇಕಾಗಿದ್ದಾರೆ!

[illegible] | ಕರ್ನಾಟಕ ಬ್ರದರ್ಸ, ಗಿರಿಗಾಂವ, ಮುಂಬಯಿ.

[illegible] ಬೆಲೆಗೆ ಅವಿತುವಾದ ಬೆಳಕು.

[illegible] ಗಮನಿಸಬೇಕಾದ ವಿಷಯ.

ಬಾಡಿಗೆಗೆ ಕೊಟ್ಟು ಲಾಭ ಪಡೆಯು [illegible] ಅನುಕೂಲಿಸುವ [illegible] ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, [illegible] 200ರ ಲೈಟ್ [illegible] 300 ಕ್ಯಾಂಡಲ್ ಪವರಿನ [illegible]

[illegible]

ಎ. ಆರ್. ಖಲೀಲ್,

[illegible]

18-11-27) [illegible]

'ಅಂಬಾ ತಾಯಿತ್'

ನಿಮ್ಮ ಸುಖವನ್ನು [illegible] ದಿಂದ ನಿಮಗೆ ಬರುವ ಕಷ್ಟವನ್ನು ದೂರವಾಡುವದು. [illegible] ಪ್ರೇತ ಬಾಲಗ್ರಹ ಬಾಧೆಯಿಂದ [illegible] ತಪ್ಪಿಸುವದು. ಲಾಭ, ಜಯ, [illegible] ವದು. ಅನೇಕರಿಗೆ ನಮ್ಮ 'ತಾಯಿತ್' [illegible] ಮಾಡಿರುತ್ತದೆ.

'೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ [illegible] ರೂಪಾಯಿ ವರೆಗೆ, ದೈವೀಶಕ್ತಿಯು, [illegible] ನೋಡಿದರೆ ತಮಗೆ ತಿಳಿಯುವದು. [illegible]

ಶಿವರಾಮ ಭಟ್ಟ ತೆಂಗಿನಮನೆ,

—೯—೨೭ [illegible]

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಎಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಕ. [illegible]

ಬಾಟ್ಲಿವಾಲರ ಟಾನಿಕ್ [illegible]

ಬಾಟ್ಲಿವಾಲರ [illegible]

ಬಾಟ್ಲಿವಾಲರ ಹಲ್ಲು ಪುಡಿ [illegible]

ಬಾಟ್ಲಿವಾಲರ ತಲೆನೋವಿನ ಔಷಧ. ರೂ. ೦—೬—೦

ಬಾಟ್ಲಿವಾಲರ ರಿಂಗ್‌ವರ್ಮ್ ಔಷಧ. ರೂ. ೦—೬—೦ LIBERAL DISCOUNT TO TRADE

ಕಾರಖಾನೆ—CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ. ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್. Sayani Road. P. O. Cadell Road, Bombay, No. 14.

ಕೇಸರಿಯ ಪ್ರದರೋದ

ಗರ್ಭಾಶಯ ರೋಗನಿವಾರಣ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಲ್ಲಿ [illegible] ಈ ದಿವ್ಯೌಷಧವನ್ನು ಕೆಲವರು [illegible] ಕೆಲವರು 'ರಕ್ತಮಿಶ್ರಿತವಾದ [illegible]' ಎಂದೂ ಕರೆಯುತ್ತಾರೆ. [illegible]

ಈ ಔಷಧವು [illegible] ಇದು ಅತ್ಯಂತ [illegible]

[illegible] ನಾನಾ ಬಣ್ಣ [illegible] ಮೊದಲಾದ ಗರ್ಭಾಶಯ ರೋಗಗಳು, [illegible] ಸೊಂಟನೋವು, ಕಾಲುಸೆಳೆತ, [illegible]

ಈ ಔಷಧದ [illegible] ೩ ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— ಕೇಸರೀ ಕುಟೀರಂ,

TELEGRAMS:—'KESARI' ಆಯುರ್ವೇದ ಔಷಧಶಾಲಾ, P. B: 752, ಎಗ್ಮೋರು, ಮದರಾಸು.

[illegible]-'27 ಬ್ರಾಂಚ್— 18 ಬಳೇಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ವಿ [illegible], ಮಂಗಳೂರು.



ಸ್ಕ್ರೂ 8 x 4½ ಅಂಗುಲಗಳ ದೊಡ್ಡದು 3—0—0 [illegible]

ಫ್ಯಾನ್ಸಿ ಲಿವರ್ ಪಾಕೆಟ್ ವಾಚ್

(15 ಬಹುಮಾನಗಳ ಸಹಿತ ರೂ. 4—8—0)

[illegible]

ಈ ಗಡಿಯಾರವು [illegible] ಹೀರೆ, ಥೇರು [illegible] ಗ್ಯಾಸ್ ಟೋನ್ ಇರುವದು. [illegible] ಈ ಗಡಿಯಾರವನ್ನು ಕಯಾ [illegible] ಪ್ರಯೋಜನವಿಲ್ಲ. [illegible] ರಿಜಿಸ್ಟರ್ [illegible] ಲೋಕಪ್ರಸಿದ್ಧಿಯಾಗುವಹಾಗೆ ಈ [illegible] 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌಂಟನ್‌ಪೆನ್ 1, ಸೆಂಟಿನ ಬಾಟಲ್ 1, [illegible] 4, [illegible] 1, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ 1, ರೋಲ್ಡ್ ಗೋಲ್ಡ್ ಭಂಗಾರದ ನೆಕ್‌ಲೇಸ್ ಎಂಬ ಕತ್ತಿನ ಹಾರ 1, [illegible] 1, [illegible] 15 ಬಹುಮಾನಗಳು [illegible] ಮತ್ತು 3 ವರ್ಷ ಗ್ಯಾರಂಟಿ ಸಹಿತ.

ಗಡಿಯಾರ ಒಂದಕ್ಕೆ ಕ್ರಯ ರೂ. 4—8—0

THE ENGLISH EMPORIUM,

P.O. box 105 MADRAS.

[illegible] ಅನಂತರ ಆಟಗಳಲ್ಲೂ ಪಂದ್ಯಾಟಗಳಲ್ಲೂ ನಡತೆ ಯಲ್ಲೂ [illegible] ಯೋಗ್ಯರಾದ ವಿದ್ಯಾರ್ಥಿಗಳಿಗೆ ಅಧ್ಯಕ್ಷರು ಇನಾಮುಗಳನ್ನು [illegible]. ಅದೇ ಕಾರ್ಯಕ್ರಮದಂತೆ ಸಭಿಕರಲ್ಲೊಬ್ಬರೂ ಶಾಲಾ [illegible] ಆದ ರಾ| ದಾಸ ಕಮ್ತಿಯವರು ಶಾಲೆಯ ಮೇಲ್ಮೆಯ [illegible].

[illegible] ವೇಳೆ ಮಾನ್ಯ ಅಧ್ಯಕ್ಷರು ಶಾಲಾ ಮಕ್ಕಳಿಗೆ ಈ ಶಾಲೆಯಿಂದ [illegible] ಸೌಕರ್ಯಗಳನ್ನು ಅನೇಕ ಬುದ್ಧಿವಾದದ ಮಾತುಗಳಿಂದ [illegible]. ಮಾತ್ರವಲ್ಲದೆ ಶಾಲಾಭಿವೃದ್ಧಿಗಾಗಿ ತನ್ನ ತನುಮನ ಧನಗಳನ್ನು ಸವೆಯುತ್ತಿರುವ ಶಾಲಾ ಮುಖ್ಯೋಪಾಧ್ಯಾಯರನ್ನೂ ಅವರ ಸಹಾಯಕ ಉಪಾಧ್ಯಾಯರನ್ನೂ ಯೋಗ್ಯರೀತಿಯಲ್ಲಿ ಹೊಗಳಿ ತಮ್ಮ [illegible] ಅರ್ಥಗರ್ಭಿತವೂ ಆದ ಭಾಷಣವನ್ನು ಕೊನೆಗೊಳಿಸಿದರು.

[illegible] ಈ ಶಾಲಾ ವಿದ್ಯಾರ್ಥಿಗಳಿಂದ "ಚಂದ್ರಹಾಸಾಖ್ಯಾನವು" [illegible] ಬಹು ಮನವೋಹಕವಾದ ರೀತಿಯಲ್ಲಿ ಅಭಿನಯ [illegible]. ಅದೇ ದಿನ ರಾತ್ರಿ ಈ ಶಾಲೆಯಲ್ಲಿ ಊರ ಸಜ್ಜನರ [illegible] ಯಕ್ಷಗಾನ ಪ್ರಸಂಗ ಸೇವೆ ಕೂಡಾ ನಡೆದಿತ್ತು.

ಉಡುಪಿ: — ತಾ. ೧೯—೧೦—೩೮ನೇ ಮೂಲಾ ನಕ್ಷತ್ರದ ದಿನ [illegible] ಅನಂತೇಶ್ವರ ಶಾಲಾ ವಿದ್ಯಾರ್ಥಿಗಳು ರಾ| ಲಕ್ಷ್ಮೀನಾರಾಯಣ [illegible] ತಾತ್ಕಾಲಿಕ ಉತ್ಸಾಹ ಪ್ರೋತ್ಸಾಹಗಳಿಂದ, ಅಧಮಾರು ಮಠದ ಪಾರುಪತ್ಯಗಾರ್ ಶ್ರೀ ಎಮ್. ವೆಂಕಟಪ್ಪಾಚಾರ್ಯರವರ ಅಧ್ಯಕ್ಷತೆ [illegible] ಒಂದು ಸಭೆಸೇರಿ ತಮ್ಮದೊಂದು ಸಂಘವನ್ನೂ ತದ್ವಾರಾ ಒಂದು [illegible] ಭಂಡಾರವನ್ನೂ ಸ್ಥಾಪಿಸಿಕೊಂಡಿರುವರು. ವಿದ್ಯಾರ್ಥಿಗಳಲ್ಲಿ [illegible] ವುದಲ್ಲದೆ ಸಣ್ಣ ಪುಟ್ಟ ಪುಸ್ತಕಗಳನ್ನು ಪ್ರಕಟಿಸುವ ಸಂಘದ ಉದ್ದೇಶವು. ನೆರವೇರಬೇಕಾದರೆ ಪುರಜನರ [illegible], ಸಹಾಯಾದಿಗಳು ಅಗತ್ಯವಾಗಿ ಬೇಕು ಎಂದು ಬೋರ್ಡ ಹೈಸ್ಕೂಲಿನ ಉಪಾಧ್ಯಾಯರಾದ ರಾ| ಮಹಾಬಲ ಮಧ್ಯಸ್ಥರು [illegible] ಸಮರ್ಥಿಸಿದರು. ಟಿ. ಜನಾರ್ದನಯ್ಯನವರ ಮತ್ತು ರಾ| ವೆಂಕಟರಾಯ ಪ್ರಭುಗಳ ಸಂದರ್ಭೋಚಿತ ಭಾಷಣವಾದ ಮೇಲೆ ಸಭೆಯ ಅಧ್ಯಕ್ಷರಿಗೂ ಸಭೆಗೆ ಚಿತ್ತೈಸಿದ ಡಿ. ಜಿ. ಮೆಂಬರ್ ರಾ. ರಾಮಚಂದ್ರರಾಯರಿಗೂ ಉದಾರ ಹೃದಯದಿಂದ ಮಕ್ಕಳಿಗೆ ತಿಂಡಿಯನ್ನು ಹಂಚಿಸಿದ ರಾ| ಸಕ್ಕರೆ [illegible] ಭಟ್ಟರಿಗೂ ರಾ| ಪಾತಿಗಾರ್ ಅಗ್ನಿಹೋತ್ರಿ. ದಾಸಭಟ್ಟರಿಗೂ ಅಲ್ಲದೆ ಇನ್ನಿತರ ಮಹನೀಯರಿಗೂ ರಾ| ಜನಾರ್ದನಯ್ಯನವರು ಧನ್ಯವಾದಗಳನ್ನು ಅರ್ಪಿಸಿದರು. ಕೊನೆಗೆ ಮಂಗಲಗೀತದೊಂದಿಗೆ ಸಭೆಯು ಆನಂದದಿಂದ ಮುಗಿಯಿತು. ಭಗವಂತನನುಗ್ರಹದಿಂದ ಈ ವಿದ್ಯಾರ್ಥಿ ಸಂಘವು ಅಭಿವೃದ್ಧಿಯನ್ನು ಪಡೆವಂತಾಗಲಿ.

ನಿನ್ನೆ:—"[illegible]" [illegible] ಬಗೆ ಹರಿಯದ ಮಾತು. ಅಲ್ಲದಿದ್ದರೆ ೧೦ ಮೋಟರ್ ಕಾರುಗಳು! ಹತ್ತಿಪ್ಪತ್ತು ಗಾಡಿಗಳು!!! ನೂರಾರು ಬೈಸಿಕಲುಗಳು!!! ಸಾವಿರಾರು ಜನಸಮೂಹ!!!! ಹೆಚ್ಚೇನು? ಜಿಲ್ಲೆಯ ಆರು ತಾಲೂಕಿನಿಂದ ಮಾತ್ರವಲ್ಲ, ಮೈಸೂರು ಸೀಮೆಯ ಕೆಲವು ಡಿಸ್ಟ್ರಿಕ್ಟಿನ ಕೆಲವು ತಾಲೂಕಿನಿಂದಲೂ ಜನ ಬರೇ ಒಂದು ತಾಳಮದ್ದಳೆಗೋಸ್ಕರ ನಿಷ್ಠೆಗೆ ಬರುತ್ತದೆಂದರೆ, ಏನು ವಿಚಿತ್ರ! ಈಶ್ವರ ಸೃಷ್ಟಿ, ಮುಂಚಿನ ಮಾತ್ರ [illegible] ಮಳೆಯು, ಆ ದಿನ ತೀರಾ [illegible] ಎಲ್ಲ ರೀತಿಯಲ್ಲೂ ಅತಿ ವಿಚಿತ್ರ!!

ಬೆಳಿಗ್ಗೆ ೯ ರಿಂದ ೧೨ ಘಂಟೆಯವರೆಗೆ ಶಾರದಾ ಪೂಜೆಯು ವಿಜೃಂಭಣೆಯಿಂದ ಜರಗಿಸಲ್ಪಟ್ಟು, [illegible] ಪುಷ್ಪ ಪ್ರಸಾದ ಉಪಹಾರಾದಿಗಳನ್ನು ಸಮರ್ಪಿಸಲಾಯಿತು.

ರಾತ್ರಿ ೮ ಘಂಟೆಯೊಳಗೆ ಚಂದವಾಗಿ ಅಲಂಕರಿಸಲ್ಪಟ್ಟ [illegible] ಗಾನ ಸಭಾಸ್ಥಾನವು ಜನಸ್ತೋಮದಿಂದ ತುಂಬಿ ತುಳುಕುತ್ತಿತ್ತು. [illegible] ಕ್ರಿಶ್ಚನ್ ಹೈಸ್ಕೂಲಿನ ಕರ್ನಾಟಕ ಪಂಡಿತ, ಶ್ರೀಯುತ ವೆಂಕಟರಾಮ ಶಾಸ್ತ್ರಿಗಳವರು, ಯಕ್ಷಗಾನ ಸಮಾರಂಭದಲ್ಲಿ [illegible] ಭಾವಿಸಿದ ಮೇಲೆ, ನಿಯಮಕ್ಕನುಸಾರವಾಗಿ "ಸೇತುಬಂಧನ ಪ್ರಸಂಗವು" ನಿಯಮಿತ ಕಾಲಕ್ಕೆ ಪ್ರಾರಂಭಿಸಲ್ಪಟ್ಟಿತು. ಪ್ರತ್ಯೇಕವಾದ ಉನ್ನತಾಸನ (Platform) ದಲ್ಲಿ ಕೂತು ಶ್ರೀ ಬಲಿಪನಾರಾಯಣ ಭಾಗವತರು ಭಾಗವತಿಕೆಯನ್ನು ಕೈಕೊಂಡ ಬಳಿಕ, ಶ್ರೀಯುತ ಪದ್ರೆ ಶ್ರೀಪತಿ ಶಾಸ್ತ್ರಿಗಳವರು ಶ್ರೀರಾಮ; ಶ್ರೀ ಪೇರೂರು ವಿಟ್ಠಲಶೆಟ್ಟಿ ಸುಗ್ರೀವ, ಶ್ರೀ ನಾರಾಯಣ ಕಿಲ್ಲೆಯವರು ಅಂಗದ. ಶ್ರೀ ಕುಂಜಾರು ರಾಮಕೃಷ್ಣಯ್ಯನವರು ರಾವಣ ನೀರೆ ತಿಮ್ಮಪ್ಪ ಹೆಗ್ಗಡೆಯವರು ವಿಭೀಷಣ ಇವೇ ಮೊದಲಾದ ಪ್ರಮುಖ ಪಾತ್ರಗಳನ್ನು ಪ್ರಮುಖ ಅರ್ಥಧಾರಿಗಳಾದ ಇವರೆಲ್ಲರೂ, [illegible] ಬಲ್ಲರೆ ಅರ್ಥಗಳನ್ನು ಇನ್ನುಳಿದ ಕೆಲವು ಮಹನೀಯರೂ ವಹಿಸಿ, ಸಭಾಸದರ ಮನಸ್ಸನ್ನು ಸೂರೆಗೊಳಿಸಿದರು.

ಶ್ರೀ ರಾಮನ ಸೇತುಬಂಧನ ಕಾರ್ಯವು ಮುಗಿದ ವೇಳೆ, ಶ್ರೀಯುತ ವೆಂಕಟರಾಮ ಶಾಸ್ತ್ರಿಗಳವರು ಸಮಯೋಚಿತ ಭಾಷಣಗಳ ಮೂಲಕ, ಊರವರ ಪರವಾಗಿ ಶ್ರೀ [illegible] ಸ್ವರ್ಣಪದಕವನ್ನೂ, ಶ್ರೀ ಕೆಂಪ್ಯಂಣ್ಣ ನಾರ್ಣಪ್ಪಯ್ಯನವರ ವ್ಯಂಗ ಭಾಷಣಕ್ಕಾಗಿ ಮ. ರಾ. ಮಾಂಜಯ್ಯ ಅಡ್ಯಂತಾಯರ ಸಂಕಲ್ಪದಂತೆ ಅವರು ತಯಾರಿಸಿಟ್ಟಿದ್ದ ಒಂದು ಸ್ವರ್ಣ ಕಡಗವನ್ನೂ ಬಹುಮಾನವಾಗಿ ಅರ್ಪಿಸಿದ ಮೇಲೆ, ಅಂಗದ ಸಂಧಾನವು ಪ್ರಾರಂಭಿಸಲ್ಪಟ್ಟು, ಸಕ್ರಮವಾಗಿ ಅಂತ್ಯಗೊಳಿಸಲ್ಪಟ್ಟಿತು.

ಮಂಜೇಶ್ವರ ಶ್ರೀ ಮದನಂತೇಶ್ವರ ದೇವಸ್ಥಾನದ ೧೯೩೩ ರಿಂದ ೧೯೩೮ರ ವರೇಗಿನ ಲೆಖ್ಖ ಪತ್ರವನ್ನು ಈ ಸಂಚಿಕೆಯ ಪುರವಣಿಯಾಗಿ ಕೊಟ್ಟಿರುವೆವು.

ಉಡುಪಿಯ ವಿಶೇಷ ಪತ್ರ.

ಸ್ವವಿಷಯ—ಇದ್ದುದನ್ನು ಇದ್ದಂತೆ ಹೇಳುದುವುದರಿಂದ ಬಲ್ಲ ರಲ್ಲಿ [illegible] ದ್ವೇಷಾಸೂಯೆಗಳಿಗೆ [illegible] ಹೆಚ್ಚು. ಆದರೂ [illegible] ತಾವೇಕೆಗಾಗಿ [illegible] ಪ್ರಕಟಿಸು ವುದನ್ನು ಮಾರಿದುಂಬಿಯು ತನ್ನ ಕರ್ತವ್ಯವಾಗಿ ಎಣಿಸು[illegible] [illegible] ಪ್ರೋತ್ಸಾಹ ಅವರಿಗೆ ದೊರೆಕು ಎಂದು [illegible] ಮುಂದಕ್ಕೆ ಈ ಪತ್ರವನ್ನು [illegible]

ಮಾಡಬೇಕೆಂಬ ಕುತೂಹಲವಿದೆಯಾದುದರಿಂದ ಅಂಥಾ ಒಂದೆರಡು ವಿಷಯಗಳನ್ನು ಮಾರಿದುಂಬಿಯು ಪ್ರತಿ ಪತ್ರದಲ್ಲಿಯೂ ಸಾಧ್ಯವಾದರೆ ಪ್ರಕಟಿಸಲಿರುವನು.

೧. ಮತಬೋಧನೆಯ ವಿಚಾರ—ಮಿಶ್ಯನ್ ಶಾಲೆಗಳಲ್ಲಿ ಅವರ ಮತಬೋಧನೆಯು ಹಿಂದೂ ವಿದ್ಯಾರ್ಥಿಗಳಿಗೂ ಕಡ್ಡಾಯವಾಗಿದೆ. ಪ್ರತಿಯೊಬ್ಬನೂ "ಬೈಬಲ್" ಪಾಠಕ್ಕೆ ಹೋಗಲೇಬೇಕೆಂಬ ಒತ್ತಾಯ ವಿದೆ. ಹೆಸರು ಮಿಶ್ಯನ್ ಶಾಲೆಯೆಂದಾದರೂ ಅಲ್ಲಿ ಹಿಂದೂ ವಿದ್ಯಾರ್ಥಿಗಳೇ ಅಧಿಕ. ಮಿಶ್ಯನ್ ಸಂಘದವರು ಶಾಲೆಯನ್ನು ನಡಿಸುವ ಮಾತ್ರಕ್ಕೆ ಅಲ್ಲಿ ಹಿಂದೂ ಮತಬೋಧೆಯನ್ನು ಕೊಡಬಾರದೆಂದಾಗಲೀ ಮಿಶ್ಯನ್ ಮತಬೋಧೆಯನ್ನು ಕೊಡಲೇಬೇಕೆಂದಾಗಲೀ ನಿಯಮವಿಲ್ಲ ವೆಂದು ತೋರುತ್ತದೆ. ಮಿಶ್ಯನ್ ಸ್ಕೂಲುಗಳಲ್ಲಿ ಕನ್ನಡ ಪಂಡಿತರೂ ಸಂಸ್ಕೃತ ಪಂಡಿತರೂ ಹೆಚ್ಚಾಗಿ ಹಿಂದೂಗಳೇ ಆಗಿರುವುದರಿಂದ ಅವರ ಮೂಲಕ ಹಿಂದೂ ವಿದ್ಯಾರ್ಥಿಗಳಿಗೆ ಹಿಂದೂ ಮತಬೋಧನೆಯನ್ನು ಕೊಡಿಸಬಾರದೇಕೆ? ಅಥವಾ "ಬೈಬಲ್"ಗೆ ಹಿಂದೂಗಳು ನಿಲ್ಲಲೇಬೇಕೆಂಬ ನಿರ್ಬಂಧವನ್ನು ತೆಗೆದು ಹಾಕಬಾರದೇಕೆ?

೨. ತಿಂಗಳ ಮಂಗಳ—ಈ ವರ್ಷದ ಗಣಪತಿಯು ಪರಮೋದಾರನು! ಮೋಘರಾಜನು ಹಾಗೆಯೇ ಎನ್ನಬೇಕು! ಕಾಲವು ಕ್ರಮಿಸಿ ಹೋದರೂ ಮೋಘರಾಜನು ಗುಡುಗು ಮಿಂಚುಗಳೊಡನೆ ಗುಡುಗುಡಿಸುತ್ತ ಮಳೆಗರೆಯುತ್ತಲೇ ಇರುವನು. ಮೊದಲಿಂದಲೇ ಪ್ರತಿಭಟಿಸುತ್ತಿರುವ ಒಕ್ಕಲಿಗರು ಈ ಕಾಲಿಂದ ಗೋಳಿಡ್ಡಿಸಿದರೂ ಮೇಘರಾಜನಿಗೆ "ಮುನಿಸಿಪಾಲಿಟಿ"ಗಳು ದೊರಕುತ್ತಲೇ ಇವೆ—ಹೆಚ್ಚಾಗಿ ಕ್ರೈಸ್ [illegible] [illegible]

೩. ತುಳುವ ಮಹಾ ಸಭೆ—ಯು ಸ್ಥಾಪಿತವಾಯಿತಷ್ಟೆ! ಈಗ ಈ ಸಭೆಯವರು ಒಂದು ಪ್ರಕಟನಾ ಪುಸ್ತಕವನ್ನು ಹೊರಡಿಸಿದ್ದಾರೆ. ಅದರ ಮುಖ್ಯ ಭಾಷೆಯು ಕನ್ನಡವಾಗಿರುವುದರಿಂದ ತುಳುವರು ಎಂದರೆ ಯಾರು ಎಂಬ ಪ್ರಶ್ನೆಗೆ ಅದರಲ್ಲಿರುವ ಉತ್ತರವು ವಿಪರ್ಯಾಸವನ್ನುಂಟು ಮಾಡುವಂತಿದ್ದರೂ ಸಭೆಯ ನಿಬಂಧನೆಗಳನ್ನು ತುಳುವಿನಲ್ಲಿ ಪ್ರಕಟಿಸಿದ್ದು ಸ್ವಾಗತವಾಗಿದೆ. ಆದರೆ [illegible] ಮಾತು ಕೇಳಲಿದೆ. [illegible] ಸಾರ್ವಜನಿಕ ತುಳು ಆಗಿದ್ದರೆ ಬರೇ ಕೆಲವು ತುಳುವ ಬ್ರಾಹ್ಮಣರು ಮಾತ್ರ [illegible] ೫,೪೭,೮೨೫ ತುಳುವರಲ್ಲಿ [illegible] [illegible] ತುಳುವ ಬ್ರಾಹ್ಮಣರು [illegible] ಸಾರ್ವಜನಿಕವಾಗಿ [illegible] ತುಳುವನ್ನೇ ಆಡುತ್ತಾರೆ. ಹೀಗಿರುತ್ತ ಕೆಲವೇ ಜನರು ಆಡುವ ಆ ಭಾಷೆಯನ್ನು ಸಾರ್ವಜನಿಕ ಸಭೆಗೆ ಗಂಟುಹಾಕಲಿರುವ ಅಪೂರ್ವ ಸಮಾಚಾರವೇನೋ ತೋರುವುದಿಲ್ಲ. ಮಂಜೇಶ್ವರದ ಅದನ್ನು ಕನ್ನಡ ಕೊಟ್ಟಿದ್ದು ಅಗತ್ಯವಿದೆ. ಅಂಥಾ ಸೂಚನೆಯು ಬಲ್ಲವ, ಬಂಟ [illegible] ಬಂದೀತೆಂತಲೂ ಭಾವಿಸಬಹುದಲ್ಲವೇ?

೪. ಹಾವು ಮುಪ್ಪಾದರೆ ವಿಷ ಮುಪ್ಪೆ?—ಇಲ್ಲಿ ಅನಂತೇಶ್ವರ ಎಂಬುದೊಂದು ಹಿರಿ ಶಾಲೆ ಇದೆ. ಅದು ಎಷ್ಟರಲ್ಲೂ ಇಪ್ಪತ್ತರ ಪಾಠ ಶಾಲೆ. [illegible] "ಶಾಲೆಯನ್ನು ಸ್ವಲ್ಪ ಸುಧಾರಿಸಿಕೊಳ್ಳುವ" ಎಂದು ಹಳೆಯ ವಿದ್ಯಾರ್ಥಿಗಳೊಬ್ಬರ [illegible] ಈ ಹಿಂದಿನ ಪತ್ರಿಕೆಯಲ್ಲಿ ಬಂದಿದ್ದ ಸೂಚನೆ ಆ ಸೂಚನಾ ಕಾಲಕ್ಕೆ ಸರಿಯಾಗಿ ಅಧಿಕಾರಿಗಳ ಹೆಚ್ಚು! ಸೂಚನೆಗೊಂದು ಉತ್ತರ! ಆ ಉತ್ತರವು ಪತ್ರಿಕೆ ಬಂದಲ್ಲಿ—ಅಧಿಕಾರಿಗಳು ಹಾಗೆ ವರ್ತನೆಯಲ್ಲಿ ಶಾಲೆಯು ಮುಚ್ಚಿದ ಮುಹೂರ್ತದಂತೆ ಆಗುವುದು. ಇನ್ನೊಂದು ವಿಷಯ, ಈ ಶಾಲಾ ವಿದ್ಯಾರ್ಥಿಗಳಿಗೂ ಒಂದು ಸಂಘವಾಯಿತಂತೆ. ಸಂಘವು ಆಗಲೇ ಪುಸ್ತಕ ಭಂಡಾರದ ಒಂದು ಮಳಿಗೆಯನ್ನು ಇಟ್ಟಿರುವುದಂತೆ. ಶಾಲೆಯ ಮತ್ತು ಮಕ್ಕಳ ಈ ಹೊಸ ಸಂಘವು ತಂತ್ರದ ಸುಯಿಲನ್ನು ಪ್ರಾರಂಭದಲ್ಲೇ ಬಿಡದೆ ಚಿರಕಾಲ ಬಾಳಿ ಅಭಿವೃದ್ಧಿಯನ್ನು ಪಡೆಯಲೆಂದೂ, ಊರ ಪಂಡಿತರ ಮಹನೀಯರ ಪ್ರೋತ್ಸಾಹವು ಚೆನ್ನಾಗಿ ದೊರಕಲೆಂದೂ ಮಾರಿದುಂಬಿಯ ಆಕಾಂಕ್ಷೆ ಇದೆ.

"ಮಾರಿದುಂಬಿ"

ಮುಂಬಾಯಿಯ ಪತ್ರ.

(ನಮ್ಮ ಸ್ವಂತ ಬಾತ್ಮಿದಾರರಿಂದ)

(೧) ವಾಲುಕೇಶ್ವರದ ಹವಾಮಾನವು ಸ್ವಲ್ಪ ಸಮಾಧಾನ ಸ್ಥಿತಿಯಲ್ಲಿದೆ. ಮಲೇರಿಯಾ ಜ್ವರವು ಜನರನ್ನು ಪೀಡಿಸಿಕೊಂಡಿದೆ. ಬಿಸಿಲು ಜಾಸ್ತಿಯಾಗಿದೆ. ಈಗ ಕೆಲವು ದಿವಸಗಳಿಂದ ಮಳೆಯೇ ಇಲ್ಲ.

(೨) ಮುಂಬಯಿ ಗಿರಣಿಯ ಮುಷ್ಕರಗಾರರೂ, ಗಿರಣಿಯ ಅಧಿಕಾರಿಗಳೂ ಸರಕಾರದ ಕೆಲವು ಅಧಿಕಾರಿಗಳೂ ಕಳೆದವಾರ ಪಾಲು ಭಾಗವೆಂಬಲ್ಲಿ ಸಭೆಸೇರಿ ಮುಷ್ಕರಗಾರರ ಶರ್ತದ ಪ್ರಕಾರ ಕೇಳಿದಾ ಕೂಲಿಯನ್ನು, ಕಮಿಷನನ್ನು ಗಿರಣಿಯ ಅಧಿಕಾರಿಗಳು ಒಪ್ಪಿ ಇತ್ತಂಡ ದವರಿಗೂ ರಾಜಿಯಾಯಿತು. ತಾ. ೮—೧೦—೧೯೩೮ನೇ ಸೋಮವಾರ ದಿಂದ ಮುಂಬಯಿ ನಗರದಲ್ಲಿ ಮುಷ್ಕರಗಳ ಸಂಭಂದ ಮುಚ್ಚಲ್ಪಟ್ಟ ಗಿರಣಿಗಳೆಲ್ಲವೂ ತೆರೆಯಲ್ಪಟ್ಟವು. ಕೂಲಿಕಾರರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಮುಂಚಿನಂತೆಯೇ ತಂತಮ್ಮ ಕೆಲಸಕ್ಕೆ ಹೋಗುತ್ತಿದ್ದಾರೆ. ಮುಷ್ಕರಗಳ ಸಮಯ ಊರಿಗೆ ತೆರಳಿದ ಕೂಲಿಕಾರರಿಗೆ ವಾಪಾಸು ಬಂದು ಕೆಲಸಕ್ಕೆ ಸೇರುವರೆ ಗಿರಣಿಯ ಮಾಲೀಕರು ತಂತಿ ಕೊಟ್ಟಿದ್ದಾರೆ. ಅಂತೂ ಸರಕಾರದ ಬಹುಕಾಲದ ಪ್ರಯತ್ನದಿಂದ ಗಿರಣಿಯ ಮುಷ್ಕರವನ್ನು ಕೊನೆಗಾಣಿಸಿದ್ದಕ್ಕಾಗಿ ಸರಕಾರಕ್ಕೆ ನಮ್ಮ ವಂದನೆಗಳು.

(೩) ವಾಲುಕೇಶ್ವರದಲ್ಲಿ ಪತ್ರಿಕೆಗಳನ್ನು ತರಿಸಲಿಕ್ಕೆ ಆಶಕ್ತರಾದ ವರಿಗಾಗಿಯೇ ಬಾಬು ಪೊಡಮ್ಮದೇವನ ಅಟಾಕಿಯಿಂದಲೇ ಚಂದಾದಾರಿಗೆ ಬರುವ ಸ್ವದೇಶಾಭಿಮಾನಿ, ಮತ್ತು ವಿಶ್ವಕರ್ನಾಟಕ, ಮತ್ತಿತರ ಕೆಲವು ಪತ್ರಿಕೆಗಳು. ಬರದ ದಿವಸ ಮಾಯವಾಗುವುದು ಕೋಟೆಯ ತದನಂತರ ಮಧ್ಯಾಹ್ನವಾಗಲಿ ಮರುದಿವಸ ಆಗಲಿ ಪತ್ರಿಕೆಯು ಕೇವರು ತೆಗೆದ ಕೈಗೆ ಸಿಕ್ಕುವುದು ಆಶ್ಚರ್ಯಕರ.

(೪) ಭಾನುಗಂಗಾ ತೀರದಿಂದ ವಾಲುಕೇಶ್ವರದ ದಾರಿ ರಸ್ತೆಗೆ ಬರಬೇಕಾದರೆ ಎಂಭತ್ತರ ಮೆಟ್ಟುಗಳು ಇದ್ದು ನಮ್ಮ ಕಾರಂಜಿಗಳಿದ್ದ ಹತ್ತಿರದಾಗೆ ಮೆಟ್ಟು ಹತ್ತಿಕೊಂಡು ಮೇಲಕ್ಕೆ ಇಳಿದುಕೊಂಡು ಕೆಳಕ್ಕೂ ಬರಬೇಕಿತ್ತು. ಈ ರಸ್ತೆಯು ಮುನಿಸಿಪಾಲಿಟಿಗೆ ಸೇರಿದ್ದರೂ ಪುರಾತನ ದಿಂದ ಹೀಗೆಯೇ ಇತ್ತು. ಆದರೆ ಮುನಿಸಿಪಾಲಿಟಿಯವರು ಈಗ ವಾಲು ಕೇಶ್ವರದ [illegible] ರಸ್ತೆಯನ್ನು ಸೀದಾ ಲೆವಲ್ ಮಾಡಿ ಭಾನುಗಂಗಾ ತೀರದವರೆಗೂ ಕೆಳಗೆ ಹೋಗಬೇಕೆಂದು ಮೆಟ್ಟುಗಳನ್ನು ಹೊಡೆದು ಹಾಕಿ ತೆಗೆದು ಬಿಡಬೇಕಾಗಿಯೂ ಇದಕ್ಕಾಗಿ ಮೂವತ್ತೆರಡು ಸಾವಿರ ರೂಪಾಯಿ ಸಂಕಲ್ಪವಾಗಿ ಮಾಡಿದ್ದಾರೆ. ಈಗಾಗಲೇ ¼ ಅಂಶ ಕೆಲಸವು ಆಗಿದೆ. (ಪ್ರಾರಂಭವಾಗಿ) ಮುನಿಸಿಪಾಲಿಟಿಯವರು ಈ ಕಡೆಗೆ ತಮ್ಮ ಲಕ್ಷ್ಯವನ್ನು ಕೊಟ್ಟಿದಕ್ಕಾಗಿ ವಂದನೆಗಳು.

(೫) ಭಾನುಗಂಗಾ ತೀರದಲ್ಲಿರುವ ಧರ್ಮ ಛತ್ರದ ಚಾವಡಿಯಲ್ಲಿ ಶಾಂತಿ ಮಠ ಸೇರಿಯಲ್ಲಿ ಈಗ ಕೆಲವು ದಿವಸಗಳಿಂದ ಶ್ರೀ [illegible] ನಾಟಕ ಮಂಡಳಿಯವರು ತಮ್ಮ ಅನುಭವದ, ರಾಮಲೀಲಾ, [illegible] ಲೀಲಾ, ಇನ್ನು ಅನೇಕ ನಮೂನೆಯ ನಾಟಕಗಳನ್ನು ಆಡಲಿಕ್ಕೆ ಪ್ರಾರಂಭ ವಾಗಿದೆ. ನಾಟಕ ಕಲೆಯಲ್ಲಿ ಹಿಂದುಸ್ತಾನಿ ಭಾಷೆಯ [illegible] ಆಡುವುದರಲ್ಲಿ ಇವರು ಅರುವನ್ನು ಪಡೆದಿರುತ್ತಾರೆ. [illegible] ಪ್ರೋತ್ಸಾಹ ಕೊಡುತ್ತಲಿದ್ದಾರೆ. ಟಿಕೇಟು ವಿಕ್ರಯದ [illegible] ದಿನ ಒಂದಕ್ಕೆ ಅರುವತ್ತು ರೂಪಾಯಿ ಮಾತ್ರ [illegible]

(೬) ತಾರೀಕು ೪ನೇ ಮಂಗಳವಾರ ರಾತ್ರಿ [illegible] ಮೆಂಟ್ ಹೌಸ್ ಗೇಟಿಗೆ ಶುಮಾರು ಎರಡು [illegible] (V 9169) ನೇ ಮೋಟಾರ ಕಾರು ಮಲಬಾರಹಿಲ್ [illegible] ಕೇಶ್ವರಕ್ಕೆ ವೇಗದಿಂದ ಓಡಿಸಿಕೊಂಡು ಬರುವುದರಿಂದ [illegible] ಅಜಾಗರೂಕತೆಯಿಂದಲೋ ಕಾರು ಅಡಿಮೇಲಾಗಿ [illegible] ಕಣಿಯಲ್ಲಿ ಬಿದ್ದು ಬಿಟ್ಟಿತು. ಕಾರಿನಲ್ಲಿ ಜನರಿದ್ದ [illegible] ವೇನೂ ಸಂಭವಿಸಲಿಲ್ಲ. ಡ್ರೈವರನಿಗೆ ಸ್ವಲ್ಪ [illegible]

ತಾ. ೧೧—೧೦—೩೮ [illegible]

ಇಂಟರ್ ನೇಶನಲ್ ಹಾರ್ವೆಸ್ಟರ್

ಕಲ್ಟಿವೇಟರ್

ಉಳುವುದಕ್ಕೆ ಅಗತ್ಯವಾದ ಮತ್ತು ಹೆಸರು ಹೊಂದಿದ ಯಂತ್ರವು. ಮುಖ್ಯತಃ, ಕಬ್ಬು, ನೆಲಗಡಲೆ, ಹತ್ತಿ ಮೊದಲಾದುವುಗಳಿಗೂ, ತೋಟಗಳಿಗೂ, ಉಪವನಗಳಿಗೂ, ಉಪಯುಕ್ತವಾದುದು.

ಸುಲಭ ರೀತಿಯಲ್ಲಿ ಉಪಯೋಗಿಸುವ ಸೂಕ್ಷ್ಮನ ಗುಣವಾಗಿ ರಚಿಸಲ್ಪಟ್ಟಿವೆ.
ಒಂದು ಜೋಡು ಸಣ್ಣ ಎತ್ತುಗಳಿಂದಾದರೂ ಸುಲಭವಾಗಿ ಎಳೆಯಲ್ಪಡುವುದು.

ಇತರ ಮಾಹಿತಿಗೆ ಕೆಳಗಿನ [illegible]

VOLKART ENGINEERS

[illegible] ಇವೆ.

MADRAS.

ಕರ್ನಾಟಕ ಎಗ್ಯೂ ಮಿಕ್ಸ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್ಫ್ಲುಯಂಝಾ, ಬಹು ದಿನದ ಜ್ವರ, ಹಾಡಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ ಜಿವರು ಬಂದು, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧-೪-೦, ಸಣ್ಣದಕ್ಕೆ ೦-೧೪-೦.

ಎಲ್ಲ ಕಡೆಗೂ ಔಷಧವನ್ನು ಮಾರುವಗೋಸ್ಕರ ಏಜಂಟರು ಬೇಕಾಗಿದ್ದಾರೆ!

ಏಜಂಟರು
ದಿ ಊಲನ್ ಮಾರ್ಟ್, ಮಂಗಳೂರು. | ಕರ್ನಾಟಕ ಬ್ರದರ್ಸ್, ಗಿರಿಗಾಂವ, ಮುಂಬಯಿ.

ಮಿತವಾದ ಬೆಲೆಗೆ ಅತ್ಯುತ್ತಮವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.



ಬಾಡಿಗೆಗೆ ಕೊಡಲ್ಪಡುವ ... ಕ್ಯಾಂಡಲ್ ... ಕೈಟುಗಳ, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ... 200 ... 40 ಕ್ಯಾಂಡಲ್ ... ಪ್ರತಿ ಒಬ್ಬರ ... ಕ್ಯಾಂಡಲ್ ... ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ... ಗುಂಡಿಗಳು, ... ಎಲೆಕ್ಟ್ರಿಕ್ ...

... ಎ. ಆರ್. ಖಲೀಲ್,
... ನಗರ್ತಪೇಟೆ, ಬೆಂಗಳೂರು. ಸಿಟಿ
18-11-27)

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೆಡಿಸುವ ... ದಿಂದ ನಿಮಗೆ ಬರುವ ... ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ... ತಪ್ಪಿಸುವದು. ... ವದು. ಅನೇಕರಿಗೆ ನಮ್ಮ ... ಮಾಡಿರುತ್ತದೆ.

೧ನೇ ನಂಬ್ರ ... ರೂಪಾಯಿ ೨ನೇ ನಂಬ್ರ ... ರೂಪಾಯಿ, ೩ನೇ ನಂಬ್ರ ... ರೂ. ಸ್ಪೆಷಲ್ ... ರೂಪಾಯಿ ... ರೂಪಾಯಿ ವರೆಗೆ. ... ಬರೆದವರಿಗೆ ತಮಗೆ ತಿಳಿಸುವೆವು. ...

ಶಿವರಾಮ ಭಟ್ಟ ತೆಂಗಿನಮನೆ,
ಸಳ್ಳೆಬೈಲ್ ... ಕಡೂರ್ ಡಿಸ್ಟ್ರಿಕ್ಟ್

Batliwalla's Preparations Cover All Your Needs.
A NAME THAT MERIT HAS MADE FAMOUS.

ಆಳ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಝಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ... ಮಲೇರಿಯಾ ಜ್ವರ ನಿವಾರಕ. ರೂ. ೧.
ಬಾಟ್ಲಿವಾಲರ ಬಾಲಾಮೃತ — ... ಔಷಧ ...
ಬಾಟ್ಲಿವಾಲರ ... ಔಷಧ ...
ಬಾಟ್ಲಿವಾಲರ ... ಔಷಧ ...
ಬಾಟ್ಲಿವಾಲರ ... ಬಾಟ್ಲಿಯಲ್ಲಿ ೧೦೦ ...
ಬಾಟ್ಲಿವಾಲರ ... ರೂ. ೧-೩-೦. ರೂ. ... ೧-೧೨-೦.
ಬಾಟ್ಲಿವಾಲರ ... ಔಷಧ. ರೂ. ೦-೬-೦
ಬಾಟ್ಲಿವಾಲರ ... ರೂ. ೦-೬-೦. LIBERAL DISCOUNT TO TRADE

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ.
ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್
Sayani Road. P. O. Cadell Road. Bombay. No. 14.

ಕೇಸರಿಯ ಪ್ರದರಾಂತಕ

ಗರ್ಭಾಶಯ ರೋಗನಿವಾರಣ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ... ಔಷಧವು. ಈ ದಿವ್ಯೌಷಧವನ್ನು ಕೆಲವರು ... ಕೆಲವರು ... ಆಭರಣ'ವೆಂದೂ, ... ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧವನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ ... ಸೇವಿಸಲು ಯೋಗ್ಯವಾಗಿದೆ.

... ಪಿತ್ತಾಶಯಬಾಧೆ ಮೊದಲಾದ ಗರ್ಭಾಶಯ ರೋಗಗಳು, ... ಸೊಂಟನೋವು, ಕಾಲುಸೆಳೆತ, ... ನಿಶ್ಶೇಷವಾಗಿ ... ವುವು.

ಈ ಔಷಧವು ... ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— **ಕೇಸರೀ ಕುಟೀರಂ,**

TELEGRAMS:—"KESARI" ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

...-1-'27 ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.



ಜಗತ್ಪ್ರಸಿದ್ಧವಾದ "ಜಿಗ್-ಜಿಗ್" ಗಡಿಯಾರ
ಸೈಜು 8×4½ ಇಂಚುಗಳು ರೂಪಾಯಿ 3—0—0
...
ರೂಪಾಯಿ 8—0—0
...

ಫ್ಯಾನ್ಸಿ ಲೀವರ್ ಪಾಕೆಟ್ ವಾಚ್

(15 ಬಹುಮಾನಗಳ ಸಹಿತ ರೂ. 4—8—0)

ಈ ಗಡಿಯಾರವು ... ಪ್ರತ್ಯೇಕವಾಗಿ ತಯಾರಿಸಲ್ಪಟ್ಟಿದೆ.



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ... ತಯಾರಿಸಿ, ... ಚಿತ್ರಕೆಲಸ ಮಾಡಲ್ಪಟ್ಟಿರುವುದು. ಮತ್ತು ಒಳಗಡೆ ... ಗಿಲ್ಟ್ ... ಮಾಡಿರುವದು. ... ಗ್ಲಾಸ್ ... ಇರುವದು. ... ಕಾಲವನ್ನು ತೋರಿಸು ... ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ... ಈ ಗಡಿಯಾರವು ಲೋಕಪ್ರಸಿದ್ಧಿಯಾಗುವಹಾಗೆ ... ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ:- ಫೌಂಟನ್ ಪೇನಾ 1, ... ಬಾಟಲ್ 1, ... ಗುಂಡಿಗಳು 4, ಪಾಕೆಟ್ ... ಗಡಿಯಾರದ ಸರಪಣಿ 1, ... ಪೇನಾ ಕತ್ತಿ 1, ರೋಲ್ಡ್ ಗೋಲ್ಡ್ ಭಂಗಾರದ ಉಂಗುರ 1, ರೋಲ್ಡ್ ಗೋಲ್ಡ್ ಭಂಗಾರದ ... ಹಾರ 1, ... 1, ಈ 15 ಬಹುಮಾನಗಳು ... 3 ವರ್ಷ ಗ್ಯಾರಂಟಿ ಸಹಿತ

ಗಡಿಯಾರದ ... ಕ್ರಯ ರೂ. 4—8—0

THE ENGLISH EMPORIUM,
P. O. box 305 MADRAS.

[illegible] ಸಂಘ್ಯೋತಿಗಳಲ್ಲಿ ನಡೆದ [illegible] ವಿದ್ಯಾರ್ಥಿಗಳಿಗೆ ಅಧ್ಯಕ್ಷರು ಬಹುಮಾನಗಳನ್ನು [illegible] ಹಾರ್ದಿಕವಾದ ಸಭೆಗಳಲ್ಲಿಟ್ಟರೂ ಶಾಲಾ [illegible] ದಾಸ ಕಮ್ಮಿಯವರು ಶಾಲೆಯ ಮೇಲ್ಮೆಯ [illegible]

[illegible] ಅಧ್ಯಕ್ಷರು ಶಾಲಾ ಮಕ್ಕಳಿಗೆ ಈ ಶಾಲೆಯಿಂದ [illegible] ಅನೇಕ ಬುದ್ಧಿವಾದದ ಮಾತುಗಳಿಂದ [illegible] ಶಾಲಾಭಿವೃದ್ಧಿಗಾಗಿ ತನ್ನ ತನುಮನ [illegible] ಶಾಲಾ ಮುಖ್ಯೋಪಾಧ್ಯಾಯರನ್ನು ಅವರ [illegible] ಯೋಗ್ಯರೀತಿಯಲ್ಲಿ ಹೊಗಳಿ ತಮ್ಮ [illegible] ಭಾಷಣವನ್ನು ಕೊನೆಗೊಳಿಸಿದರು.

[illegible] ಈ ಶಾಲಾ ವಿದ್ಯಾರ್ಥಿಗಳಿಂದ "ಚಂದ್ರಹಾಸಾಭ್ಯುದಯ" [illegible] ಮನಮೋಹಕವಾದ ರೀತಿಯಲ್ಲಿ ಅಭಿನಯ [illegible] ದಿನ ರಾತ್ರಿ ಈ ಶಾಲೆಯಲ್ಲಿ ಊರ ಸಜ್ಜನರ [illegible] ವೈಭವದ ಶತಾಬ್ದ ನಡೆಯಿತು.

ಉಡುಪಿ:— ತಾ. ೧೯—೧೦. ರಂದು ಮೂಲಾ ನಕ್ಷತ್ರದ [illegible] ಅನಂತೇಶ್ವರ ಶಾಲಾ ವಿದ್ಯಾರ್ಥಿಗಳು ರಾ| ಲಕ್ಷ್ಮೀನಾ[illegible] ತಾತ್ಕಾಲಿಕ ಉತ್ಸಾಹ ಪ್ರೋತ್ಸಾಹಗಳಿಂದ, ಅದರಂತೆ [illegible] ಶ್ರೀ ಎಮ್. ವೆಂಕಟಪ್ಪಾಚಾರ್ಯರವರ ಅಧ್ಯಕ್ಷತೆ [illegible] ಒಂದು [illegible] ಸಂಘವನ್ನು ಸ್ಥಾಪಿಸಿಕೊಂಡಿರುವರು. ವಿದ್ಯಾರ್ಥಿಗ[illegible] ಪುಸ್ತಕ ಭಂಡಾರವನ್ನು [illegible] ಉದ್ದೇಶವು [illegible]

[illegible] ಶ್ರೀ ನಾರಾಯಣರಾಯರು ಅಧ್ಯಕ್ಷರಾಗಿ [illegible] ಸಂಘ [illegible] ಭಾಷಣವಾದ ಮೇಲೆ ಸಭೆಯ ಅಧ್ಯಕ್ಷರಿಂದ [illegible] ಮಕ್ಕಳಿಗೆ ತಿಂಡಿಯನ್ನು ಹಂಚಿಸಿದ ರಾ| ಸಕ್ಕರೆ [illegible] ಮಂಗಳಗೀತದೊಂದಿಗೆ ಸಭೆಯು [illegible] ವಿದ್ಯಾರ್ಥಿ ಸಂಘವು [illegible] ಬಯಸುತ್ತೇವೆ.

ವಿಟ್ಲ:—"ಜನಮರುಳೋ? ಜಾತ್ರೆ ಮರುಳೋ" ಎಂಬ [illegible] ಮಾತು, ಅಲ್ಲದಿದ್ದರೆ ೧೧ ನೆಯ [illegible] ನಾಟಕ [illegible] ಹುಲಿಯ [illegible] ಶಾಲೆಯಿಂದ ದಾಸ್ತಿನಲ್ಲಿ, [illegible] ಈ ದಿನ [illegible] ಎಲ್ಲರಿಗೂ [illegible]

[illegible] ರಿಂದ ೧೨ ರ ತನಕ [illegible] ಶಾರದಾ ಪೂಜೆಯು [illegible] ಮಕ್ಕಳಿಗೂ [illegible] ಸಮರ್ಪಿಸಲಾಯಿತು.

[illegible] ಶ್ರೀ ಮಹಮ್ಮದ್ [illegible] ಕರ್ನಾಟಕ ಪಂಡಿತ, ಶ್ರೀಯುತ ವೆಂಕಟರಾಮ [illegible] ಯಕ್ಷಗಾನ, [illegible] "ಸೇತುಬಂಧನ ಪ್ರಸಂಗವು" [illegible] ಪ್ರಾರಂಭಿಸಲ್ಪಟ್ಟಿತು. ಪ್ರಸ್ಥೇಕಸ್ತ [illegible] (Platform) ದಲ್ಲಿ [illegible] ಶ್ರೀ [illegible] ಭಾಗವತರು [illegible] ಶ್ರೀಯುತ [illegible] ಶಾಸ್ತ್ರಿಗಳವರು [illegible] ಶ್ರೀ [illegible] ಹೆಗ್ಗಡೆಯವರ [illegible] ಪಾತ್ರಗಳನ್ನು [illegible] ಸುಬ್ಬರಾಯರು [illegible] ಮಹನೀಯರು [illegible] ಮನಸ್ಸನ್ನು ಸೂರೆಗೊಳಿಸಿದರು.

ಶ್ರೀ ರಾಮನ ಸೇತುಬಂಧನ ಕಾರ್ಯವು ಮುಗಿದ ಮೇಲೆ, ಶ್ರೀಯುತ [illegible] ಶಾಸ್ತ್ರಿಗಳವರು ಸಮಯೋಚಿತ ಭಾಷಣಗಳ ಮೂಲಕ, [illegible] ಶ್ರೀ [illegible] ಮ. ರಾ. [illegible] ಅಧ್ಯಕ್ಷರಾದವರ ಸಂಕಲ್ಪದಂತೆ ಅವರು [illegible] ಒಂದು [illegible] ಅರ್ಪಿಸಿದ ಮೇಲೆ, [illegible] ಮಂಗಳದೊಂದಿಗೆ [illegible] ಮುಕ್ತಾಯವಾಗಿ [illegible]

[illegible] ದೇವಸ್ಥಾನದ [illegible] ರಿಂದ [illegible] ವರೆಗಿನ [illegible] ಈ ಸಂಚಿಕೆಯ ಪುರವಣಿಯಾಗಿ [illegible]

ಉಡುಪಿಯ ವಿಶೇಷ ಪತ್ರ.

ಸ್ವದೇಶಾ—[illegible] ಬೋಧಿಸುವುದರಿಂದ [illegible] ವಿದ್ಯಾರ್ಥಿಗಳಿಗೆ [illegible] ಹಿಂದೂಗಳಿಗೆ [illegible] ಪ್ರಕಟಿಸು [illegible] ವಿಚಾರ [illegible] ದೊರಕೀತು ಎಂದು [illegible]

ಮಾತಗಳಿಂದ ಕುತೂಹಲವಿದೆಯಾದುದರಿಂದ ಅಂಥಾ ಒಂದೆರಡು ವಿಷಯಗಳನ್ನು ಮರಿದುಂಬಿಯು ಪ್ರತಿ ಪತ್ರದಲ್ಲಿಯೂ ಸಾಧ್ಯವಾದರೆ ಪ್ರಕಟಿಸಲಿರುವನು.

೧. ಮತಬೋಧನೆಯ ವಿಚಾರ—ಮಿಶ್ಯನ್ ಶಾಲೆಗಳಲ್ಲಿ ಅವರ ಮತಬೋಧನೆಯು ಹಿಂದೂ ವಿದ್ಯಾರ್ಥಿಗಳಿಗೂ ಕಡ್ಡಾಯವಾಗಿದೆ. ಪ್ರತಿಯೊಬ್ಬನೂ "ಬೈಬಲ್" ಪಾಠಕ್ಕೆ ಹೋಗಲೇಬೇಕೆಂಬ ಒತ್ತಾಯ ಇದೆ. ಹೆಸರು ಮಿಶ್ಯನ್ ಶಾಲೆಯೆಂದಾದರೂ ಅಲ್ಲಿ ಹಿಂದೂ ವಿದ್ಯಾರ್ಥಿಗಳೇ ಅಧಿಕ. ಮಿಶ್ಯನ್ ಸಂಘದವರು ಶಾಲೆಯನ್ನು ನಡಿಸುವ ಮಾತ್ರಕ್ಕೆ ಅಲ್ಲಿ ಹಿಂದೂ ಮತಬೋಧೆಯನ್ನು ಕೊಡಬಾರದೆಂದಾಗಲೀ ಮಿಶ್ಯನ್ ಮತಬೋಧೆಯನ್ನು ಕೊಡಲೇಬೇಕೆಂದಾಗಲೀ ನಿಯಮವಿಲ್ಲ ವೆಂದು ತೋರುತ್ತದೆ. ಮಿಶ್ಯನ್ ಸ್ಕೂಲುಗಳಲ್ಲಿ ಕನ್ನಡ ಪಂಡಿತರೂ ಸಂಸ್ಕೃತ ಪಂಡಿತರೂ ಹೆಚ್ಚಾಗಿ ಹಿಂದೂಗಳೇ ಆಗಿರುವುದರಿಂದ ಅವರ ಮೂಲಕ ಹಿಂದೂ ವಿದ್ಯಾರ್ಥಿಗಳಿಗೆ ಹಿಂದೂ ಮತಬೋಧನೆಯನ್ನು ಕೊಡಿಸಬಾರದೇಕೆ? ಅಥವಾ "ಬೈಬಲ್"ಗೆ ಹಿಂದೂಗಳು ಸಿಲ್ಲಲೇಬೇಕೆಂಬ ನಿರ್ಬಂಧವನ್ನು ತೆಗೆಸಬಾರದೇಕೆ?

೨. ತಿರುಗೆ ಮಂಗ—ಈ ವರ್ಷದ ಗಣಪತಿಯ ಪರವೋದಾರನು! ಮೋಘಾಬನು ಹಾಗೆಯೇ ಎನ್ನಬೇಕು. ಕಾಲವು ಕಳೆದು ಹೋದರೂ ಮೇಘರಾಜನು ಗುಡುಗು ಮಿಂಚುಗಳೊಡನೆ ಗುಡುಗುಡಿಸುತ್ತ ಮಳೆಗರೆಯುತ್ತಲೇ ಇರುವನು. ಮೊದಲಿಂದಲೇ ವರಿಸಿಸುತ್ತಿರುವ ಒಕ್ಕಲಿಗರು ಈಗ ಹಾಳೆಂದು ಗೋಳಿಡುವವರೂ ಮೇಘರಾಜನಿಗೆ "ಮನಿ ಘೇಂಕ್ಸ್"ಗಳು ದೊರಕುತ್ತಲೇ ಇವೆ—ಹೆಚ್ಚಾಗಿ ಕೈಸ್ ಮಚೇಂಟ್ಸ್ ಗಳಿಂದ!

೩. ತುಳುವ ಮಹಾ ಸಭೆ—ಯು ಸ್ಥಾಪಿತವಾಯಿತಷ್ಟೆ! ಈಗ ಈ ಸಭೆಯವರು ಒಂದು ಪ್ರಕಟಣಾ ಪುಸ್ತಕವನ್ನು ಹೊರಡಿಸಿದ್ದಾರೆ. ಅದರ ಮುಖ್ಯ ಭಾಷೆಯು ಕನ್ನಡವಾಗಿರುವುದರಿಂದ ತುಳುವರು ಎಂದರೆ ಯಾರು ಎಂಬ ಪ್ರಶ್ನೆಗೆ ಅದರಲ್ಲಿರುವ ಉತ್ತರವು ವಿಷಯಾಸವನ್ನುಂಟು ಮಾಡುವಂತಿದ್ದರೂ ಸಭೆಯ ನಿಬಂಧನೆಗಳನ್ನು ತುಳುವಿನಲ್ಲಿ ಪ್ರಕಟಿಸಿದ್ದು ನ್ಯಾಯವಾಗಿದೆ. ಆದರೆ ಇಲ್ಲೊಂದು ವಿಷಯ ಹೇಳಬೇಕು. ಅದು ಸಾರ್ವಜನಿಕ ತುಳು ಆಗಿರದೆ ಬರೀ ಕೆಲವು ತುಳುವ ಬ್ರಾಹ್ಮಣರು ಮಾತ್ರ ಆಡುವುದಾಗಿದೆ. ೫,೪೪,೮೦೫ ತುಳುವರಲ್ಲಿ ೪೫,೨೦೮ ರಷ್ಟು ಮಾತ್ರ ತುಳುವ ಬ್ರಾಹ್ಮಣರಿರುತ್ತಾರೆ. ಇವರು ಸಹ ಸಾರ್ವಜನಿಕವಾಗಿ ಸಾಧಾರಣ ತುಳುವನ್ನೇ ಆಡುತ್ತಾರೆ. ಹೀಗಿರುತ್ತ ಕೆಲವೇ ಜನರು ಆಡುವ ಆ ಭಾಷೆಯನ್ನು ಸಾರ್ವಜನಿಕ ಸಭೆಗೆ ಗಂಟು ಹಾಕಲಿಕ್ಕೆ ಅವಕಾಶ ಸಮಂಜಸವೆಂದು ತೋರುವುದಿಲ್ಲ. ಮುಂದಿನ್ನಾದರೂ ಇದನ್ನು ತಿದ್ದಿಕೊಳ್ಳುವುದು ಅಗತ್ಯವಿದೆ. ಇಂಥಾ ಸೂಚನೆಯು ಬಿಲ್ಲವ, ಬಂಟ ಮೊದಲಾದವರಿಂದ ಬಂದೀತೆಂಬುದೂ ಭಾವಿಸಬಹುದಲ್ಲವೇ?

೪. ಹಾವು ಮಿಸುಕಿದರೆ ವಿಷ ಏರೀತು!—ಇಲ್ಲಿ ಅನಂತೇಶ್ವರ ಎಂಬದೊಂದು ಮಿಡಿ ಶಾಲೆ ಇದೆ. ಅದು ಎಷ್ಟರವರೆಗೆ ಅಪ್ರಾಪ್ತ ನವ ಯುವಕರ ನೋಟಕ್ಕೆ ಮಾತಲಾದ ವಂತಿದೆ "ಶಾಲೆಯನ್ನು ಸ್ವಲ್ಪ ಸುಧಾರಿಸಿಕೊಳ್ಳಿರಪ್ಪ" ಎಂದು ಹಳೆಯ ವಿದ್ಯಾರ್ಥಿಗಳೊಬ್ಬರ ಬರವಣಿಗೆ! ಈ ಉಡುಪಿ ಪತ್ರಿಕೆಯಲ್ಲಿ ಬಂದಿದ್ದು ಸೂಚನೆ ಆ ಸೂಚನಾ ಕಾಲಕ್ಕೆ ಸರಿಯಾಗಿ ಅಧಿಕಾರಿಗಳ ಹೆಚ್ಚು ಸೂಚನೆಗೊಂಡು ಉತ್ತರ ಆ ಉತ್ತರವು ಪತ್ರದ ಬಂದಲ್ಲಿ—ಶಾಲಾಧಿಕಾರಿಗಳು ಹಾಗೆ ವರ್ತಿಸಿದಲ್ಲಿ ಶಾಲೆಯು ಮುಟ್ಟಿನ ಯುವಕರಂತೆ ಆಗುವುದು. ಇನ್ನೊಂದು ಮಾತು, ಈ ಶಾಲಾ ವಿದ್ಯಾರ್ಥಿಗಳಿಗೂ ಒಂದು ಸಂಘವಾಯಿತಂತೆ. ಸಂಘವು ಆಗಲೇ ಪುಸ್ತಕ ಭಂಡಾರವನ್ನು ಒಂದು ಮಾಡಿಯನ್ನು ಕಟ್ಟುವುದಂತೆ. ಶಾಲೆಯ ಮರಿ ಮಕ್ಕಳ ಈ ಮರಿ ಸಂಘವು ಅಂಕುರ ರೂಪದಲ್ಲಿ ಪ್ರಾರಂಭವಲ್ಲೇ ಬಾಡದೆ ಚಿರಕಾಲ ಬಾಳಿ ಅಭಿವೃದ್ಧಿಯನ್ನು ಹೊಂದಲೆಂದೂ, ಊರ ಪರಸ್ಥಾರ ಮಹನೀಯರ ಪ್ರೋತ್ಸಾಹವು ಬೇಕಾಗಿ ದೊರಕಲೆಂದೂ ಮರಿದುಂಬಿಯ ಆಕಾಂಕ್ಷೆ ಇದೆ.

"ಮರಿದುಂಬಿ"

ಮುಂಬಾಯಿಯ ಪತ್ರ.

(ನಮ್ಮ ಸ್ವಂತ ಬಾತ್ಮೀದಾರರಿಂದ)

(೧) ಮಾಲುಕೇಶ್ವರದ ಹವಾಮಾನವು ಸ್ವಲ್ಪ ಸಮಾಧಾನ ಸ್ಥಿತಿಯಲ್ಲಿದೆ. ಮಲೇರಿಯಾ ಜ್ವರವು ಜನರನ್ನು ಪೀಡಿಸಿಕೊಂಡಿದೆ. ಬಿಸಿಲು ಜಾಸ್ತಿಯಾಗಿದೆ. ಈಗ ಕೆಲವು ದಿವಸಗಳಿಂದ ಮಳೆಯೇ ಇಲ್ಲ.

(೨) ಮುಂಬಯಿ ಗಿರಣಿಯ ಮುಷ್ಕರಗಾರರೂ, ಗಿರಣಿಯ ಅಧಿಕಾರಿಗಳೂ ಸರಕಾರದ ಕೆಲವು ಅಧಿಕಾರಿಗಳೂ ಕಳೆದವಾರ ಲಾಲು ಭಾಗದಲ್ಲಿ ಸಭೆಸೇರಿ ಮುಷ್ಕರಗಾರರ ಠರಾವ ಪ್ರಕಾರ ತೀರ್ಮಾನವನ್ನು ಕಡಿದುಕೊಂಡಲು ಗಿರಣಿಯ ಅಧಿಕಾರಿಗಳು ಒಪ್ಪಿ ಇತಂದ ಮಲರಿಗೂ ರಾಜಿಯಾಯಿತು. ತಾ ೮—೧೦—೨೮ನೇ ಸೋಮವಾರ ದಿಂದ ಮುಂಬಯಿ ನಗರದಲ್ಲಿ ಮುಷ್ಕರಗಳ ಸಂಬಂಧದ ಮುಚ್ಚಲ್ಪಟ್ಟ ಗಿರಣಿಗಳೆಲ್ಲವೂ ತೆರೆಯಲ್ಪಟ್ಟವು. ಕೂಲಿಕಾರರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಮುಂಚಿನಂತೆಯೇ ತಂಡತಂಡವಾಗಿ ಕೆಲಸಕ್ಕೆ ಹೋಗುತ್ತಿದ್ದಾರೆ. ಮುಷ್ಕರಗಳ ಸಮಯ ಊರಿಗೆ ತೆರಳಿದ ಕೂಲಿಕಾರರಿಗೆ ದಾಖಲಿಸಿ ಬಂದು ಕೆಲಸಕ್ಕೆ ಸೇರುವರೆ ಗಿರಣಿಯ ಮಾಲೀಕರು ತಂತಿಕೊಟ್ಟಿದ್ದಾರೆ. ಅಂತೂ ಸರಕಾರದ ಬಹುತೇಕ ಪ್ರಯತ್ನದಿಂದ ಗಿರಣಿಯ ಮುಷ್ಕರವನ್ನು ಕೊನೆಗಾಣಿಸಿದ್ದಕ್ಕಾಗಿ ಸರಕಾರಕ್ಕೆ ನಮ್ಮ ವಂದನೆಗಳು.

(೩) ಮಾಲುಕೇಶ್ವರದಲ್ಲಿ ಪತ್ರಿಕೆಗಳನ್ನು ತರಿಸಲಿಕ್ಕೆ ಅತಕ್ಕರಾದವರಿಂದಲೋ ಯಾ ಪೋಸ್ಟ್‌ಮನ್‌ನ ಅಚಾತುರ್ಯದಿಂದಲೋ ಚಂದಾದಾರರಿಗೆ ಬರುವ ಸ್ವದೇಶಾಭಿಮಾನಿ, ಮತ್ತು ವಿಶ್ವಕರ್ನಾಟಕ, ವಗೈರೆ ಕೆಲವು ಪತ್ರಿಕೆಗಳು. ಬಂದ ದಿವಸ ಮಾಯವಾಗುವುದು ಶೋಚನೀಯ. ತದನಂತರ ಮಧ್ಯಸ್ಥವಾಗಲಿ ಮರುದಿವಸ ಆಗಲಿ ಪತ್ರಿಕೆಯು ದೊರೆತರೆ ಕೈಗೆ ಸಿಕ್ಕುವುದು ಆಶ್ಚರ್ಯಕರ.

(೪) ಭಾಂಡಗಾಂ ತೀರದಿಂದ ಮಾಲುಕೇಶ್ವರದ ದಾರಿ ರಸ್ತೆಗೆ ಬರಬೇಕಾದರೆ ಎಂಥಸ್ತರ ಮೆಟ್ಟಿಗಳು, ಇದ್ದು ಸದ್ಯ ಕಾರಂಜಗಿತ್ತು ಹತ್ತುವದಕ್ಕಾಗಿ ಮೆಟ್ಟು ಹತ್ತಿಕೊಂಡು ಮೆಲಕ್ಕೆ ಇಳಿದುಕೊಂಡು ಕೆಳಕ್ಕೆ ಬರಬೇಕಿತ್ತು. ಈ ರಸ್ತೆಯ ಮುನಿಸಿಪಾಲಿಟಿಗೆ ಸೇರಿದ್ದರೂ ಪುರಾತನ ದಿಂದ ಹೀಗೆಯೇ ಇತ್ತು. ಆದರೆ ಮುನಿಸಿಪಾಲಿಟಿಯವರು ಈಗ ಮಾಲುಕೇಶ್ವರದ ದಾರಿ ರಸ್ತೆಯನ್ನು ನಿಂದ ಕೆಳಗೆ ಮಾರಿ ಭಾಂಡಗಾಂ ತೀರದವರೆಗೂ ಕೆಳಗೆ ಹೋಗಬೇಕೆಂದೂ ಮೆಟ್ಟಿಲುಗಳನ್ನು ಹೊಡೆದು ಹಾಕಿ ತೆಗೆದು ಬಿಡಬೇಕಾಗಿಯೂ ಇದಕ್ಕಾಗಿ ಮಾಡಿದ್ದರು ಸಾವಿರ ರೂಪಾಯಿ ಖರ್ಚಾಗಿ ಮಾಡಿದ್ದಾರೆ. ಈಗ ಗಟಾರ ಅಂದ ಕೆಲಸವು ಆಗಿದೆ. (ಪ್ರಾರಂಭವಾಗಿ) ಮುನಿಸಿಪಾಲಿಟಿಯವರು ಈ ಕಡೆಗೆ ತಮ್ಮ ಲಕ್ಷವನ್ನು ಕೊಟ್ಟದ್ದಕ್ಕಾಗಿ ವಂದನೆಗಳು.

(೫) ಭಾಂಡಗಾಂ ತೀರದಲ್ಲಿರುವ ರಂಗಭೂಮಿಯ ಬಾಪತಿಯಲ್ಲಿ ಹಾಕಿದ ದೀಪಮಾಲೆ ಈಗ ಕೆಲವು ದಿವಸಗಳಿಂದ ಗುಜರಾತಿ ನಾಟಕ ಮಂಡಳಿಯವರು ತಮ್ಮ ಆಟವನ್ನು ನಡೆಸುತ್ತಾರೆ. ಕೃಷ್ಣಲೀಲಾ ಇನ್ನು ಅನೇಕ ಸದಭಿರುಚಿ ನಾಟಕಗಳನ್ನು ಆಡಲಿಕ್ಕೆ ಪ್ರಾರಂಭವಾಗಿದೆ. ನಾಟಕ ಕಲೆಯಲ್ಲಿ ಹಿಂದುಸ್ಥಾನಿ ಭಾಷೆಯಲ್ಲಿ ನಾಟಕ ಆಡುವದರಲ್ಲಿ ಇವರು ದಿನವನ್ನು ಕಳೆದಿದ್ದಾರೆ. ಮಹಾಜನರು ಪ್ರೋತ್ಸಾಹ ಕೊಡುತ್ತಿದ್ದಾರೆ. ಟಿಕೇಟು ವಿಕ್ರಯದ ಮೌಲ್ಯದ ರೂಪಾಯಿ ದಿನ ಒಂದಕ್ಕೆ ಆದವರೆ ರೂಪಾಯಿ ವರೆಗೆ ಆಗಿದೆ.

(೬) ತಾರೀಕು ೮ನೇ ಮಂಗಳವಾರ ರಾತ್ರಿ ಇಲ್ಲಿಯ ಗವರ್ನರ್ ಬಂಗ್ಲೆ ಗೇಟಿನ ಹೊರಗೆ ಎರಡು ಫರ್ಲಾಂಗ್ ದೂರದಲ್ಲಿ (V 8189) ನಂಬರ ಮೋಟಾರ ಕಾರು ಮಲಬಾರಹಿಲ್ ಕಡೆಯಿಂದ ಮಾಲುಕೇಶ್ವರಕ್ಕೆ ವೇಗದಿಂದ ಬಂದು ಬರುವದರಿಂದಲೋ ಡ್ರೈವರನ ಅಜಾಗರೂಕತೆಯಿಂದಲೋ ಕಾರು ಅಡಿಮೇಲಾಗಿ ಮಗುಚಿಕೊಂಡು ಕೆಳಗೆ ಬಿದ್ದು ಬಿಟ್ಟಿತು. ಕಾರಿನಲ್ಲಿ ಜನರಿಲ್ಲದ್ದರಿಂದ ಪ್ರಾಣಾಪಾಯ ವೇನೂ ಸಂಭವಿಸಲಿಲ್ಲ, ಡ್ರೈವರನಿಗೆ ಸ್ವಲ್ಪ ಪೆಟ್ಟು ಆಗಿದೆ.

ತಾ. ೧೧—೧೦—೨೮

ಮಾಲುಕೇಶ್ವರ ನಿವಾಸಿ.

ಇಂಟರ್ ನೇಶನಲ್ ಹಾರ್ವೆಸ್ಟರ್



ಕಲ್ಟಿವೇಟರ್.

ಉಳುವುದಕ್ಕೆ ಆಗತ್ಯವಾದ ಮತ್ತು ಹೆಸರು ಹೊಂದಿದ ಯಂತ್ರವು. ಮುಖ್ಯತ, ಕಬ್ಬು, ನೆಲಗಡಲೆ, ಹತ್ತಿ ಮೊದಲಾದುವುಗಳಿಗೂ, ತೋಟಗಳಿಗೂ, ಉಪವನಗಳಿಗೂ, ಉಪಯುಕ್ತವಾದುದು.

ಸುಲಭ ರೀತಿಯಲ್ಲಿ ಉಳಲಿಕ್ಕಾಗುವ ನೆಲಕ್ಕನ ಗುಣವಾಗಿ ರಚಿಸಲ್ಪಟ್ಟಿವೆ.
ಒಂದು ಜೋಡು ಸಣ್ಣ ಎತ್ತುಗಳಿಂದಾದರೂ ಸುಲಭವಾಗಿ ಎಳೆಯಲ್ಪಡುವುದು.

ಇದರ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

VOLKART BROS.
ENGINEERS

ಎಲ್ಲಾ ತರದ ಕೃಷಿ ಸಾಮಾನುಗಳು ದಾಸ್ತಾನು ಇವೆ.

ARMENIAN STREET, MADRAS.

[illegible] Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

[illegible] **Tel: Conveyance.**

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ-ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು, ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈನರು ಗೇಟಿಗೆ 11-15ಕ್ಕೂ ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಸುಪ್ರಿ [illegible] ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ [illegible] ಸಿದ್ಧವಾಗಿರುವ ಟ್ರೈನಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನೂರು [illegible] ಇಲ್ಲದೆ ಸುಲಭವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ [illegible] ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈನರು ಗೇಟಿಗೂ ಸೇರಿ ಅಲ್ಲಿಂದ ಬದಲಿ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಮೂಡಿಗೆರೆ 4 ಘಂಟೆಗೆ ಮೂಡಿಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ವಗೈರೆ [illegible] ಅವಕಾಶವಿರುತ್ತದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮುಖಾಂತರ ಮರುದಿನ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಟಿ. ಎನ್. ಹನುಮಂತಪ್ಪ, ಪ್ಯಾರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD., MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ, ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕರಾವಳಿ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S. K. Mangalore

[illegible]

ಕೆ ಮಾಡಿಸಗಡಗಳು.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ [illegible] ಗಳೂ, ಸಪೋಟಾ, ಬೇರಳೆ, [illegible] ದಾಳಿಂಬ, ಪನ್ನೇರಳೆ ಮುಂತಾದ [illegible] ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟ [illegible] ಎಲ್ಲದೆ ಚೆನ್ನಾಗಿ ಫಲಬಿಡುವವು [illegible] ಗಳು ಕರಾವಳಿ ಹವೆಗೂ ಮಲ್ನಾಡಿಗೂ [illegible] ಬಿಡುವುದಿಲ್ಲ. ಕ್ರಯ ಪಟ್ಟಿಗೆ [illegible] ಬರೆಯಿರಿ. ಗಿಡಗಳು ಮಂಗಳೂರು [illegible] ಯಾಜೆಯವರಲ್ಲಿ ದೊರೆಯುವವು.

ಕೆ. ಮುದ್ದಣ್ಣ ಶೆಟ್ಟಿ, ದಿ. ಕೆನರಾ ನರ್ಸರಿ, ವಿಸಟ್‌ಗಾರ್ಡನ್ಸ್, ಕಾಪು ದ. ಕ. } C/o [illegible] ಕಛೇರಿ, [illegible]

13/028

ಮೈಸೂರು ಸರ್ಕಾರ.

ಶ್ರೀಮಾನ್ ಇವರ ಮೈಸೂರು ದಸರಾ (ವಸ್ತು ಪ್ರದರ್ಶನ) ಸರ್ವವನ್ನು ಪ್ರದರ್ಶನವು ಮೈಸೂರು [illegible] ವಾಯುಮಾಗಿ ಏರ್ಪಡಿಸಿರುವ ಪ್ರದರ್ಶನ ಶಾಲೆಯಲ್ಲಿ [illegible] ಅಕ್ಟೋಬರ ತಿಂಗಳಿನಲ್ಲಿ ಗಿಇರಿಂದ ಜನವರಿ [illegible] ವಿಗೆ ನಡೆಯುವುದು. ಕಲಾಕೌಶಲ್ಯವನ್ನೂ, ಕೃಗಾರಿಕ [illegible] ವಿಷಯಕವಾದ ನೈಪುಣ್ಯವನ್ನೂ ತೋರಿಸುವ ವಸ್ತುಗಳನ್ನೂ, ಮತ್ತು ವ್ಯವಸಾಯೋತ್ಪನ್ನ ವಸ್ತುಗಳನ್ನೂ, ಸಂಪಾದಿಸುವುದಕ್ಕೆ ಸಾಧಕವಾದ ವಸ್ತು ಸಮುದಾಯಗಳನ್ನೂ ಅಗ್ಗ ಪ್ರದರ್ಶಿಸ ಲಾಗುವುದು. ಯಂತ್ರೋಪಕರಣಗಳೇ ಮುಂತಾದವುಗಳಿಂದ ಕೆಲಸ ಮಾಡಿಸಿ ಆ ಕಾಲದಲ್ಲಿ ಜನರಿಗೆ ತೋರಿಸುವುದಕ್ಕೆ ನಿಯ್ಯ ವ್ಯಕ್ತಿಯೇನಾದರೂ ಅಪೇಕ್ಷಿಸಿದ್ದಲ್ಲಿ, ಅದನ್ನು ಮುದ್ರಣಗಿ ಬರೆಗಳಿದರಾಗುವುದು. ಪ್ರಕಟಣೆಯ ಕೆಲಸಕ್ಕೂ [illegible] ರಾಜ್ಯ, ನಾನಾ ವಿಷಯಗಳನ್ನೂ ಪಂಕ್ತೀಲಿಸಿ ತಿಳಿದುಕೊಳ್ಳುವುದಕ್ಕೂ, ಇದು ಒಳ್ಳೆಯ ಸಮಯವಾಗಿದೆ.

ಪ್ರದರ್ಶನದಲ್ಲಿ ತಮ್ಮ ವಸ್ತುಗಳನ್ನಿಡುವುದಕ್ಕೆ ಸ್ಥಳವನ್ನು ಅಪೇಕ್ಷಿಸುವವರೂ ಮತ್ತು ಪ್ರದರ್ಶನದ ವಿಚಾರವಾಗಿ ಇತರ ವಿವರಗಳನ್ನು ತಿಳಿಯಲಪೇಕ್ಷಿಸುವವರೂ ಸಹ, ಮೈಸೂರು ದಸರಾ ಪ್ರದರ್ಶನದ ಸೆಕ್ರೆಟರಿಯವರಿಂದ ಪ್ರಸಿದ್ಧ ಪತ್ರಿಕೆಯನ್ನು (ಪ್ರಾಸ್ಪೆಕ್ಟಸ್) ಪಡೆಯಬಹುದು.

ಕೆ. ಅನಂತಸಾಮಿ ರಾವ್,

ಸೆಕ್ರೆಟರಿ,

ಮೈಸೂರು ದಸರಾ ಎಗ್ಜಿಬಿಷನ್, ಮೈಸೂರು ಸಿಟಿ.

ವಿಟನಂಬು! ಪುಟ್ಟನಾಗು!! ನೆಟ್ಟಗಾಗು!!!

ಮಲೇರಿಯಾನ ಸರ್ವಜ್ವರಸಂಹಾರಿಣಿ

ಯುವಕನೇ ನಿನ್ನ ಬೆಲೆ ಯಾವದರಲ್ಲಿದೆ? ಸೌಮ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ?

ಆರೋಗ್ಯವಿಲ್ಲವೇ? ದೇಹವು ಕ್ಷೀಣವಾಗಿದೆಯೇ? ಮನಸಂತೋಷ ತಪ್ಪಿದೆಯೇ? ಜ್ಞಾಪಕ ಶಕ್ತಿ ಕುಂದಿರುವುದೇ? ಮುಂಗೋಪ ಜಾಸ್ತಿ ಇದೆಯೇ? ಆಲಸ್ಯ ಹೊಂದಿರುವದೇ? ಚುರುಕು ಚಟುವಟಿಕೆ ಇಲ್ಲವೇ? ವ್ಯಾಕುಲತೆಯಿಂದ ಮರುಗುತ್ತೀಯೋ? ಸುಖವಾಗಬೇಕೆಂಬ ಇಚ್ಛೆ ಇದೆಯೇ? ಹಾಗಾದರೆ ಇಗೋ ಬಹು ಗುಣಕರವಾದ ಒಂದೊಂದು ಸಿರಪು ಸಾಧಿಸವನೆಂಬ ಅವ್ಯಕ್ತವನ್ನು ಸೇವಿಸು. [illegible] ಆದ ಲಕ್ಷಣಗಳು ತೀವ್ರಗುಣವಾಗಿ ಬಹು ಆರೋಗ್ಯದ ಶರೀರ ಪುಷ್ಟಿಯು ಉಂಟಾಗಿ ನಿನ್ನ ಬೆಲೆ ಆರೋಗ್ಯವಲ್ಲಿಯೇ ಇದೆಯೆಂದು ನಿನಗೇನೇ ತೋರಿ ಬರುವುದು.

ಕ್ರಯ 3 ಔನ್ಸ್ ಸೀಸೆಗೆ ರೂ. 3—8—0.

ಯುವತಿಯೇ ನಿನ್ನ ಸುಂದರವಾದ ಉಡುಪು ಯಾವುದು? ಅಚ್ಚುಗಟ್ಟಾಗಿ ಹೊಳೆವುವ ನಿನ್ನ ಆರೋಗ್ಯದ ದೇಹವಲ್ಲವೇ?

ದೇಹವು ಅಚ್ಚುಗಟ್ಟಾಗಿಲ್ಲವೆ? ರೂಪಕ್ಕೆ ಕಳೆ ಬಂತೇ? ಮುಖ ಕಳೆಗುಂದಿದೆಯೇ? ಕೈಕಾಲು ಬಚ್ಚುವದೇ? ಎದೆ ನಡುಗುವ ಆಯಾಸ ಉಂಟೋ? ರಕ್ತ ಛಾಯೆ ಇಲ್ಲವೇ? ಅಜೀರ್ಣವಿದೆಯೇ? ಸೊಂಟ ನೋವು ಉಂಟೋ? ತಲೆತಿರುಗಲು ಉರುವುದೇ? ತಲೆನೋವು ಉಂಟೋ? ದೃಷ್ಟಿ ಸರಿಯಿಲ್ಲವೇ? ಕಟ್ಟಳೆ ಅಕ್ರಮವಾಗಿದೆಯೋ? ಆವಾಗ ಉಪದ್ರ ಜಾಸ್ತಿಯೇ ಇವರಿಂದ ಬಿಡುಗಡೆ ಹೊಂದಲು ಇಚ್ಛೆ ಇದೆಯೋ? ಹಾಗಾದರೆ ಗುಪ್ತ ಸೇವಕಿಯಂತಿರುವ ಕಂಪೌಂಡು ಸಿರಪು [illegible] ಅಂಗೀಕರಿಸು. ಈಕೆ ಗುಪ್ತಹಿಂಸೆಯಿಂದ ನಿನ್ನನ್ನು ಬಿಡಿಸಿ ಶರೀರ ಪುಷ್ಟಿಯಾಗುವಂತೆಯೂ ಮುಖಕಳೆಗಳು ಹೊಳೆಯುವಂತೆಯೂ [illegible] ಸಿಗುವಂತೆಯೂ [illegible] ಸಹಾಯವಾಗುವಳು. [illegible] ಆರೋಗ್ಯವುಳ್ಳ ದೇಹವೇ ಹೊಳೆವುವ ನಿನ್ನ ಸುಂದರವಾದ ಉಡುಪಾಗಿ ಎಂದು ನಿನಗೇನೇ ಮನವರಿಕೆಯಾಗುವದು.

ಕ್ರಯ 8 ಔನ್ಸ ಬಾಟ್ಲಿಗೆ ರೂ. 3—[illegible]

ಕಟ್ಟಲಾಗಿಗೆ ಬರೆಯಿರಿ —

ಮಲೇರಿಯಾನ ಕಂಪೆನಿ,

22628 ಮಂಗಳೂರು ದ. ಕ.

f a New
AND
-212
litan six
POLITAN?
land has been
smopolitan six
ground and its
has produced
of its cosmo-
in building and
rs in all parts
It to render s
ice wherever it
equally at home
, desert sand or
beauty makes
where. That is
acter.
Vauxhall Cars,
ANGALORE

plement to this issue

Shri Madanantheshwar Temple, Manjeshwar.

he following Balance Sheets for the years 1922 to 1926 are hereby published for the information of the members of the Goud Saraswat Brahmin Community of the District of South Kanara.

MANJESHWAR,
22nd September 1928.

M. Vaikunta Bhakta,
Managing Trustee

Balance Sheet of Shri Madanantheshwar Temple Manjeshwar as at 16th November 1923.

ಮಂಜೇಶ್ವರ ಶ್ರೀಮದನಂತೇಶ್ವರ ದೇವಸ್ಥಾನದ 1923ನೇ ಇಸವಿ ನವಂಬರ 16ನೇ ದಿನ ಇದ್ದಂತೆ ಬೇಲನ್ಸ್ ಶೀಟು ಯಾನೆ ಶಿಲ್ಕು ಬಾಕಿಯ ಪಟ್ಟಿ.

...s & Liabilities ಫಂಡುಗಳು ವ ಜವಾಬ್ದಾರಿಗಳು	AMOUNT Rs.	A.	P.	AMOUNT Rs.	A.	P.
...eral Fund at the beginning of the year ... ಫಂಡ್ ವರ್ಷಾರಂಭದಲ್ಲಿ ಇದ್ದದ್ದು	5,37,070	4	0			
...d excess receipts as per Income & Expenditure account ...	20,523	8	11	5,57,593	12	11
Funds ಫಂಡುಗಳು						
...Fund ...	20,353	8	6			
...Santharpana Fund ...	18,949	12	6			
...funds ...	9570	0	0	48,872	3	0
...ಸಾಲ				47,443	5	4
[illegible]				500	0	0

Property & Assets ಆಸ್ತಿ ವ ಸೊತ್ತುಗಳು	AMOUNT Rs.	A.	P.	AMOUNT Rs.	A.	P.
Buildings at costs ಕಟ್ಟೋಣಗಳ ಖರೀದಿ ಮೊಬಲಗು	10,1,7[illegible]	0	0			
Additions in the year ವರ್ಷದಲ್ಲಿ ಹೊಸತಾಗಿ ಕಟ್ಟಿದ ಕಟ್ಟೋಣಗಳು	1889	12	6	1,03,[illegible]	[illegible]	6
Furniture at cost ಸಾಮಾನುಗಳ ಖರೀದು ಕ್ರಯದ				77	11	0
Landed property at cost ಆಸ್ತಿ ಖರೀದಿ				1,14,405	[illegible]	7
Investments ಉಡಿಗೆ						
Mortgages ಅಡವು	2,10,078	5	0			
Usufructuary mortgages ಒಳುವಾರು	52,082	13	10			
Personal bonds ವ್ಯಸಾಲ	1684	6	9			
Fixed Deposits ಕಾಯಂ ಠೇವಣಾತಿಗಳು						

ಸ್ನಾನದ ಅವಶ್ಯಕತೆ.

ಮನುಷ್ಯನು ಪೂರ್ಣ ಆರೋಗ್ಯದಿಂದಿರಬೇಕಾದರೆ ಆತನ ಪ್ರತಿಯೊಂದು ಇಂದ್ರಿಯವೂ ಸರಿಯಾಗಿ ಕೆಲಸವನ್ನು ಮಾಡುತ್ತಿರಬೇಕು. ಹೃದಯ, ಕರುಳು, ಶ್ವಾಸಕೋಶ, ಮೊದಲಾದ ಎಲ್ಲ ಇಂದ್ರಿಯಗಳ ಕೆಲಸವೂ ಏಕರೀತಿಯಲ್ಲಿ ನಡೆಯುತ್ತಿರಬೇಕು. ಇಷ್ಟುಮಾತ್ರವಲ್ಲದೆ ಒಂದು ಅಂಗಕ್ಕೆ ಅನುಕೂಲವಾಗಿ ಇನ್ನೊಂದು ಅಂಗದ ಚಲನೆಯಿರಬೇಕು.

ಮನುಷ್ಯನ ಚರ್ಮದ ಆರೋಗ್ಯವೂ ದೇಹದ ಆರೋಗ್ಯಕ್ಕೆ ಅತ್ಯಾವಶ್ಯಕವಾಗಿರುತ್ತದೆ. ಯಾವನೋ ಒಬ್ಬ ನಾಟ್ಯಗಾರನು ತನ್ನ ಮೈಗೆ ಅನುನಿತ್ಯವೂ ರಂಗು ಬಳಿದು ರೋಮಕೂಪಗಳನ್ನು ಯಾವಾಗಲೂ ಮುಚ್ಚುವಂತೆ ಮಾಡಿದುದರಿಂದ ಬಲುಬೇಗನೇ ಸತ್ತುಹೋದನೆಂಬ ಕಥೆಯು ನಮಗೆಲ್ಲರಿಗೂ ತಿಳಿದಿರಬಹುದು. ಇದರಿಂದ ಚರ್ಮದ ವಿಷಯವಾಗಿ ಎಷ್ಟು ಜಾಗರೂಕರಾಗಿರಬೇಕೆಂದು ವಿಶದವಾಗುವುದು.

ಚರ್ಮವು ಕೂಡ ಒಂದು ರೀತಿಯಲ್ಲಿ ಉಸಿರಾಡುವ ದೇಹ ಎನ್ನಲೂಬಹುದು. ಆದರೆ ಶ್ವಾಸಕೋಶಗಳಂತಲ್ಲ. ಚರ್ಮದಲ್ಲಿರುವ ಬಹು ಸೂಕ್ಷ್ಮವಾದ ರಂಧ್ರಗಳಿಂದ ವಿಷ ಮಿಶ್ರಿತ ಪದಾರ್ಥಗಳು ದೇಹದ ಹೊರಕ್ಕೆ ಬರುವವು.

ಈ ರೀತಿಯಿಂದ ದೇಹದ ಒಳಭಾಗವು ಶುಚಿಯಾಗುವುದು. ದೇಹದೊಳಗಣ ಕಲ್ಮಷದಿಂದಲೂ, ಇದ್ದು ಪದಾರ್ಥಗಳಿಂದಲೂ ಈ ಚರ್ಮದ ರಂಧ್ರಗಳು ಮುಚ್ಚಿಹೋಗಬಹುದು. ಆದಕಾರಣ ಅವುಗಳ ಕಲ್ಮಷವನ್ನು ಹೋಗಲಾಡಿಸಲು ಸ್ನಾನವು ಅತ್ಯಾವಶ್ಯಕವಾಗಿದೆ.

ಇನ್ನು ಕೆಲವರು ಚರ್ಮದ ಮೇಲೆ ಬಿಗಿಯಾಗಿ ವಸ್ತ್ರವನ್ನು ಸುತ್ತಿ ಅದು ಅರೆಬೇವದಲ್ಲಿರುವಂತೆ ಮಾಡುವ ಕಾರಣ, ಅದು ಮಾಡತಕ್ಕಂತಹ ಕೆಲಸವನ್ನು ಮಾಡಲು ಅಶಕ್ತವಾಗುವುದು.

ಕೆಲವರು ತಮಗೆ ಸರಿಯಾಗಿ ಬೆವರು ಬರುವುದಿಲ್ಲವೆಂದು ಹೇಳುತ್ತಿರುವರು. ಕುತ್ತಿಗೆಯ ಮೇಲೆ ಮಾತ್ರವೇ ಬೆವರು ಬರುವದೆಂದೂ ಬೇರೆ ಅಂಗಗಳಿಗೆ ಬೆವರು ಬರುವುದಿಲ್ಲವೆಂದೂ ಹೇಳುವವರು ತಮ್ಮ ಶರೀರವನ್ನು ಬಲವಾಗಿ ವಸ್ತ್ರದಿಂದ ಬಿಗಿದು ಚರ್ಮವನ್ನು ಅಶಕ್ತಪಡಿಸುವದರಿಂದ ಮಾತ್ರವೇ ಹಾಗಾಗುವದೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು.

ಇಂತಹ ಮನುಷ್ಯರು ಎಂದಿಗೂ ಆರೋಗ್ಯಶಾಲಿಗಳಾಗಿರರು. ಅವರಿಗೆ ಸಂಪೂರ್ಣ ಸೌಖ್ಯವು ದೂರವಾಗುವುದು.

ಸ್ವಾಭಾವಿಕವಾದ ತಣ್ಣೀರು ಸ್ನಾನದಿಂದ ಚರ್ಮದ ರಂಧ್ರಗಳಲ್ಲಿ ಸೇರಿರಬಹುದಾದ ಕಲ್ಮಷವನ್ನು ಹೋಗಲಾಡಿಸಬಹುದು. ಇನ್ನು ಬಿಸಿ ನೀರಿನ ಸ್ನಾನದಿಂದ ಅವುಗಳನ್ನು ಹೋಗಲಾಡಿಸುವುದು ಬಹು ಸುಲಭ.

ಸ್ನಾನದಿಂದ ಎರಡು ರೀತಿಯ ಪ್ರಯೋಜನವಿದೆ. ಒಂದನೆಯದು ಚರ್ಮವನ್ನು ಶುಚಿಗೊಳಿಸುವುದು. ಎರಡನೆಯದು ಶರೀರದ ಇಂದ್ರಿಯಗಳಿಗೆ ಚೇತನವನ್ನು ಕೊಡುವುದು.

ತಣ್ಣೀರು ಸ್ನಾನವಾಗಲಿ, ಬಿಸಿನೀರು ಸ್ನಾನವಾಗಲಿ, ಬಹು ಆವಶ್ಯಕ; ಚರ್ಮದ ರಂಧ್ರಗಳಲ್ಲಿ ಕುಳಿತ ಇದ್ದು ಪದಾರ್ಥವನ್ನು ಸ್ನಾನವು ಹೋಗಲಾಡಿಸುವುದು. ಸ್ನಾನದ ಸಮಯದಲ್ಲಿ ಸಾಬೂನನ್ನು ಉಪಯೋಗಿಸಿದರೆ ಕಲ್ಮಷವನ್ನು ಹೋಗಲಾಡಿಸಲು ಇನ್ನಷ್ಟು ಸಹಾಯಕ. ಇದ್ದು ಪದಾರ್ಥವು ಕೂಡಿಕೆಯಾದಾಗ ಸಾಬೂನನ್ನು ಉಪಯೋಗಿಸಿದುದಾದರೆ ಅದು ಬೇಗನೇ ಹೋಗಿಬಿಡುವುದು.

ಬಹು ಸಮಯದ ವರೆಗೆ ಬಿಸಿನೀರು ಸ್ನಾನವನ್ನು ಮಾಡುವುದರಿಂದ ಚರ್ಮವು ಶುಚಿಯಾಗುವುದಲ್ಲದೆ, ಕೆಟ್ಟ ರೋಗಗಳಿಗೆ ಸಂಬಂಧಿಸಿದ ಅಣುಗಳೂ ನಾಶಹೊಂದುವವು. ಶೀತ, ನಿಮೋನಿಯಾ, ಪಾರ್ಶ್ವಶೂಲೆ, ಇವುಗಳೂ ಹೋಗಿಸಲ್ಪಡುವವು.

ವ್ಯಾಯಾಮವನ್ನು ಮಾಡಿದೊಡನೆ ಶರೀರವು ಬೆವತು ಉಟ್ಟ ವಸ್ತ್ರವು ಶರೀರಕ್ಕೆ ಅಂಟಿಕೊಳ್ಳುವುದು. ಆಗಕಾನೇ ಸ್ನಾನವು ಅತ್ಯಗತ್ಯವು. ಆಗ ಚರ್ಮವನ್ನು ತೊಳೆಯದಿರಬಾರದು. ಬಿಸಿನೀರು ಸ್ನಾನವು ಈ ಸಂದರ್ಭದಲ್ಲಿ ತಣ್ಣೀರು ಸ್ನಾನಕ್ಕಿಂತ ಉತ್ತಮವು. ಆದರೆ ಇಂತಹ ಸಂದರ್ಭದಲ್ಲಿ ಬಹು ಸಮಯದ ವರೆಗೆ ಬಿಸಿನೀರನ್ನು ಮೈ ಮೇಲೆ ಸುರಿಯುತ್ತಿರಬಾರದು.

ತಣ್ಣೀರು ಸ್ನಾನವು ಇಂದ್ರಿಯಗಳಿಗೆ ಉತ್ತೇಜನವನ್ನುಂಟು ಮಾಡುವುದು. ಪ್ರತಿದಿನ ಪ್ರಾತಃಕಾಲ ವ್ಯಾಯಾಮದ ತರುವಾಯ ತಣ್ಣೀರು ಸ್ನಾನಮಾಡಿದರೆ ಇಂದ್ರಿಯಗಳ ಶಕ್ತಿಯು ಹೆಚ್ಚಾಗುವುದು. ತಣ್ಣೀರುಸ್ನಾನದಿಂದ ರಕ್ತಸಂಚಲನೆಯು ಸರಿಯಾಗುವುದು. ತಣ್ಣೀರನ್ನು ಮೈಮೇಲೆ ಸುರಿಯುವುದಕ್ಕಿಂತ ಒಂದು ಪೀಪಾಯಲ್ಲಿ ತಣ್ಣೀರನ್ನು ತುಂಬಿಸಿ ಅದರಲ್ಲಿ ಮುಳುಗೇಳುವುದು ಉತ್ತಮವು.

ಶುದ್ಧವಾದ ನೀರಿಗಿಂತ ಉಪ್ಪು ನೀರನ್ನು ಉಪಯೋಗಿಸುವುದು ಲೇಸು. ನದಿಯಲ್ಲಾಗಲೀ ಕೆರೆಯಲ್ಲಾಗಲೀ ಈಜುವುದಕ್ಕಿಂತ ಸಮುದ್ರದಲ್ಲಿ ಈಜುವುದು ಹಿತಕರ. ಸಾಧ್ಯವಾದಷ್ಟು ಮಟ್ಟಿಗೆ ಉಪ್ಪುನೀರು ಸ್ನಾನವನ್ನೇ ಮಾಡಲು ಪ್ರಯತ್ನಿಸಬೇಕು. ಉಪ್ಪನ್ನು ಉಪಯೋಗಿಸುವುದರಿಂದ ಚರ್ಮವು ಗಟ್ಟಿಯಾಗುವುದು. ಇಂದ್ರಿಯಗಳು ಬಲಗೊಳ್ಳುವವು

Chikmagalur Public Conveyance Motor Service
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

ಟೆಲಿಗ್ರಾಮ್: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಜನರ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂತರೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಲಾರು ಗುಡಿ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ತೋಟದ ಸ್ಟೇಶನ್ ಅದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಪ್ರಯಾಣಿಕರಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ ಅದೇ ದಿವಸ ತೊಂದರೆ ಇಲ್ಲದೆ ಸುಲಭವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಲಾರು ಗುಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಮೂಡಿಗೆರೆ 4 ಘಂಟೆಗೆ ಮೂಡಿಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾತಂಕವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಊಟ ವಗೈರೆ ತೀರಿಸಿಕೊಂಡು ವಿಶ್ರಾಂತಿ ತೆಗೆದುಕೊಳ್ಳಲು ಅವಕಾಶವಿರುತ್ತದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮರುದಿನ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಾಪುರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಪ್ಯಾರಜಾನ್ ಸೋರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್.

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂಲ್ಕಿ ಕರಾವಳಿ ಮಾರ್ಗವಾಗಿಯೂ ಎಡಪದವು ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಚಿತ್ರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪ್ರಖ್ಯಾತ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಕಾರ್ಕಳ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., S. K. Mangalore

ದಿ. ಕೆನರಾ ನ[illegible]

ಕಸಿ ಮಾವಿನಗಿಡಗಳು.

ನಮ್ಮಲ್ಲಿ ಈ ಜಿಲ್ಲೆಯ ಪ್ರಸಿದ್ಧ [illegible] ಗಳೂ, ಸಪೋಡಿಲ್ಲಾ, ಚೇರಳೆ, ಕಿತ್ತಳೆ, [illegible] ದಾಳಿಂಬ, ಪನ್ನೇರಳೆ ಮುಂತಾದ ಕಸಿ[illegible] ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟ[illegible] ಎಲ್ಲದೆ ಚೆನ್ನಾಗಿ ಫಲಬಿಡುವವು. [illegible] ಗಳು ಕರಾವಳಿ ಹವೆಗೂ ಮಣ್ಣಿಗೂ ಒಗ್ಗ[illegible] ಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ [illegible] ಬರೆಯಿರಿ. ಗಿಡಗಳು ಮಂಗಳೂರು [illegible] ಯಾಡಿಯವರಲ್ಲಿ ದೊರೆಯುವವು.

ಕೆ. ಮಧ್ವಣ್ಣ ಶೆಟ್ಟಿ
ದಿ. ಕೆನರಾ ನರ್ಸರಿ,
ರಾಬರ್ಟ್ಸ್ ಗಾರ್ಡನ್ಸ್, ಕಾವೂರು, ಪೋಸ್ಟ್
C/o ಕೆ. ಶಾ[illegible] ಕಾರಿಡಾ [illegible] ರಥಬೀದಿ, ಮಂಗ[illegible]

13.028

ಮೈಸೂರು ಸರ್ಕಾರ

ಗ್ಲಾನಿಯ ಇಸವಿಯ ಮೈಸೂರು ದಸರಾ (ಅಖಿಲ ಭಾರತೀಯ) ಸರ್ವವಸ್ತು ಪ್ರದರ್ಶನವು ಮೈಸೂರು [illegible] ಖಾಯಮಾಗಿ ಏರ್ಪಡಿಸಿರುವ ಪ್ರದರ್ಶನ [illegible] ಅಕ್ಟೋಬರು ತಿಂಗಳಿನಲ್ಲಿ ಗಾರಿಂದ ಆರನೇ [illegible] ವಿಗೆ ನಡೆಯುವುದು. ಕಲಾಕೌಶಲ್ಯವನ್ನೂ ಕೈಗಾರಿಕಾ ವಿಷಯಕವಾದ ನೈಪುಣ್ಯವನ್ನೂ ತೋರಿಸುವ ವಸ್ತುಗಳನ್ನೂ ಮತ್ತು ವ್ಯವಸಾಯೋತ್ಪನ್ನ ವಸ್ತುಗಳನ್ನೂ ಸಂಪದಭಿವೃದ್ಧಿಗೆ ಸಾಧಕವಾದ ವಸ್ತು ಸಮುದಾಯಗಳನ್ನೂ ಅಗ್ಗ ಪ್ರದರ್ಶಿಸಲಾಗುವುದು. ಯಂತ್ರೋಪಕರಣಗಳೇ ಮುಂತಾದವುಗಳಿಂದ ಕೆಲಸ ಮಾಡಿಸಿ ಆ ಕಾಲದಲ್ಲಿ ಜನರಿಗೆ ತೋರಿಸುವುದಕ್ಕೆ ವಿದ್ಯುಚ್ಛಕ್ತಿಯೇನಾದರೂ ಅವಶ್ಯವಿದ್ದಲ್ಲಿ, ಅದನ್ನು ಮುಫತ್ತಾಗಿ ಒದಗಿಸಲಾಗುವುದು. ಪ್ರಕಟಣೆಯ ಕೆಲಸಕ್ಕೂ, ವ್ಯಾಪಾರಕ್ಕೂ, ನಾನಾ ವಿಷಯಗಳನ್ನೂ ಪರಿಶೀಲಿಸಿ ತಿಳಿದುಕೊಳ್ಳುವುದಕ್ಕೂ, ಇದು ಒಳ್ಳೆಯ ಸಮಯವಾಗಿದೆ.

ಪ್ರದರ್ಶನದಲ್ಲಿ ತಮ್ಮ ವಸ್ತುಗಳನ್ನಿಡುವುದಕ್ಕೆ ಸ್ಥಳವನ್ನು ಅಪೇಕ್ಷಿಸುವವರೂ ಮತ್ತು ಪ್ರದರ್ಶನದ ವಿಚಾರವಾಗಿ ಇತರ ವಿವರಗಳನ್ನು ತಿಳಿಯಲಪೇಕ್ಷಿಸುವವರೂ ಸಹ, ಮೈಸೂರು ದಸರಾ ಪ್ರದರ್ಶನದ ಸೆಕ್ರೆಟರಿಯವರಿಂದ ಪ್ರಸಿದ್ಧ ಪತ್ರಿಕೆಯನ್ನು (ಪ್ರಾಸ್ಪೆಕ್ಟಸ್) ಪಡೆಯಬಹುದು.

ಕೆ. ಅನಂತಸಾಮಿ ರಾವ್,
ಸೆಕ್ರೆಟರಿ,
ಮೈಸೂರು ದಸರಾ ಎಗ್ಜಿಬಿಷನ್, ಮೈಸೂರು ಸಿಟಿ.

ವಿಟನಂಬು! ಪುಟ್ಟನಾಗು!! ನೆಟ್ಟಗಾಗು!!

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಯೌವನವೇ ನಿನ್ನ ಜೀವ ಯಾವದರಲ್ಲಿದೆ? ಸೌಮ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ?

ಆರೋಗ್ಯವಿಲ್ಲವೇ? ದೇಹವು ಕ್ಷೀಣವಾಗಿದೆಯೇ? ಮನಸಂತೋಷ ತಪ್ಪಿದೆಯೇ? ಪ್ರಾಣಕ ಶಕ್ತಿ ಕುಂದಿರುವದೇ? ಮುಂಗೋಪ ಜಾಸ್ತಿ ಇದೆಯೋ? ಆಲಸ್ಯ ತುಂಬಿರುವದೇ? ಚುರುಕು ಚಟುವಟಿಕೆ ಇಲ್ಲವೇ? ವ್ಯಾಕುಲತೆಯಿಂದ ಮರುಗುತ್ತೀಯೋ? ಸುಖವಾಗಬೇಕೆಂಬ ಶಾಂತಿ ಇದೆಯೇ? ಹಾಗಾದರೆ ಇಗೋ ಬಹು ಗುಣಕರವಾದ ಕಾಂಪೌಂಡ್ ಸಿರಪ್ ಪಾಲಿಸವನೆಂಬ ಅಮೃತವನ್ನೇ ಸೇವಿಸು. ಆವಾಗ ಮೇಲಿನ ಅವಲಕ್ಷಣಗಳೆಲ್ಲ ಶೀಘ್ರವಾಗಿ ಬಹು ಆರೋಗ್ಯವೂ ಶರೀರ ಪುಷ್ಟಿಯೂ ಉಂಟಾಗಿ ನಿನ್ನ ಜೀವ ಆರೋಗ್ಯದಲ್ಲಿಯೇ ಇದೆಯೆಂದು ನಿನಗೇನೇ ತೋರಿಬರುವುದು.

ಕ್ರಯ 8 ಬಿನ್ನ ಸೀಸೆಗೆ ರೂ. 3—8—0.

ಯುವತಿಯೇ ನಿನ್ನ ಸುಂದರವಾದ ಉರುಪು ಯಾವುದು? ಅಚ್ಚುಗಟ್ಟಾಗಿ ಹೊಳೆವುವ ನಿನ್ನ ಆರೋಗ್ಯದ ದೇಹವಲ್ಲವೇ?

ದೇಹವು ಅಚ್ಚುಗಟ್ಟಾಗಿಲ್ಲವೇ? ರೂಪಕ್ಕೆ ಕಳೆ ಇಲ್ಲವೇ!! ಮುಖ ಕಳೆಗುಂದಿದೆಯೋ? ಕೈಕಾಲು ಬಚ್ಚುವದೇ? ಎದೆ ನಡುಗುವ ಆಯಾಸ ಉಂಟೋ? ರಕ್ತ ಪುಷ್ಟಿ ಇಲ್ಲವೇ? ಅಜೀರ್ಣವಿದೆಯೋ? ಸೊಂಟ ನೋವು ಉಂಟೋ? ತಲೆ ತಿರುಗುತ್ತದೇ? ತಲೆನೋವು ಉಂಟೋ? ದೃಷ್ಟಿ ಸರಿಯಿಲ್ಲವೇ? ಕಣ್ಣಿನ ಅಸ್ವಸ್ಥವಾಗಿದೆಯೋ? ಆವಾಗ ಉದರ ಶಾಸ್ತ್ರಿಯ ಇದರಿಂದ ಬಿಡುಗಡೆ ಹೊಂದಲು ಇಚ್ಛೆ ಇದೆಯೋ? ಹಾಗಾದರೆ ಗುಪ್ತ ಸೇವಕಿಯಂತಿರುವ ಕಂಪೌಂಡು ಸಿರಪ್ [illegible] ಅಂಗೀಕರಿಸು. ಈಕೆ ಗುಪ್ತಹಿಂಸೆಯಿಂದ ನಿನ್ನನ್ನು ಪಾರು ಮಾಡಿ ಶರೀರ ಪುಷ್ಟಿಯಾಗುವಂತೆಯೂ ಮುಖಕಳೆಗಳು ಹೊಳೆಯುವಂತೆಯೂ ದೇಹಕ್ಕೆ ಬಲಕೊಡುವಂತೆಯೂ ಖಂಡಿತ ಸಹಾಯವಾಗುವಳು. ಆವಾಗ ಆರೋಗ್ಯವುಳ್ಳ ದೇಹವೇ ಹೊಳೆಯುವ ನಿನ್ನ ಸುಂದರವಾದ ಉರುಪು ಎಂದು ನಿನಗೇನೇ ಖಚಿತವಾಗುವದು.

ಕ್ರಯ 8 ಬಿನ್ನ ಬಾಟ್ಲಿಗೆ ರೂ. 3—8—0.

ಕಟಲಾಗಿಗೆ ಬರೆಯಿರಿ—

ಮಲೇರಿಯಾನ ಕಂಪೆನಿ,
ಮಂಗಳೂರು ದ. ಕ.

22638

ಸ್ನಾನದ ಆವಶ್ಯಕತೆ.

ಮನುಷ್ಯನು ಪೂರ್ಣ ಆರೋಗ್ಯದಿಂದಿರಬೇಕಾದರೆ ಆತನ ಪ್ರತಿಯೊಂದು ಇಂದ್ರಿಯವೂ ಸರಿಯಾಗಿ ಕೆಲಸವನ್ನು ಮಾಡುತ್ತಿರಬೇಕು. ಹೃದಯ, ಕರುಳು, ಶ್ವಾಸಕೋಶ, ಮೊದಲಾದ ಎಲ್ಲ ಇಂದ್ರಿಯಗಳ ಕೆಲಸವೂ ಏಕರೀತಿಯಲ್ಲಿ ನಡೆಯುತ್ತಿರಬೇಕು. ಇಷ್ಟುಮಾತ್ರವಲ್ಲದೆ ಒಂದು ಅಂಗಕ್ಕೆ ಅನುಕೂಲವಾಗಿ ಇನ್ನೊಂದು ಅಂಗದ ಚಲನೆಯಿರಬೇಕು.

ಮನುಷ್ಯನ ಚರ್ಮದ ಆರೋಗ್ಯವೂ ದೇಹದ ಆರೋಗ್ಯಕ್ಕೆ ಅತ್ಯಾವಶ್ಯಕವಾಗಿರುತ್ತದೆ. ಯಾವನೋ ಒಬ್ಬ ನಾಟ್ಯಗಾರನು ತನ್ನ ಮೈಗೆ ಅನುನಿತ್ಯವೂ ರಂಗು ಬಳಿದು ರೋಮಕೂಪಗಳನ್ನು ಯಾವಾಗಲೂ ಮುಚ್ಚಿರುವಂತೆ ಮಾಡಿದುದರಿಂದ ಬಲುಬೇಗನೇ ಸತ್ತುಹೋದನೆಂಬ ಕಥೆಯು ನಮಗೆಲ್ಲರಿಗೂ ತಿಳಿದಿರಬಹುದು. ಇದರಿಂದ ಚರ್ಮದ ವಿಷಯವಾಗಿ ಎಷ್ಟು ಜಾಗರೂಕರಾಗಿರಬೇಕೆಂದು ವಿಶದವಾಗುವುದು.

ಚರ್ಮವು ಕೂಡ ಒಂದು ರೀತಿಯಲ್ಲಿ ಉಸಿರಾಡುವದೆಂದು ಹೇಳಬಹುದು. ಆದರೆ ಶ್ವಾಸಕೋಶಗಳಂತಲ್ಲ. ಚರ್ಮದಲ್ಲಿರುವ ಬಹು ಸೂಕ್ಷ್ಮವಾದ ರಂಧ್ರಗಳಿಂದ ವಿಷಮಿಶ್ರಿತ ಪದಾರ್ಥಗಳು ದೇಹದ ಹೊರಕ್ಕೆ ಬರುವವು.

ಈ ರೀತಿಯಿಂದ ದೇಹದ ಒಳಭಾಗವು ಶುಚಿಯಾಗುವುದು. ದೇಹದೊಳಗಣ ಕಲ್ಮಷದಿಂದಲೂ, ಜಿಡ್ಡು ಪದಾರ್ಥಗಳಿಂದಲೂ ಈ ಚರ್ಮದ ರಂಧ್ರಗಳು ಮುಚ್ಚಲ್ಪಡಬಹುದು. ಆದಕಾರಣ ಅವುಗಳ ಕಲ್ಮಷವನ್ನು ಹೋಗಲಾಡಿಸಲು ಸ್ನಾನವು ಅತ್ಯಾವಶ್ಯಕವಾಗಿದೆ.

ಇನ್ನು ಕೆಲವರು ಚರ್ಮದ ಮೇಲೆ ಬಿಗಿಯಾಗಿ ವಸ್ತ್ರವನ್ನು ಸುತ್ತಿ ಅದು ಅರೆಜೀವದಲ್ಲಿರುವಂತೆ ಮಾಡುವ ಕಾರಣ, ಅದು ಮಾಡತಕ್ಕಂತಹ ಕೆಲಸವನ್ನು ಮಾಡಲು ಅಶಕ್ತವಾಗುವುದು.

ಕೆಲವರು ತಮಗೆ ಸರಿಯಾಗಿ ಬೆವರು ಬರುವುದಿಲ್ಲವೆಂದು ಹೇಳುತ್ತಿರುವರು. ಕುತ್ತಿಗೆಯ ಮೇಲೆ ಮಾತ್ರವೇ ಬೆವರು ಬರುವದೆಂದೂ ಬೇರೆ ಅಂಗಗಳಿಗೆ ಬೆವರು ಬರುವುದಿಲ್ಲವೆಂದೂ ಹೇಳುವವರು ತಮ್ಮ ಶರೀರವನ್ನು ಬಲವಾಗಿ ವಸ್ತ್ರದಿಂದ ಬಿಗಿದು ಚರ್ಮವನ್ನು ಅಶಕ್ತಪಡಿಸುವದರಿಂದ ಮಾತ್ರವೇ ಹಾಗಾಗುವದೆಂಬುದನ್ನು ಚೆನ್ನಾಗಿ ನೆನಪಿನಲ್ಲಿಡಬೇಕು.

ಇಂತಹ ಮನುಷ್ಯರು ಎಂದಿಗೂ ಆರೋಗ್ಯಶಾಲಿಗಳಾಗಿರರು. ಅವರಿಗೆ ಸಂಪೂರ್ಣ ಸೌಖ್ಯವು ದೂರವಾಗುವುದು.

ಸ್ವಾಭಾವಿಕವಾದ ತಣ್ಣೀರು ಸ್ನಾನದಿಂದ ಚರ್ಮದ ರಂಧ್ರಗಳಲ್ಲಿ ಸೇರಬಹುದಾದ ಕಲ್ಮಷವನ್ನು ಹೋಗಲಾಡಿಸಬಹುದು. ಇನ್ನು ಬಿಸಿ ನೀರಿನ ಸ್ನಾನದಿಂದ ಅವುಗಳನ್ನು ಹೋಗಲಾಡಿಸುವುದು ಬಹು ಸುಲಭ.

ಸ್ನಾನದಿಂದ ಎರಡು ರೀತಿಯ ಪ್ರಯೋಜನವಿದೆ. ಒಂದನೆಯದು ಚರ್ಮವನ್ನು ಶುಚಿಗೊಳಿಸುವುದು. ಎರಡನೆಯದು ಶರೀರದ ಇಂದ್ರಿಯಗಳಿಗೆ ಚೇತನವನ್ನು ಕೊಡುವುದು.

ತಣ್ಣೀರು ಸ್ನಾನವಾಗಲಿ, ಬಿಸಿನೀರು ಸ್ನಾನವಾಗಲಿ, ಬಹು ಆವಶ್ಯಕ; ಚರ್ಮದ ರಂಧ್ರಗಳಲ್ಲಿ ಕುಳಿತ ಜಿಡ್ಡುಪದಾರ್ಥವನ್ನು ಸ್ನಾನವು ಹೋಗಲಾಡಿಸುವುದು. ಸ್ನಾನದ ಸಮಯದಲ್ಲಿ ಸಾಬೂನನ್ನು ಉಪಯೋಗಿಸಿದರೆ ಕಲ್ಮಷವನ್ನು ಹೋಗಲಾಡಿಸಲು ಇನ್ನಷ್ಟು ಸಹಾಯಕ. ಜಿಡ್ಡುಪದಾರ್ಥವು ಕೂಡಿಕೆಯಾದಾಗ ಸಾಬೂನನ್ನು ಉಪಯೋಗಿಸಿದುದಾದರೆ ಅದು ಬೇಗನೇ ಹೋಗಿಬಿಡುವುದು.

ಬಹು ಸಮಯದ ವರೆಗೆ ಬಿಸಿನೀರು ಸ್ನಾನವನ್ನು ಮಾಡುವುದರಿಂದ ಚರ್ಮವು ಶುಚಿಯಾಗುವುದಲ್ಲದೆ, ಕೆಲವು ರೋಗಗಳಿಗೆ ಸಂಬಂಧಿಸಿದ ಅಣುಗಳೂ ನಾಶಹೊಂದುವವು. ಶೀತ, ನಿಮೋನಿಯಾ, ಪಾರ್ಶ್ವಶೂಲೆ, ಇವುಗಳೂ ಹೋಗಿಸಲ್ಪಡುವವು.

ವ್ಯಾಯಾಮವನ್ನು ಮಾಡಿದೊಡನೆ ಶರೀರವು ಬೆವತು ಉಟ್ಟ ವಸ್ತ್ರವು ಶರೀರಕ್ಕೆ ಅಂಟಿಕೊಳ್ಳುವುದು. ಆಗಲೇ ಸ್ನಾನವು ಅತ್ಯಗತ್ಯವು. ಆಗ ಚರ್ಮವನ್ನು ತೊಳೆಯದಿರಬಾರದು. ಬಿಸಿನೀರು ಸ್ನಾನವು ಈ ಸಂದರ್ಭದಲ್ಲಿ ತಣ್ಣೀರು ಸ್ನಾನಕ್ಕಿಂತ ಉತ್ತಮವು. ಆದರೆ ಇಂತಹ ಸಂದರ್ಭದಲ್ಲಿ ಬಹು ಸಮಯದ ವರೆಗೆ ಬಿಸಿನೀರನ್ನು ಮೈಮೇಲೆ ಸುರಿಯುತ್ತಿರಬಾರದು.

ತಣ್ಣೀರು ಸ್ನಾನವು ಇಂದ್ರಿಯಗಳಿಗೆ ಉತ್ತೇಜನವನ್ನುಂಟುಮಾಡುವುದು. ಪ್ರತಿದಿನ ಪ್ರಾತಃಕಾಲ ವ್ಯಾಯಾಮದ ತರುವಾಯ ತಣ್ಣೀರು ಸ್ನಾನಮಾಡಿದರೆ ಇಂದ್ರಿಯಗಳ ಶಕ್ತಿಯು ಹೆಚ್ಚಾಗುವುದು. ತಣ್ಣೀರು ಸ್ನಾನದಿಂದ ರಕ್ತಸಂಚಲನೆಯು ಸರಿಯಾಗುವುದು. ತಣ್ಣೀರನ್ನು ಮೈಮೇಲೆ ಸುರಿಯುವುದಕ್ಕಿಂತ ಒಂದು ಪೀಪಾಯಲ್ಲಿ ತಣ್ಣೀರನ್ನು ತುಂಬಿಸಿ ಅದರಲ್ಲಿ ಮುಳುಗೇಳುವುದುತ್ತಮವು.

ಶುದ್ಧವಾದ ನೀರಿಗಿಂತ ಉಪ್ಪು ನೀರನ್ನು ಉಪಯೋಗಿಸುವುದು ಲೇಸು. ನದಿಯಲ್ಲಾಗಲೀ ಕೆರೆಯಲ್ಲಾಗಲೀ ಈಜಾಡುವುದಕ್ಕಿಂತ ಸಮುದ್ರದಲ್ಲಿ ಈಜಾಡುವುದು ಹಿತಕರ. ಸಾಧ್ಯವಾದಷ್ಟು ಮಟ್ಟಿಗೆ ಉಪ್ಪುನೀರು ಸ್ನಾನವನ್ನೇ ಮಾಡಲು ಪ್ರಯತ್ನಿಸಬೇಕು. ಉಪ್ಪನ್ನು ಉಪಯೋಗಿಸುವುದರಿಂದ ಚರ್ಮವು ಗಟ್ಟಿಯಾಗುವುದು. ಇಂದ್ರಿಯಗಳು ಬಲಗೊಳ್ಳುವವು.

There are CHILDREN waiting for

Y O U

ನಿಮಗಾಗಿ ಕಾದಿರುವ

ಮಕ್ಕಳಿರುವವು.

ಬಂಜೆಯಾದ ಹೆಂಗಸಿನ ಮನಸ್ಸಿನ ಸ್ಥಿತಿಯನ್ನು ಅರಿತಿರುವಿರಾ? ಅದನ್ನು ಮನುಷ್ಯನು ವರ್ಣಿಸಲಾರನು. ಅವಳಲ್ಲಿ ಫಲಿಸಲಾರದ ಅಪೇಕ್ಷೆಯು ತುಂಬಿರುವದು. ಜೀವನದ ಪೂರ್ಣ ಅಂಶವು ಅವಳ ಭಾಗಕ್ಕಿಲ್ಲವು. ರಾತ್ರಿಹಗಲು, ಅವಳು ತನ್ನ ಅದೃಷ್ಟವನ್ನೇ ದೂರಿ, ತಮ್ಮ ಮಕ್ಕಳನ್ನು ಮುದ್ದಾಡುವ ಸುಖಿಗಳಾದ ತಾಯಂದಿರನ್ನು ಕಂಡೊಡನೆ ಮತ್ಸರವುಳ್ಳವಳಾಗುವಳು.

ಅಂತಹ ಹೆಂಗಸರಿಗೆ ಆಶೆಯನ್ನೂ ಉತ್ಸಾಹವನ್ನೂ ಹೆಚ್ಚಿಸಲು ನಮ್ಮ ಕೂಡ ಫೆಲೂನಾ ಮಾತ್ರೆ ಇದೆ. ವೈದ್ಯಕೀಯ ದೃಷ್ಟ್ಯಾ ನೋಡಿದುದಾದರೆ ಬಂಜೆತನವೆಂದು ಕಾಣುವುದು ಕೇವಲ ಸುಳ್ಳಾಗುವದು. ಬಂಜೆತನವು ಒಳಗಣ ಇಂದ್ರಿಯಗಳ ದೌರ್ಬಲ್ಯದಿಂದ ಉಂಟಾಗುವದು. ಕೇಶವು ಒಂದೆರಡರಷ್ಟು ಬಂಜೆತನವಿದ್ದರೂ ಇರಬಹುದು.

ಹೆಂಗಸರ ಫೆಲೂನಾ ಮಾತ್ರೆಗಳ ಮುಖ್ಯ ಕೆಲಸ ವೇನೆಂದರೆ ಅಂತಹ ಅಂತರಿಂದ್ರಿಯಗಳನ್ನು ಶುಚಿಪಡಿಸಿ, ಸರಿಯಾಗಿ ಕೆಲಸ ಮಾಡುವಂತೆ ಸರಿಗೊಳಿಸುವವು. ಹೀಗಾದ ಮೇಲೆ ಮಕ್ಕಳು ಹುಟ್ಟುವವು.

ಅದು ಮಾತ್ರವಲ್ಲ, ಫೆಲೂನಾ ಮಾತ್ರೆಗಳು ರಕ್ತವನ್ನು ಹೆಚ್ಚಿಸಿ, ಆಹಾರ ಜೀರ್ಣಾಂಗಗಳನ್ನು ಸ್ವಚ್ಛಗೊಳಿಸುವವು. ಆರೋಗ್ಯದ ತೊಂದರೆಗಳನ್ನು ಹೋಗಲಾಡಿಸುವವು, ತಾನು ಅಪೇಕ್ಷಿಸಿದನ್ನು ಹೊಂದಲಾಗದ ಹೆಂಗಸರಿಗೆ ಇಚ್ಛಿತಾರ್ಥವನ್ನು ಸುಲಭದಲ್ಲಿಯೇ ಕೊಟ್ಟು ಸಂತೋಷಗೊಳಿಸುವವು.

ಇನ್ನೂ ಹೇಳುವುದಾದರೆ ಜೀವನವೇ ಉತ್ಸಾಹಭರಿತವೂ ಆನಂದಭರಿತವೂ ಆಗುವುದು. ಹೆಂಗಸರಿಗೆ ದಿನನಿತ್ಯದ ಮನೆಕೆಲಸವೂ, ಶಿಶುರಕ್ಷಣೆಯೂ ಭಾರವಾಗಿ ಕಾಣದು. ಏಕೆಂದರೆ ಅವಳು ಸುಖಿಯಾಗಿರುವಳು.

ವಾಚಕರೆ! ನಿಮ್ಮಲ್ಲಿ ಯಾರಾದರೂ ಮಕ್ಕಳಿಲ್ಲದಿರುವಿರೆ? ಬಳಲಿದವರಾಗಿರುವಿರೆ? ಅದಕ್ಕೆಲ್ಲ ತಕ್ಕ ಕಾರಣಗಳಿವೆ. ಫೆಲೂನಾ ಮಾತ್ರೆಗಳು ಅವುಗಳನ್ನು ಹೋಗಲಾಡಿಸಲಿ!



ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸ್ಗಳಿಂದಲೂ ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕಟ್ಟುಗಳಲ್ಲಿ ದೊರಕಲ್ಪಡುವವು. ಬಾಟಲಿಗೆ ರೂ. 2—4—0.

ಮುಖ್ಯ ಏಜಂಟರು — ಪಟೇಲ್ ಮತ್ತು ಧೊಂಡಿ, ಪೋಸ್ಟು ಆಫೀಸು ಬೋಕ್ಸ್ 838, ಮುಂಬಾಯಿ ಮತ್ತು ಪೋಸ್ಟು ಬೋಕ್ಸ್ 620 ಕಲ್ಕತ್ತ.

ಮದ್ರಾಸು ಸಂಸ್ಥಾನಕ್ಕೆ...

ದಾದಾ ಎಂಡ್ ಕೋ,

260 ಚೈನಾ ಬಜಾರ್ ರೋಡ್, ಮದ್ರಾಸ್.

ಗರ್ಭವತಿ ಮೊದಲಾದವುಗಳಿಗೆ ಫೆಲೂನಾ ಮಾತ್ರೆಗಳು ಉಪಕಾರಿಯಾಗಲಾರವು. ಅವು ಸ್ವಾಭಾವಿಕವಾದ ಬೆಳವಣಿಗೆಗೆ ಮಾತ್ರವೇ ಸಹಾಯಕವಾಗುವವು. ಅವು ವನಸ್ಪತಿ ಧಾತುಗಳಿಂದಲೇ ತಯಾರಿಸಲ್ಪಟ್ಟವುಗಳಲ್ಲದೆ, ಪ್ರಾಣಿಜನ್ಯ ಧಾತುಗಳು ಅವುಗಳಲ್ಲಿರುವುದಿಲ್ಲ. ಮಾಡುವಾಗ ಕೈಯಿಂದ ಮುಟ್ಟುವುದೂ ಇಲ್ಲ.

PRODUCT OF GRAHAM REMEDIES LTD., CAPE TOWN, S. A.

No 1a

ತಯಾರಾಗಿವೆ! ಮಾರಾಟಕ್ಕೆ ಸಿದ್ಧವಿವೆ!! ತ್ವರೆಮಾಡಿರಿ!!!

1929ನೇ ಇಸವಿಯ

ಪ್ರೊಕೆಟ್ ಡೈರಿಗಳು.

ಅಂದವಾದ ಕೆಲಿಕೊ ಬೈಂಡಿನ ದೊಡ್ಡ ಸೈಜಿನ ಮುಚ್ಚಳ ಇದ್ದ ಡೈರಿ	0—14—0	ಅಂದವಾದ ಮಿಡಿಯಮ್ ಸಾದಾ ಡೈರಿ	0—8—6
" " ಮುಚ್ಚಳ ಇಲ್ಲದ್ದು	0—10—0	" ಸ್ಲಿಪ್‌ಬ್ಯಾಂಡ್ "	0—7—0
" " ಮುಚ್ಚಳ ಇದ್ದ ಮಿಡಿಯಮ್ ಸೈಜಿನ ಡೈರಿ	0—11—0	" ಕೆಲಿಕೊ ಸಣ್ಣ ಸೈಜಿನ ಮುಚ್ಚಳದ್ದು	0—10—0
		" " ಮುಚ್ಚಳ ಇಲ್ಲದ್ದು	0—7—0
		" ಸ್ಲಿಪ್‌ಬ್ಯಾಂಡ್ ಸಣ್ಣ ಸೈಜಿನ ಡೈರಿ	0—5—0

ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಸ್ಥರಿಗೂ ತುಂಬಾ ಕಮಿಶನು ಕೊಡಲಾಗುವದು.

ಹೆಚ್ಚಿನ ಮಾಹಿತಿಗೆ ಬರೆಯಿರಿ—

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಇತ್ತೀಚಿನ ಸ್ನಾನದ ಪದ್ಧತಿಯು ... ಕೈಗಳನ್ನು ನೀರಲ್ಲಿ ಹಾಕಿ, ... ಹೀಗೆಯೇ ... ವರೆಗೆ ... ಇದರಿಂದ ವ್ಯಾಯಾಮವೂ ದೊರಕಿದಂತಾಗುವದು. ... ರೋಗ್ಯವನ್ನು ಹೆಚ್ಚಿಸುವದು; ಪ್ರತಿಯೊಬ್ಬನ ... ರಿಂದ, ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ... ಜಾಗ್ರತೆಯಿಂದ ಅರಿತುಕೊಳ್ಳಬೇಕು.

ಹೆಚ್ಚಿಗೆ ತಿನ್ನುವುದರಿಂದ ಆಗಾಗ ಸ್ನಾನಮಾಡುವ ಅವಶ್ಯಕತೆಯುಂಟಾಗುವದು. ಅದಲ್ಲದೆ ಹೆಚ್ಚಿಗೆ ವ್ಯಾಯಾಮದಿಂದ ಹೆಚ್ಚಿಗೆ ಸ್ನಾನವು ಅಗತ್ಯವಾಗುವದು.

ಸ್ನಾನವನ್ನು ಸರಿಯಾಗಿ ಮಾಡದಿದ್ದರೆ ಮೈಯು ... ದಲ್ಲದೆ ಬಹು ಅಸಹ್ಯಕರವಾಗುವದು. ಆದ ಕಾರಣ ... ವನ್ನೇ ಯಾವಾಗಲೂ ಹುಚ್ಚಿಯಾಗಿಡಬೇಕು.

Canara Bank Ltd., Kasaragod.

ಕೆನರಾ ಬ್ಯಾಂಕು ಲಿಮಿಟೆಡ್ ಕಾಸರಗೋಡು.

ನೋಟೀಸು:

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಮೇಲ್ಕಂಡ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ ಅವುಗಳ ಬಡ್ಡಿಯನ್ನಾಗಲೀ ವ್ಯಾದೆಗೆ ಕೊಡದೆ ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಒಂದನೇಯವರು ಕಾಣಸಿಕ್ಕಲಿಲ್ಲವಾಗಿಯೂ, ಎರಡನೇಯವರು ಮೃತಪಟ್ಟಿರುತ್ತಾರಾಗಿಯೂ ವಾಪಾಸು ಬಂದಿರುವುದರಿಂದ ಸದರಿ ಸಾಲಗಾರರು ಅವರಿಂದ ಬ್ಯಾಂಕಿಗೆ ಸಲ್ಲತಕ್ಕ ಅಸ್ಲು ಬಡ್ಡಿ ನೋಟೀಸು ಖರ್ಚು ಇತ್ಯಾದಿ ಏವೇಜುಗಳನ್ನು ಇದೇ ತಿಂಗಳ ತಾರೀಕು 31ನೇ ಶನಿವಾರದೊಳಗೆ ತಾವತಿಮಾಡಿ ಅಡವಿಟ್ಟ ಆಭರಣಗಳನ್ನು ಬಿಡಿಸಿಕೊಂಡು ಹೋಗದಿದ್ದರೆ, ಸದರಿ ಆಭರಣಗಳನ್ನು ಇದೇ 1928ನೇ ಇಸವಿ ನವೆಂಬರ ತಾರೀಕು 6ನೇ ಮಂಗಳವಾರ ದಿವಸ ಮಧ್ಯಾಹ್ನ 2 ಘಂಟೆಗೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂಮಾಡಲಾಗುವದು.

ಸಾಲದನಂಬ್ರ.	ಹೆಸರು.	ಸಾಲದ ಮೊಬಲಗು.
1. 1151/27	ಕೃಷ್ಣ ಹೆಬ್ಬಾರರ ಮಗ ನಾರಾಯಣ ಹೆಬ್ಬಾರ,	25—0—0.
2. 120/28.	ವಾಸುದೇವ ಶ್ಯಾನುಭೋಗರ ಮಗ ರಾಮಕೃಷ್ಣ ಶ್ಯಾನುಭೋಗ,	60—0—0.

ಬಡ್ಡಿ ವ ಖರ್ಚು ಸಹಾ.

Canara Bank Ltd., Kasaragod, 15/10/28. — H. S. BHAT, *Agent.*

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ.

O. P. No. 113/1928.

ಅರ್ಜಿದಾರ—ಚನ್ನಯ ಪೂಜಾರಿ,

ಯೆದ್ರಿರು: ಚೋಮು ಕೂಡಾ.

ಮೇಲಿನ ವ್ಯವಹರಣೆಯಲ್ಲಿ ಅರ್ಜಿದಾರನ ಸಹೋದರ ತಮ್ಮನ ಯೆದ್ರಿರ ಅಣ್ಣ ಹಾಲ್ ಮೃತಪಟ್ಟ ಹುಕ್ರ ಪೂಜಾರಿಯು ಬಾಬ್ತು ಅರ್ಜಿಯ ಶೆಡ್ಯೂಲಿನಲ್ಲಿ ವಿವರಿಸಿದ ಹಣಗಳು ವಸೂಲಿ ಬಗ್ಗೆ ತನಗೆ ವಾರಿಸಿಸರ್ಟಿಫಿಕೆಟು ಕೊಡಿಸಬೇಕಾಗಿ ಅರ್ಜಿದಾರನು ದಾವಿ ಮಾಡಿಕೊಂಡಿರುವದರಿಂದ ಆ ಕುರಿತು ಆಕ್ಷೇಪವುಳ್ಳವರು ಬರುವ ನವಂಬ್ರ ತಾರೀಕು 10ನೇ ಪೂರ್ವಾಹ್ನ ಹತ್ತು ಘಂಟೆಗೆ ಈ ಕೋರ್ಟಿನಮುಂದೆ ಖುದ್ದು ಯಾ ವಕೀಲರ ಮುಖಾಂತ್ರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹಿರುಮಾಡಿಕೊಳ್ಳತಕ್ಕದ್ದು.

ಪುತ್ತೂರು, ತಾ 9—10—28. — (Sd) M. SHIVA RAO, *Pleader for Petr.*

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಓ ಪಿ ನಂಬ್ರ 115/1928.

ನಾರಾಯಣ ಪ್ರಭು (ಮೈನರು) ರಕ್ಷಕಳು ತಾಯಿ ಕಮಲಾವತಿ ಯಾನೆ ರುಕ್ಮಿಣಿ ಬಾ—ಅರ್ಜಿದಾರಳು.

ಎದ್ರಿ

ಹೊಸಮಟ ನರಸಿಂಹ ಪ್ರಭು ಸಹಾ—ಎದ್ರಿರು.

ಅರ್ಜಿದಾರನ ಮೃತಪಟ್ಟ ತಂದೆ ಹೊಸಮಟ ನಾರಾಯಣ ಪ್ರಭುಗಳಿಗೆ "ದಿ ಬೊಂಬೈ ಲೈಫ ಎಶ್ಶುರೆನ್ಸ್ ಕಂಪೆನಿ ಲಿಮಿಟೆಡ್ ಬೊಂಬೈ" ಎಂಬ ವಿಮೆ ಕಂಪೆನಿಯಿಂದ ನಂಬ್ರ 9660ನೇ ಪೋಲಿಸಿ ಪ್ರಕಾರ ಬರತಕ್ಕ ರೂಪಾಯಿ 2000—0—0 ಎರಡು ಸಾವಿರವನ್ನು ವಸೂಲು ಮಾಡುವರೆ ತನಗೆ ವಾರಿಸಿ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ಮೇಲ್ಕಂಡ ಕೋರ್ಟಿಗೆ ಮಾಡಿದ ಹುನವಿಯು ಸದರಿ ಕೋರ್ಟಿನಲ್ಲಿ ತನ್ನ ಬಗ್ಗೆ ತಾ. 24—11—1928ಕ್ಕೆ ಇಟ್ಟಿರುತ್ತದೆಂಬ ಸಂಗ್ತಿ ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

ಪುತ್ತೂರು 24—10—28 — **H. GANAPATHI RAO.** *Vakil for Petitioner.*

[illegible]ಂಗರಳು

[illegible] Woman's Heart.

(ಒಂದು ಸಣ್ಣ ಕಥೆ)

I

[illegible] ನದಿಯದು ಪಂಜಾಬದ ಒಂದು ಹಳ್ಳಿಯಲ್ಲಿ [illegible] ಸುಂದರವಾಗಿದ್ದಿತು. ಈ ಹಳ್ಳಿಯಲ್ಲಿಯೇ [illegible] ಯಾದ ಚಂಪೆಯು ಒಂದಾನೊಂದು ದಿನ [illegible] ವಾಯಿತು. ಚಂಪೆಯು ಕುಂದಿದ [illegible] ಪ್ರಾಯದಲ್ಲಿ ಮದುವೆಯಾದ ಮೇಲೆ [illegible] ಕೊಂಡಳು. ಗಂಡನು ಕೂಡ ಕುಡುಕ [illegible] ದರಿಂದ ಅವಳ ಜೀವನವು ಅಷ್ಟೊಂದು [illegible] ತ್ತಿದ್ದಿಲ್ಲ. ನೆರೆ ಹೊರೆಯುವರಿಗೆ ದೇಶಾ [illegible] ವರು ಆಗಾಗ ಸಹಾಯವನ್ನು ಮಾಡು ತ್ತಿದ್ದರು. [illegible] ದಿನ ಆಕೆಯ ಗಂಡನು ಇಹಲೋಕ [illegible] ಬಿಟ್ಟನು. ಚಂಪೆಯು ಆಶ್ರಯವಿಲ್ಲ ದವಳಾದಳು. ಮನೆಯಲ್ಲಿ ಚಿಕ್ಕಾಸೂ ಕೂಡ ಇರಲಿಲ್ಲ. [illegible] ನೀಗಿಸಬೇಕಾದರೆ ಒಂದಲ್ಲ ಒಂದು ವೃತ್ತಿಯನ್ನು ಕೈಕೊಳ್ಳಬೇಕಾಗಿದ್ದಿತು.

[illegible] ಆಕೆಯು ಊರಿನ ಒಬ್ಬ ಧನಿಕನ ಮನೆಯಲ್ಲಿ ಕೆಲಸಕ್ಕೆ ಉಳಕೊಂಡಳು. ಪ್ರಾತಃಕಾಲ ಸೂರ್ಯನು ಉದಯಿಸ ಬೇಕಾದರೆ ಪ್ರಾರಂಭಿಸಿದ ಆಕೆಯ ಕೆಲಸವು ರಾತ್ರಿ ಹನ್ನೊಂದು ಗಂಟೆಯ ತನಕ ಮುಗಿಯುತ್ತಿದ್ದಿಲ್ಲ. ರಾತ್ರಿ ಎಲ್ಲರ ಊಟವಾದ ಮೇಲೆ ಉಳಿದ ಅನ್ನದ ಪಾತ್ರೆಗಳನ್ನು ಹಿಡಿದು ಆಕೆಯು ತನ್ನ ಮನೆಗೆ ಹೋಗಬೇಕಾಗಿದ್ದಿತು. ಅಷ್ಟು ರಾತ್ರಿಯಲ್ಲಿ ಧನಿಕನ ಒಬ್ಬ ಸೇವಕನಾಗಿದ್ದ ನಂದನು ಆಕೆಯನ್ನು ಬಿಟ್ಟು ಬರುತ್ತಲಿದ್ದನು.

ನಂದನಿಗೆ ಮದುವೆಯಾಗಿರಲಿಲ್ಲ. ತಾನು ಆಕೆಯನ್ನು ಮದುವೆಯಾಗುವೆನೆಂದೂ ಮುಂದೆ ಇಬ್ಬರೂ ಕೂಡಿ ಚೆನ್ನಾಗಿ ಸಂಸಾರ ಮಾಡುವೆವೆಂದೂ ಒಂದು ದಿನ ಆತನು ಚಂಪೆ ಯೊಡನೆ ಪ್ರಸ್ತಾಪಿಸುತ್ತಿದನು. ಅಲ್ಲದೆ ಎಲ್ಲಿಯೋ ಅಡಗಿ ಹೋಗಿದ್ದ ಆಕೆಯ ಪ್ರಣಯವನ್ನು ಪುನರುಜ್ಜೀವಿಸುತ್ತಾ ಬಂದನು. [illegible] ವರುಷಗಳ ಕಾಲ ಗಂಡನೊಂದಿಗಿದ್ದರೂ ಒಂದು ದಿನವಾದರೂ ಆಕೆಯು ಪ್ರೇಮದ ಸಮ್ಮೋಹಕ ಸ್ಪರ್ಶ ವನ್ನನುಭವಿಸಿರಲಿಲ್ಲ. ಈಗ ನಂದನ ಪ್ರಣಯದ ಸುಗಂಧದ ಚಂಪೆಯ ಕಿವಿಯನ್ನು ಸೇರಿ ಅವಳನ್ನು ಮುಗ್ಧಗೊಳಿಸಿಬಿಟ್ಟಿತು. ನಂದನು ಆಕೆ ಸೂಚಿಸಿದ ವಿವಾಹದ ದಿನವನ್ನು ನಿರೀಕ್ಷಿಸುತ್ತ ಅವಳು ನಂದನ ಪ್ರೇಮದ ಕಲೆಯನ್ನು ಸ್ವೀಕರಿಸಿದಳು. ಕೆಲವು ಸಮಯದ ಮೇಲೆ ಚಂಪೆಯು ತನ್ನ ಪತನವನ್ನು ಅಡಗಿಸಿಡ ಲಾರದಾದಳು. ಅವಳು ತನ್ನ ಸೇವಕ ವೃತ್ತಿಯನ್ನು ಬಿಟ್ಟು ಮನೆಯಲ್ಲಿಯೇ ನಿಂತಳು. ನಂದನು ಕೆಲಕಾಲದ ವರೆಗೆ ಅವಳನ್ನು ಪೋಷಿಸಿದನು. ಆದರೂ ಅವಳನ್ನು ಮದುವೆಯಾ ಗಿರಲಿಲ್ಲ. ಒಂದು ದಿನ ನಂದನು, "ಚಂಪಾ, ನನ್ನ ಸಂಗಾತಿ ನೀಯು ಈಗ ನನ್ನನ್ನು [illegible] ಅಲ್ಲಿಗಲ್ಲಿಗೆ ಸಾಕಾಗುವದು. ನಿನಗೊಂದು ಕೂಸು ಜನಿಸಿದರೆ ಮತ್ತೆ ಅದನ್ನು ಪೋಷಿಸುವುದು ನನಗೆ ಅಶಕ್ಯವಾಗಬಹುದು. ಅದು ಕಾರಣ ಹುಟ್ಟಿದ ಮಗು ವನ್ನು [illegible] ಯಾದರೆ ಮಾತ್ರ ನನ್ನೊಡನೆ ನಿಲ್ಲ ಬೇಕು" ಎಂದನು. ಇದಕ್ಕೆ ಚಂಪೆಯು ಒಪ್ಪಿಗೆಯನ್ನೀಯ ಲಿಲ್ಲ. ನಂದನಿಗೆ ಹ್ಯಾಗೂ ಈ ತೊಂದರೆಯಿಂದ ತಪ್ಪಬೇಕಿತ್ತು. ಒಂದು ದಿನ ಹೇಳಿಯೇ ಬಿಟ್ಟನು—ನಿನ್ನೊಡನೆ ಮದುವೆ! ಮದುವೆಯಾಗಬೇಕಾದವಳೇ ನೀನು! ನಿನ್ನಂತಹ ಗಂತಿಯರು ಸಿಕ್ಕಲಿಕ್ಕೆ ಇಲ್ಲ!" ಈ ವಿಷಾಕ್ತ ಬಾಣವು ಎದೆಯೊಳಗೆ ನಟ್ಟಿಯೇ ಬಿಟ್ಟಿತು. ಚಂಪೆಯು ಎಚ್ಚೆತ್ತವಳಂತಾಗಿ ಮನೆ ಬಿಟ್ಟು ಹೊಂಟುಹೋದಳು.

II

"ಸ್ವಾಮಿ, ಚಂಪೆ ಒಂದಿಷ್ಟು ಅನ್ನವನ್ನು ಕೂಡ ಬಾರಿರಾ" ಎಂದು ಬಿಕ್ಕುಳು ಕೆಳಗುಂದಿದ ಹರಿದ ವಸ್ತ್ರವನ್ನುಟ್ಟ ಹೆಂಗಸು ಬೀದಿಯಲ್ಲಿ ತಿರುಗುತ್ತಿದ್ದಳು. ಒಂದು ಮನೆ ಯವರು ಆಕೆಯನ್ನು ಕರೆದು ಅವಳಿಂದ ಕೆಲವು ಕೊಡಪಾನ ನೀರನ್ನು ಹೊಯಿಸಿ ಆಕೆ ಬೇಕಾದಷ್ಟು ಅನ್ನವನ್ನು ಕೊಟ್ಟರು. ಪಾಪಿಷ್ಠ ಚಂಪೆಯು ಹೀಗೆ ದಿನಗಳೆಯುತ್ತಿದ್ದಳು. ಹೃದಯದ ತೀವ್ರವಾದ ಮಧ್ಯದಲ್ಲಿ ಸಹಿಸಲಾಗದ ಬಡತನದ ಸಮಯ ದಲ್ಲಿ ಆಕೆಯು ಒಂದು ಮಗುವನ್ನು ಹೆತ್ತಳು. ಅಂದಿ ನಿಂದ ಅವಳು ನೆರೆ ಹೊರೆಯವರಿಂದ ಜಾತಿಭ್ರಷ್ಟಳೆಂದು ತಿರಸ್ಕರಿಸಲ್ಪಟ್ಟಳಾದರೂ ಚಂಪೆಗೆ ಮಾತ್ರ ಮಗುವನ್ನು ಕಂಡು ಸ್ವರ್ಗ ಸುಖ ಲಭಿಸಿದಷ್ಟು ಆನಂದವಾಗುತ್ತಿದ್ದಿತು. ನಂದನನ್ನು ಬಿಟ್ಟಂದಿನಿಂದ ಆಕೆಯು ಮತಿಗೆಡುತ್ತಾ "ಬಂದಿದ್ದ ಕೆಲಸದಲ್ಲಿ ಮಗುವನ್ನು [illegible] ದಿಂದ ಮತ್ತೆ ಹೊಂದುತ್ತಾ ಬಂದಳು. ಮಗುವನ್ನು ಮುದ್ದಿಸುವದು, ಪ್ರೀತಿಸುವದು, ಅಪ್ಪಿಕೊಳ್ಳು ವದು ಇದೇ ಅವಳ ಕೆಲಸವಾದವು. ಮಗುವಿಗೆ ಸುಲೋ ಚನೆಯೆಂದು ಹೆಸರಿಟ್ಟಳು. ಊರಿನವರು ಅವಳನ್ನು ಕಂಡು ಅಪಹಾಸ್ಯ ಮಾಡುತ್ತಿದ್ದರೂ ಅವಳು ಲಕ್ಷಿಸದೆ ಮಗು ವನ್ನು [illegible] ಮುದ್ದಿಸುತ್ತಿರುವಳು. ಇದರಿಂದ [illegible] ಹುಚ್ಚಿಯೆಂದು ಪ್ರಸಿದ್ಧಿ ಹೊಂದಿದಳು.

ಪ್ರತಿ ದಿನವೂ ಬೇಡುತ್ತಾ ಅವಳು ಊಟಕ್ಕೆ ಸಂಗ್ರಹಿಸು ವಳು. ಕೆಲವರು, ಆಕೆಯನ್ನು ಕಂಡೊಡನೆ ಪ್ರೀತಿಯಿಂದ ಏನಾದರೂ ಧರ್ಮ ಕೊಡುವರು. ಕೆಲವು ಕಲ್ಲೆದೆಯವರು ಮಾತ್ರ ಅವಳನ್ನು ಗದರಿಸಿ ಓಡಿಸುವರು. ತನ್ನ ಮುದ್ದು ಮಗುವಿಗೆ ಆಹಾರವು ಲಭಿಸಿತೆಂದರೆ ಚಂಪೆಗೆ ಹಿಡಿಸಲಾರದಷ್ಟು ಆನಂದವಾಗುವದು.

ಚಂಪೆಯು ಈ ರೀತಿ ಆನಂದ ಪಡುವದು ಭಗವಂತನಿಗೆ ಸರಿದೋರಲಿಲ್ಲ. ಅಕಸ್ಮಾತ್ತಾಗಿ ಆಕೆಯ ಮುದ್ದು ಮಗು ವಿಗೆ ಜೋಂಪು ಹಿಡಿದು ಜ್ವರ ಪ್ರಾರಂಭವಾಯಿತು. ಆಕೆಯು ಅಲ್ಲಿನ ಸರಕಾರಿ ಆಸ್ಪತ್ರೆಗೆ ಒಯ್ದು ಡಾಕ್ಟರರಿಗೆ ಅದನ್ನು ತೋರಿಸಿ, ಔಷಧಗಳನ್ನು ಕೊಡಿಸಿದಳು. ಮಗುವಿನ ಮೇಲೆ ಅತಿಶಯ ಪ್ರೀತಿಯಿದ್ದ ಕಾರಣ ಆಕೆಯು ಅಳುತ್ತಾ ಡಾಕ್ಟರ ರೊಡನೆ ಪ್ರಾರ್ಥಿಸಿಕೊಂಡ ಕಾರಣ ಡಾಕ್ಟರರು ಆಕೆಯು ಹುಚ್ಚಿಯೆಂದು ತಿರಸ್ಕರಿಸದೆ ತಮ್ಮಿಂದಾದಷ್ಟು ಪ್ರಯತ್ನಿಸಿದರು. ಆರೈಕೆಯು ಮಾತ್ರ ಚೆನ್ನಾಗಿರದ ಕಾರಣ ಮಗುವಿನ ಕಾಹಿಲೆಯು ದಿನೇ ದಿನೇ ಬೆಳೆದು ಬಂದು ಒಂದು ದಿನ ಅದು ವಿಶೇಷವಾಯಿತು. ಡಾಕ್ಟರರ ಪ್ರಯತ್ನಗಳ- ಫಲಿಸದೆ ಹೋದುವು. ಮುದ್ದು ಸುಲೋಚನೆಯು, ಚಂಪೆಯ- ವಿಗ ಮಾತ್ರ ಜೀವನಾಧಾರವಾದ ಎಳೆಗೂಸು ಇಹಲೋಕವನ್ನು ಬಿಟ್ಟು ಪರಲೋಕವನ್ನು ಸೇರಿತು. ಆ ದಿನ ಅವಳಿಗೆ ಅಳು- ಬರಲಿಲ್ಲ. ಮಗುವಿನ ಸ್ಮಶಾನ ಕಾರ್ಯಗಳನ್ನು ತಾನೇ ತೀರಿಸಿದಳು. ಆದರೆ ಅಂದಿನ ವರೆಗಿನ ಅವಳ ಆನಂದವೂ, ಮಂದಹಾಸವೂ, ಉತ್ಸಾಹವೂ ಮಾತ್ರ ಆ ಮಗುವಿನೊಂದಿಗೆ ಮಾಯವಾದುವು.

ಚಂಪೆಯು ಕೆಲಸಕ್ಕೆ ಹೋಗುವದಿಲ್ಲ. ಕುಳಿತಲ್ಲಿಯೇ ಕುಳಿತುಕೊಳ್ಳುವಳು. ರಾತ್ರಿ ಎಚ್ಚರಿಸಾದರೂ ಅಕಸ್ಮಾತ್ತಾಗಿ ಪ್ರಯಾಣ ಬೆಳೆಸುವಳು. ಸಿಕ್ಕಿದರೆ ಉಣ್ಣುವಳು, ಇಲ್ಲದಿದ್ದರೆ ಕಲವು ದಿನಗಳ ವರೆಗೆ ಉಪವಾಸವಿರುವಳು. ಆಕೆಯ ಸ್ಮೃತಿಯು ಆಕೆಯ ಸ್ವಾಧೀನವಿರಲಿಲ್ಲ. ಥಕ್ಕನೆ ಜಾಗ್ರತಾ ವಸ್ಥೆಯನ್ನು ಹೊಂದಿದಾಗ ಮಾತ್ರ ಬೇಡಿ ಏನಾದರೂ ಸಂಪಾದಿಸಿ ಉಣ್ಣುವಳು.

III

ಚಂಪೆಯು ವಾಸಿಸುತ್ತಿದ್ದ ಊರಿನ ದಕ್ಷಿಣ ದಿಕ್ಕಿಗೊಂದು ಸಣ್ಣ ಕಾಡು. ಆ ಕಾಡನ್ನು ದಾಟಿ ಹೋದರೆ ಒಂದು ಚಿಕ್ಕ ಪಟ್ಟಣ. ಆ ಪಟ್ಟಣದ ಒಬ್ಬ ಸಾಹುಕಾರನ ಮಗಳಿಗೂ ಅಂದು ಚಂಪೆಯನ್ನು ಹಾಳುಮಾಡಿದ ನಂದನಿಗೂ ಮದುವೆಯು ನಿಶ್ಚಯವಾಗಿದ್ದಿತು.

ಈ ವಾರ್ತೆಯನ್ನು ಕೇಳಿ ಚಂಪೆಯು ತುಂಬಾ ಬದ ಲಾವಣೆಯನ್ನು ಹೊಂದಿದಳು ಎಂದಿನಂತೆ "ಹುಚ್ಚಳಾಗಿ ಕುಳಿತುಕೊಳ್ಳದೆ ಏನೋ ಆಲೋಚನೆಯಲ್ಲಿ ಮಗ್ನಳಾಗಿರುವಂತೆ ಕಾಣುವಳು. ಇತರರ ಮನೆಗಳಿಗೆ ಹೋಗಿ ಸ್ವಲ್ಪ ಸ್ವಲ್ಪ ಹಣ ವನ್ನು ಸಂಪಾದಿಸಿದಳು.

ಇಂದು ನಂದನ ಮದುವೆಯ ದಿನ. ನಂದನು ಹಳದಿ ವಸ್ತ್ರವನ್ನುಟ್ಟು ಸ್ನೇಹಿತರಿಂದಲೂ ಬಂಧು ಬಾಂಧವರಿಂದಲೂ ಆವರಿಸಲ್ಪಟ್ಟು ಒಂದು ಎತ್ತಿನ ಗಾಡಿಯಲ್ಲಿ ಕ್ಷಳಿತು ಮೆರವಣಿಗೆ ಹೋಗುತ್ತಿದೆ. ವಾದ್ಯಗಳವು ದಿಗಂತದಲ್ಲೆಲ್ಲೂ ವ್ಯಾಪಿಸಿರು ತ್ತದೆ. ಬಂಬರುತ್ತಾ ಮೆರವಣಿಗೆಯು ಕಾಡನ್ನು ಪ್ರವೇಶಿಸಿತು.

ಚಂಪೆಯು ಒಂದು ಹರಿತವಾದ ಚೂರಿಯನ್ನು ಕೊಂಡು ಕೊಂಡು ಒಂದು ವಿಷ ವೃಕ್ಷದ ರಸವನ್ನು ಅದಕ್ಕೆ ಲೇಪಿಸಿ ತನ್ನ ಉಡಿಗೆಯಲ್ಲಿ ಅದನ್ನು ಅಡಗಿಸಿಟ್ಟು ಮದುವೆಯ ದಿನ ಸೀದಾ ಕಾಡಿನ ಕಡೆ ನಡೆದಳು.

ಕಾಡನ್ನು ಹಾದು ಹೋಗಲು ಅಗಲವಾಗಿದ ಒಂದು ಹಾದಿ; ಇಕ್ಕಡೆಗಳಲ್ಲಿಯೂ ಇಕ್ಕಟ್ಟಾದ ವೃಕ್ಷ ಸಂಪತಿ; ಮರಗ ಳೆಡೆಯಲ್ಲಿ ಕತ್ತಲು ಕವಿದಿದ್ದ ಕಾರಣ ಕಳ್ಳರಿಗಾರು ಅಡಗಿ ಕುಳಿತರೂ ಹಾದಿಯಲ್ಲಿ ಹೋಗುವವರಿಗೆ ಕಾಣಲಾರದು. ಇಂತಹ ಕತ್ತಲೆಯ ಸ್ಥಳದಲ್ಲಿಯೇ ಚಂಪೆಯು ಅಡಗಿ ಕುಳಿತಳು. ತನ್ನನ್ನು ಇಂತಹ ಅಧೋಗತಿಗೆ ಇಳಿಸಿದ ಆ ನಿಷ್ಕರುಣಿ ನಂದ ನಿಗೆ ತಕ್ಕ ಪ್ರತೀಕಾರವನ್ನು ಮಾಡಬೇಕೆಂಬ ಉದ್ದೇಶದಿಂದಲೇ ಅವಳು ಅಲ್ಲಿ ಅಡಗಿದುದು. ಘಳಿಗೆ ಘಳಿಗೆಗೂ ಅವಳ ಕೈಯು ಸೊಂಟದಲ್ಲಿ ಸಿಕ್ಕಿಸಿಟ್ಟಿದ್ದ ಚೂರಿಯ ಕಡೆಗೆ ಹೋಗು ತ್ತಿತ್ತು. ಮೆರವಣಿಗೆಯು ಅವಳಿದ್ದ ಅರಣ್ಯವನ್ನು ಸಮೀಪಿಸಿ ತಿತ್ತು. ಎಡೆಯಿಂದ ನೋಡಿದಳು. ನಂದನ ಹಳದಿ ವಸ್ತ್ರವು ನಂದನಿರುವ ಸ್ಥಳವನ್ನು ತೋರಿಸುತ್ತಿದ್ದಿತು. ಹೊಡೆಯಬೇಕು. ಮನಸ್ಸಿನ ಧೈರ್ಯವು ಸಾಕಾಗಲಿಲ್ಲ. ಆಗ ನೆನಪಾಯಿತು. "ನಿನ್ನಂತಹ ಗಂತಿಯರು ಸಿಕ್ಕಲಿಕ್ಕೇ ಇಲ್ಲ" ಪುನಃ ನೆನಪಾ ಯಿತು. ಸುಲೋಚನೆಯ ಮುಖ! ಇನ್ನು ತಡಿಯಲಾಗಲಿಲ್ಲ. ಎದ್ದು ಹೊರಟಳು. ಆದರೆ ಧೈರ್ಯ ಸಾಕಾಗಲಿಲ್ಲ. ಹಿಂದೆ ಬಂದಳು, ಪುನಃ ಹೊರಟಳು; ಪುನಃ ಹಿಂದೆ ಬಂದಳು. ಆ ಏಕಾಂತದಲ್ಲಿ ಪುನಃ ಚಿಂತಿಸಿದಳು. ಹಲವು ದಿನಗಳ ಕಷ್ಟ ದಿಂದ ಸಂಪಾದಿಸಿದ ಎರಡು ಕಾಸುಗಳಿಂದ ಆ ಚೂರಿಯನ್ನು ಕೊಂಡುಕೊಂಡಿದ್ದಳು; ಹಲವು ದಿನಗಳಿಂದ ಮನಸ್ಸಿನಲ್ಲಿ ನಂದನನ್ನು ಈ ಲೋಕದಿಂದ ಬಹಿರ್ಗತನಾಗಿ ಮಾಡಲು ನಿಶ್ಚ ಯಿಸಿದ್ದಳು. ಈ ದಿನ ಎಲ್ಲಾ ತಯಾರಿಯು ಪೂರ್ಣ ವಾಗಿದ್ದಿತು.

ಇಷ್ಟರೊಳಗೆ ನಂದನ ಮೆರವಣಿಗೆಯು ತೀರಾ ಹತ್ತಿರ ವಾಯಿತು. ನಂದನ ವಸ್ತ್ರವನ್ನು ನೋಡಿ ಅವನು ಎದುರಿ ನಲ್ಲಿಯೇ ಇರುವನೆಂದು ತಿಳಿದಳು. ಪುನಃ ತನ್ನ ಕತ್ತಿಯನ್ನು ಮುಟ್ಟಿದಳು. ಮೂರನೇ ಬಾರಿಗೆ ತನ್ನ ಅಡಗಿದ ಸ್ಥಳದಿಂದ ನಂದನ ಕಡೆಗೆ ಓಡಿದಳು.

ನಂದನ ಅದೇ ಸುದೃಢ ಮೂರ್ತಿ. ಅವನನ್ನು ನೋಡದೆ ಇಂದಿಗೆ ಒಂದೂವರೆ ವರುಷವಾಯಿತು. ಈ ಒಂದೂವರೆ ವರುಷದಲ್ಲಿ ಚಂಪೆಯು ಬಹಳ ಬದಲಾಗಿದ್ದಳು. ಆದರೆ ನಂದನು ಅದೇ ನಂದನಾಗಿದ್ದನು. ಅವಿಶ್ರಾಂತವಾಗಿ ಶ್ರಮಿ ಸಿದ ದಿನಾಂತದ ನಿಶೀಥದ ಏಕಾಂತದಲ್ಲಿ ತನ್ನ ತೃಷಿತ ಎದೆ ಯಲ್ಲಿ ಪ್ರೇಮದ ಸುಧಾರಸವನ್ನು ಸುರಿದ ಅದೇ ಮೂರ್ತಿ! ಆ ಪೂರ್ವ ಸ್ಮೃತಿಯು ಉಂಟಾದ ಮಾತ್ರದಿಂದಲೇ ಆ ಹತ ಭಾಗಿನಿಗೆ ಅಂದಿನ ಸುಖಸ್ವರ್ಗದ ಸ್ವಪ್ನಾನುಭವವಾಯಿತು. ತಾರುಣ್ಯ ಆ ಸಮ್ಮೋಹಕ ಪ್ರೇಮದ ಕರೆಯು ಇದೇ ನಂದ ನಿಂದ ಬಂದಿದ್ದಿತು; ಸ್ತ್ರೀ ಹೃದಯದ ಏಕಮಾತ್ರ ಅಭಿಮಾನ ವಾಗಿರುವ ಮಾತೃಸ್ಥಾನವು ಅಲ್ಪಸ್ಥಾಯಿಯಾಗಿದ್ದರೂ ಚಂಪೆಗೆ ಇದೇ ನಂದನ ವರದಾನವಾಗಿದ್ದಿತು.

ನಂದನ ಮುಖವನ್ನು ನೋಡಿದ ತಕ್ಷಣವೇ ಆ ಹಿಂದಿನ ಸುಖಸ್ಮೃತಿಯು ವರ್ಷಾಕಾಲದ ಘನವಿದ್ಯುತ್ತಿನಂತೆ ಅವಳಲ್ಲಿ ಮಿಂಚಿ ಸಾಗಿತು. ಚಂಪೆಯು ಹೆದರಿದ ಹರಿಣದಂತೆ ಅಲ್ಲಿಂದ ಹಿಂದೆ ಓಡಿ ಕಾಡಿನಲ್ಲಿ ಮರೆಯಾದಳು. ನಂದನ ಸಂಗಡಿಗರು "ಹೊ, ನೋಡಿ, ಹುಚ್ಚಿ, ಹುಚ್ಚಿ" ಎಂದರು.

IV

ಮದುವೆಯನ್ನು ತೀರಿಸಿ ನಂದನು ಹಿಂತಿರುಗುತ್ತಿದ್ದಾನೆ. ಅಂದಿನ ಮೆರವಣಿಗೆಗಿಂತಲೂ ಇಂದಿನ ಮೆರವಣಿಗೆಯು ವಿಶೇಷ ಸಂಭ್ರಮದ್ದು. ಕೋಲಾಹಲವೂ ವಿಪರೀತವಾಗಿದ್ದಿತು. ಮೆರ ವಣಿಗೆಯು ಮುಂದುಗಡೆ ಎರಡು ಪಾಲಕಿಗಳು, ಮುಂದಿನದ ರಲ್ಲಿ ನಂದನು; ಹಿಂದಿನದರಲ್ಲಿ ಆತನ ನವ ವಧು. ನಂದನ ಮುಖದ ಮೇಲೆ ಆನಂದವಿರಲಿಲ್ಲ. ಏನೋ ಗಾಢಾಲೋಚನೆ ಯಲ್ಲಿ ಮಗ್ನನಾಗಿದ್ದಂತೆ ತೋರುತ್ತಿದ್ದನು. ಸ್ನೇಹಿತರೊಡನೆ ಮಾತನಾಡಲೂ ಮನಸ್ಸಿರಲಿಲ್ಲ. ಒಬ್ಬರಿಯ ಮೇಲೆ ಆತ ನಿಗೆ ಯಾವುದೂ ರುಚಿಸುತ್ತಿರಲಿಲ್ಲ. ಅಂದು ಮದುವೆಗೆ ಹೋಗುತ್ತಿರುವಾಗ ಅಕಸ್ಮಾತ್ತಾಗಿ ಚಂಪೆಯು ಕಾಣಿಸಿಕ್ಕೆ ದುದೂ ಮತ್ತು ಅತ್ಯಕ್ತ ನೋಟವುದರೊಳಗೆ ಆಕೆಯು ಮಾಯ ವಾದುದೂ ಇವೆಲ್ಲವುಗಳಿಂದ ಆತನ ಉತ್ಸಾಹವೇ ಕುಗ್ಗಿ ಹೋಗಿ ದ್ದಿತು. ಅಲ್ಲದೆ ಚಂಪೆಯು ಹುಚ್ಚಿಯೆಂಬ ಸುದ್ದಿಯು ಆತನ ಕಿವಿಗೆ ಬಿದ್ದಿತ್ತು. ಚಂಪೆಯನ್ನು ನೋಡದೆ ಹದಿ ನೆಂಟು ತಿಂಗಳುಗಳಾಗಿದ್ದುವು. ನಂದನ ಕಾಣಸಿಕ್ಕದು ದಾದ ಸಂದರ್ಭಗಳನ್ನು ಚಂಪೆಯು ಜಾಣತನದಿಂದ ತಪ್ಪಿಸಿ ಕೊಳ್ಳುತ್ತಿದ್ದಳು. ಮೊದಲನೆಯ ದಿನ ಅವಳು ಸಿಕ್ಕಿದ್ದ ರಿಂದ ಆತನಿಗೆ ತಾನು ಮಾಡಿದ ಆ ಹಿಂದಿನ ಅನ್ಯಾಯವು ಕೊಳೆತು ಅದಕ್ಕಾಗಿ ಪಶ್ಚಾತ್ತಾಪ ಬರುತ್ತಲಿದ್ದನು. ಆ ವಿಷ ಯವೇ ಆತನ ಮನಸ್ಸಿನಲ್ಲಿ ಕಟುಕ ತೊಡಗಿದ್ದರಿಂದ ಅನ್ಯ ರಿಗೆ ಮುಖ ತೋರಿಸಲು ಆತನು ನಾಚಿಕೊಳ್ಳುತ್ತಿದ್ದನು. ಮದು ವೆಯಾಗಿ ಹಿಂತಿರುಗುವಾಗಲೂ ಆತನಲ್ಲಿ ಈ ವಿಷಯಗಳೇ ಪುನಃ ಪುನಃ ನೆನೆಗೆ ಬರುತ್ತಿದ್ದವು.

ಅಂದು ತನ್ನ ನಿಶ್ಚಯವು ಭಂಗವಾದುದಕ್ಕಾಗಿ ಚಂಪೆಯು ನಾಚಿ ತನ್ನ ಹೇಡಿತನಕ್ಕೆ ತನ್ನನ್ನು ತಾನೇ ಹಳಿದುಕೊಂಡಳು. ಆದರೂ ತನ್ನ ನಿಶ್ಚಯವನ್ನು ಮರೆತಿದ್ದಳು. ಅವಳಿಗೆ ಮನ ಸ್ಥಿರವಿಲ್ಲ. ಅದೇ ಕಾರಣ ನಂದನು ಹಿಂತಿರುಗುವಾಗ ತನ್ನ ಇಚ್ಛೆಯನ್ನು ಪೂರ್ತಿಗೊಳಿಸಬೇಕೆಂದು ಅವಳು ಪುನಃ ಅಂದಿ ನಂತೆ ಅದೇ ಕಾಡಿನ ಒಂದು ದಟ್ಟವಾದ ಮರಗಳೆಡೆಯಲ್ಲಿ ಆಶ್ರಯವನ್ನು ಪಡೆದು ಅಡಗಿ ಕುಳಿತಳು. ಮೆರವಣಿಗೆಯ ವಾದ್ಯಗಳು ಅವಳ ಕಿವಿಯನ್ನು ಪ್ರವೇಶಿಸಿ ಅವಳನ್ನು ಇನ್ನಷ್ಟು ಹುಚ್ಚಿಯನ್ನಾಗಿ ಮಾಡಿದುವು. ಅವಳಲ್ಲಿ ಸಹಿಸ ಲಸಾಧ್ಯವಾದ ಕೋಪವುಂಟಾಯಿತು. ಮೈಯಲ್ಲೆಲ್ಲಾ ರಕ್ತವು ಕುದಿಯ ತೊಡಗಿತು. ಎರಡೂ ಪಾಲಕಿಗಳು ಎದುರಿಗೆ ಬಂದೊ ಡನೆ ಅವಳು ಬೇರೆ ಆಲೋಚಿಸದೆ ಚೂರಿಯನ್ನು ಹಿಡಿದು ಧೈರ್ಯದಿಂದ ಅವರ ನಡುವೆಗೆ ಥಕ್ಕನೆ ಹಾರಿಯೇ ಬಿಟ್ಟಳು.

ಹದಿನೆಂಟು ತಿಂಗಳುಗಳ ಹಿಂದೆ ಆಕೆಯನ್ನು ತ್ಯಜಿಸಿದ ಮೇಲೆ ಇಂದು ಮಾತ್ರವೇ ನಂದನು ಚಂಪೆಯನ್ನು ಸರಿಯಾಗಿ ನಿರೀಕ್ಷಿಸಿದುದು. ಅವಳನ್ನು ಕಂಡೊಡನೆ ಅವನ ಸರ್ವಾಂಗವೂ ಕಂಪಿಸತೊಡಗಿತು. ಅಂದು ಯತ್ನದಿಂದ ಪ್ರತಿಯೊಬ್ಬರನ್ನು ನೋಡಗೊಳಿಸುತ್ತಿದ್ದ ಆ ಚಂಪೆಯೇ? ಇಂದಿನ ಕೃಶವಾದ ದೇಹದಿಂದಲೂ, ಹರಿದ ವಸ್ತ್ರದಿಂದಲೂ ಇರುವ ಚಂಪೆಯೆಲ್ಲಿ?

ಆನೇ ಪೇಜಿಗೆ ಮುಂದುವರಿದುದು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್: ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲಾಕುಗಳೂ, ಟೈಮ್‌ಪೀಸ ಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಿದ್ದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ. ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ವಿ. ಸೂ. – [illegible] ವಾಚು [illegible] ವರ್ಷ [illegible] ಕೊಡಿಸಿ [illegible] ಸಂದರ್ಭದ ಸಮಯವು ದೊರಕುವುದು

ಸರ್ವರಿಗೂ
ಸುಮುಹೂರ್ತ [illegible]

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲೆ

ಪೋಸ್ಟ್ ಕಾಂಞಂಗಾಡ್ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ್ [illegible]

ಆಯುರ್ವೇದ ವೈದ್ಯ ಸಭೆಯಲ್ಲಿ [illegible] 'ವೈದ್ಯರತ್ನ'ಯೆಂಬ ಬಿರುದು ಪಡೆದ ಪ್ರಸಿದ್ಧ [illegible] ರತ್ನ ಪರಮೇಶ್ವರ ಮೂಸಾದ್' ಅವರಿಂದ [illegible]

ಅನುಭವಶಾಲಿಯಾದ ಕಣ್ಣಿನ ವೈದ್ಯರಿಂದ [illegible] ಯಲ್ಲ ಸರ್ವ ಆಬಾಲವೃದ್ಧರಿಗೆ ಬಾಧೆ [illegible] ಗಳನ್ನು ಪರೀಕ್ಷಿಸಿ ಚಿಕಿತ್ಸೆ [illegible] ಗಳು, ಲೇಹಗಳು, ಘೃತಗಳು, ತೈಲ, ಮತ್ತು [illegible] ಇತ್ಯಾದಿ ಸಿದ್ಧೌಷಧಗಳು ನಮ್ಮಲ್ಲಿ ಯಾವಾಗಲೂ [illegible] ಇರುತ್ತವೆ. ಅನುಕೂಲಸ್ಥರಾದ [illegible] ದೇಶದ [illegible] ರೋಗದ ವಿವರವಾದ ಲಕ್ಷಣಗಳು, [illegible] ದದ ಕ್ರಮ, [illegible] ಮೊದಲಾದ [illegible] ಇದ್ದರೆ ಆ ವಿವರ [illegible] ನಡೆಸಿದ ಚಿಕಿತ್ಸೆ [illegible] ರೋಗಿಯು [illegible] ಸಂಗತಿಗಳಲ್ಲಿ [illegible] ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ [illegible] ಬಂದು [illegible] ಸಂಗತಿಗಳಲ್ಲಿ [illegible] ಪತ್ರವ್ಯವಹಾರ ನಡೆಸಿದಲ್ಲಿ [illegible] ಅವರ [illegible] ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು [illegible] ಎಲ್ಲಾ [illegible] ವೈದ್ಯಶಾಲೆಯು [illegible] ಸಿದ್ಧವಾಗಿರುವದು. [illegible] ಮದ್ದುಗಳನ್ನು [illegible] ಮುಖಾಂತರ ವ್ಯವಹಾರ ನಡೆಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ್ (ದ. ಕ.)

ಕರ್ನಾಟಕ ಭಾಷೆಯಲ್ಲಿ ಕನ್ನಡಿಗರ ಬಗ್ಗೆ

THE MOTORIST.

ಮೋಟರಿಸ್ಟ.

Edited by:—V. S. KUDVA Esqr,
Worksmanager, C. P. C. Co., Ltd, Mangalore.

Manager—V. K. Kamath Esqr,
Sharada Press, Mangalore.

ಸಂಪಾದಕರು— ಶ್ರೀ. ವಿ. ಎಸ್. ಕುಡುವಾ,
ವರ್ಕ್ಸ್‌ಮೆನೇಜರ, ಸಿ. ಪಿ. ಸಿ. ಕಂಪೆನಿ, ಲಿಮಿಟೆಡ್, ಮಂಗಳೂರು.

ಮೆನೇಜರ್— ಶ್ರೀ. ವಿ. ಕೆ. ಕಾಮತ್,
ಶಾರದಾ ಛಾಪಖಾನೆ, ಮಂಗಳೂರು.

ನೂತನ ಪತ್ರಿಕೆ. ಎರಡು ತಿಂಗಳಿಗೊಂದು ಬಾರಿ ಹೊರಡುವದು.

ಪ್ರಥಮ ಸಂಚಿಕೆ—ಜನವರಿಯಲ್ಲಿ.

ಸರಿಯಾಗಿ ವ್ಯವಸ್ಥೆಗೊಳಿಸಲ್ಪಟ್ಟ ಮೇಲೆ ತಿಂಗಳಿಗೊಂದುಬಾರಿ ಹೊರಡುವುದು.

ಉದ್ದೇಶ — 1 ಕರ್ನಾಟಕ ಭಾಷೆಯಲ್ಲಿಯೇ ಮೋಟರು ವಾಹನದ ಯಾಂತ್ರಿಕ ಪರಿಜ್ಞಾನವು ಮೋಟರುಗಾರರಿಗೆ [illegible] ಉಂಟಾಗುವಂತೆ ಮಾಡುವುದು.
2 ಮೋಟರು ಗಾಡಿಗಳಲ್ಲಿ ಉಂಟಾಗುವ ಸಂಶೋಧನೆಗಳನ್ನು ಕರ್ನಾಟಕೀಯರ ತಿಳುವಳಿಕೆಗೆ ಕೂಡಲೇ ತರುವುದು.
3 ಮೋಟಾರ ಗಾಡಿಗಳ [illegible] ಬಗ್ಗೆ ಕನ್ನಡ ವರ್ತಮಾನವನ್ನು ಕೊಡುವುದು.
4 ಮೋಟಾರ ಗಾಡಿಗಳನ್ನೋಡಿಸುವ ಕಲೆಯನ್ನು ಅಭಿವೃದ್ಧಿಪಡಿಸುವುದು.
5 ಮೋಟಾರ ಬಸ್ಸುಗಳ ವ ಟೆಕ್ಸಿಗಳ ಸರ್ವಿಸುಗಳ ವ್ಯವಸ್ಥೆ ಬಗ್ಗೆ ಉಪಯುಕ್ತ ಸೂಚನೆಗಳನ್ನು ಕೊಡುವುದು.
6 ಮೋಟಾರ ಕಾನೂನಿನ ವಿಷಯ ಉಪಯುಕ್ತ ವಾದವನ್ನು ನಡೆಸುವುದು.
7 ಮೆಜಿಸ್ಟ್ರೇಟ ಕೋರ್ಟುಗಳಲ್ಲಿ ಆಗಿಂದಾಗ್ಗೆ ಡ್ರೈವರರ ಮೇಲೆ ಕೊಡಲ್ಪಡುವ ತೀರ್ಮಾನಗಳ ನ್ಯಾಯಾನ್ಯಾಯಗಳನ್ನು ಚರ್ಚಿಸುವುದು.
8 ಮೋಟಾರ ವೃತ್ತಿಯಲ್ಲಿ [illegible] ಎಲ್ಲರಿಗೂ ಹಿತಕರವಾದ ವಿಷಯಗಳನ್ನು ಪ್ರಸ್ತುತಪಡಿಸುವುದು.

ಚಂದಾಹಣ — ವರ್ಷಕ್ಕೆ ರೂಪಾಯಿ ಮೂರು. ಬಿಡಿಸಂಚಿಕೆಗೆ ಆಣೆ ಹದಿನೆರಡು.

ಪ್ರತಿ ಸಂಚಿಕೆಯಲ್ಲಿಯೂ ಯಾಂತ್ರಿಕ ಪರಿಜ್ಞಾನವನ್ನುಂಟುಮಾಡುವ ಚಿತ್ರಗಳು ತಪ್ಪದೆ ಬರುವುವು. ಚಂದಾಹಣದ ಅಧಿಕಾಂಶವು ಚಿತ್ರಗಳನ್ನೊದಗಿಸಲು ವಿನಿಯೋಗಿಸ ಲ್ಪಡುವುದು. ಸ್ವಂತ ಮೋಟಾರನ್ನು ಇಟ್ಟುಕೊಂಡವರು, ಡ್ರೈವರು, ಬಸ್ಸಿನ ಮಾಲೀಕರು, ಮೋಟರ ಮೆಕೆನಿಕ್ ಮತ್ತು ಫಿಟ್ಟರರು, ಇವರಿಗೆ ಬಹಳ ಉಪಕಾರಿಯಾದದ್ದು.

ಪ್ರಥಮ ಸಂಚಿಕೆಯಿಂದ "ಮೋಟರ ಕೈಪಿಡಿ" (Motor Manual) ಎಂಬ ಚಿತ್ರಸಹಿತವಾದ ಪುಸ್ತಕವು ಪ್ರತ್ಯೇಕ ಪುಟ ಸಂಖ್ಯೆಯಿಂದ ಕ್ರಮವಾಗಿ ಪ್ರಕಟಿಸಲ್ಪಡುವುದು.

ಈ ಪತ್ರಿಕೆಯ ವಿಷಯ ಪತ್ರವ್ಯವಹಾರವನ್ನು ನಡೆಸಲಿಚ್ಛಿಸುವವರು, ಮತ್ತು ಚಂದಾದಾರರಾಗಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆದು ತಿಳುಕೊಳ್ಳಬಹುದು.

THE MANAGER,
THE MOTORIST,
Car Street, Mangalore.

ಮೋಟರಿಸ್ಟ ಪತ್ರಿಕೆಯ ವ್ಯವಸ್ಥಾಪಕರು,
ರಥಬೀದಿ,
ಮಂಗಳೂರು.

Edited Printed & Published by V. S. Kamath at the M. T. A. Sharada Press, Mangalore.

ಮುಂದಾಗಿ ವಾರ್ಷಿಕ ಚಂದಾ:—ವರ್ಷ ಒಂದಕ್ಕೆ ರೂಪಾಯಿ 2—0—0 Registered: No. M. 489 ಟಪ್ಪಾಲು ಹಾಸಲು ಸೇರಿ ರೂಪಾಯಿ 2—13—0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ । ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ನಾ । [illegible] ಹಾಲಾಹಲವಾಯಿತೆ ಮತ್ತೆ ವಿಶ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು [illegible] ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೨ನೇ ಶುಕ್ರವಾರ ನವಂಬರ ೧೯೨೮. (2—11—28.) ಸಂಚಿಕೆ ೪೪

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR
Mangalore.
ಶಾಖೆ:—ಕುಂದಾಪುರ.
„ ಮಂಗಳೂರು.

Statement of Affairs of the Canara Banking Corporation Udipi, Limited as at 30th September 1928

	CAPITAL AND LIABILITIES.			PROPERTY AND ASSETS	
1	Paid up Capital	Rs. 1,99,650—0—0	1	Premises Building Furniture &c.	Rs 9,491-2-0
2	Reserve Fund and other funds	„ 96,600-0-0	2	Investments on G. P. Notes	„ 3,34,218-5-0
3	Deposits	„ 16,05,615-10-4	3	Investments on Approved Securities	„ 17,04,481-[illegible]
4	Overdraft with Bankers	„ 42,371-5-4	4	Bills for collection as per Contra	16,696-14-9
5	Sundry Persons' A/C as per Contra	„ 16,696-14-9	5	Sundries including P & L items	„ 93,401-14-5
6	Sundries including P & L items	„ 1,37,730-0-10	6	Cash in hand & with Bankers.	„ 30,374-5-0
	Total	21,88,663-15-3		Total	21,88,663-15-3

Office of the Corporation,
UDIPI, 4—9—'28.

N. ANANDA RAO.
Secretary

ಅಮೃತಾಂಜನ

ಕ್ಷಣಿಕ ಪ್ರಯೋಜನವಲ್ಲಿ ಪ್ರಸಿದ್ಧವಾದ ನೋವಿನ
— ಮುಲಾಮು. —

ತಲೆನೋವಿನಿಂದ ಚಡಪಡಿಸುವ, ಶೀತದಿಂದ [illegible] ಕೆಮ್ಮಿನಿಂದ [illegible] ಮತ್ತು ಇತರ ಯಾವ ವಿಧದ ನೋವು [illegible] ಬಳಲುವ ಮನುಷ್ಯನಿಗೆ [illegible]

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ



[illegible]

ಗಜಕರ್ಣದ ಮುಲಾಮು — [illegible] ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ — [illegible] ಕ್ರಯ [illegible] ಆಣೆ 2.

ಅಮೃತಾಂಜನ ಡಿಪೋ.

ನಂ. 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜಟೌನ್, ಮದ್ರಾಸು. 249 ಫ್ರೆಯರ್ ರೋಡ್ ಮುಂಬಯಿ,
ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದ ರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿ ಯಾಗುತ್ತದೆ. ಇದು ಮಧುರವಾಗಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು—ದಿ ಊಲನ್ ಮಾರ್ಟ್, ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas
Postage Extra.
For copies apply to:
The M. T. A. Sharada Press.
Car-street, MANGALORE.

ADVERTISE IN OUR WEEKLY
To Reach the Hearths & Homes of India's Masses
For Particulars Apply to:
The Manager,
SWADESHABHIMANI,
MANGALORE.

ಪತ್ರಪ್ರವಹಾರ.

(ಪತ್ರಕಾರರ ಅಭಿಪ್ರಾಯಗಳಿಗೆ ನಾವು ಬಾಧ್ಯರಲ್ಲ.)

ಯದ್ಭಾವಂ ತದ್ಭವತಿ.

ಮನುಷ್ಯನು ಹೃದಯದ ಕಲ್ಮಶವನ್ನೇ ಬಾಯಿಯಲ್ಲಿ ಉಸುರುವ ದಾಗಿದ್ದಾದರೆ "ಒಳಗಿನ ಗುಟ್ಟು ಶಿವನೇ ಬಲ್ಲ" ನೆಂಬ ವಾಕ್ಯವು ಕಾರಿಕಲ್ ಗ... ...ರ ನವಯುಗದ ಸಂಚಿಕೆಯಲ್ಲಿ ಸೂಚಿಸಲ್ಪಡುತ್ತಿತ್ತೆ? ಇಂಥಾ ಹೆಸರಿನಿಂದಲೂ ವೃಥಾ ಅನ್ಯತಗಳನ್ನೇ ಸೂಚಿಸುವುದೆಂದರೆ ಎಂಥಾ ಪಾಪ!

ಕೆನರಾ ಫೂಟ್‌ಬೋಲ್ ಕ್ಲಬ್ಬಿನವರು ನಮ್ಮ ಪಂದ್ಯಾಟದ ಪ್ರತಿ ನಿಬಂಧನೆಗಳನ್ನು ಒದಗಿಸಿಕೊಟ್ಟ ಮಹಾನುಭಾವರು. ಅವರು ಬೇರೆಯೇ ಇದ್ದವರು? ಅಲ್ಲವಾದರೆ ಪಂದ್ಯಾಟದ ಮೊದಲು ಒತ್ತಾಸೆ ಮಾಡುವೆನೆಂದು ಬಾಸಕೊಟ್ಟ ಮೇರೆಗೆ ನಡೆಯದೆಯೂ, ಹಲವರು ಹಲವು ಬಗೆಗಳಲ್ಲಿ ಪ್ರತಿಕೂಲಿಕರಾಗಿ ವರ್ತಿಸಿದ ದುಃಖಕರ ಸಂಗತಿಯು. ಇನ್ನೂ ಅವರ ಆತ್ಮ... ...ಯಿಂದಲ್ಲ, ಸಿರಿಭಡೋಕದಿಂದಲೇ ನಿಜ. ಯಾವ ಮಹನೀಯರು ನಮ್ಮ ವಿದ್ಯಾದಾಯಿನ್ನೀ ಯಸ್. ಯಫ್. ಕ್ಲಬ್ಬಿಗೆ ಮೆಂಬರನಾಗುವೆನೆಂದು ಒಂದಲ್ಲ ಎರಡು ಸಲ ಪ್ರತಿಜ್ಞೆಗೈದುದೂ, ನಮ್ಮ ಮೆಂಬರಶಿಪದ ಫಸ್ಕಳದಲ್ಲಿ ತಾನಾಗಿಯೇ ದಸ್ಕತು ಮಾಡಿರುವುದೂ ಅಲ್ಲದೆ ಎಲ್ಲರಿಗಿಂತ ಹೆಚ್ಚಾಗಿ ತಾನು ತಂಗಳಿಗೆ ಒಂದು ರೂಪಾಯಿಯಂತೆ ಚಂದಾ ಹಣ ಕೆರುತ್ತ ಬರುವೆನೆಂದು ಆಡಂಬರದಿಂದ ನುಡಿದು, ನಮ್ಮೊಡನೆ ಆಡಿ, ತಿಂದು ಕಡೆಗೆ ಪೈಯೋ... ...ದ್ದರಿಂದ, ಫೂಟ್ ಬೋಲ ಗಳಲ್ಲಿ ಕಾಲಿಡುತ್ತ ಕೊನೆಯಲ್ಲಿ ಕೆನರಾ ಫೂಟ್‌ಬೋಲ್ ಕ್ಲಬ್ಬಿನವರೊಡ ಗೂಡಿದರೂ ಅಂಥಾ ಯಾ ಕ... ...ದಿಂದ ಅವರ ವರ್ತನೆಯು ಸಂಪೂರ್ಣವಾಗಿ ಮಾರ್ಪಟ್ಟಿತು. ಸ್ವಲ್ಪ ಮಂದಿಯು ಇನ್ನೂ ನಮ್ಮ ಕ್ಲಬ್ಬಿನ ಪ್ರೀತಿ ಬಿಡದಿರುವುದು ಯಾರದೋ ಪೂರ್ವಸುಕೃತದಿಂದಾಗಿರ ಬಹುದು.

ವಾಕ್ಯಧಾರರು ತಮ್ಮ ವಾಕ್ಯದ ಎರಡನೆಯ ಪ್ರಕರಣದಲ್ಲಿ ಸೂಚಿ ಸಿರುವಂತೆ ವಿದ್ಯಾದಾಯಿನಿ ಸ್ಕೂ. ಫೂ. ಟೀಮ್ ಶಾಲಾ ಟೀಮೆಂದು ಬರೆದಿರುವುದು ದೊಡ್ಡ ತಪ್ಪು. ಕಾರಣ ಟೀಮಿಗೂ ಶಾಲೆಗೂ ಏನೂ ಸಂಬಂಧವಿಲ್ಲವೆಂದು ... ಉಪಾಧ್ಯಾಯ ... ನಮ್ಮ ಪಂದ್ಯಾ ಟಕ್ಕೆ ಸೇರಿದ ಎಲ್ಲಾ ಟೀಮುಗಳಿಗೂ ಪತ್ರಮುಖೇನ ತಿಳಿಸಿತ್ತು. ಹೊರತು ಅದು ಶಾಲಾ ಟೀಮಾಗಿದ್ದರೆ, ಶಾಲಾ ಮುಖ್ಯೋಪಾಧ್ಯಾಯರು ಪ್ರತಿ ಕ್ಷಣ ಆಟದ ಹುಡುಗರನ್ನು ಮಧ್ಯೋಧನೆಯಿಂದಲೂ ಬಲತ್ಕಾರ ದಿಂದಲೂ, ಹಲವು ದಿವಸಗಳ ವರೆಗೆ ಗದರಿಸಿ, ಪನಿಸಿ, ಅವರಿಂದ ಎರು ರಾಗಿ ... ಕೇಳುವ ಅಗತ್ಯವಿತ್ತಿಲ್ಲ! ಮತ್ತು ಹಲವು ಸರಳ ಹೃದಯರಾದ ಉಪಾಧ್ಯಾಯರುಗಳ ಅಸಮಾಧಾನಕ್ಕೆ ಕಾರಣರಾಗುತ್ತಿದ್ದಿಲ್ಲ. ಮೇಲೆ ಸೂಚಿಸಿದ ಮು ... ಕಾದ್ದಬ್ಬರು ನೊಂದೊಡನೆಯೇ ಬಾರಿ ವಿದ್ಯಾ ದಾಯಿನಿ ಶಾಲೆಯ ಉಪಾಧ್ಯಾಯತನಕ್ಕೆ ರಾಜಿನಾಮೆ ಕೊಟ್ಟು, ಎರಡನೇ ಸಲ ಕೊಡಲಿಕ್ಕಿರುವಾಗ್ಗೆ ಶಾಲಾ ಮುಖ್ಯೋಪಾಧ್ಯಾಯರೇ ತಮ್ಮ ಮಂಡಿ ... ಬುದ್ಧಿಯನ್ನು ಹಚ್ಚಿ, ಹಲವು ಅನರ್ಥಗಳಿಗೆ ಕಾರಣರಾಗಿರುವರು.

ಉಪಾಧ್ಯಾಯರುಗಳು ... ಫೂಟ್‌ಬೋಲಿನ ಎರಡು ವರ್ಷದಿಂದ ಜರಗುತ್ತಿದ್ದ ಸಭೆಯನ್ನು ಶಾಲೆಯಲ್ಲಿ ಜರಗಿಸಬಾರದೆಂದೂ, ಅದೇ ... ಫೂಟ್‌ಬೋಲಿನ ವಸ್ತುಗಳು ... ಶಾಲೆಯ ... ಉಪಯೋಗಿಸಬಾರದೆಂದೂ ಜಾರಿಗೆ ತಂದ ಕರಾವುಗಳನ್ನು ನೋಡಿದರೆ ಶಾಲೆಗೂ ಟೀಮಿಗೂ ಇರುವ ಸಂಬಂಧವು ವ್ಯಕ್ತವಾಗುವುದು ... [illegible]

... ಕ್ಲಬ್ಬಿನ ... ಕೆನರಾ ಫೂಟ್‌ಬೋಲ್ ಟೀಮಿನವರು ... [illegible]

ನಮ್ಮ ... ಕಾರ್ಯದರ್ಶಿಯವರಾದ ... ಉಪಾಧ್ಯಾಯರಿಗೆ ... ಅವರನ್ನು ಶಾಲೆಯಿಂದ ತೆಗೆದು ಹಾಕುವ ... ಕಾರಣ ಕೇಳಿದರೂ ಕಾರಣ ಕೊಡಲು ಉಪಾಧ್ಯಾಯರುಗಳಿಗೆ ಎದೆ ಇಲ್ಲದೆ ಹೋಯ್ತು! ಆ ವಿಷಯದಲ್ಲಿ ಉಪಾಧ್ಯಾಯರುಗಳ ವರ್ತನೆಯು ಪೂರ್ವ ... ತಿಳಿದವರೆಲ್ಲರೂ ಒಪ್ಪುವರು. ... ಅವನ್ನು ನಾವು ಎಷ್ಟಕ್ಕೂ ... ಅಲ್ಲದೆ ಒಬ್ಬ ... ಆತನು ತನ್ನ ಕರ್ತವ್ಯಗಳನ್ನು ಬಿಡದೆ ಮಾಡುತ್ತ ದಿನಸ ... ಯನ್ನು ತೋರುತ್ತ, ಕುಲ, ಜಾತಿ, ಧನ, ವಿದ್ಯಾ, ಬಲ, ಕ್ರಿಯಾ, ವೀರ್ಯ, ಶೌರ್ಯ ಮೊದಲಾದ ... ಅವುಗಳಿಂದುಂಟಾ ಗುವ ದುಷ್ಟತ್ವಗಳನ್ನು ಸಂಪೂರ್ಣವಾಗಿ ನಾಶಮಾಡುತ್ತಾ, ಮನಸ್ಸಿನಲ್ಲಿ ಸ್ವಲ್ಪವೂ ಅಹಂಕಾರವಿಲ್ಲದೆ, ಕರ್ಮೇಂದ್ರಿಯ, ಜ್ಞಾನೇಂದ್ರಿಯ ಗಳನ್ನು ವಶಪಡಿಸಿಕೊಂಡು, ನೋವದ ಯೋಚನೆಯಿಲ್ಲದೆ, ಪಾಪವನ್ನು ದೂರೀಕರಿಸಿ, ಕೆಟ್ಟ ಅಭಿಪ್ರಾಯಗಳನ್ನು ನಾಶಪಡಿಸಿ, ವಿಷಯವ್ಯಾಮೋಹ ದಿಂದುಂಟಾಗುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ

... ಪ್ರಾಣಿಗಳನ್ನು ... ತುರ್ಕ ... ಯಿಂದ ... ದ ... ತನ್ನ ... ಯ ... ಯಲ್ಲಿ ... ಹೊರಗೆ ... ಫೂಟ್‌ಬೋಲ್ ಆಟವನ್ನು ... ಉಪಾಧ್ಯಾಯರ ... ಫೂಟ್‌ಬೋಲ್ ಟೀಮಿನವರನ್ನು ... ಬದಲಾಗಿ, ಅವರನ್ನು ಧಿಕ್ಕರಿಸಿಕೊಂಡಿರುವರು. ಹೀಗಾಗಿ ಶಾಲೆಯಲ್ಲಿ ಒಂದು ತಿಂಗಳವರೆಗೆ ಪಾಠವು ಸರಿಯಾಗಿ ನಡೆಯದೆ ಇದ್ದುದರಿಂದಲೂ, ಫೂಟ್‌ಬೋಲ್ ಆಡುವವರನ್ನು ಶಾಲೆಯಿಂದ ತೆಗೆದುಹಾಕುವೆನೆಂದು, ಉಪಾಧ್ಯಾಯರು ಹೆದರಿಸುತ್ತಿದ್ದ ರಿಂದಲೂ, ಮತ್ತು ಸಹಪಾಠಿಯಾದ ಆಟಗಾರನನ್ನು ನಿಷ್ಕಾರಣವಾಗಿ ಶಾಲೆಯಿಂದ ತೆಗೆದುಹಾಕಿದ್ದುದರಿಂದಲೂ, ಇದೇ ಶಾಲೆಯ ಆಟವನ್ನು ನಡೆಸಿ ಶಾಲಾ ಉಪಾಧ್ಯಾಯರ ಕಮಿಟಿಗೆ ಸಾಲಕೊಟ್ಟಿರುವ ಶಾಲಾ ಸ್ಟುಡೆಂಟ್ಸ್ ಯೂನಿಯನು, ಆಟಗಾರನನ್ನು ಶಾಲೆಯಿಂದ ತೆಗೆದುಹಾಕಲು ಕಾರಣ ಕೇಳಿದಾಗ ದುರಭಿಮಾನ ಕೃತ್ಯವೇ ಪ್ರಧಾನವೆನ್ನುವಂತೆ ಅವರನ್ನು ಧಿಕ್ಕರಿಸಿದುದರಿಂದ ಸೂರ ಹದಿನೈದು (೧೫) ವಿದ್ಯಾರ್ಥಿಗಳು ಒಮ್ಮೆಯೇ ದುಃಖದ ಹಿಡಿದು ಕೆನರಾ ವಿದ್ಯಾದಾಯಿನಿ ರಾತ್ರಿಶಾಲೆಗೆ ಮತ್ತು ... ವಾಗಿರುವ ಮುಂಬಾಯಿ ಫ್ರೀ ನೈಟ್ ಸ್ಕೂಲಿಗೆ ಸೇರಿದರು.

ಇದೇ ಸ್ಟುಡೆಂಟ್ಸ್ ಯೂನಿಯನೇ ಮುಖ್ಯೋಪಾಧ್ಯಾಯರುಗಳ ತಪ್ಪಿಂದ ಶಾಲೆಯಿಂದ ಇಳಿದು ಬಂದಮೇಲೆ ಆಟಗಾರರ ಮಾರ್ಗದಲ್ಲಿ ಸಹಕರಿಸಬೇಕು! ಆದುದರಿಂದ ಸಂಗತಿಗಳನ್ನು ವಾಕ್ಯಧಾರರು ಎಷ್ಟು ಧೈರ್ಯದಿಂದ ಕೊಡುವರು.

ಇವೆಲ್ಲ ಅನರ್ಥಗಳನ್ನು ಹರಟಿದವರು ಇನ್ನೇನು ನಿಜ ಸಂಗತಿಯನ್ನು ಕೊಡುವರು; ಅಧಿಮನ್ನು ರೋವರ್ಸ್ ಸ್ಕೌಟ್ ಪಂಗಡಕ್ಕೆ ಸೇರಿಸ್ತ ಒಬ್ಬನು ರಾಜಿನಾಮೆ ಕೊಟ್ಟಿರುವುದು ತನಗೆ ಪಾಟಕ್ಕೆ ಬರಲು ಸಮಯ ಸಿಗುವ ದಿಲ್ಲವೆಂದು, ಇನ್ನೊಬ್ಬನು ದಾರಿಯಲ್ಲಿ ಅವನ್ಕ ಸಪ್ಸ್ಪಂದವಟ್ಟ ಯಾರೋ ಒಬ್ಬನೊಡನೆ ಜಗಳವಾಡಿಯೂ ಅಲ್ಲದೆ ಅವೀಸರ ಕಾರ್ಯ ... ಗಲ್ಲ, (ಖಂಡನೆಗೆ ಸಂಬಂಧವೇ ಇಲ್ಲ) ವಿದ್ಯಾದಾಯಿನಿ ಸಭೆಯ ಒಬ್ಬ ಮಾತ್ರ ಸ್ವಯಂಸೇವಕನು ಕೆಲಸಮಾಡಲಿಕ್ಕೆ ಸಮಯಸಿಕ್ಕುವುದಿಲ್ಲವೆಂಬ ಕಾರಣದಿಂದ ಮಾರವಾಗಿರುವುದು ವಿನಹ ಸಭೆಯ ವೈಮನಸ್ಯಕ್ಕೆ ರಾಜಿ ನಾಮೆಕೊಟ್ಟಿಲ್ಲ.

ಇಲ್ಲಿನ ಒಂದಾಗಳೆಗಳನ್ನು ಹರಟಿದ ವಾಕ್ಯದಲ್ಲಿ ಕೂಡಿದ ಅವ ಮಾನದ ಮತ್ತು ಮಾಡಿದ ಅಕೃತ್ಯಗಳ ಭಾರವು ಕಡಿಮೆಯಾಗುವುದಿಲ್ಲ ವೆಂಬುದು ವಾಕ್ಯಧಾರರು ತಿಳಿದಿರಲಿ. ವಾಸ್ತವಿಕವಾದ ಎಲ್ಲಾ ಸಂಗತಿ ಗಳನ್ನು ಬರೆಯಹೋದರೆ ನವ್ಮ ಕೀರ್ತಿಗೆ ನೆಲೆಯು ... ದ ಕೊರತೆ ಯಲ್ಲಿಯೇ, ಪಾಪಾತ್ಮರುಗಳಿಗೆ ಹುಟ್ಟಿದ ಜಲ್ಲೆಯಮೇಲೆ ಪ್ರೀತಿ ಹಚ್ಚಿಕೆ ವಾಕ್ಯಧಾರರೇ ಇನ್ನಾದರೂ ಸನ್ಮಾರ್ಗವನ್ನು ಹಿಡಿಯಿರಿ.

ದಿ. ವಿದ್ಯಾದಾಯಿನಿ ಸ್ಟುಡೆಂಟ್ಸ್ ಫೂಟ್ ಬೋಲ್ ಕ್ಲಬ್,

ಮುಂಬಾಯಿ.

Inspection Reports and the Headmasters.

(Correspondents are requested to use canarese language. For the present this correspondence is published as one of the few exceptions that we make, EDITOR.)

Sir,

Undoubtedly the immemorable lines of Lord Tennyson, the Poet laureate of England are true. "Old order changeth yielding place to new" Times have changed Old and experienced headmasters are gone giving place to blossoming young men, whose ideals and aspirations hover high in the realm of ambition. They little think that the teachers are part and parcel of the school They little remember the days when they themselves were teachers of the school. They think they cease to be teachers as soon as they ascend the gadi of the head-master's post. They consider themselves to be all in all. They think they are the sole monarchs with none to dispute their claims. They know that the higher authorities uphold them however much they tyrannise over their subordinates. Hence, being a teacher myself, I am constrained to ask your aid in enlightening me on the following points

I will be highly obliged, nay, very grateful to you, if any of your innumerable readers or the persons concerned let me know whether the teacher has a right to peruse the Inspection Report of his school; whether it is to be kept a sealed book. Has he not got the freedom of looking into the full inspection report which is got once in a year?

If the answer be in the affirmative, may I know what is to be done in case the H. M refuses to give the report in the hands of the teachers, but would only show or tell those points that concern the teacher that wants to see it.

ದಕ್ಷಿಣ ಕನ್ನಡಾ ಜಿಲ್ಲಾ ಟೀಚರ್ ಮೆನೇಜರರ ಅವಗಾಹನೆ ಬಗ್ಗೆ.

Canara Bank Ltd. **K. Venkat Rao,**
Mangalore. 31st Oct. 1928. Secretary.

THE PANGAL NAYAK BANK, LTD.

Head Office: Udipi, S. K.] *Estd. 1920.* **[Branch Office Mangalore, S. K.**

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ, ದ. ಕ.] ಸ್ಥಾಪಿತವಾದದ್ದು 1920. [ಬ್ರೇಂಚು ಆಫೀಸು: ಮಂಗಳೂರು, ದ. ಕ.

ಬೇಂಕರರು—ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪಾಯಿ 2,00,000/-

ಚಂದಾ ಮೂಲಕ ಹಾಕಲ್ಪಟ್ಟವ ವಸೂಲಾದ ಮೂಲಧನ ರೂ. 1,50,000-	ಆಪದ್ಧನ ಇತ್ಯಾದಿ ನಿಧಿಗಳು ರೂ. 1,00,000/-

FIXED DEPOSITS are received for 3 months at 5%, for 6 or 9 months at 5½%, of 12, 15, 18 or 21 months at 6¼% and for 24 months at 6½. Interest being payable every 3 Months. SEASON DEPOSITS from January to June at 6¼% SHORT NOTICE DEPOSITS, withdrawable by giving 15 days previous notice after one month at 4½% and CUMULATIVE DEPOSITS by monthly instalments are also received. SAVINGS BANK DEPOSIT ACCOUNTS may be opened and interest allowed at 4½%. CURRENT DEPOSIT ACCOUNTS may also be opend and interest allowed at 3% from January to June and at 2% from July to December. Loans granted on personal and approved securities on reasonable terms. Banking business of every description transacted.

Further information may be had on application to the Secretary at the HEAD OFFICE or to the AGENT at BRANCH OFFICE.

ಕಾಯಂ ಠೇವಣಾತಿಗಳು 3 ತಿಂಗಳಗಳಿಗೆ ಶೇ. 5 ರಂತೆಯೂ, 6 ಯಾ 9 ತಿಂಗಳಗಳಿಗೆ ಶೇ. 5½ ರಂತೆಯೂ, 12, 15, 18, ಯಾ 21 ತಿಂಗಳಗಳಿಗೆ ಶೇ. 6¼ ರಂತೆಯೂ, 24 ತಿಂಗಳಗಳಿಗೆ ಶೇ. 6½ ರಂತೆಯೂ ಪ್ರತಿ 3 ತಿಂಗಳುಗಳಿಗೆ ಬಡ್ಡಿ ಕೊಡುವ ಕರಾರಿನ ಮೇಲೆ ಅಂಗೀಕರಿಸಲ್ಪಡುವವು. ಸೀಸನ್ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೆಗೆ) ಶೇ. 6¼ ರಂತೆಯೂ ಅಲ್ಪಾವಧಿ ಠೇವಣಾತಿಗಳು ಶೇ. 4½ ರಂತೆಯೂ, ಸಂಚಯ ಠೇವಣಾತಿಗಳು, ಪ್ರಯೋಜನಕರವಾದ ನಿಯಮಗಳ ಮೇಲೆ, ಸೇವಿಂಗ್ಸ್ ಬೇಂಕ ಠೇವಣಾತಿಗಳು ಶೇ. 4½ ರಂತೆಯೂ, ಚಾಲ್ತಿ ಠೇವಣಾತಿಗಳು ಜನವರಿಯಿಂದ ಜೂನ್ ಅಂತ್ಯದ ವರೆಗೆ ಶೇ. 3 ರಂತೆಯೂ, ಜುಲಾಯಿ ತಿಂಗಳಿಂದ ಡಿಸೆಂಬರ ಅಂತ್ಯದ ವರೆಗೆ ಶೇ. 2 ರಂತೆಯೂ ಅಂಗೀಕರಿಸಲ್ಪಡುವವು.

ಸಾಲಗಳು ಯೋಗ್ಯವಾದ ಜಮಾನ್ತಿಗಳ ಮೇಲೆ ನ್ಯಾಯವಾದ ರೀತಿಯಲ್ಲಿ ಕೊಡಲ್ಪಡುವವು.

ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿನ ಸೆಕ್ರೆಟರಿಯವರಿಗೂ ಯಾ ಬ್ರೇಂಚ್ ಆಫೀಸಿನ ಏಜಂಟರಿಗೂ ಬರೆಯಬಹುದು.

ಹೆಡ್ ಆಫೀಸು, ಉಡುಪಿ, ತಾ. 16—10—'28. ಪಿ. ಲಕ್ಷ್ಮಣ ನಾಯಕ್,
ಮೆನೇಜಿಂಗ್ ಸೆಕ್ರಟರಿ

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳ.



ದಯೆ ಇಟ್ಟು ಮೇಲಣ ಸಾಮಾನುಗಳನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,
ಮದ್ದುಗುಂಡುಗಳನ್ನು ಧಾರಾಳವಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ.
210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ.

ಕಲಕತ್ತಾ ಎಕ್ಸಿಬಿಷನು.

1928.

ಹಿಂದೀ ರಾಷ್ಟ್ರೀಯ ಮಹಾಸಭೆಯ 43ನೇ ಅಧಿವೇಶನದವರಿಂದ ವ್ಯವಸ್ಥಾಪಿಸಲ್ಪಟ್ಟುದು.

ಅಪೂರ್ವ ಸುಸಂದರ್ಭ.

ಸ್ವದೇಶಕ್ಕೆ ಸಂಬಂಧಿಸಿದ ವಸ್ತುಗಳ ತಯಾರಿಸುವವರಿಗೂ, ಸಾಮುಕಾರರಿಗೂ, ವ್ಯಾಪಾರಿಗಳಿಗೂ, ಪ್ರದರ್ಶಕರಿಗೂ ಚಿತ್ರಕಾರರಿಗೂ, ಕಲಾಕೋವಿದರಿಗೂ, ಅನುಕೂಲವಾಗುವಂತೆ, ಕಲಕತ್ತಾ ಎಗ್ಸಿಬಿಷನು 1928ನೇ ಡಿಸೆಂಬರ ತಿಂಗಳಿನ ಮಧ್ಯದಿಂದ 1929ನೇ ಇಸವಿ ಜನವರಿ ತಿಂಗಳಿನ ಮಧ್ಯದ ವರೆಗೆ ತೆರೆಯಲ್ಪಡುವದು.

ಎಗ್ಸಿಬಿಷನಿನ ಕಟ್ಟಡವಲ್ಲಾ ಗಳಿಗೆ, ಪ್ರತ್ಯೇಕವಾಗಿ ಗೋದಾಮುಗಳನ್ನು ಕಟ್ಟಿಸುವ ಸಲುವಾಗಿಯಾಗಲೀ ಸ್ಥಳಕೊಡಲಾಗುವದು. ಎಗ್ಸಿಬಿಷನು ಪಾರ್ಕ್‌ಸರ್ಕಸ್ ಎಂಬ ಸ್ಥಳದಲ್ಲಿ ನಡೆಯುವದು.

ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. R. Sarkar,
Secretary,
The Calcutta Exhibition
8A. Hogg Street, CALCUTTA

[illegible]ಚಾರಗಳು

ಅಮೇರಿಕದ ಚುನಾವಣೆಯ ಗದ್ದಲ.

ಹಿಂದೂಸ್ಥಾನದಲ್ಲಿ ಚುನಾವಣೆಯ ಸಮಯದಲ್ಲಿ ಒಬ್ಬರ ನ್ನೊಬ್ಬರು ಬೈದುಕೊಂಡ ಮಾತ್ರದಿಂದಲೇ ಹಿಂದೂಸ್ಥಾನದ ಅನಾಗರಿಕತೆಯನ್ನು ಬ್ರಿಟಿಷರೂ ಇತರ ಯುರೋಪೀಯ ಜನಾಂಗಗಳೂ ಕಾಣುತ್ತವೆ. ಆದರೆ ಇದು ಪಾಶ್ಚಾತ್ಯರಲ್ಲಿ ಸಂಭವಿಸುವ ತುಂಬಳಕಾಯಿಯಷ್ಟಿನ ಅತ್ಯಾಚಾರಗಳನ್ನು ನೋಡಿದರೆ ಬರೇ ಸಾಸಿವೆ ಕಾಳಿನಷ್ಟೆ ಆಗಿರುತ್ತದೆಂದು ತಿಳಿಯದಿರದು. ಈಗ ಅಮೇರಿಕದಲ್ಲಿ ಅಧ್ಯಕ್ಷರ ಚುನಾವಣೆಯದ್ದು ಪ್ರತಿಪಕ್ಷಗಳ ಗದ್ದಲವು ಬಹಳ ಹೆಚ್ಚು ಇರುತ್ತಿದೆ. ಇಂತಹ ಸಂದರ್ಭದಲ್ಲಿ ದೇಶದಲ್ಲಿ ಸಾವಿರಾರು ಸಭೆಗಳು ನೆರೆದು ಒಬ್ಬರನ್ನೊಬ್ಬರು ಬೈದುಕೊಂಡು ಹೊಡೆದಾಡಿಕೊಳ್ಳುತ್ತಾರೆ. ಕೆಲವು ಸಾರಿ ಒಬ್ಬರನ್ನೊಬ್ಬರು ಕೊಲ್ಲುವುದೂ ಉಂಟು. ಇದು ಸಾಮಾನ್ಯದ ಮಾತಾಯಿತು. ಆದರೆ ಇದೇ ತಿಂಗಳ ತಾ. ೫ರಲ್ಲಿ ಅಮೇರಿಕದ ಜೋಸೆಫ್ ಜೋರ್ಜಿಯಾ ಎಂಬ ಊರಲ್ಲಿ ನಡೆದ ಒಂದು ಘಟನೆಯು ನಾಗರಿಕ ಜನಾಂಗಗಳ ನಾಗರಿಕತೆಯನ್ನು ಅಳೆದು ತೋರಿಸುವಂತಹದಾಗಿದೆ. ಘಟನೆಯ ಸಂಕ್ಷಿಪ್ತ ವಿವರವು ಹೀಗಿದೆ.

"ಡೆಪ್ಯುಟಿ ಶೆರೀಫನಾದ ಮಿ. ಸಿ. ಡಬ್ಲ್ಯು. ವೆಂಡ್ರೆಯು ಸಿಟಿಕೋರ್ಟಿನ ಜಡ್ಜನಾದ ಮಿ. ಆರ್. ಟೋಮಸ್‌ನನ್ನು ಕಂಡು ತನ್ನನ್ನು ಆಲ್‌ಸ್ಮಿತ್‌ನ ಕೈ (ಆಲ್‌ಸ್ಮಿತ್‌ನೆಂದರೆ ಅಧ್ಯಕ್ಷ ಪದವಿಗೆ ಒಬ್ಬ ಉಮೇದುವಾರ) ಎಂದುದಕ್ಕೆ ತನ್ನ ಕೋಪವನ್ನು ತೋರಿಸಿದನು. ಟೋಮಸನು ತಾನು ಹಾಗೆ ಹೇಳಲಿಲ್ಲವೆಂದನು. ವೆಂಡ್ರೆಯು ಅವನನ್ನು ಸುಳ್ಳುಗಾರನೆಂದು ಹೊಡೆದು ಕೆಳಗೆ ಕೆಡಹಿದನು. ಟೋಮಸನು ಚೂರಿ ಹಿಡಿದು ಎದ್ದನು. ವೆಂಡ್ರೆಯು ಅವನನ್ನು ಗುಂಡು ಹಾಕಿ ಕೊಂದನು".

ಜಗಳವಾಡಲಿಕ್ಕೂ ಕೊಲ್ಲಲಿಕ್ಕೂ ಯುನೈಟೆಡ್ ಸ್ಟೇಟ್ಸ್ ಒಫ್ ಅಮೇರಿಕದ ನಾಗರಿಕರಿಗೆ ಎಂತಹ ಕಾರಣ ಸಿಕ್ಕಿತೆಂದು ಮೇಲೆ ಕಾಣುವುದು. ಅದರಲ್ಲಿಯೂ ಒಬ್ಬನು ಪುರಪ್ರಮುಖನಾದ ಡೆಪ್ಯುಟಿ ಶೆರೀಫ; ಇನ್ನೊಬ್ಬನು ನ್ಯಾಯ ವಿಚಾರಣಾಕರ್ತನಾದ ಜಡ್ಜು. ಪುರಪ್ರಮುಖರೇ ಇಷ್ಟು ಪುಂಡಾಟಿಕೆಯವರಾಗುವುದಾದರೆ ಇತರರು ಹೇಗಿರಬಹುದೆಂದು ನಾವೇ ಊಹಿಸಿಕೊಳ್ಳಬಹುದು. ಹೇಗೂ ಹಿಂದೂಸ್ಥಾನದ ನಾಗರಿಕತೆಯು ಆ ಮೆಟ್ಟಿಲಿಗೆ ಇನ್ನೂ ಹತ್ತಲಿಲ್ಲವೆಂಬುದೇ ಅಭಿಮಾನಾಸ್ಪದವಾದುದು.

ಕಾಂಗ್ರೆಸ್ಸಿನಲ್ಲಿ ಸ್ವಾತಂತ್ರ್ಯದ ವಾದ.

ಡಿಲ್ಲಿಯಲ್ಲಿ ಸೇರಿದ ಆಲ್ ಇಂಡಿಯಾ ಕಾಂಗ್ರೆಸಿನಲ್ಲಿ ಸ್ವಾತಂತ್ರ್ಯ ಮತ್ತು ಡೊಮೀನಿಯನ್ ಸ್ಟೇಟಸ್‌ನ ವಿಷಯದಲ್ಲಿ ಬಹಳ ವಾದವು ಎದ್ದಂತೆ ತೋರುವುದು. ಈ ವಾದದ ವಿಶೇಷವೆಂದರೆ ಸ್ವಾತಂತ್ರ್ಯದ ವಿಷಯದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ; ಎಲ್ಲಾ ಕಾಂಗ್ರೆಸ್ ಸದಸ್ಯರೂ ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವೇ ಬೇಕೆನ್ನುವರು. ಆದರೆ ಗೌರವತರವಾದ ಐಕ್ಯವನ್ನು ದೇಶದೊಳಗಿನ ಎಲ್ಲಾ ಪಕ್ಷಗಳೊಳಗೆ ಉಂಟುಮಾಡಲಿಕ್ಕೆ ಮಾತ್ರನೇ ಕಾಂಗ್ರೆಸು ಡೊಮಿನಿಯನ್ ಸ್ಟೇಟಸ್ಸಿಗೆ ಒಪ್ಪಿಗೆ ಕೊಡಬೇಕಾಗಿ ಮೋತಿಲಾಲನೆಹರು ಮೊದಲಾದವರ ಅಭಿಮತ. ಕಾರ್ಯಕಾರಿ ರಾಜಕೀಯ ರಂಗದಲ್ಲಿ ಬರೇ ಆದರ್ಶಗಳನ್ನೇ ಮಾತನಾಡಿ ಪ್ರಯೋಜನವಿಲ್ಲ. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವೇ ಬೇಕಾಗಿರುವುದಾದರೂ ಅದರ ಹೋರಾಟವನ್ನು ಒಂದೇ ಸ್ಥಾನದಲ್ಲಿ ಕೇಂದ್ರೀಕರಿಸುವುದು ಅದಕ್ಕಿಂತಲೂ ಹೆಚ್ಚಿನ ಮಹತ್ವದ ಆವಶ್ಯಕತೆಯಾಗಿರುತ್ತದೆ. ಆದುದರಿಂದ ಎಲ್ಲಾ ಪಕ್ಷಗಳನ್ನು ಒಂದೇ ಧ್ವಜದ ಕೆಳಗೆ ಒಟ್ಟುಕೂಡಿಸಲಿಕ್ಕೆ ಸಾಧ್ಯವಿರುವುದಾದರೆ ಕಾಂಗ್ರೆಸ್ಸು ತನ್ನ ಆದರ್ಶವನ್ನೇ ಪತಾಕೆಯ ಪಡಿಸುವ ಆವಶ್ಯಕತೆಯಿರುವುದಿಲ್ಲ. ಮತ್ತು ಕಾರ್ಯತಃ ಡೊಮಿನಿಯನ್ ಸ್ಟೇಟಸ್‌ಗೂ ಸ್ವಾತಂತ್ರ್ಯಕ್ಕೂ ಬಹಳ ವ್ಯತ್ಯಾಸವೇ ಇರುವುದಿಲ್ಲ. ಕೆನಡಾ ದೇಶಕ್ಕೆ ತನ್ನ ಬೆಳವಣಿಗೆಗೆ ಯಾವ ತರದ ತೊಂದರೆಯೂ ಉಂಟಾಗಿಲ್ಲ. ಹಾಗೆಯೇ ಹಿಂದೂಸ್ಥಾನವಾದರೂ ಒಮ್ಮಿಂದೊಮ್ಮೆಯೇ ಇಂಗ್ಲೀಷರ ಸಂಬಂಧವನ್ನು ಕಡಿದುಕೊಂಡು ಹಿತವನ್ನು ಪಡೆಯಬಹುದೆಂದೂಹಿಸಲಾಗುವುದಿಲ್ಲ. ಆದುದರಿಂದ ತರುಣ ಧುರೀಣರಾಗಿರುವ ಜವಾಹಿರಲಾಲನೆಹರೂರವರು ಜನಾಂಗದ ಉನ್ನತ ಉತ್ಸಾಹವನ್ನೇ ತೋರುವರಾದರೂ ಅನುಭವಸ್ಥರಾದ ಶ್ರೀ ಶ್ರೀನಿವಾಸ ಅಯ್ಯಂಗಾರರಾದರೂ ಈ ವಾದಕ್ಕೆ ಸರಿಯಾದ ಅರ್ಥವನ್ನು ಕೊಡುವಂತವರಾಗಬೇಕಿತ್ತು. ನೆಹರು ಕಮಿಟಿಯ ವರದಿಯು ಸ್ವಾತಂತ್ರ್ಯ ವಾದದ ಸರಿಯಾದ ತರ್ಕವನ್ನು ಕೂಲಂಕುಷವಾಗಿ ಮಾಡಿ ಕಾಂಗ್ರೆಸ್ಸಿಗೆ ಸಮರ್ಪಕವಾದ ರೀತಿಯಲ್ಲಿ ತೀರ್ಮಾನವನ್ನು ಕೊನೆಗಾಣಿಸಿದ್ದಾರೆ. ಸ್ವಾತಂತ್ರ್ಯವನ್ನು ಕೇಳುವವರೂ ಕಾಂಗ್ರೆಸ್ಸಿನಲ್ಲಿ ಒಂದು ಪಕ್ಷವಿರಬೇಕು. ಇಲ್ಲವಾದರೆ ಪಕ್ಷಗಳ ಐಕ್ಯದ ಹೆಸರಿನಲ್ಲಿ ಧ್ಯೇಯವು ಕೆಡುವುದು. ಆದರೆ ಎಂದಿನ ವರೇಗೆ ನೆಹರು ಕಮಿಟಿಯು ವರದಿಯು ಐಕ್ಯವನ್ನು ಸ್ಥಾಪಿಸ ಬಲ್ಲುದೂ ಆ ವರೇಗೆ ಕಾಂಗ್ರೆಸ್ಸು ಅದನ್ನು ಸಂಪೂರ್ಣವಾಗಿ ಅನುಮೋದಿಸುವುದು ಅಗತ್ಯವಿದೆ.

ಅಮೇರಿಕದ ಅಧ್ಯಕ್ಷರ ಚುನಾವಣೆ

ಅಮೇರಿಕದ ಈ ಬಾರಿಯ ಅಧ್ಯಕ್ಷ ಚುನಾವಣೆಯು ಇಡೀ ಲೋಕಕ್ಕೆ ಮುಖ್ಯವಾದುದಾಗಿದೆ. ಈ ಬಾರಿಯ ಅಧ್ಯಕ್ಷ ಚುನಾವಣೆಯಲ್ಲಿ ರಾಜಕೀಯ ಪ್ರಾಮುಖ್ಯತೆಯು ಅಷ್ಟೊಂದು ಇರುವುದಿಲ್ಲ. ಏಕೆಂದರೆ ಪರಸರಕಾರ ಸಂಬಂಧಗಳು ಈ ಮೊದಲೇ ನಿರ್ಣಯಿಸಲ್ಪಟ್ಟಿವೆ; ಮತ್ತು ಅಧ್ಯಕ್ಷತನದ ಉಮೇದ್ವಾರರೊಳಗಾಗಲೀ ಜನತೆಯೊಳಗಾಗಲಿ ಈ ಸಂಬಂಧದ ಧೋರಣೆಯಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯವಿರುವುದಿಲ್ಲ. ಆದರೆ ಒಳಗಿನ ಆಡಳಿತದ ಧೋರಣದಲ್ಲಿ ಅಲ್ಲಿ ಕುಂಬಾ ಮತ ಭೇದವಿರುತ್ತದೆ. ಅಮೇರಿಕದ ಮುಂದಿದ್ದ ಒಂದು ಮುಖ್ಯ ಪ್ರಶ್ನೆಯೆಂದರೆ ಮದ್ಯಪಾನ ನಿಷೇಧ. "ಪುಸ್ಸಿಫೂಟ ಜೊನ್ಸನ"ರ ಶ್ರಮದ ಫಲವಾಗಿ ಈ ನಿಷೇಧವು ಜಾರಿಯಲ್ಲಿ ಬಂದಿತು. ಮದ್ಯಪಾನ ನಿಷೇಧದ ಕಾನೂನು ಇರುವಲ್ಲಿ ಗುಪ್ತಿನ ಮದ್ಯಪಾನವು ಇರಲೇ ಬೇಕು. ದುರ್ವ್ಯಸನಗಳ ಕತೆಯೇ ಹೀಗೆ ಇದೆ. ಆದರೆ ಜನ ಸಾಮಾನ್ಯರೊಳಗೆ ಅದರಿಂದ ಬಹಳ ಪ್ರಯೋಜನಕರವಾದ ಪರಿಣಾಮವಿದೆಯೆಂಬುದರಲ್ಲಿ ಸಂದೇಹವಿಲ್ಲ. ಅಮೇರಿಕದ ಕೈಗಾರಿಕೆಗಳ ಅದ್ವಿತೀಯ ಮುಖಂಡನಾದ ಫೋರ್ಡನೇ ಮದ್ಯಪಾನ ನಿಷೇಧವನ್ನು ಪುಷ್ಟೀಕರಿಸುತ್ತಾನೆ. ಈಗಿನ ಅಮೇರಿಕದ ಚುನಾವಣೆಯಲ್ಲಿ ಮದ್ಯಪಾನ ನಿಷೇಧದ ಪ್ರಶ್ನೆಯು ಮುಂದೆ ಬಂದದೆ ಶ್ರೀಮಂತ ದೇಶವಾದ ಅಮೇರಿಕದಲ್ಲಿ ಸಂಪತ್ತಿನ ಪ್ರಶ್ನೆಯೂ ಒಂದು ಮುಖ್ಯವಾದದೂ ಕಳೆದ ಹಲವು ವರುಷಗಳಿಂದ ಪತ್ತೆಯಿಂದ ದೂರವಾಡಿದ ಮದ್ಯಪಾನದ ಚಾಳಿಯು ಜನರೊಳಗೆ ಪುನಃ ಉಂಟಾಗಿ ಅಧ್ಯಕ್ಷ ಚುನಾವಣೆಯಲ್ಲಿ ಕೆಲಸವಾಡುತ್ತಿದೆ. ಈ ಬಾರಿ "ಆಲ್‌ಸ್ಮಿತ್" ಎಂಬವರೊಬ್ಬರೂ "ಹುವರ್" ಎಂಬವರೊಬ್ಬರೂ ಹೀಗೆ ಇಬ್ಬರು ಉಮೇದ್ವಾರರು ಅಧ್ಯಕ್ಷಸ್ಥಾನಕ್ಕೆ ನಿಂತಿದ್ದರು. ಆಲ್‌ಸ್ಮಿತ್‌ನು ಸಂಪೂರ್ಣ ನಿಷೇಧವನ್ನು ಸಾಧಿಸುವವನಾಗಿರುವನು. ಹೂವರನು ನಿಷೇಧದ ವಿಷಯದಲ್ಲಿ ಅಷ್ಟೊಂದು ಉತ್ಸಾಹಿತನಾಗಿಲ್ಲ. ಆದರೆ ಅಮೇರಿಕದ ಈ ಬಾರಿಯ ಚುನಾವಣೆಯು ಹೂವರನ ಮೇಲೆಯೇ ಬಿದ್ದಿರುವುದು ಪರಿಣಾಮ ಅಮೇರಿಕಕ್ಕೆ ಮದ್ಯಪಾನದ ವಿಷಯದಲ್ಲಿ ಅಭಿಪ್ರಾಯವು ಬದಲಾಗುತ್ತಾ ಬರುತ್ತಿದೆಯೆಂದು ಖಂಡಿತವಾಗುತ್ತಿದೆ. ಹೀಗೆ ಬದಲಾದರೆ ಮದ್ಯಪಾನ ನಿಷೇಧಕ್ಕಾಗಿ ಲೋಕಕ್ಕೆ ಸಿಕ್ಕಿದ ಒಂದು ಉಜ್ವಲ ಧುರೀಣತ್ವವು ಕಳೆದು ಹೋದಂತಾಗುವುದು.

ಅಖಿಲಭಾರತ ಬ್ರಾಹ್ಮಣ ಮಹಾಸಭೆ

ಕಾಶಿಯಲ್ಲಿ ಬ್ರಾಹ್ಮಣ ಮಹಾಸಭೆಯು ಕೂಡಿತ್ತು. ಬ್ರಾಹ್ಮಣ ಮಹಾಸಭೆ ಕೂಡಲಿಕ್ಕೆ ಕಾಶಿಯೇ ಯೋಗ್ಯವಾದ ಸ್ಥಳ. ಕಾಶಿಯಲ್ಲಿಯೇ ಬ್ರಾಹ್ಮಣವಿದ್ಯೆಕ್ಕೆ ಪ್ರಸಾರವೆಸಿಮತ್ತಿತ್ತು. ಈಗಲಾದರೂ ಕಾಶಿಯಲ್ಲಿ ಬ್ರಾಹ್ಮಣ ವಿದ್ಯಾಪ್ರಸಾರವು ಇತರ ಕಡೆಗಳಿಗಿಂತಲೂ ಹೆಚ್ಚಾಗಿ ನಡೆಯುತ್ತಿದೆ. ದರ್ಭಂಗದ ಮಹಾರಾಜರು ಮಹಾಸಭೆಯ ಅಧ್ಯಕ್ಷರಾಗಿರುವರು. ಈ ಮಹಾರಾಜರಲ್ಲಿ ಎಷ್ಟು ಬ್ರಾಹ್ಮಣತ್ವವಿರುವುದೆಂಬ ಅರಿವು ನಮ್ಮಲ್ಲಿಲ್ಲ. ಆದುದರಿಂದ ಅವರ ಅಧ್ಯಕ್ಷ ಭಾಷಣವನ್ನು ನಾವು ನಿರೀಕ್ಷಿಸುತ್ತಿರುವೆವು. ಆದರೆ ವಿಶೇಷವಾದ ಒಂದು ವೈಚಿತ್ರ್ಯದ ಕಡೆಗೆ ಮಾತ್ರ ನಾವು ಎಲ್ಲರ ಲಕ್ಷ್ಯವನ್ನೆಳೆಯದಿರಲಾರೆವು. ಬ್ರಾಹ್ಮಣರಿಗೆ ವೇದವು ಸರ್ವಾಧಾರವಾಗಿದ್ದಿರಬಹುದು. ಮುಸಲ್ಮಾನರಿಗೆ ಕೊರಾನಿನಂತೆ, ಬ್ರಾಹ್ಮಣರಲ್ಲಿಯೂ "ವೇದದಲ್ಲಿ ಎಲ್ಲವೂ ಇದೆ, ವೇದದಲ್ಲಿ ಇಲ್ಲದ್ದು ಅರಿಕ್ಕೆ ಯೋಗ್ಯವಲ್ಲ"ವೆಂದು ಜ್ಞಾನಕ್ಕೆ ವೇದದ ಬೇಲಿಯನ್ನು ಹಾಕಿಬಿಡುವ ಸನಾತನಿಗಳು ಹಲವರಿರಬಹುದು. ಆದರೆ ಬ್ರಾಹ್ಮಣ ಮಹಾಸಭೆಗೆ ವೇದದ ಮೆರವಣಿಗೆಯೇ ಪೂರ್ವ ಪೀಠಿಕೆಯಾಯಿತೆಂಬುದು ಅತ್ಯಂತ ಲಜ್ಜಾಸ್ಪದವಾದ ವಿಷಯ. ಜ್ಞಾನ ಭಂಡಾಗಾರವಾದ ವೇದಗಳನ್ನು ಬೀದಿಗಳಲ್ಲಿ ಮೆರವಣಿಗೆ ಮಾಡಿ ತನ್ಮೂಲಕ ಅದರ ಮೇಲಿನ ತಮ್ಮ ಪೂಜ್ಯಭಾವವನ್ನು ವ್ಯಕ್ತಪಡಿಸಿದುದನ್ನು ನೋಡಿದರೆ ಬ್ರಾಹ್ಮಣತ್ವದ ಹಿತವನ್ನುದ್ದೇಶಿಸುವವರಲ್ಲಿಯೂ ಎಂತಹ ಪ್ರಚಂಡ ತಮಸ್ಸು ಮತ್ತು ಅಜ್ಞಾನವು ಕವಿದು, ಅವರನ್ನು ವಿಚಾರದ ಪಥದಿಂದ ಆಚಾರದ ಮೌಢ್ಯಕ್ಕೆ ದೀಳಿಸಿಯದೆಂಬುದು ತೋರಿಬರುವುದು. ವೇದಗಳನ್ನು ದೇವರಮೂರ್ತಿಯಂತೆ ಉತ್ಸವ ಮೆರವಣಿಗೆ ಮಾಡಿಸುವುದರಲ್ಲಿ ಯಾವ ಮಹತ್ವವೂ ಉಂಟಾಗದು. ದೇವ ಮೂರ್ತಿಗಳ ಮೆರವಣಿಗೆ ಕೂಡ ಮನುಷ್ಯನ ಅಲ್ಪ ಹೃದಯತೆಯನ್ನು ತೋರಿಸುವುದು. ಬ್ರಾಹ್ಮಣತ್ವವು ಶಿಥಿಲವಾಗಿ ಸಾಧಾರಣವಾದ ಜ್ಞಾನ ಶಿಕ್ಷಣದಿಂದ ವಿಶೃಂಖಲ ವರ್ತನದ ಮಿಥ್ಯಾಚಾರಗಳಿಗೆ ತನ್ನನ್ನು ತಾನೇ ಬಲಿಗೊಡುತ್ತಿದೆಯೆಂಬುದು ದಿನೇ ದಿನೇ ಸ್ಪಷ್ಟವಾಗುತ್ತಾ ಬರುವುದು. ಮತೋಪಾಸನೆಯು ಹಿಂದೂಗಳಲ್ಲಿ ಜೀವನದ ಉದ್ಧರಣೆಯ ಉಪಾಯವಾಗುವುದಕ್ಕಿಂತಲೂ ಚಿಕ್ಕ ಮಕ್ಕಳ ಕ್ಷುದ್ರ ಆಟವಾಗುವುದರಲ್ಲಿ ಪರಿಣಾಮವನ್ನು ಹೊಂದುತ್ತಿದೆ. ಇಂತಹ ಪತನದ ಮುಂದೆ ಬ್ರಾಹ್ಮಣರು ತಮ್ಮ ಸನಾತನ ಧರ್ಮವೆಂದು ದೇಶದ ಜಾಗೃತಿಯನ್ನು ನಿರೋಧಿಸುವುದರಲ್ಲಿ ಯಾವ ಅರ್ಥವೂ ಇರುವುದಿಲ್ಲ.

ನೋಟಗಳು
NOTE...S

ನಮ್ಮ ಜಿಲ್ಲೆಯ ಶಾಲೆಯ ಉಪಾಧ್ಯಾಯರುಗಳಿಗೆ ಬರುವ ವಾರದ ದಿನಗಳು-ಹಬ್ಬದ ದಿವಸಗಳಿಗಾಗಿ ಕರಸಲಿಸಿ ಬರುತ್ತಾರೆ. ಅವರ ಡಿಪಾರ್ಟಮೆಂಟಿನ ಮಂತ್ರಿಗಳು.

ಇಂದಿಗೆ ಹಲವು ವರುಷಗಳಿಂದ ಪ್ಲಾಟ್‌ಫೋರ್ಮು[illegible] ಕಾಲೆಗಳು ಇತ್ತಲಾಗೆ ಮಂತ್ರಿಗಳ ಬರುವಿಕೆಯು [illegible] ದ್ದರೂ ಸ್ವಲ್ಪ ರೂಪುಗೊಳ್ಳುತ್ತಿವೆ.

ಮಂತ್ರಿಗಳು ಚಾಮರ್ಾಡಿ ಗಡಿಯನ್ನು ನೋಡಲು ತಾ. ೧೩ಕ್ಕೆ ಹೋಗಲಿರುವರು. ಮಂತ್ರಿಗಳ ದೃಷ್ಟಿಯು ಗಡಿಯ ಎರಡು ಫರ್ಲಾಂಗಿನ ಆಚೆಗೆ ಸರಿಯಾಗಿ ಬೀಳುವಂತೆ ಅಧಿಕಾರಿಗಳಿಗೆ ನೆನಪಿರಲಿ.

ಮಂಗಳೂರು ಮುನಿಸಿಪಾಲಿಟಿಯ ಸೆನಿಟೇಶನ್ ಕಡೆಯವರಿಗೆ ಪುರುಸೊತ್ತೇ ಕಡಿಮೆ.

ರಥಬೀದಿಯಲ್ಲಿಯ ಸಿ. ಪಿ. ಸಿ. ಕಂಪೆನಿ ಮತ್ತು ಸ್ವದೇಶಾಭಿಮಾನಿ ಆಫೀಸಿನ ಎದುರು ಕಡೆಯ ಗಟರುಗಳಲ್ಲಿ ಕೊಳೆತ ನೀರಿನ ಪರಿಮಳ ಚೆನ್ನಾಗಿ ಬರುತ್ತದೆ. ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಗಟರುಗಳಿಗೆ ಕ್ಲೀನು ನಿಲ್ಲುವ ಯೋಗ್ಯತೆ ಇಲ್ಲ.

ಒಂದು ಕಾರಣದ ಸಲುವಾಗಿ ಮಹಾತ್ಮಾ ಗಾಂಧಿಯವರ ಕ್ಷೀಣವ ವಿಶ್ವಾಸವು ಕಡಿಮೆಯಾಗಿ ಹೋಯಿತು. ಕರುವಿನ ಗೃಹಚಾರ ಮಹಾತ್ಮಾಜಿಯವರಿಗೆ ತಗಲಿತು.

ಸಬರಮತಿಯ ಆಶ್ರಮದ ಹೆಸರೂ ನಿಯಮಗಳೂ ಬದಲಾವಣೆ ಹೊಂದಿತು. ಹೊಸ ಹೆಸರು "ಉದ್ಯೋಗಿಗಳ ನಿಲಯ". ಮಹಾತ್ಮಾಜಿಯವರ ಪ್ರತಿಷ್ಠೆಗೆ ಹಿಂತಕ್ಕೆ ಸರಿಯುವ ಕಾಲ ಬರಗಿತು.

ತಾ. ೧೭, ೧೮ಕ್ಕೆ ಜಿಲ್ಲಾ ಪರಿಷತ್ತು; ಬರುತ್ತಾರೆ ನರಿಮನರು ಮುಂಬಾಯಿಯಿಂದ. ಯುವಕ ಸಂಘದವರಿಗೆ ಬಹು ಹಬ್ಬ.

ಜಿಲ್ಲಾ ಕಮಿಟಿಯವರ ಎಮರ್ಜಂಟ ಸಭೆಗಳು ಸೇರುತ್ತಿವೆ. ಮೆಂಬರುಗಳಿಗೆ ಪುರುಸೊತ್ತು ಕಡಿಮೆ.

ಕಾರ್ಕಳದಲ್ಲಿ ಖೂನಿಯ ಗಲಾಟೆ. ಖೂನಿ ಈರ್ವರು ಶ್ರೀಮಂತರೊಳಗೆ.

ಎರಡು ದಿವಸಗಳಿಂದ ಕಾರ್ಕಳ ಪೋಲೀಸರಿಗೆ ನಿದ್ರೆ, ಊಟ ಕಡಿಮೆ. ನಂಬ್ರದ ಪತ್ತೆಯಲ್ಲಿ ಇದ್ದಾರೆ. ಪಾಪ, ಗ್ರಹಚಾರ!

ಬೆಂಗಳೂರಲ್ಲಿ ಉದ್ಭವಿಸಿದ ಗಲಾಟೆಯ ಕುರಿತು ಇನ್ನೂ ನಿಶ್ಶೇಷವಾಗಿ ಯಾರದ ಕಮಿಟಿಯವರಿಗೆ ಒಡೆ ನೂರು ಮುಂದಿ ಸಾಕ್ಷಿಗಳಿಗೆ ವಿಚಾರಣೆ [illegible]. ಇನ್ನು ಕೆಲವೆ ದಿವಸ [illegible] ಕಮಿಟಿಯವರ ಹೇಳಿಕೆ.

ಕಮಿಟಿಯವರ ವಿಚಾರಣೆ ಅರ್ಧಾಂಶ ಮುಗಿಯುವಾಗಲೇ ಒಡೆಯಿತು ಸಿಡಿಲು; ಆರು ಜನ ಉಪಾಧ್ಯಾಯರುಗಳಿಗೆ.

ಆರು ಜನ ವಿದ್ಯಾರ್ಥಿಗಳ ಕತ್ತಿರ ಮುಚ್ಚಳಿಕೆಯನ್ನು ತೆಗೆದುಕೊಂಡು ಅವರ ವಿಚಾರಣೆಯನ್ನು ನಡಿಸಲಿರುವರು.

ಕಮಿಟಿ ವಿಚಾರಣೆ ಅಂತ್ಯಕ್ಕೆ ಬರುವಾಗ ಮುಚ್ಚಳಿಕೆ ಜರಿ ಮುಂಡಾಸುಗಳ ಮೇಲೂ ಬರುತ್ತದೂ ಏನೊ ನೋಡಲಿದೆ.

ಶಾಲಿವಾಹನಶಕ ೧೮೫೨ ನೆಯ ವಿಭವಸಂವತ್ಸರದ ಆಶ್ವೀಜ ಬ ೧೧ ಶನಿವಾರದಿಂದ ವಿಭವ ಸಂವತ್ಸರದ ಆಶ್ವೀಜ ಬ ೧೭ ಶುಕ್ರವಾರದ ವರೆಗಿನ ಪಂಚಾಂಗ

(ಗಣಿತವು ಘಳಿಗೆ (ಲೋಕಲ್)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಯೋಗ	ಸೂರ್ಯ ಉ	ಅಸ್ತ
10	ಶನಿ	೧೧	೧೬. ೦	ಚಿತ್ರಾ	೪೫.೧೬	೨೫	6.29	6 1
11	ಆದಿ	೧೨	೧೯.೪೬	ಸ್ವಾತಿ	೫೦.೧೪	೨೬	6 30	6 1
12	ಸೋಮ	●	೨೪. ೩	ವಿಶಾಖಾ	೫೬.೧೬	೨೭	6.30	6 1
13	ಮಂಗ	೧	೨೯. ೧	ಅನುರಾಧಾ	೬.೦ ೦	೨೮	6 31	6. 1
14	ಬುಧ	೨	೩೪ ೧೪.	ಅನುರಾಧಾ	೩.೪೪.	೨೯	6 31	6. 1
15	ಗುರು	೩	೩೯. ೧	ಜ್ಯೇಷ್ಠ	೯. ೩	೩೦	6.32	6. 1
16	ಶುಕ್ರ	೪	೪೪.೨೯	ಮೂಲಾ	೧೫. ೧	೧	6.32	6. 0

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ
2	88—9	76—8	0 -16	—
3	87—8	75—6	—	—
4	94—4	75—1	—	—
5	92—3	75—7	—	—
6	91—7	76—2	—	—
7	94—0	75—2	—	—
8	91—5	73—9	—	—
				124-21

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮುಸ್ಕಿ	...	7-12	8-8
ಗಾಡ್ಡು	...	7-2	7-8
ಸುಗ್ಗಿ	...	6-12	7-6
ರಾಶಿ	...	6-8	7-4
ಊರ ಅಪ್ಪರ್ ಬೆಳ್ತಿಗೆ	...	7-8	8-14
ರಂಗೂನು ಬೆಳ್ತಿಗೆ ಗೋಣಿ ೧ಕ್ಕೆ	...	12-8	12 14
ಎಲ್ಲೂರು ಬೆಳ್ತಿಗೆ ಮುಡಿ ೧ಕ್ಕೆ	...	7-6	7-12
ಗೋಧಿ ಗೋಣಿ ೧ಕ್ಕೆ	...	18-0	20 0
ಹುರುಳಿ ಗೋಣಿ ೧ಕ್ಕೆ	...	7-8	10 0
ಕಡಲೆ ಗೋಣಿ ೧ಕ್ಕೆ	...	13-12	15 8
ತೊಗರಿ ಗೋಣಿ ೧ಕ್ಕೆ	...	14-8	15 8
ತೊಗರಿಬೇಳೆ ಗೋಣಿ ೧ಕ್ಕೆ	...	18-0	26 0
ಉದ್ದು ಗೋಣಿ ೧ಕ್ಕೆ	...	14-8	15
ಹೆಸರು ಗೋಣಿ ೧ಕ್ಕೆ	...	13-0	14 4
ಊರು ಬೆಲ್ಲ ಖಂಡಿ ೧ಕ್ಕೆ	...	65-0	70 0
ಉಪ್ಪು ಗೋಣಿ ೧ಕ್ಕೆ	...	4-8	5-8
ಕೊತ್ತು ಖಂಡಿ ೧ಕ್ಕೆ	...	130-0	--
ಕೊತ್ತು ಹಿಂಡಿ ಖಂಡಿ ೧ಕ್ಕೆ	...	47-8	48-0
ಎಳ್ಳಿಂಡಿ ಖಂಡಿ ೧ಕ್ಕೆ	...	35-8	47-8
ಕೊತ್ತು ಎಣ್ಣೆ ಮುಡಿ ೧ಕ್ಕೆ	...	7-12	8-6
ಎಳ್ಳೆಣ್ಣೆ ಮುಡಿ ೧ಕ್ಕೆ	...	8-0	8 6
ಹರಳೆಣ್ಣೆ ಬುದ್ದಿಗೆ ೧ಕ್ಕೆ	...	7-8	7 4
ಪೋರಿಸ ಸಕ್ಕರೆ ಮುಡಿ ೧ಕ್ಕೆ	...	3-12	3 14
ಹೊಸ ಮೆಣಸು	...	7-0	7-4
ಹೊಸ ಊರ ಮೆಣಸಿನಕಾಯಿ ಮುಡಿ ೧ಕ್ಕೆ		3-4	6-0
ಸಾಸಿವೆ ಮುಡಿ ೧ಕ್ಕೆ	...	3-8	8 12
ಕೊತ್ತಂಬರಿ ಮುಡಿ ೧ಕ್ಕೆ	...	5-4	6 0
[illegible] ಖಂಡಿ ೧ಕ್ಕೆ	...	385-0	400-0
[illegible] ಖಂಡಿ ೧ಕ್ಕೆ	...	170-0	205-0
ಕಾಳುಮೆಣಸು ಖಂಡಿ ೧ಕ್ಕೆ	...	526-4	526-8
ಯೇಲಕ್ಕಿ ಮಣ ೧ಕ್ಕೆ	...	52-0	54-8
[illegible] ಮುಡಿ ೧ಕ್ಕೆ	...	3-10	3-14
ಕೊಬ್ಬರಿ ಖಂಡಿ ೧ಕ್ಕೆ	...	40-0	42 8
[illegible] ತಗಡು ೧ಕ್ಕೆ	...	16-0	16 12
[illegible] ಪಾತ್ರೆಗಳು ಮಣ ೧ಕ್ಕೆ	...	21-0	22
[illegible] ೧ಕ್ಕೆ	...	15-0	—
ಹಿತ್ತಾಳೆ ತಗಡು ಮಣ ೧ಕ್ಕೆ	...	14-8	16-8
ಸತು ೧ಕ್ಕೆ	...	13-7	—
[illegible] ಖಂಡಿ ೧ಕ್ಕೆ	...	70-	85-0

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ § ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು,

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ಪಿತ್ತ್ಯಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಿಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಔಷಧಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0

ಇದನ್ನು ಸೇವಿಸುವುದೇ,

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಸೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಗೂಲನ್‌ಮಾರ್ಟ್, ಕಂಪನಕಟ್ಟಾ, ಮಂಗಳೂರು. ದ. ಕನ್ನಡ



ತಯಾರಾಗಿವೆ ತಯಾರಾಗಿವೆ!!

ಕಾಫಿ ಪೆಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚೆಕ್ ರೋಲ್ ಗಳು

ಮೂರು ಸ್ಟ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿದೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ವರ್ತಮಾನಕ್ಕೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್.

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಇನ್ನೂ ಹೆಚ್ಚಿನ ಕಾರಣಗಳು!

ಪೆರಡೈಸ್ ಟೋನಿಕ್ ಪಿಲ್ಸ್

ಎಂಬ ಕಸ್ತೂರಿ, ಶಿಲಾರಾಳ, ಬಂಗಾರ ಮೊದಲಾದ ಅಮೌಲ್ಯ ಪದಾರ್ಥಗಳಿಂದಾಗುವ ಈ ನಿರ್ಬಾಧಕಕರವಾದ ಹಾಗೂ ಲೋಹಗಳ ವಿಷವೇನೂ ಇಲ್ಲದ ಮಾತ್ರೆಗಳನ್ನು ಸೇವಿಸಲು ಇನ್ನೂ ಹೆಚ್ಚಿನ ಕಾರಣಗಳು.

ನರಗಳ ದೌರ್ಬಲ್ಯ ನಿವಾರಣೆಗೆ ಇದು ಅಮೃತಸಮಾನ.

ವೃದ್ಧಾಪ್ಯವನ್ನು ಹೋಗಲಾಡಿಸಿ ನವಯೌವನವನ್ನು ಕೊಡುವ ಈ ಮಾತ್ರೆಗಳು ಇಡೀ ಶರೀರದ ತೇಜಸ್ಸನ್ನು ವೃದ್ಧಿ ಮಾಡುವುದು. ದೇಹಶಕ್ತಿಯನ್ನೂ ಸ್ನಾಯುಗಳ ಬಲವನ್ನೂ ಹೆಚ್ಚಿಸಿ, ಪ್ರಾಣವನ್ನೂ ತೇಜವನ್ನೂ ಅತಿಯಾಗಿ ಕಳೆಕೊಂಡಿರುವವರಿಗಾದರೂ ತೃಪ್ತಿಯದಲ್ಲೇ

— ಕೊಡುವುದು —

60 ಮಾತ್ರೆಗಳುಳ್ಳ ಸೀಸೆಗೆ ಬೆಲೆ 2—8—0 ಮಾತ್ರ

ಆರ್. ಛೋಟಾಲಾಲ್ ಎಂಡ್ ಕೋ,

(K) ಪ್ರಿನ್ಸೆಸ್‌ಸ್ಟ್ರೀಟ್, ಬೊಂಬಾಯಿ ನಂಬ್ರ 2.

ಆದರ್ಶ ಶಕ್ತಿವರ್ಧಕವು.

ತೊಂದರೆಗಳಿಂದಲೂ, ಸಂಸಾರ ಚಾಪತ್ಯಗಳಿಂದಲೂ, ಬಳಲಿದ ವಿರಾವರೆ, "ಎಲಿಕ್ಸರ್ ನರ್ವಾನಾ" ಎಂಬುದು, ನೀವು ಕಳಕೊಂಡ ಶಕ್ತಿಯನ್ನು ಪುನಃ ತುಂಬಿಸಿ, ನಿಮ್ಮ ಜೀವನವನ್ನು ಸುಖಮಯವಾಗಿ ಮಾಡುವದು.

ಮೂರು ಬಾಟಲಿಗಳನ್ನು ಕ್ರಮವಾಗಿ ಸೇವಿಸುತ್ತವರಿಂದ ನೀವು ಚಟುವಟಿಕೆಯನ್ನು ಹೊಂದಿ ಉತ್ಸಾಹ ಭರಿತರಾಗುವಿರಿ. ಬಾಟಲಿಗೆ ಕ್ರಯ ರೂಪಾಯಿ 5.

ಕ್ರಯದ ಪಟ್ಟಿಗೂ ಮಾಹಿತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಸ್. ಡಿ. ವೋರಾ ಮತ್ತು ಕಂಪೆನಿ.

ಚಿಲ್ಲರೆ ಮತ್ತು ರಖಮು ಔಷಧಿ ವ್ಯಾಪಾರಿಗಳು.

P. O. ಬೋಕ್ಸ್ ನಂಬ್ರ 2003 ಬೊಂಬಾಯಿ ನಂ. 2.

ಅನುಕ್ರಮಣಿಕೆ.

ಸಂಪಾದಕೀಯ, ಪುಟ

ಪ್ರಧಾನ ಮಂತ್ರಿಗಳ ಆಗಮನ ೩

ವಿದೇಶ ವರ್ತಮಾನ ೫

ಸ್ಥಳೀಯ ವರ್ತಮಾನ ೭

ಟೀಕೆಗಳು ೮

ವರ್ತಮಾನ ಸಂಗ್ರಹಗಳು

ಒಳದೇಶ ವರ್ತಮಾನ ೩

ದಕ್ಷಿಣ ಕನ್ನಡ— ಮಂಗಳೂರು, ಬಂಟ್ವಾಳ, ಉಡುಪಿ, ಮಂಜೇಶ್ವರ, ಪುತ್ತೂರು, ಕುಂಬಳೆ, ಕಾಸರಗೋಡು, ಮೂಡಬಿದ್ರೆ, ಬೆಳ್ತಂಗಡಿ, ... ೬-೮

ವಿವಿಧ ಸಮಾಚಾರಗಳು, ... ೯

ಮೈಸೂರಿನ ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿದ ಭಾಷಣ. . ೧೪

ಪತ್ರವ್ಯವಹಾರ, ೧, ೨, ... ೨

ಉಡುಪಿಯ ವಿಶೇಷ ಪತ್ರ ೧

ಸ್ವದೇಶಾಭಿಮಾನಿ.

ತಾರೀಕು ೯ನೇ ಶುಕ್ರವಾರ ನವಂಬರ ೧೯೨೮

ಪ್ರಧಾನ ಮಂತ್ರಿಗಳ ಆಗಮನ.

ನವೆಂಬರ್ ತಾ. ೧೧ನೇ ಆದಿತ್ಯವಾರ ದಿವಸ ಬೆಳಗ್ಗೆ ಗಂಟೆ ೯-೩೦ಕ್ಕೆ ಪ್ರಧಾನ ಮಂತ್ರಿಗಳು ಮಂಗಳೂರಿಗೆ ತಲ್ಪಿ, ತಾರೀಕು ೧೩ಕ್ಕೆ ಚಾರ್ಮಾಡಿ ಗಡಿಯನ್ನು ಸಂದರ್ಶಿಸಿ, ತಾ. ೧೩ಕ್ಕೆ ಮಂಗಳೂರಿನ ಕಾರ್ಯಕ್ರಮಗಳನ್ನು ಮುಗಿಸಿ, ತಾ. ೧೪ಕ್ಕೆ ಕರಾವಳಿ ಮಾರ್ಗವಾಗಿ ಉಡುಪಿಗೆ ಹೋಗಿ ಕಾರ್ಕಳ ಮಾರ್ಗವಾಗಿ ಹಿಂದಿರುಗಿ, ತಾ. ೧೫ಕ್ಕೆ ಪುನಃ ಮಂಗಳೂರು ಕಾರ್ಯಕ್ರಮವನ್ನು ಮುಗಿಸಿ, ತಾ. ೧೬ನೇ ಬೆಳಗ್ಗೆ ರೈಲ್ ಗಾಡಿಯಲ್ಲಿ ಹಿಂದಿರುಗುವರು. ಈ ದೀರ್ಘ ಕಾರ್ಯಕ್ರಮದಲ್ಲಿ, ಪ್ರಧಾನ ಮಂತ್ರಿಗಳ ತಾ. ೧೨ರ ಚಾರ್ಮಾಡಿಯ ಸಂಚಾರವೂ, ತಾ. ೧೩ರ ಭೇಟಿಗಳೂ (Interviews), ತಾ. ೧೪ರ ಕರಾವಳಿ ಪ್ರವಾಸವೂ, ತಾ. ೧೫ರ ಡೆಪ್ಯುಟೇಶನುಗಳನ್ನು ಕಾಣುವುದೂ ಮುಖ್ಯವಾದ ಸಂಗತಿಗಳಾಗಿವೆ.

ಚಾರ್ಮಾಡಿ ಗಡಿಯು ಅದರ ಹತ್ತಿರದ ಮಲೆ ಪ್ರದೇಶಗಳ ವ್ಯವಸಾಯದ ಕಾರಣದಿಂದಲೂ, ಮೈಸೂರಿನ ಪ್ರವೇಶದ ಉತ್ತಮ ಮಾರ್ಗವಾಗಿಯೂ, ಮುಂಬಾಯಿ ಪ್ರಯಾಣಕ್ಕೆ ಅನುಕೂಲ ಹಾದಿಯಾಗಿಯೂ ಇತ್ತೀಚೆಗೆ ಬಹಳ ಪ್ರಾಮುಖ್ಯತೆಯುಳ್ಳದ್ದಾಗಿದೆ. ಕಳೆದ ಬಾರಿ ಮಾನ್ಯ ಗವರ್ನರ ದೊರೆಗಳು ಬಂದಾಗ ಕೇಳಿಕೊಂಡ ಮೇರೆಗೆ ಗಡಿಮಾರ್ಗವು ಟ್ರಂಕ್‌ರೋಡ್ (Trunk road) ಎಂಬ ಗೌರವ ವರ್ಗಕ್ಕೆ ಸೇರಿಸಲ್ಪಟ್ಟು ಹೆಚ್ಚು ಗ್ರೇಂಟು ಪಡೆಯಲು ಅನುಕೂಲಿಸಲ್ಪಟ್ಟಿದೆ. ಮತ್ತು ಘಾಟಿ ಮಾರ್ಗವೂ ಕಳೆದ ವರ್ಷಕ್ಕಿಂತ ಸ್ವಲ್ಪ ಮಟ್ಟಿಗೆ ಚೆನ್ನಾಗಿದೆ. ಆದರೆ ಮಾರ್ಗವು ಸುಧಾರಿಸಲ್ಪಡಲಿಕ್ಕೆ ಇನ್ನೂ ಎಷ್ಟೋ ಕೆಲಸವಿರುತ್ತದೆ. ಮಾರ್ಗದ ಪ್ರಾಮುಖ್ಯತೆಯನ್ನು ನೋಡಿ ಅದು ಇನ್ನೂ ಸುಧಾರಿಸಲ್ಪಡಲು ಮಾನ್ಯ ಮಂತ್ರಿಗಳವರ ಭೇಟಿಯು ಹೆಚ್ಚು ಉಪಕಾರಿಯಾಗಬಹುದೆಂದು ನಾವು ನೆನಸುತ್ತೇವೆ. ಘಾಟಿ ಮಾರ್ಗಗಳ ದುರುಸ್ತಿಯು ಸುಲಭವಾದುದಲ್ಲ. ಅಲ್ಲಿ ಆವಶ್ಯಕವಾಗಿ ಬೇಕಾಗುವ ಸಾಮಾನೂ ಜನರೂ ಬಹಳ ಕಷ್ಟಸಾಧ್ಯವಾಗುತ್ತವೆ. ಇದಕ್ಕಾಗಿ ಸರಕಾರದ ಧನಸಹಾಯವು ಮತ್ತಷ್ಟು ಹೆಚ್ಚು ಬೇಕಾಗುತ್ತದೆ. ಮಂತ್ರಿಯವರ ಮೂಲಕ ಸರಕಾರದಿಂದ ಈ ಸಹಾಯವು ಸಿಕ್ಕಲಾಗಲೆಂದು ನಾವು ಆಶಿಸುವೆವು.

ಕರಾವಳಿ ಮಾರ್ಗದಲ್ಲಿ ರೈಲ್ ಹಾದಿಯು ಸಧ್ಯದಲ್ಲಿಯೇ ಏರ್ಪಡಬಹುದೆಂಬ ಆಶೆಯು ತೋರಿಸಲ್ಪಟ್ಟಿದೆ. ಆದರೆ ರೈಲು ಹಾದಿಯು ಕರಾವಳಿ ಮಾರ್ಗವಾಗಿ ಹೋಗುವುದೂ ಇಲ್ಲವೇ ಕಾರ್ಕಳ ಮಾರ್ಗವಾಗಿ ಹೋಗುವುದೂ ಎಂಬುದನ್ನು ಇನ್ನೂ ನಿರ್ಣಯಿಸಲಾಗಲಿಲ್ಲ. ಯಾವ ಮಾರ್ಗವಾಗಿ ರೈಲು ಹಾದಿ ಹೋದರೂ, ಕರಾವಳಿ ಮಾರ್ಗದ ಇತರ ವ್ಯವಹಾರಗಳು ಕಡಿಮೆಯಾಗುವುದಾಗಿ ನಾವು ನೆನಸುವುದಿಲ್ಲ. ರೈಲ್ ಹಾದಿ ಕಾರ್ಕಳ ದಾರಿಯಾಗಿ ಹೋದರೆ ಕರಾವಳಿ ಮಾರ್ಗದ ಸುಧಾರಣೆಯು ಅವಶ್ಯವಿದ್ದೆ ಅದು ಕರಾವಳಿ ಮಾರ್ಗವಾಗಿ ಹೋದರೂ ಜಿಲ್ಲೆಯ ಒಳಗಿನ ಹಳ್ಳಿಗಳ ವ್ಯವಹಾರಗಳು ರೈಲು ಹಾದಿಯನ್ನು ಹೆಚ್ಚಾಗಿ ಪಡೆಯುವ ಜಿಲ್ಲಾ ಕರಾವಳಿ ಮಾರ್ಗವು ಸುಧಾರಣೆ ಹೊಂದದೇ ಹೋಲು. ಆದುದರಿಂದ ಕರಾವಳಿಯ ಜೊತೆಗೆ ಸೇತುವೆ ಹಾಕುವ ಸೂಚನೆಯೂ, ಮಾರ್ಗ ದುರುಸ್ತಿ ಪಡಿಸುವ ಸೂಚನೆಯೂ ಆಲೋಚಿಸಲ್ಪಟ್ಟು, ಆ ಬಗ್ಗೆ ಹೆಚ್ಚು ಧನಸಹಾಯವನ್ನು ಪ್ರಧಾನ ಮಂತ್ರಿಗಳಿಂದ ನಿರೀಕ್ಷಿಸಬಹುದಾಗಿ ನಾವು ನೆನಸುತ್ತೇವೆ.

ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಪ್ರಧಾನ ಮಂತ್ರಿಗಳೊಡನೆ ನಿವೇದಿಸಬೇಕಾಗಿರುವ ಹಲವು ವಿಷಯಗಳಿರುತ್ತವೆ. ಭೇಟಿಗಳೂ, ಡೆಪ್ಯುಟೇಶನುಗಳೂ ಸರಿಯಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟರೆ ಜಿಲ್ಲೆಯ ಬಂದಿಷ್ಟು ಹಿತವನ್ನು ನಿರೀಕ್ಷಿಸಬಹುದಿತ್ತು. ಈಗ ಸರಕಾರದವರು ತಮ್ಮ ಕೈಕೆಳಗೆ ಮಾಡಿಕೊಂಡ ಆಸ್ಪತ್ರೆಗಳ ಸ್ಥಿತಿ, ಗವರ್ನಮೆಂಟ್ ಕಾಲೇಜಿನ ಬಡಾವಣೆಯ ವಿಷಯ, ಲೋಕಲ್ ಬೋರ್ಡುಗಳೊಳಗಿನ ಅನಾವಶ್ಯಕ ವಿಷಯ, ಜಿಲ್ಲಾ ಅಭಿವೃದ್ಧಿ ಸಂಘದ ಅನುಭವ ಮೊದಲಾದ ಹಲವು ವಿಷಯಗಳನ್ನು ಪ್ರಧಾನ ಮಂತ್ರಿಗಳ ಗಮನಕ್ಕೆ ತಂದು ಮಂತ್ರಿಗಳ ಮೂಲಕ ಪ್ರಜೆಗಳು ಎಷ್ಟರ ಮಟ್ಟಿಗೆ ಹೆಚ್ಚಿನ ಪ್ರಯೋಜನಗಳನ್ನು ಪಡೆಯಬಹುದೆಂದು ನೋಡಿಕೊಳ್ಳಬಹುದು.

ಸಂಕ್ಷೇಪತಃ ಪ್ರಧಾನ ಮಂತ್ರಿಗಳ ಈ ಆಗಮನದ ಸಂದರ್ಭವನ್ನು ನಮ್ಮ ಜಿಲ್ಲೆಯು ಅವಶ್ಯವಿದ್ದ ಎಲ್ಲಾ ಸುಧಾರಣೆಗಳನ್ನೂ ಸಹಾಯವನ್ನೂ ಹೊಂದಲು ಉಪಯೋಗಿಸಿಕೊಳ್ಳುವುದಾಗಿ ನಾವು ನೆನಸುವೆವು.

ವಿದೇಶ ವರ್ತಮಾನ.

— "ಪೆಗು" ಎಂಬ ಒಂದು ಹಡಗಿನಲ್ಲಿನ ಅಡಿಗೆ ಕೋಣೆಯ ಚಾಕರನೋರ್ವನು ಇನ್ನೊಬ್ಬ ಚಾಕರನನ್ನು ಕೊಂದುಹಾಕಿದುದರಿಂದ ಆತನನ್ನು ಸೆರೆಮಾಡಿ ರಂಗೂನಿನ ಹ್ಯಾಕೋರ್ಟಿನಲ್ಲಿ ಆತನ ವಿಚಾರಣೆಯಾಯಿತು. ವಿಚಾರಣೆಯು ಮುಗಿದು ಆತನಿಗೆ ಪಾಶಿ ಶಿಕ್ಷೆಯು ವಿಧಿಸಲಾಯಿತು.

— ಲಂಡನಿನಲ್ಲಿ ರಿಬೆಲ್ ಹೆನ್ ರಿಕ್‌ಸನ್ ಎಂಬ ಒಬ್ಬ ಸೇವಿಕೆಯು ಅಲ್ಲಿಯೇ ಕಲಿಯುತ್ತಿದ್ದ ಒಬ್ಬ ಹಿಂದೂ ವಿದ್ಯಾರ್ಥಿಯಿಂದ ಪ್ರೀತಿಸಲ್ಪಡುತ್ತಿದ್ದಳು. ಹಿಂದೂ ವಿದ್ಯಾರ್ಥಿಯು ವಿವಾಹವಾಗಲು ಈ ಯುವತಿಯನ್ನು ಒಂದು ದಿನ ಕೇಳಿದ್ದಕ್ಕೆ ಕಾರಣ ರಿಬೆಲ್ಲಳಿಗೆ ವೈರಾಗ್ಯವುಂಟಾಗಿ ಆತ್ಮಹತ್ಯವನ್ನು ಮಾಡಲು ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಈಗ ಆಕೆಯ ವಿಚಾರಣೆಯಾಗುತ್ತಲಿದೆ.

— ಹಿಂದೀ ವಿದ್ಯಾರ್ಥಿಗಳಿಗೆ ವಿದ್ಯಾ ಬೋಧಕನಾಗಿ ಇಂಗ್ಲಾಂಡಿನಲ್ಲಿ ಉಳಕೊಂಡಿದ್ದ ಮಿ. ಎನ್. ಸಿ. ಸೇನನೆಂಬವನು ತನ್ನ ಕೆಲಸದಿಂದ ನಿವೃತ್ತನಾಗಿರುವನು. ಆತನು ಕಳೆದ ೧೫ ವರುಷಗಳಿಂದಲೂ ಈ ಕೆಲಸದಲ್ಲಿದ್ದನು. ಇದೇ ತಿಂಗಳ ೨೬ನೇ ತಾರೀಕಿನ ದಿನ ಆತನು ಹಿಂದುಸ್ಥಾನಕ್ಕೆ ಹಿಂತಿರುಗಲಿರುವನು.

ಅಮೇರಿಕದ ಒಬ್ಬ ಫೋಲರನೆಂಬವನು ತನ್ನ ಒಂದು ಕಾಲನ್ನು ಕಳಕೊಂಡ ಮೇಲೆ ಕೆಸೆಯಲ್ಲಿ ಸಾಹಸ್ಸ ಪಡುವುದಿಲ್ಲದೆ ಆತನು ಭೂಸಂಚಾರವನ್ನು ಮುಗಿಸಿರುವನು. ಮುಸ್ಸೋಲೀನಿ ಮೊದಲಾದ ಪ್ರಸಿದ್ಧ ಪುರುಷರು ಆತನ ಸ್ನೇಹಿತರಾಗಿರುವರು.

— ಸರ್ ಹ್ಯಾರಿ ಲ್ಯಾಂಡರ್ ಎಂಬವರು ಅಸ್ಟ್ರೇಲಿಯದಲ್ಲಿ ತಾನು ಒಂದು ನವೀನ ಅನಾಂಗದೊಡನೆ ವಾಸಿಸಿದ್ದೆನೆಂದು ಅವರಿಗೆ ಬಾಲಿಕೆಯೊಂದೂ ಹೇಳಿದರು. ಇದು ಕೇಳಲು ಬಹು ಆಶ್ಚರ್ಯಕರವಾಗಿದೆ.

— ಬಾರ್ನೆಟನ ಫಿಟ್‌ಜೆರಾಲ್ಡನೆಂಬವನು ಒಂದು ದಿನ ತನ್ನೊಡನಿದ್ದ ದೊಡ್ಡ ಕುಂಬಳಕಾಯಿಯನ್ನು ಒಡೆದು ನೋಡುವಾಗ ಅದರೊಳಗಿಂದ ಬೆಕ್ಕು ಮತ್ತು ಅದರ ನಾಲ್ಕು ಮರಿಗಳಿದ್ದುವು. ಆತನ ಮನೆಯ ಬೆಕ್ಕು ಮರಿ ಇಡುವ ಸಲುವಾಗಿ ಕುಂಬಳಕಾಯಿಗೆ ತೂತು ಕೊರೆದು ಒಳಗೆ ಹೋಗಿದ್ದಿತು.

— ಅರ್ಮೇನಿಯ ಬರ್ಲಿನ್ ನಗರದಲ್ಲಿ ಒಬ್ಬ ಆರನೆ ವಿದ್ಯಾರ್ಥಿಯು ಆತ್ಮಹತ್ಯವನ್ನು ಮಾಡಿಕೊಂಡನು. ಈತನು ಆಟಗಳಲ್ಲಿ ನಿಪುಣನಾಗಿದ್ದರೂ ಕಲಿಯುವುದರಲ್ಲಿ ಅಷ್ಟು ಬುದ್ಧಿವಂತನಾಗಿರಲಿಲ್ಲವಂತೆ. ಆತನು ಕೆಲಗ ದಿವಸಗಳ ಹಿಂದೆ ಆತನ ಸಹಾಧ್ಯಾಯಿಯು ಆತನ ಹತ್ತಿರ ಬಂದಿದ್ದರು. ಅದಕ್ಕಾಗಿ ಆತನು ಒಂದು ಕಠೋರವಾದ ಹಾದಿ ಆತ್ಮಹತ್ಯವನ್ನು ಮಾಡಿಕೊಂಡನು. ಇಂತಹ ರೀತಿಯಲ್ಲಿ ವಿದ್ಯಾರ್ಥಿಗಳು ಆಗಾಗ ಆತ್ಮಹತ್ಯವನ್ನು ಮಾಡಿಕೊಳ್ಳುವುದರಿಂದ ಪರೀಕ್ಷೆ ಕ್ರಮಗಳ ಕಷ್ಟತರವಾಗಿರಬಹುದೆಂದು ನೆನಸಿ, ಸರಕಾರದವರು ವಿಚಾರಣೆಯನ್ನು ನಡೆಸಲು ನಿಶ್ಚಯಿಸಿರುವರು. ಈಸಮೊತ್ತಿನ ಮರಣದಿಂದ ಸಾವಿರಾರು ಇತರ ವಿದ್ಯಾರ್ಥಿಗಳಿಗೆ ಸೌಕರ್ಯವುಂಟಾಗಬಹುದು.

— ಚೀನದಲ್ಲಿ ಆಳಿದ ಮಾವ್ರದ ಪ್ರತಿಯೊಂದು ಸ್ಥಳವನ್ನು ರಿಜಿಸ್ಟರ್ ಮಾಡಬೇಕೆಂದೂ ಆಳಿದ ಸೇವೆಯನೊಡನೆ ಸರಕಾರದ ಪ್ಯಾಸನ್ನು ಇಡಬೇಕೆಂದೂ ಸರ್ಕಾರವಾಗಿದೆ.

— ಮೊದಲನೆಯ ಲೋಟರಿಯು ಟ್ಯಾಗಿಸ್ ಎಂಬಲ್ಲಿ ೧೮೮೬ನೇ ಇಸವಿಯ ಫೆಬ್ರವರಿ ತಿಂಗಳಲ್ಲಿ ತೆರೆಯಲ್ಪಟ್ಟಿತೆಂದು ಗೊತ್ತಾಗಿರುತ್ತದೆ.

— ಚೀನಾ ದೇಶದ ಹವೆಯು ಸರಿಯಾಗಿರದ ಕಾರಣ ಬೆಳೆಯು ಚೆನ್ನಾಗಿ ಬೆಳೆದಿಲ್ಲ. ಪ್ರಾಯಶಃ ಅಲ್ಲಿ ಬರ ಬರಬಹುದೆಂದು ನೆನಸಲಾಗಿದೆ.

— ವಿಯನ್ನಾದಲ್ಲಿ ಒಬ್ಬ ಮುಸಲ್ಮಾನ ರಾಜ ಕನ್ನಿಕೆಯು ಗುಂಡು ಹೊಡೆದು ಕೊಲ್ಲಲ್ಪಟ್ಟಳು. ಈ ರಾಜ ಕನ್ನಿಕೆಯು ಒಬ್ಬ ಯುವಕನನ್ನು ಪ್ರೀತಿಸುತ್ತ ಬಂದಿದ್ದು, ಒಂದುದಿನ ತಾನು ಇದ್ದಲ್ಲಿಗೆ ಹೋಗಿ ಅಲ್ಲಿನ ರಾಜಕುಮಾರನೊಡನೆ ಒಬ್ಬನನ್ನು ಮದುವೆಯಾಗುವೆನೆಂದು ಹೇಳಿಬಿಟ್ಟಳು. ಯುವಕನು ಎದೆಯೊಡೆದಂತಾಯಿತು. ರಾತ್ರಿ ರಾಜಕುಮಾರಿಯು ನಾಟಕವನ್ನು ನೋಡಲು ಬಂದಿದ್ದಾಗ, ಯುವಕನು ಅಲ್ಲಿಗೆ ಬಂದು ಮೂರು ಗುಂಡುಗಳನ್ನು ಹೊಡೆದು ಆಕೆಯನ್ನು ಕೊಂದು ತನ್ನನ್ನು ಒಪ್ಪಿಸಿಕೊಂಡನು.

ಒಳದೇಶ ವರ್ತಮಾನ.

— ಕಲ್ಕತ್ತದ ವಾಯವ್ಯ ಮೂಲೆಯಲ್ಲಿರುವ ಒಂದು ಮಿಲ್ಲಿಗೆ ಬೆಂಕಿ ಬಿದ್ದು ವಿಶೇಷ ನಷ್ಟವುಂಟಾಯಿತು.

— ಹೈದರಾಬಾದದ ನಿಜಾಮರು ಕಳೆದ ವಾರದಲ್ಲಿ ಆಸ್ಪತ್ರೆಯನ್ನು ಸಂದರ್ಶಿಸಿದರು.

— ಸಾಬರ್ಮತಿ ಸ್ಥಾಪನೆಯನ್ನು ಸಂದರ್ಶಿಸಲಿಕ್ಕೆ ಇತ್ತೀಚೆಗೆ ಯುರೋಪಿಗೆ ಹೋಗಿದ್ದ ಮಿ| ಹರೀಂದ್ರನಾಥ ಚಟ್ಟೋಪಾಧ್ಯಾಯರು ಈಗ ರಾಜನವರು ಮದರಾಸಿಗೆ ಬಂದು ತಲುಪಿರುವರು.

— ಪೂರ್ವ ಕರಾವಳಿಯಲ್ಲಿ ಉಂಟಾದ ನೆರೆಹಾವಳಿಯಿಂದ ನಷ್ಟಪಟ್ಟ ಜನರ ಸಹಾಯಕ್ಕೆಂದು ನಮ್ಮ ವ್ಯಾಪಾರಿಗಳು ಸಾವಿರಾರು ರೂಪಾಯಿಗಳನ್ನು ದಾನವಾಗಿ ಕೊಟ್ಟಿರುವರು.

— ಮುಂಬಾಯಿಯ ಗಿರಣಿಗಳಲ್ಲಿ ಸಣ್ಣ ಸಣ್ಣ ಮುಷ್ಕರಗಳು ಈಗಲೂ ನಡೆಯುತ್ತಲಿವೆ. ಕೆಲವು ಮಿಲ್ಲಿನ ಕೂಲಿಗಾರರು ಕಳೆದ ವಾರ ತಮಗೆ ಸರಿಯಾಗಿ ಸಂಬಳವನ್ನು ಕೊಡಲಿಲ್ಲವೆಂದು ಆಕ್ಷೇಪಿಸಿ ಮುಷ್ಕರ ಹೂಡಿದ್ದರು, ಪಟ್ಟಿಗೆ ಸರಿಯಾಗಿ ಸಂಬಳವನ್ನು ಕೊಡುವುದಿಲ್ಲವೆಂದು ಅಧಿಕಾರಿಗಳು ಉತ್ತರವಿತ್ತರು. ಇದರಿಂದ ಕೆಲವು ಕಾರ್ಮಿಕರು ಹೊರಗೆ ಬಂದು ನಷ್ಟ ಹೊಂದುವವರನ್ನು ತೊಂದರೆಗೊಳಿಸಿ, ಮುಷ್ಕರವನ್ನು ನಡೆಸಲು ಪ್ರಯತ್ನಿಸಿದರು. ಹೀಗೆಯೇ ಹಲವು ಗಿರಣಿಗಳಲ್ಲಿ ನಡೆಯುತ್ತಲಿದೆ.

— ಬನಾರಸಿನಲ್ಲಿ ಮೊನ್ನೆ ಮರಣಹೊಂದಿದ ಒಬ್ಬ ಸ್ತ್ರೀ ಹಾಡುಗಾರಳಾದ ಭಾಗೀರಥಿ ಎಂಬವಳು ಬನಾರಸಿನ ಸೇವಾಸಮಿತಿಗೆಂದು ೧೨,೦೦೦ ರೂಪಾಯಿಗಳನ್ನು ಬಿಟ್ಟಿರುವಳು.

— ಉರಗಾಮಿನ ಚನ್ನದ ಗಣಿಯಲ್ಲಿ ಒಂದು ಬಂಡೆಕಲ್ಲು ಬಿದ್ದು ಒಬ್ಬನು ಸತ್ತುಹೋದನು. ಇತರ ೬ ಜನರಿಗೆ ವಿಶೇಷ ಗಾಯಗಳಾಗಿರುತ್ತದೆ.

— ಮೊಘಲಪುರದ ರೈಲ್ವೆ ಆಫೀಸಿನಿಂದ ಹಗಲು ಹೊತ್ತಿನಲ್ಲಿ, ೧೪,೬೦೦ ರೂಪಾಯಿಗಳ ನೋಟುಗಳನ್ನು ಚಾರಿತ ಕಳ್ಳನು, ಮೊದಲಾದ ಮೂವರಿಗೆ, ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿರುತ್ತದೆ.

— ನಮ್ಮತಿ ವಯಸ್ಸಿನ ಕಾರಣಾಗಿ ಪೂನಾ ಸೇವಾಸದನದ ಸುಶಿಕ್ಷಿತರಾದ ಜನಕ್ಕೆ ಛಾಯೆಯವರು, ಹುಡುಗಿಯರಿಗೆ ೧೬ ವರುಷವೂ, ಹುಡುಗರಿಗೆ ೨೦ ವರುಷವೂ ಮದುವೆಯ ಪ್ರಾಯವಾಗಬೇಕೆನ್ನುವರು. ಇದಕ್ಕೆ ವಿರೋಧವಾಗಿ, ಸಣ್ಣಪ್ರಾಯದ ಹುಡುಗಿಯರಿಗೆ ಮದುವೆಮಾಡಿದರೆ ಹುಡುಗಿಗೆ ೧೬ ವರುಷವಾಗುವ ವರೆಗೆ ಆಕೆಯನ್ನು ಗಂಡನಿಂದ ದೂರ ವಾಗಿರಿಸುವಂತೆ ಹುಡುಗಿಯ ಹೆತ್ತವರಿಂದ ಬಾಂಡು ಬರೆಸಿಕೊಳ್ಳಬೇಕೆನ್ನುವರು.

— ಕನ್ನ ರಾಜ್ಯದ ಪೋಲೀಸರು, ಅಪರಾಧಿಗಳನ್ನು ಹುಡುಕುವವರಲ್ಲಿ 'ಪೋಲೀಸರು ಮತ್ತು ಪ್ರಜೆಗಳ ಸಹಕಾರ'ವೆಂಬುದರ ಕುರಿತು ಉಪನ್ಯಾಸವನ್ನು ಬರೆಯಬೇಕೆಂದೂ ಪ್ರಥಮ ಕರೆಗಾಯ ಉಪನ್ಯಾಸವನ್ನು ಬರೆದವರಿಗೆ ಒಂದು ಚಿನ್ನದ ಪದಕವು ಇನಾಮಾಗಿ ಕೊಡಲ್ಪಡುವದೆಂದೂ ನಮ್ಮ ಚಕ್ರವರ್ತಿಯವರು ಪ್ರಕಟಿಸಿರುವರು. ಆದರೆ ಹಿಂದೂ ದೇಶದ ಪೋಲೀಸರಿಗೆ ಇಂಗ್ಲಿಷ ಹೆಚ್ಚಾಗಿ ಬಾರದಿರುವ ಪ್ರಯುಕ್ತ ನಮ್ಮ ದೇಶದವರಿಗೆ ಈ ವಿಷಯವು ಅಭ್ಯಸವು ಕಷ್ಟಸಾಧ್ಯ.

— ಸಿಂಗಾಪುರದಲ್ಲಿ ಮಲೇರಿಯ ರೋಗವನ್ನು ನಿವಾರಿಸಿ ವರ್ಷಕ್ಕೆ ಈಗ ೫೦ ಸಾವಿರ ಜನರ ಪ್ರಾಣಗಳು ಉಳಿಸಲ್ಪಡುತ್ತಿವೆ. ನಮ್ಮ ದೇಶದಲ್ಲಿಯೂ ಹಾಗೆ ಮಾಡಿದರೆ ಲಕ್ಷಗಟ್ಟಲೆ ಜನರು ಸಾಯದೆ ಬದುಕಬಹುದು.

— ಲಾಹೋರ ಸ್ಟೇಶನಿನ ಸಮೀಪ ನಡೆದ ಪೋಲೀಸರ ಗಲಭೆಯ ಕುರಿತಾಗಿ ಸಂಪೂರ್ಣ ವಿಚಾರಣೆಯನ್ನು ನಡೆಸುವುದಾಗಿ ಪಂಜಾಬಿನ ಗವರ್ನರರು ಹೇಳಿರುವರು.

— ಮುಂಬಾಯಿಯ ಗಿರಣಿಗಳಲ್ಲಿ ಅಧಿಕಾರಿಗಳು ಕೆಲವು ನೌಕರರನ್ನು ಕೆಲಸದಿಂದ ಹೊರಕ್ಕೆ ಹಾಕಿದ ನಿಮಿತ್ತವಾಗಿ ಸುಮಾರು ೪೦೦ ನೌಕರರು ಕೆಲಸಕ್ಕೆ ಬರುವುದನ್ನು ಬಿಟ್ಟಿರುವರು.

— ಅಲಹಾಬಾದಿನ ಕ್ರಿಶ್ಚನ್ ಕಾಲೇಜಿನ ಪ್ರಿನ್ಸಿಪಾಲನು ಮಾರಿಗೆಯಂದ ಇಲಿಯಟ್ಟರವರಿಗೆ ವಿದ್ಯಾರ್ಥಿಗಳಲ್ಲಿ ಒಂದು ಪಕ್ಷದ ಜಾರಿ ಹೋಗಿ ಹರಿನೀತು. ಅದಿ ಕೆಳಗಿರುವ ನೆಲದ ಮೇಲೆ ಕಲೆಕಳಗಾಗಿ ಬಿದ್ದು ಸತ್ತು ಹೋದನು.

— ಜೆ ಬಿ. ಮಾನನನೆಂಬವರು ಅಮೇರಿಕದಿಂದ ಇಂಗ್ಲಾಂಡಿಗೆ ಬಂದಿರುವರು. ಮಾತನಾಡುವ ಫಿಲ್ಮುಗಳನ್ನು ಹಿಂದುಸ್ಥಾನದಲ್ಲಿ ಪ್ರದರ್ಶಿಸಲು ಅವರಿಗೆ ಅಧಿಕಾರವು ದೊರೆತಿದೆ. ಬರುವ ತಿಂಗಳಿನಲ್ಲಿ ಹಿಂದುಸ್ಥಾನದಲ್ಲಿ ಮಾತನಾಡುವ ಫಿಲ್ಮುಗಳ ಪ್ರದರ್ಶನವು ಪ್ರಾರಂಭವಾಗುವುದು.

— ಒಂದೆರಡು ತಿಂಗಳುಗಳಿಂದ ನಡೆಸಲ್ಪಡುವ ಹಾರಾಟವು ಹಿಂದುಸ್ಥಾನಕ್ಕೆ ಇದು ವರೆಗೆ ಕೊಡಲ್ಪಟ್ಟಿದ್ದ ಗ್ರಂಥಗಳನ್ನು ಇನ್ನು ಕೊಡಬಾರದೆಂದು ಲಾಹೋರು ಲಿಮಿಟೆಡ್ ಎಂಬಲ್ಲಿನ ಸರದಾರ ಹಬಿಬುಲ್ಲಾರವರು ಒಂದು ಠರಾವನ್ನು ತಂದಿರುವರು. ಇಂತಹ ಹಾಲಿಗಳಲ್ಲಿ ಜಾತಿ ವ್ಯವಸ್ಥೆಯು ಹೆಚ್ಚು ಪುಷ್ಟಿಯಾಗುವದರಿಂದ, ಅಪಕಾರ ಅವುಗಳಿಗೆ ಸಹಾಯವನ್ನು ಮಾಡಬಾರದೆಂದು ಅವರ ಅಭಿಪ್ರಾಯ.

— ಹೊಸ ದಿಲ್ಲಿಯಲ್ಲಿ ಕಳೆದ ಎರಡು ಮೂರು ದಿನಗಳಿಂದ ಪೆಟ್ರೋಲ್ ಎಣ್ಣೆಗೆ ಬರ ಬಂದಿರುತ್ತದೆ. ಒಂದು ಡಬ್ಬ ಪೆಟ್ರೋಲು ಎಣ್ಣೆಗೆ ರೂ. ೫-೪ ರಿಂದ ರೂ. ೫-೮ರ ವರೆಗೆ ಕ್ರಯವಿರುತ್ತದೆ.

ಮಿ. ಶಂಕರಲಾಲ ಬ್ಯಾಂಕರ ಇವರ ಪ್ರಯತ್ನದಿಂದ, ಅಹಮದಾಬಾದಿನ ಗಿರಣಿಯ ಮುಷ್ಕರವು ಸಮಾಧಾನವನ್ನು ಹೊಂದಿರುತ್ತದೆ.

— ಮಹಾತ್ಮಾ ಗಾಂಧಿಗಳವರ ಯುರೋಪಿಯನ್ ಶಿಷ್ಯಳಾದ ಮಿಸ್. ಸ್ಲೇಡ್ ಇವರು ಬನಾರಸಿಗೆ ಬಂದು ಹಿಂದೂ ಯುನಿವರ್ಸಿಟಿಯನ್ನು ಸಂದರ್ಶಿಸಿ, ನಡೆಯುವ ಕೈಮಗ್ಗದ ನೇಯಿಗೆಯನ್ನು ನೋಡಿ ಬಹು ಸಂತೋಷಪಟ್ಟಳು. ಈಗ ಅವಳು ನೇಪಾಳಕ್ಕೆ ಹೋಗಿರುವಳು.

ದಕ್ಷಿಣ ಕನ್ನಡ.

ಮಂಗಳೂರು:— ಮದರಾಸು ಸರಕಾರದ ಮುಖ್ಯ ಮಂತ್ರಿಗಳಾದ ಡಾಕ್ಟರ್ ಪಿ. ಸುಬ್ಬರಾಯನ್ ಇವರ ಸಂದರ್ಶನದ ಕಾರ್ಯಕ್ರಮ:—

ತಾರೀಕು ೧೧ನೇ ಆದಿತ್ಯವಾರ, ೯-೩೦ಕ್ಕೆ ಆಗಮನ, ಮಧ್ಯಾಹ್ನ ೩ಕ್ಕೆ ಮಹಿಳಾ ಸಭೆಯ ಪ್ರದರ್ಶನವನ್ನು ತೆರೆಯುವಿಕೆ. ೪-೩೦ಕ್ಕೆ, ಬಂದರ ಪಿಯರ್ ಭವನವನ್ನು ಸಂದರ್ಶಿಸುವಿಕೆ.

೧೨ನೇ ಸೋಮವಾರ, ಬೆಳಗ್ಗೆ ೯-೩೦ಕ್ಕೆ ಚಾಮರ್ಾಡಿ ಗಡಿಗೆ ಹೋಗಿ, ಬಜಪೆ ಹಾಯರ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸುವಿಕೆ.

೧೩ನೇ ಮಂಗಳವಾರ, ಬೆಳಗ್ಗೆ ೧೦ರಿಂದ ೧೧ರ ವರೆಗೆ, ಸೈಂಟ್ ಎಲೋಶಿಯಸ್ ಕಾಲೇಜ್ ೧೧ರಿಂದ ೧೧-೩೦ರ ವರೆಗೆ ಗವರ್ನಮೆಂಟ್ ಕಾಲೇಜ್, ೧೧-೩೦ರಿಂದ ೧೨ರ ವರೆಗೆ ಸೈಂಟ್ ಆಗ್ನೆಸ್ ಕಾಲೇಜ್ ಇವುಗಳನ್ನು ಸಂದರ್ಶಿಸುವಿಕೆ, ೨ರಿಂದ ೨-೪೫ರ ವರೆಗೆ ಭೇಟಿ, ೩ರಿಂದ ೪ರ ವರೆಗೆ ಜಿಲ್ಲಾ ಬೋರ್ಡು ಮೀಟಿಂಗು, ೪ರಿಂದ ೪-೩೦ರ ವರೆಗೆ ಎಜ್ಯುಕೇಶನಲ್ ಕೌನ್ಸಿಲ್ ಮೀಟಿಂಗು, ೪-೪೫ರಿಂದ ೫-೧೫ರ ವರೆಗೆ ಮ್ಯುನಿಸಿಪಲ್ ಮೀಟಿಂಗು, ೫-೨೦ರಿಂದ ೬-೩೦ರ ವರೆಗೆ ಕೆನರಾ ಹೈಸ್ಕೂಲಿನಲ್ಲಿ, ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದ ಪ್ರೆಸಿಡೆಂಟರಾದ ಶ್ರೀ ಎ. ಬಿ. ಶೆಟ್ಟರವರ ಟೀಪಾರ್ಟಿ, ೬-೩೦ರಿಂದ ೭-೩೦ರ ವರೆಗೆ ಕೆಥೋಲಿಕ್ ಸಂಘದವರ ಟೀಪಾರ್ಟಿ.

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು.

ಇದೇ ನವಂಬರ ತಾ. 17 ಮತ್ತು 18

ಅಧ್ಯಕ್ಷರು— ಶ್ರೀ ಕೆ. ಯಫ್. ಹರಿಮಾನ್,
ಎಮ್. ಎಲ್. ಸಿ.

ಸ್ಥಳ—ನೆಶನಲ್ ಗರ್ಲ್ಸ್ ಸ್ಕೂಲ್.

ಅಧ್ಯಕ್ಷರ ಭಾಷಣ—17ನೇ ಶನಿವಾರ
ಅಪರಾಹ್ನ ಘಂಟೆ 5-30.

೧೪ನೇ ಬುಧವಾರ ಬೆಳಗ್ಗೆ ೮ಕ್ಕೆ ಹೊರಟು ಕರಾವಳಿ ಮಾರ್ಗವಾಗಿ ಉಡುಪಿಗೆ ಹೋಗುವಿಕೆ ಉಡಿಪಿಯಲ್ಲಿ ಶ್ರೀ ಕೃಷ್ಣದೇವಸ್ಥಾನ, ಸಂಸ್ಕೃತ ಕಾಲೇಜು ಮತ್ತು ಹೈಸ್ಕೂಲುಗಳನ್ನು ಸಂದರ್ಶಿಸುವಿಕೆ. ೧ ಘಂಟೆಗೆ ಉಡಿಪಿ ತಾಲೂಕು ಬೋರ್ಡು ಪ್ರೆಸಿಡೆಂಟರಿಂದ ಫಲಾಹಾರ, ಘಂಟೆ ೩ಕ್ಕೆ ಉಡಿಪಿಯಿಂದ ಹೊರಟು ಮೂಡಬಿದ್ರೆ ಹಾದಿಯಾಗಿ ಮಂಗಳೂರಿಗೆ ಆಗಮನ.

೧೫ನೇ ಗುರುವಾರ, ೮-೩೦ರಿಂದ ೯-೩೦ರ ವರೆಗೆ ಡಿಪ್ರೆಸ್ಡ್ ಕ್ಲಾಸ್ ಮಿಶನಿನಲ್ಲಿ ಇನಾಮು ಹಂಚುವಿಕೆ, ೯-೩೦ರಿಂದ ೧೦ರ ವರೆಗೆ ಕೆನರಾ ಹೈಸ್ಕೂಲು, ೧೦ರಿಂದ ೧೦-೩೦ರ ವರೆಗೆ ಮಿಶನ್ ಹೈಸ್ಕೂಲು, ೧೦-೩೦ರಿಂದ ೧೧ರ ವರೆಗೆ ಗಣಪತಿ ಹೈಸ್ಕೂಲು, ೧೧ರಿಂದ ೧೧-೩೦ರ ವರೆಗೆ ಹೆಂಗಸರ ಟ್ರೈನಿಂಗ್ ಸ್ಕೂಲು. ಇವುಗಳನ್ನು ಸಂದರ್ಶಿಸುವರು ೨ರಿಂದ ೪ರ ವರೆಗೆ ದಕ್ಷುಟೇಶನಿನ ಸ್ವೀಕಾರ, ೪-೪೫ರಿಂದ ೫-೪೫ರ ವರೆಗೆ ರಾವ್ ಬಹದೂರ್ ಬಿ. ಮಹಾಬಲ ಹೆಗಡೆಯವರಲ್ಲಿ ಗಾರ್ಡನ್ ಪಾರ್ಟಿ, ೫-೪೫ರಿಂದ ೮ರ ವರೆಗೆ ಗವರ್ನಮೆಂಟ್ ಕಾಲೇಜಿನ ವರ್ಧಂತಿ ಉತ್ಸವ.

ತಾರೀಕು ೧೬ನೇ ಶುಕ್ರವಾರ ಮೈಲಿನಲ್ಲಿ ಮದ್ರಾಸಿಗೆ ಹೊರಟು ಹೋಗುವರು.

ಇಲ್ಲಿಯ ಮಹಿಳಾ ಸಭೆಯ ಪ್ರದರ್ಶನವು ತಾರೀಕು ೧೧ನೇ ಆದಿತ್ಯವಾರ ಮಧ್ಯಾಹ್ನ ೩ ಘಂಟೆಗೆ ಮುಖ್ಯ ಮಂತ್ರಿಗಳಾಗಿರುವ ಡಾ| ಪಿ. ಸುಬ್ಬರಾಯರಿಂದ ತೆರೆಯಲ್ಪಟ್ಟು ಮಂಗಳವಾರದ ವರೆಗೆ ಜರಗುವದು. ಒಂದಾಣೆ ಟಿಕೇಟು ಪಡಕೊಂಡವರು ಒಳಗೆ ಹೋಗಬಹುದು.

ಭಾರತ ಯುವಕ ಮತ್ತು ಯುವತಿ ಸಂಘದವರ ಆಶ್ರಯದಲ್ಲಿ, ಈ ಜಿಲ್ಲೆಯ ಯುವಕರ ಸಭೆಯೊಂದು ತಾರೀಕು ೧೮ನೇ ಆದಿತ್ಯವಾರ ದಿನ ಘಂಟೆ ೫ಕ್ಕೆ ಮುಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರಾದ ಶ್ರೀಯುತ ಕೆ. ಎಫ್. ನರಿಮನ್ ಬಿ. ಎ. ಎಲ್. ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಜರಗುವದು. ಸ್ವಾಗತ ಕಮಿಟಿಯ ಅಧ್ಯಕ್ಷರಿಂದ ಸ್ವಾಗತ ಭಾಷಣ, ಅಧ್ಯಕ್ಷರ ಭಾಷಣ, ಇನಾಮು ಹಂಚೋಣ, ಠರಾವುಗಳು, ಅಧ್ಯಕ್ಷರ ಕೊನೆಯ ಭಾಷಣ, ಕೃತಜ್ಞತಾ ವಂದನೆ ಇವೇ ಈ ಸಭೆಯ ಕಾರ್ಯಕ್ರಮಗಳು. ಟಿಕೇಟುದರ ರೂಪಾಯಿ ೧ ಮತ್ತು ಆಣೆ ೮. ಈ ಸಭೆ ಎದುರು ತರುವಂತಹ ಠರಾವನ್ನು ತಾರೀಕು ೧೦ ರೊಳಗೆ ಕಾರ್ಯದರ್ಶಿಗಳಿಗೆ ತಿಳಿಸಬೇಕಾಗಿ ಕೋರುತ್ತಾರೆ.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಸಭೆಯು ಇದೇ ೧೩ನೇ ಮಂಗಳವಾರ ಮೂರು ಘಂಟೆಗೆ ನಡೆಯುವುದು. ಈ ಸಂದರ್ಭದಲ್ಲಿ ಮದರಾಸಿನ ಮುಖ್ಯ ಮಂತ್ರಿಗಳವರಿಗೆ ಬೋರ್ಡಿನ ಪರವಾಗಿ ಒಂದು ಮಾನಪತ್ರವು ಸಮರ್ಪಿಸಲಾಗುವದು.

ತಾ| ೩-೧೧-೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮ್ಯುನಿಸಿಪಾಲಿಟಿಯಲ್ಲಿ ಒಟ್ಟು ೨೨ ಮರಣಗಳೂ ೩೧ ಜನನಗಳೂ ಆದವು.

ಗವರ್ನಮೆಂಟ್ ಕಾಲೇಜಿನ ವರ್ಧಂತಿ ಉತ್ಸವವು ಡಾ| ಪಿ. ಸುಬ್ಬರಾಯನವರ ಅಧ್ಯಕ್ಷತೆಯಲ್ಲಿ ೧೫ನೇ ತಾರೀಕಿನ ದಿನ ನಡೆಯುವದು. ಹಳೇ ವಿದ್ಯಾರ್ಥಿಗಳಿಗೆ ಸುಸ್ವಾಗತವಿದೆಯೆಂದೂ, ಇದಕ್ಕಾಗಿ ಕಳುಹಲ್ಪಡುವ ವಂತಿಗೆಯು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವದೆಂದೂ ಕಾಲೇಜಿನ ಪ್ರಿನ್ಸಿಪಾಲರು ತಿಳಿಸುತ್ತಾರೆ.

ದ. ಕ. ಜಿಲ್ಲಾ ಕಾಂಗ್ರೆಸ್ಸಿನ ಸ್ವಾಗತ ಕಮಿಟಿಗೆ ೧೫೦ ಮಂದಿ ಮೆಂಬರರಾಗಿ ಸೇರಿರುವರು. ಇದಲ್ಲದೆ ೫೧ ಮಂದಿ ಪ್ರೇಕ್ಷಕರಾಗಿ ಸೇರಿರುವರು.

ಮುಂಬಾಯಿಯಲ್ಲಿ ವಾಸಿಸುವ ದಕ್ಷಿಣ ಕನ್ನಡ ಜಿಲ್ಲೆಯ ಜನರು ದಕ್ಷಿಣ ಕನ್ನಡ ಜಿಲ್ಲೆಗೆ ಹೊರಡಲಿರುವ ಶ್ರೀಯುತ ಕೆ. ಎಫ್. ನರಿಮನ್ನರನ್ನು ಗೌರವಿಸುವ ಸಲುವಾಗಿ ನೆರೆಯಬೇಕೆಂದಿದ್ದ ಸಭೆಯನ್ನು ಇದೇ ಬರುವ ೧೧ನೇ ಆದಿತ್ಯವಾರ ಸಾಯಂಕಾಲ ಘಂಟೆ ೪-೩೦ಕ್ಕೆ ಸೆಂಡ್ ಹರ್ಸ್ಟ್ ರಸ್ತೆಯ, ಸರ್ವೆಂಟ್ಸ್ ಒಫ್ ಇಂಡಿಯಾ ಸೊಸೈಟಿಯ ಹೋಲಿನಲ್ಲಿ ದಿವಾನ್‌ಬಹದ್ದೂರ್ ಎ. ಕೆ. ಪೈ, ಬಿ. ಎ. ಜೆ. ಪಿ. ಇವರ ಅಧ್ಯಕ್ಷತೆಯಲ್ಲಿ ಜರಗಿಸುವರು.

ಪುತ್ತೂರಿನಲ್ಲಿ ನಡೆಯಲಿರುವ ಸ್ಕೌಟ್ ರೆಲ್ಲಿಗೆ ಬರುವ ಸ್ಕೌಟನು ತನ್ನ ಸ್ಕೌಟ್‌ಮಾಸ್ತರನ ಮೂಲಕ ನಾಲ್ಕಾಣೆ ರಿಜಿಸ್ಟ್ರೇಶನ್ ಫೀಸನ್ನು ಕಳುಹಿಸಬೇಕೆಂದು ಸೆಕ್ರೆಟರಿ ಶ್ರೀ ಬಿ. ರಾಮಚಂದ್ರರಾಯರು ತಿಳಿಸುತ್ತಾರೆ.

ಐದನೆ ವರ್ಷದ ಗೀತಾ ಜಯಂತ್ಯುತ್ಸವವು ಮಾರ್ಗಶಿರ ಶು|| ೧೧ರ (ದಶಂಬರ ೨೩) ಬರುತ್ತದೆ. ಮಂಡಲಿಯ ಕಡೆಯಿಂದ ಯಥಾ ಕ್ರಮ ಪೂರ್ವಕ 'ಗೀತಾ ಪಠನ ಸ್ಪರ್ಧೆ'ಯು ನಡೆಯುವುದು, ಶ್ರೀ ಮದ್ಭಗವದ್ಗೀತೆಯ ೪ ಅಧ್ಯಾಯಗಳನ್ನು ಸ್ಪಷ್ಟೋಚ್ಚಾರಣೆಯಲ್ಲಿ ಹೇಳುವ ಉಮೇದ್ವಾರರಲ್ಲಿ ಮೊದಲಿನವರಿಗೆ ೫ ರೂಪಾಯಿ ಬೆಲೆಬಾಳುವ ಪುಸ್ತಕಗಳೂ ೨ ಅಧ್ಯಾಯಗಳನ್ನು ಹೇಳುವವರಲ್ಲಿ ಮೊದಲನೆಯವರಿಗೆ ೩ ರೂಪಾಯಿಯ ಪುಸ್ತಕಗಳೂ ಬಹುಮಾನವಾಗಿ ಕೊಡಲ್ಪಡುವುದೆಂದು ಕಾರ್ಯದರ್ಶಿಯವರು ಪ್ರಕಟಿಸಿರುವರು.

ಮಂಗಳೂರು ಮ್ಯುನಿಸಿಪಲ್ ಆಯುರ್ವೇದ ಧರ್ಮಾಸ್ಪತ್ರೆ ಬೋಳೂರು:— ಇಲ್ಲಿ ಕಳೆದ ಸಪ್ಟಂಬರ್ ತಿಂಗಳಲ್ಲಿ ೪೫೪ ಹೊಸ ರೋಗಿಗಳು ಚಿಕಿತ್ಸೋಪಚಾರವನ್ನು ಹೊಂದಿದ್ದರು. ಈ ಪೈಕಿ ಹಿಂದೂ ೨೫೪, ಪ್ರೊಟೆಸ್ಟಾಂಟರು ರೋಮನ್ ಕ್ರಿಶ್ಚನ್ಸ್ ೧೯೯ ಮತ್ತು ಮುಸ್ಲೀಮ್ ೫೧ ದಿನವಹಿ ಸರಾಸರಿ ಹಾಜರು ೧೦೦-೭ ಆಗಿತ್ತು. ಒಂದೇ ದಿವಸದಲ್ಲಿ ಹೆಚ್ಚಾಗಿ ಹಾಜರಾದ ರೋಗಿಗಳ ಸಂಖ್ಯೆ ೧೫೮.

ದಕ್ಷಿಣ ಕನ್ನಡ ಜಿಲ್ಲೆಯ ರೈತರ ಯಾ ಭೂಮ್ಯಾಲಿಕರ ಸಂಘದ ಮಹಾ ಸಭೆಯು ತಾ ೧೭—೧೧—೨೮ರಲ್ಲಿ ಅಪರಾಹ್ನ ಘಂಟೆ ೩-೩೦ರ, ವರೇಗೆ ಜರಗುವದು. ಬರುವ ಸೆಟ್ಲ್‌ಮೆಂಟು, ಈಗಿನ ರೀಸರ್ವೆಯ, ಸಮ್ಮಂಧ ಠರಾವುಗಳು ಸಭೆಯ ಮುಂದೆ ಇಡಲ್ಪಡುವವು ಈ ಸಭೆಗೆ ಜಿಲ್ಲೆಯ ಎಲ್ಲಾ ರೈತರಿಗೆ ಸುಸ್ವಾಗತವಿದೆ. ಕಾರ್ಯನಿರ್ವಾಹಕ ಕಮಿಟಿಯ ಸಭೆಯು ಇದರ ಮುಂದೆ ೧೨-೩೦ ರಿಂದ ೧-೩೦ರ, ವರೆಗೆ ನಡೆಯುವದು. ಸರ್ವೆ ಸೆಟ್ಲ್‌ಮೆಂಟು ಭೂಸಂಬಂಧ, ಅನುಭವ ಪಡೆಯಬೇಕೆಂತ ಅಪೇಕ್ಷಿಸುವ ರೈತರಿಗೆ ತಾರೀಕು ೧೮ನೇ ೬-೩೦ ರಿಂದ ೮ ಘಂಟೆಯ ವರೇಗೆ ಸಂಘದ ಆಫೀಸಿನಲ್ಲಿ (ಗಣಪತಿ ದೇವಸ್ಥಾನದ ಬಳಿ) ಕಾರ್ಯದರ್ಶಿಯವರು ಉಪನ್ಯಾಸ ಮೂಲಕ ಅನುಭವ ಕೊಡುವರು.

ತಾ. ೨೬—೧೦—೨೮ರಲ್ಲಿ ಅಪರಾಹ್ನ ಘಂಟೆ ೫ಗೆ ಮಂಗಳೂರಲ್ಲಿ ಜಿಲ್ಲಾ ಕಾಂಗ್ರೆಸು ಕಮಿಟಿ ಕಚೇರಿಯಲ್ಲಿ ಜರಗಿದ ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿ ಮಹಾ ಸಭೆಯ ವರದಿಯ ಅಂಶ.

ನಿರ್ಣಯ ೪: ಪರಿಷತ್ತಿನ ವಿಷಯ ನಿಯಾಮಕ ಮಂಡಲಿಯು ಯಾ ಪರಿಷತ್ತಿನ ಮುಂದಿಡುವರೆ ಸೂಚನೆಗಳನ್ನು ನವಂಬರ ತಾ. ೧೪ ರೊಳಗೆ ಜಿಲ್ಲಾ ಕಾಂಗ್ರೆಸು ಕಮಿಟಿ ಕಚೇರಿಗೆ ಕಳುಹಿಸತಕ್ಕದ್ದು. ಆ ಮೇಲೆ ಬಂದವನ್ನು ನಿರಾಕರಿಸುವ ಪೂರ್ಣ ಅಧಿಕಾರವು ವಿಷಯ ನಿಯಾಮಕ ಮಂಡಲಿಗೆ ಇರತಕ್ಕದ್ದು, ವಿಷಯ ನಿಯಾಮಕ ಮಂಡಲಿಯ ಸಭೆಯಲ್ಲಿ ಹಾಜರಿದ್ದ ಸದಸ್ಯರ ಪೈಕಿ ನಾಲ್ಕರಲ್ಲಿ ಒಂದಂಶದಷ್ಟು ಸದಸ್ಯರ ಮಂಜೂರಾತಿಯಿಲ್ಲದ ಯಾವುದೊಂದು ನಿರ್ಣಯವನ್ನು ಪರಿಷತ್ತಿನ ಮುಂದಿಡುವರೆ ಯಾವ ಸದಸ್ಯರಿಗೂ ಹಕ್ಕು ಇರುವುದಿಲ್ಲ. ವಿಷಯ ನಿಯಾಮಕ ಮಂಡಲಿಗೆ ಇರತಕ್ಕದ್ದು. ವಿಷಯ ನಿಯಾಮಕ ಮಂಡಲಿಯವರು ಮಂಜೂರು ಮಾಡಿದ ಠರಾವುಗಳನ್ನು ಪ್ರಥಮತಃ ಪರಿಷತ್ತಿನ ಮುಂದಿಡತಕ್ಕದ್ದು. ಬಾಕಿಯ ಪೈಕಿ ಮೇಲೆ ನಮೂದಿಸಿದ ಹಾಗೆ ಕಾಲಂಶ ಸದಸ್ಯರ ಅನುಮತಿಗಿಂತ ಕಡಿಮೆಯಾಗದ ಅನುಮತಿ ಪಡೆದ ನಿರ್ಣಯವನ್ನು ಸೂಚಿಸುವವರ ಮತ್ತು ಅನುಮೋದಕರ ಬರಹ ಮೂಲಕ ಒಪ್ಪಿಗೆ ಸಮೇತ ಆಯಾಯ ದಿವಸದ ಪರಿಷತ್ತು ಆರಂಭವಾಗುವದಕ್ಕೆ ಅಧ್ಯಕ್ಷರಿಗೆ ಕೊಟ್ಟಲ್ಲಿ ಅವರು ಅನುಕೂಲವಾದ ಸಮಯದಲ್ಲಿ ಅದನ್ನು ಪರಿಷತ್ತಿನ ಮುಂದೆ ಇಡತಕ್ಕದ್ದು. ಅ. ಭೋಜರಾಯ.

ಪರಿಷತ್ತು ಮಂದಿರದಲ್ಲಿ ಖಾದಿ ಮತ್ತು ಇತರ ಯಾವತ್ತು ಸ್ವದೇಶಿ ವಸ್ತುಗಳನ್ನು ಪ್ರದರ್ಶಿಸಲು ಯಾ ಮಾರಾಟಕ್ಕಿಡಲು ಅಂಗಡಿಗಳನ್ನು ತೆರೆಯಲು ಇಚ್ಛಿಸುವವರು ಸ್ವಾಗತ ಮಂಡಲಿಯ ಕಾರ್ಯದರ್ಶಿಯವರಿಗೆ ತಾ. ೧೨ ರೊಳಗೆ ತಿಳಿಸತಕ್ಕದ್ದು' ಬಿ. ನಾರಾಯಣ ಸೋಮಯಾಜಿ.

ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿಯ ಮಹಾಸಭೆಯು ಇದೇ ತಿಂಗಳ ತಾರೀಕು ೧೮ನೇ ಆದಿತ್ಯವಾರ ಅಪರಾಹ್ನ ಘಂಟೆ ೨ಕ್ಕೆ ಮಂಗಳೂರಲ್ಲಿ ಜಿಲ್ಲಾ ಪರಿಷತ್ ಮಂದಿರದಲ್ಲಿ (The National Girls School Kodialbail) ಜರಗುವುದು. ಸದಸ್ಯರೆಲ್ಲರೂ ಬರಬೇಕಾಗಿ ವಿನಂತಿ.

ಮಂಗಳೂರು ರೇಂಜಿನ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘದ ಸಪ್ತಮ ಸಭೆಯು ಕಳೆದ ಅಕ್ಟೊಬರ ತಿಂಗಳ ತಾರೀಕು ೨೭ನೇ ಶನಿವಾರ ದಿವಸ ಅಪರಾಹ್ನ ಘಂಟೆ ೨ಗೆ ಸರಿಯಾಗಿ, ಬೆಂದೂರಿನ ಸೈಂಟ್ ಸೆಬಸ್ಟಿಯನ್ಸ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ರಾಜೇಶ್ರೀ ಕೆ. ಸಂಜೀವ ಭಟ್, ಎಮ್. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಬಂಟವಾಳ— ಸರಕಾರದವರು ಇಲ್ಲಿ ಒಂದು ಪಶು ವೈದ್ಯ ಆಸ್ಪತ್ರೆಯನ್ನು ಇಡುವುದು ಅಗತ್ಯವಿದೆ. ಆಗಾಗ್ಯೆ ಊರಿನಲ್ಲಿಯೇ ಸುತ್ತು ಮುತ್ತಲಿನ ಗ್ರಾಮಗಳಲ್ಲಿಯೇ ರೋಗವು ಬಂದು ಅನೇಕ ದನಕರುಗಳು ಸತ್ತುಹೋಗುತ್ತವೆ, ವೈದ್ಯ ಶಾಲೆಯನ್ನು ಇಟ್ಟರೆ, ಈ ತರದ ಮರಣಗಳು ಉಂಟಾಗಲಿಕ್ಕಿಲ್ಲ.

ಬಂಟವಾಳ ಆಸ್ಪತ್ರೆಯು ನೆರೆಯ ಮುಂಚೆ ತಾಲೂಕು ಹೆಡ್ ಕ್ವಾರ್ಟರ ಆಸ್ಪತ್ರೆಯಂತೆ ನಡಿಸಲ್ಪಡುತ್ತಿತ್ತು. ಯಾಕೆಂದರೆ ಮಂಗಳೂರು ತಾಲೂಕಿನಲ್ಲಿರುವ ದೊಡ್ಡ ಆಸ್ಪತ್ರೆಯು ಇದು ಒಂದೇ ಆಗಿದೆ. ಮಾರ್ಕೆಟಿನಲ್ಲಿರುವುದು ಒಂದು ಡಿಸ್ಪೆನ್ಸರಿಯಾಗಿದೆ. ೧೯೨೩ನೇ ಇಸವಿಯಲ್ಲಿ ನೆರೆ ಬಂದು ಬಂಟವಾಳದಲ್ಲಿ ಲಕ್ಷಗಟ್ಟಲೆ ನಷ್ಟವಾಯಿತು. ಆದರೆ ಆಸ್ಪತ್ರೆ ಕಟ್ಟಡಗಳಿಗಾಗಲಿ, ಮದ್ದುಗಳ ಕಪಾಟುಗಳಿಗಾಗಲಿ ಇತರ ಯಾವ ಸಾಮಗ್ರಿಗಳಿಗೂ ನಷ್ಟವಾಗಲಿಲ್ಲ. ಅಲ್ಲಿದ್ದ ರೋಗಿಗಳಿಗೂ ಅಪಾಯ ಬರಲಿಲ್ಲ. ನೆರೆಯ ನಂತರ ಈ ಆಸ್ಪತ್ರೆಯನ್ನು ಒಂದು ಡಿಸ್ಪೆನ್ಸರಿಯಂತೆ ನಡಿಸಲಾರಂಭಿಸಿದರು. ಊರಿನವರು ಇದನ್ನು ಮೊದಲಿನಂತೆ ತಾಲೂಕು ಹೆಡ್‌ಕ್ವಾರ್ಟರ ಆಸ್ಪತ್ರೆಯಂತೆ ನಡಿಸಬೇಕೆಂದು ಡಿಸ್ಟ್ರಿಕ್ಟ್ ಬೋರ್ಡಿಗೆ ಮನವಿ ಮಾಡಿದರು. ಅದಕ್ಕವರು ಬಂಟವಾಳ ಊರು ಮೊದಲಿನಂತೆ ಪುನಃ ಸೃಷ್ಟಿಯಾದರೆ ನಾವು ಅದನ್ನು ಹೆಡ್‌ಕ್ವಾರ್ಟರ ಆಸ್ಪತ್ರೆಯಂತೆ ನಡಿಸುತ್ತೇವೆಂದು ರಿಜೊಲ್ಯುಶನ್ ಪಾಸಾಯಿತು. ನಂತರ ಇದರ ಗೊಡವೆಗೆ ಹೋಗಲೇ ಇಲ್ಲ. ಸಬ್ ಅಸಿಸ್ಟಾಂಟ್ ಸರ್ಜನರ ಬದಲಾಗಿ ಅಸಿಸ್ಟಾಂಟ ಸರ್ಜನರನ್ನು ನೇಮಿಸಿದರು. ಆದರೆ ಒದಗಿಸುವ ಮದ್ದುಗಳನ್ನು ಕಡಿಮೆ ಮಾಡಿ ಡಿಸ್ಪೆನ್ಸರಿಯಂತೆ ನಡಿಸುತ್ತಿರುವರು.

ಬಂಟವಾಳ ಊರು ಮೊದಲಿಗಿಂತಲೂ ದೊಡ್ಡದಾಗಿ ಬೆಳೆದಿದೆ. ಮೊದಲಿಗಿಂತಲೂ ಗಟ್ಟಿಯಾದ ಅಂಗಡಿಗಳೂ ಧಂಡಸಾಲೆಗಳೂ ಮನೆಗಳೂ ಕಟ್ಟಲ್ಪಟ್ಟಿವೆ. ಊರು ಉತ್ತರ, ಪಶ್ಚಿಮ, ದಕ್ಷಿಣ ಭಾಗದಲ್ಲಿ ಬೆಳೆದಿದೆ.

ಮದರಾಸು ಸಂಸ್ಥಾನದ ಲೋಕಲ್ ಬೋರ್ಡುಗಳ ಮೇಲೆ ಅಧಿಕಾರವಿರುವ ಮಂತ್ರಿಗಳು ಬಂಟವಾಳಕ್ಕೆ ಇದೇ ೧೨ನೇ ತಾರೀಕು ಸೋಮವಾರ ಬೆಳಗ್ಗೆ ೧೦ ಗಂಟೆಗೆ ಬರುವವರಲ್ಲಿದ್ದಾರೆ. ಆ ಸಮಯದಲ್ಲಿ ಊರಿನವರು ಈ ಆಸ್ಪತ್ರೆಯನ್ನು ತಾಲೂಕು ಹೆಡ್‌ಕ್ವಾರ್ಟರ ಆಸ್ಪತ್ರೆಯಂತೆ ಮಾಡಬೇಕೆಂದು ಮನವಿ ಮಾಡಿಕೊಳ್ಳಲು ಅನುಕೂಲವಿದೆ. ಅವರಿಗೆ ಆಸ್ಪತ್ರೆಯನ್ನು ತೋರಿಸಬಹುದು. ಬಂಟವಾಳ ಊರನ್ನು ಅವರು ಮೋಟರಿನಿಂದಲೇ ಕೋರ್ಟುಮಾರ್ಗದಿಂದ ಪಾಣೆಹಳ್ಳದ ವರೆಗೆ ಸುಮಾರು ೩|| ಮೈಲು ಉದ್ದದ ಬಂಟವಾಳ ಪೇಟೆ ಬಜಾರನ್ನು ಸ್ವತಃ ನೋಡಲು ಅನುಕೂಲವಿದೆ. ಇನ್ನು ತಾಲೂಕು ಹೆಡ್‌ಕ್ವಾರ್ಟರ್ ಆಸ್ಪತ್ರೆಗಳಾಗಲಿಕ್ಕೆ ಬಂಟವಾಳ ಮತ್ತು ಕಾರ್ಕಳ ಆಸ್ಪತ್ರೆಗಳು ಮಾತ್ರವೇ ಉಳಿದಿವೆ.

ಮಂಗಳೂರು ತಾಲೂಕು ಬೋರ್ಡಿನವರು ಇಲ್ಲಿಯ ಆಸ್ಪತ್ರೆಯ ಮಿಡ್‌ವ್ಯಾಫಿಗೆ ಒಂದೇ ಸಾರಿ ೫ ರೂಪಾಯಿ ಬದ್ದಿ ಕೊಟ್ಟರು. ವಾರ್ಡ ಕೂಲಿಗಳಿಗೂ ಕಂಪೌಂಡರರಿಗೂ ಸಂಬಳ ಏರಿತು. ಆದರೆ ಬೆಳಗ್ಗಿನಿಂದ ರಾತ್ರಿಯ ವರೆಗೆ ಕೆಲಸ ಮಾಡಿಕೊಂಡಿರುವ ಆಸ್ಪತ್ರೆಯ ಅಡಿಗೆಯವ (ಕುಕ್)ನಿಗೆ ಬದ್ದಿಯನ್ನು ಕೊಡದ ಇದ್ದದ್ದು ವಿಶಾದಕರವಾಗಿದೆ ತಾಲೂಕು ಬೋರ್ಡಿನವರು ಇನ್ನಾದರೂ ಈ ಬಡ ಅಡಿಗೆಯವನಿಗೆ ಬದ್ದಿ ಕೊಡದೆಯಿರುವುದು ನ್ಯಾಯಸಮ್ಮತವಲ್ಲವೆಂದು ತೋರುತ್ತದೆ.

ಬುದೋಳಿ— ಬಂಟವಾಳದಿಂದ ೬ ಮೈಲು ಉತ್ತರಕ್ಕಿರುವ ಈ ಬುದೋಳಿ ಗ್ರಾಮದಲ್ಲಿ ಎಲಿಮೆಂಟರಿ ಶಾಲೆಯು ಇಲ್ಲದೆ ಮಕ್ಕಳಿಗೆ ವಿದ್ಯೆ ಕಲಿಯಲು ಸಾಧ್ಯವೇ ಇಲ್ಲ. ಹತ್ತಿರ ಸುತ್ತುಮುತ್ತಲೂ ಯಾವ ಶಾಲೆಯೂ ಇಲ್ಲ. ಆದುದರಿಂದ ಮಂಗಳೂರು ತಾಲೂಕು ಬೋರ್ಡಿನವರು ಇಲ್ಲಿ ಒಂದು ಶಾಲೆಯನ್ನು ತೆರೆದರೆ ಉತ್ತಮವಿತ್ತು.

ಮಂಜೇಶ್ವರ— ಬಂಗ್ರ ಮಂಜೇಶ್ವರ ವಿಟ್ಟಪ್ಪ ಕಮ್ಮಾರನ ಎಳೆ ಪ್ರಾಯದ ಹೆಣ್ಣು ಶಿಶು ಸಮೀಪದ ಮನೆಗೆ ಆಡುತ್ತಾ ಹೋಗಿ ಸಗಣಿ ಹೊಂಡದಲ್ಲಿ ಬಿದ್ದು ಮಡಿದುಹೋಯಿತೆಂತಲೂ ಶವವು ಸುಮಾರು ೨ ಗಂಟೆಗಳ ನಂತರ ದೊರಕಿತ್ತಲ್ಲಿ ಸಿಕ್ಕಿತೆಂತಲೂ ಕೇಳಲು ತುಂಬಾ ವಿಶಾದಿಸುತ್ತೇವೆ.

ಶ್ರೀಮದ್ ಅನಂತೇಶ್ವರ ದೇವಸ್ಥಾನದ ಕೆಲವು ವರ್ಷಗಳ ಹಿಂದಿನ ರಿಪೋರ್ಟು ಈಗಣ ಆಡಳಿತೆಯಲ್ಲಿ ಹ್ಯಾಗೂ ಹೊರ ಬಂತು. ಈ ಕಮಿಟಿಯ ರಿಪೋರ್ಟು ಇನ್ನು ಯಾವ ಕಾಲದಲ್ಲಿಂತ ನೋಡಲಿಕ್ಕಿದೆ. ಹೊರ ಬಿದ್ದ ಪಟ್ಟಿಯು ಬಹು ಚಲೋದಾಗಿದ್ದು ಗೂಢಾರ್ಥವಿಲ್ಲದ್ದು ತುಂಬಾ ಸಂತೋಷಕರ.

ಈಗಣ ಆಡಳಿತೆಯಲ್ಲಿ ಶಾಲಾ ಉಪಾಧ್ಯಾಯರಿಗೆ ಸಂಬಳವಿಲ್ಲ. ಕೆಲಸಕ್ಕೆ ನಿಜವಿಲ್ಲ. ಎಜ್ಯುಕೇಶನಲ್ ಕೌನ್ಸಿಲೇ ಇಲ್ಲ. ಹೊಸ ಚುನಾವಣೆಯೂ ಇಲ್ಲ.

ಕಾಂಚೀಪಳ್ಳ— ಈ ಮೊದಲು ಪ್ರಸ್ತಾಪಿಸಿದ ಮಾಮ್ಮ ಎಂಬನಿಗೆ ಪೋಲೀಸ್ರೈಟರು ನಾಲ್ಕು ತಿಂಗಳ ಸಜೆ ವಿಧಿಸಿರುವರು. ಬೇರೆ ಮೊಕದ್ದಮೆಗಳು ೧೪ ಮತ್ತು ೧೯ಕ್ಕೆ ಮುಂದರಿಸಲಾಗಿದೆ.

ಇಲ್ಲಿಂದ ಪುತ್ತೂರಿಗೆ ಇಷ್ಟರ ವರೆಗೆ ಬಸ್ಸು ಲ್ಯಾನಿಗೆ ಲ್ಯಾನ್ಸು ಕೊಡದ ಬಹುದಾಗಿ ಅನೇಕ ಆಫೀಸರ ಅಭಿಪ್ರಾಯವಿದ್ದಂತೆ ಮಾನ್ಯ ಕಲೆಕ್ಟರರು ಜಿ ಪರ್ಮಿಟು ಕೊಟ್ಟರೂ ಡಿಸ್ಟ್ರಿಕ್ಟ್ ಬೋರ್ಡು ನಿರಾಕರಿಸಿದ್ದರಿಂದ ಗವರ್ನಮೆಂಟಿಗೆ ಅಪೀಲಾಗಿಯದೆಂದು ಕೇಳಬರುತ್ತದೆ. ಮಾನ್ಯ ಗವರ್ನಮೆಂಟಿನವರು ದಯವಿಟ್ಟು ಒಮ್ಮೆ ರೋಡ್ ಲೈಸನ್ಸ ಕೊಡಿಸಿದರೆ ಬೇಸಿಗೆ ಕಾಲದ ಪ್ರಯಾಣಿಕರಿಗೂ ಹಳ್ಳಿ ವ್ಯಾಪಾರಸ್ಥರಿಗೂ ತುಂಬಾ ಅನುಕೂಲವಿತ್ತು.

ಕುಂಬಳೆ— ಇಲ್ಲಿ ಜರಗಲಿರುವ ನಾಟಕಗಳು ಶ್ರೀ ವೀರ ವಿಟ್ಠಲ ದೇವಸ್ಥಾನದಲ್ಲಿ ನಡೆಯಲಿರುವ ವರ್ಷಾವಧಿ ಸಪ್ತಾಹದ ಬಗ್ಗೆಂತ ಕೇಳಬರುತ್ತದೆ. ನಾಟಕವು ಬಾಲಿಕಾ ಪಾಠಶಾಲೆಯಲ್ಲಿ ಜರಗುವದೆಂತ ಇಲ್ಲಿಯ ಸ್ಟೇಶನ್ ಮಾಸ್ತರರಿಗೆ ವರ್ಗಾವಣೆ ಮಾಡಿದ್ದರಿಂದ ಇವರನ್ನು ಬಿಡುಗಡೆ ಮಾಡಲು ಹೊಸಬರೊಬ್ಬರು ಬಂದಿರುವರು.

ಕಾಸರಗೋಡು— ಮೊನ್ನೆ ತಾನೆ ಇಲ್ಲಿಗೆ ಬೋರ್ಡು ಕಮಿಶನರಾದ H. L. ಬ್ರೈಡ್‌ವುಡ್ ರವರು ಚಿತ್ತೈಸಿದ್ದರು. ಅವರು ಇಲ್ಲಿ ನಾಲ್ಕು ದಿನ ಅಂದರೆ ತಾ. ೨೯—೧೦—'೨೮ರಿಂದ ೧—೧೧—'೨೮ರ ವರೆಗೆ ಇದ್ದರು. ತಾ. ೧—೧೧—'೨೮ನೇ ದಿನ ಬೆಳಗ್ಗೆ ೧೦ ಗಂಟೆಗೆ ಇಲ್ಲಿಂದ ಪಂಪ್ಲೆ ಅತ್ತ ಕಡೆ ಹೊರಟು ಹೋದರು. ಅದೇ ದಿನ ಅವರು ಹೊರಡುವ ಮುಂಚೆ ಇಲ್ಲಿಯ ನೋನ್‌ಗಜೆಟೆಡ್ ಸರಕಾರಿ ನೌಕರರು ಅಂದರೆ ಇಲ್ಲಿಯ ತಾಲೂಕು ಸಿಬ್ಬಂದಿಯವರ ಒಂದು ಡೆಪ್ಯುಟೇಶನ್ ಅವರ ಭೇಟಿಗೆ ಹೋಯಿತು. ಇವರನ್ನು ಕರುಣೆಯಿಂದ ಬರಮಾಡಿಕೊಂಡು ಹಾಲಿ ಹವಾಲೆಗಳನ್ನು ಮಾನ್ಯ ಬೋರ್ಡು ಕಮಿಶನರು ಮನವಿಟ್ಟು ಕೇಳಿ ತನ್ನಿಂದ ಕೈಲಾದ ಮಟ್ಟಿಗೆ ಅವರ ಸಂಕಷ್ಟಗಳನ್ನು ನಿವಾರಿಸುವ ಪ್ರಯತ್ನ ಮಾಡುತ್ತೇನಾಗಿ ಅಭಯವನ್ನಿತ್ತರು. ಈಗಿನ ಸಂಬಳವು ತೀರ ಕಡಿಮೆಯೆಂದೂ ಟಪ್ಪಾಲ್ ಇಲಾಖೆಯ ಹೆಡ್ ಪೋಸ್ಟ್‌ಮೇನರ ಸಂಬಳಕ್ಕಿಂತ ತಮ್ಮ ಸಂಬಳದ ದರವು ಕಡಿಮೆಯೆಂದೂ ಹೆಡ್ ಪೋಸ್ಟ್‌ಮೇನರಿಗೆ ಕೂಡಾ ೩೫—೩—೭೫ರ ಇಸಮುಗಳು ಈಗ ತಾನೆ ಮಾನ್ಯ

ಕರ್ನಾಟಕ ಭಾಷೆಯಲ್ಲಿ ಕನ್ನಡಿಗರ ಬಗ್ಗೆ

THE MOTORIST.

ಮೋಟರಿಸ್ಟ

ಸಂಪಾದಕರು—ಶ್ರೀ. ವಿ. ಎಸ್. ಕುಡುವಾ,
ವರ್ಕ್ಸ್‌ಮೆನೇಜರ, ಸಿ. ಪಿ. ಸಿ. ಕಂಪೆನಿ, ಲಿಮಿಟೆಡ್, ಮಂಗಳೂರು.

ಮೆನೇಜರ್—ಶ್ರೀ. ವಿ. ಕೆ. ಕಾಮತ್,
ಶಾರದಾ ಛಾಪಖಾನೆ, ಮಂಗಳೂರು.

ಎರಡು ತಿಂಗಳಿಗೊಂದು ಬಾರಿ

ಪ್ರಥಮ ಸಂಚಿಕೆ—

ಜನವರಿಯ ಹದಿನೈದನೇ ತಾರೀಕಿಗೆ ಹೊರಬೀಳುವುದು.

ಗ್ಲೇಜು ಕಾಗದದ ಮೇಲೆ ಮುದ್ರಣ.

ಪ್ರತಿಬಾರಿ 150 ಚಚೌಕ ಇಂಚುಗಳಿಗೆ ಕಡಿಮೆಯಾಗದ ಹಲವು ಚಿತ್ರಗಳು.

ಮುಂದಾಗಿ ಚಂದಾದಾರರಾಗಿ ಬರೆದುಕೊಳ್ಳಿರಿ.

ಎಲ್ಲಾ ಪತ್ರವ್ಯವಹಾರವನ್ನು ಕೆಳಗಿನ ವಿಳಾಸಕ್ಕೆ ನಡಿಸಬೇಕು.

THE MANAGER,
THE MOTORIST,
Car Street, Mangalore

ಮೋಟರಿಸ್ಟ ಪತ್ರಿಕೆಯ ವ್ಯವಸ್ಥಾಪಕರ,
ರಥಬೀದಿ,
ಮಂಗಳೂರು.

ಸ್ವದೇಶಾಭಿಮಾನಿಯ

ಹೊಸ ವರುಷದ ಅಂಕ.

ಗ್ಲೇಜ್ ಕಾಗದದ ಮೇಲೆ ಮುದ್ರಣ.

ಸಚಿತ್ರ

ಕರ್ನಾಟಕ ಸುಪ್ರಸಿದ್ಧ ಲೇಖಕರ ಶ್ರೇಷ್ಠ ವರ್ಗದ

ಲೇಖಗಳು! ಕತೆಗಳು!! ಕಾವ್ಯಗಳು!!!

ಜನವರಿ ತಾ. 4ಕ್ಕೆ ಹೊರಬೀಳುವುದು.

ಸ್ವದೇಶಾಭಿಮಾನಿಯ ಚಂದಾದಾರರಿಗೆ ಉಚಿತ.

ಇತರರಿಗೆ ಪ್ರತಿ ಒಂದಕ್ಕೆ ನಾಲ್ಕಾಣೆ.

ಸ್ವದೇಶಾಭಿಮಾನಿ ಆಕಾರದ 24 ಪುಟಗಳಿಗೆ ಕಡಿಮೆ ಇಲ್ಲ.

ಬೇಕಾದುದಕ್ಕಿಂತ ಅಧಿಕ ಪ್ರತಿಗಳನ್ನು ಮುದ್ರಿಸುವುದಿಲ್ಲ. ಆದುದರಿಂದ ಈ ಸಂಚಿಕೆ ಬೇಕಾದವರು ಮುಂದಾಗಿ ಐದಾಣೆಯ ಸ್ಟಾಂಪು ಕಳುಹಿಸಿ ತಮ್ಮ ಹೆಸರನ್ನು ಬರೆಯಿಸಿಕೊಳ್ಳಬೇಕು.

ಲೇಖಕರ ತಮ್ಮ ಲೇಖನವನ್ನು ನವಂಬರ್ ಆಖೈರಿಯೊಳಗೆ ಕಳುಹಿಸಬೇಕಾಗಿ ವಿನಂತಿ.

ಜಾಹೀರಾತು ಕೊಡುವವರಿಗೆ ಅಖಿಲ ಕರ್ನಾಟಕೀಯ ಲಕ್ಷ್ಯವನ್ನೆಳೆಯಲು ಸುಸಂದರ್ಭ.

ಎಲ್ಲಾ ಪತ್ರವ್ಯವಹಾರವನ್ನು ಈ ಕೆಳಗಿನ ವಿಳಾಸಕ್ಕೆ ನಡಿಸತಕ್ಕದ್ದು.

ಮೆನೇಜರ್,
ಸ್ವದೇಶಾಭಿಮಾನಿ ಆಫೀಸು,
ರಥಬೀದಿ, ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಾಚು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟ್ಯಾಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟ್ಯಾಮ್‌ಪೀಸು, ಫೊನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ಸಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸಿ.—ನಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಳ್ಳೆಯಾದರೂ ಎಲ್ಲವನ್ನು ಕೊಡಿಸಿ ಕ್ರಮವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು.

ಪರೀಕ್ಷಿಸಿರಿ! ಕಿಮ್ಮತ್ತು ಅಗ್ಗ

ಖಾತ್ರಿಯಾಗುವದು!! ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸಭಿಕರಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧಿಪಟ್ಟ 'ವೈದ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ವೈದ್ಯರಿಂದ ನಡೆಯೋಣಾದ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಸಿಲುಕುವಲ್ಲಿ ತಯಾರಿರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ಕಂಡಗಿದ ಕಾಲ, ಪ್ರಾಯ, ಪಥ್ಯ ಆಹಾರದ ಕ್ರಮ, ವೃತ್ತಿ ಹಿಗರಟು ವೆಂದರಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವರೋ ಎಂಬ ಕಸಬು ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು ಪತ್ರಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಒಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ನಿಗಾ ಕೊಡಲಾಗುವದಲ್ಲದೆ ಅನುಕೂಲಸ್ಥರಾದ ರೋಗಿಗೆ ಅವರ ಅಗತ್ಯದ ಮತ್ತಿನ ವಾಹನಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ತಡರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.)

... ಪ್ರಸ್ತುತದಂತೆ ತಮ್ಮ ... ಸನ್ನದಿನ ವರ್ತನವನ್ನು ಮಾಡಿ ಈಗಿನ ಟಪ್ಪಾಲ್ ಆಫೀಸು ... ಖರ್ಚುಗಳನ್ನೇ ತಮಗೂ ಕೊಡಿಸಬೇಕಾಗಿದ್ದು ... ಅಸೋಸಿಯೇಶನ್ನಿನ ಮುಖ್ಯ ಪ್ರಾರ್ಥನೆಯಾಗಿತ್ತು. ಇದು ನ್ಯಾಯವಾದುದೇ ಸರಿ. ಅವರ ಈಗಿನ ಪರಿಸ್ಥಿತಿಯು ತೀರ ಶೋಚನೀಯವಾಗಿದೆ. ನಮ್ಮ ಇತರ ಜಿಲ್ಲೆಯ ಎಲ್ಲಾ ಕೌನ್ಸಿಲ್ ಮೆಂಬರರು ಇವರ ಶೋಚನೀಯಾವಸ್ಥೆಯನ್ನು ಸುಧಾರಿಸಿ ... ಸಂಬಳದ ಸ್ಕೇಲನ್ನು ಇವರಿಗೂ ಕೊಡಿಸುವ ... ಆಗುವಷ್ಟು ಪ್ರಯತ್ನಪಟ್ಟು ಯಶಸ್ಸನ್ನು ಪಡೆಯಬೇಕಾಗಿ ಇವರ ಬೇಡಿಕೆಯಾಗಿರುತ್ತದೆ. ಆದ್ದರಿಂದ ನಮ್ಮ ಕೌನ್ಸಿಲ್ ಮೆಂಬರರು ಈ ವಿಷಯದಲ್ಲಿ ಕರುಣಾಭಾವದಿಂದ ಪರಿಶ್ರಮವಹಿಸಿ ... ಕೋರಿಕೆಯಾಗಿರುತ್ತದೆ. ಅಲ್ಲದೆ, ಈಗ ... ಮುಖ್ಯ ಮಂತ್ರಿಯವರ ಕಡೆ ನಷ್ಟ ಈ ... ಹೀನಸ್ಥಿಯನ್ನು ತಿಳಿಸಬೇಕಾಗಿ ನಿಶ್ಚಯಿಸಿ ... ಕೇಳಿ ತಿಳಿದು ಸಂತೋಷಪಡುತ್ತೇವೆ. ಇವರ ಬೇಡಿಕೆಗಳು ಬೇಗನೇ ಫಲಕಾರಿಯಾಗಲೆಂದು ನಾವು ಕೋರುತ್ತೇವೆ.

ಕೆಲ ದಿವಸಗಳ ಹಿಂದೆ ಇಲ್ಲಿಯ ಕೆಲ ವ್ಯಕ್ತಿಗಳಿಗೂ ಪೋಲೀಸ್ ಮುಖ್ಯರಿಗೂ ಇಲ್ಲಿಯ ರೈಲ್ವೇ ಸ್ಟೇಷನ್ ಬಳಿ ಜಗಳವಾಗಿ ಇಬ್ಬರು ಬಲ್ಲವರಿಗೂ ಇಬ್ಬರು ಪೋಲೀಸರಿಗೂ ಜಖಂ ಆಗಿ ಇಲ್ಲಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರಂತೆ. ಈ ಜಗಳದಲ್ಲಿ ಈ ಊರಿನ ಸಾವಕಾರರು ೧೦೦ ಮಂದಿ ಮುಖ್ಯರೂ ಬೇಕಿಲ ಸಾವಕಾರರು ೧೫ ಮಂದಿ ಮುಖ್ಯರೂ ಇರುತ್ತಿದ್ದರಂತೆ. ಪೋಲೀಸರಿಗೂ ಇತರ ಇಬ್ಬರಿಗೂ ಜಖಂ ಪಡಿಸಿದವರ ಮೇಲೆ ಸುಮಾರು ೧೦ ಯಾ ೧೧ ಜನ ಕಾಸರಗೋಡು ಮುಖ್ಯರನ್ನು ಇಲ್ಲಿಯ ಪೋಲೀಸ್ ಅಧಿಕಾರಿಗಳು ನಿರ್ಬಂಧಪಟ್ಟು ... ರಿಮಾಂಡಿನಲ್ಲಿಟ್ಟಿರುತ್ತಾರಂತೆ. ಜೊಂಬಿಯಾದ ಮರುದಿನ ಈ ವಿಷಯದಲ್ಲಿ ತನಿಖೆ ನಡಿಸುವರೆ ಪೋಲೀಸ್ ಸುಪರಿಂಟೆಂಡೆಂಟ್ ದೊರೆಗಳವರೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟ್ ದೊರೆಗಳವರೂ ಬಂದಿದ್ದರು. ಅಗತ್ಯವಾದ ತನಿಖೆ ನಡಿಸಿ ಇಬ್ಬರೂ ಪುನಃ ಮಂಗಳೂರಿಗೆ ಹಿಂತೆರಳಿದರು. ದೊಂಬಿ ವಗೈರೆಗಳನ್ನು ಶಾಂತಪಡಿಸುವರೆ ಮಾನ್ಯ ಸರಕಾರದವರು ಏರ್ಪಡಿಸಿದ ಪೋಲೀಸ್ ಡಿಪಾರ್ಟ್‌ಮೆಂಟಿನ ಪೋಲೀಸ್ ಕಾನ್‌ಸ್ಟೇಬಲರಿಗೇನೇ ಜಖಂ ಎಂದರೆ ಬಾಕಿ ಸಾಮಾನ್ಯರ ಪಾಡೇನು? ಅವರಿಗೆ ದೇವರೇ ಗತಿ ಎಂದು ತೋರುತ್ತದೆ.

ಹೊಸದುರ್ಗ — ಇಲ್ಲಿಯ ಪಂಚಾಯತ ಕೋರ್ಟಿಗೆ ಹೊಸತಾಗಿ ನೇಮಕಪಟ್ಟ ಮೆಂಬರ ಶ್ರೀಯುತ ಯು. ಶೇಷಗಿರಿ ಶೆಣೈ ... ಈ ದಿವಸ ಕೋರ್ಟಿನಲ್ಲಿ ಆಸನವನ್ನು ಸ್ವೀಕರಿಸಿದ್ದಾರೆ. ಪ್ರೆಸಿಡೆಂಟರು ಗೈರುಹಾಜರು ಆದ ನಿಮಿತ್ತ ಸದ್ರಿಯವರು ಈ ದಿವಸದ ಕೋರ್ಟ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟರು.

ಹೊಸಂಗಡಿ — ನಮ್ಮೂರ ... ಅನಂತ ಕಮ್ತಿಯವರು ಒಂದು ಕಟ್ಟೋಣವನ್ನು ಕಟ್ಟಿಸಿ ಅದನ್ನು ಶಾಲೆಯ ಬಗ್ಗೆ ಬೋರ್ಡಿಗೆ ಬಿಟ್ಟುಕೊಟ್ಟಿದ್ದರು. ಇತ್ತಲಾಗಿ ಅದರ ನಿಗಾವಣೆ ಸರಿಯಾಗಿ ನೋಡದೆ ಮೂರು ವರ್ಷಗಳ ಹಿಂದೆ ಅದನ್ನು ಸಂಪೂರ್ಣ ಕೆಡವಿ ಅದರ ಸಾಮಾನುಗಳನ್ನೆಲ್ಲಾ ಏಲಂ ಮಾಡಿಸಿ ಬಿಟ್ಟರು. ಈಗ ಆ ಸಣ್ಣದಾದ ಒಂದು ಪೋಲೀಸ ಕ್ವಾರ್ಟರಿನಲ್ಲಿ ನಡಿಸುತ್ತಿರುವರು. ಶಾಲೆಯನ್ನು ಸದ್ರಿ ಹಳೇ ಶಾಲೆಯಿದ್ದ ಸ್ಥಳದಲ್ಲಿ ಕಟ್ಟಿಸುವ ಆಲೋಚನೆ ಇಲ್ಲದಿದ್ದರೆ ತನ್ನ ಸಾಮಾನುಗಳನ್ನು ತನಗೆ ಕೊಡಿಸಬೇಕಾಗಿ ಸದ್ರಿ ಅನಂತ ಕಮ್ತಿಯವರು ಮಾಡಿದ ಅರ್ಜಿಗೆ ಉತ್ತರವಾಗಿ ಹೊಸ ಶಾಲೆಯನ್ನು ಅದೇ ಸ್ಥಳದಲ್ಲಿ ಕಟ್ಟಿಸುವುದಾಗಿ ಸದ್ರಿಯವರಿಗೆ ತಿಳಿಸಿದ್ದರು. ನಂತರ ಗ್ರಾಮಸ್ಥರು ಬರಕೊಂಡ ಅರ್ಜಿಗೆ ಈ ವರೆಗೆ ಉತ್ತರವಿಲ್ಲವಂತೆ. ಶಾಲೆಯನ್ನು ಹೊಸತಾಗಿ ಕಟ್ಟಿಸಿ ಕಂಡು ... ಭಾವಿಸಿ ನೋಡಿಸದೇಕಾಗಿ ಸುಮಾರು ... ಇದೆ ವಿಷಯ ಲಾಗಾಯ್ತು ಈ ಶಾಲೆಯನ್ನು ಆಗಾಗ್ಯೆ ಸಂದರ್ಶಿಸಿದ ಮಹಾಸಭಾವರು ತಮ್ಮ ಸಂದರ್ಶನ ಪುಸ್ತಕದಲ್ಲಿ ಬರೆದುದಲ್ಲದೆ, ಹಳೇ ಶಾಲೆಯು ಅಳಿಯಲ್ಪಟ್ಟ ನಂತರ ಸಂದರ್ಶಿಸಿದ ಪ್ರತಿ ಒಬ್ಬರೂ ಸದ್ರಿ ಪೋಲೀಸು ಕ್ವಾರ್ಟರು ಅತೀ ಚಿಕ್ಕದಾಗಿರುವ ಕಾರಣ ಪ್ರತ್ಯೇಕ ಶಾಲೆಯ ಏರ್ಪಾಡಿನ ಬಗ್ಗೆ ಬರೆದಿರುವರು. ಈ ತನಕ ಯಾವ ವರ್ತಮಾನವೂ ಕೇಳಿ ಬರುವುದಿಲ್ಲ. ಇದು ನಮ್ಮ ಗ್ರಾಮಸ್ಥರ ದುರದೃಷ್ಟವೇ ಸರಿ. ಕಾರಣ ಮನಸಿನರೆ ಇದೇ ವರ್ಷ ಅಳಿಯಲ್ಪಟ್ಟ ನೆರೆಗ್ರಾಮವಾದ ... ಹೊಸ ಶಾಲೆಯು ಮುಂಜೂರಾತಿಯಾಗಿ ಕಂಟ್ರಾಕ್ಟಿಗೆ ಕೊಟ್ಟಿರುವುದಾಗಿ ಕೇಳುತ್ತೇವೆ. ಮ. ರಾ. ರಾ. ಜಿಲ್ಲಾ ಇನ್ಸ್‌ಪೆಕ್ಟರವರ ರಿಪೋರ್ಟಾದರೂ ಮಾನಸಿಕ್ಕಬಹುದೇ ಎಂಬುದನ್ನು ನೋಡಲಿಕ್ಕಿದೆ.

ವಿವಿಧ ಸಮಾಚಾರಗಳು.

ಹಲವು ಹೆಂಡಿರ ಗಂಡನು.

ಜಾರ್ಜ ಇಘಾ ಎಂಬವನು ೧೩೫ ವರುಷ ಪ್ರಾಯದ ಮುದುಕನು. ಆದರೆ ಆತನು ತರುಣರಿಗಿಂತಲೂ ಹೆಚ್ಚು ಉತ್ಸಾಹಿ. ಆತನು ಇದುವರೆಗೆ ಹನ್ನೊಂದು ಹೆಂಡಿರನ್ನು ಮದುವೆಯಾಗಿ ಆ ಹೆಂಡಂದಿರು ಸತ್ತು ಹೋಯಿತು. ಆದರೂ ಆತನ ವಿವಾಹದಾಸೆಯು ಇನ್ನೂ ಕಡಿಮೆಗೊಂಡಿಲ್ಲ. ಈಗ ಹನ್ನೆರಡನೆಯ ವಿವಾಹಕ್ಕಾಗಿ ವಧುವನ್ನು ಹುಡುಕುತ್ತಿರುವನಂತೆ. ... ವರುಷದವನಷ್ಟೇ ಉತ್ಸಾಹಿಯಾಗಿರುವನು. ಅಷ್ಟೇ ಬಲಶಾಲಿಯಾಗಿರುವನು. ಎಂಬುದೇ ಆತನ ಅಂಬೋಣ. ಸಂಸಾರದಲ್ಲಿ ಆತನಿಗೆ ಬಹಳ ಅಭಿರುಚಿಯಿದೆ. ಈ ವೀರನು ನೆಪೋಲಿಯನನಿಗೆ ಎದುರಾಗಿ ಕಾದಿದ್ದನಂತೆ. ೧೮೭೬ನೇ ಇಸವಿಯಲ್ಲಿ ರಷ್ಯನರಿಗೂ ತುರ್ಕರಿಗೂ ನಡೆದ ಯುದ್ಧದಲ್ಲಿ ಈತನು ಒಬ್ಬ ಸೈನಿಕನಾಗಿದ್ದನು. ಹಿಂದೆ ನಡೆದ ಮಹಾ ಯುದ್ಧದಲ್ಲಿ ತನ್ನನ್ನು ಸೈನಿಕನಾಗಿ ಸೇರಿಸಿಕೊಳ್ಳಬೇಕೆಂದು ಈತನು ಅಧಿಕಾರಿಗಳೊಡನೆ ಕೇಳಿಕೊಂಡರೂ ೧೪೦ ವರುಷ ಪ್ರಾಯದವನಾದ್ದರಿಂದ ಅಧಿಕಾರಿಗಳು ಒಪ್ಪಲಿಲ್ಲ. ಆದರೂ ಒಬ್ಬ ತುರ್ಕ ಆಫೀಸರನೊಂದಿಗೆ ಕೆಲಸಕ್ಕೆ ನಿಂತುಕೊಂಡನು. ... ಗಳನ್ನು ಜಾಗರಿಸಿಕೊಳ್ಳುವುದೇ ಈತನ ಉದ್ಯೋಗವಾಯಿತು.

ಈಗ ಆತನು ಆಂಗ್ಲ ಹುಡುಗಿಯನ್ನು ಮದುವೆಯಾಗಬೇಕೆಂದು ಆಶಿಸುವನು. ಆಂಗ್ಲೇಯರೆಂದರೆ ಆತನಿಗೆ ಬಹು ಪ್ರೀತಿ. ಆಂಗ್ಲೇಯರನ್ನು ಆತನು ಬಹಳವಾಗಿ ಪ್ರಶಂಸಿಸುವನು.

ಪೆಂಸಿನಲ್ಲಿ ಶ್ರೀಮತಿ ಸರೋಜಿನಿ ನ್ಯಾಡುಗಳವರು

ಕಳೆದ ೧೦ನೇಯ ತಾರೀಕಿನ ದಿನ ಪೆರಿಸಿನಲ್ಲಿರುವ ಹಿಂದೂಗಳು ಶ್ರೀಮತಿ ಸರೋಜಿನಿ ನ್ಯಾಡುಗಳವರಿಗೆ ಸ್ವಾಗತವನ್ನು ಕೊಟ್ಟು ಅವರನ್ನು ಸತ್ಕರಿಸಿದರು. ಈ ಸಮಾರಂಭಕ್ಕೆ ಹಿಂದೂಗಳು ಮಾತ್ರವಲ್ಲ ಹಲವು ಪ್ರೊಫೆಸರರೂ ಪತ್ರಿಕಾಕರ್ತರೂ, ಇತರ ಸದ್ಗೃಹಸ್ಥರೂ ಬಂದಿದ್ದರು.

— ಅವರೆಲ್ಲರಿಗೆ ಪ್ರತ್ಯುತ್ತರವಾಗಿ ಶ್ರೀಮತಿ ನ್ಯಾಡುರವರು, ತಾನು ಕೇವಲ ಭಾಷಣವನ್ನು ಕೊಡುವ ಸಲುವಾಗಿ ಅಲ್ಲಿಗೆ ಬಂದುದಿಲ್ಲವೆಂದು ತನ್ನವರೊಂದಿಗೆ ತಮ್ಮ ಕರ್ತವ್ಯದ ಕುರಿತಾಗಿ ಮಾತನಾಡುವದೇ ತನ್ನ ಧ್ಯೇಯವೆಂದೂ ಹೇಳಿದರು.

... ಈಗಿನ ಜನಾಂಗಕ್ಕೆ ಬೋಧನೆಯು ಅಗತ್ಯವಿಲ್ಲವು. ಅವರ ಕರ್ತವ್ಯವನ್ನು ಅವರು ಚೆನ್ನಾಗಿ ತಿಳಿದೇ ಇರುವರು. ಅವರ ಉತ್ಸಾಹ ಧೈರ್ಯಗಳ ಕಾರಣದಿಂದ ಅವರಿಗೆ ಜಯವು ಲಭಿಸದೆ ಇರದು" ಎಂದು ಅವರು ನಂಬಿಗೆಯಿಂದ ಹೇಳಿದರು. ಅಷ್ಟೇ ಅಲ್ಲದೆ ತನ್ನ ಅಮೇರಿಕಾ ಪ್ರಯಾಣದ ಉದ್ದೇಶವನ್ನು ವಿವರಿಸಿ, ಅಲ್ಲಿ ನೆರೆದ ಹಿಂದೀಯರೆಲ್ಲರೂ ಹಿಂದೂಸ್ಥಾನದ ಹೆಸರಿನ ಏಳಿಗೆಗಾಗಿ ಅನವರತವೂ ತ್ರಿಕರಣಪೂರ್ವಕವಾಗಿ ಪ್ರಯತ್ನಿಸಬೇಕೆಂದೂ, ಹಿಂದೂಸ್ಥಾನದ ಹೆಸರಿಗೆ ಕಳಂಕವನ್ನುಂಟು ಮಾಡುವಂತಹ ಕೆಲಸವನ್ನು ಎಂದಿಗೂ ಮಾಡಬಾರದೆಂದೂ ಪುನಃ ಪುನಃ ಹೇಳಿದರು. ಈ ಸಮಾರಂಭದ ಕೊನೆಯಲ್ಲಿ 'ವಂದೇ ಮಾತರಮ್' ಎಂಬ ಹಾಡು ಬಹು ಮನೋರಂಜಕವಾದ ರೀತಿಯಲ್ಲಿ ಹಾಡಲ್ಪಟ್ಟಿತು.

ಬರೋಡದ ರಾಜಕೀಯ ಪರಿಷತ್ತು.

ಬರೋಡಾ ಪ್ರಜಾ ಮಂಡಲದ ಏಳನೇ ಅಧಿವೇಶನವು ಕಳೆದ ಆದಿತ್ಯವಾರ ನಡೆಯಿತು. ಬಾರ್ಡೋಲಿಯ ವಿಜಯದಿಂದ ಗುಜರಾತಿನ ಎಲ್ಲಾ ಪ್ರದೇಶಗಳಲ್ಲಿಯೂ ಜನರು ಉತ್ಸಾಹಿತರಾಗಿದ್ದರೆಂಬುದು ಈ ಪರಿಷತ್ತಿಗೆ ತಂಡತಂಡವಾಗಿ ಬಂದ ಪ್ರತಿನಿಧಿಗಳ ಸಂಖ್ಯೆಯನ್ನು ನೋಡಿದ್ದು ದಾದರೆ ತಾನೆ ತಿಳಿಯುತ್ತಿತ್ತು. ಪರಿಷತ್ತನ್ನು ಮಾತ್ರವಲ್ಲದೆ ಒಂದು ಪ್ರದರ್ಶನವನ್ನೂ ಜರಗಿಸಿದ್ದರು. ಪ್ರದರ್ಶನದಲ್ಲಿ ಪ್ರಾಮುಖ್ಯವಾದವುಗಳೆಂದರೆ ಸ್ವದೇಶೀ ಸಾಮಾನುಗಳೂ ಖಾದೀ ವಸ್ತ್ರವೂ, ಈ ಪ್ರದರ್ಶನವನ್ನು ಅಧ್ಯಕ್ಷರ ಪತ್ನಿಯವರಾದ ಶ್ರೀಮತಿ ಭಕ್ತಿ ಲಕ್ಷ್ಮೀ ದೇಸಾಯಿಯವರು ತೆರೆದರು. ಈ ಸಂದರ್ಭದಲ್ಲಿ ಡಾ। ಸುಮಂತ ಮೆಹತಾರವರು ಸ್ವದೇಶೀ ಕೈಗಾರಿಕೆಯ ಏಳಿಗೆಯ ಸಲುವಾಗಿ ಮನಃಪೂರ್ವಕವಾಗಿ ಪ್ರಯತ್ನಿಸುವುದು ಪ್ರತಿಯೊಬ್ಬ ಭಾರತೀಯನ ಕೆಲಸವಾಗಿರುತ್ತದೆಂದೂ, ಹಿಂದೀ ರಾಜ್ಯಗಳು ನಿರರ್ಥಕವಾಗಿ ವಿದೇಶಿ ವಸ್ತುಗಳ ಮೇಲೆ ಸುರಿಯುವ ಹೇರಳ ಹಣವನ್ನು ತಮ್ಮ ತಮ್ಮ ದೇಶಗಳಲ್ಲಿಯೇ ಉಪಯೋಗಿಸಿದರೆ ಬಹಳ ದೇಶಾಭಿವೃದ್ಧಿಯುಂಟಾಗಬಹುದೆಂದೂ ಚಿಕ್ಕಭಾಷಣವನ್ನು ಮಾಡಿದರು. ಈ ಅಭಿಪ್ರಾಯವನ್ನೇ ಸಮರ್ಥಿಸಿ, ಶ್ರೀ ಭಕ್ತಿ ಲಕ್ಷ್ಮೀ ದೇಸಾಯಿಯವರು ಹುರಿಪಿನಿಂದ ಭಾಷಣವನ್ನು ಮಾಡಿದರು.

ಪಾಶ್ಚಾತ್ಯರ ರಂಗಭೂಮಿ.

ಪಾಶ್ಚಾತ್ಯರ ನಾಟಕ ಕಲೆಯನ್ನು ಪರಿಶೀಲಿಸುವ ಸಲುವಾಗಿ ಯುರೋಪದೇಶಕ್ಕೆ ತೆರಳಿದ ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರವರು ಮೊನ್ನೆ ತಾನೆ ಮುಂಬಯಿಗೆ ಹಿಂತಿರುಗಿರುವರು. ಅವರು ರಷ್ಯಾ, ಜರ್ಮನಿ, ಇಟಲಿ, ಫ್ರಾನ್ಸ್ ಮತ್ತು ಇಂಗ್ಲೆಂಡ್ ಈ ದೇಶಗಳನ್ನು ಸಂಚರಿಸಿದರು. ರಷ್ಯದ ಮಾಸ್ಕೋ ಮತ್ತು ಇತರ ಪಟ್ಟಣಗಳ ನಾಟಕಶಾಲೆಗಳಲ್ಲಿ ನಡೆದ ನಾಟಕಗಳನ್ನು ನೋಡುವ ಸಲುವಾಗಿ ಅವರು ನಾಲ್ಕು ತಿಂಗಳುಗಳ ವರೆಗೆ ರಷ್ಯದಲ್ಲಿಯೇ ಉಳಕೊಂಡರು. ರಷ್ಯದ ಪ್ರಸಿದ್ಧ ನಟನಾದ ಸ್ಟನಿಸ್ ಶಿವಸ್ಕ ಎಂಬವನ ಅಧೀನರಾಗಿ ಕೆಲಸಮಾಡಿದರು. ... ಕಲೆಯನ್ನು ಕಲಿತುಕೊಂಡರು. ಇಂಗ್ಲೆಂಡಿನ ಹಲವು ವಿದ್ವತ್ಸಂಘಗಳಲ್ಲಿ ಇವರ ಪದ್ಯಗಳನ್ನು ಕೇಳುವ ಸಲುವಾಗಿ ಇವರು ಆಮಂತ್ರಿಸಲ್ಪಟ್ಟಿದ್ದರು. ರಂಗಭೂಮಿಯ ಸುಧಾರಣೆಯು ಜರ್ಮನಿ ಮತ್ತು ರಷ್ಯಾ ದೇಶಗಳಲ್ಲಿ ಮಾತ್ರವೇ ಚೆನ್ನಾಗಿ ಉಂಟಾಗಿದೆಯೆಂದು ಶ್ರೀಯುತ ಚಟ್ಟೋಪಾಧ್ಯಾಯರ ಅಭಿಪ್ರಾಯ. ರಂಗಭೂಮಿಗೆ ಅಲ್ಲಿ ತುಂಬಾ ಗೌರವವು ಕೊಡಲ್ಪಡುತ್ತದೆ. ರಷ್ಯದ ನಾಟ್ಯಕಲಾಚತುರತೆಯನ್ನು ಕಂಡು ಇವರಿಗೆ ಆಶ್ಚರ್ಯವಾಗಿಯದೆ. ಜರ್ಮನಿಯಲ್ಲಿ ಒಬ್ಬ ಹಿಂದೀಯರು "ಯುರೋಪಿನ ನಾಟಕವು ಚೆನ್ನಾಗಿದೆಯೋ ಹಿಂದೂಸ್ಥಾನದ ನಾಟಕವು ಚೆನ್ನಾಗಿದೆಯೋ" ಎಂದು ಪ್ರಶ್ನಿಸಿದಾಗ ಇವರು "ಜೀವಿತವಿರುವ ವಸ್ತುವನ್ನು ಸತ್ತ ವಸ್ತುವಿನೊಡನೆ ಹೋಲಿಸುವದೆಂತು?" ಎಂದು ಉತ್ತರವನ್ನಿತ್ತರಂತೆ. ಶ್ರೀಯುತ ಚಟ್ಟೋಪಾಧ್ಯಾಯರು ಈ ಮಾಸದ ಅಖೈರಿಗೆ ಸಿಲೋನನ್ನು ಸಂದರ್ಶಿಸುವರು. ಅಲ್ಲದೆ ೧೯೩೦ನೇ ಇಸವಿಯಲ್ಲಿ ಜಪಾನನ್ನು ಸಂದರ್ಶಿಸುವರು.



ಎಫ್. ಮುಲ್ಲರರ

ಆಯಿಲ್

ಎಕ್ಸಪೆಲ್ಲರ್.

ಎಣ್ಣೆಬೀಜಗಳಿಂದಲೂ, ಎಣ್ಣೆಯುಳ್ಳ ಹಣ್ಣುಗಳಿಂದಲೂ, ಎಣ್ಣೆಯನ್ನು ತೆಗೆಯಲಿಕ್ಕೆ ಅದ್ವಿತೀಯ ಉಪಕರಣ.

ಕಾರ್ಯದಲ್ಲಿ ಸುಲಭ—ಸಂಪೂರ್ಣ ಸ್ವತಶ್ಚಲನಕ—ಕಡಿಮೆ ಖರ್ಚ
ಕಡಿಮೆ ಪವರಿನ ವ್ಯಯ—ಹೆಚ್ಚಿನ ಎಣ್ಣೆಯ ಲಾಭ.

ಮುಖ್ಯ ಏಜಂಟರು—

VOLKART BROS ENGINEERS

Armenian Street, MADRAS.

ರೋಲರ್ ಮಿಲ್ಲುಗಳು, ಡಿಸ್‌ಇಂಟಿಗ್ರೇಟರುಗಳು, ಫಿಲ್ಟರ್ ಪ್ರೆಸ್‌ಗಳು, ಆಯಿಲ್ ಪಂಪುಗಳು, ಹರಳ ಬೀಜವನ್ನು ಒಡೆಯುವದಕ್ಕೆ ತಕ್ಕದಾದ ಸಣ್ಣ ಹೈಡ್ರೋಲಿಕ್ ಪ್ರೆಸ್ ಪ್ಲೆಂಟುಗಳನ್ನೂ ನಾವು ಒದಗಿಸುವೆವು.

ಎಲ್ಲಾ ಎಣ್ಣೆಯ ಮಿಲ್ಲುಗಳ ಕುರಿತು ಒಳ್ಳೆಯ ಸಲಹೆಗಳನ್ನು ಕೊಡುವೆವು.

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

-※ ಚಿಕ್ಕಮಗಳೂರು. ※-

ತಂತಿ ವಿಳಾಸ: ಕನ್ವೆಯನ್ಸ್, **Tel: Conveyance.**

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಷನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂತರೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹಾರಕ್ಕೆ 10-30ಕ್ಕೆ ಸ್ಯಕಲೇಶ ಗೂಡು 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಬಾರು ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ಬಿಬಿ 1-30ಕ್ಕೂ, ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಬೈಸನೂರು ಗದ್ದೆಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಾಪುರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12-ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಫ್ಯೂರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ

ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGA ORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕನ್ನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕರಾವಳಿ ಮಾರ್ಗವಾಗಿಯೂ ಎರಡಾವರ್ತಿ [illegible] ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕೆಲವು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S. K. Mangalore

ದಿ ಕೆನರಾ ನರ್ಸರಿ.

ಕಸಿ ಮಾವಿನಗಿಡಗಳು. [illegible]

ನಮ್ಮಲ್ಲಿ ಈ ಕೆಳಗಿನ ಪಟ್ಟಿಯ [illegible] ಗಳೂ, ಸಪೋಟಾ, ಬೇರಳೆ, ಚಿಕ್ಕು, ದ್ರಾಕ್ಷಿ, ದಾಳಿಂಬ, ಪನ್ನೇರಳೆ ಮುಂತಾದ ಕಸಿಗಿಡಗಳ [illegible] ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳಾಗಿ ಸಂದೇಹವಿಲ್ಲದೆ ಚೆನ್ನಾಗಿ ಫಲಬಿಡುವುವು. ಬೆಂಗಳೂರಿನ [illegible] ಗಳು ಕರಾವಳಿ ಹವೆಗೂ ಮಣ್ಣಿಗೂ ಒಪ್ಪದೆ ಸರಿಯಾಗಿ ಫಲ ಬಿಡುವುದಿಲ್ಲ. ಕ್ರಯ ಪಟ್ಟಿಗೆ ಈ ಕೆಳಗಿನ ವಿಳಾಸಗಳಿಗೆ ಬರೆಯಿರಿ. ಗಿಡಗಳು ಮಂಗಳೂರು [illegible] ಯಾಪಾರಿಯವರಲ್ಲಿ ದೊರೆಯುವುವು.

ಕೆ. ಮುದ್ದಣ್ಣ ಶೆಟ್ಟಿ, ದಿ. ಕೆನರಾ ನರ್ಸರಿ, ನಿಸರ್ಗಗಾರ್ಡನ್ಸ್, ಕಾಪು ದ. ಕ.	C/o ಕೆ. ನಾರಾಯಣ ಶೆಟ್ಟಿ, ಶಾರದಾ [illegible], ರಥಬೀದಿ ಮಂಗಳೂರು ದ. ಕ.

131028

Wanted.

Five organising Supervisers for the Midland Bank (India) Ltd. Calcutta. in the Province of Mysore, Coorg, South Kanara and Malabar. Pay Rs 50 + Rs 15 T. A. per mensem A deposit of Rs 250 in the Banks Shares essential. Apply to L. P. Kashyapa.

Vasista Ashrama,
Perdal P. O. (S. K)

Diamonds. ವಜ್ರಗಳು. Diamonds

BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ಯೋಗ್ಯ ಕ್ರಯಕ್ಕೆ ಫ್ಯಾಕ್ಟರಿಯಿಂದ ತರಿಸುವ ವಜ್ರಗಳು ಮಾರಾಟಕ್ಕಿವೆ.

ಬೋಳ ಮಂಗೇಶ ರಾವ್.
ಮಂಗಳೂರು.

ಮಲೇರಿಯಾನ ಸರ್ವಜ್ವರಸಂಹಾರಿಣಿ

[illegible] 3-8-0 ಡಜನಿಗೆ 16-8-0

ಏಟನಂಬು! ಪುಷ್ಟನಾಗು!! ನೆಟ್ಟಗಾಗು!!

ಯೌವನವೇ ನಿನ್ನ ಬೆಲೆ ಹೂವಂತಲ್ಲಿದೆ! ಸೌಮ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ?

ಸ್ಸ್ಯಾಯನ್ಸ್ ಕಲಿಸಲಿಕ್ಕೆ ಕಟ್ಟೋಣದ ಬುನಾದಿ ಕಲ್ಲನ್ನೇ ಮಹಾತ್ಮಾಗಾಂಧಿಯವರಿಂದ ಹಾಕಿಸಿಯದೆ. ಆಡುವ ಸ್ಥಳವನ್ನು ಒದಗಿಸುವುದಕ್ಕಾಗಿ ೩ ಎಕ್ರೆ ಸ್ಥಳವನ್ನು ಪಡೆಕೊಂಡದೆ. ಆದುದರಿಂದ ಮಂತ್ರಿವರ್ಯರು ಈ ಶಾಲೆಗೆ ಆದಷ್ಟು ಧನಸಹಾಯ ಮಾಡಲಿಕ್ಕೆ ಅನುಕೂಲತೆ ಮಾಡಬೇಕೆಂದು ಹೇಳಿ ಧನ್ಯವಾದಗಳನ್ನು ಕೊಟ್ಟೊಡನೆ ಮಂತ್ರಿವರ್ಯರು ರಾ| ಎ. ಬಿ. ಶೆಟ್ಟರಂಥಾ ಮಹಾನುಭಾವರ ಅಧ್ಯಕ್ಷತೆಯಿಂದ ಈ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘವು ನಡಿಯುವುದು ಬಹಳ ಸಂತೋಷಕರವಾಗಿದೆ. ಇವರು ಇನ್ನಷ್ಟು ಉತ್ತೇಜನದಿಂದ ಕೆಲಸ ಮಾಡುವಂತೆ ಆಗಲಿ. ಕೆನರಾ ಹೈಸ್ಕೂಲ್ ಈ ಜಿಲ್ಲೆಯಲ್ಲಿರುವ ಪ್ರಧಾನ ಹಿಂದೂಸಂಸ್ಥೆಯಾಗಿದ್ದು ಉತ್ತಮ ರೀತಿಯ ಕೆಲಸ ನಡಿಸುತ್ತದೆಂದು ನಾನು ಹಲವು ವರುಷಗಳಿಂದ ಕೇಳುತ್ತಲೇ ಇದ್ದೇನೆ. ನನಗೆ ಇನ್ನು ಒಂದು ವರುಷದ ಕೆಲಸದ ಅವಧಿಯುಂಟು. ಅಷ್ಟರೊಳಗೆ ಗ್ರೇಂಟ್ ಇನ್ ಎಯಿಡ್ ಕೋಡನ್ನು ತಿದ್ದುಪಡಿ ಮಾಡುತ್ತೇವೆ. ಶಾಲೆಗಳಿಗೆ ಧನಸಹಾಯವು ಹೆಚ್ಚಿಗೆ ಸಿಕ್ಕುವಂತೆ ಮಾಡುತ್ತೇನೆಂದು ಹೇಳಿದರು. ನಂತರ ಧನ್ಯವಾದಗಳಾಗಿ ಮಂತ್ರಿವರ್ಯರು ಕಾರಿನಲ್ಲಿ ಕೂತೊಡನೆ ಚಿಯರ್ಸ್ ಕೊಟ್ಟು ಎಲ್ಲರೂ ತೆರಳಿದರು.

ನಂತರ ೭-೩೦ ಗಂಟೆ ವರೆಗೆ ಕೆಥೋಲಿಕ ಎಸೋಸಿಯೇಶನಿನ ಟೀಪಾರ್ಟಿ ನಡಿಯಿತು.

ಉಡುಪಿಗೆ ಮುಖ್ಯ ಮಂತ್ರಿಗಳ ಆಗಮನ.

ಮುಖ್ಯ ಮಂತ್ರಿಗಳಾದ ಒನರೇಬಲ್ ಡಾಕ್ಟರ್ ಸುಬ್ಬರಾಯನವರು ೧೬ನೇ ತಾರೀಕು ಬುಧವಾರ ಮಧ್ಯಾಹ್ನ ೧೨-೩೦ಕ್ಕೆ ಬಂದು ತಲಪಿದರು. ಊರಿನ ಪ್ರಮುಖರೂ ಉದ್ಯೋಗಸ್ಥರೂ ತಾಲೂಕು ಬೋರ್ಡು ಪ್ರೆಸಿಡೆಂಟರಾದ ರಾಜಶ್ರೀ ಎಚ್. ರಾಮಯ್ಯ ಶೆಟ್ರು, ಕೂಡಿ ಮುನುಸಿಫ್ ಕೋರ್ಟಿನ ಹತ್ತರ ಇವರನ್ನು ಬೇಂಡ್ ವಾದ್ಯ ಆನೆ ಬಿರುದಾವಳಿಗಳಿಂದ ಸ್ವಾಗತ ಮಾಡಿದರು. ಕೈಯಲ್ಲಿ ಒಂದು ಹೂಗೊಂಚಲನ್ನು ಕೊಟ್ಟರು. ನಂತರ ಮೆರವಣಿಗೆಯು ನಡಕೊಂಡು ಇವರನ್ನು ಸತ್ಕರಿಸಲಿಕ್ಕೆ ಅಂದವಾಗಿ ಶೃಂಗರಿಸಿ ತಯಾರಿಸಿದ್ದ ತಾಲೂಕು ಬೋರ್ಡು ಆಫೀಸಿಗೆ ಕರತಂದು ಅಗ್ರಾಸನದಲ್ಲಿ ಕುಳ್ಳಿರಿಸಿದರು. ತಾಲೂಕುಬೋರ್ಡು ಪ್ರೆಸಿಡೆಂಟರಾದ ರಾ| ರಾಮಯ್ಯಶೆಟ್ರು ಮಾನಪತ್ರವನ್ನು ಓದಿದರು. ಇದರಲ್ಲಿ ಹಳ್ಳಿ ಮಾರ್ಗಗಳನ್ನು ಮಾಡಿಸಲಿಕ್ಕೆ ತಾಲೂಕುಬೋರ್ಡಿಗೆ ಹಣದ ಅಭಾವವಿದ್ದುದರಿಂದ ಸರಕಾರದಿಂದ ಹೆಚ್ಚಿಗೆ ಗ್ರೇಂಟು ಕೊಡಿಸಬೇಕೆಂದೂ ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರಿಗೆ ಯೋಗ್ಯರೀತಿಯಲ್ಲಿ ಸಂಬಳ ಕೊಡಲಿಕ್ಕೆ ಹಣ ಸಾಕಾಗುವದಿಲ್ಲವೆಂದೂ ಒಂದೇ ಶಾಲೆಗೆ ಯೋಗ್ಯವಾದ ಕಟ್ಟಡಗಳನ್ನು ಒದಗಿಸಲಿಕ್ಕೆ ಸಾಧ್ಯವಿಲ್ಲದೆಯಿದ್ದುದರಿಂದಲೂ ಸರಕಾರದಿಂದ ಹೆಚ್ಚು ಹಣ ಸಹಾಯ ಮಾಡಬೇಕೆಂದೂ ಉಡುಪಿಯ ಸುತ್ತುಮುತ್ತಲಿನ ತಾಲೂಕುಗಳಿಗಾಗಿ ಒಂದು ಕೋಲೇಜನ್ನು ಉಡುಪಿಯಲ್ಲಿ ಸ್ಥಾಪಿಸಬೇಕೆಂದೂ ನಿವೇದಿಸಿದ್ದರು. ಇದಕ್ಕೆ ಉತ್ತರವಾಗಿ ತನಗೆ ಮದರಾಸು ಸಂಸ್ಥಾನದ ಎಲ್ಲಾ ಜಿಲ್ಲೆಗಳಲ್ಲಿ ಕೊಟ್ಟ ಸತ್ಕಾರಕ್ಕಿಂತಲೂ ಈ ಜಿಲ್ಲೆಯಲ್ಲಿ ಕೊಟ್ಟ ಸತ್ಕಾರವು ಹೆಚ್ಚಾಗಿದೆಯೆಂದು ತನಗೂ ಈ ಜಿಲ್ಲೆಗೂ ಒಂದು ರೀತಿಯಲ್ಲಿ ಸಮ್ಮಂಧವಿದ್ದುದರಿಂದ ಈ ರೀತಿಯಾಗಲು ಕಾರಣವಾಗಿರಬಹುದೆಂದು ತಾನು ಊಹಿಸುತ್ತೇನೆಂದೂ ಹೇಳಿದರು. ಹಳ್ಳಿಯ ಶಾಲೆಯ ವಿಷಯದಲ್ಲಿ ಹೊಸಬದಲಾವಣೆಗಳು ಬೇಗನೇ ಆಗಲಿಕ್ಕಿವೆ. ಆದುದರಿಂದ ಅದರ ವಿಶಯ ಆ ಸಮಯದಲ್ಲಿ ಆಲೋಚಿಸುತ್ತೇನೆಂದೂ, ಕೋಲೇಜು ಉಡುಪಿಯಲ್ಲಿ ಅಷ್ಟು ಅಗತ್ಯವಿಲ್ಲವೆಂದೂ ಪ್ರತಿ ಒಂದು ತಾಲೂಕಿಗೆ ಒಂದೊಂದು ಕೋಲೇಜಿನಂತೆ ಇಡುವುದಾದರೆ ಸರಕಾರಿ ಹಣ ಸಾಕಾಗಲಿಕ್ಕಿಲ್ಲವೆಂದೂ ಕೋಲೇಜುಗಳು ಯಾವಾಗಲೂ ಮಧ್ಯಸ್ಥಳದಲ್ಲಿದ್ದು ಅಲ್ಲಿ, ಎಲ್ಲಾ ಕಡೆಯ ಮಕ್ಕಳು ಒಟ್ಟು ಕೂಡಿ ಪರಸ್ಪರ ಪ್ರೀತಿಯಿಂದ ಇದ್ದರೆ ಮುಂದಿನ ರಾಷ್ಟ್ರದಾಡಳಿತೆಗೆ ಅವರು ತಯಾರಾಗುವರೆಂದೂ, ಬರೆ ಎರಡು ಅಕ್ಷರದ ಡಿಗ್ರಿಗಳನ್ನು ಪಡೆದರೆ ಸಾಲದೆಂದೂ ರಾಜಕೀಯ ಸಾಮಾಜಿಕ ವಿಶಯದಲ್ಲಿ ವಿದ್ಯಾರ್ಥಿಗಳು ಮುಂದರಿಯಲಿಕ್ಕೆ ಕೋಲೇಜುಗಳು ಮಧ್ಯ ಸ್ಥಳದಲ್ಲಿದ್ದರೆ ಸಾಕೆಂದೂ ಉತ್ತರವಿತ್ತರು. ನಂತರ ತಾ. ಬೋ. ಪ್ರೆಸಿಡೆಂಟರೂ ಮಂತ್ರಿವರ್ಯರಿಗೂ, ಡಿ. ಬೋ. ಪ್ರೆಸಿಡೆಂಟರಿಗೂ ಕೌನ್ಸಿಲ್ ಸೆಕ್ರೆಟರಿಯವರಿಗೂ ಹೂಮಾಲೆಗಳನ್ನು ಹಾಕಿದರು. ನಂತರ ತಾಲೂಕುಬೋರ್ಡು ಮೆಂಬರರ ಪರಿಚಯವನ್ನು ಮಂತ್ರಿಗಳಿಗೆ ತಾ. ಬೋ. ಪ್ರೆಸಿಡೆಂಟರು ಮಾಡಿದರು.

ಕ್ರಿಶ್ಚನ್ ಹೈಸ್ಕೂಲು. ತಾ. ಬೋ. ಆಫೀಸಿನಿಂದ ಮೋಟಾರಿನಲ್ಲಿ ಕೂತು ಕ್ರಿಶ್ಚನ್ ಹೈಸ್ಕೂಲಿಗೆ ಬಂದು ಶಾಲೆಯ ಕ್ಲಾಸುಗಳನ್ನು ಸಂದರ್ಶಿಸಿದರು. ನಂತರ ಮಾಳಿಗೆಯಲ್ಲಿ ಸಭಾಮಂದಿರದಲ್ಲಿ ಹೆಡ್‌ಮಾಸ್ತರರು ಮಾನಪತ್ರವನ್ನು ಅರ್ಪಿಸಿದರು. ಇದರಲ್ಲಿ ಬಾಶೆಲ್ ಮಿಶ್ಯನಿನಿಂದ ಕೊಡುವ ಹಣವು ಈಗ ಕಡಿಮೆಯಾಗಿರುವುದರಿಂದಲೂ ಉಪಾಧ್ಯಾಯರ ಸಂಬಳದ ಸ್ಕೇಲು ಸರಿಮಾಡಲಿಕ್ಕೆ ಹಣವು ಅಗತ್ಯವಿರುವುದರಿಂದಲೂ, ಉಪಾಧ್ಯಾಯರಿಗೆ ಕೊಡುವ ಟೀಚಿಂಗ ಗ್ರೇಂಟ್ ಹೆಚ್ಚಿಗೆ ಕೊಡಬೇಕೆಂದು ಸೆಕೆಂಡರಿ ಎಜ್ಯುಕೇಶನ್ ಬೋರ್ಡಿನಲ್ಲಿ ಕ್ರೈಸ್ತ ಶಾಲೆಯ ಉಪಾಧ್ಯಾಯರಿಗೆ ಈಗಿರುವ ಪ್ರತಿನಿಧಿತ್ವದಿಂದ ಸಾಕಷ್ಟು ಮೆಂಬರಿಕೆ ಸಿಕ್ಕುವುದು ಕಷ್ಟವಾಗುವುದರಿಂದ ಕ್ರೈಸ್ತ ಶಾಲೆಗಳಿಗೆ ಪ್ರತ್ಯೇಕ ಚುನಾವಣೆಯಾಗಬೇಕೆಂದೂ, ಮಿಶ್ಯನ್ ಶಾಲೆಯ ಉಪಾಧ್ಯಾಯರ ಪ್ರೋವಿಡೆಂಟ್ ಫಂಡ್ ಗವರ್ನಮೆಂಟ್ ಫಂಡ್ ಶುರುಮಾಡಿದ ೨ ವರುಷಗಳ ನಂತರ ಶುರುಮಾಡಿದ್ದರಿಂದ ಆ ಎರಡು ವರುಷಗಳ ಪ್ರೋವಿಡೆಂಟ್ ಫಂಡಿನ ಹಣದಪ್ಪೇಕ್ಷಣವನ್ನೇ ಈ ಶಾಲೆಯ ಉಪಾಧ್ಯಾಯರುಗಳ ಪ್ರೋವಿಡೆಂಟ್ ಫಂಡುಗಳಿಗೆ ಕೂಡಿಸಲಿಕ್ಕೆ ಹಣ ಸಂಕ್ಷನ್ ಮಾಡಬೇಕೆಂದೂ ಮುಂತಾಗಿ ಕೋರಿಸಿದ್ದರು. ಗ್ರೇಂಟ್ ಇನ್ ಎಯಿಡ್ ಕೋಡನ್ನು ಬದಲಾವಣೆ ಮಾಡುವಾಗ ಸಾಧ್ಯವಿದ್ದಷ್ಟು ಮಟ್ಟಿಗೆ ಸರಿಪಡಿಸಬಹುದೆಂದು ಉತ್ತರಕೊಟ್ಟರು.

ನಂತರ ಪೆಂಟಲೆಂಡ್ ಬಂಗ್ಲೆಯಲ್ಲಿ ಊಟೋಪಚಾರಗಳಾದುವು. ಅಲ್ಲಿಂದ ಮಲಪೆಗೆ ಹೋಗಿ ಅಲ್ಲಿ ವಡಭಾಂಡೇಶ್ವರ ಬಲರಾಮ ದೇವಸ್ಥಾನದ ಹತ್ತಿರದಿಂದ ಕಲ್ಯಾಣಪುರಕ್ಕೆ ಹೋಗುವ ಮಾರ್ಗವನ್ನು ತೆರೆದರು. ಮಾರ್ಗ ತೆರಿಯುವಾಗ ಮಾರ್ಗಕ್ಕಾಗಿ ಸ್ಥಳವನ್ನು ಧರ್ಮಾರ್ಥವಾಗಿ ಒದಗಿಸಿದ ವರ್ಗದಾರರಿಗೆ ತಾ. ಬೋ. ಪ್ರೆಸಿಡೆಂಟರಾದ ರಾ. ರಾಮಯ್ಯಶೆಟ್ರು ಧನ್ಯವಾದಗಳನ್ನು ಕೊಟ್ಟರು.

ಉಡುಪಿ ಕೃಷ್ಣಮಠ, ಕಲ್ಯಾಣಪುರದಿಂದ ಕಲ್ಸಂಕಕ್ಕೆ ಬಂದೊಡನೆಯೇ ವಾದ್ಯ, ಆನೆ, ಬಿರುದಾವಳಿಗಳ ಸಹಿತ ಮೆರವಣಿಗೆಯಿಂದ ಕರಕೊಂಡು ಹೋದರು. ಮಠಕ್ಕೆ ಹೋಗುವಾಗ ಮಂತ್ರಿಗಳು ಖಾದಿ ಮುಂಡನ್ನು ಉಟ್ಟು ಶರ್ಟನ್ನು ಹಾಕಿ ಒಂದು ಶಾಲನ್ನು ಹೆಗಲ ಮೇಲೆ ಹಾಕಿಕೊಂಡು ಬರೆ ಕಾಲಿನಿಂದ ನಡಿಯುತ್ತಿದ್ದರು. ಡಿ. ಬೋ. ಪ್ರೆಸಿಡೆಂಟರೂ ಅದೇ ರೀತಿ ಉಡುಪನ್ನು ಧರಿಸಿದ್ದರು. ದೇವರನ್ನು ಸಂದರ್ಶಿಸಿ ಬಡಗು ಮಾಳಿಗೆಯ ಹತ್ತಿರವಿರುವ ಚೌಕಿಯಲ್ಲಿ ಇವರನ್ನು ಸ್ವಾಗತಮಾಡಿ ಈಗಿನ ಪರ್ಯಾಯದ ಸ್ವಾಮಿಯವರ ಪಾರ್ಶ್ವಗಾರರು ಮಾನಪತ್ರವನ್ನು ಓದಿದರು. ಈ ಮಾನಪತ್ರದಲ್ಲಿ ಮಧ್ವಾಚಾರ್ಯರು ಕೃಷ್ಣನ ಪೂಜೆಯು ಕ್ರಮಪ್ರಕಾರ ನಡಿಯುವಂತೆಯೂ ಪರ್ಯಾಯದ ೨ ವರುಷಗಳಲ್ಲಿ ಎಷ್ಟು ನಷ್ಟವಾದರೂ ಆ ನಷ್ಟಕ್ಕೆ ಮತ್ತು ಸಾಲಕ್ಕೆ ಆಯಾ ಸ್ವಾಮಿಗಳೇ ಜವಾಬುದಾರರಾಗಿರಬೇಕಲ್ಲದೆ ಕೃಷ್ಣಮಠದ ಸ್ಥಿರಚರಸೊತ್ತು ಜವಾಬುದಾರಿಯಾಗುವುದಿಲ್ಲ ಎಂಬ ಕಾಯಿದೆ ಇರುವುದರಿಂದಲೂ ಮಠದ ಶಿಷ್ಯ ವರ್ಗದವರಿಂದ ಮಠಕ್ಕೆ ಸಿಕ್ಕುವ ಉತ್ಪತ್ತಿಯು ಮಠದ ವಿನಿಯೋಗಗಳಿಗೆ ಅನುಕೂಲವಾಗುವಷ್ಟೆ ಇದ್ದು ಒಳ್ಳೆ ಉದ್ದೇಶ್ಯಗಳಿಗಾಗಿಯೇ ಉಪಯೋಗಿಸಲ್ಪಡುವುದರಿಂದಲೂ ೮ ಮಠಗಳನ್ನು ಕೃಷ್ಣನ ದೇವಸ್ಥಾನವನ್ನು ರಿಲಿಜಿಯಸ್ ಎಂಡೌಮೆಂಟ್ ಬೋರ್ಡಿನ ಕ್ರಮಗಳಿಂದ ವಿನಾಯತಿ ಪಡಿಸಬೇಕೆಂದೂ ಕೋರಿಸಿತ್ತು. ಅದಕ್ಕೆ ಉತ್ತರವಾಗಿ ಈ ಕಾನೂನನ್ನು ಈ ಮಠಗಳ ಕೆಲಸಗಳು ಸರಿಯಾಗಿ ನಡದರೂ ಮಠದ ಆಸ್ತಿಗಳನ್ನು ಮನಬಂದಂತೆ ಹಾಳುಮಾಡುವ ಅನೇಕ ಮಠಗಳಿವೆ. ನಾನು ಶೈವವೆಲ್ಲಾಳನು, ನನ್ನ ಜಮೀನುದಾರಿಯಲ್ಲಿಯೂ ಒಂದು ಮಠವಿದೆ. ನಮ್ಮ ಹಿರಿಯರು ಇದಕ್ಕೆ ಎಷ್ಟು ಉಂಬಳಿ ಬಿಟ್ಟಿರುತ್ತಾರೆ. ಆದರೆ ಹಣವು ಸರಿಯಾಗಿ ವಿನಿಯೋಗಿಸಲ್ಪಡುವುದಿಲ್ಲ. ಇತರ ವೆಲ್ಲಾಳ ಜಮೀನುದಾರರ ಉಂಬಳಿಯಿರುವ ಮಠಗಳ ಅವಸ್ಥೆಯೂ ಹಾಗೆಯೇ ಇದೆ. ಆದುದರಿಂದ ಚೆನ್ನಾಗಿ ವಿಚಾರಿಸಿದರೆ ಈ ಕಾನೂನು ಅಗತ್ಯವಿದೆ. ಮಠಕ್ಕೆ ಹಣಕೊಡುವವರು ನಿಮ್ಮ ಶಿಷ್ಯವರ್ಗದವರು. ಸರಕಾರದ ಪ್ರಜೆಗಳಾಗಿರುತ್ತಾರೆ. ಪ್ರಜೆಗಳ ಹಣವು ಸರಿಯಾಗಿ ಉಪಯೋಗಿಸಲ್ಪಡುವಂತೆ ನೋಡುವುದು ಸರಕಾರದ ಕೆಲಸವಾಗಿದೆ. ಸ್ವಾಮಿಗಳು ಲೆಕ್ಕಪತ್ರಗಳನ್ನು ಸರಿಯಾಗಿ ಇಡಿಸಿ ವಿನಿಯೋಗಗಳನ್ನು ಸರಿಯಾಗಿ ನಡಿಸಿದ ಈ ಕಾನೂನಿನಿಂದ ಮಠಗಳಿಗೆ ಯಾವ ಬಾಧಕವೂ ಬರಲಾರದು. ನಾನು ಸಂಗತಿಯನ್ನು ಇದ್ದಂತೆ ಹೇಳಿದ್ದೇನೆ. ಸ್ವಾಮಿಯವರು ಏನೂ ಬೇಸರಪಡಬಾರದಾಗಿ ಅಪೇಕ್ಷಿಸುತ್ತೇನೆಂದು ಹೇಳಿದರು. ಮಾನಪತ್ರವನ್ನು ಸಿಲ್ಕಿನಲ್ಲಿ ಛಾಪಿಸಿದ್ದರು. ಫಲವಸ್ತುಗಳನ್ನು ಕೊಟ್ಟು ಮಾಲೆಹಾಕಿದ ನಂತರ ಅನಂತೇಶ್ವರ ಎಲಿಮೆಂಟರಿ ಶಾಲಾ ಮಕ್ಕಳು ಹೂ ಬಿಸಾಡಿ ಚಿಯರ್ಸ್ ಕೊಟ್ಟರು. ನಂತರ ಚಂದ್ರಮೌಳೀಶ್ವರ ದೇವಸ್ಥಾನದ ಮಾಳಿಗೆಯಲ್ಲಿರುವ ಶ್ರೀಮನ್ ಮಧ್ವಸಿದ್ಧಾಂತ ಪ್ರಬೋಧಿನಿ ದ್ವೈತಶಿರೋಮಣಿ ಮಹಾ ಪಾಠಶಾಲೆಯಲ್ಲಿ ಒಂದು ಮಾನಪತ್ರ ಸಂಸ್ಕೃತದಲ್ಲಿಯೇ ಒಪ್ಪಿಸಿದರು. ಅದಕ್ಕೆ ಮುಂದಿನ ರಾಷ್ಟ್ರಭಾರಕ್ಕೆ ಮುಂದಿನ ಜನಾಂಗವನ್ನು ತರಬೇತುಮಾಡಲಿಕ್ಕಾಗುವಂತೆ ಸಂಸ್ಕೃತ ವಿದ್ಯೆಯೊಡನೆ ಆಧುನಿಕ ವಿಚಾರಗಳನ್ನು ಕಲಿಸಬೇಕೆಂದೂ ಲೋಕದ ಎಲ್ಲಾ ಸಂಗತಿಗಳು ತಿಳಿಯಲು ಸಾಧ್ಯವಾಗುವ ರೀತಿಯ ವಿದ್ಯೆ ಕೊಡಬೇಕೆಂದೂ ಹೇಳಿದರು.

ನಂತರ ಬೋರ್ಡು ಹೈಸ್ಕೂಲನ್ನು ಸಂದರ್ಶಿಸಿ ನಂತರ ತಾಲೂಕುಬೋರ್ಡು ಆಫೀಸಿನಲ್ಲಿ ರಾ| ರಾಮಯ್ಯ ಶೆಟ್ರ ಟೀಪಾರ್ಟಿಯಾಗಿ ನಂತರ ರಾ| ಹಾಜಿ ಅಬ್ದುಲ್ಲಾ ಸಾಹೇಬರಲ್ಲಿ ಟೀಪಾರ್ಟಿಯಾಗಿ ೫ ಗಂಟೆಗೆ ಕಾರ್ಕಳಕ್ಕೆ ಹೊರಟು ಹೋದರು.



ಕರ್ಣಿಕ್ ಎಗ್ಯೂ ಮಿಕ್ಶ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲ್ಯುಯೆಂಝಾ, ಬಹು ದಿನದ ಜ್ವರ, ಹಾಡಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ ಬೆವರು ಬಂದು, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧-೪-೦, ಸಣ್ಣದಕ್ಕೆ ೦-೧೪-೦.

ಎಲ್ಲ ಕಡೆಗೂ ಔಷಧವನ್ನು ಮಾರುವಗೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು
ದಿ ಊಲನ್ ಮಾರ್ಟ್, ಮಂಗಳೂರು. | ಕರ್ಣಿಕ ಬ್ರದರ್ಸ್, ಗಿರಿಗಾಂವ, ಮುಂಬಯಿ.

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.

ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,000 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಕೃಷಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲ್ಯಾಂಪುಗಳು 300 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸುಗಳು, ಪ್ರತಿ ಒಬ್ಬರ ಕೈಲಿಹಿಡಿದುಕೊಂಡು ಹೋಗಲು ಅನುಕೂಲಿಸು ವ ಚಂದ್ರಕಾಂತಿ ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನುಗಳು, ಸ್ಟವ್‌ಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಕರೆಯುವ ಗುಂಡಿಗಳು, ರೋಜಾ ಹುವ್ವಿನ ಗುರಾಯಿಗಳು, ಬ್ಯಾಟರಿಗಳು, ಬೆಂಕಿಯಿಲ್ಲದೆ ಬೀಡಿ ಮತ್ತು ಸಿಗರೆಟ್ ಹಚ್ಚುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳ ಬಿಡಿಭಾಗಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿ.

ಕ್ರಯ ಪಟ್ಟಿಗಾಗಿ ಬರೆಯಿರಿ ಈ ವಿಳಾಸಕ್ಕೆ ಬರೆಯಿರಿ –

ಎ. ಆರ್. ಖಲೀಲ್,

ಟೈಸಿಕಲ್, ಸ್ಟವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

18-11-27) ನಗರ್ತಪೇಟೆ, ಬೆಂಗಳೂರು ಸಿಟಿ

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೨೦೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ, ತೆಂಗಿನಮನೆ,

–[illegible] – ಸಕ್ಲೇಶಪುರ ತಾಲ್ಲೂಕು ಕಡೂರ್ ಡಿಸ್ಟ್ರಿಕ್ಟ್

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ, ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಪಿಗ್ಯು ಮಿಕ್ಶ್ಚರ್ ಪಿಲ್ಸ್—ಮಲೇರಿಯಾ ಜ್ವರ ನಿವಾರಕ. ರೂ. ೧.

ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

ಬಾಟ್ಲಿವಾಲರ ಕಿಟರ್ ಆಲ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ [illegible]

ಬಾಟ್ಲಿವಾಲರ ಥೈರಿಯಾ ಮಿಕ್ಶ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪.

ಬಾಟ್ಲಿವಾಲರ ಕ್ವಿನೇನ ಚೀಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಚೀಟುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ್ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦, ೧—೧೨—೦.

ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE.

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ. ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay, No. 14.

ಕೇಸರಿಯ ವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುತ 'ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ಆಭರಣ'ವೆಂದೂ, 'ಸರ್ವಾಭೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜವನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ.

ಇದು ಋತುಶೂಲೆ, ಋತುಸ್ರಾವದೋಷ, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣಗಳಿಂದ ಸ್ರವಿಸುವುದು, ಪ್ರದರ (ಮೇಹ) ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ಶರೀರದಲ್ಲಿ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಶೆಳೆತ, ಉಬ್ಬಸ ಮೊದಲಾದ ವ್ಯಾಧಿಗಳೂ ಇತರ ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ಔಷಧಿ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— **ಕೇಸರೀ ಕುಟೀರಂ,**

TELEGRAMS:—'KESARI' ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

16-4-'27 ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.



ನಮ್ಮ ಕಡಿಮೆ ಕ್ರಯವನ್ನು ನೆನಪಿನಲ್ಲಿಡಿರಿ.

ಜಗತ್ಪ್ರಸಿದ್ಧವಾದ **"ಜಿಗ್-ಜೇಗ್"** ಗಡಿಯಾರ

ಸ್ಯಾಜು 8 × 4½ ಇಂಚುಗಳು ರೂಪಾಯಿ 3—0—0

ಮೂರು ವರುಷಗಳಿಗೆ ಗ್ಯಾರಂಟಿಯುಳ್ಳದ್ದು. ಸರಿಯಾದ ಸಮಯ ಕೊಡುವದು, ಗಟ್ಟಿಯಾದ ಯಂತ್ರಗಳಿಂದ ಮಾಡಲ್ಪಟ್ಟದ್ದು, ನೋಡಲು ಬಹು ಅಂದವಾಗಿದ್ದು ಚಿತ್ರದಲ್ಲಿ ತೋರುವಂತೆ ಮನೋಹರವಾದ ಸ್ಟೇಂಡಿನ ಮೇಲೆ ನಿಲ್ಲಿಸಲ್ಪಟ್ಟಿರುತ್ತದೆ. ಹಲವರು ಉಪಯೋಗಿಸಿ ತೃಪ್ತಿಹೊಂದಿರುವರು; ಬಹು ಚಿತ್ತಾಕರ್ಷಕ ಮತ್ತು ಶೃಂಗಾರಿತವಾದುದು.

ಕ್ರಯ ರೂಪಾಯಿ 3—0—0

ಏಜಂಟರು—

ಥಿರಿಯಾ ಲಕ್ಷ್ಮೀ ಅಂಡ್ ಕಂಪೆನಿ,

ಪೋಸ್ಟ್ ಬಾಕ್ಸ್ 265, ಮದರಾಸು.

ಫ್ಯಾನ್ಸಿ ಲೀವರ್ ಪಾಕೆಟ್ ವಾಚ್.

(15 ಬಹುಮಾನಗಳ ಸಹಿತ ರೂ. 4—8—0)

ಈ ಗಡಿಯಾರವು ನಮಗಾಗಿ ಪ್ರತ್ಯೇಕವಾಗಿ ತಯಾರಿಸಿ ರಿಜಿಸ್ಟರಾಗಿದೆ.



ಈ ಗಡಿಯಾರವು ನೋಟಕ್ಕೆ ಗಂಭೀರವಾಗಿಯೂ ಜೇಬಿಗೆ ಅಡಕವಾಗಿಯೂ ಇರುವಂತ ಚಿಕ್ಕ ಸೈಜಿನಲ್ಲಿ ತಯಾರಿಸಿ, ಹಿಂದುಗಡೆ ಚಿತ್ರಕೆಲಸ ಮಾಡಲ್ಪಟ್ಟಿರುವುದು. ಮತ್ತು ಒಳಗಡೆ [illegible] ಗಿಲ್ಟ್ ಮೂಮೆಂಟ್ ಮಾಡಿರುವದು. [illegible] ಹಿಂಭಾಗದಲ್ಲಿಯೂ ಗ್ಲಾಸ್ ಡೋಮ್ ಇರುವದು. ಒಂದು ನಿಮಿಷವಾದರೂ ವ್ಯತ್ಯಾಸವಿಲ್ಲದೆ ಕಾಲವನ್ನು ತೋರಿಸುವಂತ ಲೀವರ್ ಮೂಮೆಂಟುಗಳಿಂದ ಈ ಗಡಿಯಾರವನ್ನು ತಯಾರಿಸಿದೆ. ನಮ್ಮ ಗಡಿಯಾರವನ್ನು ನಾವೇ ಹೊಗಳುವದರಿಂದ ಪ್ರಯೋಜನವಿಲ್ಲ. ಒಂದನ್ನು ತರಿಸಿ ನೋಡಿರಿ. ರಿಜಿಸ್ಟರ್ ಮಾಡಲ್ಪಟ್ಟ ಈ ಗಡಿಯಾರವು ಲೋಕಪ್ರಸಿದ್ಧಿಯಾಗುವದಕ್ಕಾಗಿ [illegible] ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ ಈ ಚಿತ್ರದಲ್ಲಿ ಕಾಣಿಸಿರುವ 15 ಬಹುಮಾನಗಳನ್ನು ಕೊಡುವೆವು. ಬಹುಮಾನಗಳ ವಿವರ: ಫೌಂಟನ್ ಪೆನ್ನ 1, ಹೇರ್‌ಆಯಿಲ್ ಬಾಟ್ಲ್ 1, [illegible] ಗುಂಡಿಗಳು 4, ಪಾಕೆಟ್ ಕನ್ನಡಿ ೧, ಗಡಿಯಾರ ಸರಪಳಿ 1, ಸುವಾಸನೆ ಸೋಪು 1, ಪೆನ್ನಾ ಕತ್ತಿ 1, ರೋಲ್ ಗೋಲ್ಡ್ ಭಂಗಾರದ ಉಂಗುರ 1, ರೋಲ್ ಗೋಲ್ಡ್ [illegible] ಎಂಬ ಕತ್ತಿನ ಹಾರ 1, ದಂತದ ಬಾಚಣಿಗೆ 1, [illegible] ಸೆಟ್ ೧, ಕೈವಸ್ತ್ರ 1, ಈ 15 ಬಹುಮಾನಗಳು ಮತ್ತು [illegible] ಯಾದ 3 ವರ್ಷ ಗ್ಯಾರಂಟಿ ಸಹಿತ

ಗಡಿಯಾರ ಒಂದಕ್ಕೆ ಕ್ರಯ ರೂ. 4—8—0.

THE ENGLISH EMPORIUM,

P. O. Box 104 MADRAS.

ಮುಂಗಡ — ವರ್ಷ ಒಂದಕ್ಕೆ ರೂಪಾಯಿ 2-0-0 Registered No. M. 489 ಟಪ್ಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸತಿ । ಗರವ ಮಥಿಸಲು ಸುರರಿಗದರಿಂ । ಹರುಷವಾಯಿತೆ ಮತ್ತೆ ವಿಷ್ವವ ಸುಡುತ ಬರುತಿರುವ ॥
ಗರಲಕವರಂಜಿದರೆ ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೨೩ನೇ ಶುಕ್ರವಾರ ನವಂಬರ ೧೯೨೮. (23-11-28.) ಸಂಚಿಕೆ ೪೭

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Statement of Affairs of the Canara Banking Corporation Udipi, Limited as at 31st October 1928

	CAPITAL AND LIABILITIES.			PROPERTY AND ASSETS	
1	Paid up Capital	Rs. 1,99,650-0-0	1	Premises Building Furniture &c.	Rs. 9,491-9-0
2	Reserve Fund and other funds	" 96,600-0-0	2	Investments on G. P. Notes	" 3,34,218-5-0
3	Deposits	" 17,52,879-4-8	3	Investments on Approved Securities	" 17,55,749-11-0
4	Overdraft with Bankers	" 43,786-8-9	4	Bills for collection as per Contra	" 11,392-9-0
5	Sundry Persons' A/C as per Contra	" 11,392-9-0	5	Sundries including P & L items	" 1,06,979-12-9
6	Sundries including P & L items	" 1,54,863-9-2	6	Cash in hand & with Bankers.	" 49,340-7-10.
	Total	22,59,171-15-7		Total	22,59,171-15-7.

Office of the Corporation,
UDIPI, 13-11-'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನವಲ್ಲಿ ಪ್ರಸಿದ್ಧಪಟ್ಟ ನೋವಿನ — ಮುಲಾಮು. —

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುತ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಆಕಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು — ಎಲ್ಲಾ ತರದ ಗಜಕರ್ಣಕ್ಕೂ ಕಜ್ಜಿಗೂ, ನಂಬಿಗೆಯ ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರು ಸಲ ಹಾಕುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ — ಉತ್ತಮವಾದ, ಈ ಪರಿಮಳಯುಕ್ತವಾದ, ಮತ್ತು ರುಚಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೋ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜಟೌನ್, ಮದ್ರಾಸು. 249 ಫ್ರೇಯರ್ ರೋಡ್ ಮುಂಬಯಿ,
ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಕ್ಲೆಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪನಿ,
ಗಿರಗಾಂವ, ಮುಂಬಾಯಿ.

ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas
Postage Extra.
For copies apply to—
The M. T. A. Sharada Press,
Car-street, MANGALORE.

ADVERTISE IN OUR WEEKLY
To Reach the Hearths & Homes of India's Masses
For Particulars Apply to:
The Manager,
SWADESHABHIMANI,
MANGALORE.

[illegible]

[illegible]

ಮಂಗಳೂರು ಕಸಬಾ ಪಂಚಾಯತ್ ಕೋರ್ಟಿನ ವಿಭಾಗ.

ದಯಾಳು ಸರಕಾರದವರೊಡನೆ ದೈನ್ಯಭಾವದ ಪ್ರಾರ್ಥನೆ

ಕದ್ರಿ, ಅತ್ತಾವರ, ತೋಟ ಗ್ರಾಮಸ್ಥರಿಗೆ ಸೂಚನೆ.

ಮಂಗಳೂರು ಕಸಬಾ ಪಂಚಾಯತ್ ಕೋರ್ಟು ಚಕ್ಕಂದಿಯ ಆರು ಗ್ರಾಮಗಳನ್ನು ವಿಭಾಗಿಸಿ ಇನ್ನೊಂದು ಹೊಸ ಪಂಚಾಯತ್ ಕೋರ್ಟನ್ನು ತೆರೆಯುವ ಉದ್ದೇಶವಾಗಿಯೂ ಜೆಪ್ಪು ಮೊಗರು ಗ್ರಾಮವನ್ನು ಅತ್ತಾವರದಲ್ಲಿ ತೆರೆಯುವ ಹೊಸ ಕೋರ್ಟಿಗೆ ಸೇರಿಸುವ ಉದ್ದೇಶವಾಗಿಯೂ ಗ್ರಾಮಸ್ಥರ ಆಲೋಚನೆ ಕೇಳುವರೇ ತಾ. ೧೩-೧೧-೧೯೩೬ರಲ್ಲಿ ಮಂಗಳೂರು ತಾಲೂಕು ತಹಶೀಲ್ದಾರರವರ ಆಫೀಸಿನಲ್ಲಿ ಒಂದು ಸಭೆ ನಡಿಸಬೇಕಾಗಿ ಸರಕಾರದಿಂದ ತಾಕೀತು ಕೊಡೋಣಾಗಿತ್ತು. ಆ ದಿವಸ ಕನಿಷ್ಠಪಕ್ಷ ಇಪ್ಪತ್ತು ಸಾವಿರಕ್ಕೆ ಕಡಿಮೆಯಾಗದಷ್ಟು ನಿವಾಸಿಕರಿಂದ ತುಂಬಿದ ಅತ್ತಾವರ, ತೋಟ ಗ್ರಾಮ, ಜೆಪ್ಪು ಮೊಗರು ಈ ಮೂರು ಗ್ರಾಮದಿಂದ ಬರೀ ಐದು ಜನರು ಮಾತ್ರ ಹಾಜರಿದ್ದರು. ಇವರ ಪೈಕಿ ಮೂರು ಜನರು ಆ ಮೂರು ಗ್ರಾಮದ ಪಟೇಲರು. ಕೈತರಂದರೆ ಎರಡು ಜನರು. ಈ ಐದು ಜನರ ಆಲೋಚನೆಯಂತೆ ಅತ್ತಾವರ, ತೋಟಗ್ರಾಮ, ಜೆಪ್ಪಿನ ಮೊಗರು ಈ ಮೂರು ಗ್ರಾಮಕ್ಕೆ ಒಂದು ಪಂಚಾಯತ್ ಕೋರ್ಟನ್ನು ಅಲಿಮಾನ್ ರಾಮರಾಯರ ಹತ್ತಲ್ಲಿರುವ ಒಂದು ಮಗ್ಗದ ಕಟ್ಟೋಣದಲ್ಲಿ ತೆರೆಯುವದೆಂತ ನಿಶ್ಚಯಿಸಲಾಯಿತು. ಅಂಥಾ ಕೋರ್ಟಿಗೆ ಸರಕಾರದವರಿಂದ ತಕ್ಕ ಸಹಾಯ ಸಿಕ್ಕಲಾರದಾಗಿಯೂ ತಾವೇ ಏರ್ಪಡಿಸಿಕೊಳ್ಳಬೇಕಾಗಿಯೂ ತಹಶೀಲ್ದಾರರ ಅಪ್ಪಣೆಯು ಆಯಿತು. ಈ ರೀತಿ ವಿಭಾಗಿಸುವ್ದು ಸರಿಯೋ? ಸರಕಾರದ ಸಲಹೆ ಇಲ್ಲದ ಕೋರ್ಟಿನಿಂದ ಎಷ್ಟರ ಮಟ್ಟಿಗೆ ಗ್ರಾಮಸ್ಥರಿಗೆ ಉಪಕಾರವಾದೀತು? ಕೋರ್ಟು ಮಾಡಲಿಕ್ಕೆ ಆ ಸ್ಥಳವು ಯೋಗ್ಯವಾದ್ದೋ? ಜಪ್ಪಿನ ಮೊಗರನ್ನು ಈ ಪಂಚಾಯತ್ ಕೋರ್ಟಿಗೆ ಸೇರಿಸುವ ಆಗತ್ಯವುಂಟೋ? ಇಲ್ಲವೋ? ಎಂಬ ಪ್ರಶ್ನೆಗಳು ಈ ಸಂದರ್ಭ ಗ್ರಾಮಸ್ಥರಾದ ನಾವು ಸರಕಾರಕ್ಕೆ ಹೇಳಿಕೊಂಡು ಸರಕಾರದಿಂದ ಬೇಕಾದನ್ನು ಬೇಡಿಕೊಳ್ಳುವ ಸುಸಂಧಿಯು ಈಗ ಒದಗಿರುವದನ್ನು ಕಳಕೊಂಡು ಕಡೆಗೆ ಗ್ರಾಮ ಕೋರ್ಟುಗಳನ್ನು ದೂಷಿಸುತ್ತಿರುವದು ನ್ಯಾಯವಲ್ಲ. ನಮ್ಮ ಗ್ರಾಮಗಳು ಹಲವು ಜನ ಸ್ವರಾಜಿಸ್ಟರಿಂದಲೂ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರಿಂದಲೂ, ಮುನ್ಸಿಪಾಲ್ ಕೌನ್ಸಿಲರರಿಂದಲೂ ತುಂಬಿ ಇರುತ್ತವೆ. ಆದರೂ ಈ ಕಡೆ ಯಾವ ಮುಂದಾಳುಗಳೂ ಕಣ್ಣೆತ್ತಿ ನೋಡದಿರುವದು ಶೋಚನೀಯ ಸಂಗತಿ! ಇನ್ನಾದರೂ ಬಡ ಗ್ರಾಮಸ್ಥರ ಕಡೆಗೆ ತಮ್ಮ ದಿವ್ಯ ದೃಷ್ಟಿಯನ್ನಿಡುವರೋ!! ದೇವರೇ ಬಲ್ಲ!!! ನಾನು ಈ ಕುರಿತು ಈ ಮೂಲಕ ಅತೀ ದೈನ್ಯದಿಂದ ಅರಿಕೆ ಮಾಡಿಕೊಳ್ಳುವದೇನಂದರೆ:—

ಮಂಗಳೂರು ಕಸಬಾ ಪಂಚಾಯತ್ ಕೋರ್ಟು ವಿಭಾಗಿಸಲ್ಪಡಬೇಕಾದ್ದು ಸರಿ. ಈಗ ವಿಂಗಡಿಸಿದ ಗ್ರೂಪು ಮಾತ್ರ ಸರಿಯಲ್ಲ. ಕದ್ರಿ, ಅತ್ತಾವರ, ತೋಟಗ್ರಾಮ, ಈ ಮೂರು ಗ್ರಾಮಗಳು ಉತ್ತರದಿಂದ ದಕ್ಷಿಣಕ್ಕೆ ಒಂದೇ ಲೈನಿನಲ್ಲಿದ್ದು ಒಂದಕ್ಕೊಂದು ಸಂಧಿಸಿ ಇರುತ್ತವೆ. ಆದ ಕಾರಣ ಈ ಮೂರು ಗ್ರಾಮಗಳನ್ನು ಒಂದು ಗ್ರೂಪಾಗಿ ಏರ್ಪಡಿಸಬೇಕಾಗಿದ್ದು ಕಸಬಾ ಬಜಾರು, ಬೋಳೂರು, ಕೊಡಿಯಾಲ್‌ಬೈಲ್, ಈ ಮೂರು ಗ್ರಾಮಗಳನ್ನು ಒಂದು ಗ್ರೂಪಾಗಿ ಏರ್ಪಡಿಸುವದೂ ಸರಿಯಾದ್ದು. ಜಪ್ಪಿನ ಮೊಗರು ಗ್ರಾಮವನ್ನು ಈಗ ತೆರೆಯಬೇಕೆಂಬ ಹೊಸ ಕೋರ್ಟಿಗೆ ಸೇರಿಸುವದೂ, ಕದ್ರಿಯನ್ನು ಹಳೆ ಪಂಚಾಯತ್ ಕೋರ್ಟಿಗೆ ಸೇರಿಸ್ಸದೂ ಸರಿಯಲ್ಲ. ಜಪ್ಪಿನ ಮೊಗರು ಗ್ರಾಮದಲ್ಲಿ ವರುಷ ೧ಕ್ಕೆ ಹೆಚ್ಚೆಂದರೆ ೫೦ ಯಾ ೬೦ ವ್ಯಾಜ್ಯಗಳಿಗಿಂತ ಮಿಕ್ಕಿ ದಾಖಲಾಗದ ಒಂದು ಗ್ರಾಮ. ಅದನ್ನು ಆ ಗ್ರಾಮ ಮುನ್ಸಿಫರ ತಾಬೆಯಲ್ಲಿ ಇರಿಸುವದೇ ಯೋಗ್ಯ. ಅಲ್ಲದೆ, ಸದರಿ ಗ್ರಾಮವು ಒಂದು ದೊಡ್ಡ ತೋಡಿನ ಪ ಹಳ್ಳದ ಪೂರ್ವಕ್ಕೆ ಬಹಳ ದೂರದ ವರೇಗೆ ವಿಸ್ತರಿಸಿಕೊಂಡು ಇರುವದರಿಂದಲೂ, ಸದರಿ ಗ್ರಾಮಸ್ಥರ ಹೆಚ್ಚಿನವರು ಬೇಸಾಯಗಾರರಾಗಿರುವದರಿಂದಲೂ ಈ ಗ್ರಾಮಸ್ಥರಿಗೆ ಅತ್ತಾವರ ಮತ್ತು ತೋಟಗ್ರಾಮದಲ್ಲಿ ಹೆಚ್ಚಿನ ವಹಿವಾಟುಯಿಲ್ಲದೆ ಇರುವದರಿಂದಲೂ ಬೇಸಾಯದ ಸಮಯದಲ್ಲಿ ಪ ಮಳೆಗಾಲದಲ್ಲಿ ದೂರದಲ್ಲಿರುವ ಗ್ರಾಮವಾಸಿಗಳಿಗೆ ಇಲ್ಲಿಗೆ ಬರುವದು ತುಂಬಾ ಕಷ್ಟವೇ ಸರಿ. ಕದ್ರಿ ಗ್ರಾಮದಲ್ಲಿರುವ ಜನರಲ್ಲಿ ಮುಕ್ಕಾಲು ಪಾಲು ಜನರು ಹಂಪನಕಟ್ಟೆ ವಗೈರೆ ಸ್ಥಳದಲ್ಲಿ ವ್ಯಾಪಾರ ಮಾಡಿಕೊಂಡು ಇರುವವರಾದುದರಿಂದ ಅವರು ವ್ಯಾಜ್ಯಗಳಿಗೆ ಜಪ್ಪಿಗೆ ಹೋಗುವದೆಂದರೆ ಅದು ಅವರಿಗೂ ಕಷ್ಟವೇ ಸರಿ. ಆದ್ದರಿಂದ ಆಯಾಯ ಗ್ರಾಮಸ್ಥರಿಗೆ ಅನುಕೂಲವಾಗುವ ರೀತಿ ಕೋರ್ಟುಗಳನ್ನು ಏರ್ಪಡಿಸುವ ಹಾಗೆ ಸರಕಾರದಲ್ಲಿ ಅರಿಕೆಮಾಡಿಕೊಳ್ಳುವದು ನಮ್ಮ ಮೊದಲನೇ ಕೆಲಸ.

ಸರಕಾರದ ಸಹಾಯವಿಲ್ಲದ ಕೋರ್ಟು ಬೆನ್ನೆಲುಬಿನ ಬಲವಿಲ್ಲದ ಮನುಷ್ಯನಂತೆ ಯಾವ ಪ್ರಯೋಜನಕ್ಕೂ ಬೀಳದೆ ಸಮಯಾನುಸಾರ ಅದರಿಂದ ಗ್ರಾಮಸ್ಥರಿಗೆ ಹಾನಿ ಒದಗಲಿಕ್ಕೂ ಸಂದರ್ಭವಿರುವದು. ಆದ್ದರಿಂದ ಸರಕಾರದವರಿಂದ ಗ್ರಾಮ ಕೋರ್ಟಿಗೆ ಬೇಕಾದ ಎಲ್ಲಾ ಸಹಾಯ ಮಾಡುವ ಹಾಗೆ ಸರಕಾರವನ್ನು ಕೇಳಿಕೊಳ್ಳುವದು ನಮ್ಮ ಎರಡನೇ ಕರ್ತವ್ಯ.

ಈ ಪಂಚಾಯತ್ ಕೋರ್ಟುಗಳು ಹಲವು ತರದ ಜನರಿಂದ ಕೂಡಿ ವ್ಯಾಜ್ಯಗಳು ಇತ್ಯರ್ಥಿಸಲ್ಪಡತಕ್ಕ ಸ್ಥಳವಾದ್ದರಿಂದಲೂ ಅದು ಜಿಲ್ಲೆಯ ಪ್ರಧಾನ ಪಟ್ಟಣವಾಗಿರುವ ಮಂಗಳೂರು ಶಹರಿನಲ್ಲಿ ಇರುವದರಿಂದಲೂ ಮೇಲ್ ಆಫೀಸರರಾದ ಡಿಸ್ಟ್ರಿಕ್ಟ್ ಮುನ್ಸಿಫ್, ತಹಶೀಲ್ದಾರ್, ಮತ್ತು ಕಲೆಕ್ಟರರ ಕಚೇರಿಗೆ ಸಮೀಪಿಸಿ ಇದ್ದು ಮೇಲಾಧಿಕಾರಿಗಳ ದೃಷ್ಟಿಯು ಸದಾ ಈ ಕೋರ್ಟುಗಳ ಮೇಲೆ ಬೀಳುವ ಹಾಗೆ ಅಂಥಾ ಸ್ಥಳದಲ್ಲಿ ಇರಿಸಿದರೆ ವ್ಯವಸ್ಥೆಯಿಂದ ನಡದು, ಲೋಕಹಿತಕ್ಕೆ ಉಪಯೋಗವಾದೀತು. ಈಗ ಏರ್ಪಡಿಸಿದ ಸ್ಥಳವು ಒಂದು ಸಂಧು ಮೂಲೆಯಾಗಿದ್ದು ಅತ್ತಾವರ, ತೋಟ ಗ್ರಾಮದ ಉತ್ತರ ಕಡೆಯ ಜನರಿಗೆ ದೂರವಾಗಿರುತ್ತದೆ. ಈ ಸ್ಥಳವು ಕೋರ್ಟಿಗೆ ಯೋಗ್ಯ ಸ್ಥಳವೂ ಅಲ್ಲ.

[illegible] ಮಂಗಳೂರು [illegible] ಕೋರ್ಟು ಇರುವ ಕಟ್ಟೋಣದಲ್ಲಿ ಇರುವ ಹಿಂದುಸ್ತಾನಿ ಶಾಲಾ [illegible] ಆಫೀಸು ಈಗ ಕಸಬಾ ಪಂಚಾಯತ್ ಕೋರ್ಟು ಇರುವ ಕಟ್ಟೋಣಕ್ಕೆ ವರ್ಗಾವಣೆ ನಡಿಯುವದರಿಂದ ಸದರಿ ಕಟ್ಟೋಣದಲ್ಲಿ ಈ ಹೊಸ ಕೋರ್ಟು ತೆರೆಯುವದು ಉತ್ತಮ. ಇದು ಅತ್ತಾವರ ಗ್ರಾಮದಲ್ಲಿದ್ದು ಕದ್ರಿ, ತೋಟ ಗ್ರಾಮ ಮತ್ತು ಅತ್ತಾವರ ಗ್ರಾಮಕ್ಕೂ ಮಧ್ಯಸ್ಥಳವಾಗಿರುತ್ತದೆ.

ಆದುದರಿಂದ ಈ ಸ್ಥಳವನ್ನು ಸರಕಾರದವರಿಂದ ಕೇಳಿಕೊಳ್ಳುವದು ನಮ್ಮ ಮೂರನೇ ಕೆಲಸ.

ಈ ಎಲ್ಲಾ ಸಂಗತಿಯಲ್ಲಿ ಇನ್ನಾದರೂ ನಾವು ಪ್ರಯತ್ನಿಸಿ ಸರಕಾರದವರಿಂದ ನಮಗೆ ಕೊಡಲ್ಪಟ್ಟ ಪಂಚಾಯತ್ ಕೋರ್ಟು ಮೆಂಬರರ ಪ್ರಯೋಜನವು ಸಿಕ್ಕುವ ಹಾಗೆ ನಾವು ಪ್ರಯತ್ನಪಡಬೇಕಾಗಿ ನಿಮ್ಮೆಲ್ಲರಲ್ಲಿ ನನ್ನ ಅರಿಕೆ.

ಗ್ರಾಮಸ್ಥರಲ್ಲೊಬ್ಬ.

(೧೩ನೇ ಪುಟದಿಂದ ಮುಂದುವರಿದುದು.)

ವೆಂದು ಎಲ್ಲರೂ ಒಪ್ಪುತ್ತಿರುವರು. ೧೮೫೮ನೇ ಇಸವಿಯಲ್ಲಿ ಕಂಪೆನಿಯ ಆಡಳಿತವನ್ನು ಬ್ರಿಟಿಷ ಸರಕಾರವು ವಹಿಸಿ ಕೊಂಡ ನಂತರ ಆಡಳಿತೆಯ ಕ್ರಮವು ಬೇರೆಯಾಯಿತು. ವಿಕ್ಟೋರಿಯಾ ಮಹಾರಾಣಿಯವರು ಒಂದು ಜಾಹೀರು ನಾಮೆಯನ್ನು ಕೊಟ್ಟರು. ನಂತರ ಹಲವು ಬದಲಾವಣೆಗಳಾದವು. ಇಂಡಿಯಕ್ಕೆ ಬರುವ ಇಂಗ್ಲಿಷ ವ್ಯಾಪಾರವು ಹೆಚ್ಚಾಯಿತು. ಹತ್ತಿಯ ವ್ಯಾಪಾರವು ಹೆಚ್ಚಾಯಿತು. ಇಂಡಿಯಾದ ಕೈಗಾರಿಕೆಗಳು ಕಡಿಮೆಯಾದವು.

ಇಂಡಿಯವು ಬಹು ಪುರಾತನ ಕಾಲದಿಂದ ನಾಗರೀಕತೆಯ ಉನ್ನತ ಮೆಟ್ಟಲಲ್ಲಿತ್ತು. ಇಲ್ಲಿ ಎಲ್ಲಾ ತರದ ಕೈಗಾರಿಕೆಗಳೂ ಸ್ಥಾಪಿತವಾಗಿದ್ದವು. ರೋಮರಾಜ್ಯಕ್ಕೂ, ಗ್ರೀಕ್ ರಾಜ್ಯಕ್ಕೂ ಇಲ್ಲಿಂದ ಎಲ್ಲಾ ತರದ ವಸ್ತುಗಳು ಕಳುಹಿಸಲ್ಪಡುತ್ತಿದ್ದವು. ಇಲ್ಲಿಯ ನಾಗರೀಕತೆಯು ರೋಮ ಸಾಮ್ರಾಜ್ಯ ಮತ್ತು ಗ್ರೀಕ ಸಾಮ್ರಾಜ್ಯದ ನಾಗರೀಕತೆಗಿಂತಲೂ ಪುರಾತನ ಕಾಲದ್ದೆಂದು ತೋರಿಸುವುದಕ್ಕಾಗಿ ಇಂಡಿಯದ ಎಲ್ಲಾ ಭಾಗಗಳಲ್ಲಿಯೂ ಅದರ ಕುರುಹುಗಳು ಇವೆ.

ಆದರೆ ಈಗ ಈ ದೇಶದ ಕೈಗಾರಿಕೆಗಳು ಬಿದ್ದು ಹೋಗಿವೆ. ಜಪಾನ ದೇಶವು ಕೈಗಾರಿಕೆಗಳಲ್ಲಿ ಬಹಳ ಮುಂದರಿದಿಯದೆ. ಟರ್ಕಿ ದೇಶವು ಕಮಲಪಾಶರ ಮುಂದಾಳುತನದಲ್ಲಿ ಬಹಳ ಮುಂದುವರಿಯುತ್ತಿದೆ. ಚೀನಾದೇಶದಲ್ಲಿ ಹೊಸ ರಾಜ್ಯಧಾರ ಸ್ಥಾಪನೆಯಾಗಿ ಸ್ವಲ್ಪ ತಿಂಗಳ ಆಗುವಷ್ಟರಲ್ಲಿ ೫೦ ವರುಷದಲ್ಲಿ ಮಾಡುವಷ್ಟು ಅಭಿವೃದ್ಧಿಯನ್ನು ಮಾಡಿಯದೆ. ಅಫಘಾನಿಸ್ಥಾನವು ಬಹಳ ಸಣ್ಣ ದೇಶವಾದರೂ ಕೆಲವು ವರುಷಗಳಲ್ಲಿ ನವನಾಗರಿಕತೆಯಲ್ಲಿ ಬಹಳ ಮುಂದೊತ್ತಿ ಬಂದದೆ. ಒಟ್ಟಾರೆ ಏಸ್ಯಾಖಂಡದ ಎಲ್ಲಾ ರಾಜ್ಯಗಳೂ ಬಹಳ ಅಭಿವೃದ್ಧಿಯನ್ನು ಹೊಂದಿಯವೆ.

ಇಂಡಿಯದ ಭದ್ರತೆಗಾಗಿ ಇಂಗ್ಲೀಷರು ಸೂವೆಜ ಕೆನಲನ್ನು ಸ್ವಾಧೀನ ಇಟ್ಟು ಕೊಂಡಿರುವರು. ಜಿಬ್ರೊಲ್ಟರ್ ಎಡೆನ್ ಸಿಂಗಾಪುರ, ಕೊಲೊಂಬೊ, ಹೊಂಕೋಂಗ್ ಇವುಗಳಲ್ಲಿ ನೌಕಾ ಸೈನ್ಯವನ್ನು ಇಟ್ಟಿರುವರು. ಅಫಘಾನ ಅಮೀರ, ಜಪಾನ ಅರಸರು ಇವರೊಡನೆ ಸ್ನೇಹಭಾವದ ಕರಾರುಗಳನ್ನು ಮಾಡಿರುವರು.

ಇಂಡಿಯದ ರಾಜ್ಯಾಡಳಿತೆಯಲ್ಲಿ ಸ್ವಲ್ಪ ಬದಲಾವಣೆಗಳು ಆಗಬೇಕೆಂದು ಸಾಧನೆಯು ನಡಿಯುತ್ತಿದೆ. ಇಂಡಿಯದ ರಾಷ್ಟ್ರೀಯ ಸಭೆಯು ಕಳೆದ ೪೦ ವರುಷಗಳಿಂದ ಇಂಡಿಯಕ್ಕೆ ಬೇಕಾಗಿರುವ ವಿಷಯಗಳನ್ನು ಮುಂದಕ್ಕೆ ತರುತ್ತಿರುವುದು. ಇದರಲ್ಲಿ ಸುಮಾರು ೨೦-೩೦ ವರುಷಗಳ ವರೆಗೆ ಈ ಕೊಂಗ್ರೆಸ ಸಭೆಯು ಬ್ರಿಟಿಷ ಸರಕಾರದೊಡನೆ ಬೇಕಾದ ವಿಷಯಗಳಿಗಾಗಿ ಬೇಡುತ್ತಿತ್ತು. ನಂತರ ಠರಾವುಗಳನ್ನು ಪಾಸು ಮಾಡಿ ಕಳುಹಿಸುವುದರಿಂದ ಏನೊಂದೂ ತರದ ಪ್ರಯೋಜನವಿಲ್ಲವೆಂದು ತಿಳಿದು ಬಂತು. ಆದರೂ ಇದರಿಂದ ಮುಂದಿನ ಕಾರ್ಯಕ್ಕೆ ಪ್ರಯೋಜನವು ದೊರಕಿತು.

ಕಾಂಗ್ರೆಸಿನ ಆರಂಭದ ಕೆಲವು ವರುಷಗಳಲ್ಲಿ ಮಾಡಿದ ಮುಖ್ಯವಾದ ತಪ್ಪುಗಳು ಯಾವುವೆಂದರೆ (೧) ಇಂಡಿಯಕ್ಕೆ ಬೇಕಾದ ರಾಜಕೀಯ ಬದಲಾವಣೆಗಳ ವಿಷಯ ಸಾಮಾನ್ಯ ಜನರಿಗೂ, ಕೂಲಿಕಾರರಿಗೂ, ಬೇಸಾಯಗಾರರಿಗೂ ತಿಳಿಸದೆ ಇದ್ದುದು. ಸಾಮಾನ್ಯ ಜನರ ಬೆಂಬಲವಿಲ್ಲದಿದ್ದರೆ ಮುಂದಾಳುಗಳು ಮಾಡುವ ಕೆಲಸಕ್ಕೆ ಬೆಂಬಲವು ಸಿಕ್ಕಲಾರದು ಎಂದು ಇದರಿಂದ ಈಗ ತಿಳಿಯಿತು. (೨) ಒಂದು ಠರಾವನ್ನು ಪಾಸು ಮಾಡಿ ಸರಕಾರಕ್ಕೆ ಕಳುಹಿಸಿ ಸರಕಾರವು ಅದರ ಪ್ರಕಾರ ನಡಿಯದಿದ್ದರೆ ಏನು ಮಾಡಬೇಕೆಂಬ ವಿಚಾರವೂ ಇರಲಿಲ್ಲ. ಬಾರ್ಡೋಲಿಯ ಬೇಸಾಯಗಾರರು ಇದನ್ನು ಉದಹರಿಸಿ ತೋರಿಸಿದರು.

ಮಹಾತ್ಮಾ ಗಾಂಧಿಯವರು ಜನ ಸಾಮಾನ್ಯರಿಗೆ ರಾಜಕೀಯ ಪರಿಸ್ಥಿತಿಯ ವಿಷಯ ತಿಳಿಸುವಂತೆ ಕೊಂಗ್ರೆಸಿನ ಕಡೆಯಿಂದ ಅನುಕೂಲ ಮಾಡಿದರು. ಎರಡನೇದಾಗಿ ಪ್ರಜೆಗಳು ಹೇಳಿದ ಕಾಲಕಾಲಗಳಲ್ಲಿ ಸರಕಾರ[illegible] ಅಸಹಕಾರವನ್ನು ಮಾಡಬೇಕೆಂದು [illegible] ಕೊಂಗ್ರೆಸ ಸೂತ್ರಗಳಲ್ಲಿ ಇದ್ದ ಈ [illegible] ತೆಗೆದು ಹಾಕಿದುದಕ್ಕಾಗಿ ಎಲ್ಲರೂ [illegible] ಬೇಕು.

ಇಷ್ಟರ ವರೇಗೆ ಈ ರಾಜಕೀಯ ಚಳವಳಿ [illegible] ರಲ್ಲಿ ಮಾತ್ರವೇ ಹರಡಿಕೊಂಡಿತ್ತು. [illegible] ಯೂ ಹರಡಲಾರಂಭಿಸಿಯದೆ. ಬೇಸಾಯಗಾರ[illegible] ಸ್ಥಾಪಿಸಲ್ಪಟ್ಟವೆ. ಅಷ್ಟು ಮಾತ್ರವಲ್ಲ, ಇನ್ನು ಮುಂದೆ [illegible] ದೇಶವನ್ನು ಆಳಲಿಕ್ಕೆ ಯಾವ ತರದ ಸರಕಾರವು [illegible] ಬೇಕೆಂದು ಜನ ಸಾಮಾನ್ಯರು ಕೇಳಲಾರಂಭಿಸಿರುವರು. ಸೈಮನ್ ಕಮಿಷನ್ ಬಂದದೆ. ಆದರೆ ಆದಕ್ಕೆ ಬಹಿಷ್ಕಾರವನ್ನು ಹಾಕುತ್ತಿರುವರು.

ನೆಹರು ಕಮಿಟಿಯ ರಿಪೋರ್ಟನ್ನು ಎಲ್ಲರೂ ಅಂಗೀಕರಿಸಿರುವರು. ನೀವೂ ಆದರ ವಿಷಯ ಆಲೋಚಿಸುವಿರಾಗಿ ನಂಬುತ್ತೇನೆ. ಡೊಮಿನಿಯನ್ ಸ್ಟೇಟಸ್ ಆಗಲಿ, ಪೂರ್ಣ ಸ್ವಾತಂತ್ರ್ಯವಾಗಲಿ ಆಕಾಶದಿಂದ ಬೀಳುವಂತದ್ದಲ್ಲ. ನಾವು ಸಾಧನೆಮಾಡಿ ಅದು ಸಿಕ್ಕುವಂತೆ ಮಾಡಬೇಕು. ಆದರೆ ಈ ವಿಷಯದಲ್ಲಿ ಸಾಮಾಜಿಕ, ಆರ್ಥಿಕ ಮುಂತಾದ ವಿಷಯಗಳು ಅಡಕವಾಗಿವೆ.

ನನ್ನ ಕ್ರೈಸ್ತ ಸಹೋದರರಿಗೆ ನಾನು ಹೇಳುವುದೇನಂದರೆ ನೀವು ಪ್ರತ್ಯೇಕವಾಗಿ ಇರುವುದು ಸರಿಯಲ್ಲ. ನೀವೆಲ್ಲರೂ ಇತರ ಜಾತಿಮತದವರೊಡನೆ ರಾಜಕೀಯ ವಿಷಯಗಳಲ್ಲಿ ಒಟ್ಟುಗೂಡಿ ಇದ್ದರೆ ನಿಮಗೂ ಒಳ್ಳೇದು ದೇಶಕ್ಕೂ ಒಳ್ಳೇದು.

ನಾವೆಲ್ಲರೂ ಒಟ್ಟುಗೂಡಿ ನಮ್ಮ ಕಷ್ಟದಲ್ಲಿ ಬಿದ್ದಿರುವ ಜನಾಂಗವನ್ನು ಮೇಲಕ್ಕೆತ್ತುವಾ. ಯಾವತರದ ಜಾತಿಮತ ಭೇದಗಳು ನಮ್ಮಲ್ಲಿ ಇಲ್ಲದೆ ಇಂಡಿ ಜನಾಂಗದ ಸೇವೆಯಲ್ಲಿ ಎಲ್ಲರಿಗೂ ಒಂದೇ ತರದ ಹಕ್ಕು ಸ್ವಾತಂತ್ರ್ಯಗಳಿರಲಿ. ಮಹಾತ್ಮಾ ಗಾಂಧಿಯವರ ಮಾತಿನಂತೆ ಎಲ್ಲರನ್ನು ಪ್ರೀತಿಸಿ, ನಡಿಯುವಾ.

ಠರಾವುಗಳು.

೧. ನಮ್ಮ ಜಿಲ್ಲೆಯ ಪ್ರತಿನಿಧಿಗಳಿಗೆ ತಿಳಿಯಪಡಿಸದೆ ಜಿಲ್ಲೆಯಲ್ಲಿ ನಡೆಯುತ್ತಿರುವ ರಿಸೆಟ್ಲಮೆಂಟಿನಿಂದ ಕೃಷಿಕರಿಗೆ ಬಹಳ ಹಾನಿಯದೆ. ಅದನ್ನು ಈ ಸಭೆಯು ವಿರೋಧಿಸುವುದು. ಮೊದಲು ಹೊರಿಸಿದ ತಿರ್ವೆಯೇ ಹೆಚ್ಚಾದುದರಿಂದ ಈಗ ರೀ ಸರ್ವೆಯನ್ನು ತೀರಿಸಿದ ಹಳೆ ಕಾಸರಗೋಡು ತಾಲೂಕಲ್ಲದೆ ರಿಸರ್ವೇಗೆ ಉಳಿದ ಭಾಗವನ್ನು ಬಿಟ್ಟು ಬಿಡಬೇಕು.

೨. ಭೂಮಾಲಿಕರ ಸಮ್ಮತಿಗೆ ವಿರುದ್ಧವಾಗಿ ಪಟ್ಟೆಗಳಲ್ಲಿ ಕುಮ್ಕಿ ಸ್ಥಳಗಳನ್ನು ಸೇರಿಸಿದುದೂ ಅವುಗಳ ಮೇಲೆ ಗತ ಬೇರೀಜುಗಳನ್ನು ಕೇಳುವುದೂ ಅನ್ಯಾಯವು. ಆದುದರಿಂದ ಪಟ್ಟೆಗಳಿಂದ ಅವುಗಳನ್ನು ಹೊರಪಡಿಸಬೇಕು. ಮತ್ತು ಗತ ಬೇರೀಜನ್ನು ಮನ್ನಾಮಾಡಬೇಕು.

೩. ನಮ್ಮ ಜಿಲ್ಲೆಯಲ್ಲಿ ರಿಸರ್ವ ಕಾಡುಗಳು ಹೆಚ್ಚು ಮಳೆ ವಿಪರೀತವಾಗಿ ಬಂದು, ವಾಸಿಸುವವರು ರೋಗ ಪೀಡಿತರಾಗಿ, ಕೃಷಿಗೆ ಬಹಳ ಹಾನಿಯುಂಟಾಗುವದು. ಆದುದರಿಂದ ಕಾಡುಗಳನ್ನು ಕಡಿದು ಹಾಕಬೇಕು. ಇನ್ನುಮುಂದೆ ರಿಸರ್ವಮಾಡಬಾರದು. ಇದಕ್ಕೊಂದು ಸಮಿತಿಯನ್ನು ಏರ್ಪಡಿಸಬೇಕು.

೪. ಚಲಾವಣೆಗಾಗಿ ಮಾರ್ಗಗಳನ್ನು ಹೆಚ್ಚಿಸಿ ಸರಿಪಡಿಸಬೇಕು. ಮೈಸೂರಿಗೆ ಮತ್ತು ಉತ್ತರ ಕರ್ನಾಟಕಕ್ಕೆ ರೈಲುಮಾರ್ಗವನ್ನು ವಿಸ್ತರಿಸಬೇಕು.

೫. ಈ ಜಿಲ್ಲೆಯ ಪ್ರಾಮುಖ್ಯ ಕೈಗಾರಿಕೆಯಾಗಿರುವ ನೇಕಾರಿಕೆಗೆ ಪ್ರೋತ್ಸಾಹವು ಸಿಕ್ಕುವಂತೆ ಉಪ್ಪಿನ ಕ್ರಯವನ್ನು ಇಳಿಸಬೇಕು.

೬. ಮಾದಕಪೇಯವನ್ನು ತಡೆಗಟ್ಟಬೇಕೆಂದೂ ಈಗಿನ ಅಬ್ಕಾರಿ ಇಲಾಖೆಯು ಅನಗತ್ಯವೆಂದೂ ಸರಕಾರವನ್ನು ಪ್ರಾರ್ಥಿಸಿ ಕೊಳ್ಳುತ್ತದೆ.

೭. ಪರದೇಶಿ ವಸ್ತುಗಳಿಗೆ ಪ್ರೋತ್ಸಾಹವನ್ನು ಕೊಡುತ್ತಾ ನಮ್ಮ ದೇಶೀಯ ಕೈಗಾರಿಕೆಗೆ ಅಡ್ಡಿಯನ್ನುಂಟುಮಾಡುವದು ಮದರಾಸು ಸರಕಾರದ ತಪ್ಪುಕೆಲಸ. ನಮ್ಮ ದೇಶೀಯ ಕೈಗಾರಿಕೆಗಳಾದ ಕೈನೂಲು, ಕೈಮಗ್ಗ, ಇವುಗಳಿಗೆ ಸರಕಾರವು ಪ್ರೋತ್ಸಾಹವನ್ನೀಯಬೇಕು.

೮. ಈಗಿನ ಮದರಾಸು ಮಂತ್ರಿಮಂಡಲದಲ್ಲಿ ವಿಶ್ವಾಸವಿಲ್ಲವೆಂದೂ, ಅವರು ರಾಜಿ ಕೊಡಬೇಕೆಂದು ಸಭೆಯು ಕೇಳಿಕೊಳ್ಳುತ್ತದೆ.

೯. ಸರಕಾರಿ ಕೆಲಸವನ್ನು ಆಯಾ ಜಾತಿಯವರಿಗೆ ಕೊಡಬೇಕೆಂದಿರುವ ಈಗಿನ ಕಾನೂನನ್ನು ತೆಗೆದುಹಾಕಬೇಕು.

೧೦. ಸೈಮನ್ ಕಮಿಶನನ್ನು ಈ ಸಭೆಯು ಬಹಿಷ್ಕರಿಸಬೇಕು.

೧೧. ಹಿಂದೂ ಕುಟುಂಬಗಳ ಕಾನೂನಿನಲ್ಲಿ ಬದಲಾವಣೆಯ ಬಗ್ಗೆ ಒಂದು ಸಮಿತಿಯು ಏರ್ಪಡಿಸಬೇಕು.

೧೨. ಕೊನೆಯದಾಗಿ ನವಂಬರ ೪ನೇ ತಾರೀಕಿನಲ್ಲಿ ದಿಲ್ಲಿಯಲ್ಲಿ ಆಲ್ ಇಂಡಿಯಾ ಕಾಂಗ್ರೆಸು ಕಮಿಟಿಯು ಸೇರಿದ ವರದಿಯ ವಿಷಯ ಮಾಡಿದ ಠರಾವನ್ನು ಪುಷ್ಟೀಕರಿಸಲಾಯಿತು.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಶ್ವಗಂಧಾದಿ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅತ್ಯಂತ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ಹಿಡಿದು ಮುದುಕರವರೆಗೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0. ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನ ವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0. ಅಂಚೆ ವೆಚ್ಚ ಬೇರೆ.

ಕಲ್ಯಾಣಮಿತ್ರನು!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ಸಂಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ಕಣವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "[illegible]" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli and Coondapur.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ ಮತ್ತು ಕುಂದಾಪುರ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟ ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,37,715—3—7	ರಿಸರ್ವ ನಿಧಿ ಮತ್ತು ಇತರ ಫಂಡುಗಳು 3,37,715—3—7
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರಾಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years; 6% „ 1 Year	ಖಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1 ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ವ್ಯಾಧಿ ಆಗುವ ರೂ. 1000/- ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/- and multiples thereof @ 3% from 1st January to 30th June and @ 2% from 1st July to 31st December.

Canara Bank Ltd.
Mangalore. 31st Oct. 1928.

K. Venkat Rao,
Secretary

THE PANGAL NAYAK BANK, LTD.
Head Office: Udipi, S. K.] *Estd. 1920.* **[Branch Office: Mangalore, S. K.**

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ, ದ. ಕ.] ಸ್ಥಾಪಿತವಾದದ್ದು 1920. [ಬ್ರೇಂಚು ಆಫೀಸು: ಮಂಗಳೂರು, ದ. ಕ

ಬೇಂಕರ್ಸ್—ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬ್ಯಾ.

ನಿಯಮಿತ ಮೂಲಧನ ರೂಪಾಯಿ 2,00,000/-

ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1,50,000/-	ಆಪದ್ಧನ ಇತ್ಯಾದಿ ನಿಧಿಗಳು ರೂ. 1,00,000/-

FIXED DEPOSITS are received for 3 months at 5%, for 6 or 9 months at 5¼%, of 12, 15, 18 or 21 months at 6¼%, and for 24 months at 6¼%, Interest being payable every 3 Months. SEASON DEPOSITS from January to June at 6¼% SHORT NOTICE DEPOSITS, withdrawable by giving 15 days previous notice after one month at 4¼% and CUMULATIVE DEPOSITS by monthly instalments are also received. SAVINGS BANK DEPOSIT ACCOUNTS may be opened and interest allowed at 4½%, CURRENT DEPOSIT ACCOUNTS may also be opened and interest allowed at 3% from January to June and at 2% from July to December. Loans granted on personal and approved securities on reasonable terms. Banking business of every description transacted.

Further information may be had on application to the Secretary at the HEAD OFFICE or to the AGENT at BRANCH OFFICE.

ಖಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ. ಶೆ. 5 ರಂತೆಯೂ, 6 ಯಾ 9 ತಿಂಗಳುಗಳಿಗೆ ಸಾ. ಶೆ. 5¼ ರಂತೆಯೂ, 12 15, 18, ಯಾ 21 ತಿಂಗಳುಗಳಿಗೆ ಸಾ. ಶೆ. 6¼ ರಂತೆಯೂ, 24 ತಿಂಗಳುಗಳಿಗೆ ಸಾ. ಶೆ. 6¼ ರಂತೆಯೂ, ಪ್ರತಿ 3 ತಿಂಗಳುಗಳಿಗೆ ಬಡ್ಡಿ ಕೊಡುವ ಕರಾರಿನ ಮೇಲೆ ಅಂಗೀಕರಿಸಲ್ಪಡುವವು. ಮುಸಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೆಗೆ) ಸಾ. ಶೆ. 6¼ ರಂತೆಯೂ ಅಲ್ಪಾವಧಿ ಠೇವಣಾತಿಗಳು ಸಾ. ಶೆ. 4¼ ರಂತೆಯೂ, ಸಂಚಯ ಠೇವಣಾತಿಗಳು ಪ್ರಯೋಜನಕರವಾದ ರೀತಿಯಲ್ಲಿಯೂ, ಸೇವಿಂಗ್ಸ್ ಬೇಂಕ ಠೇವಣಾತಿಗಳು ಸಾ. ಶೆ. 4½ ರಂತೆಯೂ, ಚಾಲ್ತಿ ಠೇವಣಾತಿಗಳು ಜನವರಿಯಿಂದ ಜೂನ್ ಅಂತ್ಯದ ವರೆಗೆ ಸಾ. ಶೆ. 3 ರಂತೆಯೂ, ಜುಲಾಯಿ ತಿಂಗಳಿಂದ ಡಿಸೆಂಬರ ಅಂತ್ಯದ ವರೆಗೆ ಸಾ. ಶೆ. 2 ರಂತೆಯೂ ಅಂಗೀಕರಿಸಲ್ಪಡುವವು.

ಸಾಲಗಳು ಯೋಗ್ಯವಾದ ಜವಾಬ್ದಾರಿಗಳ ಮೇಲೆ ನ್ಯಾಯವಾದ ರೀತಿಯಲ್ಲಿ ಕೊಡಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿನ ಸೆಕ್ರೆಟರಿಯವರಿಗೂ ಯಾ ಬ್ರೇಂಚ್ ಆಫೀಸಿನ ಏಜಂಟರಿಗೂ ಬರಕೊಳ್ಳುವುದು.

ಬೇಂಕಿನ ಆಫೀಸು, ಉಡುಪಿ,
ತಾ. 16—10—'28.

ಪ್ಯಾಲಕ್ಷ್ಮಣ ನಾಯಕ್,
ಒಫಿಸಿಯೇಟಿಂಗ್ ಸೆಕ್ರೆಟರಿ.

ಮುದಲ್‌ತರವಾದ ಬೆಳ್ಳಿ ವುಡಿದಾರಹಗ್ಗ.

Estd. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತಿದ್ದೇವೆ. ಸಿಂಧಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸ ಸ್ವಚ್ಛವಲ್ಲಿಯೂ, ದಾರಣೆ ಕರಸ್ತದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ವುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರ,
24—8—'28 ಶಿವ್ಯಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1/- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು—
ಮೆಸರ್ಸ್ [illegible] ಎಂಡ್ ಕಂಪೆನಿ,
[illegible]

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳ.



ದಯ ಇಟ್ಟು ಮೇಲಿನ ಸಾಮಾನುಗಳನ್ನು ಕೊಂಡು ಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗ್ ನಮ್ಮ ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,
ಮದ್ದುಗುಂಡುಗಳನ್ನು ಧಾರಾಳವಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ;
210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ.

ಕಲಕತ್ತಾ ಎಕ್ಸಿಬಿಷನು.

1928.

ಹಿಂದೀ ರಾಷ್ಟ್ರೀಯ ಮಹಾಸಭೆಯ 43ನೇ ಅಧಿವೇಶನದವರಿಂದ ವ್ಯವಸ್ಥಾಪಿಸಲ್ಪಟ್ಟದು.

ಅಪೂರ್ವ ಸುಸಂದರ್ಭ.

ಸ್ವದೇಶಕ್ಕೆ ಸಂಬಂಧಿಸಿದ ಮಹಾಲು ತಯಾರಿಸುವವರಿಗೂ, ಸಾಹುಕಾರರಿಗೂ, ವ್ಯಾಪಾರಿಗಳಿಗೂ, ಪ್ರದರ್ಶಕರಿಗೂ ಚಿತ್ರಕಾರರಿಗೂ, ಕಲಾಕೋವಿದರಿಗೂ, ಅನುಕೂಲವಾಗುವಂತೆ, ಕಲಕತ್ತಾ ಎಗ್ಜಿಬಿಷನು 1928ನೇ ಡಿಸೆಂಬರ ತಿಂಗಳ ಮಧ್ಯದಿಂದ 1929ನೇ ಇಸವಿ ಜನವರಿ ತಿಂಗಳ ಮಧ್ಯದ ವರೆಗೆ ತೆರೆದುಕೊಂಡಿರುವದು.

ಎಗ್ಜಿಬಿಷನಿನ ಕಟ್ಟಡದಲ್ಲಾಗಲೀ, ಪ್ರತ್ಯೇಕವಾಗಿ ಗೂಡಾರಗಳನ್ನು ಕಟ್ಟಿಸುವ ಸಲುವಾಗಿಯಾಗಲೀ ಸ್ಥಳಕೊಡಲಾಗುವದು. ಎಗ್ಜಿಬಿಷನು ಪಾರ್ಕ್‌ಸರ್ಕಸ್ ಎಂಬ ಸ್ಥಳದಲ್ಲಿ ನಡೆಯುವದು.

ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. R. Sarkar,
Secretary,
The Calcutta Exhibition
3A. Hogg Street, CALCUTTA.

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು.

ದಕ್ಷಿಣ ಕನ್ನಡ ಜಿಲ್ಲಾ ಐದನೇ ಪರಿಷತ್ತು ಶ್ರೀ. ನರಿಮನರ ಅಧ್ಯಕ್ಷತೆಯಲ್ಲಿ ಜರಗಿ ಮುಗಿಯಿತು. ಶ್ರೀ. ನರಿಮನರು ಸಾಧಾರಣ ಈಗ ಎಲ್ಲರಿಗೂ ಪರಿಚಿತರು. ಇವರು ಈಗಿನ ತರುಣ ಧುರೀಣರಾಗಿದ್ದು ಹಿಂದೀ ರಾಷ್ಟ್ರೀಯ ಕಾರುಣ್ಯದಲ್ಲಿ ಉತ್ಸಾಹವನ್ನು ಸುರುತ್ತಿರುವರು. ಇವರ ಭಾಷಣದ ಸಾರಾಂಶವು ಇನ್ನೊಂದು ಕಡೆ ಕೊಡಲ್ಪಟ್ಟಿಯದೆ. ಪರಿಷತ್ತಿನಲ್ಲಿ ಮಂಜೂರಾದ ಠರಾವುಗಳನ್ನು ನೋಡಿದರೆ ಅಸಹಕಾರ ಸಮಯದ ಸಂಪೂರ್ಣ ವಿಸ್ಮೃತಿಯು ಕಂಡುಬರುತ್ತದೆ. ಖಾದಿಯ ಹೆಸರು ಎಲ್ಲಿಯೂ ಕಂಡುಬರುವುದಿಲ್ಲ; ಅಲ್ಲದೆ ವಿಧಾಯುಕ ಕಾರ್ಯಕ್ರಮದ ಇತರ ವಿಧಾನಗಳಿಗೂ ಪ್ರಾಮುಖ್ಯತೆಯು ತೋರಿಬರುವುದಿಲ್ಲ. ಮಹಾತ್ಮಾಜೀಯವರಿಂದ ಪ್ರೇರಿಸಲ್ಪಟ್ಟ ಆ ಹಿಂದಿನ ಆದರ್ಶಗಳು ಮೆಲ್ಲನೆ ರಾಜಕೀಯ ರಂಗದಿಂದ ಸರಿದುಹೋಗುವಂತೆ ಕಾಣುತ್ತಿದೆ. ನಮ್ಮ ಮನಸ್ಸಿಗೆ ಇದು ಶುಭಚಿಹ್ನೆಯೆಂದೇ ಕಾಣುತ್ತಿದೆ. ಮಿಥ್ಯಾಚಾರವನ್ನು ಪ್ರೇರಿಸುವ ಠರಾವುಗಳು ತತ್ವತಃ ಎಷ್ಟೇ ಮಹತ್ವದ್ದಿರಬಹುದಾದರೂ ಕಾರ್ಯತಃ ಹಾನಿಕರವಾಗಿಯೇ ಪರಿಣಮಿಸುತ್ತವೆ. ಬಾಯಿಯಿಂದ ಖಾದಿಯೆಂದು ಮನೆಯಲ್ಲಿ ಮೆಂಚೆಸ್ಟರನ್ನು ತರಿಸಿದರೆ ಯಾವ ಲಾಭವೂ ಆಗಲಾರದು. ಚರಕ ಚರಕವೆಂದು ಸ್ತುತಿಯಾಗುತ್ತಿರುವಾಗಲೇ ಚರಕಗಳು ಮನೆ ಹೆಂಗಸರ ಕೈಯಿಂದ ಸೌದೆಯ ಉಪಯೋಗಕ್ಕೆ ಹೋಗಿ ಅತ್ಯಾಚಾರಕ್ಕೆ ಪಾತ್ರವಾಗುತ್ತಿದ್ದುವು. ಈ ಬಾರಿ ಅಂತಹ ಮಿಥ್ಯಾಚಾರವು ಇಲ್ಲದಿದ್ದುದು ಅಭಿನಂದನೀಯವಿದೆ.

ಮಂಜೂರಾದ ಠರಾವುಗಳು.

ಪ್ರಥಮ ಠರಾವು ರಿಸರ್ವೆಯ ವಿಷಯವಾಗಿದ್ದಿತು. ಜಿಲ್ಲೆಯ ಪ್ರಕೃತದ ಹಲವು ಸಮಸ್ಯೆಗಳಲ್ಲಿ ಇದು ಈಗಿನ ಮಟ್ಟಿಗೆ ಮೊದಲನೆಯದಾಗಿದೆ ಎಂಬುದು ನಿಸ್ಸಂದೇಹವಾಗಿದೆ. ಪರಾಣ, ಮೊಗಲರಾಯ ಆಳುವಿಕೆಯಲ್ಲಿ ಜನರಿಗೆ ತೆರಿಗೆಯು ಬಹು ಹೆಚ್ಚಿದ್ದಿತೆಂದು ಬ್ರಿಟಿಷ ಇತಿಹಾಸಕಾರರು ಅವರನ್ನು ದೂಡಲಿಸುತ್ತಿರುವರು. ಆದರೆ ಅವರ ತೆರಿಗೆಯನ್ನು ಈಗಿನ ಬ್ರಿಟಿಷ ಆಳುವಿಕೆಯೊಡನೆ ಸಂಹೋಲಿಸುವುದಾದರೆ ಬ್ರಿಟಿಷರೇ ತಲೆತಗ್ಗಿಸಬೇಕಾಗುವುದು. ರಿಸರ್ವೆ ವಿಷಯದಲ್ಲಿ ಜಿಲ್ಲೆಯೊಳಗೆ ಸ್ಥಿರವಾದ ಅಭಿಪ್ರಾಯವಿದೆ. ಆದುದರಿಂದ ಸರಕಾರವು ಜಿಲ್ಲೆಯ ಅಭಿಪ್ರಾಯಗಳನ್ನು ಮಾನಿಸುವುದು ಅಗತ್ಯವಿದೆ. ಕುಮ್ಕಿ ಸ್ಥಳಗಳ ವಿಷಯದ ಠರಾವು ಇನ್ನೊಂದು. ಇದು ಸಹ ಜನರಿಗೆ ಉಪಕಾರಿಯಾದುದೆನ್ನಬಹುದು. ಮೂರನೆಯದಾಗಿ ರಿಜರ್ವ ಕಾಡುಗಳ ವಿಷಯ. ಈ ವಿಚಾರವನ್ನು ತಿಳಿಯಲಿಕ್ಕೆ ಕಮಿಟಿ ನೇಮಕಮಾಡಬೇಕಾಗಿ ಸೂಚನೆಯೊಂದು. ಅಗತ್ಯವಿಲ್ಲದ ಕಾಡುಗಳನ್ನು ಕಡಿಯಬೇಕಾಗಿ ಸೂಚನೆಯೊಂದು; ಕ್ವೈನಿನನ್ನು ಧರ್ಮಾರ್ಥವಾಗಿ ಹಂಚಬೇಕಾಗಿ ಸೂಚನೆ ಮೂರು. ಕಾಡು ಕಡಿಯುವ ವಿಚಾರವನ್ನು ಕಮಿಟಿಯೇ ಮಾಡುತ್ತದುತ್ತಮವೆಂದು ನಾವು ಇಲ್ಲಿ ಸೂಚಿಸದಿರಲಾರೆವು. ಏಕೆಂದರೆ ಕಾಡುಗಳು ಜನರ ಉಪಯೋಗದ್ದು ಒಗ್ಗಿ ಬೇಕಾಗುತ್ತವೆ. ಸೌದೆ, ಮರ ಮೊದಲಾದುವುಗಳು ಈಗಲೇ ಬಹಳ ಪ್ರಿಯವಾಗಿವೆಯಾದುದರಿಂದ ಇನ್ನೂ ಕಾಡು ಕಡಿದರೆ ಈ ಅತೀ ಅತ್ಯಗತ್ಯದ ಸಾಮಾನುಗಳು ಸಿಕ್ಕುವುದು ದುರ್ಲಭವಾಗಬಹುದು. ರೈಲ್ವೆ ಮಾರ್ಗದ ನಿರ್ಮಾಣ ಮತ್ತು ರಸ್ತೆಗಳನ್ನು ಹೆಚ್ಚಿಸುವ ನಾಲ್ಕನೆಯ ಠರಾವು ಕೂಡ ಉತ್ತಮವಾದುದಾಗಿದೆ. ಈ ಎಲ್ಲಾ ಠರಾವುಗಳು ಇನ್ನೊಂದು ಕಡೆಯಲ್ಲಿ ಕೊಟ್ಟಿರುವುದರಿಂದ ನಾವು ಇಲ್ಲಿ ಎಲ್ಲವನ್ನು ಪುನರಾವರ್ತಿ ಕೊಡುವುದಿಲ್ಲ. ಮದ್ರಾಸು ಮಂತ್ರಿಮಂಡಲದ ಮೇಲಿನ ಅವಿಶ್ವಾಸದ ಠರಾವಿನಲ್ಲಿ ಆ ಅವಿಶ್ವಾಸದ ಕಾರಣವನ್ನು ತೋರಿಸಿದ್ದುದಾದರೆ ಉತ್ತಮವಿತ್ತು. ಸರಕಾರೀ ಹುದ್ದೆಗಳೊಳಗಿನ ಜಾತೀಯ ವಿಚಾರವನ್ನು ಕಾಂಗ್ರೆಸ್ಸಿನ ಈ ಪರಿಷತ್ತು ತೆಗೆದುಕೊಳ್ಳಬಹುದೊ, ಇದರಿಂದ ಸರಕಾರೀ ನೌಕರಿಯ ಸ್ವೀಕಾರದ ಒಪ್ಪಿಗೆಯು ಸೂಚಿಸಲ್ಪಡಬಹುದೊ ಎಂಬುದು ಆಲೋಚಿಸಲ್ಪಡತಕ್ಕುದಾಗಿದೆ. ಉಂಬಳಿಗಳ ಕಾನೂನಿನ ಬದಲಾವಣೆಗಾಗಿ ಒಂದು ಸಮಿತಿಯು ಏರ್ಪಟ್ಟಿದೆ; ಆದರೆ ಅದೇ ಠರಾವಿನಲ್ಲಿ ಆ ಸಮಿತಿಯು ಅನುಕರಿಸಬೇಕಾದ ಧೋರಣವನ್ನು ಸ್ಪಷ್ಟಪಡಿಸುವುದು ಅಗತ್ಯವಿತ್ತು. ಏಕೆಂದರೆ ಹಿಂದೂ ಮತದ ಹೆಸರಿನಲ್ಲಿ ದುಡ್ಡನ್ನು ಒಟ್ಟುಗೂಡಿ ಅದರ ಹೆಸರನ್ನು ಕೆಡಿಸಲು ಪ್ರಯತ್ನಿಸುವ ಮತ್ತು ಹಿಂದೂ ಧರ್ಮದ ಹೆಸರಿನಲ್ಲಿ ಜಾತೀಯ ದ್ವೇಷವನ್ನು ಹುಟ್ಟಿಸುವ ಕಾರ್ಯಗಳ ಪ್ರತಿರೋಧಕ ಯಾಗುವದಾದರೆ ಕಾಂಗ್ರೆಸ್ಸು ಹೊಣೆಯುಳ್ಳದಾಗುವುದೆಂದು ನಾವು ಸ್ಪಷ್ಟವಾಗಿ ಹೇಳಬೇಕಾಗುವುದು.

ಕಾಂಗ್ರೆಸ್ಸಿನ ಈಗಿನ ಧೋರಣವೇನು?

ನಾವು ಈ ಮೊದಲಿನ ಕಷ್ಟ ಪೂರ್ಣವಾಗಿ ಕಾರ್ಯಕಾರಿಯಲ್ಲದ ಠರಾವುಗಳನ್ನು ಖಂಡಿಸಿದೆವು; ಈ ಬಾರಿ ಮಂಜೂರಾದ ಠರಾವುಗಳ ಕಾರ್ಯಕಾರಿತೆಯನ್ನು ಪ್ರಶಂಸಿಸಿದೆವು. ಆದರೆ ಈ ಬದಲಾವಣೆಯು ಕಾಂಗ್ರೆಸ್ಸಿನ ಧ್ಯೇಯದ ಮೇಲೂ ಧೋರಣದ ಮೇಲೂ ಯಾವ ಪರಿಣಾಮವನ್ನುಂಟುಮಾಡುವುದೆಂಬುದನ್ನೂ ಆಲೋಚಿಸಲೆಳಸುವೆವು. ಈ ಬಾರಿ ಮಂಜೂರಾದ ಠರಾವುಗಳ ಉಪಯೋಗವು ಸರಕಾರವು ಅವನ್ನು ಮಾನಿಸುವುದಾದರೆ ಮಾತ್ರವೇ ಸಾಧ್ಯವಾಗಿದೆ. ಹಾಗಾದರೆ ಇವು ಸರಕಾರದ ಕಡೆಗಿನ ಬೇಡಿಕೆಗಳೇ? ಬೇಡಿಕೆಗಳು ಈಗಿನ ಕಾಂಗ್ರೆಸ್ ಧೋರಣಕ್ಕೆ ವಿರೋಧವಾಗಿದೆ; ಠರಾವುಗಳ ಶಬ್ದ ರಚನೆಯೂ ಬೇಡಿಕೆಯ ರೀತಿದ್ದಾಗಿರುವುದಿಲ್ಲ. ಹಾಗೆಂದು ಸರಕಾರವು ಅನುಕರಿಸಲೇ ಬೇಕೆಂಬ ಒತ್ತಾಯವಿರುವಷ್ಟು ಅಧಿಕಾರವು ಕಾಂಗ್ರೆಸ್ಸಿಗೆ ಇರುವುದಿಲ್ಲ. ಈ ರೀತಿಯಲ್ಲಿ ತರ್ಕಿಸಿದರೆ ಇಂತಹ ಠರಾವುಗಳಿಗೆ ಬೆಲೆಯಿಲ್ಲ ಬಹುದೆನ್ನಬೇಕಾಗುತ್ತದೆ. ಆದರೆ ಕಾಂಗ್ರೆಸ್ಸಿನ ಕಡೆಯಿಂದ ಲೆಜಿಸ್ಲೇಟಿವ್ ಕೌನ್ಸಿಲುಗಳಿಗೆ ಸದಸ್ಯರು ಆರಿಸಲ್ಪಡುವುದಾದುದರಿಂದ, ಈ ಠರಾವುಗಳು ಸರಕಾರದ ಕಡೆಗಿನ ಬೇಡಿಕೆಯಾಗಿರುವುದಕ್ಕಿಂತ ಕೌನ್ಸಿಲಿನ ಕಾಂಗ್ರೆಸ್ ಸದಸ್ಯರು ಅನುಸರಿಸಬೇಕಾದ ಸ್ಪಷ್ಟ ಧೋರಣವಾಗಿವೆಯೆಂದು ತಿಳಿದುಕೊಳ್ಳಬೇಕಾಗುವುದು. ಈ ಕಾರಣದಿಂದ ಕೌನ್ಸಿಲಿನ ಕಾಂಗ್ರೆಸ್ ಸದಸ್ಯರು ಈ ಠರಾವುಗಳನ್ನು ಜಾರಿಗೆ ತರುವ ಬಗ್ಗೆ ಕೌನ್ಸಿಲಿನಲ್ಲಿ ಸತತವೂ ಪ್ರಯತ್ನಪಡಬೇಕಾಗುವುದು. ನಮ್ಮ ಜಿಲ್ಲೆಯ ಕೌನ್ಸಿಲ್ ಸದಸ್ಯರು ಇದನ್ನು ಮನಸ್ಸಿನಲ್ಲಿಡುವರಾಗಿ ನಾವು ಆಶಿಸುವೆವು.

ಮೈಸೂರು ಪ್ರಾಂತ್ಯಕ್ಕೆ ಹಿಂದೂ ಮಹಾಸಭೆ!

ಹಿಂದೂ ಮಹಾಸಭೆಯೊಂದು ರಚಿಸಲಿಕ್ಕಾಗಿ ಕೆಲವು ಸಮಯದ ಹಿಂದೆ ಮೈಸೂರಲ್ಲಿ ಸೇರಿದ ಒಂದು ಸಭೆಯಲ್ಲಿ ನಡೆದ ಘಟನೆಗಳನ್ನು ನೋಡಿದರೆ ಹಿಂದೂಗಳ ಮುಂದಿನ ಗತಿಯ ವಿಷಯದಲ್ಲಿ ನಿರಾಶೆಯಾಗುತ್ತಿದೆ. ಹಿಂದೂಗಳೊಳಗೆ ಬ್ರಾಹ್ಮಣ ಬ್ರಾಹ್ಮಣೇತರರ ಭೇದವು ಹುಟ್ಟಿದ್ದು ಒಂದು ರೀತಿಯಲ್ಲಿ ಒಳ್ಳೆಯದೇ ಎನ್ನಬಹುದು. ಮದರಾಸು, ಮೈಸೂರು ಕಡೆಗಳಲ್ಲಿ ಬ್ರಾಹ್ಮಣರು ಬ್ರಾಹ್ಮಣೇತರರನ್ನು ತಮ್ಮ ಸ್ವಂತವೂ ಅಪಾರವೂ ಆದ ಸ್ವಾರ್ಥಕ್ಕಾಗಿ ಅಜ್ಞತೆಯಲ್ಲಿಟ್ಟ ಕ್ರಮವನ್ನು ನೋಡಿದರೆ ನಾವು ಬ್ರಾಹ್ಮಣರೇ ಆದರೂ ನಮಗೆ ನಾಚಿಕೆಯಾಗುವುದು. ಮಲೆಯಾಳದಲ್ಲಿ ನಂಬೂದಿರಿಗಳು ಅತ್ಯಂತ ಹೇಯವಾದ ಕ್ರಮಗಳನ್ನು ಮತದ ಹೆಸರಿನಲ್ಲಿ ನಡೆಸುತ್ತಿದ್ದರು. ಬ್ರಾಹ್ಮಣತ್ವವು ಒಂದು ಕಾಲದಲ್ಲಿ ಯಾವ ಸದುದ್ದೇಶಕ್ಕಾಗಿ ಏರ್ಪಟ್ಟಿದ್ದಿರಬಹುದಾದರೂ ಇತ್ತೀಚೆಗೆ ಸಹಿಸಲಸಾಧ್ಯವಾದ ಸ್ವಾರ್ಥಕ್ಕೆ ಪರಿವರ್ತಿಸಲ್ಪಟ್ಟಿದ್ದಿತು. ಆದುದರಿಂದ ಬ್ರಾಹ್ಮಣೇತರ ಚಳವಳವು ಹಿಂದೂಸಮಾಜವು ಪುನರ್ಸಂಘಟನೆಗಾಗಿಯೇ ಅತೀ ಅಗತ್ಯವಿದ್ದಿತು. ಹಿಂದೂ ಸಮಾಜದ ಏಳಿಗೆಗೆ ಬ್ರಾಹ್ಮಣೇತರ ಮತ್ತು ಅಸ್ಪೃಶ್ಯತಾ ನಿವಾರಣೆಯ ಚಳವಳಗಳೆರಡೂ ಬೇಕಾಗಿದ್ದುದರಿಂದಲೇ ಅವು ಬಲವನ್ನು ಹೊಂದಿದುವು. ಆದರೆ ಬ್ರಾಹ್ಮಣೇತರರು ಬ್ರಾಹ್ಮಣ ವಿದ್ವೇಷದಲ್ಲಿ ತಾವು ಹಿಂದೂಗಳೆಂಬುದನ್ನು ಮರೆತು ಬಿಡುವುದೇ ಈಗಿನ ಆ ಚಳವಳಗಳ ದುಃಖಕರವಾದ ಪರ್ಯವಸಾನವಾಗಿರುತ್ತದೆ. ಬ್ರಾಹ್ಮಣೇತರ ಜಾಗರಣವು ಈಗಾಗುವಂತೆ ಆಗುತ್ತಾ ಹೋದರೆ ಬ್ರಾಹ್ಮಣರು ತಾವಾಗಿ ಹಾದಿ ಬಿಟ್ಟುಕೊಡಬೇಕಾಗುವುದು. ಆದುದರಿಂದ ಇನ್ನೂ ಇನ್ನೂ ಬ್ರಾಹ್ಮಣರ ಮೇಲೆ ದ್ವೇಷವನ್ನು ಸಾಧಿಸಿ, ಬ್ರಾಹ್ಮಣರ ಮೇಲಿನ ದ್ವೇಷದಿಂದ ತಾವು ಹಿಂದುಗಳೇ ಅಲ್ಲವೆಂದು ಸಾಧಿಸುವಷ್ಟು ಮೇರೆ ಮೀರಿ ನಡೆಯದೆ ಇರುವುದು ಹಿತಕರವಿತ್ತು. ಮುಸಲ್ಮಾನರು ಬ್ರಾಹ್ಮಣೇತರ ಚಳವಳಿಯಲ್ಲಿ ಬ್ರಾಹ್ಮಣೇತರರೊಡನೆ ಸೇರುವರಾದರೂ ಮುಸಲ್ಮಾನ ಹಿತವು ಬಂದಲ್ಲಿ ಅವರಿಗೆ ಬ್ರಾಹ್ಮಣರೂ ಬ್ರಾಹ್ಮಣೇತರರೂ ಒಂದೇ ಆಗಿರುವರೆಂಬುದನ್ನು ಉತ್ತರ ಹಿಂದೂಸ್ಥಾನದೊಳಗಿನ ಘಟನಾವಳಿಗಳನ್ನು ನೋಡಿದರೆ ತಿಳಿಯುವುದು. ಮತ್ತು ಬ್ರಾಹ್ಮಣರು ಹಿಂದೂ ನಾಗರಿಕತೆಯನ್ನು ತಮ್ಮ ಅತೀ ಕ್ಷುದ್ರವಾದ ಸ್ವಾರ್ಥದಿಂದ ಸಂಕುಚಿತವಾಗಿ ಮಾಡಿರುವರಾದರೂ, ಅದರಲ್ಲಿರುವ ಅತ್ಯುಚ್ಚವಾದ ಅನುಭೂತಿಯು ಭೂಲೋಕದ ಇನ್ನಾವ ಮತದಲ್ಲಿಯೂ ಇಲ್ಲವಾದುದರಿಂದ, ಬ್ರಾಹ್ಮಣೇತರರು ಆಧುನಿಕ ಸಮಾನತೆಯ ಭಾವನೆಯ ಸಹಾಯದಿಂದ ಹಿಂದೂ ಸಮಾಜವನ್ನೂ ಮತವನ್ನೂ ಪುನರುಜ್ಜೀವಿಸುವುದು ಅಗತ್ಯವಾಗಿದೆ. ಬ್ರಾಹ್ಮಣೇತರರಿಲ್ಲವಾದರೆ ಹಿಂದೂ ಸಮಾಜವೇ ಇರುವುದಿಲ್ಲ. ಆದುದರಿಂದ ಮೈಸೂರಿನಲ್ಲಿ ನಡೆದ ಸಭೆಯಲ್ಲಿ ಎದ್ದ ಕೋಲಾಹಲವು ಅದಕ್ಕೆ ಸಂಬಂಧಪಟ್ಟವರೆಲ್ಲರಿಗೆ ಹಾನಿಕೊಡುವಂತಹುದುದಾಗಿದೆಯಲ್ಲದೆ, ಆ ಕೋಲಾಹಲವೇ ಮೈಸೂರಿಗೆ ಒಂದು ಹಿಂದೂ ಮಹಾಸಭೆಯು ಅಗತ್ಯವಿದೆಯೆಂದು ಸ್ಪಷ್ಟವಾಗಿ ತೋರಿಸುತ್ತಿದೆ.

ನೋಟಗಳು

NOTES

ನಮ್ಮ ಜಿಲ್ಲೆಯ ಪರಿಷತ್ತು [illegible] ಹಲವು ನಿರ್ಣಯಗಳೊಂದಿಗೆ ಮುಕ್ತಾಯ [illegible] ನಿರ್ಣಯದ ಫಲ ಇನ್ನು ಗೊತ್ತಾಗಲಿದ್ದ, ಕಾರ್ಯ [illegible] ಲಿಕ್ಕಿಲ್ಲ!

•

ಪರಿಷತ್ತಿನಲ್ಲಿ ಮದ್ರಾಸಿನ ಈಗಿನ ಮಂತ್ರಿಮಂಡಲದ ಮೇಲಿನ ವಿಶ್ವಾಸವು ಪೂರ್ಣ ಕೆಟ್ಟಿರುತ್ತದೆ. ಮಂತ್ರಿಗಳು ಕೂಡಲೆ ರಾಜೆ ಕೊಡುವಂತೆ ಸಭೆಯ ಅಭಿಪ್ರಾಯ. [illegible] ಸೂಚಿಸಿದಂತೆ ಮಂತ್ರಿಗಳು ರಾಜಿ ಕೊಟ್ಟರೆ, ಬಾಕಿ ಇನ್ನೊಂದು ಮಂತ್ರಿಗಳ ಚುನಾವಣೆಯ ಗೊಂದಲ.

•

ನಮ್ಮ ಜಿಲ್ಲೆಯ ಎಮ್. ಎಲ್. ಸಿ. ಯವರು ಮಂತ್ರಿಗಳ ಚುನಾವಣೆಯಾಗುವಲ್ಲಿ ತಯಾರಿರುವದು ಉತ್ತಮ.

•

ನಮ್ಮ ಇಂಡಿಯಕ್ಕೆ ತಿರುಗಿ ಬಂದ ಸೈಮನ್ ಸಾಹೇಬರಿಗೆ ಎಲ್ಲಿ ಹೋದರೂ ಮುಷ್ಕರದ ಸಭೆಗಳು, ಠರಾವುಗಳು, ಕಪ್ಪು ಸೂಚನೆಗಳೇ ಕಾಣುತ್ತಿವೆ.

•

ಮಂಗಳೂರಲ್ಲಿ ಹಲವು ಪತ್ರಿಕೆಗಳಿಗೆ ಇಂಗ್ಲಿಷನ್ನು ಬರೆದು ಕಳುಹಿಸುವ ಒಬ್ಬ ಮಹಾನುಭಾವರಿಗೆ ನಮ್ಮ ಬಂಧುವಾದ ನವಯುಗವು ಸ್ವದೇಶಾಭಿಮಾನಿಯಾಗಿ ಕಂಡಿರುತ್ತದೆ. ಇಷ್ಟು ಕಲಿತವರು ಆರು ಅಕ್ಷರವುಳ್ಳ ಶಬ್ದವನ್ನು ನಾಲ್ಕು ಅಕ್ಷರದ ಶಬ್ದಕ್ಕೆ ಮ್ಯಾನಸ್ ಮಾಡಿರುವರು. ಇದು ಸಾಯಂಕಾಲದ ಮಹಿಮೆ.

•

ಸದ್ಯದಲ್ಲೇ ಇಲ್ಲಿಯ ಪೋಲೀಸರ ಪೋಲಿಸ್ ಸ್ಪೋರ್ಟ್ಸ್ ನಡೆಯಲಿಕ್ಕಿದೆ. ಮಂತಿಗೆಗಾರರ "ದಿ ರೆಡಿ ವಿಥ್ ಕ್ಯಾಕ್"

ವಿದ್ಯಾಮಂತ್ರಿಗಳಿಗೆ ಖಾದಿಯ ಕೋಟು ಚಲ್ಲಣ, ತಲೆಗೊಂದು ಹ್ಯಾಟು. ಇದು ಏನನ್ನು ಸೂಚಿಸುತ್ತದೆ? ಅವರು ಸ್ವತಂತ್ರ ಪಕ್ಷದವರೆಂದು.

•

ಇದರಿಂದ ಇನ್ನೇನು ವ್ಯಕ್ತವಾಗುತ್ತದೆ? ಭಾರತೀಯರ ಕುದ್ಯಾಂತೀಕರಣ! ಇಂಗ್ಲೀಷರ ಒತ್ತಾಯದ ಆಡಳಿತ! ಅಂದರೆ ಹಿಂದೂಸ್ಥಾನದ ಸದ್ಯದ ವಾತಾವರಣವೇ ಅದರಿಂದ ಸ್ಪಷ್ಟವಾಗುತ್ತದೆ.

•

ಮಂತ್ರಿಗಳಿಗೆ ಬಾರೀ ಔತಣ! ಉಡುಪಿ ತಾ. ಬೋ. ಪ್ರೆಸಿಡೆಂಟರದ್ದು ಕಿಸೆಯ ದುಡ್ಡಿನಿಂದ! ಇಡೀ ದಿನ ಕಾದರೂ ದೊಂಬ್ಯಾಯಿಂದ "ಸ್ಪೆಶ್ಯಲ್ ಸಿಗರೇಟು" ಬರಲೇ ಇಲ್ಲವಂತೆ. ಪುಣ್ಯವಿಲ್ಲ ಯಾರಿಗೆ!.........ನಳಿಗೆ.

•

ಮಂತ್ರಿಗಳು ಹೋದ ಮೇಲೆ ಸಿಗರೇಟು ಪಾರ್ಸೆಲು ಬಂದಿರಬಹುದು.

•

ತುಳುತನಯರು—ಬಂಡಾಯ ಎಬ್ಬಿಸುವವರ ಪಟ್ಟಿಯಲ್ಲಿ ಮರಿದೆಂಡಿಯ ಹೆಸರನ್ನೂ ದಾಖಲ್ಮಾಡಿ ಕೊಂಡಿದ್ದಾರೆ. ಏನು ತುಳುವಿನ ಮೇಲಿನ ಅಭಿಮಾನ!

•

ಅಭಿಮಾನವು ಉದ್ವೇಗದಲ್ಲಿ ಕೊನೆಗಂಡಿತು. ಅಭಿಮಾನಿಗಳು ಹೇಳುತ್ತಾರೆ—ತುಳುನಾಡು ವಿಷಯದ ಠರಾವು ಪಾಸಾಗಲಿ, ಪಾಸಾಗದಿರಲಿ, ಅದನ್ನು ನಾವು ಲಕ್ಷಿಸುವುದಿಲ್ಲ. ಆದರೆ ಪರಿಕ್ಷಾರ್ಥವಾಗಿ ಮುಂದೆ ತಂದುದು— ಎಂದು, ಹೇಳಿದ್ದು ಎಲ್ಲಿ ಬಲ್ಲಿರಾ? ಜಿಲ್ಲಾ ಪರಿಷತ್ತಿನಲ್ಲಿ!

•

ತುಳುನಾಡು ಠರಾವನ್ನು ಹೋಗುವಾಗ ಕೊಂಡು ಹೋದರು, ಬರುವಾಗ ಹಿಂದೆ ತಂದರು; ಅಂತೂ ಠರಾವು ಸುರಕ್ಷಿತವಾಗಿ ಅವರ ಹತ್ತಿರವೇ ಉಳಿಯಿತು!

•

ಈ ಠರಾವು ಬಿದ್ದುಹೋದುದರಿಂದ ತುಳು ಮಹಾಸಭೆಯವರಿಗೆ ಸಂತೋಷವಾಗುವದಿದ್ದರೆ ಮರಿದುಂಡಿಗೂ ಆನಂದವೆ! ದುಃಖವಾಗುವುದಿದ್ದರೆ ಅವನಿಗೂ ಹಾಗೆಯೇ.

•

ಅಂತೂ ಇಂತೂ ಪರೀಕ್ಷೆಯೊಂದಾಯಿತು.

ಉಡುಪಿ,
21—11—28.

"ಮರಿದುಂಡಿ"

ಶ್ರೀ ... ವನವಾರದಿಂದ ವಿಭವ ಸಂವತ್ಸರದ ಅಶ್ವೀಜ ... ಶುಕ್ರವಾರದ ವರೆಗಿನ ಪಂಚಾಂಗ.

(ಗಾಂಬಲನೆಯ ವೃಶ್ಚಿಕ (ಚಾರ್ಟ)

ದಿನಾಂಕ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ
24	[illegible]	[illegible]	[illegible]	ರೇವತೀ	[illegible]	[illegible]	6.36	6 0
25	[illegible]	[illegible]	[illegible]	ಅಶ್ವಿನೀ	[illegible]	[illegible]	6.37	6 1
26	[illegible]	[illegible]	[illegible]	ಭರಣೀ	[illegible]	[illegible]	6.37	6 1
27	[illegible]	●	[illegible]	ಕೃತ್ತಿಕಾ	[illegible]	[illegible]	6.38	6. 1
28	ಬುಧ	[illegible]	[illegible]	ರೋಹಿಣೀ	[illegible]	[illegible]	6.3[illegible]	6. 1
28	ಗುರು	[illegible]	[illegible]	ಮೃಗಶಿರಾ	[illegible]	[illegible]	6.39	6. 1
30	ಶುಕ್ರ	[illegible]	[illegible]	ಆರ್ದ್ರಾ	[illegible]	[illegible]	6.4[illegible]	6. 1

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature ಉಷ್ಣ (ಕಾವು) Maximum	ಹೆಚ್ಚಾದದ್ದು	Minimum	ಕಡಿಮೆ	Rainfall ಮಳೆ ದಿವಸ ಮಳೆ	ಒಟ್ಟು ಮಳೆ
16	88— 8		72— 6		—	-
17	88— 7		73— 3		- -	—
18	89— 0		75— 6		—	—
19	89— 3		75— 7		—	—
20	90— 8		77— 2		0—08	-
21	88— 8		75— 8		0—03	-
22	93— 6		74— 3		—	— 124-58

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮಸ್ತಿ	...	7— 12	8 — 12
ಗುಡ್ಡು	...	7 — 4	7— 8
ಸುಗ್ಗಿ	...	6 — 12	7— 6
ರಾಶಿ	...	6 — 8	7— 8
ಊರ ಅವ್ವಲ್ ಬೆಳ್ತಿಗೆ	...	7 — 8	8 — 14
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	...	12 — 8	—
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ	...	7 — 6	7 — 12
ಗೋಧಿ ಗೋಣಿ ಗಳ್ಳೆ	...	18 — 0	19 — 0
ಹುರಳಿ ಗೋಣಿ ಗಳ್ಳೆ	...	7 — 8	9 — 8
ಕಡಲೆ ಗೋಣಿ ಗಳ್ಳೆ	...	13 — 12	16 — 8
ತೊಗರಿ ಗೋಣಿ ಗಳ್ಳೆ	...	14 — 8	15 — 8
ತೊಗರಿಬೇಳೆ ಗೋಣಿ ಗಳ್ಳೆ	...	18 — 0	25 — 0
ಉದ್ದು ಗೋಣಿ ಗಳ್ಳೆ	...	14 — 8	15
ಹೆಸರು ಗೋಣಿ ಗಳ್ಳೆ	...	13 — 0	14 —
ಊರು ಬೆಲ್ಲ ಖಂಡಿ ಗಳ್ಳೆ	...	60 — 0	65
ಉಪ್ಪು ಗೋಣಿ ಗಳ್ಳೆ	...	4 — 8	4 — 12
ಬೊಂಬಾಯಿ ಖಂಡಿ ಗಳ್ಳೆ	...	130 0	—
ಕೊಬ್ರಿ ಹಿಂಡಿ ಖಂಡಿ ಗಳ್ಳೆ	...	47 — 8	49 — 8
ಎಳ್ಳಿಂಡಿ ಖಂಡಿ ಗಳ್ಳೆ	...	35 — 8	47 — 8
ಕೊಬ್ರಿ ಎಣ್ಣೆ ಮುಡಿ ಗಳ್ಳೆ	...	7 — 10	7 12
ಎಳ್ಳೆಣ್ಣೆ ಮುಡಿ ಗಳ್ಳೆ	...	8 — 0	8 — 6
ಬಿದುರೆಣ್ಣೆ ಪೆಟ್ಟಿಗೆ ಗಳ್ಳೆ	...	7 — 2	7 4
ನೆಲಗಡಲೆ ಸಕ್ಕರೆ ಮುಡಿ ಗಳ್ಳೆ	...	3 — 11	3 — 12
ಹೊಸ ಮೆಣಸು	...	6 — 0	—
ಹೊಸ ಊರ ಮೆಣಸಿನಕಾಯಿ ಮುಡಿ ಗಳ್ಳೆ		3 — 4	6 — 0
ಸಾಸಿವೆ ಮುಡಿ ಗಳ್ಳೆ	...	8 — 8	8 12
ಕೊತ್ತುಂಬರಿ ಮುಡಿ ಗಳ್ಳೆ	...	5 — 4	5 8
ನೇಟಿವ್ ಕೆಟರಿ ಕಾಫಿ ಖಂಡಿ ಗಳ್ಳೆ	...	325 — 0	400 — 0
ಪ್ಲಾಂಟೇಷನ್ ಅಡಿಕೆ ಖಂಡಿ ಗಳ್ಳೆ	...	170 — 0	205 — 0
ಕಾಳುಮೆಣಸು ಖಂಡಿ ಗಳ್ಳೆ	...	525 — 4	526 — 8
ಮೆಂತ್ಯೆ ಮುಡಿ ಗಳ್ಳೆ	...	52 — 0	54 — 8
ಗೇರುಬೀಜ ಮುಡಿ ಗಳ್ಳೆ	...	3 — 4	3 — 8
[illegible] ಖಂಡಿ ಗಳ್ಳೆ	...	40 — 0	42 — 8
ಹಾಂಬ್ರ ಹಗ್ಗ ಗಳ್ಳೆ	...	16 — 8	16 — 12
ಹಾಂಬ್ರ [illegible] ಮುಡಿ ಗಳ್ಳೆ	...	21 — 0	22 —
[illegible] ಗಳ್ಳೆ	...	16 — 0	—
[illegible] ಮುಡಿ ಗಳ್ಳೆ	...	14 — 3	16 — 8
ಹಸಿ [illegible] ಗಳ್ಳೆ	—	13—7—6	—
[illegible] ಖಂಡಿ ಗಳ್ಳೆ	...	70 —	85 — 0

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯ ವಾಗಲಿ ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ್ಯ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕ, ಇವುಗಳನ್ನು ಪರಿಹಾರವಾಡುವ ಮತ್ತು ನಿವಾರಣೆವಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0

ಇವನ್ನು ಸೇವಿಸುವುದೇ.

ರಾಜವೈದ್ಯ, ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ವಿ. ಗೂಲನ್ ವಾರ್ಟರ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ



ತಯಾರಾಗಿವೆ ತಯಾರಾಗಿವೆ!!

ಕಾಫಿ ಪ್ಲಾಂಟರರಿಗೂ, ತೋಟದವರಿಗೂ

ಬೇಕಾಗುವಂತಹ

ಚಕ್ ರೋಲ್ ಗಳು

ಮೂರು ಸ್ಸೈಜಿನಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಣ ವಿಳಾಸಕ್ಕೆ ಬರೆಯಿರಿ

ಮೆನೇಜರ್.
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಶೀಘ್ರ ... ಫಲಪ್ರದ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡು (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡು (S.I.R.)

[illegible] ವೈದ್ಯ ಶಾಲೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ' ... ಪ್ರಸಿದ್ಧರಾದ 'ಶ್ರೀ ವೈದ್ಯರತ್ನ ...' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ... ಈ ಸ್ಥಾಪನೆ ... ಆಬಾಲವೃದ್ಧರಿಗೆ ಬೇಕಾದ ... ಸಕಲ ತರದ ರೋಗಗಳನ್ನು ... ಚಿಕಿತ್ಸೆ ... ಎಲ್ಲಾ ತರದ ... ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ... ತಯಾರ ... [illegible] ರೋಗಿಗಳು ... ರೋಗದ ವಿವರವಾದ ಲಕ್ಷಣಗಳು, ... ಆಹಾರದ ಕ್ರಮ, ... ಪದಾರ್ಥಗಳ ಅಭ್ಯಾಸ ... ಚಿಕಿತ್ಸೆ ... ರೋಗಿಯು ... ಎಂಬ ... [illegible] ... ಚಿಕಿತ್ಸೆ ... ವೈದ್ಯಶಾಲೆಯು ... [illegible]

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡು (ದ. ಕ.)

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(19[illegible]ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ... 1860ನೇ ಇಸವಿಯ XXIನೇ ಆಕ್ಟಿನ ಮೂಲಕ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಶುದ್ಧ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ ಫಾರ್ಮಸಿಯಲ್ಲಿ ಶಾಸ್ತ್ರರೀತ್ಯಾ ತಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟವಾಡಿ ಹುಟ್ಟುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ನಡೆಸುವ ಬಗ್ಗೆ ವಿನಿಯೋಗಿಸಲ್ಪಡುತ್ತವೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯ್ಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೂ ನಮ್ಮಲ್ಲಿ ತಯ್ಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೂ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಸೆಕ್ರಿಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

ಸ್ಥಳಿಕ ವಿಚಾರಗಳು

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು.

ದಕ್ಷಿಣ ಕನ್ನಡ ಜಿಲ್ಲಾ ಐದನೇ ಪರಿಷತ್ತು ಶ್ರೀ. ನರಿಮನರ ಅಧ್ಯಕ್ಷತೆಯಲ್ಲಿ ಜರಗಿ ಮುಗಿಯಿತು. ಶ್ರೀ. ನರಿಮನರೆಂದರೆ ಸಾಧಾರಣ ಈಗ ಎಲ್ಲರಿಗೂ ಪರಿಚಿತರು. ಇವರು ಈಗಿನ ತರುಣ ಧುರೀಣರಾಗಿದ್ದು ಹಿಂದೀ ರಾಷ್ಟ್ರೀಯ ತಾರುಣ್ಯದಲ್ಲಿ ಉತ್ಸಾಹವನ್ನು ಸುರುತ್ತಿರುವರು. ಇವರ ಭಾಷಣದ ಸಾರಾಂಶವು ಇನ್ನೊಂದು ಕಡೆ ಕೊಡಲ್ಪಟ್ಟಿಯದೆ. ಪರಿಷತ್ತಿನಲ್ಲಿ ಮಂಜೂರಾದ ಠರಾವುಗಳನ್ನು ನೋಡಿದರೆ ಅಸಹಕಾರ ಸಮಯದ ಸಂಪೂರ್ಣ ವಿಸ್ಮೃತಿಯು ಕಂಡುಬರುತ್ತದೆ. ಖಾದಿಯ ಹೆಸರು ಎಲ್ಲಿಯೂ ಕಂಡುಬರುವುದಿಲ್ಲ; ಅಲ್ಲದೆ ವಿಧಾಯಕ ಕಾರ್ಯಕ್ರಮದ ಇತರ ವಿಧಾನಗಳಿಗೂ ಪ್ರಾಮುಖ್ಯತೆಯು ತೋರಿಬರುವುದಿಲ್ಲ. ಮಹಾತ್ಮಾಜೀಯವರಿಂದ ಪ್ರೇರಿಸಲ್ಪಟ್ಟ ಆ ಹಿಂದಿನ ಆದರ್ಶಗಳು ಮೆಲ್ಲನೆ ರಾಜಕೀಯ ರಂಗದಿಂದ ಸರಿದುಹೋಗುವಂತೆ ಕಾಣುತ್ತಿದೆ. ನಮ್ಮ ಮನಸ್ಸಿಗೆ ಇದು ಶುಭಚಿಹ್ನೆಯೆಂದೇ ಕಾಣುತ್ತಿದೆ. ಮಿಥ್ಯಾಚಾರವನ್ನು ಪ್ರೇರಿಸುವ ಠರಾವುಗಳು ತತ್ವತಃ ಎಷ್ಟೇ ಮಹತ್ವದ್ದಿರಬಹುದಾದರೂ ಕಾರ್ಯತಃ ಹಾನಿಕರವಾಗಿಯೇ ಪರಿಣಮಿಸುತ್ತವೆ. ಆಯಿಯುಂದ ಖಾದಿಯೆಂದು ಮನೆಯಲ್ಲಿ ಪೆಂಠಸ್ಪರನ್ನು ತರಿಸಿದರೆ ಯಾವ ಲಾಭವೂ ಆಗಲಾರದು. ಚರಕ ಚರಕವೆಂದು ಸ್ತುತಿಯಾಗುತ್ತಿರುವಾಗಲೇ ಚರಕಗಳು ಮನೆ ಹೆಂಗಸರ ಕೈಯಿಂದ ಸೌದೆಯ ಉಪಯೋಗಕ್ಕೆ ಹೋಗಿ ಅತ್ಯಾಚಾರಕ್ಕೆ ಪಾತ್ರವಾಗುತ್ತಿದ್ದುವು. ಈ ಬಾರಿ ಅಂತಹ ಮಿಥ್ಯಾಚಾರವು ಇಲ್ಲದಿದ್ದುದು ಅಭಿನಂದನೀಯವಿದೆ.

ಮಂಜೂರಾದ ಠರಾವುಗಳು.

ಪ್ರಥಮ ಠರಾವು ರಿಸರ್ವೆಯ ವಿಷಯವಾಗಿದ್ದಿತು. ಜಿಲ್ಲೆಯ ಪ್ರಕೃತದ ಹಲವು ಸಮಸ್ಯೆಗಳಲ್ಲಿ ಇದು ಈಗಿನ ಮಟ್ಟಿಗೆ ಮೊದಲನೆಯದಾಗಿದೆ ಎಂಬುದು ನಿಸ್ಸಂದೇಹವಾಗಿದೆ. ಪಠಾಣ, ಮೊಗಲರಾಯ ಆಳುವಿಕೆಯಲ್ಲಿ ಜನರಿಗೆ ತೆರಿಗೆಯು ಬಹು ಹೆಚ್ಚಿದ್ದಿತೆಂದು ಬ್ರಿಟಿಷ ಇತಿಹಾಸಕಾರರು ಅವರನ್ನು ಮೂದಲಿಸುತ್ತಿರುವರು. ಆದರೆ ಅವರ ತೆರಿಗೆಯನ್ನು ಈಗಿನ ಬ್ರಿಟಿಷ ಆಳುವಿಕೆಯೊಡನೆ ಸರಿಹೋಲಿಸುವುದಾದರೆ ಬ್ರಿಟಿಷರೇ ತಲೆತಗ್ಗಿಸಬೇಕಾಗುವುದು. ರಿಸರ್ವೆ ವಿಷಯದಲ್ಲಿ ಜಿಲ್ಲೆಯೊಳಗೆ ಸ್ಥಿರವಾದ ಅಭಿಪ್ರಾಯವಿದೆ. ಆದುದರಿಂದ ಸರಕಾರವು ಜಿಲ್ಲೆಯ ಅಭಿಪ್ರಾಯಗಳನ್ನು ಮಾನಿಸುವುದು ಅಗತ್ಯವಿದೆ. ಕುಮ್ಕಿ ಸ್ಥಳಗಳ ವಿಷಯದ ಠರಾವು ಇನ್ನೊಂದು. ಇದು ಸಹ ಜನರಿಗೆ ಉಪಕಾರಿಯಾದುದೆನ್ನಬಹುದು. ಮೂರನೆಯದಾಗಿ ರಿಜರ್ವ ಕಾಡುಗಳ ವಿಷಯ. ಈ ವಿಚಾರವನ್ನು ತಿಳಿಯುಲಿಕ್ಕೆ ಕಮಿಟಿ ನೇಮಕವಾಗಬೇಕಾಗಿ ಸೂಚನೆಯೊಂದು. ಅಗತ್ಯವಿಲ್ಲದ ಕಾಡುಗಳನ್ನು ಕಡಿಯಬೇಕಾಗಿ ಸೂಚನೆಯೊಂದು; ಕೈನಿನನ್ನು ಧರ್ಮಾರ್ಥವಾಗಿ ಹಂಚಬೇಕಾಗಿ ಸೂಚನೆ ಮೂರು. ಕಾಡು ಕಡಿಯುವ ವಿಚಾರವನ್ನು ಕಮಿಟಿಯೇ ಮಾಡುವುದುತ್ತಮವೆಂದು ನಾವು ಇಲ್ಲಿ ಸೂಚಿಸದಿರಲಾರೆವು. ಏಕೆಂದರೆ ಕಾಡುಗಳು ಜನರ ಉಪಯೋಗದ ಬಗ್ಗೆ ಬೇಕಾಗುತ್ತವೆ. ಸೌದೆ, ಮರ ಮೊದಲಾದುವುಗಳು ಈಗಲೇ ಬಹಳ ಪ್ರಿಯವಾಗಿವೆಯಾದುದರಿಂದ ಇನ್ನೂ ಕಾಡು ಕಡಿದರೆ ಈ ಅತೀ ಅತ್ಯಗತ್ಯದ ಸಾಮಾನುಗಳು ಸಿಕ್ಕುವುದು ದುರ್ಲಭವಾಗಬಹುದು. ರೈಲ್ವೆ ಮಾರ್ಗದ ನಿರ್ಮಾಣ ಮತ್ತು ರಸ್ತೆಗಳನ್ನು ಹೆಚ್ಚಿಸುವ ನಾಲ್ಕನೆಯ ಠರಾವು ಕೂಡ ಉತ್ತಮವಾದುದಾಗಿದೆ. ಈ ಎಲ್ಲಾ ಠರಾವುಗಳು ಇನ್ನೊಂದು ಕಡೆಯಲ್ಲಿ ಕೊಟ್ಟಿರುವುದರಿಂದ ನಾವು ಇಲ್ಲಿ ಎಲ್ಲವನ್ನು ಪುನರಾವರ್ತಿ ಕೊಡುವುದಿಲ್ಲ. ಮದ್ರಾಸು ಮಂತ್ರಿಮಂಡಲದ ಮೇಲಿನ ಅವಿಶ್ವಾಸದ ಠರಾವಿನಲ್ಲಿ ಆ ಅವಿಶ್ವಾಸದ ಕಾರಣವನ್ನು ತೋರಿಸಿದ್ದು ಬಿಟ್ಟರೆ ಉತ್ತಮವಿತ್ತು. ಸರಕಾರೀ ಹುದ್ದೆಗಳೊಳಗಿನ ಜಾತೀಯ ವಿಚಾರವನ್ನು ಕಾಂಗ್ರೆಸ್ಸಿನ ಈ ಪರಿಷತ್ತು ತೆಗೆದುಕೊಳ್ಳಬಹುದೊ, ಇದರಿಂದ ಸರಕಾರೀ ನೌಕರಿಯ ಸ್ವೀಕಾರದ ಒಪ್ಪಿಗೆಯು ಸೂಚಿಸಲ್ಪಡಬಹುದೊ ಎಂಬುದು ಆಲೋಚಿಸಲ್ಪಡತಕ್ಕದ್ದಾಗಿದೆ. ಉಂಬಳಿಗಳ ಕಾನೂನಿನ ಬದಲಾವಣೆಗಾಗಿ ಒಂದು ಸಮಿತಿಯು ಏರ್ಪಟ್ಟಿದೆ; ಆದರೆ ಅದೇ ಠರಾವಿನಲ್ಲಿ ಆ ಸಮಿತಿಯು ಅನುಕರಿಸಬೇಕಾದ ಧೋರಣವನ್ನು ಸ್ಪಷ್ಟಪಡಿಸುವುದು ಅಗತ್ಯವಿತ್ತು. ಏಕೆಂದರೆ ಹಿಂದೂ ಮತದ ಹೆಸರಿನಲ್ಲಿ ದುಡ್ಡನ್ನು ಒಟ್ಟುಗೂಡಿ ಅದರ ಹೆಸರನ್ನು ಕೆಡಿಸಲು [illegible] ಕಾಂಗ್ರೆಸ್ಸು [illegible] ಯಾರುಕ್ಕಾವರೆ ಕಾಂಗ್ರೆಸ್ಸು ಜವಾಬ್ದಾರಿಯಾಗುವುದೆಂದು ನಾವು ಸ್ಪಷ್ಟವಾಗಿ ಹೇಳಬೇಕಾಗುವುದು.

ಕಾಂಗ್ರೆಸ್ಸಿನ ಈಗಿನ ಧೋರಣವೇನು?

ನಾವು ಈ ಮೊದಲಿನ ತಪ್ಪು ಪೂರ್ಣವಾಗಿ ಕಾರ್ಯಕಾರಿಯಲ್ಲದ ಠರಾವುಗಳನ್ನು ಖಂಡಿಸಿದೆವು; ಈ ಬಾರಿ ಮಂಜೂರಾದ ಠರಾವುಗಳ ಕಾರ್ಯಕಾರಿತೆಯನ್ನು ಪ್ರಶಂಸಿಸಿದೆವು. ಆದರೆ ಈ ಬದಲಾವಣೆಯು ಕಾಂಗ್ರೆಸ್ಸಿನ ಧ್ಯೇಯದ ಮೇಲೂ ಧೋರಣದ ಮೇಲೂ ಯಾವ ಪರಿಣಾಮವನ್ನುಂಟುಮಾಡುವುದೆಂಬುದನ್ನೂ ಆಲೋಚಿಸಲೆಳಸುವೆವು. ಈ ಬಾರಿ ಮಂಜೂರಾದ ಠರಾವುಗಳ ಉಪಯೋಗವು ಸರಕಾರವು ಅವನ್ನು ಮಾನಿಸುವುದಾದರೆ ಮಾತ್ರವೇ ಸಾಧ್ಯವಾಗಿದೆ. ಹಾಗಾದರೆ ಇವು ಸರಕಾರದ ಕಡೆಗಿನ ಬೇಡಿಕೆಗಳೇ? ಬೇಡಿಕೆಗಳು ಈಗಿನ ಕಾಂಗ್ರೆಸ್ ಧೋರಣಕ್ಕೆ ವಿರೋಧವಾಗಿದೆ; ಠರಾವುಗಳ ಶಬ್ದ ರಚನೆಯೂ ಬೇಡಿಕೆಯ ರೀತಿದ್ದಾಗಿರುವುದಿಲ್ಲ. ಹಾಗೆಂದು ಸರಕಾರವು ಅನುಕರಿಸಲೇ ಬೇಕೆಂಬ ಒತ್ತಾಯವಿರುವಷ್ಟು ಅಧಿಕಾರವು ಕಾಂಗ್ರೆಸ್ಸಿಗೆ ಇರುವುದಿಲ್ಲ. ಈ ರೀತಿಯಲ್ಲಿ ತರ್ಕಿಸಿದರೆ ಇಂತಹ ಠರಾವುಗಳಿಗೆ ಬೆಲೆಯಿಲ್ಲ ಬಹುದೆನ್ನಬೇಕಾಗುತ್ತದೆ. ಆದರೆ ಕಾಂಗ್ರೆಸ್ಸಿನ ಕಡೆಯಿಂದ ಲೆಜಿಸ್ಲೇಟಿವ್ ಕೌನ್ಸಿಲುಗಳಿಗೆ ಸದಸ್ಯರು ಆರಿಸಲ್ಪಡುವುದಾದುದರಿಂದ, ಈ ಠರಾವುಗಳು ಸರಕಾರದ ಕಡೆಗಿನ ಬೇಡಿಕೆಯಾಗಿರುವುದಕ್ಕಿಂತ ಕೌನ್ಸಿಲಿನ ಕಾಂಗ್ರೆಸ್ ಸದಸ್ಯರು ಅನುಸರಿಸಬೇಕಾದ ಸ್ಪಷ್ಟ ಧೋರಣವಾಗಿವೆಯೆಂದು ತಿಳಿದುಕೊಳ್ಳಬೇಕಾಗುವುದು. ಈ ಕಾರಣದಿಂದ ಕೌನ್ಸಿಲಿನ ಕಾಂಗ್ರೆಸ್ ಸದಸ್ಯರು ಈ ಠರಾವುಗಳನ್ನು ಜಾರಿಗೆ ತರುವ ಬಗ್ಗೆ ಕೌನ್ಸಿಲಿನಲ್ಲಿ ಸತತವೂ ಪ್ರಯತ್ನಪಡಬೇಕಾಗುವುದು. ನಮ್ಮ ಜಿಲ್ಲೆಯ ಕೌನ್ಸಿಲ್ ಸದಸ್ಯರು ಇದನ್ನು ಮನಸ್ಸಿನಲ್ಲಿಡುವರಾಗಿ ನಾವು ಆಶಿಸುವೆವು.

ಮೈಸೂರು ಪ್ರಾಂತ್ಯಕ್ಕೆ ಹಿಂದೂ ಮಹಾಸಭೆ!

ಹಿಂದೂ ಮಹಾಸಭೆಯೊಂದು ರಚಿಸಲಿಕ್ಕಾಗಿ ಕೆಲವು ಸಮಯದ ಹಿಂದೆ ಮೈಸೂರಲ್ಲಿ ಸೇರಿದ ಒಂದು ಸಭೆಯಲ್ಲಿ ನಡೆದ ಘಟನೆಗಳನ್ನು ನೋಡಿದರೆ ಹಿಂದೂಗಳ ಮುಂದಿನ ಗತಿಯ ವಿಷಯದಲ್ಲಿ ಸಂಶಯವಾಗುತ್ತಿದೆ. ಹಿಂದೂಗಳೊಳಗೆ ಬ್ರಾಹ್ಮಣ ಬ್ರಾಹ್ಮಣೇತರರ ಭೇದವು ಹುಟ್ಟಿದ್ದು ಒಂದು ರೀತಿಯಲ್ಲಿ ಒಳ್ಳೆಯದೇ ಎನ್ನಬಹುದು. ಮದರಾಸು ಮೈಸೂರು ಕಡೆಗಳಲ್ಲಿ ಬ್ರಾಹ್ಮಣರು ಬ್ರಾಹ್ಮಣೇತರರನ್ನು ತಮ್ಮ ಸ್ವಂತವೂ ಅಪಾರವೂ ಆದ ಸ್ವಾರ್ಥಕ್ಕಾಗಿ ಅಜ್ಞತೆಯಲ್ಲಿಟ್ಟ ಕ್ರಮವನ್ನು ನೋಡಿದರೆ ನಾವು ಬ್ರಾಹ್ಮಣರೇ ಆದರೂ ನಮಗೆ ನಾಚಿಕೆಯಾಗುವುದು. ಮಲೆಯಾಳದಲ್ಲಿ ನಂಬೂದಿರಿಗಳು ಅತ್ಯಂತ ಹೇಯವಾದ ಕ್ರಮಗಳನ್ನು ಮತದ ಹೆಸರಿನಲ್ಲಿ ನಡೆಸುತ್ತಿದ್ದರು. ಬ್ರಾಹ್ಮಣತ್ವವು ಒಂದು ಕಾಲದಲ್ಲಿ ಯಾವ ಸದುದ್ದೇಶಕ್ಕಾಗಿ ಏರ್ಪಟ್ಟಿದ್ದಿರಬಹುದಾದರೂ ಇತ್ತೀಚೆಗೆ ಸಹಿಸಲಸಾಧ್ಯವಾದ ಸ್ವಾರ್ಥಕ್ಕೆ ಪರಿವರ್ತಿಸಲ್ಪಟ್ಟಿದ್ದಿತು. ಆದುದರಿಂದ ಬ್ರಾಹ್ಮಣೇತರ ಚಳವಳವು ಹಿಂದೂಸಮಾಜವು ಪುನರ್ಸಂಘಟನೆಗಾಗಿಯೇ ಅತೀ ಅಗತ್ಯವಿದ್ದಿತು. ಹಿಂದೂ ಸಮಾಜದ ಏಳಿಗೆಗೆ ಬ್ರಾಹ್ಮಣೇತರ ಮತ್ತು ಅಸ್ಪೃಶ್ಯತಾ ನಿವಾರಣೆಯ ಚಳವಳಗಳೆರಡೂ ಬೇಕಾಗಿದ್ದುದರಿಂದಲೇ ಅವು ಬಲವನ್ನು ಹೊಂದಿದುವು. ಆದರೆ ಬ್ರಾಹ್ಮಣೇತರರು ಬ್ರಾಹ್ಮಣ ವಿದ್ವೇಷದಲ್ಲಿ ತಾವು ಹಿಂದೂಗಳೆಂಬುದನ್ನು ಮರೆತು ಬಿಡುವುದೇ ಈಗಿನ ಈ ಚಳವಳಗಳ ದುಃಖಕರವಾದ ಪರ್ಯವಸಾನವಾಗಿರುತ್ತದೆ. ಬ್ರಾಹ್ಮಣೇತರ ಜಾಗರಣವು ಈಗಾಗುವಂತೆ ಆಗುತ್ತಾ ಹೋದರೆ ಬ್ರಾಹ್ಮಣರು ತಾವಾಗಿ ಹಾದಿ ಬಿಟ್ಟುಕೊಡಬೇಕಾಗುವುದು. ಆದುದರಿಂದ ಇನ್ನೂ ಇನ್ನೂ ಬ್ರಾಹ್ಮಣರ ಮೇಲೆ ದ್ವೇಷವನ್ನು ಸಾಧಿಸಿ, ಬ್ರಾಹ್ಮಣರ ಮೇಲಿನ ದ್ವೇಷದಿಂದ ತಾವು ಹಿಂದುಗಳೇ ಅಲ್ಲವೆಂದು ಸಾಧಿಸುವಷ್ಟು ಮೇರೆ ಮೀರಿ ನಡೆಯದೆ ಇರುವುದು ಹಿತಕರವಿತ್ತು. ಮುಸಲ್ಮಾನರು ಬ್ರಾಹ್ಮಣೇತರ ಚಳವಳಿಯಲ್ಲಿ ಬ್ರಾಹ್ಮಣೇತರರೊಡನೆ ಸೇರುವರಾದರೂ ಮುಸಲ್ಮಾನ ಹಿತವು ಬಂದಲ್ಲಿ ಅವರಿಗೆ ಬ್ರಾಹ್ಮಣರೂ ಬ್ರಾಹ್ಮಣೇತರರೂ ಒಂದೇ ಆಗಿರುವರೆಂಬುದನ್ನು ಉತ್ತರ ಹಿಂದೂಸ್ಥಾನದೊಳಗಿನ ಘಟನಾವಳಿಗಳನ್ನು ನೋಡಿದರೆ ತಿಳಿಯುವುದು. ಮತ್ತು ಬ್ರಾಹ್ಮಣರು ಹಿಂದೂ ನಾಗರಿಕತೆಯನ್ನು ತಮ್ಮ ಅತೀ ಕ್ಷುದ್ರವಾದ ಸ್ವಾರ್ಥದಿಂದ ಸಂಕುಚಿತವಾಗಿ ಮಾಡಿರುವರಾದರೂ, ಅದರಲ್ಲಿರುವ ಅತ್ಯುಚ್ಚವಾದ ಅನುಭೂತಿಯು ಭೂಲೋಕದ ಇನ್ನಾವ ಮತದಲ್ಲಿಯೂ ಇಲ್ಲವಾದುದರಿಂದ, ಬ್ರಾಹ್ಮಣೇತರರು ಆಧುನಿಕ ಸಮಾನತೆಯ ಭಾವನೆಯ ಸಹಾಯದಿಂದ ಹಿಂದೂ ಸಮಾಜವನ್ನೂ ಮತವನ್ನೂ ಪುನರುಜ್ಜೀವಿಸುವುದು ಅಗತ್ಯವಾಗಿದೆ. ಬ್ರಾಹ್ಮಣೇತರರಿಲ್ಲವಾದರೆ ಹಿಂದೂ ಸಮಾಜವೇ ಇರುವುದಿಲ್ಲ. ಆದುದರಿಂದ ಮೈಸೂರಿನಲ್ಲಿ ನಡೆದ ಸಭೆಯಲ್ಲಿ ಎದ್ದ ಕೋಲಾಹಲವು ಅವಶ್ಯ ಸಂಬಂಧಪಟ್ಟವರಲ್ಲರಿಗೆ ಹಾನಿಕೊಡುವಂತಹುದುದಾಗಿದೆಯಲ್ಲದೆ, ಆ ಕೋಲಾಹಲವು ಮೈಸೂರಿಗೆ ಒಂದು ಹಿಂದೂ ಮಹಾಸಭೆಯು ಅಗತ್ಯವೆಂದು ಸ್ಪಷ್ಟವಾಗಿ ತೋರಿಸುತ್ತಿದೆ.

ನೋಟಗಳು
NOTES.

ನಮ್ಮ ಜಿಲ್ಲೆಯ ಪರಿಷತ್ತು [illegible] ಹಲವು ನಿರ್ಣಯಗಳೊಂದಿಗೆ ಮುಕ್ತಾಯ [illegible] ನಿರ್ಣಯದ ಫಲ ಇನ್ನು ಗೊತ್ತಾಗಲಿದೆ; [illegible] ಲಿಕ್ಕಿಲ್ಲ!

• • • •

ಪರಿಷತ್ತಿನಲ್ಲಿ ಮದ್ರಾಸಿನ ಈಗಿನ ಮಂತ್ರಿಮಂಡಲದ ಮೇಲಿನ ವಿಶ್ವಾಸವು ಪೂರ್ಣ ಕೆಟ್ಟಿರುತ್ತದೆ. [illegible] ಕೂಡಲೆ ರಾಜಿ ಕೊಡುವಂತೆ ಸಭೆಯ ಅಭಿಪ್ರಾಯ [illegible] ಸೂಚಿಸಿದಂತೆ ಮಂತ್ರಿಗಳು ರಾಜಿ ಕೊಟ್ಟರೆ, [illegible] ಮಂತ್ರಿಗಳ ಚುನಾವಣೆಯ ಗೊಂದಲ.

• • • •

ನಮ್ಮ ಜಿಲ್ಲೆಯ ಎಮ್. ಎಲ್. ಸಿ.ಯವರು ಮಂತ್ರಿಗಳ ಚುನಾವಣೆಯಾಗುವಲ್ಲಿ ತಯಾರಿರುವುದು ಉತ್ತಮ.

• • • •

ನಮ್ಮ ಇಂಡಿಯಕ್ಕೆ ತಿರುಗಿ ಬಂದ ಸ್ಯಾಮ್ಯುಲ್ ಸಾಹೇಬರಿಗೆ ಎಲ್ಲಿ ಹೋದರೂ ಮುಷ್ಕರದ ಸಭೆಗಳು, ಠರಾವುಗಳು, ಕಪ್ಪು ಸೂಚನೆಗಳೇ ಕಾಣುತ್ತಿವೆ.

• • • •

ಮಂಗಳೂರಲ್ಲಿ ಹಲವು ಪತ್ರಿಕೆಗಳಿಗೆ ಇಂಗ್ಲಿಷಲ್ಲಿ ಬರೆದು ಕಳುಹಿಸುವ ಒಬ್ಬ ಮಹಾನುಭಾವರಿಗೆ ನಮ್ಮ ಬಂಧುವಾದ ನವಯುಗವು ಸ್ವದೇಶಾಭಿಮಾನಿಯಾಗಿ ಕಂಡಿರುತ್ತದೆ. ಇಷ್ಟು ಕಲಿತವರು ಆರು ಅಕ್ಷರವುಳ್ಳ ಶಬ್ದವನ್ನು ನಾಲ್ಕು ಅಕ್ಷರದ ಶಬ್ದಕ್ಕೆ ಮ್ಯಾನಸ್ ಮಾಡಿರುವರು. ಇದು ಸ್ವಾರಾಜ್ಯ ಕಾಲದ ಮಹಿಮೆ.

• • • • •

ಸದ್ಯದಲ್ಲೇ ಇಲ್ಲಿಯ ಪೋಲೀಸರ ಪೋಲಿಸ್ ಸ್ಪೋರ್ಟ್ಸ್ ನಡೆಯಲಿಕ್ಕಿದೆ. ವಂತಿಗೆಗಾರರು "ಬಿ ರೆಡಿ ವಿದ್ ಕ್ಯಾಶ್"

ವಿದ್ಯಾಮಂತ್ರಿಗಳಿಗೆ ಖಾದಿಯ ಕೋಟು ಪಲ್ಲಣ, ತಲೆಗೊಂದು ಹ್ಯಾಟು. ಇದು ಏನನ್ನು ಸೂಚಿಸುತ್ತದೆ? ಅವರು ಸ್ವತಂತ್ರ ಪಕ್ಷದವರೆಂದು.

• • • •

ಇದರಿಂದ ಇನ್ನೇನು ವ್ಯಕ್ತವಾಗುತ್ತದೆ? ಭಾರತೀಯರ ಸಿದ್ಧಾಂತೀಕರಣ! ಇಂಗ್ಲೀಷರ ಒತ್ತಾಯದ ಆಡಳಿತ! ಅಂದರೆ ಹಿಂದೂಸ್ಥಾನದ ಸದ್ಯದ ವಾತಾವರಣವೇ ಅದರಿಂದ ಸ್ಪಷ್ಟವಾಗುತ್ತದೆ.

• • • •

ಮಂತ್ರಿಗಳಿಗೆ ಬಾರೀ ಔತಣ! ಉಡ್ಪಿ ಡಾ. ಪೈ. ಪ್ರೆಸಿಡೆಂಟರದ್ದು ಕಿಸೆಯ ದುಡ್ಡಿನಿಂದ! ಇಡೀ ದಿನ ಕಾದರೂ ದೊಂಬ್ರಾಯರ "ಸ್ಪೆಶಲ್ ಸಿಗರೇಟು" ಬರಲೇ ಇಲ್ಲವಂತೆ. ಪುಣ್ಯವಿಲ್ಲ ಯಾರಿಗೆ!.........ಗಳಿಗೆ.

• • •

ಮಂತ್ರಿಗಳು ಹೋದ ಮೇಲೆ ಸಿಗರೇಟು ಪಾರ್ಸೆಲು ಬಂದಿರಬಹುದು.

• • • •

ತುಳುತನಯರು—ಬಂಡಾಯ ಎಬ್ಬಿಸುವವರ ಪಟ್ಟಿಯಲ್ಲಿ ಮರಿದುಂಬಿಯ ಹೆಸರನ್ನೂ ದಾಖಲ್ಮಾಡಿ ಕೊಂಡಿದ್ದಾರೆ. ಏನು ತುಳುವಿನ ಮೇಲಿನ ಅಭಿಮಾನ?

• • • •

ಅಭಿಮಾನವು ಉದ್ವೇಗದಲ್ಲಿ ಕೊನೆಗಂಡಿತು. ಅಭಿಮಾನಿಗಳು ಹೇಳುತ್ತಾರೆ—ತುಳುನಾಡು ವಿಷಯದ ಠರಾವು, ಪಾಸಾಗಲಿ, ಪಾಸಾಗದಿರಲಿ, ಅದನ್ನು ನಾವು ಲಕ್ಷಿಸುವುದಿಲ್ಲ. ಆದರೆ ಪರೀಕ್ಷಾರ್ಥವಾಗಿ ಮುಂದೆ ತಂದುದು— ಎಂದು. ಹೇಳಿದ್ದು ಎಲ್ಲಿ ಬಲ್ಲಿರಾ? ಜಿಲ್ಲಾ ಪರಿಷತ್ತಿನಲ್ಲಿ!

• • •

ತುಳುನಾಡು ಠರಾವನ್ನು ಹೋಗುವಾಗ ಕೊಂಡು ಹೋದರು, ಬರುವಾಗ ಹಿಂದೆ ತಂದರು. ಅಂತೂ ಠರಾವು ಸುರಕ್ಷಿತವಾಗಿ ಅವರ ಹತ್ತಿರವೇ ಉಳಿಯಿತು!

• • •

ಈ ಠರಾವು ಬಿದ್ದುಹೋದುದರಿಂದ ತುಳು ಮಹಾಸಭೆಯವರಿಗೆ ಸಂತೋಷವಾಗುವದಿದ್ದರೆ ಮರಿದುಂಬಿಗೂ ಆನಂದವೇ! ದುಃಖವಾಗುವುದಿದ್ದರೆ ಅವನಿಗೂ ಹಾಗೆಯೇ.

• • • •

ಅಂತೂ ಇಂತೂ ಪರೀಕ್ಷೆಯೊಂದಾಯಿತು.

ಉಡುಪಿ,
21 – 11 – 28.

'ಮರಿದುಂಬಿ'

[illegible] ನಾಮ ಸಂವತ್ಸರದ ಅಶ್ವೀಜ [illegible] ವಿಭವ ಸಂವತ್ಸರದ ಅಶ್ವೀಜ
[illegible] ಶುಕ್ರವಾರದ ವರೆಗಿನ ಪಂಚಾಂಗ.
(ಗ್ರಾಹಲನೆಯ ವೃಶ್ಚಿಕ (ಚಾರ್ಟ)

[illegible]	[illegible]	[illegible]	[illegible]	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ
24	[illegible]	[illegible]		ರೇವತಿ	[illegible]	[illegible]	6.36	6 0
25	[illegible]	[illegible]		ಅಶ್ವಿನಿ	[illegible]	[illegible]	6 37	6 1
26	[illegible]	[illegible]		ಭರಣಿ	[illegible]	[illegible]	6.37	6 1
27	[illegible]	●	[illegible]	ಕೃತ್ತಿಕಾ	[illegible]	[illegible]	6.38	6. 1
28	[illegible]	[illegible]		ರೋಹಿಣೀ	[illegible]	[illegible]	6.3[illegible]	6. 1
28	ಗುರು	[illegible]		ಮೃಗಶಿರಾ	[illegible]	[illegible]	6.39	6. 1
30	ಶುಕ್ರ	[illegible]		ಆರ್ದ್ರಾ	[illegible]	[illegible]	6.40	6. 1

ಮಂಗಳೂರಿನ ವಾಯುಸ್ಥಿತಿ.

Date	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ
16	88— 8	72— 6	—	—
17	88— 7	73— 3	—	—
18	89— 0	75— 6	—	—
19	89— 3	75— 7	—	—
20	90— 8	77— 2	0—08	—
21	88— 8	75— 8	0—03	—
22	93— 6	74— 3	—	— 124-58

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಮುಸ್ಕತಿ	...	7– 12	8 – 12
ಗುಡ್ಡು	...	7 – 4	7 – 8
ಕುಗ್ಗಿ	...	6 – 12	7 – 6
ರಾಶಿ	...	6 – 8	7 – 8
ಊರ ಅಸ್ಸಲ್ ಬೆಳ್ತಿಗೆ	...	7 – 8	8 – 14
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	...	12 – 8	–
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ	...	7 – 6	7 – 12
ಗೋಧಿ ಗೋಣಿ ಗಳ್ಳೆ	...	18 – 0	19 – 0
ಹುರುಳಿ ಗೋಣಿ ಗಳ್ಳೆ	...	7 – 8	8 – 8
ಕಡಲೆ ಗೋಣಿ ಗಳ್ಳೆ	...	13 – 12	16 – 8
ತೊಗರಿ ಗೋಣಿ ಗಳ್ಳೆ	...	14 – 8	15 – 8
ತೊಗರಿಬೇಳೆ ಗೋಣಿ ಗಳ್ಳೆ	...	18 – 0	20 – 0
ಉದ್ದು ಗೋಣಿ ಗಳ್ಳೆ	...	14 – 8	15
ಹೆಸರು ಗೋಣಿ ಗಳ್ಳೆ	...	13 · 0	14 –
ಊರು ಬೆಲ್ಲ ಖಂಡಿ ಗಳ್ಳೆ	...	60 – 0	65
ಉಪ್ಪು ಗೋಣಿ ಗಳ್ಳೆ	...	4 – 8	4 – 12
ಬಿಳಿ ಖಂಡಿ ಗಳ್ಳೆ	...	130 0	–
[illegible] ಹಿಂಡಿ ಖಂಡಿ ಗಳ್ಳೆ	...	47 – 8	49 – 8
ಎಳ್ಳಿಂಡಿ ಖಂಡಿ ಗಳ್ಳೆ	...	35 – 8	47 – 8
[illegible] ಎಣ್ಣೆ ಮುಡಿ ಗಳ್ಳೆ	...	7 – 10	7 12
ಎಳ್ಳೆಣ್ಣೆ ಮುಡಿ ಗಳ್ಳೆ	...	8 – 0	8 – 6
[illegible] ಗಳ್ಳೆ	...	7 – 2	7 4
[illegible] ಸಕ್ಕರೆ ಮುಡಿ ಗಳ್ಳೆ	–	3 – 11	3 – 12
[illegible]	...	6 – 0	—
[illegible] ಮುಡಿ ಗಳ್ಳೆ		3 – 4	6 – 0
[illegible] ಮುಡಿ ಗಳ್ಳೆ	...	9 – 8	8 12
[illegible] ಮುಡಿ ಗಳ್ಳೆ	...	5 – 4	5 8
[illegible] ಖಂಡಿ ಗಳ್ಳೆ	...	325 – 0	400 – 0
[illegible] ಖಂಡಿ ಗಳ್ಳೆ	...	170 – 0	205 – 0
[illegible] ಖಂಡಿ ಗಳ್ಳೆ	...	525 – 4	525 – 8
[illegible] ಮುಡಿ ಗಳ್ಳೆ	...	62 – 0	54 – 8
[illegible] ಮುಡಿ ಗಳ್ಳೆ	...	3 – 4	3 – 8
[illegible] ಖಂಡಿ ಗಳ್ಳೆ	...	40 – 0	42 – 8
[illegible] ಗಳ್ಳೆ	...	16 – 8	16 – 12
[illegible] ಮುಡಿ ಗಳ್ಳೆ	...	21 – [illegible]	22 –
[illegible] ಗಳ್ಳೆ	...	15 – 0	—
[illegible] ಮುಡಿ ಗಳ್ಳೆ	...	14 – 3	16 – 8
[illegible] ಗಳ್ಳೆ	...	17–7–6	—
[illegible]	...	70 –	85 – 0

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲು ಆಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ
ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರವಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1–0–0
ಇದನ್ನು ಸೇವಿಸುವುದೇ.

ರಾಜವೈದ್ಯ, ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ವಿ. ಗೂಲಸ್ ಮಾರ್ಟ್, ಹಂಪನಕಟ್ಟಾ, ಮಂಗಳೂರು, ದ. ಕನ್ನಡ



ತಯಾರಾಗಿವೆ ತಯಾರಾಗಿವೆ!!
ಕಾಫಿ ಪ್ಲೆಂಟರರಿಗೂ, ತೋಟದವರಿಗೂ
ಬೇಕಾಗುವಂತಹ

ಚಕ್ ರೋಲ್ ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.
ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ
ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿವ್ಮಿತ. ಅನ್ನ ಫಲತ್ಪುಷ್ಟಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಕಥೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯಶಾಸ್ತ್ರ'ಯಲ್ಲಿ [illegible] ಪಡೆದು ಪ್ರಸಿದ್ಧರಾದ 'ವೃದ್ಧ ಶ್ರೀ ವೈದ್ಯರತ್ನ [illegible]' ಅವರ ಶಿಷ್ಯರಿಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂತಹ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಯಲಾಗುತ್ತದೆ. ಎಲ್ಲಾ ತರದ [illegible]ಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ [illegible] ನಮ್ಮಲ್ಲಿ ಯಾವಾಗಲೂ ಕಲ್ಪಿಸಿನಲ್ಲಿ ತಯಾರಾಗುವವು. ಅನುಕೂಲಸ್ಥರಾದ [illegible] ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತಿಂದಗಿದ ಕಾಲ, ಪ್ರಾಯ, [illegible] ಆಹಾರದ ಕ್ರಮ, ವೃತ್ತಿ [illegible] ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯುವಕ್ಕೆ ಶಕ್ತಿ ಉಳ್ಳವನೊ ಎಂಬ [illegible] ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು [illegible] ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವದಯೂ [illegible]. ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ಏರ್ಪಾಡು ಮಾಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಮಾಹಿತಿಗಳನ್ನು ಕೊಡುವದರೊಂದಿಗೆ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅವನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯವುಳ್ಳವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ವಿವಿಧ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು
ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(18[illegible]ನೇ ಇಸವಿಯಲ್ಲಿ ಪ್ಯಾಸಲ್ಪಟ್ಟ ಸನ್ [illegible]ನೇ ಇಸವಿಯ XXIನೇ ಆಕ್ಟಿನ ಪ್ರಕಾರವಾಗಿ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು – ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಕೂಡ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ "ಫಾರ್ಮಸಿ"ಯಲ್ಲಿ ಶಾಸ್ತ್ರರೀತ್ಯಾ ತಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟಮಾಡಿ ಹುಟ್ಟಿಬರುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ನೆರವೇರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತವೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯ್ಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೂ ನಮ್ಮಲ್ಲಿ ತಯ್ಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೂ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಸೆಕ್ರಿಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

ಸಾಮಯಿಕಾಂಶಗಳು

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು.

ದಕ್ಷಿಣ ಕನ್ನಡ ಜಿಲ್ಲಾ ಐದನೇ ಪರಿಷತ್ತು ಶ್ರೀ. ನರಿಮನರ ಅಧ್ಯಕ್ಷತೆಯಲ್ಲಿ ಜರಗಿ ಮುಗಿಯಿತು. ಶ್ರೀ. ನರಿಮಾನರವರು ಸಾಧಾರಣ ಈಗ ಎಲ್ಲರಿಗೂ ಪರಿಚಿತರು. ಇವರು ಈಗಿನ ತರುಣ ಧುರೀಣರಾಗಿದ್ದು ಹಿಂದೀ ರಾಷ್ಟ್ರೀಯ ತಾರುಣ್ಯದಲ್ಲಿ ಉತ್ಸಾಹವನ್ನು ಸುರುತ್ತಿರುವರು. ಇವರ ಭಾಷಣದ ಸಾರಾಂಶವು ಇನ್ನೊಂದು ಕಡೆ ಕೊಡಲ್ಪಟ್ಟಿಯದೆ. ಪರಿಷತ್ತಿನಲ್ಲಿ ಮಂಜೂರಾದ ಠರಾವುಗಳನ್ನು ನೋಡಿದರೆ ಅಸಹಕಾರ ಸಮಯದ ಸಂಪೂರ್ಣ ವಿಸ್ಮೃತಿಯು ಕಂಡುಬರುತ್ತದೆ. ಖಾದಿಯ ಹೆಸರು ಎಲ್ಲಿಯೂ ಕಂಡುಬರುವುದಿಲ್ಲ; ಅಲ್ಲದೆ ವಿಧಾಯಕ ಕಾರ್ಯಕ್ರಮದ ಇತರ ವಿಧಾನಗಳಿಗೂ ಪ್ರಾಮುಖ್ಯತೆಯು ತೋರಿಬರುವುದಿಲ್ಲ. ಮಹಾತ್ಮಾಜೀಯವರಿಂದ ಪ್ರೇರಿಸಲ್ಪಟ್ಟ ಆ ಹಿಂದಿನ ಆದರ್ಶಗಳು ಮೆಲ್ಲನೆ ರಾಜಕೀಯ ರಂಗದಿಂದ ಸರಿದುಹೋಗುವಂತೆ ಕಾಣುತ್ತಿದೆ. ನಮ್ಮ ಮನಸ್ಸಿಗೆ ಇದು ಶುಭಚಿಹ್ನೆಯೆಂದೇ ಕಾಣುತ್ತಿದೆ. ಮಿಥ್ಯಾಚಾರವನ್ನು ಪ್ರೇರಿಸುವ ಠರಾವುಗಳು ತತ್ವತಃ ಎಷ್ಟೇ ಮಹತ್ವದ್ದಿರಬಹುದಾದರೂ ಕಾರ್ಯತಃ ಹಾನಿಕರವಾಗಿಯೇ ಪರಿಣಮಿಸುತ್ತವೆ. ಖಾದಿಯಿಂದ ಖಾದಿಯೆಂದು ಮನೆಯಲ್ಲಿ ಮಂಚಪ್ಪರನ್ನು ತರಿಸಿದರೆ ಯಾವ ಲಾಭವೂ ಆಗಲಾರದು. ಚರಕ ಚರಕವೆಂದು ಸ್ತುತಿಯಾಗುತ್ತಿರುವಾಗಲೇ ಚರಕಗಳು ಮನೆ ಹೆಂಗಸರ ಕೈಯಿಂದ ಸೌದೆಯ ಉಪಯೋಗಕ್ಕೆ ಹೋಗಿ ಅತ್ಯಾಚಾರಕ್ಕೆ ಪಾತ್ರವಾಗುತ್ತಿದ್ದುವು. ಈ ಬಾರಿ ಅಂತಹ ಮಿಥ್ಯಾಚಾರವು ಇಲ್ಲದಿದ್ದುದು ಅಭಿನಂದನೀಯವಿದೆ.

ಮಂಜೂರಾದ ಠರಾವುಗಳು.

ಪ್ರಥಮ ಠರಾವು ರಿಸರ್ವೆಯ ವಿಷಯವಾಗಿದ್ದಿತು. ಜಿಲ್ಲೆಯ ಪ್ರಕೃತದ ಹಲವು ಸಮಸ್ಯೆಗಳಲ್ಲಿ ಇದು ಈಗಿನ ಮಟ್ಟಿಗೆ ಮೊದಲನೆಯದಾಗಿದೆ ಎಂಬುದು ನಿಸ್ಸಂದೇಹವಾಗಿದೆ. ಪಠಾಣ, ಮೊಗಲರ ಆಳುವಿಕೆಯಲ್ಲಿ ಜನರಿಗೆ ತೆರಿಗೆಯು ಬಹು ಹೆಚ್ಚಿದ್ದಿತೆಂದು ಬ್ರಿಟಿಷ ಇತಿಹಾಸಕಾರರು ಅವರನ್ನು ಮೂದಲಿಸುತ್ತಿರುವರು. ಆದರೆ ಅವರ ತೆರಿಗೆಯನ್ನು ಈಗಿನ ಬ್ರಿಟಿಷ ಆಳುವಿಕೆಯೊಡನೆ ಸರಿಹೋಲಿಸುವುದಾದರೆ ಬ್ರಿಟಿಷರೇ ತಲೆತಗ್ಗಿಸಬೇಕಾಗುವುದು. ರಿಸರ್ವೆ ವಿಷಯದಲ್ಲಿ ಜಿಲ್ಲೆಯೊಳಗೆ ಸ್ಥಿರವಾದ ಅಭಿಪ್ರಾಯವಿದೆ. ಆದುದರಿಂದ ಸರಕಾರವು ಜಿಲ್ಲೆಯ ಅಭಿಪ್ರಾಯಗಳನ್ನು ಮಾನಿಸುವುದು ಅಗತ್ಯವಿದೆ. ಕುಮ್ಕಿ ಸ್ಥಳಗಳ ವಿಷಯದ ಠರಾವು ಇನ್ನೊಂದು. ಇದು ಸಹ ಜನರಿಗೆ ಉಪಕಾರಿಯಾದುದೆನ್ನಬಹುದು. ಮೂರನೆಯದಾಗಿ ರಿಜರ್ವ ಕಾಡುಗಳ ವಿಷಯ. ಈ ವಿಚಾರವನ್ನು ತಿಳಿಯಲಿಕ್ಕೆ ಕಮಿಟಿ ನೇಮಕಮಾಡಬೇಕಾಗಿ ಸೂಚನೆಯೊಂದು, ಅಗತ್ಯವಿಲ್ಲದ ಕಾಡುಗಳನ್ನು ಕಡಿಯಬೇಕಾಗಿ ಸೂಚನೆಯೊಂದು; ಕೈಸನನ್ನು ಧರ್ಮಾರ್ಥವಾಗಿ ಹಂಚಬೇಕಾಗಿ ಸೂಚನೆ ಮೂರು. ಕಾಡು ಕಡಿಯುವ ವಿಚಾರವನ್ನು ಕಮಿಟಿಯೇ ಮಾಡುವುದುತ್ತಮವೆಂದು ನಾವು ಇಲ್ಲಿ ಸೂಚಿಸದಿರಲಾರೆವು. ಏಕೆಂದರೆ ಕಾಡುಗಳು ಜನರ ಉಪಯೋಗದ ಬಗ್ಗೆ ಬೇಕಾಗುತ್ತವೆ. ಸೌದೆ, ಮರ ಮೊದಲಾದುವುಗಳು ಈಗಲೇ ಬಹಳ ಪ್ರಿಯವಾಗಿವೆಯಾದುದರಿಂದ ಇನ್ನೂ ಕಾಡು ಕಡಿದರೆ ಈ ಅತೀ ಅತ್ಯಗತ್ಯದ ಸಾಮಾನುಗಳು ಸಿಕ್ಕುವುದು ದುರ್ಲಭವಾಗಬಹುದು. ರೈಲ್ವೆ ಮಾರ್ಗದ ನಿರ್ಮಾಣ ಮತ್ತು ರಸ್ತೆಗಳನ್ನು ಹೆಚ್ಚಿಸುವ ನಾಲ್ಕನೆಯ ಠರಾವು ಕೂಡ ಉತ್ತಮವಾದುದಾಗಿದೆ. ಈ ಎಲ್ಲಾ ಠರಾವುಗಳು ಇನ್ನೊಂದು ಕಡೆಯಲ್ಲಿ ಕೊಟ್ಟಿರುವುದರಿಂದ ನಾವು ಇಲ್ಲಿ ಎಲ್ಲವನ್ನು ಪುನರಾವರ್ತಿ ಕೊಡುವುದಿಲ್ಲ. ಮದ್ರಾಸು ಮಂತ್ರಿಮಂಡಲದ ಮೇಲಿನ ಅವಿಶ್ವಾಸದ ಠರಾವಿನಲ್ಲಿ ಆ ಅವಿಶ್ವಾಸದ ಕಾರಣವನ್ನು ತೋರಿಸಿದ್ದುದಾದರೆ ಉತ್ತಮವಿತ್ತು. ಸರಕಾರೀ ಹುದ್ದೆಗಳೊಳಗಿನ ಜಾತೀಯ ವಿಚಾರವನ್ನು ಕಾಂಗ್ರೆಸ್ಸಿನ ಈ ಪರಿಷತ್ತು ತೆಗೆದುಕೊಳ್ಳಬಹುದೊ, ಇದರಿಂದ ಸರಕಾರೀ ನೌಕರಿಯ ಸ್ವೀಕಾರದ ಒಪ್ಪಿಗೆಯು ಸೂಚಿಸಲ್ಪಡಬಹುದೊ ಎಂಬುದು ಆಲೋಚಿಸಲ್ಪಡತಕ್ಕುದಾಗಿದೆ. ಮುಜರಾಯಿಗಳ ಕಾನೂನಿನ ಬದಲಾವಣೆಗಾಗಿ ಒಂದು ಸಮಿತಿಯು ಏರ್ಪಟ್ಟಿದೆ; ಆದರೆ ಅದೇ ಠರಾವಿನಲ್ಲಿ ಆ ಸಮಿತಿಯು ಅನುಕರಿಸಬೇಕಾದ ಧೋರಣವನ್ನು ಸ್ಪಷ್ಟಪಡಿಸುವುದು ಅಗತ್ಯವಿತ್ತು. ಏಕೆಂದರೆ ಹಿಂದೂ ಮತದ ಹೆಸರಿನಲ್ಲಿ ದುಡ್ಡನ್ನು ಒಟ್ಟುಗೂಡಿ ಅದರ ಹೆಸರನ್ನು ಕೆಡಿಸಲು ನಾವು ಸ್ಪಷ್ಟವಾಗಿ ಹೇಳಬೇಕಾಗುವುದು.

ಕಾಂಗ್ರೆಸ್ಸಿನ ಈಗಿನ ಧೋರಣವೇನು?

ನಾವು ಈ ಮೊದಲಿನ ಪತ್ರ ಪೂರ್ಣವಾಗಿ ಕಾರ್ಯಕಾರಿಯಲ್ಲದ ಠರಾವುಗಳನ್ನು ಖಂಡಿಸಿದೆವು; ಈ ಬಾರಿ ಮಂಜೂರಾದ ಠರಾವುಗಳ ಕಾರ್ಯಕಾರಿತೆಯನ್ನು ಪ್ರಶಂಸಿಸಿದೆವು. ಆದರೆ ಈ ಬದಲಾವಣೆಯು ಕಾಂಗ್ರೆಸ್ಸಿನ ಧ್ಯೇಯದ ಮೇಲೂ ಧೋರಣದ ಮೇಲೂ ಯಾವ ಪರಿಣಾಮವನ್ನುಂಟುಮಾಡುವುದೆಂಬುದನ್ನೂ ಆಲೋಚಿಸಲಿಚ್ಛಿಸುವೆವು. ಈ ಬಾರಿ ಮಂಜೂರಾದ ಠರಾವುಗಳ ಉಪಯೋಗವು ಸರಕಾರವು ಅವನ್ನು ಮನ್ನಿಸುವುದಾದರೆ ಮಾತ್ರವೇ ಸಾಧ್ಯವಾಗಿದೆ. ಹಾಗಾದರೆ ಇವು ಸರಕಾರದ ಕಡೆಗಿನ ಬೇಡಿಕೆಗಳೇ? ಬೇಡಿಕೆಗಳು ಈಗಿನ ಕಾಂಗ್ರೆಸ್ ಧೋರಣಕ್ಕೆ ವಿರೋಧವಾಗಿವೆ; ಠರಾವುಗಳ ಶಬ್ದರಚನೆಯೂ ಬೇಡಿಕೆಯ ರೀತಿಯದ್ದಾಗಿರುವುದಿಲ್ಲ. ಹಾಗೆಂದು ಸರಕಾರವು ಅನುಕರಿಸಲೇ ಬೇಕೆಂಬ ಪತ್ತಾಯವಿರುವವನ್ನು ಅಧಿಕಾರವು ಕಾಂಗ್ರೆಸ್ಸಿಗೆ ಇರುವುದಿಲ್ಲ. ಈ ರೀತಿಯಲ್ಲಿ ತರ್ಕಿಸಿದರೆ ಇಂತಹ ಠರಾವುಗಳಿಗೆ ಬೆಲೆಯಿಲ್ಲಬಹುದೆನ್ನಬೇಕಾಗುತ್ತದೆ. ಆದರೆ ಕಾಂಗ್ರೆಸ್ಸಿನ ಕಡೆಯಿಂದ ಲೆಜಿಸ್ಲೇಟಿವ್ ಕೌನ್ಸಿಲುಗಳಿಗೆ ಸದಸ್ಯರು ಆರಿಸಲ್ಪಡುವುದಾದುದರಿಂದ, ಈ ಠರಾವುಗಳು ಸರಕಾರದ ಕಡೆಗಿನ ಬೇಡಿಕೆಯಾಗಿರುವುದಕ್ಕಿಂತ ಕೌನ್ಸಿಲಿನ ಕಾಂಗ್ರೆಸ್ ಸದಸ್ಯರು ಅನುಸರಿಸಬೇಕಾದ ಸ್ಪಷ್ಟ ಧೋರಣವಾಗಿವೆಯೆಂದು ತಿಳಿದುಕೊಳ್ಳಬೇಕಾಗುವುದು. ಆ ಕಾರಣದಿಂದ ಕೌನ್ಸಿಲಿನ ಕಾಂಗ್ರೆಸ್ ಸದಸ್ಯರು ಈ ಠರಾವುಗಳನ್ನು ಜಾರಿಗೆ ತರುವ ಬಗ್ಗೆ ಕೌನ್ಸಿಲಿನಲ್ಲಿ ಸತತವೂ ಪ್ರಯತ್ನಪಡಬೇಕಾಗುವುದು. ನಮ್ಮ ಜಿಲ್ಲೆಯ ಕೌನ್ಸಿಲ್ ಸದಸ್ಯರು ಇದನ್ನು ಮನಸ್ಸಿನಲ್ಲಿರುವರಾಗಿ ನಾವು ಆಶಿಸುವೆವು.

ಮೈಸೂರು ಪ್ರಾಂತ್ಯಕ್ಕೆ ಹಿಂದೂ ಮಹಾಸಭೆ!

ಹಿಂದೂ ಮಹಾಸಭೆಯೊಂದು ರಚಿಸಲಿಕ್ಕಾಗಿ ಕೆಲವು ಸಮಯದ ಹಿಂದೆ ಮೈಸೂರಲ್ಲಿ ಸೇರಿದ ಒಂದು ಸಭೆಯಲ್ಲಿ ನಡೆದ ಘಟನೆಗಳನ್ನು ನೋಡಿದರೆ ಹಿಂದೂಗಳ ಮುಂದಿನ ಗತಿಯ ವಿಷಯದಲ್ಲಿ ನಿರಾಶೆಯಾಗುತ್ತಿದೆ. ಹಿಂದೂಗಳೊಳಗೆ ಬ್ರಾಹ್ಮಣ ಬ್ರಾಹ್ಮಣೇತರರ ಭೇದವು ಹುಟ್ಟಿದ್ದು ಒಂದು ರೀತಿಯಲ್ಲಿ ಒಳ್ಳೆಯದೇ ಎನ್ನಬಹುದು. ಮದರಾಸು ಮೈಸೂರು ಕಡೆಗಳಲ್ಲಿ ಬ್ರಾಹ್ಮಣರು ಬ್ರಾಹ್ಮಣೇತರರನ್ನು ತಮ್ಮ ಸ್ವಂತವೂ ಅಪಾರವೂ ಆದ ಸ್ವಾರ್ಥಕ್ಕಾಗಿ ಅಜ್ಞತೆಯಲ್ಲಿಟ್ಟ ಕ್ರಮವನ್ನು ನೋಡಿದರೆ ನಾವು ಬ್ರಾಹ್ಮಣರೇ ಆದರೂ ನಮಗೆ ನಾಚಿಕೆಯಾಗುವುದು. ಮಲೆಯಾಳದಲ್ಲಿ ನಂಬೂದಿರಿಗಳು ಅತ್ಯಂತ ಹೇಯವಾದ ಕ್ರಮಗಳನ್ನು ಮತದ ಹೆಸರಿನಲ್ಲಿ ನಡೆಸುತ್ತಿದ್ದರು. ಬ್ರಾಹ್ಮಣತ್ವವು ಒಂದು ಕಾಲದಲ್ಲಿ ಯಾವ ಸದುದ್ದೇಶಕ್ಕಾಗಿ ಏರ್ಪಟ್ಟಿದ್ದಿರಬಹುದಾದರೂ ಇತ್ತೀಚೆಗೆ ಸಹಿಸಲಸಾಧ್ಯವಾದ ಸ್ವಾರ್ಥಕ್ಕೆ ಪರಿವರ್ತಿಸಲ್ಪಟ್ಟಿದ್ದಿತು. ಆದುದರಿಂದ ಬ್ರಾಹ್ಮಣೇತರ ಚಳವಳವು ಹಿಂದೂಸಮಾಜದ ಪುನರ್ಸಂಘಟನೆಗಾಗಿಯೇ ಅತೀ ಅಗತ್ಯವಿದ್ದಿತು. ಹಿಂದೂ ಸಮಾಜದ ಏಳಿಗೆಗೆ ಬ್ರಾಹ್ಮಣೇತರ ಮತ್ತು ಅಸ್ಪೃಶ್ಯತಾ ನಿವಾರಣೆಯ ಚಳವಳಗಳೆರಡೂ ಬೇಕಾಗಿದ್ದುದರಿಂದಲೇ ಅವು ಬಲವನ್ನು ಹೊಂದಿದುವು. ಆದರೆ ಬ್ರಾಹ್ಮಣೇತರರು ಬ್ರಾಹ್ಮಣ ವಿದ್ವೇಷದಲ್ಲಿ ತಾವು ಹಿಂದೂಗಳೆಂಬುದನ್ನು ಮರೆತು ಬಿಡುವುದೇ ಈಗಿನ ಈ ಚಳವಳಗಳ ದುಃಖಕರವಾದ ಪರ್ಯವಸಾನವಾಗಿರುತ್ತದೆ. ಬ್ರಾಹ್ಮಣೇತರ ಜಾಗರಣವು ಈಗಾಗುವಂತೆ ಆಗುತ್ತಾ ಹೋದರೆ ಬ್ರಾಹ್ಮಣರು ತಾವಾಗಿ ಹಾದಿ ಬಿಟ್ಟುಕೊಡಬೇಕಾಗುವುದು. ಆದುದರಿಂದ ಇನ್ನೂ ಇನ್ನೂ ಬ್ರಾಹ್ಮಣರ ಮೇಲೆ ದ್ವೇಷವನ್ನು ಸಾಧಿಸಿ, ಬ್ರಾಹ್ಮಣರ ಮೇಲಿನ ದ್ವೇಷದಿಂದ ತಾವು ಹಿಂದುಗಳೇ ಅಲ್ಲವೆಂದು ಸಾಧಿಸುವಷ್ಟು ಮೇರೆ ಮೀರಿ ನಡೆಯದೆ ಇರುವುದು ಹಿತಕರವಿತ್ತು. ಮುಸಲ್ಮಾನರು ಬ್ರಾಹ್ಮಣೇತರ ಚಳವಳಿಯಲ್ಲಿ ಬ್ರಾಹ್ಮಣೇತರರೊಡನೆ ಸೇರುವರಾದರೂ ಮುಸಲ್ಮಾನ ಹಿತವು ಬಂದಲ್ಲಿ ಅವರಿಗೆ ಬ್ರಾಹ್ಮಣರೂ ಬ್ರಾಹ್ಮಣೇತರರೂ ಒಂದೇ ಆಗಿರುವರೆಂಬುದನ್ನು ಉತ್ತರ ಹಿಂದೂಸ್ಥಾನದೊಳಗಿನ ಘಟನಾವಳಿಗಳನ್ನು ನೋಡಿದರೆ ತಿಳಿಯುವುದು. ಮತ್ತು ಬ್ರಾಹ್ಮಣರು ಹಿಂದೂ ನಾಗರಿಕತೆಯನ್ನು ತಮ್ಮ ಅತೀ ಕ್ಷುದ್ರವಾದ ಸ್ವಾರ್ಥದಿಂದ ಸಂಕುಚಿತವಾಗಿ ಮಾಡಿರುವರಾದರೂ, ಅದರಲ್ಲಿರುವ ಅತ್ಯುಚ್ಚವಾದ ಅನುಭೂತಿಯು ಭೂಲೋಕದ ಇನ್ನಾವ ಮತದಲ್ಲಿಯೂ ಇಲ್ಲವಾದುದರಿಂದ, ಬ್ರಾಹ್ಮಣೇತರರು ಆಧುನಿಕ ಸಮಾನತೆಯ ಭಾವನೆಯ ಸಹಾಯದಿಂದ ಹಿಂದೂ ಸಮಾಜವನ್ನೂ ಮತವನ್ನೂ ಪುನರುಜ್ಜೀವಿಸುವುದು ಅಗತ್ಯವಾಗಿದೆ. ಬ್ರಾಹ್ಮಣೇತರರಿಲ್ಲವಾದರೆ ಹಿಂದೂ ಸಮಾಜವೇ ಇರುವುದಿಲ್ಲ. ಆದುದರಿಂದ ಮೈಸೂರಿನಲ್ಲಿ ನಡೆದ ಸಭೆಯಲ್ಲಿ ಎದ್ದ ಕೋಲಾಹಲವು ಅದಕ್ಕೆ ಸಂಬಂಧಪಟ್ಟವರೆಲ್ಲರಿಗೆ ಹಾನಿಕೊಡುವಂತಹುದಾಗಿದೆಯಲ್ಲದೆ, ಆ ಕೋಲಾಹಲವೇ ಮೈಸೂರಿಗೆ ಒಂದು ಹಿಂದೂ ಮಹಾಸಭೆಯು ಅಗತ್ಯವಿದೆಯೆಂದು ಸ್ಪಷ್ಟವಾಗಿ ತೋರಿಸುತ್ತಿದೆ.

ನಮ್ಮ ಜಿಲ್ಲೆಯ ಪರಿಷತ್ತು [illegible] ಹಲವು ನಿರ್ಣಯಗಳೊಂದಿಗೆ ಮುಗಿಯಿತು [illegible] ನಿರ್ಣಯದ ಫಲ ಇನ್ನು ಗೊತ್ತಾಗಲಿದೆ; [illegible] ಲಿಕ್ಕಿಲ್ಲ!

• • •

ಪರಿಷತ್ತಿನಲ್ಲಿ ಮದ್ರಾಸಿನ ಈಗಿನ [illegible] ಮೇಲಿನ ವಿಶ್ವಾಸವು ಪೂರ್ಣ ಕೆಟ್ಟಿರುತ್ತದೆ. [illegible] ಕೂಡಲೆ ರಾಜಿ ಕೊಡುವಂತೆ ಸಭೆಯ ಅಭಿಪ್ರಾಯ [illegible] ಸೂಚಿಸಿದಂತೆ ಮಂತ್ರಿಗಳು ರಾಜಿ ಕೊಟ್ಟರೆ, [illegible] ಮಂತ್ರಿಗಳ ಚುನಾವಣೆಯು ಗೊಂದಲ.

• • •

ನಮ್ಮ ಜಿಲ್ಲೆಯ ಎಮ್. ಎಲ್. ಸಿ.ಯವರು ಮಂತ್ರಿಗಳ ಚುನಾವಣೆಯಾಗುವಲ್ಲಿ ತಯಾರಿರುವುದು ಉತ್ತಮ.

• • •

ನಮ್ಮ ಇಂಡಿಯಕ್ಕೆ ತಿರುಗಿ ಬಂದ ಸ್ಯಾಮನ್ ಸಾಹೇಬರಿಗೆ ಎಲ್ಲಿ ಹೋದರೂ ಮುಷ್ಕರದ ಸಭೆಗಳು, ಠರಾವುಗಳು, ಕಪ್ಪು ಸೂಚನೆಗಳೇ ಕಾಣುತ್ತಿವೆ.

• • •

ಮಂಗಳೂರಲ್ಲಿ ಹಲವು ಪತ್ರಿಕೆಗಳಿಗೆ ಇಂಗ್ಲಿಷನ್ನು ಬರೆದು ಕಳುಹಿಸುವ ಒಬ್ಬ ಮಹಾನುಭಾವರಿಗೆ ನಮ್ಮ ಬಂಧುವಾದ ನವಯುಗವು ಸ್ವದೇಶಾಭಿಮಾನಿಯಾಗಿ ಕಂಡಿರುತ್ತದೆ. ಇಷ್ಟು ಕಲಿತವರು ಆರು ಅಕ್ಷರವುಳ್ಳ ಶಬ್ದವನ್ನು ನಾಲ್ಕು ಅಕ್ಷರದ ಶಬ್ದಕ್ಕೆ ಮ್ಯಾನಸ್ ಮಾಡಿರುವರು. ಇದು ಸಾಯೂ ಕಾಲದ ಮಹಿಮೆ.

• • • • •

ಸದ್ಯದಲ್ಲೇ ಇಲ್ಲಿಯ ಪೋಲೀಸರ ಪೋಲಿಸ್ ಸ್ಪೋರ್ಟ್ಸ್ ನಡೆಯಲಿಕ್ಕಿದೆ. ವಂತಿಗೆಗಾರರು "ಬಿ ರೆಡಿ ವಿದ್ ಕ್ಯಾಶ್"

ವಿದ್ಯಾಮಂತ್ರಿಗಳಿಗೆ ಖಾದಿಯ ಕೋಟು ಪಲ್ಲಣ, ತಲೆಗೊಂದು ಹ್ಯಾಟು. ಇದು ಏನನ್ನು ಸೂಚಿಸುತ್ತದೆ? ಅವರು ಸ್ವತಂತ್ರ ಪಕ್ಷದವರೆಂದು.

• • • •

ಇದರಿಂದ ಇನ್ನೇನು ವ್ಯಕ್ತವಾಗುತ್ತದೆ? ಭಾರತೀಯರ ಸಿದ್ಧಾಂತಕರಣ! ಇಂಗ್ಲೀಷರ ಒತ್ತಾಯದ ಆಡಳಿತ! ಅಂದರೆ ಹಿಂದೂಸ್ಥಾನದ ಸದ್ಯದ ವಾತಾವರಣವೇ ಅದರಿಂದ ಸ್ಪಷ್ಟವಾಗುತ್ತದೆ.

• • • •

ಮಂತ್ರಿಗಳಿಗೆ ಬಾರೀ ಔತಣ! ಉಡ್ಪಿ ತಾ. ಬೋ. ಪ್ರೆಸಿಡೆಂಟರದ್ದು ಸಿಸಿಯ ದುಡ್ಡಿನಿಂದ! ಇಡೀ ದಿನ ಕಾದರೂ ಬೊಂಬಾಯಿಂದ "ಸ್ಪೆಶಲ್ ಸಿಗರೇಟು" ಬರಲೇ ಇಲ್ಲವಂತೆ. ಪುಣ್ಯವಿಲ್ಲ ಯಾರಿಗೆ?.........ನಳಿಗೆ.

• • •

ಮಂತ್ರಿಗಳು ಹೋದ ಮೇಲೆ ಸಿಗರೇಟು ಪಾರ್ಸೆಲು ಬಂದಿರಬಹುದು.

• • • •

ತುಳುತನಯರು—ಬಂಡಾಯ ಎಬ್ಬಿಸುವವರ ಪಟ್ಟಿಯಲ್ಲಿ ಮರಿದುಂಬಿಯ ಹೆಸರನ್ನೂ ದಾಖಲ್ಮಾಡಿ ಕೊಂಡಿದ್ದಾರೆ. ಏನು ತುಳುವಿನ ಮೇಲಿನ ಅಭಿಮಾನ?

• • • •

ಅಭಿಮಾನವು ಉದ್ವೇಗದಲ್ಲಿ ಕೊನೆಗಂಡಿತು. ಅಭಿಮಾನಿಗಳು ಹೇಳುತ್ತಾರೆ—ತುಳುನಾಡು ವಿಷಯದ ಠರಾವು ಪಾಸಾಗಲಿ, ಪಾಸಾಗದಿರಲಿ, ಅದನ್ನು ನಾವು ಲಕ್ಷಿಸುವುದಿಲ್ಲ. ಆದರೆ ಪರೀಕ್ಷಾರ್ಥವಾಗಿ ಮುಂದೆ ತಂದುದು—ಎಂದು. ಹೇಳಿದ್ದು ಎಲ್ಲಿ ಬಲ್ಲಿರಾ? ಜಿಲ್ಲಾ ಪರಿಷತ್ತಿನಲ್ಲಿ!

• • • •

ತುಳುನಾಡು ಠರಾವನ್ನು ಹೋಗುವಾಗ ಕೊಂಡು ಹೋದರು, ಬರುವಾಗ ಹಿಂದೆ ತಂದರು. ಅಂತೂ ಠರಾವು ಸುರಕ್ಷಿತವಾಗಿ ಅವರ ಹತ್ತಿರವೇ ಉಳಿಯಿತು!..

• • • •

ಈ ಠರಾವು ಬಿದ್ದುಹೋದುದರಿಂದ ತುಳು ಮಹಾಸಭೆಯವರಿಗೆ ಸಂತೋಷವಾಗುವದಿದ್ದರೆ ಮರಿದುಂಬಿಗೂ ಆನಂದವೆ! ದುಃಖವಾಗುವುದಿದ್ದರೆ ಅವನಿಗೂ ಹಾಗೆಯೆ.

• • • •

ಅಂತೂ ಇಂತೂ ಪರೀಕ್ಷೆಯೊಂದಾಯಿತು.

ಉಡುಪಿ,
21-11-28. 'ಮರಿದುಂಬಿ'

... ಪಂಚಾಂಗ.

(... ವೃಶ್ಚಿಕ (ಜಾರ್ದ))

ತಾರೀಖು	ವಾರ	[illegible]	ತಿಥಿ	ನಕ್ಷತ್ರ	ಘಳಿಗೆ	[illegible]	ಸೂರ್ಯ. ಉ	ಸೂರ್ಯ. ಅಸ್ತ
24	[illegible]	[illegible]	[illegible]	ರೇವತೀ	[illegible]	[illegible]	6.36	6 0
25	[illegible]	[illegible]	[illegible]	ಅಶ್ವಿನೀ	[illegible]	[illegible]	6.37	6. 1
26	[illegible]	[illegible]	[illegible]	ಭರಣೀ	[illegible]	[illegible]	6.37	6. 1
27	[illegible]	[illegible]	[illegible]	ಕೃತ್ತಿಕಾ	[illegible]	[illegible]	6.38	6. 1
28	[illegible]	[illegible]	[illegible]	ರೋಹಿಣೀ	[illegible]	[illegible]	6.3[illegible]	6. 1
29	ಗುರು	[illegible]	[illegible]	ಮೃಗಶಿರಾ	[illegible]	[illegible]	6.39	6. 1
30	ಶುಕ್ರ	[illegible]	[illegible]	ಆರ್ದ್ರಾ	[illegible]	[illegible]	6.40	6. 1

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಿನದು	Minimum ಕಡಿಮೆ	Rainfall ಮಳೆ ದಿನದ ಮಳೆ	ಒಟ್ಟು ಮಳೆ
16	88— 8	72— 6	—	—
17	88— 7	78— 3	—	—
18	89— 0	75— 6	—	—
19	89— 3	75— 7	—	—
20	90— 8	77— 2	0—08	—
21	88— 8	75— 8	0—03	—
22	93— 6	74— 3	—	—
				124-58

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಅ.	ವರೆಗೆ ರೂ. ಅ.
ಮಸ್ಸಿ	...	7– 12	8 – 12
ಗುಡ್ಡು	...	7 – 4	7 – 8
ಸುಗ್ಗಿ	...	6 – 12	7 – 6
ರಾಶಿ	...	6 – 8	7 – 8
ಊರ ಅಪ್ಪರ್ ಬೆಳ್ತಿಗೆ	...	7 – 8	8 – 14
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	...	12 – 8	–
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ	...	7 – 6	7 – 12
ಗೋಧಿ ಗೋಣಿ ಗಳ್ಳೆ	...	18 – 0	19 – 0
ಹುರುಳಿ ಗೋಣಿ ಗಳ್ಳೆ	...	7 – 8	9 – 8
ತೊಗರಿ ಗೋಣಿ ಗಳ್ಳೆ	...	13 – 12	15 – 8
ತೊಗರಿ ಗೋಣಿ ಗಳ್ಳೆ	...	14 – 8	15 – 8
ತೊಗರಿಬೇಳೆ ಗೋಣಿ ಗಳ್ಳೆ	...	18 – 0	20 – 0
ಉದ್ದು ಗೋಣಿ ಗಳ್ಳೆ	...	14 – 8	15
ಹೆಸರು ಗೋಣಿ ಗಳ್ಳೆ	...	13 – 0	14 –
ಊರು ಬೆಲ್ಲ ಖಂಡಿ ಗಳ್ಳೆ	...	60 – 0	65
ಉಪ್ಪು ಗೋಣಿ ಗಳ್ಳೆ	...	4 – 8	4 – 12
ಚಂಡ್ರು ಖಂಡಿ ಗಳ್ಳೆ	...	130 0	–
ಕೊಬ್ಬರಿ ಹಿಂಡಿ ಖಂಡಿ ಗಳ್ಳೆ	...	47 – 8	49 – 8
ಎಳ್ಳಿಂಡಿ ಖಂಡಿ ಗಳ್ಳೆ	...	35 – 8	47 – 8
ಕೊಬ್ಬರಿ ಎಣ್ಣೆ ಮಣ ಗಳ್ಳೆ	...	7 – 10	7 12
ಎಳ್ಳೆಣ್ಣೆ ಮಣ ಗಳ್ಳೆ	...	8 – 0	8 – 6
ಹರಳೆಣ್ಣೆ ಬೆಳ್ತಿಗೆ ಗಳ್ಳೆ	...	7 – 2	7 4
ನೆಲಗಡಲೆ ಸಳ್ಳೆ ಮಣ ಗಳ್ಳೆ	...	3 – 11	3 – 12
ಹೊಸ ಮೆಣಸು	...	6 – 0	–
ಹೊಸ ಊರ ಮೆಣಸಿನಕಾಯಿ ಮಣ ಗಳ್ಳೆ		3 – 4	6 – 0
[illegible] ಮುಡಿ ಗಳ್ಳೆ	...	9 – 8	8 12
[illegible] ಮುಡಿ ಗಳ್ಳೆ	...	5 – 4	5 8
[illegible] ಖಂಡಿ ಗಳ್ಳೆ	...	39[illegible] – 0	400 – 0
[illegible] ಖಂಡಿ ಗಳ್ಳೆ	...	170 – 0	205 – 0
ಕಾಳುಮೆಣಸು ಖಂಡಿ ಗಳ್ಳೆ	...	525 – 4	525 – 8
[illegible] ಗಳ್ಳೆ	...	52 – 0	54 – 8
[illegible] ಮುಡಿ ಗಳ್ಳೆ	...	3 – 4	3 – 8
[illegible] ಖಂಡಿ ಗಳ್ಳೆ	...	40 – 0	42 – 8
[illegible] ಗಳ್ಳೆ	...	16 – 8	16 – 12
[illegible] ಗಳ್ಳೆ	...	21 – [illegible]	22 –
[illegible] ಗಳ್ಳೆ	...	15 – 0	–
[illegible] ಮಣ ಗಳ್ಳೆ	...	14 – 3	16 – 8
[illegible] ಗಳ್ಳೆ	...	12–7–6	–
[illegible]	...	70 –	85 – 0

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ॥ ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅನುಸರಿಸುವುದು, ಮತ್ತು

ಸ್ತ್ರೀಪುರುಷರನ್ನು ಆರೋಗ್ಯ ದೃಢಗಾತ್ರರಾಗಿರುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬದ್ಧ, ಧಾತುಕ್ಷಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರವಾಗುವ ಮತ್ತು ನಿವಾರಣೆಮಾಡುವ ಅದ್ಭುತ ಔಷಧಗಳು. ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1–0–0.

ಇವನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ವಿ. ಗೋಪಾಲಕೃಷ್ಣ, ಹಂಪನಕಟ್ಟಾ, ಮಂಗಳೂರು, ದ. ಕನ್ನಡ



ಪರೀಕ್ಷಿಸಿರಿ! ಕೃತಾರ್ಥರಾಗುವಿರಿ!!

ಚಿಕಿತ್ಸಾ ಅನ್ನ ... ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಶಥೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತರಿ ಶ್ರೀ ವೈದ್ಯ ... ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ... ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಾಪನೆಯಲ್ಲಿ ಸರ್ವ ಅದಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಶಿಷ್ಟ ಔಷಧಿಗಳು ನಮ್ಮಲ್ಲಿ ಯಾವಾಗಲೂ ಕಲಕಿನಲ್ಲಿ ತಯಾರಿರುತ್ತವೆ. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತಿಂದಿಗೆದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವೃತ್ತಿ ... ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಲಿಕ್ಕೆ ಶಕ್ತಿ ಉಳ್ಳವರೂ ಎಂಬ ಸಂಶಯ ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದಿದೆ ಎಂಬೀ ವಿವರಗಳು ಸಹಾ ... ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ... ಬಂದು ಸಂದರ್ಶಿಸಬೇಕಾದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ... ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ಸಹಾಯಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯವುಳ್ಳವರಾಗಿ ಮದ್ದುಗಳನ್ನು ಒದಗಿಸಿಕೊಡುವರೆ ಕೂಡ ವಿಚಾರಮಾಡಿ ... ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ (ದ. ಕ.)

ತಯಾರಾಗಿವೆ ತಯಾರಾಗಿವೆ!!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ

ಬೇಕಾಗುವಂಥಹ

ಚಕ್ರೋಲ್‌ಗಳು

ಮೂರು ಸೈಜಿನಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯತಿ ದರವಿದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೇನೇಜರ್.
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(192[illegible]ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 18[illegible]ನೇ ಇಸವಿ XXIನೇ ಆಕ್ಟಿನ ಪ್ರಕಾರವಾಗಿ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಕೂಡ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ "ಫಾರ್ಮೆಸಿ"ಯಲ್ಲಿ ಶಾಸ್ತ್ರರೀತ್ಯಾ ತಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟಮಾಡಿ ಹುಟ್ಟಿಬರುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ನಡೆಸುವ ಬಗ್ಗೆ ವಿನಿಯೋಗಿಸಲ್ಪಡುತ್ತದೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೆ ನಮ್ಮಲ್ಲಿ ತಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಸೆಕ್ರಿಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

ವರ್ತಮಾನ ಸಂಗ್ರಹಗಳು
ಊರಿನ ವರ್ತಮಾನ
ಪತ್ರಿಕಾ ಪತ್ರ — ಮಂಗಳೂರು, ಕಾರ್ಕಳ, ಬೆಳ್ತಂಗಡಿ, ಉಪ್ಪಿನಂಗಡಿ, ದೇರಳ ಮೂಡೂರು, ಬಂಟ್ವಾಳ, ಪಾಣೆ ಮಂಗಳೂರು, ಪಾವಳಕಟ್ಟ, ಸರಕೊಂಬು, ಮಂಜೇಶ್ವರ, ಕುಂಬಳೆ ಕುರ್ನಾಡು ,,
ಬಾಹ್ಯ ಸಮಾಚಾರಗಳು ೯
ಲಾಲಾಲಜಪತರಾಯರ ಮರಣ ೯
ಮೈಸೂರು ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿದ ಭಾಷಣದ ಸಾರಾಂಶ ೧೨
ಉಡುಪಿಯ ವಿಶೇಷ ಪತ್ರ ,,
ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತು ೧೪-೨
ಪತ್ರವ್ಯವಹಾರ ೧ ೨

ಸ್ವದೇಶಾಭಿಮಾನಿ.

ತಾರೀಕು ೨೩ನೇ ಶುಕ್ರವಾರ ನವಂಬರ ೧೯೨೮

ವಿಯೋಗ

ಲಾಲಾಜಿಯವರ ನಿಧನ! ಲಾಲಾಜಿಯವರ ಮರಣ! ಆಕಸ್ಮಿಕವಾಗಿ, ಅನಿರೀಕ್ಷಿತವಾಗಿ, ತಂತಿಗಳು ಈ ಸಂತಾಪಕರ ವಾರ್ತೆಯನ್ನು ಮಿಂಚಿ ಬಿಟ್ಟವು. ನಾವೂ ಕೇಳಿದೆವು. ಅತ್ತು ಬಿಡಲೆಂದರೆ ಕಣ್ಣುಗಳು ಬತ್ತಿಯೇ ಹೋಗಿರುವುವು. ಲೋಕಮಾನ್ಯ ತಿಲಕರ — ಆ ಸಂದಿಗ್ಧ ಸಮಯದಲ್ಲಿನ ಮರಣ; ದೇಶಬಂಧು ದಾಸರವರ ಆ ಚೇತನಾತ್ಮಕ ಸಮಯದಲ್ಲಿನ ಮರಣ! ಸ್ವಾಮಿ ಶ್ರದ್ಧಾನಂದಜಿಯವರ ಬಲಿದಾನ ರೂಪವಾದ ಮರಣ; ಇವುಗಳೇ ನಮ್ಮ ಕಣ್ಣುಗಳನ್ನು ಬತ್ತಿಬಿಟ್ಟಿರುವುವು. ಇಂದು ಆಕಸ್ಮಿಕವಾಗಿ, ನಮಗೆ ಅವರ ಬೋಧೆಯು ಬೇಕಾದ ಈ ಅತ್ಯಂತ ಸಂದಿಗ್ಧ ಸಮಯದಲ್ಲಿ ಲಾಲಾಜಿಯವರ ಮರಣ! ಮೃತ್ಯು!—ಎಂತಹ ಹೃದಯ ಹೀನನು ನೀನು!

ಶತಮಾನಗಳ ಪರಾಧೀನತೆಯನ್ನು ನಾವು ಬಲ್ಲೆವು. ಅದರ ಸುಖಗಳನ್ನೂ ನಾವು ಹೊಗಳುತ್ತಿರುವೆವು; ಅದರ ಯಾತನೆಗಳನ್ನು ನಾವು ಮರೆತಿರುವೆವು. ಪರದಾಸ್ಯವು ನಮ್ಮ ರಕ್ತದ ಪ್ರತಿ ಬಿಂದುವಿನಲ್ಲಿ ಸೇರಿಹೋಗಿದೆ. ಪಂಜರದ ಗಿಳಿಯಂತೆ ಅಧಿಕಾರಿಯ ಉಚ್ಚಾರಗಳನ್ನು ಪ್ರತಿ ಧ್ವನಿಸುವುದೇ ನಮಗೆ ಆನಂದ. ನಮ್ಮ ಜೀವಮಾನದ ಏಕಮಾತ್ರ ಕರ್ತವ್ಯ. ಸ್ವಾತಂತ್ರ್ಯದ ಆ ವೀರತೆಯು ನಮ್ಮಲ್ಲಿ ಎಲ್ಲಿಂದ ಬಂದೀತು?

ಆ ಪರದಾಸ್ಯದ ಮಾಯೆಯನ್ನು ಹರಿದೊಗೆದವರು ನೀವು. ಆ ಪರದಾಸ್ಯದ ಮಾಯೆಯನ್ನು ಹರಿದೊಗೆಯಲು ಯತ್ನಿಸಿದ ಕೆಲವೇ ವೀರರೊಳಗೆ ನೀವೊಬ್ಬರು ಪ್ರಮುಖರು. ನಿಮ್ಮ ವಾಣಿಯು ನಮ್ಮ ಮೋಹವನ್ನು ಕಳೆಯಿತು; ನಿಮ್ಮ ವಾಣಿಯು ನಮ್ಮನ್ನು ಸ್ವಪ್ನರಾಜ್ಯದಿಂದ ಎಚ್ಚರಿಸಿತು; ನಿಮ್ಮ ವಾಣಿಯೇ ನಮ್ಮ ಪರಾಧೀನತೆಯ ಗೂಡಿಗಿಂತಲೂ ವಿಶಾಲವಾದ ವಿಶ್ವವು ಹೊರಗಿದೆಯೆಂಬ ನವೀನ ಬೋಧೆಯನ್ನು ಕೊಟ್ಟಿತು.

ಇಂದು ಆ ಮಹಾನ್ ಯೋದ್ಧರ ಮೂರ್ತಿಯು ನಿಶ್ಚೇತನವಾಯಿತು! ಭಾರತೀಯು ನಮಗೆ ಪುನಃ ಆಹ್ವಾನ ಮಾಡುವಳು—ನಮ್ಮ ಕಟಬನಿಯ ಕಡೆಯ ಕಾಣಿಕೆಯನ್ನು ಕೊಡಲೆಂದು. ಜೀವನವೆಲ್ಲಾ ಒಂದು ಪ್ರಚಂಡ ಸಮರಭೂಮಿಯೆಂದು ಪರಿಗಣಿಸಿದ ಆ ವೀರನಿಗಾಗಿ ಎರಡು ಬಿಂದು ಕಂಬನಿಗಳ ನಮ್ಮಿಂದ ಸುರಿಯಬೇಕು. ಆದರೆ…………

ದಾಸ್ಯವನ್ನನುಭವಿಸಿ ಸ್ವಾತಂತ್ರ್ಯದ ಆಶಯದ ಸಂದೇಶವನ್ನು ಹೊರಗೆಡಹಿದಿರಿ. ಸ್ವದೇಶದಿಂದ ಬಹಿಷ್ಕೃತರಾದರೂ ಮಾತೆಯ ಯಾತನೆಯನ್ನು ಮರೆಯಲಾರದೆ ಹೋದಿರಿ. ಶಾಂತ ನಮ್ಮ ಪ್ರಯತ್ನದ ಪ್ರತಿಫಲವಾಗಿ ನಮ್ಮ ರಾಷ್ಟ್ರವು [illegible] ರಂಗದಿಂದ ಪ್ರಹಾರಗಳು ಬಿದ್ದರೂ ಕೂಡಾ ಶ್ರೀಕೃಷ್ಣನು ಅರ್ಜುನನಿಗೆ ಮಾಡಿದ ಉಪದೇಶದಂತೆ ಅಸ್ಪೃಶ್ಯತೆ, ಅನ್ಯಾಯವೆನ್ನಿರಿಯೂ ಸಿದ್ಧರಾದರೂ ದೇಶದ ಸೇವೆಯನ್ನು ನಿರಾಕರಿಸಲಾರದಾದಿರಿ. ಆ ನಿಮ್ಮ ಪ್ರಚಂಡ ಅಭ್ಯುದಯದ ಪವಿತ್ರ ಮೂರ್ತಿಯು ನಮ್ಮ ಕನಸಿನಿಂದ ನಮ್ಮ ಸಮ್ಮುಖದಲ್ಲಿ ನಿಲ್ಲುತ್ತಿದೆ. ನಾವದನ್ನು ಪೂಜಿಸುವೆವು. ನಾವದನ್ನು ಅನುಕರಿಸುವಂತೆ ನೀವು ಪ್ರೇರಿಸಬಲ್ಲಿರಾ?

ನಿಮ್ಮ ನಿಧನದ ಸಂತಾಪವನ್ನು ನೆನೆದು ನಾವು ಅಳುವುದಿಲ್ಲ. ನಿಮ್ಮ ವಿಯೋಗವು ಅಷ್ಟು ಕ್ಷುದ್ರವಾದುದಲ್ಲ. ನಿಮ್ಮ ವಿಯೋಗವನ್ನು ನಾವು ಗೌರವಿಸಬಲ್ಲೆವೆ? ಅದರ ಪ್ರತ್ಯಕ್ಷರಂತೇ ನಮ್ಮ ಸಂತಾಪದ ನಿಜವಾದ ಅಳತೆಯನ್ನು ತೋರಿಸಲಿ!

ವಿದೇಶ ವರ್ತಮಾನ.

— ಪರ್ಶಿಯದ ಹಿಂದಿನ ಶಾಹರು ನ್ಯೂಲ್ಲಿ ಎಂಬಲ್ಲಿರುವ ಆಸ್ಪತ್ರೆಯೊಂದರಲ್ಲಿ ಒಪರೇಶನನ್ನು ಮಾಡಿಸಿದ್ದರು. ಈಗ ಅವರು ಸೌಖ್ಯ ಹೊಂದುತ್ತಾ ಬರುತ್ತಿರುವರು.

— ಇಂಗ್ಲಾಂಡಿನಲ್ಲಿ ಹಲವು ವರುಷಗಳಿಂದೀಚೆಗೆ ಬಾರದೆ ಇದ್ದಂತಹ ಬಿರುಗಾಳಿ ಮಳೆಯು ಬಂದಿರುತ್ತದೆಂದು ವರ್ತಮಾನ ಬಿದೆ. ಸುಮಾರು ೨೦೦ ಕಡೆಗಳಲ್ಲಿ ಟೆಲಿಫೋನು ಸಂಗೆಗಳು ಬಿದ್ದಿರುವವು. ನದಿಯಲ್ಲಿ ನಿಂತಿದ್ದ ಹಡಗುಗಳು ಬಿರುಗಾಳಿಯಿಂದ ಅಲ್ಲೋಲ ಕಲ್ಲೋಲವಾಗಿ ಹೋದವು. ಕಟ್ಟುತ್ತಾ ಇದ್ದ ಸುಮಾರು ೫೦ ಮನೆಗಳು ಕುಸಿದು ಬಿದ್ದು ಹೋಗಿರುತ್ತವೆ.

ಮೊರೊಕ್ಕೊವಿನಲ್ಲಿ ಒಬ್ಬ ಫ್ರೆಂಚ ಆಫೀಸರನ್ನು ಮೊರೊಕ್ಕೊವಿನ ಜನರಿಗೆ ಪವಿತ್ರವಾದ ಸ್ಥಳದಲ್ಲಿ ಅನಾಚಾರಗಳನ್ನು ಮಾಡಿದ ಫಲವಾಗಿ ಯುವಕನೊಬ್ಬನಿಂದ ಕೊಲ್ಲಲ್ಪಟ್ಟಿರುವನು.

— ಎಮ್‍ಸ್ಟರ್‌ಡೇಮಿನಿಂದ ಹೊರಟ ಡಚ್ಚರ ವಿಮಾನವು ಹತ್ತು ದಿನಗಳೊಳಗೆ ಡಚ್ ಇಂಡಿಸಿಗೆ ಹೋಗಿಯೂ ಹಿಂತಿರುಗಿ ಎಮ್‍ಸ್ಟರ್‌ಡೇಮಿಗೆ ತಲುಪಿರುತ್ತದೆ. ಹೋಗುವಾಗ ಹಾದಿಯಲ್ಲಿ ಹಲವು ಕಡೆಗಳಲ್ಲಿ ಟಪ್ಪಾಲು ತಲುಪಿಸಲಿಕ್ಕಿದ್ದಿತು. ಈಗಿನದ್ದಕ್ಕಿಂತ ದೊಡ್ಡ ವಿಮಾನಗಳನ್ನು ಕಟ್ಟಿದುದಾದರೆ ಇನ್ನಷ್ಟು ವೇಗವಾಗಿ ಅದು ಹಾರಬಲ್ಲುದೆಂದು ಅವರಿಗೆ ಕಂಡಿರುತ್ತದೆ.

— ಮುಂಬಾಯಿಯಿಂದ ಹೆಂಬರ್ಗಿಗೆ ಹೋಗುವ ಬ್ರಿಟಿಷರ ಹಡಗದಲ್ಲಿ ತುಂಬಿಸಿದ ಹತ್ತಿಗೆ ಬೆಂಕಿ ತಗಲಿದ ಕಾರಣ ಹಡಗವನ್ನು ಅಲ್ಜೀರು ಎಂಬ ಬಂದರದಲ್ಲಿ ಲಂಗರು ಹಾಕಿ ನಿಲ್ಲಿಸಬೇಕಾಯಿತು.

ಜರ್ಮನಿಯ ರೂರ್ ಮೊದಲಾದ ಪ್ರಾಂತಗಳಲ್ಲಿ ಮಿಲ್ಲುಗಳೆಲ್ಲವನ್ನೂ ಮುಚ್ಚಿರುವ ಕಾರಣ ಸುಮಾರು ಕಾಲು ಮಿಲಿಯಕ್ಕೆ ವಿಕ್ಕಿದ ಜನರಿಗೆ ಬಹಳ ತೊಂದರೆ ಯುಂಟಾಗಿದೆ. ಡುಸ್ಸೆಲ್‌ಡೋರ್ಫಿನ ಗವರ್ನರರೂ ದ್ವಿಪಕ್ಷಗಳೊಳಗೂ ರಾಜಿಯನ್ನು ಉಂಟುಮಾಡಲು ಪ್ರಯತ್ನಿಸುತ್ತಿರುವರು.

— ದಕ್ಷಿಣ ಆಫ್ರಿಕದಿಂದ ರೈಟ್ ಆನರೇಬಲ್ ವಿ. ಎಸ್. ಶ್ರೀನಿವಾಸ ಶಾಸ್ತ್ರಿಯವರು ಬರುವ ದಶಂಬರ ಅಂತ್ಯದೊಳಗೆ ಹಿಂದೂಸ್ಥಾನಕ್ಕೆ ಹಿಂದಿರುಗುವರು. ಅವರ ಬದಲು ಮದರಾಸು ಸರಕಾರದ ಮಾಜಿ ಮಂತ್ರಿಯವರಾದ ಸರ್. ಕೆ. ವಿ. ರೆಡ್ಡಿಯವರು ಹೋಗುವರು.

— ಕಳೆದ ವಾರದ ಎರಡು ದಿನಗಳಲ್ಲಿ ಇಂಗ್ಲಾಂಡಿನಲ್ಲಿ ಬಂದ ಬಿರುಗಾಳಿಯಿಂದ ಒಟ್ಟಾರೆ ೨೦ ಜನರು ಸತ್ತಿರುವರು. ಎಂಗೊಸ್ತಿಯಿಂದ ಬಂದ ಮೇರಿವಿನ್ ಎಂಬ ಹಡಗವು ಒಂದು ಬಂಡೆ ಕಲ್ಲಿಗೆ ಹೊಡೆಯಲ್ಪಟ್ಟು ಪ್ರಯಾಣಿಕರೆಲ್ಲರೂ ಮುಳುಗಿ ಹೋದರು, ಒಬ್ಬ ಹದಿನಾರು ವರುಷದ ಬಾಲಕನ್ನು ಮಾತ್ರ ಉಳಿದು ಆ ಬಂಡೆಯ ಮೇಲೆ ಒಂಬತ್ತು ದಿನದ ತರುವಾಯ ಬೇರೆ ಹಡಗದವರು ಈತನು ಕಲ್ಲಿನಮೇಲೆ ಬಿದ್ದಿರುವನನ್ನು ಕಂಡು ಹಡಗಕ್ಕೆ ಒಯ್ದು ಬದುಕಿಸಿದರು.

— ಅಂತರ್ರಾಷ್ಟ್ರೀಯ ವೈದಿಕ ಶಾಲೆಯು ಬ್ರಿಟಿಷ ಶಾಖೆಯೊಂದು ಲಂಡನಿನಲ್ಲಿ ಸ್ಥಾಪಿಸಲ್ಪಟ್ಟಿರುವುದು. ಲೋರ್ಡ್ ರೊನಾಲ್ಡ್ ಶೇ ಎಂಬವರು ಇದಕ್ಕೆ ಪ್ರೆಸಿಡೆಂಟರಾಗಿ ಬರ್ದವಾನಿನ ಮಹಾರಾಜರು ವೈಸ್ ಪ್ರೆಸಿಡೆಂಟರಾಗಿರುವರು.

— ಇಂಗ್ಲಾಂಡಿನಲ್ಲಿ ಈಗ ಕಾಗದಗಳಿಗೆ ೩೧ ಪೆನ್ನಿನ ಚೀಟನ್ನು ಹಚ್ಚಬೇಕಾಗಿದೆ. ಬಹಳ ಹಿಂದೆ ಒಂದು ಪೆನ್ನಿಯ ಚೀಟು ವಾಡಿಕೆಯಲ್ಲಿದ್ದಿತು. ಯುದ್ಧದ ಸಮಯದಲ್ಲಿ ಹಣದ ಅಭಾವದ ದೆಸೆಯಿಂದ ಈ ಹಣವನ್ನು ಏರಿಸಬೇಕಾಯಿತು. ಇನ್ನು ಮುಂದಕ್ಕೆ ಇದೇ ಪೆನ್ನಿ ಚೀಟಿನ ವಾಡಿಕೆಯನ್ನು ಜ್ಯಾರಿಗೆ ತರಬೇಕೆಂದು ಸರಕಾರದವರು ಯೋಚಿಸುತ್ತಿರುವರು.

— ಇಜಿಪ್ಟಿನ ಒಂದು ವರ್ತಮಾನ ಪತ್ರಿಕೆಯ ಸಂಪಾದಕನು ನಿಂದ್ಯವಾದ ರೀತಿಯಲ್ಲಿ ಭಾಷಣವನ್ನು ಮಾಡಿದುದರಿಂದ ಕೈದುಮಾಡಲ್ಪಟ್ಟಿರುವನು.

— ಹಿಂದೂ ದೇಶವನ್ನು ಸಂದರ್ಶಿಸಲು ಬಂದ ರಶ್ಯದ ವಿಜ್ಞಾನ ಶಾಸ್ತ್ರಜ್ಞನೋರ್ವನು ತನಗೆ ಬಹಳ ಅಪಮರ್ಯಾದೆ ಯುಂಟಾಗಿದೆಯೆಂದು ರಶ್ಯದಲ್ಲಿ ದೂರು ಕೊಟ್ಟಿರುವನು. ಇಜಿಪ್ಟದಲ್ಲಿ ಬ್ರಿಟಿಷ ಅಧಿಕಾರಿಗಳು ಈತನನ್ನು ಕಾಯುವದಕ್ಕಾಗಿ ಒಬ್ಬ ಪೋಲಿಸನನ್ನು ನೇಮಿಸಿದ್ದರು. ಸ್ವತಂತ್ರವಾಗಿ ವರ್ತಿಸಲು ಆತನನ್ನು ಬಿಟ್ಟಿದ್ದೇ ಇಲ್ಲ. ಇವುಗಳೆಲ್ಲವನ್ನೂ ಕೇಳಿ, ಸಾಯನ್ಸ್ ಕೊಲೆಜಿನ ಪ್ರೊಫೆಸರರಿಗೆ ಬಹಳ ಸಿಟ್ಟುಂಟಾಗಿರುತ್ತದೆ.

ಸ್ವದೇಶ ವರ್ತಮಾನ.

— [illegible] ಶ್ರೀಯುತ ಎಚ್. ಸರವಣನ ಹೆಸರನ್ನು [illegible]

— ಕಲ್ಕತ್ತದಲ್ಲಿ ಕಳೆದ ೨೨ ವರುಷ [illegible] ಹೊರಡಿಸಲ್ಪಡುತ್ತಿದ್ದ 'ಇಂಡಿಯನ್ ಎಂಪಾಯರ್' [illegible] ಈ ತಿಂಗಳ ಆಖೈರಿಯಿಂದ ನಿಲ್ಲಿಸಲ್ಪಡುವದು.

— ದಶಂಬರ ೨೬ನೇ ತಾರೀಕಿಗೆ [illegible] ಅಖಿಲ ಭಾರತ ಮುಸಲ್ಮಾನರ ವಿದ್ಯಾ ಪರಿಷತ್ತಿಗೆ [illegible] ಹ್ಯಾಕೋರ್ಟಿನ ಜಡ್ಜ ಸುಲೈಮಾನರವರು ಅಧ್ಯಕ್ಷ[illegible]

— ಅಲಹಾಬಾದ ಯುನಿವರ್ಸಿಟಿಯು [illegible] ಸರ್ ಜಗದೀಶ ಚಂದ್ರಬೋಸರಿಗೆ ಡಾಕ್ಟರ್ [illegible] ಗೌರವದ ಬಿರುದು ಕೊಡಲ್ಪಟ್ಟಿದೆ.

— ಕಳೆದ ಒಂದು ವರುಷದಿಂದೀಚೆ ಬಂಗಾಳದಲ್ಲಿ [illegible] ಮಿಕ್ಕಿದ ಜನರಿಗೆ ಕೋಲೆರಾ ರೋಗದ ಪೆಟ್ಟಿನಿಂದ [illegible] ಇಷ್ಟು ಜನರು ರೋಗಾತುರತೆಯವರಾಗಿರುವರು. [illegible] ಹಾಕಿಸಲು ಒಪ್ಪುವದೇ ಇಲ್ಲವಂತೆ.

— ಸೈಮನ್ ಕಮಿಶನು ಕಳೆದ ಸೋಮವಾರ ಮತ್ತು ಮಂಗಳವಾರ ಪೇಶಾವರದಲ್ಲಿದ್ದಿತು. ಅಲ್ಲಿಂದ ದಿಲ್ಲಿಗೆ ಹೋಗಿ ಅಲ್ಲಿನ ಕೆಲಸವನ್ನು ಮುಗಿಸಿ ಅಗ್ರಾದಲ್ಲಿ ಎರಡು ದಿನಗಳ ರಜೆಯಿಂದ ವಿಶ್ರಾಂತಿಯನ್ನು ಹೊಂದುವುದು.

— ತಿನ್ನವೆಲ್ಲಿಯ ಸಮೀಪ ಒಬ್ಬ ಹೊಳೆಯಲ್ಲಿ ಹೆಂಗಸು [illegible] ನದಿಯಲ್ಲಿ ಬಿದ್ದು ಮೃತಪಟ್ಟಳು.

ತಂಜಾವೂರಿನಲ್ಲಿ ಕಳೆದ ನಾಲ್ಕೈದು ದಿನಗಳಿಂದ ವಿಶೇಷವಾದ ಮಳೆ ಬಂದು ಕೆಲವು ಮಾರ್ಗಗಳಲ್ಲೆಲ್ಲ ನೀರು ತುಂಬಿ ಹೊಳೆಯಾಗಿತ್ತು. ಒಂದೆರಡು ಮಾರ್ಗಗಳಲ್ಲಿನ ಮನೆಗಳು ಕುಸಿದು ಬಿದ್ದು ಹೋದವಾದರೂ, ಪ್ರಾಣಾಪಾಯವುಂಟಾಗಲಿಲ್ಲ.

— ಈಸ್ಟ್ ಇಂಡಿಯನ್ ರೈಲ್ವೆಯ ಕೆಲಸಗಾರರ ಕೆಲಸದ ಸಮಯ ಮೊದಲಾದವುಗಳ ಕುರಿತು ಬೇಗನೇ ವಿಚಾರಣೆಯನ್ನು ನಡೆಸಬೇಕೆಂದು ಇಂಡಿಯಾ ಸರಕಾರದವರು ಹುಕುಮು ಕೊಟ್ಟಿರುವರು. ವಿಚಾರಣೆಯು ಕಲಕತ್ತದಲ್ಲಿ ಪ್ರಾರಂಭಿಸಿ, ಮುಂಬಾಯಿ, ಮದರಾಸು ಮೊದಲಾದ ಪಟ್ಟಣಗಳಲ್ಲಿಯೂ ನಡೆಯುವದು.

ಸಮ್ಮತಿ ವಯಸ್ಸಿನ ಕಮಿಟಿಯು ವಿಚಾರಣೆಯು ಈಗ ಮದರಾಸಿನಲ್ಲಿ ಪ್ರಾರಂಭಿಸಿರುತ್ತದೆ.

— ಮದರಾಸಿನಿಂದ ೧೬ ಮೈಲು ದೂರದ ಒಂದು ಹಳ್ಳಿಯಲ್ಲಿ ಸೂರ್ಯಗ್ರಹಣದ ಸಮಯ ಸಮುದ್ರ ಸ್ನಾನವನ್ನು ಮಾಡುತ್ತಿದ್ದ ಒಬ್ಬ ಕಾರಕೂನನು ನೀರಿಗೆ ಬಿದ್ದು ಸತ್ತುಹೋದನು. ಆತನ ಶವವು ನಾಲ್ಕು ದಿವಸಗಳ ತರುವಾಯ ದಡಕ್ಕೆ ತಂದು ಹಾಕಲ್ಪಟ್ಟಿತು. ಈ ನಾಲ್ಕು ದಿನಗಳ ಅವಧಿಯಲ್ಲಿ ಆತನು ಎಲ್ಲಿರುವನು, ಏನಾದನು ಎಂಬುದನ್ನು ತಿಳಿಯದೆ ಆತನನ್ನು ಗೊತ್ತು ಹಿಡಿಯುವದಕ್ಕಾಗಿ ಆತನ ಕುಟುಂಬದವರು ಬಹಳ ಪ್ರಯತ್ನಿಸಿದರು.

— ಕುಂಭಕೋಣದಲ್ಲಿ ಹಲವು ದಿನಗಳವರೆಗೆ ಅತಿ ಮಳೆಯು ಬಂದ ಕಾರಣ ಶ್ರೀ ಕುಂಭೇಶ್ವರ ಸ್ವಾಮಿ ದೇವಾಲಯದ ಒಂದು ಭಾಗವು ಬಿದ್ದು ಹೋಯಿತು.

— ಕೊಯಂಬುತ್ತೂರಿನಲ್ಲಿ ಇಬ್ಬರು ಪೋಲೀಸರು ಒಬ್ಬ ಕಳ್ಳನನ್ನು ಹೋಗಬಿಟ್ಟರು. ಅದಕ್ಕಾಗಿ ಮೆಜಿಸ್ಟ್ರೇಟರಿಗೊ ಒಬ್ಬೊಬ್ಬ ಪೋಲೀಸನಿಗೆ ೫೧ ರೂಪಾಯಿಗಳ ಪ್ರಕಾರ ಜುರುಮಾನೆ ವಿಧಿಸಿದರು.

— ಅಖಿಲ ಭಾರತ ಗಾಯನ ಪರಿಷದದ ಆರನೇ ಪರಿಷದವು ಆಲವಾರದಲ್ಲಿ ನಡೆಯುವದು. ಅದು ದಶಂಬರ ೮ನೇ ತಾರೀಕಿಗೆ ಪ್ರಾರಂಭಿಸಿ, ೧೩ನೇ ತಾರೀಕಿಗೆ ಕೊನೆಗಾಣುವುದು.

— ಕರಾಚಿಯಲ್ಲಿ ಕಳೆದ ಶನಿವಾರ ಪೋಸ್ಟ್ ಆಫೀಸಿನ ಕ್ಲಾರ್ಕರು ಕ್ವೆಟ್ಟಾದಿಂದ ಬಂದ ಎರಡು ಟಪ್ಪಾಲು ಚೀಲಗಳನ್ನು ಒಡೆದು ನೋಡಿದಾಗ ೬,೦೦೦ ರೂಪಾಯಿ ಮೌಲ್ಯದ ರಿಜಿಸ್ಟರ್ಡ್ ಪೆಕೆಟುಗಳು ಕಳವಾಗಿದ್ದುವು. ಪಂಜಾಬದ ಒಂದು ಸಣ್ಣ ಪೋಸ್ಟಾಫೀಸಿನ ಕ್ಲಾರ್ಕನೊಬ್ಬನನ್ನು ಗುಮಾನಿನ ಮೇಲೆ ಹಿಡಿದಿರುವರು. ಈ ಕಳವಿನ ಕುರಿತು ಏನಾದರೂ ಸೂಚನೆಗಳನ್ನು ಕೊಟ್ಟರೆ ಇನಾಮು ಕೊಡುವುದಾಗಿ ಪ್ರಕಟಿಸಿರುತ್ತಾರೆ.

— ಪ್ರತಿಯೊಂದು ಗಲಾಸು ಪೆಟ್ರೋಲು [illegible] ಉತ್ಪತ್ತಿಗಳ ಮೇಲೆ ಒಂದೊಂದು ಆಣೆ ತೆರಿಗೆ ಹೊರಿಸಬೇಕೆಂದು ದಿಲ್ಲಿ ಮುನಿಸಿಪಲ್ ಕಮಿಟಿಯವರು ನಿಶ್ಚಯಿಸಿರುವರು.

— ಜರಿಯ ಎಂಬಲ್ಲಿ ಒಂದು ಬೊಂಬು ಒಡೆದುಹೋಗಿ ಆರು ಜನರು ಜಖಮು ಹೊಂದಿದ್ದರು. ಪೇಶಾವರದಿಂದ ೬ ಜನರು ವೃತ್ತಿ ವಿದೇಶ ಯಾತ್ರೆಗಾಗಿ ಬಂದು ಒಂದು ಕಟ್ಟಡದ ಕೋಣೆಯಲ್ಲಿ ಮಲಗಿದ್ದರು. ಅಲ್ಲಿ ಬೊಂಬು ಒಡೆಯಿತು. ಸುಮಾರು ೪೫ ವರುಷ ಪ್ರಾಯದ ಗಾಡಿಕಾರನು ಸತ್ತುಹೋದನು. ಬೊಂಬು ಒಡೆಯಲು ಕಾರಣವೇನೆಂಬುದು ಇನ್ನೂ ಗೊತ್ತಾಗಿಲ್ಲ. ತನಿಖೆಯು ನಡೆಯುತ್ತಲಿದೆ.

ಮುಂಬಾಯಿಯ ಮೂರು ಗಿರಣಿಗಳಲ್ಲಿ ಕಳೆದ ಶನಿವಾರ ಮುಷ್ಕರವುಂಟಾಯಿತು. ಒಟ್ಟು ೨,೩೦೦ ನೇಕಾರರು ಕೆಲಸಮಾಡಲಿಲ್ಲ. ಸಂಬಳ ಕಡಿಮೆ ಕೊಟ್ಟಿರೆಂಬುದೇ ಅವರ ದೂರು. ಗಿರಣಿಗಳ [illegible] ಬಿಸಾಡ ತೊಡಗಿದುದರಿಂದ ಅಲ್ಲಿ ಪೋಲಿಸರು ಬರಬೇಕಾಯಿತು. ಜಗಳವು ಪ್ರಾರಂಭಿಸಿತು. ಫಲತಃ ಮೂವರು ಪೋಲೀಸರಿಗೂ, ೨೦ [illegible] ಜಖಮಾಗಿರುತ್ತದೆ.

— ಅಹಮದಾಬಾದದಲ್ಲಿ ಒಂದು ಕೃಷಿ ಪ್ರದರ್ಶನವಾಗಿತು. ಇದನ್ನು ಗವರ್ನರ ಧೊರೆಗಳಾದ ಸರ್ [illegible] ಪ್ರದರ್ಶನವು ಬಹಳ ಬೋಧಪ್ರದವಾಗಿದ್ದಿತು.

— ಯುರೋಪ ದೇಶವನ್ನು ಸಂಚರಿಸುವ ಸಲುವಾಗಿ ಹೋಗಿದ್ದ ಭೋಪಾಲದ ನವಾಬರು ಹಿಂತಿರುಗಿ ಬಂದಿರುವರು.

[illegible] ಇರುವ ಮಂಗಳೂರು ಪಂಚಾಯತಿ ಡಿಸೆಂಬರ [illegible] ಮತ್ತು [illegible] ಇರುವುದು.

[illegible] ಸುಬೇದಾರರು ಎಕ್ಸಿಕ್ಯುಟಿವ್ ಕೌನ್ಸಿಲಿನ [illegible] ರಾಜ ಕೊಡುವವರಲ್ಲಿ ಶ್ಮಾರಿಂದ ವರ್ಷ [illegible] ಯಾರನ್ನು ನೇಮಿಸಬಹುದೆಂದು ಸರಕಾರ [illegible] ಯುಂಟಾಗಿದೆ.

[illegible] ಪೇಟ್ರೋಲಿಗೆ ಬರ್‍ರ ಬಂದಕಾರಣ ಈಗ ಎಲ್ಲಾ [illegible] ಕ್ಕೆ ದರದಲ್ಲಿಯೇ ಪೆಟ್ರೋಲು ಮಾರ [illegible] ಮಾಡಿದರುವಲ್ಲಿ ಅವರ ಲ್ಯಾಸೆನ್ಸನ್ನು ತೆಗೆದುಹಾಕ [illegible] ಕೃಪಿಸಿರುವರು. ಇದರಿಂದ ಪೆಟ್ರೋಲಿನ ಕ್ರಯವು [illegible] ಇದ್ದು ಜನರಿಗೆ ಸ್ವಲ್ಪ ಸುಲಭವಾಗಿರುತ್ತದೆ.

—[illegible] ಹ್ಯಾಕೋರ್ಟಿನಲ್ಲಿ ಒಂದು ಅಪೀಲಿನ ವ್ಯಾಜ್ಯ [illegible] ಬಂದಾಗ ಅಲ್ಲಿರುವ ವ್ಯಾಜ್ಯದಲ್ಲಿ ತನ್ನ ಪಕ್ಷದ ಕಡೆಗೆ ಜಯ [illegible] ದರೆ ಐದು ಸಾವಿರ ರೂಪಾಯಿ ಲಂಚ ಕೊಡುವೆನೆಂದು ಒಂದು ಪಕ್ಷದವನು ತನಗೆ ಕಾಗದ ಬರೆದಿರುವನೆಂದು ಜಾಡಿ ಹೇಳಿದರು. [illegible] ಯಾರಿಂದಲೋ ಫೋರ್ಜರಿ ಮಾಡಲ್ಪಟ್ಟಿತ್ತೆಂದು ವಕೀಲ [illegible].

ದಕ್ಷಿಣ ಕನ್ನಡ.

ಮಂಗಳೂರು:—ದಕ್ಷಿಣ ಕನ್ನಡ ಜಿಲ್ಲಾ ಐದನೇ ಪರಿಷತ್ತು ತಾರೀಖು ೧೭ನೇ ಶನಿವಾರ ಪ್ರಾರಂಭಿಸಿತು. ಅಧ್ಯಕ್ಷರಾದ ಶ್ರೀಯುತ ಕೆ. ಎಫ್. ನರಿಮೋನರವರು ಚಿಕ್ಕಮಗಳೂರು ಹಾದಿಯಾಗಿ ಮೋಟಾರಿನಲ್ಲಿ ತಾರೀಖು ೧೬ನೇ ದಿನ ಸಾಯಂಕಾಲ ಬಂದಿಳಿದರು; ಅವರು ಬಂದು ತಲುಪಿದೊಡನೆ, ಸ್ವಯಂಸೇವಕರಿಗೆಲ್ಲ ಸತ್ಕಾರಗಳನ್ನವರಿಗೆ ಸಮರ್ಪಿಸಿ, ಮೆರವಣಿಗೆಯನ್ನು ಗೈದರು. ಈ ಪರಿಷತ್ತಿಗೆ ಮುಂಬಾಯಿಯ 'ನೆಶನಲ್ ಹೆರಾಲ್ಡ್' ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಬಿ. ಜಿ. ಹಾರ್ನಿಮೆನ್ನರೂ ಬಂದುದು ಅಭಿಮಾನಾಸ್ಪದ. ೧೭ನೇ ಸಾಯಂಕಾಲ ಸಭೆ ನೆರೆಯಲು ತೊಡಗಿದಾಗ, ಶ್ರೀ [illegible] ಯವರ ನಿಧನದ ವಾರ್ತೆಯು ಬಂದ ಕಾರಣ ಸಭೆಯು ಮರುದಿನಕ್ಕೆ ಮುಂದರಿಸಲ್ಪಟ್ಟಿತು. ತಾರೀಖು ೧೮ನೇ ಆದಿತ್ಯವಾರ ಪ್ರಾತಃಕಾಲ ಸ್ವಾಗತಾಧ್ಯಕ್ಷರಾದ ರಾ। ಜಿ. ಎ. ಸಲ್ಡಾನರು ಸ್ವಾಗತ ಭಾಷಣವನ್ನು ಓದಿದ ಮೇಲೆ, ಅಧ್ಯಕ್ಷರು ಬಹಳ ಸಮಯದವರೆಗೆ ಇಂಗ್ಲಿಷಿನಲ್ಲಿ ಭಾಷಣವನ್ನು ಮಾಡಿದರು. ಭಾಷಣದ ಸಾರಾಂಶವನ್ನು ಬೇರೊಂದೆಡೆಯಲ್ಲಿ ಕೊಟ್ಟಿರುವೆವು. ಸಾಯಂಕಾಲವೂ ಸಭೆಯು ಮುಂದರಿಸಲ್ಪಟ್ಟು, ಹಲವು ಠರಾವುಗಳು ಅಂಗೀಕೃತವಾದವು.

ಯುವಕ ಪರಿಷತ್ತು ಆದಿತ್ಯವಾರ ಸಾಯಂಕಾಲ ಶ್ರೀ ನರಿಮೋನರ ಅಧ್ಯಕ್ಷತೆಯಲ್ಲಿ ನೇಶನಲ್ ಗರ್ಲ್ಸ ಸ್ಕೂಲಿನಲ್ಲಿಯೇ ನಡೆಯಿತು. ಅಧ್ಯಕ್ಷರು ಬಹಳ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು, ಮತ್ತು ಹಲವು ಠರಾವುಗಳೂ ಅಂಗೀಕೃತವಾದವು. ಮುಖ್ಯವಾಗಿ ಯಾವುವೆಂದರೆ, ಯುವಕ ಸಂಘವು ಎಲ್ಲರಿಗೂ ಸಂಬಂಧಿಸಿದುದಾಗಿರಬೇಕು. ಹಿಂದೂಸ್ತಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವೇ ಸಿಕ್ಕಬೇಕೆಂದು ಯುವಕರು ಸಾಧಿಸಬೇಕು. ವಿವಾಹ ವಯಸ್ಸನ್ನು ಹೆಚ್ಚಿಸುವದಕ್ಕೆ ಯುವಕರು ಸಮ್ಮತಿಸಬೇಕು. ಮೊದಲಾದವುಗಳು ಮಂಜೂರಾದವು. ಮತ್ತು ಯುವಕರ ಶಾರೀರಿಕ ಬಲವನ್ನು ಹೆಚ್ಚಿಸುವ ಕುರಿತಾದ ನಿರ್ಣಯಗಳೂ ಆದವು.

ತಾರೀಖು ೧೬—೧೧—'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೧೭ ಮರಣಗಳಾದವು. ಜನನ ಸಂಖ್ಯೆಯು ೪೯.

ಸೀನಿಯರ್ ಮತ್ತು ಜೂನಿಯರ್ ಟುರ್‍ನ್ಮೆಂಟ್ ಪಂದ್ಯಾಟವು ಇಲ್ಲಿಯ ಮೈದಾನಿನಲ್ಲಿ ನಡೆದು ಜೂನಿಯರ್ ಪಂದ್ಯಾಟದಲ್ಲಿ ಮಿಶನ್ ಹೈಸ್ಕೂಲಿನವರೂ, ಸೀನಿಯರ್ ಪಂದ್ಯಾಟದಲ್ಲಿ ಕೆನರಾ ಹೈಸ್ಕೂಲಿನವರು ಗೆದ್ದಿರುವರು.

ಇಲ್ಲಿಯ ಕೆನರಾ ಹೈಸ್ಕೂಲಿನಲ್ಲಿ ಕಳೆದ ಶನಿವಾರದಿಂದ ಮೈಸೂರಿನ ಶ್ರೀ ಸಂಗಮೇಶ್ವರ ಕೃಪಾಪೋಷಿತ ಬಾಲಕಲಾವರ್ಧಿನಿ ನಾಟಕ ಸಭೆಯವರು ತಮ್ಮ ಅದ್ಭುತವಾದ ನಾಟಕಗಳನ್ನು ಆಡಿ ತೋರಿಸಲು ಪ್ರಾರಂಭಿಸಿರುವರು. ಈ ನಾಟಕದಲ್ಲಿ ಪಾತ್ರವನ್ನು ವಹಿಸುವವರು, ಕೇವಲ ಚಿಕ್ಕ ಬಾಲಕರುಗಳಾಗಿದ್ದರೂ, ಇವರ ಅಭಿನಯ, ಸಂಗೀತ, ಹಾಸ್ಯಚಟುಕ್ತಿ ಇವು ಪ್ರಶಂಸನೀಯವಾಗಿವೆ. ಇವರಿಗೆ ತುಂಬಾ ಪ್ರೋತ್ಸಾಹವು ಸಿಕ್ಕಲೆಂದು ನಾವು ಹಾರೈಸುತ್ತೇವೆ.

ಕಾಲಂತ್ರಾತಿ ನಡೆಯುವಂತೆ ಇಲ್ಲಿಯ ಶ್ರೀ ವಿಠಲ ರುಕುಮಾಯಿ ದೇವಸ್ಥಾನದಲ್ಲಿ ಸಪ್ತಾಹ ಭಜನೆಯು ಈ ವರುಷ ವಿಶೇಷ ಉತ್ಸಾಹದಿಂದ ಜರಗುತ್ತಲಿರುವದು.

ಇಂಡಿಯನ್ ಸಿವಿಲ್ ಸರ್ವಿಸಿನ ಕೊಂಪಿಟಿಟಿವ್ ಪರೀಕ್ಷೆಯೊಂದು ಲಂಡನಿನಲ್ಲಿ ಜುಲೈ ಮತ್ತು ಆಗಸ್ಟು ತಿಂಗಳುಗಳಲ್ಲಿ ನಡೆಯುವದೆಂದೂ, ವಿಶೇಷ ಮಾಹಿತಿಯು ಫೋರ್ಟ್ ಸೈಂಟ್ ಜೋರ್ಜ ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವದೆಂದೂ ಮದರಾಸು ಸರಕಾರದವರು ಪ್ರಕಟಿಸುತ್ತಾರೆ.

—ಮದ್ರಾಸಿನಲ್ಲಿ ೨೮ನೇ ತಾರೀಖಿಗೆ ಪ್ರಾರಂಭವಾಗಬೇಕಾಗಿದ್ದ ಸ್ಕೌಟ್ ರೆಲಿಯು ಬರುವ ತಿಂಗಳ ೮ನೇ ಮತ್ತು ೯ನೇ ತಾರೀಖುಗಳ ದಿನ ನಡೆಯುವದೆಂದು ಸೆಕ್ರೆಟರಿಯವರಾದ ರಾ. ಬಿ. ರಾಮಚಂದ್ರರಾಯರು ತಿಳಿಸುತ್ತಾರೆ.

ಮಂಗಳೂರಿನಲ್ಲಿ ಕೆಲವೆಡೆಗಳಲ್ಲಿ ಕೋಲೆರಾ (ವಾಂತಿಭೇದಿ) ರೋಗವು ಹರಡಿರುವದರಿಂದ ಎಂಟಿಕೋಲೆರಾ ಚುಚ್ಚಿನಿಂದ ದಾಳುಹಾಕಿ ಸುವದು ಒಳ್ಳೆಯದೆಂದೂ, ಇದಕ್ಕೆ ಮುನಿಸಿಪಲ್ ಹೆಲ್ತ್ ಆಫೀಸರರೂ ಸಿದ್ಧರಿರುವರೆಂದೂ, ಬೇಕಾದವರು ಅವರಿಗೆ ತಿಳಿಸಬೇಕೆಂದೂ ಮುನಿಸಿಪಾಲಿಟಿಯ ಕಮಿಶನರರು ತಿಳಿಸುತ್ತಾರೆ.

ಮೈಸೂರಿನ [illegible] ಸಾಹೇಬರವರು ನಿನ್ನೆಯ ದಿನ ಇಲ್ಲಿಗೆ ಬಂದಿರುವರು ಇವರು ಇಲ್ಲಿಯ ಜೆ. ಎ. ಸಾಲ್ಡಾಂಹಾ ಎಂಡ್ ಸನ್ ರವರ [illegible] ಕಚೇರಿಗೆಯಲ್ಲಿ [illegible] ರಾಗಿ ಕೆಲಸ ಬಲುತ್ತಿದೆ.

ಸ್ವೀಕಾರ—ಮೈಸೂರಿನ ಎಚ್. ಎಸ್. ಸಿನ್ಹಾ ಎಂಡ್ ಬ್ರದರ್ಸ ಇವರ ಕಂಪೆನಿಯ ೧೯೨೯ನೇ ಇಸವಿಯ ಅಂದವಾದ ಕ್ಯಾಲೆಂಡರುಗಳು ನಮ್ಮ ಕೈಸೇರಿರುವದನ್ನು ಬಹು ಆನಂದದಿಂದ ಸ್ವೀಕರಿಸುವೆವು.

ಕಾಪು—ಇಲ್ಲಿ ತಾರೀಖು ೧೭ನೇ ದಿನ ಜರಗಿದ್ದ ಬೋರ್ಡ ಶಾಲೋಪಾಧ್ಯಾಯರಿಗೆಲ್ಲಾ ಸಂಬಳ ಬಟವಾಡೆ ಮಾಡಲು ಉಡುಪಿ ತಾಲೂಕು ಬೋರ್ಡು ಪ್ರೆಸಿಡೆಂಟರ ಸವಾರಿಯು ಚಿತ್ತೈಸಿತ್ತು. ತಾ. ೧೦ರಲ್ಲಿ ಸಂಬಳ ಬಟವಾಡೆ ಮಾಡಲ್ಪಡುವುದೆಂದು ಸೂಚಿಸಲ್ಪಟ್ಟು ತಾ. ೧೭ನೇ ದಿನಕ್ಕೆ ಮುಂದರಿಸಲ್ಪಟ್ಟರೂ ಅಂದು ಪಾವತಿಪಟ್ಟು ಬಂದು ಕೆಲಬುಕೊಟ್ಟದು ಉಪಕಾರವಲ್ಲವೇ. ಉಪಾಧ್ಯಾಯರ ಸಂಬಳವನ್ನು ಅಲ್ಲಲ್ಲಿ ವೈದುಕೊಡುವ ಇವರ ಚಿತ್ತವೃತ್ತಿಯು ಪ್ರಶಂಸನೀಯವಿದೆ.

ಮಾರಿಬಲಿಯ ಕೆಲಸವು ಪ್ರಾರಂಭಿಸಿಯದೆ. ಬಲಿಯಲ್ಲಿ ಬೀಳುವ ಪಶುವಿಗೆ ಮಿತಿಯೇ ಇಲ್ಲ. ಮೀನಿನ ವ್ಯಾಪಾರವು ಚಲೋ ರೀತಿಯಿಂದ ಸಾಗುವುದಕ್ಕೆ ವಹಿವಾಟಿನ ಬೋಳಯದ ಅಡಚಣೆಯು ಅಷ್ಟೆ.

ಇದೇ ಬರುವ ತಾ ೨೮ನೇ ಬುಧವಾರ ಇಲ್ಲಿರುವ ಮೂರಿಗುಡಿ ತ್ರಯಗಳಲ್ಲಿಯೂ ಕಾಲಾವಧಿ (ಜಾತ್ರೆ) ಮಾರಿಪೂಜೆಯಾಗಲಿದೆ ಮಹಮ್ಮಾಯಿಯ ಭಕ್ತವೃಂದಕ್ಕೆ ಸುಸ್ವಾಗತವಿದೆ.

ಫರಂಗಿಪೇಟೆ:—ಮುಂಬಾಯಿಯ ಶ್ರೀಯುತ ಕೆ. ಯಫ್. ನರಿಮನ್ ಎಂ. ಎಲ್. ಸಿ. ಯವರು ಮತ್ತು ಅವರ ಮಿತ್ರ ವರ್ಗದವರು, ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ಸಲುವಾಗಿ ತಾರೀಖು ೧೬—೧೧—೨೮ರಲ್ಲು ಮಂಗಳೂರಿಗೆ ಹೋಗುವಾಗ ಇಲ್ಲಿಯ ಶ್ರೀ ರಾಮಾ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಬಂದು ಸದ್ವಿ ಶಾಲಾ ವಿದ್ಯಾ ವರ್ಧಕ ಸಂಘದ ಅಧ್ಯಕ್ಷ ಶ್ರೀಯುತ ಸಿ. ಪಿ. ನಾಯಕರವರ ಆತಿಥ ಸತ್ಕಾರವನ್ನು ಸ್ವೀಕರಿಸಿ ಮಂಗಳೂರಿಗೆ ತೆರಳಿದರು.

ಇಲ್ಲಿಯ ಸಂಟರಿನ ಉಪಾಧ್ಯಾಯ ಸಂಘದ ಹದಿನೈದನೆಯ ಸಭೆಯು ತಾ. ೧೭—೧೧—೨೮ರಲ್ಲು ಮೋರಮುಜ್ಜಿ ಸೈಂಟ್ ಜೋಸೆಫ್ ಹ್ಯಾಯರ್ ಎಲಿಮೆಂಟರಿ ಶಾಲೆಯಲ್ಲಿ ರಾ। ಎಫ್. ಎಚ್. ಪಡೆಯರರವರ ಅಧ್ಯಕ್ಷತೆಯಲ್ಲಿ ಜರಗಿತು. ೨೮ ಮಂದಿ ಉಪಾಧ್ಯಾಯರು ಹಾಜರು ಇದ್ದರು. ಕ್ರಮದಂತೆ ಹಿಂದಿನ ಪ್ರೊಸಿಡಿಂಗ್ಸುಗಳನ್ನು ಓದಿದ ತರುವಾಯ ವರ್ಷೋತ್ಸವನ್ನು ಜರಗಿಸುದೇ ಒಂದು ಕಮಿಟಿಯನ್ನು ಸ್ಥಾಪಿಸಿ ಸೂಚೀ ಪತ್ರವನ್ನು ತಯಾರಿಸಿ ಈ ಸಂಘದ ಇತರರ ಮೆಂಬರರ ಸಹಾಯವನ್ನು ಪಡೆದು ಬರುವ ವರ್ಷೋತ್ಸವನ್ನು ನೆರವೇರಿಸುವ ಅಧಿಕಾರವನ್ನು ಅವರಿಗೆ ಕೊಟ್ಟರು. ಸದ್ವಿ ಶಾಲಾ ಮೆನೆಜರ್ ರೆವರೆಂಟ್ ಫಾದರ್ ಎಮ್. ಎಸ್. ಫರ್ನಾಂಡಿಸರವರು ಕೊಟ್ಟ ಉಪಹಾರವನ್ನು ಸ್ವೀಕರಿಸಿ ಅಧ್ಯಕ್ಷರ ಭಾಷಣವಾದ ತರುವಾಯ ಸಭೆಯು ಮುಕ್ತಾಯವಾಯಿತು.

ಉಪ್ಪಿನಂಗಡಿ:—ಕಳೆದ ತಾ. ೨೮ರಲ್ಲು ಇಲ್ಲಿಯ ಪಂಚಾಯತ ಶಾಲೆಯು ತಾಲೂಕು ಬೋರ್ಡು ಪ್ರೆಸಿಡೆಂಟ ಮ. ರಾ. ರಾ. ಮೊಳಹಳ್ಳಿ ಶಿವರಾಯರಿಂದ ತೆರೆಯಲ್ಪಟ್ಟಿತು.

ನೇತ್ರಾವತಿ ನದಿಯನ್ನು ದಾಟುವಾಗ ಇಬ್ಬರು ನೀರಿನ ಸೆಳೆತಕ್ಕೆ ಸಿಲುಕಿದರು. ಅವರ ಪೈಕಿ ಸುಮಾರು ಆರು ವರುಷದ ಮಗುವನ್ನು ಇಲ್ಲಿಂದ ನಾಲ್ಕು ಮೈಲು ದೂರದಲ್ಲಿ ದೋಣಿಯವರು ಎತ್ತಿ ದಡಕ್ಕೆ ತಂದರು ಸುಮಾರು ೧೭ ವರ್ಷ ಪ್ರಾಯದ ಇನ್ನೊಬ್ಬಳು ಇನ್ನೂರ ತನಕವೂ ಸಿಕ್ಕಲಿಲ್ಲ.

ದೇವಶ್ಯ ಮೂಡೂರು:—ಈ ಗ್ರಾಮವು ಮಂಗಳೂರು ತಾಲೂಕಿನ ಬಂಟವಾಳ ಡಿವಿಜನಿಗೆ ಸೇರಿದೆ. ಈ ಗ್ರಾಮದಲ್ಲಿರುವ ಒಬ್ಬ ಕಥೋಲಿಕ ಕ್ರೈಸ್ತನು ದೇವಶ್ಯ ಮೂಡೂರು ಸರ್ಕಾರಿ ಮತ್ತು ಮನೆ ನಾಲ್ಕೈರು ಕಳ್ಳರ ಗಂಡಾಂಗಳನ್ನು ಗುತ್ತಿಗೆ ವಹಿಸಿಕೊಂಡಿರುವನು. ಇವನು ರಾತ್ರಿ ಗಡಂಗಿನಿಂದ ಮನೆಗೆ ಹೋಗುವಾಗ ಇವನನ್ನು ಹೊಡದು ಕುತ್ತಿಗೆ ಕೊಯಿದು ಒಂದು ಕಾಡಿನ ಮಧ್ಯದಲ್ಲಿ ಬಿಸಾಡಿದ್ದಾರೆ. ಅಲ್ಲಿಂದ ಹೆಣವನ್ನು ಬಂಟವಾಳ ಆಸ್ಪತ್ರೆಗೆ ಕಳುಹಿಸಿರುವರು. ಬಂಟವಾಳ ಪೋಲಿಸ ಸಬ್ ಇನ್ಸ್‌ಪೆಕ್ಟರರವರೂ ಮೂಡಬಿದರೆ ಸರ್ಕಲ ಇನ್ಸ್‌ಪೆಕ್ಟರರವರೂ ತನಿಖೆ ನಡಿಸಿ ಕೆಲವರನ್ನು ಕೈದುಮಾಡಿರುವರು. ಪೋಲೀಸ ಸುಪರಿಂಡೆಂಟರು ಬರುತ್ತಾರೆಂಬ ವಾರ್ತೆಯೂ ಇದೆ.

ಬಂಟವಾಳ:—ಇಲ್ಲಿ ಕಾರ್ತಿಕ ಮಾಸದ ಪ್ರಾತಃಕಾಲದ ನಗರ ಭಜನೆಯು ಕಳೆದ ಏಕಾದಶಿಯಿಂದ ಪ್ರಾರಂಭವಾಗಿಯದೆ.

ಇಲ್ಲಿ ಇದೇ ೧೬ನೇ ಶುಕ್ರವಾರ ದಕ್ಷಿಣ ಕನ್ನಡ ಜಿಲ್ಲಾ ಕೊಂಗ್ರೆಸಿನ ಅಧ್ಯಕ್ಷರಾಗಲು ಆಮಂತ್ರಿಸಲ್ಪಟ್ಟ ಮುಂಬಾಯಿ ಸುಪ್ರಸಿದ್ಧ ವಕೀಲರಾದ ಶ್ರೀಯುತ ನರಿಮೋನರು ಕಡೂರು ಚಾರ್ಮಾಡಿ ದಾರಿಯಾಗಿ ಮಂಗಳೂರಿಗೆ ಹೋಗುವಾಗ ಇಲ್ಲಿಯ ಜನರು ಅವರನ್ನು ಮಧ್ಯ ಪೇಟೆಯಲ್ಲಿ ಸ್ವಾಗತ ಮಾಡಿ ಹೂಮಾಲೆಗಳನ್ನು ಹಾಕಿ ಸತ್ಕರಿಸಿ ಮುಂದಕ್ಕೆ ಕಳುಹಿಸಿದರು.

ಮುಂಬಾಯಿಯಿಂದ ದಕ್ಷಿಣ ಕನ್ನಡಾ ಜಿಲ್ಲಾ ಪರಿಷತ್ತಿಗೆ ಮಂಗಳೂರಿಗೆ ಬಂದ ಶ್ರೀಯುತ ನರಿಮೋನರೂ ಶ್ರೀಯುತ ಹೋರ್ನಿಮೋನರೂ ಈ ದಾರಿಯಾಗಿ ಕಡೂರಿಗೆ ಹೋದರು.

ಪಾಣೆಮಂಗಳೂರು:—ಇಲ್ಲಿ ಕಾರ್ತಿಕ ಮಾಸದ ಸಪ್ತಾಹವು ಪ್ರಾರಂಭವಾಗಿದೆ.

ಇಲ್ಲಿಯ ಹುಡುಗಿಯರ ಶಾಲೆಗೆ ಒಂದು ಯೂರಿನಲ್ ಅಥವಾ ಪಾಯಖಾನೆ ಇಲ್ಲದೆ ಬಹಳ ಕಷ್ಟವಾಗಿ ಮಾಜಿ ಪ್ರೆಸಿಡೆಂಟರ ಕಾಲದಿಂದ ಈ ಪಾಯಖಾನೆ ಆಗಬೇಕೆಂದು ಪ್ರಯತ್ನಗಳು ನಡಿಯುತ್ತಲಿವೆ. ಈಗಿನ ಪ್ರೆಸಿಡೆಂಟರಾದವರೂ ಇದನ್ನು ಮಾಡಿಸಲಿಕ್ಕೆ ಹಣ ಸೆಂಕ್ಷನ್ ಮಾಡಿಸಿದರೆ ಆಗುತ್ತಿತು.

ಕಾವಳಕಟ್ಟೆ:—ಇಲ್ಲಿಯ ನಿವಾಸಿಗಳೂ ಸುತ್ತ ಮುತ್ತಲಿನ ಗ್ರಾಮಗಳ ನಿವಾಸಿಗಳೂ ಕಾವಳ ಕಟ್ಟೆಯಲ್ಲಿ ಟಪ್ಪಾಲು ಆಫಿಸನ್ನು ತೆರೆಯುವಂತೆ ಪೋಸ್ಟಲ್ ಸುಪ್ರಿಡೆಂಟರಿಗೆ ಒಂದು ಮನವಿಯನ್ನು ಕಳುಹಿಸಿರುತ್ತಾರೆ. ಇಲ್ಲಿ ಟಪ್ಪಾಲು ಕಚೇರಿಯನ್ನು ಇಡುವುದಕ್ಕಾಗಿ ಇಲಾಖೆಯವರು ಈ ಮೊದಲೇ ಕಾಗದಗಳ ಪೆಟ್ಟಿ ಒಂದನ್ನು ಇಟ್ಟಿರುವರು. ಈ ಊರು ಪಟ್ಟಣದಂತೆಯೇ ಇದೆ ದನ್ನರ ಅನ್ನು ತೆರೆಯುವ ಆಗತ್ಯವಿಲ್ಲ. ಈ ಗ್ರಾಮವೂ ಸುತ್ತ ಮುತ್ತಲಿನ ಗ್ರಾಮಗಳೂ ಜನವಸತಿಯಿಂದ ತುಂಬಿವೆ. ಟಪ್ಪಾಲು ಕಚೇರಿ ಇಲ್ಲಿಯೇ ತೆರೆಯುವದುಚಿತವು.

ನರಿಕೊಂಬು:—ಬಂಟವಾಳ ಸೆಂಟರಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸರಿಗೆದ ಸಭೆಯು ನರಿಕೊಂಬು ಬೋರ್ಡು ಶಾಲೆಯಲ್ಲಿ ಕಳೆದ ಶನಿವಾರ ತಾ. ೧೭ರಲ್ಲಿ ಜರಗಿತು. ಈ ಸಭೆಯಲ್ಲಿ, ನೋಟ್ಸ ಒಫ್ ಲೆಸ್ಸನ್ಸ ಬರೆಯಬೇಕೆಂದು ಇನ್ಸ್‌ಪೆಕ್ಟರರವರ ಅಪ್ಪಣೆಯು ಇರುವುದರಿಂದ ಶಾಲಾ ಕಂಟಿಂಜಂಟಿನ ಹಣವು ಕಡಿಮೆಯಾಗಿರುವುದರಿಂದ ನೋಟ್ಸ ಒಫ್ ಲೆಸನ್ಸ ಬರೆಯಲು ಬೋರ್ಡು ಶಾಲೆಗಳಲ್ಲಿಯೂ ಖಾಸಗಿ ಶಾಲೆಗಳಲ್ಲಿಯೂ ಕೆಲಸಮಾಡುವ ಪ್ರತಿಒಬ್ಬ ಉಪಾಧ್ಯಾಯರಿಗೆ ೫೦೦ ಪುಟಗಳ ಒಂದೊಂದು ಎಕ್ಸರ ಸೈಜ ಪುಸ್ತಕವನ್ನು, ತಾಲೂಕು ಬೋರ್ಡಿನವರೂ, ಶಾಲಾ ಮೆನೆಜರರೂ ಒದಗಿಸುವಂತೆ ಬೋರ್ಡ್ಸ ಮೆನೇಜರರಿಗೆ ಬರೆಯಬೇಕೆಂದು ನಿರ್ಣಯಿಸಲಾಯಿತು. ಮುಂದಿನ ಸಭೆಯನ್ನು ಅಮ್ಟಾಡಿ ಬೋರ್ಡು ಶಾಲೆಯಲ್ಲಿ ದಶಂಬರ ೧೫ನೇ ತಾರೀಕಿಗೆ ಜರಗಿಸುವದೆಂದು ನಿರ್ಣಯಿಸಲಾಯಿತು.

ಮಂಜೇಶ್ವರ:—ಕಾಲಾವಧಿ ಭಜನೆ ಸಪ್ತಾಹವು ಈ ವರ್ಷ ಬಹಳ ವಿಜೃಂಭಣೆಯಿಂದ ನೆರವೇರುತ್ತಲಿದೆ. ರಾ। ಮಾಧವ ಭಟ್ಟಜಿಯವರ ಪ್ರಯತ್ನವು ಶ್ರೇಯಸ್ಕರವೂ ಶ್ಲಾಘನೀಯವೂ ಆಗಿದೆ.

ಕುಂಬಳೆ:—ಈ ಊರಿನಿಂದ ಮಂಜೇಶ್ವರ ಶ್ರೀಮದ ಅನಂತೇಶ್ವರ ದೇವಸ್ಥಾನಕ್ಕೆ ಟ್ರಸ್ಟಿ ಮೆಂಬರರಾಗಿದ್ದ ರಾ. ನರಸಿಂಹ ನ್ಯಾಕರು ರಾಜಿನಾಮೆ ಕೊಟ್ಟಿದ್ದರು. ಇವರ ಬದಲಿಗೆ ರಾಮಚಂದ್ರ ನ್ಯಾಕರನ್ನು ಆರಿಸಿದುದಾಗಿ ವರ್ತಮಾನ.

ಕುಚ್ಚಿಕ್ಕಾಡು:—ಮಂಗಳಪಾಡಿ ಗ್ರಾಮದಲ್ಲಿ ನಡೆದ ಕಳವಿನ ಮೊಕದ್ದಮೆಗಳು ಬರುವ ತಿಂಗಳ ತಾ. ೧೦ ೧೧ಕ್ಕೆ ಮುಂದರಿಸೋಣಾಗಿದೆ. ಅಲೆರನ್ನು ಜ್ಯಾಮೀನಿನ ಮೇಲೆ ಬಿಟ್ಟಿರುವರು.

ಇಲ್ಲಿಗೆ ಮಂಗಳೂರಿನಿಂದ ಒಂದು ಚಿನ್ನದ ಉಂಗುರ ಮತ್ತು ೫ ರೂಪಾಯಿ ಕಳವುಮಾಡಿ ಉಳ್ಳಾಲಕ್ಕೆ ಬಂದು ರೈಲಿನಲ್ಲಿ ಪ್ರಯಾಣ ಬೆಳಸಿ ಇಲ್ಲಿಯ ಗುಡ್ಡ ಕಡ್ಡಿನ ಹಿಂಬದಿಯಾಗಿ ಓಡಿಹೋಗಲೆತ್ನಿಸಿದ ಒಂದು ಮಳೆಯಾಳಿ ಹೆಂಗಸನ್ನೂ ಅವಳ ಮಗನನ್ನು ಪತ್ತೆಗಾಗಿ ಬಂದವರು ಹ್ಯಾಗೂ ಬುಧವಾರ ದಿನ ಹಿಡಿದಿರುವರು ಹೆಂಗಸರಿಗೂ ಕಳ್ಳಾಟಿಕೆ.

ಹಾಯರ್ ಎಲಿಮೆಂಟರಿ ಮತ್ತು ಬೇರೆ ಉಪಾಧ್ಯಾಯರ ಪಾಡೇನು ಸಂಬಳ ಊಹೂಂ ತಿಂಗಳು ನಾಲ್ಕಾಯಿತರಿತೆ ದೇವರು ರಥ ಏರುವ ಕಾಲ ಸಮೀಪಿಸಿತು. ದೇವರಿಗೆ ಪೌಕರರ ಮೇಲೆ ಸಿಟ್ಟೋ ಭಕ್ತನೇ ಹರಕೆ ಹೇಳಿಕೊಳ್ಳಲಿ ಪೂಜಾರಿಗಳು ಕಣ್ಣು ತೆರದರೆ ಚಲೋದಿತ್ತು. ಅವರ ಪಾಡೇ ಅವರಿಗೆ ತಿಳಿಯವಂತಾಗಿದೆ.

ವಿವಿಧ ಸಮಾಚಾರಗಳು.

ಸಹಾಯಕರೇ ನಿಸ್ಸಹಾಯಕರಾದರು!

ಫ್ರಾಂಬಲ್ಲಿ ಒಂದು ಹಡಗವು ದುರಾಗಾಲಿಗೆ ಸಿಲುಕಿ ಮುಳುಗುವ ಸಂದರ್ಭದಲ್ಲಿದ್ದುದನ್ನು ಕಂಡು ಸುಮಾರು ಹತ್ತಿಪ್ಪತ್ತು ಜನರು ಕೊಡಿ ಹಡಗಗಳಲ್ಲಿದ್ದವರನ್ನು ಕರೆತಂದು ಸಹಾಯ ಮಾಡುವ ಸಲುವಾಗಿ ಒಂದು ಮೋಟಾರ ಬೋಟಿನಲ್ಲಿ ಕುಳಿತು ಹೊರಟರು. ಆದರೆ ಹಡಗದ ಸಮೀಪಕ್ಕೆ ಒಂದು ಜರ್ಮನಿ ಹಡಗವು ಬಂದುದರಿಂದ ಇದರಲ್ಲಿನ ಜನರೆಲ್ಲರೂ ಮತ್ತೆ ಬಂದ ಹಡಗವನ್ನು ಹತ್ತಿದ್ದರು. ಲೈಫ್ ಬೋಟನ್ನು ಹತ್ತಿದವರಿಗೆ ಈ ಸಂಗತಿಯು ತಿಳಿಯದ ಕಾರಣ ಅವರು ಸೀದಾ ಮುಂದರಿದು ಹೋದರು. ಆದರೆ ದಡದಿಂದ ಅರ್ಧ ಮೈಲು ದೂರಹೋಗುವಷ್ಟರೊಳಗೆ ಲೈಫ್ ಬೋಟು ಒಂದು ಮರಳದಂಡೆಗೆ ಬಡಿದು ಕವಚಿದ್ದು ಕುಳಿತವರೆಲ್ಲರೂ ನೀರುಪಾಲಾದರು. ಅವರ ಸಂಬಂಧಿಕರು ದಡದಲ್ಲಿ ನಿಂತು ಇದನ್ನು ಕಾಣಬಲ್ಲರಾಗಿದ್ದರೂ ೭೦ ಮೈಲು ವೇಗದ ಬಿರುಗಾಳಿಯು ಒಂದೇಸಮನೆ ಬೀಸುತ್ತಿದ್ದ ಕಾರಣ ಯಾವ ಸಹಾಯವನ್ನು ಮಾಡಲು ಸಾಧ್ಯವಾಗಲಿಲ್ಲ. ನಸುಕಿನ ಈ ಅಪಘಾತದಿಂದ ೧೭ ಜನರು ಸತ್ತುಹೋದರು. ಇವರೆಲ್ಲರೂ ಫ್ರಾಂ ಬಲ್ಲಿಯ ನಿಪುಣರಾದ ಬೆಸ್ತರೇ. ಸಾಯುವವರನ್ನು ಬದುಕಿಸಬೇಕೆಂಬ ದೊಡ್ಡ ಮನಸ್ಸುಮಾಡಿ ಹೊರಟವರೇ ಸಾವಿಗೆ ತುತ್ತಾದುದು ಪರಮಾಶ್ಚರ್ಯ.

ಮುಂಬಾಯಿಯಲ್ಲಿ ಭೀಕರ ಪ್ರಾಣಿಹತ್ಯೆ.

ಮುಂಬಾಯಿಯ ಹಾಲಿಗಿಂತ ವಿಲಾಯತಿಯಲ್ಲಿ ಹಾಲು ಕೇಕಡಾ ೭೫ರಷ್ಟು ಅಗ್ಗವಾಗಿದೆಯೆಂದು ಇತ್ತೀಚಿಗಿನ ವರದಿಗಳಿಂದ ತಿಳಿಯಬರುತ್ತದೆ. ಮುಂಬಾಯಿಯ ಮತ್ತು ವಿಲಾಯತಿಯಲ್ಲಿನ ಜನರ ಸಂಪಾದನೆಯನ್ನು ಸರಿಹೋಲಿಸಿನೋಡಿದರೆ ಇದು ಬಹಳ ನಷ್ಟಕರವಾಗಿದೆಯೆಂದು ಹೇಳಬಹುದು. ದನಕರುಗಳು ಬಹಳವಾಗಿರುವ ನಮ್ಮ ದೇಶದಲ್ಲಿ ಹಾಲು ಇಷ್ಟು ಪ್ರಿಯವಾಗಲು ಕಾರಣವೇನು? ಇದಕ್ಕೆ ಮುಂಬಾಯಿಯಲ್ಲಿ ನಡೆಯುವ ಪಶುವಧೆಯೇ ಮುಖ್ಯ ಕಾರಣವು. ೧೯೨೮ಕ್ಕೆ ಅಂತ್ಯವಾಗುವ ವರುಷದಲ್ಲಿ ಒಟ್ಟು ೨೦೫೩೩ ಪಶುಗಳು ವಧಿಸಲ್ಪಟ್ಟವು; ೧೯೩೭೦ ಕರುಗಳು ತಮ್ಮ ತಾಯಂದಿರು ವಧಿಸಲ್ಪಟ್ಟ ಕಾರಣ ಹಾಲಿಲ್ಲದೆ ಬಡವಾಗಿ ಸತ್ತುಹೋದುವು. ಕಳೆದ ೮ ವರುಷಗಳಿಂದ ವಧಿಸಲ್ಪಟ್ಟ ಬಡಪಶುಗಳ ಸರಾಸರಿ ಸಂಖ್ಯೆಯನ್ನು ನೋಡಿದುದಾದರೆ ಇದಕ್ಕಿಂತ ಕಡಿಮೆಯಾಗಿಲ್ಲ. ಮುಂಬಾಯಿಗೆ ಇತರ ದೇಶಗಳಿಂದ ಪಶುಗಳನ್ನು ತರಿಸಿ ವರ್ಷಕ್ಕೆ ಸರಾಸರಿ ೨೦೦೦೦ ಪಶುಗಳನ್ನು ಕೊಲ್ಲುವರು. ಹಾಲು ಕೊಡುವ ಸ್ಥಿತಿಯಲ್ಲಿರುವ ಪಶುಗಳನ್ನು ಅಂಜದೆ ಕೊಲ್ಲುವರು!! ಅಂದ ಬಳಿಕ ಹಾಲು ಸಿಕ್ಕುವ ಬಗೆ ಎಂತು? ಒಮ್ಮೆಗೆ ಹಾಲು ನಿಂತೊಡನೆ ಮುಂದೆ ಕರುಹಾಕುವದಿದ್ದರೂ, ಅದರೊಡನೆ ಕಟುಕರವಶಕ್ಕೆ, ಅವರ ಹಾಲನ್ನು ಕುಡಿದು, ಉಂಡುಮನೆಗೆರಡು ಬಗೆದು ಕಟುಕರ ಸ್ವಾಧೀನಪಡಿಸುವರು. ಶೋಚನೀಯ! ಆದರೆ ಇಂಗ್ಲಾಂಡ ಮತ್ತು ಅಮೇರಿಕೆಗಳಲ್ಲಿ ಹಾಗಲ್ಲ. ಕರುವನ್ನು ಹೆರಲು ಸಾಮರ್ಥ್ಯವಿಲ್ಲದ ಮೇಲೆಯೇ ಪಶುಗಳನ್ನು ವಧಿಸುವರು. ಹಿಂದೂಸ್ತಾನದಲ್ಲಿಯೂ ಇದೇ ರೀತಿ ಮಾಡಿ ಅಪರಿಮಿತವಾಗಿ ನಡೆಯುತ್ತಿರುವ ಈಗಣ ಪಶುವಧೆಯನ್ನು ನಿಲ್ಲಿಸಿದರೆ ರಾಷ್ಟ್ರವು ಉನ್ನತಿಯನ್ನು ಹೊಂದುವುದರಲ್ಲಿ ಸಂದೇಹವಿಲ್ಲ.


SPORT CABRIOLET WITH DICKEY SEAT

FIVE-PASSENGER TWO-DOOR SEDAN

FIVE-PASSENGER PHAETON

The Story of a New

OAKLAND

Series 6-212
the cosmopolitan six

WHY COSMOPOLITAN?

THE new Oakland has been called the cosmopolitan six because of its background and its ability to perform.

General Motors has produced this car as a result of its cosmopolitan experience in building and operating motor cars in all parts of the world.

Oakland is built to render a high order of service wherever it may be called. It is equally at home on mountain road, desert sand or city boulevard. Its beauty makes it acceptable anywhere. That is cosmopolitan character.

OAKLAND

BODY FEATURES *of the* NEW OAKLAND

Closed bodies by Fisher; open bodies designed by Fisher but built by Oakland.

Body lines longer and lower. Five-passenger bodies are six inches longer and all bodies are much lower.

Seat positions and contours are improved.

Spanish leather upholstery on open models and Sport Cabriolets.

Leather upholstery available on all closed models.

Improved body hardware on all models.

Instrument board beautifully carved in oak leaf design and contains three clusters of instruments with platinum-silver dials.

New and attractive Duco color combinations on all models.

Narrow front corner posts on closed models.

Forward-folding windshields on open models.

For Further Particulars Apply to **RAO & RAO**

Dealers of Oakland, Pontiac, Chevrolet, & Vauxhall Cars,
Maidan Road, MANGALORE

'ಸಾರಸ್ವತಾಸವ.'

ಓದಿಯೂ ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಹಾಯಾಸವಾಗುತ್ತಿದ್ದರೆ, ದಿನ್ನಿನ ನರಗಳು ಸೋಮುತ್ತಿದ್ದರೆ ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರೆ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ಒಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕರಂ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ಒಕ್ಕೆ ಬೆಲೆ ೦—೧೪—೦, ಪೋಸ್ಟೇಜು ಬೇರೆ

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರದೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೮ ಆಣೆ ಒಕ್ಕೆ ೧—೪—೦, ೧೫೦ ಸೀಸೆಗೆ ೨—೭—೦, ೩೦೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ ಸೋಡಾ ಫ್ಯಾಕ್ಟರಿ
ಮಂಗಳೂರು ಡಿಪಾಟ್ ಮಾತ್ರ.

ಹೊಸ ವರುಷದ ಅಂಕ.

ಸ್ವದೇಶಾಭಿಮಾನಿಯು ಹೊಸ ವರುಷದ ಅಂಕವು ಜನವರಿಯ ಮೊದಲಿನ ಶುಕ್ರವಾರ ದಿನ ಕಳೆದ ವರ್ಷದ ಅಂಕಕ್ಕಿಂತಲೂ ಹೆಚ್ಚು ಪುಟಗಳೊಡನೆ ಪ್ರಕಟಿಸಲ್ಪಡುವುದು. ಸಂಚಿಕೆಯಲ್ಲಿ ತುಂಬಾ ಚಿತ್ರಗಳು ಈ ಸಂಚಿಕೆಗಾಗಿ ಪ್ರತ್ಯೇಕವಾಗಿ ದೊರಕಿಸಲ್ಪಟ್ಟು ಪ್ರಕಟಿಸಲ್ಪಡುವವು. ಉತ್ತಮ ಲೇಖನಗಳು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವವು. ಸಚಿತ್ರವಾದ ಲೇಖನಗಳಿಗೆ ಹೆಚ್ಚಿನ ಪ್ರೋತ್ಸಾಹವು ಸಿಕ್ಕುವುದು. ಚಿತ್ರಗಳನ್ನು ಲೇಖಕರು ಕಳುಹಿಸಬೇಕು. ಅವುಗಳ ಬ್ಲೋಕನ್ನು ನಾವೇ ತಯಾರಿಸುತ್ತೇವೆ. ಲೇಖನಗಳು ಸ್ವದೇಶಾಭಿಮಾನಿಯ ಹಿಂದಿನ ಕಲಮನ್ನು ಮೀರದಿದ್ದರೆ ಉತ್ತಮ. ನವಂಬರ ಅಂತ್ಯದೊಳಗಾಗಿ ಲೇಖನಗಳು ನಮ್ಮ ಕೈಸೇರಿದರೆ ಬ್ಲೋಕುಗಳನ್ನು ತಯಾರಿಸಲಿಕ್ಕೂ, ಮುದ್ರಣವನ್ನು ಸಂಪಾದಿಸಲಿಕ್ಕೂ ಅನುಕೂಲವಾಗುವುದು. ಚಿಕ್ಕ ಕತೆ ಕಾವ್ಯಗಳೂ ಬೇಕಾಗಿರುವವು. ಕರ್ನಾಟಕದ ಸುಪ್ರಸಿದ್ಧ ಲೇಖಕರು ಈ ನಮ್ಮ ಕೆಲಸದಲ್ಲಿ ಸಹಾಯ ಮಾಡಬೇಕಾಗಿ ವಿನಂತಿ.

ಮೆನೇಜರ್.

[illegible]ದ ಕೃಷಿ ಪ್ರದರ್ಶನ.

[illegible] ದ್ವಿತೀಯ ಕೃಷಿ ಪ್ರದರ್ಶನವನ್ನು ಸರ್ [illegible]ದಲ್ಲಿ ತೆರೆದರು. ಈ ಪ್ರದರ್ಶನದಲ್ಲಿ [illegible] ಉಪಕರಣಗಳೂ ಸಾಹಿತ್ಯಗಳೂ ತೆರಲ್ಪಟ್ಟದ್ದು [illegible]ದ ವಿಧಾನವನ್ನು ವಿವರಿಸಿ ತೋರಿಸುವ ಉಪಾಯ [illegible]. ಗವರ್ನರರ ಪ್ರಕೃತದ ಭಾಷಣದಲ್ಲಿ ಗುಜ [illegible]ವುಗಳೆಂದೂ ಗುಜರಾಥದ ಹಾಲಿನಿಂದ [illegible] ಅತ್ಯುತ್ತಮವಾದುದೆಂದೂ ಪಾಂಚಾಯಿಯಲ್ಲಿ [illegible] ಜನರ ಆರೋಗ್ಯಕ್ಕೆ ಅಂತೆಯೇ ಪಶುಗಳ [illegible]ದೆಂದೂ ಈಗಿನ ಬದಲಿಗೆ ಗೋಪಾಲಕರನ್ನು [illegible] ಹಳ್ಳಿಯಲ್ಲಿ ನಿಲ್ಲಹೇಳಿ ಅಲ್ಲಿ ಅವರು [illegible] ಇರುವದೊಳ್ಳೆಯದೆಂದೂ ಹೇಳಿದರು. ನಾವು ಕೃಷಿಯ ಸಂಬಂಧವಾಗಿ ಪರಿತದಲ್ಲಿ ಭಾಷಣವನ್ನು ಕೊಡುವುದು [illegible] ಎಂದು ವಿಷಾದದಿಂದ ಹೇಳಿದುದು ಮಾತ್ರವಲ್ಲದೆ [illegible] ಲಾಭವುಂಟಾಗಿ ಅವರ ಮನಂದಿರುವ [illegible] ಅವರ ಕೃಗಾರಿಕೆಯು ಸುಸೂತ್ರವಾಗಿ ಸಾಗಲೆಂದೂ [illegible] ಕೃಷಿಗಾರಿಕೆಯ ಪೂರ್ಣ ಮಾಹಿತಿಯನ್ನು ತಮ್ಮ [illegible], ಅವರು ಮುಂದೆ ವಿಜಯಿಗಳಾಗುವಂತೆ ಪ್ರಯತ್ನಿಸ ಬೇಕೆಂದೂ ಹೇಳಿದರು.

ಲಾಲಾಜಿಯವರ
ಚರಮಗೀತ

(ಮಾತೋಮಂತ ಧೀರ ಉಧೀ) ಎಂಬಂತೆ.

ಪೋದೆಯಾ! ಸ್ವರಾಜ್ಯವೀರ । ನರಲಲಾಮ ಲಾಲನೇ! ॥ ಪಲ್ಲ ॥
ಪೋದೆಯಾ! ಸ್ವದೇಶ ಭಕ್ತ । ವಿಬುಧವಿನುತ ಶೀಲನೇ! ॥ ಅ ಪ ॥
ಭಾರತಾರ್ಯ ಧರ್ಮವೀರ । ಪತಿತಜನಸುಖಂಕರಾ! ।
ಧೀರವರ್ಯ ಕರ್ಮವೀರ । ವೈರಿಜನ ಭಯಂಕರಾ! ॥ ೧ ॥
ದೇಶಸೇವೆಗಾಗಿ ವಿವಿಧ । ಕ್ಲೇಶಗಳನು ಸಹಿಸಿದ ।
ದೇಶಬಂಧು ಲೋಕಮಾನ್ಯ । ತಿಲಕಗಟು! ಸುಬಾಸ್ವದಾ ॥ ೨ ॥
ದೇಶದೇಶಗಳಲಿ ತೊಳಲಿ । ಲೋಕಮತದ ಪಕ್ಷಯುತ ।
ಆ ಸ್ವರಾಜ್ಯಯಜ್ಞ ಬಲಿಗೆ । ತನುಧನಿತ್ತ ಧೀಯುತಾ! ॥ ೩ ॥
ಭಾರತಕೆ ಸ್ವರಾಜ್ಯವಿಧದ । ಪದದ ಪಡೆವ ಪಂಥದ ।
ತೋರಿದಾ ಮಹಾನುಭಾವ । ಪಡೆದೆಯಾ ಸಾಯುಜ್ಯದ ॥ ೪ ॥
ಭಾರತಾ ಸ್ವತಂತ್ರ ಸಮರ । ಚದುರ ವಿಜಯವೈಸಿರಿ! ।
ವೀರಸ್ವರ್ಗಸಾಧಿಸಿದೆಯಾ! । ರಾಷ್ಟ್ರವೀರ ಕೇಸರಿ! ॥ ೫ ॥

ಮಂಗಳೂರು, ತಾ. ೧೬-೧೧-'೨೮. } ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯ.

ಶ್ರೀ ಲಾಲಾ ಲಜಪತರಾಯರ ಮರಣ!

ಶ್ರೀ ಲಾಲಾಜಿಯವರು ಕಳೆದ ಶನಿವಾರ ದಿನ ಪ್ರಾತಃಕಾಲ ೬-೩೦ಕ್ಕೆ ಹೃದ್ರೋಗದಿಂದ ಮರಣ ಹೊಂದಿದರೆಂಬುವನ್ನು ತಿಳಿಸಲು ವಿಷಾದಿಸುತ್ತೇವೆ. ಲಾಹೋರದ ಕೋರ್ಟರೆಸ್ತೆಯಲ್ಲಿನ ಅವರ ನಿವಾಸಗೃಹದಲ್ಲಿ ಅವರು ಸ್ವರ್ಗಹೊಂದಿದರು. ಮರಣದ ವಾರ್ತೆಯು ವಾಯುವೇಗದಿಂದ ಪಟ್ಟಣದಲ್ಲಿ ಹಬ್ಬಿ ಒಡನೆ ವಿದ್ಯಾರ್ಥಿಗಳೂ ದೊಡ್ಡವರೂ ಅಲ್ಲಿಗೆ ಬಂದು ಕೂಡಿದರು.

ಲಾಲಾಜಿಯವರು ಬಹು ಸಮಯದಿಂದ ಅಸ್ವಸ್ಥರಾಗಿಯೇ ಇದ್ದು ಆಗಾಗ ಬೇನೆ ಬೀಳುತ್ತಲಿದ್ದರು. ಹಾಸಿಗೆಯ ಮೇಲೆ ಬಿದ್ದು ನರಳದೆ ಒಮ್ಮಿಂದೊಮ್ಮೆಯೇ ಸಾಯಬೇಕೆಂದು ಅವರಿಗೆ ಮನಸ್ಸಿದ್ದಿತು. ಅದು ನೆರವೇರಿತು.

ಸ್ಯಾಮನ್ ಕಮಿಶನು ಲಾಹೋರಿಗೆ ಬಂದ ದಿನ ಲಾಲಾಜಿಯವರು ಹೊಡೆಯಲ್ಪಟ್ಟಿದ್ದರು, ಅಂದಿನಿಂದ ಅವರು ಸೌಖ್ಯದಿಂದಿರಲಿಲ್ಲ. ಬಳಲುಬೆಳೆಯೇ ವಿಶೇಷವಾಗುತ್ತ ಬಂದಿತ್ತು. ಸಾಯುವ ಹಿಂದಿನ ದಿನ ರಾತ್ರಿ ತನ್ನ ಮೈಯೆಲ್ಲಾ ನೋಯುತ್ತಿದೆಯೆಂದೂ, ಬೆನ್ನೆಲುಬಿನ ಸಮೀಪ ಬಹು ಬೇನೆಯಿದೆಯೆಂದೂ ಹೇಳಿದರು, ಡಾಕ್ಟರರು ಪರೀಕ್ಷಿಸಿದರು. ಹೃದ್ರೋಗವಿರಲಿಲ್ಲ. ಜ್ವರವೂ ಬಂದಿರಲಿಲ್ಲ. ಹೆದರಿಕೆಗೆ ಕಾರಣವಿರಲಿಲ್ಲ. ಆದರೂ ಅವರಿಗೆ ರಾತ್ರಿ ಮಲಗಲಾಗಲಿಲ್ಲ. ಪ್ರಾತಃಕಾಲ ಎದ್ದು ತನ್ನ ಬೇನೆಯು ಹೆಚ್ಚುತ್ತದೆಂದರು. ಅವರ ಎದೆಯ ಬಡಿಯುವಿಕೆಯು ಹೆಚ್ಚಿತು. ಇದನ್ನು ಕಂಡು ಅವರ ಮೊಮ್ಮಗನು ಬೇರೆ ಕೋಣೆಯಲ್ಲಿರುವ ಅವರ ಮಗನನ್ನು ಕರೆತಂದು ನೋಡಲಾಗಿ, ಅವರ ಪ್ರಾಣವು ಹಾರಿ ಹೋಗಿದ್ದಿತು.

ಮಹಾತ್ಮಾಜಿಯವರಿಗೆ ಈ ಸಂಗತಿಯನ್ನು ಲಾಲಾ ಅಮೃತರಾಯರು ತಿಳಿಸಿದರು. "ಈ ವರ್ತಮಾನವನ್ನು ಕೇಳುವದರಿಂದ ನನ್ನ ಮನಸ್ಸಿಗೆ ದೊಡ್ಡ ಆಘಾತವುಂಟಾಗಿದೆ. ಲಾಲಾಜಿಯವರ ಮರಣದಿಂದ ಪಂಜಾಬದ ವೀರವರನು ಕಳೆದು ಹೋದನಾದುದರಿಂದ ನನಗೆ ಬಹು ದುಃಖವಾಗುತ್ತದೆ. 'ಅವರ ಕುಟುಂಬಕ್ಕೆ ಶಾಂತಿಯೊದಗಲಿ" ಎಂದು ಪ್ರತ್ಯುತ್ತರವಿತ್ತರು.

ಲಾಹೋರಿನಲ್ಲಿಯೂ ಈ ವಾರ್ತೆಯನ್ನು ಕೇಳಿ ಜನರು ವ್ಯಸನದೊಂದಿ ದುಃಖಸೂಚಕವಾದ ಸಭೆಗಳನ್ನು ನೆರೆಯಿಸಿದರು.

ಕಲಕತ್ತೆಯಲ್ಲಿಯೂ ಈ ಸಂಗತಿಯನ್ನು ಕೇಳಿದೊಡನೆ ಜನರು ದಿಗಿಲುಬಿದ್ದರು. ಲಾಲಾಜಿಯವರು ದೇಶಹಿತದ ಸಲುವಾಗಿ ಎಷ್ಟು ಉತ್ಸಾಹಿತರಿದ್ದರೆಂಬುದನ್ನು ನೆನಸುವಾಗ, ಅವರ ಮೃತಿಯು ಬಹು ಬೇಸರಿಕೆಯದಾಗಿ ಕಾಣುವದು.

ಸುಮಾರು ಹತ್ತು ಘಂಟೆಯ ಸಮಯಕ್ಕೆ ಸರ್ವಮತದವರೂ, ಬಡವರೂ, ಧನಿಕರೂ ಲಾಲಾಜಿಯವರ ಮನೆಯಲ್ಲಿ ಕೂಡಿದರು. ಗೌರವ [illegible] ಬಿಂದು ವೀರಪುರುಷನ ಕೊನೆಯ ಸಂದರ್ಶನವನ್ನು ಪಡೆದರು. ಲಾಲಾಜಿಯವರ ಶವವನ್ನು ನೋಡಲಾಗಿ ಯಾವ ಭಯವೂ ತೋರುತ್ತಿರಲಿಲ್ಲ. [illegible] ಮಾತ್ರ ಹಾರಿಹೋದ ಹಾಗಾಗಿದ್ದಿತು. ಮಂದಹಾಸವು ಅವರ ಮುಖದ ಮೇಲೆ ತೋರುತ್ತಿತ್ತು. ಮನೆಯ ಹೊರಗಡೆ ಸುಮಾರು ಹತ್ತು ಸಾವಿರಕ್ಕೆ ಮಿಕ್ಕಿ ಜನರು ಕೂಡಿದ್ದರೂ ಯಾವ ಗಲಭೆಯೂ ಇಲ್ಲದೆ ಸರ್ವರೂ ಅತ್ಯಂತ ಶಾಂತಸ್ಥಿತಿಯಲ್ಲಿದ್ದು ಎಷ್ಟು ಹೊತ್ತಿಗೆ ಮೆರವಣಿಗೆಯು ಹೊರಡುವದೋ ಎಷ್ಟು ಹೊತ್ತಿಗೆ ಲಾಲಾಜಿಯವರ ಮುಖವನ್ನು ನಿರೀಕ್ಷಿಸುವೆವೋ ಎಂದು ಕೌತುಕಪಡುವವರಾಗಿದ್ದರು. ಮೃತದೇಹವನ್ನು ಹೊಯಿಸಿ ಪುಷ್ಪಹಾರಗಳಿಂದ ಅಲಂಕರಿಸಿದ ಮೇಲೆ ಸುಮಾರು ಮಧ್ಯಾಹ್ನ ಎರಡೂವರೆ ಘಂಟೆಯ ಸಮಯ ಮೆರವಣಿಗೆಯು ಹೊರಟಿತು.

ದೇಶದ ಹಲವೆಡೆಗಳಿಂದ ಬಂದ ತಂತಿಗಳಲ್ಲಿ ಶವ ಸಂಸ್ಕಾರವನ್ನು ಮರುದಿನಕ್ಕೆ ಮುಂದರಿಸಬೇಕೆಂದೂ ಅದರಿಂದ ಪರಪ್ರಾಂತವರು ಅಲ್ಲಿಗೆ ಬಂದು ಈ ವೀರ ಧುರೀಣನ ಮುಖವನ್ನು ನೋಡಲು ಅನುಕೂಲವಾಗುವದೆಂದೂ ಬರೆದಿದ್ದರು; ಆದರೆ ಸಂಸ್ಕಾರವನ್ನು ಮುಂದರಿಸಲಿಲ್ಲ.

ಮನೆಯಿಂದ ಹೊರಟೊಡನೆ "ಪಂಜಾಬ ಸಿಂಹಕೀ ಜೈ" 'ವಂದೇ ಮಾತರಮ್' ಎಂದು ಎಲ್ಲರೂ ಗಟ್ಟಿಯಾಗಿ ಹೇಳುತ್ತಾ ಮುಂದರಿಸಿದರು. ಶವದ ಸುತ್ತಲೂ ವೈದಿಕ ವಿದ್ಯಾರ್ಥಿಗಳು ನಿಂತು ವೇದವನ್ನು ಪಠಿಸುತ್ತಿದ್ದರು. ಮೆರವಣಿಗೆಯಲ್ಲಿ ಹಿಂದೂಗಳೇ ಅಧಿಕ ಸಂಖ್ಯಾತರು ಮುಸಲ್ಮಾನರೂ, ಕ್ರೈಸ್ತರೂ ಇಲ್ಲದಿರಲಿಲ್ಲ. ಮೆರವಣಿಗೆಯ ಆದಿಯಲ್ಲಿ ೨೫,೦೦೦ಕ್ಕೆ ಮಿಕ್ಕಿ ಜನರಿದ್ದರು. ಎದುರಿನಲ್ಲಿ ವಿದ್ಯಾರ್ಥಿಗಳು, ಅವರ ಹಿಂದೆ ಸ್ತ್ರೀಯರು, ಅವರ ಹಿಂದೆ ಇತರ ಜನರು. ಬರಬರುತ್ತ ಮೆರವಣಿಗೆಯ ಜನಸಂಖ್ಯೆಯು ಹೆಚ್ಚಿತು. ಲಾಲಾಜಿಯನ್ನು ಪ್ರಶಂಸಿಸಿ ಅವರೆಲ್ಲರೂ ಹಾಡುತ್ತಿದ್ದ ಹಾಡು ದಿಗಂತದಲ್ಲೆಲ್ಲಾ ವ್ಯಾಪಿಸಿತು. ಕಟ್ಟಕಡೆಗೆ ಜನಸಂಖ್ಯೆಯು ೭೫ ಸಾವಿರದಿಂದ ಒಂದು ಲಕ್ಷದ ವರೆಗೂ ಆಯಿತು.

ಸುಮಾರು ೫ ಘಂಟೆಗೆ ನದೀ ತಟಕ್ಕೆ ಬಂದೊಡನೆ ಅಲ್ಲಿ ಸಂಸ್ಕಾರವಾಯಿತು. ಲಾಲಾಜಿಯವರ ಹಿರಿಯ ಮಗನು ಪಂಜಾಬದ [illegible] ಎಂಬಲ್ಲಿದ್ದವರು ಬೆಳಗ್ಗೆ ೯ ಗಂಟೆಗೆ ತಂದೆಯ ನಿಧನದ ವರ್ತಮಾನವನ್ನು ಕೇಳಿ ಒಡನೆ ಮೋಟಾರಿನಲ್ಲಿ ಹೊರಟು ೧೫೦ ಮೈಲು ದೂರವನ್ನು ಕ್ರಮಿಸಿ ೪ ಘಂಟೆಯ ಹೊತ್ತಿಗೆ ಲಾಹೋರಿಗೆ ತಲುಪಿ, ತನ್ನ ತಂದೆಯನ್ನು ಕೊನೆಯ ಬಾರಿ ನೋಡಿದರು. ಹಿಂದೂಗಳು ಮಾತ್ರವಲ್ಲ ಮಹಮ್ಮದೀಯರೂ ಕೂಡ ಅವರ ಈ ನಿಧನದಿಂದ ಶೋಕಗೊಂಡು ಹರತಾಳವನ್ನು ಆಚರಿಸಿದ್ದರು.

ಈ ಸಮಯದಲ್ಲಿ ಒಬ್ಬ ಯುರೋಪಿಯನನು ಬೈರಾಗಿಯ ವೇಷದಿಂದ ಬಂದು ಪಿಸ್ತೂಲುಗಳನ್ನು ಹಿಡಿದು ಬಂದಿರುವರೆಂಬ ವರ್ತಮಾನವು ಹಬ್ಬಿ ಜನರಲ್ಲಿ ಅಲ್ಲೋಲ ಕಲ್ಲೋಲವುಂಟಾಯಿತು.

ಲಾಲಾಜಿಯವರು ಉಜ್ವಲ ರಾಷ್ಟ್ರೀಯ ವೀರರು. ಮಾತೃಭೂಮಿಯ ಉದ್ಧಾರದ ಸಲುವಾಗಿ ಅವಿಶ್ರಾಂತವಾಗಿ ದುಡಿದವರು. ಲುಡಿಯಾನಾ ಜಿಲ್ಲೆಯ ಒಂದು ಪಟ್ಟಣದಲ್ಲಿ ೧೮೬೫ನೇ ಇಸವಿಯಲ್ಲಿ ಜನಿಸಿದರು. ಅವರು ವೈಶ್ಯಮತದವರು, ಅವರ ತಂದೆಯು ಕಾಂಗ್ರೆಸ್ ಪಕ್ಷದವರು. ಲಾಲಾಜಿಯವರ ವಿದ್ಯಾಭ್ಯಾಸಕ್ಕಾಗಿ ಅವರ ತಂದೆಯು ತುಂಬಾ ಉತ್ಸಾಹಿತರಾಗಿದ್ದರು. ೧೮೮೫ನೇ ಇಸವಿಯಲ್ಲಿ ಅವರು ನ್ಯಾಯಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಕೀಲವೃತ್ತಿಯನ್ನಾರಂಭಿಸಿದರು. ಇವರು ಸ್ವಾಮಿ ದಯಾನಂದ ಸರಸ್ವತಿಯವರ ಸೂತ್ರಗಳನ್ನು ಸಾರವಾಗಿ ವರ್ತಿಸುತ್ತಿದ್ದರು. ಮೊದಲವರು ವಕೀಲರಾಗಿದ್ದುದು ಹಿಸ್ಸಾರದಲ್ಲಿ. ತದನಂತರ ಲಾಹೋರಕ್ಕೆ ಬಂದರು. ಹಿಸ್ಸಾರದಲ್ಲಿರುವಾಗ ಮೂರು ವರುಷ ಮುನಿಸಿಪಲ್ ಸೆಕ್ರೆಟರಿಯಾಗಿದ್ದರು. ಲಾಹೋರದಲ್ಲಿದ್ದಾಗಲೇ ಇವರು ರಾಷ್ಟ್ರೀಯ ಚಳವಳಿಯಲ್ಲಿ ಭಾಗಿಗಳಾಗತೊಡಗಿ ಅವುಗಳಲ್ಲಿ ಇವರ ಅಭಿರುಚಿಯು ಹೆಚ್ಚಿತು. ೧೮೯೭ನೇ ಇಸವಿಯಲ್ಲಿ ಬರ ಬಂದಾಗ ಇವರು ಒಂದು ಅನಾಥ ಸಹಾಯಾಲಯವನ್ನು ತೆರೆದರು. ೧೯೦೧ನೇ ಇಸವಿಯಲ್ಲಿ ಫೆಮಿನ್ ಕಮಿಶನಿನ ಎದುರು ಇವರು ಕೊಟ್ಟ ಸಾಕ್ಷ್ಯಗಳಿಂದ ಸರಕಾರದವರಿಂದ ಬಹಳ ಉಪಕಾರವಾಗುವಂತಹ ಪರಿವರ್ತನೆಗಳು ಬರಗಾಲ ಕಾನೂನಿನಲ್ಲಿ ಉಂಟಾದವು.

ಹಿಂದೂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ಇಂಗ್ಲೆಂಡಿನ ಮುಂದಿಡಲು ಇಂಗ್ಲೆಂಡಿಗೆ ಹೋಗಲು ೧೯೦೫ನೇ ಇಸವಿಯಲ್ಲಿ ಇವರು ಮತ್ತು ಶ್ರೀ ಗೋಖಲೆಯವರು ಆರಿಸಲ್ಪಟ್ಟರು. ಇಂಗ್ಲೆಂಡಿನಲ್ಲಿ ಅವರು ಭಾಷಣಗಳನ್ನು ಕೊಟ್ಟುದಲ್ಲದೆ ಯುರೋಪನ್ನೂ ಅಮೇರಿಕವನ್ನೂ ಸಂದರ್ಶಿಸಿದರು. ಪರದೇಶ ಪ್ರವಾಸದಿಂದ ಹಿಂತಿರುಗುವಾಗ ಅವರು ಅಚ್ಚ ಸ್ವದೇಶಭಕ್ತರಾಗಿದ್ದರು, ಪಾಶ್ಚಾತ್ಯರ ಸ್ವಾತಂತ್ರ್ಯ ಪ್ರೇಮದ ಪ್ರದರ್ಶನದಿಂದ ಅವರ ಚಿತ್ತವು ಪೂರ್ಣ ಪರಿವರ್ತಿತವಾಯಿತು. ಸೂರತಿನಲ್ಲಿ ನಡೆದ ಅಖಿಲಭಾರತ ಸ್ವದೇಶಿ ಪರಿಷದಿನಲ್ಲಿ ಹಿಂದೂಸ್ಥಾನದಲ್ಲಿಯೇ ತಯಾರಾದ ವಸ್ತ್ರ ಮತ್ತು ಸಾಮಾಗ್ರಿಗಳನ್ನೇ ನಾವು ಉಪಯೋಗಿಸುತ್ತಿರಬೇಕೆಂದು ಹುರುಪಿನಿಂದ ಭಾಷಣವನ್ನಿತ್ತರು. ಇವರ ಈ ತರದ ವರ್ತನದಿಂದ ಆಂಗ್ಲೋ ಇಂಡಿಯನರಿಗೆ ಸಿಟ್ಟುಂಟಾಯಿತು. ೧೯೦೫ನೇ ಇಸವಿಯಲ್ಲಿ ಇವರು ಬನಾರಸ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಬಂಗಾಳದಲ್ಲಿನ ಸರಕಾರದ ವರ್ತನೆಯನ್ನು ಖಂಡಿಸಿ ಮಾತನಾಡಿದುದರಿಂದ ಸರಕಾರದವರು ಸರಿಯಾಗಿ ಕೆಲಸಮಾಡತೊಡಗಿದರು. ಪಂಜಾಬದ ಸರಕಾರದವರು ಇವರನ್ನು ರಾಜ್ಯದಿಂದ ಹೊರಗೆ ಕಳುಹಿಸಲು ಒಮ್ಮೆ ಯೋಚಿಸಿ ಕಳುಹಿದ ರಾದರೂ ಜನರೆಲ್ಲರೂ ವಿರೋಧಿಸಿದ ಕಾರಣ ಈ ಆಲೋಚನೆಯನ್ನು ವಜಾ ಮಾಡಿ ಹಿಂದಕ್ಕೆ ಕರೆಸಿದರು.

ಲಾಲಾಜಿಯವರು ಲಾಹೋರಕ್ಕೆ ಬಂದುದಾಗ ಸರಕಾರದವರ ನಿರ್ಬಂಧಗಳ ದೆಸೆಯಿಂದ ರಾಷ್ಟ್ರೀಯ ಕಾರ್ಯಗಳಿಗೆ ಎಡೆಯಿರಲಿಲ್ಲ. ಯುದ್ಧದ ಮೊದಲು ಅವರು ಅಮೇರಿಕಕ್ಕೆ ಹೋಗಿ ಅಲ್ಲಿ ಉಳಕೊಂಡರು. ಅಲ್ಲಿ ಹಿಂದೂಸ್ಥಾನದ ಪರವಾಗಿ ಪ್ರಕಟನೆಯ ಕೆಲಸವನ್ನು ಮಾಡತೊಡಗಿದರು. ಯುದ್ಧವು ಮುಗಿದೊಡನೆ ಅವರು ಹಿಂದೂಸ್ಥಾನಕ್ಕೆ ಹಿಂತಿರುಗಲು ಸರಕಾರವು ಅಡ್ಡಿಯನ್ನುಂಟುಮಾಡಿತು. ಆದರೂ ಇವರ ರಾಷ್ಟ್ರಪ್ರೇಮದ ಎದುರು ಸರಕಾರದವರಿಗೆ ನಿಲ್ಲಲಾಗದೆ ಅವರು ಸಮ್ಮತಿಯನ್ನಿತ್ತರು. ಲಾಲಾಜಿಯವರು ಹಿಂದೂಸ್ಥಾನಕ್ಕೆ ಹಿಂತಿರುಗಿ ಕಲಕತ್ತ ಸ್ಪೆಶಲ್ ಕಾಂಗ್ರೆಸ್ಸಿನ ಅಧ್ಯಕ್ಷರಾದರು.

ಲಾಲಾಜಿಯವರು ಅಸಹಕಾರ ಚಳವಳದಲ್ಲಿ ಪ್ರಾಮುಖ್ಯ ಭಾಗವನ್ನು ವಹಿಸಿದುದರಿಂದ ಇತರ ಹಲವರೊಂದಿಗೆ ಕಾರಾಗೃಹದಲ್ಲಿ ಬಂಧಿಸಲ್ಪಟ್ಟರು. ಎಸೆಂಬ್ಲಿಗೆ ಮೆಂಬರರಾಗಿ ಅಲ್ಲಿ ಚರ್ಚಿಸುತ್ತ ಬಹಳ ಉಪಕಾರ ಮಾಡಿದರು.

ಅಸ್ಪೃಶ್ಯರ ಏಳಿಗೆಗಾಗಿ ಅವರು ಬಹುವಾಗಿ ಸಾಧಿಸಿದರು. "ಸರ್ವೆಂಟ್ಸ್ ಓಫ್ ದಿ ಪೀಪಲ್ ಸೊಸೈಟಿ" ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಿದರು.

ಸ್ಯಾಮನ್ ಕಮಿಶನ್ನಿನ ಬಹಿಷ್ಕಾರದಲ್ಲಿ ಇವರು ಮೊದಲಾಗಿ ನಿಂತಿದ್ದವರು, ಕಳೆದ ಸಲ ಕಮಿಶನು ಲಾಹೋರಿಗೆ ಬಂದಾಗ ಬಹಿಷ್ಕಾರದ ಮೆರವಣಿಗೆಯನ್ನು ಇವರೇ ನಡಸಿ ಪೋಲೀಸರಿಂದ ದೊಣ್ಣೆಯಿಂದ ಹೊಡೆಯಲ್ಪಟ್ಟಿದ್ದರು. ಇದರಿಂದಲೇ ಅವರ ದೇಹಸ್ವಾಸ್ಥ್ಯಕ್ಕೆ ಬಾಧೆಯುಂಟಾಗಿದ್ದಿರಬಹುದು.

ಅವರ ಮರಣದಿಂದ ಹಿಂದೂಸ್ಥಾನಕ್ಕೆ ಬಹಳ ನಷ್ಟವಿದೆ. ಹಿಂದೂಮಾತೆಯ ಮುಕುಟದ ಉಜ್ವಲ ರತ್ನವು ಬಿದ್ದುಹೋದಂತಿದೆ. ಇಂತಹ ವೀರಪುತ್ರನು ತನ್ನ ಸದ್ಯದಲ್ಲಿ ಉದಯಿಸಲಾರನೆಂಬುವನ್ನು ಖಂಡಿತವಾಗಿ ಹೇಳಬಹುದು.

ಉತ್ತರ ಮತ್ತು ದಕ್ಷಿಣ ಮಂಗಳೂರು ಡಿವಿಜನ್‌ಗಳ ಸುರಕ್ಷಿತ ಕಾಡುಗಳ ಪೈಕಿ ಫಿರಾರಕಾನ ಮತ್ತು ಸಬಲಾದಿ ಹೊರತು ಬಾಕಿ ಯಾವತ್ತು ಕಾಡುಗಳಲ್ಲಿ ಈ ಕೆಳಗೆ ಕಾಣಿಸಿದ ರಿಯಾಯಿತಿಗಳನ್ನು ದಕ್ಷಿಣ ಕನ್ನಡ ರೈತರಿಗೆ ಬರುವ ೧೯೨೯ನೇ ಇಸವಿ ಜೂನ್ ತಿಂಗಳ ೩೦ನೇ ತಾರೀಕಿನ ವರೇಗೆ ಉಪಯೋಗಿಸುವರೆ ಚೀಫ್ ಕನ್ಸರ್ವೇಟರ ಧೊರೆಗಳವರು ಹುಕುಮು ಕೊಟ್ಟಿರುವ ಸಂಗತಿ ಈ ಮೂಲಕ ತಿಳಿಯಪಡಿಸೋಣಾಗುತ್ತದೆ. ಪರಂತು ಈ ರಿಯಾಯಿತಿಗಳನ್ನು ದುರುಪಯೋಗಪಡಿಸಿದ್ದಲ್ಲಿ ಅವುಗಳನ್ನು ರದ್ದುಪಡಿಸುವ ಶರ್ತಕ್ಕೆ ಒಳಪಟ್ಟು ಕೊಟ್ಟಿರುತ್ತಾರೆ.

ರಿಯಾಯಿತಿಗಳು.

(a) ಉತ್ತರ ಮಂಗಳೂರು ಡಿವಿಜನ ಪಟ್ಟಿಗೆ ಕರಾವಳಿಯ ಕಾಡುಗಳು ಹೊರತು ಇತರ ಕಾಡುಗಳಲ್ಲಿ ಮತ್ತು ದಕ್ಷಿಣ ಮಂಗಳೂರು ಡಿವಿಜನ್ ಪಟ್ಟಿಗೆ ಮಾಣಿಯೂರು ಕಳಂಜಮಲೆ, ವೀರಮಂಗಲ ಕಾಡುಗಳು ಹೊರತು ಇತರ ಕಾಡುಗಳಲ್ಲಿ ಖಾಸಗಿ ಭೂಮಿಗಳ ಗಡಿಯಿಂದ ೫ ಮೈಲು ವರೇಗೆ ಪೊದೆ ಗಿಡಗಳನ್ನು ಕಡಿಯಬಹುದು.

(b) ಉತ್ತರ ಮಂಗಳೂರು ಡಿವಿಜನ ಪೈಕಿ ಕರಾವಳಿಯಲ್ಲಿರುವ (೧) ಸರ್ಪನ ಮನೆ, (೨) ನವಂತಗುಡ್ಡ, (೩) ಕದಿಕೆ, (೪) ಕರ್ನಿಗುಡ್ಡೆ, (೫) ಬೈಂದೂರು, (೬) ಗುರುವಾನ ಕೊಡ್ಲು, (೭) ಕರ್ನೆಗುಡ್ಡೆ, (೮) ಹಾಲಿಮಿಶೆಪಾರೆ, (೯) ಹೀರೂರು, (೧೦) ಪೊನ್ನಕೊಡ್ಲು, (೧೧) ವಿಲ್ಲಗುಡ್ಡೆ ಕಾಡುಗಳಲ್ಲಿಯೂ, ದಕ್ಷಿಣ ಮಂಗಳೂರು ಡಿವಿಜನ ಪೈಕಿ (೧) ಮಾಣಿಯೂರು, (೨) ಕಳಂಜಮಲೆ, (೩) ವೀರಮಂಗಲ ಕಾಡುಗಳಲ್ಲಿಯೂ ಖಾಸಗಿ ಭೂಮಿಯ ಗಡಿಯಿಂದ ೨೦೦ ಗಜದ ವರೇಗೆ ಪೊದೆ ಗಿಡಗಳನ್ನು ಕಡಿಯಬಹುದು.

(c) ಕಿಸಾಲಭೋಗಿ ಬಿಟ್ಟು ಎಲ್ಲಾ ಭಾಗಗಳಲ್ಲಿ ಪೊದೆ ಗಿಡಗಳನ್ನು ಕಡಿಯಬಹುದು.

(d) (i) ಮರವಾದ ಅಲ್ಲದ ಜಾತಿಯ ಹಸಿ ಸೊಪ್ಪುಗಳನ್ನೂ ಎಲ್ಲಾ ಜಾತಿಯ ಒಣ ಸೊಪ್ಪುಗಳನ್ನೂ ಧರ್ಮಾರ್ಥವಾಗಿ ತೆಗೆಯಬಹುದು.

(ii) ಸತ್ತ ಕಟ್ಟಿಗೆಯನ್ನು ಧರ್ಮಾರ್ಥವಾಗಿ ತೆಗೆಯಬಹುದು.

ಟಿಪ್ಪಣಿ—(೧) ಪೊದೆ ಗಿಡಗಳು ಅಂದರೆ ೬ ಫೀಟು ಎತ್ತರಕ್ಕೆ ಮೀರದ ಮರವಾದ ಅಲ್ಲದ ಇತರ ಜಾತಿ ಮರವಾಟ್ಟು ಆಗಿರುತ್ತದೆ.

(೨) ಸತ್ತ ಕಟ್ಟಿಗೆ ಅಂದರೆ ಸತ್ತ ಮರಗಳ ಬಾಬ್ತು ೩ ಇಂಚಿಗಿಂತಲೂ ಕಡಿಮೆ ದಪ್ಪವಿರುವ ತುಂಡುಗಳು ಆಗಿರುತ್ತವೆ.

ದಕ್ಷಿಣ ಕನ್ನಡಾ ಜಿಲ್ಲೆಯ ರೈತರಿಗೆ ಕೊಡಲ್ಪಡುವ ಎಚ್ಚರಿಕೆ ನೋಟೀಸು.

೧. ಮೇಲೆ ಪ್ರಸ್ತಾಪಿಸಿದ ರಿಯಾಯಿತಿಗಳನ್ನು ಹಳ್ಳಿ ನಿವಾಸಿಗಳು ಅತಿರೇಕ ದುರುಪಯೋಗಪಡಿಸುತ್ತಾರಾಗಿ ಜಿಲ್ಲಾ ಕಲೆಕ್ಟರರ ತಿಳುವಳಿಕೆಗೆ ಬಂದು ಆ ಕಾರಣ VIನೇ ಸರ್ಕಲ್ ಫೋರೆಸ್ಟ್ ಕನ್ಸರ್ವೇಟರ ಧೊರೆಗಳು, ಮತ್ತು ಉತ್ತರ-ದಕ್ಷಿಣ ಮಂಗಳೂರು ಡಿವಿಜನ ಡಿಸ್ಟ್ರಿಕ್ಟ್ ಫೋರೆಸ್ಟ್ ಆಫೀಸರು ಮುಖ್ಯ ಮೇಲು ತನಿಖೆಯಲ್ಲಿ ಆ ಪ್ರಕಾರ ದುರುಪಯೋಗಪಡಿಸಿದ್ದು ನಿಜವಾಗಿ ಕಂಡುಬಂದಿದೆ.

೨. ಸೊಪ್ಪುಗಳನ್ನು ಕಡಿದು ತೆಗೆಯುವಾಗ್ಯೆ ಹಚ್ಚಾಗಿ ಮರವಾದ ಜಾತಿಯ ಅಂದರೆ ಹೊನ್ನೆಗಲಿ, ಮಾವು, ಬೀಟೆ ಮತ್ತು, ಕಿರಾಲ್ ಭೋಗಿ ಮುಂತಾದ ಮರಗಳ ಸೊಪ್ಪುಗಳನ್ನು ಕಡಿದ್ದಾಗಿಯೂ ಮರಗಳನ್ನು ಮತ್ತು ಗಿಡಗಳ ತುಂಡು ಸುತ್ತಳತೆಯ ಬುಡಗಳನ್ನು ಸಹಾ ಮುಂದಕ್ಕೆ ಬೆಳೆಯುವ ರೀತಿಯಲ್ಲಿ ಬೋಳಿಸಿದ್ದಲ್ಲದೆ ಬಡಿ ಗೆಲ್ಲುಗಳ ಸೊಪ್ಪುಗಳನ್ನು ಬೆಳೆಯುವ ಬಗ್ಗೆಯಂತೆ ಕಡಿದು ಗೆಲ್ಲುಗಳ ದೊಡ್ಡ ತುಂಡುಗಳನ್ನು ಕಟ್ಟಿಗೆಯ ಬಗ್ಗೆ ತೆಗೆದು ಕೊಂಡುಹೋಗುವರೆ ಕಡಿದು ಬುಡಗಳಿಗೆ ಹಾಕಿದ್ದು ಸಹಾ ಕಂಡುಬಂದಿದೆ

೩. ಸದರ್ ಕಾಡುಗಳಿಂದ ಸಿಪ್ಪು ಕಟ್ಟಿಗೆಯನ್ನು ಕಡಿದುಕೊಂಡು ಹೋಗುವ ರಿಯಾಯಿತಿಗಳು ಅವುಗಳನ್ನು ದುರುಪಯೋಗಪಡಿಸದ ಶರ್ತಕ್ಕೆ ಒಳಪಟ್ಟು ಕೊಟ್ಟಂಥವುಗಳು. ಆದಾಗ್ಯೂ ಸದರಿ ರಿಯಾಯಿತಿಗಳನ್ನು ಪರೀಕ್ಷಾರ್ಥವಾಗಿ ಮಾತ್ರ ೧೯೨೯ನೇ ಇಸವಿ ಜೂನ್ ೩೦ನೇ ತಾರೀಕಿನ ವರೇಗೆ ಜಾರಿಗೆ ತರಲು ಕನ್ಸರ್ವೇಟರ ಧೊರೆಗಳವರು ಸಂತೋಷಪಟ್ಟಿರುತ್ತಾರೆ. ಪರಂತು ಸದರಿ ರಿಯಾಯಿತಿಗಳನ್ನು ಇನ್ನು ಮುಂದಕ್ಕೆ ಸಹಾ ಇದೇ ರೀತಿ ದುರುಪಯೋಗಪಡಿಸಿದಲ್ಲಿ ಅವುಗಳನ್ನು ಪೂರಾ ರದ್ದು ಪಡಿಸಲಾಗುವದೆಂತಾಗಿ ಹಳ್ಳಿ ನಿವಾಸಿಗಳಿಗೆ ಈ ಮೂಲಕ ಕಡೇ ಎಚ್ಚರಿಕೆಯನ್ನು ಕೊಟ್ಟಿರುತ್ತದೆ.

೪. ಮುಖ್ಯತಃ ಈ ಕೆಳಗೆ ಕಾಣಿಸಿದ ಮತ್ತು ಮತ್ತು ಮರವಾದ ಜಾತಿಯ ಮರಗಳ ಸೊಪ್ಪುಗಳನ್ನು ಎಷ್ಟುಮಾತ್ರಕ್ಕೂ ಕಡಿಯತಕ್ಕದ್ದಾಗಿಯೂ ಸಪ್ಪು ಗೊಬ್ಬರದ ಉದ್ದೇಶ್ಯವಾಗಿ ಇತರ ಜಾತಿಯ ಮರಗಳಿಂದ್ಲ ೫ ಇಂಚು ಒಳಗಿನ ಸುತ್ತಳತೆಯ ಸಣ್ಣ ಗೆಲ್ಲುಗಳನ್ನು ಮತ್ತು ಎಲೆಗಳನ್ನು ಮಾತ್ರ ಕಡಿಯಬೇಕಲ್ಲದೆ ಈಗ ಮಾಡುವ ರೀತಿಯಲ್ಲಿ ಮರಗಳ ಮುಖ್ಯ ಗೆಲ್ಲುಗಳನ್ನು ಸವರಿ ತೆಗೆಯಬಾರದಾಗಿಯೂ ಹಳ್ಳಿ ನಿವಾಸಿಗಳಿಗೆ ಈ ಮೂಲಕ ಕಂಡೋಕ್ತವಾಗಿ ಎಚ್ಚರಿಸೋಣಾಗುತ್ತದೆ—

ಸಾಗವಾನಿ, ಗಂಧ, ಬೀಟಿ, ಬೇಂಗ, ಅಸಲೆ ಯಾನೆ ಹರ್ದೆ ಇಪ್ಪೆ, ಮಾವು, ಹಲಸು, ಹೆಬ್ಬಲ್ಸು, ತೀರ್ವ ಯಾನೆ ಇಂಟೆ, ರಿಂಟಕಾಯಿ ಮರ, ಕಾಟು, ರಾಮಪತ್ರಿ, ಶ್ರೀಹೊನ್ನೆ, ದಾಲಚೀನಿ, ಕಿರಾಲಭೋಗಿ, ಬೂವು ಯಾನೆ ಮತ್ತಿ, ಕಲ್ಲುಹೊನ್ನೆ, ಮೈರೊಳ, ಬೆಂಟೇಕು ಯಾನೆ ಬೀನಂದ್ರಿ, ಮರ್ವ ಯಾನೆ ಹೊನಗಲು, ಕೆಂಪುಗಂಧಗಿರಿ, ಜೀತರ್ಪ, ಬೆಲ್ಲ, ಪೂಲೆ ಭಾಗಿ, ಕಲ್ಲುಭಾಗಿ, ಅಜ್ಜಂಜಿ, ಪೊಕೆಹುಳಿ, ಅಣವು, ಧೂಪ, ತೆಂಗಿನ ಮರ, ಕಾಳ ಮಾರ, ಬೈನಿ, ಕಂಗು ಯಾನೆ ಅಡಿಕೆ.

Dated } 11-11-'28.

K. T. Matthew,
for Dt. Forest Officer,
Mangalore, S. K.

Chikmagalur Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

ಟೆಲಿ ವಿಳಾಸ: ಕನ್ವೆಯನ್ಸ್, Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯು ವರ್ತಕ ಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲಕ್ಕಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹಾರಕ್ಕೆ 10-30ಕ್ಕೆ ವೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ವೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ದೊರೆಯುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡ್ರಾಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಫ್ಯಾರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕಂಡಾಳ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಾಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ಶಂಕ್ರೆ ಮಾರ್ಗವಾಗಿ ಶಿವಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,
The Canara Public Conveyance Co., Ltd., S. K. Mangalore. 22626

ದಿ ಕೆನರಾ ನರ್ಸರಿ
ಕಸಿ ಮಾಡಿದ ಗಿಡಗಳು. [illegible]

ನಮ್ಮಲ್ಲಿ ಕಸಿ ಮಾಡಿದ [illegible] ಗಳೂ, ಸಪೋಟಾ, ಪೇರಲೆ, [illegible] ದಾಳಿಂಬೆ, ಕಿತ್ತಳೆ ಮುಂತಾದ [illegible] ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟವುಗಳು [illegible] ಇಲ್ಲದೆ ಚೆನ್ನಾಗಿ ಫಲಬಿಡುವವು [illegible] ಗಳು ಕರಾವಳಿ ಹವೆಗೂ ತುಂಬ [illegible] ಬಿಡುವುದಿಲ್ಲ. ಕ್ರಯ ಪಟ್ಟಿಗೆ [illegible] ಬರೆಯಿರಿ. ಗಿಡಗಳು ಮಂಗಳೂರು [illegible] ಯಾಚೆಯುವರಲ್ಲಿ ದೊರೆಯುವವು.

ಕೆ. ಮುದ್ದಣ್ಣ ಶೆಟ್ಟಿ, ದಿ. ಕೆನರಾ ನರ್ಸರಿ, ಬಿಸಲ್‌ಗಾರ್ಡನ್ಸ್, ಕಾರ್ಕಳ. } C/o [illegible]
13.1028

Wanted.

Five organising Supervisers for the Midland Bank (India) Ltd. Calcutta, in the Province of Mysore, Coorg, South Kanara and Malabar. Pay Rs 50 + Rs 15 T. A. per mensem. A deposit of Rs. 250 in the Banks Shares essential. Apply to L. P. Kashyapa.

Vasista Ashrama,
Perdal P. O. (S. K)

Diamonds ವಜ್ರಗಳು **Diamonds**

BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ಯೋಜಂಟ್ರಾಗಿ, ಯಂಟವರ್ಪಿನಿಂದ ತರಿಸುವ ವಜ್ರಗಳು
— ಮಾರಾಟಕ್ಕಿವೆ. —

ಬೋಳ ಮಂಗೇಶ ರಾವ್,
ಮಂಗಳೂರು

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಕ್ರಯ 8 ಟಿನ್ನಿಗೆ 1-8-0 ½ ಡಜನಿಗೆ 8-8-0 ಡಜನಿಗೆ 16-8-0

ದಿಟನಂಬು! ಪುಷ್ಟನಾಗು!! ನೆಟ್ಟಗಾಗು!!

ಯುವಕನೇ ನಿನ್ನ ಬೆಲೆ ಯಾವದರಲ್ಲಿದೆ? ಸೌಮ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ?

ಆರೋಗ್ಯವಿಲ್ಲವೇ? ದೇಹವು ಕ್ಷೀಣವಾಗಿದೆಯೇ? ಮನಸಂತೋಷ ತಪ್ಪಿದೆಯೇ? ಜ್ಞಾಪಕ ಶಕ್ತಿ ಕುಂದಿರುವುದೇ? ಮುಂಗೋಪ ಜಾಸ್ತಿ ಇದೆಯೇ? ಆಲಸ್ಯ ತುಂಬಿರುವದೇ? ಚುರುಕು ಚಟುವಟಿಕೆ ಇಲ್ಲವೇ? ವ್ಯಾಕುಲತೆಯಿಂದ ಮರುಗುತ್ತೀಯೋ? ಸುಖವಾಗಬೇಕೆಂಬ ಇಚ್ಛೆ ಇದೆಯೇ? ಹಾಗಾದರೆ ಇಗೋ ಬಹು ಗುಣಕರವಾದ 'ಕಂಪೌಂಡ್ ಸಿರಪು ಸಾಲಿಸಪರಿ'ಯೆಂಬ ಅಮೃತವನ್ನೇ ಸೇವಿಸು. ಆವಾಗ ಮೇಲಿನ ಅವಲಕ್ಷಣಗಳು ಶೀಘ್ರ ಗುಣವಾಗಿ ಬಹು ಆರೋಗ್ಯವೂ ಶರೀರ ಪುಷ್ಟಿಯೂ ಉಂಟಾಗಿ ನಿನ್ನ ಬೆಲೆ ಆರೋಗ್ಯದಲ್ಲಿಯೇ ಇದೆಯೆಂದು ನಿನಗೆನೇ ತೋರಿ ಬರುವುದು.

ಕ್ರಯ 8 ಔನ್ಸ್ ಸೀಸೆಗೆ ರೂ. 3—8—0.

ಯುವತಿಯೇ ನಿನ್ನ ಸುಂದರವಾದ ಉಡುಪು ಯಾವುದು? ಅಚ್ಚುಕಟ್ಟಾಗಿ ಹೊಳೆವುವ ನಿನ್ನ ಆರೋಗ್ಯದ ದೇಹವಲ್ಲವೇ?

ದೇಹವು ಅಚ್ಚುಕಟ್ಟಾಗಿಲ್ಲವೇ? ರೂಪಕ್ಕೆ ಕಳೆ ಬಂದಿಲ್ಲ ಮುಖ ಕಳೆಗುಂದಿದೆಯೇ? ಕೈಕಾಲು ಬತ್ತುವದೇ? ಎದೆ ನಡುಗು, ಆಯಾಸ ಉಂಟೋ? ರಕ್ತ ಛಾಯೆಯಿಲ್ಲವೇ? ಅಜೀರ್ಣವಿದೆಯೇ? ಸೊಂಟ ನೋವು ಉಂಟೋ? ತಲೆಕೂದಲು ಉದುರುವುದೇ? ತಲೆತಿರುಕ ಉಂಟೋ? ದೃಷ್ಟಿ ಸರಿಯಿಲ್ಲವೇ? ಕಟ್ಟಳೆ ಅಕ್ರಮವಾಗಿದೆಯೋ? ಆವಾಗ ಉಪದ್ರ ಹೆಚ್ಚಿಯೋ ಇವರಿಂದ ಬಿಡುಗಡೆ ಹೊಂದಲು ಇಚ್ಛೆ ಇದೆಯೇ? ಹಾಗಾದರೆ ಗುಣ ಸೇವಕಿಯಂತಿರುವ ಕಂಪೌಂಡ್ ಸಿರಪು [illegible] ಅಂಗೀಕರಿಸು. ಈಕೆ ಗುಪ್ತಹಿಂಸೆಯಿಂದ ನಿನ್ನನ್ನು [illegible] ಯಾಗುವಂತೆಯೂ ಮುಖಕಳೆಗಳು ಹೊಳೆಯುವಂತೆಯೂ [illegible] ಸಿಗುವಂತೆಯೂ ಖಂಡಿತ ಸಹಾಯಮಾಡುವಳು. ಆವಾಗ ಅರೋಗ್ಯವುಳ್ಳ ದೇಹವೇ ಹೊಳೆಯುವ ನಿನ್ನ ಸುಂದರವಾದ ಉಡುಪಾಗಿದೆ ಎಂದು ನಿನಗೆನೇ ಖಚಿತವಾಗುವದು.

ಕ್ರಯ 8 ಟಿನ್ನಿನ ಬಾಟ್ಲಿಗೆ ರೂ. 3—8—0.

ಕೆಟಲಾಗಿಗೆ ಬರೆಯಿರಿ —

ಮಲೇರಿಯಾನ ಕಂಪೆನಿ,
22626 ಮಂಗಳೂರು ಎಸ್. ಕೆ.

ಫೆಲೂನಾ ಆರೋಗ್ಯವು

ನಿಮ್ಮ

ಮನೋಭಿಲಾಷೆಯನ್ನು

ಪೂರೈಸುವುದು.

ಮಕ್ಕಳನ್ನು ಪಡೆಯುವದು ಸ್ವಾಭಾವಿಕವು, ಮಕ್ಕಳನ್ನು ಪಡೆಯದಿರುವದು ಅಸ್ವಾಭಾವಿಕವಾಗಿರುವದು. ಆದರೆ ಅಂತಹ ಹೆಂಗಸರು ಬಹು ಕಡಿಮೆ.

ಆದರೆ ಹಲವು ಹೆಂಗಸರಿಗೆ ಮಾತೃತನವು ನಿರಾಕರಿಸಲ್ಪಡುವದು. ಎಂದು ಮಕ್ಕಳನ್ನು ಪಡೆವ ದಿನವು ಉದಯಿಸುವದೋ ಎನ್ನುತ್ತ ಅವರು ಕಾದು ಕಾದು ನಿರಾಶೆ ಹೊಂದುವರು. ಶರೀರ ಶಿವಿಗಳಿಗೆ ಆ ಶುಭಸಮಾಚಾರವನ್ನು ಸುರಿಯುವದೆಂದು ಅವರು ಅಪೇಕ್ಷಿಸುವರು. ಆದರೆ ಕಾರಣಾಂತರಗಳಿಂದ ಅವರ ಆಶೆಯು ಫಲಿಸುವುದಿಲ್ಲ. ಇಂತಹ ಸ್ಥಿತಿಗೆ ಸಾಧಾರಣವಾಗಿ ಶಕ್ತಿಹೀನತೆಯೇ ಕಾರಣವು. ಆಂತರಿಕ ಆರೋಗ್ಯವೇ ಬೇಕಾದುದು. ಒಬ್ಬಿಬ್ಬರಿಗೆ ಅಲ್ಲ, ಸಾವಿರಾರು ಹೆಂಗಸರಿಗೆ, ಈ ಫೆಲೂನಾ ಮಾತ್ರೆಗಳು ಆಂತರಿಕ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರಯಿಸಿರುವವು.

ಫೆಲೂನಾ ಮಾತ್ರೆಗಳಿಗೆ ಹೆಂಗಸರ ಇಂದ್ರಿಯಗಳನ್ನು ಶುಚಿಪಡಿಸುವ, ಬಲಪಡಿಸುವ ಶಕ್ತಿಯಿದೆ. ಅವುಗಳನ್ನು ಸೇವಿಸಿದೊಡನೆ ಮೊದಲು ಉತ್ಸಾಹವು ತಲೆದೋರಿ, ಸಂತೋಷವುಂಟಾಗಿ ರಕ್ತವು ಹೆಚ್ಚುವುದು. ಹೆಂಗಸು ಸರಿಯಾಗಿ ಜಲಿಸುವಳು. ಇದಕೆಲ್ಲಕ್ಕೆ ಫೆಲೂನಾ ಮಾತ್ರೆಗಳೇ ಕಾರಣ. ಹೀಗಾದೊಡನೆ ಸ್ವಾಭಾವಿಕವಾಗಿ ಮಕ್ಕಳು ಹುಟ್ಟಿ, ಆಗ ಫೆಲೂನಾ ಮಾತ್ರೆಗಳು ಇನ್ನಷ್ಟು ಪ್ರಶಂಸನೀಯವಾಗುವವು.

ವಾಚಕರೆ, ನಿಮ್ಮಲ್ಲಿ ಯಾರಿಗಾದರೂ, ಫೆಲೂನಾ ಮಾತ್ರೆಗಳಿಂದ ಶುಚಿತನವೂ, ಬಲವೂ ಬೇಕಾಗಿವೆಯೋ? ನಿಮಗೆ ಮಾತೃತನವು ಅಲಭ್ಯವೆನಿಸುವದೆ? ಹೆಂಗಸರಿಗಾಗಿಯೇ ಇರುವ ಫೆಲೂನಾ ಮಾತ್ರೆಗಳಿಂದ ಪೂರ್ಣ ಸೌಖ್ಯವೂ ಆರೋಗ್ಯವೂ ಲಭಿಸುವದು.

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸ್ಸಿಂದಲೂ ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕಟ್ಟುಗಳಲ್ಲಿ ಮಾರಲ್ಪಡುವವು. ಬಾಟಲಿಗೆ ರೂ. 2—4—0.

ಮುಖ್ಯ ಏಜಂಟರು—ಪಟೇಲ್ ಮತ್ತು ಧೊಂಡಿ, ಪೋಸ್ಟ್ ಆಫೀಸು ಬೋಕ್ಸ್ 838, ಮುಂಬಯಿ. ಮತ್ತು ಪೋಸ್ಟ್ ಬೋಕ್ಸ್ 620 ಕಲ್ಕತ್ತ.

ಮದ್ರಾಸು ಸಂಸ್ಥಾನಕ್ಕೆ—

ದಾದಾ ಎಂಡ್ ಕೋ,

28 ಚೈನಾ ಬಜಾರ್ ರೋಡ್, ಮದ್ರಾಸ್.

ಗರ್ಭವತಿಯ ಮೊದಲಾದವುಗಳಿಗೆ ಫೆಲೂನಾ ಮಾತ್ರೆಗಳು ಉಪಕಾರಿಯಾಗಿರುವವು. ಅವು ಸ್ವಾಭಾವಿಕವಾದ ಬೆಳವಣಿಗೆಗೆ ಮಾತ್ರವೇ ಸಹಾಯಕವಾಗುವವು. ಅವು ವನಸ್ಪತಿ ಧಾತುಗಳಿಂದಲೇ ತಯಾರಿಸಲ್ಪಟ್ಟವುಗಳಲ್ಲದೆ, ಅಪಾಯಕರ ಧಾತುಗಳು ಅವುಗಳಲ್ಲಿರುವುದಿಲ್ಲ. ಮಾಮೂಲಿಗೆ ಕೈಯಿಂದ ಮುಟ್ಟುವುದೂ ಇಲ್ಲ.

ದಕ್ಷಿಣ ಆಫ್ರಿಕದ ಕೇಪ್ ಟೌನಿನ ಗ್ರಹಮ್ ರೆಮಿಡಿಸ್ ಲಿಮಿಟೆಡ್ ಇವರಿಂದ ತಯಾರಿಸಲ್ಪಟ್ಟಿತು.

No 2a

ತಯಾರಾಗಿವೆ! ಮಾರಾಟಕ್ಕೆ ಸಿದ್ಧವಿವೆ!! ತ್ವರೆಮಾಡಿರಿ!!!

1929ನೇ ಇಸವಿಯ
ಪೋಕೆಟ್ ಡೈರಿಗಳು.

ಅಂದವಾದ ಕಲಿಕೋ ಬ್ಯಾಂಡಿನ ದೊಡ್ಡ ಸ್ಯಾಬಿನ ಮುಚ್ಚಳ ಇದ್ದ ಡೈರಿ	0—14—0	ಅಂದವಾದ ಮೀಡಿಯಮ್ ಸಾದಾ ಡೈರಿ	0—8—6
ಮುಚ್ಚಳ ಇಲ್ಲದ್ದು	0—10—0	" ಸ್ಟಿಫ್‌ಬ್ಯಾಂಡ್ "	0—7—0
" ಮುಚ್ಚಳ ಇದ್ದ ಮೀಡಿಯಮ್ ಸ್ಯಾಬಿನ ಡೈರಿ	0—11—0	" ಕಲಿಕೋ ಸಣ್ಣ ಸ್ಯಾಬಿನ ಮುಚ್ಚಳವುಳ್ಳ	0—10—0
		" " ಮುಚ್ಚಳ ಇಲ್ಲದ್ದು	0—6—0
		" ಸ್ಟಿಫ್‌ಬ್ಯಾಂಡ್ ಸಣ್ಣ ಸ್ಯಾಬಿನ ಡೈರಿ	0—4—0

ರಖಂ ಕೊಡುಕೊಳ್ಳುವವರಿಗೂ, ವ್ಯಾಪಾರಸ್ಥರಿಗೂ ತುಂಬಾ ಕಮಿಶನು ಕೊಡಲಾಗುವದು.

ಹೆಚ್ಚಿನ ಮಾಹಿತಿಗೆ ಬರೆಯಿರಿ—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Famous Mysore Perfumes.

Best Incense sticks (Agar Bathis)

Maharaja Bathi	per seer (24 Tolas)	Rs. 20
Darbar	" "	" 15
Ananda	" "	" 12
Manmohan	" "	" 10
Musk Heena	" "	" 8
Dilchaman	" "	" 8
Kasthur Javaji	" "	" 10
Amber	" "	" 8
Rose	" "	" 6
Jasmin	" "	" 5
Punugu (Civet)	" "	" 4
Heena	" "	" 3
A Tin Case containing 300 Assorted Bathis of 12 kinds	"	" 6

Packing & Postage Extra.

The State Perfumery Mart,
Bangalore City,
Mysore State.

NOTICE.

IN THE COURT OF THE DT. JUDGE OF S. KANARA.

O. P. No. 129/1928.

BETWEEN

1. A. J. B. Mascarenhas.
2. Miss Juliana. 2. Valantine.

Minors by next friend 1st petitioner.

PETITIONERS

Notice is hereby given that the petitioners above named have applied to the District Court for the grant of a succession certificate in favour of the 1st petitioner to collect the debts due to the late Mrs. Amic M Abreo who died intestate on 12—5—'28 and that the above petition will be heard on 7—12—'28.

Any person desirous of opposing the application may do so by appearing before the above Court on 7—12—'28 at 11 A. M. in person or by pleader.

Mangalore 18—11—1928 } B. V. BALIGA, *Pleader for Petitioner.*

THE BANKING & INDUSTRIAL SYNDICATE LTD., BOMBAY

9250/—Cash loans granted without interest for 10 years in 1928. Concession enlistment commences from 1st November for distributing loans of Rs 5000/- on 31st January 1929. Paid Agents Wanted. For rules and list of loans granted, enclose two annas stamps.

BANKING & INDUSTRIAL SYNDICATE, Ltd.
Bombay 2.

ಪ್ರಕಟಣೆ.

ಮಂಗಳೂರು ತಾಲೋಕು ಪಜೀರು ಮಾಗಣೆ ಪದು ಗ್ರಾಮದ ಮಾಡಂತಾಡಿ ಹೊಸಮನೆ ಉಗ್ಗಪ್ಪ ಮಾಳಿಗನು ಇದರಿಂದ ತಿಳಿಯಪಡಿಸುವದೇನಂದರೆ—ನನ್ನ ಕುಟುಂಬದ ಆಸ್ತಿಗಳ ಬಾಬ್ತು ವರ್ಷಗಳಿಂದ ಬರಿಸಿಕೊಂಡ ಕೆಲವು ಚಾಲಗೇಣಿ ಚೀಟುಗಳು ಮತ್ತು ಮನೆವಾರ್ತೆ ಲೆಖ್ಖದ ಪುಸ್ತಕಗಳು ಸಾಲಗಾರರಿಂದ ಬರೆದ ರಶೀದಿಗಳು ಸಹಾ ನನ್ನ ಮನೆಯಿಂದ ಕಾಣೆಯಾಗಿವೆ. ಅವುಗಳು ಯಾರಿಗಾದರೂ ಸಿಕ್ಕಿದರೆ ನನಗೆ ತಂದು ಕೊಟ್ಟಲ್ಲಿ ಅವರಿಗೆ ೧೦ ರೂಪಾಯಿ ಇನಾಮಾಗಿ ಕೊಡುವರೆ ಸಿದ್ಧನಾಗಿದ್ದೇನೆ.

ತಾ. ೨೦—೧೧—೨೮. } ಉಗ್ಗಪ್ಪ ಮಾಳಿಗ.

ದಿವಾನ್ ಸಾಹೇಬರವರು ಅಪ್ಪಣೆ ಕೊಡಿಸಿದ್ದ ಭಾಷಣದ ಸಾರಾಂಶ.

1928ನೇ ಇಸವಿ ಅಕ್ಟೋಬರ 28, ತಾರೀಖು.

ಒಂದನೆಯ ಭಾಗ

(ಕಳೆದ ಸಂಚಿಕೆಯಿಂದ ಮುಂದುವರಿಸಿರುದು.)

ವಿದ್ಯಾಭ್ಯಾಸದ ಇಲಾಖೆ. ಜಿಲ್ಲೆಗಳಲ್ಲಿ ಹತ್ತೋಟಿಯು ಏಕಮುಖವಾಗಿರುವಂತೆಯೂ, ಕೆಲಸಗಳು ಯೋಗ್ಯರೀತಿಯಲ್ಲಿ ನಡೆಯುವಂತೆಯೂ, ಇನ್ಸ್‌ಪೆಕ್ಟರುಗಳ ಮೇಲ್ಪದರ್ಜೆಯ ಹುದ್ದೆಗಳ ವಿಷಯದಲ್ಲಿ ಪುನರ್ವ್ಯವಸ್ಥೆಯ ಏರ್ಪಾಡನ್ನು ಆಚರಣೆಗೆ ತರಲಾಯಿತು. ಮೇಲಣ ಅಧಿಕಾರಿಗಳ ಕೆಲವು ಅಧಿಕಾರಗಳನ್ನು ಇವರಿಗೆ ಕೊಡಲ್ಪಟ್ಟಿತು. ಹೆಂಗಸರಿಗಾಗಿ ಮಹಾರಾಣಿಯವರ ಟ್ರೈನಿಂಗ್ ಕಾಲೇಜನ್ನು ಸ್ಥಾಪಿಸಲಾಯಿತು. ಇಂಟರ್ ಮೀಡಿಯೇಟ್ ಕಾಲೇಜುಗಳನ್ನು ಅವುಗಳ ಕೆಳತರಗತಿಗಳನ್ನು ವಿಶ್ವವಿದ್ಯಾಲಯಕ್ಕೆ ಬಿಟ್ಟುಕೊಡಲಾಯಿತು. ಸಾಗರದಲ್ಲಿಯೂ ದೊಡ್ಡಬಳ್ಳಾಪುರದಲ್ಲಿಯೂ ಹೈಸ್ಕೂಲುಗಳು ಸ್ಥಾಪಿಸಲ್ಪಟ್ಟಿವೆ. ಹೈಸ್ಕೂಲುಗಳಲ್ಲಿ ಕಸಬು ವೃತ್ತಿಗಳಲ್ಲಿಯೂ ಶಿಕ್ಷಣವನ್ನು ಕೊಡುವುದಕ್ಕೆ ಏರ್ಪಾಡು ಮಾಡಲಾಗಿದೆ.

ಮಿಡ್ಲ್ ಸ್ಕೂಲ್ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಯ ವಿಷಯದಲ್ಲಿಯೂ ತಿದ್ದುಪಾಟುಗಳು ಮಾಡಲ್ಪಟ್ಟಿವೆ. ಸರಕಾರಿ ಮತ್ತು ಖಾಸಗಿ ಶಾಲೆಗಳು ಸೇರಿ ೬,೯೬೦ ವಿದ್ಯಾಶಾಲೆಗಳಿದ್ದುವು. ಇವುಗಳಲ್ಲಿ ೭,೦೫೮ ಸರಕಾರಿ ಶಾಲೆಗಳು. ೭೧೭ ಉರ್ದು ಬಾಲಕ ಪಾಠಶಾಲೆಗಳು, ೨೧೩ ಉರ್ದು ಬಾಲಿಕಾ ಪಾಠಶಾಲೆಗಳು ಇದ್ದುವು. ೫೮೭ ಆದಿಕರ್ನಾಟಕ ಬಾಲಕರ ಪಾಠಶಾಲೆಗಳಿದ್ದುವು. ೭ ಆದಿಕರ್ನಾಟಕ ಬಾಲಿಕಾ ಪಾಠಶಾಲೆಗಳಿದ್ದುವು. ಲಂಬಾಣಿಗಳಿಗಾಗಿ ೨೫ ಪಾಠಶಾಲೆಗಳು. ಕುರುಬರಿಗಳಿಗಾಗಿ ೫ ಪಾಠಶಾಲೆಗಳಿವೆ. ಒಡ್ಡರಿಗಾಗಿ ೪ ಪಾಠಶಾಲೆಗಳು. ಕಾಡು ನಿವಾಸಿಗಳಿಗಾಗಿ ಒಂದು ಪಾಠಶಾಲೆ.

ವಿದ್ಯಾಭ್ಯಾಸದ ಸೆಸ್ಸಿನಿಂದ ಒಟ್ಟು ೪,೩೩,೪೦೭ ರೂಪಾಯಿ ಮಂಜೂರು ಮಾಡಲಾಗಿದೆ. ೭೩ ಇನ್ ಕಂಪ್ಲೀಟ್ ಮಿಡ್ಲ್ ಸ್ಕೂಲುಗಳನ್ನು ಕಂಪ್ಲೀಟ್ ಮಿಡ್ಲ್ ಸ್ಕೂಲುಗಳಾಗಿ ಮಾಡಿಯಾದೆ. ೧೧೬೪ ಎಯಿಡೆಡ್ ಶಾಲೆಗಳನ್ನು ಸರಕಾರಿ ಶಾಲೆಗಳನ್ನಾಗಿ ಮಾಡಿಯದೆ. ೫೦೩ ಹೊಸ ಪ್ರೈಮರಿ ಸ್ಕೂಲುಗಳನ್ನು ಸ್ಥಾಪಿಸಿಯದೆ.

ವಿಶ್ವವಿದ್ಯಾಲಯ. ಮೆಡಿಕಲ್ ಕಾಲೇಜನ್ನು ಮೈಸೂರಿಗೆ ತರಲು ಏರ್ಪಾಡು ಮಾಡಿಯದೆ. ಬಿ. ಇ. ಎಲ್ ಎಂ. ಪಿ. ಪರೀಕ್ಷೆಗಳಲ್ಲಿ ತಿದ್ದುಪಾಟುಗಳನ್ನು ಮಾಡಿಯದೆ.

ಕೈಗಾರಿಕೆ ಮತ್ತು ವಾಣಿಜ್ಯ. ವಿದ್ಯುಚ್ಛಕ್ತಿಯ ಇಲಾಖೆ, ಪ್ಯಬ್ಲಿಕ ಇಲಾಖೆ, ಮತ್ತು ಕೈಗಾರಿಕೆಗಳ ಇಲಾಖೆ ಇವುಗಳಲ್ಲಿದ್ದ ಪ್ರತ್ಯೇಕ ವರ್ಕ್ ಶಾಪುಗಳನ್ನು ಒಟ್ಟುಗೂಡಿಸಿ, ಒಂದು ದೊಡ್ಡ ಯಂತ್ರ ಶಾಲೆಯನ್ನು ಸ್ಥಾಪಿಸಲಾಗಿದೆ. ನೇಯಿಗೆಯ ಕಾರ್ಖಾನೆಯಿಂದ ಲಾಭವು ಸಿಕ್ಕಲು ಪ್ರಾರಂಭವಾಗಿದೆ.

ರೇಷ್ಮೆಯ ಕೈಗಾರಿಕೆ. ವಿದೇಶಿ ರೇಷ್ಮೆಯಿಂದಲೂ ಕೃತಕ ರೇಷ್ಮೆಯಿಂದಲೂ, ರೇಷ್ಮೆಯ ಕೈಗಾರಿಕೆಯವರಿಗೆ ಆತಂಕ ಉಂಟಾಗಿಯದೆ.

ಭೂಗರ್ಭ ಶಾಸ್ತ್ರದ ಇಲಾಖೆಯವರು ಖನಿಜಗಳು ಎಲ್ಲೆಲ್ಲಿ ದೊರೆಯುತ್ತಿವೆ ಎಂಬುದನ್ನು ಇಲಾಖೆಯವರು ಶೋಧನೆ ಮಾಡುತ್ತಲಿದ್ದಾರೆ.

ಮೆಡಿಕಲ್ ಮತ್ತು ಸೆನಿಟರಿ ಇಲಾಖೆ. ಸಂಸ್ಥಾನದಲ್ಲಿ ಸುಮಾರು 330 ಡಾಕ್ಟರುಗಳಿದ್ದಾರೆ. ಇದರಲ್ಲಿ ೪೦ ಮಂದಿ ಖಾಸಗಿ ಮೆಡಿಕಲ್ ಪ್ರಾಕ್ಟಿಶನರು. ಆಯುರ್ವೇದಿಯ ಮತ್ತು ಯುನಾನಿ ಚಿಕಿತ್ಸಾ ಕ್ರಮಗಳಲ್ಲಿ ಕಲಿಸುವುದಕ್ಕಾಗಿ ಮೈಸೂರು ಆಯುರ್ವೇದಿಯ ಮಹಾ ಪಾಠಶಾಲೆಯನ್ನು ಪುನರ್ವ್ಯವಸ್ಥೆ ಪಡಿಸಲಾಯಿತು.

ಸೆನಿಟರಿ ಇಲಾಖೆಯ ಕಾರ್ಯಕಲಾಪಗಳನ್ನೂ ಉಪಯುಕ್ತತೆಯನ್ನೂ, ಹೆಚ್ಚಿಸುವುದಕ್ಕಾಗಿ ಆ ಇಲಾಖೆಯನ್ನು ಪುನರ್ವ್ಯವಸ್ಥೆ ಮಾಡುವ ವಿಷಯವನ್ನು ಸರಕಾರದವರು ಪರ್ಯಾಲೋಚಿಸುತ್ತಿದ್ದಾರೆ.

ಭದ್ರಾವತಿಯ ಕಬ್ಬಿಣದ ಕಾರ್ಖಾನೆ. ಈ ವರುಷದಲ್ಲಿ ತಯಾರಾದ ಮತ್ತು ಕಬ್ಬಿಣದ ಪ್ರಮಾಣವು ಸ್ವಲ್ಪ ಕಡಿಮೆ. ಕಬ್ಬಿಣ ತಯಾರಿಸುವಾಗ ದೊರೆಯುವ ಇತರ ಉಪವಸ್ತುಗಳ ಪರಿಮಾಣವು ವಿಶೇಷ ಹೆಚ್ಚಿತು. ಇದರಿಂದ ನಷ್ಟವಾಗಲಿಲ್ಲ. ಕಾರ್ಖಾನೆಯ ಕೆಲಸದಿಂದ ಒಟ್ಟಿನ ವೆಚ್ಚವು [illegible] ಕಾಲಿಯ ಕ್ಷೇತ್ರದಲ್ಲಿ ಒಂದು ಭಾಗದಲ್ಲಿ ಕಟ್ಟಡ ಮಾಡಿಸಿಯದೆ. ಇದರಿಂದ ದಿನ ಒಂದಕ್ಕೆ [illegible] ವರೆಗೆ ಕಬ್ಬಿಣವನ್ನು ತಯಾರಿಸಲು ಆಗುವಂತೆ ಕುಲುಮೆಯ ಒಳ ಆಯವನ್ನು ದೊಡ್ಡದು ಮಾಡಿಸಲಾಯಿತು. ಮುಂದ ಕಟ್ಟಲಾಗಿ ರಿಟಾರ್ಟ್ ಗಳ ಮತ್ತೆರಡು ಸಾಲುಗಳನ್ನು ಜೋಡಿಸುವುದು, ಕೊಳಾಯಿ ಎರಕದ ಕಾರ್ಖಾನೆಯನ್ನು ಬದಲಾವಣೆ ಮಾಡಿಸುವುದು, ಪರಿಕ್ಷಾರ್ಥವಾಗಿ ಉಕ್ಕನ್ನು ತಯಾರಿಸುವ ಸಣ್ಣದೊಂದು ಯಂತ್ರಶಾಲೆಯನ್ನು ಏರ್ಪಡಿಸುವುದು, ಇವು ಮೂರನ್ನೂ ಸರಕಾರದವರು ಮಂಜೂರು ಮಾಡಿದ್ದಾರೆ.

ಸಂಪದಭಿವೃದ್ಧಿ ಸಮಾಜ. ಈ ಸಮಾಜದಿಂದ ಕೆಲಸವು ಸಮರ್ಪಕವಾಗಿ ನಡೆಯಿತು. ಕಳೆದ ಸಾರಿ ದಸರಾದಲ್ಲಿ ಮೈಸೂರು ನಗರದಲ್ಲಿ ಅಖಿಲ ಭಾರತೀಯ ವಸ್ತುಪ್ರದರ್ಶನ ಒಂದು ನಡೆಯಿತು. ಈ ವರುಷವೂ ನಡಿಸಲ್ಪಟ್ಟಿದೆ.

ಪರಿಸಮಾಪ್ತಿ. ಈಗ್ಗೆ ಎರಡು ತಿಂಗಳುಗಳಿಗಿಂತಲೂ ಹಿಂದೆ ಬೆಂಗಳೂರು ನಗರದಲ್ಲಿ ವಿಷಾದಕರವಾದ ಘಟನೆಗಳು ನಡೆದುಹೋಯಿತು. ಅದರ ವಿಷಯ ತನಿಖೆ ನಡಿಸಲಿಕ್ಕೆ ಒಂದು ಕಮಿಟಿಯು ನೇಮಕವಾಗಿದೆ. ಕೇವಲ ಅಲ್ಪವೆನಿಸುವ ಅತಿ ಸಾಮಾನ್ಯ ವಿದ್ಯಮಾನಗಳಿಂದ ಆರಂಭವಾದ ಈ ಗಲಭೆಯು ಉದ್ರೇಕದಿಂದಲೂ, ಹಿಂಸೆಯಿಂದಲೂ ಕೊನೆಗಂಡಿತು. ಮೈಸೂರು ಸಂಸ್ಥಾನವೆಂದರೆ ನಾನಾ ಪಂಗಡಗಳವರಲ್ಲಿಯೂ ಪರಸ್ಪರ ಸಹಿಷ್ಣುತೆಯೂ, ಅನ್ಯೋನ್ಯಭಾವವೂ ಅನೇಕ ತಲಾಂತರಗಳಿಂದ ರೂಢ ಮೂಲವಾಗಿ ನೆಲೆಗೊಂಡು ನಡೆದು ಬಂದಿರುವ ದೇಶ, ಭರತಖಂಡದ ಮತ್ತಾವ ದೇಶವೂ ಈ ಭಾಗದಲ್ಲಿ ನಮ್ಮ ದೇಶವನ್ನು ಮೀರಿಸಿಲ್ಲ. ನವಜೀವನದ ಚೈತನ್ಯದಿಂದ ಕಳಕಳಿಸುವ ನೂತನ ಭರತಖಂಡವು ಈಗ ರೂಪುಗೊಳ್ಳುವುದರಲ್ಲಿದೆ. ಅದರಲ್ಲಿ ಮೈಸೂರು ಸಂಸ್ಥಾನಕ್ಕೂ ಕೇವಲ ಪ್ರಾಮುಖ್ಯಸ್ಥಾನವು ದೊರೆಯುತ್ತದೆ. ಸಮಸ್ತರೂ ಐಕ್ಯಮತ್ಯದಿಂದ ಕೆಲಸಮಾಡುವುದುತ್ತಮ.

ಸಂಪೂರ್ಣ.

[illegible] ವಿಶೇಷ [illegible]

ಮಲಗಿದ್ದಲ್ಲಿ ಕೊಲೆ— [illegible] ಎಂಬ ಹಳ್ಳಿಯಲ್ಲಿ ಒಬ್ಬ ಬೇಟೆಗಾರನನ್ನು — ಅವನ [illegible] ಯಾರೋ ಬಂದು ತಿವಿದು ಕೊಂದಿರುವರು. [illegible] ಅನ್ವಯಿಸಿತು. ಆದರೆ ನಿಶ್ಚಯ! ಅವನ ಯಾರ [illegible] ದರಲ್ಲಿ ಅನುಮಾನಿಸಿತು. [illegible] ಹೆಂಡತಿ ಮಕ್ಕಳಿಗೆ ಕೊಡಬೇಕೆಂದು ಎಲ್ಲಿಯೋ [illegible] ಯೋಚನೆಯೇ ಅವನಿಗೆ ಮರಣವನ್ನುಂಟುಗಿಸಿತು. [illegible] ಯಾರೋ ದುಷ್ಟರು ಈ ಹೇಯಕೃತ್ಯವನ್ನು ಮಾಡಿ [illegible] ಯಾರೆಂದು ತಿಳಿದಿಲ್ಲ. ಇದ್ದರು ಹೋದವರನ್ನು [illegible] ಇಂತಹ ಮೋಸದ ಕೊಲೆಯನ್ನು ಯಾರೂ ಕೇಳಿರಲಾರರು. [illegible] ವಾದ ಬಂಟನೆಂದರೆ ಇವನೇ ಇನ್ನೊಂದು ಮಾತು. ಈಗ [illegible] ಖೂನಿಗಳೆಂಬುದು ದಿನನಿತ್ಯದ ಪ್ರಸಂಗವೆಂಬಂತಿದೆ. [illegible] ಮಟ್ಟೆಯ ಕೊಲೆ, ಬೈಲೂರಿನ ಖೂನಿಗಳಾಗಿ ಹೆಚ್ಚಿಗೆ ದಿನಗಳಾ [illegible] ಲಿಲ್ಲ. ಈಗ ಇದೊಂದು ಕೊಲೆ. ನಾಳೆ ಇನ್ನೊಂದು [illegible] ಮತ್ತೊಂದು ಕೊಲೆ!! ಸಾಯಿಯನ್ನು ಕೊಂದಂತೆ ಜನರನ್ನು [illegible] ದಪ್ಪಾ! ಆದರೂ ಸತ್ತೆಯಿಲ್ಲ!! ಸಾಕಷ್ಟು ಯಾರೂ ಇಲ್ಲ!!! [illegible] ದರೆ ಹೇಗಯ್ಯ ಬದುಕುವುದೆಂದು ಕೆಲವರಿಗಂತೂ ಹೆದರಿಗೆ [illegible] ಬೇಕು. ನೋಡಬೇಕು ಇವರ ಪರಿಣಾಮ!

ನಾಯಿ ಕಚ್ಚಿ ಹುಡುಗನು ಸತ್ತನು— ಉಡುಪಿ [illegible] ಎಂಬ [illegible] ಸುಮಾರು ಹತ್ತು ವರ್ಷದ ಒಬ್ಬ ಬಾಲಕನಿಗೆ ನಾಯಿ ಕಚ್ಚಿ, ಅವನು ಆ ಕ್ಷಣವೇ ಮಡಿದುಹೋದನೆಂಬ ಸಂಗತಿಯು [illegible] ಟ ಮಾಡದಿರದು. ಬಾಲಕನ ತಂದೆ ತಾಯಿಗಳು ಅವನೊಬ್ಬನನ್ನೇ [illegible] ತಮ್ಮ ದಿನನಿತ್ಯದ ಕೆಲಸಕ್ಕೆ ಹೋಗಿದ್ದು, ಸಂಜೆಯಲ್ಲಿ ಅವರು ಮನೆಗೆ ಬರುವಾಗ ಮಗುವಿಗೆ ನಾಯಿಯು ಕಚ್ಚಿ, [illegible] ನಾಗುವ ಮೂರ್ಛೆ ಹೋಗಿತ್ತು. ಆರೈಕೆ ಮಾಡುವಷ್ಟರಲ್ಲಿಯೇ ಅವನು ತೀರಿಹೋಯಿತು. ಕಾಲನೇ ನಾಯಿಯ ರೂಪ ಧರಿಸಿ ಬಂದನೋ ಏನೋ! ಬೋರ್ಡಿನವರು ನಾಯಿಗಳ ಕುರಿತು ಇನ್ನಷ್ಟು ಕಿರಾ ತೆಗೆದುಕೊಳ್ಳುವುದು ಅನುಚಿತವಾಗದು.

ದುಃಖಸೂಚಕ ಸಭೆ— ದೇಶಸೇವೆಯಲ್ಲಿ ಬದ್ಧರಾಗಿ "ಪಂಜಾಬಿನ ಸಿಂಹ" ಎಂದು ಪ್ರಖ್ಯಾತರಾಗಿದ್ದ ಲಾಲಾ ಲಜಪತರಾಯರ ಕೋಚನೀಯ ಮರಣದ ಕುರಿತಾಗಿ ಖೇದ ಸೂಚನೆ ಮಾಡುವ ಬಗ್ಗೆ ಇಲ್ಲಿಯ ತಾಲೂಕ ಕಾಂಗ್ರೆಸ ಕಮಿಟಿಯ ಕಡೆಯಿಂದ [illegible] ಒಂದು ಸಭೆಯು ಜರಗಿತು.

"ಮರಿದುಂಬಿ"



ನಮ್ಮ ಜಿಲ್ಲೆಯ ರಾಜಕೀಯ ವಾತಾವರಣ.

ಶ್ರೀಯುತ ನರಿಮೇನರ ಉತ್ಸಾಹೀ ಭಾಷಣ.

ದೇಶವು ಸಂಪೂರ್ಣ ಸ್ವಾತಂತ್ರ್ಯಕ್ಕಿಂತಲೂ ಕಡಿಮೆಯಾದುದನ್ನು ಸ್ವೀಕರಿಸಲೊಲ್ಲದು.

ಜಿಲ್ಲಾ ಪರಿಷತ್ತಿನ ಹಲವು ನಿರ್ಣಯಗಳು.

ನಮ್ಮ ಜಿಲ್ಲಾ ಕಾಂಗ್ರೆಸ್ ಪರಿಷತ್ತು ಬಹಳ ಉತ್ಸಾಹದಿಂದ ನೆರವೇರಿತು. ಶ್ರೀಯುತ ನರಿಮೇನರು ಅಧ್ಯಕ್ಷರಾಗಿಯೂ ಮಿ. ಹೊರ್ನಿಮೇನರು **ಆಮಂತ್ರಿಸಲ್ಪಟ್ಟವರಾಗಿಯೂ** ಹಾಜರಿದ್ದರು. ಸಮಾರಂಭವು ಲಾಲಾಜಿಯವರ ನಿಧನದ ಆಕಸ್ಮಿಕ ವಾರ್ತೆಯಿಂದ ಸಂತಾಪಕರವಾಯಿತು. ಅಧ್ಯಕ್ಷರು ಬಹಳ **ತೇಜಸ್ವೀ ಭಾಷಣವನ್ನು** ಮಾಡಿದರು. ಭಾಷಣವು ಈ ಮೊದಲು ಕರ್ನಾಟಕ ಪ್ರಾಂತಿಕ ಪರಿಷತ್ತಿನಲ್ಲಿ ಅವರು ಮಾಡಿದ ಅಧ್ಯಕ್ಷ ಭಾಷಣದ ಕ್ರಮವನ್ನು ಅನುಸರಿಸಿತ್ತು. ಠರಾವುಗಳು ಈ ಮೊದಲಿನ ಅಪರಿವರ್ತನವಾದದ ಕಾರ್ಯಾಕಾರಿಯಲ್ಲದ ಆದರ್ಶಗಳಿಂದ ತುಂಬಿರದೆ ಉಪಕಾರಿಯಾದ ವಿಷಯಗಳನ್ನೊಡಗೂಡಿದ್ದುವು ಹಿಂದಿನ ಪರಿಷತ್ತುಗಳಿಂದ ಈ ಪರಿಷತ್ತಿನ ಪ್ರಭೇದವು ಇಷ್ಟರ ಮಟ್ಟಿಗೆ ಚೆನ್ನಾಗಿ ಕಾಣುತ್ತಿತ್ತು.

ಸ್ವಾಗತಾಧ್ಯಕ್ಷ ಕಮಿಟಿಯ ಅಧ್ಯಕ್ಷರೇ, ಭಗಿನಿಯರೇ ಸಹೋದರ ಸಭಾಸದರೇ, ಸ್ನೇಹಿತರೇ,

ನನ್ನನ್ನು ಇಂದಿನ ರಾಷ್ಟ್ರೀಯ ಸಭೆಗೆ ಅಧ್ಯಕ್ಷನನ್ನಾಗಿ ಚುನಾಯಿಸಿದುದಕ್ಕಾಗಿ ನಿಮ್ಮನ್ನು ವಂದಿಸುವುದು ನನ್ನ ಪ್ರಥಮದ ಮತ್ತು ಮುಖ್ಯ ಕರ್ತವ್ಯವಾಗಿದೆ. ನಾನು ನಿಮ್ಮ ಜಿಲ್ಲೆಗೆ ಅಪರಿಚಿತನಾದರೂ, ದೇಶೋದ್ಧಾರದ ಕೆಲಸಗಳಲ್ಲಿ ಹೆಚ್ಚು ಕೆಲಸಗಳನ್ನು ಮಾಡದೆ ಇದ್ದವನಾದರೂ, ನಿಮ್ಮ ಈ ಜಿಲ್ಲೆಯ ಉದ್ಧಾರಕ್ಕಾಗಿ ಯಾವ ತರದ ಕೆಲಸಗಳನ್ನು ಮಾಡದೆ ಇದ್ದರೂ ನೀವು ನನ್ನನ್ನು ಚುನಾಯಿಸಿ ನನಗೆ ಈ ಬಹುಮಾನವನ್ನು ಕೊಟ್ಟುದ್ದನ್ನು ನಾನು ಸಂತೋಷದಿಂದ ಅಂಗೀಕರಿಸುತ್ತೇನೆ.

ನೀವು ನನಗೆ ಆಮಂತ್ರಣವನ್ನು ಕೊಟ್ಟೊಡನೆಯೇ ನನ್ನಿಂದ ಈ ಮಹತ್ವವಾದ ಕೆಲಸವನ್ನು ಮಾಡಲು ಸಾಧ್ಯವಿದೆಯೋ ಎಂದು ಸ್ವಲ್ಪ ಹಿಂಜರಿದೆ. ಆದರೂ ನೀವು ಪ್ರೀತಿಪೂರ್ವಕವಾಗಿ ನನಗೆ ವಹಿಸಿದ ಈ ಕೆಲಸವನ್ನು ನಿಮ್ಮ ಸಹಾನುಭೂತಿಯಿಂದಲೇ ಸಾಧಿಸಲು ಸಾಧ್ಯವಾಗುವುದೆಂದು ಭಾವಿಸಿ ಅಂಗೀಕರಿಸಿದೆನು. ನಿಮ್ಮ ಜಿಲ್ಲೆಯು ನಮ್ಮ ಮುಂಬಾಯಿ ಸಂಸ್ಥಾನದ್ದು ಅಲ್ಲವಾದರೂ ಅಲ್ಲಿಂದ ಇಲ್ಲಿಗೆ ಬರುವ ಪ್ರಯಾಣವು ಬಹಳ ಆಯಾಸವನ್ನುಂಟುಮಾಡುವದಾದರೂ ನಿಮ್ಮ ಜಿಲ್ಲೆಯ ಸಾವಿರಾರು ಜನರು ಮುಂಬಾಯಿಗೆ ಬಂದು ನೆಲೆ ನಿಂತಿರುವುದರಿಂದಲೂ ನಿಮ್ಮ ಸಂಸ್ಥಾನ ಬೇರೆಯಾಗಿದೆ ಎಂದು ಭಾವಿಸುವುದಿಲ್ಲ. ಮುಂಬಾಯಿಯಲ್ಲಿ ಮೊದಲಿನಿಂದಿದ್ದ ನಿವಾಸಿಕರು ಹೊಸತಾಗಿ ಬರುವ ಜನರ ಮೇಲೆ ದ್ವೇಷಪಡುವರಾದರೂ ಇಂಡಿಯದ ಎಲ್ಲಾ ಸಂಸ್ಥಾನದಲ್ಲಿರುವ ಜನರು ಇಂಡಿಯದ ಒಂದೇ ಜನರಾಗಿರುತ್ತಾರೆಂದು ನನ್ನ ಭಾವನೆಯಾಗಿದೆ. ಸಂಸ್ಥಾನಗಳು ಬೇರೆ ಬೇರೆಯಾಗಿದ್ದರೂ ಅವುಗಳು ಆಡಳಿತೆಗಾಗಿ ಮಾಡಿದ ವಿಭಾಗಗಳಾಗಿವೆ ಎಂದು ನನ್ನ ಭಾವನೆ.

ನಾನು ಮುಂಬಾಯಿ ನಿವಾಸಿಕನಾಗಿದ್ದರೂ ಮುಂಬಾಯಿ ಪಟ್ಟಣದಲ್ಲಿಯೂ ಸಂಸ್ಥಾನದಲ್ಲಿಯೂ ನೆಲೆ ನಿಂತ ಕರ್ನಾಟಕ ದೇಶೀಯರು ಅಲ್ಪ ಸಂಖ್ಯಾಕರಾಗಿದ್ದರೂ ಮುಂಬಾಯಿ ಸಂಸ್ಥಾನದ ಇತರ ನಿವಾಸಿಕರಿಗಿಂತಲೂ ಚುರುಕು ಬುದ್ಧಿಯುಳ್ಳವರೂ, ನವನಾಗರೀಕತೆಯಲ್ಲಿ ಮುಂದರಿದವರೂ ದೇಶವತ್ಸಲರೂ ಆಗಿರುತ್ತಾರೆಂದು ನನ್ನ ಭಾವನೆಯಾಗಿದೆ. ದಕ್ಷಿಣ ಇಂಡಿಯದವರೂ ಕರ್ನಾಟಕದವರೂ ಕಾಂಗ್ರೆಸ್ ಸೂತ್ರಗಳನ್ನು ಸರಿಯಾಗಿ ದೃಢ ಮನಸ್ಸಿನಿಂದ ಅನುಸರಿಸುವರೆಂದೂ, ದೇಶೋದ್ಧಾರದ ಕೆಲಸಗಳಲ್ಲಿ ಇವರನ್ನು ನಂಬಿಕೊಂಡು ಇವರ ಸಹಾಯದಿಂದ ಮುಂದೊತ್ತಿ ಹೋಗಲು ಸಾಧ್ಯವಿದೆಯೆಂದೂ ನಾನು ನಂಬುತ್ತೇನೆ.

ಈ ಕರ್ನಾಟಕೀಯರೂ ಚುನಾವಣೆಯ ಸಮಯಗಳಲ್ಲಿಯೂ ನಾವು ಮಾಡುವ ಇತರ ದೇಶೋದ್ಧಾರದ ಕೆಲಸಗಳಲ್ಲಿಯೂ, ಇತರರಂತೆ ಹಿಂಜರಿಯದೆ ಸಹಾಯಕರಾಗಿದ್ದಾರೆಂದು ನನಗೆ ತಿಳಿದುಬಂದದೆ. ದಕ್ಷಿಣ ಹಿಂದೂ ದೇಶೀಯರೂ ಕರ್ನಾಟಕೀಯರೂ ಮುಂದಾಳುಗಳಾಗಿ ನಿಂತು ಪ್ರತಿ ಒಂದು ಕೆಲಸವನ್ನು ನಡಿಸುತ್ತಿರುವರು.

ಈ ರೀತಿಯಲ್ಲಿ ಸಾಹಸದಿಂದ ಕೆಲಸ ನಡಿಸುತ್ತಿರುವ ಈ ಜನರು ನನಗೆ ಮಾಡಿದ ಸಹಾಯಕ್ಕಾಗಿ ಅವರಿಗೆ ಪ್ರತ್ಯುಪಕಾರವನ್ನು ಮಾಡಬೇಕೆಂಬ ಭಾವನೆಯಿಂದ ನಾನು ನಿಮ್ಮ ಆಮಂತ್ರಣವನ್ನು ಅಂಗೀಕರಿಸಿದೆನು.

ಮುಂದಾಳುಗಳಲ್ಲಿರುವ ಕೊರತೆಗಳು.

ನಾನು ಈ ಅಧ್ಯಕ್ಷ ಸ್ಥಾನವನ್ನು ಅಂಗೀಕರಿಸಲು ಇನ್ನೊಂದು ಕಾರಣವಿದೆ. ಇದು ವ್ಯಕ್ತಿಪರವಾಗಿರುವುದಿಲ್ಲ. ಇದೀ ಜನಾಂಗದ ಏಳಿಗೆಯ ಹೆಗ್ಗುರುತಾಗಿದೆ. ಈಗ ದೇಶೋದ್ಧಾರಕ್ಕಾಗಿ ಕೆಲಸಮಾಡುತ್ತಿರುವ ಮುಂದಾಳುಗಳ ಮೇಲೆ ಅನೇಕ ತಪ್ಪುಗಳನ್ನು ಸ್ಥಾಪಿಸುತ್ತಾರೆ. ಇವರು ಜಾತಿ ಪರವಾಗಿಯೂ ಮತದ ಪರವಾಗಿಯೂ ಧ್ಯೇಯವನ್ನು ಇಟ್ಟುಕೊಂಡು ಕೆಲಸಮಾಡುತ್ತಾರೆಂದೂ, ಸಂಕುಚಿತ ಮನಸ್ಸುಳ್ಳವರೆಂದೂ, ದೀರ್ಘದರ್ಶಿಯರಲ್ಲವೆಂದೂ, ತಮಗೆ ಮುಂದಾಳುತನವು ಸಿಕ್ಕಿದೊಡನೆಯೇ ಇವರು ತಮ್ಮ ತಮ್ಮ ಜಾತಿಮತದವರಿಗಾಗಿಯೇ ಕೆಲಸಮಾಡುತ್ತಾರೆಂದೂ, ಇದರಿಂದ ಅಲ್ಪ ಸಂಖ್ಯಾಕರಾದ ಜಾತಿಮತದವರಿಗೆ ಇಂಥಾ ಮುಂದಾಳುಗಳ ಮೇಲೆ ನಂಬಿಕೆಯಿಲ್ಲ. ಜನಾಂಗದ ರಾಜಕೀಯ ವಿಷಯಗಳಲ್ಲಿ ಇಂಥಾ ಅಲ್ಪ ಸಂಖ್ಯಾಕರಾದ ಜಾತಿಮತದವರು ಸಹಾನುಭೂತಿಯುಳ್ಳವರಾಗಿರುವುದಿಲ್ಲವೆಂದೂ ಒಂದು ಭಾವನೆಯು ದೇಶದಲ್ಲಿ ಉಂಟಾಗಿದೆ. ಬಹು ಸಂಖ್ಯಾಕರಾದ ಜಾತಿಮತದವರ ಕೈಯ ರಾಜ್ಯಭಾರದ ಸೂತ್ರಗಳು ಸಿಕ್ಕಿಬಿಟ್ಟರೆ ತಮ್ಮ ಹಕ್ಕು ಸ್ವಾತಂತ್ರ್ಯಗಳಿಗೆ ಕುಂದು ಕೊರತೆಗಳು ಬರುವುದರಿಂದ ತಮಗಾಗಿ ಪ್ರತ್ಯೇಕ ಚುನಾವಣೆಗಳಾಗಬೇಕೆಂದು ಮುಂತಾಗಿ ಪ್ರತ್ಯೇಕ ಹಕ್ಕು ಸ್ವಾತಂತ್ರ್ಯಗಳನ್ನು ಕೇಳಲು ಕಾರಣವಾಗಿದೆ. ನಾನು ಹೆಸರಿಗೆ ಮಾತ್ರವೆ ಎಂಬಂತೆ ಇರುವ ಜಾತಿಯವನಾದರೂ ಸ್ವರಾಜ್ಯ ಸರಕಾರ ಸ್ಥಾಪನೆಯಾದೊಡನೆ ಇಂಥಾ ಅಲ್ಪ ಸಂಖ್ಯಾಕರ ಸ್ಥಿತಿಗತಿಯು ಈಗಿನಗಿಂತಲೂ ಅಭಿವೃದ್ಧಿಯಾದೀತೆಂದು ನನಗೆ ಪೂರ್ಣ ನಂಬಿಕೆಯಿದೆ. ಇದು ನನ್ನ ಅನುಭವ. ನಾನು ಮುಂಬಾಯಿ ಕೌನ್ಸಿಲಿನಲ್ಲಿಯೂ ಮುನಿಸಿಪಾಲಿಟಿಯಲ್ಲಿಯೂ, ಕಾಂಗ್ರೆಸ್ಸಿನಲ್ಲಿಯೂ ಸಭಾಸದನಾಗಿ ಕೆಲಸಮಾಡಿ ಅನುಭವವಿದೆ. ನನಗೆ ಎಲ್ಲಾ ಜಾತಿಮತದವರೂ ಸಹಾಯಕರಾಗಿರುತ್ತಾರೆ. ಮುಂಬಾಯಿಯಲ್ಲಿರುವ ಹಿಂದೂ ವೋಟರ ಸಹಾಯದಿಂದಲ್ಲಿ ನನಗೆ ಮುಂಬಾಯಿ ಕೌನ್ಸಿಲಿನ ಮೆಂಬರಿಕೆಯು ಸಿಕ್ಕಲು ಸಾಧ್ಯವಾಯಿತು. ಹಿಂದೂಗಳೂ ಮುಸಲ್ಮಾನರೂ ಕೂಡಿ ನನ್ನನ್ನು ಸ್ವರಾಜ್ಯ ಪಾರ್ಟಿಯ ಮುಂದಾಳಾಗಿ ಚುನಾಯಿಸಿರುವರು. ಮುನಿಸಿಪಾಲಿಟಿಯ ನೆಶನಲಿಸ್ಟ ಪಾರ್ಟಿಯ ಮುಂದಾಳಾಗಲಿಕ್ಕೂ ಇದೇ ಕಾರಣ. ಗಿರಗಾಂ ಕಾಂಗ್ರೆಸ ಕಮಿಟಿಯ ಅಧ್ಯಕ್ಷನಾಗಲೂ ಇದೇ ಕಾರಣ ಅದಲ್ಲದೆ ಮುಂಬಾಯಿಯ ಅನೇಕ ಸಂಸ್ಥೆಗಳ ಮುಂದಾಳಾಗಲಿಕ್ಕೂ ಇದೇ ಕಾರಣ. ಇನ್ನೊಬ್ಬನ ವಿಷಯ ಮಾತ್ರ ನಾನು ಹೇಳುವದಲ್ಲ. ೭—೮ ಲಕ್ಷ ಹಿಂದೂ ಜನರಿರುವ ಮುಂಬಾಯಿ ಪಟ್ಟಣದಲ್ಲಿ ಕೆಲವು ಸಾವಿರ ಮಾತ್ರವೇ ಇರುವ ಪಾರ್ಸಿಗಳಿಗೆ ೭ ಮೆಂಬರಿಕೆಗಳು ಸಿಕ್ಕಲು ಇದೇ ಕಾರಣ ಇದೇ ತರದ ಜನಾಂಗದ ಪರಸ್ಪರ ಪ್ರೀತಿಯಿಂದಲೇ ಇವತ್ತಿನ ಈ ಅಧ್ಯಕ್ಷಸ್ಥಾನವು ನನಗೆ ಸಿಕ್ಕಲು ಕಾರಣವಾಯಿತು. ಈ ರೀತಿಯ ಪ್ರೀತಿಯು ಇಲ್ಲದೆ ಇರುತ್ತಿದ್ದರೆ ಪೂರ್ಣ ಅನ್ಯ ಸಂಸ್ಥಾನವಾಗಿರುವ ಈ ನಿಮ್ಮ ದೇಶದಲ್ಲಿ ನನಗೆ ಈ ಅಗ್ರಾಸನವು ಸಿಕ್ಕುತ್ತಿರಲಿಲ್ಲ. ಈ ರೀತಿಯಲ್ಲಿ ಅಲ್ಪ ಸಂಖ್ಯಾಕ ಜಾತಿಮತದವರನ್ನು ಬಹು ಸಂಖ್ಯಾಕ ಜಾತಿಮತದವರು ಪ್ರೀತಿಸಬೇಕು. ಅವರ ಮೇಲೆ ವಿಶ್ವಾಸವಿಡಬೇಕು. ಈ ವಿಷಯ ಮಾತನಾಡುವಾಗ ಜಾತಿವೈಶಮ್ಯದ ವಿಷಯ ಈಗ ದೇಶದಲ್ಲಿರುವ ಭಾವನೆಯು ನನ್ನ ಮುಂದೆ ತೋರುತ್ತಿದೆ.

ದೈವವಶದಿಂದ ನಿಮ್ಮ ದೇಶದಲ್ಲಿ ಈ ವೈಶಮ್ಯವು ಬಹಳ ಕಡಿಮೆಯಾಗಿದೆ ಎಂಬದು ನನಗೆ ಬಹಳ ಸಂತೋಷಕರವಾದ ಸಂಗತಿಯಾಗಿದೆ. ಈ ವೈಶಮ್ಯವು ನಮ್ಮಲ್ಲಿಯೇ ಹುಟ್ಟಿದುದಲ್ಲ. ಇದು ಅನ್ಯ ದೇಶೀಯರ ಸಂಪರ್ಕದಿಂದ ನಮ್ಮಲ್ಲಿ ಹುಟ್ಟಲು ಕಾರಣವಾಯಿತು.

ದೇಶದ ಮುಂದಾಳುಗಳು, ಬೆಳ್ಳ ಕೊಡಬಾರದು, ಜಾತಿಮತಗಳ ವೈಶಮ್ಯಗಳನ್ನು ತೆಗೆದುಹಾಕಬೇಕು. ಅಥವಾ ಇಂಡಿಯಕ್ಕೆ ಹೊಸ ಸರಕಾರವನ್ನು ಕೊಡಲು ಆಲೋಚಿಸುವುದಕ್ಕಾಗಿ ಒಂದು ಕಮಿಶನು ಬಂದಾಗ ಅದರ ವಿಷಯ ಮುಂದೊತ್ತಿ ಹೋಗುವಾಗ ಕೆಲವು ಮುಲವಿಗಳೂ ಕೆಲವು ಪಂಡಿತರೂ ಈ ಮುಂದಾಳುಗಳಿಗೆ ವಿರೋಧವಾಗಿ ಬೋಧನೆ ಮಾಡಲು ಆರಂಭಿಸಿ ಪರಸ್ಪರ ಕಲಹಗಳನ್ನು ಉಂಟುಮಾಡುತ್ತಾರೆ. ಇದರಿಂದ ಮುಂದಿನ ಅಭಿವೃದ್ಧಿಗೆ ತಡೆಗಟ್ಟುತ್ತದೆ.

ಇಂಡಿಯದಲ್ಲಿರುವ ವಿದ್ಯಾವಂತರಾದ ಹಿಂದೂ ಮುಸಲ್ಮಾನರಲ್ಲಿಯೂ ಇತರ ಮತದವರಲ್ಲಿಯೂ ಪರಸ್ಪರ ಪ್ರೀತಿಯು ಉಂಟಾಗಿದೆ. ಬರಹ ಕಲಿಯದವರೊಳಗೆ ಅವರಲ್ಲಿರುವ ಅಜ್ಞಾನದಿಂದ ಪರಸ್ಪರ ಪ್ರೀತಿಯು ಉಂಟಾಗಲಿಲ್ಲ.

ಪಾಶ್ಚಿಮಾತ್ಯ ದೇಶಗಳಲ್ಲಿ ಇರುವುದಕ್ಕಿಂತಲೂ ಹೆಚ್ಚು ಪರಸ್ಪರ ಪ್ರೀತಿಯು ಇಂಡಿಯದ ಎಲ್ಲಾ ಜಾತಿಮತದವರಲ್ಲಿಯೂ ಇದೆ. ಇಂಡಿಯದ ರಾಷ್ಟ್ರೀಯ ಮಹಾಸಭೆಗೆ ಎಲ್ಲಾ ಜಾತಿಮತದವರನ್ನು ಅಧ್ಯಕ್ಷರಾಗಿ ಚುನಾಯಿಸಿದ ವಿಷಯವು ಎಲ್ಲರಿಗೂ ತಿಳಿದ ಇದೆ. ನವನಾಗರೀಕತೆಯಲ್ಲಿ ಮುಂದರಿಸಿದ ಅಮೇರಿಕದಲ್ಲಿ ಪ್ರೊಟೆಸ್ಟಾಂಟರ ಮುಂದೆ ಒಬ್ಬ ಕೆಥೋಲಿಕನಿಗಾದರೂ ಯುನೈಟೆಡ್ ಸ್ಟೇಟ್ಸಿನ ಅಧ್ಯಕ್ಷನಾಗಲು ಸಾಧ್ಯವಾಗಲಿಲ್ಲ. ಆಯರ್‌ಲೆಂಡಿನಲ್ಲಿಯೂ ಕೆಥೋಲಿಕ—ಪ್ರೊಟೆಸ್ಟಾಂಟರ ಜಗಳವು ಇದ್ದೇ ಇದೆ. ಆದುದರಿಂದ ಯಾರಾದರೂ ಎಲ್ಲಿಯಾದರೂ ಸ್ವಲ್ಪ ಕಲಹ ಉಂಟುಮಾಡಿದೊಡನೆ ಇದೀ ಹಿಂದೂದೇಶವೇ ಸ್ವರಾಜ್ಯಕ್ಕೆ ಅಯೋಗ್ಯವಾಗಿದೆ ಎಂದು ಹೇಳಲು ಸಾಧ್ಯವಿಲ್ಲ. ಆದುದರಿಂದ ಬಹು ಸಂಖ್ಯಾಕರಾದ ಜಾತಿಮತದವರು ಅಲ್ಪ ಸಂಖ್ಯಾಕರಾದ ಜನರನ್ನು ಪ್ರೀತಿಯಿಂದ ನಡಿಸಿ ಎಲ್ಲರೂ ಸಮಾಧಾನದಿಂದಲೂ ಒಗ್ಗಟ್ಟಿನಿಂದಲೂ ಕೆಲಸ ಮಾಡುವಂತೆ ಸಾಧಿಸುವುದು ಮುಂದಾಳುಗಳ ಕೆಲಸವಾಗಿದೆ.

ನಾನು ನಿಮ್ಮ ಜಿಲ್ಲೆಯ ಕುಂದುಕೊರತೆಗಳ ವಿಷಯ ಹೆಚ್ಚು ಅರಿತವನಲ್ಲವಾದುದರಿಂದ ಅವುಗಳ ವಿಷಯ ಚೆನ್ನಾಗಿ ಆಲೋಚಿಸಿ ಕೆಲಸಮಾಡಲು ನಿಮ್ಮ ಮುಂದಾಳುಗಳಿಗೆ ಅದನ್ನು ಬಿಟ್ಟಿರುತ್ತೇನೆ. ನಾನು ಈಗ ದೇಶದಲ್ಲಿ ನಡಿಯುವ ಕೆಲವು ಪ್ರಾಮುಖ್ಯ ಸಂಗತಿಗಳ ವಿಷಯ ಹೇಳುತ್ತೇನೆ.

ಈಗಿನ ಪರಿಸ್ಥಿತಿ.

ಈಗ ದೇಶದಲ್ಲಿ ಉಂಟಾಗುತ್ತಿರುವ ರಾಜಕೀಯ ವಿಷಯಗಳು ಮುಂದಿನ ಜನಾಂಗದ ಏಳಿಗೆಯ ಬುನಾದಿ ಕಲ್ಲುಗಳಾಗಿ ಇವೆ. ಈ ದೇಶದಲ್ಲಿ ಮಿಲಿಯುಗಟ್ಟಲೆಯಿಂದ ಜನರಿರುವರು. ನಾವು ಈಗ ಮಾಡುವ ಕೆಲಸಗಳು ಈ ಜನರ ಮುಂದಿನ ಸುಖಕ್ಕೂ, ಅಭಿವೃದ್ಧಿಗೂ, ಅಸ್ತಿತ್ವಕ್ಕೂ ಸಹಕಾರಿಯಾಗುವಂತೆ ಆಗಬೇಕು. ಯಾರಾದರೂ ಕೆಲವರು ದೇಶಕ್ಕೆ ವಿರೋಧವಾಗಿ ಕೆಲಸವನ್ನು ಈಗ ಮಾಡಿದರೆ ಮುಂದಿನ ಜನಾಂಗದವರು ಅದಕ್ಕಾಗಿ ನೂರಾರು ವರುಷಗಳ ವರೇಗೆ ಕಷ್ಟಪಡಬೇಕಾಗುವುದು.

ಇದಕ್ಕಾಗಿ ಇಂಡಿಯದ ೩೦೦ ವರುಷಗಳ ಹಿಂದಿನ ಚರಿತ್ರೆಯನ್ನು ವಿಚಾರಿಸಿ ನೋಡಬೇಕಾಗಿದೆ.

ಇಂಡಿಯದಲ್ಲಿ ಶಾಂತ ಪಕ್ಷದವರು ಮತ್ತು ಉಗ್ರಪಕ್ಷದವರು ಎಂಬ ಎರಡು ತರದ ಮುಂದಾಳುಗಳು ಇದ್ದರು. ಈಗ ಈ ಎರಡೂ ಪಕ್ಷಗಳು ಒಂದೇಯಾಗಿ ದೇಶೋದ್ಧಾರಕ್ಕಾಗಿ ಕೆಲಸಮಾಡುತ್ತಿವೆ.

ಮೊದಲು ಕಂಪೆನಿಯವರು ವ್ಯಾಪಾರದ ಆಶೆಯಿಂದ ಇಂಡಿಯಕ್ಕೆ ಬಂದರು. ನಂತರ ರಾಜ್ಯವಾಳಲು ಆರಂಭಿಸಿದರು. ಕಂಪೆನಿಯ ನೌಕರರು ಯಾವ ರೀತಿಯಲ್ಲಿ ರಾಜ್ಯದಾಡಳಿತೆ ನೋಡುತ್ತಿದ್ದರೆಂಬುದರ ವಿಷಯ ಮೆಕಾಲೆಯು ಬರದ ಇಂಗ್ಲೀಷ ಚರಿತ್ರೆಯನ್ನು ಓದಿನೋಡಿದರೆ ತಿಳಿಯುವುದು. ಈ ಸಮಯದ ರಾಜ್ಯದಾಡಳಿತೆಯು ಯೋಗ್ಯ ರೀತಿಯಲ್ಲಿ ಇರಲಿಲ್ಲ.

(ಇನ್ನೂ ಇದಕ್ಕೆ ಮುಂದುವರಿಸಿಯದು)

ಕರ್ಣಿಕರ ಎಗ್ಯೂ ಮಿಕ್ಸ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಝಾ, ಬಹು ದಿನದ ಜ್ವರ, ಚಳಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ, ಬೆವರು ಬಂದು, ಕೆಟ್ಟು ಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧-೪-೦, ಸಣ್ಣದಕ್ಕೆ ೦-೧೪-೦.

ಎಲ್ಲ ಕಡೆಗೂ ಔಷಧವನ್ನು ಮಾರುವಗೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು ದಿ ಊಲನ್ ಮಾರ್ಟ್, ಮಂಗಳೂರು.	ಕರ್ಣಿಕ ಬ್ರದರ್ಸ, ಗಿರಿಗಾಂವ, ಮುಂಬಯಿ.

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.



ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,000 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಂಗ್ ಮತ್ತು 300 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸು ಗಳು, ಪ್ರತಿ ಒಬ್ಬರ ಕೈಲಿ ಹಿಡಿದುಕೊಂಡು ಹೋಗಲು ಅನುಕೂಲಿಸುವ ಚಂದ್ರಕಾಂತಿ ಕ್ಯಾಂಡಲ್ ಪವರಿನ ಗ್ಯಾಸ್ ಲ್ಯಾಂಟರ್ನಗಳು, ಸ್ಟೌಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಪರಟು ಗುಂಡಿಗಳು, ರೋಜಾ ಹುವ್ವುಗಳ ಕುರಾಯಿಗಳು, ಬ್ಯಾಟರಿಗಳು, ಬಂಡಿಕಲ್ಲದ ಹಿಂದು ಮತ್ತು ಸಿಗರೆಟ್ ಹಚ್ಚುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.



ಕ್ರಯ ಪಟ್ಟಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಎ. ಆರ್. ಖಲೀಲ್,

ಟೈಲರ್, ಸ್ಟೌ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

'ಅಂಬಾ-ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧॥ ರೂಪಾಯಿ ೨ನೇ ನಂಬ್ರ ೬ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೩೦೦ ರೂಪಾಯಿ ವರೆಗೆ, ದೈವಶಕ್ತಿಯು, ಒಂದು ಸಾರಿ ಪರಿಸಿ ನೋಡಿದರೆ ತಮಗೆ ತಿಳಿಯುವದು, ಟಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

— — ಸಕ್ಲೇಶಪುರ ಪೋಸ್ಟು ಕಡೂರ್ ಡಿಸ್ಟ್ರಿಕ

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಝಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಅಗ್ಯು ಮಿಕ್ಸ್ಚರ್ ಪಿಲ್ಸ—ಮಲೇರಿಯಾ ಜ್ವರ ಪರಿಹಾರ. ರೂ. ೧.

ಬಾಟ್ಲಿವಾಲರ ಬಾಳಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿಕೊಡುವ ಔಷಧ. ಆಣೆ ೧೪.

ಬಾಟ್ಲಿವಾಲರ ಟಾನಿಕ್ ಆಫ್ ಬಾಮ್—ತಲೆನೋವು, ವಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೦.

ಬಾಟ್ಲಿವಾಲರ ಕ್ಲೋರಿಯಾ ಮಿಕ್ಸ್ಚರ—ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪.

ಬಾಟ್ಲಿವಾಲರ ಕ್ವಿನೇನ ಟೇಬುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೮—೦. ರೂ. ೧—೪—೦. ೧—೧೨—೦.

ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE.

ಕಾರಖಾನೆ:—CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.

Sayani Road, P. O. Cadell Road, Bombay. No. 14.

ಕೇಸರಿಯವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ಆಭರಣ'ವೆಂದೂ, 'ಸರ್ವಾಭೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜನನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ.

ಇದು ಋತುಶೂಲೆ, ಋತುಸ್ರಾವದೋಷ, ಋತುಸ್ರಾವವು ಹೆಚ್ಚು ಕಡಿಮೆಯಾಗುವುದು, ಋತುವು ನಾನಾ ಬಣ್ಣಗಳಿಂದ ಸ್ರವಿಸುವುದು; ಪ್ರದರ (ಮೇಹ) ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ಶರೀರದಲ್ಲಿ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ಉಬ್ಬಸ ಮೊದಲಾದ ವ್ಯಾಧಿಗಳೂ ಇತರ ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ಔಷಧಿ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— ಕೇಸರೀ ಕುಟೀರಂ,

TELEGRAMS:—'KESARI' ಆಯುರ್ವೇದ ಔಷಧಶಾಲಾ, P. B: 752, ಎಗ್ಮೋರು, ಮದರಾಸು.

15-4-'27 ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್‌ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೊನೋಗ್ರಾಫು, ಮತ್ತು ಪೆಟ್ರೊಮೆಕ್ಸ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು.

ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಸೂ.—ನಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಸ್ವಚ್ಛವಾಗಿರಿಸುವುದರಿಂದ ಸರಿಯಾದ ಸಮಯವು ದೊರಕುವುದು.

Edited Printed & Published by V. S. Kamath at the M. T. A. SHARADA PRESS, MANGALORE.

... ಮುಂದಕ್ಕೆ ರೂಪಾಯಿ 2-0-0 Registered No. M. 480 ಟಪ್ಪಾಲು ಹಾಸಲು ಸೇರಿ ರೂಪಾಯಿ 2-18-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

... ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರದ ಮಥಿಸಲು ಸುರರಿಗದರಿಂ । ಹರುಷವಾಯಿತೆ! ಮತ್ತೆ ವಿಷದ ಸುದುಕ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತಿರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. | ಮಂಗಳೂರು, ತಾ. ೩೦ನೇ ಶುಕ್ರವಾರ ನವಂಬರ ೧೯೨೮. (30-11-28.) | ಸಂಚಿಕೆ ೪೮

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:— ಉಡುಪಿ.

Branches:—COONDAPOOR.
" Mangalore.
ಶಾಖೆ:— ಕುಂದಾಪುರ.
" ಮಂಗಳೂರು.

Statement of Affairs of the Canara Banking Corporation Udipi, Limited as at 31st October 1928.

CAPITAL AND LIABILITIES.			PROPERTY AND ASSETS		
1	Paid up Capital	Rs. 1,99,650-0-0	1	Premises Building Furniture &c.	Rs. 9,491-2-0
2	Reserve Fund and other funds	" 96,600-0-0	2	Investments on G. P. Notes	" 3,34,218-5-0
3	Deposits	" 17,52,879-4-8	3	Investments on Approved Securities	" 17,53,749-11-0
4	Overdraft with Bankers	" 43,786-8-9	4	Bills for collection as per Contra	" 11,392-9-0
5	Sundry Persons' A/C as per Contra	" 11,392-9-0	5	Sundries including P & L items	" 1,00,979-12-9
6	Sundries including P & L items	" 1,54,863-9-2	6	Cash in hand & with Bankers.	" 49,340-7-10.
	Total	22,59,171-15-7		Total	22,59,171-15-7.

Office of the Corporation,
UDIPI, 13-11-'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ
— ಮುಲಾಮು. —

ತಲೆನೋವಿನಿಂದ ಚಡಪಡಿಸುವ, ಶೀತದಿಂದ ಏಕಾಂತಿಯಿಲ್ಲದ ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಅಳತೆರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು — ಎಲ್ಲಾ ತರದ ಗಜಕರ್ಣ ಕಜ್ಜಿ ಕಜ್ಜಿಗಳು, ನಂದಿಗೆಯು ಮತ್ತು ಖಂಡಕವಾತ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ — ಉತ್ತಮವಾದ, ಈ ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್‌ಟೌನ್, ಮದ್ರಾಸು. 249 ಫ್ರೇಯರ್ ರೋಡ್ ಮುಂಬಯಿ,
ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಪ್ರಖ್ಯಾತವಾದ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪನಿ,
ಗಿರಗಾಂವ, ಮುಂಬಾಯಿ.
ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT

No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

ADVERTISE IN OUR WEEKLY
To Reach the Hearths & Homes of India's Masses
For Particulars Apply to:
The Manager,
SWADESHABHIMANI,
MANGALORE.

ಪತ್ರವ್ಯವಹಾರ.

[illegible]

ಪುತ್ತೂರು ತಾಲೂಕು ಬೋರ್ಡು.

ನಮ್ಮ ಪುತ್ತೂರು ತಾಲೂಕೆಂದರೆ ೧೫೩ ಗ್ರಾಮಗಳಿಂದ ಕೂಡಿದ ಮಲೆನಾಡೆಂಬ ಹೆಸರು ಪಡೆದುದೆಂಬುದನ್ನು ಮತ್ತು ಈ ತಾಲೂಕಿನಲ್ಲಿ ಹೆಚ್ಚಾಗಿ ಇರುವವರು ನಿರಕ್ಷರ ಕುಕ್ಷಿಗಳೆಂಬ ಪ್ರಸ್ತಾವನೆಯನ್ನು ನಾನು ತೆಗೆಯುವುದು ಬೇಡವಷ್ಟೆ. ಹೆಚ್ಚಾಗಿ ಘೋರತ ಗರ್ಭದಿಂದ ಕೂಡಿದ ಮಲೇರಿಯಾ ಗ್ರಾಮಗಳೇ ಜಾಸ್ತಿಯಾಗಿರುವ ಇದಕ್ಕೆ ನಮ್ಮ ಬೋರ್ಡುಗಳು ಪದಗಿಸಿದೆಂಬ ಆಸ್ಪತ್ರೆಗಳು ೬ ಮಾತ್ರವೇ ಆಗಿರುವವು. ಇಂಥಾ ಆಸ್ಪತ್ರೆಗಳು ಯಾವ ಪ್ರಾಂತ್ಯವೆಂದರೆ ಪುತ್ತೂರು, ಬೆಳ್ತಂಗಡಿ, ವಿಟ್ಲ, ಸುಳ್ಯ, ಸಂಪಾಜೆ ಎಂಬ ಇವೇ ಆಗಿರುವವು. ಇವನ್ನು ೬)೧೫೩(೨೫ ಎಂದರೆ ಒಂದು ಆಸ್ಪತ್ರೆಗೆ ೨೫ ಗ್ರಾಮಗಳು ಪ್ರಯೋಜನ ಹೊಂದಿಕೊಳ್ಳಬೇಕಾದ ಸಂಗತಿಯಾಗಿರುತ್ತದೆ. ಅಂಥಾ ೨೫ ಗ್ರಾಮಗಳಿಂದ ಮೇಲೆ ಒಂದು ಆಸ್ಪತ್ರೆಗೆ ಎಷ್ಟು ದೂರವಾಗಬಹುದೆಂದು ತಿಳಿಯಲು ಯಾರಿಗೂ ಅವಕಾಶವೇ ಇರುವುದು. ೨೫ ಗ್ರಾಮಗಳು ವಿಸ್ತೀರ್ಣದಲ್ಲಿ ಸಾಧಾರಣ ೧೫ ಮೈಲಿನಂತೆ ಅಂದಾಜುಮಾಡಿದರೆ ಈ ಆಸ್ಪತ್ರೆಗಳಿಗೆ ಬಂದು ಹೋಗುವ ರೋಗಿಗಳಿಗೆ ಏನು ಸೌಕರ್ಯವಿದೆಯೆಂತ ಇನ್ನಷ್ಟು ಸುಲಭವಾಗಿ ತಿಳಿಯಬಹುದು. ಸಾಧಾರಣ ೧೦-೧೨ ಮೈಲಿಗೆ ದೂರವಾದ ಆಸ್ಪತ್ರೆಗಳಲ್ಲಿ ಯಾರಿಗೂ ಪ್ರಯೋಜನವಿಲ್ಲೆಂಬುದನ್ನು ನಾನೇ ಹೇಳಬೇಕೆಂದಿರುವುದಿಲ್ಲ. ಇಂಥಾ ಸಂಗತಿಗಳಿಂದಲೇ ಮಲೇರಿಯಾ ನಾಡುಗಳಲ್ಲಿ ಸರಿಯಾದ ವೈದ್ಯಕೀಯ ಸಹಾಯಗಳಿಲ್ಲದೆ ಎಷ್ಟೋ ಜನರು ಜೀವನ್ಮುಕ್ತಿಯನ್ನು ಪಡೆಯುತ್ತಿರುವರು. ಬಹುದೂರವಿಪ್ಪ ಇಂಥವರ ಸಂಖ್ಯೆಗಳು ಈಗಿನ ಆಸ್ಪತ್ರೆಗಳಿಂದ ಸಿಕ್ಕುವದೆಂದರೆ ಹೇಗೆ? ಮರಣಗಳ ಕಾರಣಗಳನ್ನು ಸರಿಯಾಗಿ ತಿಳಿಯಲು ಮನಕೊಡುವವರು ಆಯಾ ಗ್ರಾಮ ಪಟೇಲರ ಮರಣ ರಿಜಿಸ್ಟರುಗಳನ್ನು ನೋಡಿದರೆ ಜ್ವರದಿಂದ ಸತ್ತವರೆಷ್ಟು? ಇತರ ಕಾರಣಗಳಿಂದ ಸತ್ತವರೆಷ್ಟು? ಎಂಬುದು ಸ್ಪಷ್ಟವಾಗಿ ತಿಳಿಯದಿರದು. ಆದರೆ ತಿಳಿಯುವರಾರು? ಪ್ರಜಾಹಿತೈಷಿಯಾದ ಸರಕಾರವೇ ಗಮನಕೊಡುವುದಿಲ್ಲವೆಂದಾದ ಬಳಿಕ ಹಣವಿಲ್ಲದ ನಮ್ಮ ಜಿಲ್ಲಾ ತಾಲೂಕು ಬೋರ್ಡುಗಳೇ ಈ ಬೋರ್ಡುಗಳೇ ಪ್ರಾಮುಖ್ಯವಾದ ಸಂಗತಿಗಳಾಗಿದ್ದರೂ ಪಾಪ ಏನುಮಾಡುವದು? ಒಟ್ಟಾರೆ ಹೇಳುವದಾದರೆ ನಿರ್ಭಾಗ್ಯರಾದ ನಮ್ಮ ಹಿಂದು ಜನಗಳ ಯೋಗ್ಯತೆಯೆಂದೇ ಇಡಬೇಕಷ್ಟೆ. ಮಳೆಗಾಲದಲ್ಲಿ ದೂರವಿರುವ ಆಸ್ಪತ್ರೆಗಳಿಗಾದರೂ ಬಂದು ಔಷಧಿ ಮಾಡಿಸಬಹುದೆಂದರೆ ದೂರವಾದದ್ದೊಂದು ಕಷ್ಟ. ಹಳ್ಳಿ ಹೊಳೆಗಳ ತಡೆ, ಸರಿಯಾದ ಮಾರ್ಗ ವಾಹನಾದಿಗಳಿಲ್ಲದ ಕೊರತೆ. ಇಂಥಾ ಸಂಕಷ್ಟಗಳಿಂದಲೇ ಅನೇಕ ಪ್ರಾಣಿಗಳು ವೈದ್ಯೋಪಚಾರಗಳಿಲ್ಲದೆಯೂ ಕ್ರಮವಾದ ಅನುಭವಗಳಿಲ್ಲದೆಯೂ ಸಾಯುತ್ತಿರುವರೆಂಬರೆ ವ್ಯಸನವು ಯಾರಿಗೆ? ಹಡದ ತಾಯ್ತಂದೆ ಬಂಧುಗಳಿಗಲ್ಲವೇ? ಸಾಧಾರಣ ಒಂದು ಆಸ್ಪತ್ರೆಗೆ ೨೫ ಗ್ರಾಮಗಳೆಂದು ನಾನು ವಿಷದ ಪಡಿಸಿದ ಸಂಗತಿಯು ಅಳವಾದ ಹಳ್ಳದಾಟಲು ಗಣಿತಜ್ಞನು ಮಾರಳತೆಯ ಸಮ ಭಾಗಾಕಾರದಿಂದ ಸ್ಥಿರಪಡಿಸಿಕೊಂಡು ನೀರ ಮಡುವಿಗೆ ಸಿಕ್ಕಿದ ಸಂಖ್ಯೆಯಲ್ಲದೆ ಸೂಕ್ಷ್ಮದೃಷ್ಟಿಯಿಂದ ತಿಳಿದರೆ ಕೆಲವು ಆಸ್ಪತ್ರೆಗಳಿಂದ ಒಂದೆರಡು ಗ್ರಾಮಗಳ ಮಟ್ಟಿಗೆ ಮಾತ್ರ ಪ್ರಯೋಜನವಲ್ಲದೆ ಬೇರೆ ಗ್ರಾಮಗಳಿಗೆ ಸೌಕರ್ಯವಿರುವದಿಲ್ಲ. ಎಂದಮೇಲೆ ಅಂಥ ನಾಡುಗಳನ್ನು ಸೃಷ್ಟಿಸಿದ ಭಗವಂತನೇ ಕಾಪಾಡಬೇಕೆಂದು ಹೇಳುವವರಲ್ಲಿ ತುಂಬಾ ನ್ಯಾಯವಿದೆಯೆಂದು ಎಲ್ಲರಿಗೂ ಸಮಾಧಾನವಾಗಬಹುದು. ಅಲ್ಲದೆ ಕ್ವೈನಿಯನು ಸಹ ದೊರೆಯುವದಿಲ್ಲೆಂದ ಮೇಲೆ ಮನುಷ್ಯರು ಏನೋ ಪೂರ್ವಾರ್ಜಿತ ಕರ್ಮ ಫಲದಿಂದ ಹುಟ್ಟುತ್ತಾರೆ; ಸಾಯುತ್ತಾರೆಂದು ಮಾತ್ರ ಹೇಳಿಡುವುದು ಅಲಂಕಾರವೆಂದು ನನಗೆ ತೋರುತ್ತದೆ. ಇಂಥ ಆಸ್ಪತ್ರೆಗಳಿಗೂ ಕೆಲಕಡೆ ಬರೀ ಒಂದು ವೇದಿ ಮಾತ್ರ ಇರುವನಷ್ಟೆ. ಅಕಸ್ಮಾತ್ ಉಂಟಾದ ಕ್ಯಾಲೆಗಳಿಗೆ ಡಾಕ್ಟರರನ್ನು ಕೊಂಡುಹೋಗಲು ಬಂದವರು ಡಾಕ್ಟರು ಸಿಕ್ಕದೆಯೂ ಔಷಧಿಯು ದೊರೆಯಲು ಬೇರೆ ಯಾರೂ ಆಸ್ಪತ್ರೆಗಳಲ್ಲಿ ಇಲ್ಲದೆಯೂ ಇರುವುದರಿಂದ ಭಗ್ನಮನೋರಥರಾಗಿ ಪುನಃ ತಮ್ಮ ಮನೆಗಳನ್ನು ಸೇರಬೇಕಾದ ಸಂದರ್ಭಗಳು ಕೂಡ ಇರುವವು. ಅಲ್ಲದೆ ಮಲೇರಿಯಾ ಜ್ವರದ ಸಮಯಗಳಲ್ಲಿ ರೋಗಸ್ಥರ ಬ್ಯಾಚ್ಗಳು ಬಂದು ಬೀಳುತ್ತಿರುವಾಗ ಆಸ್ಪತ್ರೆಗಳಲ್ಲಿ ಕ್ವೈನಿಯನ್ ಮತ್ತು ಮದ್ದುಗಳು ಮುಗಿದು ಬಿಡುವ ಒಂದು ಗ್ರಹಗತಿಯು ಕೂಡ ವೃತ್ತಾಂತಗಳಲ್ಲಿ ಧಾರಾಳವಾಗಿರುವವು. ಅಂಥಾ ಮದ್ದುಗಳು ಮುಗಿದ ಕಾಲಗಳಲ್ಲಿ ಜನಗಳು ಕಂಪೆನಿಗಳಿಂದ ಔಷಧಿಗಳು ಬೇಕಾದ್ದನ್ನು ತರಿಸಿಕೊಳ್ಳಬೇಕಷ್ಟೆ. ಮುಗಿದ ನಾಗೆ ಔಷಧಿಗಳನ್ನು ತರಿಸಿಕೊಳ್ಳಲು ಕಾನೂನಿನ ಕಟ್ಟಿನಿಂದ ಆಸ್ಪತ್ರೆಗಳಿಗೆ ಅನುಕೂಲವಿಲ್ಲದೆ ಮದ್ದು ಮುಗಿದಿದೆ, ಹೊಸ ವರುಷಕ್ಕೆ ಬರಬೇಕೆಂಬ ಡಾಕ್ಟರರ ಉತ್ತರದಿಂದ ಕೃಶರಾಗುವ ಸಂಗತಿ ಕೂಡ ಬಹಳವಿರುತ್ತದೆ. ಎಂದ ಮೇಲೆ ಈಗಿರುವ ಆಸ್ಪತ್ರೆಗಳಿಗೆ ಸರಿಯಾದ ಅನುಕೂಲಗಳು ಇಲ್ಲವೆಂಬುದು ಈಗಿನ ಕ್ರಮಗಳಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ.

ಇನ್ನು ನಮ್ಮ ತಾಲೂಕಿನ ಸ್ಕೂಲುಗಳ ಸಂಗತಿಯನ್ನು ಸ್ವಲ್ಪ ನೋಡಿರಿ. ಈ ತಾಲೂಕಿನಲ್ಲಿ ಈಗಿರುವ ಶಾಲೆಗಳು ೧೨೭. ಇವರಲ್ಲಿ ಗ್ರೇಂಟು ವೇತನ ಕೊಡುವ ಸ್ಕೂಲುಗಳು ಸಹ ಸೇರಿ ಬೋರ್ಡು ಸ್ಕೂಲುಗಳಿರುವ ಸುಧಾರಣೆಯ ಪೇಟೆ ಕರಾವಳಿಯ ಗ್ರಾಮಗಳಲ್ಲಿ ತರಗತಿಗೆ ತಕ್ಕ ಇಟ್ಟಿರುವ ಜಾಸ್ತಿ ಶಾಲೆಗಳು ೪೨, ಇವರಲ್ಲಿ ಪುತ್ತೂರು ವಿಟ್ಲಗಳೆಂಬ ಸ್ಥಳಗಳಲ್ಲಿ ೧೭ ಸ್ಕೂಲುಗಳು ಇರುವವು. ಪಂಚಾಯತ ಸ್ಕೂಲುಗಳು ೩೭ ಕೂಡಾ ಲೆಕ್ಕಕ್ಕೆ ೫೦ರ ಸಂಖ್ಯೆಯು ಈಗ ತಿಳಿಯಬಹುದು. ಹೀಗಿದ್ದರೂ ಶಾಲೆಗಳಿಲ್ಲದೆ ಬಾಕಿಯುಳಿದವು ಸಾಧಾರಣ ೭೦ ಗ್ರಾಮಗಳೆಂದೇ ಹೇಳಬಹುದು. ಈಗಿರುವ ನಮ್ಮ ತಾಲೂಕು ಬೋರ್ಡು ಪ್ರೆಸಿಡೆಂಟರ ಕಾಲದಲ್ಲಿ ಹೆಚ್ಚು ಶಾಲೆಗಳನ್ನು ಪಂಚಾಯತ ಸ್ಕೂಲುಗಳನ್ನು ತೆರದ ಭೌಮಾನ ಪಡದಿರುವರಾದರೂ ಮೂಲೆ ಮೂಲೆ ಮಲೆನಾಡು ಗ್ರಾಮಗಳು ತೀರಾ ಬಿಟ್ಟು ಹೋಗಿರುವ ಸಂಗತಿಯಿಂದ ಈ ನಾಡುಗಳ ಸಂಪೂರ್ಣ ಸುಧಾರಣೆಯನ್ನು ಮಾಡಿರುವರೆಂದು ಸ್ಪಷ್ಟ ಹೇಳಲಾಗುವದಿಲ್ಲ. ಪಂಚಾಯತ ಸ್ಕೂಲುಗಳು ಸಹ ಹೆಚ್ಚಾಗಿ ಮೊದಲು ಶಾಲೆಗಳಿದ್ದ ಗ್ರಾಮಗಳಲ್ಲಿ ತೆರದಿದೆಯಾದ್ದರಿಂದ ಮೊದಲು ನಾನು ಹೇಳಿದ ಮಾತನ್ನೆ ಪುಷ್ಟೀಕರಿಸುತ್ತದೆ. ಶಾಲೆಗಳು ಮತ್ತು ಆಸ್ಪತ್ರೆಗಳ ಸಹಾಯವಿಲ್ಲದೆ, ಬಿಟ್ಟುಹೋಗಿರುವ ಗ್ರಾಮಗಳಿಗೆ ಪ್ರಕೃತ ವಿದ್ಯಾಪರಿಜ್ಞಾನಗಳಿಲ್ಲ. ವೈದ್ಯಕೀಯ ಸಹಾಯಗಳಿಲ್ಲವೆಂಬುದರಿಂದ ಅಂಥಾ ಗ್ರಾಮಗಳ ಮೇಲೆ ಈ ಉಪಕಾರ ದಯಾದೃಷ್ಟಿಯನ್ನು ಪ್ರೆಸಿಡೆಂಟರು ಹರಿಸಲಿಯೆಂದು ಹೇಳಲ್ಕೆ ಯಾವ ಸಂಕೋಚವೂ ಇಲ್ಲ. ಅದ್ದರಿಂದ ಮಾತ್ರದ ಜನತೆಯ ಬಗ್ಗೆ ಯಾವ ಅನುಕೂಲಗಳೂ ಇಲ್ಲದ ನಮ್ಮ ತಾಲೂಕಿನ ಒಳಗಿರುವ ಘೋರ ಗರ್ಭ ಶ್ರೇಷ್ಠವಾದ ಗ್ರಾಮಗಳು ಕೆಲವನ್ನು ದೃಷ್ಟಿಕ್ಕೆ ನಿಮ್ಮ ಮುಂದಿಡುವೆನು ನೋಡಿರಿ. ಕೊಳಮಾಜ್ಯರು, ತೊಡಿಕಾನ, ನಾಲ್ಕೂರು, ಮುಕ್ಕೂರು, ಚಿಬಿದ್ರೆ, ಮಿತ್ತಬಾಗಿಲು, ಶಿರಿಬಾಗಿಲು, ಶಿರಾಡಿ, ಶಿಶಿಲ, ಕೇನ್ಯ, ಬಾಳಿಲ ಏನೆಕಲ್ಲು, ಬಾಳುಗೋಡು, ಮಡಪಾಡಿ ಎಂದರೆ ಇವುಗಳು ಮಲೇರಿಯಾ ಸೀಮೆಯಲ್ಲಿ ಘೋರತನದ ಗ್ರಾಮಗಳಾಗಿರುವವು. ಆದ್ದರಿಂದ ಸಾಧಾರಣವಾದ ಗ್ರಾಮಗಳನ್ನು ನಾನು ತಿಳಿಸುವದಿಲ್ಲ. ಪ್ರೆಸಿಡೆಂಟರು ಈಗ ಯತ್ನಿಸುವ ಪಂಚಾಯತ ಸ್ಕೂಲುಗಳನ್ನು ಇನ್ನು ಮುಂದಾದರೂ ಬಹಳ ಹಿಂದೆಬಿದ್ದ ಮಲೆಗ್ರಾಮಗಳಲ್ಲಿ ತೆರೆಯುವಂತೆ ಕೂಡಾ ಪ್ರಾರ್ಥಿಸುತ್ತೇನೆ. ಇಂಥಾ ಮುಖ್ಯವಾದ ಸಂಗತಿಗಳನ್ನು ಕೂಡಾ ನಮ್ಮ ಆಳ್ಕೆಯ ಸರಕಾರವೂ ಕಿವಿಕೊಡುವದಿಲ್ಲೆಂದ ಬಳಿಕ ನಮ್ಮ ಹಿತ ದೃಷ್ಟಿಗೆ ಮನಕೊಡುವ ನಮ್ಮ ಕೌನ್ಸಿಲು ಮೆಂಬರರಾದರೂ ಗಮನ ಕೊಟ್ಟು ಈ ಕೆಳಗಿನ ಸಂಗತಿಗಳನ್ನು ತಿಪ್ಪಿಪಡಿಯ ಯತ್ನವನ್ನು ಮಾಡುವರಾಗಿ ನನ್ನ ಸಂಪೂರ್ಣ ಭರವಸೆ ೧. ಪ್ರತಿ ಗ್ರಾಮ ಗ್ರಾಮಗಳಿಗೆ ಸ್ಕೂಲುಗಳನ್ನು ತೆರೆಯಿಸುವದು. ಹೆಚ್ಚು ಗ್ರಾಮಗಳಿಗೆ ಪ್ರಯೋಜನ ಇಲ್ಲದಲ್ಲಿಂದ ತೆಗೆದು ಆಸ್ಪತ್ರೆಗಳನ್ನು ಯೋಗ್ಯ ಸ್ಥಳದಲ್ಲಿ ಸ್ಥಾಪಿಸುವದು. ಹಳ್ಳಿಗಳಿಂದ ಪ್ರಯಾಣದ ಬಗ್ಗೆ ಆಗಿರುವ ರಸ್ತೆಗಳ ಮರಸ್ತಿ ವ ಸಂಕ ಹಾಕಿಸುವದು. ಗ್ರಾಮ ಗ್ರಾಮಗಳಲ್ಲಿ ಕ್ವೈನಿಯನು ಬಟವಾಡೆ ಮಾಡಿಸುವದು, ಆದಷ್ಟು ವೈದ್ಯಕೀಯ ಸಹಾಯವು ಮಲೆನಾಡುಗಳಿಗೆ ಸಿಕ್ಕುವಂತೆ ಪ್ರಯತ್ನಿಸುವದು. ಈಗಿರುವ ಆಸ್ಪತ್ರೆಗಳಲ್ಲಿ ಎಷ್ಟು ಗ್ರಾಮಗಳಿಗೆ ಮತ್ತು ಅವರಲ್ಲಿ ಸಹಾಯಹೊಂದುವ ಜನಗಳ ಸಂಖ್ಯೆಗಳನ್ನು ತಿಳಿಯುವದು, ಆಸ್ಪತ್ರೆಗಳಲ್ಲಿ ಕಂಪೌಂಡರು ಮತ್ತು ಸೂಲಗಿತ್ತಿಯರು ಇಲ್ಲದೆ ಇದ್ದೆಡೆಗೆ ಒದಗಿಸುವಂತೆ ಮಾಡುವದು. ಏನಹಾ ಸಾಧ್ಯವಿದ್ದರೆ ಸಹಾಯಕ ಡಾಕ್ಟರರನ್ನು ಕೊಡಿಸುವದು. ರೋಗಿಗಳು ಬರುವಾಗ ಆಸ್ಪತ್ರೆಯಲ್ಲಿ ಔಷಧಿ ಮುಗಿದಿದೆ ಎಂಬುವಕ್ಕೆ ಮುಂಜಾಗ್ರತೆ ಇಡಿಸುವದು ಮಲೆನಾಡುಗಳಿಗೆ ಔಷಧೋಪಚಾರಗಳು. ಈಗಿರುವ ಆಸ್ಪತ್ರೆಗಳಿಂದ ಒದಗಿಸಲು ಸಾಧ್ಯವಿಲ್ಲದ್ದರಿಂದ ಪ್ರತ್ಯೇಕ ಆಸ್ಪತ್ರೆಗಳನ್ನು ಆವಶ್ಯವಿದ್ದಲ್ಲಿ ತೆರೆಯಿಸುವದು ಅಥವಾ ಸಾಧ್ಯವಿದ್ದರೆ ಶಾಲಾ ಉಪಾಧ್ಯಾಯರುಗಳ ತರಬೇತಿಯಿಂದ ಒಂದು ಆಯುರ್ವೇದ ಖಾತೆಗಳನ್ನಾದರೂ ಇಡಿಸುವಂತೆ ನೋಡುವದು ಇವೆ ಮುಂತಾದ ಲೋಕ ಹಿತ ಸಂಗ್ರಹಗಳ ಕಡೆಗೆ ಸ್ವಲ್ಪ ಗಮನ ಕೊಡಬೇಕಾಗಿ ಸಮ್ಮಂಧಪಟ್ಟ ಇಲಾಖೆಯವರಿಗೂ ನಮ್ಮ ಮೆಂಬರರಿಗೂ ಹೃತ್ಪೂರ್ವಕವಾದ ನನ್ನದೊಂದು ವಿಜ್ಞಾಪನೆಯು. ಇಂಥಾ ಪ್ರಾಮುಖ್ಯ ಸಂಗತಿಗಳನ್ನು ಆಯಾ ತಾಲೂಕುಗಳು ಕಂಡುಹಿಡಿದು ಮೇಲಾಧಿಕಾರರ ಅವಗಾಹನೆಗೆ ತರುವದು ನಮ್ಮ ಪ್ರಜಾಜನಗಳ ಮುಖ್ಯ ಕರ್ತವ್ಯವೆಂದು ಇದಕ್ಕೆ ಗಮನ ಕೊಡಬೇಕಾಗಿ ನನ್ನ ವಿನಂತಿಯು.

ತಾಲೂಕು ನಿವಾಸಿ.

[illegible]

ದೊಡ್ಡಬಳ್ಳಾಪುರ [illegible] ಶಾಲಾ ಉಪಶಕ್ತಿಯವರ ಅಧಿಕ್ಷತೆ[illegible] ಸಲು ಜರಗಿಸಲ್ಪಟ್ಟ ಈ ಸಾರ್ವಜನಿಕ [illegible] ರಾಯರೇ ಅಧ್ಯಕ್ಷರು (ಇವರು [illegible] ಇಲ್ಲೇ ಇರುವರು) ಇವರು, [illegible] ಯನ್ನು ಸಭೆಯ ಮುಂದಿರಿಸಿ, ಸಭೆಯ [illegible] ದರು. ಅನಂತರ ರಾ। ರಾ। ಎನ್. ಎಸ್. [illegible] ಮೂರ್ತಿಮಂತವಾಗಿದ್ದ ಆದರ್ಶಗುಣಗಳ [illegible] ತನಗೂ ಅಮೇರಿಕಾದಲ್ಲಿ ಆದ ಪರಿಚಯ[illegible] ಧೈರ್ಯ ಸ್ಥೈರ್ಯ, ತಾನು ಅವರಿಂದ ಕಲಿತ [illegible] ಸ್ವಾನುಭವಪೂರಿತವಾದ ಭಾಷಣವನ್ನಿತ್ತರು. [illegible] ಪುರದ ಶ್ರೀಮತಿ ಉಮಾಬಾಯಿಯವರು [illegible] ರಿಂದುಂಟಾಗಿರುವ ಸಂತಾಪವನ್ನು ಸೂಚಿಸಿ[illegible] ಗಳಂತೆ ವರ್ತಿಸುವದರಿಂದ ಅರ್ಥಕ್ಕರ್ಥ [illegible] ಕಾಂತಿದೊರಕುವುದೆನ್ನುವ ಸಮಯೋಚಿತ ಭಾಷಣವನ್ನು [illegible] ವಂತೆ ಹಿಂದಿಯಲ್ಲಿ ಮಾಡಿದರು. ರಾ। [illegible] ತನಗೂ ಮೃತರಿಗೂ ಇತ್ತೀಚೆಗೆ ಆದ ಪರಿಚಯ, ಅವರ [illegible] ರುವ ನಡೆ ಮೊದಲಾದುವುಗಳ ಕುರಿತು ಭಾಷಣ [illegible] ಕಡೆಗೆ ರಾ। ಶ್ರೀಪತಿರಾಯರು ಮಿಸ್. ಮೆಯೋಳ "ಮದರ್ ಇಂಡಿಯಾ" ಪುಸ್ತಕಕ್ಕೆ ಉತ್ತರವಾಗಿ ಪ್ರತಿ ಪುಸ್ತಕವನ್ನು ಬರೆದು ಹಿಂದೂ ಮಾತೆಯರ ಮಾನರಕ್ಷಣೆಗೈದ ಸ್ವಾಭಿಮಾನ, ಸ್ವಜಾತ್ಯಭಿಮಾನ, ಸ್ವದೇಶಾಭಿಮಾನದಿಂದಲೇ ಲಾಲಾಜಿಯವರು ಎಂದು ಶ್ಲಾಘಿಸಿದರು. ನಂತರ [illegible] ಅನುಮೋದನೆಯ ಮೇರೆಗೆ ದುಃಖಸೂಚಕ ನಿರ್ಣಯವಾಗಿ ಸಭೆಯು ಬರಖಾಸ್ತಾಯಿತು.

ಸ್ತ್ರೀಯ ಅದ್ಭುತ ಶೌರ್ಯ—ಕಳೆದ ಸಂಚಿಕೆಯಲ್ಲಿ ಕೊಲೆ, ಖೂನಿಗಳ ಕುರಿತು ಬರೆದ ವಿಷಯವು ವಾಚಕರ ಮನಸ್ಸಿನಲ್ಲಿರಬಹುದು. ಈಗ ತಕ್ಕೊಳ್ಳಿ ಇನ್ನೊಂದು ಖೂನಿ! ಒಬ್ಬ ಕೂರ್ಮನವಿಯು ತನ್ನ ಅಕ್ಕನ ಗಂಡನೊಡನೆ ಹಿಂದಿನ ದ್ವೇಷದಿಂದ ಬೇಕೆಂದೇ ಜಗಳ ಹುಟ್ಟಿ ಅವನನ್ನು ಕತ್ತಿಯಿಂದ ಕಡಿದು ಬಹಳವಾಗಿ ಘಾಯಪಡಿಸಿರುತ್ತಾನೆಂದೂ ಘಾಯಪಟ್ಟವನು ಆಸ್ಪತ್ರೆಯಲ್ಲಿ ಆರೋಗ್ಯವನ್ನು ಹೊಂದುತ್ತಿರುವನೆಂದೂ ತಿಳಿದುಬರುತ್ತದೆ. ಸ್ತ್ರೀಯ ಈ ಅದ್ಭುತ ಶೌರ್ಯವು ಕಾಶಿನಲ್ಲಿ ಪ್ರದರ್ಶಿಸಲ್ಪಟ್ಟಿತು. ಇದು ಹಿಂದಿನಿಂದಲೂ ಪ್ರಖ್ಯಾತ ಸ್ಥಳವಂತೆ!

"ವರದಿಗಾರ"

ಖಾಸಗಿ

ಅತೀ ಮಹತ್ವದ ಸೋಡ್ತಿ.

ಕೆನರಾ ಹೈಸ್ಕೂಲ್ ಮತ್ತು ಕೆನರಾ ಗರ್ಲ್ಸ್ ಸ್ಕೂಲ್

ಇವುಗಳ ಸಹಾಯಾರ್ಥವಾಗಿ

ಕೆನರಾ ಹೈಸ್ಕೂಲಿಗೆ ಧನಸಹಾಯವನ್ನು ಒದಗಿಸುವ ಬಗ್ಗೆ 1923ನೇ ಇಸವಿಯಲ್ಲಿ ತೆಗೆದ ಸೋಡ್ತಿಯಿಂದ ಸಿಕ್ಕಿದ ಹಣ ಕಾಲಕ್ರಮೇಣ ಅಭಿವೃದ್ಧಿಯಾಗಿ ಬರುತ್ತಿರುವ ಈ ಸಂಸ್ಥೆಯ ಹೆಚ್ಚುತ್ತಾ ಬರುವ ಖರ್ಚಿಗೆ ಸಾಲದೆ ಹೋದ್ದರಿಂದ ಈ ಸಂಸ್ಥೆಯ ಬಗ್ಗೆಯೂ ಕೆನರಾ ಗರ್ಲ್ಸ್ ಸ್ಕೂಲಿನ ಬಗ್ಗೆಯೂ ಹೆಚ್ಚಿನ ಹಣವನ್ನು ಕೂಡಿಸಲಿಕ್ಕೆ ಶಾಲಾ ಕೌನ್ಸಿಲ್ ಮೆಂಬರರು ದಕ್ಷಿಣ ಕನ್ನಡಾ ಜಿಲ್ಲಾ ಮೇಜಿಸ್ಟ್ರೇಟರವರ ಅಪ್ಪಣೆ ಪಡೆದು ಪುನಃ ಈ ವರ್ಷವೂ ಇನ್ನೊಂದು ಸೋಡ್ತಿಯನ್ನು ತೆಗೆಯುವರೆ ನಿಶ್ಚಯಿಸಿರುತ್ತಾರೆ. ಈ ಸೋಡ್ತಿಯು ಆಡಳಿತೆ ಶಾಲಾ ಕೌನ್ಸಿಲ್ ಮೆಂಬರರನ್ನು ಧೋರಣೆಯುಳ್ಳ ಸದ್ಗ್ರಹಸ್ಥರಿಂದ ನಡಿಸಲ್ಪಡುವುದು.

ಉದ್ದೇಶ.

1. ಶಾಲೆಗಳ ಮೂಲ ಧನವನ್ನು ವೃದ್ಧಿಪಡಿಸಲಿಕ್ಕೆ
2. ಔದ್ಯೋಗಿಕ ಶಿಕ್ಷಣದ ಬಗ್ಗೆ ಈಗ ಶಾಲೆಯ ಸ್ವಾಧೀನ ಇರುವ 5000 ರೂಪಾಯಿಯ ಮೂಲ ಧನವನ್ನು ಹೆಚ್ಚಿಸಲಿಕ್ಕೆ.
3. ಎರಡು ಶಾಲೆಗಳ ಬಗ್ಗೆ ಮತ್ತು ಮುಖ್ಯವಾಗಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಿ ಸ್ಥಳ ಇಕ್ಕಟ್ಟಾಗಿರುವ ಬಾಲಿಕಾ ಶಾಲೆಯ ಬಗ್ಗೆ ಹೆಚ್ಚಿಗೆ ಕಟ್ಟೋಣಗಳನ್ನು ಒದಗಿಸಿಕೊಡುವ ಬಗ್ಗೆ.

ಜಮೆಯಾಗುವ ಒಂದು ಲಕ್ಷ ರೂಪಾಯಿಗಳಲ್ಲಿ ರೂಪಾಯಿ 15000ವನ್ನು ಸೋಡ್ತಿಯ ಖರ್ಚಿಗಾಗಿ ತೆಗೆದಿಟ್ಟು ಉಳಿದ ಹಣದಲ್ಲಿ ರೂಪಾಯಿ 40000ವನ್ನು ಶಾಲೆಗಳ ವಿನಿಯೋಗಕ್ಕಾಗಿ ಇಟ್ಟು ಉಳಿದ 45000ವನ್ನು ಈ ಕೆಳಗಿನ ಬಹುಮಾನಗಳಾಗಿ ಹಂಚಲಾಗುವದು.

1ನೇ ರೂಪಾಯಿ **12,500**; 2ನೇ ರೂಪಾಯಿ **5,000**;

ರೂಪಾಯಿ 1,000 ದರದ 2; ರೂಪಾಯಿ 500 ದರದ 8; ರೂಪಾಯಿ 250 ದರದ 6;

ರೂಪಾಯಿ 100 ದರದ 10; ರೂಪಾಯಿ 50 ದರದ 20; ರೂಪಾಯಿ 20 ದರದ 100;

ರೂಪಾಯಿ 10 ದರದ 800; ರೂಪಾಯಿ 5 ದರದ 2,100.

ಟಿಕೇಟುಗಳು 25ರ ಪುಸ್ತಕಗಳಾಗಿ ದೊರೆಯುವುವು. ಒಂದು ಇಡೀ ಪುಸ್ತಕದಲ್ಲಿನ ಟಿಕೇಟುಗಳನ್ನು ಮಾರಿದವರು, ರೂ. 25ರ ಬದಲಾಗಿ 24 ರೂಪಾಯಿಗಳನ್ನು ಮಾತ್ರವೇ ಪಾವತಿ ಮಾಡಿದರೆ ಸರಿಯಾಗುವುದು; ಉಳಿದೊಂದು ರೂಪಾಯಿಯನ್ನು ಅವರ ಮೆಹನತ್ತಿನ ಬಗ್ಗೆ ಅವರು ಇಟ್ಟುಕೊಳ್ಳಬಹುದು. ಇದರಿಂದ ಟಿಕೇಟು ಮಾರುವವರು, ಶಾಲೆಗಳಿಗೆ ಸಹಾಯ ಮಾಡುವುದರೊಂದಿಗೆ ಅವರು ಕೂಡಿಸಿದ ಹಣದಲ್ಲಿ ಸೇಕಡಾ 4ರ ಪ್ರತಿಫಲವನ್ನು ದೊರಕಿಸಿಕೊಂಡಂತಾಗುವುದು. ಇದಲ್ಲದೆ ಅತಿ ಹೆಚ್ಚು ಸಂಖ್ಯೆಯ ಟಿಕೇಟು ಪುಸ್ತಕಗಳನ್ನು ಮಾರುವವರಿಗೆ, ಮಾರಾಟದಲ್ಲಿ ಸ್ಪರ್ಧೆಯುಂಟಾಗುವ ಹಾಗೆ, ಬೇರೆ ಬಹುಮಾನಗಳು ಪ್ರತ್ಯೇಕವಿವೆ.

ಟಿಕೇಟು ಮಾರಾಟವು 1929ನೇ ಇಸವಿ ಜನವರಿ ತಾ. 4ಕ್ಕೆ ಮುಗಿಯುವುದು. ಸೋಡ್ತಿಯನ್ನು 1929ನೇ ಇಸವಿ ಜನವರಿ ತಾ. 26 ಮತ್ತು ಅದೇ ದಿನ ಮುಗಿಯದಿದ್ದಲ್ಲಿ ಅದರ ನಂತರದ ದಿನಗಳಲ್ಲಿ ತೆಗೆಯಲಾಗುವುದು.

ಹಣವನ್ನು ಪಾವತಿಮಾಡುವುದಕ್ಕೂ, ಇತರ ಪತ್ರವ್ಯವಹಾರಕ್ಕೂ ವಿಳಾಸ:—

ಬಿ. ಮಂಜುನಾಥ ಬಾಳಿಗಾ,
ಒನರರಿ ಸೆಕ್ರೆಟರಿ, ಕೆನರಾ ಅಫೀಸು, ಕ್ರಿಶ್ಚನ್ ಲೇನ್, ಪಲ್ನೀರ್,
ಮಂಗಳೂರು, ದ. ಕ.

ಶಾಸ್ತ್ರೀಯ
ಅಮೂಲ್ಯ ಔಷಧಗಳು.

ಅಮೃತಾಮಲಕಾದಿ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅತ್ಯಂತ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರವರೆಗಿನ ಪ್ರಾಣಿವರ್ಗಗಳಿಗೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು, ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಕ್ಷಯ, ಶ್ವಾಸಕಾಸ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ಸಂಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಶ್ಮಲವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಫುಟವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಬೆಳವಣಿಕೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

[illegible] "[illegible]" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli and Coondapur.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ ಮತ್ತು ಕುಂದಾಪುರ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,37,715—3—7	ಕ್ಷೇಮನಿಧಿ ಮತ್ತು ಇತರ ಫಂಡುಗಳು 3,37,715—3—7
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಠಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ವ್ಯಾದೆ ಆಗುವ ರೂ. 1000/- ವ ಮಿಕ್ಕಿದ ಮೊಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be all owed unless the depositor earns not less than Rs. 5/- during a period of 6 months ending either 30th June or 31st December in any year.

For further particulars please apply to -

Canara Bank Ltd. **K. Venkat Rao,**
Mangalore, 26th Nov. 1928 Secretary

THE PANGAL NAYAK BANK, LTD.

Head Office: Udipi, S. K.] *Estd. 1920.* **[Branch Office: Mangalore, S. K.**

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ, ದ. ಕ.] ಸ್ಥಾಪಿತವಾದದ್ದು 1920. [ಬ್ರೇಂಚ್ ಆಫೀಸು: ಮಂಗಳೂರು, ದ. ಕ

ಬೇಂಕರರು—ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪಾಯಿ 2,00,000/-

ಚಂದಾ ಮೂಲಕ ಹಾಕಲ್ಪಟ್ಟ ವ ವಸೂಲಾದ ಮೂಲಧನ ರೂ. 1,50,000-	ಆಪದ್ಧನ ಇತ್ಯಾದಿ ನಿಕ್ಷೇಪಗಳು ರೂ. 1,00,000/

FIXED DEPOSITS are received for 3 months at 5%, for 6 or 9 months at 5½%, of 12, 15, 18 or 21 months at 6¼%, and for 24 months at 6½, Interest being payable every 3 Months. SEASON DEPOSITS from January to June at 6½% SHORT NOTICE DEPOSITS, withdrawable by giving 15 days previous notice after one month at 4½% and CUMULATIVE DEPOSITS by monthly instalments are also received. SAVINGS BANK DEPOSIT ACCOUNTS may be opened and interest allowed at 4⅛%, CURRENT DEPOSIT ACCOUNTS may also be opened and interest allowed at 3% from January to June and at 2% from July to December. Loans granted on personal and approved securities on reasonable terms Banking business of every description transacted

Further information may be had on application to the Secretary at the HEAD OFFICE or to the AGENT at BRANCH OFFICE.

ಠಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ. ಶೆ. 5ರಂತೆಯೂ, 6 ಯಾ 9 ತಿಂಗಳುಗಳಿಗೆ ಸಾ. ಶೆ. 5½ರಂತೆಯೂ, 12 15, 18, ಯಾ 21 ತಿಂಗಳುಗಳಿಗೆ ಸಾ. ಶೆ. [illegible]ರಂತೆಯೂ, 24 ತಿಂಗಳುಗಳಿಗೆ ಸಾ. ಶೆ. 6½ರಂತೆಯೂ, ಪ್ರತಿ 3 ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು. ಮೊಸಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೆಗೆ) ಸಾ. ಶೆ. 6½ರಂತೆಯೂ ಅಲ್ಪಾವಧಿ ಠೇವಣಾತಿಗಳು ಸಾ. ಶೆ. 4½ರಂತೆಯೂ, ಸಂಚಯ ಠೇವಣಾತಿಗಳು ಪ್ರಯೋಜನಕರವಾದ ರೀತಿಯಿಂದಲೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಸಾ. ಶೆ. 4⅛ರಂತೆಯೂ, ಚಾಲ್ತಿ ಠೇವಣಾತಿಗಳು ಜನವರಿಯಿಂದ ಜೂನ್ ಅಂತ್ಯದ ವರೆಗೆ ಸಾ. ಶೆ. 3ರಂತೆಯೂ, ಜುಲಾಯಿ ತಿಂಗಳಿಂದ ಡಿಸಂಬರ ಅಂತ್ಯದ ವರೆಗೆ ಸಾ. ಶೆ. 2 ರಂತೆಯೂ ಅಂಗೀಕರಿಸಲ್ಪಡುವವು.

ಸಾಲಗಳು ಯೋಗ್ಯವಾದ ಜವಾಬ್ದಾರಿಗಳ ಮೇಲೆ ನ್ಯಾಯವಾದ ರೀತಿಯಲ್ಲಿ ಕೊಡಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿನ ಸೆಕ್ರೆಟರಿಯವರಿಗೂ ಯಾ ಬ್ರೇಂಚ್ ಆಫೀಸಿನ ಏಜಂಟರಿಗೂ ಬರಕೊಳ್ಳುವದು.

ಹೆಡ್ ಆಫೀಸು, ಉಡುಪಿ,
ತಾ. 18 – 10 – '28.

ಓ. ಲಕ್ಷ್ಮಣ ನಾಯಕ್,
ಆಫೀಸಿಯೇಟಿಂಗ್ ಸೆಕ್ರೆಟರಿ.

ಮೊದಲ್ ತರವಾದ ಬೆಳ್ಳಿ ಪುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತೇವೆ. ನಾವು ಸಿದ್ಧ ಅನುಭವದ ಮೇಲಿನವು ಪುಡಿದಾರ ಹಗ್ಗಗಳು ಕೆಲಸ ಸೈಜಲ್ಲಿಯೂ, ದಾರದ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಉಡಿದಾರಗಳನ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಹೋಲ್‌ಸೇಲ್ ವ್ಯಾಪಾರ್,
24-8-'28 ಶವ್ವಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೀ ರೂಪಾಯಿ 1/- ಮಾತ್ರ,

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಔಷಧಾಲಯ,

ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—

ಮೆಸ್ಸರ್ಸ್ ಕೇಬಿಲ್ ಎಂಡ್ ಕಂಪೆನಿ,
ಮಂಗಳೂರು.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳ.

ದಯ ಇಟ್ಟು ಮೇಲಣ ಸಾಮಾನುಗಳನ್ನು ಕೊಂಡು ಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ, ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಆಲಿಭಾಯಿ ಎಂಡ್ ಸನ್ಸ್.

ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.

ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ;

210, ಅಬ್ದುರ್ರಹಮಾನ್ ರಸ್ತೆ, ಮುಂಬಾಯಿ.

ಕಲಕತ್ತಾ ಎಕ್ಷಿಬಿಷನು.

1928.

ಹಿಂದೀ ರಾಷ್ಟ್ರೀಯ ಮಹಾಸಭೆಯ 43ನೇ ಅಧಿವೇಶನದವರಿಂದ ವ್ಯವಸ್ಥಾಪಿಸಲ್ಪಟ್ಟದು.

ಅಪೂರ್ವ ಸುಸಂದರ್ಭ.

ಸ್ವದೇಶಕ್ಕೆ ಸಂಬಂಧಿಸಿದ ಮಾಲು ತಯಾರಿಸುವವರಿಗೂ, ಸಾಹುಕಾರರಿಗೂ, ವ್ಯಾಪಾರಿಗಳಿಗೂ, ಪ್ರದರ್ಶಕರಿಗೂ ಚಿತ್ರಕಾರರಿಗೂ, ಕಲಾಕೋವಿದರಿಗೂ, ಅನುಕೂಲವಾಗುವಂತೆ, ಕಲಕತ್ತಾ ಎಗ್ಜಿಬಿಷನು 1928ನೇ ಡಿಸೆಂಬರ ತಿಂಗಳಿನ ಮಧ್ಯದಿಂದ 1929ನೇ ಇಸವಿ ಜನವರಿ ತಿಂಗಳಿನ ಮಧ್ಯದ ವರೆಗೆ ತೆರೆದುಕೊಂಡಿರುವದು.

ಎಗ್ಜಿಬಿಷನಿನ ಕಟ್ಟಡಗಳಲ್ಲಾಗಲೀ, ಪ್ರತ್ಯೇಕವಾಗಿ ಗುಡಾರಗಳನ್ನು ಕಟ್ಟಿಸುವ ಸಲುವಾಗಿಯಾಗಲೀ ಸ್ಥಳ ಕೊಡಲಾಗುವದು. ಎಗ್ಜಿಬಿಷನು ಪಾರ್ಕ್‌ಸರ್ಕಸ್ ಎಂಬ ಸ್ಥಳದಲ್ಲಿ ನಡೆಯುವದು.

ಹೆಚ್ಚು ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. R. Sarkar,
Secretary,
The Calcutta Exhibition
34, Hogg Street, CALCUTTA

[illegible]

ಸರ್ ಜಗದೀಶ ಚಂದ್ರಬೋಸರವರ ಜನ್ಮದಿನ.

ಸರ್ ಜಗದೀಶ ಚಂದ್ರರೆಂದರೆ ಲೋಕವಿಖ್ಯಾತರಾದ ಹಿಂದೀ ವಿಜ್ಞಾನ ಶೋಧಕರಾಗಿರುವರು. ವನಸ್ಪತಿಯ ಈ ವರೆಗಿನ ಅಜ್ಞಾತವಾಗಿದ್ದ ಅನೇಕ ರಹಸ್ಯಗಳನ್ನು ಇವರೇ ಬಹಳ ಸಾಹಸದಿಂದಲೂ ಚರಿತ್ರದಿಂದಲೂ ತಿಳಿದು ಹೊರಗೆಡಹಿರುವರು. ಇವರ ಈಗಿನ ೭೦ನೆಯ ಜನ್ಮದಿನಕ್ಕೆ ಪಾಶ್ಚಾತ್ಯ ಪ್ರಖ್ಯಾತ ಪುರುಷರ ಕಡೆಯಿಂದ ಅಭಿನಂದನದ ಸಂದೇಶಗಳು ಅವರಿಗೆ ಬಂದಿವೆ. ದಶಂಬರ ೧ನೆಯ ತಾರೀಕಿಗೆ ಬೋಸ್ ಇನ್ಸ್ಟಿಟ್ಯೂಟಿನಲ್ಲಿ ಇವರ ಈ ಜನ್ಮದಿನವು ಆಚರಿಸಲ್ಪಡುವುದು. "ಇತರರು ನಿಮ್ಮನ್ನು ಪ್ರತಿಭಾಶಾಲಿಯಾದ ವಿಜ್ಞಾನಿಯೆಂದು ಗೌರವಿಸಬಹುದು; ಆದರೆ ನಾನು ನಿಮ್ಮನ್ನು ಋಷಿಯಾಗಿ ಆದರಿಸುವೆನು," ಎಂದು ರೋಮೆಯ್ನ ರೋಲೆಂಡರು ಬರೆಯುವರು. ಇಂಗ್ಲೆಂಡ್, ಜರ್ಮನಿ, ಬೆಲ್ಜಿಯಂ ಮೊದಲಾಗಿ ಎಲ್ಲಾ ದೇಶಗಳಿಂದಲೂ ಅಭಿನಂದನವು ಬಂದಿರುವುದು. ಪಾಶ್ಚಾತ್ಯ ಸಂಸ್ಕೃತಿಯು ಎಡೆಬಿಡದೆ ಪಾಶ್ಚಾತ್ಯರ ಕೈಯಲ್ಲಿ ಅಭಿವೃದ್ಧಿ ಹೊಂದುತ್ತಾ ಪೌರ್ವಾತ್ಯರನ್ನು ಅವರ ಜಡತೆಗಾಗಿ ಪರಿಹಾಸ ಮಾಡುವ ಸಮಯದಲ್ಲಿ, ಪೌರ್ವಾತ್ಯರಲ್ಲಿಯೂ ಅಭಿವೃದ್ಧಿಯ ಚೇತನವಿದೆಯೆಂದು ತೋರಿಸಿದ ಕೆಲವೇ ಹಿಂದೀ ಪ್ರತಿಭಾಸ್ಪದ ಪುರುಷರೊಳಗೆ ಇವರೇ ಪ್ರಮುಖರು. ಗಣಿತದಲ್ಲಿ ಗತಿಸಿದ ರಾಮಾನುಜರೂ, ಕಾವ್ಯದಲ್ಲಿ ಶ್ರೀ ರವೀಂದ್ರರೂ, ಇಂಜಿನಿಯರಿಂಗಿನಲ್ಲಿ ಸರ್. ವಿಶ್ವೇಶ್ವರಯ್ಯನವರೂ ಲೋಕವಿಖ್ಯಾತರಾಗಿರುವಂತೆ ಸಸ್ಯವಿಜ್ಞಾನದಲ್ಲಿ ಇವರೇ ಪಾಶ್ಚಾತ್ಯರನ್ನು ಕೂಡ ಕಲಿದೂಗಿಸಿರುವರು. ಹಿಂದೂಸ್ಥಾನವೂ ತನ್ನ ಈ ಸುಪುತ್ರನನ್ನು ಸರಿಯಾದ ರೀತಿಯಲ್ಲಿ ಗೌರವಿಸುವುದಾಗಿ ಆಶಿಸುವೆವು.

ಬಟ್ಲರ್ ಕಮಿಟಿ.

ಹಿಂದೀ ಸ್ಥಾನಿಕ ಅರಸರು ಹಿಂದೀ ಸರಕಾರದೊಡನೆ ಹೊಂದಿಸಬೇಕಾದ ಸಂಬಂಧವನ್ನು ನಿರ್ಣಯಿಸುವ ಬಗ್ಗೆ ನೇಮಕವಾದ ಬಟ್ಲರ್ ಕಮಿಟಿಯು, ಸ್ಥಾನಿಕ ಪ್ರಜೆಗಳ ಮತ್ತು ಅರಸರ ಮಧ್ಯದಲ್ಲಿ ಇರಬೇಕಾದ ಸಂಬಂಧವನ್ನೂ ನಿರ್ಣಯಿಸುವುದು ಅಗತ್ಯವಿದೆ. ಹಿಂದೀ ಅರಸರು ಪ್ರಜೆಗಳನ್ನು ಎಷ್ಟು ಅಲಕ್ಷ್ಯವಾಗಿ ಕಾಣುತ್ತಿರುವರೆಂಬುದು ಎಲ್ಲರಿಗೂ ತಿಳಿದೇ ಇದೆ. ವಿದ್ಯಾಭ್ಯಾಸವೂ ಬೆಳೆವಣಿಗೆಯೂ ಈ ರಾಜ್ಯಗಳಲ್ಲಿ ತಡೆಗಟ್ಟಲ್ಪಟ್ಟಿವೆ. ಕೈಗಾರಿಕೆಯೆಂದರೇನೆಂದು ಹಲವು ರಾಜ್ಯಗಳಲ್ಲಿ ಗೊತ್ತೇ ಇಲ್ಲ. ಆದರೆ ಈ ಅರಸರು ಸ್ವೇಚ್ಛೆಯಂತೆ ಖರ್ಚು ಮಾಡುತ್ತ ಪ್ರಜೆಗಳ ಹಣವನ್ನು ದುರ್ವ್ಯಯಪಡಿಸುತ್ತ, ಪರದೇಶಗಳಲ್ಲಿ ಸಂಚರಿಸಿ ವೇಶ್ಯಾಲೋಲರಾಗಿ ಕರ್ತವ್ಯಗಳನ್ನು ಮರೆಯುತ್ತ ಕಾಲಹರಣ ಮಾಡುತ್ತಿರುವಾಗ ಸ್ವಂತ ರಾಜ್ಯದಲ್ಲಿ ಅಧಿಕಾರಿಗಳು ತಮಗೆ ಕೇಳುವವರಾರೂ ಇಲ್ಲವೆಂಬುದನ್ನು ತಿಳಿದು, ಲಂಚಕೋರತನದಿಂದ ಅನ್ಯಾಯಗಳನ್ನೂ ಅತ್ಯಾಚಾರಗಳನ್ನೂ ನಡಿಸಿ ಪ್ರಜೆಗಳನ್ನು ಪೀಡಿಸುತ್ತಿರುವುದು ಸರ್ವಸಾಮಾನ್ಯವಾಗಿದೆ. ಪ್ರಜಾಹಿತವನ್ನೇ ಕೋರುವೆವೆಂದು ಹೆಗ್ಗಳಿಕೆಕೊಳ್ಳುವ ಬ್ರಿಟಿಷ ಸರಕಾರವು ಹಿಂದೀ ರಾಜರುಗಳ ಅಧಿಕಾರಗಳನ್ನು ನಿರ್ಣಯಿಸುವಾಗ ಪ್ರಜೆಗಳ ಹಿತಗಳನ್ನು ಲಕ್ಷಿಸಬೇಕಿದ್ದಿತು. ಆದರೆ ಈಗ ನೋಡಹೋದರೆ, ರಾಜರೆಂಬ ಅಭಿದಾನದಿಂದ ಮೆರೆಯುವ ಈ ಅವಿಚಾರಿ ವರ್ಗದ ಮೂಲಕ ಹಿಂದುಸ್ಥಾನವನ್ನು ದಬ್ಬಾಳಿಸಿಕೊಂಡು ಸ್ವಂತ ಲಾಭವನ್ನು ಸಾಧಿಸುವುದೇ ಬ್ರಿಟಿಷ್ ಸರಕಾರದ ಉದ್ದೇಶವಾಗಿ ತಿಳಿದುಬರುವುದು. ಹಾಗಲ್ಲವಾದರೆ ಬಟ್ಲರ್ ಕಮಿಟಿಯು ಪ್ರಜೆಗಳ ನ್ಯಾಯವಾದ ಕೇಳಿಕೆಗಳನ್ನೂ ಸಲಹೆಗಳನ್ನೂ ಮಾನಿಸುತ್ತಿತ್ತು. ಈಗ ಅವರ ವರ್ತನವನ್ನು ನೋಡಿದರೆ ರಾಜರ ಸಹಾಯ ಹೀನ ಪ್ರಜೆಗಳ ಕೂಗನ್ನು ಕೇಳುವವರೇ ಇಲ್ಲವೆಂದೂ ತೋರುವುದು.

ಮಿತಸಂತತಿ.

ಒಂದು ಸಮಯದಲ್ಲಿ ಅಸಭ್ಯವೆಂದು ಪರಿಗಣಿಸಲ್ಪಟ್ಟ ಈ ಸಮಸ್ಯೆಯು ಈಗ ಹೆಚ್ಚೆಚ್ಚು ಪ್ರಾಮುಖ್ಯತೆಯನ್ನು ತಾಳುತ್ತಾ ಬರುತ್ತಿದೆ. ಇದೇ ಸಮಸ್ಯೆಯನ್ನು ರವೀಂದ್ರರೂ, ಮಹಾತ್ಮಾಜಿಯವರೂ ಚರ್ಚಿಸಿರುವರೆಂದ ಮೇಲೆ ಇದು ಯಾವ ರೀತಿಯಲ್ಲಿ ಜನರ ಲಕ್ಷ್ಯಕ್ಕೆ ಬರುತ್ತಿದೆ ಎಂದು ತಿಳಿಯಬಹುದು. ಬೆಂಗಳೂರಿನಲ್ಲಿ ಕೆಲವು ದಿನಗಳ ಹಿಂದೆ ಇದೇ ಪ್ರಶ್ನೆಯು ಸರ್ ಎಮ್. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸರ್ ಶಿವಸ್ವಾಮಿ ಅಯ್ಯರರಿಂದ ಚರ್ಚಿಸಲ್ಪಟ್ಟಿತು. ಆದುದರಿಂದ ಇತರರೂ ಈ ಕಡೆಗೆ ಲಕ್ಷ್ಯಕೊಡುವುದು ಅವಶ್ಯವಿದೆಯಾಗಿ [illegible] ತೋರುವುದು. ಶ್ರೀ ರವೀಂದ್ರನಾಥ ಠಾಕೂರರು ಮಿತಸಂತತಿಯ ಬಗ್ಗೆ ಈಗಿನ ಕೃತ್ರಿಮ ಉಪಾಯಗಳನ್ನು ಅನುಸರಿಸಬಹುದಾಗಿ ಅಭಿಪ್ರಾಯಪಡುವಾಗ ಮಹಾತ್ಮಾ ಗಾಂಧಿಯವರು ಅವುಗಳನ್ನು ತೀರಾ ನಿರೋಧಿಸುವರು. ಮಹಾತ್ಮಾಜಿಯವರು ಆದರ್ಶವಾದಿಗಳು. ಸ್ವಭಾವತಃ ಅವರು ಆದರ್ಶಗಳನ್ನೇ ಬೋಧಿಸುವರು; ಆದರೆ ಆದರ್ಶಾನುಕರಣವು ಈ ವರೆಗೆ ಸಾಧಿಸಲ್ಪಟ್ಟಿಲ್ಲ, ಇನ್ನು ಸಾಧಿಸಲ್ಪಡಲಾರದು ಎಂಬುದನ್ನು ಖಂಡಿತವಾಗಿ ಹೇಳಬಹುದು. ಈ ಮಾತಿಗೆ ಅಪವಾದಗಳು (Exceptions) ಇಲ್ಲವೆಂದಿಲ್ಲ. ಆದರೆ ಮನಸ್ಸಿನ ವೈರಾಗ್ಯದಿಂದಲೂ, ಶಾಸ್ತ್ರೀಕತೆಯಿಂದಲೂ ಬ್ರಹ್ಮಚರ್ಯವನ್ನು ಪಾಲಿಸಲು ಹೊಂಟ ಜನರೊಳಗೆ ಮುಕ್ಕಾಲು ಪಾಲಿಗಿಂತಲೂ ಹೆಚ್ಚಿನವರು ಮಿಥ್ಯಾಚಾರಿಗಳೆಂದು ಲೋಕವನ್ನು ತಿಳಿದವರು ಹೇಳಬಲ್ಲರು. ಬ್ರಹ್ಮಚರ್ಯದ ಅಭಿಮಾನದಿಂದ ಲೋಕದಲ್ಲಿ ನಡೆಯುವ ದುಷ್ಕೃತ್ಯಗಳನ್ನೂ ದುರಾಚಾರಗಳನ್ನೂ ನೋಡಿದರೆ ಬ್ರಹ್ಮಚರ್ಯವನ್ನೂ ಆಚರಿಸುವುದೇ ತಪ್ಪೆಂದು ತೋರುವುದು. ಅಪರಲ್ಲೂ ವಿವಾಹಿತರಾದವರಲ್ಲಿ ಬ್ರಹ್ಮಚರ್ಯ ಜೀವನವನ್ನು ನಿರೀಕ್ಷಿಸುವುದೇ ತಪ್ಪಾದುದರಿಂದ ಮಹಾತ್ಮಾಜೀಯವರ ಆತ್ಮಸಂಯಮದ ಕ್ರಮವು ಕಾರ್ಯಕಾರಿಯಾದುದಲ್ಲವೆನ್ನಬೇಕಾಗುತ್ತದೆ. ಆದರೆ ಮೇರಿ ಸ್ಟೋಪ್ ಮುಂತಾದವರಿಂದ ಬೋಧಿಸಲ್ಪಡುವ ಕ್ರಮಗಳೂ ಎಷ್ಟರಮಟ್ಟಿಗೆ, ಅನುಕರಣೀಯವಿದೆಯೆಂದು ಹೇಳಬರುವುದಿಲ್ಲ. ಸರ್. ಶಿವಸ್ವಾಮಿ ಅಯ್ಯರರು ಇಂತಹ ಕ್ರಮಗಳು ಪೂರ್ಣ ಉಪಕಾರಿಯಾಗಿವೆಯೆಂದು ಹೇಳುವರು. ಈ ವಿಷಯದ ಮೇಲೆ ಕರ್ನಾಟಕದಲ್ಲಿಯೂ ಪುಸ್ತಕಗಳು ಪ್ರಕಟವಾಗುತ್ತಿವೆಯಾದುದರಿಂದ ಅಗತ್ಯವಿರುವವರು ಅವುಗಳನ್ನು ತರಿಸಿ ನೋಡಿಕೊಳ್ಳಬಹುದು.

ಸರ್ ಜ್ಹೋನ್ ಸ್ಯಾಮುನರು.

ಸರ್ ಜ್ಹೋನ್ ಸ್ಯಾಮುನರು ಹಿಂದೂಸ್ಥಾನಕ್ಕೆ ಸ್ವರಾಜ್ಯ ತರಲಿಕ್ಕಾಗಿ ಮಾತ್ರವೇ ಬಂದುದಲ್ಲ. ಅವರು ಹಿಂದೂಸ್ಥಾನದ ಇತರ ಕೆಲಸಗಳಲ್ಲಿಯೂ ತಮ್ಮ ಉಪಯೋಗಿತೆಯನ್ನು ತೋರುತ್ತಿರುವರು. ಇಡೀ ಹಿಂದೂಸ್ಥಾನವು ಅವರಿಗೆ ಹಿಂದೆ ಹೋಗುವಂತೆ ಕೊಟ್ಟ ಬುದ್ಧಿವಾದವು ಇನ್ನೂ ಅವರ ತಲೆಗೆ ಹೊಕ್ಕಿಲ್ಲ. ಹಿಂದುಸ್ಥಾನವೆಂದರೆ ಅಧಿಕಾರ ತೋರಿಸಲಿಕ್ಕೆ ಬಹಳ ಅನುಕೂಲವಾದ ಸ್ಥಳವೆಂದು ಅವರು ತಿಳಿದುಕೊಂಡಿರುವರು. ಬಂದ ಕೆಲವೇ ದಿನಗಳೊಳಗೆ ಅವರು ಫ್ರಿ ಪ್ರೆಸ್ ಒಫ್ ಇಂಡಿಯಾ (Free Press of India) ಎಂಬ ವಾರ್ತಾವಾಹಕ ಸಂಸ್ಥೆಯೊಡನೆ ಜಗಳ ಹೂಡಿ ಅವರ ಪ್ರತಿನಿಧಿಗಳನ್ನು ತಮ್ಮ ವಿಚಾರಣೆಗಳಿಂದ ಹೊರಗೆ ಹಾಕಿಬಿಟ್ಟರು. ಈ ಅಚಾತುರ್ಯಕ್ಕೆ ಎಂಗ್ಲೋ ಇಂಡಿಯನ್ ಪತ್ರಿಕೆಗಳಿಗೆ ಕೂಡ ಆಧಾರ ಸಿಕ್ಕಲಿಲ್ಲ. ಅಂತೂ ಆಳರಸರ ಪ್ರತಿನಿಧಿಗಳು ಸಾಮ್ರಾಜ್ಯದ ಆಳುವಿಕೆಯ ನೂತನ ಕ್ರಮವನ್ನು ಬೋಧಿಸುವ ಮೊದಲೇ ಆಚರಿಸಿ ತೋರಿಸಲು ನಿಶ್ಚಯಿಸಿರುವಂತೆ ತೋರುವುದು. ಫ್ರಿ ಪ್ರೆಸ್ಸಿನವರೂ ಸ್ವಾಭಿಮಾನವನ್ನು ಬಿಡದಿದ್ದುದು ಅಭಿನಂದನೀಯ. ಅಂತೂ ಬೊಯ್ಕಟ್ಟಿನ (Boycott) ಪರಿಣಾಮವು ಅವರ ಮೇಲೆ ಚೆನ್ನಾಗಿಯೇ ಆಗಿದೆ. ಎಲ್ಲಿ ನೋಡಿದರೂ ಅವರಿಗೆ ಕಾಣುವುದೇ ಅದು. ವ್ಯಾಸರಾಯರ ಎಕ್ಸಿಕ್ಯೂಟಿವ್ ಕೌನ್ಸಿಲಿನಲ್ಲಿ ಬಿ. ಎನ್. ಶರ್ಮರವರ ಸ್ಥಾನ ಹೊಸ ನೇಮಕಕ್ಕೆ ವ್ಯಾಸರಾಯರು ಜಯಕರನನ್ನು ಶಿಫಾರಸು ಮಾಡಿದಾಗ ಸ್ಯಾಮುನರಿಗೆ ಕಂಡುದು "ಬೊಯ್ಕಟ್ಟ್"! ಜಯಕರರು ಒಂದು ಸಮಯದಲ್ಲಿ ಬಹಿಷ್ಕಾರವಾದಿಗಳಾಗಿದ್ದು ಈಗ ಎಕ್ಸಿಕ್ಯೂಟಿವ್ ಕೌನ್ಸಿಲಿಗೆ ಸೇರುವುದು ತಮಗೆನೇ ಅವಮಾನವೆಂದು ತಿಳಿದು ಸ್ಯಾಮುನರು ತಮ್ಮ ಪ್ರೀತಿಯನ್ನು ಸಂಪಾದಿಸಿದ ಡಾ|| ಗೌರರನ್ನು ಶಿಫಾರಸು ಮಾಡಿದರು. ವ್ಯಾಸರಾಯ ಮತ್ತು ಸ್ಯಾಮುನರ ಈ ಇಬ್ಬರ ನ್ಯಾಯದಿಂದ ಮಿ| ಬಿ. ಎಲ್. ಮಿತ್ರರಿಗೇನೇ ಈ ಆಯ್ಕೆಯಾಯಿತು. ಅಂತೂ ಸರ್. ಜ್ಹೋನ್ ಸ್ಯಾಮುನರು ಜಯಕರರ ಮಟ್ಟಿಗಾದರೂ "ಬೊಯ್ಕಟ್ಟ್"ನ ಮೇಲೆ ವಿಜಯಿಗಳಾದರು.

ಸಾನ್‌ಫ್ರಾನ್ಸಿಸ್ಕೊ ಪಟ್ಟಣದ ಒಂದು ಬೇಂಕಿನ ಕಟ್ಟೋಣದ ಮೆಟ್ಟಿಗೆನೇ ದೊಡ್ಡದೊಂದು ಗಡಿಯಾರವು ಇಡಲ್ಪಟ್ಟಿದೆ. ನಮ್ಮೂರಿನ ಬೇಂಕುಗಳೂ ಇದನ್ನು ಅನುಕರಿಸಿದರೆ, ಉತ್ತಮ. ಬೇಂಕಿನ ಬಳಿಗೆ ಅರ್ಧಗಂಟೆ ಅಲ್ಲಿಯ ತಗಡು ಬೇಂಚುಗಳ ಮೇಲೆ ಕುಳಿತು ಅನಂತರ "ಬ್ಯಾಮಾಯಿತಯ್ಯಾ" ಎಂದು ಗದರಿಸಿ ಕೇಳಿಕೊಳ್ಳುವುದು ಕಡಿಮೆಯಾಗುತ್ತಿತ್ತು.

ನೋಟುಗಳು.

NOTES.

ಮದ್ರಾಸಿನ ಟ್ರಿಪ್ಲಿಕೇನಿನಲ್ಲಿ ಗಂಡನು ಹೆಂಡತಿಯನ್ನು ಕೊಂದ ಕೊಲೆಯಲ್ಲಿ ಗಂಡನಿಗೆ ೧೪ ವರುಷದ [illegible] ಗಿಯು ತಾನು ಸಾಯುವಾಗ್ಯೆ [illegible] ಸತ್ತೆನೆಂದು ಮರಣ ವಾಗ್ಮೂಲ ಕೊಟ್ಟರೂ [illegible] ಯಾದುದರಿಂದ ಹಾಗೆ ಹೇಳಿರಬಹುದೆಂದು [illegible] ಕ್ಯೂಟರರ ಹೇಳಿಕೆ. ಬಹುಶಃ [illegible] ನೋನ್ ಬ್ರಾಹ್ಮಣರಾಗಿದ್ದುದೇ ಶಿಕ್ಷೆಗೆ ಕಾರಣ.

• • •

ಬೆಂಗಳೂರಲ್ಲಿ ಹಿಂದೂಜನರು ಮಿತಿಮೀರಿದ ಉತ್ಸಾಹದಿಂದ ಹಿಂದೂ ಮಹಾಸಭೆ ಸ್ಥಾಪನೆ ಆಯಿತು. ಮುಂದಕ್ಕೆ!......

• • •

ಬೆಂಗಳೂರಲ್ಲಿ ನಡೆದ ಗಲಾಟೆಯ ವಿಚಾರಣೆಯ ಸಮ್ಬಂಧ ಪಬ್ಲಿಕ್ ಪ್ರೊಸಿಕ್ಯೂಟರರು ತಿಂಗಳ್ಕೆ ಸಾಲು ಮಾಡಿದ್ದಾರಂತೆ.

• • •

ಇವರ ಬೀಲಿನ ಹಣಕೊಟ್ಟರೆ ಖಜಾನೆ ಬರಿದಾಗುವ ಹೆದರಿಕೆ ಉಂಟಾಗಿದೆ. ಯಾರಿಗೆ!......

• • •

ಮೈಸೂರು ದಿವಾನರ ಸವಾರಿ ಬಂದುಹೋಯಿತು; ಹೊನ್ನಾವರಿಗೆ ಬಂದವರು ಮಂಗಳೂರು ನೋಡಲಿಕ್ಕೆ ಬಂದರಂತೆ. ಎಂಥ್ಯಾವಲ್ ಕಾನ್ಸಿಡೆನ್ಸ್.

• • •

ಕೆಲವರ ಹೇಳಿಕೆ ರೈಲ್ವೆಲ್ಯಾನು ತೆರೆಯುವ ಬಗ್ಗೆ ಎಂತ. ಯಾವ ದಾರಿಯಾಗಿ ಎಂಬುದು ತಿಳಿದಿಲ್ಲ!

• • •

ಬೆಂಗಳೂರ ವಿದ್ಯಾರ್ಥಿಗಳ ಮೇಲೆ ನಡೆಯಲಿಕ್ಕಿರುವ ಮೊಕದ್ದಮೆಯನ್ನು ತೆಗೆದುಹಾಕಿದರು. ಹಿಡಿದದ್ದು ಇತರ ಆರು ಜನರಿಗೆ, ವಿದ್ಯಾರ್ಥಿಗಳಿಂದ ಮುಚ್ಚಳಿಗೆ ತೆಗೆದುಕೊಂಡದ್ದೆ ಲಾಭ. ಏನೂ ಅರಿಯದ ಹುಡುಗರಿಗೆ ಯಾವತರದ ಚಾರ್ಜ್ ಸೀಟು ತರುವದು?

• • •

ಉಳಿದ ಆರು ಜನರ ಮೇಲೆ ಹೊರಿಸಿದ ಆಪಾದನೆಗಳನ್ನು ರುಜುಪಡಿಸಲಿಕ್ಕೆ ಪ್ರೊಸಿಕ್ಯೂಟರರ ಪ್ರಯತ್ನ. ಪ್ರಯತ್ನದ ಫಲ ಮುಂದಕ್ಕೆ.

• • •

ಕಾರ್ಕಳದಲ್ಲಿ ಇದೇ ಪಂಚಮಿಗೆ ದೀಪೋತ್ಸವದ ಗಡಿಬಿಡಿ. ಅದೇ ದಿವಸ ಸಾಯಂಕಾಲ ಕೋಣಗಳ ಓಟದ ಕಂಬಳ. ಅಂತೂ ಕಾರ್ಕಳದವರಿಗೆ ಒಂದೇ ದಿವಸ ಎರಡು ಹಬ್ಬಗಳು.

• • •

ಮಂಗಳೂರಲ್ಲಿ ಕೋಲೇರಾ ಪ್ರಾರಂಭ. ಮುನ್ಸಿಪಾಲಿಟಿಯವರಿಗೆ ಪುರುಸೊತ್ತೇ ಕಡಿಮೆ, ಅಲ್ಲಲ್ಲಿ ಗಟರುಗಳಲ್ಲಿ ನಿಲ್ಲುವ ನೀರು ತೆಗಿಸಿ ಕ್ಲೀನ್ ಇರಿಸಿದರೆ ರೋಗಬಾಧೆ ಕಡಿಮೆಯಾಗುವುದು.

• • •

ಕೆನರಾ ಹೈಸ್ಕೂಲಿನಲ್ಲಿ ನಡೆದ ಟೀಪಾರ್ಟಿಗೆ ಅಸ್ಪೃಶ್ಯರನ್ನು ಕರಲು ಹೇಳಿದ ಮಹನೀಯರ, ಗುಟ್ಟು ರಟ್ಟಾಯಿತು.

• • •

ನಮ್ಮ ಸ್ಯಾಮುನ್ ಸಾಹೇಬರ ಕಮಿಟಿಯವರ ರಿಪೋರ್ಟು ಇಷ್ಟರೊಳಗೆ ನೆಹರು ರಿಪೋರ್ಟು. ಪುರಗಳಿಗಿಂತ ಮಿಕ್ಕಿರಬಹುದು; ಕಮಿಟಿಯವರು ಈಗ ನ್ಯೂ ಡಿಲ್ಲಿ ಹೋಟೆಲ್‌ನಲ್ಲಿ. ಅಲ್ಲಿ ಕಾರ್ಯಗಳನ್ನು ಮುಗಿಸಿ ಅಲ್ಲಿಂದ ಕಲ್ಕತ್ತೆಕ್ಕೆ ಮುಂದುವರಿಸಿರುವರು.

• • •

ದಕ್ಷಿಣ ಕನ್ನಡಾ ಜಿಲ್ಲಾ ಪರಿಷತ್ತಿನ ಠರಾವು ಪುಸ್ತಕದಲ್ಲಿ ಬರೆದದೆ, ಪತ್ರಿಕೆಗಳಿಗೆ ಕಳುಹಿಸಿದೆ ಎಂದು ತಮ್ಮ ಕುಕರ್ಮ ವಾಚಸ್ಪತಿಯ ಹೇಳಿಕೆ. ಎಲ್ಲ ಪತ್ರಿಕೆಗಳಿಗೆ ಕಳುಹಿಸಿದ್ದಾರೆ ಎಂಬುದು ಕುತರ್ಕ ವಾಚಸ್ಪತಿಯವರ ಸಂಶಯದ ವಿಷಯವಾಗಿದೆ.

• • •

ವಿಲಾಯತಿಯಲ್ಲಿ ಮದುವೆಯಾಗುವ ಹೊಸಕ್ರಮ:— ವಧೂವರರು "ಟೆಲಿವಿಜನ್" ಎಂಬ ಯಂತ್ರದ ಮುಂದೆ ನಿಲ್ಲುವರು. ಹಲವು ಮೈಲುಗಳ ದೂರದ ದೇವಾಲಯದಲ್ಲಿದ್ದ ಪುರೋಹಿತನು ವ್ಯಾರ್ಲೆಸ್ ಯಂತ್ರದ ಮೂಲಕ ಅವರನ್ನು ಕಂಡು ಮಾತನಾಡಿಸಿ, ಮದುವೆ ಮಾಡಿ ಬಿಡುವನು. ಇನ್ನು ಪಾಶ್ಚಾತ್ಯರಿಗೆ ಮದುವೆಯಾಗಲಿಕ್ಕೆ ಚರ್ಚಿಗೆ ಹೋಗುವ ಚಿಂತೆಯೇ ಇಲ್ಲ!

• • • •

[illegible] ನೆಯ ವಿಧವಸಂದ [illegible]
[illegible] ವಿಭವ ಸಂವತ್ಸರದ ಅಶ್ವೀಜ
[illegible] ವರೆಗಿನ ಪಂಚಾಂಗ.
(ಗ್ರಹಣದೆಯ ವೃಶ್ಚಿಕ (ಖಾದರ್)

[illegible]	[illegible]	[illegible]	[illegible]	ನಕ್ಷತ್ರ	[illegible]	[illegible]	ಸೂರ್ಯ. ಉ	ಅಸ್ತ
1	[illegible]	[illegible]	[illegible]	[illegible]	[illegible]	[illegible]	6.40	6. 1
2	[illegible]	[illegible]	[illegible]	ಅಶ್ವೀಜ	[illegible]	[illegible]	6.41	6. 2
3	[illegible]	[illegible]	[illegible]	ಮಘಾ	[illegible]	[illegible]	6.41	6. 2
4	[illegible]	[illegible]	[illegible]	[illegible]	[illegible]	[illegible]	6.42	6. 2
5	[illegible]	[illegible]	[illegible]	[illegible]	[illegible]	[illegible]	6 42	6. 2
6	[illegible]	[illegible]	[illegible]	ಹಸ್ತಾ	[illegible]	[illegible]	6.42	6. 2
7	[illegible]	[illegible]	[illegible]	ಚಿತ್ರಾ	[illegible]	[illegible]	6.43	6. 2

ಮಂಗಳೂರಿನ ವಾಯುಸ್ಥಿತಿ.

Date	Temperature. ಉಷ್ಣ (ಕಾವು) Maximum		Minimum		Rainfall ಮಳೆ ದಿನದ ಮಳೆ	ಜುಮಲಾ ಮಳೆ.
23	91—	2	72—	6	—	—
24	91—	8	72—	2	—	—
25	93—	3	72—	8	—	—
26	93—	3	71—	7	—	—
27	93—	5	72—	5	—	—
28	91—	5	75—	0	—	—
29	89—	0	74—	8	—	— 124-58

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ದಪ್ಪಕ್ಕಿ	...	7– 12	8 – 12
ಸಣ್ಣ	...	7 – 4	7– 8
ಸುಗ್ಗಿ	...	6 – 12	7– 6
ಕಾತಿ	...	6 – 8	7– 8
ಊರ ಅನ್ನಲ್ ಬೆಳ್ತಿಗೆ	...	7– 8	8 – 14
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	...	12 – 8	–
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ	...	7 – 6	–
ಗೋಧಿ ಗೋಣಿ ಗಳ್ಳೆ	...	18 – 0	19 – 0
ಹುರುಳಿ ಗೋಣಿ ಗಳ್ಳೆ	...	7 – 0	9 – 8
ತೊಗರಿ ಗೋಣಿ ಗಳ್ಳೆ	...	13 – 12	15 8
ಕಡಲೆ ಗೋಣಿ ಗಳ್ಳೆ	...	14 – 8	15 – 8
ಕಡಲೆಂಬೇಳೆ ಗೋಣಿ ಗಳ್ಳೆ	...	18 – 0	26 – 0
ಉದ್ದು ಗೋಣಿ ಗಳ್ಳೆ	...	14 – 8	16 - .
ಹೆಸರು ಗೋಣಿ ಗಳ್ಳೆ	...	13 - 0	14 -
ಊರು ಬೆಲ್ಲ ಖಂಡಿ ಗಳ್ಳೆ	...	55 – 8	–
ಉಪ್ಪು ಗೋಣಿ ಗಳ್ಳೆ	...	4 – 8	4 – 12
ಮೆಣಸು ಖಂಡಿ ಗಳ್ಳೆ	...	130 - 0	–
[illegible] ಖಂಡಿ ಖಂಡಿ ಗಳ್ಳೆ	...	47 – 8	49 – 8
ಎಳ್ಳೆಂಡಿ ಖಂಡಿ ಗಳ್ಳೆ	...	35 – 8	47 – 8
[illegible] ಎಣ್ಣೆ ಮುಡಿ ಗಳ್ಳೆ	...	7 – 10	–
ಎಳ್ಳೆಣ್ಣೆ ಮುಡಿ ಗಳ್ಳೆ	...	8 – 0	8 – 6
[illegible] ಗಳ್ಳೆ	...	7 – 2	7 · 4
[illegible] ಮುಡಿ ಗಳ್ಳೆ	...	3 – 11	3 – 12
[illegible]	...	6 – 0	–
[illegible] ಮುಡಿ ಗಳ್ಳೆ		3 – 4	6 – 0
[illegible] ಮುಡಿ ಗಳ್ಳೆ	...	9 – 8	–
[illegible] ಮುಡಿ ಗಳ್ಳೆ	...	5 – 4	5 – 8
[illegible] ಖಂಡಿ ಗಳ್ಳೆ	...	385 – 0	400 – 0
[illegible] ಖಂಡಿ ಗಳ್ಳೆ	...	170 - 0	205 – 0
[illegible] ಖಂಡಿ ಗಳ್ಳೆ	...	505 – 0	520 – 9
[illegible] ಮುಡಿ ಗಳ್ಳೆ	...	52 – 0	54 – 8
[illegible] ಮುಡಿ ಗಳ್ಳೆ	...	3 – 4	3 – 8
[illegible] ಖಂಡಿ ಗಳ್ಳೆ	...	40 – 0	42 – 8
[illegible] ಗಳ್ಳೆ	...	16 – 8	16 – 12
[illegible] ಮುಡಿ ಗಳ್ಳೆ	...	21 – 0	22 –
[illegible] ಗಳ್ಳೆ	...	15 – 0	–
[illegible] ಮುಡಿ ಗಳ್ಳೆ	...	14 – 8	16 – 8
[illegible] ಗಳ್ಳೆ	...	18 – 6 – 6	–
[illegible] ಖಂಡಿ ಗಳ್ಳೆ	...	70 –	85 – 0

ಒಂದೇ ದಾರಿ

ಅಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿತ್ಯಂಟವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಸ್ತ್ರೀಯು ವಾಗಲಿ ಅಂಚೆಹಾಸಲುಆಗಲಿ
ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯ ವಿದ್ಯೆ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು,
ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ
ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1 – 0 – 0.
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಡಿ. ಜೂಲನ್ ವರ್ಟ್, ಕಂಪನಕಟ್ಟೆ, ಮಂಗಳೂರು. ದ. ಕನ್ನಡ



ತಯಾರಾಗಿವೆ ತಯಾರಾಗಿವೆ!!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ
ಬೇಕಾಗುವಂತಹ

ಚಕ್ರೋಲ್‌ಗಳು

ಮೂರು ಸ್ಯಾಜನಲ್ಲಿ ತಯಾರಿಸಲ್ಪಟ್ಟು
ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಪಟ್ಟಿ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ
ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದ ಪ್ರಸಿದ್ಧರಾದ 'ಧನ್ವಂತ್ರಿ ಶ್ರೀ ವೈದ್ಯರತ್ನ ಪರಮೇಶ್ವರ ಮುಸಾದ್' ಅವರ್ಗಳ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಶಸ್ತ್ರ ಶಾಸ್ತ್ರ ವೈದ್ಯರಿಂದ ತೆರೆಯಲ್ಪಟ್ಟ ಈ ಸ್ಥಳದಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳ್ ಇತ್ಯಾದಿ ಸಿದ್ಧ ಔಷಧಿಗಳು ನಮ್ಮಲ್ಲಿ ಮಾರಾಟಕ್ಕೆ ತಯಾರ ಇರುವವು. ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ತೊಡಗಿದ ಕಾಲ, ಪ್ರಾಯ, ನಿತ್ಯ ಆಹಾರದ ಕ್ರಮ, ವ್ಯಕ್ತಿ [illegible] ಮೊದಲಾದ ಅಮಲು ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ದಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ ಉಳ್ಳವನೋ ಎಂಬ ಸಹಿತ ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವರೆಯೂ ಸುಮ ಬಂದು ಸಂಬಂಧಪಟ್ಟ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ ಕಳ್ಳ ನಿಗಾ ಕೊಡಲಾಗುವದಲ್ಲದೆ ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮತ್ತಿನ ಮಾಹಿತಿಗಳನ್ನು ಕೊಡುವರೆಯೂ ರೋಗಕ್ಕೆ ಬೇಕಾದ ಮತ್ತು ವಿವರಿಸಿ ಅವನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವರೆಯೂ ಸದರಿ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

ವಾರದ ಪ್ರತಿ ಶನಿವಾರ ದಿವಸ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು.

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್, ಕಾಂಞಂಗಾಡ (ದ. ಕ.)

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(1933ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 1860ನೇ ಇಸವಿಯ XXIನೇ ಆಕ್ಟಿನನುಸಾರವಾಗಿ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಕೂಡ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ 'ಫಾರ್ಮಸಿ'ಯಲ್ಲಿ ಶಾಸ್ತ್ರರೀತ್ಯಾ ತಯ್ಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟಮಾಡಿ ಹುಟ್ಟಿಬರುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ಮುಂದರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತದೆ. 1927ನೇ ಇಸವಿಯಲ್ಲಿ ದಿಣ್ಣೂರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯ್ಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೆ ನಮ್ಮಲ್ಲಿ ತಯ್ಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

ಅನುಕ್ರಮಣಿಕೆ.

ಅಗ್ರಲೇಖ	ಪುಟ
ಸಮ್ಮತಿ ವಯಸ್ಸು	೬
ವಿದೇಶ ವರ್ತಮಾನ	"
ಸ್ವದೇಶಾಭಿಮಾನ... [illegible]	೪
[illegible]ಗಳು	"
ವರ್ತಮಾನ ಸಂಗ್ರಹಗಳು.	೦
ಒಳದೇಶ ವರ್ತಮಾನ	೬-೯
ದಕ್ಷಿಣ ಕನ್ನಡ— ಮಂಗಳೂರು, ಕಾಸರಗೋಡು, ಮುಲ್ಕಿ	೬
ವಿವಿಧ ಸಮಾಚಾರಗಳು	೯
ತಾಲೂಕು ಹವರಂಗ	೧೭-೯
ವಿದೇಶಿ ವಸ್ತು ಬಹಿಷ್ಕಾರ	೧೧
ಹಾಸ್ಯ	೧೨
ಪತ್ರವ್ಯವಹಾರ ೧	೩
ಉದುಪಿಯ ವಿಶೇಷ ಪತ್ರ	"

ಸ್ವದೇಶಾಭಿಮಾನಿ.

ತಾರೀಕು ೩ನೇ ಶುಕ್ರವಾರ ನವಂಬರ ೧೯೨೮

ಸಮ್ಮತಿ ವಯಸ್ಸು.

ಸಮ್ಮತಿ ವಯಸ್ಸನ್ನು (Age of Consent) ನಿರ್ಣಯಿಸುವ ಬಗ್ಗೆ ಏರ್ಪಟ್ಟ ಕಮಿಟಿಯು ಉತ್ತರ ಹಿಂದೂಸ್ಥಾನದಲ್ಲಿ ವಿಚಾರಣೆಗಳನ್ನು ನಡಿಸಿ ಈಗ ಮದ್ರಾಸಿನಲ್ಲಿ ಬಂದು ವಿಚಾರಣೆಗಳನ್ನು ನಡಿಸುತ್ತಿದೆ. ಮದ್ರಾಸು ಪ್ರಾಂತ್ಯವು ಮೊದಲಿಂದಲೂ ಈ ವಿಷಯದಲ್ಲಿ ಸಂಕುಚಿತ ಅಭಿಪ್ರಾಯವು ಉಳ್ಳದ್ದಾಗಿದೆ; ಆದುದರಿಂದ ಈ ಕಮಿಟಿಯ ಮುಂದೆ ವಿರೋಧಾಭಿಪ್ರಾಯಗಳೇ ಹೆಚ್ಚಾಗಿ ಬರುವುದು ಆಶ್ಚರ್ಯಕರವಲ್ಲ.

ಸಮ್ಮತಿ ವಯಸ್ಸನ್ನು ಈಗಿರುವುದಕ್ಕಿಂತಲೂ ಹೆಚ್ಚಿಸದಕ್ಕೆ ಏರಿಸುವ ಆವಶ್ಯಕತೆಯನ್ನು ನಾವು ಸೂಚಿಸುವಾಗ, ಅದರ ವಿರೋಧವಾಗಿ ಕೊಡಲ್ಪಡುವ ಅಭಿಪ್ರಾಯಗಳನ್ನು ನಾವು ಒಂದೇ ಸವನೆ ತಿರಸ್ಕರಿಸಲಾಗುವುದಿಲ್ಲ. ದಕ್ಷಿಣ ಹಿಂದುಸ್ಥಾನದಲ್ಲಿ ವಿಚಾರಕ್ಕಿಂತಲೂ ಆಚಾರಕ್ಕೆ ಬೆಲೆ ಹೆಚ್ಚಾದುದರಿಂದ ಸಮ್ಮತಿ ವಯಸ್ಸನ್ನೇರಿಸಲಿಕ್ಕೆ ಕೊಡಲ್ಪಡುವ ಸಾಂಪ್ರದಾಯವಾದಿಗಳ ವಿರೋಧವನ್ನು ನಾವು ಮಾನಿಸಲಿಕ್ಕಾಗುವುದಿಲ್ಲ. ಇಂತಹವರು ಕೊಡುವ ಹೆಚ್ಚಿನ ಅಭಿಪ್ರಾಯಗಳು ಸತರ್ಕವಾಗಿಂದೆ ಬರೇ ಆಚಾರದ ಮೌಢ್ಯವನ್ನೆ ತೋರಿಸುತ್ತವು.

ಕಾಶೀ ಕೃಷ್ಣಮಾಚಾರ್ಯರೆಂಬುವರ ಸಾಕ್ಷ್ಯವು ಈ ತರದ್ದೇ ಆಗಿದ್ದಿತೆನ್ನಬಹುದು. ಶ್ರೀ. ಎಮ್. ಕೆ. ಆಚಾರ್ಯರೂ ಕೂಡ ಆಚಾರದ ಮೋಹವನ್ನು ಬಿಡೆಯಲಾರದಾಗಿದ್ದರು. ಹಿಂದೂ ಮತದೊಳಗೆ ವಿವಾಹ ಸಂಬಂಧದ ಪ್ರಾಮುಖ್ಯತೆಯು ಮಹತ್ವದ್ದಾಗಿರುವುದಾದರೂ, ತತ್ವತಃ ಅದು ಹೇಗಿದ್ದರೂ ಕಾರ್ಯದಲ್ಲಿ ಆ ಮಹತ್ವವು ಇಲ್ಲವೆಂಬುದನ್ನು ಕೆಲವು ಸಂಗತಿಗಳನ್ನು ನೋಡಿದರೆ ಹೇಳದೇಕಾಗುವುದು. ಅಂತಹ ಮಹತ್ವಕ್ಕೆ ಪ್ರಾಮುಖ್ಯತೆಯು ಸಿಕ್ಕಬೇಕಾದರೆ ಎಂಟು, ಹತ್ತು ವರ್ಷಗಳ ವಧುಗಳ ಸಂಖ್ಯೆಯು ಕಡಿಮೆಯಾಗಲೇಬೇಕು.

ವಿವಾಹ ಪ್ರಾಯವನ್ನು ನಿಶ್ಚಯಿಸಬೇಕೋ, ಇಲ್ಲವೆ ಸಮ್ಮತಿ ವಯಸ್ಸನ್ನು ಮಾತ್ರ ನಿಶ್ಚಯಿಸಿದರೆ ಸಾಕೋ ಎಂಬ ಪ್ರಶ್ನೆಯೂ ಸಮಿತಿಯ ಮುಂದೆ ಇದೆ. ವಿವಾಹ ವಿಷಯಗಳನ್ನು ಬರೇ ಶಾಸ್ತ್ರಾಧಾರದ ಮೇಲಾಗಲಿ, ವಿಜ್ಞಾನದ ಆಧಾರದ ಮೇಲಾಗಲಿ ನಿರ್ಣಯಿಸಲಾಗುವುದಿಲ್ಲವೆಂದೂ, ದಾಂಪತ್ಯವು ಇವೆರಡನ್ನೂ ಮೀರಿದ ಮಾನವ ಮಾನಸಿಕತೆಯ ಮೇಲೆಯೇ ಹೊಂದಿಕೊಂಡಿದೆಯೆಂಬುದನ್ನೂ ಮೊದಲಾಗಿ ಮನಸ್ಸಿನಲ್ಲಿ ಡಕಕ್ಕದ್ದು.

ಸಮ್ಮತಿ ವಯಸ್ಸಿನ ನಿರ್ಣಯದ ಕಮಿಟಿಯ ಮುಂದೆ ಬರುವ ಸಾಕ್ಷ್ಯಗಳನ್ನು ನೋಡಿದರೆ ಪ್ರಶ್ನೆಯ ಈ ಭಾವದ ಕಡೆಗೆ ಲಕ್ಷ್ಯವಿರುವಂತೆ ತೋರುವುದಿಲ್ಲ. ಸುಧಾರಕರು ಬರೇ ವಿಜ್ಞಾನದ ಸೂತ್ರಗಳನ್ನೇ ಮಾತನಾಡಿ ಹೋಗುವರು; ಹಳೇ ಪದ್ಧತಿಯವರು ಬರೇ ಶಾಸ್ತ್ರಗಳನ್ನೇ ತರ್ಕಿಸಿ ಹೋದರು. ಇವೆರಡರ ಮಧ್ಯದಲ್ಲಿ ನೂತನ ಚೇತನದ ಅಪರಿಚಿತರಿಬ್ಬರು ಸಮ್ಮಿಲಿಸಿ ಅಪೂರ್ವ ಸ್ನೇಹದಿಂದ ಒಟ್ಟಾಗಿ ಜೀವಮಾನವನ್ನು ಕಳೆಯಲಿದೆಯೆಂಬ ವಿಚಾರವೇ ಮರೆತುಹೋಗಿದೆ.

ಆದ್ದರಿಂದ ಸಮ್ಮತಿ ವಯಸ್ಸನ್ನೇ ನಿರ್ಣಯಿಸಿ ಪ್ರಯೋಜನವಾದೀತೆಂದು ಹೇಳಲಾಗುವುದಿಲ್ಲ. ವಿವಾಹವಾದ ಮೇಲೆ ಗಂಡಹೆಂಡರು ಒಟ್ಟಾಗಿ ಕಲೆತು ಇರುವ ಸಮಯದಲ್ಲಿ ಸಮ್ಮತಿ ವಯದ ಕಾನೂನೊಂದು ಅನ್ವಯವಾಗುವುದು ತೀರಾ ಅಸಂಭವವಿದೆ. ಅಂತಹ ಕಾನೂನೊಂದು ಏರ್ಪಟ್ಟರೆ ಅದು ಕಾರ್ಯಕಾರಿಯಾಗಲಾರದು. ಕಾನೂನಿನ ವಿರೋಧವಾಗಿ ನಡೆದವರನ್ನು ಶಿಕ್ಷಿಸುವುದು ಅಸಾಧ್ಯವಾಗಿ ಪರಿಣಮಿಸುವುದು. ಆದುದರಿಂದ ಸಮ್ಮತಿ ವಯಸ್ಸನ್ನು ನಿರ್ಣಯಿಸುವುದಕ್ಕಿಂತಲೂ ವಿವಾಹ ವಯಸ್ಸನ್ನೇ ನಿರ್ಣಯಿಸುವುದು ಉತ್ತಮವಾಗಿರುತ್ತದೆ.

ವಿವಾಹದ ವಿಷಯದಲ್ಲಿ ಸರಕಾರದವರು ಕೈಯಿಕ್ಕದಾರದೆಂಬ ಮಾತನ್ನು ನಾವು ಒಪ್ಪಲಾರೆವು. ಜನಾಂಗದ ದೇಹಧಾರ್ಢ್ಯದ ವಿಷಯದಲ್ಲಿ ಸರಕಾರವು ಅನುಕೂಲವಾದ ಸುಧಾರಣೆಯನ್ನು ಕಾನೂನಾಗಿ ಮಾಡುವುದೇ ಒಳ್ಳೆಯದು.

ವಿವಾಹ ವಯಸ್ಸನ್ನು ನಿರ್ಣಯಿಸುವಾಗ, ವಯಸ್ಸಿನ ವಿಷಯದಲ್ಲಿ ವೈದ್ಯರಲ್ಲಿಯೂ ಭಿನ್ನಾಭಿಪ್ರಾಯವಿದೆಯೆಂಬುದನ್ನು ನೆನಪಿನಲ್ಲಿ ಡಕಕ್ಕದ್ದು. ಪಾಶ್ಚಾತ್ಯರಲ್ಲಿ ಕೆಲವು ಕಡೆಗಳಲ್ಲಿ ವಿವಾಹ ವಯಸ್ಸು ಹೆಚ್ಚುತ್ತ ಹೋಗಿ ಈಗ ಪುನಃ ಕಡಿಮೆಯಾದರೆ ಒಳ್ಳೆಯದೆಂಬ ಅಭಿಪ್ರಾಯವು ಪುಷ್ಟೀಕರಿಸಲ್ಪಡಲು ಆರಂಭಿಸಿಯದೆ. ಅತೀ ಹೆಚ್ಚಾದ ಪ್ರಾಯವು ವಿವಾಹಕ್ಕೆ ಹಿತಕರವಲ್ಲವೆಂಬುದರ ವಿಷಯದಲ್ಲಿ ಸಾಮಾನ್ಯವಾಗಿ ಎಲ್ಲರ ಒಪ್ಪಿಗೆ ಇರುತ್ತದೆ.

ಪ್ರಕೃತ ಪ್ರಾಯನಿರ್ಣಯದಲ್ಲಿ ಸಾಂಪ್ರದಾಯವಾದಿಗಳ ಹದಿನೆರಡರಿಂದ ಸುಧಾರಕರ ಹದಿನೆಂಟರ ವರೆಗೆ ಮತಭೇದವಿದೆ. ಆದರೆ ಹದಿನಾಲ್ಕನೇ ವಯಸ್ಸಿನ ಮಟ್ಟಿಗೆ ಯಾರೂ ವಿರೋಧಿಸುವ ಕಾರಣವು ನಮಗೆ ತೋರುವುದಿಲ್ಲ. ಸುಧಾರಕರಿಗೆ ಬೇಕಾದ ಸಾಮಾನ್ಯ ವಿದ್ಯಾಭ್ಯಾಸವು ಈ ಪ್ರಾಯದೊಳಗೆ ಕೊಡಬಹುದು; ಈ ಪ್ರಾಯದಲ್ಲಿ ಹುಡುಗಿಯ ದೇಹದ ಬೆಳವಣಿಗೆಯು ಸಾಕಷ್ಟು ಚೆನ್ನಾಗಿ ಆಗುವುದು; ಮತ್ತು ಹದಿನಾಲ್ಕನೇ ವಯಸ್ಸಿನಲ್ಲಿ ವಿವಾಹಿತಳಾದವಳು ಹದಿನೈದಕ್ಕಿಂತ ಮೊದಲು ಪ್ರಸೂತಿಯಾಗುವ ಹಾಗೆ ಇರಲಾರದುದರಿಂದ ದೇಹಧಾರ್ಢ್ಯವು ವಿವಾಹಕ್ಕೆ ಸಾಕಷ್ಟಿರುವುದು. ಸಾಂಪ್ರದಾಯವಾದಿಗಳು ಹೆದರುವ ಪಾವಿತ್ರ್ಯದ ಭಂಗವು ಈ ಪ್ರಾಯಕ್ಕೆ ಸಂಬಂಧಿಸಲಾರದುದರಿಂದ ಅವರೂ ಈ ಪ್ರಾಯವನ್ನು ವಿರೋಧಿಸಲಾರರು.

ವಿದೇಶ ವರ್ತಮಾನ.

—ಅರಸರು ಸ್ವಲ್ಪ ಅಸೌಖ್ಯದಿಂದ ಇರುತ್ತಿದ್ದರೂ ಈಗ ಸೌಖ್ಯವಾಗುತ್ತಾ ಬರುತ್ತಿರುವರು.

— ಬ್ರಿಟನ್ನಿನಲ್ಲಿ ಪೆನ್ನಿ ಪೋಸ್ಟೇಜನ್ನು ಜ್ಯಾರಿಗೆ ತರುವರೆಂಬ ಬಹಳ ವರ್ತಮಾನವಿದ್ದರೂ ಇದು ಈಗ ಸುಳ್ಳೆಂದಾಗಿದೆ.

— ಇಂಗ್ಲೆಂಡಿನಲ್ಲಿ ಒಂದು ವಾರದ ಹಿಂದೆ ಬಹಳ ರಭಸದಿಂದ ಬಿರುಗಾಳಿಯೂ, ಮಳೆಯೂ ಬಂದು, ಬಹಳ ನಷ್ಟವನ್ನುಂಟುಮಾಡಿದ್ದಿತು. ಅದರ ಒಂದು ವಾರದ ತರುವಾಯ ಪುನಃ ಅಂಥದೇ ಒಂದು ಬಿರುಗಾಳಿಯು ಬಂದು ಎರಡನೆಯ ಸಲವೂ ಬಹಳ ತೊಂದರೆಯನ್ನುಂಟು ಮಾಡಿತು.

— ಚೀನದಲ್ಲೆಲ್ಲಾ ಇದು ವರೆಗೆ ಚಾಂದ್ರಮಾನ ಲೆಖ್ಖವನ್ನು ಅನುಸರಿಸುತ್ತಿದ್ದರು. ಆದರೆ ಇನ್ನು ಮುಂದೆ ಸೌರಮಾನ ಲೆಖ್ಖವನ್ನು ಅನುಸರಿಸಬೇಕೆಂದು ಮಂತ್ರಿಗಳು ಹುಕುಮು ಕೊಟ್ಟಿರುವರು.

— ಅಮೇರಿಕದ ಒಬ್ಬ ದೊಡ್ಡ ಧನಿಕನಾದ ಥೋಮಸ್ ನೊರ್ಟನ್ ರೈನನೆಂಬವನು ಮೃತಪಟ್ಟನು. ಆತನ ಕೂಡೆ ೩೦ ಮಿಲಿಯ ಸ್ಟರ್ಲಿಂಗು ಬೆಲೆ ಬಾಳುವ ಐಶ್ವರ್ಯವಿದ್ದಿತೆಂದು ಅಂದಾಜುಮಾಡಲಾಗಿಯದೆ.

— ಸ್ಪೈನಿನಲ್ಲಿ ಹತ್ತಿಯ ಮೇಲಿನ ಸುಂಕವನ್ನು ಶೇಕಡಾ ೧೦ರಿಂದ ೪೦ರ ವರೆಗೆ ಏರಿಸಿರುವುದನ್ನು ಸರಕಾರದ ಕಮಿಟಿಯವರು ಪರೀಕ್ಷಿಸಿ ಅನುಮೋದಿಸಿರುವರು.

— ಲಾಲಾ ಲಜಪತರಾಯರ ನಿಧನದಿಂದ ತಮಗಾದ ಅಪಾರ ದುಃಖವನ್ನು ವ್ಯಕ್ತಪಡಿಸುವ ಸಲುವಾಗಿ ಲಂಡನಿನಲ್ಲಿರುವ ಹಿಂದೂಗಳು ಸಭೆ ಸೇರಿದರು. ಈ ಸಂದರ್ಭದಲ್ಲಿ ಕರ್ನಲ್ ವೆಡ್ಗವುಡ್ಡರೂ, ಎಸ್. ಸಕಲತವಾಲಾರವರೂ ಲಾಲಾಜಿಯವರ ಅವಿಶ್ರಾಂತವಾದ ಕೆಲಸದ ವಿಷಯವಾಗಿ ಉನ್ನತವಾದ ಭಾಷಣಗಳನ್ನು ಮಾಡಿದರು. ಕೊನೆಗೆ ಸ್ವಾತಂತ್ರ್ಯದ ಸಲುವಾಗಿ ಅನುನಿತ್ಯ ಕಾದಾಡಿ, ಕಷ್ಟಗಳನ್ನು ಗಣಿಸದೆ ಕೊನೆಗೆ ಸ್ಯಾಮನ್ ಬಹಿಷ್ಕಾರವನ್ನು ಕೈಕೊಂಡು ವೀರಮರಣವೆನಿಸಿಕೊಂಡ ಲಾಲಾಜಿಯವರ ಅಕಾಲ ನಿಧನದ ಸಲುವಾಗಿ ಈ ಸಭೆಯು ದುಃಖವನ್ನು ಸೂಚಿಸುತ್ತದೆ ಎಂಬ ಠರಾವು ಬಹುಮತವಾಗಿ ಮಂಜೂರಾಯಿತು.

— ಅಟ್ಲಾಂಟಿಕ್ ಸಮುದ್ರದಲ್ಲಿ ಮುಳುಗಿ ಹೋದ "ವೆಸ್ಟ್ರಿಸ್" ಎಂಬ ಹಡಗದಲ್ಲಿ ಬದುಕಿ ಉಳಿದ ಒರಿಸ್ ಸ್ಟೀವನ್ಸ್ ಎಂಬ ಬೇಂಕರನು ತನ್ನ ಹೆಂಡತಿಯು ಕಳೆದು ಹೋದುದರಿಂದ ತನಗೆ ೧೦,೪೦೦ ಪವನ್ನುಗಳು ನಷ್ಟವಾಗಿರುತ್ತವೆಂದೂ, ಅವು ತನಗೆ ಬರಬೇಕೆಂದೂ, ವ್ಯಾಜ್ಯವನ್ನು ಹೂಡಿರುವನು. ಈ ಅವಘಡಕ್ಕೆ ಸಂಬಂಧಿಸಿದ ಮೊದಲನೆಯ ವ್ಯಾಜ್ಯ ಇದು.

— ಅಮೇರಿಕದ ಒಬ್ಬ [illegible] ದೊಡ್ಡ ದೊರೆಯೊಬ್ಬನು ಕಂಡು ಹಿಡಿದಿರುವನು. ಈ [illegible] ವಾಗಿದ್ದರೂ ಬರೇ ಕಣ್ಣಿಗೆ ಕಾಣುವುದಿಲ್ಲವಂತೆ.

— ಚೀನದ ನೆನಕಿಂಗ ಪಟ್ಟಣದ ಎರಡು [illegible] ಹಗಲು ಹೊತ್ತಿನಲ್ಲಿ ಕೆಲಸದ ಪಡೆಯುತ್ತಿರುವಾಗ [illegible] ಕೋತು ಕಳ್ಳರು ಬಂದು ಗಿರ್ಣ್ಯಕರುಗಳನ್ನು [illegible] ಗದರಿಸಿ ಸುಮ್ಮನಿರಿಸಿ, ಸಾವಿರಾರು ಡೊಲ್ಲರುಗಳನ್ನು [illegible] ಕಳವುಮಾಡಿ ಓಡಿ ಹೋಗಿರುವರು. ಈ ಕಳ್ಳರ ಧೈರ್ಯ [illegible] ಮಾನ್ಯವಾದುದು.

— ಯುದ್ಧದ ಸಮಯದಲ್ಲಿ ಯುನೈಟೆಡ್ ಸ್ಟೇಟ್ಸಿಂದ ಸ್ವತಂತ್ರ ಪಡೆದ ಸಾಲದ ಮರುಪಾವತಿಯು ವರ್ಷಕ್ಕೆ [illegible] ಗಳು, ೧೯೩೩ನೇ ಇಸವಿಯ ತರುವಾಯ ಇದು [illegible] ಏರುವುದು.

— ಬಲುಚಿಸ್ಥಾನದ ಕಲಾತ್ತಿಯ ಗ್ಯಾದಿಂದಲ್ಲಿ [illegible] ನಾಗಿದ್ದ ಲಾಲ್ ಖಾನನು ಆತ್ಮಿಗೆಗೆ ನೇಣು ಹಾಕಿ ಆತ್ಮಹತ್ಯವನ್ನು ಮಾಡಿಕೊಂಡಿರುವನು. ಕೆಲಸವು ವಿಪರೀತವಾಗಿದ್ದುದರಿಂದ ಆತನ ಮನಸ್ಸು ಸ್ವಸ್ಥವಾಗಿರದಿದ್ದುದೇ ಇದಕ್ಕೆ ಕಾರಣವಂತೆ. ಲಾಲ್ ಖಾನನು ಇದು ವರೆಗೆ ಚೆನ್ನಾಗಿ ಕೆಲಸಮಾಡಿದವನು. ಆತನ ಕೆಲಸಗಳಿಂದ ಸರಕಾರಕ್ಕೆ ಪರಿಪೂರ್ಣ ತೃಪ್ತಿಯುಂಟಾಗಿತ್ತು.

— ದಕ್ಷಿಣ ಆಫ್ರಿಕದ ನದಿಗಳು ಬೇಸಿಗೆ ಕಾಲದಲ್ಲಿ ಒಣಗಿ ಹೋದ ಮೇಲೆ ಅಡಿಯ ಮಣ್ಣಿನಲ್ಲಿ ಮಣ್ಣಿನ ಗುಪ್ಪೆಗಳನ್ನಾಗಿ ಮಾಡಿ ಒಂದು ಜಾತಿಯ ಮೀನು ಆ ಗುಪ್ಪೆಯೊಳಗಡೆ ವಾಸಿಸುವುವಂತೆ, ಈ ಮೀನುಗಳು ನದಿಯು ಯಾವಾಗ ತುಂಬುವುದು ಎಂದು ಕಾದಿರುವವು. ಬೇಸಿಗೆ ಕಾಲದಲ್ಲಿ ಈ ಗುಪ್ಪೆಗಳನ್ನು ಒಡೆದರೆ ಈ ಮೀನುಗಳು ಜೀವ ಸಿಗುವವು.

— ಕೊಪ್ಪಾರೀಕದ ಸೆನ್ ಜೋಸ್ ಎಂಬಲ್ಲಿ ಇಬ್ಬರು ದಂಪತಿಗಳು. ಗಂಡನು ೮೬ ವರುಷ ಪ್ರಾಯದ ಮೆಸ್ಸುವೆಲ್ ಫೆರ್ನಾಂಡಿಸನೆಂಬವನು. ಆತನ ಹೆಂಡತಿಯಾದ ತಿಯೋದೂರಾ ಎಂಬವಳು ೮೫ ವರುಷ ಪ್ರಾಯದವಳು. ಅವರಿಬ್ಬರಿಗೂ ಮದುವೆಯಾಗಿ ೭೦ ವರುಷಗಳಾದವು. ಇದು ವರೆಗೆ ಅವರಿಗೆ ೨೫ ಮಕ್ಕಳು ಹುಟ್ಟಿರುವವು. ಅವುಗಳಲ್ಲಿ ಆರು ಮಕ್ಕಳು ಅವರ ಜತೆ. ಈ ಎಲ್ಲಾ ಮಕ್ಕಳೂ ಬಹು ಸೌಖ್ಯವಾಗಿರುವವಂತೆ.

— ಸೈಂಟ್ ಥೋಮಸ್ ಇಗರ್ಜಿಯ ಪಾದ್ರಿಯಾದ ವಿಲ್ಲಿಯಮ್ ಒವೆನನೆಂಬವನು ತನ್ನ ೮೩ ವರ್ಷದ ಸರ್ವೀಸಿನ ತರುವಾಯ ಕೆಲಸದಿಂದ ನಿವೃತ್ತನಾಗಲಿರುವನು. ಇದು ವರೆಗೆ ಆತನು ೩,೦೦೦ ಮದುವೆಗಳಿಗೂ, ೬,೦೦೦ ಬೆಪ್ತಿಸ್ಮಗಳಿಗೂ, ೭,೦೦೦ ಮರಣ ಸಂಸ್ಕಾರಗಳಿಗೂ ಹಾಜರಾಗಿದ್ದನಂತೆ.

— ಟುನಿಸ್ ಎಂಬಲ್ಲಿ ಒಂದು ಇಗರ್ಜಿಯು ಮೊದಲಿದ್ದ ಸ್ಥಳದಿಂದ ೧೫ ಅಡಿ ದೂರಕ್ಕೆ ಸರಿದಿರುವುದು. ಅದಲ್ಲದೆ ಮನೆ ಮಠಗಳು ಒಂದು ಕಡೆಗೆ ಬಾಗಿರುವವು. ಆ ಹಳ್ಳಿಯೇ ಚಲಿಸುತ್ತಿದೆಯೆಂದು ಅಲ್ಲೆಲ್ಲ ಗಲಭೆಯುಂಟಾಗಿರುತ್ತದೆ.

— ಜೋಹಾನ್ಸ ಬರ್ಗಿನ ಪ್ಲೇಗ್ ರೋಗದಿಂದ ಕೂಡಿದ ಇಲಿಗಳು ದಾರವಂತೆ ಪಟ್ಟಣದ ಸುತ್ತಲೂ ವಿಷದ ಗಾಳಿಯನ್ನು ಪ್ರತಿ ಇಲಿಯ ಬಿಲಕ್ಕೆ ಬಿಟ್ಟ ಆರ್ಸೆನಿಕ್ ಎಂಬ ಔಷಧವನ್ನು ಸುರಿದಿರುವರು.

— ಪ್ರಿನ್ಸ್ ಒಫ್ ವೇಲ್ಸರು ಪಶ್ಚಿಮ ಆಫ್ರಿಕದಲ್ಲಿ ೫ ಸಿಂಹಗಳನ್ನು ಕೊಂದಿರುವರು. ಇವುಗಳಲ್ಲಿ ದೊಡ್ಡ ಸಿಂಹವು ೮ ಫೀಟು ೮ ಇಂಚು ಉದ್ದವಾಗಿದ್ದಿತು.

— ಪೆಕಿಂಗ್‌ನಲ್ಲಿ ಆಶ್ಚರ್ಯ ತರದ ಟ್ರಾಮ್‌ವೇ ಕೆಲಸಗಾರರ ಮುಷ್ಕರವಾದುದು. ಮುಷ್ಕರವೆಂದು ಅವರು ಕೆಲಸಕ್ಕೆ ಬಾರದೆ ಇರಲಿಲ್ಲ. ಕಂಡಕ್ಟರರಿಗೂ ಡ್ರೈವರರಿಗೂ ಅಧಿಕಾರಿಗಳ ಮೇಲೆ ಬಲವಾದ ಸಿಟ್ಟು ಇದ್ದಿತು. ಅವರು ಎರಡು ದಿನಗಳ ವರೆಗೆ ಬಂದವರನ್ನೆಲ್ಲಾ ಧರ್ಮಾರ್ಥವಾಗಿ ಒಂದೆಡೆಯಿಂದ ಒಂದೆಡೆಗೆ ಕರೆದೊಯ್ದು ಅಧಿಕಾರಿಗಳಿಗೆ ನಷ್ಟವಾಗುವ ಹಾಗೆ ಮಾಡಿದ್ದರು. ಹೀಗಾದುದರಿಂದ ಅಧಿಕಾರಿಗಳೊಳಗೂ ಕೆಲಸಗಾರರೊಳಗೂ ಬೇಗನೆ ರಾಜಿ ಪಂಚಾಯಿತಿಕೆಯಾಯಿತು.

— ಸರ್ ತುಕೋಜಿರಾಯರ ನವವಧು ಶರ್ಮಿಷ್ಠಾದೇವಿ (ಮಿಸ್ ಮಿಲ್ಲರ) ಇವರಿಗೆ ಸನ್ನಿವಲ್ಲಿಯೇ ಒಂದು ಮಗು ಹುಟ್ಟಲಿರುವದೆಂದು ಅವರ ಮಿತ್ರಿಯರು ಅಭಿಪ್ರಾಯಪಡುವರು.

— ನೈಲ ನದಿಯಲ್ಲಿ ಕೆಲವು ಹೂಮಾರುವ ಹುಡುಗಿಯರು ಒಂದು ಚಿಕ್ಕ ದೋಣಿಯಲ್ಲಿ ಕುಳಿತು ದಾಟುತ್ತಿರುವಾಗ ದೋಣಿಯು ಕವಚಿಬಿದ್ದು ೨೮ ಮಂದಿ ಮುಳುಗಿದರು. ಒಬ್ಬ ಯುವಕನು ಬಹು ಸಾಹಸದಿಂದ ೯ ಜನರನ್ನು ಬದುಕಿಸಿದನು. ಬಳಲುವಿಕೆಯು ಹೆಚ್ಚಾದುದರಿಂದ ತಾನು ಮಾತ್ರ ಸತ್ತು ಹೋದನು.

ಒಳದೇಶ ವರ್ತಮಾನ.

— ಕೊಚ್ಚಿಯಲ್ಲಿ ಒಂದು ಉತ್ಸವದ ಸಲುವಾಗಿ ಕೆಲವು ಮನುಷ್ಯರು ಕೂಡಿ ಪಟಾಕಿಯನ್ನು ತಯಾರಿಸುತ್ತಲಿದ್ದರು. ಅವರೇ ಸೇದಿ ಬಿಸಾಡಿದ ಬೀಡಿಯ ತುಂಡು ಮದ್ದಿಗೆ ತಾಗಿ ಬೆಂಕಿ ಹಿಡಿದು ಮದ್ದು ಒಡೆದು ಹೋಗಿ ಒಬ್ಬನು ಆಗಲೇ ಸತ್ತುಹೋದನು. ಉಳಿದವರು ಬಹಳ ಘಾಯ ಹೊಂದಿದರು.

— ಹೈದರಾಬಾದಿನ ನಿಜಾಮರು ತನ್ನ ಸಂಚಾರವನ್ನು ಮುಗಿಸಿ ರಾಜ್ಯಕ್ಕೆ ಹಿಂತಿರುಗುವರು. ಅವರು ಬಂದೊಡನೆ ಅವರ ರಾಜ್ಯದ ಪ್ರಜೆಗಳು ಅವರಿಗೆ ಮಾನಪತ್ರ ಮೊದಲಾದವುಗಳನ್ನು ಕೊಟ್ಟು ಚೆನ್ನಾಗಿ ಸತ್ಕರಿಸಿದರು.

— ಮಿರಾಜದ ಅರಸರು ಒಮ್ಮೆ ಕೊಲ್ಹಾಪುರಕ್ಕೆ ತನ್ನ ನಡೆಯುತ್ತಿರುವರು. ತನ್ನ ಪ್ರಜೆಗಳು ತನ್ನ ರಾಜಧಾನಿಗೆ ಬಂದು ಎರಡನೆಯ ಸಲ ಮಾಡಿದ ಸೆಟ್ಲಮೆಂಟಿನಲ್ಲಿ ವಿಚಾರಣೆಯನ್ನು ಮಾಡಬೇಕೆಂದು ಕೇಳಿಕೊಂಡಾಗ ವಿಚಾರಣೆಯು ಪ್ರಾರಂಭಿಸಲ್ಪಡುವದೆಂದಿದ್ದರು. ಆದರೆ ಅವರು ಹಿಂತಿರುಗಿ ಹೋದ ಮೇಲೆ ವಿಚಾರಣೆಯು ಅಗತ್ಯವಿಲ್ಲವೆಂದು ಹೇಳುತ್ತಿರುವರು.

— [illegible] ಈ ವರ್ಷ ಪ್ರಾಯದವನಾಗಿದ್ದು [illegible] ಗ್ರಹಣಾಲಯ ಸೂರ್ಯನನ್ನು ಎವೆಯಿಕ್ಕದೆ [illegible] ಕೆಲಕೊಂಡಿರುವನಂತೆ. ಕೆಲಸಾ ತನ್ನ [illegible] ಮೊದಲು ಅತ್ತನು ಮತ್ತು ಗ್ರಹಣದ [illegible] ಹೊರಗೆ ಹೋದನು. ಅಲ್ಲಿಂದಲೇ [illegible] ಸಲ ಸೂರ್ಯನನ್ನ ನೋಡಿದನು. ಒಂದೆರಡು [illegible] ಕಣ್ಣುಗಳು ಕುರುಡಾಗಿ ಹೋದವು. ಒಬ್ಬ [illegible] ಅವನ ಕಣ್ಣುಗಳ ಚಿಕಿತ್ಸೆಯನ್ನು ಮಾಡಿ ಸ್ವಲ್ಪ ಸ್ವಲ್ಪ ಕಾಣುವ [illegible] ಮಾಡಿರುವನು.

— [illegible] ಕೋರ್ಟಿನಲ್ಲಿ ಹಿಂದೀ ಭಾಷೆಯನ್ನು ಒಪ್ಪತಕ್ಕ [illegible] ರಬೇಕೆಂದು ಮೈಸೂರಿನಲ್ಲಿ ನಿಶ್ಚಯವಾಗಿರುತ್ತದೆ.

— [illegible] ಗಿರಣಿ ಮುಷ್ಕರಗಳು ಇನ್ನೂ ಕೊನೆಗಂಡಿಲ್ಲ. ಒಂದು ಗಿರಣಿಯ ಮುಷ್ಕರವು ನಿಲ್ಲುತ್ತಾ ಬರುವಾಗ, ಇನ್ನೊಂದು ಗಿರಣಿಯ ಮುಷ್ಕರವು ಪ್ರಾರಂಭಿಸುವದು.

— [illegible] ಸಂಸ್ಥಾನದ ಗವರ್ನರರಾದ ಸರ್ ಮಾಲ್ಕಮ್ [illegible] ಯವರು ದಶಂಬರ ೨೨ನೇ ತಾರೀಕಿನಿಂದ ೮ ತಿಂಗಳ ರಜೆಯ ಮೇಲೆ ಹೋಗುವರು. ಆಗ ಅವರ ಬದಲಿಗೆ ಎಮ್. ಜಿ. ಟಿ. ಲೇಂಬರ್ಟ ಎಂಬವರು ಗವರ್ನರರಾಗಿ ಬರುವರು.

— ದೀಪಾವಳಿ ಸಮಾರಂಭದ ಸಮಯದಲ್ಲಿ ಜುಗಾರಾಡಿದುದಕ್ಕಾಗಿ [illegible] ಪೋಲೀಸರು ೪೭೦ ಮಂದಿಯನ್ನು ಹಿಡಿದು ಕೈದು ಮಾಡಿರುವರು.

— ಕಲಕತ್ತಾ ಕಾಂಗ್ರೆಸ್ಸು ದಶಂಬರ ತಿಂಗಳ ೨೯, ೩೦, ೩೧ ಈ ದಿನಗಳಲ್ಲಿ ನಡೆಯಲಿರುವುದು.

— ಎಸೆಂಬ್ಲಿಯ ಪ್ರೆಸಿಡೆಂಟರಾದ ಶ್ರೀ. ವಿ. ಜೆ. ಪಟೇಲರು ಮದರಾಸಿಗೆ ಬಂದಿರುವರು.

— ಕರ್ನಾಟಕದ ಎಲ್ಲಾ ಪಕ್ಷಗಳ ಪರಿಷತ್ತಿನ ಅಧ್ಯಕ್ಷರಾದ ಡಾ। ಅನ್ನಿಬೆಸೆಂಟಮ್ಮನವರಿಗೆ ಅನುಕೂಲವಾಗುವ ಹಾಗೆ ಪರಿಷತ್ತನ್ನು ದಶಂಬರ ೧೬ನೇ ತಾರೀಕಿಗೆ ಮುಂದರಿಸಿಟ್ಟಿಯದೆ. ಈ ಪರಿಷತ್ತಿನ ಸಮಯದಲ್ಲಿ ಆಲ್ ಇಂಡಿಯಾ ಸ್ಪಿನ್ನರ್ಸ್ ಎಸೋಸಿಯೇಶನ್ನಿನ ಕರ್ನಾಟಕ ಶಾಖೆಯವರು ಒಂದು ಖಾದಿ ಪ್ರದರ್ಶನವನ್ನು ಏರ್ಪಡಿಸಬೇಕೆಂದು ನಿರ್ಣಯಿಸಿರುವರು.

— ಹಿಂದೂ ಮಹಾಸಭೆಯ ಅಧ್ಯಕ್ಷರಾದ ಡಾ। ಮೂಂಜೆಯವರು ಹಿಂದುಗಳ ಪರವಾಗಿ ಅಫಗಾನದ ಹೊಸ ರಾಜರಿಗೆ ಅಭಿನಂದನೆಗಳನ್ನು ಕಳುಹಿಸಿರುವರು. ಅಫಗಾನರು ಬೌದ್ಧ ಮತದವರೂ ಸನಾತನ ಆರ್ಯ ಧರ್ಮದವರೂ ಆದುದರಿಂದ ಅವರು ತಮ್ಮ ಸಹೋದರರೆಂದೇ ಅವರ ಭಾವನೆ.

— ಹಿಂದೂದೇಶಕ್ಕೆ ಎರಡು ಆರ್. ಎ. ಎಫ್. ವಿಮಾನಗಳು ದಶಂಬರ ತಿಂಗಳಲ್ಲಿ ಬಂದು ಹಿಂದೂ ಸರಕಾರದ ಅಧೀನದಲ್ಲಿ ಇರಿಸಲ್ಪಡುವವು. ಇದರ ಬದಲಾಗಿ ಬ್ರಿಟನ್ನಿನಲ್ಲಿ ಎರಡು ಹೊಸ ವಿಮಾನಗಳನ್ನು ತಯಾರಿಸುವರು.

— ಕಲ್ಕತ್ತೆಯಿಂದ ೪೦ ಮೈಲು ದೂರವಿರುವ ಟೆಂಗ್ಸೆಲ್ ಗಿರಣಿಗಳಲ್ಲಿ ಸಂಬಳ ಸಾಕಾಗಲಿಲ್ಲವೆಂದು ೫೦೦ ಜನ ಕೂಲಿಗಳು ಕೆಲಸಕ್ಕೆ ಮುಷ್ಕರವನ್ನು ಹಾಕಿದರು. ಅಧಿಕಾರಿಗಳು ಎಷ್ಟು ಸಮಾಧಾನ ಹೇಳಿದರೂ ಕೂಲಿಗಳು ಕೇಳದೆ ಹೋದ ಕಾರಣ ಅಧಿಕಾರಿಗಳು ಗಿರಣಿಯನ್ನು ಮುಚ್ಚಿಬಿಟ್ಟುದರಿಂದ ಸುಮಾರು ಹತ್ತು ಸಾವಿರ ಕೂಲಿಗಳಿಗೆ ಕೆಲಸವಿಲ್ಲದೆ ಹೋಯಿತು. ಕೆಲವರ ತಪ್ಪಿಗಾಗಿ ಹಲವರಿಗೆ ಶಿಕ್ಷೆಯುಂಟಾಯಿತು.

— ಮಹಾರಾಷ್ಟ್ರ ವ್ಯಾಪಾರಿ ಪರಿಷತ್ತಿನ ಮೂರನೆಯ ಅಧಿವೇಶನವು ಮುಂಬಾಯಿಯಲ್ಲಿ ದಶಂಬರ ಒಂದನೇ ಮತ್ತು ಎರಡನೇ ತಾರೀಕುಗಳ ದಿನ ಸರ್ ಪುರುಷೋತ್ತಮ ದಾಸ್ ಠಾಕೂರ ದಾಸ್ ಇವರ ಅಧ್ಯಕ್ಷತೆಯಲ್ಲಿ ಜರಗುವದು.

— ಸರ್ ವೆಂಕಟ ರೆಡ್ಡಿಯವರು ಜನವರಿ ೨೪ನೇ ತಾರೀಕಿಗೆ ಆಫ್ರಿಕಕ್ಕೆ ಹೊರಡುವರು. ಅವರು ದಕ್ಷಿಣ ಆಫ್ರಿಕಕ್ಕೆ ತಲಪಿದ ಮೇಲೆ ಜನವರಿ ತಿಂಗಳ ಅಖೈರಿಗೆ ಶ್ರೀಯುತ ಶ್ರೀನಿವಾಸ ಶಾಸ್ತ್ರಿಯವರು ಹಿಂದೂಸ್ಥಾನಕ್ಕೆ ಹೊರಟು ಬರುವರು. ಫೆಬ್ರವರಿ ತಿಂಗಳ ನಡುವಿನಲ್ಲಿ ಅವರು ಮುಂಬಾಯಿಗೆ ಬಂದು ತಲಪಬಹುದು.

— ಮಹಾತ್ಮಾ ಗಾಂಧಿಯವರು ವಾರ್ಧಾಕ್ಕೆ ಬಂದಿರುವರು. ಅಲ್ಲಿ ಅವರು ಒಂದು ತಿಂಗಳ ಪೂರ್ಣ ವಿಶ್ರಾಂತಿಯನ್ನನುಭವಿಸಿ ಅಲ್ಲಿಂದ ಕಲ್ಕತ್ತಾ ಕಾಂಗ್ರೆಸ್ಸಿಗೆ ಹೊರಟು ಹೋಗುವರು.

— ಐದು ವರುಷಗಳ ವರೆಗೆ ಕೆಲಸಮಾಡಿದ ಮೋಟಾರ ಟಕ್ಸಿಗಳನ್ನು ಕಲಕತ್ತಾ ಪಟ್ಟಣದಲ್ಲಿ ಓಡಿಸಬಾರದೆಂದೂ ಅದಕ್ಕೆ ಲೈಸನ್ಸನ್ನು ಕೊಡಬಾರದೆಂದೂ, ಕಲಕತ್ತೆಯ ಮೋಟಾರ ವೆಹಿಕಲ್ ಇಲಾಖೆಯ ಡೆಪ್ಯುಟಿ ಕಮಿಶನರು ಹುಕುಮು ಕೊಟ್ಟಿರುವರು. ಇದನ್ನು ವಿರೋಧಿಸುವ ಸಲುವಾಗಿ ಕಲಕತ್ತೆಯ ಟಕ್ಸಿ ಡ್ರೈವರರೆಲ್ಲರೂ ಕೆಲಸಕ್ಕೆ ಮುಷ್ಕರವನ್ನು ಹಾಕಿರುವರು. ಈ ಹುಕುಮನ್ನು ನಿರೋಧಿಸಲೇ ಬೇಕೆಂಬ ಠರಾವನ್ನು ಅವರು ಸಭೆಕೂಡಿ ಮಂಜೂರುಮಾಡಿರುವರು.

— "ಕಲ್ ಸುದರ್ಶನ್" ಎಂಬ ಪತ್ರಿಕೆಯ ಸಂಪಾದಕನ ಮೇಲೆ ಸಿಟ್ಟಿನಿಂದ ಇಬ್ಬರು ಬೋಹಾ ಮುಸಲ್ಮಾನರು ಆತನನ್ನು ತಿವಿದರು. ಆತನು ಆಸ್ಪತ್ರೆಯಲ್ಲಿದ್ದು ಸಾಯುವ ಸಮಯದಲ್ಲಿ ತನ್ನನ್ನು ತಿವಿದವನು ಒಬ್ಬ ಇದ್ದರೆಂದು / ಎಂದು ಹೇಳಿದುದರಿಂದ ಆತನನ್ನು ಕೈದು ಮಾಡಿರುವರು.

— ಕಳೆದ ಹದಿನೈದು ದಿನಗಳಿಂದ ಸಿಂಧ ಪ್ರಾಂತ್ಯದಲ್ಲೆಲ್ಲ ಹೆದರಿಕೆಯನ್ನುಂಟುಮಾಡಿದ್ದ ಇಬ್ಬರು ದರೋಡೆ ಕಳ್ಳರನ್ನು ಪೋಲೀಸರು ಹಿಡಿದು ಕೊಂದುಹಾಕಿರುವರು.

— ಇಂದೋರದ ಮಾಜಿ ಮಹಾರಾಜರಾದ ಸರ್ ತುಕೋಜಿರಾಯರ ಮೇಲೆ ಗಿರಣಿಯವನ ಶೇರ್ಹೋಲ್ಡರ್ಗಳು ೧,೪೪,೦೦೦ ರೂಪಾಯಿಗಳಿಗೆ ಸಲ್ಲುವ ದಾವೆಯನ್ನು ಮುಂಬಾಯಿ ಕೋರ್ಟಿನಲ್ಲಿ ಹೂಡಿದ್ದಳು. ಈ ದಾವೆಯಲ್ಲಿ ತನ್ನ ಜವಾಬುದಾರಿಕೆಯನ್ನು ಮಹಾರಾಜರು ವಕೀಲರ ಮುಖಾಂತರ ಕೊಡಲು ನಿಶ್ಚಯಿಸಿರುವರು.

— ದಶಂಬರ ಒಂದನೇ ತಾರೀಕಿನ ದಿನ ಬನಾರಸಿನಿಂದ ದುರ್ಗಾದಾಸ್ ಭಟ್ಟಾಚಾರ್ಯ, ಸುಖಚಂದ್ರ ಭಟ್ಟಾಚಾರ್ಯ, ಮತ್ತು ವಿಶ್ವನಾಥ ಪರಡಿ ಎಂಬ ಮೂವರು ತರುಣರು ಮೋಟರ್ ಸೈಕಲ್ ತ್ರಯೂಡಿಂದ ಹಿಂದೂದೇಶವನ್ನು ಸಂಚರಿಸಿ ಬರಲು ನಿಶ್ಚಯಿಸಿರುವರು.

— ಪಾಲಿಟಾನದಲ್ಲಿರುವ ಜೈನರ ದೇವರಾದ ಆದಿಶ್ವರ ಭಗವಾನನ ಮೂರ್ತಿಗೆ ಇಡುವ ಸಲುವಾಗಿ ಸುಮಾರು ೫। ಲಕ್ಷ ರೂಪಾಯಿ ಬೆಲೆ ಬಾಳುವ ರತ್ನ ಖಚಿತವಾದ ಕಿರೀಟವೊಂದು ತಯಾರಾಗಿರುವದು. ಇದರ ನಿರ್ಮಾಣಕ್ಕೆ ಹತ್ತು ವರುಷಗಳು ಬೇಕಾದುವಂತೆ. ಇದಕ್ಕಾಗಿ ಅಖಿಲ ರತ್ನಗಳನ್ನು ಹಿಂದೂದೇಶದ ಹಲವು ಜೈನ ಮುಖಂಡರುಗಳು ಕಳುಹಿಸಿ ಕೊಟ್ಟಿದ್ದರು.

— ಲಾಲಾಜಿಯವರ ಸ್ಮಾರಕಕ್ಕಾಗಿ ಲಜಪತರೈ ಸ್ವರಾಜ್ಯ ಫಂಡ್ ಎಂಬ ಒಂದು ಫಂಡನ್ನು ಸ್ಥಾಪಿಸಬೇಕೆಂದು ಪಂಜಾಬ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ನಿಶ್ಚಯಿಸಿರುವರು. ಈ ಫಂಡಿನಲ್ಲಿ ಕೂಡಿದ ಹಣವನ್ನು ಸ್ವರಾಜ್ಯ ಕಾರ್ಯಗಳಿಗಾಗಿಯೇ ವಿನಿಯೋಗಿಸುವರು.

— ೪೭ ವರುಷ ಪ್ರಾಯದ ಅಲವಾರದ ಮಹಾರಾಜರಿಗೂ ೧೩ ವರುಷ ಪ್ರಾಯದ ಕಾಥಿಯಾವಾಡದ ಜಹಗೀರದಾರರ ಮಗಳಿಗೂ ಇನ್ನೊಂದು ತಿಂಗಳೊಳಗಾಗಿ ಮದುವೆಯು ನಡೆಯಲಿದೆ.

— ಅಲ್ಲಹಾಬಾದದ ಒಬ್ಬ ಹೆಂಗಸು ಬಡತನದಿಂದ ಮೂರು ವರುಷಗಳ ತನಕ ಬಳಲಿ ಕೊನೆಗೆ ಸಹಿಸಲಾರದೆ ತನ್ನ ಒಂದೇ ಒಂದು ಮಗುವನ್ನು ಕೊಂದು ತಾನು ಆತ್ಮಹತ್ಯವನ್ನು ಮಾಡಲು ಪ್ರಯತ್ನಿಸಿದಳು. ಅವಳು ಬಾವಿಯಲ್ಲಿ ಹಾರಿದರೂ ಬದುಕಿ ಜಖಮು ಹೊಂದಿ ಬಾವಿಯೊಳಗೆ ಅಳುತ್ತಿದ್ದ ಕಾರಣ ಜನರು ಅಲ್ಲಿಗೆ ಬಂದು ಅವಳನ್ನೆತ್ತಿ ಪೋಲಿಸ್ ಸ್ಟೇಶನಿಗೆ ಕರೆದೊಯ್ದರು. ಅಲ್ಲಿ ಅವಳು ತಾನು ತನ್ನ ಮಗುವನ್ನು ಕೊಂದಿರುತ್ತೇನೆಂದು ಒಪ್ಪಿದುದರಿಂದ ಅವಳಿಗೆ ಮರಣ ಶಿಕ್ಷೆ ವಿಧಿಸೋಣಾಯಿತು.

— ಕರಾಚಿಯಲ್ಲಿ ಕಳೆದ ಬುಧವಾರ ಮೂರು ಮಿನಿಟುಗಳ ವರೆಗೆ ಬಲವಾದ ಬಿರುಗಾಳಿ ಬಂದು, ಹಲವು ಕಟ್ಟೋಣಗಳು ಕೆಡಹಲ್ಪಟ್ಟವು. ಬಿರುಗಾಳಿಯ ಹಿಂದೆಯೇ ಮಳೆಯೂ ಬಂದಿತು.

— ನಾರಾಯಣ ಜಂಗದಲ್ಲಿ ಒಂದು ಆಶ್ಚರ್ಯಕರವಾದ ದರೋಡೆಯು ನಡೆಯಿತು. ದರೋಡೆ ಕಳ್ಳರು ಆಯುಧಪಾಣಿಗಳಾಗಿ ಬಂದು ಒಬ್ಬ ಧನಿಕನ ಮನೆಯನ್ನು ಪ್ರವೇಶಿಸಿ ಅವರೆಲ್ಲರೂ ನಿಂತು ನೋಡುತ್ತಿರುವಾಗ ಮನೆಯ ಕೋಣೆಯ ಬಾಗಿಲನ್ನೊಡೆದು ಒಳಪ್ರವೇಶಿಸಿ ಹುಗಿದಿಟ್ಟ ಕಬ್ಬಿಣದ ಟ್ರಿಜರಿಯನ್ನು ಅಗೆದು ತೆಗೆದು ಸುಮಾರು ೭೦ ಸಾವಿರ ರೂಪಾಯಿಗಳನ್ನು ಕಳವುಮಾಡಿಕೊಂಡು ಓಡಿಹೋದರು.

— ಸ್ಯಾಮನ್ ಕಮಿಶನು ಡಿಲ್ಲಿಯಿಂದ ಆಗ್ರಕ್ಕೆ ಬಂದಿರುವದು.

— ಕಳೆದ ಬುಧವಾರ ಮುಂಬಾಯಿಯ ಐದು ಗಿರಣಿಗಳು ಮುಚ್ಚಲ್ಪಟ್ಟಿದ್ದವು. ಅಂದರೆ ಸುಮಾರು ೮,೦೦೦ ಜನರು ಕೆಲಸವಿಲ್ಲದೆ ಇರಬೇಕಾಯಿತು.

ಮಂಗಳೂರು ಮುನಿಸಿಪಾಲಿಟಿ.

ನೋಟೀಸು.

ಮಂಗಳೂರು ಮುನಿಸಿಪಾಲಿಟಿಯೊಳಗೆ ಅಲ್ಲಲ್ಲಿ ವಾಂತಿಭೇದಿಯು ತಲೆದೋರಿರುವುದೆಂದು ತಿಳಿದುಬಂದುದರಿಂದ ಮಂಗಳೂರು ಮುನಿಸಿಪಲ್ ಕೌನ್ಸಿಲಿನ ಚೆಯರ್ಮೇನರವರು ಈ ಮೂಲಕ ತಿಳಿಯಪಡಿಸುವುದೇನಂದರೆ — ಮುನಿಸಿಪಾಲಿಟಿಯ ಗಡಿಯೊಳಗಿರುವ ಪ್ರತಿ ಮನೆಯ ಮಾಲಿಕ ಯಾ ನಿವಾಸಿಯು ತನ್ನ ಮನೆಯಲ್ಲಿ ತಗಲಿದ ವಾಂತಿಭೇದಿಯ ಮ ಅದರಿಂದುಂಟಾದ ಮರಣವನ್ನು ಆದಷ್ಟು ತ್ವರ್ಯದಿಂದ ಮುನಿಸಿಪಲ್ ಹೆಲ್ತ್ ಆಫೀಸರರಿಗಾಗಲಿ, ಸೆನಿಟರಿ ಇನ್ಸ್ಪೆಕ್ಟರ್ ಅಥವಾ ಕೋಲೆರಾ ಇನ್ಸ್ಪೆಕ್ಟರರಿಗಾಗಲಿ ತಿಳಿಸತಕ್ಕದ್ದು. ಇದಕ್ಕೆ ತಪ್ಪಿ ನಡಕೊಂಡಲ್ಲಿ ಅಂಥವನು ಪ್ರೋಸಿಕ್ಯೂಶನಿಗೆ ಗುರಿಪಡುವನು.

ಮುನ್ಸಿಪಲ್ ಆಫೀಸು } NELLIKAI VENKAT RAO,
ಮಂಗಳೂರು.
ತಾ. ೨೪-೧೧-'೨೮.

Chairman, M. C.

ದಕ್ಷಿಣ ಕನ್ನಡ.

ಮಂಗಳೂರು: — ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿಗೆ ಅಧ್ಯಕ್ಷರಾಗಲು ಮುಂಬಾಯಿಯ ಮಾನ್ಯ ಕೆ. ಎಫ್. ನರಿಮೆನರು ಬಂದಾಗ ತಾರೀಕು ೧೬ನೇ ಶುಕ್ರವಾರ ಇಲ್ಲಿಯ ಮಾರ್ಕೆಟ್ ರಸ್ತೆಯ ಸಾಹುಕಾರರುಗಳು ಅವರಿಗೆ ಒಂದು ಮಾನಪತ್ರವನ್ನು ಸಮರ್ಪಿಸಿದರು. ಅದಕ್ಕೆ ಉತ್ತರವಾಗಿ ಶ್ರೀ ನರಿಮೇನರವರು ನಾನು ಈ ಜಿಲ್ಲೆಯ ಪರಿಷತ್ತಿಗೆ ಅಧ್ಯಕ್ಷನಾಗಲು ಮೊದಲು ಹಿಂಜರಿದೆನಾದರೂ ಕೊನೆಗೆ ಕನ್ನಡಿಗರ ಮೇಲಿನ ನನ್ನ ಅತಿಶಯ ಪ್ರೀತಿಯ ದೆಸೆಯಿಂದ ಒಪ್ಪಿಕೊಂಡೆನು. ಮುಂಬಾಯಿ ಪ್ರಾಂತ್ಯದಲ್ಲಿ, ಕನ್ನಡ ಜಿಲ್ಲೆಯವರು, ವ್ಯಾಪಾರ ವಹಿವಾಟಗಳಲ್ಲಿಯೂ ಸ್ವಾತಂತ್ರ್ಯ ಚಳವಳಿಗಳಲ್ಲಿಯೂ ಮುಂದಾಳುಗಳಾಗಿ ಹೆಸರು ಹೊಂದಿರುವರು. ನನ್ನನ್ನು ನೀವು ಈ ದಿನ ಸತ್ಕರಿಸಿದುದಕ್ಕಾಗಿ ಆನಂದ ಪಡುವೆನು. ನಾನು ಸ್ವರಾಜ್ಯ ಸಾಧನೆಯಲ್ಲಿ ಸೊಂಟಕಟ್ಟಿದುದರಿಂದ ನನಗೆ ಇಲ್ಲಿ ಮಾತ್ರವಲ್ಲ, ಬರುವಾಗ ಹಾದಿಯಲ್ಲಿಯೂ ವಿಶೇಷ ಸತ್ಕಾರ ಸಿಕ್ಕಿತು. ಆದರೆ ನಾನು ಸರಕಾರಿ ಹುದ್ದೇದಾರನಾಗಿದ್ದಿದ್ದರೆ ಇಂತಹ ಸತ್ಕಾರವು ಲಭಿಸುತ್ತಿದ್ದಿಲ್ಲ" ಎಂದು ವಿವರಿಸಿದರು.

ಮೈಸೂರಿನ ದಿವಾನರಾದ ಮಿ। ಮಿರ್ಜಾ ಸಾಹೇಬರು ಕಳೆದ ೨೨ನೇ ತಾರೀಕಿನ ದಿನ ಮಂಗಳೂರಿಗೆ ಬಂದಿದ್ದರು. ಇವರು ಇಲ್ಲಿಯ ಕೆಲವು ಕಾಲೇಜುಗಳನ್ನು ಸಂದರ್ಶಿಸಿ ಮಡಿಕೇರಿ ಹಾದಿಯಾಗಿ ಮೈಸೂರಿಗೆ ಹಿಂದಿರುಗಿದರು.

ನಿನ್ನೆಯ ದಿನವನ್ನು ಶ್ರೀ ಲಾಲಾ ಲಜಪತ ರೈಯವರ ದಿನವಾಗಿ, ಹಿಂದೂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಆಚರಿಸಿದಂತೆ ಮಂಗಳೂರಿನಲ್ಲಿಯೂ ಆಚರಿಸಿದರು. ಪೇಟೆಯ ಅಂಗಡಿಗಳು ಮುಚ್ಚಲ್ಪಟ್ಟಿದ್ದವು. ಅದಲ್ಲದೆ ಸಾಯಂಕಾಲ ೫½ ಘಂಟೆಗೆ ಇಲ್ಲಿಯ ಲೈನ್ ಮೈದಾನಿನಲ್ಲಿ ಒಂದು ಬಹಿರಂಗವಾದ ಸಭೆಯೂ ಶ್ರೀ ಕಾರ್ನಾಡ ಸದಾಶಿವ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಶ್ರೀ ಧರ್ಮದೇವ ವಿದ್ಯಾವಾಚಸ್ಪತಿ, ಶ್ರೀ ಕೆ. ರಾಮಚಂದ್ರ ಆಚಾರ್, ಇವರುಗಳು ಲಾಲಾಜಿಯವರ ವಿಷಯವಾಗಿ ಭಾಷಣಗಳನ್ನು ಮಾಡಿದ ನಂತರ ಧರ್ಮದೇವಜಿಯವರ ಧರ್ಮಪತ್ನಿಯವರು ಲಾಲಾಜಿಯವರ ಕುರಿತು ಒಂದು ಹಾಡನ್ನು ಮನೋಹರವಾಗಿ ಹಾಡಿದರು. ಕೊನೆಗೆ ಶ್ರೀ ಭಿಡೆ ಕೇಶವ ಭಟ್ಟರು ಲಾಲಾಜಿಯವರ ಸ್ಮಾರಕ ನಿಧಿಯೊಂದನ್ನು ಸ್ಥಾಪಿಸಬೇಕಾಗಿ ಸೂಚಿಸಲು, ಅದನ್ನು ಶ್ರೀ ತಿಂಗಳಾಯರು ಅನುಮೋದಿಸಿ, ಶ್ರೀ ಅರಿಬೈಲು ಭೋಜರಾಯರು ಅದನ್ನು ಸ್ವೀಕರಿಸಿ, ಸಭೆಯು ಸುಮಾರು ೭½ ಘಂಟೆಯ ಹೊತ್ತಿಗೆ ಚೆದರಿತು.

ನಮ್ಮ ಜಿಲ್ಲೆಯವರಾಗಿ ಐ. ಸಿ. ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾದ ಶ್ರೀ ಎನ್. ಡಿ. ಕೃಷ್ಣರಾಯರು ಸೇಲಮಿನ ಸಬ್ ಕಲೆಕ್ಟರರಾಗಿ ನೇಮಕ ಹೊಂದಿರುತ್ತಾರೆ.

ಮದರಾಸಿನ ಮಾನ್ಯ ಮಂತ್ರಿಗಳು ಮಂಗಳೂರಿಗೆ ಬಂದಾಗ ಇಲ್ಲಿಯ ಮಹಿಳಾ ಸಭೆಯವರು ಏರಗಿಸಿದ ಪ್ರದರ್ಶನ ಮತ್ತು ನಾಟಕಾದಿಗಳಿಂದ ಸುಮಾರು ೧೪೦೦ ರೂಪಾಯಿ ಉತ್ಪತ್ತಿಯಾಗಿದೆಯೆಂದು ತಿಳಿದುಬರುತ್ತದೆ.

ಇದೇ ಬರುವ ದಶಂಬರ ೨ನೇ ತಾರೀಕಿನ ದಿನ ಇಲ್ಲಿಯ ಬ್ರಹ್ಮಸಮಾಜದವರ ಮಂದಿರದಲ್ಲಿ ಶ್ರೀಯುತ ಗಂಗೊಳ್ಳಿ ಕೃಷ್ಣರಾಯರು ಕನ್ನಡದಲ್ಲಿ ದೇವಾರಾಧನೆ ಮತ್ತು ಧರ್ಮ ವ್ಯಾಖ್ಯಾನ ನಡಿಸುವರು. ಸರ್ವರಿಗೂ ಸುಸ್ವಾಗತವಿದೆ.

ಮಂಗಳೂರಿನಲ್ಲಿ ವಾಂತಿಭೇದಿ ರೋಗವು ಪ್ರಬಲವಾಗಿ ಬೆಳೆದು ಕಳೆದ ಹಲವು ದಿನಗಳಿಂದ ಬಹು ಜನರು ಮರಣಕ್ಕೆ ತುತ್ತಾದರು. ಅದು ಕಾರಣ ಅಜೀರ್ಣಕಾರಕ ಪದಾರ್ಥಗಳನ್ನು ವರ್ಜಿಸಬೇಕೆಂದು ಡಂಗುರ ಹೊಡೆಯಲ್ಪಟ್ಟಿರುವದು.

ಇದೇ ಬರುವ ಪಶಂಬರ ತಿಂಗಳಿನಿಂದ ಇಲ್ಲಿ ಇನ್ನೊಂದು ಸಬ್ ಕೋರ್ಟು ತೆರೆಯಲ್ಪಡುವುದಾಗಿ ಕೇಳುತ್ತೇವೆ.

ತಾರೀಕು ೨೪-೧೧-'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೩೬ ಮರಣಗಳಾದವು. ಈ ಪೈಕಿ ಸನ್ನಿಪಾತದಿಂದ ೩, ಅತಿಸಾರದಿಂದ ೨, ಶ್ವಾಸಕೋಶದ ರೋಗದಿಂದ ೪, ವಾಂತಿಭೇದಿಯಿಂದ ೧೫, ಇತರ ಎಲ್ಲಾ ಕಾರಣಗಳಿಂದ ೧೨, ಶಿಶುಮರಣ ೨. ಜನನ ಸಂಖ್ಯೆ ೩೪.

ಇಂಟರ್ ಸ್ಕೂಲ್ ಸ್ಪೋರ್ಟ್ಸ್ ಸೀನಿಯರ್ ಶೀಲ್ಡು ಸೈಂಟ್ ಎಲೋಸಿಯಸ್ ಕಾಲೇಜಿನವರಿಗೂ ಜೂನಿಯರ್ ಶೀಲ್ಡು ಕೆನರಾ ಹೈಸ್ಕೂಲಿನವರಿಗೂ ದೊರೆತಿರುವದು.

ಶ್ರೀ ನರಿಕೊಂಬು ರಾಮರಾಯರು ಅಂದು ತಾನು ನೂರಕ್ಕಿಂತ ಹೆಚ್ಚು ರನ್ನನ್ನು ಕ್ರಿಕೆಟ್ ಆಟದಲ್ಲಿ ತೆಗೆಯುವವರಿಗೆ ಒಂದು ಭಂಗಾರದ ಮೆಡಲನ್ನು ಕೊಡುವೆನಾಗಿ ಹೇಳಿದ್ದರು. ಆ ಮೆಡಲು ಶ್ರೀ ಉಗ್ಗಪ್ಪ ಶೆಟ್ಟರವರಿಗೆ ಕೊಡಲ್ಪಟ್ಟಿತು.

ಕಳೆದ ತಾರೀಕು ೨೫ನೇ ಆದಿತ್ಯವಾರ ಪ್ರಾತಃಕಾಲ ಆರ್ಯ ಸಮಾಜ ಮಂದಿರದಲ್ಲಿ ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರು ಅರ್ಜುನ ಸ್ವಾಮಿಯೆಂಬ ತಮಿಳನಿಗೆ ಶುದ್ಧಿ ಸಂಸ್ಕಾರ ಮೂಲಕ ಆರ್ಯ ಧರ್ಮ ದೀಕ್ಷೆಯನ್ನು ಕೊಟ್ಟರು.

ಮಹಿಳಾ ಸಭೆಯ ಕಡೆಯಿಂದ ಆದ ಫೆನ್ಸಿ ಸೇಲಿನಲ್ಲಿ ಉಳಿದ ಸಾಮಾನುಗಳು ೧೯೨೮ನೇ ಇಸವಿ ದಶಂಬರ ತಿಂಗಳ ೩ನೇ ೮ನೇ ಶನಿವಾರ ಅಪರಾಹ್ನ ಘಂಟೆ ೪ರಿಂದ ೬ರ ವರೆಗೆ ಮಹಿಳಾ ಸಭೆಯ ಕಟ್ಟೋಣದಲ್ಲಿ ಕಡಿಮೆ ದರದಲ್ಲಿ ಮಾರಲ್ಪಡುವವು. ಸಭೆಯ ಎಲ್ಲಾ ಸದಸ್ಯರು ತಮ್ಮ ಸ್ನೇಹಿತರಿಂದ ಕೂಡಿ ಆ ದಿವಸ ಬಂದು ಸದರಿ ಸಾಮಾನುಗಳನ್ನು ಮಾರಾಟಕ್ಕೆ ಪಡಕೊಳ್ಳುವರೆ ದಯ ಮಾಡಿ ಬರಬೇಕಾಗಿ ಸವಿನಯ ವಿನಂತಿ. ಹೀಗೆ ಉಳಿದ ಎಲ್ಲಾ ಸಾಮಾನುಗಳನ್ನು ಆ ದಿವಸವೇ ಮಾರಾಟಮಾಡುವ ಏರ್ಪಾಟುಮಾಡಿಯದೆಂದು ಮಹಿಳಾ ಸಭೆಯ ಕಾರ್ಯದರ್ಶಿಗಳಾದ ಎನ್. ಲಲಿತಾಬಾಯಿ ಮತ್ತು ಎನ್. ಅಂಬಾಬಾಯಿಯವರು ತಿಳಿಸುತ್ತಾರೆ.

ಮೂಲ್ಕಿ — ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ಸಾಮಾನ್ಯ ಸಭೆಯು ಇದೇ ಕಳೆದ ತಾ. ೧೭ನೇ ಶನಿವಾರ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರು ರೇಂಜಿನ ಶಾಲೆಗಳ ಜ್ಯೂನಿಯರ್ ಡೆಪ್ಯುಟಿ ಇನ್ಸ್ಪೆಕ್ಟರ್ ಮಿ। ರಾ। ಪಿ. ವಿ. ವರ್ಮ ಅವರ್ಗಳ್, ಬಿ. ಎ. ಯಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಮೂಲ್ಕಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಜರಗಿತು. ಹಾಜರಿಯು ತುಂಬಾ ಸಮಾಧಾನಕರ. ಮಾನಂಪಾಡಿ ಬೋರ್ಡು ಶಾಲಾ ಮುಖ್ಯ ಉಪಾಧ್ಯಾಯ ರಾ। ಕೆ. ಶಿವಣ್ಣಯ್ಯನವರು ಪ್ರಥಮ ತರಗತಿಗೆ 'ಗಣಿತದ ಪ್ರಥಮ ಪಾಠವನ್ನು' ಚಲೋ ರೀತಿಯಿಂದ ಮಾದರಿ ಪಾಠವಾಗಿ ಕೊಟ್ಟರು. ಇದರ ಮೇಲೆ ವಿಮರ್ಶೆಯು ನಡೆದು, ಸಂಘದ ಮುಂದಿನ ಅಭಿವೃದ್ಧಿಗಾಗಿ ಹಲಕೆಲವು ಸೂಚನೆಗಳು ಮುಂದೆ ಬಂದು ಮುಂದಿನ ಸಭೆಯು ಇದೇ ಬರುವ ಡಿಶಂಬರ ೨೨. ೮ನೇ ಶನಿವಾರ ಅಪರಾಹ್ನ ಘಂಟೆ ೩ಕ್ಕೆ ಕೊಲಕಾಡಿ ವಿದ್ಯಾಪ್ರಚಾರಿಣೀ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕೂಡುವುದಾಗಿ ನಿಶ್ಚಯವಾಯಿತು. ಸನ್ಮಾನ್ಯ ಅಧ್ಯಕ್ಷ ಮಹಾಶಯರು ಸಂಘವು ನಿಜವಾಗಿ ಕೈಕೊಳ್ಳತಕ್ಕ ಕಾರ್ಯಕ್ರಮಗಳನ್ನು ಸೂಚಿಸಿ, ಸಂಘದ ಅಭ್ಯುದಯವನ್ನು ಬಯಸಿ, ಬಹು ಸ್ವಾರಸ್ಯವಾದ ಭಾಷಣವನ್ನು ಕೊಡಲು, ಉಪಕಾರಸ್ಮರಣೆ ಇತ್ಯಾದಿಗಳಿಂದ ಸಭೆಯು ಮುಕ್ತಾಯವಾಯಿತು.

ಕಾಸರಗೋಡು — ದಿವಂಗತ ಲಾಲಾಜಿಯವರ ಸ್ಮರಣಾರ್ಥವಾಗಿ (೨೯—೧೧—'೨೮) ಈ ದಿನ ಸಾಯಂಕಾಲ ನಗರ ಭಜನೆಯಾದ ಬಳಿಕ ಒಂದು ಸಾರ್ವಜನಿಕ ಸಭೆಯಾಯಿತು. ಶ್ರೀಯುತ ಎಸ್. ಲಕ್ಷ್ಮೀರಾವ್, ಬಿ. ಎ. ಬಿ ಎಲ್. ಇವರು ಅಧ್ಯಕ್ಷರಾಗಿದ್ದರು. ಶ್ರೀಗಳಾದ ಯಂ. ರಾಮ ನಂಬ್ಯಾರ್, ಬಿ. ಎ. ಎಲ್. ಟಿ. ಯವರೂ, ಶ್ರೀ ಲಕ್ಷ್ಮೀನಾರಾಯಣ ಪುಣಿಂಚತ್ತಾಯರೂ, ಎಸ್. ಸುಬ್ಬರಾಯರೂ ದಿವಂಗತರ ಗುಣ ಕಥನವನ್ನು ಮಾಡಿದರು. ಶ್ರೀ ಪುಣಿಂಚತ್ತಾಯರು ದಿವಂಗತರ ಸ್ಮರಣಾರ್ಥವಾಗಿ ತಾನು ರಚಿಸಿದ ಪದ್ಯಗಳನ್ನು ಮನೋಹರವಾಗಿ ಹಾಡಿದರು. ವಕೀಲ ಕೆ ನರಸಿಂಗ ನಾಯಕರು ದುಃಖ ಸೂಚಕ ಠರಾವನ್ನು ತಂದರು. ವಕೀಲ ಕೆ. ರಾಮ ಶೆಟ್ಟಿ ಇದನ್ನು ಅನುಮೋದಿಸಿದರು. ಕೊನೆಗೆ ಸಭಾಧ್ಯಕ್ಷರ ಭಾಷಣವಾಗಿ ಸಭೆಯು ಮುಕ್ತಾಯವಾಯಿತು.





The Story of a New

OAKLAND

Series 6-212
the cosmopolitan six

WHY COSMOPOLITAN?

THE new Oakland has been called the cosmopolitan six because of its background and its ability to perform.

General Motors has produced this car as a result of its cosmopolitan experience in building and operating motor cars in all parts of the world.

Oakland is built to render a high order of service wherever it may be called. It is equally at home on mountain road, desert sand or city boulevard. Its beauty makes it acceptable anywhere. That is cosmopolitan character.

BODY FEATURES *of the* NEW OAKLAND

- Closed bodies by Fisher; open bodies designed by Fisher but built by Oakland.
- Body lines longer and lower. Five-passenger bodies are six inches longer and all bodies are much lower.
- Seat positions and contours are improved.
- Spanish leather upholstery on open models and Sport Cabriolets.
- Leather upholstery available on all closed models.
- Improved body hardware on all models.
- Instrument board beautifully carved in oak leaf design and contains three clusters of instruments with platinum-silver dials.
- New and attractive Duco color combinations on all models.
- Narrow front corner posts on closed models.
- Forward-folding windshields on open models.

For Further Particulars Apply to **RAO & RAO**

Dealers of Oakland, Pontiac, Chevrolet, & Vauxhall Cars,
Maidan Road, MANGALORE.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಉಳಿತರೆ ದೇಹಾಲಾಗುತ್ತಿದ್ದರೆ, ಚೆನ್ನಿನ ನರಗಳು ಸೀದುತ್ತಿದ್ದರೆ ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದನಂತಿರುವ ಸಾರಸ್ವತಾಸವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೩—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ — ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್ಜಾ, ಪ್ಲೇಗುಜ್ವರ.

ಮಕ್ಕಳ — ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಬಾಣಂತಿಯರಿಗೂ ಸಂಜೀವನ. ೫೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೮ ಆಣೆ ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦. ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ವಾಳ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್‌ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ ಸೋಡಾ ಫ್ಯಾಕ್ಟರಿ
ಮಂಗಳೂರು ಟಿವಣಿಗೆ ಮಾತ್ರ.

ಹೊಸ ವರುಷದ ಅಂಕ.

ಸ್ವದೇಶಾಭಿಮಾನಿಯ ಹೊಸ ವರುಷದ ಅಂಕವು ಜನವರಿಯ ಮೊದಲಿನ ಶುಕ್ರವಾರ ದಿನ ಕಳೆದ ವರ್ಷದ ಅಂಕಕ್ಕಿಂತಲೂ ಹೆಚ್ಚು ಪುಟಗಳೊಡನೆ ಪ್ರಕಟಿಸಲ್ಪಡುವುದು. ಸಂಚಿಕೆಯಲ್ಲಿ ತುಂಬಾ ಚಿತ್ರಗಳು ಈ ಸಂಚಿಕೆಗಾಗಿ ಪ್ರತ್ಯೇಕವಾಗಿ ದೊರಕಿಸಲ್ಪಟ್ಟು ಪ್ರಕಟಿಸಲ್ಪಡುವವು. ಉತ್ತಮ ಲೇಖನಗಳು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವುವು. ಸಚಿತ್ರವಾದ ಲೇಖನಗಳಿಗೆ ಹೆಚ್ಚಿನ ಪ್ರೋತ್ಸಾಹವು ಸಿಕ್ಕುವುದು. ಚಿತ್ರಗಳನ್ನು ಲೇಖಕರು ಕಳುಹಿಸಬೇಕು. ಅವುಗಳ ಬ್ಲೋಕನ್ನು ನಾವೇ ತರಿಸಿಕೊಳ್ಳುತ್ತೇವೆ. ಲೇಖನಗಳು ಸ್ವದೇಶಾಭಿಮಾನಿಯ ಒಂದೂವರೆ ಕಲಮನ್ನು ಮೀರದಿದ್ದರೆ ಉತ್ತಮ. ನವೆಂಬರ ಅಖೈರು ದೊಳಗಾಗಿ ಲೇಖನಗಳು ನಮ್ಮ ಕೈಸೇರಿದರೆ ಬ್ಲೋಕುಗಳನ್ನು ತಯಾರಿಸಲಿಕ್ಕೂ ಮುದ್ರಣವನ್ನು ನಡಿಸಲಿಕ್ಕೂ ಅನುಕೂಲವಾಗುವುದು. ಜಾಹೀರಾತುಗಳೂ ಬೇಕಾಗಿರುವವು. ಕರ್ನಾಟಕದ ಸುಪ್ರಸಿದ್ಧ ಲೇಖಕರು ಈ ನಮ್ಮ ಕೆಲಸದಲ್ಲಿ ಸಹಾಯ ಮಾಡಬೇಕಾಗಿ ವಿನಂತಿ.

ಮ್ಯಾನೇಜರ್.

ವಿವಿಧ ಸಮಾಚಾರಗಳು.

ದಿಲ್ಲಿಗೆ ಸ್ಯಾಮನ್ ಕಮಿಶನಿನ ಆಗಮನ.

ಸ್ಯಾಮನ್ ಕಮಿಶನ್ನವರು ಕಳೆದ ೨ನೇ ತಾರೀಕಿನ ದಿನ ನಸುಕಿನಲ್ಲಿ ಬಂದು ತಲ್ಪಿದರು. ಸ್ವಾಗತಾಯರ ಎಕ್ಸಿಕ್ಯುಟಿವ್ ಕೌನ್ಸಿಲಿನ ಸದಸ್ಯರು ಅವರಿಗೆ ಸ್ಟೇಶನಿನಲ್ಲಿ ಸ್ವಾಗತವನ್ನಿತ್ತರು. ಸ್ಟೇಟ್ ಕೌನ್ಸಿಲ್ [illegible] ದೀಪಗೆರೆದ ಕಾರಣ [illegible] ಅವರನ್ನು ಎದುರುಗೊಳ್ಳುವ ಸಲುವಾಗಿ ವಿಶೇಷ ತಯಾರಿಯು ನಡೆದಿರಲಿಲ್ಲ ವೆನ್ನಲಾಗುವುದು. ಹೊರಗಡೆ ಬಹಿಷ್ಕಾರ ಹಾಕುವವರು ಕೂಡ [illegible]. "ಸ್ಯಾಮನ್ ಹಿಂತಿರುಗಿ ಹೋಗು," 'ನಾಚಿಕೆ (ಶೇಮ್)' ಎಂಬ ಘೋಷವು ಅವರಿಗಷ್ಟು ವಿಶೇಷವಾಗಿ ಕೇಳಬರಲಿಲ್ಲ. ಈ ಶಬ್ದಗಳ ಸವಿಯನ್ನು ಅವರು ಎಲ್ಲೆಡೆಗಳಲ್ಲಿಯೂ ಅನುಭವಿಸಿದವರೇ ಆಗಿದ್ದರು. ಸ್ಯಾಮನ್ ವಿರೋಧಿಗಳು ಹತ್ತತ್ತು ಜನರ ಸಂಘಗಳಾಗಿ ಕಪ್ಪು ಧ್ವಜಗಳನ್ನು ಬೀಸುತ್ತಿದ್ದರು. ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ಸ್ವಾಗತಕಾರರಾಗಿದ್ದರು. ಮುನಿಸಿಪಾಲಿಟಿಯ ಮೆಂಬರರು ಸ್ಯಾಮನ್ ವಿರೋಧಿಗಳೊಡನೆ ಕಲೆತಿದ್ದರು. ಸ್ಯಾಮನರ ಹಿಂದೆಯೇ ಸರ್. ಶಂಕರನಾಯರರು ಬಂದರು; ಸ್ಯಾಮನರಿಗೆ ದೊರೆತಷ್ಟೇ ಸ್ವಾಗತವು ಸ್ಯಾಮನ್ ವಿರೋಧಿಗಳಿಂದ ಅವರಿಗೂ ದೊರೆಯಿತು. ಒಟ್ಟಾರೆ ಕೂಡಿದ ಸ್ಯಾಮನ್ ವಿರೋಧಿಗಳ ಸಂಖ್ಯೆಯು ಸುಮಾರು ೧೫ ಸಾವಿರಕ್ಕೆ ಕಡಿಮೆಯಾಗಿರಲಿಲ್ಲ.

ಅಂದು ಸಾಯಂಕಾಲ ನಾಲ್ಕು ಘಂಟೆಯ ಹೊತ್ತಿಗೆ ದಿಲ್ಲಿ ನಿವಾಸಿಗಳ ಬಹಿರಂಗವಾದ ಸಭೆಯೊಂದು ನಡೆದು ಲಾಲಾಜಿಯವರ ನಿಧನದ ಸಲುವಾಗಿ ದುಃಖವನ್ನು ಸೂಚಿಸಿ, ಸ್ಯಾಮನ್ ಬಹಿಷ್ಕಾರದಲ್ಲಿ ಲಾಲಾಜಿಯವರ ಉದಾಹರಣೆಯನ್ನು ಅನುಸರಿಸಬೇಕೆಂಬ ಠರಾವು ಮಂಜೂರಾಗಿತ್ತು. ಅಂತೆಯೇ ಅವರು ಸ್ಯಾಮನ್ ಕಮಿಶನು ಬಂದ ನಂತರ ವರ್ತಿಸಿದರು.

ಇದಲ್ಲದೆ ಪಟ್ಟಣದಲ್ಲೆಲ್ಲಿಯೂ ಹರತಾಳವಿತ್ತು. ಹಿಂದೂ ಕಾಲೇಜನ್ನೇ ಮುಚ್ಚಿಬಿಟ್ಟಿದ್ದರು. ಇತರ ವಿದ್ಯಾ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳೇ ಇರಲಿಲ್ಲ. ದೊಡ್ಡವರು ಮಾತ್ರವಲ್ಲ, ವಿದ್ಯಾರ್ಥಿಗಳೂ ಒಂದು ಸಭೆಕೂಡಿ ಸ್ಯಾಮನ್ ಬಹಿಷ್ಕಾರದ ಠರಾವನ್ನು ಅಂಗೀಕರಿಸಿದ್ದರು. ಒಟ್ಟಾರೆ ಹೇಳುವುದಾದರೆ ಎಲ್ಲಿ ಹೋದರೂ ಸ್ಯಾಮನರಿಗೆ ಒಂದೇ ತರದ ಸ್ವಾಗತವಿತ್ತು.

ಲಾಲಾಜಿಯವರಿಗೆ ಮುಂಬಾಯಿಯವರ ಗೌರವ.

ಮುಂಬಾಯಿಯಲ್ಲಿ ಇದುವರೆಗೂ ನಡೆಯದಂತಹ ಒಂದು ಅತಿ ದೊಡ್ಡ ಸಭೆಯು ಕಳೆದ ಗುರುವಾರ ರಾತ್ರಿ ನಡೆಯಿತು. ಈ ಸಭೆಗೆ ಹಿಂದುಗಳೂ, ಮುಸಲ್ಮಾನರೂ, ಯುರೋಪಿಯನರೂ ಬಂದು ಸೇರಿದ್ದರು. ದಿವಂಗತ ಲಾಲಾಜಿಯವರನ್ನು ಗೌರವಿಸುವುದೇ ಈ ಸಭೆಗೆ ಕೂಡಿದ ಜನರ ಉದ್ದೇಶವಾಗಿದ್ದಿತು. ಮಿ. ಜಿನ್ನಾರವರೇ ಅಧ್ಯಕ್ಷರಾಗಿದ್ದರು. ಮೌಲಾನಾ ಶೌಕತ್ ಅಲಿಯವರು ಈ ಸಭೆಗೆ ಬಂದಿದ್ದು ಭಾಷಣವನ್ನು ಮಾಡಿದರು. ಅವರು ಬಂದು ಭಾಷಣವನ್ನು ಪ್ರಾರಂಭಿಸುವ ಮೊದಲೇ "ಶೇಮ್" ಎಂಬ ಧ್ವನಿಯು ಪ್ರಾರಂಭವಾಗಿತ್ತು. ಈ ಧ್ವನಿಯು ಕೊನೆಯ ತನಕವೂ ನಡೆಯಿತು. ಭಾಷಣವನ್ನು ಅರ್ಧದಲ್ಲಿಯೇ ಮುಗಿಸುವ ಸಂದರ್ಭ ಬಂದೊದಗಿದರೂ ಮಿ. ಜಿನ್ನಾರವರು ನೆರೆದವರನ್ನು ಸಮಾಧಾನಪಡಿಸಿ, ಭಾಷಣವು ಮುಂದರಿಯುವಂತೆ ಮಾಡಿದರು.

ಕಳೆದ ೧೫ ತಿಂಗಳುಗಳಿಂದ ಹಿಂದೂ ಮುಸಲ್ಮಾನರ ಜಾತೀಯ ಕಲಹಗಳಿಗೆ ತಡೆಗಟ್ಟಬೇಕೆಂದು ಸೊಂಟಕಟ್ಟಿದವರಲ್ಲಿ ಲಾಲಾಜಿಯವರೇ ಮೊದಲನೆಯವರಾದುದರಿಂದ ಅವರನ್ನು ಮರೆಯಲಾಗದೆಂದು ಮಿ. ಜಿನ್ನಾರವರೂ, ಅವರಂತೆ ವರ್ತಿಸುವದರಿಂದ ಅವರಿಗೆ ಗೌರವವನ್ನಿತ್ತ ಹಾಗಾಗುವದೆಂದು ಸರ್ ಸೇತಲವಾಡರೂ ಹೇಳಿದರು. ಡಾಕ್ಟರ್ ಅರುಂಡೇಲರವರು ಎದ್ದು ನಿಂತು ಲಾಲಾಜಿಯವರು ಯಾವಾಗಲೂ ಹೇಳುತ್ತಿದ್ದ "ನಾನು ಇಂಗ್ಲೆಂಡಿಗೆ ಹೋದೆನು, ಫ್ರಾನ್ಸಿಗೆ ಹೋದೆನು, ಅಮೇರಿಕಕ್ಕೆ ಹೋದೆನು. ಆದರೆ ಎಲ್ಲಿ ಹೋದರೂ [illegible] ರಾಜ್ಯದ ನಾಚಿಕೆಯು ನನ್ನನ್ನು ಬಿಟ್ಟುಹೋಗಲಿಲ್ಲ" ಎಂಬ ವಾಕ್ಯವನ್ನು ಗಟ್ಟಿಯಾಗಿ ಹೇಳಿ, ಅವರಂತೆಯೇ ಸ್ವರಾಜ್ಯವು ದೊರೆಯುವ ವರೆಗೆ, ಹಿಂದೂಗಳೂ ಈ ನಾಚಿಕೆಯನ್ನು ಮರೆಯಬಾರದೆಂದು ಹೇಳಿದರೂ ಲಾಲಾಜಿಯವರು ಸ್ವರ್ಗವಾಸಿಗಳಾದರೂ ಅವರ ನೆನಪು ಪ್ರತಿಯೊಂದೆಡೆಯಲ್ಲಿಯೂ ಇರಲೇಬೇಕೆಂದು ಒತ್ತಿಹೇಳಿದರು. ಇವರು ಮಾತ್ರವಲ್ಲದೆ, ಮಿ. ನರಿಮನ್, ಹಾರ್ನಿಮನ್, ಜಮ್ನಾದಾಸ್ ಮೇಥಾ ಮೊದಲಾದವರೂ ಈ ಠರಾವನ್ನು ಅನುಮೋದಿಸಿ ಭಾಷಣ ಮಾಡಿದರು.

ಸಭೆಯು ಚದರಿ ಮಿ. ಶೌಕತ್ ಅಲಿಯವರು ಕಾರಿನಲ್ಲಿ ಕುಳಿತು ಹಿಂತಿರುಗುವಾಗ ಹಲವರು ಅವರ ಕಾರನ್ನು ಸುತ್ತುವರಿದು, "ಶೇಮ್" ಎಂದು ಬೊಬ್ಬಿಡುತ್ತಾ ಹೋದರು.

ಟಾಯರ್ ಪಟ್ಟಣ (ಫೋರ್ಟ್ ಡನ್ಲೋಪ್).

೧೮೮೮ನೇ ಇಸವಿಯಲ್ಲಿ ಜೋನ್ ಬಾಯ್ಡ್ ಡನ್ಲೋಪನು ಟೊಳ್ಳು ಟಾಯರುಗಳನ್ನು ರಚಿಸಲು ಹೂಡಿದನು. ವಾಹನದ ಮೇಲೆ ಟಾಯರುಗಳ ನಿರ್ಮಾಣದಲ್ಲಿ ಹೊಸ ಶಕವೇ ಆರಂಭವಾಯಿತೆನ್ನಬಹುದು. ರಬ್ಬರಿನ ಚಕ್ರಗಳಿಲ್ಲದೆ ವಾಹನಗಳ ಚಲಾವಣೆಯು ಮಾರ್ಗದಲ್ಲಿ ಅಸಾಧ್ಯವು. ಆದರೆ ಜೋನ್ ಬಾಯ್ಡ್ ಡನ್ಲೋಪರ ಶೋಧದಿಂದ ಮಾರ್ಗಗಳಲ್ಲಿ ಮಾತ್ರ ಚಲಾವಣೆಯಲ್ಲ, ಮಾರ್ಗಗಳಿಲ್ಲದ ಕಡೆಗಳಲ್ಲಿಯೂ ಚಲಾವಣೆಯು ಸಾಧ್ಯವಾಗಿ ತೋರಬಂದದೆ.

ಜೋನ್ ಡನ್ಲೋಪರು ೧೮೮೮ನೇ ಇಸವಿಯಲ್ಲಿ ಬೆಲ್‌ಫಾಸ್ಟಿನಲ್ಲಿ ಟೊಳ್ಳು ಟಾಯರುಗಳನ್ನು ರಚಿಸುವಂತಹ ಒಂದು ಸಣ್ಣ ಕಾರಖಾನೆಯನ್ನು ನಿರ್ಮಿಸಿದರು. ಅಲ್ಲಿ ಆ ಕಾಲದಲ್ಲಿ ದಿನವೊಂದಕ್ಕೆ [illegible] ಸ್ಯಾಕಲುಗಳ ಟಾಯರು ತಯಾರಾಗುತ್ತಿದ್ದಿತು.

ಆದರೆ ಇಂದಿನ ಫೋರ್ಟ್ ಡನ್ಲೋಪು ಎಂಬುದು [illegible] ವಸ್ತುಂಟುಮಾಡುವಂತಹದಾಗಿದೆ. ಅಂತಿಹ ಆ ಸಣ್ಣ ಕಾರಖಾನೆಯೇ ಅಭಿವೃದ್ಧಿಯಾಗುತ್ತಾ ಬಂದು ಈ ಸ್ಥಿತಿಯನ್ನು ಪಡೆಯಿತು. ಬರ್ಮಿಂಗ್‌ಹೇಮಿನಲ್ಲಿ ಫೋರ್ಟ್ ಡನ್ಲೋಪು ೪೦೧ ಎಕರೆ ಸ್ಥಳವನ್ನು ಆವರಿಸಿರುತ್ತದೆ. ಅಲ್ಲಿ ಮೋಟಾರು, ಸ್ಯಾಕಲು, ಲೋರಿ ಮೊದಲಾದುವುಗಳ ಟಾಯರುಗಳೂ, ಆಟದ ಚೆಂಡುಗಳೂ ತಯಾರಾಗುತ್ತವೆ. ಹತ್ತು ಸಾವಿರ ಜನರು ದಿನ ನಿತ್ಯವೂ ಕೆಲಸಮಾಡುತ್ತಿರುವರು.

ಇಡೀ ಫೋರ್ಟಿನ ಎಲ್ಲಾ ಕೆಲಸವು ಎಲೆಕ್ಟ್ರಿಸಿಟಿಯ ಮೂಲಕ ನಡೆಯುತ್ತಿರುವದು. ಒಂದೊಂದು ವಾರಕ್ಕೆ ೨,೯೦೦ ಟನ್ ಕಲ್ಲಿದ್ದಲು ಅಲ್ಲಿ ಖರ್ಚಾಗುತ್ತಿರುವದು. ಅಲ್ಲಿರುವಂತಹ ಪವರ್ ಸ್ಟೇಶನಿನಷ್ಟು ದೊಡ್ಡ ಪವರ್ ಸ್ಟೇಶನು ಇಂಗ್ಲಂಡಿನಲ್ಲಿ ಬಹು ವಿರಳ. ಅಲ್ಲಿಯ ಇಲೆಕ್ಟ್ರಿಕ್ ಶಕ್ತಿಯಿಂದಲೇ ಬರ್ಮಿಂಗ್‌ಹೇಮಿನ ಟ್ರಾಮು ಗಾಡಿಗಳನ್ನು ಚಲಿಸಲು ಸಾಧ್ಯವಿರುವುದು.

ಅಲ್ಲಿಗೆ ಬೇಕಾದ ನೀರು ೪೦೦ ಅಡಿ ಆಳವಾದ ಮೂರು ಬಾವಿಗಳಿಂದ ಇಂಜಿನಿನ ಮೂಲಕವೇ ತೆಗೆಯಲ್ಪಡುವದು. ೨,೦೦೦,೦೦೦ ಗೆಲನು ನೀರು ಪ್ರತಿ ದಿನವೂ ವಿನಿಯೋಗಿಸಲ್ಪಡುವದು.

ಟಾಯರಿಗೆ ಮೂಲ ಹತ್ತಿ; ಈ ಹತ್ತಿ ವಸ್ತ್ರವನ್ನು ತಯಾರಿಸುವ ಸಲುವಾಗಿ ಅವರದೇ ಒಂದು ಹತ್ತಿ ಗಿರಣಿಯು ಲಂಕಾಶಾಯರಿನಲ್ಲಿರುವದು. ಮೂವತ್ತು ಎಕ್ರೆ ಸ್ಥಳವನ್ನು ಈ ಗಿರಣಿಯು ಆವರಿಸಿರುವದು.

ಈ ಗಿರಣಿಯಲ್ಲಿ ಬೇರೆಯವರ ಕೆಲಸವನ್ನು ಮಾಡುವುದಿಲ್ಲ. ಟಾಯರಿಗೆ ಬೇಕಾಗುವಂತಹ ಹತ್ತಿ ವಸ್ತ್ರಗಳನ್ನು ಮಾತ್ರವೇ ತಯಾರಿಸುತ್ತಿರುವರು.

ಮಲಯಾ ಪೆನಿನ್ಸುಲಾದಲ್ಲಿ ಇವರದೇ ಅನ್ನಿಸುವ ೬೬ ಸಾವಿರ ಎಕ್ರೆ ವಿಸ್ತೀರ್ಣದ ರಬ್ಬರಿನ ತೋಟಗಳಿವೆ. ಆದರೆ ಅಲ್ಲಿ ಉತ್ಪನ್ನವಾಗುವ ರಬ್ಬರು ಅವರ ಕೆಲಸಕ್ಕೆ ಸಾಕಾಗುವುದಿಲ್ಲ. ಅಲ್ಲಿ ಉಪಯೋಗಿಸಲ್ಪಡುವ ರಬ್ಬರಿನ ಸಣ್ಣ ಅಂಶವು ಮಾತ್ರ ಈ ತೋಟಗಳಲ್ಲಿ ಉಂಟಾಗುವುದು. ಬಾಕಿ ಬೇಕಾದ ರಬ್ಬರನ್ನು ಅವರು ಕ್ರಯಕ್ಕೆ ಕೊಂಡುಕೊಳ್ಳುವರು.

ಫೋರ್ಟ್ ಡನ್ಲೋಪನ್ನು ಸಂಪೂರ್ಣವಾಗಿ ತಿರುಗಾಡಿ ಬರಲು ಒಂದು ದಿನ ತಗಲುವದು. ಅದು ಒಂದು ಪಟ್ಟಣದ ಹಾಗೆಯೇ ಇದೆ. ಜೋರು ಕೆಲಸ ನಡೆಯುವ ಚಿಕ್ಕ ಪಟ್ಟಣಕ್ಕೂ ಡನ್ಲಪ್ ರಬ್ಬರ್ ಕಂಪೆನಿ (ಫೋರ್ಟ್ ಡನ್ಲೋಪ್)ಗೂ ಯಾವ ವ್ಯತ್ಯಾಸವೂ ಇರುವುದಿಲ್ಲ. ಅದರೊಳಗಡೆಯೇ ಕಾಫಿ ಹೋಟೇಲುಗಳಿವೆ. ಆಟದ ಬಯಲುಗಳಿವೆ. ಪುಸ್ತಕ ಸಂಗ್ರಹಾಲಯಗಳಿವೆ. ವಿಶ್ರಾಂತಿ ಗೃಹಗಳಿವೆ. ಇವು ಅಲ್ಲದೆ, ಅವರದೇ ಆಸ್ಪತ್ರೆಯಿದೆ. ಅವರದೇ ವೃತ್ತ ಪತ್ರಿಕೆಯಿದೆ.

ಈ ಟಾಯರ್ ಪಟ್ಟಣವೆಂದು ಅನ್ನಿಸಲ್ಪಡುವ ಕಾರಖಾನೆಯು ಇದುವರೆಗೆ ೨೫,೦೦೦,೦೦೦ ಮೋಟಾರ್ಸ್‌ಗೆ ಟಾಯರುಗಳನ್ನು ಒದಗಿಸಿರುತ್ತದೆ.

ಕಣ್ಣಿನ ಶಕ್ತಿಯುಳ್ಳ ಮೂಗು!

ಮಿಸ್. ಕೆಲ್ಲರಳೆಂಬ ಹುಡುಗಿಯೋರ್ವಳು ಏನೂ ಕಾಣದ ಕುರುಡಿ. ಆದರೆ ಕಣ್ಣಿನಿಂದ ನೋಡಿ ತಿಳಿಯಬಹುದಾದ ಎಲ್ಲವನ್ನೂ ತಾನು ಮೂಗಿನಿಂದ ಮೂಸಿ ತಿಳಿಯಬಲ್ಲೆನೆಂದು ಹೇಳುತ್ತಿರುವಳು. ನ್ಯೂಯೋರ್ಕಿನಿಂದ ೩೦ ಮೈಲು ದೂರದ ವರೆಗೆ ಆಕೆಯನ್ನು ಒಂದು ದಿನ ಕೊಂಡುಹೋಗಿ, ಹೋಗುತ್ತಾ ಸುತ್ತಮುತ್ತಲೂ ಏನಿದೆ ಎಂದು ಕೇಳಿದರು. ಮೊದಲಾಗಿ ವಿಶಾಲವಾದ ಬಯಲುಗಳಲ್ಲಿ ಅವಳು ಸಂಚರಿಸುತ್ತಿರುವಳೆಂದು ಅವಳು ಹೇಳಿದಳು. ಇದು ನಿಜವಾಗಿತ್ತು. ಅನಂತರ ಮರಗಳನ್ನು ದಾಟಿಹೋಗುತ್ತಿರುವ ಳೆಂದಳು. ಅದೂ ನಿಜವಾಗಿತ್ತು. ಮುಂದೆ ಆ ಮಾರ್ಗವು ಒಂದು ಸಣ್ಣ ತೋಟವನ್ನು ದಾಟಿಹೋಗುತ್ತಿತ್ತು. ಇದಾದ ಮೇಲೆ ಅವಳು ಒಂದು ಮನೆಯ ಸಮೀಪವಿರುವಳೆಂದೂ ಮನೆಯಲ್ಲಿ ಬೆಂಕಿಯುರಿಯುತ್ತಿದೆಯೆಂದೂ ಹೇಳಿದಳು. ಅಲ್ಲಿಯೇ ಒಂದು ಮನೆಯು ಇದ್ದಿತು; ಅದರ ಹೊಗೆನಳಿಗೆಯಿಂದ ಹೊಗೆಯು ಬರುತ್ತಲಿದ್ದಿತು. ಅಲ್ಲಿಂದ ಪಟ್ಟಣಕ್ಕೆ ಹೋಗಲಾಗ್ಯೆ ತಾನು ಪಟ್ಟಣದಲ್ಲಿ ಸಂಚರಿಸುತ್ತಿರುವಳೆಂದೂ ಎರಡೂ ಪಕ್ಕಗಳಲ್ಲಿಯೂ ದೊಡ್ಡ ದೊಡ್ಡ ಕಟ್ಟಡಗಳಿವೆಯೆಂದೂ ಇದ್ದಕ್ಕಿದ್ದ ಹಾಗೆಯೇ ಹೇಳಿಬಿಟ್ಟಳು. ಕಣ್ಣಿನಿಂದ ನೋಡಬಹುದಾದ ಎಲ್ಲವನ್ನು ಅವಳು ವಾಸನಾಶಕ್ತಿಯಿಂದ ಕಂಡುಹಿಡಿಯುವಳು.

ಮಿರಾಜ ಸತ್ಯಾಗ್ರಹ.

ಮಿರಾಜದಲ್ಲಿ ರಿಸೆಟ್ಲ್‌ಮೆಂಟ್ ಮಾಡಿ ತೆರಿಗೆಯನ್ನು ಏರಿಸಿ ಬಡವರಾದ ರೈತರಿಗೆ ಬಹಳ ಕಷ್ಟವನ್ನು ಕೊಟ್ಟಿತು. ರೈತರೆಲ್ಲರೂ ಒಟ್ಟಾಗಿ ತಮ್ಮ ಸಂಕಷ್ಟಗಳನ್ನು ಮುಖ್ಯಾಧಿಕಾರಿಗಳ ಮುಂದಿಕ್ಕಲು ಅರಮನೆಯ ಸಮೀಪದಲ್ಲಿ ಬಂದು ಹಲವು ದಿನಗಳ ವರೆಗೆ ಅಲ್ಲಿ ತಟಸ್ಥರಾಗಿ ಕುಳಿತುಬಿಟ್ಟರು. ಚೀಫ್ ಸಾಹೇಬರು ಅವರಿಗೆ ಭೇಟಿಯನ್ನೇ ಕೊಡಲು ಒಪ್ಪಲಿಲ್ಲ. ಎರಡು ವಾರಗಳ ಹಿಂದೆ ಇದೇ ಚೀಫ್ ಸಾಹೇಬರೇ ಈ ಕುರಿತು ವಿಚಾರಣೆಯನ್ನು ನಡೆಸುವೆನೆಂದು ವಾಗ್ದಾನವಿತ್ತಿದ್ದರು. ಈ ಮಾತನ್ನು ನಂಬಿ ರೈತರು ತಮ್ಮ ತಮ್ಮ ಹಳ್ಳಿಗಳಿಗೆ ಹೋಗಿ ಸ್ವಸ್ಥರಾಗಿದ್ದರು. ಆದರೆ ಚೀಫ್ ಸಾಹೇಬರು ತನ್ನ ಪ್ರತಿಜ್ಞೆಯನ್ನು ಮರೆತುಬಿಟ್ಟರು. ಪ್ರಜೆಗಳು ಪುನಃ ಬಂದು ಬೊಬ್ಬಿಟ್ಟರು. ಆದರೆ ಅವರನ್ನು ನೋಡಲೂ ಕೂಡ ಚೀಫ್ ಸಾಹೇಬರಿಗೆ ದಯೆಯುಂಟಾಗಲಿಲ್ಲ. ತಮ್ಮ ಅರಸನ ಮೇಲೆ ನಂಬಿಗೆಯಿಂದಲೂ ಭಕ್ತಿಯಿಂದಲೂ ಬಂದು ಆತನು ತಮ್ಮ ಮೊರೆಯನ್ನು ಕೇಳುವನೆಂಬ ಭರವಸೆಯಿಂದ ಅರಮನೆಯ ಹೊರಗಡೆ ತಮ್ಮ ಬಳಲಿ ಹೋದ ಆ ಬಡರೈತರನ್ನು ಕಂಡು ಯಾವ ಕಠೋರ ಹೃದಯಿಗಾದರೂ ಕನಿಕರವಾಗದಿರುತ್ತಿರಲಿಲ್ಲ. ಐದು ದಿನಗಳ ವರೆಗೂ ಅವರು ಅಲುಗಾಡದೆ ಇದ್ದ ಕಾರಣ ಕೊನೆಗೆ ಪೋಲೀಸರ ಬಲಾತ್ಕಾರದಿಂದ ಅವರನ್ನು ಓಡಿಸಬೇಕೆಂದು ಚೀಫ್ ಸಾಹೇಬರು ಅಪ್ಪಣೆಯನ್ನಿತ್ತರು. ಬಡರೈತರು ತಮ್ಮ ತಮ್ಮ ಊರುಗಳಿಗೆ ಹಿಂದಿರುಗಬೇಕಾಯಿತು. ಸರಕಾರದ ಮೇಲೆ ಅವರಿಗಿದ್ದ ನಂಬಿಗೆಯೂ ಕಳೆದು ಹೋಯಿತು. ಬಾರ್ಡೋಲಿಯ ಜನರಂತೆ ತಾವೂ ಕೂಡ ಏರಿಸಿದ ತೆರಿಗೆಯನ್ನು ಖಂಡಿತವಾಗಿಯೂ ಕೊಡಲಾರೆವೆಂಬ ದೃಢಪ್ರತಿಜ್ಞೆಯಿಂದ ಅವರು ಹಿಂತಿರುಗಿದರು. ಇದರಿಂದ ರೈತರ ಮಾನವು ಹೆಚ್ಚಿತು. ಆದರೆ ಚೀಫ್ ಸಾಹೇಬರು ಈ ರೀತಿಯಲ್ಲಿ ವರ್ತಿಸಿದುದರಿಂದ ತನ್ನ ಹೆಸರಿಗೆ ತಾನೇ ಕಳಂಕವನ್ನು ಹಚ್ಚಿಕೊಂಡರು.

ಮಾಂಸಾಹಾರಿಯಾದ ವೃಕ್ಷವು!

ಯಾಟಾಪಿಸ(?) ಎಂಬ ಪಟ್ಟಣವು ಬ್ರೆಜಿಲಿಯನ್ ಗಯಾನಾ ದೇಶದಲ್ಲಿರುವುದು. ಅಲ್ಲಿ ಕ್ರೂರಿಗಳಾದ ಮನುಷ್ಯರು ವಾಸಿಸುವರು. ಡಾಕ್ಟರ್ ಮಂಯಾಸೊ(?) ಡಾ. ಸಿಲ್ವಾ ಎಂಬುವರು ಅಲ್ಲಿಗೆ ಹೋದಾಗ ಮಾಂಸಾಹಾರಿಯಾದ ವಿಚಿತ್ರತರದ ಒಂದು ಮರವನ್ನು ಕಂಡುಹಿಡಿದಿರುವರು. ಈ ಅಸಾಮಾನ್ಯ ವೃಕ್ಷದ ಕಾಂಡವು ೩ ಅಡಿ ಸುತ್ತಳತೆಯುಳ್ಳದ್ದಾಗಿ ೨೦ ಅಡಿ ಎತ್ತರವಿದೆಯಂತೆ. ಇದರ ತುದಿಯಲ್ಲಿಯೇ ದಪ್ಪವಾದ ಎಲೆಗಳು ಕವಿದುಕೊಂಡಿವೆ. ಈ ಎಲೆಗಳು ೧೫ ಅಡಿ ಉದ್ದ, ೩ ಅಡಿ ಅಗಲ, ಒಂದು ಇಂಚು ದಪ್ಪ. ಈ ಮರದಿಂದ ಒಂದು ತರದ ಸುಗಂಧವು ಹೊರಡುತ್ತಿರುವುದು. ಈ ಸುಗಂಧವು ಪ್ರಾಣಿಗಳೆಲ್ಲವನ್ನೂ ಅದರ ಸಮೀಪಕ್ಕೆ ಆಕರ್ಷಿಸುತ್ತಿರುವದು. ಆದರೆ ಅದನ್ನು ಸಮೀಪಿಸಿದರೆ ಪ್ರಾಣಿಗಳು ಪ್ರಾಣದಿಂದ ಉಳಿಯಲಾರವು. ಈ ಸುಗಂಧದಿಂದ ಆಕರ್ಷಿಸಲ್ಪಟ್ಟ ಮಂಗಗಳು ದೂರದಿಂದ ಓಡಿಬಂದು ಈ ಮರವನ್ನು ಹತ್ತುವವು. ಒಡನೆ ಅದರ ದೊಡ್ಡ ಎಲೆಗಳು ಮಂಗಗಳನ್ನು ಮುಚ್ಚಿಬಿಡುವವು. ಆಗ ಮಂಗಗಳು ಮರದೊಳಗೆ ಮಾಯವಾಗುವವು. ಮೂರು ದಿನಗಳ ತರುವಾಯ ಎಲೆಗಳು ಪುನಃ ಬಿಡಿಸಿಕೊಳ್ಳುವವು. ಆಗ ನೋಡಿದರೆ ಮಂಗಗಳ ಎಲುಬುಗಳು ಮಾತ್ರ ಕಾಣಸಿಗುವವು. ಮಾಂಸವೆಲ್ಲವೂ ಮರದಿಂದ ತಿನ್ನಲ್ಪಡುವದು.

ಲೆಕ್ಕ ಬರೆಯುವ ಮೆಶಿನುಗಳು.

ಲಂಡನಿನ ಮಿಡ್‌ಲೇಂಡ್ ಬೇಂಕಿನಲ್ಲಿ ಲೆಖ್ಖವನ್ನು (ಲೆಜರ್) ಬರೆಯುವ ಒಂದು ಮೆಶಿನನ್ನು ಇಟ್ಟಿರುವರು. ಇದು ಆ ಬೇಂಕಿನ ಎಲ್ಲಾ ಲೆಕ್ಕಪತ್ರಗಳನ್ನು ಬರೆಯುವುದು. ಅದನ್ನು ಬರೆಸುವಾತನು ಪುಸ್ತಕವನ್ನು ಮೆಶಿನಿನಲ್ಲಿಟ್ಟು ಗುಬ್ಬಿಗಳನ್ನು ಒತ್ತುತ್ತಾ, ಜಮಾ, ಖರ್ಚು, ಬಾಕಿ ಮೊದಲಾದವುಗಳನ್ನು ಘಳಿಗೆಯೊಳಗೆ ಬರೆಸುವನು. ಬರೆದದ್ದು ತಪ್ಪಾಗಿ ಇದ್ದರೆ ಅದು ಕೂಡಲೇ ತಿಳಿಯುವುದು. ಅಲ್ಲದೆ ಅದನ್ನು ಒಡನೆ ಸುಲಭವಾಗಿ ಸರಿಪಡಿಸಬಹುದು. ಒಂದು ವಾರದೊಳಗಾಗಿ ಯಾವ ಮನುಷ್ಯನಾದರೂ ಇಂತಹ ಮೆಶಿನುಗಳಿಂದ ಕೆಲಸಮಾಡಿಸಲು ಕಲಿಯಬಹುದಂತೆ.

ವಿಯೋಗ.

ಕಾಲ ಘೋರದೆಯೊ ! ಕಾಲವಾದೆಯೊ !
ದೇವ ಲೋಕದ ಸಾರ್ದೆಯೋ ॥
ಅಳುವರೆಸರ ! ಹಾಳುತನವನು !
ಕಾಣಲಾರದೆ ಸಾರ್ದೆಯೋ ॥ ೧ ॥

ಇಂದು ಬಂದಿಹ ! "ಸವಿತೃ" ವಾರ್ತೆಯ !
ತಿಳಿಸ ಗರುಹಲು ಸಾರ್ದೆಯೋ ॥
ಹಿಂದು ದೇವಿಯು ! ನೊಂದು ನೋವುದ !
ನೋಡೆನೆನ್ನುತ ಸಾರ್ದೆಯೋ ॥ ೨ ॥

ದೇಶ ಸೇವೆಯ ! ಈಶ ಸೇವೆಯು !
ಎಂಬ ಧ್ಯೇಯದ ಹೊತ್ತೆಯೋ ॥
ದೇಶ ಸೇವೆಯ ! ಮಾಡಿ ತೋಷದಿ !
ದೇಹವನ್ನೇ ತೆತ್ತೆಯೋ ॥ ೩ ॥

ಕಾರ್ಯ ರಂಗದೆ ನೀನು ಅಂಜದೆ !
ಭಾರಿ ಶೌರ್ಯವ ತೋರಿದೆ ॥
ಆರ್ಯ ಜನನಿಯ ! ವೀರ ಪುತ್ರರ !
ಹಾವನೇ ನೀ ಸೇರಿದೆ ॥ ೪ ॥

"ಮುರಿದುಂಡಿ"

(೧೩ನೇ ಪುಟದಿಂದ ಮುಂದೆ ಸಾಗಿದುದು)

ನನ್ನ ಹತ್ತಿರ ರಾಜೇ ಮಾತಾಡಿಕೊಂಡರು, "ಅಕ್ಕರೇ ಹ್ಯಾಗಾದರೂ ನಾವೂ ನೀವೂ ಒಂದೇ. ಏನೋ ಕೆಟ್ಟಗಳಿಗೆಯಲ್ಲಿ ನಾಲ್ಕು ಮಾತಾಯಿತು. ಅದನ್ನು ಮರತು ಬಿಡಿ. ಈ ಸಾರಿ ನನಗೊಂದು ಪ್ರಸಿಡೆಂಟು ಮಾಡಿದರೆ ಹತ್ತು ನೋಟುಕೊಡುತ್ತೇನೆ. ಆದರೆ ಮಾತ್ರ ಮಹದೇವಯ್ಯನ ಸುದ್ದಿ ಅಡಗಿಸಿಬಿಡಬೇಕು ಅಂದರು. ಎಷ್ಟೆಂದರೂ ನಮ್ಮ ಅಣ್ಣಪ್ಪಯ್ಯ ಬಿಡಲಿಕ್ಕಾಗುತ್ತದೋ ಹೇಳಿ ಮಾತುಕೊಟ್ಟೆ. ಈಗ ನಮ್ಮ ಪಾರ್ಟಿ ಓಟೆಲ್ಲಾ ಅಣ್ಣಪ್ಪಯ್ಯ ಮತ್ತು ನಿಮಗೆ ಎಂತ ಸೈಂಟಾಗಿದೆ. ಮಹದೇವಯ್ಯನವರ ಏಜಂಟರನ್ನೆಲ್ಲಾ ತಿರುಗಿಸಿ ಆಯಿತು. ಹೆಚ್ಚು ಕೇಳಿದರೆ ಓಟಿಗೊಂದು ನೋಟಿನ ವರೆಗೂ ಸರಿ. ನಿಮ್ಮ ಮೆಂಬರೀ ಜವಾಬ್ದಾರೀ ನಮಗೆ. ಅಣ್ಣಪ್ಪಯ್ಯನವರ ಪ್ರಸಿಡೆಂಟಗೇ ಜವಾಬ್ದಾರಿ ನಿಮಗೆ. ಏನಿಲ್ಲ ಒಂದು ಸಾರಿಗೆ ಮಹದೇವಯ್ಯನಿಗೆ ಮಂಗಳಾರತಿಯಾಯಿತೆಂದರೆ ನಮ್ಮ ಕೆಲ್ಸ ಮುಗಿಯಿತು. ಮುಂದೆ ಯಾರು ಏನಾದರೇನು?

ಪ್ರಭು—ನಿಜವಪ್ಪ! ಇದೋ ಮಾತು ತೆಗೆದುಕೊಳ್ಳಿ. ಅಕ್ಕರೇ ಇದ್ದರೆ ನಿಮ್ಮಂತಹವರು ಇರಬೇಕು. ಅಂತೂ ನಮ್ಮ ಹೆಸರಿನಿಂದ ಈ ಸಾರಿ ಪ್ರಭುಗಳ ಮಿಸೆ ಮೇಲಾಯ್ತು.

(ಅಂಕದ ತೆರೆ ಬೀಳುವುದು).

(ಸಶೇಷ)

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

[illegible] ಕನ್ವೆಯನ್ಸ್, Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1). ಈ ಕಂಪೆನಿಯವರು ಬಹುಜನರಿಗೆ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M. Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಸುಪ್ರಸಿದ್ಧ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿವ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟ್ಯಾಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಪಾಲಘಾಟು, ಕಣ್ಣನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಮುಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಫ್ಯೂರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕುಂದಾಪುರ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನಿಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರು, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S. K. [illegible]

ದಿ ಕನ್ನಡ [illegible]

[illegible]

ನಮ್ಮಲ್ಲಿ [illegible] ಗಳು, ಸರ್ಪೇರಿ [illegible] ದಾಳಿಂಬ, ಪನ್ನೇರಳೆ ಮುಂತಾದ [illegible] ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟಿವೆ [illegible] ಇಲ್ಲದೆ ಚೆನ್ನಾಗಿ ಫಲಬಿಡುವವು [illegible] ಗಳು ಕರಾವಳಿ ಹವೆಗೂ ಮಣ್ಣಿಗೂ [illegible] ಬಿಡುವುದಿಲ್ಲ. ಕ್ರಯ ಪಟ್ಟಿಗೆ [illegible] ಬರೆಯಿರಿ. ಗಿಡಗಳು ಮಂಗಳೂರು [illegible] ಯಾಜೆಯವರಲ್ಲಿ ದೊರೆಯುವವು.

ಕೆ. ಮುದ್ದಣ್ಣ ಶೆಟ್ಟಿ, ದಿ. ಕೆನರಾ ನರ್ಸರಿ, ರಿಸರ್ಚ್ ಗಾರ್ಡನ್, ಕಾಪು ದ.ಕ. | C/o [illegible], ಮಂಗಳೂರು ದ. ಕ.

131028

THE BANKING & INDUSTRIAL INDSYCATE LTD.,

BOMBAY.

9250/—Cash loans granted without interest for 10 years in 1928. Concession enlistment commences from 1st November for distributing loans of Rs. 5000/- on 31st January, 1929. Paid Agents Wanted. For rules and list of loans granted, enclose two annas stamps.

BANKING & INDUSTRIAL SYNDICATE, Ltd.
Bombay 2.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ಯೇಜಂಟ್ಸ್ ಗಿ, ಯಂಟವರ್ಪಿನಿಂದ ತರಿಸುವ ವಜ್ರಗಳು — ಮಾರಾಟಕ್ಕಿವೆ.

ಬೋಳ ಮಂಗೇಶ ರಾವು.
ಮಂಗಳೂರು

ಮಲೇರಿಯಾನ ಸರ್ವಜ್ವರಸಂಹಾರಿಣಿ

ಕ್ರಯ 8 ಡಿಬ್ಬಿಗೆ 1-9-0 ½ ಡಜನಿಗೆ 8-8-0 ಡಜನಿಗೆ 16-8-0

ಧಿಟನಂಬು! ಪುಷ್ಟನಾಗು!! ನೆಟ್ಟಗಾಗು!!

ಯುವಕನೇ ನಿನ್ನ ಬೆಲೆ ಯಾವದರಲ್ಲಿದೆ? ಸೌಮ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ?

ಆರೋಗ್ಯವಿಲ್ಲವೇ? ದೇಹವು ಕ್ಷೀಣವಾಗಿದೆಯೇ? ಮನಸಂತೋಷ ತಪ್ಪಿದೆಯೇ? ಜ್ಞಾಪಕ ಶಕ್ತಿ ಕುಂದಿರುವುದೇ? ಮುಂಗೋಪ ಜಾಸ್ತಿ ಇದೆಯೇ? ಆಲಸ್ಯ ತುಂಬಿರುವದೇ? ಚುರುಕು ಚಟುವಟಿಕೆ ಇಲ್ಲವೇ? ವ್ಯಾಕುಲತೆಯಿಂದ ಮರುಗುತ್ತೀಯೋ? ಸುಖವಾಗಬೇಕೆಂಬ ಇಚ್ಛೆ ಇದೆಯೇ? ಹಾಗಾದರೆ ಇಗೋ ಬಹು ಗುಣಕರವಾದ 'ಕಂಪೌಂಡ್ ಸಿರಪ್ ಸಾಲಿಸಪರಿಲ' ಎಂಬ ಅಮೃತವನ್ನೇ ಸೇವಿಸು. ಆವಾಗ ಮೇಲಿನ ಅವಲಕ್ಷಣತೆಗಳು ತೀರ ಗುಣವಾಗಿ ಬಹು ಆರೋಗ್ಯವೂ ಶರೀರ ಪುಷ್ಟಿಯೂ ಉಂಟಾಗಿ ನಿನ್ನ ಬೆಲೆ ಆರೋಗ್ಯದಲ್ಲಿಯೇ ಇದೆಯೆಂದು ನಿನಗೆನೇ ತೋರಿ ಬರುವುದು.

ಕ್ರಯ: 8 ಔನ್ಸ್ ಸೀಸೆಗೆ ರೂ. 3—8—0.

ಯುವತಿಯೇ ನಿನ್ನ ಸುಂದರವಾದ ಉಡುಪು ಯಾವುದು? ಅಚ್ಚುಗಟ್ಟಾಗಿ ಹೊಳಪುವ ನಿನ್ನ ಆರೋಗ್ಯದ ದೇಹವಲ್ಲವೆ?

ನಿನ್ನ ದೇಹವು ಅಚ್ಚುಗಟ್ಟಾಗಿಲ್ಲವೇ? ರೂಪಕ್ಕೆ ಕಳೆ ಬಂದಿಲ್ಲವೇ? ಮುಖ ಕಳೆಗುಂದಿದೆಯೇ? ಕೈಕಾಲು ಬಚ್ಚುವದೇ? ಎದೆ ನಡುಗು, ಆಯಾಸ ಉಂಟೋ? ರಕ್ತ ಪ್ರಾಯವಿಲ್ಲವೇ? ಅಜೀರ್ಣವಿದೆಯೇ? ಸೊಂಟ ನೋವು ಉಂಟೋ? ತಲೆಕೂದಲು ಉದುರುವುದೇ? ತಲೆತಿರುಗು ಉಂಟೋ? ದೃಷ್ಟಿ ಸರಿಯಿಲ್ಲವೇ? ಕಟ್ಟಳೆ ಅಕ್ರಮವಾಗಿದೆಯೋ? ಆವಾಗ ಉತ್ತಮ ಜಾಸ್ತಿಯೇ ಇವರಿಂದ ದಿನಗಳ ಹೊಂದಲು ಇಚ್ಛೆ ಇದೆಯೇ? ಹಾಗಾದರೆ ಗುಣ ಸೇವಿಸಿಯಿಂದಿರುವ ಕಂಪೌಂಡ್ ಸಿರಪ್ ಸೇಫ್ ಸಸಿಯುಕೆಂಬವನ್ನು ಅಂಗೀಕರಿಸು. ಈ ಗುಪ್ತಹಿಂಸೆಯಿಂದ ನಿನ್ನನ್ನು ಬಿಡಿಸಿ ಶರೀರ ಪುಷ್ಟಿಯಾಗುವಂತೆಯೂ ಮುಖಕಳೆಗಳು ಹೊಳೆಯುವಂತೆಯೂ ದೇಹಕ್ಕೆ ಬಲಶಕ್ತಿ ಸಿಗುವಂತೆಯೂ ಖಂಡಿತ ಸಹಾಯವಾಗುವದು. ಆವಾಗ ಆರೋಗ್ಯವುಳ್ಳ ದೇಹವೇ ಹೊಳೆಯುವ ನಿನ್ನ ಸುಂದರವಾದ ಉಡುಪಾಗಿದೆ ಎಂದು ನಿನಗೇನೇ ಖಚಿತವಾಗುವದು.

ಕ್ರಯ 8 ಔನ್ಸಿನ ಬಾಟ್ಲಿಗೆ ರೂ. 3—8—0

ಕೆಟಲಾಗಿಗೆ ಬರೆಯಿರಿ—

ಮಲೇರಿಯಾನ ಕಂಪೆನಿ,
ಮಂಗಳೂರು, ದ. ಕ.

22698



ಎಫ್. ಮುಲ್ಲರರ
ಆಯಿಲ್
ಎಕ್ಸ್‌ಪೆಲ್ಲರ್.

ಎಣ್ಣೆಬೀಜಗಳಿಂದಲೂ, ಎಣ್ಣೆಯುಳ್ಳ ಹಣ್ಣುಗಳಿಂದಲೂ, ಎಣ್ಣೆಯನಿಳಿಸಲಿಕ್ಕೆ ಅದ್ವಿತೀಯ ಉಪಕರಣ.

ಕಾರ್ಯದಲ್ಲಿ ಸುಲಭ—ಸಂಪೂರ್ಣ ಸ್ವತಶ್ಚಲನಕ—ಕಡಿಮೆ ಖರ್ಚು ಕಡಿಮೆ ಪವರಿನ ವ್ಯಯ—ಹೆಚ್ಚಿನ ಎಣ್ಣೆಯ ಲಾಭ.

ಮುಖ್ಯ ಏಜಂಟರು—

VOLKART BROS ENGINEERS

Armenian Street, MADRAS.

ರೋಲರ್ ಮಿಲ್ಲುಗಳು, ಡಿಸ್‌ಇಂಟೆಗ್ರೇಟರುಗಳು, ಫಿಲ್ಟರ್ ಪ್ರೆಸ್‌ಗಳು, ಆಯಿಲ್ ಪಂಪುಗಳು, ಹರಳ ಬೀಜವನ್ನು ಒಡೆಯುವದಕ್ಕೆ ತಕ್ಕದಾದ ಸಣ್ಣ ಹೈಡ್ರೋಲಿಕ್ ಪ್ರೆಸ್ ಪ್ಲೇಂಟುಗಳನ್ನೂ ನಾವು ಒದಗಿಸುವೆವು.

ಎಲ್ಲಾ ಎಣ್ಣೆಯ ಮಿಲ್ಲುಗಳ ಕುರಿತು ಒಳ್ಳೆಯ ಸಲಹೆಗಳನ್ನು ಕೊಡುವೆವು.

ವಿದೇಶಿ ವಸ್ತ್ರ ಬಹಿಷ್ಕಾರ.

ವಿದೇಶಿ ವಸ್ತುಗಳೂ ವಸ್ತ್ರಗಳೂ ಬಹಿಷ್ಕರಿಸಲ್ಪಡತಕ್ಕವೆ. ಆದರೆ ಈಗಣ ಬಹಿಷ್ಕಾರವು ಅಷ್ಟೊಂದು ಪ್ರಾಮುಖ್ಯತೆಯನ್ನು ತಳೆದಿಲ್ಲ. ವಿದೇಶಿ ವಸ್ತ್ರವನ್ನು ಬಹಿಷ್ಕರಿಸಬೇಕಾದರೆ ಸ್ವದೇಶಿ ವಸ್ತ್ರಗಳ ಮೇಲೆ ಬಲವಾದ ಪ್ರೀತಿಯು ಉಂಟಾಗಬೇಕು. ಸ್ವದೇಶಿ ಚಳವಳದ ಮೇಲೆ ತುಂಬಾ ಅಭಿರುಚಿಯುಂಟಾಗಬೇಕು.

ವಿದೇಶಿ ವಸ್ತ್ರಬಹಿಷ್ಕಾರದ ಆಲೋಚನೆಯನ್ನೂ, ಖಾದಿ ಚಳವಳವನ್ನೂ ಮಹಾತ್ಮಾಜಿಯವರೇ ಮುಂದಕ್ಕೆ ತಂದವರು. ಅಂದಿನಿಂದ ಹಲವು ಬದಲಾವಣೆಗಳುಂಟಾಗಿವೆ. ಹಲವರು ಖಾದಿಯನ್ನು ಪ್ರೋತ್ಸಾಹಿಸುವರು. ಹಲವರು ವಿದೇಶಿ ವಸ್ತ್ರಗಳನ್ನು ಪ್ರೀತಿಸುವರು. ಹಲವರು ಹಿಂದೀ ಗಿರಣಿಗಳಲ್ಲಿ ಆದ ವಸ್ತ್ರಗಳನ್ನು ಕೊಂಡುಕೊಂಡರೆ ಸಾಕೆನ್ನುವರು. ಆದರೆ ಕೆಲವರು ವಿದೇಶಿ ವಸ್ತ್ರವನ್ನು ಪೂರ್ಣವಾಗಿ ಬಹಿಷ್ಕರಿಸಿ, ನಾವೇ ನೂಲು ಮಾಡಿ ನಾವೇ ನೈದ ವಸ್ತ್ರವನ್ನು ಉಡಬೇಕೆನ್ನುವರು. ಈ ಆಲೋಚನೆಯೇ ಸರಿಯಾದ ಆಲೋಚನೆಯೆನ್ನಬೇಕಾಗುವುದು. ನಮ್ಮ ದೇಶದ ಐಶ್ವರ್ಯವು ವಿದೇಶಿ ವಸ್ತ್ರಗಳಿಗಾಗಿಯೇ ವಿನಿಯೋಗಿಸಲ್ಪಡುವದೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಇತ್ತೀಚೆಗೆ ತೆಗೆದ ಲೆಖ್ಖದಿಂದ ನಾವು ೬೫,೦೪,೭೩,೯೬೬ ರೂಪಾಯಿಯ ವಸ್ತ್ರವನ್ನು ತರಿಸುತ್ತಿರುವೆವೆಂದೂ, ೭ ಕೋಟಿ ರೂಪಾಯಿಯ ನೂಲನ್ನು ತರಿಸುವೆವೆಂದೂ ಗೊತ್ತಾಗಿರುತ್ತದೆ. ನಮ್ಮ ಆಮದುಗಳಲ್ಲಿ ಇದು ಮೊದಲನೆಯದು, ಅಂದರೆ ಶೇಕಡಾ ೩೦ರಷ್ಟು. ಎರಡನೆಯದೇ ಲೋಹಗಳ ಆಮದು. ಶೇಕಡಾ ೧೦ರಷ್ಟು. ಮೂರನೆಯದು ಸಕ್ಕರೆ, ಶೇಕಡಾ ೭ರಷ್ಟು. ಹತ್ತಿಯ ವಸ್ತ್ರವನ್ನು ತಯಾರಿಸುವದೇ ಸಾಧ್ಯವಿರುವಂತಹ ಈ ದೇಶದಿಂದ ಹತ್ತಿಯನ್ನು ವಿದೇಶಗಳಿಗೆ ಕಳುಹಿಸಿ, ಅಲ್ಲಿಂದ ವಸ್ತ್ರವನ್ನು ತರಿಸಿ ನಮ್ಮ ಹಣವನ್ನು ಅವರ ಜೋಳಿಗೆಗೆ ಸುರಿಯುತ್ತಿರುವುದು ಹಿಂದೀಯರಿಗೆ ಅವಮಾನಾಸ್ಪದವಾದುದು. ವಸ್ತ್ರದ ಸಲುವಾಗಿ ಪರರ ಮೇಲೆ ಆಧರಿಸಿರುವದು ತೀರಾ ನಾಚಿಕೆ; ಅದು ಕೂಡ ನಮಗೆ ವಸ್ತ್ರ ತಯಾರಿಸಲು ಸಾಧ್ಯವಿಲ್ಲದೆಯಲ್ಲ. ಕೇವಲ ನಮ್ಮ ಅಲಕ್ಷ್ಯದ ಕಾರಣದಿಂದ. ನಾವು ತರಿಸುವಂತಹ ವಸ್ತ್ರದಲ್ಲಿ ಶೇಕಡಾ ೮೦ರಷ್ಟು ಬ್ರಿಟನಿನಿಂದಲೂ ಉಳಿದುದು ಜಪಾನಿನಿಂದಲೂ ಬರುವದು. ಬ್ರಿಟಿಷ ವಸ್ತ್ರವನ್ನು ಬಹಿಷ್ಕರಿಸಿದರೆ ಅದರ ಸ್ಥಾನವನ್ನು ಜಪಾನರೇ ಆಕ್ರಮಿಸುವುದರಿಂದ ನಮ್ಮ ಬಹಿಷ್ಕಾರವು ಯಾವ ಪ್ರಯೋಜನಕ್ಕೂ ಬಾರದು. ಬ್ರಿಟಿಷರಿಗೆ ದಾಸರಾಗಿರುವ ಬದಲು ಜಪಾನಿನ ದಾಸರಾಗಿರಬೇಕಾಗುವುದು. ಆದುದರಿಂದ ಬ್ರಿಟಿಷ ವಸ್ತ್ರ ಬಹಿಷ್ಕಾರವನ್ನು ಮಾತ್ರ ಕೈಕೊಳ್ಳದೆ ಪೂರ್ಣ ವಿದೇಶಿ ವಸ್ತ್ರ ಬಹಿಷ್ಕಾರವನ್ನೇ ಪ್ರಾರಂಭಿಸಬೇಕು. ಇದರಿಂದಲೇ ನಮ್ಮ ಹಣವು ನಮ್ಮೊಡನೆ ಉಳಿಯುವುದು. ನಮ್ಮ ದೇಶವು ಸಂಪತ್ಸಮೃದ್ಧವಾಗುವುದು.

ಇಂತಹ ಬಹಿಷ್ಕಾರವು ಧಾನ್ಯದ ಅಭಿವೃದ್ಧಿಗೆ ಅತ್ಯಾವಶ್ಯಕವಾದುದೇನೋ ನಿಜ. ಆದರೆ ಅದು ಸಾಧ್ಯವಿದೆಯೋ ನೋಡೋಣ. ಸಾಧ್ಯವಿದೆಯೆಂದು ಹೇಳುವವರಾದರೂ, ವಿದೇಶಿ ವಸ್ತ್ರದ ಆಮದನ್ನು ನಿಲ್ಲಿಸಿದೊಡನೆ ನಾವು ವಸ್ತ್ರವಿಲ್ಲದೆ ಕಷ್ಟಪಡಬೇಕಾಗುವುದೆಂದು ಕೆಲ ಜನರು ಹೇಳುವರು. ಬಹಿಷ್ಕಾರವನ್ನು ಒಂದೇ ಸಲ ಕೈಕೊಳ್ಳದೆ ಸ್ವಲ್ಪ ಸ್ವಲ್ಪನೆ ಹೆಚ್ಚಿಸುತ್ತಿರಬೇಕು. ಆ ಅವಧಿಯಲ್ಲಿ ನಮಗೆ ಬೇಕಾಗುವಂತಹ ವಸ್ತ್ರಗಳೆಲ್ಲವನ್ನೂ ನಮ್ಮ ದೇಶದ ಗಿರಣಿಗಳು ತಯಾರು ಮಾಡುವ ಹಾಗಾಗಬೇಕು ಎಂದು ಕೆಲವರ ಅಭಿಪ್ರಾಯ. ನಮ್ಮ ಬಹಿಷ್ಕಾರವು ಗಿರಣಿಗಳ ಮೇಲೆ ಆಧರಿಸಬೇಕಾದರೆ ಒಂದು ಶತಮಾನದವರೆಗೂ ನಾವು ವಿಜಯಿಗಳಾಗಲಾರೆವು. ನಾವು ವರ್ಷಕ್ಕೆ ೧೬೦೦ ಮಿಲಿಯ ಗಜವಸ್ತ್ರ ತರಿಸುವೆವು. ಇಲ್ಲಿಯ ಗಿರಣಿಗಳಿಗಾಗಿ, ೫೦ ಮಿಲಿಯ ಪೌಂಡು ನೂಲು ತರಿಸುವೆವು. ಆ ನೂಲಿನಿಂದ ೨೫೦ ಮಿಲಿಯ ಗಜ ನೂಲು ತಯಾರಾಗುವುದು. ಹಾಗಾದರೆ ಒಟ್ಟಿಗೆ ತರಿಸುವದು ೧೮೫೦ ಮಿಲಿಯ ಗಜ ವಸ್ತ್ರವೆಂದಾಯಿತು. ಆ ಸಮಯದಲ್ಲಿ ಗಿರಣಿಗಳಲ್ಲಿ ೨೩೫೦ ಮಿಲಿಯ ಗಜ ವಸ್ತ್ರವು ತಯಾರಾಗುವುದು. ಮತ್ತು ೭೬೩ ಮಿಲಿಯ ಪೌಂಡು ನೂಲು ತಯಾರು ಆಗಿ ೬೮೭೫ ಮಿಲಿಯ ಗಜ ವಸ್ತ್ರವು ತಯಾರಾಗುವುದು. ಹಾಗಾದರೆ, ಹಿಂದೂಸ್ಥಾನಕ್ಕೆ ಒಟ್ಟಿಗೆ ಬೇಕಾದ ವಸ್ತ್ರವು ೭೮೫೫ ಮಿಲಿಯ ಗಜ.

ವಿದೇಶಿ ವಸ್ತ್ರವನ್ನು ಬಹಿಷ್ಕರಿಸುವುದಾದರೆ ಹಿಂದೂಸ್ಥಾನದ ಗಿರಣಿಗಳು ವರುಷಕ್ಕೆ ೧೮೫೦ ಮಿಲಿಯ ಗಜ ವಸ್ತ್ರವನ್ನು ಹೆಚ್ಚು ತಯಾರಿಸಬೇಕು. ಆದರೆ ನಮ್ಮ ಗಿರಣಿಗಳ ಇತ್ತೀಚಿನ ಅಭಿವೃದ್ಧಿಯನ್ನು ನೋಡುವದಾದರೆ ಇದು ಕೇವಲ ಅಸಂಭವವಾದುದೆಂದು ತಿಳಿಯಬೇಕಾಗುವುದು. ನಮ್ಮ ಗಿರಣಿಗಳಲ್ಲಿ ಅಭಿವೃದ್ಧಿಯ ಸೂಚನೆಗಳೇ ತೋರುವುದಿಲ್ಲ. ಇಷ್ಟು ವಸ್ತ್ರವನ್ನು ತಯಾರಿಸಬೇಕಾದರೆ ಕಡಿಮೆ ಪಕ್ಷ ೧೭೦,೦೦೦ ಮಗ್ಗಗಳಿರಬೇಕು. ೧೮೮೦ರಿಂದ ೧೯೧೪ರ ವರೆಗೆ ಗಿರಣಿಗಳಲ್ಲಿ ಬಹಳ ಅಭಿವೃದ್ಧಿಯುಂಟಾಯಿತು. ೧೯೧೪ರಿಂದ ೧೯೨೧ರ ವರೆಗಿನ ಅಭಿವೃದ್ಧಿಯು ಮೊದಲಿನಷ್ಟು ಹೆಚ್ಚಾಗಿರಲಿಲ್ಲ. ೧೯೨೧ರಿಂದ ಅಭಿವೃದ್ಧಿಯು ಶೂನ್ಯವಾಗಿದೆಯೆಂದೇ ಹೇಳಬೇಕು. ಮುಂದೆಯೂ—ಅಭಿವೃದ್ಧಿಯಾದೀತೆಂದು ಹೇಳಲಾಗುವುದಿಲ್ಲ. ಗಿರಣಿಗಳ ಸ್ಥಾಪನೆಗೆ ಬೇಕಾದ ಅಪಾರ ಐಶ್ವರ್ಯ, ಹಣದ ಅಭಾವ ಇವೇ ಗಿರಣಿ ಕೈಗಾರಿಕೆಯ ಅಭಿವೃದ್ಧಿಗೆ ಮುಖ್ಯ ವಿಘ್ನಗಳಾಗಿವೆ. ೧೯೧೪ರಿಂದ ೧೯೨೫ರ ವರೆಗೆ ವರುಷದ ಉತ್ಪತ್ತಿಯು ೫೦ ಮಿಲಿಯ ಗಜದಂತೆ ಹೆಚ್ಚುತ್ತಾ ಬಂತು. ಇದೇ ರೀತಿಯ ಅಭಿವೃದ್ಧಿಯುಂಟಾದುದಾದರೆ ಹಿಂದೂಸ್ಥಾನಕ್ಕೆ ಬೇಕಾಗುವಂತಹ ಎಲ್ಲಾ ವಸ್ತ್ರವನ್ನು ತಯಾರಿಸುವಂತಹ ಶಕ್ತಿಯು ಹಿಂದೂ ಗಿರಣಿಗಳಿಗೆ ಸುಮಾರು ೫೦ ವರುಷಗಳ ತರುವಾಯವೇ ಉಂಟಾಗಬಹುದು. ಗಿರಣಿಗಳ ಅಭಿವೃದ್ಧಿಯಾಗಬೇಕಾದರೆ ವಿದೇಶದಿಂದ ಹಣವನ್ನು ಸಾಲವಾಗಿ ಪಡೆಯಬೇಕು, ಅದು ನಮ್ಮ ದೇಶದಂತಹ ಬಡ ದೇಶಕ್ಕೆ ಸಾಧ್ಯವಿದೆಯೆ?

ಇನ್ನು ನಮ್ಮ ಗಿರಣಿಗಳಲ್ಲಿ ಬೇಕಾಗುವಂತಹ ಮಶಿನು, ಕೆಲಸ ಮಾಡುವಂತಹ ಜನರು, ಇವೇ ಮೊದಲಾದುವುಗಳ ಸಲುವಾಗಿ ನಮಗೆ ವಿದೇಶೀಯರ ಸಹಾಯವು ಅತ್ಯಗತ್ಯವಾಗಿದೆ. ಈಗಿನ ಹಲವು ಗಿರಣಿಗಳು ವಿದೇಶಿಯರದ್ದೆ ಆಗಿವೆ. ನಮ್ಮ ಗಿರಣಿಗಳ ಅಭಿವೃದ್ಧಿಯನ್ನುಂಟುಮಾಡುವುದೆಂದರೆ ಬೇರೊಂದು ವಿಧದಲ್ಲಿ ವಿದೇಶೀಯರಿಗೆ ಲಾಭವನ್ನುಂಟುಮಾಡುವುದಲ್ಲದೆ ಬೇರೆಯಲ್ಲ. ಇದರಿಂದ ಪ್ರಯೋಜನವಿಲ್ಲ. ಒಂದು ವಿಧದ ನಷ್ಟವನ್ನು ಪರಿಹರಿಸಿ, ಇನ್ನೊಂದು ವಿಧದ ನಷ್ಟವನ್ನುಂಟುಮಾಡಿಕೊಂಡ ಹಾಗಾಗುವುದು. ಅಲ್ಲದೆ ಗಿರಣಿಗಳನ್ನು ನಡೆಸುವುದರಲ್ಲಿ ಇರುವ ತೊಡಕುಗಳನ್ನು ಪರಿಹರಿಸುವ ಉಪಾಯಗಳು ನಮ್ಮ ದೇಶದವರಿಗೆ ತಿಳಿದಿಲ್ಲ.

ಹಿಂದೂಸ್ಥಾನದಲ್ಲಿ ಹೆಚ್ಚೆಚ್ಚು ಗಿರಣಿಗಳನ್ನು ಪ್ರಾರಂಭಿಸುವುದರಿಂದ ನಿರುದ್ಯೋಗಿಗಳ ಸಂಖ್ಯೆಯು ಕಡಿಮೆಯಾಗಬಹುದೆನ್ನುವುದು ತೀರ ತಪ್ಪು. ಈಗಿನ ಗಿರಣಿಗಳಿಗೆ ೫೦ ಕೋಟಿಯ ಮೂಲಧನವನ್ನು ಹಾಕಿದ್ದರೂ ಒಟ್ಟಾರೆ ಒಂದೂವರೆ ಮಿಲಿಯ ಜನರಿಗೆ ಮಿಕ್ಕ ಊಟಕ್ಕೆ ಸಿಗುವುದಿಲ್ಲ. ಇಷ್ಟು ಜನರೂ ಸ್ವವ ನಾಯಕ ಸಂಗತಿಯವರು. ಅಭಿವೃದ್ಧಿಯಾದುದೇ ಆದರೂ ಒಟ್ಟಾರೆ ಮೂರು ಮಿಲಿಯಕ್ಕಿಂತ ಹೆಚ್ಚಿಗೆ ಜನರಿಗೆ ಕೆಲಸವು ದೊರೆಯಲಾರದು. ನಮ್ಮ ಜನರ ಒಂದನೇ ಮೂರಂಶವು ಕೆಲಸವಿಲ್ಲದಿರುವಾಗ, ಇದೊಂದು ದೊಡ್ಡ ಉಪಕಾರವಾಗದು. ಅದರ ಮೇಲೂ ಗಿರಣಿಗಳಲ್ಲಿ ಸೇರುವ ಮೂರು ಮಿಲಿಯ ಜನರೂ ಮನೆಗಳನ್ನು ತ್ಯಜಿಸಿ, ಪಟ್ಟಣಗಳಲ್ಲಿ ನಿಂತು, ಲಾಭದಾಯಕವಾದ ಕೃಷಿಯನ್ನು ಮರೆತೇ ಬಿಡುವ ಹಾಗಾಗುವುದು. ದೇಶಪ್ರೇಮಿಯಾದವನು ಎಂದಿಗೂ ಹೀಗಾಗಲು ಪ್ರೋತ್ಸಾಹಿಸನು.

ಒಟ್ಟಾರೆ ಹೇಳುವುದಾದರೆ ಹಿಂದೂಸ್ಥಾನದ ಗಿರಣಿ ಮುಂತಾದ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕಾದರೆ ಮೊದಲಾಗಿ ನಮ್ಮ ಮುಂದೆ ಇರುವ ಬೇರೆ ಕೆಲವು ಸಣ್ಣ ಪುಟ್ಟ ತೊಂದರೆಗಳನ್ನು ಹೋಗಲಾಡಿಸಬೇಕು. ದೇಶದಲ್ಲಿ ಶಾಂತಿಯುಂಟಾಗಬೇಕು. ಕೈಗಾರಿಕೆಯನ್ನು ಪ್ರಾರಂಭಿಸುವಾಗ ನಮ್ಮ ದೇಶದ ಸ್ಥಿತಿಯನ್ನರಿತು ಅದಕ್ಕನುಗುಣವಾಗುವಂತೆ ತಕ್ಕ ಮಶಿನರಿಯನ್ನು ಇಡುವುದು, ಅವುಗಳ ಅವಗುಣಗಳನ್ನು ತಿಳಿದು, ಅವುಗಳನ್ನು ನಿವಾರಿಸುವ ಸಾಧನೆಗಳನ್ನು ಕಲಿಯುವದೂ ಮುಖ್ಯವಾಗಿವೆ. ಅದಲ್ಲದೆ ದೇಶದಲ್ಲಿ ತಕ್ಕ ಆಡಳಿತೆಯಿರಬೇಕು. ಚೆನ್ನಾಗಿ ಸಹಾಯ ಮಾಡುವ ಸರಕಾರವಿರಬೇಕು. ಅಲ್ಲದೆ ನಿರುದ್ಯೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡಬೇಕು. ಆಗ ತಾನೆ ನಮ್ಮ ದೇಶದಲ್ಲಿ ಹೊಸ ಹೊಸ ಗಿರಣಿಗಳನ್ನು ಸ್ಥಾಪಿಸಬಹುದು. ತುಂಬಾ ವಸ್ತ್ರವನ್ನು ಉತ್ಪನ್ನ ಮಾಡಬಹುದು. ವಿದೇಶಿ ವಸ್ತ್ರದ ಬಹಿಷ್ಕಾರವನ್ನು ಜೋರಾಗಿ ನಡೆಸಬಹುದು.

ನಿಮಗಾಗಿ ಕಾದಿರುವ

ಮಕ್ಕಳಿರುವವು.

ಬಂಜೆಯಾದ ಹೆಂಗಸಿನ ಮನಸ್ಸಿನ ಸ್ಥಿತಿಯನ್ನು ಅರಿತಿರುವಿರಾ? ಅದನ್ನು ಮನುಷ್ಯನು ವರ್ಣಿಸಲಾರನು. ಅವಳಲ್ಲಿ ಫಲಿಸಲಾರದ ಆಪೇಕ್ಷೆಯು ತುಂಬಿರುವದು. ಜೀವನದ ಪೂರ್ಣ ಸಂತೃಪ್ತಿಯು ಆಕೆಯ ಭಾಗಕ್ಕಿಲ್ಲವು. ರಾತ್ರೆಹಗಲು, ಅವಳು ತನ್ನ ಅದೃಷ್ಟವನ್ನೇ ದೂರಿ, ತಮ್ಮ ಕೂಸುಗಳನ್ನು ಮುದ್ದಾಡುವ ಸುಖಿಗಳಾದ ತಾಯಿಂದಿರನ್ನು ಕಂಡೊಡನೆ ಮತ್ಸರವುಳ್ಳವಳಾಗುವಳು.

ಅಂತಹ ಹೆಂಗಸರಿಗೆ ಆಶೆಯನ್ನು ಉತ್ಸಾಹವನ್ನು ಹೆಚ್ಚಿಸಲು ನಮ್ಮ ಕಡೆ ಫೆಲೂನಾ ಮಾತ್ರೆ ಇದೆ. ವೈದ್ಯಕೀಯ ದೃಷ್ಟ್ಯಾ ನೋಡಿದುದಾದರೆ ಬಂಜೆತನವೆಂದು ಕರೆಯುವುದು ಕೇವಲ ಹುಟ್ಟುಗುಣವು. ಬಂಜೆತನವು ಹೆಚ್ಚಾಗಿ ಇಂದ್ರಿಯಗಳ ದೌರ್ಬಲ್ಯದಿಂದ ಉಂಟಾಗುವದು. ಕೇವಲ ಒಂದೆರಡು ಚಿಕಿತ್ಸೆಯಿಂದಲೂ ನಿವಾರಿಸಬಹುದು.

ಹೆಂಗಸರ ಫೆಲೂನಾ ಮಾತ್ರೆಗಳ ಮುಖ್ಯ ಕೆಲಸ ವೇನೆಂದರೆ ಅಂತಹ ಅಂತರಿಂದ್ರಿಯಗಳನ್ನು ಶುಚಿಪಡಿಸಿ, ಸರಿಯಾಗಿ ಕೆಲಸ ಮಾಡುವಂತೆ ಸರಿಗೊಳಿಸುವವು. ಶಿಶುಗಳ ಮೇಲೆ ಮಕ್ಕಳು ಹುಟ್ಟುವವು.

ಇದು ಮಾತ್ರವಲ್ಲ, ಫೆಲೂನಾ ಮಾತ್ರೆಗಳು ರಕ್ತವನ್ನು ಹೆಚ್ಚಿಸಿ, ಆಹಾರ ಜೀರ್ಣಾಂಗಗಳನ್ನು ಸ್ವಚ್ಛಗೊಳಿಸುವವು. ಆರೋಗ್ಯದ ತೊಂದರೆಗಳನ್ನು ಹೋಗಲಾಡಿಸುವವು, ತಾನು ಅಪೇಕ್ಷಿಸಿದನ್ನು ಹೊಂದಲಾಗದ ಹೆಂಗಸರಿಗೆ ಇಷ್ಟಾರ್ಥವನ್ನು ಸುಲಭದಲ್ಲಿಯೇ ಕೊಟ್ಟು ಸಂತೋಷಗೊಳಿಸುವವು.

ಇನ್ನೂ ಹೇಳುವುದಾದರೆ ಜೀವನವೇ ಉತ್ಸಾಹ ಭರಿತವೂ ಆನಂದಭರಿತವೂ ಆಗುವುದು. ಹೆಂಗಸರಿಗೆ ದಿನನಿತ್ಯದ ಮನೆಕೆಲಸವೂ, ಶಿಶುರಕ್ಷಣೆಯೂ ಭಾರವಾಗಿ ಕಾಣದು. ಏಕೆಂದರೆ ಅವಳು ಸುಖಿಯಾಗಿರುವಳು.

ವಾಚಕರೇ! ನಿಮ್ಮಲ್ಲಿ ಯಾರಾದರೂ ಮಕ್ಕಳಿಲ್ಲದಿರುವಿರೆ? ಬಳಲಿದವರಾಗಿರುವಿರೆ? ಅದಕ್ಕೆಲ್ಲ ತಕ್ಕ ಕಾರಣಗಳಿವೆ. ಫೆಲೂನಾ ಮಾತ್ರೆಗಳು ಅವುಗಳನ್ನು ಹೋಗಲಾಡಿಸಲಿ!



ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸರಿಂದಲೂ ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕಟ್ಟುಗಳಲ್ಲಿ ಮಾರಲ್ಪಡುವವು. ಬಾಟಲಿಗೆ ರೂ. 2—4—0.

ಮುಖ್ಯ ಏಜಂಟರು—ಪಟೇಲ್ ಮತ್ತು ಧೊಂಡಿ, ಪೋಸ್ಟು ಆಫೀಸು ಬೋಕ್ಸ್ 838, ಮುಂಬಾಯಿ. ಮತ್ತು ಪೋಸ್ಟು ಬೋಕ್ಸ್ 620 ಕಲ್ಕತ್ತ.

ಮದ್ರಾಸು ಸಂಸ್ಥಾನಕ್ಕೆ—

ದಾದಾ ಎಂಡ್ ಕೋ,

260 ಚೈನಾ ಬಜಾರ್ ರೋಡ್, ಮದರಾಸ್.

ಗರ್ಭಪತನ ಮೊದಲಾದವುಗಳಿಗೆ ಫೆಲೂನಾ ಮಾತ್ರೆಗಳು ಉಪಕಾರಿಯಾಗಲಾರವು. ಅವು ಸ್ವಾಭಾವಿಕವಾದ ಬೆಳವಣಿಗೆಗೆ ಮಾತ್ರವೇ ಸಹಾಯಕವಾಗುವವು. ಅವು ವನಸ್ಪತಿ ಧಾತುಗಳಿಂದಲೇ ತಯಾರಿಸಲ್ಪಟ್ಟವುಗಳಲ್ಲದೆ, ಪ್ರಾಣಿದನ್ಯ ಧಾತುಗಳು ಅವುಗಳಲ್ಲಿರುವುದಿಲ್ಲ. ಮಾಡುವಾಗ ಕೈಯಿಂದ ಮುಟ್ಟುವುದೂ ಇಲ್ಲ.

ದಕ್ಷಿಣ ಆಫ್ರಿಕದ ಕೇಪ್ ಟೌನಿನ ಗ್ರಹಮ್ ರೆಮಿಡಿಸ್ ಲಿಮಿಟೆಡ್ ಇವರಿಂದ ತಯಾರಿಸಲ್ಪಟ್ಟಿತು.

No 1a

ತಯಾರಾಗಿವೆ! ಮಾರಾಟಕ್ಕೆ ಸಿದ್ಧನಿವೆ!! ತ್ವರೆಮಾಡಿರಿ!!!

1929ನೇ ಇಸವಿಯ

ಪ್ರೊಕೆಟ್ ಡೈರಿಗಳು.

ಅಂದವಾದ ಚಲಿಕೊ ಬ್ಯಾಂಡಿನ ದೊಡ್ಡ ಸೈಜಿನ ಮುಚ್ಚಳ ಇದ್ದ ಡೈರಿ	0—14—0	ಅಂದವಾದ ಮೀಡಿಯಮ್ ಸಾಧಾ ಡೈರಿ	0— 8—6
" " ಮುಚ್ಚಳ ಇಲ್ಲದ್ದು	0—10—0	" ಸ್ಟಿಫ್‌ಬ್ಯಾಂಡ್ "	0— 7—0
" " ಮುಚ್ಚಳ ಇದ್ದ ಮೀಡಿಯಮ್ ಸೈಜಿನ ಡೈರಿ	0—11—0	" ಕೆಲಿಕೊ ಸಣ್ಣ ಸೈಜಿನ ಮುಚ್ಚಳದ್ದು	0—10—0
		" " ಮುಚ್ಚಳ ಇಲ್ಲದ್ದು	0— 6—0
		" ಸ್ಟಿಫ್‌ಬ್ಯಾಂಡ್ ಸಣ್ಣ ಸೈಜಿನ ಡೈರಿ	0— 4—0

ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಸ್ಥರಿಗೂ ತುಂಬಾ ಕಮಿಶನು ಕೊಡಲಾಗುವದು.

ಹೆಚ್ಚಿನ ಮಾಹಿತಿಗೆ ಬರೆಯಿರಿ—

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

Famous

Mysore Perfumes.

Best Incense sticks (Agar Bathis)

Maharaja Bathi	per seer (24 Tolas)	Rs. 20
Darbar	" "	" 15
Ananda	" "	" 12
Manmohan	" "	" 10
Musk Heena	" "	" 8
Dilkhaman	" "	" 8
Kasthuri Javaji	" "	" 10
Amber	" "	" 8
Rose	" "	" 6
Jasmin	" "	" 5
Punugu (Civet)	" "	" 4
Heena	" "	" 3
A Tin Case containing 300 Assorted Bathis of 12 kinds	"	6

Packing & Postage Extra.

The State Perfumery Mart,

Bangalore City,

Mysore State.

ಸ್ವದೇಶಾಭಿಮಾನಿಯ

ಹೊಸ ವರುಷದ ಅಂಕ

ಗ್ಲೇಜು ಕಾಗದದ ಮೇಲೆ ಮುದ್ರಣ.

ಸಚಿತ್ರ

ಚಿತ್ರಗಾರರು ತಮ್ಮ ಚಿತ್ರಗಳನ್ನೂ

ಲೇಖಕರು ಉತ್ತಮ ಲೇಖಗಳನ್ನೂ

ಕವಿಗಳು ತಮ್ಮ ಕಾವ್ಯಗಳನ್ನೂ

ಕತೆಗಾರರು ತಮ್ಮ ಕತೆಗಳನ್ನೂ

ಪ್ರಕಟಣೆಗಾಗಿ ಕಳುಹಿಸಬೇಕಾಗಿ ವಿನಂತಿ.

ಚಂದಾದಾರರಿಗೆ ಉಚಿತ. ಇತರರಿಗೆ ಬೆಲೆ ಆಣೆ.

ನಿತ್ಯ ಸಂಚಿಕೆಯ ಸೈಜಿನ 32 ಪುಟಗಳು.

ಜಾಹೀರಾತು ಕೊಡುವವರಿಗೆ ಉತ್ತಮ ಸಂದರ್ಭ!

ವ್ಯವಸ್ಥಾಪಕರು

ಸ್ವದೇಶಾಭಿಮಾನಿ,

ಮಂಗಳೂರು.

ಅರ್ಜುನ ಬಭ್ರುವಾಹನರ ಕಥೆಯನ್ನು ವಿವರಿಸಿ ಹುಡುಗರು ತಿಳಕೊಂಡರೋ ಎಂದು ನೋಡಲೋಸುಗ—

ಉಪಾಧ್ಯಾಯ—ಮಕ್ಕಳೇ, ಅರ್ಜುನನು ಬಭ್ರುವಾಹನನನ್ನು ತನ್ನ ಮಗನಲ್ಲವೆಂದು ಹೇಳಲಿಕ್ಕೆ ಕಾರಣವೇನು?

ಚುರುಕು ಹುಡುಗನೊಬ್ಬನೆಂದ—ತನ್ನ ಆಸ್ತಿಯಲ್ಲಿ ಪಾಲು ಕೊಡ ಬೇಕಾದೀತೆಂದು ಸರ್.

X X X X

ಬೀಡಿ ಸೇದಲಿಕ್ಕೆ ತಯಾರಾಗಿದ್ದ ಚಿಕ್ಕ ಹುಡುಗನೊಬ್ಬನನ್ನು ನೋಡಿ—

ಮುದುಕ—ಎಲ್ಲೈ, ಬೀಡಿ ಸೇದುವದು ಬಹಳ ಕೆಟ್ಟದು.

ಹುಡುಗ—ಅದಕ್ಕಾಗಿಯೇ ಬೆಂಕಿ ಹಚ್ಚುತ್ತೇನೆ.

X X X X

ಗೋಪಾಲ—ಎಲೇ, ಗೋವಿಂದಾ, ರಾಮನ ಮಾತುಗಳನ್ನು ಕೇಳುವಾಗ ನನ್ನ ತಲೆಯ ಮೇಲೆ ಸಿಡಿಲು ಬಿದ್ದಂತಾಗುತ್ತದೆ.

ಗೋವಿಂದ—ಅದಕ್ಕೆ ಯೋಚನೆ ಯಾಕೆ? ಇನ್ನು ಮುಂದೆ ಅವನ ಮಾತುಗಳನ್ನು ಕೇಳುವಾಗ ನಿನ್ನ ತಲೆಯ ಮೇಲೆ ವಿದ್ಯುದ್ವಾಹಕ ಯಂತ್ರವೊಂದನ್ನು (Electric conductor) ಇಟ್ಟಿರಾಯಿತು.

X X X X

ಬಾಲಕ ದರ್ಜೆಯನ್ನು ಪರೀಕ್ಷಿಸುವ ಸಮಯ—

ಇನ್ಸ್‌ಪೆಕ್ಟರ್—ಎಲೋ ರಂಗಾ, ಒಂದು ರೊಟ್ಟಿಗೆ (Bread) ಒಂದು ಆಣೆ ಕ್ರಯವಾದರೆ ಒಂದು ಆಣೆಗೆ ಎಷ್ಟು?

ರಂಗ—ಐದು ಸರ್.

ಇನ್ಸ್‌ಪೆಕ್ಟರ್ (ಆಶ್ಚರ್ಯದಿಂದ) ಹ್ಯಾಗೋ ಅದು?

ರಂಗ—ಒಂದು ಆಣೆಗೆ ಐದು ಸಿಕ್ಕುತ್ತದೆ ಸರ್.

X X X X

ಡಾಕ್ಟರ್ (ರೋಗಿಯನ್ನು ಕುರಿತು) ನಿಮ್ಮನ್ನು ನೋಡಿದ ಬಗ್ಗೆ (Visit) ನನಗೆ ಹಣವಿಲ್ಲವೇನು?

ರೋಗಿ—ಎಷ್ಟು ಸಲ ಸ್ವಾಮಿ.

ಡಾಕ್ಟರ್—ಹತ್ತು ಸಲ.

ರೋಗಿ—ಅದೇ ಸಮಯ ನಾನೂ ನಿಮ್ಮನ್ನು ನೋಡಿದ್ದೇನು, ಅದಕ್ಕೆದನ್ನು ವಜಾ ಮಾಡಿ ಸ್ವಾಮಿ.

V. T.

ಪಾಲಿಟಿಕ್ಸು ಚದುರಂಗ.

[illegible]—ಶ್ರೀ ಕೋಟ ಶಿವರಾಮ ಕಾರಂತ.
"ವಸಂತ" ಸಂಪಾದಕರು.

[illegible]—[illegible], ಮುದ್ರಿತರ ಕತೆಗಳಲ್ಲಿ ಪ್ರಾಣಿಗಳ ಸ್ವಾತಂತ್ರ್ಯದ [illegible] ಕೊರತೆಗಳನ್ನು, ಸಾಮಾನ್ಯವಾಗಿ [illegible] ಉದ್ದೇಶ, ವ್ಯಕ್ತಿಗಳ ಗುರುತನ್ನು [illegible] ಹಂಚಿಸಲೇಬೇಕಿರುವೆವು. ಇಲ್ಲಿ [illegible] ಬೇರೇ ವ್ಯಕ್ತಿಯಲ್ಲಿ ಚಿತ್ರಿತವಾಗಿರಬಹುದು, [illegible] ಗುಣಗಳು ಕೆಲವರಲ್ಲಿ ಹಂಚಿ ಬಂದಿರಬಹುದು. [illegible] ಅಪಾದನೆಯಿಲ್ಲ. ಇದರೊಳಗಿನ ಹೆಸರು [illegible] ಮನಸ್ಸಿಗೆ ಬಂದುದಾಗಿ ತಿಳಿಸುವೆವು.

ಪೀಠಿಕೆ.

[illegible] ಬರೆದ ಅಂತ ಎಲ್ಲಾದರೂ ಕನ್ನಡಾ ಪಂಡಿತರು [illegible] ಸಂಗೊತ್ತಿಲ್ಲ. ನಾನು ಮೊದಲೇ ಹೇಳ್ತೆ. ನಾನೂ [illegible] ಅಲ್ಲ ಎಂತ. ನಾಟ್ಯ ಚೆನ್ನಾಗಿ ಬರೆಯಲು [illegible] ಇಲ್ಲ. ಆದರೆ ಬರ್ದಿಕ್ಕೆ ನನ್ನ ಹಣೆಯ [illegible] ಬರೆಯಲಿಲ್ಲ. ಹೋಗ್ಲಿ ಕ್ಷಮಿಸಿ, ಆ ಸುದ್ದಿ, ಸದ್ಯಕ್ಕೆ ವಿಷಯ [illegible] ಹೇಳುವುದು ನನ್ನ ಹೊಟ್ಟೆ ಸಂಕಟ. ಅಗ್ಗದ ವಿಷ ಇದ್ರೆ [illegible], ಆದರೆ ಜೀವಹೋಗುತ್ತದಲ್ಲಾ ಅಂತ ಹೆದರಿಕೆ. ಇತ್ತ [illegible] ಎಂತೆಂಥ ಟ್ಯಾಕ್ಸುಗಳನ್ನು ಕೊಡಬೇಕಾಯಿತಲ್ಲಾ. ದಿನಕ್ಕೆ [illegible] ಅಕ್ಕಿಗಿಷ್ಟು ಮಾಡಿ ನಾಲ್ಕು ಕಾಸು ಕೂಡ್ಸಿ ಮನೆ ಮಕ್ಕಳ ಬಾಯಿಗೆ ಇಷ್ಟು ತಂಗ್ಳು ಹಾಕುವಾ ಎಂದರೆ, ಭಗ್ಗನೆ ಬರುತ್ತಾರೆ [illegible]. ಏನು ಬೋರ್ಡು ಮೆಂಬರಿಯೋ ದೇವರೇ ಬಲ್ಲ. ನನ್ನ ಮೇಲೆ [illegible] ಇಂಕಂ-ಟಾಕ್ಸ್—ವರ್ತಕೆರೆ. ಇಲ್ಲ ನಿವರ್ತಿ [illegible] ವರ್ತಕೆರೆ. ನಮ್ಮ ಪರ್ಸಿಡೆಂಟ್ರು ಸಾಹೇಬ್ರಿಗಿಷ್ಟು ಸಂಬಳ ದಕ್ಕಿ ನನಗಿಲ್ಲ. ಅಂಥಾ ನನ್ನ ಮೇಲೆ ಕಣ್ಣೇ ಬಿಲ್ಲ, ಹತ್ತು ಹುಣ್ಣಿಮೆ [illegible]. ಇಷ್ಟು ನನ್ನ ಮನೆಗೆ ಬಂದು—"ಸ್ವಾಮಿ, ದಯವಿಟ್ಟು ನಿಮ್ಮ ಓಟನ್ನು ನನಗೇ ಕೊಡಿರಿ" ಎಂದು, ಪಾಪ, ದೊಡ್ಡ ಪ್ರಾಣಿ, ಹತ್ತು ಮಂದಿ ಕಲಿ ಹೊಡೆದರೂ ಚಿಂತೆಯಿಲ್ಲ, ದೊಡ್ಡ ಮನುಷ್ಯ, ನಮ್ಮ ಅಪ್ಪನ ಗಂಟು ಏನು ಖರ್ಚು; ಕೊಟ್ಟುಬಿಡುವ ಒಂದು ಓಟು ಅಂದೆ. ಆ ದಿನ ಮಕ್ಕಳ್ಳ ಆಣೆ ಮಾಡಿ ಹೇಳ್ತೇನೆ—ಅಕ್ಕಿಕಾಳು ಕಾಣುವ ಮುಂಚೆ ಹೇಶನಿಗೆ ಹೋದೆ. ಎರಡು ಕಪ್ ಪಾನಕ ಕುಡಿದೆ. (ಮಾಹದೇವಯ್ಯನ ಚಪ್ಪರದಲ್ಲಿ) ಇವರಿಗೆ ಓಟು ಮಾಡ್ತಿ ಬಂದೆ. ಅಂಥಾದ್ದರಲ್ಲಿ ನನಗೆ ಕೊಟ್ಟಿಲ್ಲ; ಗನೀಸ ಅವಳ್ಳೇ ಬರೆಯುವುದು. ನನ್ನ ಹೊಟ್ಟೆಯೊಳಗಿನ [illegible] ಇರಿಯುವೆ. ಆದರೆ ಆಣೆ ಮಾಡಬಹುದು—ಇದರಲ್ಲಿ ಒಂದಾ ದರೂ ಸುಳ್ಳು ಇಲ್ಲವಾ ಅಂತ—ಇಂತೀ ಓಟಿನ ಓಟದೊಳಗೆ ಏಟುತಿಂದ ನಾನೊಬ್ಬ].

ಅಂಕ ವೊಂದು (ಕಡೇದಲ್ಲ).

ಸೀನ್ ೧

[ರಂಗಸ್ಥಳ. ಮಹದೇವಯ್ಯನ ಮನೆ ಜಗಲಿ, ವೇಷಧಾರಿಗಳು—ಅವರು ಮತ್ತು ಯಾರೆಂತ ನೆನಪಾಗುವುದಿಲ್ಲ.]

ಮಹದೇವಯ್ಯ—(ಯಸ್, ಪಿಸ್ ಅಂತ ಇಂಗ್ಲೀಷು ಗಜೇಟು ಓದುತ್ತ) ಹೌದಾ, ಶ್ಯಾಂಪ, ಗಂಟೆ ಎಷ್ಟಾಯಿತೋ?

ಶ್ಯಾಂಪ—ಅಯ್ಯಾ, ಕಿರ್ದ್ಗಯ್ಯಾ, ಬಂದೆ

ಮಹ—ಗಂಟೆ ಎಷ್ಟಾಯಿತು ನೋಡ್ಕೊಂಡು ಬಾ.

ಶ್ಯಾಂಪ—ಬಂಥೆತ್ತೆಂದು ಕಾಣ್ತೆ.

ಮಹ—ಹೌದೋ, ಗಡಿಯಾರ ಯಾವಾಗ ನಿಂತದ್ದು? ರಿಪೇರಿಯವ ಕೊಟ್ಟನೆ?

ಶ್ಯಾಂಪ—ಅವನಲ್ಲಿ ಕೊಡಬೇಕು? ನೀವು ಕಳೆದ ಬಾರಿಯೂ ದುಡ್ಡು ಕೊಡದೆ ತೆಗ್ಗಿಕೊಂಡು ಹೋದಿರಿ ಅಂತ ಈ ಸ್ತಾರಿ ಹಣಾ ತಾರದೆ ಕೊಡೋದಿಲ್ಲಾ ಅಂದ.

ಮಹ—(ಮೀಸೆ ಹುರಿಹಾಕುತ್ತ) ಏನು ಹಾಗಂದನೇ? ಸರಿ, ನಾಳೆ ಬರದುಕೊಡುತ್ತೇನೆ, ಬೇಡ ನೀನೇ ಬೆಳಗ್ಗೆ ಆಫೀಸಿಗೆ ಹೋಗಿ ಹೆಡ್‌ಕ್ಲಾರ್ಕರ ಹತ್ತಿರ ಹೇಳು. ಆ ವಾಚ್‌ರಿಪೇರಿಯವರ ಹೆಸರು ಹೇಳಿ ಐದು ರೂಪಾಯಿ ವರ್ತಿತೆರಿಗೆಯ ನೋಟೀಸ್ ಕೊಡಲಿಕ್ಕೆ ಮರೆಯಬೇಡಾ. ಹಾಂ, ಗಾಡಿ ಬಂದು ಕಾಯುತ್ತೆ. ರಸ್ತೆಯ ಬುಡಕ್ಕೆ ಹೋಗಿ ಬಾ (ಶ್ಯಾಂಪ ಹೋಗುತ್ತಾನೆ) ಹೌದು, ತಿಂಗಳು ಮೂರಿಯಾಯಿತು. ಗಂಟೆ [illegible]. ಥೇ, ಆ ಮೀನಾಕ್ಷಿಗಿಷ್ಟು ಬುದ್ಧಿಯಿಲ್ಲ.

ಶ್ಯಾಂಪ—ಅದು ಘಟ್ಟದ ಥತ್ತರ ಗಾಡಿ ಯಾಕೊಪ್ಪಾ, ಗಾಡಿ ಬರುವ ನಮೂನೆ ಕಾಣೆ. ಅಯ್ಯಾ, ಹೊತ್ತಾಯಿತು, ಮನೆಗೆ ಹೋಗಲಿ! ಮಧ್ಯಾಹ್ನದಿಂದಲೂ ಊಟ ಇಲ್ಲ.

ಮಹ—ಹೌದು ಜೀವ ಹೋಗುತ್ತದೆ ನಿನಗೆ, ಮೀನಾಕ್ಷಿ ಬಂದುಕೊಳ್ಳಲಿ.

ಶ್ಯಾಂಪ—(ಗಂಟಲೊಳಗೇ)ಐಯ್ಯಪ್ಪಾ, ಏನು ಮೀನಾಕ್ಷಿಯೋ, ಏನು ಮೀನಾಂಬಿಕೆಯೋ, ಈ ಶಾಲೆಯ ಸೂಳೆಮಗಳು ಬರುವ ತನಕ ನನಗೆ ಕೂಳು ಸೊನ್ನೆ. ಐಯ್ಯಪ್ಪ, ಬಂತು ಅಮ್ಮನ ಸವಾರಿ; (ಪ್ರಕಾಶ) ಅಯ್ಯಾ ಬಂತು ಗಾಡಿ, ಬಡಿಯ ತಿಪ್ಪೇ ಗಾಡಿ.

(ಬಂಡಿ ಗಾಡಿ ಚಪ್ಪರದೊಳಗೆ ಬರಲು, ಪ್ರೆಸಿಡೆಂಟರು ಜಗುಲಿ ಇಳಿದು ಬಂದು, ಮೀನಾಕ್ಷಿಯಮ್ಮನ ಕರೆದುಕೊಂಡು ಮನೆಯ ಒಳಗೆ ಹೋಗುವರು.)

ಶ್ಯಾಂಪ—ಹೌದೋ ಬಡಿಯಾ, ಯಾಕೆ ಇಷ್ಟು ಹೊತ್ತಾಯ್ತು? ಸ್ಕೂಲ್ ಬಿಡುವುದು ಐದು ಗಂಟೆಗೆ. ಆಗಲೇ ಮಾ[illegible] ಬಂದಿರಬೇಕಿತ್ತು.

ಬಡಿಯ—[illegible] ನೇತಕ್ಕೆ ಬೆಂಕೀ ಹಾಕಿತು. ಶೀರೇ ಗೀರೆಯೇ [illegible] ಮಾಡಿಕೊಂಡು ಹೊರಡುವಾಗ ಹೊತ್ತು ಕಂತಿಹೋಯ್ತು. ಆದರೂ ಎಂಟು ಗಂಟೆಗೆ ಬರಬಹುದಿತ್ತು. ಮಧ್ಯದಲ್ಲಿ ಅಣ್ಣಪ್ಪಯ್ಯನ ಕಾಟ. ಅವರಿಗೆ ಮೊದಲೇ ಹೇಳಿದ್ದೇ—ಪರ್ಸಿಡೆಂಟ್ರು ಮನೆಗೆ ಹೋಗುವುದು, ತಾವು ಹಾಗಲ್ಲ ಅಟ್ಕಾಯಿಸಬಾರದು ಅಂತ. (ಬಿಟ್ಟಿದ್ದ ಎತ್ತುಗಳು ಮನೇ ಹಾದಿ ಹಿಡಿದಿದ್ದನ್ನು ಕಂಡು) ಅಗಾ, ಕಂಡಿಯಾ, ಹಾಳಾದ ಎತ್ತಿನ ಹಟ್ಟಿ ಕಾಲಿಲ್ಲ; ಶ್ಯಾಂಪಣ್ಣ ನೀನೇ ಅಲ್ಲಿ ಕಂಡೀ ಸಂದಿನಲ್ಲಿ ಕೇಳಿಬಿಡು ಅಮ್ಮ ಸುರು ಮಾಡಿದರಕೋ ಪಾರಾಯಣ (ತೆರಳುವನು ಬಡಿಯುಭೂಪತಿ).

ಸೀನ್ ೨

(ಮೀನಾಕ್ಷಿ ಅಮ್ಮನ ಕಪ್ಪನಲ್ಲಿ ಗಂಗಮ್ಮ ಹೊರಟದ್ದಾಳೆ. ಅಮ್ಮ ಮಂಚದ ಮೇಲೆ. ರಾಯರ ಕೈ ಅವರ ಹೆಗಲ ಮೇಲೆ ಹಾಗೆ ಒಂದು ಕಾಗದ ಓದುತ್ತಾರೆ).

ಮಹ—ಪ್ರಿಯಳೇ,

ನಾನು ಈ ವರೆಗೆ ಎರಡುಮೂರು ಕಾಗದ ಬರೆದುದಾಯಿತು; ನಿನ್ನ ಉತ್ತರವೇ ಇಲ್ಲ. ಆ ಕಳ್ಳ ಮಹದೇವ ಕೊಡುವ ಸಂಪತ್ತಿಗಿಂತ ನಾನು ಕೊಟ್ಟೇನು. ನೀನು ಅವನ ಪ್ರಸಿಡೆಂಟಿಗೆ ಹೆದರುವ ಕಾರಣವಿಲ್ಲ. ಬೋರ್ಡಿನ ಸಂಬಳ ತಿಂದು ಅವನ ಚಾಕರಿ ಮಾಡುವ ಬದಲಿಗೆ ನಮ್ಮ ಹಾರ್ದ ಹಳ್ಳಿಗೆ ಬಂದರೆ ನಿನಗೆ ಕಾಯಂ ಮನೆ ಕಟ್ಟಿಸಿಕೊಡುತ್ತೇನೆ....

(ಕಿಡಿಕಿಡಿಯಾಗಿ)

ಏನು ಅಣ್ಣಪ್ಪನಿಗೆ ಇಷ್ಟು ಸೊಕ್ಕೇ. ನಾಲ್ಕು ಮುಡಿ ಹುಟ್ಟುವಳಿ ಇದ್ದರೆ ಇಷ್ಟು ಸೊಕ್ಕು; ಹೋಗಲಿ ಬಿಡು ಮೀನಾಕ್ಷಿ ಮಕ್ಕಳ ಹಾಗೆ ಅಳುತ್ತಿ ಯಾಕೆ? ಅವನ ಸೊಂಟದ ಕೀಲು ಜಾರಿಸುವ ಕೆಲಸ ನನ್ನದು.—ಶ್ಯಾಂಪಾ,

ಶ್ಯಾಂಪ—ಅಯ್ಯಾ, ಕರೆದಿರಿಯಾ,

ಮಹ—ಅಮ್ಮನಿಗೆ ಕಾಲು ತೊಳೆಯಲಿಕ್ಕೆ ನೀರು ತಂದಿಡು ನಿನಗೆ ಪ್ರತಿದಿನ ಹೇಳುವುದೇ ಆಯಿತು.

ಶ್ಯಾಂಪ—(ಗಂಟಲಾಗ) ಗ್ರಹಚಾರ. ಸೂಳೇಮಕ್ಕಳ ಚಾಕ್ರಿ ಮಾಡುವ ದಿನ ಬಂತಲ್ಲಾ. ಶಿವಶಿವ-ಮಹಾಲಕ್ಷ್ಮಿ ಹೇಳಿದರೆ ಬರೇ ಒಣ ಸಮಾಧಾನ ನಿಮ್ಮದು, ಅಣ್ಣಪ್ಪನವರು ಬಹಳ ಥೋರಿನವರು. ಅಂತ ಗಾಡೀ ಬಡಿಯ ಹೇಳುತ್ತಿದ್ದ. ನಾನೆಷ್ಟು ದಿನ ಸುಮ್ಮನಿರಲಿಕ್ಕೆ ಬರುತ್ತದೆ. ಒಂದುದಿನ ನನ್ನ ಅಪ್ಪನ ಮಾಡುವೆ ಅಂದರು.

ಮಹ—ಮೀನಾಕ್ಷೀ, ನನಗಿದು ಸುದ್ದಿ ಇಲ್ಲದೆ ಹೋಯ್ತು ಇಲ್ಲದಿದ್ರೆ ನರಸಿಂಹ ಅವತಾರ ತೋರಿಸುತ್ತಿದ್ದೆ.

ಶ್ಯಾಂಪ—ಅಮ್ಮ ನೀರು ತಂದೆ.

ಮೀನಾಕ್ಷಿ—ತಡಿಯೋ; ಮಾತನಾಡುವಾಗ ಇವನ ರಗಳೆ ಬೇರೆ. ಅದೇನು ನೀರು?

ಶ್ಯಾಂಪ—ತಣ್ಣೀರಮ್ಮಾ.

ಮೀನಾ—ನಡಿ, ಸ್ವಲ್ಪ ಬಿಸಿ ನೀರು ತಾ. ಈ ರಾತ್ರಿಯಲ್ಲಿ ತಣ್ಣೀರು ಯಾವ ಧೂಳಕ್ಕೆ? ಯಜಮಾನರ್ರೇ, ನನಗೆ ಮಾತುಕೊಡಬೇಕು. ಅವನ ಕಂಟೆ ಅಡಗಿಸ್ತೇನೆ ಅಂತ. ಇಲ್ಲದಿದ್ದರೆ ಖಂಡಿತ ಈ ನಿಶ್ಯಂಹೆಯೂ ಬೇಡ ಗಿಶ್ಯಂಹೆಯೂ ಬೇಡ.

ಮಹ—ಅದರ ಔಷಧ ನನ್ನ ಕೈಯಲ್ಲಿದೆ. ಏನಿಲ್ಲಾ ಅವನಿಗೆ ಗೊತ್ತಾಗದಂತೆ ಮದ್ದು ಮಾಡುತ್ತೇನೆ.

ಮೀನಾ—ಅದೇನು? ಅದೇನು?

ಮಹ—ನೀನು ನಮ್ಮ ಮನೆಯ ಹಿಂದಿನ ತೋಡು ಕಾಣಲ್ಲವೇ ನಮ್ಮ ಮನೆಗೆ ಬರುವ ಹೊಸ ಬೋರ್ಡು ರಸ್ತೆ ಬುಡದಲ್ಲಿ,

ಮೀನಾ—ಹೌದು.

ಮಹ—ರಸ್ತೆಗೆ ತೊಂದರೆ ಆಗುತ್ತದೆಂತ ಆ ತೋಡನ್ನು ಸ್ವಲ್ಪ ಅಡ್ಡ ತಿರಿಗಿಸಿ ಬಿಟ್ಟರೆ ಆಯಿತು.

ಮೀನಾ—ರಸ್ತೆ ತಿರಿಗಿಸಿಬಿಟ್ಟರೆ ಅಣ್ಣಪ್ಪನವರು ತಿರುಗುತ್ತಾರೆಯೋ.

ಮಹ—ಅವರಪ್ಪ ತಿರುಗುತ್ತಾನೆ. ತೋಡಿನ ನೀರು ಎರಡು ಗಂಟೆಯಲ್ಲಿ ಅವರ ಆಸ್ತಿಯನ್ನೆಲ್ಲಾ ಸಮುದ್ರ ಕಾಣಿಸುತ್ತೆ. ಅದ್ರಿಂದ ನಾಲ್ಕು ಮುಡಿ ಗೇಣಿ ಹುಟ್ಟುತ್ತದೆಂತ್ರ ಜಂಭ ಅಷ್ಟು ಮಾಡಿಬಿಟ್ಟರೆ ಅಣ್ಣಪ್ಪ ಹೋಗಿ ಅಪ್ಪಣ್ಣ ಆಗಲಿಕ್ಕೆ ಅಡ್ಡಿ ಇಲ್ಲ.

ಮೀನಾ—ನನ್ನ ಕೊರಳು ಮುಟ್ಟಿ ಆಣೆ ಮಾಡಿ ಹೇಳಿ.

ಮಹ—ಅಷ್ಟು ಅಪನಂಬಿಕೆಯೇ! ಆ ಮಾರ್ಟಿನ್ ಬರೇಕಳನ್ನು ಟ್ರಾನ್ಸ್‌ಫರ್ ಮಾಡಿ ನಿನ್ನನ್ನು ಬಂಗಲೇಶಾಲೆಯ ಹೆಡ್ ಮಿಸ್ಟ್ರೆಸ್ ಮಾಡುತ್ತೇನೆ ಅಂದೆ. ಟ್ರೇನಿಂಗ್ ಇಲ್ಲ ಏನಿಲ್ಲ ಮೂರು ದಿವಸದಲ್ಲಿ ಕೆಲ್ಸ ಕೊಡಲಿಲ್ಲವೇ!—ಹೂಂ ಸಾಕು ಹೊತ್ತಾಯಿತು, ಕಾಲುತೊಳೆ ನೀನು ಊಟ ಮಾಡಿಲ್ಲ ಅಂತ ನಾನೂ ಊಟ ಮಾಡಲಿಲ್ಲ. ನಿನಗಾಗ್ಗಿ ನೀರುಳ್ಳಿ, ಬಟಾಟಿ ಹುಳಿಮಾಡಿದ್ದಾನೆ, ವೆಂಕಟ್ರಮಣಯ್ಯ. ಹೂಂ, ಹೂಂ.

ಶ್ಯಾಂಪ—ಅಯ್ಯಾ ಮನೆಗೆ ಹೋಗುವುದೋ?

ಮಹ—ಮೀನಾಕ್ಷೀ, ಶ್ಯಾಂಪನನ್ನು ಕಳುಹಿಸಿಕೊಡಲೇ!

ಮೀನಾ—ಅವನನ್ನು ತೆಗೆದುಕೊಂಡು ಏನು ಸುಡುತ್ತೀರಿ.

ಮಹ—ಹಾಗಾದರೆ ಶ್ಯಾಂಪಾ, ನಾಳೆ ಬೆಳಗ್ಗೆ ಆರು ಗಂಟೆಯೊಳಗೆ ಬಂದುಬಿಡು. ನಾಳೆ ಆದಿತ್ಯವಾರ. ಎಂಟು ಗಂಟೆಯ ಒಳಗೆ ಬಂಗಲೆಗೆ ಸಾಮಾನು ತಂದು ಹಾಕ್ಬಿಡು.

ಶ್ಯಾಂಪ—(ಕಾದು ಕೆಂಪಾಗಿ ಹೊರಡುತ್ತ) ಅಬ್ಬ! ಪ್ರೆಸಿಡೆಂಟರ ಮನೇ ಬಾಗಿಲು ತಿರುಗಿದೆ ಎಂತ ಈ ಮುಗಳಿಗೆ ಎಷ್ಟು ಸೊಕ್ಕು? "ಅವನ್ನೇನು ಸುಡುತ್ತೀರಿ" ನನ್ನನ್ನು ಸುಡೋದು, ಸುಡ್ಸುತ್ತೇನೆ. ನನ್ನ ಮನಸ್ಸಿನಂತಾದರೆ ಅಮ್ಮನವರನ್ನು, ಅಯ್ಯನವರನ್ನು ಇಬ್ಬರನ್ನೂ ಸುಡ್ಸುತ್ತೇನೆ." ನನಗಾಯಿತು ಈ ಸರ್ವಿಸಿನಲ್ಲಿ ಹದಿನೈದು ವರ್ಷ, ಇಂಥಾ ಪರ್ಸಿಡೆಂಟರನ್ನು ಮಿಷ್ಟರ್ರಿಗಳನ್ನ ಎಷ್ಟು ಕಂಡಿದ್ದೆನೂ, ಆಗ ಏನೆಂದರೂ. ರಸ್ತೆಯ ಬುಡದ ತೋಡು ತಿರುಗಿಸಿ, ಅಣ್ಣಪ್ಪನನ್ನ ಅಪ್ಪಣ್ಣ ಮಾಡುತ್ತ ಅಂದರು. ಅವರ ಗದ್ದೆ ಹಾಳು ಮಾಡುವ ಸುದ್ದಿ ಅವರ ಮನೆ ಬುಡದಲ್ಲಿ ನನ್ನ ಮನೆ, ದೊಡ್ಡ ಆಲೋಚನೆ ಮಾಡ್ತಿಕೊಡುತ್ತೇನೆ. ಇವರ ಆಟ ಆಗುವುದರೊಳಗೆ ಅಣ್ಣಪ್ಪನವರಿಗೆ ಮೆಂಬರಿಗೆ ನಿಲ್ಲುವುದಕ್ಕೆ ಹೇಳಿ ಪ್ರೆಸಿಡೆಂಟಗೆ ಟೊಪ್ಪಿ ಹಾಕಿಸುವೆ. ಈ ಸುದ್ದಿ ಛೀ, ಛೂ ತಪ್ಪದಂತೆ ಅವರ ಕಿವಿಗೆ ದಾಟಿಸಿದರೆ ಸಾಕು, ಗೆಗೆದುಕೊಳ್ಳಿ ಅಣ್ಣಪ್ಪನವರ ಅವತಾರ; ಮುದುಕನಿಗೆ ಮಾಡಿದ ಅಪಮಾನ ಬಿಟ್ಟೇನಾ! "ಅವನ್ನೇನು ಸುಡುತ್ತೀರಿ, ಏ ಮಹಾಕಾಳಿ! ನಿನ್ನ ಧೈರ್ಯವೇ. ಥೂ ಈ ಹಾಳಾದವರ ಸುದ್ದಿ ಹೇಳುತ್ತಾ ಕುಳಿತರೆ, ಮನೆಯಲ್ಲಿ ಮಾಡಿದ ಅನ್ನ ತಣಿದು ತಂಗುಳೇ ಸರಿ. (ರಾಮ ರಾಮ ಅಂತ ಮಹದೇವಯ್ಯನ ಅಡಿಗೆ ಮನೆ ಬುಡದಲ್ಲಿ ಹಾದು ಹೋಗುವಾಗ, ನೀರುಳ್ಳಿ, ಬಟಾಟೇ ಹುಳಿ ಪರಿಮಳ ಮೂಸಿಕೊಂಡು) ಅಲ್ಲಾ ಹತ್ತು ಘಂಟೆ ಹತ್ತಾಯಿತು ಬೆಳಗಿನಿಂದಲೂ ಊಟ ಇಲ್ಲ. ಶ್ಯಾಂಪಾ, ಇಷ್ಟು ಉಂಡುಬಿಟ್ಟು ಹೋಗು ಅಂತ ಹೇಳಲಿಕ್ಕೆ ಬಾಯಿಬಂತೇ! ನೀರುಳ್ಳಿ ಹುಳಿ ಅಂದರೆ ನನ್ನ ಪ್ರಾಣ. ಬೇರೆ ದಿನ ಆದರೆ ವೆಂಕಟ್ರಮಣಯ್ಯ ಕದ್ದು ಕೊಡುವವರು. ಈ ಮಾತಾಯಿ ಬಂದು ಬಿಟ್ರೆ ಥಟ್ಟರೀಗೆ ಕಚ್ಚೆ ಕಟ್ಟಲಿಕ್ಕೆ ಪುರುಸೊತ್ತು ಇಲ್ಲ. ಅಂಬೊಡೆ, ಹೋಳಿಗೆ, ಪಾಯಸ, ಪರಮಾನ್ನ, ಮಣ್ಣು ಮಸಣ ಇನ್ನೇನು ಪುಣ್ಯ ಮಾಡಿದಳೋ ಆ ಪುಣ್ಯಾತ್ಗಿತ್ತಿ. ಈ ಬೋರ್ಡು ಅಂತ ಆಗಲಿಕ್ಕೆ ಹೋಗಿ ಈ ಚಣಿಮಿಣಿಗಳಿಗೆಲ್ಲಾ ಬಂತು ಒಂದು ಕಾಲ. ಅಲ್ಲಾ ಪಿಯಾನ್ ಪೆಟ್ಟಿಗೆ ಏರಿಸಲಿಕ್ಕೆ ಬಂದರೆ, ಹೆಡ್‌ಮಿಷ್ಟ್ರಿ ಕೆಲ್ಸವೇ (ಹಾಗೆ. ಸಿಟ್ಟೇರಿ) ತಾತಧಲು ಗುಣಾ! (ಎಂಬ ಪ್ರಸಂಗ ಹಾಡುತ್ತ ಮನೆಗೆ ಹೊರಟ).

ಸೀನ್ ೩

[ರಂಗಸ್ಥಳ. ವಕೀಲ ಶ್ರೀನಿವಾಸ ಪ್ರಭುಗಳ ಮನೆ. ಜನಪ್ರಭುಗಳು ಮತ್ತು ಬೋರ್ಡು ಮೆಂಬರು ವೆಂಕಣ್ಣ ಆಳ್ವರು.]

ಪ್ರಭು—ಬನ್ನಿ ಸ್ವಾಮಿ ಆಳ್ವರೇ ಭಾರಿ ಅಪರೂಪ ದರ್ಶನ. ಏನು ವಿಶೇಷ ಬಂದುದಿಟ್ಟೆತು, ಸವಾರಿ?

ಆಳ್ವರು—ಪ್ರಭುಗಳೇ! ರಂಗಸ್ಥಳ ಬೆಳಗಿದಿಟ್ಟಿದ್ದೇವೆ. ನೋಡಿ, ನಮ್ಮ ಕರ್ಣನ ಕುಣಿತ; ಥೇಟು ಬೆಳಗಿನ ಜಾವದ ಕರ್ಣ.

ಪ್ರಭು—ಏನು? ಭಾರಿ ಅಬ್ಬರದಲ್ಲಿದ್ದೀರಿ! ನಿಮ್ಮ ಕರ್ಣ ಯಾರು ಕೇಳಿದಿರುವ. ತಾಲೂಕು ಬೋರ್ಡಿಗಲ್ಲವೆ? ನಾನೂ ನಿಮ್ಮ ಸುದ್ದಿ ನಿಮ್ಮ ಹತ್ತಿರ ಎತ್ತುವ ಆಲೋಚನೆ ಮಾಡಿದ್ದೆ. ಸಮಯಕ್ಕೆ ನೀವೂ ಬಂದಿರಿ. ಈ ಸಾರಿ ನೋಡಿ. ನಾವು ಜೊತೆಂಟು ಕೆಲಸ ಮಾಡದಿದ್ದರೆ ಏನೇನೂ ಆಗುವ ಹಾಗಿಲ್ಲ. ಮಹದೇವಯ್ಯ ಊರಿಗೆ ಮುಂಚೇ ಇದ್ದ ಕುಣಿಯಲಿಕ್ಕೆ ತೊಡಗಿದ್ದಾರೆ. ಪ್ರತಿ ಶಾಲೆಯ ಮಾಸ್ತರು ಈಗಲೇ ಶುರು ಹಚ್ಚಿದ್ದಾರೆ. ಒಂದು ಓಟು ಪ್ರೆಸಿಡೆಂಟರಿಗೇ—ಒಂದು ಓಟು ಆಳ್ವರಿಗೆ. ಅಂತೂ ಬಿಟ್ಟಾರೆ ಈ ಸಾರಿ ಪ್ರಭುಗಳಿಗೆ ನಾವು ಎಂತ ಕಾಣುತ್ತದೆ.

ಆಳ್ವರು—ಏನು ಸ್ವಾಮಿ ಮುಗಿಯಿತೋ ನಿಮ್ಮ ಮಾತು.

ಪ್ರಭು—ಅಲ್ಲ ನನಗೇನು ಮಾಡ್ಸುತ್ತೀರಿ.

ಆಳ್ವರು—ನೀವು ನಮಗೇನು ಮಾಡಿಸುತ್ತೀರಿ? ನಮ್ಮದೊಂದು ಅಸ್ವಾಮಿಗೆ ನೀವು ಮಾತುಕೊಟ್ಟರೆ, ನಿಮ್ಮಾಣೆಯಾಗಿ ಒಂದೂ ಓಟು ಬಿಡದೆ ನಿಮಗೇ ಕೊಡಿಸುತ್ತೇನೆ.

ಪ್ರಭು—ನೀವು ಹೇಳಿದ್ದಕ್ಕೆ ತಯಾರು. ಅಂತೂ ಕಳೆದ ಸಾರಿಯ ಹಾಗೆ ಶಿಟ್ರು ಶಿಟ್ರುಗೆ ಛಟ್ರು ಛಟ್ರುಗೆ ಅಂತ ಪ್ರಭುಗಳು ನಡು ನೀರಿಗೆ ಬೀಳದಿದ್ದ ಹಾಗೆ ಮಾಡಬೇಕು.

ಆಳ್ವರು—ಸ್ವಾಮಿ, ಈ ಸಾರಿ ಬಣ್ಣವೇ ಬೇರೆ. ಈ ಸಾರಿ ನನ್ನ ಬದ್ಲಿಗೆ ಬೇರೆ ಜನ ಮಾಡಿರುವೆ. ಮಹದೇವಯ್ಯನ ಅರ್ಜುನನ ಎದುರಿಗೆ ನಮ್ಮ ಕರ್ಣ ಯಾರು ಗೊತ್ತಿಲ್ಲವೇ? ನಮ್ಮ ಹಿಂದಳ್ಳಿ, ಅಣ್ಣಪ್ಪಯ್ಯ.

ಪ್ರಭು—ಏನು ಸ್ವಾಮಿ, ಸಮುದ್ರಕ್ಕೆ ಬೆಂಕಿ ಹಿಡಿಯಿತು ಅನ್ನುತ್ತೀರಿ. ಅಣ್ಣಪ್ಪಯ್ಯನವರ ಮುಖ ನೀವು ಕಾಣದೆ ಎಷ್ಟು ದಿನ ಆಯಿತೋ; ಅಂಥಾದ್ದರಲ್ಲಿ ಅವರಿಗಾಗಿ ನೀವು ಮೆಂಬರಿ ಬಿಡುವುದೆ.

ಆಳ್ವ—ಸ್ವಾಮಿ ನಿನ್ನೆ ಸಂಜೆ ತನಕ ಹಾಗೇ ಇತ್ತು. ಬಿಟ್ಟೆಂದರೂ ಓಟು ಓಟೇ. ಅಣ್ಣಪ್ಪಯ್ಯ ಬಂದು ಈವತ್ತು

(ಆನೇ ಪತಕ್ಕೆ ಮುಂದುವರಿಸಿಯುದೆ)

ಕ ರ ನಾ ಕ ರ್ಣ ಏ ಗ್ಯು ಮಿ ಕ್ಶ ರ್

ಕರ್ನಾಟಕ ಎಗ್ಯೂ ಮಿಕ್ಶ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯಂಝಾ, ಬಹು ದಿನದ ಜ್ವರ, ಚಳಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ ಬಲವು ಬಂದು, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧—೪—೦, ಸಣ್ಣದಕ್ಕೆ ೦—೧೪—೦.

ಎಲ್ಲ ಕಡೆಗೂ ಔಷಧವನ್ನು ಮಾರುವದಗೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು ದಿ ಊಲನ್ ಮಾರ್ಟ್, ಮಂಗಳೂರು. | ಕರ್ನಾಟಕ ಬ್ರದರ್ಸ್, ಗಿರಿಗಾಂವ, ಮುಂಬಯಿ.

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.



ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,000 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಲಾಂಗ್ ಯತು 300 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸು ಗಳು, ಪ್ರತಿ ಒಬ್ಬರ ಕೈಲಿಹಿಡಿದುಕೊಂಡು ಹೋಗಲು ಅನುಕೂಲಿಸು ವಹಂಡ್ರೆಡಾಂ ...) ಕ್ಯಾಂಡಲ್ ಪವರಿನ ಗ್ಯಾಸ್ ಲ್ಯಾಂಟರ್ನಗಳು, ಸ್ಟೌವ್‌ಗಳು ಎಲೆಕ್ಟ್ರಿಕ್ ಟಾರ್ಚ್ ಲ್ಯಾಂಪುಗಳು, ಎಲೆಕ್ಟ್ರಿಕ್ ಕರೆಯು ಗುಂಡಿಗಳು, ರೋಟಾ ಹುಕ್ಕಗಳ ಕುರ್ಚಿಯುಗಳು, ಬ್ಯಾಟರಿಗಳು, ಬೆಂಕಿಕಡ್ಡಿದ ಬೀಡಿ ಮತ್ತು ಸಿಗರೆಟ್ ಹಚ್ಚುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳ ಬಿಡಿಭಾಗಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.

ಕೃಪಯಾ ಹೆಚ್ಚಿನ ಕಹಿತಿಗೆ ಈ ವಿಳಾಸಕ್ಕೆ ಬರೆಯಿರಿ —

ಎ. ಆರ್. ಖಲೀಲ್,

ಬೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರವಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೨೫೦ ರೂಪಾಯಿ ವರೆಗೆ, ಧೈರ್ವಿಶಕ್ತಿಯು, ಒಂದು ಸಾರಿ ಪರಿಸಿ ನೋಡಿದರೆ ತಮಗೆ ತಿಳಿಯುವದು. ಟಪಾಲ್ಸಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

... — ಸಳ್ಳೆಹಳ್ಳಿ ಪೋಸ್ಟು ಕಾರ್ವಾರ ಡಿಸ್ಟ್ರಿಕ್ಟ

Batliwalla's Preparations Cover All Your Needs.

A NAME THAT MERIT HAS MADE FAMOUS.

...ಳು ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಜಿಬಿಷನ್‌ದೊಳಗೆ ಬೆಳ್ಳಿ, ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಎಗ್ಯು ಮಿಕ್ಶ್ಚರ್ ಪಿಲ್—ಮಲೇರಿಯಾ ಜ್ವರ ಪ್ರಕಾರಕ, ರೂ. ೧.

ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

ಬಾಟ್ಲಿವಾಲರ ಟಾನಿಕ್ ... — ತಲೆನೋವು, ... ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ ೧೦.

ಬಾಟ್ಲಿವಾಲರ ಟೈಫಾಯಿಡ ಮಿಕ್ಶ್ಚರ—ಟಾಂಟಿಫೀವ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪.

ಬಾಟ್ಲಿವಾಲರ ಕ್ವಿನೀನ ಟೇಬ್ಲೆಟುಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ, ರೂ. ೧—೨—೦, ರೂ. ೧—೪—೦, ೧—೧೨—೦.

ಬಾಟ್ಲಿವಾಲರ ಹುಳ ಕಟ್ಟಿ ಔಷಧ, ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ, ರೂ. ೦—೬—೦ LIBERAL DISCOUNT TO TRADE

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್. Sayani Road, P. O. Cadell Road, Bombay. No. 14.

ಕೇಸರಿಯವರ ಲೋಧ್ರ

ಗರ್ಭಾಶಯ ರೋಗನಿವಾರಿಣೀ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರಕ್ಷಣೀಯವಾದ ಆಭರಣ'ವೆಂದೂ, 'ಸರ್ವಾಭೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜನನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ.

ಇದು ಮುಟ್ಟುಶೂಲೆ, ಮುಟ್ಟುಸ್ರಾವದೋಷ, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಮುಟ್ಟು ನಾನಾ ಬಣ್ಣಗಳಿಂದ ಸ್ರವಿಸುವುದು, ಪ್ರದರ (ಮೇಹ) ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ಶರೀರದಲ್ಲಿ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ಉಬ್ಬಸ ಮೊದಲಾದ ವ್ಯಾಧಿಗಳೂ ಇತರ ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ಔಷಧಿ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— ಕೇಸರೀ ಕುಟೀರಂ,

TELEGRAMS:—'KESARI' ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

15-4-'27 ಬ್ರ್ಯಾಂಚ್:— 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್ ಪೀಸಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಗ್ರಾಮೊಫೋನು ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ಸಂಧಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಸಿ. ಸೂ. — ನಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೊಮ್ಮೆಯಾದರೂ ಎಣ್ಣೆಯನ್ನು ... ಸರಿಯಾದ ಸಮಯವು ದೊರಕುವುದು.

Edited Printed & Published by V. S. Kamath at the M. T. A. SHARADA PRESS, MANGALORE

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ನ ರತ್ನಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾಃ ॥ ೧ ॥
ದೊರೆಕಿಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗೆದರಿಂ । ಹರುಷವಾಯಿತೆ! ಮತ್ತೆ ವಿಷ್ಷದ ಸುಡುಕ ಬರುತಿರುವ ॥
ಗರಲಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳೆ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೭ನೇ ಶುಕ್ರವಾರ ದಶಂಬರ ೧೯೨೮. (7–12–28.) ಸಂಚಿಕೆ ೪೯

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:— ಉಡುಪಿ.

Branches:—COONDAPOOR.
„ Mangalore.
ಶಾಖೆ:— ಕುಂದಾಪುರ.
„ ಮಂಗಳೂರು.

Statement of Affairs of the Canara Banking Corporation Udipi, Limited as at 31st October 1928.

	Capital and Liabilities.			Property and Assets	
1	Paid up Capital	Rs. 1,99,650-0-0	1	Premises Building Furniture &c.	Rs. 9,491-2-0
2	Reserve Fund and other funds	„ 96,600-0-0	2	Investments on G. P. Notes	„ 3,34,218-5-0
3	Deposits	„ 17,52,879-4-8	3	Investments on Approved Securities	„ 17,53,749-11-0
4	Overdraft with Bankers	„ 43,786-8-9	4	Bills for collection as per Contra	„ 11,392-9-0
5	Sundry Persons' A/C as per Contra	„ 11,392-9-0	5	Sundries including P & L items	„ 1,00,979-12-9
6	Sundries including P & L items	„ 1,54,863-9-2	6	Cash in hand & with Bankers.	„ 49,340-7-10
	Total	22,59,171-15-7		Total	22,59,171-15-7

Office of the Corporation,
UDIPI, 13–11–'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ
— ಮುಲಾಮು. —

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯುಲ್ಲದೆ ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ಶಕ್ಯದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ.
ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ನಕಲಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು — ಎಲ್ಲಾ ತರದ ಗಜಕರ್ಣಕ್ಕೂ ಕಜ್ಜಿಗೂ, ನಂದಿಗೆಯು ಮತ್ತು ಬಂಧಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ — ಉತ್ತಮವಾದ, ಈ ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್‌ಟೌನ್, ಮದ್ರಾಸು. 249 ಫ್ರೇಯರ್ ರೋಡ್ ಮುಂಬಯಿ,

ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ಥಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.

ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.
For copies apply to—
The M. T. A. Sharada Press,
Car-street, MANGALORE.

ADVERTISE IN OUR WEEKLY
To Reach the Hearths & Homes of India's Masses
For Particulars Apply to:
The Manager,
SWADESHABHIMANI,
MANGALORE.

ಪತ್ರವ್ಯವಹಾರ.

[illegible] ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಮದುವೆಗೂ ಒಂದು ಕಾನೂನು ಬೇಕೆ?

ಮದುವೆಗೊಂದು ಕಾನೂನು ಬೇಕೇಬೇಕೆಂಬ ನಿರ್ಧಾರವು ಸ್ವಲ್ಪ ಸಮಯದಲ್ಲಿ ಪ್ರಚಾರಕ್ಕೆ ಬರುವಂತೆ ಕಾಣುತ್ತದೆ. ಆದರೆ ಈ ವಿಷಯದಲ್ಲಿ ಆರಮ್ಭದಲ್ಲೇ ನನ್ನ ಅಭಿಪ್ರಾಯವನ್ನು ಪ್ರಕಟಿಸದಿದ್ದರೆ ನಾವು ನಿಜವಾಗಿಯೂ ಸ್ವಯಂದ್ರೋಹಿಗಳಾಗುವೆವೆಂಬುದಕ್ಕೆ ಸಂಶಯವಿರದು.

ಮದುವೆಗೊಂದು ಕಾನೂನು ಬೇಕು ಎಂಬುದನ್ನು ಎರಡು ತರದಲ್ಲಿ ವಿಭಾಗಿಸಿ ಚರ್ಚಿಸಬಹುದು. ಮದುವೆಗೊಂದು ಸಮಯ ನಿರ್ಧಾರ ಬೇಕೆಂದೂ, ಅದನ್ನು ಮಾನ್ಯ ಸರಕಾರದವರೇ ನಮ್ಮಲ್ಲಿ ಪ್ರಚಾರಗೊಳಿಸಬೇಕೆಂದೂ ಮೇಲೆ ಹೇಳಿದ ವಾಕ್ಯವು ಸೂಚಿಸುತ್ತದೆ. ಇವರಲ್ಲಿ ವರ್ಷ ನಿರ್ಧಾರವನ್ನು ಮಾನ್ಯ ಸರಕಾರದವರೇ ಮಾಡಿ ನಮ್ಮಲ್ಲಿ ಪ್ರಚಾರಗೊಳಿಸಬೇಕೆಂಬ ವಿಷಯ ಅತ್ಯಂತ ರುಚಿಕರವಾದುದರಿಂದ ಅದನ್ನು ಮೊದಲು ವಿಚಾರಿಸುವ.

ಮದುವೆಗೆ ಸಮಯ ನಿರ್ಧಾರ ಮಾಡಿ ಮಾನ್ಯ ಸರಕಾರದವರು ಕಾನೂನಿನ ರೂಪದಿಂದ ನಮ್ಮಲ್ಲಿ ಪ್ರಚಾರಕ್ಕೆ ತರಬೇಕೆಂಬ ಅಭಿಪ್ರಾಯಕ್ಕೆ ಅಸಹಕಾರ ಚಳವಳದ ಮುಖಂಡರೂ 'ಸಹಿ' ಬರೆದುದನ್ನು ನೋಡಿದರೆ ಸರ್ವರಿಗೂ ಪರಮಾಶ್ಚರ್ಯವಾಗಲೇ ಬೇಕು. ನಮ್ಮ ಮಠ, ದೇವಸ್ಥಾನಗಳಿಗೆ ಸರಕಾರದವರು ಕೈಹಾಕುವ ಸಮಯ ಎಲ್ಲರೂ ಏಕಕಂಠದಿಂದ ಅದನ್ನು ನಿರೋಧಿಸಲಿಲ್ಲವೇ? ಮಠ, ದೇವಸ್ಥಾನಗಳೆಂದರೆ ನಮ್ಮ ಧರ್ಮ ಮತ್ತು ಮತವಿಚಾರಗಳಲ್ಲಿ ಸೇರಿವೆ. ಧರ್ಮ ಮತ್ತು ಮತ ವಿಚಾರಗಳಲ್ಲಿ ಕೈಹಾಕಲು ಸರಕಾರದವರಿಗೆ ಯಾವ ತರದ ಅಧಿಕಾರವೂ ಇರುವುದಿಲ್ಲವೆಂತ ನಮ್ಮ ಜಿಲ್ಲೆಯ ಅಸಹಕಾರ ಚಳವಳದ ಮುಖಂಡರು ಒತ್ತಿ ಹೇಳಿರುವರು. ಆದರೆ ಈಗ ಮಾತ್ರ ಏನು ಭ್ರಮೆ! ಸರಕಾರದವರೇ ಮದುವೆಗೊಂದು ಕಾನೂನು ಮಾಡಬೇಕಂತೆ! ಮದುವೆಯೆಂದರೆ ಧರ್ಮ ಮತ ವಿಚಾರಗಳಲ್ಲಿ ಸೇರಿಲ್ಲವೋ? ಹಾಗಾದರೆ ಅದು ಯಾವ ತರದ ವಿಷಯ?

ಸರಕಾರದವರಿಗೂ ನಮಗೂ ಕ್ರಮೇಣ ಸಂಬಂಧವಿರಹವಾಗಬೇಕೆಂದು ಸರ್ವರೂ ಪ್ರತಿಪಾದಿಸುತ್ತಾರೆ. ನಾವು ಅವರನ್ನು ಅವರಿಂದ ದೂರತೊಲಗಬೇಕಾದರೆ ಅವರೊಡನೆ ನವೀನ ಸಂಬಂಧವನ್ನು ಬೆಳೆಯಿಸುವುದು ಕೇವಲ ತಪ್ಪು. ಆದುದರಿಂದ ಸರಕಾರದವರೊಡನೆ ಮದುವೆಗೊಂದು ಕಾನೂನು ಮಾಡಿರೆಂಬ ವಿಚಾರವನ್ನು ಹೇಳುವದು ಇದೀ ಹಿಂದುಸ್ಥಾನದಲ್ಲಿ ಪ್ರಬಲವಾಗಿರುವ ಅಸಹಕಾರ ಚಳವಳಕ್ಕೆ ಯೋಗ್ಯವೇ ಅಲ್ಲ.

ಮದುವೆಯೆಂಬುದು ನಮ್ಮ ನಮ್ಮ ಮನೆಗಳಲ್ಲಾಗತಕ್ಕ ವಿಷಯ. ಅದರಿಂದ ನಮಗೆ ಕೆಡುಕು ಬಂತೆಂದರೆ ನಮ್ಮ ನಮ್ಮ ಮನೆಗಳಲ್ಲಿ ಕೊಳೆಯು ಸೇರಿಕೊಂಡಿರುವದೆನ್ನಬಹುದು. ಮನೆಯೊಳಗಿನ ಕೊಳೆಯನ್ನು ನಾವೇ ಹೊರಗೆ ಬಿಸಾಡಲಿಕ್ಕೆ ಬವಲಾಗಿ ಅನ್ಯರೊಡನೆ, ಮಾತ್ರವಲ್ಲ ನಮ್ಮ ಪರಮದ್ವೇಷಿಗಳಾದವರೊಡನೆ ಆ ಕಾರ್ಯವನ್ನು ಮಾಡಹೇಳಿದರೆ ನಮಗೆ ಅದರಿಂದ ವಿಪತ್ತು ಬರುವದಲ್ಲವೇ? ನಮ್ಮ ಮನೆಯೊಳಗೆ ನಮ್ಮ ಅಂಗಳನ್ನು ಬರಹೇಳಿ ಸಹಾಯ ಕೇಳಿದರೆ ಅವರಿಗೆ ತಮ್ಮ ಕಾರ್ಯಗಳನ್ನು ಸಾಧಿಸಿಕೊಳ್ಳಲು ಮತ್ತೂ ಸುಲಭವಾಗುವದು. ಇದನ್ನು ಸರ್ವರೂ ವಿಚಾರಿಸಬೇಕೆಂಬುದೇ ಮೊದಲನೆಯ ಪ್ರಾರ್ಥನೆ.

ಮೊನ್ನೆ ತಾನೆ ದಿವಂಗತರಾದ ಲಾಲಾಜಿಯವರ ಮರಣ ವಾರ್ತೆಯನ್ನು ಕೇಳಿರುವೆವು. ಅವರ ಅಕಾಲ ಮರಣಕ್ಕೆ ಲಾಹೋರಿನ ಸರ್ಕಾರದವರ ಅನಾಚಾರವೇ ಕಾರಣವೆಂದು ಎಲ್ಲರೂ ಹೇಳಿಕೊಂಡು ಬರುತ್ತಾರೆ. ಲಾಲಾಜಿಯವರಂತಹ ವೀರಪುರುಷನನ್ನು ಕಾರಣವಿಲ್ಲದೆ ಘೋರಯಾತ್ರೆಗೆ ಕಳುಹಿಸಿದ ಸರಕಾರದವರೊಡನೆ ಸಹಕಾರವೆಂದರೆ ಅವರ ಆತ್ಮಕ್ಕೆ ಎಂದಿಗೂ ತೃಪ್ತಿಕರವಾಗದು. ಸ್ವರಾಜ್ಯಸ್ಥಾಪನೆಯಾಗುವ ಮೊದಲು ತಮ್ಮ ಮನಸಂತೋಷವೆಂದಿಗೂ ಆಗಲಾರದೆಂದು ಲಾಲಾಜಿಯವರು ಜೀವಂತರಾಗಿರುವಾಗ ಪದೇ ಪದೇ ಹೇಳಿರುವರು. ಸ್ವರ್ಗದಲ್ಲಿ ಕುಳಿತುಕೊಂಡು ಈಗಲೂ ಅವರು ಅದನ್ನೇ ಜಪಿಸುತ್ತಿರುವರು. ಹಾಗಿರಲು ಇನ್ನು ಇನ್ನು ಸರಕಾರದವರ ಬೆಂಬಲವನ್ನು ನಾವು ಬಿಡದೆ ಅವರನ್ನು ಆಶ್ರಯಿಸುವದೆಂದರೆ ಲಾಲಾಜಿಯವರ ದೋಷವು ಬಂಡೆಕಲ್ಲಿನ ಮೇಲೆ ಮಳೆ ಸುರಿಸಿದಂತಾಗುವದು. ನಿಜವಾಗಿಯೂ ನಾವು ದೇಶಭಕ್ತರೆಂದರೆ ಖಾದಿಧರಿಸಿ ಉತ್ಕೃಷ್ಟ ಮಾತನಾಡಿದರೆ ಮಾತ್ರ ಸಾಲದು. ಸ್ವರಾಜ್ಯ ಲಾಭಕ್ಕೆ ತಕ್ಕದಾದ ಯತ್ನಗಳನ್ನು ಮಾಡಲೇಬೇಕು. ಖಾದಿ ತೊಟ್ಟು ಸರಕಾರ ವಿರುದ್ಧವಾಗಿ ಉತ್ಕೃಷ್ಟ ಮಾತನಾಡಿ ಕೊನೆಗೆ ಅವರನ್ನೆ ಆಶ್ರಯಿಸುವದೆಂದರೆ ದೇಶಭಕ್ತರ ಲಕ್ಷಣವಾಗದು. ದೇಶಭಕ್ತಿಯನ್ನು ಬಿಟ್ಟು ಸರ್ವಜನಸಮ್ಮತವಲ್ಲದ ವಿಷಯಗಳನ್ನು ಎತ್ತಿ ಹಿಡಿದು ನಮ್ಮಲ್ಲಿ ಇಕ್ಕಟ್ಟು ತಂದುಕೊಳ್ಳುವದೆಂದರೆ ಸ್ವರಾಜ್ಯ ಲಾಭವನ್ನು ಮುಂದೂಡಲು ಬೇರೆ ವಿಧಾನವೆ ಬೇಡ. ಆದುದರಿಂದ ಈ ವಿಷಯವನ್ನು ಪ್ರಾಜ್ಞ ಮಹಾಶಯರು ಪರ್ಯಾಲೋಚಿಸಬೇಕೆಂಬುದೇ ನನ್ನ ಮುಖ್ಯ ಕೋರಿಕೆ. (ಸಶೇಷ)

ಕೆ. ಬಾಲಕೃಷ್ಣರಾವ್, ಬಿ. ಎ.

ಕುಂಬಳೂರು.

ದಕ್ಷಿಣ ಕನ್ನಡ ಜಿಲ್ಲೆಯ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘವನ್ನು ಸ್ಥಾಪಿಸುವ ಅವಶ್ಯಕತೆ.

ಜಿಲ್ಲೆಯ ಎಲ್ಲಾ ಉಪಾಧ್ಯಾಯ ಸಂಘಗಳ ಅವಗಾಹನೆ ಬಗ್ಗೆ.

ಭೂಲೋಕದಲ್ಲಿರುವ ಬೇರೆ ಬೇರೆ ಕೆಲಸಗಾರರು ತಮ್ಮ ಅಭಿವೃದ್ಧಿಗಾಗಿ ಬೇರೆ ಬೇರೆ ಸಂಘಗಳನ್ನು ಸ್ಥಾಪಿಸಿರುವರು. ಈ ತರದ ಸಂಘಗಳು ಯುರೋಪ ಖಂಡದ ಎಲ್ಲಾ ರಾಜ್ಯಗಳಲ್ಲಿಯೂ ಅಮೇರಿಕದ ಯುನೈಟೆಡ್ ಸ್ಟೇಟ್ಸಿನಲ್ಲಿಯೂ, ಜಪಾನ್ ದೇಶದಲ್ಲಿಯೂ ಇತ್ತಲಾಗೆ ಚೀನಾ ದೇಶದಲ್ಲಿಯೂ ಸ್ಥಾಪನೆಯಾಗಿದೆ. ಇವುಗಳಲ್ಲಿ ಹತ್ತಿಯ ಗಿರಣಿಗಳ ಕೂಲಿಕಾರರ ಸಂಘಗಳು, ಕಬ್ಬಿಣದ ಕಾರ್ಖಾನೆಗಳ ಕೂಲಿಕಾರರ ಸಂಘಗಳು, [illegible] ಕೂಲಿಕಾರರ ಸಂಘಗಳು, [illegible] ಗಳಲ್ಲಿ ಕೆಲಸಮಾಡುವ, ಹಡಗಗಳ ಕೆಲಸ ಮಾಡುವ, ರೈಲ್ವೆ ಕಂಪೆನಿಗಳ ಕೆಲಸಮಾಡುವ ಕೂಲಿಕಾರರ ಸಂಘಗಳು, ಉಪಾಧ್ಯಾಯರ ಸಂಘಗಳು, ಕಾರ್ಖಾನೆಗಳ ಯಜಮಾನರ ಸಂಘಗಳು, ಮುಂತಾದ ಹಲವು ತರದ ಸಂಘಗಳು ಸ್ಥಾಪಿಸಲ್ಪಟ್ಟಿವೆ. ಈ ಸಂಘಗಳನ್ನು ಸರಿಯಾಗಿ ನಡೆಸುವಂತೆ ಕ್ರಮಗಳನ್ನು ಏರ್ಪಡಿಸಿರುವರು. ತಮಗೆ ಸಿಕ್ಕುವ ಸಂಬಳದ ಸ್ವಲ್ಪ ಅಂಶವನ್ನು ಕೊಟ್ಟು ಪ್ರತಿ ಸಂಘಗಳಿಗೆ ಭಂಡವಾಳವನ್ನು ಏರ್ಪಡಿಸುವರು. ಸಂಘದ ಮೆಂಬರರಿಗೆ ಕಷ್ಟಬಂದ ಕಾಲದಲ್ಲಿ ಈ ಭಂಡವಾಳದಿಂದ ಹಣವನ್ನು ತೆಗೆದು ಸಹಾಯ ಮಾಡುವರು. ಈ ಸಂಘಗಳನ್ನು ನಡೆಸುವುದಕ್ಕಾಗಿ ಈ ಸಂಘಗಳ ಮೆಂಬರರಲ್ಲಿ ಕೆಲವರನ್ನು ಚುನಾಯಿಸುವರು. ಈ ಸಂಘಗಳ ಮೆಂಬರುಗಳಿಗೆ ಯಾವ ತರದ ಕಷ್ಟಗಳು ಬಂದ ಸಮಯದಲ್ಲಿ ಇವರು ಕಂಪೆನಿಯ ಯಜಮಾನರೊಡನೆ ತಮ್ಮ ಹಾಲಹವಾಲೆಗಳನ್ನು ಹೇಳುತ್ತಿರುವರು. ಯಜಮಾನರು ಕೇಳದೆ ಇದ್ದರೆ ಸರಕಾರದವರೊಡನೆ ಮೊರೆ ಇಡುತ್ತಿರುವರು. ಪಾರ್ಲಿಮೆಂಟು ಸಭೆಗೆ ತಮ್ಮ ಕಡೆಯಿಂದ ಮೆಂಬರರನ್ನು ಚುನಾಯಿಸಿ ಕಳುಹಿಸುತ್ತಿರುವರು. ತಮಗೆ ಸಮ್ಬಂಧವಾದ ಏನಾದರೂ ಕಾಯಿದೆ ಕಾನೂನುಗಳು ಪಾರ್ಲಿಮೆಂಟು ಸಭೆಯಲ್ಲಿ ನಡೆಯುತ್ತಿವೆಯಾದರೆ ಪಾರ್ಲಿಮೆಂಟ ಸಭೆಯು ನಡೆಯುವಾಗ ಅಲ್ಲಿಗೆ ಹೋಗಿ ಒಳಗೆ ಕೂತುಕೊಳ್ಳುವರು. ಒಳಗೆ ಕೂತುಕೊಳ್ಳಲಿಕ್ಕೆ ಬಿಡದೆ ಇದ್ದರೆ ಸಭಾಮಂದಿರದ ಹೊರಗಡೆಯಲ್ಲಿ ಕುಳಿತುಕೊಳ್ಳುವರು. ತಮಗೆ ವಿರೋಧಕರವಾದ ಠರಾವುಗಳನ್ನು ಪಾರ್ಲಿಮೆಂಟಿನಲ್ಲಿ ಪಾಸುಮಾಡಿದರೆ ಇವರು ಮೆಂಬರುಗಳ ದೊಡ್ಡ ದೊಡ್ಡ ಸಭೆಗಳನ್ನು ಜರಗಿಸಿ ಅಂಥಾ ಠರಾವುಗಳನ್ನು ಖಂಡಿಸುವರು. ಈ ಸಂಘಗಳಿಂದಲೇ ನಡೆಸುವ ದೈನಿಕ ಪತ್ರಿಕೆಗಳು ಇವೆ. ತಮಗೆ ಇರುವ ಭಾವನೆಗಳನ್ನೂ, ತಮ್ಮ ಏಳಿಗೆಗೆ ಬೇಕಾದ ಹಲವು ಸಂಗತಿಗಳನ್ನೂ ತಮಗೆ ವಿರೋಧವಾಗಿ ಆಗುವ ಅಥವಾ ಆಗಲಿಕ್ಕಿರುವ ಕಾಯಿದೆ ಕಾನೂನುಗಳನ್ನೂ ಖಂಡಿಸಿ ಬರೆದ ಲೇಖನಗಳನ್ನೂ ಈ ಪತ್ರಿಕೆಗಳಲ್ಲಿ ಪ್ರಕಟಿಸಿ ತಮ್ಮ ಕುರಿತು ಇರುವ ಎಲ್ಲಾ ಸಂಗತಿಗಳನ್ನು ಲೋಕಕ್ಕೆ ತಿಳಿಯುವಂತೆ ಪ್ರಕಟಿಸುವರು. ಸಂಘದ ಪ್ರತಿ ಒಬ್ಬ ಮೆಂಬರರಲ್ಲಿ ಪ್ರತಿಯೊಬ್ಬನೂ ಈ ಪತ್ರಿಕೆಗಳನ್ನು ಕೊಂಡುಕೊಳ್ಳುತ್ತಿರುವರು. ತಮ್ಮ ಮಕ್ಕಳ ವಿದ್ಯಾಭಿವೃದ್ಧಿಗಾಗಿ ಶಾಲೆಗಳನ್ನು ಸ್ಥಾಪಿಸುವರು. ಇವೆಲ್ಲವೂ ಕ್ರಮಪ್ರಕಾರ ಸ್ಥಾಪಿಸಲ್ಪಟ್ಟ ಸಂಸ್ಥೆಗಳಾಗಿರುವುದರಿಂದ ಸರಕಾರದವರೂ ಕಾರ್ಖಾನೆಗಳ ಯಜಮಾನರೂ ಇವರ ಮಾತಿಗೆ ಕಿವಿಕೊಡುವರು.

ಹಿಂದೂಸ್ಥಾನದಲ್ಲಿ ಸಂಘಗಳನ್ನು ಸ್ಥಾಪಿಸುವ ಕೆಲಸವು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದೆ. ಇತ್ತಲಾಗೆ ಕೆಲವು ವರುಷಗಳಿಂದ ಹಿಂದೂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಕೂಲಿಕಾರರ ಸಂಘಗಳೂ, ಸರಕಾರಿ ನೌಕರರ ಸಂಘಗಳೂ, ಒಳ ನೌಕರರ ಸಂಘಗಳೂ, ವ್ಯಾಪಾರಸ್ಥರ ಸಂಘಗಳೂ (ಇವುಗಳಲ್ಲಿ ವಿಲಾಯತಿ ಜನರ ವ್ಯಾಪಾರಸ್ಥರ ಸಂಘಗಳು) ಬಲವಾಗಿವೆ. (Chamber of Commerce) ಇಂಡಿಯನ ವ್ಯಾಪಾರಸ್ಥರ ಸಂಘಗಳೂ ಬೇರೆ ಬೇರೆ ಜಾತಿಯವರು ತಮ್ಮ ಜಾತಿಯ ಉದ್ಧಾರಕ್ಕಾಗಿ ಸ್ಥಾಪಿಸಿದ ಸಂಘಗಳೂ ಇತ್ತಲಾಗೆ ಜನ್ಮವೆತ್ತಿವೆ.

ಮುಂಬಾಯಿಯಲ್ಲಿ ನೂಲುವ ಗಿರಣಿಗಳ ಕೂಲಿಕಾರರ ಸಂಘಗಳೂ ರೈಲ್ವೆ ವರ್ಕ್‌ಶೋಪುಗಳ ಕೂಲಿಕಾರರ ಸಂಘಗಳೂ, ಅಹಮದಾಬಾದಿನಲ್ಲಿ ಗಿರಣಿಯ ಕೂಲಿಕಾರರ ಸಂಘಗಳೂ; ಪೂನೆಯಲ್ಲಿ ಮರಾಠಿ ಸಾಹಿತ್ಯ ಸಂಘಗಳೂ, ಸೇವಾಸದನ ಸಂಘಗಳೂ; ಕಲಕತ್ತದಲ್ಲಿ ರೈಲುವೆ ಮತ್ತು ಗಿರಣಿಗಳ ಕೂಲಿಕಾರರ ಸಂಘಗಳೂ; ಮದರಾಸಿನಲ್ಲಿ ಕೂಲಿಕಾರರ ಸಂಘಗಳೂ; ತಿರುಚಿನಾಪಳ್ಳಿಯಲ್ಲಿ ರೈಲ್ವೇ ಕೂಲಿಕಾರರ ಸಂಘಗಳೂ, ಇಂಡಿಯದ ಎಲ್ಲಾ ಭಾಗಗಳಲ್ಲಿ ಟಪ್ಪಾಲು ಮತ್ತು ಟೆಲಿಗ್ರಾಫ್ ಇಲಾಖೆಗಳ ಆಫೀಸರರ ಸಂಘಗಳೂ, ಪೋಸ್ಟಮೇನ್ ಮತ್ತು ಇತರ ಕೆಳ ನೌಕರರ ಸಂಘಗಳೂ, ನೋನ್ ಗಜೆಟೆಡ್ ಆಫೀಸರರ ಸಂಘಗಳೂ, ಶಾಲಾ ಡಿಪ್ಯುಟಿ ಇನ್ಸಪೆಕ್ಟರರ ಸಂಘಗಳೂ ಸ್ಥಾಪಿಸಲ್ಪಟ್ಟಿವೆ.

ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡುವ ಸೆಕೆಂಡರಿ ಶಾಲೆಗಳ ಉಪಾಧ್ಯಾಯರ ಗಿಲ್ಡುಗಳೆಂಬ ಸಂಘಗಳೂ ಮದರಾಸು ಸಂಸ್ಥಾನದ ಹಲವು ಜಿಲ್ಲೆಗಳಲ್ಲಿ ಸ್ಥಾಪಿಸಲ್ಪಟ್ಟಿವೆ. ಆದರೆ ಇಂಥಾ ಸಂಘಗಳು ತಮಿಳು ಮತ್ತು ಆಂಧ್ರ ದೇಶಗಳಲ್ಲಿ ಮಾತ್ರವೇ ಸ್ಥಾಪಿಸಲ್ಪಟ್ಟಿವೆ. ಈ ಜಿಲ್ಲಾ ಸಂಘಗಳನ್ನು ಒಟ್ಟುಗೂಡಿಸಿ ಸೌತ್ ಇಂಡಿಯನ್ ಟೀಚರ್ಸ್ ಯೂನಿಯನ್ ಎಂಬ ಸಂಘವನ್ನು ಸ್ಥಾಪಿಸಿರುವರು. ಇವರು ಈ ಸಂಘಗಳ ಸಭೆಗಳಿಗೆ ವಿದ್ಯಾಮಂತ್ರಿಯವರನ್ನೂ, ವಿದ್ಯಾ ಇಲಾಖೆಯ ಡೈರೆಕ್ಟರರನ್ನೂ ಆಮಂತ್ರಿಸಿ, ಇವರ ಮುಂದೆ ತಮ್ಮ ಹಾಲಹವಾಲೆಗಳನ್ನು ತಿಳಿಸುತ್ತಿರುವರು.

ಹಲವು ಜಿಲ್ಲೆಗಳಲ್ಲಿ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘಗಳೂ ಸ್ಥಾಪಿಸಲ್ಪಟ್ಟಿವೆ. ಇವರೂ ಇದೇ ಸೌತ್ ಇಂಡಿಯನ್ ಟೀಚರ್ಸ್ ಯೂನಿಯನಿಗೆ ಸೇರಿರುವರು.

ಇಷ್ಟೆಲ್ಲವೂ ಬೃಹತ್ಸೃಷ್ಟಿಯಾದ ತಮಿಳು ತೆಲುಗು ದೇಶದಲ್ಲಿಯ ಅವಸ್ಥೆಯಾಯಿತು. ಆದರೆ ಪರಶುರಾಮ ಸೃಷ್ಟಿಯಾದ ದಕ್ಷಿಣ ಕನ್ನಡ ಮತ್ತು ಮಲೆಯಾಳ ಜಿಲ್ಲೆಗಳ ಸೆಕೆಂಡರಿ ಶಾಲೆಗಳ ಉಪಾಧ್ಯಾಯರೂ ಎಲಿಮೆಂಟರಿ ಶಾಲಾ ಉಪಾಧ್ಯಾಯರೂ ನಿದ್ರಾವಸ್ಥೆಯಲ್ಲಿಯೇ ಇರುವರು. ಈ ಎರಡು ಜಿಲ್ಲೆಗಳೂ ಮದರಾಸು ಸಂಸ್ಥಾನದ ಒಂದು ಮೂಲೆಯಲ್ಲಿರುವುದರಿಂದ ಈ ಅವಸ್ಥೆಯು ಆಗಲು ಕಾರಣವಾಗಿದೆ. ಇತರ ಜಿಲ್ಲೆಗಳ ಸೆಕೆಂಡರಿ ಶಾಲಾ ಮತ್ತು ಎಲಿಮೆಂಟರಿ ಶಾಲಾ ಉಪಾಧ್ಯಾಯರು ತಮ್ಮ ಏಳಿಗೆಗಾಗಿ ಮಾಡುತ್ತಿರುವ ಪ್ರಯತ್ನಗಳ ವಿಷಯ ಉಪಾಧ್ಯಾಯರು ವರ್ತಮಾನ ಪತ್ರಿಕೆಗಳನ್ನು ಓದಿದರೆ ಇದೆಲ್ಲವೂ ಅವರಿಗೆ ಮನವರಿಕೆಯಾಗುತ್ತಿತ್ತು. ಸೆಕೆಂಡರಿ ಶಾಲಾ ಉಪಾಧ್ಯಾಯರು ಹೆಚ್ಚು ಕಲಿತವರಾಗಿದ್ದು ಬುದ್ಧಿವಂತರಾದುದರಿಂದ ಅವರಿಗೆ ಈ ಗಿಲ್ಡುಗಳನ್ನು ಮಾಡಿದರೆ ಏನೊಂದೂ ಪ್ರಯೋಜನವಾಗಲಿಕ್ಕಿಲ್ಲವೆಂದು ಭಾವಿಸಿ ನಿದ್ರಾವಸ್ಥೆಯಲ್ಲಿ ಇರುತ್ತಾರೆ. ಇವರ ಸಂಖ್ಯೆಯೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಕಡಿಮೆಯಾಗಿದೆ. ಇಷ್ಟರವರೆಗೆಯೂ ಯಾವದಾದರೂ ಸಭೆಗೆ ಹೋಗಿ ಸರಿಯಾಗಿ ಮಾತನಾಡುವಷ್ಟು ಧೈರ್ಯವಿರುವ ಉಪಾಧ್ಯಾಯರು ಒಬ್ಬರೂ ಕಂಡುಬರುವುದಿಲ್ಲ. ಆದರೆ ಇಂಥಾ ಸಂಘ ಒಂದನ್ನು ಸ್ಥಾಪಿಸಿದರೆ ಸಭೆಗಳಲ್ಲಿ ಮಾತನಾಡಲು ಅಭ್ಯಾಸವಾಗುವುದು. ಧೈರ್ಯವೂ ಬರುವುದು, ಜ್ಞಾನವೂ ಅಭಿವೃದ್ಧಿಯಾಗುವುದು. ಜಿಲ್ಲೆಯ ಬೇರೆ ಬೇರೆ ಊರುಗಳಲ್ಲಿ ಕೆಲಸಮಾಡುವ ಉಪಾಧ್ಯಾಯರ ಪರಿಚಯವು [illegible] ಕೆಲಸಮಾಡಲು ಸಾಧ್ಯವಾಗುವುದು.

ಎಲಿಮೆಂಟರಿ [illegible] ಬಹು ಕಷ್ಟಪಡುವವರು [illegible] ತುಂಬ ಕಡಿಮೆಯಾಗಿರುವುದರಿಂದ [illegible] ಕಲಿಸಲು ಸಾಧ್ಯವಾಗುವುದಿಲ್ಲ. ಇವರು [illegible] ವಾಗಿರುವುದರಿಂದಲೂ ವಿದ್ಯಾ ಇಲಾಖೆಯಲ್ಲಿ [illegible] ವಣೆಗಳ ವಿಷಯ ಇವರಿಗೆ [illegible] ಶಾಲೆಯನ್ನು ಬಿಟ್ಟುಮೇಲೆ ಲೋಕದಲ್ಲಿ [illegible] ವಿಷಯ ಅವರಿಗೆ ಏನೊಂದೂ ಗೊತ್ತಾಗುವುದಿಲ್ಲ. [illegible] ಈ ರೀತಿಯಲ್ಲಿ ಇರುವುದರಿಂದ ವಿದ್ಯಾ [illegible] ಶಾಲೆಗಳ ಸಂದರ್ಶನೆಗೆ ಹೋದಾಗ ಅವರಿಗೆ [illegible] ಬರುತ್ತದೆ. ಈ ಮೇಲಾಧಿಕಾರರು ಹಳ್ಳಿ [illegible] ಅಲ್ಲಿ ಉಳುಕೊಳ್ಳಲಿಕ್ಕೆ ಸಮಯವೇ ಇಲ್ಲ. [illegible] ಬದಲಾವಣೆಗಳೂ ಹೊಸ ಪದ್ಧತಿಗಳೂ ಇವುಗಳ [illegible] ಧ್ಯಾಯರಿಗೆ ತಿಳಿಸಲು ಅನುಕೂಲವೇ ಇಲ್ಲ. [illegible] ಒಂದಾವರ್ತಿ ಪೇಟೆಗೆ ಹೋದರೆ ಸಾಕಾಗುತ್ತದೆ. [illegible] ಕಡಿಮೆ ವಿದ್ಯಾಭ್ಯಾಸವುಳ್ಳವರಾದುದರಿಂದಲೂ ವರ್ತಮಾನ ಪತ್ರಿಕೆಗಳು ಓದಿ ಲೋಕದ ಯಾವ ವಿಷಯವೂ ತಿಳಿದುಕೊಳ್ಳದೆ [illegible] ದಲೂ ಈ ಆಫೀಸರರಿಗೆ ಹೆದರಿ ಅವರು ಒಂದಾವರ್ತಿ ತಮ್ಮ ಶಾಲೆಯಿಂದ ಆದಷ್ಟು ಬೇಗನೆ ಹೋದರೆ ಸಾಕೆಂದು ಕಾಯುತ್ತಿರುವರು.

ಆದುದರಿಂದ ಮೇಲಿನ ಎಲ್ಲಾ ಕುಂದುಕೊರತೆಗಳಿಂದ ಎಲಿಮೆಂಟರಿ ಶಾಲಾ ಉಪಾಧ್ಯಾಯರನ್ನು ದೂರಮಾಡಬೇಕಾದರೆ ಉಪಾಧ್ಯಾಯರ ಸಂಘಗಳನ್ನು ಬಲಪಡಿಸುವುದು ಅಗತ್ಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ [illegible] ತಾಲೂಕುಗಳಲ್ಲಿಯೂ ಅಲ್ಲಲ್ಲಿ ಸಂಘಗಳು ಸ್ಥಾಪಿಸಲ್ಪಟ್ಟಿವೆ. ಕಾಸರಗೋಡು ತಾಲೂಕಿನ ಸಂಘಗಳು ಒಂದೆರಡು ವರುಷಗಳ ಹಿಂದೆ ಸರಿಯಾಗಿ ಕೆಲಸ ನಡಿಸುತ್ತಿದ್ದುವು. ಈಗ ಅವುಗಳೆಲ್ಲವೂ ನಿದ್ರಾವಸ್ಥೆಯಲ್ಲಿವೆ. ಮಂಗಳೂರು ತಾಲೂಕಿನಲ್ಲಿ ಸ್ವಲ್ಪವಷ್ಟಿಗೆ ಜೀವಕಳೆಯಿಂದ ಇವೆ. ಪುತ್ತೂರು ತಾಲೂಕಿನಲ್ಲಿ ಇವುಗಳು ಮೇಲಧಿಕಾರಿಗಳ ಸೂತ್ರದ ಗೊಂಬೆಗಳಂತಿವೆ. ಕಾಸರಗೋಡು ತಾಲೂಕಿನ ಉಪಾಧ್ಯಾಯರಿಗೆ ಭೂಲೋಕದ ಗೋಚರವೇ ಕಡಿಮೆ. ತಾಲೂಕು ಬೋರ್ಡು ಸರ್ಕಾರು ಪಂಚಾಯತು ಸರ್ಕಾರುಗಳೆಂದು ಅವರ ಆಯುಷ್ಯ ಅದರಲ್ಲಿಯೇ ಕಳೆಯಿತು. ಇವುಗಳೂ ಅರ್ಧ ನಿದ್ರಾವಸ್ಥೆಯಲ್ಲಿ ಇತ್ತಲಾಗೆ ಬಿದ್ದಿವೆ. ಕಾರ್ಕಳ ತಾಲೂಕಿನವರು ಒಂದೆರಡು ವರುಷಗಳ ಹಿಂದೆ ನಿದ್ರೆಯಿಂದ ಎದ್ದು ಕಣ್ಣು ಬರಸಿ ಕೊನೆಗೆ ತಿರಿಗಿ ನಿದ್ರಾವಸ್ಥೆಯಲ್ಲಿ ಬಿದ್ದರು. ಉಡುಪಿ ತಾಲೂಕಿನವರು ಜಾತಿವಾರು ಶಾಲೆಗಳ ಸಂಘ ಸ್ಥಾಪನೆ ಮಾಡಬೇಕೆಂದು ಹೋರಾಡಿ ಹೇಗೂ 3 ತಿಂಗಳ ಹಿಂದೆ ಒಟ್ಟುಗೂಡಿ ಕೆಲವು ಸಂಘ ಸ್ಥಾಪನೆಮಾಡಿದರು. ಕುಂದಾಪುರ ತಾಲೂಕಿನವರು ಎಲ್ಲಾ ಸಂಘ ಸ್ಥಾಪನೆ ಮಾಡಿ ಒಂದು ತಿಂಗಳಾಯಿತು. ಇವರಿಗೆ ನಿದ್ರೆ ಹತ್ತುತ್ತದೋ ನೋಡಲಿಕ್ಕಿದೆ.

ಎಲ್ಲಾ ತರದ ಕುಂದುಕೊರತೆಗಳನ್ನು ಹೋಗಲಾಡಿಸಬೇಕಾದರೆ ಮೊದಲು ಒಂದು ಜಿಲ್ಲಾ ಸಂಘವನ್ನು ಮಂಗಳೂರಲ್ಲಿ ಸ್ಥಾಪಿಸಿ ಅದಕ್ಕೆ ಅಧಿಕಾರಿಗಳನ್ನು ಚುನಾಯಿಸಿ ಕ್ರಮಗಳನ್ನು ಏರ್ಪಡಿಸಿ 'ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ' ಎಂಬ ಹೆಸರಿನಿಂದ ರಿಜಿಸ್ಟರ್ ಮಾಡಿಸಬೇಕು. ಆರು ತಾಲೂಕುಗಳ ಸಂಘಗಳೂ ಕೂಡಿ ಈ ಕೆಲಸವನ್ನು ಬೇಗನೇ ಮಾಡುವದು ಉತ್ತಮ. ಇಲ್ಲದಿದ್ದರೆ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸ್ಥಿತಿಯು ಯಾವ ಅವಸ್ಥೆಗೆ ಬಂದೀತೆಂದು ಹೇಳಲು ಬರುವುದಿಲ್ಲ. Work, work in the living present.

'ಉಪಾಧ್ಯಾಯ,'

ಪುತ್ತೂರು ತಾಲೂಕು ಬೋರ್ಡು.

ಮೇಲೆ ಕಾಣಿಸಿದ ಶಿರೋನಾಮೆಯಿಂದ 'ತಾಲೋಕು ನಿವಾಸಿ'ಯು ತಮ್ಮ ಅಮೂಲ್ಯವಾದ ಪತ್ರಿಕೆಯ ಕಳೆದ ತಾ. [illegible]ನೆಯ ಸಂಚಿಕೆಯಲ್ಲಿ ಬರೆದ ಲೇಖನವನ್ನು ಓದಿನೋಡಿದೆನು. ಪುತ್ತೂರು ತಾಲೋಕು ಬೋರ್ಡಿನ ಆಡಳಿತದ ಕುರಿತಾಗಿ "ತಾಲೂಕು ನಿವಾಸಿಯು" ಎಷ್ಟೋ ಶ್ರಮಪಟ್ಟು ಕೆಲವು ಕುಂದುಕೊರತೆಗಳನ್ನು ಕಂಡುಹಿಡಿದು ಅವುಗಳನ್ನು ಪತ್ರಿಕೆಯ ಮೂಲಕ ಹೊರಗೆಡಹಿ ಅದರ ಪ್ರೆಸಿಡೆಂಟರು ಪದದ್ವೆಂಬ [illegible] ಮಾನಕ್ಕೆ ಒಂದಿಷ್ಟು ಬೊಟ್ಟು ಹಚ್ಚಿ ಕೆಲವು ಅಮೂಲ್ಯವಾದ ಸೂಚನೆಗಳನ್ನು ಮುಂದಿನ ನಡವಳಿಕೆಯ ಬಗ್ಗೆ ಕೊಟ್ಟಿದ್ದಕ್ಕಾಗಿ "ತಾಲೂಕು ನಿವಾಸಿ"ಯು ಜನತೆಗೆ ಮಹದುಪಕಾರವನ್ನು ಮಾಡಿರುತ್ತಾನೆಂಬುವದು ನಿಸ್ಸಂದೇಹ. ಪುತ್ತೂರು ತಾಲೂಕು ಅಡುಸ್ತ್ರದೇಶವಾಗಿದ್ದು ಬಹುತರವಾಗಿ ಹಿಂದುಳಿದರೂ ವಿಶಾಲದೃಷ್ಟಿಯೂ ವಿಮರ್ಶಾತ್ಮಕ ಬುದ್ಧಿಯೂ ಇರುವ "ತಾಲೂಕು ನಿವಾಸಿ"ಗಳಾದವರೂ ಅಲ್ಲಿರುವದು ತಾಲೋಕಿನ ಭಾವೀ ಕಲ್ಯಾಣಕ್ಕೆ ಶುಭಸೂಚನೆಯನ್ನು ಕಾಣಿಸುತ್ತದೆ. [illegible] 'ತಾಲೂಕು ನಿವಾಸಿ'ಯು ಬರೆದ ಪ್ರಸಂಗಗಳ ಕುರಿತು ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ಆರೋಗ್ಯ ರಕ್ಷಣೆ— ಇದೀ ತಾಲೂಕು ಎಂಬುದು ಮಲೇರಿಯಾ ರೋಗಕ್ಕೆ ತುತ್ತಾಗಿ ಜನರೆಲ್ಲ ಹೇಳಲಸಾಧ್ಯವಾದ ಯಾತನೆಗೆ ಗುರಿಯಾಗಿದ್ದಾರೆಂಬುವದು ಸರ್ವರಿಗೂ ತಿಳಿದ ವಿಷಯವಾಗಿದೆ. ಈ [illegible] ಅತಿ ಬಡ ತಾಲೋಕಾಗಿದ್ದು ಬೋರ್ಡಿನ ಅಲ್ಪ ಉತ್ಪತ್ತಿಯಿಂದ [illegible] ಗಳೆಲ್ಲ ನಡಿಯಲಸಾಧ್ಯವಾಗಿ ವರುಷ [illegible] ಸಹಾಯಧನದ ಬೆಂಬಲದಿಂದ ಅಲ್ಲಿಂದಲ್ಲಿಗೆ [illegible] ಗಳನ್ನು ಮಾಡಿಕೊಂಡು ತಾಲೂಕು ಬೋರ್ಡಿನ [illegible] ಕೊಳ್ಳಬೇಕಾಗಿದೆ. ಹೀಗಿರುವಲ್ಲಿ ಪ್ರತಿ ಗ್ರಾಮಕ್ಕೆ [illegible] ವನ್ನು ಒದಗಿಸುವ ಮಹತ್ತರವಾದ ಹಂಚಿಕೆಯು [illegible] ಎಲ್ಲಿಂದ ಬರಬೇಕು? ಮಲೇರಿಯಾ [illegible] ಇದನ್ನು ಧರ್ಮಾರ್ಥವಾಗಿ ಈ [illegible] ಸೆಂಟ್ರಲ್ ಮಾಡಿ ಕ್ವಿನಿನ್ [illegible] ಆಷ್ಟರ ಸಮಯ ಇದ್ದಿಗೆ [illegible] ಗ್ರಾಮಾಂತರಗಳಲ್ಲಿ ಹರಡಲು [illegible] ನಿದ್ದಾರೆ. ಇದರಿಂದ [illegible]

([illegible])

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಶ್ವಗಂಧಾದಿ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟಿದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ವಂಚನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ತುತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಚಿಕಿತ್ಸಕರಿಗೆ "ಆರೋಗ್ಯರಕ್ಷಕ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ಪುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸಿಬರುತ್ತೇವೆ. ನಿಃಶಂಸ ಅನುಭವದ ಮೇಲೆ ನಮ್ಮ ಪುಡಿದಾರ ಹಗ್ಗಗಳು ಕೆಲಸ ನೈಸಲ್ಲಿಯೂ, ದಾರದ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳನ್ನು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ಧಾರಣೆ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಹಂಚು ವ್ಯಾಪಾರ,

21-8-'28 — ತಮ್ಮಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1/- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಆತಂಕನಿಗ್ರಹ ಅವುಷಧಾಲಯ,
ನಂ. 86, ಬ್ರಾಡ್ವೇ, ಮದರಾಸು.

ಏಜಂಟರು—
ಮೆಸ್ಸರ್ಸ್ ರೇಚೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli and Coondapur.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ ಮತ್ತು ಕುಂದಾಪುರ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,37,715—3—7	ರಿಸರ್ವುನಿಧಿ ಮತ್ತು ಇತರ ಫಂಡುಗಳು 3,37,715—3—7
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6½% for 2 Years, 6% „ 1 Year	ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6½% 1ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6½% p. a.	ಜೂನ್ ಅಂತ್ಯದ ವಳಗೆ ವಾಯಿದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6½.

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

For further particulars please apply to—

Canara Bank Ltd.
Mangalore, 26th Nov. 1928.

K. Venkat Rao,
Secretary

THE PANGAL NAYAK BANK, LTD.

Head Office: Udipi, S. K.] *Estd. 1920* **[Branch Office: Mangalore, S. K.**

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ, ದ. ಕ.] ಸ್ಥಾಪಿತವಾದದ್ದು 1920. [ಬ್ರೇಂಚು ಆಫೀಸು: ಮಂಗಳೂರು, ದ. ಕ.

ಬೇಂಕರರು—ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪಾಯಿ 2,00,000/-

ಚಂದಾ ಮೂಲಕ ಹಾಕಲ್ಪಟ್ಟವ ವಸೂಲಾದ ಮೂಲಧನ ರೂ. 1,50,000-	ಆಪದ್ಧನ ಇತ್ಯಾದಿ ನಿಕ್ಷೇಪಗಳು ರೂ. 1,00,000/

FIXED DEPOSITS are received for 3 months at 5%, for 6 or 9 months at 5½%, of 12, 15, 18 or 21 months at 6¼%, and for 24 months at 6½%, Interest being payable every 3 Months. SEASON DEPOSITS from January to June at 6¼% SHORT NOTICE DEPOSITS, withdrawable by giving 15 days previous notice after one month at 4½% and CUMULATIVE DEPOSITS by monthly instalments are also received. SAVINGS BANK DEPOSIT ACCOUNTS may be opened and interest allowed at 4⅛%, CURRENT DEPOSIT ACCOUNTS may also be opened and interest allowed at 3% from January to June and at 2% from July to December. Loans granted on personal and approved securities on reasonable terms. Banking business of every description transacted.

Further information may be had on application to the Secretary at the HEAD OFFICE or to the AGENT at BRANCH OFFICE.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ. ಕಿ. 5 ರಂತೆಯೂ, 6 ಯಾ 9 ತಿಂಗಳುಗಳಿಗೆ ಸಾ. ಕಿ. 5¼ರಂತೆಯೂ, 12, 15, 18, ಯಾ 21 ತಿಂಗಳುಗಳಿಗೆ ಸಾ. ಕಿ. 6¼ರಂತೆಯೂ, 24 ತಿಂಗಳುಗಳಿಗೆ ಸಾ. ಕಿ. 6½ರಂತೆಯೂ, ಪ್ರತಿ 3 ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು. ಮುಸಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೆಗೆ) ಸಾ. ಕಿ. 6¼ರಂತೆಯೂ ಅಲ್ಪಾವಧಿ ಠೇವಣಾತಿಗಳು ಸಾ. ಕಿ. 4¼ರಂತೆಯೂ, ಸಂಚಯ ಠೇವಣಾತಿಗಳು, ಪ್ರಯೋಜನಕರವಾದ ರೀತಿಯಿಂದಲೂ, ಸೇವಿಂಗ್ಸ್ ಬೇಂಕ ಠೇವಣಾತಿಗಳು ಸಾ. ಕಿ. 4⅛ರಂತೆಯೂ, ಚಾಲ್ತಿ ಠೇವಣಾತಿಗಳು ಜನವರಿಯಿಂದ ಜೂನ್ ಅಂತ್ಯದ ವರೆಗೆ ಸಾ. ಕಿ. 3ರಂತೆಯೂ, ಜುಲಾಯಿ ತಿಂಗಳಿಂದ ಡಿಸೆಂಬರ ಅಂತ್ಯದ ವರೆಗೆ ಸಾ. ಕಿ. 2 ರಂತೆಯೂ ಅಂಗೀಕರಿಸಲ್ಪಡುವವು.

ಸಾಲಗಳು ಯೋಗ್ಯವಾದ ಜವಾಬ್ದಾರಿಗಳ ಮೇಲೆ ನ್ಯಾಯವಾದ ರೀತಿಯಲ್ಲಿ ಕೊಡಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿನ ಸೆಕ್ರೆಟರಿಯವರಿಗೂ ಯಾ ಬ್ರೇಂಚ್ ಆಫೀಸಿನ ಏಜಂಟರಿಗೂ ಬರಕೊಳ್ಳುವುದು.

ಬೇಂಕಿನ ಆಫೀಸು, ಉಡುಪಿ,
ತಾ. 16—10—'28.

ಪಿ. ಲಕ್ಷ್ಮಣ ನಾಯಕ್,
ಒಫೀಸಿಯೇಟಿಂಗ್ ಸೆಕ್ರೆಟರಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳು.

ದಯ ಇಟ್ಟು ಮೇಲಣ ಸಾಮಾನುಗಳನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್,
ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ;
210, ಅಬ್ದುಲ್‌ರಹಿಮಾನ್ ಸ್ಟ್ರೀಟ್, ಮುಂಬಾಯಿ.

ಕಲಕತ್ತಾ ಎಕ್ಸಿಬಿಷನು.

1928.

ಹಿಂದೀ ರಾಷ್ಟ್ರೀಯ ಮಹಾಸಭೆಯ 43ನೇ ಅಧಿವೇಶನದವರಿಂದ ವ್ಯವಸ್ಥಾಪಿಸಲ್ಪಟ್ಟದ್ದು.

ಅಪೂರ್ವ ಸುಸಂದರ್ಭ.

ಸ್ವದೇಶಕ್ಕೆ ಸಂಬಂಧಿಸಿದ ಮಾಲು ತಯಾರಿಸುವವರಿಗೂ, ಸಾಹುಕಾರರಿಗೂ, ವ್ಯಾಪಾರಿಗಳಿಗೂ, ಪ್ರದರ್ಶಕರಿಗೂ ಚಿತ್ರಕಾರರಿಗೂ, ಕಲಾಕೋವಿದರಿಗೂ, ಅನುಕೂಲವಾಗುವಂತೆ, ಕಲಕತ್ತಾ ಎಗ್ಸಿಬಿಷನು 1928ನೇ ದಶಂಬರ ತಿಂಗಳಿನ ಮಧ್ಯದಿಂದ 1929ನೇ ಇಸವಿ ಜನವರಿ ತಿಂಗಳಿನ ಮಧ್ಯದ ವರೆಗೆ ತೆರೆದುಕೊಂಡಿರುವದು.

ಎಗ್ಸಿಬಿಶನಿನ ಕಟ್ಟಡದಲ್ಲಾಗಲೀ, ಪ್ರತ್ಯೇಕವಾಗಿ ಗೂಡಾರಗಳನ್ನು ಕಟ್ಟಿಸುವ ಸಲುವಾಗಿಯಾಗಲೀ ಸ್ಥಳಕೊಡಲಾಗುವದು. ಎಗ್ಸಿಬಿಶನು ಪಾರ್ಕಸರ್ಕಸ್ ಎಂಬ ಸ್ಥಳದಲ್ಲಿ ನಡೆಯುವದು.

ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. R. Sarkar,
Secretary,
The Calcutta Exhibition
8A. Hogg Street, CALCUTTA

ಪತ್ರಿಕೆ [illegible]

[illegible]

ಮದುವೆಗೂ ಒಂದು ಕಾನೂನು ಬೇಕೆ?

ಮದುವೆಗೊಂದು ಕಾನೂನು ಬೇಕೆಬೇಕೆಂಬ [illegible] ಪ್ರಾಬಲ್ಯ ಹೊಂದುತ್ತಿದೆ. ಆದರೆ ಈ ವಿಷಯದಲ್ಲಿ ಆತ್ಮಶೋಧನವೆಂದಾದರೂ ನಮ್ಮ ನಿಜಾಂತಃಕರಣವನ್ನು ಪ್ರಕಟೀಕರಿಸದಿದ್ದರೆ ನಾವು ನಿಜವಾಗಿಯೂ ಸ್ವಯಂದ್ರೋಹಿಗಳಾಗುವೆವೆಂಬುದರಲ್ಲಿ ಸಂಶಯವಿಲ್ಲದು.

ಮದುವೆಗೊಂದು ಕಾನೂನು ಬೇಕು ಎಂಬುದನ್ನು ಎರಡು ತರದಲ್ಲಿ ವಿಭಾಗಿಸಿ ಚರ್ಚಿಸಬಹುದು. ಮದುವೆಗೊಂದು ಸಮಯ ನಿರ್ಧಾರ ಬೇಕೆಂದೂ, ಅದನ್ನು ಮಾನ್ಯ ಸರಕಾರದವರೇ ನಮ್ಮಲ್ಲಿ ಪ್ರಚಾರಗೊಳಿಸಬೇಕೆಂದೂ ಮೇಲೆ ಹೇಳಿದ ವಾಕ್ಯವು ಸೂಚಿಸುತ್ತದೆ. ಇದರಲ್ಲಿ ವರ್ಷ ನಿರ್ಧಾರವನ್ನು ಮಾನ್ಯ ಸರಕಾರದವರೇ ಮಾಡಿ ನಮ್ಮಲ್ಲಿ ಪ್ರಚಾರಗೊಳಿಸಬೇಕೆಂಬ ವಿಷಯ ಅತ್ಯಂತ ರುಚಿಕರವಾದುದರಿಂದ ಅದನ್ನು ಮೊದಲು ವಿಚಾರಿಸುತ.

ಮದುವೆಗೆ ಸಮಯ ನಿರ್ಧಾರ ಮಾಡಿ ಮಾನ್ಯ ಸರಕಾರದವರು ಕಾನೂನಿನ ರೂಪದಿಂದ ನಮ್ಮಲ್ಲಿ ಪ್ರಚಾರಕ್ಕೆ ತರಬೇಕೆಂಬ ಅಭಿಪ್ರಾಯಕ್ಕೆ ಅಸಹಕಾರ ಚಳವಳದ ಮುಖಂಡರೂ 'ಸಹಿ' ಬರೆದುದನ್ನು ನೋಡಿದರೆ ಸರ್ವರಿಗೂ ಪರವಶ್ಚರ್ಯವಾಗಲೇ ಬೇಕು. ನಮ್ಮ ಮಠ, ದೇವಸ್ಥಾನಗಳಿಗೆ ಸರಕಾರದವರು ಕೈಹಾಕುವ ಸಮಯ ಎಲ್ಲರೂ ಏಕಕಂಠದಿಂದ ಅದನ್ನು ನಿರೋಧಿಸಲಿಲ್ಲವೇ? ಮಠ, ದೇವಸ್ಥಾನಗಳೆಂದರೆ ನಮ್ಮ ಧರ್ಮ ಮತ್ತು ಮತವಿಚಾರಗಳಲ್ಲಿ ಸೇರಿವೆ. ಧರ್ಮ ಮತ್ತು ಮತ ವಿಚಾರಗಳಲ್ಲಿ ಕೈಹಾಕಲು ಸರಕಾರದವರಿಗೆ ಯಾವ ತರದ ಅಧಿಕಾರವೂ ಇರುವುದಿಲ್ಲವೆಂತ ನಮ್ಮ ಜಿಲ್ಲೆಯ ಅಸಹಕಾರ ಚಳವಳದ ಮುಖಂಡರು ಒತ್ತಿ ಹೇಳಿರುವರು. ಆದರೆ ಈಗ ಮಾತ್ರ ಏನು ಭ್ರಮೆ! ಸರಕಾರದವರೇ ಮದುವೆಗೊಂದು ಕಾನೂನು ಮಾಡಬೇಕಂತೆ! ಮದುವೆಯೆಂದರೆ ಧರ್ಮ ಮತ ವಿಚಾರಗಳಲ್ಲಿ ಸೇರಿಲ್ಲವೋ? ಹಾಗಾದರೆ ಅದು ಯಾವ ತರದ ವಿಷಯ?

ಸರಕಾರದವರಿಗೂ ನಮಗೂ ಪ್ರವೇಶ ಸಂಬಂಧವಿರಹವಾಗಬೇಕೆಂದು ಸರ್ವರೂ ಪ್ರತಿಪಾದಿಸುತ್ತಾರೆ. ನಾವು ಆದಷ್ಟು ಅವರಿಂದ ದೂರತೊಲಗಬೇಕಾದರೆ ಅವರೊಡನೆ ನವೀನ ಸಂಬಂಧವನ್ನು ಬೆಳೆಯಿಸುವುದು ಕೇವಲ ತಪ್ಪು. ಆದುದರಿಂದ ಸರಕಾರದವರೊಡನೆ ಮದುವೆಗೊಂದು ಕಾನೂನು ಮಾಡಿರೆಂಬ ವಿಚಾರವನ್ನು ಹೇಳುವದು ಇಡೀ ಹಿಂದುಸ್ಥಾನದಲ್ಲಿ ಪ್ರಬಲವಾಗಿರುವ ಅಸಹಕಾರ ಚಳವಳಕ್ಕೆ ಯೋಗ್ಯವೇ ಅಲ್ಲ.

ಮದುವೆಯೆಂಬುದು ನಮ್ಮ ನಮ್ಮ ಮನೆಗಳಲ್ಲಾಗತಕ್ಕ ವಿಷಯ. ಅದರಿಂದ ನಮಗೆ ಕೆಡುಕು ಬಂತೆಂದರೆ ನಮ್ಮ ನಮ್ಮ ಮನೆಗಳಲ್ಲಿ ಕೊಳೆಯು ಸೇರಿಕೊಂಡಿರುವದೆನ್ನಬಹುದು. ಮನೆಯೊಳಗಿನ ಕೊಳೆಯನ್ನು ನಾವೇ ಹೊರಗೆ ದಿಸಾಡಲಿಕ್ಕೆ ಬದಲಾಗಿ ಅನ್ಯರೊಡನೆ, ಮಾತ್ರವಲ್ಲ ನಮ್ಮ ಪರಮದ್ವೇಷಿಗಳಾದವರೊಡನೆ ಆ ಕಾರ್ಯವನ್ನು ಮಾಡಹೇಳಿದರೆ ನಮಗೆ ಅವರಿಂದ ವಿಪತ್ತು ಬರುವದಲ್ಲವೇ? ನಮ್ಮ ಮನೆಯೊಳಗೆ ನಮ್ಮ ಅರಿಗಳನ್ನು ಬರಹೇಳಿ ಸಹಾಯ ಕೇಳಿದರೆ ಅವರಿಗೆ ತಮ್ಮ ಕಾರ್ಯಗಳನ್ನು ಸಾಧಿಸಿಕೊಳ್ಳಲು ಮತ್ತೂ ಸುಲಭವಾಗುವದು. ಇದನ್ನು ಸರ್ವರೂ ವಿಚಾರಿಸಬೇಕೆಂಬುದೇ ಮೊದಲನೆಯ ಪ್ರಾರ್ಥನೆ.

ಮೊನ್ನೆ ತಾನೆ ದಿವಂಗತರಾದ ಲಾಲಾಜಿಯವರ ಮರಣ ವಾರ್ತೆಯನ್ನು ಕೇಳಿರುವೆವು. ಅವರ ಅಕಾಲ ಮರಣಕ್ಕೆ ಲಾಹೋರಿನ ಸರಕಾರದವರ ಅನಾಚಾರವೇ ಕಾರಣವೆಂದು ಎಲ್ಲರೂ ಹೇಳಿಕೊಂಡು ಬರುತ್ತಾರೆ. ಲಾಲಾಜಿಯವರಂತಹ ವೀರಪುರುಷನನ್ನು ಕಾರಣವಿಲ್ಲದೆ ಘೋರಯಾತ್ರೆಗೆ ಕಳುಹಿಸಿದ ಸರಕಾರದವರೊಡನೆ ಸಹಕಾರವೆಂದರೆ ಅವರ ಆತ್ಮಕ್ಕೆ ಎಂದಿಗೂ ತೃಪ್ತಿಕರವಾಗದು. ಸ್ವರಾಜ್ಯಸ್ಥಾಪನೆಯಾಗುವ ಮೊದಲು ತಮ್ಮ ಮನಃಸಂತೋಷವೆಂದಿಗೂ ಆಗಲಾರದೆಂದು ಲಾಲಾಜಿಯವರು ಜೀವಂತರಾಗಿರುವಾಗ ಪದೇ ಪದೇ ಹೇಳಿರುವರು. ಸ್ವರ್ಗದಲ್ಲಿ ಅವರ ತಿಳಿದುಕೊಂಡು. ಈಗಲೂ ಅವರು ಅದನ್ನೇ ಜಪಿಸುತ್ತಿರುವರು. ಹಾಗಿರಲು ಇನ್ನು ಇನ್ನು ಸರಕಾರದವರ ಬೆಂಬಲವನ್ನು ನಾವು 'ಬಿಡದೆ' ಅವರನ್ನು ಆಶ್ರಯಿಸುವದೆಂದರೆ ಲಾಲಾಜಿಯವರ ದೋಷವು ಬಂದಕಲ್ಲಿನ ಮೇಲೆ ಮಳೆ ಸುರಿಸಿದಂತಾಗುವದು. ನಿಜವಾಗಿಯೂ ನಾವು ದೇಶಭಕ್ತರೆಂದರೆ ಖಾದಿಧರಿಸಿ ಉಪನ್ಯಾಸ ಮಾತನಾಡಿದರೆ ಮಾತ್ರ ಸಾಲದು. ಸ್ವರಾಜ್ಯ ಲಾಭಕ್ಕೆ ತಕ್ಕದಾದ ಯತ್ನಗಳನ್ನು ಮಾಡಲೇಬೇಕು. ಖಾದಿ ತೊಟ್ಟು ಸರಕಾರ ವಿರುದ್ಧವಾಗಿ ಉಪನ್ಯಾಸ ಮಾತನಾಡಿ ಕೊನೆಗೆ ಅವರನ್ನೆ ಆಶ್ರಯಿಸುವದೆಂದರೆ ದೇಶಭಕ್ತರ ಲಕ್ಷಣವಾಗದು. ದೇಶಭಕ್ತಿಯನ್ನು ಬಿಟ್ಟು ಸರ್ವಜನಸಮ್ಮತವಲ್ಲದ ವಿಷಯಗಳನ್ನು ಎತ್ತಿ ಹಿಡಿದು ನಮ್ಮಲ್ಲಿ ಇಕ್ಕಟ್ಟು ತಂದುಕೊಳ್ಳುವದೆಂದರೆ ಸ್ವರಾಜ್ಯ ಲಾಭವನ್ನು ದೂರಮಾಡಲು ಬೇರೆ ವಿಧಾನವೆ ಬೇಡ. ಆದುದರಿಂದ ಈ ವಿಷಯವನ್ನು ಪ್ರಾಜ್ಞ ಮಹಾಶಯರು ಪರ್ಯಾಲೋಚಿಸಬೇಕೆಂಬುದೇ ನನ್ನ ಮುಖ್ಯ ಕೋರಿಕೆ. (ಸಶೇಷ)

ಕೆ. ಬಾಲಕೃಷ್ಣರಾವ್, ಬಿ. ಎ.

ಕುಬಣೂರು.

ದಕ್ಷಿಣ ಕನ್ನಡ ಜಿಲ್ಲೆಯ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘವನ್ನು ಸ್ಥಾಪಿಸುವ ಅವಶ್ಯಕತೆ.

ಜಿಲ್ಲೆಯ ಎಲ್ಲಾ ಉಪಾಧ್ಯಾಯ ಸಂಘಗಳ ಅವಗಾಹನೆ ಬಗ್ಗೆ.

ಭೂಲೋಕದಲ್ಲಿರುವ ಬೇರೆ ಬೇರೆ ಕೆಲಸಗಾರರು ತಮ್ಮ ಅಭಿವೃದ್ಧಿಗಾಗಿ ಬೇರೆ ಬೇರೆ ಸಂಘಗಳನ್ನು ಸ್ಥಾಪಿಸಿರುವರು. ಈ ತರದ ಸಂಘಗಳು ಯುರೋಪ ಖಂಡದ ಎಲ್ಲಾ ರಾಜ್ಯಗಳಲ್ಲಿಯೂ ಅಮೇರಿಕದ ಯುನೈಟೆಡ್ ಸ್ಟೇಟ್ಸಿನಲ್ಲಿಯೂ, ಜಪಾನ ದೇಶದಲ್ಲಿಯೂ ಇತ್ತಲಾಗೆ ಚೀನಾ ದೇಶದಲ್ಲಿಯೂ ಸ್ಥಾಪನೆಯಾಗಿದೆ. ಇವುಗಳಲ್ಲಿ ಹತ್ತಿಯ ಗಿರಣಿಗಳ ಕೂಲಿಕಾರರ ಸಂಘಗಳು, ಕಬ್ಬಿಣದ ಕಾರ್ಖಾನೆಗಳ ಕೂಲಿಕಾರರ [illegible] ಗಳ್ಳಿ [illegible], ಹಡಗಗಳ [illegible] ಮಾಡುವ, [illegible] ಕಂಪೆನಿಗಳ [illegible] ಸಂಘಗಳು, ಉಪಾಧ್ಯಾಯರ ಸಂಘಗಳು, [illegible] ಗಳ ಯುವಜನರ ಸಂಘಗಳು, ಮುಂತಾದ [illegible] ಸಂಘಗಳು ಸ್ಥಾಪಿಸಲ್ಪಟ್ಟಿವೆ. ಈ ಸಂಘಗಳಲ್ಲಿ ಸರಿಯಾಗಿ ನಡೆಯುವಂತೆ ಕ್ರಮಗಳನ್ನು ಏರ್ಪಡಿಸಿರುವರು. ತಮಗೆ ಸಿಕ್ಕುವ ಸಂಬಳದ ಸ್ವಲ್ಪ ಅಂಶವನ್ನು ಕೊಟ್ಟು ಪ್ರತಿ ಸಂಘಗಳಿಗೆ ಚಂದಾಹಣವನ್ನು ನಿರ್ಧರಿಸುವರು. ಸಂಘದ ಮೆಂಬರರಿಗೆ ಕಷ್ಟಬಂದ ಕಾಲದಲ್ಲಿ ಈ ಚಂದಾಹಣದಿಂದ ಹಣವನ್ನು ತೆಗೆದು ಸಹಾಯ ಮಾಡುವರು. ಈ ಸಂಘಗಳನ್ನು ನಡಿಸುವದಕ್ಕಾಗಿ ಈ ಸಂಘಗಳ ಮೆಂಬರರಲ್ಲಿ ಕೆಲವರನ್ನು ಚುನಾಯಿಸುವರು. ಈ ಸಂಘಗಳ ಮೆಂಬರುಗಳಿಗೆ ಯಾವ ತರದ ಕಷ್ಟಗಳು ಬಂದ ಸಮಯದಲ್ಲಿ ಇವರು ಕಂಪೆನಿಯ ಯಜಮಾನರೊಡನೆ ತಮ್ಮ ಹಾಲಹವಾಲೆಗಳನ್ನು ಹೇಳುತ್ತಿರುವರು. ಯಜಮಾನರು ಕೇಳದೆ ಇದ್ದರೆ ಸರಕಾರದವರೊಡನೆ ದೂರಿ ಇಡುತ್ತಿರುವರು. ಪಾರ್ಲಿಮೆಂಟು ಸಭೆಗೆ ತಮ್ಮ ಕಡೆಯಿಂದ ಮೆಂಬರರನ್ನು ಚುನಾಯಿಸಿ ಕಳುಹಿಸುತ್ತಿರುವರು. ತಮಗೆ ಸಮ್ಮಂಧವಾದ ಏನಾದರೂ ಕಾಯಿದೆ ಕಾನೂನುಗಳು ಪಾರ್ಲಿಮೆಂಟ ಸಭೆಯಲ್ಲಿ ನಡಿಯುತ್ತಿವೆಯಾದರೆ ಪಾರ್ಲಿಮೆಂಟ ಸಭೆಯು ನಡಿಯುವಾಗ ಅಲ್ಲಿಗೆ ಹೋಗಿ ಒಳಗೆ ಕೂತುಕೊಳ್ಳುವರು. ಒಳಗೆ ಕೂತುಕೊಳ್ಳಲಿಕ್ಕೆ ಬಿಡದೆ ಇದ್ದರೆ ಸಭಾಮಂದಿರದ ಹೊರಗಡೆಯಲ್ಲಿ ಕೂತುಕೊಳ್ಳುವರು. ತಮಗೆ ವಿರೋಧಕರವಾದ ಠರಾವುಗಳನ್ನು ಪಾರ್ಲಿಮೆಂಟನಲ್ಲಿ ಪಾಸುಮಾಡಿದರೆ ಇವರು ಮೆಂಬರುಗಳ ದೊಡ್ಡ ದೊಡ್ಡ ಸಭೆಗಳನ್ನು ಜರಗಿಸಿ ಅಂಥಾ ಠರಾವುಗಳನ್ನು ಖಂಡಿಸುವರು. ಈ ಸಂಘಗಳಿಂದಲೇ ನಡಿಸುವ ದೈನಿಕ ಪತ್ರಿಕೆಗಳು ಇವೆ. ತಮಗೆ ಇರುವ ಭಾವನೆಗಳನ್ನೂ, ತಮ್ಮ ಏಳಿಗೆಗೆ ಬೇಕಾದ ಹಲವು ಸಂಗತಿಗಳನ್ನೂ ತಮಗೆ ವಿರೋಧವಾಗಿ ಆಗುವ ಅಥವಾ ಆಗಲಿಕ್ಕಿರುವ ಕಾಯಿದೆ ಕಾನೂನುಗಳನ್ನೂ ಖಂಡಿಸಿ ಬರೆದ ಲೇಖನಗಳನ್ನೂ ಈ ಪತ್ರಿಕೆಗಳಲ್ಲಿ ಪ್ರಕಟಿಸಿ ತಮ್ಮ ಕುರಿತು ಇರುವ ಎಲ್ಲಾ ಸಂಗತಿಗಳನ್ನು ಲೋಕಕ್ಕೆ ತಿಳಿಯುವಂತೆ ಪ್ರಕಟಿಸುವರು. ಸಂಘದ ಪ್ರತಿ ಒಬ್ಬ ಮೆಂಬರರಲ್ಲಿ ಪ್ರತಿಯೊಬ್ಬನೂ ಈ ಪತ್ರಿಕೆಗಳನ್ನು ಕೊಂಡುಕೊಳ್ಳುತ್ತಿರುವರು. ತಮ್ಮ ಮಕ್ಕಳ ವಿದ್ಯಾಭಿವೃದ್ಧಿಗಾಗಿ ಶಾಲೆಗಳನ್ನು ಸ್ಥಾಪಿಸುವರು. ಇವೆಲ್ಲವೂ ಕ್ರಮಪ್ರಕಾರ ಸ್ಥಾಪಿಸಲ್ಪಟ್ಟ ಸಂಸ್ಥೆಗಳಾಗಿರುವುದರಿಂದ ಸರಕಾರದವರೂ ಕಾರ್ಖಾನೆಗಳ ಯಜಮಾನರೂ ಇವರ ಮಾತಿಗೆ ಕಿವಿಕೊಡುವರು.

ಹಿಂದೂಸ್ಥಾನದಲ್ಲಿ ಸಂಘಗಳನ್ನು ಸ್ಥಾಪಿಸುವ ಕೆಲಸವು ಇನ್ನೂ ಬಾಲ್ಯಾವಸ್ಥೆಯಲ್ಲಿಯೇ ಇದೆ. ಇತ್ತಲಾಗೆ ಕೆಲವು ವರುಷಗಳಿಂದ ಹಿಂದೂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಕೂಲಿಕಾರರ ಸಂಘಗಳೂ, ಸರಕಾರಿ ನೌಕರರ ಸಂಘಗಳೂ, ಒಳ ನೌಕರರ ಸಂಘಗಳೂ, ವ್ಯಾಪಾರಸ್ಥರ ಸಂಘಗಳೂ (ಇವುಗಳಲ್ಲಿ ವಿಲಾಯತಿ ಜನರ ವ್ಯಾಪಾರಸ್ಥರ ಸಂಘಗಳೇ ಬಲವಾಗಿವೆ. (Chamber of Commerce) ಇಂಡಿಯದ ವ್ಯಾಪಾರಸ್ಥರ ಸಂಘಗಳೂ ಬೇರೆ ಬೇರೆ ಜಾತಿಯವರು ತಮ್ಮ ಜಾತಿಯ ಉದ್ಧಾರಕ್ಕಾಗಿ ಸ್ಥಾಪಿಸಿದ ಸಂಘಗಳೂ ಇತ್ತಲಾಗೆ ಜನ್ಮವೆತ್ತಿವೆ.

ಮುಂಬಾಯಿಯಲ್ಲಿ ನೂಲುವ ಗಿರಣಿಗಳ ಕೂಲಿಕಾರರ ಸಂಘಗಳೂ ರೈಲುವೆ ವರ್ಕಶಾಪುಗಳ ಕೂಲಿಕಾರರ ಸಂಘಗಳೂ, ಅಹಮದಾಬಾದಿನಲ್ಲಿ ಗಿರಣಿಯ ಕೂಲಿಕಾರರ ಸಂಘಗಳೂ; ಪೂನೆಯಲ್ಲಿ ಮರಾಠಿ ಸಾಹಿತ್ಯ ಸಂಘಗಳೂ, ಸೇವಾಸದನ ಸಂಘಗಳೂ; ಕಲಕತ್ತೆಯಲ್ಲಿ ರೈಲುವೆ ಮತ್ತು ಗಿರಣಿಗಳ ಕೂಲಿಕಾರರ ಸಂಘಗಳೂ; ಮದರಾಸಿನಲ್ಲಿ ಕೂಲಿಕಾರರ ಸಂಘಗಳೂ; ತಿರುಚಿನಾಪಳ್ಳಿಯಲ್ಲಿ ರೈಲುವೇ ಕೂಲಿಕಾರರ ಸಂಘಗಳೂ, ಇಂಡಿಯದ ಎಲ್ಲಾ ಭಾಗಗಳಲ್ಲಿ ಟಪ್ಪಾಲು ಮತ್ತು ಟೆಲಿಗ್ರಾಫ್ ಇಲಾಖೆಗಳ ಆಫೀಸರರ ಸಂಘಗಳೂ, ಪೋಸ್ಟಮೇನ್ ಮತ್ತು ಇತರ ಕೆಳ ನೌಕರರ ಸಂಘಗಳೂ, ನೊನ್ ಗಜೆಟೆಡ್ ಆಫೀಸರರ ಸಂಘಗಳೂ, ಶಾಲಾ ಡಿಪ್ಯುಟಿ ಇನ್ಸಪೆಕ್ಟರರ ಸಂಘಗಳೂ ಸ್ಥಾಪಿಸಲ್ಪಟ್ಟಿವೆ

ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡುವ ಸೆಕೆಂಡರಿ ಶಾಲೆಗಳ ಉಪಾಧ್ಯಾಯರ ಗಿಲ್ಡುಗಳೆಂಬ ಸಂಘಗಳೂ ಮದರಾಸು ಸಂಸ್ಥಾನದ ಹಲವು ಜಿಲ್ಲೆಗಳಲ್ಲಿ ಸ್ಥಾಪಿಸಲ್ಪಟ್ಟಿವೆ. ಆದರೆ ಇಂಥಾ ಸಂಘಗಳು ತಮಿಳ ಮತ್ತು ಆಂಧ್ರ ದೇಶಗಳಲ್ಲಿ ಮಾತ್ರವೇ ಸ್ಥಾಪಿಸಲ್ಪಟ್ಟಿವೆ. ಈ ಜಿಲ್ಲಾ ಸಂಘಗಳನ್ನು ಒಟ್ಟುಗೂಡಿಸಿ ಸೌತ್ ಇಂಡಿಯನ್ ಟೀಚರ್ಸ್ ಯೂನಿಯನ್ ಎಂಬ ಸಂಘವನ್ನು ಸ್ಥಾಪಿಸಿರುವರು. ಇವರು ಈ ಸಂಘಗಳ ಸಭೆಗಳಿಗೆ ವಿದ್ಯಾಮಂತ್ರಿಯವರನ್ನೂ, ವಿದ್ಯಾ ಇಲಾಖೆಯ ಡೈರೆಕ್ಟರನ್ನೂ ಆಮಂತ್ರಿಸಿ, ಇವರ ಮುಂದೆ ತಮ್ಮ ಹಾಲಹವಾಲೆಗಳನ್ನು ತಿಳಿಸುತ್ತಿರುವರು.

ಹಲವು ಜಿಲ್ಲೆಗಳಲ್ಲಿ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘಗಳೂ ಸ್ಥಾಪಿಸಲ್ಪಟ್ಟಿವೆ. ಇವರೂ ಇದೇ ಸೌತ್ ಇಂಡಿಯನ್ ಟೀಚರ್ಸ ಯೂನಿಯನಿಗೆ ಸೇರಿರುವರು.

ಇನ್ನೆಲ್ಲವೂ ಬೃಹತ್ಸೃಷ್ಟಿಯಾದ ತಮಿಳು ತೆಲುಗು ದೇಶದಲ್ಲಿಯ ಅವಸ್ಥೆಯಾಯಿತು. ಆದರೆ ಪರಶುರಾಮ ಸೃಷ್ಟಿಯಾದ ದಕ್ಷಿಣ ಕನ್ನಡ ಮತ್ತು ಮಲೆಯಾಳ ಜಿಲ್ಲೆಗಳ ಸೆಕೆಂಡರಿ ಶಾಲೆಗಳ ಉಪಾಧ್ಯಾಯರೂ ಎಲಿಮೆಂಟರಿ ಶಾಲಾ ಉಪಾಧ್ಯಾಯರೂ ನಿದ್ರಾವಸ್ಥೆಯಲ್ಲಿಯೇ ಇರುವರು. ಈ ಎರಡು ಜಿಲ್ಲೆಗಳೂ ಮದರಾಸು ಸಂಸ್ಥಾನದ ಒಂದು ಮೂಲೆಯಲ್ಲಿರುವುದರಿಂದ ಈ ಅವಸ್ಥೆಯು ಆಗಲು ಕಾರಣವಾಗಿದೆ. ಇತರ ಜಿಲ್ಲೆಗಳ ಸೆಕೆಂಡರಿ ಶಾಲಾ ಮತ್ತು ಎಲಿಮೆಂಟರಿ ಶಾಲಾ ಉಪಾಧ್ಯಾಯರು ತಮ್ಮ ಏಳಿಗೆಗಾಗಿ ಮಾಡುತ್ತಿರುವ ಪ್ರಯತ್ನಗಳ ವಿಷಯ ಉಪಾಧ್ಯಾಯರು ವರ್ತಮಾನ ಪತ್ರಿಕೆಗಳನ್ನು ಓದಿದರೆ ಇದೆಲ್ಲವೂ ಅವರಿಗೆ ಮನದಟ್ಟಾಗುತ್ತಿತ್ತು. ಸೆಕೆಂಡರಿ ಶಾಲಾ ಉಪಾಧ್ಯಾಯರು ಹೆಚ್ಚು ಕಲಿತವರಾಗಿದ್ದು ಬುದ್ಧಿವಂತರಾದುದರಿಂದ ಅವರಿಗೆ ಈ ಗಿಲ್ಡುಗಳನ್ನು ಮಾಡಿದರೆ ಏನೊಂದೂ ಪ್ರಯೋಜನವಾಗಲಿಕ್ಕಿಲ್ಲವೆಂದು ಭಾವಿಸಿ ನಿದ್ರಾವಸ್ಥೆಯಲ್ಲಿ ಇರುತ್ತಾರೆ. ಇವರ ಸಂಖ್ಯೆಯೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಕಡಿಮೆಯಾಗಿದೆ. ಇದ್ದವರಲ್ಲಿಯೂ ಯಾವದಾದರೂ ಸಭೆಗೆ ಹೋಗಿ ಸರಿಯಾಗಿ ಮಾತನಾಡುವಷ್ಟು ಧೈರ್ಯವಿರುವ ಉಪಾಧ್ಯಾಯರು ಒಬ್ಬರೂ ಕಂಡುಬರುವುದಿಲ್ಲ. ಆದರೆ ಇಂಥಾ ಸಂಘ ಒಂದನ್ನು ಸ್ಥಾಪಿಸಿದರೆ ಸಭೆಗಳಲ್ಲಿ ಮಾತನಾಡಲು ಅಭ್ಯಾಸವಾಗುವುದು. ಧೈರ್ಯವೂ ಬರುವುದು, ಜ್ಞಾನವೂ ಅಭಿವೃದ್ಧಿಯಾಗುವುದು. ಜಿಲ್ಲೆಯ ಬೇರೆ ಬೇರೆ ಊರುಗಳಲ್ಲಿ ಕೆಲಸಮಾಡುವ [illegible] ಕೆಲಸಮಾಡಲು [illegible]

ಎಲಿಮೆಂಟರಿ [illegible] ಬಹು [illegible] ಸ್ವಲ್ಪ ಕಡಿಮೆಯಾಗಿರುವದರಿಂದ [illegible] ಕಲಿಸಲು ಸಾಧ್ಯವಾಗುವುದಿಲ್ಲ. ಇವರು [illegible] ವಾಗುವುದರಿಂದಲೂ ವಿದ್ಯಾ ಇಲಾಖೆಯಲ್ಲಿ [illegible] ಗಳ ವಿಷಯ ಇವರಿಗೆ [illegible] ಶಾಲೆಯನ್ನು ಬಿಟ್ಟುಮೇಲೆ ಬೇರೆ ದಿನ [illegible] ವಿಷಯ ಅವರಿಗೆ ಏನೊಂದೂ ಗೊತ್ತಾಗುವುದಿಲ್ಲ [illegible] ಈ ರೀತಿಯಲ್ಲಿ ಇರುವುದರಿಂದ ವಿದ್ಯಾ [illegible] ಶಾಲೆಗಳ ಸಂದರ್ಶನೆಗೆ ಹೋದಾಗ ಅವರಿಗೆ [illegible] ಬರುತ್ತದೆ. ಈ ಮೇಲಾಧಿಕಾರಿಗಳು ಹಳ್ಳಿ [illegible] ಅಲ್ಲಿ ಉಳುಕೊಳ್ಳಲಿಕ್ಕೆ ಸಮಯವೇ [illegible] ಬದಲಾವಣೆಗಳೂ ಹೊಸ ಮೆಥಡುಗಳೂ ಇವುಗಳ [illegible] ಧ್ಯಾಯರಿಗೆ ತಿಳಿಸಲು ಅನುಕೂಲವೇ ಇಲ್ಲ. [illegible] ಒಂದಾವರ್ತಿ ಪೇಟೆಗೆ ಹೋದರೆ ಸಾಕಾಗುತ್ತದೆ. [illegible] ಕಡಿಮೆ ವಿದ್ಯಾಭ್ಯಾಸವುಳ್ಳವರಾದುದರಿಂದಲೂ [illegible] ಓದಿ ಲೋಕದ ಯಾವ ವಿಷಯವೂ ತಿಳಿದುಕೊಳ್ಳದ [illegible] ದಲೂ ಈ ಆಫೀಸರರಿಗೆ ಹೆದರಿ ಅವರು ಒಂದಾವರ್ತಿ [illegible] ಅವಷ್ಟು ಬೇಗನೆ ಹೋದರೆ ಸಾಕೆಂದು ಕಾಯುತ್ತಿರುವರು.

ಆದುದರಿಂದ ಮೇಲಿನ ಎಲ್ಲಾ ಕುಂದುಕೊರತೆಗಳಿಂದ ಎಲಿಮೆಂಟರಿ ಶಾಲಾ ಉಪಾಧ್ಯಾಯರನ್ನು ಪಾರುಮಾಡಬೇಕಾದರೆ ಉಪಾಧ್ಯಾಯರ ಸಂಘಗಳನ್ನು ಬಲಪಡಿಸುವುದು ಅಗತ್ಯವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ೬ ತಾಲೂಕುಗಳಲ್ಲಿಯೂ ಅಲ್ಲಲ್ಲಿ ಸಂಘಗಳು ಸ್ಥಾಪಿಸಲ್ಪಟ್ಟಿವೆ. ಕಾಸರಗೋಡು ತಾಲೂಕಿನ ಸಂಘಗಳು ಒಂದೆರಡು ವರುಷಗಳ ಹಿಂದೆ ಸರಿಯಾಗಿ ಕೆಲಸ ನಡಿಸುತ್ತಿತ್ತವು. ಈಗ ಅವುಗಳೆಲ್ಲವೂ ನಿದ್ರಾವಸ್ಥೆಯಲ್ಲಿವೆ. ಮಂಗಳೂರು ತಾಲೂಕಿನಲ್ಲಿ ಸ್ವಲ್ಪವಟ್ಟಿಗೆ ಜೀವಕಳೆಯಿಂದ ಇವೆ. ಪುತ್ತೂರು ತಾಲೂಕಿನಲ್ಲಿ ಇವುಗಳು ಮೇಲಧಿಕಾರಿಗಳ ಸೂತ್ರದ ಗೊಂಬೆಗಳಂತಿವೆ. ಕಾಸರಗೋಡು ತಾಲೂಕಿನ ಉಪಾಧ್ಯಾಯರಿಗೆ ಭೂಲೋಕದ ಗೋಚರವೇ ಕಡಿಮೆ. ತಾಲೂಕು ಬೋರ್ಡು ಸರ್ಕಾರು ಪಂಚಾಯತು ಸರ್ಕಲಾರೆಂದು ಅವರ ಆಯುಷ್ಯ ಅವರಲ್ಲಿಯೇ ಕಳೆಯಿತು. ಇವುಗಳೂ ಅರ್ಧ ನಿದ್ರಾವಸ್ಥೆಯಲ್ಲಿ ಇತ್ತಲಾಗೆ ಬಿದ್ದಿವೆ. ಕಾರ್ಕಳ ತಾಲೂಕಿನವರು ಒಂದೆರಡು ವರುಷಗಳ ಹಿಂದೆ ನಿದ್ರೆಯಿಂದ ಎದ್ದು ಕಣ್ಣು ಬಿರಿಸಿ ಕೂತರೂ ತಿರಿಗಿ ನಿದ್ರಾವಸ್ಥೆಯಲ್ಲಿ ಬಿದ್ದರು. ಉಡುಪಿ ತಾಲೂಕಿನವರು ಜಾತಿವಾರು ಶಾಲೆಗಳ ಸಂಘ ಸ್ಥಾಪನೆ ಮಾಡಬೇಕೆಂದು ಹೋರಾಡಿ ಹೇಗೂ ೨ ತಿಂಗಳ ಹಿಂದೆ ಒಟ್ಟುಗೂಡಿ ಕೆಲವು ಸಂಘ ಸ್ಥಾಪನೆಮಾಡಿದರು. ಕುಂದಾಪುರ ತಾಲೂಕಿನವರು ಎದ್ದು ಸಂಘಸ್ಥಾಪನೆ ಮಾಡಿ ಒಂದು ತಿಂಗಳಾಯಿತು. ಇವರಿಗೆ ನಿದ್ರೆ ಹತ್ತುತ್ತದೂ ನೋಡಲಿಕ್ಕಿದೆ.

ಎಲ್ಲಾ ತರದ ಕುಂದುಕೊರತೆಗಳನ್ನು ಹೋಗಲಾಡಿಸಬೇಕಾದರೆ ಮೊದಲು ಒಂದು ಜಿಲ್ಲಾ ಸಂಘವನ್ನು ಮಂಗಳೂರಲ್ಲಿ ಸ್ಥಾಪಿಸಿ ಅದಕ್ಕೆ ಅಧಿಕಾರಿಗಳನ್ನು ಚುನಾಯಿಸಿ ಕ್ರಮಗಳನ್ನು ಏರ್ಪಡಿಸಿ 'ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘ' ಎಂಬ ಹೆಸರಿನಿಂದ ರಿಜಿಸ್ಟರ್ ಮಾಡಿಸಬೇಕು. ಆರು ತಾಲೂಕುಗಳ ಸಂಘಗಳೂ ಕೂಡಿ ಈ ಕೆಲಸವನ್ನು ಬೇಗನೇ ಮಾಡುವುದು ಉತ್ತಮ. ಇಲ್ಲದಿದ್ದರೆ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸ್ಥಿತಿಯು ಯಾವ ಅವಸ್ಥೆಗೆ ಬಂದೀತೆಂದು ಹೇಳಲು ಬರುವುದಿಲ್ಲ. Work, work in the living present.

'ಉಪಾಧ್ಯಾಯ.'

ಪುತ್ತೂರು ತಾಲೂಕು ಬೋರ್ಡು.

ಮೇಲೆ ಕಾಣಿಸಿದ ಶಿರೋನಾಮೆಯಿಂದ 'ತಾಲೂಕು ನಿವಾಸಿ'ಯು ತಮ್ಮ ಅಮೂಲ್ಯವಾದ ಪತ್ರಿಕೆಯ ಕಳೆದ ತಾ. ೩೦-೧೧-೨೮ನೆಯ ಸಂಚಿಕೆಯಲ್ಲಿ ಬರೆದ ಲೇಖನವನ್ನು ಓದಿನೋಡಿದನು. ಪುತ್ತೂರು ತಾಲೂಕು ಬೋರ್ಡಿನ ಆಡಳಿತದ ಕುರಿತಾಗಿ "ತಾಲೂಕು ನಿವಾಸಿಯು" ಎಷ್ಟೋ ಶ್ರಮಪಟ್ಟು ಕೆಲವು ಕುಂದುಕೊರತೆಗಳನ್ನು ಕಂಡುಹಿಡಿದು ಅವುಗಳನ್ನು ಪತ್ರಿಕೆಯ ಮೂಲಕ ಹೊರಗೆಡವಿ ಅವರ ಪ್ರೆಸಿಡೆಂಟರು ಪಡದ್ದೆಂಬ [illegible] ಮಾನಕ್ಕೆ ಒಂದಿಷ್ಟು ಬೊಟ್ಟು ಹಚ್ಚಿ ಕೆಲವು ಅಮೂಲ್ಯವಾದ ಸೂಚನೆಗಳನ್ನು ಮುಂದಿನ ನಡವಳಿಕೆಯ ಬಗ್ಗೆ ಕೊಟ್ಟಿದ್ದಕ್ಕಾಗಿ "ತಾಲೂಕು ನಿವಾಸಿ"ಯು ಜನತೆಗೆ ಮಹದುಪಕಾರವನ್ನು ಮಾಡಿರುತ್ತಾನೆಂಬುದು ನಿಸ್ಸಂದೇಹ. ಪುತ್ತೂರು ತಾಲೂಕು ಕಾಡುಪ್ರದೇಶವಾಗಿದ್ದು ಬಹುತರವಾಗಿ ಹಿಂದುಳಿದರೂ ವಿಶಾಲಸೃಷ್ಟಿಯೂ ವಿಮರ್ಶಾತ್ಮಕ ಬುದ್ಧಿಯೂ ಇರುವ "ತಾಲೂಕು ನಿವಾಸಿ"ಗಳಾದರೂ "ಅಲ್ಲಿರುವದು" ತಾಲೂಕಿನ ಭಾವೀ ಕಲ್ಯಾಣಕ್ಕೆ ಶುಭಸೂಚನೆಯನ್ನು ಕಾಣಿಸುತ್ತದೆ. [illegible] 'ತಾಲೂಕು ನಿವಾಸಿ'ಯು ಬರೆದ ಪ್ರಸಂಗಗಳ ಕುರಿತು ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ಆರೋಗ್ಯ ರಕ್ಷಣೆ— ಇಡೀ ತಾಲೂಕೇ ಎಂಬಂತೆ ಮಲೇರಿಯಾ ರೋಗಕ್ಕೆ ತುತ್ತಾಗಿ ಜನರೆಲ್ಲ ಹೇಳಲಸಾಧ್ಯವಾದ [illegible] ಯಾಗಿದ್ದಾರೆಂಬುದು ಸರ್ವರಿಗೂ ತಿಳಿದ ವಿಷಯವಾಗಿದೆ. ಈ [illegible] ಅತಿ ಬಡ ತಾಲೋಕಾಗಿದ್ದು ಬೋರ್ಡಿನ ಅಲ್ಪ [illegible] ಗಳೆಲ್ಲ ನಡಿಯಲಸಾಧ್ಯವಾಗಿ ವರುಷ ಗ್ರಾಂಟು [illegible] ಸಹಾಯಧನದ ಬೆಂಬಲದಿಂದ ಅಲ್ಲಿಂದಲ್ಲಿಗೆ [illegible] ಗಳನ್ನು ಮಾಡಿಕೊಂಡು ತಾಲೂಕು ಬೋರ್ಡು [illegible] ಕೊಳ್ಳಬೇಕಾಗಿದೆ. ಹೀಗಿರುವಲ್ಲಿ ಪ್ರತಿ ಗ್ರಾಮ [illegible] ವನ್ನು ಒದಗಿಸುವ ಮಹತ್ತರವಾದ ಹಂಚಿಕೆಯು [illegible] ಎಲ್ಲಿಂದ ಬರಬೇಕು? ಮಲೇರಿಯಾ [illegible] ಇದನ್ನು ಧರ್ಮಾರ್ಥವಾಗಿ ಈ [illegible] ಸೆಂಟ್ರಲ್ ಮಾಡಿ ಕ್ವಿನಿನ್ [illegible] ಅಷ್ಟರ ಸಮಯ ಇಲ್ಲಿಗೆ [illegible] ಗ್ರಾಮಾಂತರಗಳಲ್ಲಿ [illegible] ಸಿದ್ದಾರೆ. ಇವರಿಂದ [illegible]

([illegible])

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಶುಂಠ್ಯಾದಿ ತೈಲ—ಇದು ಪೂರ್ವದ ಋಷಿಗಳಿಂದ ಕಂಡುಹಿಡಿಯಲ್ಪಟ್ಟದ್ದು. ಅನೇಕ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ತರದ ಸಂಚನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಆರೋಗ್ಯರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ಪುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತಿದ್ದೇವೆ. ನಿಂತಿದ ಅನುಭವದ ಮೇಲೆ ನಮ್ಮ ಪುಡಿದಾರ ಹಗ್ಗಗಳು ಕೆಲಸ ಸ್ವಚ್ಛತೆಯಲ್ಲಿಯೂ, ದಾರದ ಸರಸದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫ ವ್ಯಾಪಾರ,

21-3-'28 ಕಣ್ಣಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1/- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ

ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು—
ಮೆಸ್ಸರ್ಸ್ ಕ್ಯಾಂಬೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli and Coondapur.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ ಮತ್ತು ಕುಂದಾಪುರ.

Authorised and fully paid up Capital Rs. 300,000-0-0	ಅಧಿಕಾರಗೊಳಿಸಲ್ಪಟ್ಟ ಪೂರ್ತಿಯಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,37,715-3-7	ಕ್ಷೇಮನಿಧಿ ಮತ್ತು ಇತರ ಫಂಡುಗಳು 3,37,715—3—7
Amount invested on G. P. Notes Rs. 4,87,793-6-0	ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವರೆಗೆ ವ್ಯಾದೆ ಆಗುವ ರೂ. 1000/- ದ ಮೇಲ್ಪಟ್ಟ ಮೌಸಂ ಡಿಪೋಜಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

For further particulars please apply to —

Canara Bank Ltd.
Mangalore, 26th Nov. 1928.

K. Venkat Rao,
Secretary

THE PANGAL NAYAK BANK, LTD.

Head Office: Udipi, S. K.] *Estd. 1920.* [Branch Office: Mangalore, S. K.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ, ದ. ಕ.] ಸ್ಥಾಪಿತವಾದದ್ದು 1920. [ಬ್ರೇಂಚು ಆಫೀಸು: ಮಂಗಳೂರು, ದ. ಕ.

ಬೇಂಕರರು—ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪಾಯಿ 2,00,000/-

ಚಂದಾ ಮೂಲಕ ಹಾಕಲ್ಪಟ್ಟ ವಸೂಲಾದ ಮೂಲಧನ ರೂ. 1,50,000-	ಆಪದ್ಧನ ಇತ್ಯಾದಿ ನಿಧಿಗಳು ರೂ. 1,00,000/

FIXED DEPOSITS are received for 3 months at 5%, for 6 or 9 months at 5¼%, of 12, 15, 18 or 21 months at 6¼%, and for 24 months at 6¼%. Interest being payable every 3 Months. SEASON DEPOSITS from January to June at 6¼% SHORT NOTICE DEPOSITS, withdrawable by giving 15 days previous notice after one month at 4¼% and CUMULATIVE DEPOSITS by monthly instalments are also received. SAVINGS BANK DEPOSIT ACCOUNTS may be opened and interest allowed at 4½%. CURRENT DEPOSIT ACCOUNTS may also be opened and interest allowed at 3% from January to June and at 2% from July to December. Loans granted on personal and approved securities on reasonable terms. Banking business of every description transacted.

Further information may be had on application to the Secretary at the HEAD OFFICE or to the AGENT at BRANCH OFFICE.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ. ಶೆ. 5 ರಂತೆಯೂ, 6 ಯಾ 9 ತಿಂಗಳುಗಳಿಗೆ ಸಾ. ಶೆ. 5¼ ರಂತೆಯೂ 12 15, 18, ಯಾ 21 ತಿಂಗಳುಗಳಿಗೆ ಸಾ. ಶೆ. 6¼ ರಂತೆಯೂ, 24 ತಿಂಗಳುಗಳಿಗೆ ಸಾ. ಶೆ. 6¼ ರಂತೆಯೂ, ಪ್ರತಿ 3 ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು. ಮೌಸಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೆಗೆ) ಸಾ. ಶೆ. 6¼ ರಂತೆಯೂ ಅಲ್ಪಾವಧಿ ಠೇವಣಾತಿಗಳು ಸಾ. ಶೆ. 4¼ ರಂತೆಯೂ, ಸಂಚಯ ಠೇವಣಾತಿಗಳು ಪ್ರಯೋಜನಕರವಾದ ರೀತಿಯಿಂದಲೂ, ಸೇವಿಂಗ್ಸ್ ಬೇಂಕ ಠೇವಣಾತಿಗಳು ಸಾ. ಶೆ. 4½ ರಂತೆಯೂ, ಚಾಲ್ತಿ ಠೇವಣಾತಿಗಳು ಜನವರಿಯಿಂದ ಜೂನ್ ಅಂತ್ಯದ ವರೆಗೆ ಸಾ. ಶೆ. 3 ರಂತೆಯೂ, ಜುಲಾಯಿ ತಿಂಗಳಿಂದ ಡಿಸೆಂಬರ ಅಂತ್ಯದ ವರೆಗೆ ಸಾ. ಶೆ. 2 ರಂತೆಯೂ ಅಂಗೀಕರಿಸಲ್ಪಡುವವು.

ಸಾಲಗಳು ಯೋಗ್ಯವಾದ ಜವಾಬ್ದಾರಿಗಳ ಮೇಲೆ ನ್ಯಾಯವಾದ ರೀತಿಯಲ್ಲಿ ಕೊಡಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿನ ಸೆಕ್ರೆಟರಿಯವರಿಗೂ ಯಾ ಬ್ರೇಂಚ್ ಆಫೀಸಿನ ಏಜಂಟರಿಗೂ ಬರಕೊಳ್ಳುವುದು.

ಬೇಂಕಿನ ಆಫೀಸು, ಉಡುಪಿ,
ತಾ. 18—10—'28.

ಓ. ಲಕ್ಷ್ಮಣ ನಾಯಕ್,
ಒಫೀಸಿಯೇಟಿಂಗ್ ಸೆಕ್ರೆಟರಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳ.

ದಯಮಾಡಿ ಇಟ್ಟು ಮೇಲಣ ಸಾಮಾನುಗಳನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬೆಲೆಪಟ್ಟಿಯನ್ನು ಧರ್ಮಾರ್ಥವಾಗಿ 1928ನೇ ಇಸವಿಯ ಪಟ್ಟಿಯನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಆಲಿಭಾಯಿ ಎಂಡ್ ಸನ್ಸ್.
ಮದ್ದುಕೋವಿಗಳನ್ನು ಧಣಿಯಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ;
210, ಅಬ್ದುರ್ರಹಮಾನ್ ಸ್ಟ್ರೀಟ್, ಮುಂಬಯಿ.

ಕಲಕತ್ತಾ ಎಕ್ಸಿಬಿಷನು.

1928.

ಹಿಂದೀ ರಾಷ್ಟ್ರೀಯ ಮಹಾಸಭೆಯ 43ನೇ ಅಧಿವೇಶನದವರಿಂದ ವ್ಯವಸ್ಥಾಪಿಸಲ್ಪಟ್ಟದ್ದು.

ಅಪೂರ್ವ ಸುಸಂದರ್ಭ.

ಸ್ವದೇಶಕ್ಕೆ ಸಂಬಂಧಿಸಿದ ಮಾಲು ತಯಾರಿಸುವವರಿಗೂ, ಸಾಹುಕಾರರಿಗೂ, ವ್ಯಾಪಾರಿಗಳಿಗೂ, ಪ್ರದರ್ಶಕರಿಗೂ ಚಿತ್ರಕಾರರಿಗೂ, ಕಲಾಕೋವಿದರಿಗೂ, ಅನುಕೂಲವಾಗುವಂತೆ, ಕಲಕತ್ತಾ ಎಗ್ಜಿಬಿಷನು 1928ನೇ ದಶಂಬರ ತಿಂಗಳ ಮಧ್ಯದಿಂದ 1929ನೇ ಇಸವಿ ಜನವರಿ ತಿಂಗಳ ಮಧ್ಯದ ವರೆಗೆ ತೆರೆದುಕೊಂಡಿರುವದು.

ಎಗ್ಜಿಬಿಷನ ಕಟ್ಟಡದಲ್ಲಾಗಲೀ, ಪ್ರತ್ಯೇಕವಾಗಿ ಗೂಡಾರಗಳನ್ನು ಕಟ್ಟಿಸುವ ಸಲುವಾಗಿಯಾಗಲೀ ಸ್ಥಳಕೊಡಲಾಗುವದು. ಎಗ್ಜಿಬಿಷನು ಪಾರ್ಕ್‌ಸರ್ಕಸ್ ಎಂಬ ಸ್ಥಳದಲ್ಲಿ ನಡೆಯುವದು.

ಇತರ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. R. Sarkar,
Secretary,
The Calcutta Exhibition
34, Hogg Street, CALCUTTA

ಸುದ್ದಿ ವಿಚಾರಗಳು

ಪರಾಧೀನತೆಯ ಪ್ರತಿಜ್ಞೆ.

ಕೌನ್ಸಿಲ್ ಅಥವಾ ಎಸೆಂಬ್ಲಿಯ ಸದಸ್ಯತನವನ್ನು ಕೈಕೊಳ್ಳುವಾಗ (Oath of Allegience) ಅಂದರೆ ತಾನು ಸರಕಾರಕ್ಕೂ, ರಾಜರಿಗೂ ವಿಧೇಯನಾಗಿ ನಡಕೊಳ್ಳುವೆನೆಂದು ಪ್ರತಿಜ್ಞೆಯನ್ನು ಕೈಕೊಳ್ಳಬೇಕು. ಇತ್ತೀಚೆಗೆ ಡೊಮಿನಿಯನ್ ಸ್ಟೇಟಸ್ ಮತ್ತು ಸ್ವಾತಂತ್ರ್ಯದ ವಾದದಲ್ಲಿ, ಶ್ರೀ ಶ್ರೀನಿವಾಸ ಅಯ್ಯಂಗಾರರು ಸ್ವಾತಂತ್ರ್ಯವನ್ನು ಸಾರುವವರಲ್ಲೊಬ್ಬರಾಗಿದ್ದು, ತಾವು ಎಸೆಂಬ್ಲಿಯಲ್ಲಿ ಕೈಕೊಂಡ ಈ ಎಲ್ಲೀಜಿಯನ್ ಪ್ರತಿಜ್ಞೆಯನ್ನು ವಿಷದೀಕರಿಸುವ ಅವಶ್ಯಕತೆಯುಂಟಾಯಿತು. (Oath of Allegience) ಎಂದರೆ ಪ್ರಕೃತದ ಸ್ಥಿತಿಯಲ್ಲಿ ಪರಾಧೀನತೆಯ ಪ್ರತಿಜ್ಞೆಯೆಂದೇ ಆಗುವುದಾದುದರಿಂದ, ಶ್ರೀ ಅಯ್ಯಂಗಾರರು ತಾನದನ್ನು ಕೈಕೊಳ್ಳುವಾಗ ಮನಸ್ಸಿನಲ್ಲಿಯೇ ಪ್ರತ್ಯೇಕ ವಿಧವಾಗಿ ಕಲ್ಪಿಸಿರುವೆನೆಂದು, ಆ ಪ್ರತಿಜ್ಞೆಯನ್ನು ಅಕ್ಷರಶಃ ತಾನು ಕೈಕೊಂಡಿರುವೆನಾದರೂ ಕಾರ್ಯತಃ ಅದು ತನ್ನನ್ನು ಬದ್ಧೀಕರಿಸಲಾರದೆಂದೂ ಹೇಳಿದರು. ಹೀಗೆ ಪ್ರತಿಜ್ಞೆಯ ವಿಷಯದಲ್ಲಿಯೂ ಮಾತಿನಲ್ಲೊಂದು ಮನಸ್ಸಿನಲ್ಲೊಂದು ಮಾಡುವವರು ವಿಶ್ವಾಸಾರ್ಹರಲ್ಲದ ದ್ರೋಹಿಗಳೆಂದೂ ಶ್ರೀ ಲಾಲಾಜಿಯವರು ಅಯ್ಯಂಗಾರರನ್ನು ಕಠಿಣವಾಗಿ ಖಂಡಿಸಿದರು. ಈ ಸಮರ್ಥನ ಖಂಡನೆಗಳಲ್ಲಿ ಒಳಗೊಂಡಿರುವ ತತ್ವವು ವಿಚಾರಣೀಯವೆಂದು ನಮಗನ್ನಿಸುತ್ತಿದೆ. ಪ್ರತಿಜ್ಞೆಯು ಸ್ವೇಚ್ಛೆಯಿಂದ ಮಾಡಲ್ಪಟ್ಟಿರುವುದಾದರೆ ಅದನ್ನು ಮತ್ತೆ ಮನಸ್ಸಿನಿಂದ ಪ್ರತ್ಯೇಕಿಸಲಾಗುವುದಿಲ್ಲವೆಂದು ಪ್ರತಿಜ್ಞೆಯೆಂಬ ಶಬ್ದದಿಂದಲೇ ತೋರಿಬರುವುದು. ಆದರೆ ವಶಾತ್ತಾಯದಿಂದ ಮಾಡಲ್ಪಟ್ಟ ಪ್ರತಿಜ್ಞೆಗಳೂ ಮನಸ್ಸಿನ ಮೇಲೆ ಪರಿಣಾಮಕಾರಿಯಾಗಬೇಕೆ? ಮನಸ್ಸು ಪ್ರತ್ಯೇಕವಾಗಿದ್ದರೆ ಪ್ರತಿಜ್ಞೆಯನ್ನೇ ನಿರಾಕರಿಸಬೇಕೇ? ಮನಸ್ಸಿನಿಂದ ಪ್ರತ್ಯೇಕವಾದ ಪ್ರತಿಜ್ಞೆಯನ್ನು ಕೈಕೊಂಡಲ್ಲಿ ಅದನ್ನು ಕೈಕೊಳ್ಳದೇ ಇರುವುದಕ್ಕಿಂತಲೂ ಹೆಚ್ಚಿನ ಪ್ರಯೋಜನವಿರುವುದಾದರೆ ಅಂತಹ ಪ್ರತಿಜ್ಞೆಯನ್ನು ಕೈಕೊಳ್ಳುವುದು ಪಾಪಕರವೇ? ಎಂಬಿತ್ಯಾದಿ ಹಲವು ಪ್ರಶ್ನೆಗಳು ಬರುತ್ತವೆ. ಬೇರೆಯವರ ವಶಾತ್ತಾಯದಿಂದ ಮಾಡಲ್ಪಡುವ ಪ್ರತಿಜ್ಞೆಯು ಪ್ರತಿಜ್ಞೆಯೆನ್ನಲು ಯೋಗ್ಯವಲ್ಲವೆಂದೇ ಹೇಳಬೇಕು. ಪ್ರತಿಜ್ಞೆಯ ಮಹತ್ವವೇ ಸ್ವಯಂಭಾವದಲ್ಲಿರುತ್ತದೆ. ಮಹತ್ವದ ಉದ್ದೇಶದಿಂದ ತಾತ್ಕಾಲಿಕ ಅಡ್ಡಿಯನ್ನು ನಿವಾರಿಸಲಿಕ್ಕಾಗಿ ಐಹಿಕನ ವಶಾತ್ತಾಯದ "ಪ್ರತಿಜ್ಞೆ"ಯನ್ನು ಕೈಕೊಳ್ಳುವುದರಲ್ಲಿ ಯಾವ ದೋಷವೂ ಇರಲಾರದೆಂದೇ ನಮ್ಮ ಭಾವನೆ. ಅದರಲ್ಲೂ ಕೌನ್ಸಿಲ್ ಮತ್ತು ಎಸೆಂಬ್ಲಿಗಳ ಪ್ರತಿಜ್ಞೆಗಳು ಐಹಿಕ ಕ್ರಮ ಕಟ್ಟಲೆಗಳಿಂದ ಬದ್ಧವಾಗಿ ಪರಮಾರ್ಥವನ್ನು ಕಳಕೊಂಡಿರುವುದರಿಂದ ಸಮಷ್ಟಿಯ ಹಿತದಲ್ಲಿ ಅವುಗಳನ್ನು ಉಲ್ಲಂಘಿಸಿದರೆ ಅದು ವ್ಯಕ್ತಿಯನ್ನು ಹೀನಿಸಲಾರದೆಂದು ನಾವು ನೆನಸುತ್ತೇವೆ. ಈ ದೃಷ್ಟಿಯಿಂದ ದಿವಂಗತ ಲಾಲಾಜಿಯವರ ಖಂಡನವು ಅವಶ್ಯಕತೆಯನ್ನು ಮೀರಿ ಕಠಿನವಾಯಿತೆಂದು ತೋರುತ್ತದೆ.

ಹಿಂದೀ ಸಕ್ಕರೆಯ ಕೈಗಾರಿಕೆ.

ಹಿಂದೀ ಸಕ್ಕರೆ ಕಮಿಟಿಯ ನೂತನ ಅಧ್ಯಕ್ಷರಾಗಿದ್ದ ಸರ್ ಜೇಮ್ಸ್ ಮೆಕೆನ್ನಾ ಎಂಬವರು, ಹಿಂದೀ ಸಕ್ಕರೆ ಕೈಗಾರಿಕೆಯ ರಫ್ತು ಪೂರಾ ನಿಂತು ಹೋಗಿದೆಯೆಂದೂ, ಆಮದು ವರ್ಷಕ್ಕೆ ೮,೦೦೦ ಟನ್ನಿನಷ್ಟಾಗಿದೆಯೆಂದೂ, ಸರಕಾರೀ ಆಶ್ರಯವು ಈಗಿರುವುದಕ್ಕಿಂತ ಇನ್ನು ಹೆಚ್ಚು ಮಾಡುವುದು ಅಸಾಧ್ಯವೆಂದೂ ಹೇಳಿ, ಹಿಂದೂಸ್ಥಾನದ ಈ ಕೈಗಾರಿಕೆಯ ವಿಷಯದಲ್ಲಿ ಲಂಡನ್ನಿನಲ್ಲಿ ಎಚ್ಚರಿಕೆಯನ್ನು ಕೊಟ್ಟಿರುವರು. ಅಲ್ಲದೆ ಈ ಬಗ್ಗೆ ಸಕ್ಕರೆಗೆ ಒಂದು ಬೋರ್ಡ್ (Sugar Board) ಮತ್ತು ಶೋಧಾಲಯ (Research Institute) ವನ್ನು ಏರ್ಪಡಿಸಬೇಕಾಗಿಯೂ ಸೂಚಿಸಿರುವರು. ಅವರು ಕೊಟ್ಟಿರುವ ಎಚ್ಚರವನ್ನು ಹಿಂದೀಯರು ಲಕ್ಷಿಸಬೇಕು. ಹಿಂದೀಯ ಈ ಕೈಗಾರಿಕೆಯು ಬಹಳ ಹೀನ ಸ್ಥಿತಿಯಲ್ಲಿದೆ. ಕಬ್ಬಿನ ಬೆಳೆಯನ್ನು ಹಿಂದೂಸ್ಥಾನದಲ್ಲಿ ಈಗಿನ ಸುಧಾರಿತ ಕ್ರಮದಲ್ಲಿ ನಡಿಸಿದರೆ, ಒಳ್ಳೇ ಕಬ್ಬು ದೊರಕಲು ಏನೂ ತೊಂದರೆಯಾಗದು. ಕಬ್ಬಿಗೆ ಅನುಕೂಲವಾದ ಮಣ್ಣಿರುವ ಪ್ರದೇಶಗಳು ಬೇಕಷ್ಟಿವೆ. ಆದರೆ ಹಿಂದೀ ಸಕ್ಕರೆ ಬೇಕೆಂದು ಹೋದರೆ ಸಿಕ್ಕುವುದೇ ಅಪೂರ್ವವಾಗಿದೆ. ಸರಕಾರವು ಕಮಿಟಿ ನೇಮಕ ಮಾಡಿ, ಈ ಕಮಿಟಿ ಬಗ್ಗೆ ಎಷ್ಟೋ ಹಣವನ್ನು ಖರ್ಚು ಮಾಡಿರುವಿದಾದರೂ ಅದರ ಕಾಸಿನಷ್ಟು ಪ್ರತಿಫಲವಾದರೂ ದೇಶಕ್ಕೆ ದೊರಕುವದಿಲ್ಲ. ಕಮಿಟಿಗಳು ಕೇವಲವಾಗಿ ರಪೋರ್ಟುಗಳು ಹೊರಡುತ್ತಿವೆಯಲ್ಲದೆ ವಿಷಯ ಸುಧಾರಣೆಯಾಗುವುದಿಲ್ಲ. Sugar-Board, Research Institute, ಮೊದಲಾದ ಏರ್ಪಾಡುಗಳಿಂದಲೂ ಹಿಂದೂಸ್ಥಾನಕ್ಕೆ ಲಾಭವಾಗುವದು ಬಹಳ ಕಡಿಮೆ. ದೇಶದಲ್ಲಿ ಒಂದೆರಡು ರಿಸರ್ಚ್ ಇನ್ಸ್ಟಿಟ್ಯೂಟಗಳಿದ್ದರೂ ಅವುಗಳಿಂದ ಒಂದಾದರೂ ವೈಶಿಷ್ಟ್ಯವು ಈವರೆಗೆ ಹೊರಬಿದುದು ನಾವು ಕಾಣಲಿಲ್ಲ. ಈ ಸಕ್ಕರೆ ಕೈಗಾರಿಕೆಯನ್ನು ಬೆಳೆಸಲಾಗುವುದಿಲ್ಲವೆಂಬುವುದು ಬಹಳ ದುಃಖದ ಸಂಗತಿ. ಬೆಲ್ಲದ ತಯಾರಿ ಕೂಡ ಇತ್ತೀಚೆಗೆ ಚೆನ್ನಾಗಿ ನಡೆಯುವುದಿಲ್ಲ. ಅದರ ಕ್ರಯವು ಸಕ್ಕರೆಯಷ್ಟೇ. ಕೆಲವು ಸಾರಿ ಹೆಚ್ಚು ಕೂಡ ಆಗುತ್ತದೆ. ಇದರಿಂದ ಕಬ್ಬಿನ ವ್ಯವಸಾಯವು ಆಗಬೇಕಾದ ರೀತಿಯಲ್ಲಿ ಆಗುವುದಿಲ್ಲವೆಂಬುದು ಖಂಡಿತವಾಗುತ್ತದೆ. ಕೊಯಮುತ್ತೂರಿನ ಕೃಷಿ ಇಲಾಖೆಯ ಶೋಧವೂ, ಪ್ರಯೋಗಗಳೂ ಇನ್ನೂ ಕೃಷಿ ವ್ಯವಸಾಯದಲ್ಲಿ ಪರಿಣಾಮಕಾರಿಯಾಗಿಲ್ಲ. ಖಾಸಗಿ ಸಂಸ್ಥೆಗಳಾದರೂ ಇತ್ತಕಡೆ ಲಕ್ಷ್ಯ ಕೊಟ್ಟರೆ ಉತ್ತಮವಿತ್ತು. ಆದರೆ ಸರಿಯಾದ ಔದ್ಯೋಗಿಕ ಪರಿಜ್ಞಾನವು ಸಿಕ್ಕುವುದೇ ದುರ್ಲಭವಾದುದರಿಂದ ಖಾಸಗಿ ಸಂಸ್ಥೆಗಳೂ ಧೈರ್ಯಪಡುವುದಿಲ್ಲ. ಆದರೂ ಈ ಕೈಗಾರಿಕೆಯು ದೇಶದ ಕಡೆಯಿಂದ ಹೆಚ್ಚಿನ ಲಕ್ಷ್ಯವನ್ನು ಹೊಂದುವ ಅವಶ್ಯಕತೆಯಿದೆ.

ಕೊನ್ವೆಂಟ್ ಶಾಲೆಗಳ ಪಠ್ಯ ಪುಸ್ತಕಗಳು.

ಹುಡುಗರ ಶಾಲೆಗಳ ಇಂಗ್ಲೀಷ್ ಪಠ್ಯ ಪುಸ್ತಕಗಳು ಈಗ ಕೆಲವು ವರ್ಷಗಳಿಂದ ಸಂಪೂರ್ಣ ಬದಲಾಗಿ ಹಿಂದೀಯ ಜೀವನವನ್ನೇ ಚಿತ್ರಿಸುವುವಾದರೂ ಹುಡುಗಿಯರ ಶಾಲೆಗಳ ಪಠ್ಯ ಪುಸ್ತಕಗಳು ಇಂಗ್ಲೀಷ್ ಶಾಲೆಗಳದ್ದೇ ಆಗಿವೆ. ಹಲವು ಬೋರ್ಡು ಶಾಲೆಗಳಲ್ಲಿ ಈ ಪರದೇಶೀಯ ಪುಸ್ತಕಗಳಿವೆಯಲ್ಲದೆ, ಕೊನ್ವೆಂಟ್ ಶಾಲೆಗಳಲ್ಲಿ ಎಲ್ಲಾ ಈ ಪುಸ್ತಕಗಳು ಮಾತ್ರವೇ ಉಪಯೋಗಿಸಲ್ಪಡುತ್ತಿವೆ. ಕೊನ್ವೆಂಟ್ ಶಾಲೆಗಳು ಕೆಥೋಲಿಕರದಾಗಿರುವುದರಿಂದ ಕೆಥೋಲಿಕರಿಗಾದರೂ ಇಂತಹ ಪುಸ್ತಕಗಳು ಇತರ ಹಿಂದೀ ಪುಸ್ತಕಗಳಿಂದ ಹೆಚ್ಚು ಉಪಯೋಗಕರವೆಂದು ನಾವು ನೆನಸುವುದಿಲ್ಲ. ಎಲ್ಲಾ ತರದ ಜೀವನ ಕ್ರಮಗಳನ್ನು ತಿಳಿಯುವ ಮತ್ತು ತಿಳಿಯಬೇಕಾದ ಹುಡುಗಿಗೇನೇ ಸಣ್ಣ ತರಗತಿಗಳಲ್ಲಿ ಇಂಗ್ಲಿಷ್ ಶಾಲೆಗಳ ಪಠ್ಯ ಪುಸ್ತಕಗಳು ಅಯೋಗ್ಯವಾಗುವುದಾದರೆ, ಸೂಕ್ಷ್ಮ ಭಾವನೆಯು ಮತ್ತು ಗೃಹಜೀವನವನ್ನು ಮುಖ್ಯವಾಗಿ ನಡಿಸುವ ಹುಡುಗಿಯರಿಗೆ ಇವು ತೀರಾ ಅಯೋಗ್ಯವಾಗಿವೆಯೆಂದು ಬೇರೆ ಹೇಳಬೇಕಾಗಿಲ್ಲ. ಬ್ರಿಟಿಷ ವಿದ್ಯಾಭ್ಯಾಸದ ಅಧಿಕಾರಿಗಳು ಕೂಡಾ ಆಯಾ ದೇಶದ ಪಠ್ಯ ಪುಸ್ತಕಗಳು ಆಯಾ ದೇಶದ ವೈಶಿಷ್ಟ್ಯಕ್ಕೆ ಸರಿಯಾಗಿದ್ದೇ ಇರಬೇಕಾಗಿ ಒಪ್ಪುತ್ತಿರುವರು. ನಮ್ಮ ದೇಶದಲ್ಲಿ ಮಾತ್ರ, ಅದು ಕೂಡಾ ತೀರಾ ಅಸ್ವಾಭಾವಿಕವಾಗಿರುವ ಕಡೆಗಳಲ್ಲಿಯೇ ಪರದೇಶೀ ಭಾವನೆ ಮತ್ತು ಜೀವನದ ಪುಸ್ತಕಗಳು ಪುಟ್ಟ ಬುದ್ಧಿಗಳಲ್ಲಿ ಪ್ರೇರಿಸಲ್ಪಡುವುದು ವಿಷಾದಕರ. ಈ ಕೊನ್ವೆಂಟ್ ಶಾಲೆಗಳು ಸರಕಾರದಿಂದ ಸಹಾಯವನ್ನು ಪಡೆಯುವುವಾದುದರಿಂದ ದೇಶದ ಹಿತವನ್ನು ಅಲ್ಲಗಳೆಯಲಾರವು, ಮತ್ತು ಸ್ವೇಚ್ಛೆಯ ಮತ್ತು ಜಾತೀಯ ವಿದ್ಯಾಭ್ಯಾಸವನ್ನು ಕೊಡಲಾರವು. ಕೆಥೋಲಿಕ ಜಾತಿಯನ್ನು ಪಾಶ್ಚಾತ್ಯ ಜೀವನಕ್ಕೆ ಹತ್ತಿರಗೊಳಿಸುವುದಾದರೆ ಅದನ್ನು ನಾವು ನಿರೋಧಿಸಲಾರೆವು. ಆದರೆ ಕೊನ್ವೆಂಟ್ ಶಾಲೆಗಳು ಎಂದಿನ ವರೆಗೆ ಸರಕಾರೀ ಸಹಾಯವನ್ನು ಪಡೆಯುವುವೋ ಆ ವರೆಗೆ ಇತರ ಜಾತಿಯ ಕಡೆಗೆ ಅವರು ಅಲ್ಲಗಳೆಯಲಾರದ ಕರ್ತವ್ಯವಿದೆ. ಅಂತಹ ಪಾಶ್ಚಾತ್ಯ ಪಠ್ಯ ಪುಸ್ತಕಗಳನ್ನು ಕೆಥೋಲಿಕರು ಒಂದು ಜಾತಿಯಲ್ಲದೆ ಇತರರು ಯಾವ ಜಾತಿಯವರು ಮನ್ನಿಸುವರೆಂದು ನಾವು ತಿಳಿಯುವುದಿಲ್ಲ. ವಿದ್ಯಾ ಇಲಾಖೆಯವರು ಈ ಕಡೆಗೆ ಗಮನ ಕೊಟ್ಟು ಈ ಪಠ್ಯ ಪುಸ್ತಕಗಳನ್ನು ಬದಲಾಯಿಸಬೇಕು. ಇಲ್ಲವಾದರೆ ಹೊರಗಿನ ತೋರಿಕೆಗೆ ಬಾರದೆ ಇವು ಉಂಟುಮಾಡುವ ಹಾನಿಯು ಹಲವು ವರ್ಷಗಳ ನಂತರವೇ ಅನುಭವಿಸಬೇಕಾಗಿ ಬರುವುದು.

ನೆಹರು ವರದಿ.

ನೆಹರು ವರದಿಯು ದಿನಗಳೆದಷ್ಟಕ್ಕೆ ಹೆಚ್ಚು ಹೆಚ್ಚು ಬಲಗೊಳ್ಳುತ್ತಾ ಬರುತ್ತಿದೆ. ನೆಹರು ವರದಿಯ ಒಂದು ವಿಶೇಷವಾದ ಸತ್ಪರಿಣಾಮವೆಂದರೆ ಅದು ಸರ್ವಸಾಮಾನ್ಯವಾಗಿ ಎಲ್ಲಾ ಪಕ್ಷಗಳನ್ನು ಒಟ್ಟುಗೂಡಿಸಿದ್ದು. ಸಾಧಾರಣವಾಗಿ ಇಡೀ ದೇಶದಲ್ಲಿಯೇ ಅದಕ್ಕೆ ಪುಷ್ಟೀಕರಣವು ದೊರಕಿದೆ. ಮುಸಲ್ಮಾನರು ಇನ್ನೂ ಪೂರ್ಣ ಮನಸ್ಸಿನಿಂದ ಒಪ್ಪಿಗೆ ಕೊಡಲು ತಯ್ಯಾರಿಲ್ಲದಿದ್ದುದು ಒಂದೆ ಕುಂದುಕವಾದರೂ, ಈಗಿನ ಅವರ ಮಾನಸಿಕತೆಯಲ್ಲಿ, ಅವರನ್ನು ಅವರು ಹೇಳಿದ್ದೆಲ್ಲಕ್ಕೆ ಒಪ್ಪಿದರೂ ಸಮಾಧಾನ ಮಾಡಲು ಅಸಾಧ್ಯವಾಗುವಂತಿದೆ. "ತಮ್ಮದ್ದೆಲ್ಲಾ ತಮ್ಮದೇ ಆಗಿದೆ; ಇತರರದೂ ತಮ್ಮದೇ ಆಗಿದೆ" ಎಂಬುದೇ ಅವರ ಮಾನಸಿಕತೆ. ಆದುದರಿಂದ ಅವರು ಈಗ ಕೊಟ್ಟನ್ನು ಒಪ್ಪಿಗೆಯೇ ಸಾಕಷ್ಟಿರುವುದರಿಂದ, ಅವರ ಹೆಚ್ಚಿನ ನಿಷೇಧಗಳನ್ನು ಲಕ್ಷಿಸಬೇಕೆಂದಿಲ್ಲ. ಎಲ್ಲೆಲ್ಲಿಯೂ ಸಭೆಗಳು ಜರಗಿ ನೆಹರು ವರದಿಯನ್ನು ಅನುಮೋದಿಸಿ ಠರಾವುಗಳು ಮಂಜೂರಾಗಿವೆ. ಬಂಗಾಳ ಗವರ್ನರರು ಕೂಡ ಈ ವರದಿಯ ಹಿಂದಿನ ಪ್ರತಿಭೆಯನ್ನು ತಿಳಿದುಕೊಂಡಿರುವರು. ಎಂಗ್ಲೊ ಇಂಡಿಯನ್ ಪತ್ರಿಕೆಗಳಿಗೂ ಇದನ್ನು ಪ್ರಶಂಸಿಸಲು ಮನಸ್ಸಿಲ್ಲದಿದ್ದರೂ ಇದರ ಗುಣಗಳನ್ನು ಕಾಣದೆ ಇರಲಾಗಲಿಲ್ಲ. ಹಿಂದೀ ರಾಜಕೀಯ ಪಕ್ಷಗಳೆಲ್ಲವೂ ಈ ವರದಿಯಲ್ಲಿ ಕೇಂದ್ರೀಕೃತವಾಗಲಾರಂಭಿಸುವ ಈ ಸಮಯದಲ್ಲಿಯೇ ಈ ವರದಿಗೆ ಮತ್ತಷ್ಟು ಪುಷ್ಟೀಕರಣವನ್ನು ಕೊಡಬೇಕು. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವು ಬೇಕು, ನಿಜ. ಸ್ವಾಯತ್ತ ಸ್ವಾತಂತ್ರ್ಯವನ್ನು ಹೊಂದಲಿಕ್ಕೆ ಮಾಡಬೇಕಾದ ಪ್ರಯತ್ನಗಳಿಗಿಂತ ಕಡಿಮೆ ಈ ಡೊಮಿನಿಯನ್ ಸ್ಟೇಟಸಿಗೆ ಸಾಕಾಗಲಾರದೆಂಬುದೂ ನಿಜವಿರಬಹುದು. ಆದರೆ ಸ್ವಾತಂತ್ರ್ಯದ ಧ್ಯೇಯದಲ್ಲಿ ಕಾಂಗ್ರೆಸು ಮಾತ್ರವೇ ಇದೆ; ಇತರರು ಇಲ್ಲ. ಈ ಕಾರಣದಿಂದಲಾದರೂ ಸ್ವಾತಂತ್ರ್ಯವಾದಿಗಳು ನೆಹರು ವರದಿಯಿಂದ ಪ್ರತ್ಯೇಕವಿರಬಾರದು.

ನೋಟಗಳು
NOTES

ತುಳುತನಯರು ಮಾಡಿರು[illegible] ಜಾತಿ ವಿಮರ್ಶೆ— ರಾಷ್ಟ್ರಬಂಧುವ[illegible] ವಶಂತನು ಕೋಟ ಬ್ರಾಹ್ಮಣ, ಸ್ವದೇಶಾಭಿಮಾನಿಯು ಗೌಡ ಸಾರಸ್ವತ ಬ್ರಾಹ್ಮಣ. ಆದುದರಿಂದಲೇ [illegible] ಚಳವಳಕ್ಕೆ ವಿರೋಧಾಭಿಪ್ರಾಯಗಳನ್ನು [illegible] ಈ ಚಳವಳಕ್ಕೆ ಪರವಾಗಿಯಾಗಲಿ ವಿರೋಧವಾಗಿಯಾಗಲಿ ಅಭಿಪ್ರಾಯವನ್ನು ಕೊಡಲಿಕ್ಕೆ ಹೋಗದಿರುವ [illegible] ಜಾತಿಯನ್ನೂ "ತುಳುತನಯ"ರು ನಿರ್ದೇಶಿಸದ [illegible] ಕಾರಣವೇನೆಂದು ತಿಳಿಯುವುದಿಲ್ಲ.

• • • •

ಬೆಂಗಳೂರು ಗಲಭೆಯು ಮಂಗಳೂರು ಗಲಭೆಯಲ್ಲಿ ಪರ್ಯವಸಾಯಿಯಾಗುವುದೇ? ಇತ್ತೀಚೆಗೆ ನಮ್ಮ ಬಂಧುಗಳಿಬ್ಬರೊಳಗಿನ ಪತ್ರಗಲಭೆಯು ಈ ಸಂದೇಹಕ್ಕೆ ಕಾರಣವಾಗಿರುತ್ತದೆ. ಗೆಲ್ಲುವರು ಯಾರೆಂದು ನೋಡುವುದಕ್ಕಿಂತ ಅಲ್ಲಲ್ಲೇ ನಿಲ್ಲಿಸುವುದೇ ಒಳ್ಳೆಯದೆಂದು ಬಲ್ಲವರಿಗೆ ಹೇಳಬೇಕೇ?

• • • •

ಹಳ್ಳಿಯ ಶಾಲೆಗಳಲ್ಲಿ ಶಾಲಾ ಇನ್ಸ್‌ಪೆಕ್ಷನ್ ಮಾಡುವವರಿಗೆ ಹೆಡ್ ಮಾಸ್ತರರು ಮುದಕರಾಗಿ ಕಾಣುತ್ತಾರೆ. ಡ್ರೆಸು Shabby ಯಾಗಿ ಕಾಣುತ್ತೆ.

• • • •

ಶಾಲಾ ಮಾಸ್ತರರು ಕೋಟುಗಳ ಗುಬ್ಬಿಯನ್ನು ಹಾಕದೆ ಶಾಲಾ ಹುಡುಗರಿಗೆ ಕ್ಲಾಸಿನಲ್ಲಿ ಕಲಿಸಿದರೆ ಅವರು ಮಾಸ್ತರರಾಗಿ ಕಾಣುವುದಿಲ್ಲ. ಹುಡುಗರ ಹಾಗೆ ಕಾಣುತ್ತಾರೆ.........

• • • •

ಹಳ್ಳಿಗಳ ಶಾಲೆಯ ಮಾಸ್ತರರಿಗೆ ಮುಂಡಾಸು ಅಗತ್ಯ. ದೊಡ್ಡ ಕೊಲೇಜುಗಳ ಮಾಸ್ತರರಿಗೆ ಇಂಗ್ಲಿಷ್ ಡ್ರೆಸು ಅಗತ್ಯ.

• • • •

ಇಲ್ಲಿಯ ಕೊಲೇಜಿನಲ್ಲಿ ಒಂದು ಆಲ್ ಪಾರ್ಟಿ ಡಿನ್ನರ್ ಇದೆ. ಸರಿಯಾದ ತಾರೀಕು ಮುಂದಕ್ಕೆ ಗೊತ್ತಾಗುವುದು.

• • • •

ಕೊಲೇಜುಗಳಲ್ಲಿ ಏಕತ್ವ; ಸ್ವರಾಜ್ಯ ಸಿಕ್ಕಬೇಕಾದರೆ ಜಾತಿಭೇದವು ಮುಂದಕ್ಕೆ ಪರಿಣಮಿಸದ ಹಾಗೆ ಈಗಲೆ ವಿದ್ಯಾಭ್ಯಾಸ. ಇಷ್ಟು ಆಲೋಚಿಸಿ ಇಂಥ ಆಲ್ ಪಾರ್ಟಿ ಡಿನ್ನರ್ ನಿರ್ಣಯಿಸಿದುದು ಈಗಿನ ಲೇಟೆಸ್ಟ್ ಫೆಶನ್.

• • • •

ಲೆಟೆಸ್ಟ್ ಡಿನ್ನರು ನಿರ್ಣಯಿಸಿದವರು ಇಂಗ್ಲಾಂಡಿಗೆ ಹೋಗಿ ಬಂದವರೇ ಆಗಿರಬಹುದು.

• • • •

ಕೂನೂರಿನಲ್ಲಿ ಪೋಲಿಸ್ ಪಂದ್ಯಾಟ ಸರಕಾರದವರ ಖರ್ಚಿನಲ್ಲೇ ನಡಿಯುವದಂತೆ, ಸದ್ಯದಲ್ಲೇ ಮಂಗಳೂರಲ್ಲೂ ನಡೆಯಲಿದೆ. ಇಲ್ಲಿ ನಡೆಯುವ ಸಮಾರಂಭಕ್ಕೆ ಯಾರ ಖರ್ಚು?

• • • •

ಬೆಂಗಳೂರ ಗಲಾಟೆ ಅಬ್ಬಾಸಖಾನರಿಗೆ ಇನ್ನೂ ಬಿಟ್ಟಿಲ್ಲ. ನಂಬ್ರಗಳು ಒಂದರ ಮೇಲೊಂದು ದಾಖಲು. ಚೀಫ್ ಕೋರ್ಟು ಮತ್ತು ಫಸ್ಟಕ್ಲಾಸ್ ಕೋರ್ಟಿಗೆ ಈಗ ನಂಬ್ರಗಳು ಅಬ್ಬಾಸ್ ಖಾನರದ್ದು. ಇತರ ನಂಬ್ರಗಳಿಗೆ ಬೇರೊಂದು ಕೋರ್ಟು ತೆರೆದರೆ ಉತ್ತಮ.

ಮಂಗಳೂರಿನ [illegible] ವಿಭವಸಂವತ್ಸರದ ಕಾರ್ತಿಕ [illegible] ಶುಕ್ರವಾರದಿಂದ ವಿಭವ ಸಂವತ್ಸರದ ಅಶ್ವೀಜ [illegible] ಶುಕ್ರವಾರದ ವರೆಗಿನ ಪಂಚಾಂಗ.

(ಗ್ರಾಂಟೆಯ ವೃಶ್ಚಿಕ (ಜಾರ್ದ)

ದಿನಾಂಕ	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ: ಉ	ಅಸ್ತ
8	[illegible]	[illegible]	[illegible]	[illegible]	[illegible]	[illegible]	6.43	6 3
9	[illegible]	[illegible]	[illegible]	ಸ್ವಾತಿ	[illegible]	[illegible]	6.44	6. 3
10	[illegible]	[illegible]	[illegible]	ವಿಶಾಖಾ	[illegible]	[illegible]	6.44	6. 3
11	[illegible]	[illegible]	[illegible]	ಅನುರಾಧಾ	[illegible]	[illegible]	6.44	6. 3
12	[illegible]	●	[illegible]	ಜ್ಯೇಷ್ಠಾ	[illegible]	[illegible]	6 45	6. 4
13	[illegible]	[illegible]	[illegible]	ಮೂಲಾ	[illegible]	[illegible]	6.45	6. 4
14	[illegible]	[illegible]	[illegible]	ಪೂ. ಷಾ.	[illegible]	[illegible]	6.48	6. 5

ಮಂಗಳೂರಿನ ವಾಯುಸ್ಥಿತಿ.

Date ತಾರೀಖು	Temperature. ಉಷ್ಣ (ಕಾವು) Maximum ಹೆಚ್ಚಾದದ್ದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
31	88— 8	74— 8	—	—
1	87— 6	73— 8	0—11	—
2	86— 5	75— 2	0—01	—
3	90— 2	75— 7	—	—
4	92— 2	75— 6	—	—
5	94— 4	74— 4	—	—
6	88— 2	72— 4	—	—
				124-70

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಮಸೂರಿ	...	7— 12	8 — 12
ಗುಡ್ಡೆ	...	7 — 4	7— 8
ಸುಗ್ಗಿ	...	8 — 12	7— 4
ರಾಶಿ	...	6— 0	7— 4
[illegible] ಅಕ್ಕಿ [illegible]	...	7— 8	8 — 14
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	...	12— 8	—
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ	...	7 — 0	7— 2
ಗೋಧಿ ಗೋಣಿ ಗಳ್ಳೆ	...	18— 0	19 — 0
[illegible] ಗೋಣಿ ಗಳ್ಳೆ	...	7 — 0	9 .. 4
[illegible] ಗೋಣಿ ಗಳ್ಳೆ	...	13— 12	16— 8
[illegible] ಗೋಣಿ ಗಳ್ಳೆ	...	14 — 8	16 — 8
[illegible] ಗೋಣಿ ಗಳ್ಳೆ	...	18 — 0	26 — 0
[illegible] ಗೋಣಿ ಗಳ್ಳೆ	...	14 — 8	16 —
ಹೆಸರು ಗೋಣಿ ಗಳ್ಳೆ	...	13 — 0	14 ..
[illegible] ಖಂಡಿ ಗಳ್ಳೆ	...	47— 8	51 — 4
[illegible] ಗೋಣಿ ಗಳ್ಳೆ	...	4— 8	4 — 12
[illegible] ಖಂಡಿ ಗಳ್ಳೆ	...	130- 0	—
[illegible] ಖಂಡಿ ಗಳ್ಳೆ	...	47— 8	49 — 8
[illegible] ಖಂಡಿ ಗಳ್ಳೆ	...	36— 8	46 — 4
[illegible] ಎಣ್ಣೆ ಮುಡಿ ಗಳ್ಳೆ	...	7 — 10	—
ಎಳ್ಳೆಣ್ಣೆ ಮುಡಿ ಗಳ್ಳೆ	...	8 — 0	8— 6
[illegible] ಗಳ್ಳೆ	...	7— 2	7 - 4
[illegible] ಮುಡಿ ಗಳ್ಳೆ	...	3 — 11	3 — 12
[illegible]	...	6 — 0	—
[illegible] ಮುಡಿ ಗಳ್ಳೆ		3 — 4	4— 0
[illegible] ಮುಡಿ ಗಳ್ಳೆ	...	3— 4	—
[illegible] ಮುಡಿ ಗಳ್ಳೆ	...	6— 4	6 — 8
[illegible] ಖಂಡಿ ಗಳ್ಳೆ	...	390— 0	395— 0
[illegible] ಖಂಡಿ ಗಳ್ಳೆ	...	180— 0	210— 0
[illegible] ಖಂಡಿ ಗಳ್ಳೆ	...	523— 0	524— 8
[illegible] ಮುಡಿ ಗಳ್ಳೆ	...	50 — 0	52 —
[illegible] ಮುಡಿ ಗಳ್ಳೆ	...	3— 6	3— 6
[illegible] ಖಂಡಿ ಗಳ್ಳೆ	...	40 — 0	42 — 8
[illegible] ಗಳ್ಳೆ	...	16— 8	16 — 12
[illegible] ಮುಡಿ ಗಳ್ಳೆ	...	21 — 0	22 —
[illegible] ಗಳ್ಳೆ	...	16 — 0	—
[illegible] ಮುಡಿ ಗಳ್ಳೆ	...	14 — 3	16 — 8
[illegible] ಗಳ್ಳೆ	...	13-6-6	—
[illegible] ಖಂಡಿ ಗಳ್ಳೆ	...	70 —	85 — 0

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ — ದಾರಿ ಯಾವುದೆಂದರೆ: —

ಪ್ರಿಯವಾಗಲಿ ‖ ಅಂಚೆಹಾಸಲುಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು, ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರುಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಟಾನಿಕ್ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಛೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಪಿ. ಊಲನ್ ಮಾರ್ಕ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ



ತಯಾರಾಗಿವೆ ತಯಾರಾಗಿವೆ!

ಕಾಫಿ ಪ್ಲಾಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚಕ್ ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಪರೀಕ್ಷಿಸಿರಿ! ಪಾತ್ರಿಯಾಗುವರು!!
ಕಿಮ್ಮತ್ತು ಅಗ್ಗ ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S-I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದು ಪ್ರಸಿದ್ಧರಾದ 'ವೈದ್ಯ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ [illegible] ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ [illegible] ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡೆಸಲಾಗುತ್ತದೆ. ಎಲ್ಲಾ ತರದ [illegible] ಗೆಳು, ಲೇಹಗಳು, ಘೃತಗಳು, [illegible], ಭಸ್ಮ, ಅರಿಷ್ಟಾಸವಗಳು ಇತ್ಯಾದಿ [illegible] ನಮ್ಮಲ್ಲಿ [illegible] ತಯಾರ ಇರುವವು. ಅನುಕೂಲವಿಲ್ಲದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ರೋಗಿಯ ಶೀಲ, ಪ್ರಾಯ, [illegible] ಕ್ರಮ, ವೃತ್ತಿ [illegible] ಪದಾರ್ಥಗಳ ಅಭ್ಯಾಸ ಇದ್ದರೆ ಆ ವಿವರ ಹಿಂದೆ ನಡೆಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡೆಯಲಿಕ್ಕೆ ಶಕ್ತಿ [illegible] ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡೆದದೆ ಎಂಬೀ ವಿವರಗಳು [illegible] ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡೆಸುವದಲ್ಲದೆ [illegible] ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸಿದಲ್ಲಿ [illegible] ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮದ್ದಿನ [illegible] ಕೊಡುವದಲ್ಲದೆ ರೋಗಕ್ಕೆ ಬೇಕಾದ ಮದ್ದು ವಿವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವದಲ್ಲದೆ ಈ ವೈದ್ಯಶಾಲೆಯು [illegible] ಸಿದ್ಧವಾಗಿರುವದು. ಅಗತ್ಯಪಡುವವರಿಗೆ ಮದ್ದುಗಳನ್ನು ಒದಗಿಸಿ ಕೊಡುವರೆ [illegible] ಇವೆ. [illegible] ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡೆಸಬಹುದು.

[illegible] ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ.

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(1923ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 1860ನೇ ಇಸವಿಯ XXIನೇ ಆಕ್ಟಿನನುಸಾರವಾಗಿ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಶುದ್ಧ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ "ಫಾರ್ಮಸಿ"ಯಲ್ಲಿ ಶಾಸ್ತ್ರೋಕ್ತವಾಗಿ ತಯ್ಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟಮಾಡಿ ಹುಟ್ಟಿಬರುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ಮುಂದರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತದೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯ್ಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೆ ನಮ್ಮಲ್ಲಿ ತಯ್ಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

ವಿಷಯ ಸೂಚಿ
ಅಗ್ರಲೇಖ ... ಪುಟ
ಮೈಸೂರಿನ ಶ್ರೀಮನ್ಮಹಾರಾಜರ ಸ್ವಾಗತ ಭಾಷಣ ... ೧
ವಿದೇಶ ವರ್ತಮಾನ ... ,,
ಸ್ವದೇಶ ವರ್ತಮಾನ ... ೪
ಸೂಚನೆಗಳು ... ,,
ವರ್ತಮಾನ ಸಂಗ್ರಹಗಳು
ಜಿಲ್ಲೆಯ ವರ್ತಮಾನ ... ೬-೭
ದಕ್ಷಿಣ ಕನ್ನಡ—ಮಂಗಳೂರು, ಪುತ್ತೂರು, ಬಂಟ್ವಾಳ, ಕಾರ್ಕಳ, ಮಂಗಳೂರು, ಪುಂಜಾಲಕಟ್ಟೆ, ಕುಂಬಳೆ, ಉಪ್ಪಿನಂಗಡಿ, ಪುತ್ತೂರು, ಕಾಸರಗೋಡು, ಕಾರ್ಕಳ, ಪರಂಗಿಪೇಟೆ ... ೮
ವಿವಿಧ ಸಮಾಚಾರಗಳು ... ೯
ಆಶ್ಚರ್ಯದ ಚಿಕ್ಕ ವಾರ್ತೆಗಳು ... ,,
ಕಾಟೂರು ಚದರಂಗ ... ೧೩-೧೧
ಅಮೇರಿಕೆಯಲ್ಲಿ ಹಿಂದೀ ಪರಿಷತ್ತು ... ೧೧
ಪತ್ರವ್ಯವಹಾರ ೧ ೨ ೩ ... ೨-೧೨

ಸ್ವದೇಶಾಭಿಮಾನಿ.

ತಾರೀಕು ೭ನೇ ಶುಕ್ರವಾರ ದಶಂಬರ ೧೯೨೮

ಮೈಸೂರಿನ ಶ್ರೀಮನ್ಮಹಾರಾಜರ ಸ್ವಾಗತ ಭಾಷಣ.

ದಶಂಬರ ಐದನೇ ತಾರೀಕಿನಲ್ಲಿ ಮೈಸೂರಿನಲ್ಲಿ ಕೂಡಿದ ಇಡೀ ಲೋಕದ ಕ್ರಿಶ್ಚಿಯನ್ ಸಮ್ಮೇಲನಕ್ಕೆ ಶ್ರೀ ಮನ್ಮಹಾರಾಜರವರು ಸ್ವಾಗತವನ್ನು ಕೊಟ್ಟರು. "ಇಷ್ಟು ಜಾತಿಗಳ ಇಷ್ಟು ಭಾಷೆಗಳ, ಇಷ್ಟು ಲೋಕಗಳ ಪ್ರಸಿದ್ಧ ಪ್ರತಿನಿಧಿಗಳಾದ ನಿಮ್ಮನ್ನು ಸ್ವಾಗತೀಕರಿಸಲು ನನಗೆ ಬಹಳ ಅಭಿಮಾನವೆನಿಸುತ್ತಿದೆ" ಎಂದು ಶ್ರೀಮನ್ಮಹಾರಾಜರು ತಮ್ಮ ಸ್ವಾಗತ ಭಾಷಣವನ್ನು ಆರಂಭಿಸಿದರು.

ಪ್ರಾಯಶಃ ಈ ಭಾಷಣದಲ್ಲಿ ಈಗಿನ ಮಹಾರಾಜರ ಸುಂದರವಾದ ಮಾನಸಿಕತೆಯು ತೋರಿಬರುತ್ತಿದೆ. ಮೈಸೂರು ಮೈಸೂರಿಗಾಗಿ ಮಾತ್ರವೇ ಅಭಿಮಾನಾಸ್ಪದವಲ್ಲ; "ಇಲ್ಲಿ ಚಂದ್ರಗುಪ್ತನು ಜೈನಮತವನ್ನು ತಳೆದು ಶಾಂತಿಯನ್ನು ಹೊಂದಿದನು; ಇಲ್ಲಿ ಶಂಕರನು ತನ್ನ ಮಹಾನ್-ತತ್ವವನ್ನು ಸ್ಥಾಪಿಸಿದನು; ಇಲ್ಲಿ ಚೋಳ ರಾಜರಿಂದ ಪೀಡಿಸಲ್ಪಟ್ಟ ಶ್ರೀ ರಾಮಾನುಜನು ಮತ ಸ್ವಾತಂತ್ರ್ಯವನ್ನು ಹೊಂದಿದನು; ಇಲ್ಲಿಯೇ ಮಾಧ್ವನು ದ್ವಂದ್ವ ಮತ್ತು ಭಕ್ತಿ ತತ್ವಗಳನ್ನು ನೆಲೆಗೊಳಿಸಿದನು." ಶ್ರೀ ಮನ್ಮಹಾರಾಜರು ಪ್ರಾಚೀನ ಇತಿಹಾಸದ ಕಡೆಗೆ ತಮ್ಮ ದೃಷ್ಟಿಯನ್ನು ಬೀರಿ, ಆ ಸೌಮ್ಯವೂ ಸಾತ್ವಿಕವೂ, ಭಕ್ತಿಯುತವೂ ಆದ ಹೃದಯಕ್ಕೆ ಅಭಿಮಾನವಾದ ವಿಷಯಗಳನ್ನು ಕಂಡರು; ಲೋಕದ ಕ್ರಿಸ್ತೀ ಸಮ್ಮೇಲನದ ಸ್ವಾಗತಕ್ಕೆ ಇದಕ್ಕಿಂತ ಸುಂದರವಾದ ಪೂರ್ವ ಸ್ಮೃತಿಗಳನ್ನು ಯಾರೂ ಕಾಣಲಾರರು. ಶ್ರೀಮನ್ಮಹಾರಾಜರು ಸೂಚಿಸಿದಂತೆ, ಈ ಭಾಷಣವು ಅಲ್ಲಿ ಕೂಡಿದ ಕ್ರಿಸ್ತೀಯರನ್ನು ಹಿಂದಿ ಮತಸ್ಥಾಪಕರ ತತ್ವಗಳನ್ನೂ ಆಚಾರಗಳನ್ನೂ ಕಲಿಯಲು ಪ್ರೇರಿಸಿ, ಅವರ ಕ್ರಮಗಳನ್ನು ತಿಳಿಯುವಂತಾಗಲು ಉಪಕಾರಿಯಾಗಬಹುದು.

"ನೀವು ನಾವು ಅನುಕರಿಸುವ ಮಾರ್ಗಗಳು ಬೇರೆ ಬೇರೆಯಾಗಿರಬಹುದಾದರೂ, ನಾವು ಹೊಂದಲಿಚ್ಛಿಸುವ ಆ ಧ್ಯೇಯವು ಪ್ರಥಮ ದೃಷ್ಟಿಗೆ ತೋರುವಷ್ಟು ಬೇರೆ ಬೇರೆಯಾಗಿಲ್ಲ" ಎಂದು ಭಿನ್ನತೆಗಳೊಳಗಿನ ಐಕ್ಯವನ್ನು ಸಾರಲು ಶ್ರೀ ಮನ್ಮಹಾರಾಜರು ಆರಂಭಿಸಿರುವರು. ಈ ತತ್ವ ನಿರ್ದೇಶದಲ್ಲಿಯೇ ಮಹಾರಾಜರ ಆಡಳಿತ ಕ್ರಮವೂ ಅಡಗಿಯದೆಂದು ಊಹಿಸಲು ಕಾರಣವಿದೆ. ಶ್ರೀ ಮನ್ಮಹಾರಾಜರ ಈ ಭಾಷಣವನ್ನು ತಿಳಕೊಳ್ಳುವ ಮೊದಲು ಅವರ ಖಾಸಗಿ ಜೀವನದ ಪಾವಿತ್ರ್ಯವನ್ನು ನಾವು ತಿಳಕೊಳ್ಳಬೇಕು. ಅವರಷ್ಟು ದೈವ ಭಕ್ತಿಯುಳ್ಳ ಅರಸರು ಪ್ರಕೃತ ಹಿಂದೂಸ್ಥಾನದಲ್ಲಿಯೇ ಇಲ್ಲವೆನ್ನಬಹುದು. ಮಹಾತ್ಮಾ ಗಾಂಧೀಯವರಿಗೆ ಅವರು ಕೊಟ್ಟ ಸ್ವಾಗತವೂ ಅವರ ಉಚ್ಚ ಭಾವವನ್ನು ... "ಭಿನ್ನತೆಯಲ್ಲಿ ಐಕ್ಯ" (Unity in Diversity) ಎಂಬ ಆದರ್ಶವನ್ನೇ ನಾನು ಮೈಸೂರಿನ ಭಿನ್ನ ಜಾತಿ ಮತ್ತು ಭಿನ್ನ ಮತಗಳ ಜನತೆಗೆ ಬೋಧಿಸಿರುವೆನು." ಮೈಸೂರಿನ ಪ್ರಜೆಗಳು ಈ ವಾಕ್ಯವನ್ನು ಮತ್ತೆ ಮತ್ತೆ ಮನಸ್ಸಿನಲ್ಲಿ ತೆಗೆದುಕೊಳ್ಳುವರು ಉತ್ತಮವಿದೆ.

"ದೇವರು ಅಷ್ಟು ಪ್ರಮುಖನೂ, ಅಷ್ಟು ವಿಶಾಲನೂ, ಅಷ್ಟು ಗಂಭೀರನೂ ಆಗಿ, ಎಷ್ಟೇ ಉತ್ತಮಕಲ್ಪನೆಯಲ್ಲಿಯೂ ಪೂರ್ಣತೆಯನ್ನು ಹೊಂದಲಾರನಾಗಿರುವನು; ಮತ್ತು ಆ ಕಾರಣದಿಂದ ನಾವು ಒಬ್ಬರಿಂದ ಇನ್ನೊಬ್ಬರು ತಿಳಿಯುವುದು ಬಹಳವಿರುವುದು" ಎಂಬುದು ಅರ್ಥಗರ್ಭಿತವಾದ ಅವಲೋಕನವಾಗಿರುತ್ತದೆ. ಇಲ್ಲಿ ಲೋಕಕ್ಕೊಂದು ಸಂದೇಶವಿದೆ; ಸಮಸ್ತ ಮತಾನುಯಾಯಿಗಳೂ ಪುನಃ ಪುನಃ ಮನಸ್ಸಿನಲ್ಲಿಯೇ ತರ್ಕಿಸಿ ತಿಳಿದುಕೊಳ್ಳಬೇಕಾದ ತತ್ವವಿದೆ; ಎಂದು ಧಾರಾಳವಾಗಿ ಹೇಳಬಹುದು.

ಈ ತತ್ವಬೋಧೆಯ ಮಧ್ಯದಲ್ಲಿ ಮಹಾರಾಜರು ಪ್ರಜಾಪ್ರೇಮವನ್ನೂ ಮರೆಯಲಿಲ್ಲ. "ಯುರೋಪ, ಅಮೇರಿಕಾ, ಅಥವಾ ಜಪಾನ ದೇಶಗಳಿಗೆ ಹೋಗುವುದು ನಮ್ಮ ಹಿಂದೀ ವಿದ್ಯಾರ್ಥಿಗಳ ಆದರ್ಶವಾಗಿ ಬಂದಿದೆ; ಮತ್ತು ಹಿಂದುಳಿದ ನಮ್ಮಲ್ಲಿ ನಮ್ಮ ವಿದ್ಯಾರ್ಥಿಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗಿ ನಮ್ಮನ್ನು ಬಿಟ್ಟುಹೋಗುವಾಗ, ಅವರ ವಿಷಯದಲ್ಲಿ ಯೋಚನೆಯು ಉಂಟಾಗದೆ ಇರುವುದಿಲ್ಲ" ಎಂದು ಪ್ರಕಟಿಸಿರುವ ಅವರ ಯೋಚನೆಯು ಅರಸುತನದ ಘನವಾದ ಗುಣವನ್ನು ತೋರಿಸುತ್ತಿದೆ. ಈ ಸಮ್ಮೇಲನದ ಸಂಸ್ಥೆಯು ಕಡೆಗೆ ಈ ವಿದ್ಯಾರ್ಥಿಗಳ ಪರವಾಗಿ ಅವರು ಕೇಳಿದ ವಿನಂತಿಯು ಮಾನ್ಯವಾಗದಿರದೆಂದು ನಾವು ಆಶಿಸುವೆವು.

ಶ್ರೀಮನ್ಮಹಾರಾಜರ ಭಾಷಣವು ಚಿಕ್ಕದಾಗಿದ್ದರೂ ಗಂಭೀರವಾಗಿತ್ತು. ಅದವರ ಅಂತರ್ಯವನ್ನು ಪ್ರತಿಬಿಂಬಿಸುತ್ತಿರೆಯೆಂದು ನಮಗೆ ಕಾಣುತ್ತದೆ. ಅವರ ಸಂದೇಶವು ಲೋಕದಲ್ಲೆಲ್ಲಾ ಪ್ರಸಾರವಾಗಿ ಹಿಂದೀ ವಿದ್ಯಾರ್ಥಿಗಳಿಗೆ ಎಲ್ಲಾ ಕಡೆಗಳಲ್ಲಿಯೂ ಸೌಹಾರ್ದದ ಕೈಯು ಸಿಕ್ಕಲೆಂದು ನಾವು ಪ್ರಾರ್ಥಿಸುವೆವು.

ವಿದೇಶ ವರ್ತಮಾನ.

— ಮಾರ್ಚ ೨೧ನೇ ತಾರೀಕಿನಿಂದ ಕಾಬೂಲಿನಲ್ಲಿ ಇರುವವರೂ ಕಾಬೂಲಿಗೆ ಬರುವವರೂ ಯುರೋಪಿಯನರಂತೆ ಚಲ್ಲಣ ಬಟ್ಟೆ ಹೇಟುಗಳನ್ನು ಧರಿಸಬೇಕೆಂದು ಅಮೀರರು ಕಾಬೂಲ್ ಮುನಿಸಿಪಾಲಿಟಿಯ ಪ್ರೆಸಿಡೆಂಟರಿಗೆ ತಿಳಿಸಿರುವರು. ಈ ಕಾನೂನಿಗೆ ವಿರೋಧವಾಗಿ ವರ್ತಿಸುವವರು ೫ರಿಂದ ೧೦ರ ವರೆಗಿನ ನಾಣ್ಯಗಳ ಜುರುಮಾನೆಗೂ, ಉಪಾಧ್ಯಾಯನು ಒಂದರಿಂದ ಐದು ನಾಣ್ಯಗಳ ಜುರುಮಾನೆಗೂ ಗುರಿಯಾಗುವರು.

— ಫಿಲಿಪ್ಪಾನ್ ದ್ವೀಪಗಳಲ್ಲಿ ವಿಶೇಷ ರೀತಿಯ ಬಿರುಗಾಳಿಯು ಬಂದು ಬೆಳೆಗೆ ಬಹಳ ನಷ್ಟವು ಸಂಭವಿಸಿರುತ್ತದೆ. ಲೈಟ್ ದ್ವೀಪದಲ್ಲಿ ಮಾತ್ರ ೨೦೦ ಜನರು ಸತ್ತುಹೋಗಿರುವರು. ೧೦೦೦೦ ಜನರು ಮನೆಗಳನ್ನು ಕಳಕೊಂಡಿರುವರು. ಒಟ್ಟಾರೆ ಮಿಲಿಯಗಟ್ಟಲೆ ಡೊಲ್ಲರುಗಳಷ್ಟು ನಷ್ಟವಾಗಿರುತ್ತದೆ.

— ಜರ್ಮನಿಯಲ್ಲಿ ಒಂದು ಆಶ್ಚರ್ಯಕರವಾದ ಸಂಗತಿಯು ನಡೆದಿರುತ್ತದೆ. ಅಡಿಗೆಯ ಹೆಂಗಸೊಬ್ಬಳು ತನಗೆ ಊಟಕ್ಕಿಲ್ಲದಿರುವುದನ್ನು ಕಂಡು ತಾನು ವಾಚಿಕೈಸರನ ತಂಗಿಯಾದ ಗ್ರೀಸಿನ ರಾಣಿಯ ಮಗಳೆಂದೂ ತನ್ನ ಕುಟುಂಬಿಕರು ರಾಜ ಮನೆತನದವರೆಂದೂ ಸೋಗು ಹಾಕಿ ಅಂಗಡಿಗಾರರನ್ನು ಮೋಸಗೊಳಿಸಿ ಬೇಕುಬೇಕಾದ ಸಾಮಾನುಗಳೆಲ್ಲವನ್ನು ಕೊಂಡುಕೊಂಡು ಬಹು ಸುಖವಾಗಿ ದಿನಗಳೆಯುತ್ತಿದ್ದಳು. ಆದರೆ ಒಂದು ದಿನ ಆಕೆಯು ರಾಜ ಕುಟುಂಬದವರೊಂದಿಗೆ ಇರುವುದನ್ನು ಬಿಟ್ಟು ಕುಮಾರಿ ಲಾಯದಲ್ಲಿ ಸೇವಕಿಯೊಡನೆ ಊಟ ಮಾಡುವದು ಪ್ರಕಟವಾಗಿ ಆಕೆಯ ಗುಟ್ಟು ಬಯಲಾಯಿತು. ಆ ಕಾರಣ ಆಕೆಗೆ ಎರಡು ವರುಷಗಳ ಕಾರಾಗೃಹ ವಾಸವು ವಿಧಿಸಲ್ಪಟ್ಟಿತು.

— ಪ್ರೇಗಿನ ಕೋರ್ಟನಲ್ಲಿ ೧೧ ವರುಷಗಳ ಮೊದಲಿನ ಒಂದು ವ್ಯಾಜ್ಯದ ವಿಚಾರಣೆಯಾಗುತ್ತಿದ್ದಿತು. ವ್ಯಾಜ್ಯದ ಅಪಾದಿತನು ಕಳೆದ ವರುಷ ಆಲ್ಬೇನಿಯದ ಮಂತ್ರಿಯನ್ನು ಹೊಟೇಲಿನಲ್ಲಿ ಗುಂಡು ಹೊಡೆದು ಕೊಂದಿದ್ದನು. ಆತನ ವಿಚಾರಣೆಯು ನಡೆಯುತ್ತಿರುವಾಗ ಕೊಲ್ಲಲ್ಪಟ್ಟ ಮಂತ್ರಿಯ ಸಹೋದರನ ಸೇವಕನು ಎರಡು ಗುಂಡುಗಳನ್ನು ಹೊಡೆದು ಆತನನ್ನು ಕೊಂದುಬಿಟ್ಟನು. ಗುಂಡು ಹೊಡೆದವನು ಕೈದುಮಾಡಲ್ಪಟ್ಟಿರುವನು.

— ಪರ್ಶಿಯ ಮತ್ತು ಇಜಿಪ್ಟ ಸರಕಾರದವರು ಐದು ವರುಷಗಳ ರಾಜಪತ್ರಕ್ಕೆ ಸಹಿಹಾಕಿರುವರು. ಇದೇ ರೀತಿಯ ರಾಜಿಯು ಜರ್ಮನಿ, ಫ್ರಾನ್ಸ್ ಮತ್ತು ಬೆಲ್ಜಿಯಮ್ ಸರಕಾರಗಳೊಳಗೆ ಸದ್ಯದಲ್ಲಿಯೇ ನಡೆಯಲಿರುವುದಂತೆ.

— ಲಂಡನಿನಲ್ಲಿ ಒಂದು ಗೇಸಿನ ಟಾಂಕಿಗೆ ತೂತುಬಿದ್ದು ವಿಷಮಿಶ್ರಿತವಾದ ಗೇಸು ಹೊರಹೊರಟು ಅಲ್ಲಿಯೇ ಮಲಗಿದ್ದ ಒಬ್ಬ ತಂದೆ ತಾಯಿ ಮತ್ತು ನಾಲ್ವರು ಮಕ್ಕಳು ಸತ್ತುಹೋದರು.

— ಪರ್ಶಿಯದ ಘುಜಾರಿಸ್ತ ಪ್ರಾಂತ್ಯದಲ್ಲಿ ೫ ಜನ ಕಳ್ಳರು ಓಡುತ್ತಿರುವ ಮೋಟಾರುಕಾರಿನ ಮೇಲೆ ಗುಂಡುಗಳನ್ನು ಹೊಡೆದು, ಡ್ರೈವರನ ... ವರ ... ಪ್ರಯಾಣಿಕರಲ್ಲಿದ್ದ ... ಬರಲಿಲ್ಲ. ಅನಂತರ ಅವರು ಹೆಂಗಸನ್ನು ... ಬಿಟ್ಟರು. ಹಿಂದೆಯೇ ಬೇರೊಂದು ಕಾರು ... ಕಳ್ಳರು ಚದರಿ ಓಡಿಹೋದರು.

— ಚ್ಯಾಲ ಎಂಬಲ್ಲಿ ಒಂದು ಮಿಲಿನ ಬಳಿ ... ಸುಮಾರು ತಿಕ್ಕೆ ಬಿಕ್ಕಿದ ಜನರು ಸತ್ತುಹೋದರು.

— ಇಜಿಪ್ತದ ಎರಡು ಪತ್ರಿಕೆಗಳು ಜನರನ್ನು ... ವಂತಹ ಲೇಖನಗಳನ್ನು ಪ್ರಕಟಿಸುತ್ತಿರುವುದರಿಂದ ... ಗಳವರು ಪತ್ರಿಕೆಗಳಿಗೆ ಹಾಗೆ ಮಾಡಲಾಗದೆಂದು ... ದರು. ಆದರೂ ಒಂದು ಪತ್ರಿಕೆಯವರು ... ಲೇಖನಗಳನ್ನು ಪ್ರಕಟಿಸಿದ ಕಾರಣ, ಪೋಲೀಸರು ಬಂದು ... ಸಂಚಿಕೆಗಳೆಲ್ಲವನ್ನು ತೆಗೆದುಕೊಂಡು ಹೋದರು.

— ಕಾಶ್ಮೀರದ ಮಹಾರಾಜರಾದ ಸರ್ ಹರಿಸಿಂಗರು ... ಹೊರಟು ಮಾರ್ಸೇಲಿಸಿಗೆ ತೆರಳಿರುವರು. ಅದೇ ... ಹಿಂದೂಸ್ಥಾನಕ್ಕೆ ಬರುವರು.

— ನಾಯಿಗಳ ಹುಚ್ಚುತನವನ್ನು ಹೋಗಲಾಡಿಸಲು ಅವುಗಳಿಗೆ ಒಂದು ರೀತಿಯ ಔಷಧಿಯಿಂದ ಚಾಕುಹಾಕಿಸುವದು ಪ್ರಯೋಜನಕಾರಿಯೆಂದು ಇತ್ತೀಚೆಗೆ ಕಂಡುಹಿಡಿಯಲ್ಪಟ್ಟಿದೆ. ಇದಕ್ಕಾಗಿ ಡಾ ... ಲೋ ಎಂಬವರು ಕಳೆದ ಐದು ವರುಷಗಳಿಂದಲೂ ಶೋಧಗಳನ್ನು ನಡೆಸುತ್ತಿದ್ದರು. ಇದನ್ನು ಇದುವರೆಗೆ ೧೩೦೦ ನಾಯಿಗಳ ಮೇಲೆ ಪ್ರಯೋಗಿಸಿ ಗುಣವನ್ನು ಪಡೆದುದಾಯಿತು.

— ಸ್ಪೈನದ ರಾಜರೂ ರಾಣಿಯೂ ಲಂಡನಿಗೆ ತೆರಳಿರುವರು.

— ಲೀಗ್ ಕೌನ್ಸಿಲಿನ ಮುಂದಣ ಅಧಿವೇಶನವು ಜನೇವಾದಲ್ಲಿ ನಡೆಯದೆ ಲ್ಯುಗಾನೊ ಎಂಬಲ್ಲಿ ನಡೆಯುವುದು.

— ಕವಿ ಟೆನ್ನಿಸನ್ನನ ಮಗನಾದ ಲೋರ್ಡ ಟೆನ್ನಿಸನ್ ಇವರು ತನ್ನ ೭೬ನೇ ವಯಸ್ಸಿನಲ್ಲಿ ಕಳೆದ ಸೋಮವಾರ ಮೃತಪಟ್ಟರು. ಇವರು ೧೯೯೧ನೇ ಇಸವಿಯಿಂದ ೧೯೦೪ನೇ ಇಸವಿಯ ವರೆಗೆ ದಕ್ಷಿಣ ಆಸ್ಟ್ರೇಲಿಯದ ಗವರ್ನರರಾಗಿದ್ದರು.

— ಸ್ವಿಜರಲೇಂಡಿನ ಕೆಸಾಲ ಎಂಬಲ್ಲಿ ಜುಗಾರಾಟವನ್ನು ಬಹಿರಂಗವಾಗಿ ಆಡಬಹುದೆಂದು ನಿರ್ಣಯವಾಗಿರುತ್ತದೆ.

— ಪೆರಿಸಿನಲ್ಲಿ ಒಬ್ಬ ಕಂಟ್ರಾಕ್ಟರನು ಕಟ್ಟಿಸಿದ ಮನೆಯು ಬೀಳಬಹುದೆಂಬ ಸಂಶಯವುಂಟಾದುದರಿಂದ ಆತನಿಗೆ ಎರಡು ವರುಷಗಳ ಕಾರಾಗೃಹ ವಾಸದ ಶಿಕ್ಷೆಯು ವಿಧಿಸೋಣಾಗಿಯದೆ.

— ಚ್ಯಾಲಿನಲ್ಲಿ ಉಂಟಾದ ಭೂಕಂಪದಿಂದ ಒಟ್ಟಾರೆ ಸತ್ತವರ ಸಂಖ್ಯೆಯು ೩೦೦ ಎಂದು ತಿಳಿದುಬಂದಿರುತ್ತದೆ.

— ಬ್ರಿಟನಿನ ರೈಲುವೆಗಳಿಗೆ ಉಕ್ಕಿನದೇ ಅಡ್ಡ ಮರಗಳನ್ನು ಮಾಡಬೇಕೆಂದು ನಿರ್ಣಯವಾಗಿರುತ್ತದೆ. ೭೦ ಸಾವಿರ ಉಕ್ಕಿನ ಅಡ್ಡ ಮರಗಳನ್ನು ತಯಾರಿಸಿಕೊಡಲು ಒಂದು ಕಂಪೆನಿಯವರಿಗೆ ಆರ್ಡರು ದೊರೆತಿರುತ್ತದೆ.

— ರಯೊಡಿ ಜನೆರಿಯೊವಿನ ಹತ್ತಿರ ಒಂದು ಸೀಪ್ಲೇನ್ ಸಮುದ್ರಕ್ಕೆ ಬಿದ್ದು ೧೪ ಜನ ಪ್ರಯಾಣಿಕರು ಮುಳುಗಿ ಸತ್ತರು.

— ಜುರಿಚ್ ಸ್ಥಾನದ ಟ್ರೆಜರಿಯಲ್ಲಿ ವರ್ಷಾಂತ್ಯದ ಲೆಕ್ಕ ಮಾಡುವಾಗ ೧೫ರಿಂದ ೨೦ ಮಿಲಿಯದ ವರೆಗೆ ಲಾಭ ಕಾಣಬೇಕಾಗಿದ್ದಲ್ಲಿ ಲಾಭದ ಬದಲು ಸುಮಾರು ಒಂದು ಮಿಲಿಯ ಪೌಂಡು ನಷ್ಟವೇ ಕಾಣುತ್ತಿರುವದು. ಇದರಿಂದ ಸುಮಾರು ೧೬ ಮಿಲಿಯ ಪೌಂಡುಗಳು ಟ್ರೆಜರಿಯಿಂದ ಕಳವಾಗಿವೆಯೆಂದು ಗ್ರಹಿಸಲ್ಪಟ್ಟಿದೆ. ಈ ಕುರಿತು ವಿಚಾರಣೆಯು ನಡೆಯುತ್ತಲಿದೆ.

ಸ್ವದೇಶ ವರ್ತಮಾನ.

— ಬೆಂಗಳೂರಿನ ವಿಶ್ವೇಶ್ವರಯ್ಯ ಕಮಿಟಿಯ ರಿಪೋರ್ಟು ಕಳೆದ ೩ನೇ ತಾರೀಕಿಗೆ ಸರಕಾರದವರ ಕೈ ಸೇರಬೇಕಾಗಿತ್ತು. ಆದರೆ ಹಾಗಾಗದೆ ಮೆಂಬರರು ಇನ್ನೊಮ್ಮೆ ಸಭೆ ಸೇರಿ ಮತ್ತೆ ರಿಪೋರ್ಟನ್ನು ಸರಕಾರದವರಿಗೆ ಕಳುಹಿಸುವರಂತೆ.

— ಲಾಹೋರದ ಅನಾರ್ಕಲಿಯಲ್ಲಿ ಒಂದು ಮಾಳಿಗೆಗೆ ಬೆಂಕಿ ಹಿಡಿದು ಸುಮಾರು ೬೦,೦೦೦ ರೂಪಾಯಿಗಳಷ್ಟು ನಷ್ಟವಾಯಿತು. ಅಷ್ಟರೊಳಗೆ ಫಾಯರ್ ಬ್ರಿಗ್ರೇಡಿನವರು ಬಂದು ಸಮೀಪದ ಅಂಗಡಿಗಳಿಗೆ ನಷ್ಟ ಉಂಟಾಗದಂತೆ ಮಾಡಿದರು.

— ಮುಂಬಾಯಿಯ ಆರು ಗಿರಣಿಗಳಲ್ಲಿ ಮುಷ್ಕರವು ಇನ್ನೂ ಆಗಿಯೇ ಇದೆ. ಇದು ಹೊರತು ಇನ್ನು ... ಗಿರಣಿಗಳಲ್ಲಿಯೂ ಸ್ವಲ್ಪ ಸಮಯದ ಮುಷ್ಕರವುಂಟಾಯಿತು.

— ನೀಲಗಿರಿಯಲ್ಲಿ ಕಳೆದ ವಾರ ನಾಲ್ಕು ಇಂಚು ಮಳೆಯು ಬಂದು ಬಹಳ ನಷ್ಟವುಂಟಾಯಿತು. ಮಾರ್ಗಗಳಿಗೆ ಈ ಮಳೆಯ ದೆಸೆಯಿಂದ ಸುಮಾರು ೩ ಲಕ್ಷ ರೂಪಾಯಿಗಳ ನಷ್ಟವು ಸಂಭವಿಸಿರುತ್ತದೆ.

— ಪಿ. ಸಿ. ಎಫ್. ಎಂಡ್ರ್ಯೂಸರವರು ಯುರೋಪಿಂದ ಅಮೇರಿಕೆಗೆ ಹೊರಟುಹೋದರು. ಜನವರಿಯಲ್ಲಿ ಅವರು ಆಫ್ರಿಕೆಗೆ ಹೋಗುವರು.

— ಕಲಕತ್ತಾ ಮೆಡಿಕಲ್ ಕೊಲೇಜು ಹೊಸ್ಪಿಟಲಿನಲ್ಲಿ ... ಒಬ್ಬ ರೋಗಿಯು ಐದು ಬೆಂಕಿ ... ಕಳವು ಮಾಡಿದಳು. ಇದಕ್ಕಾಗಿ ಆಕೆಯನ್ನು ... ದರು.

— ಮಹಾತ್ಮಾ ಗಾಂಧೀಯವರು ... ತಮ್ಮ ... ಬರುವಾಯು ಒಂದು ... ಸಂಬಂಧದ ...

—[illegible] ಬಗ್ಗೆ ತಾರೀಕು ೨೧ನೇ ದಿನ [illegible] ಒಂದು ಕುಳಿತರು. ಅವರನ್ನು ಬಹಳ ಉತ್ತಮ [illegible] ಸ್ವಾಗತ ಕಮಿಟಿಯವರ ಏರ್ಪಾಡುಗಳು ಭರ [illegible] ಅಧ್ಯಕ್ಷರನ್ನು ೨೮ ಕುದುರೆಗಳು ಎಳೆಯುವ [illegible] ೨೦೦೦ ಸ್ವಯಂಸೇವಕರೊಡನೆ ಪಟ್ಟಣ [illegible] ಮೆರವಣಿಗೆಯನ್ನು ಜರಗಿಸಬೇಕೆಂದು ನಿಶ್ಚಯಿಸಿರುವರು. [illegible] ಅದನ್ನು ಉತ್ಸಾಹಗೊಳಿಸಲು ಪ್ರತಿದಿನವೂ ಸಭೆಗಳನ್ನು [illegible] ನಿರ್ಣಯವಾಗಿರುತ್ತದೆ.

—[illegible] ಮತ್ತು ಬಿಹಾರದ ಎಲ್ಲಾ ಪಕ್ಷಗಳ ಪರಿಷತ್ತು [illegible] ಡಿಸೆಂಬರ ೯ನೇ ತಾರೀಕಿಗೆ ಕೂಡಲಿರುವದು.

—ಹಿಂದೀ ಭಾಷೆಯು ರಾಷ್ಟ್ರೀಯ ಭಾಷೆಯಾಗಿ ಪ್ರಚಾರಕ್ಕೆ ತರುವ ಸಲುವಾಗಿ, ಕಾಂಗ್ರೆಸ್ ಸಮಯ ಕಲಕತ್ತದಲ್ಲಿ ಒಂದು ರಾಷ್ಟ್ರೀಯ ಸಮ್ಮೇಳನವು ಜರಗುವದು. ಈ ಸಮ್ಮೇಲನದ ಸ್ವಾಗತ ಕಮಿಟಿಯ ಅಧ್ಯಕ್ಷರಾಗಿ ಶ್ರೀ ಸುಭಾಸಚಂದ್ರ ಬೋಸರವರು ಆರಿಸಲ್ಪಟ್ಟಿರುವರು. ಮಹಾತ್ಮಾ ಗಾಂಧಿಯವರೇ ಈ ಸಮ್ಮೇಳನದ ಅಧ್ಯಕ್ಷರಾಗಿರುವರು.

—ಮುಂಬಾಯಿಯ ಕೂಪರ್ ರಸ್ತೆಯಲ್ಲಿರುವ ಒಂದು ಕಲ್ಲಿದ್ದಲ ಕಾರಖಾನೆಯಲ್ಲಿ ಮೇಲಿಂದ ಕೆಳಕ್ಕೆ ೫ ಟನ್ ಭಾರದ ಒಂದು ಕಲ್ಲಿದ್ದಲ ತಗಡು ಬಿದ್ದು ಒಬ್ಬ ೧೬ ವರುಷ ಪ್ರಾಯದ ಮುಸಲ್ಮಾನ ಹುಡುಗನ ಕಾಲಿಗೆ ಬಹಳ ಗಾಯವಾಯಿತು. ತಗಡು ಮೇಲಿನಿಂದ ಕೆಳಕ್ಕೆ ಬೀಳುತ್ತಿರುವದನ್ನು ನೋಡಿ ಹುಡುಗನು ಓಡಿದರೂ ತಪ್ಪಿಸಿಕೊಳ್ಳಲಾಗಲಿಲ್ಲ. ಆತನು ಆಸ್ಪತ್ರೆಗೆ ಒಯ್ಯಲ್ಪಟ್ಟಿರುವನು.

—ನಾಗಪುರ ಯುನಿವರ್ಸಿಟಿಯಲ್ಲಿ ಅವರ ಸ್ವಂತ ಭಾಷೆಯನ್ನೇ ಮುಖ್ಯ ಭಾಷೆಯನ್ನಾಗಿ ಮಾಡಬೇಕೆಂದು ನಿರ್ಣಯವಾಗಿರುತ್ತದೆ.

—ದಕ್ಷಿಣ ಆಫ್ರಿಕದಲ್ಲಿ ಹಿಂದೂಸ್ಥಾನದ ಏಜಂಟರಾಗಿರಲು ನಿಯಮಿಸಲ್ಪಟ್ಟ ಸರ್ ಕೆ. ವಿ. ರೆಡ್ಡಿಯವರ ನೇಮಕವನ್ನು ನ್ಯಾಟೋಲ ಕಾಂಗ್ರೆಸ್ ಕಮಿಟಿಯು ವಿರೋಧಿಸಿ, ಹಿಂದೂ ಸರಕಾರಕ್ಕೆ ತಂತಿ ಕಳುಹಿಸಿರುತ್ತದೆ.

—ಲಾಲಾಜಿಯವರ ಸ್ಮಾರಕ ಫಂಡಿಗೆ ಪಾರ್ಲಾಗಂಡದಲ್ಲಿ ವಿ. ಬಿರ್ಲಾರವರು ೧೫,೦೦೦ ರೂಪಾಯಿಗಳನ್ನೂ, ರಾಯಸಾಹೇಬ ನಾರಾಯಣ ಪ್ರಸಾದರವರು ೩,೧೦೦ ರೂಪಾಯಿಗಳನ್ನೂ, ಸೇಠ್ ಜಮುನಾಲಾಲ್ ಬಜಾಜರವರು ಒಂದು ಸಾವಿರ ರೂಪಾಯಿಗಳನ್ನೂ ಕೊಟ್ಟಿರುವರು.

—ಕಲಕತ್ತಾ ಕೊಂಗ್ರೆಸ್ಸಿನಲ್ಲಿ ೧೩ ಸಾವಿರ ಜನರು ಕುಳಿತುಕೊಳ್ಳಬಹುದಾದಷ್ಟು ಸ್ಥಳವನ್ನು ಏರ್ಪಡಿಸಿರುವರೆಂದು ತಿಳಿದುಬರುತ್ತದೆ.

—ಪೆರಿಸಿನ ಮಿಲಿಟರಿ ಗವರ್ನರರು ಹಿಂದೂಸ್ಥಾನವನ್ನು ಸಂದರ್ಶಿಸುವ ಸಲುವಾಗಿ ಇದೇ ೧೪ನೇ ತಾರೀಕಿನ ದಿನ ಹೊರಡುವರು. ಹಿಂದೂ ಸರಕಾರದವರು ಅವರಿಗೆ ಆಮಂತ್ರಣವನ್ನು ಕಳುಹಿಸಿರುವರಂತೆ.

—ಅಲ್ಲಹಾಬಾದದ ಹೆಂಗಸರು ಸಭೆಕೂಡಿ ಇನ್ನು ಮುಂದಕ್ಕೆ ಸರಕಾರದವರು ಹೆಂಗಸರಿಗೆ ಕೆಲಸವನ್ನು ಕೊಡುವದರಲ್ಲಿ ಯಾವ ನಿಷೇಧವನ್ನು ಒದಗೊಡಿಸಲಾಗದೆಂದೂ ಹೆಂಗಸರಿಗೆ ಯಾವ ಪರೀಕ್ಷೆಗೆ ಕುಳಿತುಕೊಳ್ಳಲೂ ಅಧಿಕಾರವಿರಬೇಕೆಂದೂ ಠರಾವುಗಳನ್ನು ಮಂಜೂರು ಮಾಡಿರುವರು.

—ಮುಂಬಾಯಿಯಲ್ಲಿ ಕಳೆದ ಶನಿವಾರ ಆರು ಗಿರಣಿಗಳು ಮುಚ್ಚಲ್ಪಟ್ಟವು. ಫಲತಃ ಸುಮಾರು ೧೦ ಸಾವಿರ ಜನ ಕೂಲಿಗಳು ನಿರುದ್ಯೋಗಿಗಳಾದರು.

—ಕಾನಪುರಕ್ಕೆ ಸ್ಯಾಮನ್ ಕಮಿಶನು ಬಂದೊಡನೆ ಅಲ್ಲಿಯೂ ಸುಮಾರು ಹತ್ತು ಸಾವಿರ ಜನರು ಕೂಡಿ ಕಪ್ಪು ಧ್ವಜಗಳನ್ನು ಬೀಸಿ, 'ಸ್ಯಾಮನ್ ಹಿಂದಕ್ಕೆ ಹೋಗು' ಎಂದು ಬೊಬ್ಬಿಡುತ್ತಾ ದೊಡ್ಡ ಬಹಿಷ್ಕಾರವನ್ನು ಜರಗಿಸಿದರು.

—ಸತಾರಾ ಜಿಲ್ಲೆಯಲ್ಲಿ ಭಯಂಕರವಾದ ಪ್ಲೇಗ್ ರೋಗವು ಪ್ರಾರಂಭಿಸಿರುತ್ತದೆ. ಸತಾರಾ ಜಿಲ್ಲೆಯ ೧೩೪೬ ಹಳ್ಳಿಗಳ ಪೈಕಿ ೧೮೯ ಹಳ್ಳಿಗಳು ಈ ರೋಗದಿಂದ ಆಕ್ರಮಿಸಲ್ಪಟ್ಟವೆ. ನವಂಬರ ೩೦ನೇ ತಾರೀಕಿನ ವರೆಗೆ ೪೫೭೫ ಜನರು ರೋಗ ಪೀಡಿತರಾಗಿ ೩೪೬೪ ಜನರು ಮರಣಕ್ಕೆ ತುತ್ತಾದರು. ಈ ಹಾವಳಿಯನ್ನು ತಪ್ಪಿಸಲು ಅಧಿಕಾರಿಗಳು ಚೆನ್ನಾಗಿ ಪ್ರಯತ್ನಿಸುತ್ತಿರುವರು.

—ಕ್ರಿಸ್ಮಸಿನ ಸಮಯದಲ್ಲಿ ಕಲಕತ್ತದಲ್ಲಿ ನಡೆಯಲಿರುವ ಅಖಿಲ ಹಿಂದೂಸ್ಥಾನ ವೈದ್ಯ ಸಮ್ಮೇಳನದ ಅಧ್ಯಕ್ಷತನಕ್ಕೆ ಮುಂಬಾಯಿ ಮುನಿಸಿಪಲ್ ಕೊರ್ಪೊರೇಶನಿನ ಪ್ರೆಸಿಡೆಂಟರಾದ ಡಾಕ್ಟರ್ ಜಿ. ವಿ. ದೇಶಮುಖರವರು ಒಪ್ಪಿರುವರು.

—ಇಂಗ್ಲಾಂಡಿನಲ್ಲಿರುವ ಬರ್ದವಾನಿನ ಮಹಾರಾಜರು ಹಿಂದೂಸ್ಥಾನವನ್ನು ಸಂಚರಿಸಿ ಹೋಗಲು ಹೊರಟಿರುವರು. ಅವರು ಡಿಸೆಂಬರ ತಾ. ೧೪ಕ್ಕೆ ಮುಂಬಾಯಿಗೆ ಬಂದು ೧೬ನೇ ತಾರೀಕಿಗೆ ಕಲಕತ್ತಕ್ಕೆ ತಲಪುವರು.

—ಕಳೆದ ಗುರುವಾರವು ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಲಾಲಾಜಿಯವರ ದಿನವಾಗಿ ಆಚರಿಸಲ್ಪಟ್ಟಿತು. ಲಾಲಾಜಿಯವರ ಸ್ಮಾರಕಕ್ಕಾಗಿ ಒಂದು ಫಂಡನ್ನು ಸ್ಥಾಪಿಸಬೇಕಾಗಿ ಸರ್ವ ಕಡೆಗಳಲ್ಲಿಯೂ ಮಂಜೂರಾಗಿರುತ್ತದೆ. ಗಾಂಧಿಜಿಯವರೂ ಕೂಡ ಈ ಠರಾವನ್ನು ಸಮರ್ಥಿಸಿರುವರು.

—ಕಲಕತ್ತಾ ಕಾಂಗ್ರೆಸಿನ ಸಮಯ ನಡೆಯಲಿರುವ ಪ್ರದರ್ಶನಕ್ಕೆ ಮಿಲ್ಲಿನಲ್ಲಿ ತಯಾರಿಸಿದ ವಸ್ತುಗಳನ್ನು ಪ್ರದರ್ಶಿಸಲೇ ಬಾರದೆಂದು ನಿರ್ಣಯವಾಗಿರುತ್ತದೆ.

—ಕಳೆದ ಶನಿವಾರ ಸರ್ ಜಗದೀಶ ಚಂದ್ರಬೋಸರವರ ೭೦ನೇ ಜನ್ಮದಿನವು ಜಗತ್ತಿನಲ್ಲೆಲ್ಲಾ ಆಚರಿಸಲ್ಪಟ್ಟಿತು. ರೊಮೇನ್ ರೊಲೆಂಡರೂ ಈ ಉತ್ಸವದಲ್ಲಿ ಉತ್ಸಾಹಿಗಳಾಗಿದ್ದರು. ಜಗದೀಶ ಚಂದ್ರರವರು ಒಳ್ಳೆಯ ಆರೋಗ್ಯದಲ್ಲಿದ್ದು ಇನ್ನೂ ಇನ್ನೂ ವನಸ್ಪತಿಗಳ ಕುರಿತಾದ ಶೋಧಗಳನ್ನು ಮಾಡಿ ಹಿಂದೂಸ್ಥಾನದ ಹೆಸರನ್ನು ಮೇಲಕ್ಕೆ ತರುತ್ತಿರುವದು ಸಂತೋಷಾಸ್ಪದವಾದ ಸಂಗತಿಯಾಗಿದೆ.

—ಸ್ಯಾಮನ್ ಕಮಿಶನು ಲಾಹೋರಿಗೆ ಬಂದಾಗ ನಡೆದಂತಹ ರೀತಿಯೇ ಲಖ್ನೋದಲ್ಲಿಯೂ ನಡೆಯಿತು. ಅಲ್ಲಿ ಪ್ರತಿಯೊಬ್ಬ [illegible] ಜನರು [illegible] ಹೊಂದಿರುವರು. ಪೋಲೀಸರು ಮೊದಲು ಜರತಾಳಕ್ಕೆ ಆಕ್ರಮವನ್ನು ಕೊಟ್ಟು ಕೊನೆಗೆ ಜರತಾಳವು ನಡೆಯುವಾಗ ಹೊಡೆಯತೊಡಗಿದರು. ಲಾಠಿಗಳಿಂದ ಹೊಡೆಯಲು ಪ್ರಾರಂಭಿಸಿದರು. ಆದಾದ ಮೇಲೆ ಬಹಿಷ್ಕಾರಗಾರರ ಮೇಲೆ ಅವರು ಕೈ ತಿರುಗಿಸಿದರು. ಪೋಲೀಸರು ಏನು ಮಾಡಿದರೂ, ಸುಮಾರು ೩೦,೦೦೦ಕ್ಕೆ ಮಿಕ್ಕಿ ನೆರೆದ ಬಹಿಷ್ಕಾರಗಾರರು ಪೋಲೀಸರ ಮೇಲೆ ಪ್ರತೀಕಾರವನ್ನು ಮಾಡಲಿಲ್ಲ. ಪೆಟ್ಟುಗಳನ್ನು ತಿಂದರೂ ಶಾಂತ ವೃತ್ತಿಯನ್ನು ಬಿಡಲಿಲ್ಲ. ಜವಾಹರಲಾಲನೆಹರುಗಳವರಿಗೂ ಪೆಟ್ಟು ತಗಲಿದೆ ಎಂದು ವರ್ತಮಾನವಿದೆ

ದ ಕ್ಷಿ ಣ ಕ ನ್ನ ಡ.

ಮಂಗಳೂರು: — ಮಂಗಳೂರು ಮುನಿಸಿಪಾಲಿಟಿಯಲ್ಲಿ ಇದೇ ಡಿಸಂಬರ ತಿಂಗಳಲ್ಲಿ ಗ್ಯಾಸ ದೀಪಗಳನ್ನು ರಾತ್ರಿ ೧೨ ಘಂಟೆಯ ವರೆಗೂ ಸ್ಮಶಾನ, ಬ್ಯಾಂಕು ಮತ್ತು ಅಪಾಯ ಸೂಚಕ ದೀಪಗಳನ್ನು ಇಡೀ ರಾತ್ರಿಯೂ ಸಾಮಾನ್ಯ ದೀಪಗಳನ್ನು ತಾರೀಕು ೧೦, ೧೧, ೧೨, ೧೩ ಮತ್ತು ೧೪ ಈ ದಿವಸಗಳಲ್ಲಿ ಇಡೀ ರಾತ್ರಿಯೂ ಉಳಿದ ದಿವಸಗಳಲ್ಲಿ ಸಮಯಾನುಸಾರವೂ ಉರಿಸಲಾಗುವದು.

ಇಲ್ಲಿಯ ದಿ ಕೆನರಾ ಬ್ಯಾಂಕ್ ಲಿಮಿಟೆಡ್ ಇವರ ಶಾಖೆಯೊಂದನ್ನು ಮುಂಬಾಯಿಯಲ್ಲಿ ಈ ದಿನ ತೆರೆಯುವದಾಗಿ ತಿಳಿಯುತ್ತೇವೆ.

ತಾರೀಕು ೧–೧೨–'೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೩೩ ಮರಣಗಳಾದವು. ಈ ಪೈಕಿ ಶ್ವಾಸಕೋಶದ ರೋಗದಿಂದ ೮, ಕೊಲೆರಾ ರೋಗದಿಂದ ೧೨, ಇತರ ಎಲ್ಲಾ ಕಾರಣಗಳಿಂದ ೧೬, ಶಿಶುಮರಣಗಳು ೫, ಜನನ ಸಂಖ್ಯೆ ೪೨.

ಈ ವರುಷದ ಜಿಲ್ಲಾ ಪೋಲೀಸ್ ಸ್ಪೋರ್ಟ್ಸ್ ಈ ತಿಂಗಳಲ್ಲಿ ನಡೆಯಲಿರುವದೆಂದೂ, ಜನರೆಲ್ಲರೂ ಇದಕ್ಕಾಗಿ ಸಹಕರಿಸಬೇಕೆಂದೂ, ಇದಕ್ಕಾಗಿ ಕೊಡುವ ವಂತಿಗೆಯನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲಾಗುವದೆಂದೂ, ವಂತಿಗೆಯನ್ನು ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರಿಗೆ ಕಳುಹಿಸಬಹುದೆಂದೂ, ವಂತಿಗೆಯ ಫಲಿತಾಂಶವನ್ನು ಆಟಗಳಿಗೆ ಮಾತ್ರವೇ ಉಪಯೋಗಿಸಲಾಗುವದೆಂದೂ ವಂತಿಗೆಯ ಲೆಕ್ಕಪತ್ರಗಳನ್ನು ಜಿಲ್ಲಾ ಪೋಲೀಸ್ ಆಫೀಸಿನಲ್ಲಿ ಇಡಲ್ಪಟ್ಟು ವಂತಿಗೆದಾರರು ಪರೀಕ್ಷಿಸಬಹುದೆಂದೂ ಆಟಗಳು ಮುಗಿದ ಮೇಲೆ ಅವುಗಳ ಖರ್ಚಿನ ತಪಸೀಲನ್ನು ಜಿಲ್ಲಾ ಗಜೆಟಿನಲ್ಲಿ ಪ್ರಕಟಿಸಲಾಗುವದೆಂದೂ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರಾದ ಮಿ. ಜೆ. ಎಮ್. ಗ್ರೀನರವರು ತಿಳಿಸುತ್ತಾರೆ.

ನಿನ್ನೆಯ ದಿನ ಇಲ್ಲಿಯ ಕದ್ರಿಯಲ್ಲಿ ಕೋಣಗಳ ಕಂಬಳವು ನಡೆದು ಅಮ್ಮುಂಜೆಗುತ್ತಿನವರು ಪ್ರಥಮಸ್ಥಾನದಲ್ಲಿ ಗೆದ್ದಿರುವರು.

ಮಂಗಳೂರು ಗವರ್ನಮೆಂಟ್ ಕೊಲೇಜಿನ ಉಪಾಧ್ಯಾಯರೂ ವಿದ್ಯಾರ್ಥಿಗಳೂ ಇದೇ ಟರ್ಮಿನ ಕೊನೆಯ ದಿನ ಸಹಭೋಜನ ಮಾಡುವರೆಂದೂ, ಪ್ರತಿ ವಿದ್ಯಾರ್ಥಿಯು ಹೆತ್ತವರ ಅಪ್ಪಣೆಪಡೆದಂತೆ ವಿನಯದಿಂದ ಸಾಧಿಸಬೇಕೆಂದೂ, ಭೋಜನ ಶಾಂತಿಗಳ ತಲೆಗೆ ಎರಡಾಣೆಯಂತೆ ಫೀಸು ತೆರಬೇಕೆಂದೂ, ಬರಲಾರದವರು ಏಕೆ ಬರಲಾರರೆಂದು ಪ್ರಿನ್ಸಿಪಾಲರಿಗೆ ಅರುಹಬೇಕೆಂದೂ ನಿಶ್ಚಯವಾಗಿದೆ ಎಂದೂ ಅರೆವಾಸಿ ಮಂದಿ ವಿದ್ಯಾರ್ಥಿಗಳು ಇದಕ್ಕೊಪ್ಪಿರುವರೆಂದೂ ತಿಳಿಯುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ದ್ವಿತೀಯ ಮಹಿಳಾ ಶಿಕ್ಷಣ ದಿವಸವು ಇಲ್ಲಿಯ ಮಹಿಳಾ ಸಭಾಮಂದಿರದಲ್ಲಿ ಮಿಸೆಸ್ ಡಿ. ಜಿ. ರೈಯವರ ಅಧ್ಯಕ್ಷತೆಯಲ್ಲಿ ಇದೇ ಡಿಸಂಬರ ತಿಂಗಳ ೧೨ನೇ ಬುಧವಾರ ಅಪರಾಹ್ನ ೩ ಗಂಟೆಗೆ ಜರಗುವದು.

ಜಿಲ್ಲೆಯ ಎಲ್ಲಾ ಭಾಗದ ಮಹಿಳೆಯರಿಗೂ ಸವಿನಯ ಆಮಂತ್ರಣ ವಿದೆ.

ಗೀತಾ ಜಯಂತ್ಯುತ್ಸವ ಮತ್ತು ಗೀತಾಪಠನ ಸ್ಪರ್ಧೆಯು ಡಿಸಂಬರ ತಾ. ೨೩ರಲ್ಲಿ ಜರಗುವದು. ಎರಡು ಸ್ಪರ್ಧೆಗಳಿವೆ, ಒಂದನೆ ಸ್ಪರ್ಧೆಗೆ ಯಾವದಾದರೂ ೮ ಅಧ್ಯಾಯಗಳನ್ನು ಪಠಿಸಬೇಕು, ಎರಡನೆಯದಕ್ಕೆ ಯಾವದಾದರೂ ಎರಡು ಅಧ್ಯಾಯವನ್ನು ಪಠಿಸತಕ್ಕದ್ದು. ಇಡೀ ಗೀತೆಯನ್ನು ಹೇಳುವದಕ್ಕೆ ಸ್ಪರ್ಧಿಸುವವರು ಈ ಸ್ಪರ್ಧೆಗೆ ಬರಲಾಗದು, ಸ್ಪರ್ಧಕರು ಡಿಸಂಬರ ೨೦ರೊಳಗೆ ಹೆಸರು ಕೊಡಬೇಕು.

ಗೀತಾ ಪ್ರತಿಗಳನ್ನು ಕೆಳಗಿನವರಿಂದ ಪಡೆಯಬಹುದು. ಎಮ್. ಡಿ. ರಿಸ್ವಾಡ್‌ಕಾರ್ ಗೀತಾ ಸ್ವಯಂಸೇವಕ ಕೊಡಿಯಾಲ್‌ಬೈಲ್.

ಡಿಸ್ಟ್ರಿಕ್ಟ್ ಬೋರ್ಡಿನವರು ಹಾಸನ್ ಮಂಗಳೂರು ರೈಲುವೇ ಮಾಡುವದು ಅಗತ್ಯವೆಂದು ರೈಲುವೇ ಬೋರ್ಡಿಗೆ ಬರೆದಿದ್ದರು. ಈ ಮೊದಲು ತಿಳಿಸಿದ ಹಲವು ಕಾರಣಗಳಿಂದ ಈ ರೈಲುವೇಯನ್ನು ಮಾಡಿಸುವ ಅಗತ್ಯವಿಲ್ಲವೆಂದು ಡಿಸ್ಟ್ರಿಕ್ಟ್ ಬೋರ್ಡಿಗೆ ಇಂಡಿಯಾ ಸರಕಾರದ ಹುಕುಂ ಬಂದಿದೆ.

ಈ ವರುಷ ಹಸ್ಯ ಸೇರಿನ ಸರಬರಾಯಿಗೆ ಬೇಕಾದ ರೂಪಾಯಿ ೧೭ ಸಾವಿರ ಚಿಲ್ಲರೆಯನ್ನು ೬ ತಾಲೂಕು ಬೋರ್ಡುಗಳಿಗೂ ಸರಿಯಾಗಿ ಡಿಸ್ಟ್ರಿಕ್ಟ್ ಬೋರ್ಡಿನವರು ಹಂಚಿಕೊಟ್ಟಿರುವರು.

ಡಿಸ್ಟ್ರಿಕ್ಟ್ ಬೋರ್ಡು ಆಫೀಸನ್ನು ದೊಡ್ಡದಾಗಿ ಕಟ್ಟಿಸಲಿಕ್ಕೆ ೯ ಸಾವಿರ ಚಿಲ್ಲರೆ ಹಣ ಸಂಕ್ಷನಾಗಿಯದೆ.

ಇಲ್ಲಿಯ ಬೋಳಾರ ಶ್ರೀ ಮಾರಿಗುಡಿಯಲ್ಲಿ ಕೋಲದ ಸಂಬಂಧ ಕಳೆದ ಮಂಗಳವಾರ ದಿವಸ ದರ್ಶನ ಇದ್ದು ಸುಮಾರು ೫೦೦ ರೂಪಾಯಿ ಮೇಲ್ಪಟ್ಟ ಕಾಣಿಕೆ ಬಂದಿರುತ್ತದಾಗಿ ತಿಳಿದುಬರುತ್ತದೆ. ಅದು ಅಲ್ಲದೆ ಅನೇಕ ವರ್ಷಗಳಿಂದ ನಡೆಯದೆ ಇದ್ದ ದೊಡ್ಡ ಮಾರಿಪೂಜೆಯು ಆಗಬೇಕಾಗಿ ಕಾಳಿಯು ಅಭಯವಾಗಿದೆಯಂತೆ. ಆದುದರಿಂದ ಸಧ್ಯದಲ್ಲಿಯೇ ದೊಡ್ಡ ಮಾರಿಪೂಜೆಯು ಆಗುವುದರಲ್ಲಿ ಸಂದೇಹವಿಲ್ಲ.

ಇಲ್ಲಿಯ ಶ್ರೀಯುತ ಅಡಿಗೆ ಶ್ರೀನಿವಾಸ ರಾಯರ ಪುತ್ರ ಶ್ರೀ ವಾಮನ ರಾಯರು ಇಂಗ್ಲಾಂಡಿನಿಂದ ಮದರಾಸಿಗೆ ಬಂದು ತಲಪಿರುವರೆಂದು ತಿಳಿಯುತ್ತೇವೆ.

ಮೂಲ್ಕಿ— ದಿವಂಗತ ಲಾಲಾ ಲಜಪತರಾಯರ ದಿನಾಚರಣೆಯ ಉದ್ದಿಷ್ಟ ಮೂಲ್ಕಿ ಪುರಜನರ ಒಂದು ಸಾರ್ವಜನಿಕ ಸಭೆಯು ನಿನ್ನೆ ತಾ. ೨೯–೧೧–'೨೮ನೇ ಗುರುವಾರ ಅಪರಾಹ್ನ ೫ ಘಂಟೆ ಕ್ಕೆ "ದಿ ಯೂನಿಯನ್ ಕ್ಲಬ್ ಹೋಲ್"ನಲ್ಲಿ ಕೂಡಿ ಬಂತು. ಮ. ರಾ. ರಾ. ಯಂ. ಆರ್. ಪುಂಜ ಅವರ್ಗಳವರು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ದಿವಂಗತರ ಜೀವನ ವೃತ್ತಾಂತ, ವ ಸಾರ್ವಜನಿಕ ಚಟುವಟಿಕೆಯ ವಿಷಯ ಕೂಡಿದ ಸಭಿಕರ ಪೈಕಿ ಶ್ರೀಗಳಾದ ಕೆ. ಯು. ಪೈ, ಸಕ್ಕ ಮುಕ್ತಾ ಬಂಗೇರ, ಟಿ. ನಾರಾಯಣ ಶೆಣೈ, ಕೆ. ಸಂಜೀವರಾವ್, ಜಿ. ಭೋಜರಾವ್ ಇತ್ಯಾದಿಯರ ಭಾಷಣಗಳಾದ ಮೇಲೆ, ಸನ್ಮಾನ್ಯ ಅಧ್ಯಕ್ಷರು ದಿವಂಗತರು ತಮ್ಮ ಎಳೇ ಪ್ರಾಯದಿಂದಲೇ ತ್ಯಾಗಿ ಜನಸೇವೆಗೆ ತನುಮನಧನಗಳನ್ನರ್ಪಿಸಲು ಬದ್ಧಕಂಕಣರಾಗಿದ್ದಾರೆಂದೂ, ಅವರಲ್ಲಿ ಅಡಕವಾಗಿದ್ದ ಅಮೂಲ್ಯವಾದ ಸದ್ಗುಣಗಳನ್ನು ಪ್ರಕಾಶಿಸಿಯೂ, ಚಲೋ ರೀತಿಯಿಂದ ವಿವರಿಸಿ ಹೇಳಿ ಈ ಕೆಳಗಿನ ಠರಾವುಗಳನ್ನು ಸೂಚಿಸಿ ಸರ್ವಸಮ್ಮತದಿಂದ ಮಂಜೂರು ಮಾಡಲ್ಪಟ್ಟವು.

೧. ದಿವಂಗತ ಲಾಲಾ ಲಜಪತರಾಯರ ಅಕಾಲ ಮತ್ತು ಆಕಸ್ಮಾತ್ ನಿಧನದ ಬಗ್ಗೆ ಈ ಸಭೆಯು ತನ್ನ ಹೃದಯಪೂರ್ವಕವಾದ ಸಂತಾಪವನ್ನು ಸೂಚಿಸುತ್ತದೆ, ಮತ್ತು ಈ ದುಃಖ ಸೂಚನೆಯನ್ನು ದಿವಂಗತರ ಕುಟುಂಬಕ್ಕೆ ತಿಳಿಸಬೇಕೆಂದು ನಿರ್ಧರಿಸುತ್ತದೆ.

೨. ದಿವಂಗತರ ಹೆಸರಲ್ಲಿ ಇಡೀ ಭಾರತ ವರ್ಷದಿಂದ ಎತ್ತುತ್ತಿರುವ "ಲಾಲಾಜಿ ಫಂಡಿಗೆ"ಗೆ ಆದಷ್ಟು ದ್ರವ್ಯ ಸಹಾಯವನ್ನು ಶೇಖರಿಸಿ, ಅದರಿಂದ ದಿವಂಗತರ ಒಂದು ಚಿತ್ರಪಟವನ್ನು ಒದಗಿಸಿಕೊಂಡು ಅದನ್ನು ಯೂನಿಯನ್ ಕ್ಲಬ್ಬಿಗೆ ಒಪ್ಪಿಸಿ, ಅದನ್ನು ಯೋಗ್ಯ ಸ್ಥಳದಲ್ಲಿ ಇರಿಸುವಂತೆ ಹೇಳಿಕೊಳ್ಳಬೇಕೆಂದೂ ಉಳಿದ ಹಣವನ್ನು 'ಆಲ್ ಇಂಡಿಯಾ ಲಾಲಾಜಿ ಫಂಡ್'ಗೆ ಕಳುಹಿಸಬೇಕೆಂದು ನಿರ್ಧರಿಸುತ್ತದೆ. ಈ ಬಗ್ಗೆ ಶ್ರೀಯುತರುಗಳಾದ ಬಂಗ್ಲೆ ಸೀತಾರಾಮ ಕಾಮತ್, ಡಾ। ಯಂ. ಆರ್. ಕಾಮತ್, ಎ. ಯಂ. ಎಲ್. ಡಿಸೋಜ, ಯು.ಸಿ. ಚೆಂದಯ್ಯ ಶೆಟ್ಟಿ ಮತ್ತು ಜಿ. ಭೋಜರಾವ್‌ರಿಂದೊಡಗೂಡಿದ ಒಂದು ಕಮಿಟಿಯನ್ನು ಏರ್ಪಡಿಸುವುದಾಗಿ ನಿರ್ಣಯಿಸುತ್ತದೆ.

ಬಂಟವಾಳ— ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರರಾದ ರಾ। ಕೆ. ವರ್ಗೀಸ್ ಬಿ. ಎ. (ಒಕ್ಸನ್) ಅವರೂ ಮಂಗಳೂರು ರೇಂಜಿನ ಡಿಪ್ಯುಟಿ ಇನ್ಸ್‌ಪೆಕ್ಟರರಾದ ರಾ। ಕೊಡಿಕಲ್ ವೆಂಕಟರಾವ್ ಬಿ. ಎ. ಎಲ್. ಟಿ. ಯವರೂ ಈ ಕಡೆಗೆ ಸರ್ಕೀಟು ಬೆಳಸಿ ಬಂದು ಬಂಟವಾಳ ಮೂಡುಗೂಡಿನ ಬ. ಬೋರ್ಡು ಶಾಲೆ, ಬಂಟ್ವಾಳ ಎಸ್. ವಿ. ಎಸ್. ಶ್ರೀ ಎಲಿಮೆಂಟರಿ ಶಾಲೆ, ಬೋರ್ಡು ಹುಡುಗರ ಶಾಲೆಗಳನ್ನು ೧೨-೩ರೊಳಗೆ ಸಂದರ್ಶಿಸಿ ಇಲ್ಲಿಂದ ಕೂಡಲೆ ಅವರ ಮೋಟಾರ ಶಾಲೆಗೆ ಹೋಗಿ ಅದನ್ನು ಸಂದರ್ಶಿಸಿ ೪॥ ಘಂಟೆಗೆ ಬಂಟವಾಳಕ್ಕೆ ಬಂದು ಇಲ್ಲಿಯ ಬೆಸೆಲ್ ಮಿಶನ್ ಶಾಲೆಯನ್ನು ಸಂದರ್ಶಿಸಿ ಮಂಗಳೂರಿಗೆ ತೆರಳಿದರು. ಉಭಯ ಅಧಿಕಾರಿಗಳ ಅಪ್ಪಣೆಯಲ್ಲಿದ್ದಂತೆ ಇಲ್ಲಿಯ ಯಾವದೊಂದು ಶಾಲೆಯ ಸಂದರ್ಶನೆಯಲ್ಲಿ ಏನೊಂದೂ ಬೇರೆ ವಿಚಾರಣೆಗಳು ಇರಲಿಲ್ಲ. ಆದರಿಂದ ಈ ಕಡೆಯ ಶಾಲೆಗಳು ಒಳ್ಳೇ ಸ್ಥಿತಿಯಲ್ಲಿ ನಡೆಯುತ್ತವೆಂದು ಹೇಳಬಹುದು.

ಜಿಲ್ಲಾ ಸರ್ಜನರು ಇಲ್ಲಿಗೆ ಬಂದು ಆಸ್ಪತ್ರೆಯನ್ನು ಸಂದರ್ಶಿಸಿ ಬಹಳ ಹೀನಾವಸ್ಥೆಗೆ ಬಂದಿರುವ ಈ ಆಸ್ಪತ್ರೆಯನ್ನು ತಾಲೂಕು ಬೋರ್ಡಿನವರು ಒಳ್ಳೇ ಸ್ಥಿತಿಗೆ ತರಬೇಕೆಂದೂ, ಇಲ್ಲಿ ಒಳರೋಗಿಗಳಿಗೆ ೧೬ ಮಂಚಗಳನ್ನು ಇಡುವಂತೆಯೂ ಯೋಗ್ಯವಾದ ಅಡಿಗೆ ಕೋಣೆಯನ್ನು ಕಟ್ಟಿಸಲಿಕ್ಕೂ ತಾಲೂಕು ಬೋರ್ಡಿನವರು ಅನುಕೂಲತೆಯನ್ನು ಮಾಡಬೇಕೆಂದೂ ಅಭಿಪ್ರಾಯಪಟ್ಟಿರುವರಂತೆ. ಸ್ವಲ್ಪ ಹಳೆ ವಸ್ತು ಸುಧಾರಿಸುವಂತೆ ಹೀಗಾದ ಸ್ವಲ್ಪ ಕಟ್ಟಡದ ಸಾಹಿತ್ಯ ಸಾಧನಾಡಿಸಿದರಂತೆ. ದೇಶ ಪಕ್ಷಪಾತದ ಜಿಲ್ಲಾ ಸರ್ಜನರು ಈ ಆಸ್ಪತ್ರೆಗೆ ಕಾಲಿಟ್ಟಂದಿನಿಂದ ಈ ಆಸ್ಪತ್ರೆ ಇನ್ನಾದರೂ ಒಳ್ಳೇದಾದೀತೋ ಎಂದು ಊರಿನವರು ನಿರೀಕ್ಷಿಸುತ್ತಲಿದ್ದಾರೆ.

ಇಲ್ಲಿಯ ದೀಪೋತ್ಸವವು ಮರೆಯದೆ ಇಲ್ಲದೆ ಚಲೋ ರೀತಿಯಲ್ಲಿ ನಡೆಯಿತು.

ಕೊಟ್ಟೂರಂಗಡಿಯಿಂದ ತುಂಬೆಗೆ ಹೋಗುವ ಮಾರ್ಗವನ್ನು ಸೇರುವ ಕಟ್ಟೆ ಏರಿ ಮಾಡುವದಕ್ಕೆ ೬॥ ಸಾವಿರ ರೂಪಾಯಿ ಸಂಕ್ಷನಾಗಿದೆ.

ಪಾಣೆಮಂಗಳೂರು— ಈ ಸರ್ಕಲಿನ ಪಂಚಾಯತಿ ಪ್ರೆಸಿಡೆಂಟರು ಈಗ ಮಂಗಳೂರು ತಾಲೂಕು ಬೋರ್ಡು ಪ್ರೆಸಿಡೆಂಟರಾದ ರಾ॥ ಸದಾಶಿವ ಅಡಿಗರವರು. ಈ ಸರ್ಕಲಿನವರ ಅನುಕೂಲತೆ ಬಗ್ಗೆ ಮಾಡತಕ್ಕ ಕೆಲವು ಕೆಲಸಗಳಿವೆ—೧ ಇಲ್ಲಿಯ ಪಂಚಾಯತ ಶಾಲೆಯಲ್ಲಿ ಈ ವರುಷ ೫ನೆ ವರ್ಗ ಇದ್ದು ಏಕೋಪಾಧ್ಯಾಯ ಪದ್ಧತಿಯಿಂದ ಕಳೆದ ವರುಷ ಸರ್ಕಾರದ ಪರೀಕ್ಷೆಯು ವಿಫಲವಾಗಿದ್ದು ಸೆಂಟ್ ಅಸಿಸ್ಟೆಂಟ್ ಇನ್ಸ್‌ಪೆಕ್ಟರ್ ಬರೆದಂತೆ ಹಾಯರ್ ಎಲಿಮೆಂಟರಿ ಪಾಸಾದ ಒಬ್ಬ ಹೆಡ್ ಮಾಸ್ಟ್ರನನ್ನು ನೇಮಿಸುವದು; ೨ ಈ ಪೇಟೆಯಲ್ಲಿ ೫ ಮಾರ್ಗದ ಅಡ್ಡ ಕಂಬಗಳನ್ನು ಇಡಿಸುವದು; ೩ ಶ್ರೀ ನಂದಾದೀಪ ದೇವಸ್ಥಾನದ ಬಾಗಿಲಿನಿಂದ ಈ ಮೊದಲು ಆಲೋಚಿಸಿದಂತೆ ೨೦೦ ಅಡಿ ಉದ್ದವಿರುವ ಒಂದು ಮಾರ್ಗವನ್ನು ಹಿಂದಿನ ಮಾರ್ಗಕ್ಕೆ ಕೂಡಿಸಿ ನೇರವಾದ ಬಿಲಾವರಿಯ ಅಪಾಯದಿಂದ ಜನರನ್ನು ಕಾಪಾಡುವದು. ನಂದಾವರ ಕೋಡಿಗೆ ಒಂದು ಸಣ್ಣ ಸೇತುವೆಯನ್ನು ಮಾಡಿಸಿ ನಂದಾವರಕ್ಕೂ ಪಾಣೆಮಂಗಳೂರಿಗೂ ರಾತ್ರಿ ಹಗಲೂ, ಬೇಸಿಗೆ ಮಳೆಗಾಲದಲ್ಲಿಯೂ ವಹಿವಾಟು ಸರಿಯಾಗಿ ನಡೆಯುವಂತೆ ಮಾಡುವುದು; ೫ ಪೇಟೆಯಲ್ಲಿರುವ ಮೀನು ಅಂಗಡಿಗಳನ್ನು ಅಲ್ಲಲ್ಲಿ ಮಾರುವ ಹಸಿ ಮೀನನ್ನು ಈಗಿನ ಪೋಲಿಸ್ ಠಾಣೆಯ ಹತ್ತಿರ ಮಾರುವ ೬ ಒಂದು ಮೀನು ಮಾರ್ಕೆಟು ಬೇಗನೆ ತೆರೆಯುವದು; ೭ ಶಾಲೆಯ ಕಂಪೌಂಡಿನಲ್ಲಿ ಒಂದು ಪಾಯಿಖಾನೆ ಕಟ್ಟಿಸುವದು. ಈ ಕೆಲಸವನ್ನು ಈ ಊರಿನಾಗಿ ಪ್ರೆಸಿಡೆಂಟರು ಮಾಡಿಸಿದರೆ ಈ ಸರ್ಕಲಿನ ಅವರನ್ನು ಪಂಚಾಯತಿ ಕಳುಹಿಸಿದ್ದು ಸಾರ್ಥಕವಾಗಬಹುದೆಂದು ಹೇಳಬಹುದು.

ಪುಂಜಾಲಕಟ್ಟೆ— ಜಿಲ್ಲಾ ಸರ್ಜನರು ಇಲ್ಲಿಯ ಆಸ್ಪತ್ರೆಯನ್ನು ಸಂದರ್ಶಿಸಿದರು.

ಕುಂಬಳೆ— ಇಲ್ಲಿಂದ ಕಾಸರಗೋಡಿಗೆ ಹೋಗುವಾಗ ದಾರಿಯಲ್ಲಿ ಉಪದ್ರಕೊಡುವ ಮೊಗ್ರಾಲ ಹೊಳೆಗೆ ಒಂದು ಸೇತುವೆಯನ್ನು ಕಟ್ಟಿಸಬೇಕೆಂದು ಕಾಸರಗೋಡು ತಾಲೂಕು ಬೋರ್ಡಿನವರು ಡಿಸ್ಟ್ರಿಕ್ಟ್ ಬೋರ್ಡಿಗೆ ಬರೆದ ಪತ್ರವನ್ನು ಕುರಿತು ಆಲೋಚಿಸುವುದಕ್ಕಾಗಿ ದಾರಿ ಇಟ್ಟಿರುವರು. ಈ ಸೇತುವೆಯನ್ನು ಕಟ್ಟಿಸುವುದರ ಬದಲಾಗಿ ಕುಂಬಳೆ ಹೊಳೆಗೆ ಸೇತುವೆ ಕಟ್ಟಿಸಿದರೆ ತೆಂಕುಂಬಳೆಯನ್ನು ಕುಂಬಳೆಯನ್ನು ಕೂಡಿಸಿದಂತಾಗಿ ಎರಡು ಊರುಗಳು ಒಂದಾಗುವವು. ತೆಂಕುಂಬಳೆಯಿಂದ ಮೀನು ಪೇಟೆಗೆ ತರುವ ಮೊಗೇರ ಮತ್ತು ಮುಕ್ಕುವರ ಹೆಂಗಸರಿಗೆ ಬಹಳ ಉಪಕಾರವಾಗುವುದರಲ್ಲಿ ಸಂದೇಹವಿಲ್ಲ. ಡಿಸ್ಟ್ರಿಕ್ಟ್ ಬೋರ್ಡಿನವರು ಈ ವಿಷಯ ಆಲೋಚಿಸಿದರೆ ಒಳ್ಳೇದಿತ್ತು.

The Story of a New

OAKLAND

Series 6-212
the cosmopolitan six



WHY COSMOPOLITAN?

THE new Oakland has been called the cosmopolitan six because of its background and its ability to perform.

General Motors has produced this car as a result of its cosmopolitan experience in building and operating motor cars in all parts of the world.

Oakland is built to render a high order of service wherever it may be called. It is equally at home on mountain road, desert sand or city boulevard. Its beauty makes it acceptable anywhere. That is cosmopolitan character.

BODY FEATURES of the NEW OAKLAND

Closed bodies by Fisher; open bodies designed by Fisher but built by Oakland.

Body lines longer and lower. Passenger bodies are [illegible] longer and all bodies are [illegible] lower.

Seat positions and contours are improved.

Spanish leather upholstery on open models and Sport Cabriolets.

Leather upholstery available on all closed models.

Improved body hardware [illegible].

Instrument board beautifully carved in oak leaf design and [illegible] of instruments with platinum-silver dials.

New and attractive Duco color combinations on all models.

Narrow front corner posts on closed models.

Forward-folding windshields on open models.

For Further Particulars Apply to

RAO & RAO

Dealers of Oakland, Pontiac, Chevrolet, & Vauxhall Cars,

Maidan Road, MANGALORE.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಬೆನ್ನಿನ ನರಗಳು ಸೇದುತ್ತಿದ್ದರೆ ಶರೀರದಲ್ಲಿ ಲವಲವಿಕೆಯುಳ್ಳದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮಕ್ಕಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಪ್ಲುಯನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತಿರಬೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೩೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ ೧ಕ್ಕೆ ೧—೪—೦, ೧೨ ಸೀಸೆಗೆ ೨—೬—೦, ೩೬ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಳ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು [illegible]

ಹೊಸ ವರುಷದ ಅಂಕ.

ಸ್ವದೇಶಾಭಿಮಾನಿಯ ಹೊಸ ವರುಷದ ಅಂಕವು ಜನವರಿಯ ಮೊದಲಿನ ಶುಕ್ರವಾರ ದಿನ ಕಳೆದ ವರ್ಷದ ಅಂಕಕ್ಕಿಂತಲೂ ಹೆಚ್ಚು ಪುಟಗಳೊಡನೆ ಪ್ರಕಟಿಸಲ್ಪಡುವುದು. ಸಂಚಿಕೆಯಲ್ಲಿ ತುಂಬಾ ಚಿತ್ರಗಳು ಈ ಸಂಚಿಕೆಗಾಗಿ ಪ್ರತ್ಯೇಕವಾಗಿ ದೊರಕಿಸಲ್ಪಟ್ಟು ಪ್ರಕಟಿಸಲ್ಪಡುವವು. ಉತ್ತಮ ಲೇಖನಗಳು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವವು. ಸಚಿತ್ರವಾದ ಲೇಖನಗಳಿಗೆ ಹೆಚ್ಚಿನ ಪ್ರೋತ್ಸಾಹವು ಸಿಕ್ಕುವದು. ಚಿತ್ರಗಳನ್ನು [illegible] ಕಳುಹಿಸಬೇಕು. ಅವುಗಳ ಬ್ಲೋಕನ್ನು ನಾವೇ ತಯಾರಿಸಿಕೊಳ್ಳುತ್ತೇವೆ. ಲೇಖನಗಳು ಸ್ವದೇಶಾಭಿಮಾನಿಯ [illegible] ಕಲಮನ್ನು ಮೀರದಿದ್ದರೆ ಉತ್ತಮ. ನವೆಂಬರ ತಿಂಗಳೊಳಗಾಗಿ ಲೇಖನಗಳು ನಮ್ಮ ಕೈಸೇರಿದರೆ ಬ್ಲೋಕುಗಳನ್ನು ತಯಾರಿಸಲಿಕ್ಕೂ, ಮುದ್ರಣವನ್ನು ನಡೆಸಲಿಕ್ಕೂ ಅನುಕೂಲವಾಗುವುದು. [illegible] ಗಳೂ ಬೇಕಾಗಿರುವವು. ಕರ್ನಾಟಕದ ಸುಪ್ರಸಿದ್ಧ ಲೇಖಕರು ಈ ನಮ್ಮ ಕೆಲಸದಲ್ಲಿ ಸಹಾಯ ಮಾಡಬೇಕಾಗಿ ವಿನಂತಿ.

ಮ್ಯಾನೇಜರ್.

ಉಪ್ಪಿನಂಗಡಿ.— ಈ ಹೊಳೆಗೆ ಸೇತುವೆಯನ್ನು ಕಿರಾಡಿ ತುಂಗಪ್ಪನವರು ವರ್ಗಾದಲ್ಲಿ ಕಟ್ಟುವರೆ ೨ ಲಕ್ಷ ರೂಪಾಯಿ ಎಸ್ಟಿಮೇಟು ರವಾನೆ ಸರಕಾರಕ್ಕೆ ಕಳುಹಿಸಿರುವರು.

ಪುತ್ತೂರು.— ಪುತ್ತೂರು ಬಂಟವಾಳ ಪಂಚಾಂಲಕಟ್ಟೆ ಪೋಸ್ಟು ಆಫೀಸಿಂದ ಸುಮಾರು ೬-೭ ಮೈಲು ದೂರವಿರುತ್ತದೆ ಮತ್ತು ಎರಡು ಆಫೀಸುಗಳಿಗೂ ಸಮಮಧ್ಯ ಸ್ಥಳವಾಗಿರುತ್ತದೆ. ಇಲ್ಲಿ ದೊಡ್ಡ ಪಾಠಶಾಲೆಗಳೂ, ಆಯುರ್ವೇದಿಕ ಔಷಧಾಲಯವೂ, ದೇವಸ್ಥಾನಗಳೂ ಇದ್ದು, ಇಲಾಖೆಯವರ ಬಂಗಲೆಯೂ, ಇನ್ನೂ ಅನೇಕ ವರ್ಗದಾರರ ವ್ಯಾಪಾರಿಯರ ದೊಡ್ಡ ಕಟ್ಟೋಣಗಳೂ, ಬಸ್ಸ್ ಸ್ಟೇಶನುಗಳೂ, ಸೊಸೈಟಿಗಳೂ ಇದ್ದು ಜನಸಮೂಹ ಕೂಡುವ ಸ್ಥಳವಾಗಿರುವುದರಿಂದ ಟಪ್ಪಾಲು ವ್ಯವಹಾರಕ್ಕಾಗಿ ಇಲ್ಲಿ 'ಒಂದು ಬ್ರಾಂಚು ಟಪ್ಪಾಲು ಆಫೀಸು ಅತಿ ಅಗತ್ಯವಾಗಿರುತ್ತದೆ. ಇಲಾಖೆಯವರು ಈ ವಿಷಯವನ್ನು ಆಲೋಚಿಸಿ ಸ್ಥಳ ಸ್ಥಿತಿ ನಡಿಸಿದ್ದಲ್ಲಿ ಜನಸಮೂಹ ಹೆಚ್ಚಾಗಿ ಕೂಡದೆಯೂ ವ್ಯಾಪಾರದ ವಹಿವಾಟು ಇತ್ಯಾದಿ ವಗೈರೆ ನಡಿಯದೆಯೂ ಇರುವ ಕಾವಳ ಕಟ್ಟೆ ಹಳ್ಳಿಯಲ್ಲಿ ಬ್ರಾಂಚು ಪೋಸ್ಟು ಆಫೀಸನ್ನು ಏರ್ಪಡಿಸುವದಕ್ಕಿಂತ ಸವರ ಪುತ್ತೂರಲ್ಲಿಯೇ ತೆರಿಯುವದು ಅತಿ ಅಗತ್ಯವೆಂದು ಅಭಿಪ್ರಾಯ ಪಟ್ಟಿರುತ್ತಾರಿಂದ ಇಲಾಖೆಯವರು ಬೇಗನೇ 'ಪುತ್ತೂರಲ್ಲಿ ಬ್ರಾಂಚ ಪೋಸ್ಟು ಆಫೀಸನ್ನು ತೆರೆದು ನಮ್ಮ ಕಷ್ಟಗಳನ್ನು ಪರಿಹರಿಸಬೇಕಾಗಿ ಅತಿ ದೈನ್ಯದಿಂದ ಪ್ರಾರ್ಥನೆ.

ಕಾರ್ಕಳ.— ನವಂಬರ ೫ನೇ ತಾರೀಕು ದೇ. ಭ. ಲಾಲಾಜಿಯವರ ದಿನವನ್ನು ಇಲ್ಲಿಯವರೂ ಸ್ವೀಕಪೂರ್ವಕವಾಗಿ ಆಚರಿಸಿದರು. ಬೆಳಿಗ್ಗೆ ೬ ಘಂಟೆಗೆ ಶ್ರೀನಿವಾಸ ಆಶ್ರಮದಿಂದ ಭಜನೆಯೊಡನೆ ಮೆರವಣಿಗೆಯು ಹೊರಟು ಸಾಲ್ಮರದ ವರೇಗೂ ಹೋಗಿ ಬಂದು ನಂತರ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಪ್ರಾರ್ಥನೆಯಾಯಿತು. ಅನಂತರ ಶ್ರೀ ಕೆ. ಪಿ. ಕಾಮತ್ ಎಮ್. ಎ. ಬಿ. ಎಲ್.ರವರು ಸದರಿಯವರ ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸಿದರು.

ಸಾಯಂಕಾಲ ಪಂಚಮರಿಗೆ ಅಕ್ಕಿಯನ್ನು ಹಂಚಿದರು.

ಇಲ್ಲಿಯ ದೀಪೋತ್ಸವವು ವಿಜೃಂಭಣೆಯಿಂದಲೇ ಜರಗಿತು. ಆ ದಿನ ಕಂಬಳದ ಕೋಣಗಳನ್ನು ಓಡಿಸುವದೆಂತ ಒಂದು ಸುಳ್ಳು ವರ್ತಮಾನವಿತ್ತು. ಆದರೆ ಆ ದಿನವಾಗಲೀ ಅನಂತರ ಈ ತನಕ ಆ ಕಂಬಳದ ಓಟ ಆಗಲಿಲ್ಲ. ಆ ಕುರಿತು ಹಳ್ಳಿಯ ಜನಗಳಲ್ಲಿ ಹಲವು ಸುಳ್ಳು ವರ್ತಮಾನಗಳು ಹಬ್ಬಿದ್ದವು.

ದೀಪೋತ್ಸವದ ಸಂಭ್ರಮದಲ್ಲಿ ಒಬ್ಬ ಹುಚ್ಚು ಹೆಂಗಸು ದೇವಸ್ಥಾನದ ಕೆರೆಯಲ್ಲಿ ಬಿದ್ದು ಪ್ರಾಣವನ್ನು ಕಳಕೊಂಡಳು. ಇವಳು ಕೆಲವು ವರುಷಗಳ ಹಿಂದೊಮ್ಮೆ ಬಾವಿಯಲ್ಲಿ ಬಿದ್ದಾಗ ಇವಳ ಗಂಡನು ಸವರಿಯವಳನ್ನು ಹಿಡಿಯುವರೆ ಹೋಗಿ ಇಬ್ಬರೂ ಬಾವಿಯಲ್ಲಿ ಬಿದ್ದು ಆಗ ಇವಳು ಬದುಕಿದಳು ವ ಗಂಡನು ಆಗಲೇ ಮೃತಪಟ್ಟನ್ನನು.

ಇಲ್ಲಿ ಕೆಲವು ದಿವಸಗಳಿಂದ ಸಾಯಂಕಾಲ ಚಳೀ ಮಳೆಬರುತ್ತದೆ

ಫರಂಗಿಪೇಟೆ.— ಈ ಸಂಘದ ಉಪಾಧ್ಯಾಯರ ಸಭೆಯ ವಾರ್ಷಿಕೋತ್ಸವವು ೧೧ನೇ ಶನಿವಾರ ದಿನ ಸೆಕೆಂಡರಿ ಟ್ರೈನಿಂಗ್ ಶಾಲೆಯ ಸಹಾಯಕ ಉಪಾಧ್ಯಾಯ ಶ್ರೀಯುತ ಕೆ. ಗೋಪಾಲರಾವ್ ಬಿ. ಎ. ಎಲ್. ಟಿ.ಯವರ ಅಧ್ಯಕ್ಷತೆಯಲ್ಲಿ ಜರಗಿತು. ಪೂರ್ವಾಹ್ನ ೧೧ ಘಂಟೆಗೆ ಉಪಾಹಾರವಾದ ಬಳಿಕ ಸಂಘದ ಮಹಾಸಭೆಯೇ ಜರಗಿತು. ಈ ಸಭೆಯಲ್ಲಿ ಅಧ್ಯಕ್ಷ ಸಕ್ರೆಟರಿಯವರ ಚುನಾವಣೆಯಾದೊಡನೆ ಉಪಾಧ್ಯಾಯರೆಲ್ಲರೂ ತಾವು ತಯಾರಿಸಿದ ಪಾಠಗಳ ಸಂಕ್ಷಿಪ್ತವಾದ ನೋಟ್ಸುಗಳನ್ನು ಇಟ್ಟುಕೊಳ್ಳಬೇಕೆಂದೂ ಈ ತನಕ ಕೆಲಸಕ್ಕೆ ಸೇರಿರುವ ಅನ್‌ಟ್ರೈನ್ಡ್ ಲೋವರ್ ಎಲಿಮೆಂಟರಿ ಉಪಾಧ್ಯಾಯರನ್ನು ಇಟ್ಟುಕೊಳ್ಳುವಂತೆ ೧೯೩೦ ರವರೆಗೆ ಬಿಡಬೇಕಾಗಿಯೂ ಅವರ ಗ್ರೇಂಟಿನ ದರವನ್ನು ಇತರ ಉಪಾಧ್ಯಾಯರಂತೆ ಹೆಚ್ಚಿಸಬೇಕಾಗಿ ವಿದ್ಯಾ ಇಲಾಖೆಯವರನ್ನು ಕೇಳಿಕೊಳ್ಳಬೇಕೆಂದೂ ನಿರ್ಧಯಿಸಲಾಯಿತು. ಈ ಜಿಲ್ಲೆಯಲ್ಲಿ ಧರ್ಮಾರ್ಥವಾಗಿ ಖಡ್ಡಾಯ ಶಿಕ್ಷಣವನ್ನು ಏರ್ಪಡಿಸುವಂತೆ ಸರಕಾರದವರನ್ನು ಕೇಳಿಕೊಳ್ಳಬೇಕಾಗಿ ಸಭಾ ನಿರ್ಧಯಿಸಲಾಯಿತು.

ವಿ ವಿ ಧ ಸ ಮಾ ಚಾ ರ ಗ ಳು.

ಅಧಿಕಾರಿಗೆ ಹದಿನೆಂಟು ವರುಷಗಳ ಶಿಕ್ಷೆ.

ಲಾಹೋರದ ಒಬ್ಬ ಬೇಂಕಿನ ಮೆನೇಜರನಾದ ಮಂಗಲಸೇನನೆಂಬವನ ಹಲವು ರೀತಿಗಳಲ್ಲಿ ಲೆಕ್ಕಪತ್ರಗಳನ್ನು ತಪ್ಪಾಗಿ ಇಟ್ಟ ಅನ್ಯಾಯವನ್ನು ಮಾಡಿದುದಕ್ಕಾಗಿ ಹದಿನೆಂಟು ವರುಷಗಳ ಶಿಕ್ಷೆಗೆ ಗುರಿಯಾದನು. ಆತನ ವಿಚಾರಣೆಯು ಕಳೆದ ಎರಡು ವರುಷಗಳಿಂದಲೂ ನಡೆಯುತ್ತಿದ್ದಿತು. ಒಂದು ಸಲವಲ್ಲ, ಐದಾರು ಸಲ ಆತನು ಇದೇ ರೀತಿ ಮಾಡಿದ್ದನು. ಮೊದಲನೆಯ ತಪ್ಪು ಲಾಲಾ ಹರಿದಾಸನೆಂಬವನು ಬೇಂಕಿನಿಂದ ೧೦ ಸಾವಿರ ರೂಪಾಯಿ ಸಾಲ ಪಡಕೊಂಡಿದ್ದನೆಂದು ಪುಸ್ತಕದಲ್ಲಿ ಬರೆದು ಹಣವನ್ನು ತಾನು ತಿಂದುಹಾಕಿದ್ದನು. ಇದಕ್ಕಾಗಿ ಆತನಿಗೆ ೪ ವರುಷಗಳ ಶಿಕ್ಷೆಯೂ ೨,೦೦೦ ರೂಪಾಯಿ ಜುರುಮಾನೆಯೂ ವಿಧಿಸೋಣಾಯಿತು. ಎರಡನೆಯ ಸಲ ೧೫,೦೦೦ ರೂಪಾಯಿಗಳನ್ನು ಆರು ಜನರ ಹೆಸರಿನಲ್ಲಿ ಹಂಚಿಹಾಕಿದುದರಿಂದ ಎರಡನೆಯ ಸಲವೂ ಅಂತಹ ಶಿಕ್ಷೆಯು ವಿಧಿಸೋಣಾಯಿತು. ಮೂರನೆಯ ಸಲ ಆತನು ಬೇಂಕಿನಿಂದ ತನಗೆ ೩ ಲಕ್ಷ ರೂಪಾಯಿ ಸಾಲ ಬರೆದು, ಹಿಂದೂಸ್ಥಾನ ಎಷ್ಯುರೆನ್ಸ್ ಸೊಸೈಟಿಯಲ್ಲಿ ೨ ಲಕ್ಷದ ಪಾಲುಗಳನ್ನು ಪಡೆದು ೬೦ ಸಾವಿರವನ್ನು ತನ್ನ ಲೆಕ್ಕಕ್ಕೆ ಜಮಾ ಬರೆದು ೪೦ ಸಾವಿರವನ್ನು ತನ್ನ ಹೆಂಡತಿಯ ಹೆಸರಿನಲ್ಲಿ ಕಾಯಂ ಠೇವ ಣಿಯಾಗಿ ಬರೆದು, ಅವುಗಳ ಜಾಮೀನಿನ ಮೇಲೆ ಪುನಃ ೫೦,೦೦೦ ರೂಪಾಯಿ ಸಾಲ ತೆಗೆದನು. ಇದಕ್ಕಾಗಿ ಆತನು ೬ ವರುಷಗಳ ಶಿಕ್ಷೆಗೂ ೧೫ ಸಾವಿರ ರೂಪಾಯಿ ಜುರುಮಾನೆಗೂ ಗುರಿಯಾದನು. ನಾಲ್ಕನೆಯ ಸಲ ವಿಜಯಪುರದ ಸಾಹುಕಾರರಿಗೆ ಒಂದು ಲಕ್ಷ ಮತ್ತು ಗುಜರಾತಿನ ಸಾಹುಕಾರರಿಗೆ ಅರ್ಧ ಲಕ್ಷ ಎಂದು ಸಾಲ ಬರೆದು ಲೆಕ್ಕವನ್ನು ತಪ್ಪು ಮಾಡಿದುದಕ್ಕಾಗಿ ೪ ವರುಷಗಳ ಶಿಕ್ಷೆಗೂ ೫,೦೦೦ ರೂಪಾಯಿ ಜುರುಮಾನೆಗೂ ಗುರಿಯಾದನು. ಒಟ್ಟಾರೆ ಆತನಿಗೆ ೧೮ ವರುಷಗಳ ಶಿಕ್ಷೆಯೂ ೨೨,೦೦೦ ರೂಪಾಯಿ ಜುರುಮಾನೆಯೂ ವಿಧಿಸಲ್ಪಟ್ಟ ಹಾಗಾಯಿತು.

ಸರ್ ಜಗದೀಶ ಚಂದ್ರಬೋಸರ ಜನ ದಿನ.

ವನಸ್ಪತಿಗಳ ಕುರಿತಾಗಿ ಅತ್ಯದ್ಭುತವಾದ ಹಲ ಶೋಧಗಳನ್ನು ನಡೆಸಿ ಪಾಶ್ಚಾತ್ಯರನ್ನು ತಲೆದೂಗಿಸಿ ಕೀರ್ತಿ ಪಡೆದಿರುವ ಸರ್ ಜಗದೀಶ ಚಂದ್ರಬೋಸರವರ ೭೦ನೆಯ ಜನ್ಮದಿನವು ಕಳೆದ ಶನಿವಾರ ಕಲಕತ್ತದ ಬೋಸ್ ಇನ್ಸ್ಟಿಟ್ಯುಟನಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಈ ಸಮಾರಂಭಕ್ಕೆ ವಿದೇಶದ ಪ್ರತಿನಿಧಿಗಳು, ಸರಕಾರಿ ಮಂತ್ರಿಗಳು, ಪ್ರಸಿದ್ಧಪಟ್ಟ ಮಹನೀಯರು ಬಂದು ನೆರೆದು ಬಹಳ ಉತ್ಸಾಹದಿಂದ ಕಾಳಕಿದ್ದರು.

ವಿಯೆನ್ನಾದಿಂದ ಕಲಕತ್ತಕ್ಕೆ ಬಂದ ಪ್ರಸಿದ್ಧ ವಿಜ್ಞಾನ ಶಾಸ್ತ್ರಜ್ಞನಾದ ಪ್ರೊಫೆಸರ್ ಮೊಲಿಚನೆಂಬವನು, "ನಾನು ಬಂದುದರ ಉದ್ದೇಶಕ್ಕಿಂತಲೂ ಹೆಚ್ಚಿನ ಸಂಗತಿಗಳನ್ನು ಇಲ್ಲಿ ಸ್ವತಃ ನೋಡಿದೆನು. ಇಂತಹ ಸಂಸ್ಥೆಯ ಸ್ಥಾಪಿತನನ್ನು ಕಾಣುವದು ನನ್ನ ಮಹತ್ಪುಣ್ಯೋದಯವೆನ್ನಲೇಬೇಕು. ಮೂಕವಾದ ವನಸ್ಪತಿಗಳನ್ನು ಸಜೀವಗಳನ್ನಾಗಿ ಮಾಡಿ ಅವುಗಳ ವಿಷಯವಾದ ಅಸಂಖ್ಯಾತ ಶೋಧಗಳನ್ನು ನಡೆಸಿ ವಿಶ್ವವನ್ನೇ ಮುಗ್ಧಗೊಳಿಸಿಬಿಟ್ಟ ಸರ್ ಜಗದೀಶ ಚಂದ್ರರು ಸಾಮಾನ್ಯ ಪುರುಷರಲ್ಲ" ಎಂದು ಮನಃಪೂರ್ವಕವಾಗಿ ಅವರನ್ನು ಹೊಗಳಿ ಮಾತನಾಡಿದರು.

ಈ ಸಂದರ್ಭದಲ್ಲಿ ಸರ್ ಜಗದೀಶರವರೇ ಮುಂದಕ್ಕೆ ಬಂದು ತನ್ನ ಶೋಧಗಳ ವಿಷಯವಾಗಿ ಕೆಲವು ಸಂಗತಿಗಳನ್ನು ವಿವರಿಸಿದರು. ಅದರ ವಿವರಣೆಯನ್ನು ಕೇಳಿ ಕೂಡಿದವರು ಒಂದೇ ಸಮಯದಲ್ಲಿ ಆಶ್ಚರ್ಯವನ್ನೂ, ಸಂತೋಷವನ್ನೂ ಹೊಂದಿ ಸರ್ ಜಗದೀಶರವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಹೊರಟು ಹೋದರು.

ಮಧ್ಯಪ್ರಾಂತದ ಸ್ತ್ರೀಯರ ಸಮ್ಮೇಳನ.

ಮಧ್ಯಪ್ರಾಂತದ ಸ್ತ್ರೀಯರ ಎರಡನೇ ಸಮ್ಮೇಳನವು ನಾಗಪುರದಲ್ಲಿ ಜರಗಿತು. ಇದನ್ನು ತೆರೆಯುವಾಗ ಶೇಠ ಬಟ್ಲರರು ಸ್ತ್ರೀ ವಿದ್ಯಾಭ್ಯಾಸಕ್ಕೆ ಮೊದಲಿನಿಂದಲೂ ಪುರುಷರ ಪ್ರೋತ್ಸಾಹವಿದೆಯೆಂಬುದು ಸಂತೋಷದ ಸಂಗತಿಯಾಗಿದೆಯೆಂದು ಹೇಳಿದರು. ಈ ಪರಿಷದಕ್ಕಾಗಿ ಮಧ್ಯಪ್ರಾಂತದ ಉತ್ತರ ಭಾಗದಿಂದಲೂ ಹಿಂದೀ ಭಾಗದಿಂದಲೂ ಬಂದ ಪ್ರತಿನಿಧಿಗಳನ್ನು ಅವರು ಅಭಿನಂದಿಸಿದರು. ಅಲ್ಲದೆ ಸ್ತ್ರೀಯರು ವಿದ್ಯೆಯನ್ನು ಹೆಚ್ಚಿಸುತ್ತಾ ಇನ್ನು ಯಾವ ವಿದ್ಯಾಸಂಸ್ಥೆಯಲ್ಲಿಯೂ ಉಪಾಧ್ಯಾಯಿನಿಯರೂ ಚಾಲಕರೂ ಆಗಲು ಯೋಗ್ಯತೆಯನ್ನು ಪಡೆಯಬೇಕಾಗಬೇಕೆಂದರು.

ಅಧ್ಯಕ್ಷರಾದ ಮಿಸೆಸ್ ಬೈರಾಮ್‌ಜಿಯವರು ಸ್ತ್ರೀ ವಿದ್ಯಾಭ್ಯಾಸದ ಕುರಿತು ಪುರುಷರಿಂದ ನಿರ್ಮಿತವಾದ ಕಾನೂನುಗಳನ್ನು ಸುಧಾರಿಸುವದೂ ಬೇಡವಾದ ಕಾನೂನುಗಳನ್ನು ತೆಗೆದುಹಾಕುವದೂ ಈ ಸಮ್ಮೇಳನದ ಮುಖ್ಯ ಉದ್ದೇಶವೆಂದು ವಿವರಿಸಿದರು. ಹೆಂಗಸರು ಸ್ವಂತವಾಗಿ ವಿಚಾರಿಸಿ ಯೋಗ್ಯವೆಂದು ಕಂಡುಬರುವ ಪಥವನ್ನನುಸರಿಸಬೇಕಲ್ಲದೆ ಹಿರಿಯರ ಕಾನೂನುಗಳೆಂದು ಅವುಗಳಿಗೆ ಮಾನ್ಯವನ್ನು ಕೊಟ್ಟು ಮೂಢರಾಗಿರಲಾಗದೆಂದೂ ಹೇಳಿದರು. ಬಾಲ್ಯ ವಿವಾಹವನ್ನು ತಡೆಗಟ್ಟಬೇಕು ಎಳೆ ಪ್ರಾಯದ ಹುಡುಗ ಹುಡುಗಿಯರು ಸಂಸಾರಮಾಡುವದು ಬಹಳ ಅನ್ಯಾಯವೇ ಸರಿ ಎಂದು ಮೊದಲಾಗಿ ಅಧ್ಯಕ್ಷರು ಸಕಾರಣವಾಗಿ ವಿವರಿಸಿದರು. ಲಾಲಾಜಿಯವರ ಅಕಾಲ ನಿಧನದ ಸಲುವಾಗಿ ದುಃಖ ಪ್ರದರ್ಶನವಾಗಿ ಪ್ರಾಥಮಿಕ ವಿದ್ಯಾಭ್ಯಾಸವು ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಕೊಡಲ್ಪಡಬೇಕೆಂದೂ, ಮದುವೆಯ ಪ್ರಾಯವನ್ನು ಹುಡುಗಿಯರಿಗೆ ೧೬, ಹುಡುಗರಿಗೆ ೨೧ ಹೀಗೆ ಮಾಡಬೇಕೆಂದೂ ಮುಖ್ಯ ನಿರ್ಣಯಗಳಾದವು.

ಅಮೇರಿಕನರ ನಾಗರಿಕತೆ.

ಹಿಂದೂಸ್ಥಾನವು ಮೂಢ ಜನರಿಂದಲೂ ಅನಾಗರಿಕರಿಂದಲೂ ಕೂಡಿದ ಸ್ಥಳವೆಂದು ಮಿಸ್ ಮೆಯೊಳು ಪ್ರಕಟಿಸಿರುವಳಾದರೂ ಆಕೆಯದೇ ದೇಶವಾದ ಅಮೇರಿಕದ ಚಿಕಗೊ ಪಟ್ಟಣದಲ್ಲಿ ನಡೆಯುತ್ತಿರುವ ಅನಾಗರಿಕ ಕರ್ತವ್ಯಗಳನ್ನು ನೋಡಿದುದಾದರೆ, ಹಿಂದೂಸ್ಥಾನದ ಜನರೇ ಅಮೇರಿಕನರಿಗಿಂತ ವಿಶೇಷ ನಾಗರಿಕರೆನ್ನಬೇಕಾಗುವದು. ಜನರನ್ನು ವಧಿಸಲು ಅಲ್ಲಿ ಈಗ ಕ್ರೂರವಾದ ಉಪಾಯಗಳು ಕೈಕೊಳ್ಳಲ್ಪಡುತ್ತಿವೆ. ಗುಂಡು ಹಾಕಿ ಕೊಲ್ಲುವ ಬದಲು, ವಿಷಕೊಡುವದು, ನೇಣುಹಾಕುವದು, ಕಷ್ಟಕೊಟ್ಟು ಮೆಲ್ಲಮೆಲ್ಲನೆ ಕೊಲ್ಲುವದು ಇವೇ ಅಲ್ಲಿ ಪ್ರಚಾರಕ್ಕೆ ಬಂದಿವೆ.

ಚಿಕಗೊ ಪಟ್ಟಣದಲ್ಲಿ ನೇಣು ಹಾಕಲ್ಪಟ್ಟ ಒಬ್ಬನ ಮೃತದೇಹವು ಪೋಲೀಸರಿಗೆ ದೊರಕಿತು. ಆತನ ಕೊರಳಿಗೆ ಪಾಶವನ್ನು ಬಿಗಿದು, ಪಾಶದ ಹಗ್ಗದ ಇನ್ನೊಂದು ತುದಿಯನ್ನು ಗಟ್ಟಿಯಾಗಿ ಒಂದು ಕಂಬಕ್ಕೆ ಕಟ್ಟಿದ್ದರು. ಅಡಿಯ ನೆಲದಲ್ಲಿ ಇದ್ದ ಚಿಹ್ನೆಗಳನ್ನು ನೋಡಲಾಗಿ ಅಲ್ಲಿ ಹಲವರೊಳಗೆ ಜಗಳವಾಗಿತ್ತೆಂದು ವಿಶದವಾಗುತ್ತಿತ್ತು. ಅಲ್ಲದೆ ಮೋಟಾರಕಾರಿನ ಚಕ್ರದ ಗುರುತುಗಳಿದ್ದುದರಿಂದ ಹಲವರು ಒಬ್ಬನನ್ನು ಈ ರೀತಿ ನೇಣುಹಾಕಿ ಪಲಾಯನ ಮಾಡಿದ್ದಾರೆಂಬುದೂ ಪ್ರಕಟವಾಗುತ್ತಿತ್ತು.

ಇದು ಮಾತ್ರವಲ್ಲದೆ ವಿಷಪ್ರಯೋಗದಿಂದ ಕೊಲ್ಲುವದೂ ಇದೆ. ಇನ್ನು ಬೇರೆ ಇಬ್ಬರು ಒಬ್ಬ ನಿಗ್ರೋವನ್ನು ಸಜೀವವಾಗಿ ಸುಟ್ಟು ಹಾಕಲು ಪ್ರಯತ್ನಿಸಿ ಕೊನೆಗೆ ಪೋಲೀಸರ ಕೈಗೆ ಸಿಕ್ಕಿಬಿದ್ದರು. ನಿಗ್ರೋವು ತನ್ನ ಕತೆಯನ್ನು ಹೇಳುವದು "ಅವರು ನನ್ನನ್ನು ಒಂದು ಮನೆಗೆ ಕರೆದೊಯ್ದರು. ಅವರಿಗೆ ಬೇಕಾದ ಇನ್ನಿತರರು ಎಲ್ಲಿ ಅಡಗಿಸಲ್ಪಟ್ಟಿರುವರೆಂದು ನನ್ನನ್ನು ಕೇಳಿದರು. ನಾನು ಗೊತ್ತಿಲ್ಲವೆಂದು ಹೇಳಿದೆನು. ಅವರಾಗ ಕೋಪಾವೇಶದಿಂದ ಹುಚ್ಚರಾಗಿ ಒಂದು ಹಾರೆಯನ್ನು ಕೆಂಪಗೆ ಕಾಯಿಸಿ, ನನ್ನ ಮುಖಕ್ಕೂ, ಕುತ್ತಿಗೆಗೂ ಸುಟ್ಟಿಟ್ಟರು. ತದನಂತರ ನನ್ನನ್ನು ಅವರು ಸಿಗರೇಟುಗಳಿಂದ ಸುಟ್ಟಿಡಲು ಪ್ರಯತ್ನಿಸಿ, ಕಟ್ಟಕಡೆಗೆ ಬಿಟ್ಟುಬಿಟ್ಟರು." ಇದಲ್ಲವೇ ಅಮೇರಿಕನರ ನಾಗರಿಕತೆಯ ಪರಮಾವಧಿ.

ಆಶ್ಚರ್ಯಜನಕ ಚಿಕ್ಕ ವಾರ್ತೆಗಳು!

ಹೂವುಗಳಲ್ಲಿ ಕೋಪಿರೈಟು!

ಕೆನಡಾದಲ್ಲಿ ಒಬ್ಬನು ಒಂದು ಗುಲಾಬಿ ಹೂವನ್ನು ಹುಟ್ಟಿಸಲು ಕಲಿತಿರುವನು. ಅಮೇರಿಕೆಯಲ್ಲಿ ಬೇರೆ ಯಾರೂ ಅಂತಹ ಹೂವು ಬಿಡುವ ಗಿಡಗಳನ್ನು ಸಾಕಬಾರದೆಂದು ಆತನು ಅಪೇಕ್ಷಿಸಿದಂತೆ ಸೆನೇಟಿನವರು ಆತನ ಅಭಿಪ್ರಾಯವನ್ನು ಸಮರ್ಥಿಸಿರುವರು.

ಹಾಡುವ ಇಲಿ!

ನ್ಯೂಯೋರ್ಕಿನ ಪ್ರಾಣಿ ಸಂಗ್ರಹಾಲಯದಲ್ಲಿ ಹಾಡುವ ಇಲಿಯೊಂದಿದೆ. ಅದು ಹಾಡಬೇಕೆಂದೇ ಹಾಡುವದಲ್ಲ. ಅದಕ್ಕೆ ಶ್ವಾಸಕೋಶಗಳಲ್ಲಿ ಏನೋ ಕೊರತೆಯಿದೆ. ಆಗಾಗ ಅದು ಪ್ರಾರಂಭವಾಗುವುದು. ಆಗ ಆ ಬಡ ಇಲಿಯು ಹಾಡುವದು, ವಿಸಿಲ್‌ಮಾಡುವದು, ತಾಳಕ್ಕೆ ಸರಿಯಾಗಿ ಕುಣಿಯುವುದು. ನೋಡುವವರಿಗೆ ಅದು ಬೇಕೆಂದೇ ಹಾಡುವುದೆಂದು ತೋರುವುದು.

ಒಂದು ಮೈಲು ಉದ್ದದ ರೈಲು.

ಕೆನಡಾದಲ್ಲಿ ಧಾನ್ಯಗಳನ್ನು ತುಂಬಿಸಿ ಒಂದು ರೈಲು ಬಂಡಿಯು ಮೊನ್ನೆ ತಾನೆ ರೆಜಿನಾ ಎಂಬಲ್ಲಿಂದ ವಿನ್ನಿಪೆಗ್ಗಿನ ವರೆಗೆ ಪ್ರಯಾಣವನ್ನು ಬೆಳಸಿತು. ಈ ರೈಲಿನಲ್ಲಿ ೧೩೫ ಗಾಡಿಗಳಿದ್ದವು. ರೈಲು ಒಟ್ಟು ಒಂದು ಮೈಲಿಗಿಂತಲೂ ಹೆಚ್ಚಿಗೆ ಉದ್ದವಾಗಿದ್ದಿತು.

ಜಗತ್ತಿನ ಸಣ್ಣ ಹೊಟೇಲು.

ಪೆರಿಸಿನಲ್ಲಿ ಒಂದು ಹೊಟೇಲು. ಅದರಷ್ಟು ಸಣ್ಣ ಹೊಟೇಲು ಜಗತ್ತಿನಲ್ಲಿ ಬೇರೊಂದಿಲ್ಲ. ಅದರ ಹೆಸರು 'ಪೆಟಿಟ್ ರಿಸ್ಟೊರೆಂಟ್' ಎಂದು. ಅಲ್ಲಿ ಫಲಾಹಾರಕ್ಕೆ ಐದು ಮಾತ್ರವೇ ಕುಳಿತುಕೊಳಬಹುದು. ಒಂದು ಮೇಜು ಮಾತ್ರವೇ ಅಲ್ಲಿರುವುದು. ಗಿರಾಕಿಗಳು ಮಿತಿಮೀರಿ ಬರುವರು. ಆದರೂ ವ್ಯವಸ್ಥಾಪಕರು ಇದನ್ನು ವಿಸ್ತರಿಸಿ ದೊಡ್ಡ ಪ್ರಮಾಣದಲ್ಲಿ ವ್ಯಾಪಾರಮಾಡಲು ಒಪ್ಪುವುದಿಲ್ಲವಂತೆ.

ಜಗತ್ತಿನ ಎತ್ತರ ಗೋಪುರ.

ಬಾರ್ಸಿಲೋನಾ ಎಂಬಲ್ಲಿ ಒಂದು ಎತ್ತರವಾದ ಲೋಹದ ಗೋಪುರವನ್ನು ಕಟ್ಟುವರು. ಇದು ೧,೩೦೦ ಅಡಿ ಎತ್ತರ, ಈಗ ಜಗತ್ತಿನಲ್ಲೆಲ್ಲಾ ಅತಿ ಉನ್ನತವೆಂದು ಹೆಸರು ಹೊಂದಿರುವ ಪೆರಿಸಿನ ಎಫಲ್ ಗೋಪುರವು ೧೦೦೦ ಅಡಿ ಎತ್ತರವಾಗಿದ್ದರೂ ಈ ಹೊಸ ಗೋಪುರವು ಅದಕ್ಕಿಂತಲೂ ೩೦೦ ಅಡಿ ಹೆಚ್ಚು ಉನ್ನತವಾಗುವದು. ಈ ಗೋಪುರದಲ್ಲಿ ಹೊಟೆಲುಗಳೂ, ವಸ್ತು ಸಂಗ್ರಹಾಲಯ, ವಾಚನಾಲಯ, ಮತ್ತು ಒಂದು ವಾಯರ್‌ಲೆಸ್ ಸ್ಟೇಶನ್ ಇವಿಷ್ಟು ಇರಲ್ಪಡುವುವಂತೆ.

ಮದುವೆಯ ಮಾತುಗಳು.

ಅಮೇರಿಕದ ವಿಧವಾ ಕ್ಲಬ್ಬಿನ ಪ್ರೆಸಿಡೆಂಟರಾದ ಸೆಲ್ಡಸ್ಟೂರ್‌ನೆಂಬವನಿಗೆ ಕಳೆದ ಆರು ವರುಷಗಳಿಂದ ೧೫ ಸಾವಿರ ಮದುವೆಯ ಮಾತುಗಳು ಬಂದಿರುವುದಂತೆ. ವಿಧವಾ ವಿವಾಹ ಚಳವಳಿಯು ಅಮೇರಿಕದಲ್ಲಿ ಬಹಳವಾಗಿದೆ.

ಬೆಕ್ಕಿನ ನೂರು ಮೈಲು ಪ್ರಯಾಣ.

ಒಂದು ಕಪ್ಪು ಬೆಕ್ಕು ಸ್ಕೊಟ್ಲೆಂಡಿನ ಲಿನ್ನೆನ್ ಎಂಬಲ್ಲಿಂದ ಪ್ಲೇನ್ ಲೇನ್ ಎಂಬಲ್ಲಿಗೆ ಹೋದ ಕುಟುಂಬದವರೊಡನೆ ತಾನೂ ಹೋಯಿತು. ಅದರೆ ಪ್ಲೇನ್‌ಲೇನಿಗೆ ಹೋಗಿ ತಲಪಿದ ಮರುದಿನವೇ ಮಾಯವಾಯಿತು. ಹದಿನೊಂದು ದಿನಗಳ ನಂತರ ಅದೇ ಬೆಕ್ಕು ಲಿನ್ನನ್‌ಗೆ ಬಂದು ತಲುಪಿದ್ದಿತು. ಈ ಎರಡೂ ಪಟ್ಟಣಗಳೊಳಗಿನ ದೂರ ಸುಮಾರು ನೂರು ಮೈಲುಗಳಿಗೆ ಮಿಕ್ಕಿರುವದು. ನೂರು ಮೈಲುಗಳ ದೂರವನ್ನು ಒಂದು ಬೆಕ್ಕು ೧೧ ದಿನಗಳೊಳಗೆ ನಡೆದು ಹೋಯಿತು.

ಕೈಸರನ ಮೀಸೆ!

ಮಾಜಿ ಕೈಸರನು ಒಂದು ಸಮಯದ ಪ್ರಸಿದ್ಧಪಟ್ಟ ಮೀಸೆಗಳ ಕತೆಯು ಈಗ ಹೇಳಲ್ಪಡುತ್ತಿರುವುದು. ಒಂದು ದಿನ ಕೈಸರನು ಒಬ್ಬ ಯುವಕನ ಸೊಗಸಾದ ಮೀಸೆಗಳನ್ನು ಕಂಡು ಆ ಮೀಸೆಗಳನ್ನು ಆ ರೀತಿಯಲ್ಲಿ ಕಡಿದ ನಾಯಿಂದನಾರೆಂದು ವಿಚಾರಿಸಲು, ಹರ್ ಹೇಬಿಯೆಂಬ ಸಾಮಾನ್ಯ ನಾಯಿಂದನ ಹೆಸರು ಹೇಳಲ್ಪಟ್ಟಿತು. ಹರ್ ಹೇಬಿಯು ಕರೆಯಲ್ಪಟ್ಟನು. ಆತನು ರಾತ್ರಿ ಹಗಲು ಆಲೋಚಿಸಿ, ಕೈಸರನ ಮೀಸೆಗಳ ತುದಿಯನ್ನು ತಿರುವಿ ಚೆನ್ನಾಗಿ ಮೇಲಕ್ಕೆ ನಿಲ್ಲುವ ಹಾಗೆ ಮಾಡಿದನು.

ನೋಟೀಸು.

ಹೊಸದುರ್ಗ ಶ್ರೀ ವರದರಾಜ ವೆಂಕಟರಮಣ ದೇವಳಕ್ಕೆ ಸಮ್ಬಂಧಪಟ್ಟು ಈಗ ಹೊಸದಾಗಿ ಕಟ್ಟಲ್ಪಡುವ ಗೋಪುರದ ಕೆಲಸವು ಹಣದ ಅಭಾವದಿಂದ ಸಂಪೂರ್ತಿಯಾಗದೆ ಇರುವುದರಿಂದ ಅದನ್ನು ಪೂರ್ತಿಗೊಳಿಸುವಲ್ಲಿ ಸ್ವಜಾತಿ ಗೃಹಸ್ಥರು ತನುಮನದಿಂದ ಅರ್ಪಿಸುವ ಧನಸಹಾಯವು ಈ ಸತ್ಕಾರ್ಯ ಉತ್ತೇಜನಕ್ಕೆ ಈ ಕೆಳಗೆ ಸಹಿಹಾಕಿದವರಿಂದ ದೇವಳ ಪಕ್ಷವಾಗಿ ಹೆಚ್ಚಿನ ಆದರಣೆಯಿಂದ ಸ್ವೀಕರಿಸೋಣಾಗುವದು.

ಹೊಸದುರ್ಗ ಶ್ರೀವರದರಾಜ ವೆಂಕಟರಮಣ ದೇವಳ, ಹೊಸದುರ್ಗ, ೬-೧೧-'೨೮.	ಎಚ್. ಎನ್. ಕಾಮತ್, ಪ್ರೆಸಿಡೆಂಟ್, ದೇವಳ ಕಮ್ಮಿಟಿ, ಹೊಸದುರ್ಗ.

ಉಪ್ಪಿನಂಗಡಿ — ಈ ಹೊಳೆಗೆ ಸೇತುವೆಯನ್ನು ಕಟ್ಟಿಸಲು [illegible] ಸುಮಾರು ೩ ಲಕ್ಷ ರೂಪಾಯಿ ಎಸ್ಟಿಮೇಟು ಮಾಡಿ ಸರಕಾರಕ್ಕೆ ಕಳುಹಿಸುವರು.

ವಗ್ಗ — ವಗ್ಗವು ಬಂಟವಾಳ ಪಂಜಾಲಕಟ್ಟೆ ಪೋಸ್ಟು ಆಫೀಸಿನಿಂದ ಸುಮಾರು ೬-೭ ಮೈಲು ದೂರವಿರುತ್ತದೆ ಮತ್ತು ಎರಡು ರಸ್ತೆಗಳಿಗೂ ನಡುಮಧ್ಯ ಸ್ಥಳವಾಗಿರುತ್ತದೆ. ಇಲ್ಲಿ ದೊಡ್ಡ ವರ್ತಕರುಗಳೂ, ಆಯುರ್ವೇದಿಕ ಔಷಧಾಲಯವೂ, ದೇವಸ್ಥಾನಗಳೂ ಅಲ್ಲದೆ ಇಲಾಖೆಯವರ ಬಂಗಲೆಯೂ, ಇನ್ನೂ ಅನೇಕ ವರ್ಗದಾರರ ಮನೆಗಳೂ, ದೊಡ್ಡ ಶಾಲೆಗಳೂ, ಬಸ್ಸು ಸ್ಟೇಶನುಗಳೂ, ಸೊಸೈಟಿಗಳೂ ಇದ್ದು ಜನಸಮೂಹ ಕೂಡುವ ಸ್ಥಳವಾಗಿರುವುದರಿಂದ ಟಪ್ಪಾಲು ವ್ಯವಹಾರಗಳ ನಡೆಸುವರೇ 'ಒಂದು ಬ್ರಾಂಚು ಟಪ್ಪಾಲು ಆಫೀಸು' ಅತೀ ಅಗತ್ಯವಾಗಿರುತ್ತದೆ. ಇಲಾಖೆಯವರು ಈ ವಿಷಯವನ್ನು ಆಲೋಚಿಸಿ [illegible] ಜನರ ಸಡಿಸ್ಕಲ್ಲಿ ಅನಸವಹಿಸ ಹೆಚ್ಚಾಗಿ ಕೂಡದೆಯೂ ಅಧ್ಯಾರದ ವಹಿವಾಟು ಇತ್ಯಾದಿ ವಗೈರೆ ನಡೆಯದೆಯೂ ಇರುವ ಕಾವಳ ಕಟ್ಟೆ ಹತ್ತಿರದಲ್ಲಿ ಬ್ರಾಂಚು ಪೋಸ್ಟು ಆಫೀಸನ್ನು ಏರ್ಪಡಿಸುವದಕ್ಕಿಂತ ಸವರಿ ವಗ್ಗದಲ್ಲಿಯೇ ತೆರೆಯುವದು ಅತಿ ಅಗತ್ಯವೆಂದು ಅಭಿಪ್ರಾಯ ಪಟ್ಟಿರುವುದರಿಂದ ಇಲಾಖೆಯವರು ಬೇಗನೇ 'ವಗ್ಗದಲ್ಲಿ ಬ್ರಾಂಚು ಪೋಸ್ಟು ಆಫೀಸನ್ನು ತೆರೆದು ನಮ್ಮ ಕಷ್ಟಗಳನ್ನು ಪರಿಹರಿಸಬೇಕಾಗಿ ಅತಿ ದೈನ್ಯದಿಂದ ಪ್ರಾರ್ಥನೆ.

ಕಾರ್ಕಳ — ನವಂಬರ ೫ನೇ ತಾ. ಇಲ್ಲಿ ದೇ. ಭ. ಲಾಲಾಜಿಯವರ ದಿನವನ್ನು ಇಲ್ಲಿಯವರೂ ಶ್ರೀಪೂರ್ವಕವಾಗಿ ಆಚರಿಸಿದರು. ಬೆಳಗ್ಗೆ ೭ ಘಂಟೆಗೆ ಶ್ರೀನಿವಾಸ ಆಶ್ರಮದಿಂದ ಭಜನೆಯೊಡನೆ ಮೆರವಣಿಗೆಯು ಹೊರಟು ಸಾರ್ವಜನಿಕ ಪೇಟೆಗೂ ಹೋಗಿ ಬಂತು. ನಂತರ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಪ್ರಾರ್ಥನೆಯಾಯಿತು. ಅನಂತರ ಶ್ರೀ ಕೆ. ಪಿ. ಕಾಮತ್ ಎಮ್. ಎ. ಬಿ. ಎಲ್.ರವರು ಸದರಿಯವರ ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸಿದರು.

ಸಾಯಂಕಾಲ ಪಂಚಮರಿಗೆ ಅಕ್ಕಿಯನ್ನು ಹಂಚಿದರು.

ಇಲ್ಲಿಯ ದೀಪೋತ್ಸವವು ವಿಜೃಂಭಣೆಯಿಂದಲೇ ಜರಗಿತು. ಆ ದಿನ ಕಂಬಳದ ಕೋಣಗಳನ್ನು ಓಡಿಸುವದೆಂತ ಒಂದು ಸುಳ್ಳು ವರ್ತಮಾನವಿತ್ತು. ಆದರೆ ಆ ದಿನವಾಗಲೀ ಅನಂತರ ಈ ತನಕ ಆ ಕಂಬಳದ ಓಟ ಆಗಲಿಲ್ಲ. ಆ ಕುರಿತು ಹಳ್ಳಿಯ ಜನಗಳಲ್ಲಿ ಹಲವು ಸುಳ್ಳು ವರ್ತಮಾನಗಳು ಹಬ್ಬಿದ್ದವು.

ದೀಪೋತ್ಸವದ ಸಂಭ್ರಮದಲ್ಲಿ ಒಬ್ಬ ಹುಚ್ಚು ಹೆಂಗಸು ದೇವಸ್ಥಾನದ ಕೆರೆಯಲ್ಲಿ ಬಿದ್ದು ಪ್ರಾಣವನ್ನು ಕಳಕೊಂಡಳು. ಇವಳು ಕೆಲವು ವರುಷಗಳ ಹಿಂದೊಮ್ಮೆ ಬಾವಿಯಲ್ಲಿ ಬಿದ್ದಾಗ ಇವಳ ಗಂಡನು ಸದರಿಯವಳನ್ನು ಹಿಡಿಯುವರೆ ಹೋಗಿ ಇಬ್ಬರೂ ಬಾವಿಯಲ್ಲಿ ಬಿದ್ದು ಆಗ ಇವಳು ಬದುಕಿದಳು ಗಂಡನು ಆಗಲೇ ಮೃತಪಟ್ಟನು.

ಇಲ್ಲಿ ಕೆಲವು ದಿವಸಗಳಿಂದ ಸಾಯಂಕಾಲ ಚಲೋ ಮಳೆಬರುತ್ತದೆ

ಪುರಂಗಿಪೇಟೆ — ಈ ಸಂಘದ ಉಪಾಧ್ಯಾಯರ ಸಭೆಯ ವಾರ್ಷಿಕೋತ್ಸವವು ೧ನೇ ಶನಿವಾರ ದಿನ ಸೆಕೆಂಡರಿ ಟ್ರೈನಿಂಗ್ ಶಾಲೆಯ ಸಹಾಯಕ ಉಪಾಧ್ಯಾಯ ಶ್ರೀಯುತ ಕೆ. ಗೋಪಾಲರಾವ್ ಬಿ. ಎ. ಎಲ್. ಟಿ.ಯವರ ಅಧ್ಯಕ್ಷತೆಯಲ್ಲಿ ಜರಗಿತು. ಪೂರ್ವಾಹ್ನ ೧೦ ಘಂಟೆಗೆ ಉಪಾಹಾರವಾದ ಬಳಿಕ ಸಂಘದ ಮಹಾಸಭೆಯು ಜರಗಿತು. ಈ ಸಭೆಯಲ್ಲಿ ಅಧ್ಯಕ್ಷ ಸೆಕ್ರಿಟೆರಿಯವರ ಚುನಾವಣೆಯಾದೊಡನೆ ಉಪಾಧ್ಯಾಯರೆಲ್ಲರೂ ತಾವು ತಯಾರಿಸಿದ ಪಾಠಗಳ ಸಂಕ್ಷಿಪ್ತವಾದ ನೋಟ್ಸುಗಳನ್ನು ಇಟ್ಟುಕೊಳ್ಳಬೇಕೆಂದೂ ಈ ತನಕ ಕೆಲಸಕ್ಕೆ ಸೇರಿರುವ ಅನ್ ಟ್ರೈನ್ಡ್ ಲೋವರ್ ಎಲಿಮೆಂಟರಿ ಉಪಾಧ್ಯಾಯರನ್ನು ಇಟ್ಟುಕೊಳ್ಳುವಂತೆ ಹಾಳಿಂ ಕೊಡಬೇಕಾಗಿಯೂ ಅವರ ಗ್ರೇಂಟಿನ ದರವನ್ನು ಇತರ ಉಪಾಧ್ಯಾಯರಂತೆ ಹೆಚ್ಚಿಸಬೇಕಾಗಿ ವಿದ್ಯಾ ಇಲಾಖೆಯವರನ್ನು ಕೇಳಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು. ಈ ಜಿಲ್ಲೆಯಲ್ಲಿ ಧರ್ಮಾರ್ಥವಾಗಿ ಖಡ್ಡಾಯ ಶಿಕ್ಷಣವನ್ನು ಏರ್ಪಡಿಸುವಂತೆ ಸರಕಾರದವರನ್ನು ಕೇಳಿಕೊಳ್ಳಬೇಕಾಗಿ ಸಹಾ ನಿರ್ಣಯಿಸಲಾಯಿತು.

ವಿ ವಿ ಧ ಸ ಮಾ ಚಾ ರ ಗ ಳು.

ಅಧಿಕಾರಿಗೆ ಹದಿನೆಂಟು ವರುಷಗಳ ಶಿಕ್ಷೆ.

ಲಾಹೋರದ ಒಬ್ಬ ಬೇಂಕಿನ ಮೆನೇಜರನಾದ ಮಂಗಲಸೇನನೆಂಬವನ ಹಲವು ರೀತಿಗಳಲ್ಲಿ ಲೆಕ್ಕಪತ್ರಗಳನ್ನು ತಪ್ಪಾಗಿ ಇಟ್ಟ ಅನ್ಯಾಯವನ್ನು ಮಾಡಿದುದಕ್ಕಾಗಿ ಹದಿನೆಂಟು ವರುಷಗಳ ಶಿಕ್ಷೆಗೆ ಗುರಿಯಾದನು. ಆತನ ವಿಚಾರಣೆಯು ಕಳೆದ ಎರಡು ವರುಷಗಳಿಂದಲೂ ನಡೆಯುತ್ತಿದ್ದಿತು. ಒಂದು ಸಲವಲ್ಲ, ಐದಾರು ಸಲ ಆತನು ಇದೇ ರೀತಿ ಮಾಡಿದ್ದನು. ಮೊದಲನೆಯ ತಪ್ಪು ಲಾಲಾ ಹರಿದಾಸನೆಂಬವನು ಬೇಂಕಿನಿಂದ ೧೦ ಸಾವಿರ ರೂಪಾಯಿ ಸಾಲ ಪಡಕೊಂಡಿದ್ದನೆಂದು ಪುಸ್ತಕದಲ್ಲಿ ಬರೆದು ಹಣವನ್ನು ತಾನು ತಿಂದುಹಾಕಿದ್ದನು. ಇದಕ್ಕಾಗಿ ಆತನಿಗೆ ೪ ವರುಷಗಳ ಶಿಕ್ಷೆಯೂ ೨,೦೦೦ ರೂಪಾಯಿ ಜುರುಮಾನೆಯೂ ವಿಧಿಸೋಣಾಯಿತು. ಎರಡನೆಯ ಸಲ ೮೫,೦೦೦ ರೂಪಾಯಿಗಳನ್ನು ಇರು ಜನರ ಹೆಸರಿನಲ್ಲಿ ಹಂಚಿಹಾಕಿದುದರಿಂದ ಎರಡನೆಯ ಸಲವೂ ಅಂತಹ ಶಿಕ್ಷೆಯು ವಿಧಿಸೋಣಾಯಿತು. ಮೂರನೆಯ ಸಲ ಆತನು ಬೇಂಕಿನಿಂದ ತನಗೆ ೩ ಲಕ್ಷ ರೂಪಾಯಿ ಸಾಲ ಬರೆದು, ಹಿಂದೂಸ್ಥಾನ ಎಸ್ಯುರೆನ್ಸ್ ಸೊಸೈಟಿಯಲ್ಲಿ ೨ ಲಕ್ಷದ ಪಾಲುಗಳನ್ನು ಪಡೆದು ೬೦ ಸಾವಿರವನ್ನು ತನ್ನ ಲೆಕ್ಕಕ್ಕೆ ಜಮಾ ಬರೆದು ೩೦ ಸಾವಿರವನ್ನು ತನ್ನ ಹೆಂಡತಿಯ ಹೆಸರಿನಲ್ಲಿ ಕಾಯಂ ಠೇವಾವಾಗಿ ಬರೆದು, ಅವುಗಳ ಜಾಮೀನಿನ ಮೇಲೆ ಪುನಃ ೫೦,೦೦೦ ರೂಪಾಯಿ ಸಾಲ ತೆಗೆದನು. ಇದಕ್ಕಾಗಿ ಆತನು ೬ ವರುಷಗಳ ಶಿಕ್ಷೆಗೂ ೧೫ ಸಾವಿರ ರೂಪಾಯಿ ಜುರುಮಾನೆಗೂ ಗುರಿಯಾದನು. ನಾಲ್ಕನೆಯ ಸಲ [illegible] ಸಾಹುಕಾರರಿಗೆ ಒಂದು ಲಕ್ಷ ಮತ್ತು ಗುಜರಾತಿನ ಸಾಹುಕಾರರಿಗೆ ಅರ್ಧ ಲಕ್ಷ ಎಂದು ಸಾಲ ಬರೆದು ಲೆಕ್ಕವನ್ನು ತಪ್ಪು ಮಾಡಿದುದಕ್ಕಾಗಿ [illegible] ವರುಷಗಳ ಶಿಕ್ಷೆಗೂ ೫,೦೦೦ ರೂಪಾಯಿ ಜುರುಮಾನೆಗೂ ಗುರಿಯಾದನು. ಒಟ್ಟಾರೆ ಆತನಿಗೆ ೧೮ ವರುಷಗಳ ಶಿಕ್ಷೆಯೂ ೨೨,೦೦೦ ರೂಪಾಯಿ ಜುರುಮಾನೆಯೂ ವಿಧಿಸಲ್ಪಟ್ಟ ಹಾಗಾಯಿತು.

ಸರ್ ಜಗದೀಶ ಚಂದ್ರಬೋಸರ ಜನ ದಿನ.

ವನಸ್ಪತಿಗಳ ಕುರಿತಾಗಿ ಅತ್ಯದ್ಭುತವಾದ ಹಲ ಶೋಧಗಳನ್ನು ನಡೆಸಿ ಪಾಶ್ಚಾತ್ಯರನ್ನು ತಲೆದೂಗಿಸಿ ಕೀರ್ತಿ ಪಡೆದಿರುವ ಸರ್ ಜಗದೀಶ ಚಂದ್ರಬೋಸರವರ ೭೦ನೆಯ ಜನ್ಮದಿನವು ಕಳೆದ ಶನಿವಾರ ಕಲಕತ್ತದ ಬೋಸ್ ಇನ್ಸ್ಟಿಟ್ಯುಟಿನಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಈ ಸಮಾರಂಭಕ್ಕೆ ವಿದೇಶದ ಪ್ರತಿನಿಧಿಗಳು, ಸರಕಾರಿ ಮಂತ್ರಿಗಳು, ಪ್ರಸಿದ್ಧ ಪಟ್ಟ ಮಹನೀಯರು ಬಂದು ನೆರೆದು ಬಹಳ ಉತ್ಸಾಹದಿಂದ ಕಾರ್ತಿದ್ದರು.

ವಿಯನ್ನಾದಿಂದ ಕಲಕತ್ತಕ್ಕೆ ಬಂದ ಪ್ರಸಿದ್ಧ ವಿಜ್ಞಾನ ಶಾಸ್ತ್ರಜ್ಞನಾದ ಪ್ರೊಫೆಸರ್ ಮೊಲಿಚನೆಂಬವನು, "ನಾನು ಬಂದುದರ ಉದ್ದೇಶಕ್ಕಿಂತಲೂ ಹೆಚ್ಚಿನ ಸಂಗತಿಗಳನ್ನು ಇಲ್ಲಿ ಸ್ವತಹ ನೋಡಿದೆನು. ಇಂತಹ ಸಂಸ್ಥೆಯ ಸ್ಥಾಪಿತನನ್ನು ಕಾಣುವದು ನನ್ನ ಮಹತ್ಪುಣ್ಯೋದಯವೆನ್ನಲೇಬೇಕು. ಮೂಕವಾದ ವನಸ್ಪತಿಗಳನ್ನು ಸಜೀವಗಳನ್ನಾಗಿ ಮಾಡಿ ಅವುಗಳ ವಿಷಯವಾದ ಅಸಂಖ್ಯಾತ ಶೋಧಗಳನ್ನು ನಡೆಸಿ ವಿಶ್ವವನ್ನೇ ಮುಗ್ಧಗೊಳಿಸಿಬಿಟ್ಟ ಸರ್ ಜಗದೀಶ ಚಂದ್ರರು ಸಾಮಾನ್ಯ ಪುರುಷರಲ್ಲ" ಎಂದು ಮುಂತಾಗಿ ಅವರನ್ನು ಹೊಗಳಿ ಮಾತನಾಡಿದರು.

ಈ ಸಂದರ್ಭದಲ್ಲಿ ಸರ್ ಜಗದೀಶರವರೇ ಮುಂದಕ್ಕೆ ಬಂದು ತನ್ನ ಶೋಧಗಳ ವಿಷಯವಾಗಿ ಕೆಲವು ಸಂಗತಿಗಳನ್ನು ವಿವರಿಸಿದರು. ಅವರ ವಿವರಣೆಯನ್ನು ಕೇಳಿ ಕೂಡಿದವರು ಒಂದೇ ಸಮಯದಲ್ಲಿ ಆಶ್ಚರ್ಯವನ್ನೂ, ಸಂತೋಷವನ್ನೂ ಹೊಂದಿ ಸರ್ ಜಗದೀಶರವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಹೊರಟು ಹೋದರು.

ಮಧ್ಯಪ್ರಾಂತದ ಸ್ತ್ರೀಯರ ಸಮ್ಮೇಳನ.

ಮಧ್ಯಪ್ರಾಂತದ ಸ್ತ್ರೀಯರ ಎರಡನೇ ಸಮ್ಮೇಳನವು ನಾಗಪುರದಲ್ಲಿ ಜರಗಿತು. ಇದನ್ನು ತೆರೆಯುವಾಗ ಲೇಡಿ ಬಟ್ಲರಳು ಸ್ತ್ರೀ ವಿದ್ಯಾಭ್ಯಾಸಕ್ಕೆ ಮೊದಲಿನಿಂದಲೂ ಪುರುಷರ ಪ್ರೋತ್ಸಾಹವಿದೆಯೆಂಬುದು ಸಂತೋಷದ ಸಂಗತಿಯಾಗಿದೆಯೆಂದು ಹೇಳಿದಳು. ಈ ಪರಿಷದಕ್ಕಾಗಿ ಮಧ್ಯಪ್ರಾಂತದ ಉತ್ತರ ಭಾಗದಿಂದಲೂ ಹಿಂದೀ ಭಾಗದಿಂದಲೂ ಬಂದ ಪ್ರತಿನಿಧಿಗಳನ್ನು ಅವರು ಅಭಿನಂದಿಸಿದರು. ಅಲ್ಲದೆ ಸ್ತ್ರೀಯರು ವಿದ್ಯೆಯನ್ನು ಹೆಚ್ಚಿಸುತ್ತಾ ಇದ್ದು ಯಾವ ವಿದ್ಯಾಸಂಸ್ಥೆಯಲ್ಲಿಯೂ ಉಪಾಧ್ಯಾಯಿನಿಯರೂ ಚಾಲಕರೂ ಆಗಲು ಯೋಗ್ಯತೆಯನ್ನು ಪಡೆಯುವಂತಾಗಬೇಕೆಂದರು.

ಅಧ್ಯಕ್ಷರಾದ ಮಿಸೆಸ್ ಬೈರಾಮ್ ಜಿಯವರು ಸ್ತ್ರೀ ವಿದ್ಯಾಭ್ಯಾಸದ ಕುರಿತು ಪುರುಷರಿಂದ ನಿರ್ಮಿತವಾದ ಕಾನೂನುಗಳನ್ನು ಸುಧಾರಿಸುವದೂ ಬೇಡವಾದ ಕಾನೂನುಗಳನ್ನು ತೆಗೆದುಹಾಕುವದೂ ಈ ಸಮ್ಮೇಳನದ ಮುಖ್ಯ ಉದ್ದೇಶವೆಂದು ವಿವರಿಸಿದರು. ಹೆಂಗಸರು ಸ್ವತಃ ವಿಚಾರಿಸಿ ಯೋಗ್ಯವೆಂದು ಕಂಡುಬರುವ ಪಥವನ್ನನುಸರಿಸಬೇಕಲ್ಲದೆ ಹಿರಿಯರ ಕಾನೂನುಗಳೆಂದು ಅವುಗಳಿಗೆ ಮಾನ್ಯತೆಯನ್ನು ಕೊಟ್ಟು ಮೂಢರಾಗಿರಲಾಗದೆಂದೂ ಹೇಳಿದರು. ಬಾಲ್ಯ ವಿವಾಹವನ್ನು ತಡೆಗಟ್ಟಬೇಕು. ಎಳೆ ಪ್ರಾಯದ ಹುಡುಗ ಹುಡುಗಿಯರು ಸಂಸಾರಮಾಡುವದು ಬಹಳ ಅನ್ಯಾಯವೇ ಸರಿ ಎಂದು ಮೊದಲಾಗಿ ಅಧ್ಯಕ್ಷರು ಸಕಾರಣವಾಗಿ ವಿವರಿಸಿದರು. ಲಾಲಾಜಿಯವರ ಅಕಾಲ ನಿಧನದ ಸಲುವಾಗಿ ದುಃಖ ಪ್ರದರ್ಶನವಾಗಿ ಪ್ರಾಥಮಿಕ ವಿದ್ಯಾಭ್ಯಾಸವು ಕಡ್ಡಾಯವಾಗಿಯೂ ಧರ್ಮಾರ್ಥವಾಗಿಯೂ ಕಲಿಸಲ್ಪಡಬೇಕೆಂದೂ, ಮದುವೆಯ ಪ್ರಾಯವನ್ನು ಹುಡುಗಿಯರಿಗೆ ೧೬, ಹುಡುಗರಿಗೆ ೨೧ ಹೀಗೆ ಮಾಡಬೇಕೆಂದೂ ಮುಖ್ಯ ನಿರ್ಣಯಗಳಾದವು.

ಅಮೇರಿಕನರ ನಾಗರಿಕತೆ.

ಹಿಂದೂಸ್ಥಾನವು ಮೂಢ ಜನರಿಂದಲೂ ಅನಾಗರಿಕರಿಂದಲೂ ಕೂಡಿದ ಸ್ಥಳವೆಂದು ಮಿಸ್ ಮೆಯೋಳು ಪ್ರಕಟಿಸಿರುವಳಾದರೂ ಅವಳದೇ ದೇಶವಾದ ಅಮೇರಿಕದ ಚಿಕಾಗೊ ಪಟ್ಟಣದಲ್ಲಿ ನಡೆಯುತ್ತಿರುವ ಅನಾಗರಿಕ ಕಾರ್ಯಗಳನ್ನು ನೋಡಿದುದಾದರೆ, ಹಿಂದೂಸ್ಥಾನದ ಜನರೇ ಅಮೇರಿಕನರಿಗಿಂತ ವಿಶೇಷ ನಾಗರಿಕರೆನ್ನಬೇಕಾಗುವದು. ಜನರನ್ನು ವಧಿಸಲು ಅಲ್ಲಿ ಈಗ ಕ್ರೂರವಾದ ಉಪಾಯಗಳು ಕೈಕೊಳ್ಳಲ್ಪಡುತ್ತಿವೆ. ಗುಂಡು ಹಾಕಿ ಕೊಲ್ಲುವ ಬದಲು, ವಿಷಕೊಡುವದು, ನೇಣುಹಾಕುವದು, ಕಷ್ಟ ಕೊಟ್ಟು ಮೆಲ್ಲಮೆಲ್ಲನೆ ಕೊಲ್ಲುವದು ಇವೇ ಅಲ್ಲಿ ಪ್ರಚಾರಕ್ಕೆ ಬಂದಿವೆ.

ಚಿಕಾಗೊ ಪಟ್ಟಣದಲ್ಲಿ ನೇಣು ಹಾಕಲ್ಪಟ್ಟ ಒಬ್ಬನ ಮೃತದೇಹವು ಪೋಲೀಸರಿಗೆ ದೊರಕಿತು. ಆತನ ಕೊರಳಿಗೆ ಪಾಶವನ್ನು ಬಿಗಿದು, ಪಾಶದ ಹಗ್ಗದ ಇನ್ನೊಂದು ತುದಿಯನ್ನು ಗಟ್ಟಿಯಾಗಿ ಒಂದು ಕಂಬಕ್ಕೆ ಕಟ್ಟಿದ್ದರು. ಅಡಿಯ ನೆಲದಲ್ಲಿ ರಕ್ತ ಚಿಹ್ನೆಗಳನ್ನು ನೋಡಲಾಗಿ ಅಲ್ಲಿ ಹಲವರೊಳಗೆ ಜಗಳವಾಗಿತ್ತೆಂದು ವಿಶದವಾಗುತ್ತಿತ್ತು. ಅಲ್ಲದೆ ಮೋಟಾರಕಾರಿನ ಚಕ್ರದ ಗುರುತುಗಳನ್ನು ನೋಡಿದರಿಂದ ಹಲವರು ಒಬ್ಬನನ್ನು ಈ ರೀತಿ ನೇಣುಹಾಕಿ ಪಲಾಯನ ಮಾಡಿದ್ದಾರೆಂಬುದೂ ಪ್ರಕಟವಾಗುತ್ತಿತ್ತು.

ಇದು ಮಾತ್ರವಲ್ಲದೆ ವಿಷಪ್ರಯೋಗದಿಂದ ಕೊಲ್ಲುವದೂ ಇದೆ. ಇನ್ನು ಬೇರೆ ಇಬ್ಬರು ಒಬ್ಬ ನಿಗ್ರೋವನ್ನು ಸಜೀವವಾಗಿ ಸುಟ್ಟು ಹಾಕಲು ಪ್ರಯತ್ನಿಸಿ ಕೊನೆಗೆ ಪೋಲೀಸರ ಕೈಗೆ ಸಿಕ್ಕಿಬಿದ್ದರು. ನಿಗ್ರೋವು ತನ್ನ ಕತೆಯನ್ನು ಹೇಳುವದು: "ಅವರು ನನ್ನನ್ನು ಒಂದು ಮನೆಗೆ ಕರೆದೊಯ್ದರು. ಅವರಿಗೆ ಬೇಕಾದ ಇಸ್ಕಿತರರು ಎಲ್ಲಿ ಅಡಗಿಸಲ್ಪಟ್ಟಿರುವರೆಂದು ನನ್ನನ್ನು ಕೇಳಿದರು. ನಾನು ಗೊತ್ತಿಲ್ಲವೆಂದು ಹೇಳಿದೆನು. ಅವರಾಗ ಕೋಪಾವೇಶದಿಂದ ಹುಚ್ಚರಾಗಿ ಒಂದು ಹಾರೆಯನ್ನು ಕೆಂಪಗೆ ಕಾಯಿಸಿ, ನನ್ನ ಮುಖಕ್ಕೂ, ಕುತ್ತಿಗೆಗೂ ಸುಟ್ಟರು. ತದನಂತರ ನನ್ನನ್ನು ಅವರು ಸಿಗರೇಟುಗಳಿಂದ ಸುಡಲು ಪ್ರಯತ್ನಿಸಿ, ಕಟ್ಟಕಡೆಗೆ ಬಿಟ್ಟುಬಿಟ್ಟರು." ಇದಲ್ಲವೇ ಅಮೇರಿಕನರ ನಾಗರಿಕತೆಯ ಪರಮಾವಧಿ.

ಆಶ್ಚರ್ಯದ ಚಿಕ್ಕ ವಾರ್ತೆಗಳು!

ಹೂವುಗಳಲ್ಲಿ ಕೋಪಿಷ್ಟೆಯು!

ಕೆನಡಾದಲ್ಲಿ ಒಬ್ಬನು ಒಂದು ಗುಲಾಬಿ ಹೂವನ್ನು ಹುಟ್ಟಿಸಲು ಕಲಿತಿರುವನು. ಅಮೇರಿಕೆಯಲ್ಲಿ ಬೇರೆ ಯಾರೂ ಅಂತಹ ಹೂವು ಬಿಡುವ ಗಿಡಗಳನ್ನು ಸಾಕಬಾರದೆಂದು ಆತನು ಅಪೇಕ್ಷಿಸುವಂತೆ ಸೆನೇಟಿನವರು ಆತನ ಅಭಿಪ್ರಾಯವನ್ನು ಸಮರ್ಥಿಸಿರುವರು.

ಹಾಡುವ ಇಲಿ!

ನ್ಯೂಯೋರ್ಕಿನ ಪ್ರಾಣಿ ಸಂಗ್ರಹಾಲಯದಲ್ಲಿ ಹಾಡುವ ಇಲಿಯೊಂದಿದೆ. ಅದು ಹಾಡಬೇಕೆಂದೇ ಹಾಡುವದಲ್ಲ. ಅದಕ್ಕೆ ಶ್ವಾಸಕೋಶಗಳಲ್ಲಿ ಏನೋ ಕೊರತೆಯಿದೆ. ಆಗಾಗ ಅದು ಪ್ರಾರಂಭವಾಗುವದು. ಆಗ ಆ ಬಡ ಇಲಿಯು ಹಾಡುವದು, ವಿಸಲ್‌ಮಾಡುವದು, ಕಾಲಕ್ಕೆ ಸರಿಯಾಗಿ ಕುಣಿಯುವುದು. ನೋಡುವವರಿಗೆ ಅದು ಬೇಕೆಂದೇ ಹಾಡುವುದೆಂದು ತೋರುವುದು.

ಒಂದು ಮೈಲು ಉದ್ದದ ರೈಲು.

ಕೆನಡಾದಲ್ಲಿ ಧಾನ್ಯಗಳನ್ನು ತುಂಬಿಸಿ ಒಂದು ರೈಲು ಬಂಡಿಯು ಮೊನ್ನೆ ಕಾನೆ ರೆಜಿನಾ ಎಂಬಲ್ಲಿಂದ ವಿನ್ನಿಪೆಗ್ಗಿನ ವರೆಗೆ ಪ್ರಯಾಣವನ್ನು ಬೆಳಸಿತು. ಈ ರೈಲಿನಲ್ಲಿ ೧೩೫ ಗಾಡಿಗಳಿದ್ದುವು. ರೈಲು ಒಟ್ಟು ಒಂದು ಮೈಲಿಗಿಂತಲೂ ಹೆಚ್ಚಿಗೆ ಉದ್ದವಾಗಿದ್ದಿತು.

ಜಗತ್ತಿನ ಸಣ್ಣ ಹೊಟೇಲು.

ಪೆರಿಸಿನಲ್ಲಿ ಒಂದು ಹೊಟೇಲು. ಅದರಷ್ಟು ಸಣ್ಣ ಹೊಟೇಲು ಜಗತ್ತಿನಲ್ಲಿ ಬೇರೊಂದಿಲ್ಲ. ಅದರ ಹೆಸರು 'ಪೆಟಿಟ್ ರಿಸ್ಟೊರೆಂಟ್' ಎಂದು. ಅಲ್ಲಿ ಫಲಾಹಾರಕ್ಕೆ ಐದು ಮಾತ್ರವೇ ಕುಳಿತುಕೊಳ್ಳಬಹುದು. ಒಂದು ಮೇಜು ಮಾತ್ರವೇ ಅಲ್ಲಿರುವುದು. ಗಿರಾಕಿಗಳು ಮಿತಿಮೀರಿ ಬರುವರು. ಆದರೂ ವ್ಯವಸ್ಥಾಪಕರು ಇದನ್ನು ವಿಸ್ತರಿಸಿ ದೊಡ್ಡ ಪ್ರಮಾಣದಲ್ಲಿ ವ್ಯಾಪಾರಮಾಡಲು ಒಪ್ಪುವುದಿಲ್ಲವಂತೆ.

ಜಗತ್ತಿನ ಎತ್ತರ ಗೋಪುರ.

ಬಾರ್ಸಿಲೋನಾ ಎಂಬಲ್ಲಿ ಒಂದು ಎತ್ತರವಾದ ಲೋಹದ ಗೋಪುರವನ್ನು ಕಟ್ಟುವರು. ಇದು ೧,೪೦೦ ಅಡಿ ಎತ್ತರ. ಈಗ ಜಗತ್ತಿನಲ್ಲೆಲ್ಲಾ ಅತಿ ಉನ್ನತವೆಂದು ಹೆಸರು ಹೊಂದಿರುವ ಪೆರಿಸಿನ ಐಫೆಲ್ ಗೋಪುರವು ೧೦೦೦ ಅಡಿ ಎತ್ತರವಾಗಿದ್ದರೂ ಈ ಹೊಸ ಗೋಪುರವು ಅದಕ್ಕಿಂತಲೂ ೪೦೦ ಅಡಿ ಹೆಚ್ಚು ಉನ್ನತವಾಗುವದು. ಈ ಗೋಪುರದಲ್ಲಿ ಹೊಟೇಲುಗಳು, ವಸ್ತು ಸಂಗ್ರಹಾಲಯ, ವಾಚನಾಲಯ, ಮತ್ತು ಒಂದು ವಾಯರ್‌ಲೆಸ್ ಸ್ಟೇಶನ್ ಇವಿಷ್ಟು ಇರಲಿರುವುವಂತೆ.

ಮದುವೆಯ ಮಾತುಗಳು.

ಅಮೇರಿಕದ ವಿಧವಾ ಕ್ಲಬ್ಬಿನ ಪ್ರೆಸಿಡೆಂಟರಾದ ನೆಲ್ಲಿ ಸ್ಟೂರ್‌ನೆಂಬವಳಿಗೆ ಕಳೆದ ಆರು ವರುಷಗಳಿಂದ ೧೫ ಸಾವಿರ ಮದುವೆಯ ಮಾತುಗಳು ಬಂದಿರುವುವಂತೆ. ವಿಧವಾ ವಿವಾಹ ಚಳವಳಿ ಅಮೇರಿಕದಲ್ಲಿ ಬಹಳವಾಗಿದೆ.

ಬೆಕ್ಕಿನ ನೂರು ಮೈಲು ಪ್ರಯಾಣ.

ಒಂದು ಕಪ್ಪು ಬೆಕ್ಕು ಸ್ಕೊಟ್ಲೆಂಡಿನ ಲಿನ್ನೆತ್ ಎಂಬಲ್ಲಿಂದ ಸ್ಟ್ರೇನ್‌ರೇರ್ ಎಂಬಲ್ಲಿಗೆ ಹೋದ ಕುಟುಂಬದವರೊಡನೆ ತಾನೂ ಹೋಯಿತು. ಆದರೆ ಸ್ಟ್ರೇನರೇರಿಗೆ ಹೋಗಿ ತಲುಪಿದ ಮರುದಿನವೇ ಮಾಯವಾಯಿತು. ಹದಿನೊಂದು ದಿನಗಳ ನಂತರ ಅದೇ ಬೆಕ್ಕು ಲಿನ್ನೆತ್‌ಗೆ ಬಂದು ತಲುಪಿತು. ಈ ಎರಡೂ ಪಟ್ಟಣಗಳೊಳಗಿನ ದಾರಿ ಸುಮಾರು ನೂರು ಮೈಲುಗಳಿಗೆ ವಿಸ್ತರಿಸಿದೆ. ನೂರು ಮೈಲುಗಳ ದೂರವನ್ನು ಒಂದು ಬೆಕ್ಕು ೧೧ ದಿನಗಳೊಳಗೆ ನಡೆದು ಹೋಯಿತು.

ಕೈಸರನ ಮೀಸೆ!

ಮಾಜಿ ಕೈಸರನ ಒಂದು ಸಮಯದ ಪ್ರಸಿದ್ಧವಾದ ಮೀಸೆಗಳ ಕತೆಯು ಈಗ ಹೇಳಲ್ಪಡುತ್ತಿರುವದು. ಒಂದು ದಿನ ಕೈಸರನು ಒಬ್ಬ ಯುವಕನ ಸೊಗಸಾದ ಮೀಸೆಗಳನ್ನು ಕಂಡು ಆ ಮೀಸೆಗಳನ್ನು ಆ ರೀತಿಯಲ್ಲಿ ಕಟ್ಟಿದ ನಾಯಿಂದನಾರೆಂದು ವಿಚಾರಿಸಲು, ಹರ್ ಹೇಬಿಯೆಂಬ ಸಾಮಾನ್ಯ ನಾಯಿಂದನ ಹೆಸರು ಹೇಳಲ್ಪಟ್ಟಿತು. ಹರ್ ಹೇಬಿಯು ಕರೆಯಲ್ಪಟ್ಟನು. ಆತನು ರಾತ್ರಿ ಹಗಲು ಆಲೋಚಿಸಿ, ಕೈಸರನ ಮೀಸೆಗಳ ತುದಿಯನ್ನು ತಿರುವಿ ಚೆನ್ನಾಗಿ ಮೇಲಕ್ಕೆ ನಿಲ್ಲುವ ಹಾಗೆ ಮಾಡಿದನು.

ನೋಟೀಸು.

ಹೊಸದುರ್ಗ ಶ್ರೀ ವರದರಾಜ ವೆಂಕಟರಮಣ ದೇವಳಕ್ಕೆ ಸಮ್ಬಂಧಪಟ್ಟು ಈಗ ಹೊಸದಾಗಿ ಕಟ್ಟಲ್ಪಡುವ ಗೋಪುರದ ಕೆಲಸವು ಹಣದ ಅಭಾವದಿಂದ ಸಂಪೂರ್ತಿಯಾಗದೆ ಇರುವುದರಿಂದ ಅದನ್ನು ಪೂರ್ತಿಗೊಳಿಸುವಲ್ಲಿ ಸ್ವಜಾತಿ ಗೃಹಸ್ಥರು ತನುಮನದಿಂದ ಅರ್ಪಿಸುವ ಧನಸಹಾಯವು ಈ ಸತ್ಕಾರ್ಯ ಉತ್ತೇಜನಕ್ಕೆ ಈ ಕೆಳಗೆ ಸಹಿಹಾಕಿದವರಿಂದ ದೇವಳ ಪಕ್ಷವಾಗಿ ಹೆಚ್ಚಿನ ಆದರಣೆಯಿಂದ ಸ್ವೀಕರಿಸೋಣಾಗುವದು.

ಹೊಸದುರ್ಗ ಶ್ರೀವರದರಾಜ ವೆಂಕಟರಮಣ ದೇವಳ, ಹೊಸದುರ್ಗ, ೬-೧೧-'೨೮.

ಎಚ್. ಎನ್. ಕಾಮತ್,
ಪ್ರೆಸಿಡೆಂಟ್,
ದೇವಳ ಕಮಿಟಿ, ಹೊಸದುರ್ಗ.

Chikmagalur Public Conveyance Motor Service.

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು.

ಟೆಲಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಬಹುಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟ್ಯಾಮುಗಳ ವಿವರ.

(2) ಕಡೂರಿನಿಂದ ಬೆಳಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ. ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜ್ರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿ॥ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟ್ಯಾಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನ್ನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜ್ರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಡಲ್ಪಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರೆ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರೆ 10 ಘಂಟೆಗೆ ಕಡೂರಿಗೆ ಸೇರಿ ಬೆಂಗಳೂರು ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಫ್ಯೂರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊ ಪ್ರೈಟ ರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ

ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಲಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕರಾವಳಿ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ, ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.

'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.

ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.

ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S.K. Mangalore.

ದಿ ಕೆನರಾ ನರ್ಸರಿ.

ಕಸಿ ಮಾವಿನ ಸಸಿಗಳು [illegible]

ನಮ್ಮಲ್ಲಿ ಈ ಜಿಲ್ಲೆಯ ಶುದ್ಧ ಮಾವಿನ ಸಸಿಗಳೂ, ಸಪೋಟಾ, ಸೀಬೆ, [illegible] ದಾಳಿಂಬೆ, ಪನ್ನೇರಳೆ ಮುಂತಾದ [illegible] ಗಿಡಗಳು ನಮ್ಮಲ್ಲಿಯೇ ತಯಾರಿಸಲ್ಪಟ್ಟಿರುವ [illegible] ಎಲ್ಲದೆ ಚೆನ್ನಾಗಿ ಫಲಬಿಡುವವು. [illegible] ಗಳು ಕರಾವಳಿ ಹವೆಗೂ ಮಣ್ಣಿಗೂ [illegible] ಬಿಡುವುದಿಲ್ಲ. ಕ್ರಯ ಪಟ್ಟಿಗೆ [illegible] ಬರೆಯಿರಿ. ಗಿಡಗಳು ಮಂಗಳೂರು [illegible] ಯಾಜಿಯವರಲ್ಲಿ ದೊರೆಯುವವು.

ಕೆ. ಮಧ್ವಣ್ಣ ಶೆಟ್ಟಿ,
ದಿ. ಕೆನರಾ ನರ್ಸರಿ,
ರಿಸರ್ಚ್ ಗಾರ್ಡನ್ಸ್, [illegible] ದ.ಕ.

C/o [illegible]

131028

THE BANKING & INDUSTRIAL INDSYCATE LTD.,

BOMBAY.

9250/—Cash loans granted without interest for 10 years in 1928. Concession enlistment commences from 1st November for distributing loans of Rs. 5000/- on 31st January 1929. Paid Agents Wanted. For rules and list of loans granted, enclose two annas stamps.

BANKING & INDUSTRIAL SYNDICATE, Ltd.
Bombay 2.

Diamonds. ವಜ್ರಗಳು **Diamonds.**

BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ಯೋಜಂಟ್ಸಾಗಿ, ಯಂಟವರ್ಪಿನಿಂದ ತರಿಸುವ ವಜ್ರಗಳು — ಮಾರಾಟಕ್ಕಿವೆ. —

ಬೋಳ ಮಂಗೇಶ ರಾವು.
ಮಂಗಳೂರು

ಮಲೇರಿಯಾನ

ಸರ್ವಜ್ವರಸಂಹಾರಿಣಿ

ಕ್ರಯ 8 ಔನ್ಸಿಗೆ 1-8-0 ½ ಡಜನಿಗೆ 8-8-0 ಡಜನಿಗೆ 16-8-0

ದಿಟನಂಬು! ಪುಟ್ಟನಾಗು!! ನೆಟ್ಟಗಾಗು!!

ಯುವಕನೇ ನಿನ್ನ ಬೆಲೆ ಯಾವದರಲ್ಲಿದೆ? — ಸೌಮ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ?

ಆರೋಗ್ಯವಿಲ್ಲವೇ? ದೇಹವು ಕ್ಷೀಣವಾಗಿದೆಯೋ? ಮನಸಂತೋಷ ತಪ್ಪಿದೆಯೋ? ಜ್ಞಾಪಕ ಶಕ್ತಿ ಕುಂದಿರುವುದೇ? ಮುಂಗೋಪ ಜಾಸ್ತಿ ಇದೆಯೋ? ಆಲಸ್ಯ ತುಂಬಿರುವದೇ? ಚುರುಕು ಚಟುವಟಿಕೆ ಇಲ್ಲವೇ? ವ್ಯಾಕುಲತೆಯಿಂದ ಮರುಗುತ್ತೀಯೋ? ಸುಖವಾಗಬೇಕೆಂಬ ಇಚ್ಛೆ ಇದೆಯೇ? ಹಾಗಾದರೆ ಇಗೋ ಬಹು ಗುಣಕರವಾದ ಕಂಪೌಂಡ್ ಸಿರಪು ಸಾಲಸಪರಿಲ್ಲವೆಂಬ ಅಮೃತವನ್ನೇ ಸೇವಿಸು. ಆವಾಗ ಮೇಲಿನ ಅವಲಕ್ಷಣಗಳು ತೀರ ಗುಣವಾಗಿ ಬಹು ಆರೋಗ್ಯವೂ ಶರೀರ ಪುಷ್ಟಿಯೂ ಉಂಟಾಗಿ ನಿನ್ನ ಬೆಲೆ ಆರೋಗ್ಯದಲ್ಲಿಯೇ ಇದೆಯೆಂದು ನಿನಗೇನೇ ತೋರಿ ಬರುವುದು.

ಕ್ರಯ 8 ಔನ್ಸ್ ಸೀಸೆಗೆ ರೂ. 3—8—0.

ಯುವತಿಯೇ ನಿನ್ನ ಸುಂದರವಾದ ಉಡುಪು ಯಾವುದು? ಅಚ್ಚುಗಟ್ಟಾಗಿ ಹೊಳೆವುವ ನಿನ್ನ ಆರೋಗ್ಯದ ದೇಹವಲ್ಲವೆ?

ದೇಹವು ಅಚ್ಚುಗಟ್ಟಾಗಿಲ್ಲವೆ? ರೂಪಕ್ಕೆ ಕಳೆ ಬಂತೇ? ಮುಖ ಕಳೆಗುಂದಿದೆಯೋ? ಕೈಕಾಲು ಬಚ್ಚುವದೇ? ಎದೆ ನಡುಗು, ಆಯಾಸ ಉಂಟೋ? ರಕ್ತ ಛಾಯೆ ಇಲ್ಲವೇ? ಅಜೀರ್ಣವಿದೆಯೋ? ಸೊಂಟ ನೋವು ಉಂಟೋ? ತಲೆಕೂದಲು ಉದುರುವುದೇ? ತಲೆತಿರುಗುವಿಕೆ ಉಂಟೋ? ದೃಷ್ಟಿ ಸರಿಯಿಲ್ಲವೆ? ಕಣ್ಣಿನ ಅಸ್ತವ್ಯಸ್ತವಾಗಿದೆಯೋ? ಆವಾಗ ಉಡುಪು ಜಾಸ್ತಿಯೋ ಇವರಿಂದ ಥಳುಕಿನ ಹೊಂದಲು ಇಚ್ಛೆ ಇದೆಯೋ? ಹಾಗಾದರೆ ಗುಣ ಸೇವಕಿಯಂತಿರುವ ಕಂಪೌಂಡ್ ಸಿರಪು [illegible] ಅಂಗೀಕರಿಸು. ಈಕೆ ಗುಪ್ತಹಿಂಸೆಯಿಂದ ನಿನ್ನನ್ನು ಬಿಡಿಸಿ ಶರೀರ ಪುಷ್ಟಿಯಾಗುವಂತೆಯೂ ಮುಖಕಲೆಗಳು ಹೊಳೆಯುವಂತೆಯೂ ದೇಹಕ್ಕೆ ಬಲಕಳೆ ಸಿಗುವಂತೆಯೂ ಖಂಡಿತ ಸಹಾಯವಾಗುವಳು. ಆವಾಗ ಆರೋಗ್ಯ ಪೂರ್ಣ ದೇಹವೇ ಹೊಳೆಸುವ ನಿನ್ನ ಸುಂದರವಾದ [illegible] ನಿನಗೇನೇ ಖಚಿತವಾಗುವದು.

ಕ್ರಯ 8 ಔನ್ಸಿನ ಬಾಟ್ಲಿಗೆ ರೂ. 3—8—0.

ಕೆಟಲಾಗಿಗೆ ಬರೆಯಿರಿ —

ಮಲೇರಿಯಾನ ಕಂಪೆನಿ,
[illegible] ದ. ಕ.

22628

[illegible] ಭಾಷೆಯಲ್ಲಿ ಕನ್ನಡಿಗರ ಬಗ್ಗೆ

THE MOTORIST.

ಮೋಟರಿಸ್ಟ



ಸಂಪಾದಕರು—ಶ್ರೀ. ವಿ. ಎಸ್. ಕುಡುವಾ,
ವರ್ಕ್ಸ್‌ಮೆನೇಜರ, ಸಿ. ಪಿ. ಸಿ. ಕಂಪೆನಿ, ಲಿಮಿಟೆಡ್, ಮಂಗಳೂರು.

ಮೆನೇಜರ್—ಶ್ರೀ. ವಿ. ಕೆ. ಕಾಮತ್,
ಶಾರದಾ ಛಾಪಖಾನೆ, ಮಂಗಳೂರು.

ಎರಡು ತಿಂಗಳಿಗೊಂದು ಬಾರಿ

ಪ್ರಥಮ ಸಂಚಿಕೆ—

ಜನವರಿಯ ಹದಿನೈದನೇ ತಾರೀಕಿಗೆ ಹೊರಬೀಳುವುದು.

ಗ್ಲೇಜು ಕಾಗದದ ಮೇಲೆ ಮುದ್ರಣ.

ಪ್ರತಿಬಾರಿ 150 ಚಚೌಕ ಇಂಚುಗಳಿಗೆ ಕಡಿಮೆಯಾಗದ
ಹಲವು ಚಿತ್ರಗಳು.

ಮುಂದಾಗಿ ಚಂದಾದಾರರಾಗಿ ಬರೆದುಕೊಳ್ಳಿರಿ.

ಎಲ್ಲಾ ಪತ್ರವ್ಯವಹಾರವನ್ನು ಕೆಳಗಿನ ವಿಳಾಸಕ್ಕೆ ನಡಿಸಬೇಕು.

THE MANAGER, ಮೋಟರಿಸ್ಟ ಪತ್ರಿಕೆಯ ವ್ಯವಸ್ಥಾಪಕರು,
THE MOTORIST, ರಥಬೀದಿ,
Car Street, Mangalore ಮಂಗಳೂರು.

ಸ್ವದೇಶಾಭಿಮಾನಿಯ

ಹೊಸ ವರುಷದ ಅಂಕ.

ಗ್ಲೇಜ್ ಕಾಗದದ ಮೇಲೆ ಮುದ್ರಣ.

ಸಚಿತ್ರ

ಕರ್ನಾಟಕ ಸುಪ್ರಸಿದ್ಧ ಲೇಖಕರ ಶ್ರೇಷ್ಠ ವರ್ಗದ

ಲೇಖಗಳು! ಕತೆಗಳು!! ಕಾವ್ಯಗಳು!!!

ಜನವರಿ ತಾ. 4ಕ್ಕೆ ಹೊರಬೀಳುವುದು.

ಸ್ವದೇಶಾಭಿಮಾನಿಯ ಚಂದಾದಾರರಿಗೆ ಉಚಿತ.

ಇತರರಿಗೆ ಪ್ರತಿ ಒಂದಕ್ಕೆ ನಾಲ್ಕಾಣೆ;

ಸ್ವದೇಶಾಭಿಮಾನಿ ಆಕಾರದ 24 ಪುಟಗಳಿಗೆ
ಕಡಿಮೆ ಇಲ್ಲ.

ಬೇಕಾದುದಕ್ಕಿಂತ ಅಧಿಕ ಪ್ರತಿಗಳನ್ನು ಮುದ್ರಿಸುವುದಿಲ್ಲ.
ಆದುದರಿಂದ ಈ ಸಂಚಿಕೆ ಬೇಕಾದವರು ಮುಂದಾಗಿ
ಐದಾಣೆಯ ಸ್ಟಾಂಪು ಕಳುಹಿಸಿ ತಮ್ಮ
ಹೆಸರನ್ನು ಬರೆಯಿಸಿಕೊಳ್ಳಬೇಕು.

ಲೇಖಕರು ತಮ್ಮ ಲೇಖಗಳನ್ನು ನವಂಬರ್ ಅಖೈರಿಯೊಳಗೆ
ಕಳುಹಿಸಬೇಕಾಗಿ ವಿನಂತಿ

ಜಾಹೀರಾತು ಕೊಡುವವರಿಗೆ ಅಖಿಲ ಕರ್ನಾಟಕೀಯ
ಲಕ್ಷ್ಯವನ್ನೆಳೆಯಲು ಸುಸಂದರ್ಭ.

ಎಲ್ಲಾ ಪತ್ರವ್ಯವಹಾರವನ್ನು ಈ ಕೆಳಗಿನ ವಿಳಾಸಕ್ಕೆ ನಡಿಸತಕ್ಕದ್ದು.

ಮೆನೇಜರ್,
ಸ್ವದೇಶಾಭಿಮಾನಿ ಆಫೀಸು,
ರಥಬೀದಿ, ಮಂಗಳೂರು.

(೧೩ನೇ ಪೇಜಿನಿಂದ ಮುಂದುವರಿದುದು)

೩೦೦೦ ಕೂಡಿಸಲಿಕ್ಕೆ ಹಗಲು ರಾತ್ರೆ ತಿರುಗುತ್ತಾರೆ ಒಂದೊಂದು ಹೊಸಮನುಷ್ಯರಿಗೆ ೪೦, ನಾಲುವತ್ತು ರೂಪಾಯಿ ಎಳೆಯುತ್ತಿದ್ದಾರೆ. ಇನ್ನು ಲಟ್ಟಿಕಟ್ಟೆಯಂತ ಮಾಸ್ಟರ್ ಮಂದಿಯಿಂದ ಹಣ್ಣು ಕಾಯಿ, ತುಪ್ಪಗಿಪ್ಪಾ ಎಲ್ಲಾ ಇದ್ದೀ ಇದೆಯಲ್ಲಾ!

ಪ್ರಭು:—ಹಾಗಾದರೆ ೪೦೦೦ ಎಂದಿರಲ್ಲ.

ಆಳ್ವ:—ಅವರ ಗುಟ್ಟು ಇಷ್ಟೇ. ಕಾಲೆಯ ಎಂಟು ಸಾವಿರ ಕಂಟ್ರ್ಯಾಕ್ಟಗೆ ಕೊಡೋದು. ನಮ್ಮ ಮಾವ ಅಂಚಾರು ತಿಮ್ಮಣ್ಣ ಶೆಟ್ರು ಕಂಟ್ರ್ಯಾಕ್ಟ ತಕೊಳ್ಳೋಕ್ಕೋದು. ೩೫೦೦ ಒಳಗೆ ಮಾಡ್ಸಿಕೊಡುತ್ತೇನೆಂದಿದ್ದಾರೆ. ಬೇದುರು ಚತ್ತ ಗುಡುಗುಡಿ ಇತ್ತು ಎಂತ ಮಾಡಿ ೪೦೦೦ ಕೊಟ್ಟರು ಎಂತ ಮಾಡ್ಸಿ ಕೊಳ್ಳೋದು.

ಪ್ರಭು—ಅಹ್ವರೇ ನಿಮ್ಮ ತಲೆಯೆಂತ ಥೇಷ್...... ಬನ್ನಿ, ಬನ್ನಿ, ನಿಂತೇ ಹೊತ್ತು ಹೋಯಿತು ಇನ್ನು ಕಾಫಿ ಗೀಪಿ ಕುಡಿಯುವುದಿಲ್ಲವೇಕೆ.

(ಒಳಗೆ ಹೋಗಿ ಕಾಫಿಪಾರ್ಟಿ ಆಯಿತು ಎಂತ ಕಾಣುತ್ತೆ)

ಸೇವಕ

ಅಮೇರಿಕೆಯಲ್ಲಿ ಹಿಂದೀ ಪರಿಷತ್ತು.

ಅಮೇರಿಕೆಯಲ್ಲಿ ಅಕ್ಟೋಬರ ೧೫ನೇ ತಾರೀಕಿನಲ್ಲಿ ಪ್ರಥಮ ಹಿಂದೀ ಪರಿಷತ್ತು, ಡಾಕ್ಟರ್ ಜೆ. ಟಿ. ಸೂದರ್‌ಲೇಂಡರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಹಿಂದೂಸ್ಥಾನದ ಬಡತನದ ವಿಷಯವಾಗಿ ಸಕಾರಣವಾದ ಭಾಷಣವನ್ನು ಮಾಡಿದರು. ಅವರ ಭಾಷಣದ ಸಾರಾಂಶವು ಈ ರೀತಿಯಾಗಿದ್ದಿತು.

ತೆರಿಗೆ:— ಹಿಂದೂಸ್ಥಾನದ ತೆರಿಗೆಯು ಅಪರಿಮಿತವಾದುದು. ಇಂಗ್ಲಾಂಡು ಮತ್ತು [illegible] ಜನರ ಮೇಲೆ ಹೊರಿಸಿದ ತೆರಿಗೆಯೇ ವಿಶೇಷವಾದುದೆಂದು ಅಲ್ಲಿಯ ಜನರು ಗುರುಗುಟ್ಟುತ್ತಿರುವರು. ಆದರೆ ಹಿಂದೂಸ್ಥಾನದ ಜನರ ಮೇಲೆ ಹೊರಿಸಿದ ತೆರಿಗೆಯು ಇಂಗ್ಲಾಂಡಿಗಿಂತ ದುಭಾರಿಯಾಗಿಯೂ, [illegible] ಪಾಲಾಗಿಯೂ ಇರುವಲ್ಲಿ ಹಿಂದೂಸ್ಥಾನದಲ್ಲಿ ಹೊರಿಸಿದ ತೆರಿಗೆಯು ಬಹು ವಿಶೇಷವೆಂದು ಸರ್ವರೂ ಹೇಳತಕ್ಕಂಥದ್ದೇ ಆಗಿದೆ.

ಕೈಗಾರಿಕೆಗಳ ನಿರ್ಮೂಲನ:—ಬ್ರಿಟಿಷರ ಆಳುವಿಕೆಯಿಂದ ಹಿಂದೂ ಕೈಗಾರಿಕೆಗಳಿಗೆ ತಡೆಯುಂಟಾದುದೇ ಹಿಂದೂಸ್ಥಾನದ ಬಡತನಕ್ಕೆ ಕಾರಣವಾಗಿದೆ. ಬ್ರಿಟಿಷರು ಮೊದಲು ಇಲ್ಲಿಗೆ ಬಂದಾಗ ಇದು ಸಂಪತ್ಸಮೃದ್ಧವಾದ ದೇಶವಾಗಿದ್ದಿತು. ಇಲ್ಲಿ ಹಲವು ಬಗೆಯ ಕೈಗಾರಿಕೆಗಳಿದ್ದವು. ಇವರಷ್ಟು ಔದ್ಯೋಗಿಕವಾದ ದೇಶವು ಬೇರೊಂದಿರಲಿಲ್ಲ. ಆದರೆ ಈ ಕೈಗಾರಿಕೆಗಳು ನಿರ್ಮೂಲನಗೊಳಿಸಲ್ಪಟ್ಟು ಅಂದು ಜನಭರಿತವೂ ಉದ್ಯೋಗಪೂರ್ಣವೂ ಆಗಿದ್ದ ಹಳ್ಳಿಗಳು ಈಗ ಕಾಡಿನಂತಾಗಿವೆ ಜನರು ಹೊಟ್ಟೆಗಿಲ್ಲದೆ ನರಳುತ್ತಿರುವರು ಇಂಗ್ಲಾಂಡು ತನ್ನ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ಕಾನೂನುಗಳನ್ನು ರಚಿಸಿ ಹಿಂದೂಕೈಗಾರಿಕೆಗಳಿಗೆ ತಡೆಗಟ್ಟಿತು.

ಸರಕಾರಿ ಖರ್ಚು:— ಸರಕಾರದವರ ಅಪರಿಮಿತ ಖರ್ಚು ಹಿಂದೂಸ್ಥಾನದ ಬಡತನಕ್ಕೆ ಮೂರನೆಯ ಕಾರಣವಾಗಿದೆ. ವಿದೇಶದಿಂದ ಬಂದ ರಾಜ್ಯದಾಡಳಿತದವರು ಈ ದೇಶದ ಬಡತನವನ್ನು ಲಕ್ಷಿಸದೆ ಮನಬಂದಂತೆ ಖರ್ಚುಮಾಡಿ ವಿದೇಶದಿಂದ ಬಂದ ಆಫೀಸರರಿಗೆ ಹೇರಳ ಸಂಬಳ ಮತ್ತು ಪೆನ್‌ಶನ್ ಕೊಡುವರು. ಹಿಂದೂಸ್ಥಾನದ ದೊಡ್ಡ ದೊಡ್ಡ ಹುದ್ದೇದಾರಿಗಳು ಬ್ರಿಟಿಷರು, ಅವರಿಗೆ ಸಂಬಳದ ರೂಪವಾಗಿ ಹೇರಳ ಹಣವನ್ನು ಕೊಟ್ಟು, ಹಿಂದೂಸ್ಥಾನದ ಕಷ್ಟಾರ್ಜಿತದ ದ್ರವ್ಯವು ಪರದೇಶಗಳಿಗೆ ಹೋಗುವದು.

ಸೈನ್ಯದ ಖರ್ಚು:—ಇನ್ನೊಂದು ಎಂದರೆ ಸರಕಾರದ ಸೈನ್ಯದ ಖರ್ಚು. ಹಿಂದೂಸ್ಥಾನದ ಸೈನಿಕರು ಯಾವಾಗಲೂ ಸುಸಜ್ಜಿತರಾಗಿ ಯಾವ ಊರಿಗಾದರೂ ಕಳುಹಲ್ಪಡುವರು. ಬ್ರಿಟನಿಗೆ ಬಲವಾದ ಸೈನ್ಯವೆಂದರೆ ಹಿಂದೂ ಸೈನ್ಯ. ಈ ಸೈನ್ಯದವರ ಪೋಷಣೆಗಾಗಿ ಹಣವು ಹಿಂದೂಗಳಿಂದಲೇ ಎತ್ತಲ್ಪಟ್ಟು ವೃಥಾ ಹಿಂದೂಸ್ಥಾನದ ಜನರಿಗನೇ ಕಷ್ಟವನ್ನು ಕೊಟ್ಟಂತಾಗುವದು. ಹಿಂದೂಸ್ಥಾನದ ಹೊರಗಡೆ ನಡೆದ ಯುದ್ಧಗಳಿಗೂ ಹಿಂದೂಸ್ಥಾನವೇ ಖರ್ಚಿಗೆ ಹಣ ಒದಗಿಸಬೇಕಾಗಿದೆ. ಕಳೆದ ಶತಮಾನದಲ್ಲಿ ಹಿಂದೂಸ್ಥಾನದ ಹೊರಗಡೆ ನಡೆದ ಯುದ್ಧಗಳಿಗಾಗಿಯೇ ಹಿಂದೂಸ್ಥಾನದಿಂದ ೪೫೦,೦೦೦,೦೦೦ ಡೊಲ್ಲರು ಖರ್ಚಿಗಾಗಿ ಸಂಗ್ರಹಿಸಲ್ಪಟ್ಟಿತು. ಇದೇ ರೀತಿ ಹಲವು ಯುದ್ಧಗಳಿಗೆ ಹಲವು ಸಲ ಹಿಂದೂಸ್ಥಾನದಿಂದ ಪ್ರತ್ಯೇಕಪ್ರತ್ಯೇಕವಾಗಿ ಹಣವು ಒಯ್ಯಲ್ಪಟ್ಟಿತು.

ಸ್ವಾತಂತ್ರ್ಯ ಹೀನತೆ:—ಎಲ್ಲವುಗಳಿಗಿಂತಲೂ ವಿಶೇಷವೆಂದರೆ ಹಿಂದೂಸ್ಥಾನಕ್ಕೆ ಯಾವ ವಿಷಯದಲ್ಲಿಯೂ ಸ್ವಾತಂತ್ರ್ಯವಿಲ್ಲದುದು. ಹಿಂದೂಸ್ಥಾನದ ಜನರು ಬಹು ಬುದ್ಧಿವಂತರು, ನಿಪುಣರು, ಒಳ್ಳೇ ತಿಳುವಳಿಕೆಯುಳ್ಳವರು ಬ್ರಿಟಿಷರಿಗಿಂತಲೂ ಮಿಗಿಲಾದ ತಿಳುವಳಿಕೆಯುಳ್ಳವರೆನ್ನಬಹುದು. ಆದರೆ ಇಂಥಹ ಜನರು ಬುದ್ಧಿವಂತಿಕೆಯನ್ನು ಉಪಯೋಗಿಸಲು ಮಾತ್ರ ಎಡೆಯಿರುವುದಿಲ್ಲ

ಅಭಿವೃದ್ಧಿಯ ಉಪಾಯಗಳು:—ಹಿಂದೂಸ್ಥಾನದ ಈಗಿನ ಬಡತನದ ಕಾರಣಗಳನ್ನು ನಿವಾರಿಸಿ, ಅಭಿವೃದ್ಧಿಯ ಸಾಧನಗಳನ್ನು ಕಂಡು ಹಿಡಿಯಬೇಕಾಗಿದೆ. ಇದಕ್ಕೆ ಹಲವರು ಹಲವು ರೀತಿಯ ಉಪಾಯಗಳನ್ನು ಸೂಚಿಸುವರು; ಮೊದಲಾಗಿ ಸರಕಾರದವರು ಈಗ ಹೊರಿಸಿರುವ ಅನಗತ್ಯವಾದ ತೆರಿಗೆಯ ದರವನ್ನು ಇಳಿಸಬೇಕು. ಮತ್ತು ಇಲ್ಲಿಯ ಕೈಗಾರಿಕೆಗಳನ್ನು ಪುನಃ ಪ್ರಾರಂಭಿಸಬಹುದಾಗಿ ಕಾನೂನುಗಳನು ಜ್ಯಾರಿಗೆ ತರಬೇಕು. ಇನ್ನೂ ಅನಗತ್ಯವಾದ ಮಿಲಿಟರಿ ಖರ್ಚನ್ನು ಇಳಿಸಬೇಕು.

ಮತ್ತೂ ಹೇಳುವುದಾದರೆ ಇಲ್ಲಿಂದ ಇಂಗ್ಲಾಂಡಿಗೆ ಹೋಗುವ ಅಪಾರ ಐಶ್ವರ್ಯದ ಪರಿಮಾಣವನ್ನು ಕಡಿಮೆ ಮಾಡಬೇಕು. ಆದರೆ ಇವಿಷ್ಟನ್ನು ಮಾಡಬೇಕಾದರೆ ಹಿಂದೂಸ್ಥಾನವು ಸ್ವತಂತ್ರ ರಾಜ್ಯವಾಗಬೇಕು. ಎಂದಿನ ವರೆಗೆ ಹಿಂದೂಸ್ಥಾನವು ಸ್ವತಂತ್ರ ರಾಜ್ಯವಾಗುವುದಿಲ್ಲವೋ ಅಂದಿನ ವರೆಗೆ ಹಿಂದೂಸ್ಥಾನಕ್ಕೆ ಐಶ್ವರ್ಯವನ್ನು ಹೆಚ್ಚಿಸಲು ಎಡೆಯಿರುವುದಿಲ್ಲ. ಹಿಂದೂಸ್ಥಾನಕ್ಕೂ ಬ್ರಿಟನಿಗೂ, ಯಾವ ಸಂಬಂಧವೂ ಇಲ್ಲದಹಾಗಾಗಬೇಕು. ಅಥವಾ ಆಸ್ಟ್ರೇಲಿಯಾ ನ್ಯೂಜಿಲೇಂಡ್, ಕೆನಡಾ ಮತ್ತು ದಕ್ಷಿಣ ಆಫ್ರಿಕಗಳಷ್ಟೇ ಹಕ್ಕು ಸ್ವಾತಂತ್ರ್ಯಗಳುಳ್ಳದ್ದಾಗಿರಬೇಕು.

ಮೆಕ್ ಕೊರ್ಮಿಕ್ ಡೀರಿಂಗ್
ಚಟ್ಟನೂಗಾ ಕಬ್ಬಿನ ಗಾಣಗಳು.

ಚಟ್ಟನೂಗಾ ಕಬ್ಬಿನ ಗಾಣಗಳು

ಕಬ್ಬುಬೆಳೆಸಲ್ಪಡುವ ಎಲ್ಲಾ ಸ್ಥಳಗಳಲ್ಲಿಯೂ, ಬಾಳುವಿಕೆ, ಹೆಚ್ಚು ರಸವನ್ನೀಳಸುವ ಶಕ್ತಿ, ಗಟ್ಟಿ ಸಾಮಾನು ಇವುಗಳಿಗಾಗಿ ಹೆಸರು ಹೊಂದಿರುತ್ತವೆ

ಗಂಟೆಗೆ 88ರಿಂದ 250 ಗೆಲನು ರಸವೆಳಸುವ ರೀತಿಯ ಅನೇಕ ಸೈಜು ಗಳಲ್ಲಿ ಕಟ್ಟಲ್ಪಟ್ಟಿರುತ್ತದೆ.

ಎತ್ತಿನ ಅಥವಾ ಬೆಲ್ಟು ಪವರುಗಳಿಗೆ ಅನುಕೂಲವಾಗಿದೆ.

VOLKART BROS. ENGINEERS

ಎಲ್ಲಾ ತರದ ಕೃಷಿ ಸಾಮಾನುಗಳು ದಾಸ್ತಾನು ಇವೆ.

Armenian Street — MADRAS.

ತಯಾರಾಗಿವೆ! ಮಾರಾಟಕ್ಕೆ ಸಿದ್ಧವಿವೆ!! ತ್ವರೆಮಾಡಿರಿ!!!

1929ನೇ ಇಸವಿಯ
ಪೊಕೆಟ್ ಡೈರಿಗಳು.

ಅಂದವಾದ ಕೆಲಿಕೊ ಬ್ಯಾಂಡಿನ ದೊಡ್ಡ ಸ್ಯಾಜಿನ ಮುಚ್ಚಳ ಇದ್ದ ಡೈರಿ	0—14—0	ಅಂದವಾದ ಮಿಡಿಯಮ್ ಸಾದಾ ಡೈರಿ	0— 8—6
„ „ ಮುಚ್ಚಳ ಇಲ್ಲದ್ದು	0—10—0	„ ಸ್ಟಿಫ್‌ಬ್ಯಾಂಡ್ „	0— 7—0
„ „ ಮುಚ್ಚಳ ಇದ್ದ ಮಿಡಿಯಮ್ ಸ್ಯಾಜಿನ ಡೈರಿ	0—11—0	„ ಕೆಲಿಕೊ ಸಣ್ಣ ಸ್ಯಾಜಿನ ಮುಚ್ಚಳದ್ದು	0—10—0
		„ „ ಮುಚ್ಚಳ ಇಲ್ಲದ್ದು	0— 6—0
		„ ಸ್ಟಿಫ್‌ಬ್ಯಾಂಡ್ ಸಣ್ಣ ಸ್ಯಾಜಿನ ಡೈರಿ	0— 4—0

ರಖಂ ತೆಗೆದುಕೊಳ್ಳುವವರಿಗೂ, ವ್ಯಾಪಾರಸ್ಥರಿಗೂ ತುಂಬಾ ಕಮಿಶನು ಕೊಡಲಾಗುವದು.

ಹೆಚ್ಚಿನ ಮಾಹಿತಿಗೆ ಬರೆಯಿರಿ—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

Famous
Mysore Perfumes.

Best incense sticks (Agar Bathis)

Maharaja Bathi	per seer (24 Tolas)	Rs	20
Darbar	„	„	15
Ananda	„	„	12
Manmohan	„	„	10
Musk Heena	„	„	8
Dilchaman	„	„	8
Kasthur Javaji	„	„	10
Amber	„	„	8
Rose	„	„	6
Jasmin	„	„	5
Punugu (Civet)	„	„	4
Heena	„	„	3
A Tin Case containing 300 Assorted Bathis of 12 kinds	„		6

Packing & Postage Extra.

The State Perfumery Mart,
Bangalore City,
Mysore State.

ಹೊಸಮುದ್ರಣ! ಅಂದವಾದ ಅಕ್ಷರ!!

ಸಂಗೀತಶಾಸ್ತ್ರ ಪ್ರವೇಶದಾಯಿನಿ.

(ಮೈಸೂರು ಮತ್ತು ಮುಂಬಾಯಿ ವಿದ್ಯಾಭ್ಯಾಸದ ಇಲಾಖೆಯವರಿಂದ ಅಂಗೀಕರಿಸಲ್ಪಟ್ಟಿದೆ.)

ಇದರಲ್ಲಿ ಸಂಗೀತಶಾಸ್ತ್ರ ಸಂಬಂಧವಾದ ಅನೇಕ ರಹಸ್ಯಗಳು ಸಂಗೀತ ವಿದ್ವಾಂಸರ ಸಲಹೆಗಳನ್ನು ಅನುಸರಿಸಿ ಸುಲಭ ರೀತಿಯಲ್ಲಿ ಕನ್ನಡದಲ್ಲಿ ವಿವರಿಸಲ್ಪಟ್ಟಿವೆ.

ಸರಳೆ ಅಲಂಕಾರ, ಗೀತ, ಸ್ವರಜತಿ, ವರ್ಣಗಳು ಮತ್ತು ತ್ಯಾಗಯ್ಯರ್, ಪಟ್ಟಣಂ ಸುಬ್ರಹ್ಮಣ್ಯಯ್ಯರ್, ದೀಕ್ಷಿತರು, ಸದಾಶಿವರಾಯರು, ಶಾಮಶಾಸ್ತ್ರಿಗಳು ಮೊದಲಾದ ಸುಪ್ರಸಿದ್ಧ ಸಂಗೀತ ವಿದ್ವಾಂಸರ 106 ಕೃತಿಗಳೂ ಜಾವಡಿಗಳು ಸ್ವರಜತಿ ಸಹಿತವಾಗಿ ಇದರಲ್ಲಿ ಕೊಡಲ್ಪಟ್ಟಿವೆ.

ಬೆಲೆ 2—4—0 — ಹಾಸಲು 0—5—0

ಹಾರ್ಮೋನಿಯಂ ಸ್ವಯಂಬೋಧೆ.
0—12—0.

ಹೆಚ್. ಎಸ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು ಚಿಕ್ಕಪೇಟೆ ಬೆಂಗಳೂರು ಸಿಟಿ.

[illegible] ತಂಗಳು, ಗ್ರಾಮ [illegible] ಆಸ್ಪತ್ರೆಗಳು ಅದಕ್ಕೆ [illegible] ಗ್ರಾಮಕ್ಕೆ ಮುಟ್ಟುವಂತಾಯಿತು. [illegible] ನಮೂದಿಸಿದ ಪಟ್ಟಿಯಲ್ಲಿ ಇವರ [illegible] ಗಿಯು ಏರ್ಪಾಡು ಆಗಬೇಕಾಗಿ ಬಂದಿದೆ [illegible] ವರೆ ಸರಮಾತ್ತನೆ ಟಲ್ಲಿ [illegible] ದೆಂಟರು ಗವರ್ನಮೆಂಟಿಗೆ ಬರೆಯುತ್ತಿರುತ್ತಾರಂತೆ. [illegible] ಸಂಗ್ರಹವು ಬರೆಯುವದಕ್ಕೂ ಅವರು [illegible] ತೋರುತ್ತದೆ. ಏನೊ, ತಾಲೂಕುಗಳ [illegible] ಎಲ್ಲಾದರೂ ವಿರಾಮವಿದ್ದರೆ ಮಾತ್ರ [illegible] ಒಂದಿಷ್ಟು ಮಾಡುವರು. ಹೀಗಾಗಿ ರಾಯರಿಗೆ [illegible] ಹೋಯಿತು. ಆದರೂ........ನೋಡೋಣ.

ಆಸ್ಪತ್ರೆಗಳು—ಪುತ್ತೂರು, ಬೆಳತಂಗಡಿ, [illegible] ಕಡೆಗಳಲ್ಲಿ ಆಸ್ಪತ್ರೆಗಳಿವೆ. ಪುತ್ತೂರಿನ ಆಸ್ಪತ್ರೆಯನ್ನು [illegible] ನವರು ಈ ವರುಷ ವಹಿಸಿಕೊಂಡ ದೆಸೆಯಿಂದ ಅದರ [illegible] ಹಾಯದಿಂದ ಪಂಜ ಮತ್ತು ಸಂಪಾಜೆ. ಈ ೨ ಕಡೆಗಳಲ್ಲಿ [illegible] ತಿಂಗಳ ಮೊದಲಿನಿಂದು ಆಸ್ಪತ್ರೆಗಳು ತೆರೆಯಲ್ಪಟ್ಟಿವೆ. [illegible] ಸಂಪಾಜೆ ಆಸ್ಪತ್ರೆಯು ಆರೆಕಾಸಿ ಖರ್ಚು ಕೊಡಗು [illegible] ಸಿಕ್ಕುವಂತೆ ಹಂಚಿಕೆಮಾಡಿ ಉಳಿದ ಹಣದಿಂದ ಬೆಳತಂಗಡಿ ಮತ್ತು ಸುಳ್ಯದಲ್ಲಿ ಈಗ ಸುಮಾರು ೬ ವರುಷಗಳ ಹಿಂದೆ [illegible] ಇರುವ ಸೌಕರ್ಯಕ್ಕಿಂತ ಕಟ್ಟಿಸಿ ಪಾಲಿಯೇ ಇರಗೊಡಿಸಿದ ಕಟ್ಟಡಗಳಲ್ಲಿ ರೋಗಿಗಳು ಬಂದು ಇರಲು ಮಂಚಗಳು ಮುಂತಾದ ಸಾಮಗ್ರಿಗಳನ್ನು ಒದಗಿಸಿ ಕೊಟ್ಟು ಬಡ ರೋಗಿಗಳ ಆರೋಗಣೆ ಬಗ್ಗೆ ಧರ್ಮಾರ್ಥವಾಗಿ ಪಥ್ಯ ಮುಂತಾದ್ದು ಸಿಗುವಂತೆ ಏರ್ಪಾಡು ಮಾಡಿಯದೆ. ಈ ಹಂಚಿಕೆಯ ದೆಸೆಯಿಂದ ಅನೇಕಾನೇಕ ಬಡವರಿಗೆ ಉಪಕಾರ ಹೊಂದುವದಕ್ಕೆ ಆಸ್ಪದವಾಗಿದೆ. ವಿಟ್ಲ ಮತ್ತು ಉಪ್ಪಿನಂಗಡಿಯಲ್ಲಿ ಹಳ್ಳಿ ಆಸ್ಪತ್ರೆಗಳು ತೆರೆಯಲ್ಪಟ್ಟು ಅನೇಕರಿಗೆ ವೈದ್ಯಕೀಯ ಸಹಾಯವು ಸಿಗುತ್ತಿದೆ. ಆಸ್ಪತ್ರೆಯಲ್ಲಿ ಬೇಡ ಮಾತ್ರ ಕೆಲವು ಕಡೆಗಳಲ್ಲಿ ಇರುವದಾಗಿ "ತಾಲೂಕು ನಿವಾಸಿ"ಯು ಬರೆಯುವ ಸಂಗತಿಯು ಈ ತಾಲೂಕಿನಲ್ಲಿ ಎಲ್ಲಿಯೂ ಕಾಣೆ. ಇರಲಿ. ಇದ್ದ ಹಣದ ಮಟ್ಟಿಗೆ ಇಷ್ಟೆಲ್ಲ ಏರ್ಪಾಡು ಮಾಡಿದ್ದಾಯಿತು. ಇನ್ನು ಹೊಸ ಆಸ್ಪತ್ರೆಗಳು ತೆರೆಯುವ ಮಾತು ಹಾಗಿರಲಿ, ಪಂಜ ಮತ್ತು ಸಂಪಾಜೆಯಲ್ಲಿ ತೆರೆದ ಹೊಸ ಆಸ್ಪತ್ರೆಗಳೇ ವಿಸರ್ಜನೆಯಾಗುವ ಕಾಲ ಬರುತ್ತದೊ ಎಂಬಂತೆ ಕಾಯುತ್ತದೆ. ಏಕೆಂದರೆ ಪುತ್ತೂರು ಆಸ್ಪತ್ರೆಯನ್ನು ಸರಕಾರದಿಂದ ನಡಿಸುವ ದೆಸೆಯಿಂದ, ಉಳಿಯುವ ರೂಪಾಯಿ ೫,೦೦೦ ಚಿಲ್ಲರೆ ಹಣವನ್ನು ತಾಲೂಕು ಬೋರ್ಡಿಗೆ ಕೊಡುವ ರೂಪಾಯಿ ೧೦,೬೫೦ರ ವರುಷಾಸನದಿಂದ ಕಳೆದು ಇನ್ನು ಮುಂದೆ ರೂ. ೫೦೦೦ ಮಾತ್ರ ಕೊಡಲಾದೀತೆಂದೂ ಸಂಪಾಜೆ ಪಂಜ ಆಸ್ಪತ್ರೆಗಳ ಕುರಿತಾಗಿಯೂ ಸುಳ್ಯ ಬೆಳತಂಗಡಿ ಆಸ್ಪತ್ರೆಗಳಲ್ಲಿ ಒಳರೋಗಿಗಳಿಗೆ ಪಥ್ಯ ದವಾ ಧರ್ಮಾರ್ಥ ನಡಿಸುವ ಏರ್ಪಾಡಿನ ಕುರಿತಾಗಿಯೂ ಹಿಂದಣಂದ ತೀವ್ರ ಹುಕುಂ ಕೊಡಲಾದೀತೆಂದೂ ಗವರ್ನಮೆಂಟಿನಿಂದ ಕಠಿಣವಾದ ಹುಕುಂ ಈಗಾಗಲೇ ಬಂದಿದೆಯಂತೆ. ಪಾಪ! ಪ್ರೆಸಿಡೆಂಟರಾದರೂ ಏನು ಮಾಡ್ಯಾರು? ಇದೀ ಬಿಲ್ಲಾ ಮತಿ ನುಂಗಿತು! ಹಣವೆಲ್ಲ ಈ ರೀತಿ ಎಳಕೊಂಡರೆ ಏನು ಮಾಡಲಿಕ್ಕಾದೀತು? ಪುತ್ತೂರು ತಾಲೂಕಿನ ಗ್ರಹಗತಿ ಹೀಗೆ ಕೆಟ್ಟು ಹೋಗಲಿಕ್ಕಾಗಿದ್ದಕ್ಕೆ ಪರಿಹಾರವೇನೋ ತಿಳಿಯದು! ಇದಕ್ಕೆಲ್ಲಾ ನ್ಯಾಯ ವಿಧಾಯಕ ಸಭೆಯ ನಮ್ಮ ಪ್ರತಿನಿಧಿಗಳು ಜಗಳ ಕಟ್ಟಿದರೇನಾದರೂ ಪ್ರಯೋಜನವಾದೀತೇನೋ? ಹೊರತು ತಾಲೂಕು ಬೋರ್ಡು ಪ್ರೆಸಿಡೆಂಟರ ಮೇಲೆ ವಿಷದ ಗಾಳಿಯನ್ನು ಬೀಸಲಾರಂಭಿಸಿ ಪರಿಣಾಮವೇನಾದರೂ ಆಗುವ ಹಾಗೆ ತೋರುವುದಿಲ್ಲ.

ಪುತ್ತೂರು ತಾಲೂಕಿನಲ್ಲಿ ಮಲೇರಿಯಾ ಜ್ವರದ ಹಾವಳಿಯ ಕಾರಣಗಳನ್ನು ತನಖಿಯಿಂದ ಕಂಡುಹಿಡಿದು ಅದರ ನಿವಾರಣಾರ್ಥವಾಗಿ ತಕ್ಕ ಯೋಜನೆಗಳನ್ನು ಸೂಚಿಸುವರೆ, ಮದರಾಸಿನಿಂದ ಸ್ಪೆಶಲ್ ಮಲೇರಿಯಾ ಆಫೀಸರರಾದ ಡಾಕ್ಟರ್ ರಾಘವೇಂದ್ರರಾಯರು ತಾ. ೧೪ಕ್ಕೆ ಪುತ್ತೂರಿಗೆ ಬಂದು ಎಕ್ಕ ಸುಬ್ರಹ್ಮಣ್ಯಕ್ಕೆ ಹೋಗಿರುವರು. ಅವರು ಅಲ್ಲಿನ ಆಸಪಾಸಿನ ಗ್ರಾಮಗಳಲ್ಲಿ ಸಂಚರಿಸಿ ಕಡಬ ಉಪ್ಪಿನಂಗಡಿ ಗೋಳಿತೊಟ್ಟು, ಕೊಕ್ಕಡ, ಶಿಸ್ಲ, ಬೆಳತಂಗಡಿ, ಕಾರ್ಕಳ, ಬಂಟ್ವಾಳ, ಮುಂಡಾಜೆ, ನೆರಿಯ, ಧರ್ಮಸ್ಥಳ, ಸುಳ್ಯ ಸಂಪಾಜೆ, ಅರಂತೋಡು, ತೋಡಿಕಾನ ವಿಟ್ಲ ಕೇಪು ಮಾಣಿ ಮುಂತಾದ ಈ ತಾಲೂಕಿನ ಎಲ್ಲ ಪ್ರಾಂತ್ಯಗಳ ಮುಖ್ಯ ಮುಖ್ಯ ಗ್ರಾಮಗಳನ್ನು ಈ ತಿಂಗಳ ೨೩ನೇ ತಾರೀಕಿನ ವರೇಗೆ ಸಂಚರಿಸುವರು. ಈಗ ಜ್ವರವು ತಗ್ಗಿದ ಸಮಯವಾದುದರಿಂದ ಬರುವ ಮೇ ತಿಂಗಳಲ್ಲಿ ಅವು ಪುನಹ ಪ್ರಾಯಶ್ಯ ಬರುವ ವೇಳೆ ಪುನಹ ಇಲ್ಲಿಗೆ ಬಂದು ಸುತ್ತಾಡಿ ನೋಡಲಿರುವರಂತೆ. ಇವರ ಈ ತನಖಿಯು ಪರಿಣಾಮವಾಗಿ ಜನರಿಗೆ ಜ್ವರದ ಬಾಧೆಯು ಸ್ವಲ್ಪವಾದರೂ ತಗ್ಗಿತೆಂದರೆ ಮಹದುಪಕಾರವಾದೀತು. ನೋಡಲಿಕ್ಕಿದೆ.

ಇನ್ನು ಶಾಲೆಗಳ ಕುರಿತು "ತಾಲೂಕು ನಿವಾಸಿ"ಯ ವಿಮರ್ಶೆಯ ವಿಚಾರವನ್ನು ಇನ್ನೊಂದು ಸಂಚಿಕೆಯಲ್ಲಿ ನೋಡೋಣ.

ತಾ. ೮—೧೨—೨೮. — "ಊರ ನಿವಾಸಿ"

ಅಪೂರ್ವ ಸುಸಂದರ್ಭ!

150 ರೂಪಾಯಿಗಳ ಮೂಲಧನದಿಂದ ತಿಂಗಳಿಗೆ ನೂರು ರೂಪಾಯಿಗಳ ಲಾಭ.

ಈ ಕೆಳಗಿನ ಸುಲಭೋಪಾಯವನ್ನು ಲಕ್ಷಿಸಿರಿ.

ಒಂದು, ಎರಡು ಯಾ ಮೂರು ಬಾಟ್ಲಿಗಳನ್ನು ಹಿಡಿಸಬಹುದಾದ ಇಲ್ಲವೆ ಹೆಚ್ಚಿಗೆ ಪಕಾರದ ಸೋಡಾ ವಾಟರ್ ತಯಾರಿಸುವ ಹ್ಯಾಂಡ್ ಮೆಶಿನುಗಳನ್ನು ನಾವು ಅತಿ ಸುಲಭ ಬೆಲೆಯಿಂದ ತಯಾರಿಸಿ ಕೊಡುತ್ತೇವೆ.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಇಂಪೀರಿಯಲ್ ಇಂಪೋರ್ಟಿಂಗ್ ಕಂಪನಿ,
[illegible] ನಂ. 2.

[illegible] ಚದುರಂಗ.

ಕರ್ತೃ—ಶ್ರೀ ಕೋಟ ಶಿವರಾಮ ಕಾರಂತ.

"ವಸಂತ"—ಸಂಪಾದಕರು.

(ಹಿಂದಿನ ಸಂಚಿಕೆಯಿಂದ ಮುಂದುವರಿಸಿದ್ದು)

ಅಂಕ ಎರಡು.

ಸೀನ್ ೧.

([illegible]—ಅಣ್ಣಪ್ಪಯ್ಯನವರಿಗೆ ತಾಲೂಕು ಮೆಂಬರಿಕೆ ಆಯ್ತು. [illegible] ಆಯ್ತು. ಈಗ ಅವರೇ ಅವರು. ಆದರೆ ಓಟಿನ [illegible] ಇನ್ನೂ ಇದ್ದಿದೆ. ನಮ್ಮ ರಾಯರಿಗೆ [illegible] ಖರ್ಚಾಗಿದೆ ಎನ್ನುತ್ತಾರೆ. ಈಗ ಗನ್ನಲ [illegible] ಪ್ರಭುಗಳಿಗೂ ಒಂದು ಮೆಂಬರಿ. ಆಗ ಬಾರದೂ [illegible] ಎಲ್. ಆಗಿದೆ ಇಷ್ಟು ಕಲೆ ಇದ್ದು ಅಣ್ಣಪ್ಪಯ್ಯನವರ [illegible] ಮಾಡಿದರೂ ಅವರ ಸ್ವಲ್ಪ ಹಾಂಗಾಂಗೆ. ಹೆಚ್ಚೇನು [illegible] ಮೆಂಬರಿ ಆರು ಮಂದಿ ವಕೀಲರಿಗಾಗಿತ್ತು. ಅಚ್ಯುತ ರಾಯರು [illegible]. ಆದರೆ ಓಟೆಲ್ಲಾ ಅಣ್ಣಪ್ಪಯ್ಯನವರಿಗೆ ಏನೂ ಅದ [illegible])

[illegible] ಬಳ್ಳಾರಿ ತಾಲೂಕು ಬೋರ್ಡು ಬಂಗಲೆ. ಬಂಗಲೆ ಹತ್ತಿರದ ಮೇಲೆ ಬಂದು ಉಳಕೊಂಡವರು ಇವರೇ ಜನ. ಅಣ್ಣಪ್ಪಯ್ಯ ಮತ್ತು ಶ್ಯಾಂಪ. ಸಮಯ ರಾತ್ರಿ ಹತ್ತು ಗಂಟೆ.

ಅಣ್ಣಪ್ಪಯ್ಯ—ಶ್ಯಾಂಪಾ, ಹ್ಯಾಗೆ ಈ ಸಾರಿ ಮೆಂಬರಿ? ಮಹದೇವಯ್ಯನ ಸವಾರಿ ಕಾಶೀಯಾತ್ರೆಗೆ ಹೊರಟಿದೆ. ಈಗ ನೀನೇ ಹೇಳಿ ಬಿಡು. ನಮ್ಮ ಹಾರ್ದಳ್ಳಿ ರೋಡಿನ ನೀರು ನಮ್ಮ ಬಯಲಿಗೆ ಬರಬೇಕೋ ಇಲ್ಲವೆ ಅಣ್ಣಪ್ಪಯ್ಯನ ಹಿತ್ಲು ತೋಳೆಯ ಬೇಕೋ? ಇದರಲ್ಲಿ ಇನ್ನೊಂದು ಸುದ್ದಿ ಹೇಳುತ್ತೇನೆ. ಮೊನ್ನೆ ಬೋರ್ಡು ಮೀಟಿಂಗಿನಲ್ಲಿ ಅವರ ಮನೆ ಮುಂದಿನ ರಸ್ತೆ ಅನಾವಶ್ಯಕ ಅಂತ ಮಾಡಿ ನಮ್ಮ ಹಾರ್ದಳ್ಳೀಗೆ ಇಡಿಸಿ ಬಿಟ್ಟಿದ್ದೇನೆ.

ಶ್ಯಾಂಪ—ನನ್ನ ತಲೆಯೊಳಗೂ ಅದೇ ಹೊಕ್ಕಿತ್ತು. ಆದರೆ ಬೋರ್ಡು ಈಗಾಗಲೆ ಒಂದುವರೆ ಸಾವಿರ ರೂಪಾಯಿ ವ್ಯಯ ಮಾಡಿಬಿಟ್ಟಿದೆ. ಇನ್ನು ಹ್ಯಾಗೆ ಬದಲಿಮಾಡ ಬರುತ್ತದೇ ಎಂತ ಗ್ರಹಚಾರ ಹಾಕುತ್ತಿದ್ದೆ.

ಅಣ್ಣಪ್ಪ—ಅದಕ್ಕೆಲ್ಲಾ ಮದ್ದುರೆದಾಯಿತು. ಅಲ್ಲಿ ಸಂಕಾ ಕಟ್ಟಲಿಕ್ಕೆ ಒಂದು ಸಾವಿರ ಬೇಕು. ಅದೆಲ್ಲಾ ಖರ್ಚು ಅಂದೆ. ಹೋದರೆ ಬೋರ್ಡಿಗೆ ಒಂದು ಸಾವಿರ ರೂಪಾಯಿ ಹೋದೀತು. ಯಾರಪ್ಪ ಗಂಟೇನು ಖರ್ಚು. ಕೆಮ್ಮಣ್ಣು ಶಾಲೆಯ ಪಾಯಖಾನೆಗೆ ಏಳುನೂರು ರುಪಾಯಿ ಖರ್ಚು ಮಾಡಲಿಲ್ಲವೇ?

ಶ್ಯಾಂಪ—ಅಯ್ಯಾ. ಇಷ್ಟಿದ್ದೂ ನನ್ನ ಸಂಬಳ ಮಾತ್ರ ಜಾಸ್ತಿಯಾಗುವುದಿಲ್ಲ. ಹದಿನಾಲ್ಕು ವರ್ಷ ಸರ್ವೀಸು. ಹದಿನೈದು ರೂಪಾಯಿ ಸಂಬಳ.

ಅಣ್ಣಪ್ಪ—ಹೌದು. ಆದರೆ ಏನು ಮಾಡಲಿಕ್ಕೆ ಬರುತ್ತದೆ. ಇನ್ನೂ ಎಲಿಮೆಂಟರಿ ಗ್ರೇಡು ಮಾಸ್ತರರಿಗೆ ಉಂಟು ಹನ್ನೆರಡು ರೂಪಾಯಿ ತಲಬು. ನಿನಗೆ ಜಾಸ್ತಿ ಕೊಟ್ಟೆ ಅಂದರೆ ಎಲ್ಲರೂ ಬೋರ್ಡನ್ನೇ ಹರಿದು ತಿಂದಾರು. ನೀನು ಒಂದು ಕೆಲ್ಸ ಮಾಡಿ ಬಿಡು. ಹೇಗೂ ಮಳೆಗಾಲ ಮುಗಿಯಿತು. ನನಗೆ ಬೇಸಾಯ ಕೆಲಸವೆಲ್ಲಾ ಮುಗಿಯಿತು. ಇನ್ನು ಎಂಟು ತಿಂಗಳು ದಿನಾ ಬಿಡದೆ ಸರ್ಕೀಟಿಗೆ ಹೋಗಬೇಕು ಅಂತ ಅಲ್ಲ. ಮೂರು ಸಾವಿರ ಭಂಡವಾಳ ಹಾಕಿ ಒಂದು ಪ್ರಸಿಡೆಂಟ ಆದ್ದಕ್ಕೆ ಮೂರು ವರ್ಷದ ಭತ್ತೆ ಕಾಸು ಅಷ್ಟಕ್ಕೆ ಬಾರದಿದ್ದರೆ ಏನು ಅದ ಹಾಗಾಯಿತು. ನೀನೂ ನನ್ನ ಜತೆಯಲ್ಲಿದ್ದಿ. ಏನಿಲ್ಲ. ಒಬ್ಬ ಶಾಲೆ ಮಾಸ್ಟರು ಎಂಟು ಆಣೆ ಕೊಟ್ಟ ಎಂದರೆ ತಿಂಗಳಿಗೆ ಎಂಟೆಂಟು ರೂಪಾಯಿ ಹಾಗೇ ಆಯಿತು.

ಶ್ಯಾಂಪ—ನೀವು ಗೌಜಿ ಮಾಡದಿದ್ದರೆ ಹಾಗೇ ಆಗಬಹುದು. ಆದರೆ ನಿಮಗಿರುವುದು ಮೂರು ವರ್ಷ. ತಿರುಗಿ ಮುಂದಿನ ಪ್ರಸಿಡೆಂಟರು ಯಾರೋ. ಅವರ ದರ್ಬಾರಿನ ಇನ್ನೊಂದ್ದಾದರೆ ಮತ್ತೆ ಬಂತಲ್ಲ ಅದೇ ಫಜೀತಿ.

ಅಣ್ಣಪ್ಪ—ನಿನಗೆ ಧ್ಯಾಂಕು. ಇನ್ನು ಮುಂದೆ ಪ್ರಸಿಡೆಂಟಿಗೆ ನನ್ನ ಉಂಬಳಿ ಅಂತ ತಿಳಿದುಕೊ. ಇನ್ಯಾವ ವೀರಾದಿ ವೀರನೋ ನನ್ನೆದುರಿಗೆ ನಿಲ್ಲುವವ.

ಶ್ಯಾಂಪ—ಅಷ್ಟು ದೇವರು ಮಾಡ್ಸಿದರೆ ಎರಡು ಹಣ್ಣು ಕಾಯಿ ಮಾಡಿಸುತ್ತೇನೆ. ಅಯ್ಯಾ ನಾಳಿದು ಯಾವ ಶಾಲೆಯ ಮೇಲಕ್ಕೆ ಅಂತ ನಿಶ್ಚಯಮಾಡಿದಿರಿ.

ಅಣ್ಣಪ್ಪ—ನಾಳೆದು ಮಂಡಳ್ಳಿ ಶಾಲೆ ನೋಡಲಿಕ್ಕೆ ಬರುತ್ತೇನೆ ಅಂತ ತಿಳಿಸಿದ್ದೇನೆ. ಅಷ್ಟರೊಳಗೆ ಮನಸ್ಸು ತಿರುಗಿಯದೆ ಚಿಕ್ಕನಗುಡ್ಡೆ ಶಾಲೆಗೆ ಸರ್‌ಪ್ರೈಸ್ ವಿಜಿಟ್ ಮಾಡುವುದೋ ಅಂತ.

ಶ್ಯಾಂಪ—ಸ್ವಾಮಿ; ಮರುಳೋ ನಿಮಗೆ ಆ ಶಾಲೆ ಕಟ್ಟಿದ ಲಾಗಾಯ್ತು ಅಲ್ಲಿಗೆ ಒಬ್ಬರೂ ಪ್ರಸಿಡೆಂಟರು ಹೋದ್ದಿಲ್ಲ. ಆ ಸುತ್ತು ಕೊಂಪೆಯೊಳಗೆ ಅಕ್ಕಿ ಕಾಳು ಸಿಗುವುದಿಲ್ಲ. ಅಂಥ ಗರ್ದಿ ದಿಬ್ಬದ ಹಿಂದಿನ ಪ್ರಸಿಡೆಂಟರೆಲ್ಲಾ ಇನ್ಸಪೆಕ್ಷನ್ ಪುಸ್ತಕ [illegible] ದೂರದಿಂದಲೇ ಕಂಡು ಗೆರೆ ಎಳೆದು ಬಿಡುತ್ತಿದ್ದರು. ಅಯ್ಯಾ ಶಾಲೆಯ ಕಥೆಯೆಂದರೆ ಒಂದು ಪುರಾಣ. ನರಮನುಷ್ಯರು ಹೋಗುವ [illegible]. ಅಲ್ಲಿ ನಮ್ಮ ರಾಮಣ್ಣ ಜೋಯಿಸರು ಗೊತ್ತಿಲ್ಲವೆ. ಅವರ ಮಗ ಒಂದು ಖಾಸಗಿ ಏಗಳ ಮಠ ಮಾಡ್ಸಿ ವರ್ಷಕ್ಕೆ ಎಪ್ಪತ್ತು ರೂಪಾಯಿ ಗ್ರಾಂಟು ಬರುತ್ತಿತ್ತು. ಮೊದಲಿನ ಇಲೆಕ್ಷನಿನ ಒಳಗೆ ಯಾರೋ ನಿಮ್ಮ ಮಹದೇವಯ್ಯನ ಕಿವಿ ಚುಚ್ಚಿ ಬಿಟ್ಟರು. ಜೋಯಿಸರು ಓಟಿನಲ್ಲಿ ಅವರ ವಿರುದ್ಧ ಪಾರ್ಟಿಯ ಸಹಾಯಮಾಡಿದರು ಅಂತ. ಅದಕ್ಕೆ ನಮ್ಮ ರಾಯರು ಅಲ್ಲಿ ಒಂದು ಬೋರ್ಡು ಶಾಲೆ ಮಾಡ್ಸಿ "ಇಲ್ಲಿ ಬೋರ್ಡು ಶಾಲೆ ಇರುತ್ತಾ ಖಾಸಗಿ ಶಾಲೆ ಅಗತ್ಯವಿಲ್ಲಾ" ಅಂತ ಬರೆದು ಬಿಟ್ಟರು. ಸ್ಕೈ. ಎರಡು ತಿಂಗಳುಗಳೊಳಗೆ ಶಾಲೆ ಅತ್ತ ಬಿದ್ದು ಇತ್ತ ಆಗಿಬಿಟ್ಟಿತು. ಸ್ಕೈ. ಇಷ್ಟರಲ್ಲಿ ಶಾಲೆಗೊಬ್ಬರು ಮಾಸ್ಟರು ಬೇಕಲ್ಲ. ಹುಡುಕಿ ಹುಡುಕಿ ನಮ್ಮ ಮಾಧವಪೈಗಳ ಕೊರಳಿಗೆ ಕಟ್ಟಿದರು ಒಂದು ಹಗ್ಗ.

ಅಣ್ಣಪ್ಪ—ಮಾಧವ ಪೈಗಳಿಗೂ ಅವರಿಗೂ ಅಷ್ಟು ದೋಸ್ತಿಯೋ.

ಶ್ಯಾಂಪ—ದೋಸ್ತಿ ಗುಟ್ಟು ಹೇಳುತ್ತೇನೆ. ನಮ್ಮ ರಾಯರಿಗೆ ಬಳ್ಳಾರಿ ಗರ್ಲ್ಸ್ ಸ್ಕೂಲ ಮೇಲೆ ಕಣ್ಣು ಬಿತ್ತು. ಆಗ ನಮ್ಮ ಪೈಗಳು ಅಲ್ಲ ಹುಡುಗರ ಶಾಲೆಯ ಹೆಡ್ಮಾಸ್ಟರು ಏನೋ ಅವರಿಗೂ ನಮ್ಮ ಮಿಸ್ಸನರಿಗೂ ಕೈ ಉಂಟೆಂತ ರಾಯರ ಕಿವಿಗೆ ಸುದ್ದಿ ಬಿತ್ತು. ಸರಿ. ಮಾರಣೆ ದಿನವೇ ತೆಗೆದುಕೊಂಡು ಹೋಗಿ ಕೊಟ್ಟೆ—ಟ್ರಾನ್ಸ್‌ಫರ್ ಹುಕುಂ—ಪೈಗಳು ಚಿಕ್ಕನ ಗುಡ್ಡೆಗೆ ಇನ್ನು ಮೀನಾಕ್ಷಿಮ್ಮನ ಸುದ್ದಿ ಗೊತ್ತೇ ಇದೆಯಲ್ಲ.

ಅಣ್ಣಪ್ಪಯ್ಯ—ನನಗೆ ತಿಳಿಯದೇ ಹೋಯ್ತು. ಮೊನ್ನೆ ಪೈಗಳು ಬಂದು ಗೋಳೋ ಅತ್ತರು. ಮಹದೇವಯ್ಯನಿಗೆ ಇಷ್ಟು ಧೈರ್ಯದರು. ನನಗೆ ಇಷ್ಟು ಒಳ್ಳೇ ಕುಶಿ ಆಯ್ತು. ತಿರುಗಿ ಬಳ್ಳಾರಿಗೆ ಟ್ರಾನ್ಸ್‌ಫರ್ ಮಾಡಿಬಿಟ್ಟೆ. ಹೋಗಲಿ ಪಾಪ ಅಂತ.

ಶ್ಯಾಂಪ—ಸರಿ. ಪೈಗಳಿಲ್ಲ ಅಂದ ಮೇಲೆ ಚಿಕ್ಕನ ಗುಡ್ಡೆಗೆ ಹೋಗಬೇಕು ಯಾಕೆ?

ಅಣ್ಣಪ್ಪ—ಮತ್ತೇನಿಲ್ಲ. ಅಲ್ಲಿ ಹೈಮನ್ ಸೋಜನನ್ನು ಇರಿಸಿದೆಯಲ್ಲ. ಅವನು ಈ ಸಾರಿ ಓಟಿನಲ್ಲಿ ನಮ್ಮೆದುರಿಗೆ ಕೆಲ್ಸ ಮಾಡಿದ ಅಂತ ಒಂದು ಸುದ್ದಿ ಸಿಕ್ಕಿದೆ. ಖಾತ್ರಿ ಸುದ್ದಿ. ಅದಕ್ಕೆ ಒಂದು ಸಾರಿ ಶಾಲೆ ಇನ್ಸ್‌ಪೆಕ್ಷನ್ ಮಾಡಿ ಬಂದರೆ ಅಂಪ್ಸೈಂಡ್ ಹಾಗೆ ಹೀಗೆ ಅಂತ ಚಾರಿಕೆ ಟೀಪ್ಸಿ ಹಾಕಬೇಕು ಅಂತ. ಇತ್ತ ಮಂಡಳ್ಳೀ ಶಾಲೆಗೂ ಬರುತ್ತೇನೆ ಅಂತ ಅಂದಿದ್ದೇನೆ

ಶ್ಯಾಂಪ—ಮಂಡಳ್ಳಿಗೇನು ಸುಮ್ಮನೆ.

ಅಣ್ಣಪ್ಪ—ಸುಮ್ಮನೆ ಎಲ್ಲಿಗೂ ಹೋಗುವುದಿಲ್ಲ. ಅಲ್ಲಿ ನಮ್ಮ ಮಹದೇವಯ್ಯನ ಶಾಲೆಯೊಂದು ಇದೆಯಲ್ಲ.

ಶ್ಯಾಂಪ—ಏನು ರಾಮಣ್ಣಯ್ಯಾ ಮಹದೇವಯ್ಯ ಅಳಿಯನೇ? ಹೌದು. ಹೌದು—ಮಾವನ ಓಟಿಗೆ ಧೊಪ್ಪ ಧೂಳು ಮಾಡಿದ್ದಾರೆ. ಆ ಶಾಲೆಗೆ ಹಾಕಿ ಒಂದು ಗಜ.

ಅಣ್ಣಪ್ಪ—ಅದೇ ಅಲ್ಲ ಒಂದು ಬೋರ್ಡು ಶಾಲೆ ಸೆಂಕ್ಷನ್‌ಮಾಡುವ ಯೋಚನೆ ಇದೆ. ಅದೂ ಅಲ್ಲದೆ ನಮ್ಮ ಶ್ರೀನಿವಾಸ ಪ್ರಭುಗಳ ಧಾವನ ಹುಡುಗ ಒಬ್ಬ ಕೆಲ್ಸ ಇಲ್ಲದೆ ತಿರುಗುತ್ತಾ ಇದ್ದಾನೆ. ಅವನಿಗೊಂದು ಕೆಲ್ಸಮಾಡುವ ಅಂತ

ಶ್ಯಾಂಪ—ಅಯ್ಯಾ ಹಾಂಗೇನಾದರೂ ಮಾಡಿ ಮುಂದಿನ ಬಾಯಿಗಟ್ಟಿ ಹಾಕಿತು ಅಂದ್ರೆ ಬರ್ಮ ದೇವರ ಮಗ ಬಂದರೂ ನಿಮ್ಮ ಪ್ರಸಿಡೆಂಟಿಕೆಗೆ ನಷ್ಟ ಬಾರ (ಅಷ್ಟರಲ್ಲಿ ಕತ್ತಲೆಯಲ್ಲಿ ದೂರದಲ್ಲೊಂದು ಬೆಳಕು ಕಂಡು) ಅಯ್ಯಾ ಇನ್ನು ಮುಂದೆ ನಾವು ಈ ಬಂಗಲೆಗೆ ಬರಬಾರದು. ಅಲ್ಲಿ ನೋಡಿದಿರಾ ಹಾಳಾದ ಭೂತ ಸೂಟೆ (ಗುಳಿಗನ ಸೂಟೆ) ಹನ್ನೆರಡು ಗಂಟೆ ರಾತ್ರಿಗೆ ಅಯ್ಯಬ್ಬಾ! ನೀವು ಒಳಗೆ ಹೋಗಿ ಬೇಡ. ಬಾಗಿಲು ಹಾಕಿ ಮಲಗಿಕೊಳ್ಳುವಾ. ಹೌದು, ಹೌದು ಬಾಗಿಲಿ ಕಡೆಗೆ ಬರುತ್ತದೆ. ಅದಕ್ಕೇನೆ ಈ ಬಂಗ್ಲೆ ಕಟ್ಟಿದ ಮೇಲೆ ಒಬ್ಬರೂ ಬಂದು ತಂಗಿದವರಿಲ್ಲ.

ಅಣ್ಣಪ್ಪ—ಶ್ಯಾಂಪಾ. ನಿನಗೆ ವರ್ಷ ಇಷ್ಟಾದರೂ ಏನೇನು ಬುದ್ಧಿಲ್ಲ. ಭೂತದ ಸೂಟೆಯಂತೆ, ಮನುಷ್ಯರ ಸ್ವರ ಕೇಳುತ್ತದೆ.

ಶ್ಯಾಂಪ—ಭೂತ ಮಾತನಾಡುವ ಸ್ವರ ನಾನು ಖುದ್ದು ಕೇಳಿದ್ದೆ. ಅಯ್ಯಾ ಇಂಥದ್ದರಲ್ಲಿ ದುಡುಕಬಾರದು. ಒಳಗೆ ಹೋಗುವ ಬನ್ನಿ

ಅಣ್ಣಪ್ಪ—ಸುಮ್ಮನಿರೋ. ಯಾರೋ ನಮ್ಮನ್ನೇ ಕಾಣಲಿಕ್ಕೆ ಬರುವುದದು.

ಶ್ಯಾಂಪ—ನಮಗೆ ಶನಿ ಹಿಡಿದಿದೇ ಅಂತ ಇಷ್ಟು ರಾತ್ರಿಗೆ ಬರಲಿಕ್ಕೆ ಅವರಿಗೆ ಹುಚ್ಚೇ?

ಅಣ್ಣಪ್ಪ—ಅವನಲ್ಲ ಅವರಪ್ಪ ಬರುತ್ತಾನೆ. ಪ್ರಸಿಡೆಂಟು ಇರುವಷ್ಟು ದಿನ. ಹೂಂ ನೀನು ವಾಚರನ ಕೋಣೆಗೆ ಹೋಗು. ಅವರು ಯಾರೋ ಮಾತು ಧಾರಿ ಮಂದಿ. ಖಾಸಗೀ ಕೆಲಸಕ್ಕೆ ಬರುತ್ತೇವೆ ಅಂತ ಮೊದಲೇ ತಿಳಿಸಿದ್ದರಿಂದ ನಾನೂ ಬಂದದ್ದು.

(ಇಷ್ಟರಲ್ಲಿ ಇಬ್ಬರು ಪುರುಷ ವ್ಯಕ್ತಿಗಳು ಬರುವರು)

ಶ್ಯಾಂಪ—(ಸ್ವಲ್ಪ ದೂರದಿಂದ ಕಂಡು) ಅಯ್ಯೊ, ಒಬ್ಬರು ಮಾಧವ ಪೈಗಳು. ಇನ್ನೊಬ್ಬರು ಯಾರು? ಇದು ವರೆಗೆ ಕಾಣದಿದ್ದ ಜನ. ಬಲು ಟಾಕುಟೀಕಿನ ಆಸಾಮಿ. ಕಲಾರ್ ನೆಕ್‌ಟೈ ಕಂಡರೆ ಇನಿಸ್‌ಪೆಕ್ಟರಿನ ಹಾಂಗೆ ಕಾಣುತ್ತದೆ. ಯಾರೋ ಏನೋ ಈ ಮಂದಿಗೆ ರಾತ್ರಿ ಹಗಲು ಅಂತಿಲ್ಲ. ಬರುವುದು ಬರುವುದೇ.

ಅಣ್ಣಪ್ಪ—ಬಂದಿರೋ ಬನ್ನಿ ಕೂತುಕೊಳ್ಳಿ. ಪೈಗಳೇ ಬೆಳಗ್ಗೆ ಸಿಕ್ಕುತ್ತೀರಲ್ಲ ಪಾಪ ಹೊತ್ತಾಯಿತು. ಮನೆಗೆ ಹೋಗಿ ಮಲಕೊಳ್ಳಿ. (ಪೈಗಳು ಹೊರಡುವರು.)

ಶ್ಯಾಂಪ—(ಗಂಟಲೊಳಗೆ) ಅಯ್ಯಾ, ಇವರು ಇಲ್ಲೇ ಇರಲಿಕ್ಕೆ ಬಂದವರೆ. ಒಳ್ಳೇ ಮಂಗಿನ ಜನ. ಏಷ್ಟೆಂದರೂ ಗುರುತು ಹತ್ತುವುದಿಲ್ಲ. (ಅವರು ಮಾತನಾಡುವ ಸ್ವರ ಕೇಳಿ) ಏನು ಮೀನಾಕ್ಷಮ್ಮ ಶಿವ, ಶಿವ, ಪಾಪಿ ಎಲ್ಲಿ ಹೋದರೂ ಮೀನಾಕ್ಷಮ್ಮನ ಕಾಟಾ ಬಿಡಾ.

ಎರಡನೇ ಸೀನ್.

ಆ ಮೇಲೆ ಒಂದು ದಿನ. ವೆಂಕಣ್ಣಾಳ್ವರಿಗೂ, ಶ್ರೀನಿವಾಸ ಪ್ರಭುಗಳಿಗೂ ಪುನಃ ಭೇಟಿ.

ವೆಂಕಣ್ಣಾಳ್ವ—ಹ್ಯಾಗೆ ಸ್ವಾಮಿ, ಮರೆಯುತೋ ಇಲ್ಲವೊ ನಮ್ಮ ಪಕ್ಷ. ನನಗೆ ಬೇಕಾದ್ದು ಅಷ್ಟೆ. ಮತ್ತಾ ಮೆಂಬರಿಕೆಯಲ್ಲಿ ಆಗುವುದು ಇಷ್ಟೇ ಅಂತ ಗೊತ್ತಿದ್ದದ್ದೆ.

ಪ್ರಭು—ನಿಜವಾಗಿ ಸ್ವಾಮಿ, ಅಣ್ಣಪ್ಪಯ್ಯ ಅಂದರೆ ಚೆನ್ನದಂತಹ ಮನುಷ್ಯರು. ನಾವೇನೋ ಎಣಿಸಿಕೊಂಡಿತ್ತು. ಪೋಲಿ ಅಣ್ಣಪ್ಪಾ ಅಂತ ಅಲ್ಲ. ನಿಜವಾಗಿ ಅವರ ಗುಣ ಹಾಗಿರಬಾರದೇಕೆ? ವೀರ! ಅಂದರೆ ಅವ. ಅಲ್ಲ ಮಾದೇವಯ್ಯನವು ಪೋಲಿಂಗ್ ಸ್ಟೇಶನ್‌ನಲ್ಲೇ ಇವರಿಗೆ ಹೆಚ್ಚಿನ ವೋಟೆಂದ ಮೇಲೆ.

ಆಳ್ವ—ಅದು ಬಿಡಿ ಸ್ವಾಮಿ, ಈಗ ಮಾದೇವಯ್ಯನವರ ಕಡೆಯವರಿಗೆಲ್ಲ ಟೊಪ್ಪಿಯೋ. ಮಾಸ್ತರರಿಗೆಲ್ಲಾ (ಟ್ರಾನ್ಸ್‌ಫರು) ಲಟ್ಟೆ ಪಟೆ ಎಂತ ಮಾಡಿನ್ನೇ ದರಬಾರು.

ಪ್ರಭು—ಏನೂ ಇರಲಿ. ನಮ್ಮ ಧಾವನ ಹುಡುಗನಿಗೆ ಒಂದು ಚಾಕರಿಯಾಯಿತು.

ಆಳ್ವ—ಸ್ವಾಮಿ, ಅದು ಬಿಡಿ. ಈ ವರ್ಷ ಎರಡು ರೂರಲ್ ಆಸ್ಪತ್ರೆ ತೆಗಿಯಬೇಕೆಂತ ಯೋಚನೆ ಆಗಿದೆಯಲ್ಲ. ಒಂದು ನಮ್ಮ ಕಾಜಾರಿಗೆಂತ ಸೇಂಕ್ಷನ್ ಆಯಿತು. ಡೋಕ್ಟ್ರು ಮೊಕರ‍್ರರಿಯೂ ಆಯಿತು. ನಮ್ಮ ಅಳಿಯ ರಾಮಣ್ಣ ಮೊನ್ನೆ ಪಾಸಾಗಿ ಬಂದಿನ್ನಷ್ಟೇ ಏನು ಮಾಡಲಿ ಎಂತ ಚಿಂತೆ ಇದ್ದಿತ್ತು.

ಪ್ರಭು—ಇನ್ನೊಂದು ಎಲ್ಲಿ ಅಂತ ನಿಶ್ಚಯವಾಯಿತೇ?

ಆಳ್ವ—ಮೂಡಾರಿನವರೂ ಬಂದು ಬಹಳ ದೊಡ್ಡೆ ಹೊಡಿಯುತ್ತಾರೆ. ಅಲ್ಲಿ ಆಸ್ಪತ್ರೆ ಮಾಡುವದಾದರೆ ೩೦೦೦ ರೂಪಾಯಿ ವಂತಿಗೆ ಕೊಡುತ್ತಾರೆಂತ ಅಂದಿದ್ದ. ಅಣ್ಣಪ್ಪಯ್ಯನವರು ಅಲ್ಲೇ ಮಾಡುವುದು ಅಂತ ಹೇಳುತ್ತಿದ್ದರು. ಜನ ಮಾತ್ರ ನಿಶ್ಚಯ ಇಲ್ಲ. ಈಗಲೇ ಎಂಟು ಹತ್ತು ಡಾಕ್ಟರೀ ಮಂದಿ ಅರ್ಜಿ ಬಂದದೆ ಅಂದರು.

ಪ್ರಭು—ಛೇ! ಹಾಗೆ ಮಾಡಿದ್ರಾಗದು. ನಮ್ಮ ಹುಡುಗನಿಗೆ ಈ ವರ್ಷ ಫೈನವಾಗುತ್ತದೆ. ಅವರ ಹತ್ತಿರ ಸ್ವಲ್ಪ ಹೇಳಿಬಿಡ್ರಿ. ನಾಲ್ಕು ತಿಂಗಳು ಮುಂದೆಳೆಯಲಿಕ್ಕೆ. ಆಗ ಹುಡುಗನೂ ಬರುತ್ತಾನೆ. ಆದರೆ ಮೂಡಾರು ಅಂದರೆ ಬರೇ ಚಳಿ ಒಸ್ತಿ ಮಾಗನ ಸ್ಥಳ. ಬದಲು ನಮ್ಮ ಬೆಟ್ಟೂರಿಗೆ ಸೇಂಕ್ಷನ್ ಮಾಡಿಸಬಾರದೇನು. ಮೂಡಾರಿಂದ ಎಂಟು ಮೈಲಷ್ಟೆ. ಅಂಥಾ ಕಾಯಿಲೆಯವರಿದ್ದರೆ ಎಂಟು ಮೈಲು ನಡೆಯಲಿಕ್ಕೇನು ಸಂಕಟವೆ.

ಆಳ್ವ—ಬೀಗದ ಕೈ ನಮ್ಮ ಕೈಯಲ್ಲಿರುವಾಗ ಏನು ಕಷ್ಟ? ನನ್ನ ಒಂದು ಫೈಂಟೇ ಬೇರೆಯಿದೆ. ನಮಗೂ ನಮ್ಮ ಅಣ್ಣಪ್ಪನವರಿಗೂ ಒಂದು ರಾವು ಬಹದ್ದೂರಿ ಮಾಡ್ಸಿ ಬಿಡಿ. ಹೇಗೋ ನಿಮಗೆ ಕಲೆಕ್ಟರರ ಗುರುತಿದೆ.

ಪ್ರಭು—ಮಾಡಿಸುವದು ದೊಡ್ಡ ಕೆಲ್ಸವಲ್ಲ. ಸಾಹೇಬರಿಗೊಂದು ಟೀಪಾರ್ಟಿ ಮತ್ತೆ ಊರ ಮಂದಿ ಕಣ್ಣಿಗೆ ಮಣ್ಣು ಹಾಕಲಿಕ್ಕೆ ಏನಾದರೂ ನಾಲ್ಕೈದು ಸಾವಿರ ರೂಪಾಯಿ ದಾನ ಮಾಡಿ ಒಂದು ಶಾಲೆಯೋ ಪಾಲೆಯೋ ಕಟ್ಟಿಬಿಟ್ಟರೆ ಎಂಟು ತಿಂಗಳೊಳಗೆ ತೆಕ್ಕೊಳ್ಳಿ ರಾವು ಬಹದ್ದೂರಿ. ಕಲೆಕ್ಟರನ್ನೇ ಒಪ್ಪಿಸಿಗೆ ಬರಹೇಳಿದಂತಾಯಿತು.

ಆಳ್ವ—ಅದು ನಿಮ್ಮ ತಲೆಗೆ ಬರುವ ಮುಂಚೇ ನಮ್ಮ ತಲೆಗೆ ಬಂದಿತ್ತು. ಹ್ಯಾಗೂ ನಮ್ಮ ಮೂಡು ಕಂಬಳಕ್ಕೆ ಒಂದು ಹಯರ್‌ಎಲಿಮೆಂಟರಿ ಶಾಲೆ ತೆರಿಯುವ ಆಲೋಚನೆ ಇದೆಯಲ್ಲ. ಬೋರ್ಡಿನಿಂದ ೪೦೦೦ ಸೆಂಕ್ಷನ್ ಆಗಿದೆ. ನಾವಿಬ್ಬರೂ ಸೇರಿ ೪೦೦೦ ಕೊಡುತ್ತೇವೆಂತ ನಿಶ್ಚಯವಾಗಿದೆ.

ಪ್ರಭು—ಅಲ್ಲ ಒಂದಕ್ಕೆ ನೋಡಿದ್ರೆ ಅಷ್ಟು ಹಣ ಹಾಕಿ ಮಾಡಿ ಆ ರಾವುಬಹದ್ದೂರಿ ತೆಕ್ಕೊಂಡು ಮಾಡುವುದೇನು? ಈಗ ಏನಿಲ್ಲ ೫೦೦ ರೂಪಾಯಿ ಖರ್ಚುಮಾಡಿದ್ರೆ ನನಗೊಂದು ಟೈಟಲ್ ಕೊಡಿಸುತ್ತೇನೆಂದು ಕ್ರಿಕೇಟು ಸಾಯ್ಬರೇ ಹೇಳಿದ್ದು, ನಾನೇ ಬಿಟ್ಟಿ ಕಾಸು ಖರ್ಚಾಗದೆ ರಾವುಬಹದ್ದೂರಿ ಮೆಂಬರಿ ಇನ್ನೇನೇನು ಬೇಕೋ ಆಗಲಿ

ಆಳ್ವ—ಮತ್ತೆ ನಮಗೆ ೪೦೦೦ ಖರ್ಚುಮಾಡಲಿಕ್ಕೆ ತಲೆ ಸರಿಯಿಲ್ಲವೇನೂ? ನಮ್ಮ ಅಣ್ಣಪ್ಪನವರಂತೂ ಓಟಿನ

(ಇನ್ನೂ ಇದೆ/ಮುಂದುವರಿಯುದು.)

ಕರ್ಣಾಟಕ ಎಗ್ಯುಮಿಕ್ಸ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲ್ಯುಯಂಝಾ, ಬಹು ದಿನದ ಜ್ವರ, ಚಳಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ ಜ್ವರವು ಬಿಡುವದಲ್ಲದೆ, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧-೪-೦, ಸಣ್ಣದಕ್ಕೆ ೦-೧೪-೦.

ಎಲ್ಲ ಕಡೆಗೂ ಔಷಧವನ್ನು ಮಾರುವದಕ್ಕೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು
ದಿ ಊಲನ್ ಮಾರ್ಟ್, ಮಂಗಳೂರು. | ಕರ್ಣಾಟಕ ಬ್ರದರ್ಸ್, ಗಿರಿಗಾಂವ, ಮುಂಬಯಿ.

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.



ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ! ಅನುಕೂಲಿಸುವ 2,000 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ಬಾಗ್ ಯತು 800 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸು ಗಳು, ಪ್ರತಿ ಒಬ್ಬರ ಕೈಯಿಂದ ಕೊಂಡು ಹೋಗಲು ಅನುಕೂಲಿಸುವ ಪದಂದ್ರಕಾಂತಿ 10 ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನಗಳು, ಸ್ಟೌವ್‌ಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಹರಟು ಗುಂಡಿಗಳು, ರೋಜಾ ಹುವ್ವುಗಳ ಹುರಾಯಿಗಳು, ಬ್ಯಾಟರಿಗಳು, ಬೆಂಕಿ ಇಲ್ಲದೆ ಬೀಡಿ ಮತ್ತು ಸಿಗರೇಟ್ ಹಚ್ಚಿಸುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳೆಲ್ಲವುಗಳಿಗೆ ಬೇಕಾಗುವ ಸಾಮಾನುಗಳು ಸಹ ಬಹಳ ಸುಲಭ ಬೆಲೆಗೆ ನಮ್ಮಲ್ಲಿ ದೊರೆಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತಿಪಡಿರಿ.



ಕ್ರಯಪಟ್ಟಿ ಪಡೆಯುವದಕ್ಕೆ ಈ ವಿಳಾಸಕ್ಕೆ ಬರೆಯಿರಿ —

ಎ. ಆರ್. ಖಲೀಲ್,

ಬೈಸಿಕಲ್, ಸ್ಟೌವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂದಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಷಲ್ ರೂಪಾಯಿ ೫೦ರಿಂದ ೩೦೦ ರೂಪಾಯಿ ವರೆಗೆ. ದೈವೀಶಕ್ತಿಯು, ಒಂದು ಸಾರಿ ಧರಿಸಿ ನೋಡಿದರೆ ತಮಗೆ ತಿಳಿಯುವದು. ಟಪಾಲು ಖರ್ಚು ಬೇರೆ.

ಶಿವರಾಮ ಭಟ್ಟ ತೆಂಗಿನಮನೆ,

— — ಸಕ್ಲೇಶ್ಪುರ್ ಪೋಸ್ಟು ಕಡೂರ್ ಡಿಸ್ಟ್ರಿಕ್ಟ

Batliwalla's Preparations Cover All Your Needs.

A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಅವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಝಿಬಿಷನ್‌ದೊಳಗೆ ಬೆಳ್ಳಿ ಭಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಜಗ್ಯು ಮಿಕ್ಸ್ಚರ್ ಪಿಲ್ಸ್ — ಮಲೇರಿಯಾ ಜ್ವರ ನಿವಾರಕ, ರೂ. ೧.

ಬಾಟ್ಲಿವಾಲರ ಬಾಲಾಮೃತ — ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಆಣೆ ೧೪.

ಬಾಟ್ಲಿವಾಲರ ಕಿಂಗ್ ಆಫ್ ಬಾಮ್ — ತಲೆನೋವು, ಬಾಕ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೇ ಔಷಧ ಆಣೆ [illegible].

ಬಾಟ್ಲಿವಾಲರ ಟೈರಿಯಡ ಮಿಕ್ಸ್ಚರ — ವಾಂತಿಭೇದಿ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಆಣೆ ೧೪.

ಬಾಟ್ಲಿವಾಲರ ಕ್ವಿನೇನ ಟೇಬ್ಲೆಟುಗಳು — ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟೇಬ್ಲೆಟುಗಳು ಇರುತ್ತವೆ.

ಬಾಟ್ಲಿವಾಲರ ಟಾನಿಕ ಗುಳಿಗೆಗಳು — ಧಾತು ಪುಷ್ಟಿಕರ. ರೂ. ೧—೫—೦. ರೂ. ೧—೪—೦. ೧—೧೨—೦.

ಬಾಟ್ಲಿವಾಲರ ಹುಳ ಕಡ್ಡಿ ಔಷಧ. ರೂ. ೦—೬—೦

ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE.

ತಾರಿನಪತ್ತೆ:-CAWASHAPUR, BOMBAY.

ಎಲ್ಲಾ ಕಡೆಗಳಲ್ಲಿ ಏಜಂಟರು ಬೇಕಾಗಿದ್ದಾರೆ.

ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ. ಲಿಮಿಟೆಡ್.
Sayani Road, P. O. Cadell Road, Bombay, No. 14.

ಕೇಸರಿಯ ವರಲೋಧ್ರ

ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರತ್ನಖಚಿತವಾದ ಆಭರಣ'ವೆಂದೂ, 'ಸರ್ವಾಭೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜನನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ.

ಇದು ಋತುಶೂಲೆ, ಋತುಸ್ರಾವದೋಷ, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಋತುವು ನಾನಾ ಬಣ್ಣಗಳಿಂದ ಸ್ರವಿಸುವುದು, ಪ್ರದರ (ಮೇಹ) ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ಶರೀರದಲ್ಲಿ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಲುಸೆಳೆತ, ಉಬ್ಬಸ ಮೊದಲಾದ ವ್ಯಾಧಿಗಳೂ ಇತರ ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ಔಷಧಿ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— **ಕೇಸರೀ ಕುಟೀರಂ,**

TELEGRAMS:—'KESARI' ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

15-4-'27 ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಆರಿಸಿದ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್‌ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೋಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೋನೋಗ್ರಾಫು, ಮತ್ತು ಪೆಟ್ರೋಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯಪಟ್ಟಿ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೊ. — ನಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಿಗೆ [illegible] ಸರಿಯಾದ ಸಮಯವು ದೊರಕುವುದು.

Edited Printed & Published by V. S. Kamath at the M. T. A. SHARADA PRESS, MANGALORE

ಅಮುಂಗಡ ಕ್ರಯ — ವರ್ಷ ಒಂದಕ್ಕೆ ರೂಪಾಯಿ 2-0-0 Registered No. M. 469 ಟಪಾಲು ಹಾಸಲು ಸೇರಿ ರೂಪಾಯಿ 2-12

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ | ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ | ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ | ಗರದ ಮಥಿಸಲು ಸುರರಿಗದರಿಂ | ಹರುಷವಾಯಿತೆ! ಮತ್ತೆ ವಿಷ್ಯದ ಸುಡುತ ಬರುತಿರುವ ॥
ಗರಲಕವರಂಜಿದರೆ! ಸುಧೆಯನು | ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳ ಬಲ್ಲರೆ! ತೊರೆದು ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೧೪ನೇ ಶುಕ್ರವಾರ ದಶಂಬರ ೧೯೨೮. (14—12—28.) ಸಂಚಿಕೆ ೫೦

THE CANARA BANKING CORPORATION, UDIPI, LIMITED.
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:— ಉಡುಪಿ.

Branches:—COONDAPOOR.
„ Mangalore.
ಶಾಖೆ:— ಕುಂದಾಪುರ.
„ ಮಂಗಳೂರು.

Statement of Affairs of the Canara Banking Corporation Udipi, Limited as at 31st October 1928.

	Capital and Liabilities.			Property and Assets	
1	Paid up Capital	Rs. 1,99,650-0-0	1	Premises Building Furniture &c.	Rs. 9,491-2-0
2	Reserve Fund and other funds	„ 96,600-0-0	2	Investments on G. P. Notes	„ 3,34,218-5-0
3	Deposits	„ 17,52,879-4-8	3	Investments on Approved Securities	„ 17,53,749-11-0
4	Overdraft with Bankers	„ 43,786-8-9	4	Bills for collection as per Contra	„ 11,392-9-0
5	Sundry Persons' A/C as per Contra	„ 11,392-9-0	5	Sundries including P & L items	„ 1,00,979-12-9
6	Sundries including P & L items	„ 1,54,863-9-2	6	Cash in hand & with Bankers.	„ 49,340-7-10
	Total	22,59,171-15-7		Total	22,59,171-15-7

Office of the Corporation,
UDIPI, 13—11—'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನದಲ್ಲಿ ಪ್ರಸಿದ್ಧಪಟ್ಟ ನೋವಿನ
— ಮುಲಾಮು. —

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದು ಕೆಮ್ಮಿನಿಂದ ಪೀಡಿತರಾದ ಜ್ವರದಿಂದ ಕಷ್ಟಪಟ್ಟು, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತದೆ. ಕ್ರಯ ಡಬ್ಬಿಗೆ 10 ಆಣೆ. ಟಪ್ಪಾಲು ಹಾಸಲು ಪ್ರತ್ಯೇಕ

ವಿ. ಸೂ:—ಆರಾಣಿ ವಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು — ಎಲ್ಲಾ ತರದ ಗಜಕರ್ಣಕ್ಕೂ ಕಜ್ಜಿಗೂ, ನಂದಿಗೆಯ ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರುಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ — ಉತ್ತಮವಾದ, ಈ ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು; ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲಹೊಂದುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜ್‌ಟೌನ್, ಮದ್ರಾಸು. 249 ಫ್ರೇಯರ್ ರೋಡ್ ಮುಂಬಯಿ,
ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ನ್ಹಿಕೃವ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ತಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಆತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಯಿ.
ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.
For copies apply to—
The M. T. A. Sharada Press,
Car-street. MANGALORE

ADVERTISE IN OUR WEEKLY
To Reach the Hearths & Homes of India's Masses
For Particulars Apply to:
The Manager,
SWADESHABHIMANI,
MANGALORE.

[illegible]

[illegible]

ನಿಷ್ಪಕ್ಷಪಾತಿಯೋ? ಪಕ್ಷಪಾತಿಯೋ?

[illegible] ೧೬-೧೧-೨೮ರ ಸ್ವದೇಶಾಭಿಮಾನಿಯಲ್ಲಿ ನಿಷ್ಪಕ್ಷಪಾತಿ(?) [illegible] ಮಹಾಶಯರು, ಕುರುಕಾಲು ಹಾಯರ್ ಎಲಿಮೆಂಟ್ರಿ [illegible] ಇಗರ್ಜಿ ಶಾಲೆಗಳ ಪ್ರಸ್ತಾಪವೆತ್ತಿ, ಆ ಸಮ್ಮಂಧ ಸಭೆಯಲ್ಲಿ [illegible] ಟೀಚರ್ ಮೆನೇಜರ್ ಸಂಘದ ಮೇಲೆ ಅಪರಾಧವನ್ನು [illegible] 'ಪಾಪಕಪ್ಪೀಸು' ಎಂಬ ಮಂತ್ರೋಪದೇಶ ಮಾಡಿದ್ದಾರೆ. ಇದ [illegible] ತಮಾಷಾ ಪುರಾಣವೆನ್ನಬೇಕು? ಆತ್ಮಸ್ತುತಿಯಿಂದ ತನ್ನ [illegible] ಉಬ್ಬಿಕೊಂಡ ನಿಷ್ಪಕ್ಷಪಾತಿ (ತಾ. ೨೨-೧೧-೨೮ರ ನವಯುಗದಲ್ಲಿ ಬಿದ್ಯಾರ್ಥಿಪಾಲನ) ಎಂಬ ಪವಿತ್ರ ಬಿರುದಿಗಾಗಿ ಹಗ್ಗಳಿಸಿಕೊಳ್ಳುವವರ ಅರಸಿಕ ದೃಷ್ಟಿಗೆ, ನಿರ್ದೋಷವಾದ ಸಂಸ್ಥೆಯು ಇದೇ ಜಗತ್ತಿನಲ್ಲಿ ಯಾವುದೂ [illegible] ಮೇಲೆ ಟೀಚರ್ ಮೆನೇಜರರ ಸಂಘವು ಇದರ [illegible]. ಈ ನಿಷ್ಪಕ್ಷಪಾತಿ ಹೊಗಳು ಭಟ್ಟರು ಕೆಥೋಲಿಕ ಸಮಾಜದವರೆಂಬುದನ್ನು ಅವರ ಲೇಖನವೇ ವ್ಯಕ್ತಗೊಳಿಸುವದು. ಬೆಳ್ಳೆ ಇಗರ್ಜಿ ಶಾಲೆಯ ಸ್ವಜಾತಿ ದೃಷ್ಟಿಯಿಂದ ಟೀಚರ್ ಮೆನೇಜರರ ಸಂಘವನ್ನು ಟೀಕಿಸುವಾಗ್ಗೆ ತನ್ನ ಜಾತೀಯ ಪಾಶ್ರವ ಮರೆಮಾಚುವಂತೆ, ಸುಭ್ರವಾದ 'ನಿಷ್ಪಕ್ಷಪಾತಿ' ಎಂಬ ನಿಲುವಂಗಿಯಿಂದ ಆವರಿಸಿಕೊಂಡಿದ್ದಾರೆ.

ಟೀಚರ್ ಮೆನೇಜರರ ಸಂಘವು ಬೆಳ್ಳೆ ಇಗರ್ಜಿ ಶಾಲೆಯು (ಮೂಡು ಬೆಟ್ಟು ಇಗರ್ಜಿ ಶಾಲೆಯ ಸಮೇತ) VIನೇ ದರ್ಜೆಯ ಮಂಜೂರಾತಿಯನ್ನು ಆಕ್ಷೇಪಿಸುವಾಗ್ಗೆ "ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಕೌನ್ಸಿಲಿನ ಅನುಮತಿಯನ್ನು ಮುಂದಾಗಿ ಪಡೆಯದೆ ಹಾಯರ್ ಕ್ಲಾಸನ್ನು ತೆರೆಯಬಾರದೆಂದಿರುವ ರೂಲಿನನ್ನು, ಕುರುಕಾಲು ಹಾಯರ್ ಎಲಿಮೆಂಟ್ರಿ ಶಾಲೆಗೆ ಸದ್ರಿ ಶಾಲೆಯಿಂದುಂಟಾಗುವ ಬಾಧಕವನ್ನು, ಹಾಯರ್ ಎಲಿಮೆಂಟ್ರಿ ಶಾಲೆಗಳ ದೂರವು ಒಂಬತ್ತಕ್ಕಿಂತ ಮತ್ತೊಂದಕ್ಕೆ ೩ ಮೈಲಾದರೂ ಇರಬೇಕೆಂಬ ಕೌನ್ಸಿಲಿನ ನಿರ್ಣಯವನ್ನು" ಸಕಾರಣಗಳಾಗಿ ಪ್ರತಿಪಾದಿಸಿಯದೆ. ಬೆಳ್ಳೆ ಇಗರ್ಜಿ ಶಾಲೆಯು VIನೇ ದರ್ಜೆಯನ್ನು ತೆರೆಯುವ ಮುಂದಾಗಿ ಕೌನ್ಸಿಲಿನ ಅನುಮತಿಯನ್ನು ಪಡೆಯಲಿಲ್ಲವೆಂಬ ೧ನೇ ಕಾರಣವೂ ಕುರುಕಾಲು ಶಾಲೆಯ ಹಾಯರ್ ಕ್ಲಾಸುಗಳಲ್ಲಿರುವ ಮಕ್ಕಳ ಪ್ರತಿ ಅರವತ್ತಿ ಸಂಖ್ಯೆಯು ಬೆಳ್ಳೆ ವ ಕಟ್ಟಿಂಗೇರಿ ಗ್ರಾಮದವರಾಗಿರುವುದರಿಂದ ಸದ್ರಿ ಇಗರ್ಜಿ ಶಾಲೆಯು ಹಾಯರ್ ಎಲಿಮೆಂಟ್ರಿಯಾದರೆ ಕುರುಕಾಲು ಶಾಲೆಗೆ ಬಾಧಕವಿದೆಯೆಂಬದಾಗಿ ಕೊಟ್ಟಿರುವ ೨ನೇ ಕಾರಣವೂ ವಿಚಾರ ದೃಷ್ಟಿಯುಳ್ಳವರಿಗೆ ನ್ಯಾಯವೆಂದು ಕಂಡುಬಂದೀತು. ೩ ಮೈಲು ಅಂತರದ ಕೊನೆಯ ಕಾರಣವೂ, ನಿಷ್ಪಕ್ಷಪಾತಿಯ ಅಪಲಾಪದಿಂದಾದರೂ ತಪ್ಪೆಂದು ರುಜುವಾಗಲಾರದು. ಈ ಎರಡು ಶಾಲೆಗಳ ಮಧ್ಯೆ ರಾಜರಸ್ತೆ ಇಲ್ಲವೆಂಬದಾಗಿ ಆಲೋಚಿಸುವ ಸ್ವಾರ್ಥಪರಹಿತರಿಗೆ ನಿಜವಾದ ದೂರವು ಇಷ್ಟೇ ಇದೆ ಎಂದು ಧೈರ್ಯದಿಂದ ಬರೆಯಲಿಕ್ಕೆ ಎದೆ ಸಾಲದೆ ಹೋಯಿತು. ರಾಜಮಾರ್ಗವಿಲ್ಲದಿದ್ದರೂ, ಮೂಡು ಪ್ರಾಂತ್ಯದಿಂದ ಕಟ್ಟಪಾಡಿ ಪೇಟೆಗೆ ಪ್ರತಿದಿನ ನೂರಾರು ಜನಸಂಚಾರದ, ಬೆಳ್ಳೆ ಇಗರ್ಜಿ ಶಾಲೆಯ ಎದುರಿನಿಂದ ಕುರುಕಾಲು ಹಾಯರ್ ಎಲಿಮೆಂಟ್ರಿ ಶಾಲೆಯ ಅಂಗಳಕ್ಕಾಗಿ ಪೇಟೆಗೆ ಹಾದುಹೋಗುತ್ತಿರುವ ಪ್ರಾಮುಖ್ಯವಾದ ಕಾಲುದಾರಿ ಇದ್ದರೂ "ಮುಚ್ಚಿದಕಿವಿಗೆ ಬೆಣ್ಣೆಬಿಟ್ಟ" ಎಂಬಂತೆ, ಸೃಷ್ಟಿ ಮಾರ್ಜಾಲ ದಶಿಯ ಕಾಶಿಯಾತ್ರೆಯ ದಾರಿಯ ಹಾಗೆ, ಗುಡ್ಡ, ಕಟ್ಟು, ಬೆಟ್ಟು, ಹಳ್ಳಗಳಿಂದ ಕೂಡಿ ಅನಾನುಕೂಲವಾಗಿ ಕಂಡರೆ ಅದು ದೃಷ್ಟಿದೋಷವಲ್ಲದೆ ಮತ್ತೇನಲ್ಲ.

ಈ ಎರಡು ಶಾಲೆಗಳ ನಡುವೆ ಹರಿಯುವ ದೊಡ್ಡ ಹಳ್ಳವು! ಮಳೆಗಾಲ ದಾಟಿದ ತರುವಾಯ ಬತ್ತಿ ಹೋಗುತ್ತದೆಂಬುದು ನಿಷ್ಪಕ್ಷಪಾತಿಯ ದೃಷ್ಟಿಪಥಕ್ಕೆ ಗೋಚರವಾಗದಿದ್ದರೆ ಈಗ ನೋಡಿ ಸಮಾಧಾನಪಡಲಿ. ಬೆಳ್ಳೆ, ಬೋರ್ಡು ಶಾಲೆಗೂ ಇಗರ್ಜಿ ಶಾಲೆಗೂ ಸದಾ ಹೋಗುತ್ತಿರುವ ಲೋವರ್ ಕ್ಲಾಸಿನ ಚಿಕ್ಕ ಮಕ್ಕಳು ಸಹ ಸುಲಭದಿಂದ ಪಾರಾಗುವ ಈ ಚಿಕ್ಕ ನದಿಯನ್ನು ಕುರುಕಾಲು ಶಾಲೆಗೆ ಬರುವ ಹಾಯರ್ ಕ್ಲಾಸಿನ ದೊಡ್ಡ ಮಕ್ಕಳು ದಾಟುವಾಗ್ಗೆ ನಿಮಗೆ ಕಳವಳವಾಗುವುದೆಂದಾದರೆ, ನಿಮ್ಮ ದೃಷ್ಟಿಯನ್ನೊಮ್ಮೆ ಕುರುಕಾಲು ಗ್ರಾಮಕ್ಕೂ ತಿರುಗಿಸಿನೋಡಿ! ಸೋದಿನ ಕರುಣಾ ಪ್ರವರ್ತನದ ಇಂಗಿತವಾಗುವದು. ಉಡಿಯಾವರ ಇಗರ್ಜಿಗೆ ಸಮ್ಮಂಧಪಟ್ಟ ಕುರುಕಾಲು ಗ್ರಾಮದ ಉತ್ತರ ಪಾರ್ಶ್ವದ ಎಲ್ಲಾ ಕೆಥೋಲಿಕ ಮಕ್ಕಳು ಸಮೀಪದಲ್ಲಿರುವ ಕುರುಕಾಲು ಹಾಯರ್ ಎಲಿಮೆಂಟ್ರಿ ಶಾಲೆಗೆ ಬಾರದೆ, ಒಂದಲ್ಲ, ಎರಡಲ್ಲ, "ಮೂರು" ಎಂಬಂತೆ ಸದಾ ನೀರಿನಿಂದ ತುಂಬಿರುವ ಕುರುಕಾಲು ಹೊಳೆ, ಕೆಮುಣ್ಣುರು ಹೊಳೆ, ಬೊಳ್ಜದ ದೊಡ್ಡ ತೋಡು, ಇವೇ ಜಲರಾಶಿಗಳನ್ನು ದಾಟಿ ಬಹಳ ದೂರವಿರುವ ಇಗರ್ಜಿ ಹಾಯರ್ ಎಲಿಮೆಂಟ್ರಿ ಶಾಲೆಗೆ ಹೋಗುವಾಗ್ಗೆ ನಿಮ್ಮ ಕರುಣಾ ದೃಷ್ಟಿಯಲ್ಲಿ ನೀರು ಒಸರುತ್ತಿದೆಯೋ? ಇಂಥಾ ದೃಷ್ಟಾಂತಗಳು ಇನ್ನೆಷ್ಟು ಕಡೆಗಳಲ್ಲಿಲ್ಲ?

ಬೆಳ್ಳೆ ಚರ್ಚ್ ಶಾಲೆಯ ಮೂಡು ಬಡಗು ಪ್ರಾಂತ್ಯದ ಮಕ್ಕಳಿಗೆ ಬೇರೆ ಹಾಯರ್ ಎಲಿಮೆಂಟ್ರಿ ಶಾಲೆ ಇಲ್ಲದಿರುವುದರಿಂದ ಸದ್ರಿ ಇಗರ್ಜಿ ಶಾಲೆಯು ಹಾಯರ್ ಎಲಿಮೆಂಟ್ರಿಯಾಗಬೇಕೆಂದು ವಿದ್ಯಾಭಿಮಾನಿಗಳಾದ ನಿಮ್ಮ ಇಚ್ಛೆ! ಇರಲಿ, ಆದರೆ ಟೀಚರ್ ಮೆನೇಜರರ ಸಂಘದಲ್ಲಿ ನಿಮ್ಮ ಕಣ್ಣು ಕುಕ್ಕುವ ಠರಾವು ಪಾಸಾಗುವ ಮೊದಲೇ, ಅದೇ ನಿಮ್ಮ ಮೂಡು ಮತ್ತು ಬಡಗು ಪ್ರಾಂತ್ಯದ ಕಟ್ಟಿಂಗೇರಿ, ನಿಂಜೂರು, ಪೆರ್ಣಂಕಿಲ ಮತ್ತು ಬೆಳ್ಳೆ ಕೂಡಾ ಗ್ರಾಮಗಳ ಗ್ರಾಮ ಉದ್ಯೋಗಸ್ಥರೂ, ಹಿಂದೂಗಳೂ, ಬೆಳ್ಳೆ ಇಗರ್ಜಿ ಶಾಲೆಯನ್ನು ಹಾಯರ್ ಎಲಿಮೆಂಟ್ರಿ ಮಂಜೂರಾತಿ ಮಾಡಬಾರದಾಗಿಯೂ, ಸದ್ರಿ ಇಗರ್ಜಿ ಶಾಲೆಯ ಸುಮಾರು ೨ ಮೈಲು ಮೂಡುದಿಕ್ಕಿಗಿದ್ದು, ತಮ್ಮ ಮಕ್ಕಳ ಬಗ್ಗೆ ಯೋಗ್ಯ ಕೇಂದ್ರವಾಗಿರುವ ಯಡ್ಮೇರು ಹಿಂದೂ ಶಾಲೆಯನ್ನು ಹಾಯರ್ ಎಲಿಮೆಂಟ್ರಿ ಮಾಡುವ ಬಗ್ಗೆ ಅನುಮತಿ ಕೊಡಬೇಕಾಗಿಯೂ ಕೌನ್ಸಿಲಿಗೆ ಅರ್ಜಿಮಾಡಿ ಪ್ರಯತ್ನಿಸುತ್ತಿದ್ದಾರಂತೆ. ವಿದ್ಯಾಭಿಮಾನಿಗಳೇ! ಇದಕ್ಕೇನನ್ನುವಿರಿ? ಇನ್ನು ಇಗರ್ಜಿ ಶಾಲೆಯು ಮೂಡು, ಬಡಗು ಪ್ರಾಂತ್ಯದ ಮಕ್ಕಳ-ಕಡೆಗಿದ್ದ ವಿದ್ಯಾಭಿಮಾನದ ಗೋಮುಖದನ್ನು ಹೋಗಲಾಡಿಸಿ, ಮತಾಭಿಮಾನದ ವ್ಯಾಘ್ರಸ್ವರೂಪವನ್ನು ಧರಿಸಲಿಕ್ಕಿಲ್ಲವಷ್ಟೆ! ನೀವು ಯಾವ ಪ್ರಾಂತ್ಯದ ಮಕ್ಕಳ ಸಲುವಾಗಿ "ವಿದ್ಯಾದಾನ ನಿಲ್ಲಿಸಿದ ಪಾಪಕಪ್ಪೀಸು" ಎಂದು ಟೀಚರ್ ಮೆನೇಜರರ ಸಂಘಕ್ಕೆ ಪಾಪವನ್ನು, ವಿದ್ಯಾಭಿಮಾನಿಯಾದ ನಿಮಗೆ ಪುಣ್ಯವನ್ನು [illegible] ಸಾಧ್ಯವೇ? [illegible] ನೀವು ತಮ್ಮ ಶ್ರೇಯವನ್ನು, ಪರಿಣಾಮವಾಗಿ [illegible] ದಾಗ್ಗೆ ಮಹಾಶಯನಿಂದ ನಿಮ್ಮ ಧ್ಯೇಯವನ್ನು, ಬಯಲುಮಾಡಿದರೆ, ಪಾಪವನ್ನು ಹಂಚುವ ಅಧಿಕಾರಿಗೇ ಆ ಜನರ ಶಾಪವು ಬಂದೀತೆಂದು ಅಗಲಾದರೂ ಲಕ್ಷ್ಯಕ್ಕೆ ಬರಲಿ.

ಎಲ್ಲಾ ಪ್ರೈವೇಟ್ ಶಾಲೆಗಳ ಹಾಗೂ ಉಪಾಧ್ಯಾಯರ ಕುಂದುಕೊರತೆಗಳನ್ನು ಪರಿಹರಿಸುವಂತೆ ಸರಕಾರಕ್ಕೆ ಮನದಟ್ಟುಮಾಡಿಕೊಳ್ಳುವ ಬಗ್ಗೆಯೂ, ಸಬಲರು ಅಬಲರನ್ನು ಕೊಲ್ಲೆ ಹೊಡೆಯುವಾಗ್ಗೆ ತಪ್ಪಿಸುವ ಬಗ್ಗೆಯೂ, ಇತ್ಯಾದಿ ಉಚ್ಚಧ್ಯೇಯದಿಂದಲೇ ಟೀಚರ್ ಮೆನೇಜರರ ಸಂಘವು ಜನನವಾಗಿ, ತನ್ನ ಕಾರ್ಯಕಲಾಪಗಳಿಂದ ಸಮದೃಷ್ಟಿಯುಳ್ಳ ಎಲ್ಲಾ ಮಹನೀಯರ ಮತ್ತು ಸರಕಾರದ ಮನ್ನಣೆಗೆ ಪಾತ್ರವಾಗಿದೆ. ಎಲ್ಲಾ ಪ್ರೈವೇಟ್ ಶಾಲೆಗಳಿಗೆ ಪರಸ್ಪರ ಮೈತ್ರತ್ವವೂ, ಮೆನೇಜರರೊಳಗೆ ಪರಸ್ಪರ ಪ್ರೇಮವೂ ಉಂಟಾಗಬೇಕೆಂಬದಾಗಿ ನೀವು ಉಪದೇಶಿಸುವ ಕರ್ಮಮಂತ್ರವು ಬರೇ ಟೀಚರ್ ಮೆನೇಜರರ ಸಂಘಕ್ಕೆ ಮಾತ್ರವಾಗಿರದೆ, ನಿಮ್ಮ ಸಮಾಜದ ಕೆಲವು ಪಾದ್ರಿಗಳಿಗೂ ಆಗಾಗ್ಗೆ ಪಾರಾಯಣ ಮಾಡಿಸಿದರೆ, ಕೆಥೋಲಿಕ ಮಕ್ಕಳನ್ನು ಸಮೀಪದಲ್ಲಿರುವ ಮಿಶನ್ ಶಾಲೆ, ಹಿಂದೂಶಾಲೆ, ಬೋರ್ಡು ಶಾಲೆಗಳಿಗೂ ಹೋಗಗೊಳಿಸದೆ, ಎಷ್ಟೇ ದೂರವಿದ್ದರೂ, ಎಷ್ಟೇ ಕಷ್ಟಗಳಿದ್ದರೂ, ಅನುಭವಿಸಿಕೊಂಡು ತಮ್ಮ ಶಾಲೆಗಳಿಗೇನೇ ಬರಬೇಕೆಂಬದಾಗಿ ಮಾಡುವ ಅಧಿಕಾರವಾಣಿಯೂ, ಪಣಗುದ್ದ, ಇನ್ನಂಜೆ ಇತ್ಯಾದಿ ಕೆಲವು ಟೀಚರ್ ಮೆನೇಜರರ ಬಳಿ ಶಾಲೆಗಳೆದುರಿಗೆ ತಮ್ಮ ಶಾಲೆಗಳನ್ನು ಸ್ಥಾಪಿಸಿ ನಡಿಸುವ ಸಮಾಜದ ಸಂಕುಚಿತ ಧೋರಣೆಯೂ, ಶಿಥಿಲವಾಗಿ ಪರಸ್ಪರ ಭ್ರಾತೃಭಾವವು ಬೆಳೆಯಲು ಪ್ರಾರಂಭವಾಗುವದು.

ಅಯ್ಯಾ! ನಿನ್ — ಪಕ್ಷಪಾತಿಗಳೇ! ಕೆಥೋಲಿಕರ ಪಕ್ಷಪಾತದಿಂದ ಟೀಚರ್ ಮೆನೇಜರರ ಸಂಘವನ್ನು ತೆಗಳುವ ಬದಲಿಗೆ ನಿಮ್ಮಷ್ಟಕ್ಕೆ ನೀವೇ ಕ್ಷೀರಸಾಗರ ಭಟ್ಟರಾಗಿ ಧಾರಣೆ ಮಾಡಿಕೊಂಡ "ನಿಷ್ಪಕ್ಷಪಾತಿ" ಎಂಬ ಪವಿತ್ರನಾಮದ ಅಸಾರ್ಥಕತೆಯ ಪ್ರಾಯಶ್ಚಿತ್ತಕ್ಕೆ ಉಂಸಾರ್ ಮಾಡೋಣಾಗಲಿ!

ಇತಿ

ನಿಷ್ಪಕ್ಷಪಾತಿಯನ್ನು ಜಾತೀಯ ಪಕ್ಷಪಾತಿಯಾಗಿ ತಿಳಿದವ.

ಪ್ರಕಟಣೆ.

ಈ ಕೆಳಗೆ ದಸ್ಕತು ಮಾಡಿದ ನಾನು ಈ ಮೂಲಕ ತಿಳಿಯಪಡಿಸುವದೇನಂದರೆ —

ಚಂದಾರಿಯೆಂಬ ಚರ್ಕತ್ತೂರು ಪೋಲೀಸ್ ಸ್ಟೇಶನ್ ಇರುವಾಗ ಭಯಂಕರ ಮೊಕದ್ದಮೆಗಳು ಸಂಭವಿಸುವಂಥಾದ್ದು ಅಪರೂಪವಾಗಿತ್ತು. ಆ ಸ್ಟೇಶನ್ ತೆಗೆದು ಜಾತಿನ ಸಂಮ್ಮಂಧ ಹೆಚ್ಚಿನ ಜವಾಬ್ದಾರಿಯು ಹೊಸ ದುರ್ಗ ಸ್ಟೇಶನ್‌ನಲ್ಲಿ ಕೂಡಿಯದೆ. ಇಲ್ಲಿಯ ಈಗಿನ ಸಬ್ ಇನ್ಸಪೆಕ್ಟರರು ಮಿಸ್ಟರ್ ಬಿ. ಶ್ರೀನಿವಾಸ ರಾಯರು ಹೆಚ್ಚಿನ ಶ್ರದ್ಧೆ ಇಟ್ಟು ಕೆಲಸ ಮಾಡುವದು ಹೆಚ್ಚಿನ ತೃಪ್ತಿಕರವೆ!

ಕಳೆದ ಅಗೋಸ್ತು ತಿಂಗಳಲ್ಲಿ ತಂಕುತ್ತಿಕೆರಕೂರಗ್ರಾಮದಲ್ಲಿ ನಡೆದ ಒಂದು ಕನ್ನ ಕಳವಿನ ನಂಬ್ರವನ್ನು ಸೊತ್ತುಗಳ ಸಮೇತ ಗುನ್ನೆಗಾರರನ್ನು ಪತ್ತೆಮಾಡಿದ್ದು ಬಹಳ ಶ್ಲಾಘನೀಯವಾದದ್ದು. ಈ ತರಾತಿಯಲ್ಲಿ ಉದೆನೂರು ಗ್ರಾಮದಲ್ಲಿ ನಡೆದ ಕನ್ನ ಕಳವಿನ ಸೊತ್ತುಗಳ ಪ್ರತಿ ಕೆಲವು ಈ ಅಬಾರಿತದಲ್ಲಿ ತಲುಪಿಯದಾದುವು. ನಂಬ್ರಗಳು ಎರಡು ಸಹಾ ತನಿಖೆಯಲ್ಲಿ ಆಖೆರ ಶಿಕ್ಷೆಯಲ್ಲಿ ಕೊನೆಗೊಂಡವು.!

ಈ ಮೊದಲು ಪಡ್ನೆಯಲ್ಲಿ ನಡೆದ್ದಿತೋ ರಕ್ತಪಾತದ ಖೂನಿಯ ಪತ್ತೆಯಲ್ಲಿ ಈ ಸಬ್ ಇನ್ಸಪೆಕ್ಟರರು ಮತ್ತು ಸರ್ಕಲ್ ಇನ್ಸಪೆಕ್ಟರರು ಹೆಚ್ಚು ಕಷ್ಟಪಟ್ಟು ಅಪಾದಿತರನ್ನು ಕಂಡು ಹಿಡಿದಿರುತ್ತಾರೆ. ನ್ಯಾಯಸ್ಥಾನದಲ್ಲಿ ಕೂಡಾ ಅಪರಾಧಿಗಳಿಗೆ ತಕ್ಕ ಶಿಕ್ಷೆಯೂ ಆಗಿ ಅಪೀಲಿನಲ್ಲಿ ಸಹಾ ಖಾಯಂ ಆಗಿಯದೆ. ಈ ಸಬ್ ಇನ್ಸಪೆಕ್ಟರರು ಈಗಿನ ಸ್ಟೇಶನಿಗೆ ಬಂದ ನಂತರ ೨–೩ ಖೂನಿಗಳನ್ನೂ ೪–೫ ಕಳವುಗಳನ್ನೂ ಪತ್ತೆ ಮಾಡಿರುತ್ತಾರೆ. ಇವರ ಈ ಕ್ರಮವು ಹೆಚ್ಚಿನ ತೃಪ್ತಿಕರವಾಗಿಯದೆ.

ಕನ್ನ ಕಳವಿನ ಅಪರಾಧಗಳು ಮಲಬಾರ ಜಿಲ್ಲೆಗೆ ಸಮ್ಮಂಧಪಟ್ಟವರಾಗಿ ರಾತ್ರಿ ಸಮಯ ನಮ್ಮ ಜಿಲ್ಲೆಯ ಗ್ರಾಮಗಳಲ್ಲಿ ಹೊಂಚುಹಾಕಿ ದೋಚಿಕೊಳ್ಳುವ ತಸ್ಕರುಗಳು ಮಾಯವಾಗಿ ತಸ್ಕರಿನ ಧುರೀಣರ ಸುಳಿವು ಈಗ ಅಳಿದುಹೋಗಿ ಊರಿನಲ್ಲಿ ಬಾಧಕಗಳು ಇಲ್ಲದೆ ಇರುವದು ನಿಜವಾಗಿ ಇರುವದು ಪೋಲೀಸ್ ಖಾತೆಗೆ ಸ್ತುತ್ಯ.

ಪೋಲೀಸ್ ಆಫೀಸರರು ಇಂಥಾ ಮೊಕದ್ದಮೆಗಳಲ್ಲಿ ರಕ್ತ ಬೆವರುವವರೆಗೆ ಕಷ್ಟಪಡುವ ಕೆಲವು ಸಂಗತಿಗಳಲ್ಲಿ ಸರಕಾರದವರು ಅವರ ಪಗಾರು ವಿನಹಾ ಬೇರೆ ತರದ ಇನಾಮುಗಳನ್ನು ಇಟ್ಟಿರುತ್ತಾರೆ. ಇಂಥಾ ಇನಾಮು ರೂಪದ ಶಿಫಾರಸು ಈ ಸಬ್ ಇನ್ಸಪೆಕ್ಟರರಿಗೆ ಸಿಕ್ಕದೆ ಇರದು ಎಂತ ಭಾವಿಸುತ್ತೇನೆ.

ಇದಕ್ಕೆ ಸಮ್ಮಂಧಪಟ್ಟ ಇನ್ನೊಂದು ಮಾತು ಅದೆ. ಪೋಲೀಸ್ ಹುದ್ದೆದಾರರಿಗೆ ಮೊಕದ್ದಮೆಗಳ ಪತ್ತೆ ವಿಷಯದಲ್ಲಿ ಖಾಸಗಿ ಜನರ ಸಹಾಯವು ಹೆಚ್ಚಿನ ಮೋಹನತ್ತಿನಿಂದ ಅಂಗೀಕರಿಸೋಣಾಗುವದು. ಈ ಸಂಗತಿಯಲ್ಲಿ ಪಕ್ಕ ಕುಟ್ಟಿ ಮಮ್ಮುಂಞ ಬ್ಯಾರಿ ಸೆನವು ನನಗೆ ಆಗಾಗ್ಗೆ ಬರುತ್ತದೆ. ಇವರಿಗೆ ಸರಕಾರದಿಂದ ಈ ವರೇಗೆ ೯ ಇನಾಮುಗಳು ದೊರಕಿದ್ದವೆ. ಇದು ಸಿಕ್ಕಬೇಕಾದರೆ ಇವರು ಯಾವ ತರದ ಕಷ್ಟ ಮೇಹನತು ಪಡಬೇಕೆಂಬದು ವಾಚಕರೇ ಊಹಿಸಲಿ! ವಿದ್ಯೆ ಇಲ್ಲದ ಇವರ ಪತ್ತೆಯ ಕ್ರಮವು ಅದ್ಭುತವಾದದ್ದು.

ಮೇಲೆ ಬರೆದ ಸ್ಥಿತಿಗಳು ವಸ್ತುಶಃ ಈ ಪ್ರಕಾರ ಇರುವಾಗ ಮಲಬಾರ ಜಿಲ್ಲೆಯ ವಾರಪತ್ರಿಕೆಯೊಂದು ಸ್ಥಳೀಕ ಸಬ್ ಇನ್ಸಪೆಕ್ಟರರ ಕುಂದು ಕೊರತೆಗಳನ್ನು ಸಾರುತ್ತಿರುವದು. ಮುಖ್ಯ ಕೊರತೆಯು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರೊಬ್ಬರಿಗೆ "ತಲೆ ಸರಿ ಇಲ್ಲಾ" ಯೆಂತ ಹೇಳಿದಾಗಿ ಸೂಚಿಸುತ್ತದೆ. ಕ್ವಾರದ ಸಮ್ಮಂದ ಕ್ರೋಪ್ ಸರಿಯಾಗಿ ಕಟ್ಟಿಂಗ್ ಮಾಡದೆ ಇದ್ದರೆ ಸರಿಯಾಗಿ ಕಾಣುವದು ಹೇಗೆ? ಈ ಕೊರತೆ ಕಂಡು ಹಿಡಿದ ಕುಕ್ಕನಿಗೆ ಗುಳಿಗ ಯಾನೆ ರಾಹು ದೃಷ್ಟಿ ಸಮ್ಮಂದ ಕಣ್ಣುಕಟ್ಟು ಆಗಿಯದೆ ಎಂತ ನನ್ನ ಭಾವನೆ. ಸದ್ರಿ ಪತ್ರದ ಲೇಖಕನು ನಮ್ಮ ಜಿಲ್ಲೆ ಪತ್ರಿಕೆಗಳಲ್ಲಿ ಕಾಣಿಸಿಕೊಂಡರೆ ತಕ್ಕ ಉತ್ತರಕೊಡುವೆನು.

ತಿರ್ಕರಪೂರ,
೧೦—೧೨—೨೮.

ಪಳ್ಳಿಮುಕ್ರಿ.

[illegible]

[illegible] ಕಳೆದ ಸಂಚಿಕೆಯಲ್ಲಿ [illegible] ಕಾಲೋನಿಯಲ್ಲಿ ಯಾವ [illegible] ಕುರಿತು ಹೇಳಿದ್ದಾಯಿತು. ಇನ್ನು [illegible] ಕುರಿತು ಮಾಡಿದ ಚರ್ಚೆಯ ಕುರಿತು [illegible] ಕಾಲೋನಿ ಬೋರ್ಡು ಪ್ರೆಸಿಡೆಂಟರು [illegible] ಹರಡುವ ಸುಳ್ಳು ಕ್ರಮವನ್ನು [illegible] ವನ್ನು ಪಡೆದಿರುವದಾದರೂ ಅದಕ್ಕೆ ಅವರು [illegible] ದರೆ ಪೇಟೆ ಪಟ್ಟಣಗಳಲ್ಲಿಯೇ ಹೊಸ ಶಾಲೆಗಳನ್ನು [illegible] ಮಲೆಯಾ ಪ್ರಾಂತ್ಯಗಳಲ್ಲಿ ಅವರು ಕಾರಿದರೆ [illegible] ನಿವಾಸಿಗಳ ಕುರಿತು ಏನೂ ಚಿಂತೆ ಕೊಡಲಿಲ್ಲವೆಂಬ [illegible] ಯ ಅಂಬೋಣ. ಇದಾದರೂ ಯಥಾರ್ಥವಾದರೆ [illegible] ಶಾಲೆಗಳನ್ನು ತೆರೆಯುವರೆ ಬೋರ್ಡಿನಲ್ಲಿ ಹಣದ [illegible] ಎಲ್ಲರೂ ತಿಳಿಯದಿರುವ ವಿಷಯವಲ್ಲವಷ್ಟೆ? [illegible] ಗಳಾಗಬೇಕಾದರೆ ಸರಕಾರದಿಂದ ಹಣ ಬಂದೇ [illegible] ಕಳೆದ ವರುಷ ಈ ತಾಲೋಕಿನ ಪಟ್ಟಿಗೆ ಹಣ ಬರುವ [illegible] ಕಂಡು ಪಂಚಾಯತ ಶಾಲೆಗಳನ್ನಾದರೂ ತೆರೆಯುವಂತೆ [illegible] ಯುಕ್ತಿಯನ್ನು ಬೇರೆ ತಾಲೋಕಿನಲ್ಲಿ ಯೋಚಿಸದೆ ಇರುವ [illegible] ಕಂಡು ಹಿಡಿದು ಆ ಕುರಿತು ಸಾಕಷ್ಟು ಕ್ರಮವನ್ನು ಪ್ರೆಸಿಡೆಂಟರು [illegible] ಕೊಂಡಿದ್ದಾರೆಂಬುದು ಒಪ್ಪತಕ್ಕದ್ದೇ. ಕಳೆದ ವರುಷ [illegible] ದಲ್ಲಿ ೫೦೦ ಪಂಚಾಯತ ಶಾಲೆಗಳನ್ನು ತೆರೆಯುವರೆ ಸರ್ಕ್ಯುಲರ್ ಆಗಿತ್ತು. ಅವಕ್ಕೆ ಇಂತಹ ಜಿಲ್ಲೆಯ ತಾಲೋಕಿನಲ್ಲಿಯೇ ತೆರೆಯಬೇಕೆಂಬ [illegible] ವಾಗಿರಲಿಲ್ಲ. ಹೀಗಿರಲು ಅನೇಕ ಹಳ್ಳಿಗಳಲ್ಲಿ ಗ್ರಾಮ ಪಂಚಾಯತು ಗಳನ್ನು ಸ್ಥಾಪಿಸಿ ೨೪ ಪಂಚಾಯತ ಶಾಲೆಗಳನ್ನು ಒಂದೇ ತಾಲೋಕಿನಲ್ಲಿ ತೆರೆಯುವಂತೆ ಮಾಡಿದವರು ಬೇರೆ ಯಾರಿಲ್ಲ. ಇಡೀ ಸಂಸ್ಥಾನದಲ್ಲಿ ೧೨೪ ತಾಲೋಕು ಬೋರ್ಡುಗಳಿರುವವು. ೫೦೦ ಶಾಲೆಗಳನ್ನು ಈ ೧೨೪ ಬೋರ್ಡುಗಳೊಳಗೆ ಸರಿಯಾಗಿ ಹಂಚಿದರೆ ಪ್ರತಿ ಬೋರ್ಡಿಗೆ ೪ ರಂತೆ ಮಾತ್ರ ದಾಮಾಶಿ ಬೀಳುತ್ತದೆ. ಹೀಗೆ ಪುತ್ತೂರು ತಾಲೋಕಿನಲ್ಲಿ ೪ರ ಬದಲಿಗೆ ೨೪ ಶಾಲೆಗಳು ತೆರೆದಿವೆಯೆಂದರೆ ಅದು ಅಷ್ಟೊಂದು ಗಣನೆಗೆ ತೆಗೆದುಕೊಳ್ಳಲಾಗದಷ್ಟು ಅಲ್ಪ ಪರಿಮಾಣದ ಕೆಲಸವೆಂತ ನ್ಯಾಯವಾಗಿ ಹೇಳಲಾಗುವದಿಲ್ಲ. ಈ ೨೪ ಶಾಲೆಗಳು ನೆರಿಯ, ಪುದುವೆಟ್ಟು, ತೋಟತ್ತಾಡಿ, ಮಾಲವಂತಿಗೆ, ಕಡಿರುದ್ಯಾವರ, ಸವಣಾಲು, ಪಟ್ರಮೆ, ನೂಜಿಬಾಳ್ತಿಲ, ಬಳ್ಪ, ಪೆರಾಬೆ, ಕುಂತೂರು, ಐನೆಕಿಲ್ಲು, ಕೊಲ್ಲಮೊಗ್ರು, ಕಾಣಿಯೂರು ಮುಂತಾದ ಕೇವಲ ಮಲೆಯಾ ಪ್ರದೇಶ ಕೌರ್ಯ ಮನೆಗಳಲ್ಲಿಯೇ ತೆರೆದಿರುವದು. "ತಾಲೋಕು ನಿವಾಸಿ"ಯ ಸ್ಮರಣೆಗೆ ಹೇಗೆ ತಪ್ಪಿತೋ ತಿಳಿಯದು. ಕೇವಲ ಮಳೆಗಾಲದ ಮಧ್ಯದಲ್ಲಿ ಕೊಡ ಪ್ರೆಸಿಡೆಂಟರು ಮನೆಯಲ್ಲಿ ಬೆಚ್ಚಗೆ ಕೂತುಕೊಳ್ಳುವ ಬದಲಿಗೆ ಈ ಮೂಲೆ ಮೂಲೆಗಳಲ್ಲಿರುವ ಗ್ರಾಮಗಳಲ್ಲೆಲ್ಲ ಶಾಲೆಗಳನ್ನು ಸ್ಥಾಪಿಸುವ ಸಲುವಾಗಿ ಸುತ್ತಾಡುತಿದ್ದದ್ದು ನಾನು ಸ್ವತಹಾ ಬಲ್ಲೆ. "ತಾಲೋಕು ನಿವಾಸಿ"ಗೆ ಮಾತ್ರ ಇದು ಹೇಗೆ ಅಗೋಚರವಾಯಿತೋ? ಮಲೆನಾಡಿಗೆ ಅಂಜಿ ಪೇಟೆ ಪಟ್ಟಣದ ಸುಖವನ್ನೇ ಬಯಸಿ ಅಲ್ಲಿಯೇ ಸಕೀಲು ಕೇಳಿಸುವ ತಾಲೋಕು ಬೋರ್ಡು ಪ್ರೆಸಿಡೆಂಟರು ಅನೇಕರಿರಬಹುದು. ಆದರೆ ಈ ಅಪವಾದವು ನಮ್ಮ ಪ್ರೆಸಿಡೆಂಟರ ಮೇಲೆ ಹಾಕುವದು ವಿನಾಕಾರಣ ಮತ್ತು ದ್ವೇಷಬುದ್ಧಿಯಿಂದ ಹೇಳಬೇಕಷ್ಟೇ. ಪಂಚಾಯತ ಶಾಲೆಗಳನ್ನು ೫೦೦ ಯಾ ಅದಕ್ಕಿಂತ ಮಿಕ್ಕಿ ಜನ ಸಂಖ್ಯೆಯುಳ್ಳ ಗ್ರಾಮಗಳಲ್ಲಿ ಮಾತ್ರ ತೆರೆಯಬೇಕೆಂತ ಕಂಡೀಶನ್ನಾಗಿರುವಲ್ಲಿ ಅದಕ್ಕಿಂತಲೂ ಕಡಿಮೆ ಜನ ಸಂಖ್ಯೆಯುಳ್ಳ ಗ್ರಾಮಗಳ ಸಾಲು "ತಾಲೋಕು ನಿವಾಸಿ"ಯು ಎದುರೊಡ್ಡಿ ಏನೂ ಪ್ರಯೋಜನವಿಲ್ಲ. ಶಿರಿವಾಗಿಲು ಗ್ರಾಮಕ್ಕೆ ಶಾಲೆಯುಂಟು. ಆ ಗ್ರಾಮದಲ್ಲಿ ೧೯೨೧ನೆಯ ಖಾನೆಸುಮಾರಿ ಮೇರೆಗೆ ೧೮ ಮನೆಗಳು ಜನ ಸಂಖ್ಯೆ ಬರೇ ೧೧೩. ಅದು ಆನೆಗಳ ನಿವಾಸದ ಪ್ರಚಂಡವಾದ ಕಾಡಿನಿಂದ ಮುಚ್ಚಲ್ಪಟ್ಟ ಗ್ರಾಮ. ಈಗ ಅಲ್ಲಿ ಬರೇ ೯ ಮನೆಗಳಿವೆ. ಜನ ಸಂಖ್ಯೆ ಕೂಡ ಅದೇ ರೀತಿ ತಗ್ಗಿಯದೆ. ಇಲ್ಲಿ ಶಾಲೆ ತೆರೆಯಬೇಕಂತೆ! "ತಾಲೋಕು ನಿವಾಸಿ"ಯ ಸೂಕ್ಷ್ಮ ದೃಷ್ಟಿಯೂ ವಿಚಾರ ಶೀಲತೆಯೂ ಎಷ್ಟು ಘನತರವು! ಅದರ ಬಗ್ಗೆ ಗ್ರಾಮವಾದ ಕೊಣಾಜೆಯ ಜನ ಸಂಖ್ಯೆ ೪೦೦ ಚಿಲ್ಲರೆಯಾದುದರಿಂದ ಅದಕ್ಕೂ ಶಿರಿವಾಗಿಲು ಗ್ರಾಮಕ್ಕೂ ಕೂಡಿ ಆ ಗ್ರಾಮಗಳ ಗಡಿಯಾದ ಕನೆಯ ಎಂಬಲ್ಲಿ ಪಂಚಾಯತ ಶಾಲೆಯಾಗಬೇಕೆಂತ ಕಳೆದ ವರುಷವೇ ಬರೆದುಹಾಕಿದ್ದಕ್ಕೆ ಈ ವರುಷ ಜೇಗಾಧರಲೂ ಹುಕುಂ ಸಿಕ್ಕಿ ಈಗ ೨ ತಿಂಗಳುಗಳ ಹಿಂದೆಯೇ ಅಲ್ಲಿ ಶಾಲೆ ತೆರೆದೂ ಆಗಿದೆ. ಶೀರಾಡಿಯಲ್ಲಿ ಪಂಚಾಯತ ಶಾಲೆ ಬೇಕೆಂತ ಬರೆದು ಹಾಕಿ ೪ ತಿಂಗಳುಗಳಾದವು. ಆಲೋಚನೆಯಲ್ಲಿಯೇ ಮದರಾಸಿನ ಅಧಿಕಾರಿಯೊಡನೆ ಬಾಕಿ ಇದೆ. ಮಿತ್ತ ಬಾಗಿಲು, ಉಬರಡ್ಕ, ಮಿತ್ತೂರು, ಈ ಗ್ರಾಮಗಳಲ್ಲಿ ಬೋರ್ಡು ಶಾಲೆಗಳನ್ನು ತೆರೆದು ಕೆಲವು ವರುಷಗಳಾದವು. "ತಾಲೋಕು ನಿವಾಸಿ"ಗೆ ಮಾತ್ರ ಗೊತ್ತೇ ಆಗಲಿಲ್ಲ. ಬಾಳಗೋಡು ಮುಂತಾದ ಮಿಕ್ಕ ಗ್ರಾಮಗಳಲ್ಲೆಲ್ಲ ೫೦೦ಕ್ಕಿಂತಲೂ ಕಡಿಮೆ ಜನ ಸಂಖ್ಯೆಯಾದುದರಿಂದ ಪಂಚಾಯತ ಯಾ ಬೋರ್ಡು ಶಾಲೆಗಳು ಸದ್ಯದ ಪರಿಸ್ಥಿತಿಯಲ್ಲಿ ಆಗಲಿಕ್ಕೆ ಸಾಧ್ಯವೇ ಇಲ್ಲ. ಇದಕ್ಕೆ ಪ್ರೆಸಿಡೆಂಟರಾದರೂ ಹೊಣೆಯಲ್ಲ.

ಈ ವರುಷ ಮೇಲಂತಬೆಟ್ಟು, ಸುಬ್ರಮಣ್ಯ, ದೋಳ್ಪಾಡಿ, ಕೊಂಬಾರು, ಕೊತುಕುಂಜ, ಕಲ್ಮಡ್ಕ ಮುಂತಾದ ಮಲೆನಾಡುಗಳಲ್ಲಿ ಒಟ್ಟು ೧೭ ಶಾಲೆಗಳು ತೆರೆಯಲಾಗಿವೆ. "ತಾಲೋಕು ನಿವಾಸಿ"ಗೆ ಮಾತ್ರ ತೃಪ್ತಿಯೇ ಇಲ್ಲ. ಮಳೆ ಪ್ರದೇಶಗಳಲ್ಲಿ ಶಾಲೆಗಳನ್ನು ತೆರೆಯಲಿಕ್ಕೆ ಪ್ರಯತ್ನಗಳೇನೂ ನಡಿಸಲಿಲ್ಲವೆಂದು ಹಸಿ [illegible] ಸುಳ್ಳು ಬಳೆ ಬರೆದನೋ? ನಂಬುವದಕ್ಕೆ ಬೇರೆನೂ ದಾರಿ ತೋರ[illegible]. ತಾನು ಇನ್ನಾದರೂ ಕುಹಕ ಬುದ್ಧಿಯನ್ನು ಬಿಟ್ಟು ತಾಲೋ[illegible] ಅಭಿವೃದ್ಧಿಯ ಕುರಿತು ಮಂತ್ರಾಲೋಚನೆಯನ್ನು ಕೊಡುವದೆಂಬ ದೊಡ್ಡ [illegible]ವಂತಿಕೆಯ ವೇಷವನ್ನು ಬಿಚ್ಚಿಟ್ಟು ಆತ್ಮವಿಚಾರವನ್ನು ಮಾಡಿಕೊಳ್ಳುವದು ಎಷ್ಟೋ ಲೇಸು!

ನಮ್ಮ ತಾಲೋಕು ಬೋರ್ಡಿನ ಆಡಳಿತದಲ್ಲಿ ಹಾಗೂ ವ್ಯಕ್ತಿಶಃ ಪ್ರೆಸಿಡೆಂಟರಲ್ಲಿ ಅನೇಕ ದೋಷಗಳಿರಬಹುದು. ಆದರೂ ನಮ್ಮ ತಾಲೋಕು ಬೇರೆ ತಾಲೋಕುಗಳಿಗಿಂತಲೂ ಹೆಚ್ಚಾಗಿ ಮುಂದಿನ ಹೆಜ್ಜೆಯನ್ನೇ ಇಡುತ್ತದೆಂಬುದರಲ್ಲಿ ಸಂಶಯವೇನೂ ಇಲ್ಲ. ಇದರಿಂದ ಅಭಿಮಾನವು "ತಾಲೋಕು ನಿವಾಸಿ"ಯಲ್ಲಿ ಹುಟ್ಟುವ ಬದಲಿಗೆ ಹುಳುಕು ಬಿಕ್ಕೆ ಉಂಟಾಯಿತೋ? ಇನ್ನಾದರೂ ಇದನ್ನು ದೂರಬಿಟ್ಟು ತಾಲೋಕಿನ ಮುಂದಿನ ಅಭ್ಯುದಯದ ಕಾರ್ಯಕಲಾಪಗಳ ಪಕ್ಕಕ್ಕೆ [illegible] ಕೆಲಸವಾದರೂ ಮಾಡಬಾರದೇ?

"[illegible] ನಿವಾಸಿ"

The Canara Bank, Limited, Mangalore.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0	ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0
Reserve and other sinking Funds „ 3,37,715—3—7	ಕ್ಷೇಮನಿಧಿ ಮತ್ತು ಇತರ ಫಂಡುಗಳು 3,37,715—3—7
Amount invested on G. P. Notes Rs. 4,87,793—6—0	ಗವರ್ನಮೆಂಟ್ ಪ್ರೊಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0
Rates of interest on fixed deposits at Head Office and Branch 6¼% for 2 Years, 6% „ 1 Year	ಕಾಯಂ ಠೇವಣಾತಿಗಳ ಮೇಲೆ ಕೊಡೋಣಾಗುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1ವರುಷಕ್ಕೆ ಶೇ 6.
Season deposits of Rs. 1000/- & above terminable by the end of June are received at 6¼% p. a.	ಜೂನ್ ಅಂತ್ಯದ ವಳಗೆ ವ್ಯಾದೆ ಆಗುವ ರೂ. 1000/-ವ ಮಿಕ್ಕಿದ ಮುಸಂ ಡಿಪೋಜಿಟುಗಳಿಗೆ ಬಡ್ಡಿ ದರ ಸೇಕಡಾ 6¼.

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from Ist January to 30th June and @ 2% from Ist July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

For further particulars please apply to—

Canara Bank Ltd.

Mangalore, 10—12—1928

K. Venkat Rao,
Secretary

THE PANGAL NAYAK BANK, LTD.

Head Office: Udipi, S. K.] *Estd. 1920.* **[Branch Office: Mangalore, S. K.**

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ, ದ. ಕ.] ಸ್ಥಾಪಿತವಾದದ್ದು 1920. [ಬ್ರೇಂಚು ಆಫೀಸು: ಮಂಗಳೂರು, ದ. ಕ.

ಬೇಂಕರರು—ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪ್ಯ 2,00,000/-

ಚಂದಾ ಮೂಲಕ ಹಾಕಲ್ಪಟ್ಟ ವಸೂಲಾದ ಮೂಲಧನ ರೂ. 1,50,000-	ಆಪದ್ಧನ ಇತ್ಯಾದಿ ನಿಧಿಗಳು ರೂ. 1,00,000/

FIXED DEPOSITS are received for 3 months at 5%, for 6 or 9 months at 5¼%, of 12, 15, 18 or 21 months at 6¼%, and for 24 months at 6¼. Interest being payable every 3 Months. SEASON DEPOSITS from January to June at 6¼% SHORT NOTICE DEPOSITS, withdrawable by giving 15 days previous notice after one month at 4¼% and CUMULATIVE DEPOSITS by monthly instalments are also received. SAVINGS BANK DEPOSIT ACCOUNTS may be opened and interest allowed at 4 1/2%, CURRENT DEPOSIT ACCOUNTS may also be opened and interest allowed at 3% from January to June and at 2 from July to December. Loans granted on personal and approved securities on reasonable terms. Banking business of every description transacted.

Further information may be had on application to the Secretary at the HEAD OFFICE or to the AGENT at BRANCH OFFICE.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ. ಶೆ. 5 ರಂತೆಯೂ, 6 ಯಾ 9 ತಿಂಗಳುಗಳಿಗೆ ಸಾ. ಶೆ. 5¼ ರಂತೆಯೂ, 12, 15, 18, ಯಾ 21 ತಿಂಗಳುಗಳಿಗೆ ಸಾ. ಶೆ. 6¼ ರಂತೆಯೂ, 24 ತಿಂಗಳುಗಳಿಗೆ ಸಾ. ಶೆ. 6¼ ರಂತೆಯೂ, ಪ್ರತಿ 3 ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು. ಮುಸಂ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೆಗೆ) ಸಾ. ಶೆ. 6¼ ರಂತೆಯೂ ಅಲ್ಪಾವಧಿ ಠೇವಣಾತಿಗಳು ಸಾ. ಶೆ. 4¼ ರಂತೆಯೂ, ಸಂಚಯ ಠೇವಣಾತಿಗಳು ಪ್ರಯೋಜನಕರವಾದ ರೀತಿಯಿಂದಲೂ, ಸೇವಿಂಗ್ಸ್ ಬೇಂಕ ಠೇವಣಾತಿಗಳು ಸಾ. ಶೆ. 4½ ರಂತೆಯೂ, ಚಾಲ್ತಿ ಠೇವಣಾತಿಗಳು ಜನವರಿಯಿಂದ ಜೂನ್ ಅಂತ್ಯದ ವರೆಗೆ ಸಾ. ಶೆ. 3 ರಂತೆಯೂ, ಜುಲೈ ತಿಂಗಳಿಂದ ಡಿಸೆಂಬರ ಅಂತ್ಯದ ವರೆಗೆ ಸಾ. ಶೆ. 2 ರಂತೆಯೂ ಅಂಗೀಕರಿಸಲ್ಪಡುವವು.

ಸಾಲಗಳು ಯೋಗ್ಯವಾದ ಜಮಾಬ್ದಾರಿಗಳ ಮೇಲೆ ನ್ಯಾಯವಾದ ರೀತಿಯಲ್ಲಿ ಕೊಡಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿನ ಸೆಕ್ರೆಟರಿಯವರಿಗೂ ಯಾ ಬ್ರೇಂಚ್ ಆಫೀಸಿನ ಏಜಂಟರಿಗೂ ಬರಕೊಳ್ಳುವುದು.

ಬೇಂಕಿನ ಆಫೀಸು, ಉಡುಪಿ,
ತಾ. 16—10—'28.

ಪ್ರಿಲಕ್ಷ್ಮಣ ನಾಯಕ್,
ಒಫೀಸಿಯೇಟಿಂಗ್ ಸೆಕ್ರೆಟರಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು.

ಅಮೃತಾಶೋಕುಮ ತೈಲ—ಇದು ಪೂರ್ವದ ಋಷಿಗಳು ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟಿದ್ದು. ಅಶ್ವಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮಿದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲಶ್ರುತಿಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು ಒಂದಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿಮಿತ್ರಣ!
ದಶಮೂಲ ಸುಖಪ್ರದಔಷಧಿ!

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಜೀವನ ಎಂದೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕರದ ಕಂಜವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸ್ಥಿತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಜೀವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿ ಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ರೋಗ ಬಾಧಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2—0—0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಅರ್ಕ ಚಿಕಿತ್ಸಾರತ್ನ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್ ತರವಾದ ಬೆಳ್ಳಿ ವುಡಿದಾರಹಗ್ಗ.

ESTD. 1896.

ಅನೇಕ ವರ್ಷದಿಂದ ನಾವು ಬೆಳ್ಳಿ ವುಡಿದಾರಗಳು ತಯಾರುಮಾಡಿ ಅನೇಕ ವ್ಯಾಪಾರಿಗಳಿಗೂ ಕಳುಹಿಸುತ್ತಿರುತ್ತೇವೆ. ನೀಡಿಸಿದ ಅನುಭವದ ಮೇಲೆ ನಮ್ಮ ವುಡಿದಾರ ಹಗ್ಗಗಳು ಕೆಲಸವೈಖರಿಯಲ್ಲಿಯೂ, ದಾರದ ತೂಕದಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿಕೊಂಡರೆ ನಮ್ಮ ಉಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಫು ವ್ಯಾಪಾರ,

24—3—28 ಕಿಡ್ಯಾಪೇಟೆ, ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ!

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1|- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ

ಬರೆಯಿರಿ—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸ್ಸರ್ಸ್ ರೇಖೆಲ್ ಎಂಡ್ ಕಂಪೆನಿ,
ಮಂಗಳೂರು.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳ.

ದಯೆ ಇಟ್ಟು ಮೇಲಣ ಸಾಮಾನುಗಳನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್.

ಮದ್ದುಗುಂಡುಗಳನ್ನು ಧಾರಾಳವಾಗಿ ಆಮದು ಮಾಡುವವರು.

ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ;

210, ಅಬ್ದುಲ್ ರಹಿಮಾನ್ ರಸ್ತೆ, ಮುಂಬಾಯಿ.

ಕಲಕತ್ತಾ ಎಕ್ಸಿಬಿಷನು.

1928.

ಹಿಂದೀ ರಾಷ್ಟ್ರೀಯ ಮಹಾಸಭೆಯ 43ನೇ ಅಧಿವೇಶನದವರಿಂದ ವ್ಯವಸ್ಥಾಪಿಸಲ್ಪಟ್ಟಿದು.

ಅಪೂರ್ವ ಸುಸಂದರ್ಭ.

ಸ್ವದೇಶಕ್ಕೆ ಸಂಬಂಧಿಸಿದ ಮಾಲು ತಯಾರಿಸುವವರಿಗೂ, ಸಾಹುಕಾರರಿಗೂ, ವ್ಯಾಪಾರಿಗಳಿಗೂ, ಪ್ರದರ್ಶಕರಿಗೂ ಚಿತ್ರಕಾರರಿಗೂ, ಕಲಾಕೋವಿದರಿಗೂ, ಅನುಕೂಲವಾಗುವಂತೆ, ಕಲಕತ್ತಾ ಎಗ್ಜಿಬಿಷನು 1928ನೇ ಡಿಸೆಂಬರ ತಿಂಗಳಿನ ಮಧ್ಯದಿಂದ 1929ನೇ ಇಸವಿ ಜನವರಿ ತಿಂಗಳಿನ ಮಧ್ಯದ ವರೆಗೆ ತೆರೆದುಕೊಂಡಿರುವದು.

ಎಗ್ಜಿಬಿಶನಿನ ಕಟ್ಟಡಗಳಾಗಲೀ, ಪ್ರತ್ಯೇಕವಾಗಿ ಗುಡಾರಗಳನ್ನು ಕಟ್ಟಿಸುವ ಸಲುವಾಗಿಯಾಗಲೀ ಸ್ಥಳಕೊಡಲಾಗುವದು. ಎಗ್ಜಿಬಿಶನು ಪಾರ್ಕ್‌ಸರ್ಕಸ್ ಎಂಬ ಸ್ಥಳದಲ್ಲಿ ನಡೆಯುವದು.

ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:

N. R. Sarkar,
Secretary,
The Calcutta Exhibition
3A. Hogg Street, CALCUTTA

ಸಾಮಯಿಕ ವಿಚಾರಗಳು

ಸ್ಯಾಮನ್ ಬಹಿಷ್ಕಾರ.

ಸ್ಯಾಮನ್ ಸಾಹೇಬರು ಸ್ಯಾಮನ್ ಬಹಿಷ್ಕಾರವನ್ನು ಬಲಪಡಿಸಲಿಕ್ಕೆ ಬಹಳ ಸಹಾಯಕರಾಗಿರುತ್ತಾರೆ. ಇದಕ್ಕಾಗಿ ಅವರ ಉಪಕಾರಸ್ಮರಣೆ ಮಾಡಬೇಕು. ಹಿಂದೂಸ್ಥಾನಕ್ಕೆ ಇಂಗ್ಲೆಂಡಿನಿಂದ ಹಲವು ರಾಜತಂತ್ರಜ್ಞರು ಬಂದಿರುತ್ತಾರೆ. ಮತ್ತು ರಾಜತಂತ್ರವೆಂಥದೆಂದು ಹಿಂದೀಯರಿಗೆ ತೋರಿಸಿ ಹೋಗಿದ್ದಾರೆ. ಬ್ರಿಟಿಷರು ರಾಜತಂತ್ರದಲ್ಲಿ ಪ್ರವೀಣರೆಂದು ಹೆಸರು ಹೊಂದಿದ್ದಾರೆ. ಆದರೆ ಸ್ಯಾಮನರ ನಡತೆಯನ್ನು ನೋಡಿದರೆ ಬ್ರಿಟಿಷ ಜಾಣತನವೇ ಅವರಲ್ಲಿ ಇಲ್ಲವೆಂದೇ ತೋರುತ್ತದೆ. ಐಗುಪ್ತಕ್ಕೆ ಇಂತಹದ್ದೇ ಒಂದು ಕಮಿಷನ್ನು ಹೋಗಿತ್ತು. ಅದರ ಅಧ್ಯಕ್ಷರು ಮಿಲ್ನರ ಸಾಹೇಬರಾಗಿದ್ದರು. ಅಲ್ಲಿಯೂ ಬಹಿಷ್ಕಾರ ಚಳವಳಿಯಿತ್ತು. ಅಲ್ಲಿಯ ಚಳವಳಿಯನ್ನು ಅವರಿಂದ ತಗ್ಗಿಸಲಿಕ್ಕಾಗದಿದ್ದರೂ ಅವರದನ್ನು ಹೆಚ್ಚಿಸಲಿಲ್ಲ. ಮತ್ತು ಆ ಬಹಿಷ್ಕಾರದ ಮಧ್ಯದಲ್ಲಿಯೂ ಅವರು ಜನರ ಆವಶ್ಯಕತೆಗಳನ್ನು ತಿಳಿದುಕೊಳ್ಳುವಷ್ಟು ದೂರದರ್ಶಿಗಳಾಗಿದ್ದರು. ಆದರೆ ನಮ್ಮ ಸ್ಯಾಮನ್ ಸಾಹೇಬರಲ್ಲಿ ಆ ದೂರದರ್ಶಿತೆಯಾಗಲಿ, ವಿಶಾಲ ಮಾನಸಿಕತೆಯಾಗಲಿ ಸಹನೆಯಾಗಲಿ, ಇಲ್ಲವೆಂದೇ ತೋರುವುದು. ಇಂಡಿಯಾದ ಗವರ್ನಮೆಂಟು ಕೆಟ್ಟದೆಂದು ಈ ವರೆಗೆ ನಾವು ತಿಳಿದಿದ್ದೆವು. ಅದಕ್ಕಿಂತಲೂ ಕೆಟ್ಟದಾಗಿ ವರ್ತಿಸಬಲ್ಲವರಿರುವರೆಂದು ಸ್ಯಾಮನರೇ ತೋರಿಸಿರುವರು. ಇಲ್ಲವಾದರೆ ಈಗಿನ ವಿಚಾರಣೆಯ ಅಪಹಾಸ್ಯದಲ್ಲಿ ಅವರು ಆನಂದಿಸುತ್ತಿರಲಿಲ್ಲ. ಅದಲ್ಲದೆ ಪ್ರೆಸ್ ಆಫ್ ಇಂಡಿಯಕ್ಕೆ ಅವರು ಬಹಿಷ್ಕಾರ ಹಾಕಿ ವರ್ತಮಾನಪತ್ರಿಕೆಗಳೂ ತಮ್ಮನ್ನು ಬಹಿಷ್ಕರಿಸುವಂತೆ ಅವುಗಳನ್ನು ಹುರಿದುಂಬಿಸಿದರು, ಲಾಲಾ ಲಜಪತರಾಯರ ಮರಣ, ಪೋಲೀಸ್ ಅತ್ಯಾಚಾರಗಳೂ ಇವೆಲ್ಲವುಗಳಿಗೆ ಸ್ಯಾಮನ್ ಸಾಹೇಬರ ನೀರವ ಸಮ್ಮತಿ ಇವೆಲ್ಲವೂ ಬಹಿಷ್ಕಾರಕ್ಕೆ ಬಹಳ ಸಹಾಯಕವಾಗಿವೆ. ಪಂಡಿತ ಮೋತಿಲಾಲ ನೆಹರೂರವರು ಈಗ ಎಲ್ಲಾ ಪತ್ರಿಕೆಗಳನ್ನೂ ಆ ಪತ್ರಿಕೆಗಳೂ ಸ್ಯಾಮನ್ ಸಮಾಚಾರಗಳನ್ನು ಪ್ರಕಟಿಸಬಾರದಾಗಿ ಕೇಳಿಕೊಂಡಿದ್ದಾರೆ. ರಾಷ್ಟ್ರೀಯ ಧೋರಣೆಯ ಎಲ್ಲಾ ಪತ್ರಿಕೆಗಳೂ ಅದಕ್ಕೆ ಸಮ್ಮತಿಯನ್ನು ಕೊಟ್ಟಿವೆ. ಸ್ಯಾಮನರು ಹಿಂದೆ ಹೋಗಬೇಕಾದರೆ ಬಹಿಷ್ಕಾರ ಸಂಪೂರ್ಣತೆಯನ್ನು ಹೊಂದುವುದು.

ಬೀಹಾರಿನ ಮುಸಲ್ಮಾನರ ಪರಿಷತ್ತು.

ಇಡೀ ಹಿಂದೂಸ್ಥಾನಕ್ಕೆ ಒಂದು ಎಲ್ಲಾ ಪಕ್ಷಗಳ ಪರಿಷತ್ತಾಗುವಾಗ ಮುಸಲ್ಮಾನರಿಗೆ ಪ್ರತ್ಯೇಕ ಒಂದು "ಎಲ್ಲಾ ಪಕ್ಷಗಳ ಪರಿಷತ್ತು!" ಮುಸಲ್ಮಾನ ಹಿತಕ್ಕೆ "ಮುಸ್ಲಿಮ್ ಲೀಗೂ" "ಖಿಲಾಫತ್ ಕಮಿಟಿಯೂ" ಸಾಕಾಗಲಿಲ್ಲ. ಹಿಂದೂಗಳಿಗೆ "ಹಿಂದೂ ಮಹಾಸಭೆ"ಯ ಹೊರತು ಬೇರೆ ಪರಿಷತ್ತುಗಳಿಲ್ಲ. ಅವರಿಗೂ ಒಂದು "ಎಲ್ಲಾ ಪಕ್ಷಗಳ ಪರಿಷತ್ತು" ಆವಶ್ಯಕವೊ ಎಂದು ತೋರುವುದು. ಈ ತರದಲ್ಲಿ ಪರಿಷತ್ತುಗಳು ಸೇರುವುದಾದರೆ "ಎಲ್ಲಾ ಪಕ್ಷಗಳ" ಎಂಬುದಕ್ಕೆ ಅರ್ಥವೇ ಆಗುವುದು ಕಷ್ಟವಿದೆ. ಅಂತೂ ಬೀಹಾರಿನಲ್ಲಿ ಮುಸಲ್ಮಾನರದೊಂದು ಪರಿಷತ್ತು ಸೇರಿತು. ಅತೃಪ್ತಿಯನ್ನೂ ಅಸಮಾಧಾನವನ್ನೂ ತೋರಿಸುವುದೇ ಅದರ ಉದ್ದೇಶ. ಅದರ ಅಧ್ಯಕ್ಷರು ಮೌಲಾನಾ ಮಹಮ್ಮದಲ್ಲಿಯವರಾಗಿರುವರು. "ಇಸ್ಲಾಮ್ ರಾಜ್ಯಗಳನ್ನು ಸ್ವತಂತ್ರವಾಗಿ ಮಾಡಬೇಕಾದರೆ ಹಿಂದೂಸ್ಥಾನವನ್ನು ಮೊದಲು ಸ್ವತಂತ್ರವಾಗಿ ಮಾಡಬೇಕು" ಎಂದು ಮಹಮ್ಮದಲ್ಲಿಯವರ ಧ್ಯೇಯವನ್ನು ಸಾರುವರು. ತಮ್ಮ ಸ್ವಾತಂತ್ರ್ಯದ ಪ್ರಾಮುಖ್ಯತೆಯನ್ನು ಇತರ ರಾಜ್ಯಗಳ ಸ್ವಾತಂತ್ರ್ಯಕ್ಕೆ ಅಧೀನವಾಗಿ ಮಾಡುವುದೇ ಮುಸಲ್ಮಾನರ ಮಾನಸಿಕತೆಯಾಗಿದೆ. ಹೊರಗಿನ ಮುಸಲ್ಮಾನ ದೇಶಗಳ ಹಿತದ ಆಶೆಯಿಲ್ಲದೆ ಮುಸಲ್ಮಾನರಿಗೆ ಸ್ವದೇಶದ ಹಿತದ ನೆನಪಾಗುವುದಿಲ್ಲ. ಇದೇ ದುಃಖಕರವಾದ ವಿಷಯ. ನೆಹರು ವರದಿಯ ವಿಷಯವಾಗಿ ಮಹಮ್ಮದಲ್ಲಿಯವರು ಹೇಳುವರು — ಸೃಷ್ಟಿಯು ಈಶ್ವರನದು; ದೇಶವು ವೈಸರಾಯ ಅಥವಾ ಪಾರ್ಲಿಮೆಂಟಿನದು; ರಾಜ್ಯಾಡಳಿತವು ಹಿಂದೂ ಮಹಾ ಸಭೆಯದು ಎಂಬುದೇ ನೆಹರು ವರದಿಯ ಸಂಕ್ಷಿಪ್ತ ತಾತ್ಪರ್ಯವಾಗಿದೆ— ಎಂದು. ಜಾತೀಯತೆಯ ಅಕಾರಣ ಪರೆಯಿಂದ ಮಂದವಾದ ದೃಷ್ಟಿ ಮಾತ್ರವೇ ನೆಹರು ವರದಿಯಲ್ಲಿ ಈ ತರದ ಅರ್ಥವನ್ನು ಕಲ್ಪಿಸಬಲ್ಲುದು. ಇದನ್ನು ಹೇಳುವವರು ಮಹಮ್ಮದಲ್ಲಿಯವರು ಅಸಹಕಾರದ ಚಳವಳದ ಹಿಂದೂ-ಮುಸಲ್ಮಾನ ಐಕ್ಯಕ್ಕೆ ಬಲಿಯಿತ್ತ ಮುಸಲ್ಮಾನ ಬಂಧುಗಳ ಶೇಷಾಂಶವು ಈಗಿನ ಮೌಲಾನಾ ಬಂಧುಗಳಿಂದ ಪ್ರತಿನಿಧಿಸಲ್ಪಡುತ್ತಿದೆ. ಈ ಮುಸಲ್ಮಾನ ಸಾರಥ್ಯವನ್ನು ಒಲಿಸುವ ಮಹಾತ್ಮರು ಯಾರುವರೋ!

ಮೈಸೂರಿನ ಸ್ತ್ರೀ ಸಮ್ಮೇಲನ.

ಇದರ ಮೂರನೇ ಸಮ್ಮೇಲನವು ಮೈಸೂರಿನಲ್ಲಿ ಕಳೆದ ವಾ. ಡಿಸೆಂಬರು [illegible] ಮಿಸೆಸ್ ಮಿಲ್ಲ್ [illegible]ರವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷ ಭಾಷಣವು ಸಂದರ್ಭಕ್ಕೆ ಯೋಗ್ಯವಾದುದಾಗಿ ನಾವು ನೆನಸುವುದಿಲ್ಲ. ಏಕೆಂದರೆ ಭಾಷಣವು ಯಾವುದೊಂದು ವಿಚಾರವನ್ನು ಕೊಡುವುದಿಲ್ಲ. ವಿವಾಹ ಪ್ರಾಯವನ್ನು ಬಾಲಿಕೆಯರಿಗೆ ಹದಿನಾರಾಗಿಯೂ, ಹುಡುಗರಿಗೆ ಇಪ್ಪತ್ತೊಂದಾಗಿಯೂ ನಿರ್ಣಯಿಸಬೇಕಾಗಿ ಮಂಜೂರಾಯಿತು. ಇದು ಮೈಸೂರಿನ ಎಷ್ಟು ಮಂದಿ ಸ್ತ್ರೀಯರ ಅಭಿಪ್ರಾಯವನ್ನು ಕೊಡುವುದು ಎಂದು ವಿಚಾರಿಸುವುದು ಅಗತ್ಯವಿದೆ. ಶ್ರೀಮತಿ ತ್ಯಾಗರಾಜ ಅಯ್ಯರೆಂಬವರು ಹಿಂದೂಗಳ ಪಿತ್ರಾರ್ಜಿತ ಕಾನೂನಿನ ತಿದ್ದುಪಡಿ ಕೇಳಿದ ನಮೂನೆಯು ಚೆನ್ನಾಗಿದೆ! ಸ್ತ್ರೀಯರು ಆಸ್ತಿಯಲ್ಲಿ ಮತ್ತು ಸೊತ್ತಿನಲ್ಲಿ ಅಂಶವನ್ನು ಕೇಳಬಹುದಲ್ಲದೆ, ಸಾಲದಲ್ಲಿ ಅವರಿಗೆ ಭಾಗವಿರಬಾರದೆಂದೇ ಅವರ ಕೇಳಿಕೆ. ಕಾನೂನು ಮಾಡುವಾಗ ಸಾಲದ ಭಾರವು ಹೆಂಗಸರಿಗೆ ಬಾರದೆ ಆಸ್ತಿ, ಸೊತ್ತು ಇತ್ಯಾದಿ ಮಾತ್ರ ಅವರಿಗೆ ಸಿಕ್ಕುವ ಏರ್ಪಾಡು ಮಾಡಬೇಕಾಗುವುದೆಂದು ಶ್ರೀಮತಿಯವರು [illegible]ಕೊಟ್ಟರು! ಅದಾವು "ಯುನಿವರ್ಸಿಟಿ ಪಾಸು" ಆಯಿತೆಂದು ಮತ್ತೆ ಹೇಳಬೇಕಾಗಿಲ್ಲ!! ವರದಕ್ಷಿಣೆಯ ಕ್ರಮವನ್ನೇ ತೆಗೆದುಹಾಕಬೇಕಾಗಿ ಬಂದ ಸೂಚನೆಗೆ, ತಂದೆ ಕೊಡುವಾಗ ಹುಡುಗಿಗೆ ಸಿಕ್ಕದ ಹಾಗೆ ಮಾಡುವುದು ಅನ್ಯಾಯವೆಂದು ತೋರಿಸಿದ ಮೇಲೆ ಅಂತಾವನ್ನು ಒಟಿಗೆ ಹಾಕಲಿಲ್ಲ! ಕೊಡುವುದು ಹುಡುಗಿಗಾದರೂ ತೆಗೆದುಕೊಳ್ಳುವವನು ಹುಡುಗನೆಂದೂ, ಕೊಟ್ಟರೂ ಕೊಡುವಷ್ಟು ಕೊಡಲಿಲ್ಲವೆಂದು ಎಷ್ಟು ಹುಡುಗಿಗಳನ್ನು ಪೀಡಿಸುವರಿರುವರೆಂದೂ ಹೇಳಲಿಕ್ಕೆ ಪ್ರಾಯಶಃ ಅಲ್ಲಿ ಯಾರೂ ಇರಲಿಲ್ಲವೆಂದು ಕಾಣುತ್ತದೆ. ಸಹ ವಿದ್ಯಾಭ್ಯಾಸ (co-education)ವು ಪ್ರಾಥಮಿಕ ತರಗತಿಗಳಲ್ಲೂ, ಯುನಿವರ್ಸಿಟಿ ತರಗತಿಗಳಲ್ಲೂ ಇರಬೇಕಾಗಿಯೂ ಮಂಜೂರಾಯಿತು. ಈ ಸ್ತ್ರೀ ಸಮ್ಮೇಲನವು ಸುಧಾರಣೆಯ ಆಕಾಂಕ್ಷೆಯಿಂದ ಹಿತಾಹಿತಗಳನ್ನೇ ಅಲಕ್ಷಿಸುವಂತೆ ತೋರುವುದು. ಅವಿವಾಹಿತ ಗರ್ಭಧಾರಿಣಿಗಳಲ್ಲಿ ಶಾಲಾ ಹುಡುಗಿಯರೇ ಹೆಚ್ಚೆಂದು ಅಮೇರಿಕದಲ್ಲಿ ಕೂಡಿಸಿದ ಸಂಖ್ಯಾಸ್ಥಿತಿಯಾದರೂ ಇವರನ್ನು ಎಚ್ಚರಿಸಿದರೆ ಉತ್ತಮವಿತ್ತು. ಉರ್ದು ಶಾಲೆಗಳಲ್ಲಿಯೂ ಕನ್ನಡವನ್ನು ಕಲಿಸಬೇಕೆಂಬ ಸೂಚನೆಯು ಉತ್ತಮವಾಗಿದೆ. ಆದಿ ಕರ್ನಾಟಕ ಸ್ತ್ರೀಯರಿಗೂ ವಿದ್ಯಾಭ್ಯಾಸ ಕೊಡಬೇಕೆಂಬ ಸೂಚನೆಯೂ ಉತ್ತಮವಿದೆ. ಮುಖ್ಯವಾಗಿ ಸುಧಾರಣೆಯ ಹೆಜ್ಜೆಯು ಕಾಲು ಜಾರುವಷ್ಟು ಉಗ್ರವಾಗಲಿ ವೇಗವಾಗಲಿ ಇರಬಾರದೆಂದು ಈ ಸಮ್ಮೇಲನಕ್ಕೆ ಎಚ್ಚರಕೊಡಬೇಕಾಗಿಯದೆ.

ಲೋಕದ ವಿದ್ಯಾರ್ಥಿಗಳ ಪರಿಷತ್ತು.

ಮೈಸೂರಿನಲ್ಲಿ ಕೂಡಿದ ಈ ಪರಿಷತ್ತು ಇಡೀ ಭೂಲೋಕಕ್ಕೆ ಸಂಬಂಧಿಸಿದ ಹಲವು ಪ್ರಶ್ನೆಗಳನ್ನು ಬಹಳ ನಿಸ್ವಾರ್ಥವಾಗಿ ಚರ್ಚಿಸಿಯದೆ. ವಿದ್ಯಾರ್ಥಿಗಳಲ್ಲಿ ಸ್ವಾರ್ಥವಿರಲಾರದು; ಲೋಕಪ್ರಶ್ನೆಗಳಲ್ಲಿಂತೂ ಆದರ್ಶವೇ ಅವರ ಮುಖ್ಯ ಧ್ಯೇಯವಾಗಿರುವುದು. ಆದುದರಿಂದ ಇಂತಹ ಪರಿಷತ್ತುಗಳು ಲೋಕಹಿತಗಳನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಲಕ್ಷಿಸಬಲ್ಲುವೆಂದು ವಿಶ್ವಾಸವಿಡಲಾಗುತ್ತದೆ. ಆಫ್ರಿಕಾ ದೇಶವನ್ನು ಬಿಳೇ ಜನರಿಂದಲೂ ಆಸ್ಯಾ ಖಂಡದ ಜನರಿಂದಲೂ ರಕ್ಷಿಸಬೇಕಾಗಿ ಇವರು ಒಂದು ನಿರ್ಣಯವನ್ನು ಮಂಜೂರುಮಾಡಿರುವರು. ಆಫ್ರಿಕದ ಸಮಸ್ಯೆಯು ಬಿಳೇ ಆಡಳಿತದ ಸ್ವಾರ್ಥದ ಕೇಂದ್ರವೆನ್ನಬಹುದು. ಅಲ್ಲಿ ಇತರರೆಲ್ಲರನ್ನೂ ನಾಶಗೊಳಿಸುವ ಹೃದಯಹೀನವಾದ ಪ್ರಯತ್ನಗಳು ನಡೆಯುತ್ತಿವೆ. ಹಿಂದೀ ಮತಗಳ ವೈಶಿಷ್ಟ್ಯವೂ ಈ ಪರಿಷತ್ತಿನ ಮುಂದೆ ಚರ್ಚಿಸಲ್ಪಟ್ಟಿತು. ಪ್ರೊ. ರಾಧಾಕೃಷ್ಣರವರು ವೇದಾಂತ ತತ್ವಗಳನ್ನು ಉದಹರಿಸಿದರು. ಆಮೇಲೆ ಶ್ರೀ ಸಚ್ಚಿದಾನಂದ ಪಿಳ್ಳೆಯವರು ಶೈವ ಸಿದ್ಧಾಂತವನ್ನು ಪ್ರಸ್ತಾಪಿಸಿ ಆ ಮೂಲಕ ದ್ರಾವಿಡ ನಾಗರಿಕತೆಯನ್ನು ಸ್ಫುಟಪಡಿಸಿದರು. ಅಂತಹ ರಾಷ್ಟ್ರೀಯ ಪ್ರಶ್ನೆಗಳೂ ಈ ಲೋಕದ ವಿದ್ಯಾರ್ಥಿ ಪರಿಷತ್ತಿನಲ್ಲಿ ಚರ್ಚಿಸಲ್ಪಡುವುದು ತಕ್ಕುದು. ಇವೆಲ್ಲವೂ ಒಳ್ಳೆಯದೇ ಆಗಿದ್ದರೂ ವಿದ್ಯಾರ್ಥಿಗಳು ದೇಶದ ಮೇಲೆ ಆಗುವ ಲಾಭಗಳೆಷ್ಟು ಎಂದು ಇನ್ನೂ ಎಣಿಕೆ ಹಾಕಬೇಕಷ್ಟೆ. ಪ್ರೆಸಿಡೆಂಟ್ ಕೂಲಿಜ್ಜರೂ, ಪ್ರೀಮಿಯರ್ ಬಾಲ್ಡ್ವಿನ್ನರೂ, ಪ್ಯಾರಿಸಿನ ಬ್ರಿಯಂಡರವರೂ ಎಲ್ಲರೂ ಒಂದು ಸಮಯದಲ್ಲಿ ವಿದ್ಯಾರ್ಥಿಗಳೇ ಆಗಿದ್ದರು. ಮತ್ತೆ ಇಂತಹ ತತ್ವಗಳನ್ನು ಎಷ್ಟು ಬಾರಿ ಮಾತನಾಡಿರುವರೋ! ಆದರೂ ಈಗ ಜನಾಂಗ ಜನಾಂಗಗಳೊಳಗಿನ ಸಂಘಟ್ಟಗಳು [illegible] ನಡೆಯುತ್ತಿವೆ!

ನೋಟಗಳು
NOTES

[illegible]

ರಾಷ್ಟ್ರಬಂಧುವಿನ [illegible] ಮಂಗಳೂರು [illegible]ದಲ್ಲಿ ಗೌಡಸಾರಸ್ವತರ [illegible] ಅದು ಸತ್ಯ[illegible] ಬರೆದುದನ್ನು [illegible] ಟೀಕೆಗಳು [illegible] ಕೇಳಲ್ಪಡುತ್ತಿವೆ.

ರಾಷ್ಟ್ರಬಂಧುವಿನ ಆತ್ಮೀಯ [illegible]ಬ್ಬರು ಸಂಪಾದಿಸಿದ ಸಾರ್ವಜನಿಕ [illegible] ಗೌಡ ಸಾರಸ್ವತ ತರುಣರು ಬರಿಗೆ ಹಚ್ಚಿ ತೋರಿಸಿದ್ದರ ಪ್ರತೀಕಾರವನ್ನು ಈ ಜನವರಿಯಲ್ಲಿದ್ದ [illegible] ಮಾಡಲು ಪ್ರಯತ್ನವು ನಡೆಯುತ್ತಿದೆಯೆಂದು ಕೆಲವರ ಅಂಬೋಣ.

ಹಿಂದೂಗಳ ಮಟ್ಟಿಗೆ ಸಾರ್ವಜನಿಕವಾದ ಪ್ರಶ್ನೆಯಲ್ಲಿ ಅದು ಸಹ ಇತರ ಮೂರು ಜಾತಿಗಳ ಸಹಭಾಗಿಗಳಾದ ಘಟನೆಯಲ್ಲಿ ಒಂದೇ ಜಾತಿಯ ನೆನಪು ಈ ತಂಟೆಗೆ ಉಂಟಾದುದೇ ಇದಕ್ಕೆ ಕಾರಣವಾಗಿದೆ.

ಬೆಂಗಳೂರು ಗಲಭೆಯಲ್ಲಿ ಹಿಂದೂ ಶ್ರೇಯಸ್ಸಿಗಾಗಿ ಚಿಂತಿತವಾಗಿದ್ದ ಪತ್ರವು ಮಂಗಳೂರು ಗಲಭೆಯಲ್ಲಿ "ಮಾಮೂಲ"ನ್ನು ಜಾತಿ ಮಾತ್ಸರ್ಯಕ್ಕೆ ಪರಿವರ್ತಿಸಿದಲು ಪ್ರಯತ್ನಿಸಿದುದು ವಿಷಾದವೂ ವಿಚಿತ್ರವೂ ಆಗಿದೆ.

• • • •

ಗೌಡಸಾರಸ್ವತರ ಮಟ್ಟಿಗೆ ಇದು ಜಾತೀಯ ಭೇದಭಾವದ ಎರಡನೇ ಪ್ರಕಟಣೆಯಾಗಿದೆ.

• • •

ಇಂತಹ ಮುಂದಿನ ಪ್ರಕಟಣೆಗಳು ಬಂದ ಹಾಗೆ ಅವುಗಳಿಗೆ "ನಂಬರು" ಕೊಡುತ್ತ ತೋರಿಸಿಬರುವೆವು.

• • • •

ರಾಷ್ಟ್ರಬಂಧುವು ಈ ಮೇಲಿನ ಆರೋಪಗಳನ್ನು ಕುತರ್ಕಗಳ ವಾದಕ್ಕೆ ಬಿಡುವುದಕ್ಕಿಂತ ಸತ್ಯದ ಒರೆಗೆ ಹಚ್ಚಬೇಕೆಂದು ಒಂದು ವಿನಂತಿ.

ಯಕ್ಷಗಾನ ತಾಳಮದ್ದಳೆಯ ಗಾಡಿ! ಪ್ರಕಟಣೆ ಒತ್ತಟ್ಟು, ಕಾರ್ಯ ಒತ್ತಟ್ಟು! ತಿಟ್ಟಿನವರೊಳಗೆ ಮೊದಲೇ ಇಕ್ಕಟ್ಟು!! ವ್ಯವಸ್ಥೆಯೋ ಅವಸ್ಥೆಯೋ?

• • • •

ಅನಂತೇಶ್ವರ ದೇವಸ್ಥಾನದ ಪೌಳಿಯಲ್ಲಿ, ವಿಧವಾವಿವಾಹದ ಕುರಿತು "ಲೆಕ್ಚರು"! ವಿಧವಾ ವಿವಾಹಮಾಡಬೇಕೊ ಮಾಡಬಾರದೋ ಎಂದು ಅವರೂ ಅರಿಯರು! ಇದಲ್ಲವೇ ಭಾಷಣ ಪ್ರೌಢಿಮೆ!

• • • •

ದಿಲ್ಲೀ ದರ್ಬಾರಿನ ದಿನ ತಾಲೂಕಿನ ವಿದ್ಯಾರ್ಥಿಗಳೊಳಗೆಲ್ಲಾ ಪಂದ್ಯಾಟ! (ಸ್ಪೋರ್ಟ್ಸ್) ಹೈಸ್ಕೂಲಿನೊಂದಿಗೆ ಎಲಿಮೆಂಟರಿ ಸ್ಕೂಲಿನವರ ಹೋರಾಟ!! ಕೆಲವರ ಮೇಲಾಟ, ಹಲವರ ಹಾರಾಟ; ಇದೀಗ ಒಕ್ಕಣ್ಣ ನೋಟ! ಹಾಗೆ ಛಲ್ಲನೆ ಬಿಟ್ಟಾರೇ ಎಲಿಮೆಂಟರಿ ಶಾಲಾ ಮಕ್ಕಳು? ಛಲೇ ಇದ್ದಾರೆ.

• • • •

ತಾ. ಬೋರ್ಡಿನಲ್ಲಿ ಹಲವು ಸುಧಾರಣೆ! ಟ್ರೈನ್ಡ್ ಮಾಸ್ತರಲ್ಲಿ ಅನಾದರಣೆ!! ತರಬೇತಾಗದವರ ಕಾಲ!

• • • •

ಮಗಾರ್ ಮರ್ಗ್:—ಕುರಿಯೋ ಮರಿಯೋ:—ಕೆಲವರಿಗೆ ತಿರುಳು ಕೆಲವರಿಗೆ ಗಂಟು.—ಪತ್ರಿಕೆಯಲ್ಲಿ ಬರೆದರೆ ಹರಕೆ!—ಅಂತೆ.

• • • •

ಅನಂತೇಶ್ವರದಲ್ಲಿ ದೇವರೇ ಭ್ರಷ್ಟರಾಗಿದ್ದರು! ಭ್ರಷ್ಟ ಮಾಡುವವರೂ ಭಕ್ತ, ಪವಿತ್ರಗೊಳಿಸುವವರೂ ಭಕ್ತ. ದೇವರೆಂದರೆ ಅರ್ಚಕರದೊಂದು ಕೈಗೊಂಬೆಯೋ?

• • • •

ಈ ಬಾರಿ ತುಳುತನಯರು ವಿಚಾರದ ತರಂಗ ತರಂಗಗಳನ್ನೇ ಎಬ್ಬಿಸಿರುವರು! ಭೇಷ್. ಅದಕ್ಕಾಗಿ ಅವರಿಗೆ ಒಂದು ಡಜನ್ ಅಭಿನಂದನೆಗಳನ್ನು ಪಾರ್ಸೆಲ್ ಮಾಡೋಣ! ಅವರ ಮುಂದಿನ ವಿಚಾರತರಂಗಗಳಿಗಾಗಿ ಇನ್ನೊಂದು ಡಜನನ್ನು..... ಬೇಂಕಿನಲ್ಲಿ "ಡಿಪೋಸಿಟ್" ಇಡೋಣ, ಮತ್ತೆ—ಮುಂದೆ ನೋಡೋಣ. ಅವಸರವೇನು?

• • • •

ಬಂಟಯ್ಯ ಬುದ್ಧಿ ಉತ್ಸವ, ಯಾತ್ರಿಕರೂ, ಪ್ರೇಕ್ಷಕರೂ ಸಿದ್ಧರಾಗಲಿ, ನಮಸ್ಕಾರ ಪ್ರಸಾದ ಪಡೆಯಲಿ!

[illegible]ದುಂಬಿ.

ಶಾಲಿವಾಹನ ಶಕೆ ೧೮೫೨ನೆಯ ವಿಭವಸಂವತ್ಸರದ ಮಾರ್ಗಶಿರ ಮಾಸ ಶುಕ್ರವಾರದಿಂದ ವಿಭವ ಸಂವತ್ಸರದ ಮಾರ್ಗಶಿರ ಮಾಸ ಶುಕ್ರವಾರದ ವರೆಗಿನ ಪಂಚಾಂಗ.

(ಗಣಿತರೀತ್ಯಾ ವೃಶ್ಚಿಕ (ಚಾಂದ್ರ)

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಸೌರಮಾನ	ಸೂರ್ಯ ಉ	ಅಸ್ತ
15	[illegible]	[illegible]	[illegible]	[illegible]	[illegible]	[illegible]	6. 46	6. 5
16	[illegible]	[illegible]	[illegible]	ಕೃತಿಕಾ	[illegible]	[illegible]	6 47	6. 5
17	ಸೋಮ	[illegible]	[illegible]	ರೋಹಿಣಿ	[illegible]	[illegible]	6.47	6. 0
18	ಮಂಗಳ	[illegible]	[illegible]	ಮೃಗಶಿರ	[illegible]	[illegible]	6.48	6. 6
19	ಬುಧ	[illegible]	[illegible]	[illegible]	[illegible]	[illegible]	6 48	6. 7
20	ಗುರು	[illegible]	[illegible]	[illegible]	[illegible]	[illegible]	6.49	6. 7
21	ಶುಕ್ರ	[illegible]	[illegible]	ರೇವತಿ	[illegible]	[illegible]	6.49	6. 8

ಮಂಗಳೂರಿನ ವಾಯುಸ್ಥಿತಿ.

ತಾರೀಕು Date	Temperature. ಉಷ್ಣ (ಶಾಖ) Maximum ಹೆಚ್ಚಿನದು	Minimum ಕಡಿಮೆ	Rainfall. ಮಳೆ ದಿನದ ಮಳೆ	ಜುಮಲಾ ಮಳೆ.
7	88— 8	74— 8	—	—
8	87— 6	73— 8	0—11	—
9	86— 5	75— 2	0—01	—
10	90— 2	75— 7	—	—
11	92— 2	75— 6	—	—
12	94— 4	74— 4	—	—
13	88— 2	72— 4	—	—
				124-70

ಮಂಗಳೂರಿನ ಪೇಟೆ ಧಾರಣೆ.

ಜೀನಸು		ಇಂದ ರೂ. ಆ.	ವರೆಗೆ ರೂ. ಆ.
ಮುಸ್ಸಿ	...	7– 12	8 – 12
ಗುಡ್ಡು	...	7 – 4	7 – 8
ಸುಗ್ಗಿ	...	6 – 12	7 – 4
ಹೊಸ್ಸರಾಶಿ	...	6 – 0	6 – 5
ಊರ ಅವ್ವಲ್ ಬೆಳ್ತಿಗೆ	...	7 – 8	8 – 14
ರಂಗೂನು ಬೆಳ್ತಿಗೆ ಗೋಣಿ ಒಳ್ಳೆ	...	12 – 8	–
ಎಲ್ಲೂರು ಬೆಳ್ತಿಗೆ ಮುಡಿ ಒಳ್ಳೆ	...	6 – 12	7 – 0
ಗೋದಿ ಗೋಣಿ ಒಳ್ಳೆ	...	18 – 0	19 – 0
ಹುರುಳಿ ಗೋಣಿ ಒಳ್ಳೆ	..	7 – 0	9 – 4
ಕಡಲೆ ಗೋಣಿ ಒಳ್ಳೆ	...	13 – 12	16 – 0
ತೊಗರಿ ಗೋಣಿ ಒಳ್ಳೆ	...	14 – 8	–
ಕೊಗಂಬೇಳೆ ಗೋಣಿ ಒಳ್ಳೆ	...	18 – 0	26 – 0
ಉದ್ದು ಗೋಣಿ ಒಳ್ಳೆ	...	14 – 8	15
ಹೆಸರು ಗೋಣಿ ಒಳ್ಳೆ	...	13 – 0	14 –
ಊರು ಬೆಲ್ಲ ಖಂಡಿ ಒಳ್ಳೆ	...	47 – 8	55 – 0
ಉಪ್ಪು ಗೋಣಿ ಒಳ್ಳೆ	...	4 – 8	4 – 12
ಬೊಕ್ಕೆ ಖಂಡಿ ಒಳ್ಳೆ	...	130 - 0	–
ಕೊಬ್ರಿ ಹಿಂಡಿ ಖಂಡಿ ಒಳ್ಳೆ	...	47 – 8	48 – 8
ಎಳ್ಳಿಂಡಿ ಖಂಡಿ ಒಳ್ಳೆ	...	35 – 8	46 – 4
ಕೊಬ್ರಿ ಎಣ್ಣೆ ಮಣ ಒಳ್ಳೆ	...	7 – 8	–
ಎಳ್ಳೆಣ್ಣೆ ಮಣ ಒಳ್ಳೆ	...	8 – 0	8 – 6
ಹರಳೆಣ್ಣೆ ಪೆಟ್ಟಿಗೆ ಒಳ್ಳೆ	...	7 – 2	7 - 4
ಮೋರಿಸ್ ಸಕ್ಕರೆ ಮಣ ಒಳ್ಳೆ	...	3 – 11	3 – 12
ಹೊಸ ಮೆಣಸು	...	6 – 0	6 – 8
ಹಳ್ಳ ಊರು ಮೆಣಸಿನಕಾಯಿ ಮಣ ಒಳ್ಳೆ		3 – 4	4 – 0
ಸಾಸಿವೆ ಮುಡಿ ಒಳ್ಳೆ	...	8 – 4	–
ಕೊತ್ತಂಬರಿ ಮುಡಿ ಒಳ್ಳೆ	...	5 – 4	5 – 12
ನೇಟಿವ್ ಫಿಟರಿ ಕಾಫಿ ಖಂಡಿ ಒಳ್ಳೆ	...	380 – 0	395 – 0
ಬೇಗೋಟು ಅಡಿಕೆ ಖಂಡಿ ಒಳ್ಳೆ	...	180 – 0	210 – 0
ಕಾಳುಮೆಣಸು ಖಂಡಿ ಒಳ್ಳೆ	...	523 – 0	524 – 8
ಯೇಲಕ್ಕಿ ಮಣ ಒಳ್ಳೆ	...	4 – 10	60 –
ಗೇರುಬೀಜ ಮುಡಿ ಒಳ್ಳೆ	...	3 – 5	3 – 7
ರಬ್ಬರ ಖಂಡಿ ಒಳ್ಳೆ	...	40 – 0	42 – 8
ತಾಂಬ್ರ ತಗಡು ಒಳ್ಳೆ	...	16 – 8	16 – 12
ತಾಂಬ್ರ ಪಾತ್ರಗಳು ಮಣ ಒಳ್ಳೆ	...	21 – 0	22 –
ಬೀಸಣಿಕೆ ಸೇರು ಒಳ್ಳೆ	...	15 – 0	–
ಹಿತ್ತಾಳೆ ತಗಡು ಮಣ ಒಳ್ಳೆ	...	14 – 8	16 – 8
ಪವನು ಒಳ್ಳೆ	...	13-6-6	–
ಹುಣಸೆಹುಳಿ ಖಂಡಿ ಒಳ್ಳೆ	...	70 –	85 – 0

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ
— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲುಆಗಲಿ ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.
ಮತ್ತು

ಸ್ತ್ರೀಪುರುಷರನ್ನು ಆರೋಗ್ಯ ದೃಢಗಾತ್ರರಾಗಿರುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ಧಾತುನಷ್ಟ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನು, ನರಗಳ ಸಡಲಿಕೆ, ಮೂತ್ರಕೋಶದ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ಸಂತಾನವನ್ನುಂಟುಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳುಳ್ಳ 1 ಡಬ್ಬಿ ಕ್ರಯ ರೂ. 1—0—0.
ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು.
ಮಂಗಳೂರು ಏಜಂಟರು:— ಪಿ. ಗುಲಾಬ್ ಚಂದ್, ಹಂಪನಕಟ್ಟಾ, ಮಂಗಳೂರು, ದ. ಕನ್ನಡ



ತಯಾರಾಗಿವೆ ತಯಾರಾಗಿವೆ!!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ ಬೇಕಾಗುವಂತಹ

ಚಕ್‌ರೋಲ್‌ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.
ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಪರೀಕ್ಷಿಸಿರಿ! ಖಾತ್ರಿಯಾಗುವದು!!
ಶೀವ್ರತ್ತು ಅಗ್ಗ ಫಲಪ್ರದ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)
ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧೃತಕ್ಷ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾದ' ಅವರ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ ಶಾಸ್ತ್ರಜ್ಞ ವೈದ್ಯರಿಂದ ತೆರೆಯಲಾದ ಈ ಸ್ಥಾಪನೆಯಲ್ಲಿ ಸರ್ವ ಅಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸಲಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಭಸ್ಮ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಗಳು ನಮ್ಮಲ್ಲಿ ಯಾವಾಗಲೂ ಸಲೀಸಿನಲ್ಲಿ ತಯಾರಿರುವವು. ಅನುಕೂಲಸ್ಥರಾದ ದೂರ ದೇಶದ ರೋಗಿಗಳು ತಮ್ಮ ರೋಗದ ವಿವರವಾದ ಲಕ್ಷಣಗಳು, ಕೊಡಗಿದ ಕಾಲ, ಪ್ರಾಯ, ಸಿಕ್ಕ ಆಹಾರದ ಕ್ರಮ, ವೃತ್ತಿ ಹಿಡಿದಿರುವ ತೊಡಲಾದ ಅವುಲು ಪದಾರ್ಥಗಳ ಅಭ್ಯಾಸವಿದ್ದರೆ ಆ ವಿವರ ಹಿಂದೆ ನಡಿಸಿದ ಚಿಕಿತ್ಸೆ ಇರುವದಾದರೆ ಆ ವಿವರ ಮತ್ತು ರೋಗಿಯು ಹಾಸಿಗೆ ಬಿಟ್ಟು ನಡಿಯಬಲ್ಲ ಶಕ್ತಿ ಉಳ್ಳವನೊ ಎಂಬ ಪರಿಚಯ ಸ್ತ್ರೀಯರ ಸಂಗತಿಗಳಲ್ಲಿ ಎಷ್ಟು ಪ್ರಸವ ನಡದದೆ ಎಂಬೀ ವಿವರಗಳು ಸಹಾ ಪತ್ರ ಮುಖಾಂತರ ತಿಳಿಸಿದಲ್ಲಿ ಅಂಥಾ ರೋಗಿಗಳ ಚಿಕಿತ್ಸೆ ನಡಿಸುವರೆಯೂ ಇರುವು ಬಂದು ಸಂದರ್ಶನದೇಶದ ಸಂಗತಿಗಳಲ್ಲಿ ಕೂಡ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡಿಸಿದಲ್ಲಿ ತಕ್ಕ ರೀತಿ ಕೊಡಲಾಗುತ್ತದೆ. ಅನಾನುಕೂಲಸ್ಥರಾದ ಗರೀಬರಿಗೆ ಅವರ ಅಗತ್ಯದ ಮಟ್ಟಿನ ವಡಾಕಿಗಳನ್ನು ಕೊಡುವದೆಯೂ ರೋಗಕ್ಕೆ ಬೇಕಾದ ಮದ್ದು ಏವರಿಸಿ ಅದನ್ನು ಸೇವಿಸುವ ಎಲ್ಲಾ ಸೂಚನೆಗಳನ್ನು ತಿಳಿಸುವದೆಯೂ ಸಹಾ ಈ ವೈದ್ಯಶಾಲೆಯು ಯಾವಾಗಲೂ ಸಿದ್ಧವಾಗಿರುವದು. ಅಗತ್ಯವುಳ್ಳವರಿಗೆ ಮದ್ದುಗಳನ್ನು ಒದಗಿಸಿ ಕೊಡುವದೆ ಕೂಡ ಏರ್ಪಾಡುಗಳು ಇವೆ. ಹೆಚ್ಚಿನ ವಿವರಕ್ಕೆ ಪತ್ರ ಮುಖಾಂತರ ವ್ಯವಹಾರ ನಡಿಸಬಹುದು.

ವಾರದ ಪ್ರತಿ ಶನಿವಾರ ವಿವರ ವೈದ್ಯರನ್ನು ವೈದ್ಯಶಾಲೆಯಲ್ಲಿ ಕಾಣಬಹುದು
ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ)

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(1923ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 1861ನೇ ಇಸವಿಯ XXIನೇ ಆಕ್ಟಿನ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು – ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಕೂಡ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ "ಫಾರ್ಮಸಿ"ಯಲ್ಲಿ ಶಾಸ್ತ್ರರೀತ್ಯಾ ತಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟ ಮಾಡಿ ಹುಟ್ಟಬರುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ಮುಂದರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತದೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೆ ನಮ್ಮಲ್ಲಿ ತಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

ಅನುಕ್ರಮಣಿಕೆ.

[illegible]
ಮಂಗಳೂರು ಗಲಭೆ ... ೧
ವಿದೇಶ ವರ್ತಮಾನ ... [illegible]
[illegible] ... [illegible]
[illegible] ... [illegible]
ವರ್ತಮಾನ ಸಂಗ್ರಹಗಳು:
ಒಳದೇಶ ವರ್ತಮಾನ ... ೬-೭
ಪತ್ರಿಕಾ ಪತ್ರಗಳು—ಮಂಗಳೂರು, ಮೂಲ್ಕಿ, ಬಂಟ್ವಾಳ, ಕಾರ್ಕಳ
[illegible] ... ೭
ವಿವಿಧ ಸಮಾಚಾರಗಳು ... ೬-೯
ಸಕಲೇಶಪುರದ ಪತ್ರ ... ೯
[illegible] ... ೧೧
ಪತ್ರವ್ಯವಹಾರ ೧ ೩ ೪ ... ೨

ಸ್ವದೇಶಾಭಿಮಾನಿ.

ತಾರೀಕು ೧೪ನೇ ಶುಕ್ರವಾರ ದಶಂಬರ ೧೯೩೮

ಮಂಗಳೂರು ಗಲಭೆ.

ಗಲಭೆಯು ಮಂಗಳೂರಿಗೂ ತಪ್ಪಲಿಲ್ಲ. ಜನರನ್ನು ಕೊಂದು ದೇವರನ್ನು ಉಳಿಸುವ ಆ ಮಹತ್ವದ ಮಾನಸಿಕತೆಯು ನಮ್ಮ ಮಂಗಳೂರಿನವರಿಗೂ ಇಲ್ಲವೆನ್ನಬೇಡಿರಿ. ಮಂಗಳೂರಿನಲ್ಲಿಯೂ ಹಿಂದೂ-ಮುಸಲ್ಮಾನರಿಲ್ಲವೆಂದು ಎನ್ನದಂತೇನೊ, ನಮ್ಮಲ್ಲಿಯೂ ಸಣ್ಣದೊಂದು ಗಲಭೆಯು ನಡೆದುಹೋಯಿತು. ಕಾರಣರು ಬ್ರಾಹ್ಮಣರೊ, ಬ್ರಾಹ್ಮಣೇತರರೊ, ನಿರ್ಣಯಿಸುವವರು ನಿರ್ಣಯಿಸುವರು.

ಮಂಗಳೂರಿಗೆ ಭಜನೆಯು ನೂತನವಾದುದಲ್ಲ. ಅದರಲ್ಲೂ ಕೊಲೇರಾ ರೋಗವು ಪ್ರಬಲಿಸಿದ ಮೇಲೆ ಜನರಿಗೆ ದೇವರಿರುವನೆಂಬ ನೆನಪು ಉಂಟಾಗಿಯೋ ಭಜನೆಗಳು ಹೆಚ್ಚಾಗಿವೆ. ಇಂತಹ ಭಜನೆಗಳು ಪ್ರತಿ ವರ್ಷವೂ ಎಂಬಂತೆ ಸರಾಗವಾಗಿ ನಡೆಯುತ್ತಿವೆ. ಹಾಗಿರುವಾಗ, ಹಿಂದೂ-ಮುಸಲ್ಮಾನ ಕಲಹದ ಯಾವುದೊಂದು ಸ್ಪರ್ಶ ಕೂಡ ಇಲ್ಲದ ಮಂಗಳೂರಲ್ಲಿ ಈ ವಿಷವೃಕ್ಷದ ಬೀಜಾರೋಪಣೆ ಆದುದು ಹೇಗೆ ಎಂಬುದು ವಿಚಾರಣೀಯ.

ಮುಸಲ್ಮಾನ ದೇವರನ್ನು ಹಿಂದೂಗಳು ಮಾನಿಸುತ್ತಾರೆಂಬುದು ಮುಸಲ್ಮಾನರಿಗೆ ತಿಳಿಯದ ವಿಷಯವಲ್ಲ. ಅವರ ರಮುಜಾನ್, ಬಕ್ರಿದ್ ಹಬ್ಬಗಳಲ್ಲಿ ಎಷ್ಟೋ ಹಿಂದೂಗಳು ತಮ್ಮ ಭಕ್ತಿಯನ್ನು ತೋರಿ ಹಿಂದೂ-ಮುಸಲ್ಮಾನ ಸೌಹಾರ್ದದ ಸುಂದರ ಆದರ್ಶವನ್ನು ನಿರ್ದೇಶಿಸಿರುತ್ತಾರೆ. ಹಾಗೆಯೇ ಎಷ್ಟೋ ಸಾತ್ವಿಕ ಮುಸಲ್ಮಾನರು ಹಿಂದೂ ದೇವಾಲಯಗಳ ಪವಿತ್ರ ಅಂತರ್ಯದಲ್ಲಿ ತಮ್ಮ ಐಹಿಕ ಸಂಕಷ್ಟಗಳ ನಿವಾರಣೆಯ ಪ್ರಾರ್ಥನೆಯನ್ನು ಕಳುಹಿಸದೆ ಇರುವುದಿಲ್ಲ. ಜಾತಿಯಲ್ಲಿ ಮುಸಲ್ಮಾನರಾದವರಲ್ಲಿ ಒಂದು ತರದ ಸಾತ್ವಿಕತೆಯೂ ಜನ ಪ್ರೇಮವೂ ಇದೆಯೆಂಬುದು ನಮ್ಮ ಜಿಲ್ಲೆಯ ಸಾಮಾನ್ಯ ಪ್ರತಿ ಒಬ್ಬ ಹಿಂದೂವಿನ ನಿತ್ಯದ ಅನುಭವವಾಗಿದೆ.

ಇಂತಹ ಕೇವಲ ಪರಸ್ಪರ ವಿಶ್ವಾಸ ಪೂರ್ಣವಾದ ವಾತಾವರಣವು ಒಮ್ಮೆಂದೊಮ್ಮೆ ಹಗೆತನದಿಂದ ಪ್ರಕ್ಷುಬ್ಧವಾದುದು ದುಃಖಕರವಾಗಿದೆ. ಭಜನೆಗಳು ಇತರರ ನಿದ್ರೆಯನ್ನು ಕೆಡಿಸುವ ಉದ್ದೇಶದವುಗಳಾಗಿರಲಾರವೆಂದು ನಾವು ಭಕ್ತಿಯುತರಾದ ಭಜಕರಿಗೆ ಹೇಳುವಾಗ, ಹೊರಗಿನ ಇತರ ಮತೀಯರ ಉಪಾಸನೆಯು ಮುಸಲ್ಮಾನರ ಪಳ್ಳಿಯ ಅಂತರ್ಯವನ್ನು ಕೆಡಿಸಲಾರದೆಂಬುದನ್ನೂ ಹೇಳಬೇಕಾಗುವುದು. ತಮ್ಮ ದೇವಾಲಯದ ಪಾವಿತ್ರ್ಯವು ಇತರರಿಂದ ಕೆಡಿಸಲ್ಪಡಲು ಸಾಧ್ಯವೆಂದು ಕಲ್ಪಿಸಬಲ್ಲವನು ತನ್ನ ದೇವಾಲಯದ ಅವಮಾನವನ್ನೇ ಹೊರಗೆಡಹುವನು. ದೇವಾಲಯಗಳು ಯಾವ ರೀತಿಯಿಂದಲಾದರೂ ಅಪವಿತ್ರವಾಗಲಾರವು; ಯಾವ ಕಠಿಣ ಶಬ್ದಗಳೂ ಅವುಗಳ ನೀರವತೆಯನ್ನು ಕೆಡಿಸಲಾರವು ಎಂಬ ಮಹತ್ವದ ಗುಣಗಳನ್ನೇ ನಾವು ತಿಳಿಯದಿರುವ ತನಕ ನಮ್ಮ ನಮ್ಮ ದೇವಾಲಯಗಳನ್ನು ನಾವು ಗೌರವಿಸಲಾರೆವು.

ಇಡೀ ಹಿಂದೂಸ್ಥಾನದಲ್ಲಿ ಪ್ರಚಂಡವಾಗಿ ಬೆಳೆದುಬಂದ ಹಿಂದೂ-ಮುಸಲ್ಮಾನ ವಿದ್ವೇಷದ ವಿಷವೃಕ್ಷದ ಮೊಳಕೆಯು ನಮ್ಮಲ್ಲಿಯೂ [illegible] ಯಾರ [illegible] ಯಾರ [illegible]ದು ಈಗ [illegible] ಪ್ರಯೋಜನವಾಗದು. ಈ ಮೊಳಕೆಯನ್ನು ಮರವಾಗುವ ಮೊದಲೇ ಕಿತ್ತು ಬಿಸುಡುವುದು ಹೇಗೆಂಬುದೇ ಮುಖ್ಯ ಪ್ರಶ್ನೆಯಾಗಿರತಕ್ಕದ್ದು.

ಇದನ್ನು ಪ್ರಾರಂಭವಾದ ಕಡೆಯಲ್ಲಿಯೇ ಬಿಡಬಾರದೆಂದು—ಹೆಚ್ಚು ಶಿಕ್ಷಿತರಾದವರು ತಿಳಿಯುವುದೊಳ್ಳೆಯದು. ಜವಾಬ್ದಾರಿ ಇಲ್ಲದ ಕೆಲವೇ ಪುಂಡಾಟಿಕೆಯವರಿಂದ ಉರಿಸಲ್ಪಟ್ಟ ಈ ಬೆಂಕಿಯು ಯಾವ ರೀತಿಯಲ್ಲಿ ಸಾಮಾನ್ಯರೊಳಗೆ ಪ್ರಸರಿಸಬಲ್ಲುದೆಂದು ಹೇಳಲಾಗುವುದಿಲ್ಲ. ಉತ್ತರ ಹಿಂದುಸ್ಥಾನದ ಕಥೆಯು ಈ ವಿಷಯದಲ್ಲಿ ನಮಗೆ ಎಚ್ಚರವನ್ನು ಕೊಡತಕ್ಕದ್ದು. ಶಾವಾಗಿ ಅರಿಸಲು ಇಳಿಯದೆ ಅಲಕ್ಷ್ಯರಾಗಿ ಈಗ ಕುಳಿತುಕೊಳ್ಳುವ ಜಾತಿಯ ಧುರೀಣರೇ ನಾಳೆ ಇದೇ ಬೆಂಕಿಗೆ ಬಲಿಬೀಳಬೇಕಾಗುವುದೆಂಬುದನ್ನು ಮನಸ್ಸಿನಲ್ಲಿಡತಕ್ಕದ್ದು.

ಮುಸಲ್ಮಾನರ ಬಲಾತ್ಕಾರವಾಗಲಿ ಹಿಂದೂಗಳ ಸ್ವೇಚ್ಛೆಯಾಗಲಿ ಇಂತಹ ಸಮಯದಲ್ಲಿ ತೀರ್ಮಾನಕೊಡಲು ಅಧೀಕೃತವಾದ ವಿಷಯಗಳಾಗಬಾರದು. ವಾಮೂಲು ಹಕ್ಕುಗಳೂ, ಪರಸ್ಪರ ಸಹಾನುಭೂತಿಯೂ ಮಶೀದಿಗಳ ಮತ್ತು ದೇವಸ್ಥಾನಗಳ ಮುಂದಿನ ಹಕ್ಕು ಬಾಧ್ಯತೆಗಳನ್ನು ನಿರ್ಣಯಿಸತಕ್ಕದ್ದು. ಸರಕಾರದ 144ನೇ ಪ್ರಕರಣವೇ ಇದನ್ನು ನಿರ್ಣಯಿಸಬೇಕೆಂಬುದು ಎರಡು ಪಕ್ಷಗಳಿಗೂ ಮರ್ಯಾದೆಯಾದುದಲ್ಲ. ಇತ್ತಂಡದ ಮುಖಂಡರೂ ಒಟ್ಟಾಗಿ ಇಬ್ಬರಿಗೂ ಮರ್ಯಾದೆಕರವಾದ ನಡೆವಳಿಕೆಯನ್ನು ಗೊತ್ತು ಹಚ್ಚುವುದು ಉತ್ತಮವಿದೆ.

ಈ ಮಧ್ಯದಲ್ಲಿ ರಾಷ್ಟ್ರಬಂಧುವು "ಅಂಶ"ಗಳ ವರ್ತಮಾನವೊಂದನ್ನು ಹೆಕ್ಕಿ ಎಲ್ಲಾ ತಪ್ಪನ್ನು ತನ್ನ "ಸಮಾಚಾರ"ದ ಮೂಲಕ ಪ್ರತ್ಯೇಕ ಜಾತಿಯ ತಲೆಯ ಮೇಲೆ ಹೊರಿಸಿದುದು ಪತ್ರಿಕೆಯ ಜಾತೀಯತೆಯ ಸ್ವಭಾವವನ್ನು ತೋರಿಸುತ್ತಿದೆಯೋ ಎಂಬ ಸಂದೇಹವನ್ನು ಹುಟ್ಟಿಸುತ್ತದೆ. ಗೊತ್ತಿಲ್ಲದ ಸಮಾಚಾರದಿಂದ ತನಗೆ ಬೇಡವಾದ ಜಾತಿಗೆ ಕಪ್ಪು ಬಳಿಯುವ ಈ ಪ್ರಯತ್ನವು ಬರಾಂಗೂ ಶೋಭಿಸಲಾರದು.

ವಾಚಕರ ಅವಗಾಹನೆ ಬಗ್ಗೆ ನಮಗೆ ತಿಳಿದ ವರ್ತಮಾನಗಳ ಸರಣಿಯನ್ನು ಕೊಡುವೆವು.

ನವಂಬರ ತಾ. 27ಕ್ಕೆ ದ್ರಾವಿಡ ಬ್ರಾಹ್ಮಣರ ಕಾರ್ತೀಕ ದೀಪೋತ್ಸವದ ದೇವರು ರಥಬೀದಿಯ ಕಟ್ಟೆಯಲ್ಲಿ ಪೂಜಿಸಲ್ಪಡುವಾಗ ಮುಸಲ್ಮಾನರ ನಗರಭಜನೆಯು ಬಂದಾಗ ಅವರಿಗೆ ದಾರಿ ಬಿಡಿಸಿಕೊಡಲ್ಪಟ್ಟಿತಲ್ಲದೆ, ಮುಂದೆ ಮುಸಲ್ಮಾನರು ಎಲ್ಲಾ ಹಿಂದೂದೇವಾಲಯಗಳ ಮುಂದೆ ಭಜನೆ ನಿಲ್ಲಿಸದೆ ಮಾಡುತ್ತಾ ಹೋಗಿರುವರು.

ದಶಂಬರ ತಾ. 5ಕ್ಕೆ ಪಾಂಡೇಶ್ವರ ದ್ರಾವಿಡ ಬ್ರಾಹ್ಮಣರ ದೇವರು ವಾದ್ಯಮೂಲಕ ಬರುವಾಗ ಎದುರಿಗೆ ಮುಸಲ್ಮಾನರ ನಗರಭಜನೆಯು ಬಂದು, ವಾದ್ಯನಿಲ್ಲಿಸುವ ವಾದವೆದ್ದು ಸಣ್ಣ ಗಲಾಟೆಯಾಯಿತು.

ದಶಂಬರ ತಾ. 7ಕ್ಕೆ ವೈಶ್ಯ (ಹಂಚೆಟ್ಟಿ)ರ ಭಜನೆಯು ಬಸವನಗುಡಿಯಲ್ಲಿರುವ ಕಾವಿಯಾರಪಳ್ಳಿಯ ಹತ್ತಿರ ಹೋದಾಗ ಭಜನೆಯ ತಾಳ ಮದ್ದಲೆಬಾರಿಸುವ ವಿಷಯದಲ್ಲಿ ವಾದವಾಗಿ ಸ್ವಲ್ಪ ಗಲಾಟೆಯಾಯಿತು.

ಮೊಗವೀರರು ಅಧಿಕ ಸಂಖ್ಯಾತರಾಗಿ ಬಂದು ಆ ಮೇಲೆ ಅದೇ ರಾತ್ರಿ ಸುರಕ್ಷಿತವಾಗಿ ಅದೇ ಪಳ್ಳಿಯ ಹತ್ತಿರ ಭಜನೆಯನ್ನು ಮಾಡಿಹೋದರು.

ತಾ. 8ಕ್ಕೆ ಹಂಚೆಟ್ಟಿಗಳವರ ಭಜನೆಯು ಪೋಲೀಸರ ಸಹಾಯದಿಂದ ಅದೇ ಪಳ್ಳಿಯ ಮುಂದಿನಿಂದ ಹೋಯಿತು.

ದಶಂಬರ ತಾ. 9ಕ್ಕೆ ಗೌಡಸಾರಸ್ವತರ ಭಜನೆಯು ಅದೇ ಮಾರ್ಗವಾಗಿ ಹೋದಾಗಲೂ ಗಲಾಟೆಯಾಯಿತು.

ತಾ. 10ಕ್ಕೆ ಪೋಲೀಸ್ ಜವಾನರು ಶಾಂತಿರಕ್ಷಣೆಗೆ ಬಂದರು. ತಾ. 11ಕ್ಕೆ 144ನೇ ಪ್ರಕರಣ ಜಾರಿಯಾಯಿತು.

ವಿವಾದಾಸ್ಪದವಾಗಿರುವ ಹಾಗೆ ನಾವು ಮೇಲೆ ಬರೀ ನಡೆದ ಸಂಗತಿಗಳನ್ನು ಸ್ಥೂಲವಾಗಿ ಕೊಟ್ಟಿರುವೆವು.

ಇವುಗಳ ಕೂಲಂಕುಷ ವಿಚಾರವನ್ನು ನಮಗೆ ವಿಶ್ವಾಸಾರ್ಹವೆಂದು ತೋರುವ ಸಮಾಚಾರವು ಕೈ ಸೇರಿದ ಮೇಲೆಯೇ ಮಾಡುವೆವು.

ವಿದೇಶ ವರ್ತಮಾನ.

— ಸ್ಮಿರ್ನಾ ಎಂಬಲ್ಲಿ ನೆರೆ ಬಂದು ಅರಿವಾಸಿ ಪಟ್ಟಣವು ೯ ಅಡಿ ನೀರಿನ ಅಡಿಯಲ್ಲಿದ್ದಿತು. ಪಟ್ಟಣಿಗರು ಏನು ಮಾಡುವದೆಂದು ತಿಳಿಯಲಾರದೆ ಮನೆಗಳ ಮಾಡುಗಳ ಮೇಲೂ ಮರಗಳ ತುದಿಗಳ ಮೇಲೂ ಆಶ್ರಯವನ್ನು ಪಡೆದರು. ನಷ್ಟವೆಷ್ಟಾಗಿರುವದೆಂದು ಇದು ವರೆಗೂ ತಿಳಿದು ಬಂದಿಲ್ಲ.

— [illegible] ಒಬ್ಬ [illegible] ಬ್ರಿಟಿಷ [illegible] ಮನೆ [illegible] ಹೋಗಿದ್ದರು. ಆದರೆ [illegible] ಗಿಂದೊಳಗೇ ಕಳ್ಳತನವು ನಡೆದಿತ್ತೆಂದು ತಿಳಿಯಲಾಗಿದೆ.

— ಕೊಲಂಬಿಯದ [illegible] ಎಂಬಲ್ಲಿಗೆ [illegible]

ಬೋರ್ಸ್, ಪೆಕ್ ಸ್ಮಿತ್ ಓಕ್ [illegible]	ಗಳ್ಳ [illegible]
ನೆಯ ಇನಾಮು ದೊರೆಯಿತು.	೬೫,೦೦೦ ರೂಪಾಯಿ [illegible]
ಕ್ಕಿಗೆ ಬಂದ ನಾಲ್ಕೈದು ದಿನಗಳ	ತರುವಾಯ [illegible]
ಮೃತಪಟ್ಟನು. ಆತನಿಗೆ ಆಕ್ಕ,	ತಂಗಿಯರಿಲ್ಲ. [illegible]

ತಾಯಿ ತಂದೆಯರಿಲ್ಲ.

— ಯುನೈಟೆಡ್ ಸ್ಟೇಟ್ಸಿನ ಸರ್ಕಾರವು ಎರಡು ಸಾವಿರ ಮರಿಸುಗಳನ್ನು ಇನ್ನಷ್ಟು ದೊಡ್ಡವುಗಳನ್ನಾಗಿ ಮಾಡುವದಕ್ಕಾಗಿ ೧,೫೦೦,೦೦೦ ಡೊಲ್ಲರುಗಳನ್ನು ಹಳ್ಳಿಗೆ ಕೊಡಬೇಕಾಗಿ ಪ್ರಕಟಿಸಿರುವರು.

— ಮುಸ್ಸೊಲಿನಿಯವರ "ಮಗಳು" ಹಿರೆಮೊಸ್ಸನವನ್ನು ಸಂಚರಿಸುವ ಸಲುವಾಗಿ ಹೊರಟಿರುವಳು. ಅವಳು ಹೊರಡುವಾಗ ಬೀಳ್ಕೊಡುವ ಸಲುವಾಗಿ ಪಟ್ಟವಾದ ಜನಸಂದಣಿಯು ಬ್ರಿಂಡಿಸಿಯಲ್ಲಿ ನೆರೆದಿತ್ತು.

— ಜರ್ಮನಿಯ ಜನರಲ್ ಗ್ಲಾಕೆನ್‌ರವರು ಹಿಂದೂಸ್ಥಾನವನ್ನು ಸಂಚರಿಸುವ ಸಲುವಾಗಿ 'ರಜಪುತಾನ' ಹಡಗಿನಲ್ಲಿ ಪ್ರಯಾಣ ಮಾಡಿ ೬ನೇ ತಾರೀಕಿಗೆ ಮುಂಬಯಿಗೆ ಬಂದು ತಲಪಿದರು. ಅವರು ಸುರತ್, ಬರೋಡಾ, ಅಹಮದಾಬಾದ ದೇವಾಲಯಗಳನ್ನು ಕಾದು ಉತ್ತರ ಹಿಂದೂಸ್ಥಾನವನ್ನು ಸಂಚರಿಸಿ, ಡೆಲ್ಲಿ, ಕಲಕತ್ತೆಗೆ ಬರುವರು.

— ಯುದ್ಧದ ಸಮಯದಲ್ಲಿ ಹೆಂಗಸರ ಸೇನಾ ಸೈನ್ಯವನ್ನು ಉಂಟುಮಾಡಿದ ಮಿಸ್ ಎಮ್. ಎ ಟ್ರೋಶಹರ್ಸ್ಟ್ ಎಂಬವಳು ಮೃತಪಟ್ಟಳು.

— ಕೇಂಬ್ರಿಜ್ ಶಾಯರಿನ ವಿಟ್ಟರ್ಸ್‌ಫೋರ್ಡ್ ಎಂಬಲ್ಲಿ ಎರಡು ವಿಮಾನಗಳು ಒಂದಕ್ಕೊಂದು ಢಿಕ್ಕಿಹೊಡೆದುವು. ಒಂದು ವಿಮಾನದ ಪೈಲಟನು ಸತ್ತುಹೋದನು. ಎರಡೂ ವಿಮಾನಗಳಿಗೂ ಹಾನಿಯು ಆಯಿತು.

— ಅಮೇರಿಕದಲ್ಲಿ ಬೊಲಿವಿಯ ಮತ್ತು ಪರಾಗ್ವೇ ಎಂಬ ಎರಡು ರಾಜ್ಯಗಳ ಸೈನ್ಯಗಳೊಳಗೆ ಬಡಿದಾಟವಾಯಿತು. ಒಟ್ಟಾರೆಯಾ ಮೇಲೆ ಎರಡೂ ಪಕ್ಷಗಳಲ್ಲಿ ೮೦ ಜನ ಸೈನಿಕರು ಸತ್ತುಹೋದರು.

— ಲೀಗ್ ಕೌನ್ಸಿಲಿನ ೫೩ನೆಯ ಅಧಿವೇಶನವು ಲ್ಯೂಗಾನೊ ಎಂಬಲ್ಲಿ ಕರೆಯಲ್ಪಟ್ಟಿರುವದು. ಇದು ವರೆಗೆ ಈ ಕೌನ್ಸಿಲಿನ ಅಧಿವೇಶನಗಳು ವರ್ಷಕ್ಕೆ ನಾಲ್ಕಾರು ನಡೆಯುತ್ತಿದ್ದವು. ಇನ್ನು ಮುಂದಕ್ಕೆ ವರ್ಷಕ್ಕೆ ಮೂರೇ ಅಧಿವೇಶನಗಳು ನಡೆದರೆ ಸಾಕೆಂದು ಚರ್ಚೆಯು ನಡೆಯುತ್ತಲಿದೆ.

— ಬರುವ ಫೆಬ್ರವರಿ ೧೮ನೇ ತಾರೀಕಿನಿಂದ ಮಾರ್ಚ ೧ನೇ ತಾರೀಕಿನ ವರೆಗೆ ಲಂಡನ ಮತ್ತು ಬರ್ಮಿಂಗ್ ಹೇಮುಗಳಲ್ಲಿ ಬ್ರಿಟಿಷರ ಕೈಗಾರಿಕೆ ಸಾಮಾನುಗಳ ಬಹಿರಂಗವಾದ ಸಂತೆಯು ಜರಗುವದು. ಇದರ ತಯಾರಿಯು ಈಗಲೇ ನಡೆಯುತ್ತಲಿದೆ, ೨೯೭,೫೦೦ ಚದರ ಅಡಿ ಸ್ಥಳದ ಬಗ್ಗೆ ೧೯೩೫ ಬ್ರಿಟಿಷ ಉದ್ಯೋಗಿಗಳಿಂದ ಇದು ವರೆಗೆ ಅರ್ಜಿಗಳು ಬಂದಿರುತ್ತವಂತೆ.

— ರಷ್ಯಿಯ ಮಿ ಬಚ್ಚೆರನೆಂಬವನು ಇಬ್ಬರು ಕುಳಿತುಕೊಳ್ಳಬಹುದಾದ ಒಂದು ವಿಮಾನದಲ್ಲಿ ಕುಳಿತು ಇದು ವರೆಗೆ ಯಾರೂ ಹಾರದ ವೇಗದ ರಭಸದಿಂದ ಹಾರಿರುವನು. ಗಂಟೆಗೆ ಆತನು ೧೯೦ ಕಿಲೊ ಮೀಟರು ದೂರವನ್ನು ಹಾರಿರುವನು.

ಒಳದೇಶ ವರ್ತಮಾನ.

— ಅಖಿಲ ಭಾರತ ಕ್ರಿಸ್ತೀಯರ ಪರಿಷತ್ತು ಇದೇ ೨೮ ಮತ್ತು ೨೯ನೇ ದಿನಗಳಲ್ಲಿ ಮದರಾಸಿನಲ್ಲಿ ಕೂಡುವದು. ಎಸೆಂಬ್ಲಿ ಮೆಂಬರರಾದ ರೆವರೆಂಡ್ ಜೆ ಎ. ಚಟ್ಟರ್ಜಿಯವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

— ಪೂನಾ ಮುನಿಸಿಪಾಲಿಟಿಯೊಳಗೆ ಸೇಂದಿ ಮತ್ತು ಶರಾಬು ಅಂಗಡಿಗಳನ್ನು ಇರಗೊಡಿಸಬಾರದೆಂದು ಮುನಿಸಿಪಾಲಿಟಿಯಲ್ಲಿ ಒಂದು ಠರಾವು ಮಂಜೂರಾಗಿರುತ್ತದೆ.

— ಕಾಂಗ್ರೆಸ್ ವಾರದಲ್ಲಿ ಕಲಕತ್ತೆಯಲ್ಲಿ ನಡೆಯಲಿರುವ ರಾಷ್ಟ್ರ ಭಾಷಾ ಪರಿಷತ್ತಿಗೆ ಅಧ್ಯಕ್ಷರಾಗಲು ಮಹಾತ್ಮಾಜಿಯವರು ಒಪ್ಪಿರುವರು.

— ದರ್ಭಂಗದ ಮಹಾರಾಜಾಧಿರಾಜರು ಅಸ್ವಸ್ಥರಾಗಿರುವರೆಂದು ವರ್ತಮಾನವಿದೆ.

— ದಶಂಬರ ಒಂದನೇ ತಾರೀಕಿನ ದಿನ ಫೊರ್ವಾರ್ಡ್ ಪತ್ರಿಕೆಯಲ್ಲಿ 'ದಿ ಯುನಿಫೋರ್ಮ್' ಎಂಬ ಲೇಖನವನ್ನು ಅಚ್ಚು ಹಾಕಿ ಪ್ರಕಟಿಸಿದುದಕ್ಕಾಗಿ ಪೋಲೀಸರು ಫೊರ್ವಾರ್ಡ್ ಪತ್ರಿಕೆಯ ಆಫೀಸನ್ನು ಶೋಧಿಸಿ, ಸಂಪಾದಕರಾದ ಶ್ರೀ ಸತ್ಯರಂಜನ ಬಕ್ಷಿ ಮತ್ತು ಮುದ್ರಕರಾದ ಶ್ರೀ ಪುಲಿನ ಬಿಹಾರಿಧಾರ ಇವರನ್ನು ಕೈದುಮಾಡಿ ಪತ್ರಿಕೆಯ ಸಂಚಿಕೆಗಳನ್ನು ಕೈವಶಮಾಡಿಕೊಂಡರು. ಇಬ್ಬರೂ ಕೊನೆಗೆ ಜಾಮೀನಿನ ಮೇಲೆ ಬಿಡಲ್ಪಟ್ಟರು.

— ರಾಮತೀರ್ಥದ ಸಮೀಪದ ಒಬ್ಬ ಕೃಷಕನು ಅಗೆಯುವಾಗ ಒಂದು ಹಳೇ ಇಟ್ಟಿಗೆಯು ಸಿಕ್ಕಿತು. ಆತನು ಅದನ್ನು ಎಡಿಶನಲ್ ಜುಡಿಶಿಯಲ್ ಕಮಿಶನರರಿಗೆ ತೋರಿಸಲಾಗಿ, ಅಲ್ಲಿ ಇನ್ನೇನಿರುವದೆಂದು ಶೋಧನೆ ಮಾಡುವ ಸಲುವಾಗಿ ನೆಲವು ಅಗೆಯಲ್ಪಟ್ಟಿತು. ಅಗೆಯುತ್ತಾ ಅಗೆಯುತ್ತಾ ಹೆಚ್ಚು ಹೆಚ್ಚು ಇಟ್ಟಿಗೆಗಳೂ, ತಾಗು ದೀಪಗಳೂ ಇನ್ನೂ ಹಲವು ಸಾಮಗ್ರಿಗಳೂ ದೊರೆತವು. ಪೂರ್ವ ಕಾಲದಲ್ಲಿ ಅಲ್ಲಿ ಒಂದು ಪಟ್ಟಣವಿದ್ದಿರಬಹುದೆಂದೂ, ಇನ್ನೂ ಅಗೆದರೆ ಆಶ್ಚರ್ಯಕರವಾದ ಸಂಗತಿಗಳು ಹೊರಗೆಡಹಲ್ಪಡುವವೆಂದೂ ನಂಬಲಾಗಿದೆ.

— ಕಲಕತ್ತಾ ಕಾರ್ಪೊರೇಶನ ತಯಾರಿಯು ಸಾಧಾರಣವಾಗಿ ಸಂಪೂರ್ಣತ್ವವನ್ನು ಹೊಂದಿಯಿತ್ತೆದೆ. ಈ ವರುಷದ ಕೆಲಸ [illegible]

ಅಪಘಾತದ ಕಥೆಯಾದರೂ ಇದುವರೆಗೂ ನಡೆದಿಲ್ಲವಂತೆ. ದೇಶಬಂಧು ನಗರವೆಂಬ ಕಾಂಗ್ರೆಸ್ ನಗರದ ಕೆಲಸ ಆರಂಭವಾಗಿರುವದು. ಏಪ್ಪತ್ತರದೊಳಗೆ ೫೦,೦೦೦ ಜನರು ಕುಳಿತುಕೊಳ್ಳಬಹುದಾದಷ್ಟು ವಿಶಾಲ ಸ್ಥಳವಿದೆ. ಅದಲ್ಲದೆ ಚಪ್ಪರವು ಮನೋಹರವಾಗಿ ಶೃಂಗರಿಸಲ್ಪಟ್ಟಿರುತ್ತದೆ.

—ಬಂಗಾಳದಲ್ಲಿ ಒಂದು ಹೊಸ ಪಕ್ಷವು ಉಂಟಾಗುವದರಲ್ಲಿದೆ. ಡಾ. ಜೆ. ಎನ್. ಗುಪ್ತರವರು ಈ ಪಕ್ಷದ ನಾಯಕರು. ಡೊಮಿನಿಯನ್ ಸ್ಟೇಟಸನ್ನು ಈ ಪಕ್ಷವು ಅಂಗೀಕರಿಸುವದು. ಕೃಷಿಯ ಉದ್ಧಾರ, ಸ್ಥಳೀಯ ಸಹಾಯ, ಸ್ವಾಯತ್ತ ಮತ್ತು ಸಕಲರ ವಿದ್ಯಾಭ್ಯಾಸವನ್ನು ಒದಗಿಸುವದು, ಸಮಾಜದ ಅಭಿವೃದ್ಧಿ ಇವೇ ಈ ಪಕ್ಷದ ಮುಖ್ಯ ಉದ್ದೇಶಗಳಾಗಿರುತ್ತವೆ.

—ಭೋಪಾಲ ರಾಜ್ಯದಲ್ಲಿ ವಿಪರೀತವಾದ ಮಳೆಗಾಳಿ ಬಂದು ಬೆಳೆಗೆ ಬಹಳ ನಷ್ಟವು ಸಂಭವಿಸಿರುತ್ತದೆ. ಬೆಳೆಗಳ ಸ್ಥಿತಿಯನ್ನು ಸ್ವತಃ ವಿಚಾರಿಸುವ ಸಲುವಾಗಿ ಭೋಪಾಲದ ಮಹಾರಾಜರು ಸದ್ಯದಲ್ಲಿಯೇ ಹೊರಡಲಿರುವರು.

—ಕುಲ್ನಾ ಜಿಲ್ಲೆಯ ಮೋರೆಲ್‌ಗಂಜದ ದೊಡ್ಡ ಕಚೇರಿಯು ಸುಮಾರು ಒಂದು ಸಾವಿರ ಮುಸಲ್ಮಾನರಿಂದ ಹಗಲು ಹೊತ್ತಿನಲ್ಲಿ ಲೂಟಿ ಮಾಡಲ್ಪಟ್ಟಿತು. ಬಾಗಿಲುಗಳೂ ಕಿಟಕಿಗಳೂ ಒಡೆಯಲ್ಪಟ್ಟವು. ಬೀರುಗಳೆಲ್ಲವೂ ಹಾಳುಮಾಡಲ್ಪಟ್ಟವು.

—ಕೊಯಮುತ್ತೂರಿನ ಇಬ್ಬರು ಯುರೋಪಿಯನ ಪ್ಲಾಂಟರರು, ಎರಡು ಜನರು ಕುಳಿತುಕೊಳ್ಳುವ ಒಂದು ಕಾರಿನಲ್ಲಿ ಕುಳಿತು ಕೊಯಮುತ್ತೂರಿನಿಂದ ಹೊರಟು ತಮ್ಮ ತೋಟಕ್ಕೆ ಹೋಗುವಾಗ ನಡುವೆ ಮಾರ್ಗದಲ್ಲಿ ಆನೆಗಳ ಗುಂಪನ್ನು ಕಂಡು ಮೋಟಾರುಕಾರಿಗೆ ಥಟ್ಟನೆ ಬ್ರೇಕ್ ಹಾಕಿದರು. ಒಡನೆ ಮೋಟಾರುಕಾರು ತಲೆ ಕೆಳಗಾಗಿ ಬಿದ್ದು ಇಬ್ಬರಿಗೂ ಬಹಳ ಆಘಾತವಾಗಿ ಅಲ್ಲಿಯೇ ಸತ್ತುಹೋದರು. ಆ ಮೇಲೆ ಅಲ್ಲಿಗೆ ಕೊಯಮುತ್ತೂರಿನ ಪೋಲೀಸ್ ಸುಪರಿಂಟೆಂಡೆಂಟರೇ ಮೊದಲಾದವರು ಬಂದು ಶವಗಳನ್ನು ಕೊಯಮುತ್ತೂರಿಗೆ ಕೊಂಡೊಯ್ದರು.

—ಜಿನೀವಾದಲ್ಲಿ ನಡೆಯುವ ವರ್ಲ್ಡ್ ಫೆಡರೇಶನ್ ಓಫ್ ಎಜ್ಯುಕೇಶನಲ್ ಎಸೋಸಿಯೇಶನ್ಸ್ ಇದರ ಹಿಂದೂಸ್ಥಾನದ ಪ್ರತಿನಿಧಿಯಾಗಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ತೆರಳುವರು. ಬರುವ ಮೇ ತಿಂಗಳಲ್ಲಿ ಅವರು ಯುರೋಪಿಗೆ ಹೊರಡುವರು. ಮತ್ತು ಬರ್ಲಿನಿನಲ್ಲಿ ನಡೆಯುವ ಅಂತರ್ರಾಷ್ಟ್ರೀಯ ಸ್ತ್ರೀಯರ ಪರಿಷತ್ತಿಗೂ ಹೋಗುವರು.

ಜಬಾಲಪುರದ ಒಬ್ಬ ಟೆಲಿಗ್ರಾಫ್ ಪೇದೆಯು ಲೆಫ್ಟಿನೆಂಟರೇ ನೆಂಬವನ ಮನೆಯಲ್ಲಿ ಒಂದು ದಿನ ಮೇಜಿನ ಬಾಗಿಲು ತೆಗೆದು ಹುಡುಕುತ್ತಿದ್ದಾಗ ಪೋಲೀಸರಿಂದ ಹಿಡಿಯಲ್ಪಟ್ಟನು. ತಾನು ಮಾಡುವದೇನಾಗಿತ್ತೆಂಬುದನ್ನು ಹೇಳಲು ಅತನಿಗೆ ಸಾಧ್ಯವಾಗಲಿಲ್ಲ. ಅತನ ಮನೆಯಲ್ಲಿ ಪರೀಕ್ಷಿಸಿ ನೋಡಲಾಗಿ ಹಲವು ಗಡಿಯಾರಗಳೂ, ಚೂರಿಗಳೂ, ಇನ್ನು ಇತರ ಸಾಮಗ್ರಿಗಳೂ ದೊರೆತವು. ಸರಕಾರಿ ನೌಕರನಾಗಿದ್ದ ಕಳ್ಳರಲ್ಲಿ ಅಗ್ರೇಸರನಾಗಿ ಜೀವನವನ್ನು ಮಾಡುತ್ತಿದ್ದವನೆಂದರೆ ಇವನೇ.

—ತಿನ್ನವೆಲ್ಲಿಯ ಮುನಿಸಿಪಾಲಿಟಿ ಚೆಯರ್‌ಮೇನರ ಮೋಟಾರಕಾರನ್ನು ಗ್ಯಾರೇಜಿನೊಳಗೆ ಬೀಗದಲ್ಲಿ ಇಟ್ಟಿದ್ದರು. ಕಳೆದ ವಾರ ಒಂದು ದಿನ ರಾತ್ರಿ ಕಳ್ಳರು ಸದ್ದಿಲ್ಲದೆ ಬಂದು ಬಾಗಲಿನ ಗೂಟಗಳನ್ನು ಕಳಚಿ, ಗೇಟ್ ಬಾಗಿಲುಗಳನ್ನು ತೆರೆದು ಕಾರನ್ನು ಮಾರ್ಗದ ವರೆಗೆ ಮೆಲ್ಲನೆ ದೂಡಿಕೊಂಡು ಹೋಗಿ ಮತ್ತೆ ಎತ್ತಲೋ ಓಡಿ ಹೋಗಿರುವರು. ಈ ಕುರಿತು ಶೋಧನೆಯನ್ನು ನಡೆಸುತ್ತಿರಬೇಕೆಂದು ಎಲ್ಲಾ ಸ್ಥಳಗಳಿಗೂ ತಂತಿ ಕೊಡಲಾಗಿಯದೆ.

—ಸಿಲೋನಿನಲ್ಲಿರುವ ಬರ್ಮಾ ಪೆಟ್ರೋಲಿಯಮ್ ಕಂಪೆನಿಯ ೧,೧೦೦ ಜನರು ಕೆಲಸಕ್ಕೆ ಒಂದೇ ಸವನೆ ಮುಷ್ಕರವನ್ನು ಹಾಕಿರುವರು.

—ದಿಲ್ಲಿಯ ಮುಸ್ಲಿಮ್ ನೇಶನಲ್ ಯುನಿವರ್ಸಿಟಿಯ ಸಲುವಾಗಿ ಡಾ| ಅನ್ಸಾರಿಯವರಿಗೆ ಮದರಾಸಿನಿಂದ ೪೦,೦೦೦ ರೂಪಾಯಿಗಳು ಬಂದು ತಲುಪಿಯುತ್ತವೆ.

—ಮುಂಬಾಯಿಯಲ್ಲಿ ಸ್ಟೀನ್ ಲಿಪೋಲ್ಡರ್ ಬ್ಯಾರೆಂಟ್ ಎಂಬ ಎಂಗ್ಲೋ ಇಂಡಿಯನನು ಕೆಲವು ಜನಾನರಿಗೆ ಕೆಲಸ ಕೊಡಿಸುವನೆಂದು ಪ್ರತಿಯೊಬ್ಬರಿಂದ ೫೦ ರೂಪಾಯಿಗಳಂತೆ ವಸೂಲು ಮಾಡಿದನು. ಆದರೆ ಅವರಿಗೆ ಎಲ್ಲಿಯೂ ಕೆಲಸ ದೊರೆಯಲಿಲ್ಲ. ಆತನಿಗೆ ಇದಕ್ಕಾಗಿ ೨೦೦ ರೂಪಾಯಿ ಜುಲ್ಮಾನೆಯೂ, ಒಂದು ದಿನದ ಸಾದಾ ಸಜೆಯೂ ವಿಧಿಸೋಣಾಯಿತು.

—ಅಹಮದಾಬಾದ ಜಿಲ್ಲೆಯ ಮೆಮನಗರ ಮತ್ತು ಬೋಧಪುರ ಎಂಬ ಎರಡು ಹಳ್ಳಿಗಳಲ್ಲಿ ದರೋಡೆಕೋರರು ಬಂದು ಬಹು ಕೊಲಾಟೆಯನ್ನೆಬ್ಬಿಸಿದರು. ಹಳ್ಳಿಯವರೆಲ್ಲರೂ ಒಟ್ಟಾಗಿ ಅವರ ಎದುರಿಗೆ ಬಂದು ಕಾದಾಡತೊಡಗಿದರು. ಹಲವು ಹಳ್ಳಿಗರು ಗಾಯಪಟ್ಟರು. ದರೋಡೆಕರು ಹೀಗೆ ಹಲವರನ್ನು ಗಾಯಗೊಳಿಸಿ ಸುಮಾರು ೪೦೦೦ ರೂಪಾಯಿ ಮೌಲ್ಯದ ಸಾಮಾನುಗಳೊಂದಿಗೆ ಅಲ್ಲಿಂದ ಓಡಿ ಹೋದರು.

ದಕ್ಷಿಣ ಕನ್ನಡ.

ಮಂಗಳೂರು: —ಮೋರ್ಟಗೇಜ್ ಕ್ರೆಡಿಟ್ ಲೋಕಲ್ ಎಡ್ಮಿನಿಸ್ಟ್ರೇಶನ್ ಕಮಿಟಿಯವರ ಕೂಡಿದ ಸಭೆಯಲ್ಲಿ ಅಧ್ಯಕ್ಷರು ಮಂಗಳೂರಿನಿಂದ ಶೇಷಾವರದ ವರೆಗೆ ಒಂದು ಸೀಪ್ಲೇನನ್ನು ತೆರೆಯುವ ಯೋಜನೆಯು ನಡೆಯುತ್ತಿದೆಯೆಂದು ಸೂಚಿಸಿರುವರು. ಈ ಸರ್ವಿಸು ಹಿಂದೂಸ್ಥಾನದಲ್ಲಿ ಇರುವ ಎಲ್ಲಾ ಸರ್ವಿಸುಗಳಿಗಿಂತ ಉದ್ದವಾಗಿದ್ದು ಜಗತ್ತಿನ ಉನ್ನತವಾದ ಸರ್ವಿಸುಗಳಲ್ಲಿ ಒಂದಾಗುವದು. ಮಂಗಳೂರಿನಿಂದ ಮದರಾಸು, ಬೆಜವಾಡ, ನಾಗಪುರ, ಮತ್ತು ಡಿಲ್ಲಿ ಹಾದಿಯಾಗಿ ಶೇಷಾವರಕ್ಕೆ ಹೋಗುವದು.

ಕಳೆದ ವಾರದಲ್ಲಿ ನಡೆದ ಮಂಗಳೂರು ಮುನಿಸಿಪಾಲಿಟಿಯ ಮೀಟಿಂಗಿನಲ್ಲಿ ಡಾಕ್ಟರ್ ಪಿ. ಪಿ. ಶೆಟ್ಟಿಯವರು ಮುನಿಸಿಪಾಲಿಟಿಯ ವೈಸ್ ಚೆಯರ್‌ಮೇನರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟಿರುವರು.

ಇಲ್ಲಿಯ ಹೊಸ ಸಬ್ ಕೋರ್ಟಿಗೆ ಶ್ರೀ ಕುಪ್ಪುಸ್ವಾಮಿ ಅಯ್ಯರರು ಎಡಿಶನಲ್ ಸಬ್ ಜಡ್ಜರಾಗಿ ನೇಮಕ ಹೊಂದಿರುತ್ತಾರೆ.

ಮುಂಬಾಯಿ ಅಭಿಮನ್ಯು ರೋವರ್ಸ್ ಸ್ಕೌಟ್ಸ್ ಪಂಗಡದ ಪ್ರಥಮ ವರ್ಷದ ಕ್ಯಾಂಪ್ ಫಾಯರ್ ವಾರ್ಷಿಕೋತ್ಸವವು ಹೋರ್ನಬಿ ರಸ್ತೆಯಲ್ಲಿರುವ ಹಾಲ್ ಬಿಲ್ಡಿಂಗ್ ಕಟ್ಟೋಣದಲ್ಲಿ ಇದೇ ತಿಂಗಳ ತಾ. ೨೭ನೇ ಆದಿತ್ಯವಾರ ಸಂಜೆ ಘಂಟೆ ೮-೩೦ಕ್ಕೆ ಶ್ರೀಯುತ ಎನ್. ಸದಾಶಿವ ಬಂಗೇರರ ಅಧ್ಯಕ್ಷತೆಯಲ್ಲಿ ಜರಗುವದು.

ಮಂಗಳೂರು ಮುನಿಸಿಪಾಲಿಟಿಯೊಳಗೆ ಪ್ರಾರಂಭವಾಗಿದ್ದ ಕೋಲೆರಾ ರೋಗವು ಈಗ ಸ್ವಲ್ಪಮಟ್ಟಿಗೆ ಸಮಾಧಾನವಾಗಿಯದೆಂದು ತಿಳಿಯುತ್ತೇವೆ.

ತಾರೀಕು ೮—೧೨—೩೧ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯೊಳಗೆ ಒಟ್ಟು ೩೭ ಮರಣಗಳಾದವು. ಈ ಪೈಕಿ ಸನ್ನಿಪಾತದಿಂದ ೧, ಮಲೇರಿಯಾ ಜ್ವರದಿಂದ ೧, ಅತಿಸಾರದಿಂದ ೧, ಶ್ವಾಸಕೋಶದ ರೋಗದಿಂದ ೬, ಕೋಲೆರಾ ರೋಗದಿಂದ ೧೩, ಇತರ ಎಲ್ಲಾ ಕಾರಣಗಳಿಂದ ೧೫. ಶಿಶು ಮರಣ ೮. ಜನನ ಸಂಖ್ಯೆ ೪೫.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಬೋರ್ಡು ಮೆಂಬರರ ಎರಡು ವಿಶೇಷ ಸಭೆಗಳು ನಡೆಯಲಿರುವವು. ಮೊದಲನೆಯ ಸಭೆಯು ಇದೇ ೧೯ನೇ ಶನಿವಾರ ದಿನ ಮಧ್ಯಾಹ್ನ ೩-೧೫ಕ್ಕೆ ನಡೆದು ಡಿಸ್ಟ್ರಿಕ್ಟ್ ಬೋರ್ಡಿಗೆ ಒಬ್ಬ ವೈಸ್ ಪ್ರೆಸಿಡೆಂಟರನ್ನು ಆರಿಸಲಾಗುವದು. ಎರಡನೆಯ ಸಭೆಯು ಅದೇ ದಿನ ೩-೩೦ಕ್ಕೆ ನಡೆದು ಕೂಡಿಕೆಯಾದ ರೈಲ್ವೆ ಸೆಸ್ಸನ್ನು ಹೇಗೆ ಉಪಯೋಗಿಸುವದೆಂಬುವನ್ನು ಚರ್ಚಿಸಲಾಗುವದು.

ಇಲ್ಲಿಯ ಗಣಪತಿ ಹೈಸ್ಕೂಲಿನ ಸಹಾಯಾರ್ಥವಾಗಿ ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದ ಕಡೆಯಿಂದ ಶಾಲಾ ವಿದ್ಯಾರ್ಥಿಗಳು "ಪ್ರಣಯ ಲೀಲಾ" ಎಂಬ ಮನೋರಂಜಕವಾದ, ಆತ್ಯುತ್ತೇಜಕವಾದ ಹೊಸ ಐತಿಹಾಸಿಕ ಕನ್ನಡ ಸಂಗೀತ ನಾಟಕವನ್ನು ಗಣಪತಿ ಹೈಸ್ಕೂಲಿನ ಸಭಾಸದನದಲ್ಲಿ ಅಭಿನಯಿಸುವರು. ವಿದ್ಯಾಭಿಮಾನಿಗಳೆಲ್ಲರೂ ಆಗತ್ಯವಾಗಿ ಪ್ರೋತ್ಸಾಹಿಸಬೇಕಾಗಿ ಗಣಪತಿ ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯವರು ಅಪೇಕ್ಷಿಸುತ್ತಾರೆ.

ಸ್ವದೇಶಾಭಿಮಾನಿಯ
ಹೊಸ ವರುಷದ ಅಂಕ

ಮುಖ್ಯ ಲೇಖಕರು.

ಶ್ರೀಯುತ
ವೆಂಕಟರಾವ್ ಬಿ. ಆಲೂರು ಸಂಪಾದಕರು ಜಯಕರ್ನಾಟಕ
ತಾತಾಚಾರ್ಯ ಶರ್ಮ ವಿಶ್ವಕರ್ನಾಟಕ
ಶ್ರೀಮತಿ ಕಲ್ಯಾಣಮ್ಮ ಸಂಪಾದಕಿ ಸರಸ್ವತೀ
ದ. ಕೃ. ಭಾರದ್ವಾಜ ಸಂಪಾದಕರು ರಂಗಭೂಮಿ
ಎಮ್. ಎನ್. ಕಾಮತ್
ಗಣಪತಿರಾವ್ ಐಗಳ್
ಶ್ರೀಯುತ ವಾಸುದೇವ ಕಾರಂತರು ಎಮ್. ಎ. ಎಲ್. ಟಿ.

ಇತ್ಯಾದಿ ಇತ್ಯಾದಿ

ಮುಖ್ಯ ಕವಿಗಳು.

ಶ್ರೀ ಶಂಕರಭಟ್ಟ ಕಡಂಗೋಡ್ಲು ಸಂಪಾದಕರು ರಾಷ್ಟ್ರಬಂಧು
ಶ್ರೀ ಅಂಬಿಕಾತನಯದತ್ತ } ಗೆಳೆಯರ ಗುಂಪಿನವರು.
ಶ್ರೀ ವಿನಾಯಕ
ಶ್ರೀ ರಂಗ
ಶ್ರೀ ಹೊಯಸಳ
ಶ್ರೀ ಕೃ. ಶ್ರೀ. ಬೆಟಗೇರಿ. ಇತ್ಯಾದಿ

ಹಲವು ಚಿತ್ರಗಳು.

ಇತರ ಹಲವು ಪ್ರಸಿದ್ಧ ಲೇಖಕರ ಲೇಖನಗಳೂ, ಕವಿತೆಗಳೂ, ನಿರೀಕ್ಷಿಸಲ್ಪಟ್ಟಿವೆ.

ಇಲ್ಲಿಯ ಕೆನರಾ ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದವರ ಮತ್ತು ಈಗಿನ ವಿದ್ಯಾರ್ಥಿಗಳ ಬೆಡಮಿಂಟನ್ ಟೂರ್ನಮೆಂಟು ಡಿಶಂಬರ ೨೦ನೇ ತಾರೀಕಿನ ಸುಮಾರಿಗೆ ನಡೆಯುವದೆಂದೂ, ಈ ಪಂದ್ಯಾಟಕ್ಕೆ ಬಿದ್ದಿರು ಜನರ ಟೀಮುಗಳನ್ನು ಟೂರ್ನಮೆಂಟು ಕಮಿಟಿಯವರು ಒಟ್ಟು ಹಾಕಿ ಚುನಾಯಿಸುವರೆಂದೂ, ಆಟದ ಪ್ರವೇಶ ಫೀಯು ಎಂಟಾಣೆಯೆಂದೂ ಟೂರ್ನಮೆಂಟಿಗೆ ಸೇರುವವರು ಈ ತಿಂಗಳ ೧೫ರೊಳಗೆ ಸೇರಬೇಕೆಂದೂ, ಟೂರ್ನಮೆಂಟು ಬೆಳಗ್ಗೆಯೂ ಸಾಯಂಕಾಲವೂ ಆಡಲ್ಪಡುವದೆಂದೂ, ಟೀಮುಗಳ ಹೆಸರು ಮೊದಲಾದವುಗಳನ್ನು ತೋರಿಸುವ ಪಟ್ಟಿಯು ಶಾಲಾ ನೋಟೀಸು ಬೋರ್ಡಿನಲ್ಲಿ ಇಡಲ್ಪಡುವದೆಂದೂ ಸಂಘದ ಗೌರವ ಕಾರ್ಯದರ್ಶಿಗಳವರು ತಿಳಿಸುತ್ತಾರೆ.

ಮಂಗಳೂರಿನಲ್ಲಿ ಕೋಲೆರಾ ಸಂಬಂಧವಾಗಿ ಬೇರೆ ಬೇರೆ ಪಂಗಡಗಳ ನಗರ ಭಜನೆಯು ಪ್ರಾರಂಭವಾಗಿದ್ದು, ಭಜನೆಗಳು ಮುಸಲ್ಮಾನರ ಮಸೀದಿಯ ಎದುರಿನಿಂದ ಹಾದುಹೋಗಬಾರದಾಗಿ ಮುಸಲ್ಮಾನರು ಹಿಂದೂಗಳನ್ನು ತಡೆಗಟ್ಟಿ ಕೆಲವು ಸಂದರ್ಭಗಳಲ್ಲಿ ಪರಸ್ಪರರೊಳಗೆ ಬಡಿದಾಟವೂ ನಡೆಯಿತು. ಬಸವನಗುಡಿಯ ಸಮೀಪದ ಮಸೀದಿಯ ಮುಂದೆ ತಾರೀಕು ೭ನೇ ದಿನ ಹರಿಕಟ್ಟೆ ಭಜನೆಯು ಹೋಗುವಾಗ ಮಸೀದಿಯಿಂದ ಮುಸಲ್ಮಾನರು ಹೊರಕ್ಕೆ ಬಂದು ಮಸೀದಿಯ ಮುಂದೆ ತಾಳ ಮೊದಲಾದವುಗಳನ್ನು ಬಾರಿಸಬಾರದಾಗಿ ನಿರ್ಬಂಧಪಡಿಸಿದುದರಿಂದ ಅವರು ಅಲ್ಲಿ ಭಜನೆಯನ್ನು ಮಾಡದೆ ಮುಂದರಿದು ಹೋದರು. ಅದೇ ರಾತ್ರಿ ಮೊಗವೀರ ಪಂಗಡದವರ ಭಜನೆಯು ಅದೇ ಹಾದಿಯಾಗಿ ಬಂದಿತಾದರೂ ಮುಸಲ್ಮಾನರು ಆತಂಕಿಸಲಿಲ್ಲ. ಮರುದಿನ ತಾರೀಕು ೮ಕ್ಕೆ ಪುನಃ ಹರಿಕಟ್ಟೆ ಪೋಲಿಸ್ ಸಹಾಯದಿಂದ ಅದೇ ಮಸೀದಿಯ ಎದುರು ತಾಳ ಮೊದಲಾದವುಗಳನ್ನು ಬಾರಿಸಿ ಭಜನೆಯನ್ನು ಕೊಂಡೊಯ್ದರು. ತಾರೀಕು ೯ನೇ ಆದಿತ್ಯವಾರ ದಿನ ಗೌಡ ಸಾರಸ್ವತ ಬ್ರಾಹ್ಮಣರು ಭಜನೆಯನ್ನು ಮಾಡಿಕೊಂಡು ಹೋಗುತ್ತಿರುವಾಗ ಮುಸಲ್ಮಾನರು ಬಂದು ಆತಂಕಿಸಿ ಭಜನೆಯನ್ನು ನಿಲ್ಲಿಸ ಹೇಳಿದರು. ಆದರೆ ಗೌಡ ಸಾರಸ್ವತರು ತಾವು ಮಾಮೂಲು ಪ್ರಕಾರ ಭಜನೆಮಾಡುವದೆಂದು ಹೇಳಲು, ಪರಸ್ಪರರೊಳಗೆ ಜಗಳವಾಗಿ ಎರಡೂ ಪಕ್ಷಗಳೊಳಗೆ ಹೊಡೆದಾಟ ಜರುಗಿತು. ಮರುದಿನ ತಾರೀಕು ೧೦ನೇ ರಾತ್ರಿ ಅಲ್ಲಿ ಇದೇ ರೀತಿಯ ಗಲಭೆಯು ನಡೆಯಬಹುದೆಂಬ ಸಂಶಯದ ಮೇಲೆ ಸರಕಾರದವರು ಸುಮಾರು ೫೦ ಜನ ರಿಸರ್ವ ಪೋಲೀಸಿನವರನ್ನು ಆ ಮಸೀದಿಯ ಸಮೀಪ ನಿಲ್ಲಿಸಿದುದರಿಂದ ಆ ಹಾದಿಯಾಗಿ ಆ ರಾತ್ರಿ ಭಜನೆಯು ಬರಲೂ ಇಲ್ಲ, ಯಾವ ಗಲಭೆಯೂ ನಡೆಯಲಿಲ್ಲ. ತಾರೀಕು ೧೧ನೇ ಸೋಮವಾರ ದಿನ ಊರ ಮೆಜಿಸ್ಟ್ರೇಟರವರು ಕ್ರಿಮಿನಲ್ ಪ್ರೋಸೀಜರ್ ಕೋಡಿನ ೧೪೪ನೇ ಪ್ರಕರಣದ ಮೇರೆಗೆ ಇನ್ನೆರಡು ತಿಂಗಳುಗಳ ವರೆಗೆ ಮುಸಲ್ಮಾನರ ಮಸೀದಿಯ ಎದುರು ಭಜನೆಯನ್ನು ಕೊಂಡೊಯ್ಯುವಾಗ ತಾಳ ವಾದ್ಯಂಗಳನ್ನು ಬಾರಿಸುತ್ತ ಶಬ್ದವನ್ನು ಮಾಡಬಾರದೆಂದು ಹುಕುಂ ಕೊಟ್ಟು ಡಂಗುರ ಹೊಡಿಸಿರುವರು.

ಬಂಟವಾಳ: — ಕಲ್ಕತ್ತ ಆಯುರ್ವೇದೀಯ ಮೆಡಿಕಲ್ ಸಂಸ್ಥೆಯ ಕಡೆಯವರೊಬ್ಬರು ಇಲ್ಲಿಗೆ ಬಂದು ದೊಡ್ಡದಾದ ಈ ಊರಿನಲ್ಲಿ ಒಂದು ಯೋಗ್ಯವಾದ ಆಯುರ್ವೇದಿಕ್ ಔಷಧಾಲಯವನ್ನು ಇಡಬೇಕೆಂದು ಆಲೋಚಿಸಿ ಉಪ್ಪಿನಂಗಡಿ ಆ ಕಡೆಗೆ ಹೋಗಿರುವರು. ಇವರು ಈ ಜಿಲ್ಲೆಯ ಬೇರೆ ಬೇರೆ ಭಾಗಗಳಲ್ಲಿ ಆಯುರ್ವೇದಿಯ ಆಸ್ಪತ್ರೆಗಳನ್ನು ತೆರೆಯುವ ಆಲೋಚನೆಯಲ್ಲಿದ್ದಾರಂತೆ.

ಮೂಲ್ಕಿ: — ಇಲ್ಲಿಯ ಸೆಂಟರಿನ ಉಪಾಧ್ಯಾಯರ ಸಂಘದ ತಿಂಗಳುಗಟ್ಟಲೆಯ ಸಾಮಾನ್ಯ ಸಭೆಯು ಇದೇ ಕಳೆದ ತಾ. ೮—೧೨—೩೧ನೇ ಶನಿವಾರ ಅಪರಾಹ್ನ ಘಂಟೆ ೩—೩೦ಕ್ಕೆ ಕೊಲಕಾಡಿ ವಿದ್ಯಾಪ್ರಚಾರಿನಿ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಕೂಡಿಬಂತು. ಪಡುಪಣಂಬೂರ ಹಾಯರ್ ಎಲಿಮೆಂಟರಿ ಶಾಲಾ ಮುಖ್ಯ ಉಪಾಧ್ಯಾಯ ರಾಮಯ್ಯ ಅಣ್ಣಾಜಿರಾಯರು ಅಂದು ಸಭಾಧ್ಯಕ್ಷರಾಗಿದ್ದರು. ಚಿತ್ರಾಪು ಬೋರ್ಡು ಎಲಿಮೆಂಟರಿ ಶಾಲಾ ಮುಖ್ಯ ಉಪಾಧ್ಯಾಯ ರಾ| ಸಿ. ಯು. ಕೋರಗಪ್ಪನವರು ಪ್ರಥಮ ತರಗತಿಗೆ ಸಾಮಾನ್ಯ ತಿಳುವಳಿಕೆಯ ಪಾಠವನ್ನು ಚಲೋ ರೀತಿಯಿಂದ ಕೊಟ್ಟರು. ನಂತರ ಸಂಘಕ್ಕೆ ಸಂಬಂಧಪಟ್ಟ ಹಲಕೆಲವು ವಿಷಯಗಳ ಚರ್ಚೆ ಬಂದು, ಸಂಘದ ಬರುವ ಸಭೆಯನ್ನು ಇನ್ನ ಬೋರ್ಡು ಎಲಿಮೆಂಟರಿ ಶಾಲೆಯ ಮುಖ್ಯ ಉಪಾಧ್ಯಾಯರ ಅಪೇಕ್ಷೆಯಂತೆ, ಸದ್ರಿ ಶಾಲೆಯಲ್ಲಿ ಇದೇ ಬರುವ ಜನವರಿ ತಾ. ೨ನೇ ಶನಿವಾರ ಅಪರಾಹ್ನ ಘಂಟೆ ೩—೩೦ಕ್ಕೆ ಜರಗಿಸುವುದಾಗಿ ನಿಶ್ಚಯಿಸಲ್ಪಟ್ಟಿತು. ಸಭಾಧ್ಯಕ್ಷರ ಭಾಷಣ, ಉಪಕಾರಸ್ಮರಣೆ ಇತ್ಯಾದಿಗಳಿಂದ ಸಭಾಕಾರ್ಯವು ಅಂತ್ಯವಾಯಿತು.

ಕಾಪು: — ಈ ಸೆಂಟರಿನ ಅಧ್ಯಾಪಕರ ದ್ವಿತೀಯ ಸಭೆಯು ಕಳೆದ ತಾ. ೮—೧೨—೩೧ನೇ ಶನಿವಾರ ಸಾಯಂಕಾಲ ಘಂಟೆ ೩ಕ್ಕೆ ಕಾಪು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಉಚ್ಚಿಲ ಬಾಸೆಲ್ ಮಿಶನ್ ಶಾಲೆಯ ಮುಖ್ಯೋಪಾಧ್ಯಾಯರಾದ ಮ. ರಾ. ಅಬ್ರಾಹಾಮ್ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಥಮ, ಅಧ್ಯಕ್ಷರು ಸಭಿಕರಿಂದ ಸ್ವಾಗತಿಸಲ್ಪಟ್ಟ ನಂತರ ಉಪಾಧ್ಯಾಯರಿಗೆ "ಉಪಾಧ್ಯಾಯ ಸಂಘಗಳಿಂದ ಉಂಟಾಗುವ ಪ್ರಯೋಜನ ಮತ್ತು ಅದರಲ್ಲಿ ಅಧ್ಯಾಪಕ ವರ್ಗವು ಕೈಕೊಳ್ಳತಕ್ಕ ನಿಷ್ಠೆಯ ಕುರಿತು", ಪಾಂಗಾಳರು ಶಾಲಾ ಮುಖ್ಯೋಪಾಧ್ಯಾಯರಾದ ರಾ. ಐತ್ತಪ್ಪಯ್ಯ ಕರ್ಕೇರರು ತಾವು ಬರೆದು ತಂದ ಉಪನ್ಯಾಸವನ್ನು ಓದಲಾಯಿತು. ಉಪನಿಷತ್ತುಗಳೂ, ಭಾರತ ರಾಮಾಯಣ ಮೊದಲಾದ ಇತಿಹಾಸಗಳೂ, ಸಂಸ್ಕೃತ ಶಬ್ದಗಳೂ, ಕನ್ನಡ ಕವಿಗಳ ಅನೇಕ ಪದ್ಯಗಳೂ ಗುಂಫಿತವಾಗಿದ್ದು, ಶ್ರೀಯುತರಿಗೆ ಇದ್ದ ವಿದ್ವತ್ತು, ಕನ್ನಡ ಭಾಷಾಭಿಮಾನ, ಸಂಸ್ಕೃತ ಪಾಂಡಿತ್ಯ, ಕವಿತಾಪ್ರೇಮ ಉಪನ್ಯಾಸ ಬರೆಯುವುದರಲ್ಲಿ ಇದ್ದ ಧರ, ಇವೆಲ್ಲವೂ ಸಭಿಕರ ಮುಂದೆ ತಾಂಡವವಾಡುತ್ತಿದ್ದವು.

ಇದರ ನಂತರ ಯಾರೋ ಒಬ್ಬರು ಸಭೆಯಲ್ಲಿ ಎದ್ದು ನಿಂತು "ಸಂಘದ ಪ್ರವೇಶ ಶುಲ್ಕವನ್ನು ವಸೂಲು ಮಾಡುವ ಕಾರ್ಯವನ್ನು ಜನವರಿ ವರೆಗೆ ಬಾಕಿ ಇಡಬೇಕೆ"ಂದು ಸೂಚನೆಯನ್ನಿತ್ತರು. ಆ ಸೂಚನೆಯು ಕನ್ನಡ ಬಲ್ಲವರಾದ ಒಬ್ಬರಿಗೆ ಸರಿಯೆಂದು ಕಾಣಲಿಲ್ಲ, ಅಸ್ಪಷ್ಟವಾಗಿ ಪರ್ಯಾಲೋಚಿತ ವಾದವಿವಾದ ನಡೆಸಿದ ಈ ರೀತಿಯ ವಾಕ್ಯಗಳನ್ನು ನಗಬೇಕಾಗಿತ್ತು. ಕಟ್ಟಕಡೆಗೆ ಇವರ ವಿಚಾರವೇ ಸರಿ ಎಂದು ತೋರಿತು. ಕೆಲವರು ಇಕ್ಕಡೆಗೂ ಕೊನೆಗೆ ಮೊದಲಿನವರು ತಂದ ಸೂಚನೆಯು ಸರ್ವಾನುಮತದಿಂದ ನಿರ್ಧಾರವಾಯಿತು. ತದನಂತರ ರಾಷ್ಟ್ರಗೀತದೊಂದಿಗೆ ಸಭೆಯು ಮುಕ್ತಾಯವಾಯಿತು.

ಕಾಪು ಶ್ರೀ ವೆಂಕಟ್ರಮಣ ದೇವಾಲಯದಲ್ಲಿ ವಸಂತ ಮಂಟಪ ವಗೈರೆ ಕಟ್ಟೋಣಗಳು ಕಟ್ಟಲ್ಪಡುತ್ತವೆ. ಈ ಸಲವಾದರೂ ಮುಂಚೆ ಇದ್ದ ಪದ್ಧತಿಯಲ್ಲಿ ಸೂಚಿತವಾದಂತೆ ದೇವಸ್ಥಾನದ ಹೊರಗಿನ ಕೆಲಸವನ್ನು ಸಂಪೂರ್ಣಗೊಳಿಸಿದರೆ ಉತ್ತಮವಿತ್ತು. ಇಲ್ಲದಿದ್ದರೆ "ತೋಟಸಿಂಗಾರ ಒಳಗೆ ಗೋಳಿಸೊಪ್ಪು" ಎಂದಂತಾಗುತ್ತದೆ.

ಪಡುಬಿದ್ರಿ: — ಹಿಂದಿನ ಮಾಮೂಲು ಪ್ರಕಾರ ಆಗತಕ್ಕ ಕಂಬಳವು ಇದೇ ಬರುವ ೧೯೩೨ನೇ ಇಸವಿ ಜನವರಿ ತಿಂಗಳ ೩ನೇ ತಾರೀಕು ವಿಭವ ಸಂವತ್ಸರದ ಮಾರ್ಗಶಿರ ಬಹುಳ ಧನುರ್ಮಾಸ ದಿನ ೧೯ನೇ ಗುರುವಾರ ದಿವಸ ನಡೆಯುತ್ತದೆ.

ವಿವಿಧ ಸಮಾಚಾರಗಳು.

ಮುಂಬಾಯಿಯ ಗವರ್ನರರು.

ಹಿಂದೂಸ್ಥಾನದಿಂದ ತೆರಳಲಿಕ್ಕಿರುವ ಮುಂಬಾಯಿಯ ಗವರ್ನರರಾಗಿದ್ದ ಸರ್ ಲೆಸ್ಲಿ ವಿಲ್ಸನರಿಗೆ ಮುಂಬಾಯಿ ನಿವಾಸಿಗಳು ಅತಿಯಾದ ಮರ್ಯಾದೆಯನ್ನು ಕೊಟ್ಟು ಸಂಭಾವಿಸಿದರು. ಮುಂಬಾಯಿಯ ಕೊರ್ಪೊರೇಶನಿನವರು ಒಂದು ಮಾನಪತ್ರವನ್ನು ಸಮರ್ಪಿಸಿ, ಅವರ ಹೆಸರು ಹಿಂದೂಗಳಿಂದ ಶಾಶ್ವತವಾಗಿ ಸ್ಮರಿಸಲ್ಪಡುವರೆಂದರು. ಈ ಗವರ್ನರರ



The Story of a New

OAKLAND

Series 6-212

the cosmopolitan six

WHY COSMOPOLITAN?

THE new Oakland has been called the cosmopolitan six because of its background and its ability to perform.

General Motors has produced this car as a result of its cosmopolitan experience in building and operating motor cars in all parts of the world.

Oakland is built to render a high order of service wherever it may be called. It is equally at home on mountain road, desert sand or city boulevard. Its beauty makes it acceptable anywhere. That is cosmopolitan character.

BODY FEATURES of the NEW OAKLAND

Closed bodies by Fisher; open bodies designed by Fisher but built by Oakland.

Body lines longer and lower. Five-passenger bodies are six inches longer and all bodies are much lower.

Seat positions and contours are improved.

Spanish leather upholstery on open models and Sport Cabriolet.

Leather upholstery available on all closed models.

Improved body hardware on all models.

Instrument board beautifully carved in oak leaf design and contains the cluster of instruments with platinum-silver dials.

New and attractive Duco color combinations on all models.

Narrow front corner posts on closed models.

Forward-folding windshields on open models.

For Further Particulars Apply to **RAO & RAO**

Dealers of Oakland, Pontiac, Chevrolet, & Vauxhall Cars,

Maidan Road, MANGALORE.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ಬೇಜಾರಾಗುತ್ತಿದ್ದರೆ, ಚಿನ್ನಿನ ನರಗಳು ಸೇದುತ್ತಿದ್ದರೆ ಶರೀರದಲ್ಲಿ ಲವಲವಿಕೆಯಿಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ರೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವ ವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ಒಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ಜೀರ್ಣಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ಒಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಫ್ಲುಯನ್‌ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಎಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗೋಷಾಸ್ತ್ರೀಯರಿಗೂ ಕುಳಿತುದ್ಯೋಗದವರಿಗೂ ಬಾಣಂತಿಯರಿಗೂ ಸಂಜೀವಿನ. ೩೦ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ ಒಕ್ಕೆ ೧—೪—೦, ೧೨ ಸೀಸೆಗೆ ೮—೭—೦, ೫೦ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿಷಕ್‌ರತ್ನ" ಪಾಣ್ಯದ ವೆಂಕಟಾಚಲ ಪಂಡಿತರು,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜೆಂಟರು:—

ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಜಾ ಫಾರ್ಮಸಿ

ಮಂಗಳೂರು, ಹಂಪನ ಕಟ್ಟೆ.

ಹೊಸ ವರುಷದ ಅಂಕ.

ಸ್ವದೇಶಾಭಿಮಾನಿಯ ಹೊಸ ವರುಷದ ಅಂಕವು ಜನವರಿಯ ಮೊದಲಿನ ಶುಕ್ರವಾರ ದಿನ ಕಳೆದ ವರ್ಷದ ಅಂಕಕ್ಕಿಂತಲೂ ಹೆಚ್ಚು ಪುಟಗಳೊಡನೆ ಪ್ರಕಟಿಸಲ್ಪಡುವುದು. ಸಂಚಿಕೆಯಲ್ಲಿ ತುಂಬಾ ಚಿತ್ರಗಳು ಈ ಸಂಚಿಕೆಗಾಗಿ ಪ್ರತ್ಯೇಕವಾಗಿ ರೂಪಿಸಲ್ಪಟ್ಟು ಪ್ರಕಟಿಸಲ್ಪಡುವವು. ಉತ್ತಮ ಲೇಖನಗಳು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವವು. ಸಚಿತ್ರವಾದ ಲೇಖನಗಳಿಗೆ ಹೆಚ್ಚಿನ ಪ್ರೋತ್ಸಾಹವು ಸಿಕ್ಕುವುದು. ಚಿತ್ರಗಳನ್ನು ಲೇಖಕರು ಕಳುಹಿಸಬೇಕು. ಅವುಗಳ ಬ್ಲೋಕನ್ನು ನಾವೇ ತರಿಸಿಕೊಳ್ಳುತ್ತೇವೆ. ಲೇಖಗಳು ಸ್ವದೇಶಾಭಿಮಾನಿಯ ಒಂದೂವರೆ ಕಲಮನ್ನು ಮೀರದಿದ್ದರೆ ಉತ್ತಮ. ನವೆಂಬರ ಅಂತ್ಯದೊಳಗಾಗಿ ಲೇಖಗಳು ನಮ್ಮ ಕೈಸೇರಿದರೆ ಬ್ಲೋಕುಗಳನ್ನು ತಯಾರಿಸಲಿಕ್ಕೂ, ಮುದ್ರಣವನ್ನು ಸರಿಪಡಿಸಲಿಕ್ಕೂ ಅನುಕೂಲವಾಗುವುದು. ಚಿಕ್ಕ ಕತೆ ಕಾವ್ಯಗಳೂ ಬೇಕಾಗಿರುವವು. ಕರ್ನಾಟಕದ ಸುಪ್ರಸಿದ್ಧ ಲೇಖಕರು ಈ ನಮ್ಮ ಕೆಲಸದಲ್ಲಿ ಸಹಾಯ ಮಾಡಬೇಕಾಗಿ ವಿನಂತಿ.

ಮ್ಯಾನೇಜರ್.

[illegible] ಯೋಗಗಳಲ್ಲಿ ಶ್ರೇಷ್ಠವಾದುದೆಂದರೆ ಮಹಾತ್ಮಾಜಿಯವರ ಅಡುಗೆ. [illegible] ಅವನ್ನು ಇಂಗ್ಲೆಂಡಿನಲ್ಲಿ ಬಂಧಿಸಲ್ಪಡುವ ಹಿಂದೂಸ್ಥಾನದ ಜನರಲ್ಲಿ ಉಂಟಾದ [illegible] ವನ್ನೂ, ಸರಕಾರದವರು [illegible] ಉಂಟಾದ [illegible] ಗಳನ್ನೂ ನೋಡಿ ಸರ್. ವಿಲ್ಸನರು ಮಹಾ [illegible] ವನ್ನು ಅಡುಗೆ ಮಾಡಿದರು. ಈ ಕುರಿತಾದ ವಿಷಯಗಳನ್ನು [illegible] ಮಾನಪತ್ರದಲ್ಲಿ ಸೂಚಿಸಿದ್ದರು. ಪ್ರತ್ಯುತ್ತರವಾಗಿ [illegible] ನಾನು [illegible] ವರುಷದಿಂದ ಹಿಂದೂಸ್ಥಾನದ ಕುಂದುಕೊರತೆಗಳನ್ನು ಹೋಗಲಾಡಿಸಲು ಪ್ರಯತ್ನಿಸಿದೆನು. ಹಿಂದೂಸ್ಥಾನದ ಆಪ್ತಸ್ನೇಹಿತನಾಗಿದ್ದೆನು. ಆದ್ದರಿಂದ ಇಂದು ನಿಮ್ಮೆಲ್ಲರನ್ನು ಬಿಟ್ಟುಹೋಗುವಾಗ ನನಗೆ ಅತಿಶಯ ದುಃಖವೆನಿಸುತ್ತದೆ. ಮುಂಬಯಿ ಸಂಸ್ಥಾನದ ವಿದ್ಯಾಶಕ್ತಿಯನ್ನು ಅಭಿವೃದ್ಧಿಗೊಳಿಸಬೇಕೆಂಬುದೇ ನನ್ನ ಮುಖ್ಯ ಉದ್ದೇಶವಾಗಿದ್ದಿತು. ಹಣದ ಅಭಾವದ ದೆಸೆಯಿಂದ ಅದು ಪೂರ್ಣ ಫಲಿಸಲಿಲ್ಲವೆಂಬುದಕ್ಕಾಗಿ ಬಹಳೇ ಕಳಕಳಿಯಾಗುತ್ತದೆ. ಒಟ್ಟಾರೆಯು ಮೇಲೆ ನನಗೆ ಪ್ರಿಯವಾದ ಹಿಂದೂದೇಶವನ್ನು ಇಂದು ಬಿಡಬೇಕಾಯಿತಲ್ಲಾ ಎಂಬುದೇ ನನಗೆ ದುಃಖದಾಯಕವಾಗಿದೆ" ಎಂದು ಹೇಳಿದರು.

ಒಂದು ಕಾಲಿಂದ ಭೂಸಂಚಾರ.

ಎಲ್ಬೀರಿ ಪೊಲ್ವರ್‌ನೆಂಬವನು ೩೩ ವರುಷ ಪ್ರಾಯವಾಗಬೇಕಾದರೆ ೬೬,೦೦೦ ಮೈಲು ನಡೆದಿರುವನೆಂಬುವನ್ನು ಕೇಳಿದರೆ ಆಶ್ಚರ್ಯವಾಗದಿರದು. ಅದರಲ್ಲೂ ಆತನು ಒಂದು ಕಾಲನ್ನು ಕಳಕೊಂಡಿದ್ದು, ಉಳಿದ ಇನ್ನೊಂದು ಕಾಲಿನ ಸಹಾಯದಿಂದಲೇ ಇಷ್ಟು ದೂರವನ್ನು ನಡೆದನೆಂಬುದನ್ನು ಕೇಳಿದಾಗಲಂತೂ ಪರಮಾಶ್ಚರ್ಯವಾಗುವುದರಲ್ಲಿ ಸಂದೇಹವಿಲ್ಲ. ಜಗತ್ತಿನ ಎಲ್ಲಾ ಭಾಗಗಳನ್ನು ಆತನು ಸಂಚರಿಸಿರುವನಂತೆ. ಇಟಲಿಯಲ್ಲಿ ಮುಸ್ಸೋಲಿನಿಯವರನ್ನು ಕಂಡಿದ್ದನು. ಪೋಪ್ ಧೊರೆಗಳೊಂದಿಗೆ ಒಂದು ದಿನವನ್ನು ಕಳೆದಿದ್ದನು. ಲೈಡ್ ಜೋರ್ಜರೊಂದಿಗೆ ಉಂಡಿದ್ದನು. ಹಿಂಡನ್‌ಬರ್ಗರೊಂದಿಗೆ ಸಂಭಾಷಿಸಿದ್ದನು. ಆತನು ಸಾಯಬಹುದಾದ ಹಲವು ಸಂದರ್ಭಗಳನ್ನು ಉಪಾಯದಿಂದ ತಪ್ಪಿಸಿಕೊಂಡಿದ್ದನು. ಸಣ್ಣಂದಿನಲ್ಲಿ ದುಷ್ಟ ಕೋಣದ ವರೋಡಯೋರರೊಂದಿಗೆ ಸಿಕ್ಕಿಬಿದ್ದಿದ್ದನು. ಒಂದು ಮೋಟರ್ ಅಪಘಾತದಲ್ಲಿ ಸತ್ತನೆಂದೇ ಆಗಿತ್ತು. ಅಲಾಸ್ಕಾದಲ್ಲಿ ಮಂಜುಗಟ್ಟಿದ ನೀರಿನ ನದಿಯಲ್ಲಿ ಮುಳುಗಿ ಸಾಯುತ್ತಿದ್ದನು. ಫಿಜಿ ದ್ವೀಪಗಳಲ್ಲಿ ಮೂಲನಿವಾಸಿಗಳು ಆತನ ತಲೆಗಳಿಗೆ ಕತ್ತಿಗಳನ್ನು ಬೀಸಾಡಿದ್ದರು. ಆದರೂ ಇಂತಹ ಹಲವು ಅಪಾಯದ ಸಂಧಿಗಳನ್ನು ಉಪಾಯದಿಂದ ತಪ್ಪಿಸಿ, ದೇಶಸಂಚಾರವನ್ನು ಮಾಡಿ ಇಷ್ಟು ಹೆಸರುಪಡೆಂದಿರುವುದು ಆಶ್ಚರಿಯ ಸಂಗತಿ.

ಮುನತಿಗಂಜದ ಭೀಕರ ಕೊಲೆ!

ಮುನತಿಗಂಜದಲ್ಲಿ ಆರು ಜನಗಳುಳ್ಳ ಒಂದು ಕುಟುಂಬವು ಪೂರ್ಣ ಕೊಲೆಗೆ ತುತ್ತಾದುದು ಬಹಳೇ ಭಯಂಕರವಿದೆ. ಆ ಹಳ್ಳಿಯ ಸುಮಾರು ನಡುಪ್ರಾಯದ ಮುಸಲ್ಮಾನ ನೇಕಾರನು ಆಕಾಸ್ಮಾತ್ತಾಗಿ ಹುಚ್ಚನಾದನು. ಆತನ ಹೆಂಡತಿಯು ದೇಹಾರೋಗ್ಯದಿಂದಿರಲಿಲ್ಲ. ಆಕೆಯನ್ನು ಹುಚ್ಚನಾದ ಗಂಡನು ದೊಣ್ಣೆಯಿಂದ ಹೊಡೆದು ಒಂದೇ ಪೆಟ್ಟಿನಿಂದ ಕೊಂದುಬಿಟ್ಟನು. ಹೆಂಡತಿಯ ಸಹಾಯಕ್ಕೆ ಬಂದ ತನ್ನ ನಾದಿ ಕಾಯಿಗೂ ಅದೇ ರೀತಿ ಒಂದೇ ಒಂದು ಬಲವಾದ ಪೆಟ್ಟನ್ನು ಹೊಡೆದು ಬೀಳಿಸಿದನು. ಆಕೆಯೂ ಸತ್ತುಹೋದಳು. ತದನಂತರ ಈ ಹುಚ್ಚನು ತನ್ನ ನಾಲ್ವರು ಮಕ್ಕಳನ್ನು ಕ್ರಮಪ್ರಕಾರವಾಗಿ ಕೊಂದುಹಾಕಿದನು. ಹಿರಿಯ ಮಗನಿಗೆ ಹದಿನೊಂದು ವರುಷ ಪ್ರಾಯವಾಗಿದ್ದಿತು. ಕಿರಿಯವನಿಗೆ ಬರೇ ಮೂರು ವರುಷ. ಇವರ ಸಹಾಯಕ್ಕಾಗಿ ಬಂದ ನೆರೆಹೊರೆಯವರನ್ನೂ ಅಟ್ಟಿಕೊಂಡು ಹೋಗಲಾಗಿ ಅವರು ಪ್ರಾಣಭಯದಿಂದ ಸಿಕ್ಕಿದ ಕಡೆಗೆ ಓಡಹತ್ತಿದರು. ಜನರು ಸಿಕ್ಕದೆ ಇದ್ದಕಾರಣ ಹುಚ್ಚನು ಹಾದಿಯಲ್ಲಿ ಸಿಕ್ಕಿದ ಒಂದು ಆಡನ್ನೂ, ಒಂದು ದನವನ್ನೂ ಕೊಂದುಹಾಕಿ ಬಂದು, ಮನೆಗೆ ಬೆಂಕಿ ಇಟ್ಟನು. ಆಸ್ಪರೊಳಗೆ ಹಳ್ಳಿಯವರೆಲ್ಲರೂ ಒಟ್ಟಾಗಿ ಪ್ರಯತ್ನಿಸಿ, ಬಹಳೇ ಪ್ರಯಾಸದಿಂದ ಆತನನ್ನು ಹಿಡಿದು ಬೆಂಕಿಯನ್ನು ನಂದಿಸಿದರು. ಆತನೀಗ ಶ್ರೀನಗರದ ಪೋಲೀಸ್ ಸ್ಟೇಶನಿನಲ್ಲಿರುವನು. ಆತನ ಹುಚ್ಚುತನವು ಇನ್ನೂ ನಿಂತಿಲ್ಲ.

ಅತಿಆಸೆ ಗತಿಗೇಡು.

ಕೊಚ್ಚಿ ಸಂಸ್ಥಾನದ ಅಂಚೇರಿ ಎಂಬಲ್ಲಿ ಒಂದು ಬಹಳೇ ಆಶ್ಚರ್ಯಕರವಾದ ಸಂಗತಿಯು ನಡೆದುಹೋಯಿತು. ಒಬ್ಬ ನಾಯರು ಹೆಂಗಸು ತನ್ನ ಗಂಡನೊಂದಿಗೆ ಏನೋ ಕಾರಣದಿಂದ ಜಗಳವಾಡಿ ವೈರಾಗ್ಯವನ್ನು ಹೊಂದಿ ಆತ್ಮಹತ್ಯದಿಂದ ಪ್ರಾಣವನ್ನು ಕಳೆದುಕೊಳ್ಳಬೇಕೆಂದು ನಿಶ್ಚಯಿಸಿದಳು. ಅದಕ್ಕಾಗಿ ಒಂದು ಹಗ್ಗವನ್ನು ತೆಗೆದುಕೊಂಡು ಕುತ್ತಿಗೆಗೆ ನೇಣು ಹಾಕುವ ಸಲುವಾಗಿ ದೂರದಲ್ಲಿದ್ದ ಒಂದು ಮಾವಿನ ಮರದ ಸಮೀಪಕ್ಕೆ ಹೋದಳು. ಆದರೆ ಕುತ್ತಿಗೆಗೆ ನೇಣುಹಾಕಿ ಸಾಯುವ ವಿಧಾನವು ಮಾತ್ರ ಆಕೆಗೆ ತಿಳಿದಿರಲಿಲ್ಲ. ಅಲ್ಲಿಯೇ ಹೋಗುತ್ತಿದ್ದ ಒಬ್ಬ ದೋಲಿನವನನ್ನು ಕರೆದು ತನ್ನ ಕುತ್ತಿಗೆಗೆ ಪಾಶ ಹಾಕಿ ತನ್ನ ಮರಣಕ್ಕೆ ಸಹಾಯಕನಾಗುವನಾದರೆ ತನ್ನ ಆಭರಣಗಳೆಲ್ಲವನ್ನು ಆತನಿಗೆ ಬಹುಮಾನವಾಗಿ ಕೊಡುವೆನೆಂದು ಆತನನ್ನು ಕರೆದು ಹೇಳಿದಳು. ಈ ಮಾತುಗಳನ್ನು ಕೇಳಿ ಆ ಲೋಭ ಮನುಷ್ಯನು ಮರುಳಾಗಿ ಆಕೆಯ ಅಭಿಪ್ರಾಯಕ್ಕೆ ಒಪ್ಪಿಕೊಂಡು ಮೊದಲು ಆಕೆಯ ಮೈಮೇಲಿದ್ದ ಆಭರಣಗಳೆಲ್ಲವನ್ನೂ ತನ್ನವಶ ಮಾಡಿಕೊಂಡನು. ಮರದ ಕೊಂಬೆಯು ಎತ್ತರವಾಗಿದ್ದುದರಿಂದ ಕೈಗೆ ಎಟುಕುತ್ತಿದ್ದಿಲ್ಲ. ಅದಕ್ಕಾಗಿ ತನ್ನ ದೋಲನ್ನು ನೆಲದ ಮೇಲಿಟ್ಟು ಅದರ ಮೇಲೆ ತಾನು ನಿಂತುಕೊಂಡು ಹಗ್ಗದ ಒಂದು ತುದಿಯನ್ನು ಮರದಕೊಂಬೆಗೆ ಕಟ್ಟಿ ಇನ್ನೊಂದು ತುದಿಯಲ್ಲಿ ಪಾಶವನ್ನು ಮಾಡಿ ಪಾಶವು ಸರಿಯಾಗಿ ಗಿದೆಯೋ ಎಂಬುವನ್ನು ಪರೀಕ್ಷಿಸುವ ಸಲುವಾಗಿ ತನ್ನ ಕುತ್ತಿಗೆಗೆ ಸಿಕ್ಕಿಸಿಕೊಂಡನು. ಆಕಸ್ಮಾತ್ ಅಡಿಯಲ್ಲಿನ ದೋಲು ಜಾರಿತು. ಮನುಷ್ಯನು ನೇಣುಹಾಕಲ್ಪಟ್ಟು ಗಳಿಗೆಯೊಳಗೆ ಸತ್ತುಹೋದನು. ಇದನ್ನು ಕಂಡು ದಿಗಿಲು ಬಿದ್ದ ಆ ನಾಯರ ಹೆಂಗಸು ಅಲ್ಲಿಂದ ಪಲಾಯನ ಮಾಡಿದಳು.

ಸಕಲೇಶಪುರದ ಪತ್ರ.

(ಸ್ವಂತ ಸುದ್ದಿಗಾರರಿಂದ)

ಪಣಗೂರು ದನಗಳ ಪ್ರದರ್ಶನ.

ಕಳೆದ ವರ್ಷ ಈ ತಾಲೂಕಿನ ಒಣಗೂರಿನಲ್ಲಿ ಒಂದು ದನಗಳ ಪ್ರದರ್ಶನವು ಪ್ರಾರಂಭವಾಯಿತು. ಈ ವರುಷವೂ ಅದನ್ನು ನಡೆಸುವುದಕ್ಕೆ ಡಿಸ್ಟ್ರಿಕ್ಟ್ ಬೋರ್ಡಿನವರು ತಕ್ಕ ಸಿಬ್ಬಂದಿಯನ್ನಿಟ್ಟು ವಿಶೇಷವಾದ ಏರ್ಪಾಡುಗಳನ್ನು ಮಾಡಿದ್ದರು. ಪ್ರದರ್ಶನದ ಪ್ರಾರಂಭೋತ್ಸವವನ್ನು ಮಾಡುವುದಕ್ಕಾಗಿ ಡೆಪ್ಯುಟಿ ಕಮಿಶನರ್ ಸಾಹೇಬರನ್ನು ಬರಮಾಡಿಕೊಂಡಿದ್ದರು. ಆದರೆ ಪ್ರದರ್ಶನಕ್ಕೆ ದನಗಳು ಒಂದು ದಾಸೂ ಸಹ ಸೇರದಿದ್ದುದರಿಂದ ಚಾಕ್ರಿಯು ದ್ವಿತೀಯ ವಿಘ್ನವಾಯಿತು.

ಆ ದಿನ ಅಂದರೆ ಕಳೆದ ತಿಂಗಳ ೩೦ ನೇ ದಲ್ಲಿ ಅಲ್ಲಿ ಸೇರಿದ್ದ ಜನಗಳನ್ನು, ಒಂದು ಸಭೆಯಲ್ಲಿ ಕೂಡಿಸಿ ಡೆಪ್ಯುಟಿ ಕಮಿಶನ್ ಸಾಹೇಬರವರಿಗೆ ತೋಂದರೆಕೊಟ್ಟದ್ದಕ್ಕಾಗಿ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟು ರಾವ್ ಬಹದ್ದೂರ್ ಎನ್. ಎಸ್. ನಂಜುಂಡಯ್ಯನವರು ಡೆಪ್ಯುಟಿ ಕಮಿಶನ್ ಸಾಹೇಬರವರ ಕ್ಷಮಾಪಣೆಯನ್ನು ಬೇಡಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಮ್ಮೇಳನ.

ಈ ತಾಲೂಕಿನ ವಿಲೇಜು ಪಂಚಾಯತಿಗಳ ಮತ್ತು ಮಲ್ನಾಡು, ಅಭಿವೃದ್ಧಿಯ ಸಮ್ಮೇಳನವು ಕಳೆದ ತಿಂಗಳು ೨೯ನೇ ಬೃಹಸ್ಪತಿವಾರ ಬಹಳ ವಿಜೃಂಭಣೆಯಿಂದ ನಮ್ಮ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಶನರ್ ಮಿ|| ಆಬ್ದುಲ್ ವಹೀದ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಈ ಊರಿಗೆ ೩ ಮೈಲಿ ದೂರದಲ್ಲಿರತಕ್ಕ ಒಣಗೂರಿನಲ್ಲಿ ನಡೆಯಿತು.

ಸಮ್ಮೇಳನದ ಮಾಮೂಲು ಕಾರ್ಯಕಲಾಪಗಳು ನಡೆದ ನಂತರ ಮಿ|| ರಾ|| ಬಿ. ನಂಜೇಗೌಡರವರು ಈ ಕೆಳಗೆ ಕಂಡ ಠರಾವುಗಳನ್ನು ಸಭೆಯ ಪರಿಯಾಲೋಚನದ ಬಗ್ಗೆ ಸೂಚಿಸಿದರು.

೧ ನಮ್ಮನ್ನಾಳುವ ಘನವನ್ನು ಹೊಂದಿದ ಶ್ರೀಮನ್ಮಹಾರಾಜರವರಲ್ಲಿಯೂ ಅವರ ರಾಜ್ಯಭಾರದಲ್ಲಿಯೂ, ನಮ್ಮಗಳಿಗಿರುವ ದೀರ್ಘವಾದ ಅಂತಃಕರಣಪೂರ್ವಕವಾದ ರಾಜಭಕ್ತಿ ವಿಶ್ವಾಸಗಳನ್ನೂ ಅವರ ದಿವ್ಯ ಮಹಾಸನ್ನಿಧಿಯಲ್ಲಿ ಅತ್ಯಂತ ವಿನಯದಿಂದ ವಿಜ್ಞಾಪಿಸುತ್ತೇವೆ.

೨ ಈ ತಾಲೋಕಿನಲ್ಲಿ ಹಿಂದೂ ಮುಸಲ್ಮಾನರೆಂಬ ಯಾವ ಕುಂಠಿತಭಾವವೂ ಇರುವುದಿಲ್ಲ. ಅಲ್ಲದೆ ಎಲ್ಲಾ ಜನಾಂಗದವರೂ ಶ್ರೀ ಮನ್ಮಹಾರಾಜರವರ ಅಮೋಘವಾದ ಆಳ್ವಿಕೆಯಲ್ಲಿ ಪರಸ್ಪರ ವಿಶ್ವಾಸದಿಂದ ಬಾಳಿಕೊಂಡು ಇರುತ್ತೇವೆಂಬುದನ್ನು ಈ ಸಮ್ಮೇಳನದಲ್ಲಿ ರಿಕಾರ್ಡು ಮಾಡಬೇಕಾಗಿ ಪ್ರಾರ್ಥನೆ.

೩ ನಮ್ಮ ಸಚಿವಶ್ರೇಷ್ಠರಾದ ದಿವಾನ್ ಸಾಹೇಬರವರು ಅಮೀನ್ ಉಲ್‌ಮುಲ್ಕ್ ಮಿರ್ಜಾ ಎಂ. ಇಸ್ಮಾಯಿಲ್ B. S. O. B. C. C. I. E. ಯವರು ಕಾರ್ಯತಃ ಹಳ್ಳಿಗಾಡಿನ ಕೃಷಿ ಜನಗಳ ವಿಚಾರದಲ್ಲಿ ಪ್ರೀತಿಯನ್ನು ತೋರ್ಪಡಿಸುತ್ತಾ ಇರುವುದನ್ನೂ, ಗ್ರಾಮಾಂತರಗಳಲ್ಲಿರುವ ಕೃಷಿ ಜನಗಳು ಶ್ಲಾಘಿಸಿಕೊಂಡಿರುವುದಲ್ಲದೆ ಅವರಲ್ಲಿಯೂ ಮತ್ತು ಶ್ರೀಮನ್ಮಹಾರಾಜ ಸಾಹೇಬರ ಸಂಬಂಧದಲ್ಲಿಯೂ ವಿಶ್ವಾಸವೂ, ಗೌರವವೂ ಇರುವುದನ್ನು ರಿಕಾರ್ಡ ಮಾಡಬೇಕಲ್ಲದೆ ಈ ದಿವಾನ್ ಸಾಹೇಬರವರ ಮೇಲೆ ನಡೆಸುತ್ತಿರುವ ಪೋಷಾಟೋಪದ ಬರವಣಿಯನ್ನು ನಾವು ನಿರೋಧಿಸುತ್ತೇವೆಂದು ರಿಕಾರ್ಡ ಮಾಡಬೇಕಾಗಿ ಪ್ರಾರ್ಥನೆ.

೪ ಈ ಠರಾವುಗಳ ನಕಲುಗಳನ್ನು ಶ್ರೀಮನ್ಮಹಾರಾಜರವರ ಸೆಕ್ರೆಟರಿಯವರಿಗಳವರಿಗೂ, ದಿವಾನ್ ಸಾಹೇಬರವರ ಪ್ರೈವೇಟ್ ಸೆಕ್ರೆಟರಿಗಳವರಿಗೂ, ಗವರ್ನಮೆಂಟಿನ ಚೀಫ್ ಸೆಕ್ರೆಟರಿಯವರಿಗೂ ಮತ್ತು ವರ್ತಮಾನ ಪತ್ರಿಕೆಗಳಿಗೂ ಕಳುಹಿಸಬೇಕೆಂದೂ ಠರಾವಾಗಬೇಕೆಂದೂ ಪ್ರಾರ್ಥನೆಗಳು.

ಇವುಗಳನ್ನು ನಿಡಿಗೆರೆ ಮಿ|| ರಾ|| ಲಕ್ಷ್ಮೀ ನರಸಿಂಹ ಶಾಸ್ತ್ರಿಗಳು ಅನುಮೋದಿಸಿದ ನಂತರ ನಿವಾಸ್ ಬಹದೂರ್ ಎಸ್. ಎಸ್. ನಂಜುಂಡಯ್ಯನವರು ಅವುಗಳ ಮೇಲೆ ಒಂದು ಯುಕ್ತವಾದ ಮತ್ತು ಗಂಭೀರವಾದ ಭಾಷಣವನ್ನು ಮಾಡಿದರು. ಸಮ್ಮೇಳನದಲ್ಲಿ ನೆರೆದಿದ್ದವರು ಕರತಾಡನದಿಂದ ಅವುಗಳನ್ನು ಒಪ್ಪಿ ಅದರಂತೆ ತೀರ್ಮಾನಗಳನ್ನು ಮಾಡಿದರು. ಕೊನೆಯಲ್ಲಿ ಡೆಪ್ಯುಟಿ ಕಮಿಶನ್ ಸಾಹೇಬರವರು ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅದರಲ್ಲಿ ಸಮ್ಮೇಳನದಲ್ಲಿ ಆ ದಿನ ನಡೆದ ಕಾರ್ಯಗಳ ಫೋಟೋಗಳನ್ನು ತೆಗೆಸಿದ್ದಲ್ಲದೆ, ಆಳುವ ಪ್ರಭುವಿನಲ್ಲಿಯೂ ಮತ್ತು ದಿವಾನ್ ಸಾಹೇಬರವರಲ್ಲಿಯೂ ಈ ಸಮ್ಮೇಳನಕ್ಕಿರುವ ಪೂರ್ಣ ನಂಬಿಕೆಯನ್ನು ಅಮೋಘವಾದ ವಿಶ್ವಾಸವನ್ನು ನೋಡಿ ತಮಗೆ ಬಹಳ ಸಂತೋಷವಾಗಿದೆಯೆಂದೂ ಮತ್ತು ವರ್ತಮಾನ ಪತ್ರಿಕೆಗಳಲ್ಲಿ ಕೆಲವು ದಿವಸ ಈಗಿನ ಸರಕಾರದ ಮೇಲೆ ಅನ್ಯಾಯವಾಗಿಯೂ ಸಕಾರಣವಿಲ್ಲದೆಯೂ ದೋಷಾರೋಪಣೆ ಮಾಡುತ್ತಿರುವುದು ವಿಷಾದಕರವಾಗಿದೆ ಎಂದೂ ಅಭಿಪ್ರಾಯಪಟ್ಟರು.

ಈ ತಾಂಬೂಲಗಳ ವಿನಿಯೋಗವಾದ ನಂತರ ಸಮ್ಮೇಳನವು ಬರಖಾಸ್ತಾಯ್ತು.

ವಿಶೇಷ ವಾರ್ತೆ.

ನಮ್ಮ ಆರಸರಾದ ಜವನೇ ಜೋರ್ಜ ಚಕ್ರವರ್ತಿಯವರು ಹಲವು ಸಮಯದಿಂದ ಅಸ್ವಸ್ಥರಾಗಿರುವರು. ಇತ್ತೀಚಿನ ವಾರ್ತೆಯಿಂದ ಅವರ ದೇಹಸ್ಥಿತಿಯಲ್ಲಿ ಯಾವದೊಂದು ಸುಧಾರಣೆಯಾಗದೆ, ಅಸ್ವಸ್ಥತೆಯು ಇನ್ನಷ್ಟು ಹೆಚ್ಚಾಗುತ್ತಿದೆ. ಆಫ್ರಿಕಾ ದೇಶದಲ್ಲಿ ಸಂಚರಿಸಲಿಕ್ಕೆ ಹೋದ ಯುವರಾಜರು ಹಿಂತಿರುಗಿ ಬಂದು ಇಂಗ್ಲೆಂಡಿಗೆ ತಲುಪಿರುವರು.

ಎಫ್. ಮುಲ್ಲರರ

ಆಯಿಲ್ ಎಕ್ಸ್‌ಪೆಲ್ಲರ್.

ಎಣ್ಣೆಬೀಜಗಳಿಂದಲೂ, ಎಣ್ಣೆಯುಳ್ಳ ಹಣ್ಣುಗಳಿಂದಲೂ, ಎಣ್ಣೆಯನ್ನು ತೆಗೆಯಲಿಕ್ಕೆ ಅದ್ವಿತೀಯ ಉಪಕರಣ.

ಕಾರ್ಯದಲ್ಲಿ ಸುಲಭ—ಸಂಪೂರ್ಣ ಸ್ವತಶ್ಚಲನ—ಕಡಿಮೆ ಖರ್ಚು ಕಡಿಮೆ ಪವರಿನ ವ್ಯಯ—ಹೆಚ್ಚಿನ ಎಣ್ಣೆಯ ಲಾಭ.

ಮುಖ್ಯ ಏಜಂಟರು—



Armenian Street, MADRAS.

ರೋಲರ್ ಮಿಲ್ಲುಗಳು, ಡಿಸ್‌ಇಂಟೆಗ್ರೇಟರುಗಳು, ಫಿಲ್ಟರ್ ಪ್ರೆಸ್‌ಗಳು, ಆಯಿಲ್ ಪಂಪುಗಳು, ಹರಳೆಬೀಜವನ್ನು ಒಡೆಯುವದಕ್ಕೆ ತಕ್ಕದಾದ ಸಣ್ಣ ಹೈಡ್ರೋಲಿಕ್ ಪ್ರೆಸ್ ಪ್ಲೇಟುಗಳನ್ನೂ ನಾವು ಒದಗಿಸುವೆವು.

ಎಲ್ಲಾ ಎಣ್ಣೆಯ ಮಿಲ್ಲುಗಳ ಕುರಿತು ಒಳ್ಳೆಯ ಸಲಹೆಗಳನ್ನು ಕೊಡುವೆವು.

[illegible] Public Conveyance Motor Service.
CHIKMAGALUR.
ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್
ಚಿಕ್ಕಮಗಳೂರು.

ತಂತಿ ವಿಳಾಸ: ಕನ್ವೆಯನ್ಸ್. Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಮಹಾಜನಗಳ ಅಭಿಪ್ರಾಯದಂತೆ ಪ್ರಯಾಣಿಕರ ಅನುಕೂಲಕ್ಕಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡುಗೆರೆ, ಚಾರ್ಮಾಡಿಘಾಟಿ ಮಾರ್ಗವಾಗಿ ಬೆಳ್ತಂಗಡಿಗೆ ಮಧ್ಯಾಹ್ನ 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡಾ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ ಪುತ್ತೂರು ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಸೇರಲಿಕ್ಕೂ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ ತಲ್ಪಲಿಕ್ಕೂ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ 1½ ಗಂಟೆ ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, ಕಾಸರಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ ಅದೇ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸುಮಾರು 4 ಘಂಟೆಗೆ ಮೂಡಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿಟ್ಟಿದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಢರಪೂರ್ ಗೋವಾ, ಲೋಂಡ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 12 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ಯಾಸೆಂಜರುಗಳಿಗೆ ಅನುಕೂಲಪಡಿಸಿರುತ್ತೆ

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಷ್ಪ್ಯೂರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ ಪಿ ಸಿ ಕಂಪೆನಿಯವರ

ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.
(ESTABLISHED 1914)
ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,
ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬೇಕೆನ್ನುವಿರಾದರೆ ಪ್ರತಿದಿನವೂ ಮೂಲ್ಕಿ ಕಡೆ ಮಾರ್ಗವಾಗಿಯೂ ಎರಡನೆ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಯಲ್ಲಿನಿಂದ ರಚಿತವಾಗಿ, 37 ಫೀಟು ಉದ್ದವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲುಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು. 'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ. ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ. ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.

ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.

ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರಿಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.

ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S. Mangalore.

ದಿ ಕೆನರಾ ನರ್ಸರಿ

[illegible]

ನಮ್ಮಲ್ಲಿ [illegible] ಗಳೂ, ನರ್ಸರಿಗಿಡಗಳು, ಪೇರ್, [illegible] ದಾಳಿಂಬೆ, [illegible] ಗಿಡಗಳು ನಮ್ಮಲ್ಲಿಯೇ [illegible] ಇಲ್ಲದೆ [illegible] ಫಲಬಿಡುವುವು. [illegible] ಗಳು [illegible] ಬಿಡುವುದಿಲ್ಲ. ಕ್ರಯ ಪಟ್ಟಿಗೆ [illegible] ಬರೆಯಿರಿ. ಗಿಡಗಳು ಮಂಗಳೂರು [illegible] ದೊರೆಯುವುವು.

ಕೆ. [illegible] ಶೆಟ್ಟಿ
ದಿ. ಕೆನರಾ ನರ್ಸರಿ,
[illegible] ದ. ಕ.

C/o [illegible]
[illegible] ಮಂಗಳೂರು ದ. ಕ.

131028

THE BANKING & INDUSTRIAL INDSYCATE LTD.,
BOMBAY.

9250/—Cash loans granted without interest for 10 years in 1928. Concession enlistment commences from 1st November for distributing loans of Rs. 5000/- on 31st January 1929. Paid Agents Wanted. For rules and list of loans granted, enclose two annas stamps.

BANKING & INDUSTRIAL SYNDICATE, Ltd.
Bombay 2.

Diamonds. ವಜ್ರಗಳು Diamonds.

BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ಯೋಗ್ಯವಾಗಿ, ಯೋಗ್ಯವಾದ ಕ್ರಯದಲ್ಲಿ ವಜ್ರಗಳು — ಮಾರಾಟಕ್ಕಿವೆ. —

ಬೋಳ ಮಂಗೇಶ ರಾವು,
ಮಂಗಳೂರು

ಮಲೇರಿಯಾನ ಸರ್ವಜ್ವರಸಂಹಾರಿಣಿ

ಕ್ರಯ 8 ಔನ್ಸ್ 1-8-0 [illegible] 8-8-0 [illegible] 16-8-0

ದಿಟನಂಬು! ಪುಷ್ಟನಾಗು!! ನೆಟ್ಟಗಾಗು!!

ಯುವಕನೇ ನಿನ್ನ ಬೆಲೆ ಯಾವದರಲ್ಲಿದೆ? ಸೌಖ್ಯವಾದ ನಿನ್ನ ಆರೋಗ್ಯದಲ್ಲಿ ಅಲ್ಲವೇ?

ಆರೋಗ್ಯವಿಲ್ಲವೇ? ದೇಹವು ಕ್ಷೀಣವಾಗಿದೆಯೇ? ಮನಸಂತೋಷ ತಪ್ಪಿದೆಯೇ? ಜ್ಞಾಪಕ ಶಕ್ತಿ ಕಾಂದಿರುವುದೇ? ಮುಂಗೋಪ ಜಾಸ್ತಿ ಇದೆಯೇ? ಆಲಸ್ಯ ತುಂಬಿರುವದೇ? ಚುರುಕು ಚಟುವಟಿಕೆ ಇಲ್ಲವೇ? ವ್ಯಾಕುಲತೆಯಿಂದ ಮರುಗುತ್ತೀಯೋ? ಸುಖವಾಗಬೇಕೆಂಬ ಇಚ್ಛೆ ಇದೆಯೋ? ಹಾಗಾದರೆ ಇಗೋ ಬಹು ಗುಣಕರವಾದ 'ಕಂಪೌಂಡ್ ಸಿರಪ್ ಸಾಲಿಸವನೋ'ವೆಂಬ ಔಷಧವನ್ನೇ ಸೇವಿಸು. ಆವಾಗ ಮೇಲಿನ ಅವಲಕ್ಷಣಗಳು ತೀರ ಗುಣವಾಗಿ ಬಹು ಆರೋಗ್ಯವೂ ಶರೀರ ಪುಷ್ಟಿಯೂ ಉಂಟಾಗಿ ನಿನ್ನ ಬೆಲೆ ಆರೋಗ್ಯದಲ್ಲಿಯೇ ಇದೆಯೆಂದು ನಿನಗೆನೇ ತೋರಿ ಬರುವದು.

ಕ್ರಯ 8 ಔನ್ಸ್ ಸೀಸೆಗೆ ರೂ. 3—8—0.

ಯುವತಿಯೇ ನಿನ್ನ ಸುಂದರವಾದ ಉಡುಪು ಯಾವುದು? ಅಚ್ಚುಕಟ್ಟಾಗಿ ಹೊಳೆಯುವ ನಿನ್ನ ಆರೋಗ್ಯದ ದೇಹವಲ್ಲವೆ?

ದೇಹವು ಅಚ್ಚುಕಟ್ಟಾಗಿಲ್ಲವೇ? ಸೊಂಟಕ್ಕೆ ತಲೆ ಬೆಂಕೆಗೆ ಮುಖ ಕಳೆಗುಂದಿದೆಯೇ? ಕೈಕಾಲು ಬಚ್ಚುವದೇ? ಎದೆ ನಡುಗು, ಆಯಾಸ ಉಂಟೋ? ರಕ್ತ ಛಾಯೆಯಿಲ್ಲವೇ? ಅಜೀರ್ಣವಿದೆಯೇ? ಸೊಂಟ ನೋವು ಉಂಟೋ? ತಲೆಕೂದಲು ಉದುರುವುದೇ? ತಲೆನೋವು ಉಂಟೋ? ದೃಷ್ಟಿ ಸರಿಯಿಲ್ಲವೇ? ಕಣ್ಣಿನ ಅಕ್ರಮವಾಗಿದೆಯೇ? ಅಥವಾ ಉಷ್ಣ ಜಾಸ್ತಿಯೋ ಇವರಿಂದ ಬಿಡುಗಡೆ ಹೊಂದಲು ಇಚ್ಛೆ ಇದೆಯೋ? ಹಾಗಾದರೆ ಗುಣ ಸೇವಕಿಯಂತಿರುವ ಕಂಪೌಂಡು ಸಿರಪು ಸೆಲೀನ ಸ್ಪೆಸಿಯೆಲಿಂಬುವುದನ್ನು ಅಂಗೀಕರಿಸು. ಈಕೆ ಗುಪ್ತಹಿಂಸೆಯಿರುವ ನಿನ್ನನ್ನು ಬಿಡಿಸಿ ಶರೀರ ಪುಷ್ಟಿಯಾಗುವಂತೆಯೂ ಮುಖಕಳೆಗಳು ಹೊಳೆಯುವಂತೆಯೂ ದೇಹಕ್ಕೆ ಬಲಶಕ್ತಿ ಸಿಗುವಂತೆಯೂ ಖಂಡಿತ ಸಹಾಯವಾಗುವಳು. ಆವಾಗ ಆರೋಗ್ಯವುಳ್ಳ ದೇಹವೇ ಹೊಳೆಯುವ ನಿನ್ನ ಸುಂದರವಾದ ಉಡುಪಾಗಿದೆ ಎಂದು ನಿನಗೇನೇ ಖಚಿತವಾಗುವದು.

ಕ್ರಯ 8 ಔನ್ಸಿನ ಬಾಟ್ಲಿಗೆ ರೂ. 3—8—0.

ಕೆಟಲಾಗಿಗೆ ಬರೆಯಿರಿ —

ಮಲೇರಿಯಾನ ಕಂಪೆನಿ,
ಮಂಗಳೂರು ದ. ಕ.

29628

ತಾಲೂಕು ಚದುರಂಗ.

ಲೇಖಕ:—ಶ್ರೀ ಕೋಟ ಶಿವರಾಮ ಕಾರಂತ.

"ವಸಂತನ" – ಸಂಪಾದಕರು.

(ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು)

ಅಂಕ ಎರಡು.

ಸೀನ್ ೧.

(ಹಜ್ಜರನ ಗುದ್ದ ಕಾಲಿ ಇನ್ಸ್‌ಪೆಕ್ಟರ್ ಆದ ಬಂದು ತಿಂಗಳ ಬಳಿಕ ಧೈಮಾನ್, ಸೋಜರೂ ಶ್ಯಾಂಪಣ್ಣನವರು).

ಶ್ಯಾಂಪ—ಸೋಜರೇ ನನಗೆ ಪಟ್ಟ ಕಟ್ಟಿಬಿಡಿ. ನಿಮ್ಮ ಕೈನಿಕ್ಕೆ ಗೇರೆಂಟೀ ಕೊಡುತ್ತೇನೆ. ಸುಮ್ಮನೆ ಯಾರ್‍ಯಾರನ್ನು ಹಿಡಿದರೆ ಆಗುತ್ತದೆಯೆ. ಯೋಚನೆ ಬಿಡಿ. ಐದು ರೂಪಾಯಿ ಒಳಗೆ ನಿಮ್ಮ ಕೆಲಸ ನಿಮಗೆ.

ಧೈಮಾನ್—ಶ್ಯಾಂಪಾ, ಈಗ ನಾನು ಯಾರ ಮಾತು ಕೇಳ್ತೋದು. ನೀನು ಹೇಳುತ್ತೀ ೫ ರೂಪಾಯಿ ಕೊಟ್ಟರೆ ಎಲ್ಲಾ ಆಗುತ್ತದೆಯೆಂತ—ಮಾಮೂಲ್ ಮರ್ಯಾದೆ ಹೆಡ್ ಕ್ಲಾರ್ಕರಿಗೆ ಆ ದಿನವೇ ಸಂದಿತ್ತು. ಇತ್ತ ಮಾಧವಪೈಗಳು ಬಂದು, ವಿಶಾಲಾಕ್ಷಿಯಮ್ಮನ ಮುಖಾಂತ್ರ ಬೇಗ ತಿರುಗಿಸಿ ಬರುತ್ತಾರೆ ಅಂತಾರೆ. ಒಟ್ಟು ನಾನು ಸತ್ತೆನಲ್ಲ ಮಾರಾಯ. ಮಹದೇವನವರ ಹೆಂಗು ತೀರಿಸಲಿಕ್ಕೆ ಅವರ ಓಟಿಗೆ ಓಡಾಡಿದರೆ ಅಣ್ಣಪ್ಪನವರ ದರ್ಬಾರಿನಲ್ಲಿ ಬಂತು ಸಂಚಕಾರ.

ಶ್ಯಾಂಪ—ಸ್ವಾಮಿ, ಇದಕ್ಯಾ ಹೆಚ್ಚಾಗುವುದಿತ್ತು. ವೆಂಕಪ್ಪಯ್ಯಾಶಾಳ್ ಮುಖಾಂತರೂ ನೀವು ಓಡಾಡಿದರಲ್ಲ. ಅವರ ಕಥೆ ಗೊತ್ತೇ ನಿಮಗೆ.

ಡ್ಯಾಮನ್—ಸುಳ್ಳೇ ಏನಾದರೂ ಹೇಳಬೇಡ. ಅವರು ಯಾರ ಮನೆಗೂ ಹೋದ್ದಿಲ್ಲ.

ಶ್ಯಾಂಪ—ಮತ್ತೆ ನಮ್ಮ ರಾಯರಿಗೆ ಅವರ ಮೇಲೆ ಸಿಟ್ಟು ಯಾಕೋ.

ಡ್ಯಾಮನ್—ಅದು ಒಂದು ದಿನ ರಾಯರೇ ವಿಶಾಳರ ಮನೆಗೆ ಬಂದು 'ಸ್ವಾಮಿ ನಿಮ್ಮ ಓಟು ನನಗೇ ಅಂತ ಹೇಳಿ ಐದು ರೂಪಾಯಿ ಅವರ ಮಗನ ಕೈಯಲ್ಲಿಟ್ಟರು. ಬೇಡಾ ಅಂದರೆ ಕೇಳಲಿಲ್ಲ. ಈಗ ಅದರ ವಸೂಲಿಗೆ ಏನೋ ಹಿಕ್ ಮತ್ ಮಾಡಿರಬೇಕು.

ಶ್ಯಾಂಪ—ಅದು ಎಂತದೂ ಇರಲಿ, ಕತೆ ಕೇಳಿ. ಮೊನ್ನೆ ನನ್ನ ಹತ್ರ ಅವರನ್ನ ಬಂಗ್ಲೆಗೆ ಕರೆಯಲಿಕ್ಕೆ ಹೇಳಿದರು. ವಿಶಾಳರ ಸವಾರಿ ಬಂತು. ಬಡಪ್ರಾಣಿಗೆ ಯಾಕೆ ಅಂತ ಗೊತ್ತಿಲ್ಲ. ಪ್ರೆಸಿಡೆಂಟರು ಕೂತುಕೊಳ್ಳಿ ಅಂದರು. ಇವರು ಮಂಚದ ಮೇಲೆ ಕೂತರು. ಒಳಗೆ ಹೋಗಿ ಒಂದು ಲೆಕ್ಕದ ಬೂಕು ತಂದು ಬಿಡಿಸಿದರು. ಇದೋ ನಿಮ್ಮ ಬಾಬ್ತು ನಮ್ಮ ಮುಕ್ತಜ್ಜನ ಮೊಮ್ಮಗನಿಗೆ ಸಾವಿರದ ಒಂಭೈನೂರ ಎರಡನೆ ಇಸವಿಯಲ್ಲಿ ಕಾಣುವಂತೆ ಬಾಕಿ ರೂಪಾಯಿ 38—9—3ಪೈಯಾಗುತ್ತೆ ಅಂದರು. ವಿಶಾಳರು ಅಂದರು ಅದು ಪಾಪತಿ ಅಪ್ಪನಿಕ್ಕೆ ಒಟ್ಟಿರಿ ಇವೆ ಸ್ವಾಮಿ ಅಂತ, ರಾಯರಿಗೆ ಸಿಟ್ಟು ಬಂತು. "ಪ್ರೆಸಿಡೆಂಟರ ಎದುರಿಗೆ ಉತ್ತರ ಕೊಡುತ್ತೀರಾ; ನಾನು ಸುಳ್ಳು ಹೇಳುತ್ತೇನೋ ನಿಮಗೆ ನಿಮ್ಮ ಕೆಲ್ಸದ ಆಸೆ ಇದ್ದರೆ 25 ರೂಪಾಯಿಗೆ ರಾಜಿ ಮಾಡಿಕೊಳ್ಳಿ ಅಂದರು." ವಿಶಾಳರು ಬೆಪ್ಪಾದರು. ಅಪೀಲ್ ಮಾಡುತ್ತೇನೆ ಅಂದರು. ಬರೇ ಬಾಯಿ ಗವರ್ನರ್ ಆದರೂ ವರ್ಗ ಮಾಡ್ಲಿಯಾರು ಅಂತ ಅಂದ ಹಣ ಇಲ್ಲ ಅಂದರು. ಯಜಮಾನರು ಅಂದರು "ನೋಟು ಬರದು ಕೊಡಿ" ಅಂತ. ಮತ್ತೇನು ಮಾಧವಪೈಗಳು ಅಲ್ಲೇ ಇದ್ದರು. "ಪೈಗಳೇ ನಿಮ್ಮ ಹೆಸರಿಗೆ ಒಂದು 25ಕ್ಕೆ ನೋಟು ಬರಕೊಳ್ಳಿ" ಅಂದರು. ಅಲ್ಲಿ ಮುಗಿಯಿತು ವಿಶಾಳರ ಪ್ರಾಣ. ಅಂಥ ಧಿಂಕದ ಮಾರಿ ನಮ್ಮ ಅಣ್ಣಪ್ಪಯ್ಯ. ಇದರಲ್ಲಿ ನೀವು ನೂರಿಪ್ಪತ್ತು ಮಂದಿ ಮಾತು ಕೇಳಬೇಡಿ. ನನ್ನ ಕೈ ಬೆಚ್ಚಗೆ ಮಾಡಿದರೆ ಎಲ್ಲ ಮಾಡಿದ ಹಾಗೆ.

ಡ್ಯಾಮನ್—ಇಲ್ಲಿ ಮಾಧವ ಪೈಗಳು ಜೀವತಿಂತಾರಲ್ಲಾ ಮಾರಾಯ.

ಶ್ಯಾಂಪ—ಅವರ ಮಾತು ಹಾಗಿರಲಿ. ಹೆಡ್‌ಕ್ಲಾರ್ಕರ ಹತ್ರ ನಿಮಗೆ ಬೇಕಾದ ಹಾಗೆ ಬರ್ಕೊಂಡು ಬಂದು ನಿಮಗೆ ಯಾವ ಶಾಲೆಗೆ ಬೇಕೂ ಆ ಶಾಲೆಗೆ ಟ್ರಾನ್ಸ್‌ಫರ್ ಮಾಡಿಸುವ. ಯಜಮಾನರಿಗೆ ತಿಳಿಯದ ಹಾಗೆ.

ಡ್ಯಾಮನ್—ಅವರ ದಸ್ಕತ್ತಿಲ್ಲದಿದ್ದರೆ ಹೇಗಾಗುತ್ತೆ. ಅವರೇ ಶಾಲೆ ಬೇಡಾ ಎಂತ ಬರೆದವರು. ಇನ್ನು ಅವರೇ ಟ್ರಾನ್ಸ್‌ಫರ್ ಮಾಡ್ತಾರೋ.

ಶ್ಯಾಂಪ—ನಮ್ಮ ದೇವರ ಗುಟ್ಟು ನಮಗೇ ಗೊತ್ತು. ಏನಿಲ್ಲ ಬರ್ಕೊಂಡು ಬಂದರಾಯಿತಲ್ಲ.

ಡ್ಯಾಮನ್—ಬಂದರೆ ದಸ್ಕತ್ತು;

ಶ್ಯಾಂಪ—ರಾಯರ ಮುಂದೆ ಏನಾದರೂ ರಿಕಾರ್ಡು ಇಟ್ಟರೆ ಕಟ್ಟು ಮುಟ್ಟಿ ದಸ್ಕತ್ತು ಹಾಕುವ ಜನ ಅವರು. ಅಥವಾ ಓದಿಯಾರು ಎಂತ ಹೆದರಿಕೆ ಇದ್ದರೆ ಅಹೇಚೆ ನಾಲ್ಕು ಕಾಗ್ದ ಹೆಚ್ಚಿಗೆ ಹಾಕಿ ಅವರೂ ವಿಶಾಲಾಕ್ಷಮ್ಮನ ಸಂಗಡ ಮಾತ ನಾಡ ವ ಸಮಯದಲ್ಲಿ ಮುಂದಿಟ್ಟರೆ ಜ್ಞಾನವೆಲ್ಲಾ ಅಮ್ಮನ ಮೇಲೆ ದಸ್ಕತ್ತು ಎಲ್ಲಾ ಕಾಗದದ ಮೇಲೆ.

ಡ್ಯಾಮನ್—ಶ್ಯಾಂಪ ಇದು ಪೈಂಟ್ ಸಮ. ನೀನು ಅಷ್ಟು ಮಾಡಿದರೆ ಮೊದಲಿನ ತಿಂಗಳಿನ ಸಂಬಳದಲ್ಲಿ ನೀನೆ ಸಗು ವವ ನಿನ್ನ ಡಿಸ್ಕೌಂಟ್ ಮಜಾ ಮಾಡಿಕೊಡು ಮಹಾರಾಯಾ.

ಶ್ಯಾಂಪ—ಹಾಗೆ ಅಂದರೆ ಆಗದು. ಇವತ್ತು ಮನೆಯಲ್ಲಿ ಅಕ್ಕಿ ಕಾಳಿಲ್ಲ. ಒಂದು ಮುಡಿ ಸಾಲ ಇಲ್ಲಿ. (ಸೋಜರು ಹೂಂ ಅಂದುಕೊಂಡು ಹೋದರು)

ಮೂರನೇ ಅಂಕ.

(ನಿಂರಕೆ ಮಾತ್ರ ನಾಟಕ ಇಲ್ಲ.)

ಸೂಚನೆ:—ಈ ಅಂಕ ಯಾವಾಗ ಬರೆಯಲಿಕ್ಕೆ ಬಂದೀತು ಅಂತ ನನಗೇ ಗೊತ್ತಿಲ್ಲ. ನಂತರ ಮುರುದಲ್ಲಿ ನಮ್ಮ ಅಂಕ ಶುರು. ತಾಲೂಕುಬೋರ್ಡು ಇರುವ ತನಕ ಅದೂ ಇರಬಹುದು. ಮಹದೇವಯ್ಯ ಹೋದ ಮೇಲೆ ನನ್ನ ಪಡಿ ತೆರಿಗೆ ಹೋಗುತ್ತದೆ ಅಂತ ಯೋಚನೆ ಮಾಡಿದರೆ ಅಣ್ಣಪ್ಪಯ್ಯನವರೂ ಅಂತಹವರೇ. ಉಮಿ ತಿಂಬವ ಹೋದರೆ ತೌಡು ತಿಂಬವ ಬರುತ್ತಾ ಅಂತ ಗಾದೆ. ಇದೂ ಹಂಗಾತು. ಈ ಕತೆ ಓದಿಕೊಂಡು ಬೋರ್ಡು ಒಳಗೆ ಇರುವ ಮಂದಿಯೆಲ್ಲಾ ಅಂತ ನನ್ನ ದೈದೇಡಿ. ಘುರುತ್ತಾರೆ ಒಬ್ಬಿಬ್ಬರು ಪುಣ್ಯಾತ್ಮರು, ಆದರೆ ಮುಂದಿನ ಓಟುಗಳೊಳಗೆ ಗೇಟ್ ನ್ಯ. ಇನ್ನು ನಾಟಕಕ್ಕೆ ಒಂದೊಂದು ಅಂಕ ಸೇರಿಸುತ್ತಾ ಇರುತ್ತೇನೆ. ಬೋರ್ಡು ಮಜಾ ಆವ ದಿನ ನಮ್ಮ ನಾಟ್ಕ ಮಜಾ. ಎಷ್ಟು ಪ್ರೆಸಿಡೆಂಟ್ರು ಬಂದ್ರೂ ಕೆಕ್ಕೇಟು ಶ್ಯಾಂಪಣ್ಣನಿರುವ ತನಕ ನಮ್ಮ ಸುದ್ದಿಗೆ ಬರಗಾಲಿಲ್ಲ. ಅವರು ಕಣ್ಣು ಮುಚ್ಚಿ ಹಾಲು ಕುಡಿವದ್ದೆಲ್ಲಾ ನಮ್ಮ ಕಣ್ಣಿಗೆ ಕಂಡೇ ಕಾಣುತ್ತೆ.

ಇತಿ ನಾಟಕದ ನಾಂದಿ(?)ಪ್ಪ.

ಸಂಪೂರ್ಣ.

॥ ಶ್ರೀ ಮಂಜುನಾಥ ಪ್ರಸನ್ನಃ ॥

ಶ್ರೀ ಧರ್ಮಸ್ಥಳ ಕ್ಷೇತ್ರ.

ತಾರೀಕು 8—12—1928. ದಕ್ಷಿಣ ಕನ್ನಡ ಜಿಲ್ಲಾ.

ವಿಭವ ಸಂವತ್ಸರಕ್ಕೆ

ಬಹುಮಾನದ ಪ್ರಬಂಧಗಳ ಸ್ಪರ್ಧೆ.

ಬಹುಮಾನ:—ಮೂರು ಸುವರ್ಣ ಪದಕಗಳು.

ವಿಷಯ—ದೇವರು.

ದ್ವೈತ, ಅದ್ವೈತ, ಜೈನ ಧರ್ಮಗಳಿಗೆ ಅನುಸಾರವಾಗಿ ಮೇಲಣ ವಿಷಯವಾಗಿ ಕನ್ನಡದಲ್ಲಿ ಬೇರೆ ಬೇರೆ ಪ್ರಬಂಧಗಳು ಸ್ಪರ್ಧೆಗೆ ಸ್ವೀಕರಿಸಲಾಗುವವು. ಪ್ರತಿ ಒಂದು ಧರ್ಮಕ್ಕೆ ಅನುಸಾರವಾಗಿ ಬರೆದ ಪ್ರಬಂಧಗಳನ್ನು ಬೇರೆ ಬೇರೆಯಾಗಿ ವಿಮರ್ಶಿಸಲಾಗುವುದು. ಯಾವುದೊಂದು ಪ್ರಬಂಧವು, ಫುಲ್ಸ್‌ಕೇಪ್ ಹಾಳೆಯ 24 ಪುಟಗಳಿಗೆ ಮಿಗಕೂಡದು, ಅಂತೂ 20 ಪುಟಗಳಿಗೆ ಕಡಮೆಯಾಗಕೂಡದು. ಸುವಾಚ್ಯವಾದ ಬರಹದಲ್ಲಿ, ಸುಲಭ ಶೈಲಿಯಲ್ಲಿ ಯುಕ್ತಿಯುಕ್ತವಾದ ದೃಷ್ಟಾಂತಗಳನ್ನು ಕೊಟ್ಟು, ಧರ್ಮಶಾಸ್ತ್ರಾನುಸಾರವಾಗಿ ಸರ್ವ ಸಾಮಾನ್ಯ ಜನರಿಗೆ ಮನದಟ್ಟಾಗುವ ರೀತಿಯಲ್ಲಿ ಬರೆಯಲ್ಪಡತಕ್ಕದ್ದು. ಒಬ್ಬ ಲೇಖಕನು ಒಂದಕ್ಕಿಂತ ಹೆಚ್ಚಾಗಿ ಪ್ರಬಂಧ ಬರೆಯಕೂಡದು. ಪ್ರಬಂಧಗಳು ಪುಷ್ಯ ಬಹುಳ ಅಮಾವಾಸ್ಯೆ (ತಾ. 9—2—1929)ರ ಒಳಗೆ ಧರ್ಮಸ್ಥಳದಲ್ಲಿರುವ, ದೇವಸ್ಥಾನದ ಪ್ರಬಂಧ ಸ್ಪರ್ಧೆಯ ಕಾರ್ಯದರ್ಶಿಯವರಿಗೆ ಕಳುಹಿಸತಕ್ಕದ್ದು. ಈ ಅವಧಿಯನ್ನು ಬೆಳೆಸಲಾಗುವುದಿಲ್ಲ.

ಯೋಗ್ಯ ಪ್ರಬಂಧಗಳು ಬಾರದಿದ್ದಲ್ಲಿ ಬಹುಮಾನಗಳನ್ನು ಕೊಡಲಾಗುವುದಿಲ್ಲ. ಅನುಭವವುಳ್ಳ ವಿಮರ್ಶಕ ಮಂಡಲಿಯ ಬಹುಮತಕ್ಕನುಸಾರವಾಗಿ ಬಹುಮಾನಗಳನ್ನು ಕೊಡಲಾಗುವುದು. ಈ ತೀರ್ಮಾನವನ್ನು ಲೇಖಕರು ಒಪ್ಪಬೇಕಾಗಿದೆ.

ಬಹುಮಾನ ಪದಕಗಳಲ್ಲಿ ಇಲ್ಲಿಯ ದೇವಸ್ಥಾನದ ನಕ್ಷೆಯೂ, ದೇವರ ಹೆಸರೂ ಕೆತ್ತಿಸಲ್ಪಡುವುದು. ಸ್ಪರ್ಧೆ ಫಲಿತಾಂಶವನ್ನು ವಿಭವ ಸಂವತ್ಸರದ ಫಾಲ್ಗುಣ ಬಹುಳ ಅಮಾವಾಸ್ಯೆ ದಿವಸ (ತಾ. 9—4—1929) ತಿಳಿಸಲಾಗುವುದು. ನಂತರ ಸಂಬಂಧಪಟ್ಟವರಿಗೆ ಬಹುಮಾನಗಳನ್ನು ದೇವರ ಸನ್ನಿಧಾನದಲ್ಲಿ ಕೊಡಲಾಗುವುದು.

ಹೆಚ್ಚಿನ ಮಾಹಿತಿಯನ್ನು ಬೇಕಾದರೆ ಪ್ರಬಂಧ ಸ್ಪರ್ಧೆಯ ಕಾರ್ಯದರ್ಶಿಗೆ ಬರೆದಲ್ಲಿ ತಿಳಿಯಲಾಗುವುದು.

D. Manjayya Heggade,
Dharmastala, (S. Kanara.)

ನೋಟೀಸು.

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ—

O. P. ನಂಬ್ರ $\frac{127}{1928}$

ಅರ್ಜಿದಾರಳು ಕುಕ್ಕಿತಿ (ಮ್ಯಾನರಳು).

ಎದ್ರು

ಸುಬ್ರಾಯ ಗೌಡ ಕೂಡಾ.

ಅರ್ಜಿದಾರಳ ತಾಯಿ ಹಾಗೂ ಮೃತಪಟ್ಟ ಸುಬ್ಬಕ್ಕೆಯು ಕಳೆದ ತಾ. 23—10—1925ರಲ್ಲಿ ಬಾಕಿಲ ಮಾಸ್ತ್ಯಪ್ಪಗೌಡರ ಮಗ ಪಟೇಲ ಬಿ. ಸುಬ್ರಾಯ ಗೌಡರಿಂದ ರೂಪಾಯಿ 50ಕ್ಕೆ ಬರ್ಕೊಂಡ ಡಿಮಾಂಡ್‌ನೋಟಿನ ಅಸ್ತು ಬಡ್ಡಿ ವಸೂಲಿ ಕುರಿತು ತನಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಮೇಲ್ಕಂಡ ಅರ್ಜಿದಾರಳು ಸದ್ರಿ ಅರ್ಜಿ ದಾಖಲು ಮಾಡಿರುವುದರಿಂದ ಆ ಕುರಿತು ಆಕ್ಷೇಪವುಳ್ಳವರು ಬರುವ ತಾರೀಕು 5—1—1929ನೇ ಹಗಲು ಘಂಟೆ 10ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಬರಹ ಮೂಲಕ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದ ಕೋರ್ಟಿನವರಿಗೆ ಯುಕ್ತ ತೋರುವ ತೀರ್ಮಾನ ಕೊಡಲಾದೀತು.

PUTTUR, 10—12—'28. (Sd.) M. SHIVA RAO,
Pleader for Petitioner.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ—

O. P. No. $\frac{80}{1928}$

1. ಡಿ. ಜನಾರ್ಧನ ಪ್ರಭು
2. ಡಿ. ಅನಂದಿ ಯಾನೆ ಪದ್ಮಾವತಿ ಬಾಯಿ
3. ಡಿ. ಕಾಂಬಿನಿ ಯಾನೆ ಗುಲಾಬಿ ಬಾಯಿ
4. ಡಿ. ಕಾಂತಾ ಬಾಯಿ (ಮ್ಯಾನರು)

} ಅರ್ಜಿದಾರರು.

ಸದರಿ ಅರ್ಜಿದಾರರು ಮೃತಪಟ್ಟ ಬೆಳ್ಮಣ್ಣು ಪುಂಡಲೀಕ ಪ್ರಭುವೆಂಬವನು ದಿ ಬೊಂಬೈಲೈಫ್ ಎಶ್ಯುರೆನ್ಸ್ ಕಂಪೆನಿಯಲ್ಲಿ ಪೋಲಿಸಿ ನಂಬ್ರ 16745ಕ್ಕೆ ರೂಪಾಯಿ 1000ಕ್ಕೆ ಇನಶ್ಯುರು ಮಾಡಿದ ಬಾಬ್ತು ರೂಪಾಯಿ 1000ವನ್ನು ತಮಗೆ ಸಿಕ್ಕುವ ಹಾಗೆ 1ನೇ ಅರ್ಜಿದಾರರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಈ ಕೋರ್ಟಿಗೆ ಅರ್ಜಿ ದಾಖಲು ಮಾಡಿರುವದರಿಂದ ಆ ಕುರಿತು ಯಾರಾದರೂ ಆಕ್ಷೇಪ ಹೇಳುವುದಾದರೆ ಸದರಿ ಅರ್ಜಿಯು ತನಿಖೆಗೆ ಇಟ್ಟ ತಾರೀಕು 8—1—1929ನೇ ಹಗಲು 10 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡತಕ್ಕದ್ದು:—

ಕಾರ್ಕಳ, ತಾರೀಖು 7-12-1928. } K. Santhaya Kamath,
Pleader for Petitioners.


ಡನ್ಲೋಪ್
ಬೇಟ್ಸ್ ಕೋರ್ಡ್
ಸೈಕಲು ಟಾಯರು
ಈ ಟಾಯರು ಶಾಸ್ತ್ರೀಯವಾದ ಮತ್ತು ಸಮಂಜಸವಾದ ರೀತಿಯಲ್ಲಿ ತಯಾರಿಸಲ್ಪಟ್ಟಿದೆ. ಉತ್ತಮ ತರಗತಿಯ ಮತ್ತು ಬೇಗನೇ ಸವೆದು ಹೋಗದಿರುವಿಕೆಯಲ್ಲಿ ಪ್ರಸಿದ್ಧಪಟ್ಟ ಗಟ್ಟಿ ರಬ್ಬರ್ ಉಪಯೋಗಿಸಿದ
ಶ್ರೇಷ್ಠತಮ ಟಾಯರು.
Fit Dunlop
and be satisfied.
DUNLOP
ದಿ ಡನ್ಲೋಪ್ ರಬ್ಬರ್ ಕಂಪೆನಿ, (ಇಂಡಿಯಾ) ಲಿಮಿಟೆಡ್.,
ಬೊಂಬಾಯಿ, ನಾಗಪುರ, ಡಿಲ್ಲಿ, ಲಕ್ನೌವ್, ಲಾಹೋರ್, ರಾವಲ್‌ಪಿಂಡಿ,
ಕರಾಚಿ, ಕಲ್ಕತ್ತಾ, ಗೋಹತ್ತಿ, ರಂಗೂನು, ಮಂಡೆಲೇ, ಮದ್ರಾಸು,
ಬೆಂಗಳೂರು, ಕಲ್ಲಿಕೋಟೆ, ಮತ್ತು ಕೊಲೊಂಬೊ.
102D

ಫಲೂನಾ ಆರೋಗ್ಯವು

ನಿಮ್ಮ ಮನೋಭಿಲಾಷೆಯನ್ನು ಪೂರೈಸುವುದು

ಮಕ್ಕಳನ್ನು ಪಡೆಯುವದು ಸ್ವಾಭಾವಿಕವು. ಮಕ್ಕಳನ್ನು ಪಡೆಯದಿರುವದು ಅಸ್ವಾಭಾವಿಕವಾಗಿರುವದು. ಆದರೆ ಅಂತಹ ಹೆಂಗಸರು ಬಹು ಕಡಿಮೆ.

ಆದರೆ ಹಲವು ಹೆಂಗಸರಿಗೆ ಮಾತೃತನವು ನಿರಾಕರಿಸಲ್ಪಡುವದು. ಎಂದು ಮಕ್ಕಳನ್ನು ಪಡೆವ ದಿನವು ಉದಯಿಸುವದೋ ಎನ್ನುತ್ತ ಅವರು ಕಾದು ಕಾದು ನಿರಾಶೆ ಹೊಂದುವರು. ಇತರರ ಕಿವಿಗಳಿಗೆ ಆ ಶುಭಸಮಾಚಾರವನ್ನು ಸುರಿಯಬೇಕೆಂದು ಅವರು ಅಪೇಕ್ಷಿಸುವರು. ಆದರೆ ಕಾರಣಾಂತರಗಳಿಂದ ಅವರ ಆಶೆಯು ಫಲಿಸುವುದಿಲ್ಲ. ಇಂತಹ ಸ್ಥಿತಿಗೆ ಸಾಧಾರಣವಾಗಿ ಶಕ್ತಿಹೀನತೆಯೇ ಕಾರಣವು. ಆಂತರಿಕ ಆರೋಗ್ಯವೇ ಬೇಕಾದುದು. ಔಷಧಿಗಳಿಗೆ ಅಲ್ಲ. ಸಾವಿರಾರು ಹೆಂಗಸರಿಗೆ, ಈ ಫಲೂನಾ ಮಾತ್ರೆಗಳು ಆಂತರಿಕ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರಯಿಸಿರುವವು.

ಫಲೂನಾ ಮಾತ್ರೆಗಳಿಗೆ ಹೆಂಗಸರ ಇಂದ್ರಿಯಗಳನ್ನು ಶುಚಿಪಡಿಸುವ, ಬಲಪಡಿಸುವ ಶಕ್ತಿಯಿದೆ. ಅವುಗಳನ್ನು ಸೇವಿಸಿದೊಡನೆ ಮೊದಲು ಉತ್ಸಾಹವು ತಲೆದೋರಿ, ಸಂತೋಷವುಂಟಾಗಿ ರಕ್ತವು ಹೆಚ್ಚುವುದು. ಹೆಂಗಸು ಸರಿಯಾಗಿ ಹಲಿಸುವಳು. ಇವೆಲ್ಲಕ್ಕೆ ಫಲೂನಾ ಮಾತ್ರೆಗಳೇ ಕಾರಣ. ಹೀಗಾದೊಡನೆ ಸ್ವಾಭಾವಿಕವಾಗಿ ಮಕ್ಕಳು ಹುಟ್ಟಿ, ಆಗ ಫಲೂನಾ ಮಾತ್ರೆಗಳು ಇನ್ನಷ್ಟು ಪ್ರಶಂಸನೀಯವಾಗುವವು.

ವಾಚಕರೆ, ನಿಮ್ಮಲ್ಲಿ ಯಾರಿಗಾದರೂ, ಫಲೂನಾ ಮಾತ್ರೆಗಳಿಂದ ಶುಚಿತನವೂ, ಬಲವೂ ಬೇಕಾಗಿವೆಯೆ? ನಿಮಗೆ ಮಾತೃತನವು ಅಲಭ್ಯವೆನಿಸುವದೆ? ಹೆಂಗಸರಿಗಾಗಿಯೇ ಇರುವ ಫಲೂನಾ ಮಾತ್ರೆಗಳಿಂದ ಪೂರ್ಣ ಸೌಖ್ಯವೂ ಆರೋಗ್ಯವೂ ಲಭಿಸುವದು.

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸಿನಿಂದಲೂ ಉತ್ತಮ ಫಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕಟ್ಟುಗಳಲ್ಲಿ ಮಾರಲ್ಪಡುವವು. ಬಾಟಲಿಗೆ ರೂ. 2—4—0.

ಮುಖ್ಯ ಏಜಂಟರು— ಪಟೇಲ್ ಮತ್ತು ಧೊಂಡಿ, ಪೋಸ್ಟ್ ಆಫೀಸು ಬೋಕ್ಸ್ 838, ಮುಂಬಾಯಿ ಮತ್ತು ಪೋಸ್ಟ್ ಬೋಕ್ಸ್ 620 ಕಲ್ಕತ್ತ.

ಮದ್ರಾಸು ಸಂಸ್ಥಾನಕ್ಕೆ—

ದಾದಾ ಎಂಡ್ ಕೋ,

280 ಚೈನಾ ಬಜಾರ್ ರೋಡ್, ಮದರಾಸ್.

ಗರ್ಭವತಿಯರಾದವರಿಗೆ ಫಲೂನಾ ಮಾತ್ರೆಗಳು ಉಪಯೋಗಿಸತಕ್ಕವಲ್ಲ. ಅವು ಸ್ವಾಭಾವಿಕವಾದ ಬೆಳವಣಿಗೆಗೆ ಮಾತ್ರವೇ ಸಹಾಯಕವಾಗುವವು. ಅವು ವನಸ್ಪತಿ ಧಾತುಗಳಿಂದಲೇ ತಯಾರಿಸಲ್ಪಟ್ಟವುಗಳಲ್ಲದೆ, ಅಪಾಯಕರ ಧಾತುಗಳು ಅವುಗಳಲ್ಲಿರುವುದಿಲ್ಲ. ಮಾಡುವಾಗ ಕೈಯಿಂದ ಮುಟ್ಟುವದೂ ಇಲ್ಲ.

ದಕ್ಷಿಣ ಆಫ್ರಿಕದ ಕೇಪ್ ಟೌನಿನ ಗ್ರಹಮ್ಸ್ ರೆಮಿಡಿಸ್ ಲಿಮಿಟೆಡ್ ಇವರಿಂದ ತಯಾರಿಸಲ್ಪಟ್ಟಿತು.

No 2a

ಆಶ್ಚರ್ಯದ ಕಳವು.

ಮುಂಬಾಯಿಯ ಒಂದು ಆಸ್ಪತ್ರೆಯಲ್ಲಿ ಕಾರಕೂನನಾಗಿದ್ದ ನಿಕೊಲರಾವ್ ಮಂಗೇಶ ಉದಿಯಾವರ ಎಂಬವನ ಕೂಡ ಆಸ್ಪತ್ರೆಯ ಅಧಿಕಾರಿಗಳು ರೂಪಾಯಿ ಎಳ್ನೂರರ ಚೆಕ್ ಒಂದನ್ನು ಕೊಟ್ಟು ಇಂಪೀರಿಯಲ್ ಬೇಂಕಿನಿಂದ ಹಣ ತರಲು ಹೇಳಿದ್ದರು. ಆದ್ದರಿಂದ ಕಾರಕೂನನು ಬೇಂಕಿನಿಂದ ಹಣವನ್ನು ತಂದು ಒಂದು ಚೀಲದಲ್ಲಿ ಕಟ್ಟಿ ತನ್ನ ಮೇಜಿನ ಮೇಲೆ ಇಟ್ಟು ಕೆಲವು ಚಿಲ್ಲರೆ ಪಾವತಿಗಳನ್ನು ಲೆಕ್ಕಮಾಡುತ್ತಲಿದ್ದನು. ಸಮೀಪದಲ್ಲಿಯೇ ಅಪರಿಚಿತ ವ್ಯಕ್ತಿಯೊಬ್ಬನು ಬಂದು ನಿಂತು ಕೊಂಡಿದ್ದನು. ಲೆಕ್ಕ ಮಾಡುತ್ತಿರುವಾಗ ನಾಲ್ಕಾಣೆಯ ಪಾವಲಿಯೊಂದು ಕೆಳಕ್ಕೆ ಬಿತ್ತು. ಪಾವಲಿಯು ಕೆಳಗೆ ಬಿದ್ದಿತೆಂದು ಅಪರಿಚಿತ ವ್ಯಕ್ತಿಯು ಸೂಚಿಸಿದ ಮೇರೆಗೆ ಕಾರಕೂನನು ಕೆಳಕ್ಕೆ ಬಗ್ಗಿ ಪಾವಲಿಯನ್ನು ಹೆಕ್ಕಿ ಮೇಲಕ್ಕೆ ನೋಡುವಾಗ ಆಗ ತಾನೆ ಚೆಕ್ಕ ಮುರಿದು ತಂದಿಟ್ಟ ಎಳ್ನೂರ ರೂಪಾಯಿಯ ಚೀಲವೂ ಇರಲಿಲ್ಲ, ದಯಮಾಡುವೆಂದು ಸೋಗು ಹಾಕಿ ಪಾವಲಿಯು ಬಿದ್ದಿತೆಂದು ಸೂಚಿಸಿದ ಅಪರಿಚಿತ ವ್ಯಕ್ತಿಯೂ ಇರಲಿಲ್ಲ. ಪೋಲೀಸರ ತನಿಖೆಯು ನಡೆಯುತ್ತಲಿದೆ.

Famous

Mysore Perfumes.

Best Incense sticks (Agar Bathis)

Maharaja Bathi	per seer (24 Tolas)	Rs	20
Darbar	,,	,,	15
Ananda	,,	,,	12
Manmohan ,,	,,	,,	10
Musk Heena	,,	,,	8
Dilchaman ,,	,,	,,	8
Kasthur Javaji	,,	,,	10
Amber	,,	,,	8
Rose	,,	,,	6
Jasmin	,,	,,	5
Punugu (Civet)	,,	,,	4
Heena	,,	,,	3
A Tin Case containing 300 Assorted Bathis of 12 kinds	,,	,,	6

Packing & Postage Extra.

The State Perfumery Mart,
Bangalore City,
Mysore State.

ಹೊಸಮುದ್ರಣ! ಅಂದವಾದ ಅಕ್ಷರ!!

ಸಂಗೀತಶಾಸ್ತ್ರ ಪ್ರವೇಶದಾಯಿನಿ.

(ಮೈಸೂರು ಮತ್ತು ಮುಂಬಾಯಿ ವಿದ್ಯಾಭ್ಯಾಸ ಇಲಾಖೆಯವರಿಂದ ಅಂಗೀಕರಿಸಲ್ಪಟ್ಟಿದೆ.)

ಇದರಲ್ಲಿ ಸಂಗೀತಶಾಸ್ತ್ರ ಸಂಬಂಧವಾದ ಅನೇಕ ರಹಸ್ಯಗಳು ಸಂಗೀತ ವಿದ್ವಾಂಸರ ಸಲಹೆಗಳನ್ನು ಅನುಸರಿಸಿ ಸುಲಭ ರೀತಿಯಲ್ಲಿ ಕನ್ನಡದಲ್ಲಿ ವಿವರಿಸಲ್ಪಟ್ಟಿವೆ.

ಸರಳೆ ಅಲಂಕಾರ, ಗೀತ, ಸ್ವರಜತಿ, ವರ್ಣಗಳು ಮತ್ತು ತ್ಯಾಗಯ್ಯರ್, ಪಟ್ಟಣಂ ಸುಬ್ರಹ್ಮಣ್ಯಯ್ಯರ್, ದೀಕ್ಷಿತರು, ಸದಾಶಿವರಾಯರು, ಶಾಮಶಾಸ್ತ್ರಿಗಳು ಮೊದಲಾದ ಸುಪ್ರಸಿದ್ಧ ಸಂಗೀತ ವಿದ್ವಾಂಸರ 106 ಕೃತಿಗಳೂ ಜಾವಡಿಗಳು ಸ್ವರಚಿಹ್ನ ಸಹಿತವಾಗಿ ಇದರಲ್ಲಿ ಕೊಡಲ್ಪಟ್ಟಿವೆ.

ಬೆಲೆ 2—4—0 ಅಂಚೆ 0—6—0

ಹಾರ್ಮೋನಿಯಂ ಸ್ವಯಂಬೋಧೆ.

0—12—0.

ಹೆಚ್. ಎನ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು ಚಿಕ್ಕಪೇಟೆ ಬೆಂಗಳೂರು ಸಿಟಿ.

Notice.

Mr. Kudpi Padmanabha Shenoy, assignee of our Policy No. 9022 on the life of Mr. U Sitharama Pai having notified that he has either lost or misplaced the Policy and having requested us to issue a duplicate thereof in his favour, notice is hereby given that a duplicate Policy will be issued to him by the Company should there be no objection recorded in our office to our doing so within a month of the issue of this notice.

BOMBAY, *8th Dec. '28.* **S. B. Gardmaster,** *Manager,*
BOMBAY LIFE ASSURANCE Co., LTD.

ನೋಟೀಸು.

ಹೊಸದುರ್ಗ ಶ್ರೀ ವರದರಾಜ ವೆಂಕಟರಮಣ ದೇವಳಕ್ಕೆ ಸಮ್ಮಂಧಪಟ್ಟು ಈಗ ಹೊಸದಾಗಿ ಕಟ್ಟಲ್ಪಡುವ ಗೋಪುರದ ಕೆಲಸವು ಹಣದ ಅಭಾವದಿಂದ ಸಂಪೂರ್ತಿಯಾಗದೆ ಇರುವುದರಿಂದ ಅದನ್ನು ಪೂರ್ತಿಗೊಳಿಸುವಲ್ಲಿ ಸ್ವಜಾತಿ ಗೃಹಸ್ಥರು ತನುಮನದಿಂದ ಅರ್ಪಿಸುವ ಧನಸಹಾಯವು ಈ ಸತ್ಕಾರ್ಯ ಉತ್ತೇಜನಕ್ಕೆ ಈ ಕೆಳಗೆ ಸಹಿಹಾಕಿದವರಿಂದ ದೇವಳ ಪಕ್ಷವಾಗಿ ಹೆಚ್ಚಿನ ಆದರದಿಂದ ಸ್ವೀಕರಿಸೋಣಾಗುವದು.

ಹೊಸದುರ್ಗ ಶ್ರೀವರದರಾಜ ವೆಂಕಟರಮಣ ದೇವಳ, ಹೊಸದುರ್ಗ, ೬-೧೧-೨೮. | ಎಚ್. ಎನ್. ಕಾಮತ್, ಪ್ರೆಸಿಡೆಂಟ್, ದೇವಳ ಕಮ್ಮಿಟಿ, ಹೊಸದುರ್ಗ.

ಅಪೂರ್ವ ಸುಸಂದರ್ಭ!

150 ರೂಪಾಯಿಗಳ ಮೂಲಧನದಿಂದ ತಿಂಗಳಿಗೆ ನೂರು ರೂಪಾಯಿಗಳ ಲಾಭ.

ಈ ಕೆಳಗಿನ ಸುಲಭೋಪಾಯವನ್ನು ಲಕ್ಷಿಸಿರಿ.



ಒಂದು, ಎರಡು ಯಾ ಮೂರು ಬಾಟಲಿಗಳನ್ನು ಹಿಡಿಸಬಹುದಾದ ಇಲ್ಲವೆ ಹೆಚ್ಚಿಗೆ ಪವರಿನ ಸೋಡಾ ವಾಟರ್ ತಯಾರಿಸುವ ಹೇಂಡ್ ಮೆಶಿನುಗಳನ್ನು ನಾವು ಅತಿ ಸುಲಭದ ಬೆಲೆಯಿಂದ ತಯಾರಿಸಿ ಕೊಡುವೆವು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಇಂಪೀರಿಯಲ್ ಇಂಪೋರ್ಟಿಂಗ್ ಕಂಪೆನಿ,
ಪ್ರಿನ್ಸೆಸ್‌ಸ್ಟ್ರೀಟ್, ಬೊಂಬಾಯಿ ನಂ. 2.

ಕರ್ಣಿಕ ಎಗ್ಯುಮಿಕ್ಸ್ಚರ.

ಇದರ ಸೇವನೆಯಿಂದ ಮಲೇರಿಯಾ, ಇನ್‌ಫ್ಲುಯೆಂಝಾ, ಚಳಿ ದಿನದ ಜ್ವರ, ಹಾಡಿಜ್ವರ ಇವುಗಳ ಮೇಲೆ ಅತೀ ಉತ್ತಮವಾದ ಔಷಧವು. ಇದರಿಂದ ಜ್ವರವು ಬಿಡುವುದಲ್ಲದೆ, ಕೆಟ್ಟುಹೋದ ರಕ್ತವು ಶುದ್ಧಿಯನ್ನುಂಟು ಮಾಡುತ್ತದೆ.

ದೊಡ್ಡ ಬಾಟ್ಲಿ ಕಿಮ್ಮತು ೧—೪—೦, ಸಣ್ಣದಕ್ಕೆ ೦—೧೪—೦.

ಎಲ್ಲ ಕಡೆಗೂ ಔಷಧವನ್ನು ಮಾರುವಗೋಸ್ಕರ

ಏಜಂಟರು ಬೇಕಾಗಿದ್ದಾರೆ!

ಏಜಂಟರು
ದಿ ಊಲನ್ ಮಾರ್ಟ್, ಮಂಗಳೂರು. | ಕರ್ಣಿಕ ಬ್ರದರ್ಸ್, ಗಿರಿಗಾಂವ, ಮುಂಬಯಿ.

ಮಿತವಾದ ಬೆಲೆಗೆ ಅಮಿತವಾದ ಬೆಳಕು.

ಪ್ರತಿಯೊಬ್ಬರೂ ಗಮನಿಸಬೇಕಾದ ವಿಷಯ.



ಬಾಡಿಗೆಗೆ ಕೊಟ್ಟು ಲಾಭ ಪಡೆಯುವವರಿಗೆ ಅನುಕೂಲಿಸುವ 2,000 ಕ್ಯಾಂಡಲ್ ಪವರಿನ ಗ್ಯಾಸ್ ಲೈಟುಗಳು, ಪ್ರತಿ ಮನೆಗಳಲ್ಲಿ ಮತ್ತು ಅಂಗಡಿಗಳಲ್ಲಿ ಹಚ್ಚಲು ಅನುಕೂಲಿಸುವ 200ರ ರಾಗ್ ಯಾ 800 ಕ್ಯಾಂಡಲ್ ಪವರಿನ ಸೀಮೆ ಎಣ್ಣೆಯಿಂದ ಉರಿಯುವ ಪೆಟ್ರೋಮ್ಯಾಕ್ಸುಗಳು, ಪ್ರತಿ ಒಬ್ಬರ ಕೈಯಲ್ಲಿರುವುದಕ್ಕೊಂದು ಹೋಗಲು ಅನುಕೂಲಿಸು ವಹಂದ್ರಕಾಂತಿ 10 ಕ್ಯಾಂಡಲ್ ಪವರಿನ ಗ್ಯಾಸ್‌ಲ್ಯಾಂಟರ್ನಗಳು, ಸ್ಟವ್‌ಗಳು ಎಲೆಕ್ಟ್ರಿಕ್ ಪಾಕೆಟ್ ಲ್ಯಾಂಪುಗಳು, ಎಲೆಕ್ಟ್ರಿಕ್ ಹರಟು ಗುಂಡಿಗಳು, ಹೋಟೆಲ ಹುಡ್ಯಗಳ ಹುರಾಯಿಗಳು, ಬ್ಯಾಟರಿಗಳು, ಬೆಂಕಿಕಡ್ಡಿ ಬೀಡಿ ಮತ್ತು ಸಿಗರೆಟ್ ಹಚ್ಚುವ ಎಲೆಕ್ಟ್ರಿಕ್ ದೀಪಗಳು ಮತ್ತು ಇವುಗಳಿಗೆ ಬೇಕಾಗುವ ಸಾಮಾನುಗಳು ಪಕ್ಷಣ ಸುಲಭ ಬೆಲೆಗೆ ನಮ್ಮಲ್ಲಿ ದೊರಿಯುತ್ತವೆ. ದಯವಿಟ್ಟು ಪರೀಕ್ಷಿಸಿ ತೃಪ್ತರಾಗಿರಿ.

ಕ್ರಯಪಟ್ಟಿ ಪಡಕೊಳ್ಳುವರಿಗೆ ಈ ವಿಳಾಸಕ್ಕೆ ಬರೆಯಿರಿ —

ಎ. ಆರ್. ಖಲೀಲ್,

ಲೈಸೆನ್ಸ್, ಸ್ಟವ್ ಮತ್ತು ಗ್ಯಾಸ್ ಲೈಟ್ ವ್ಯಾಪಾರಿಗಳು,

18-11-27) ನಗರ್ತಪೇಟೆ, ಬೆಂಗಳೂರು ಸಿಟಿ.

'ಅಂಬಾ ತಾಯಿತ್'

ನಿಮ್ಮ ಸುಖವನ್ನು ಕೊಡುವದು—ಧಾರಣಾ ಮಾತ್ರದಿಂದ ನಿಮಗೆ ಬರುವ ಕಷ್ಟವನ್ನು ದೂರಮಾಡುವದು. ಭೂತ ಪ್ರೇತ ಬಾಲಗ್ರಹ ಬಾಧೆಯಿಂದ ಉಂಟಾಗುವ ಮೂರ್ಛೆಯನ್ನು ತಪ್ಪಿಸುವದು. ಲಾಭ, ಜಯ, ಕಾರ್ಯಾನುಕೂಲವನ್ನೀಯುವದು. ಅನೇಕರಿಗೆ ನಮ್ಮ 'ತಾಯಿತ್' ನಂಬಿಕೆಯನ್ನುಂಟು ಮಾಡಿರುತ್ತದೆ.

೧ನೇ ನಂಬ್ರ ೧೨ ರೂಪಾಯಿ ೨ನೇ ನಂಬ್ರ ೮ ರೂಪಾಯಿ ೩ನೇ ನಂಬ್ರ ೪ ರೂ. ಸ್ಪೆಶಲ್ ರೂಪಾಯಿ ೫೦ರಿಂದ ೫೦೦ ರೂಪಾಯಿ ವರೆಗೆ. ದೃಷ್ಟಾಂತಕ್ಕೆಯೂ, ಒಂದು ಸಾರಿ ತರಿಸಿ ನೋಡಿದರೆ ತಮಗೆ ತಿಳಿಯುವದು. ಟಪ್ಪಾಲು ಖರ್ಚು ಬೇರೆ.

ಶಿವರಾಮ ಭಟ್ಟ, ಹೆಂಗಿನಮನೆ,

— — ಸಳ್ಳಿಪ್ಲಿಕ್ ಪೋಸ್ಟ್ ಕಮಠ್ ಡಿಸ್ಟ್ರಿಕ್ಟ

Economical Preparations Cover All Your ...
A NAME THAT MERIT HAS MADE FAMOUS.

೪೪ ವರ್ಷ ಅನುಭವ ಸಿದ್ಧವಾದ ಬಾಟ್ಲಿವಾಲಾ ಇವರ

ಲೋಕಪ್ರಸಿದ್ಧ ಔಷಧಗಳು.

ಇಂಡಿಯನ್ ಇಂಡಸ್ಟ್ರಿಯಲ್ ಎಗ್ಸಿಬಿಷನ್‌ದೊಳಗೆ ಬೆಳ್ಳಿ ಬಂಗಾರದ ಪದಕಗಳು ದೊರೆತಿರುತ್ತವೆ.

ಬಾಟ್ಲಿವಾಲರ ಅಗ್ಯು ಮಿಕ್ಸ್ಚರ್ ಪಿಲ್ಸ್—ಮಲೇರಿಯಾ ಜ್ವರ ಪರಿಹಾರಕ. ರೂ. ೧.
ಬಾಟ್ಲಿವಾಲರ ಬಾಲಾಮೃತ—ಅಶಕ್ತರಿಗೂ, ಎಳೆಯ ಮಕ್ಕಳಿಗೂ ಪುಷ್ಟಿ ಕೊಡುವ ಔಷಧ ಅಠ ೧೩.
ಬಾಟ್ಲಿವಾಲರ ಟಿಂಚರ್ ಅಫ್ ಅಯೊಡಿನ್—ತಲೆನೋವು, ಬಾತ ಎದೆನೋವು, ಈ ಎಲ್ಲಾ ತರದ ನೋವುಗಳಿಗೂ ಒಳ್ಳೆ ಔಷಧ ಅಠ ...
ಬಾಟ್ಲಿವಾಲರ ಟೈಫಾಯಿಡ ಮಿಕ್ಸ್ಚರ—ಟಾಯಿಫಾಯಿಡ ಮತ್ತು ಕಾಲರಾ ಜ್ವರಗಳಿಗೆ ಅತ್ಯುತ್ತಮವಾದ ಔಷಧ. ಅಠ ೧೩
ಬಾಟ್ಲಿವಾಲರ ಕ್ವಿನೀನ ಟಿಕಡಿಗಳು—ಒಂದು ಗ್ರೇನ ಅಥವಾ ಎರಡು ಗ್ರೇನ. ೧ ಬಾಟ್ಲಿಯಲ್ಲಿ ೧೦೦ ಟಿಕಡಿಗಳು ಇರುತ್ತವೆ.
ಬಾಟ್ಲಿವಾಲರ ಟಾನಿಕ ಗುಳಿಗೆಗಳು—ಧಾತು ಪುಷ್ಟಿಕರ. ರೂ. ೧—೨—೦. ರೂ. ೧—೪—೦. ೧—೧೨—೦
ಬಾಟ್ಲಿವಾಲರ ಹುಳ ಕಟ್ಟು ಔಷಧ. ರೂ. ೦—೬—೦
ಬಾಟ್ಲಿವಾಲರ ದಂತಧಾವನ ಚೂರ್ಣ. ರೂ. ೦—೬—೦. LIBERAL DISCOUNT TO TRADE.

ಕಾರಖಾನೆ:-CAWASHAPUR, BOMBAY.

ಎಲ್ಲಾ ಕಡೆಗಳಲಿ ಏಜಂಟರು ಬೇಕಾಗಿದ್ದಾರೆ. | ಡಾ. ಯಚ್. ಎಲ್. ಬಾಟ್ಲಿವಾಲಾ ಸನ್ಸ್ ಎಂಡ್ ಕೋ., ಲಿಮಿಟೆಡ್. Sayani Road, P. O. Cadell Road, Bombay. No. 14.

ಕೇಸರಿಯ ವರ ಲೋಧ್ರ

ಗರ್ಭಾಶಯ ರೋಗನಿವಾರಿಣಿ.

ಸ್ತ್ರೀಯರಿಗೆ ಉಂಟಾಗುವ ವ್ಯಾಧಿಗಳಿಗೆಲ್ಲಾ ಇದು ವರಪ್ರಸಾದವಾದ ಔಷಧವು. ಈ ದಿವ್ಯೌಷಧವನ್ನು ಕೆಲವರು 'ಕಲ್ಪವೃಕ್ಷ'ವೆಂದೂ, 'ಕಾಮಧೇನು'ವೆಂದೂ, 'ಬಂಗಾರಕ್ಕೆ ಸಮಾನವಾದುದು' ಎಂದೂ, ಇನ್ನು ಕೆಲವರು 'ರಕ್ಷಾಕವಚವಾದ ಆಭರಣ'ವೆಂದೂ, 'ಸರ್ವಾರ್ಥೀಷ್ಟಪ್ರದಾಯಿನಿ' ಎಂದೂ ಹಲವು ಬಗೆಯಾಗಿ ಹೊಗಳುತ್ತಿರುವರು.

ಈ ಔಷಧರಾಜವನ್ನು ಹಿಂದೂದೇಶದಲ್ಲಿ ಬೆಳೆಯುವ ವನಸ್ಪತಿಗಳಿಂದ ತಯಾರಿಸಿ ಇರುತ್ತದೆ. ಇದು ಅತ್ಯಂತ ರುಚಿಕರವಾದುದರಿಂದ ಸೇವಿಸಲು ಯೋಗ್ಯವಾಗಿದೆ.

ಇದು ಮುಟ್ಟುಕಟ್ಟಲೆ, ಮುಟ್ಟುಸ್ರಾವದೋಷ, ಮುಟ್ಟುಸ್ರಾವವು ಹೆಚ್ಚು ಕಮ್ಮಿಯಾಗುವುದು, ಮುಟ್ಟು ನಾನಾ ಬಣ್ಣಗಳಿಂದ ಸ್ರವಿಸುವುದು, ಪ್ರದರ (ಮೇಹ) ರೋಗ, ಸೂತಿಕಾವಾತವು, ಸಂತಾನಹೀನತೆ, ಮೂರ್ಛೆ, ಪಿಶಾಚಬಾಧೆ ಮೊದಲಾದ ಗರ್ಭಾಶಯ ರೋಗಗಳೂ, ಶರೀರದಲ್ಲಿ ರಕ್ತಹೀನವಾಗಿರುವುದು, ಅಜೀರ್ಣ, ಮಲಬದ್ಧತೆ, ಸೊಂಟನೋವು, ಕಾಯಿಸೆಳೆತ, ಉಬ್ಬಸ ಮೊದಲಾದ ವ್ಯಾಧಿಗಳೂ ಇತರ ಮರ್ಮವ್ಯಾಧಿಗಳೂ ನಿಶ್ಶೇಷವಾಗಿ ಗುಣವಾಗುವುವು.

ಈ ಲೋಧ್ರವು ಔಷಧಿ ವ್ಯಾಪಾರಿಗಳಲ್ಲೆಲ್ಲಾ ದೊರೆಯುವುದು. ದೊಡ್ಡ ಸೀಸೆ 1ಕ್ಕೆ 3 ರೂಪಾಯಿ; ಚಿಕ್ಕದು ರೂ. 1—10—0.

ವಿಳಾಸ:— ಕೇಸರೀ ಕುಟೀರಂ,

TELEGRAMS:—'KESARI' ಆಯುರ್ವೇದ ಔಷಧಶಾಲಾ, P. B: 752. ಎಗ್ಮೋರು, ಮದರಾಸು.

16—4—'27 ಬ್ರಾಂಚ್:— 18 ಬಳೆಪೇಟೆ, ಬೆಂಗಳೂರು

ಮಂಗಳೂರು ಏಜಂಟರು:— ದಿ ಊಲನ್ ಮಾರ್ಟ್, ಹಂಪನಕಟ್ಟಾ, ಮಂಗಳೂರು.

The Kanara Watch House Udipi, S. K.



ಗ್ಯಾರಂಟಿಯುಳ್ಳ ವಸ್ತುಗಳು! ಅತೀ ಕಡಿಮೆ ಬೆಲೆ

ದಿ ಕೆನರಾ ವಾಚ್ ಹೌಸ್; ಉಡುಪಿ, ದ. ಕ.

ನಮ್ಮಲ್ಲಿ ಯಾವಾಗಲೂ ಅಂದಿನ ಉತ್ತಮ ತಯಾರಿಯ, ವಾಚುಗಳೂ, ಕ್ಲೋಕುಗಳೂ, ಟೈಮ್‌ಪೀಸುಗಳೂ, ಎಲೆಕ್ಟ್ರಿಕ್ ಮತ್ತು ಪೆಟ್ರೊಮೆಕ್ಸ್ ದೀಪಗಳೂ, ಅವುಗಳ ಸಾಮಾನುಗಳೂ ಮಾರಾಟಕ್ಕಿವೆ.

ವಾಚ್ ಮೊದಲಾದವುಗಳ ರಿಪೇರಿ ಕೆಲಸದಲ್ಲಿ ನಾವು ಹೆಸರು ಹೊಂದಿರುವೆವು.

ನಿಮ್ಮಲ್ಲಿರುವ ವಾಚು, ಕ್ಲಾಕು, ಟೈಮ್‌ಪೀಸು, ಫೊನೋಗ್ರಾಫು, ಮತ್ತು ಪೆಟ್ರೊಮೆಕ್ಸ್ ದೀಪ, ಇವುಗಳನ್ನು ರಿಪೇರಿ ಮಾಡಬೇಕೆಂದಾದರೆ ದಯವಿಟ್ಟು ಒಮ್ಮೆ ನಮ್ಮಲ್ಲಿಗೆ ಕಳುಹಿಸಿರಿ. ನಾವು ಅವುಗಳನ್ನು ಕಡಿಮೆ ಚಾರ್ಜಿನಿಂದ ನಿಮಗೆ ತೃಪ್ತಿಕರವಾಗಿ ಗ್ಯಾರಂಟಿ ಸಮೇತ ರಿಪೇರಿ ಮಾಡಿಕೊಡುವೆವು. ರಿಪೇರಿ ಮಾಡುವಾಗ ನಂಬಿಗೆಯ ಮತ್ತು ಉತ್ತಮ ಸಾಮಾನುಗಳನ್ನೇ ಉಪಯೋಗಿಸುವೆವು. ಹೇಳಿದ ವಾಯಿದೆಯೊಳಗೆ ತಪ್ಪದೆ ಕೊಡುವೆವು.

ಒಮ್ಮೆ ಪರೀಕ್ಷಿಸಿ ನೋಡಿರಿ!

ಕ್ರಯದ ಮತ್ತು ಇತರ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,
ದಿ ಕೆನರಾ ವಾಚ್ ಹೌಸ್, ಉಡುಪಿ, ದ. ಕ.

ಪಿ. ಸೊ.—ನಮ್ಮ ವಾಚು ಮೊದಲಾದವುಗಳಿಗೆ ಎರಡು ವರ್ಷಗಳಗೊಮ್ಮೆಯಾದರೂ ಎಣ್ಣೆಯನ್ನು ಕೊಡಿಸಿ ಶುದ್ಧಮಾಗಿರಿಸುವುದರಿಂದ ಸಂಭಾವ್ಯ ಸಮಯವು ದೊರಕುವುದು.

Edited Printed & Published by V. S. Kamath at the M. T. A. SHARADA PRESS, MANGALORE.

ಚಂದಾನಿರ್ಣಯ:—ವರ್ಷ ಒಂದಕ್ಕೆ ರೂಪಾಯಿ 2-0-0 **Registered: No. M. 489** ಟಪಾಲು ಹಾಸಲು ಸೇರಿ ರೂಪಾಯಿ 2-13-0

ಸ್ವದೇಶಾಭಿಮಾನಿ.

ಪ್ರತಿ ಶುಕ್ರವಾರವೂ ಮಂಗಳೂರು ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ರತ್ನೈರ್ಮಹಾರ್ಹೈಸ್ತುತುಷುರ್ನ ದೇವಾ । ನ ಭೇಜಿರೇ ಭೀಮವಿಷೇಣ ಭೀತಿಮ್ ॥ ಸುಧಾಂ ವಿನಾ ನ ಪ್ರಯಯುರ್ವಿರಾಮಂ । ನ ನಿಶ್ಚಿತಾರ್ಥಾದ್ವಿರಮಂತಿ ಧೀರಾ ॥ ೧ ॥
ದೊರೆಯಲನುಪಮರತ್ನಗಳು ಸಾ । ಗರವ ಮಥಿಸಲು ಸುರರಿಗದರಿಂ । ತರುಷವಾಯಿತೆ! ಮತ್ತೆ ವಿಷವ ಸುಡುತ ಬರುತಿರುವ ॥
ಗರಳಕವರಂಜಿದರೆ! ಸುಧೆಯನು । ಮರೆತು ಕ್ಷುದ್ರರ ತೆರದಿ ಕುಳಿತರೆ ತೆರಳೆ ಬಲ್ಲರೆ! ತೊರೆವ ಧೀರರು ನಿಶ್ಚಿತಾರ್ಥವನು ॥ ೧ ॥

ಪುಸ್ತಕ ೨೨. ಮಂಗಳೂರು, ತಾ. ೨೧ನೇ ಶುಕ್ರವಾರ ದಶಂಬರ ೧೯೨೮. (21-12-28.) ಸಂಚಿಕೆ ೫೧

THE CANARA BANKING CORPORATION, UDIPI, LIMITED.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್, ಉಡುಪಿ, ಲಿಮಿಟೆಡ್.

Head office:—UDIPI.
ಹೆಡ್ ಆಫೀಸು:—ಉಡುಪಿ.

Branches:—COONDAPOOR.
" Mangalore.
ಶಾಖೆ:—ಕುಂದಾಪುರ.
" ಮಂಗಳೂರು.

Statement of Affairs of the Canara Banking Corporation Udipi, Limited as at 31st October 1928.

	Capital and Liabilities.			Property and Assets	
1	Paid up Capital	Rs. 1,99,650-0-0	1	Premises Building Furniture &c.	Rs. 9,491-2-0
2	Reserve Fund and other funds	" 96,600-0-0	2	Investments on G. P. Notes	" 3,34,218-5-0
3	Deposits	" 17,52,879-4-8	3	Investments on Approved Securities	" 17,53,749-11-0
4	Overdraft with Bankers	" 43,786-8-9	4	Bills for collection as per Contra	" 11,392-9-0
5	Sundry Persons' A/C as per Contra	" 11,392-9-0	5	Sundries including P & L items	" 1,00,979-12-9
6	Sundries including P & L items	" 1,54,863-9-2	6	Cash in hand & with Bankers.	" 49,340-7-10
	Total	22,59,171-15-7		Total	22,59,171-15-7

Office of the Corporation,
UDIPI, 13-11-'28.

N. ANANDA RAO,
Secretary.

ಅಮೃತಾಂಜನ

ಕ್ಷಣಿಕ ಪ್ರಯೋಜನವಲ್ಲಿ ಪ್ರಸಿದ್ಧಪಟ್ಟ ನೋವಿನ
— ಮುಲಾಮು. —

ತಲೆನೋವಿನಿಂದ ಚಡಪಡಿಸುವ, ಶೀತದಿಂದ ವಿಶ್ರಾಂತಿಯಿಲ್ಲದ, ಕೆಮ್ಮಿನಿಂದ ಪೀಡಿತರಾದ ಚೇಳಿನಿಂದ ಕಚ್ಚಲ್ಪಟ್ಟ, ವಾತದಿಂದ ನರಳುವ, ಮತ್ತು ಇತರ ಯಾವ ವಿಧದ ನೋವು ಮತ್ತು ಬೇನೆಗಳಿಂದ ಬಾಧಿಸಲ್ಪಡುವ ಮನುಷ್ಯರಿಗೆ ತಕ್ಕದಾದ ಔಷಧಿಯಾಗಿದೆ.

ಎಲ್ಲಾ ಅಂಗಡಿಗಳಲ್ಲಿಯೂ ಮಾರಾಟಕ್ಕಿದೆ. ಕ್ರಯ ಡಬ್ಬಿಗೆ 10 ಆಣೆ ಟಪ್ಪಾಲು ಹಾಸಲು ಪ್ರತ್ಯೇಕ



ವಿ. ಸೂ:—ಅಕಾರಿ ಮಾಲಿನಿಂದ ಮೋಸಹೋಗದಿರಿ—

ಗಜಕರ್ಣದ ಮುಲಾಮು — ಎಲ್ಲಾ ತರದ ಗಜಕರ್ಣ ಕಜ್ಜಿಗಳು, ನಂಬಿಗೆಯು ಮತ್ತು ಖಂಡಿತವಾದ ಔಷಧಿಯಾಗಿದೆ. ಮೂರು ಸಲ ಹಾಗಿಸುವುದರಿಂದ ಪೂರ್ಣ ಗುಣವಾಗುವುದು. ಕ್ರಯ ಡಬ್ಬಿಗೆ ಆಣೆ 6.

ದಂತಮಂಜನ — ಉತ್ತಮವಾದ, ಈ ಪರಿಮಳಯುಕ್ತವಾದ, ಮತ್ತು ಸವಿಯಾದ ದಂತಮಂಜನವನ್ನು ಉಪಯೋಗಿಸುವುದರಿಂದ, ನೆತ್ತರು ಬರುವಿಕೆಯು ನಿಂತು, ಹಲ್ಲುಗಳು ಶುಚಿಯಾಗಿಯೂ ಬಿಳಿಯಾಗಿಯೂ ಮಾರ್ಪಟ್ಟು ಬಲಗೊಂಡುವವು. ಕ್ರಯ ಡಬ್ಬಿ 1ಕ್ಕೆ ಆಣೆ 2.

ಅಮೃತಾಂಜನ ಡಿಪೊ.

6, 7 ತಂಬುಚೆಟ್ಟಿ ಸ್ಟ್ರೀಟ್, ಜೋರ್ಜಟೌನ್, ಮದ್ರಾಸು. 249 ಫ್ರೇಯರ್ ರೋಡ್ ಮುಂಬಯಿ,
ಮಂಗಳೂರಲ್ಲಿ — ಊಲನ್ ಮಾರ್ಟ್, ಹಂಪನಕಟ್ಟೆ, ಇವರಲ್ಲಿಯೂ ದೊರಕುವುದು.

ಮಕ್ಕಳ ಸಲುವಾಗಿ,

ಡೋಂಗರ

ಇವರ

ಬಾಲಾಮೃತ.

ಇದು ಮಕ್ಕಳಿಗೆ ಶಕ್ತಿಯನ್ನು ಕೊಡುವುದರಲ್ಲಿ ಸರ್ವೋತ್ಕೃಷ್ಟ ಔಷಧವೆಂದು ಹಿಂದೂಸ್ತಾನದಲ್ಲೆಲ್ಲ ಅನೇಕ ವರುಷಗಳಿಂದಲೂ ಪ್ರಸಿದ್ಧವಾಗಿದೆ. ಇದರಿಂದ ಮಕ್ಕಳಿಗೆ ಕುಡಿಸುವ ಹಾಲೂ, ಉಣ್ಣಿಸುವ ಅನ್ನವೂ ಪಚನವಾಗಿ, ಮಕ್ಕಳ ಆರೋಗ್ಯ ವೃದ್ಧಿಯಾಗುತ್ತದೆ. ಇದು ಮಧುರವಿರುವುದರಿಂದ ಮಕ್ಕಳು ಇದನ್ನು ಅತ್ಯಾನಂದದಿಂದ ಸೇವಿಸುತ್ತಾರೆ.

ಕೇ. ಟಿ. ಡೋಂಗರೇ ಕಂಪೆನಿ,
ಗಿರಗಾಂವ, ಮುಂಬಾಯಿ.
ಏಜಂಟರು — ದಿ ಊಲನ್ ಮಾರ್ಟ್, ಮಂಗಳೂರು.

Ready for Sale.

THE
MADRAS HINDU RELIGIOUS ENDOWMENT ACT
No. II of 1927.
Price 8 annas.
Postage Extra.

For copies apply to—
The M. T. A. Sharada Press,
Car-street, MANGALORE.

ADVERTISE IN OUR WEEKLY
To Reach the Hearths & Homes
of India's Masses
For Particulars Apply to:
The Manager,
SWADESHABHIMANI,
MANGALORE.

ಪತ್ರವ್ಯವಹಾರ.

ಪತ್ರಲೇಖಕರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.

ಸೂಚನೆ.

ಸ್ವದೇಶಾಭಿಮಾನಿಯ ತಾ. ೨ನೇ ನವಂಬರದ ೪೪ನೇ ಸಂಚಿಕೆಯಲ್ಲಿ "ಯುಕ್ತಾವರ ಪದ್ಧತಿ" ಎಂಬ ಒಂದು ಪತ್ರವ್ಯವಹಾರದಲ್ಲಿ ಶ್ರೀಯು. ಕೆ. ಶಾಸ್ತ್ರಿ, ಇವರ ವಿಷಯದಲ್ಲಿ ಮಾನನಷ್ಟಕರವಾದ ಮತ್ತು ನಿಜವಲ್ಲದ ವಾಕ್ಯವು ಕೊಡಲ್ಪಟ್ಟಿದೆಯಾಗಿಯೂ, ಸದರಿ ಪತ್ರವ್ಯವಹಾರದ ಎರಡನೇ ಮತ್ತು ಐದನೇ ಪಾರಾಗಳಲ್ಲಿಯೂ ವ ಇತರ ಕಡೆಗಳಲ್ಲಿಯೂ ಅವರ ವಿಷಯವಾಗಿ ಕೊಡಲ್ಪಟ್ಟ ವಾಕ್ಯವು ತೀರಾ ಸುಳ್ಳಾಗಿದ್ದು ಅವರನ್ನು ಬಹಿರಂಗವಾಗಿ ಮಾನಭಂಗ ಮಾಡುವ ಉದ್ದೇಶದಿಂದ ಲೇಖಕರಿಂದ ಬರೆಯಲ್ಪಟ್ಟವುಗಳೆಂದೂ ನಮ್ಮ ಲಕ್ಷ್ಯಕ್ಕೆ ತರೋಣವಾಗಿದೆ. ಅಲ್ಲದೆ ಸದರಿ ಪತ್ರವ್ಯವಹಾರದಲ್ಲಿ ಕಾಣಿಸಿದ ಶಾಲೆಯ ಮುಖ್ಯೋಪಾಧ್ಯಾಯರೂ ಶಾಲೆಯು ಧರ್ಮಾರ್ಥವಾಗಿ ವಿದ್ಯಾಭ್ಯಾಸವನ್ನು ಕೊಡುವಂಥಾದ್ದಾಗಿದೆಯೆಂದೂ, ಸದರಿ ಶಾಲೆಯ ಉದ್ದೇಶ ಮತ್ತು ಕ್ರಮಗಳ ಪುಸ್ತಕವನ್ನೂ ಕಳುಹಿಸಿ ಸದರಿ ಲೇಖದಲ್ಲಿ ಕಾಣಿಸಿದ ಆರೋಪಗಳನ್ನು ನಿಷೇಧಿಸಿ ನಮಗೆ ಬರೆದಿರುತ್ತಾರೆ. ಈ ಸಂದರ್ಭದಲ್ಲಿ, ಸದರಿ ಲೇಖವನ್ನು ಪ್ರಕಟಿಸಿದುದಕ್ಕಾಗಿ ನಾವು ತುಂಬಾ ವಿಷಾದಪಡುತ್ತೇವಲ್ಲದೆ, ಸದರಿ ಲೇಖದಲ್ಲಿ ಕಾಣಿಸಿರುವ ಶ್ರೀ|| ಶಾಸ್ತ್ರೀಯವರಿಗೂ, ವಿದ್ಯಾದಾಯಿನಿ ಶಾಲೆಗೂ ನಮ್ಮ ಕ್ಷಮಾಯಾಚನೆಯನ್ನು ಒಪ್ಪಿಸುತ್ತೇವೆ.

ಸಂಪಾದಕರು, ಸ್ವದೇಶಾಭಿಮಾನಿ.

ಮದುವೆಗೂ ಒಂದು ಕಾನೂನು ಬೇಕೆ?

[49ನೇ ಸಂಚಿಕೆಯಿಂದ ಮುಂದರಿದದ್ದು.]

ಮದುವೆಗೊಂದು ಕಾನೂನಿನ ಅವಶ್ಯಕತೆಯು ಇರುವುದಿಲ್ಲವೆಂತ ಈ ಮೊದಲೆ ವಿಶದಪಡಿಸಿರುತ್ತೇನೆ. ಆದರೆ ಮದುವೆಗೊಂದು ಸಮಯ ನಿರ್ಧಾರಬೇಡವೋ ಎಂತ ವಿಚಾರಿಸುವದು ಅತ್ಯಗತ್ಯವೆಂದು ತೋರುತ್ತದೆ. ಅದನ್ನು ಸ್ವಲ್ಪ ಯೋಚಿಸುವ.

ಮದುವೆಗೆ ಸರ್ವಜನ ಸಮ್ಮತವಾದ ವಯಸ್ಸು ಹುಡುಗನಿಗೆ ಹದಿನೆಂಟೆಂದೂ ಹುಡುಗಿಗೆ ಹದಿನಾಲ್ಕೆಂದೂ ಎಲ್ಲರೂ ಹೇಳಿಕೊಂಡು ಬರುತ್ತಾರೆ. ಪದ್ಧತಿಗೆ ವಿರೋಧವಾಗಿ ನಡೆದು, ಧರ್ಮವನ್ನು ಒತ್ತಟ್ಟಿಗಿಟ್ಟು ಭ್ರಮೆಯೆಂಬ ಬಲೆಯಲ್ಲಿ ಸಿಲುಕಿ ಕುಮಾರ್ಗಪ್ರವರ್ತನವೆಂದರೆ ಇದೆ ಚೆಲೋದಾದ ಉದಾಹರಣೆ. ನಮ್ಮ ಪ್ರಾಂತದ ಮೇಲೆ ದೃಷ್ಟಿಯಿಟ್ಟು ನೋಡಿದರೆ ಸರ್ವಸಾಧಾರಣ ಹುಡುಗಿಗೆ ೧೨ ವರ್ಷದಲ್ಲೂ, ಹುಡುಗನಿಗೆ ೨೦ರಲ್ಲೂ ವಿವಾಹವು ನಡೆಯುತ್ತದೆ. ಇದು ಶಾಸ್ತ್ರವಿರುದ್ಧವಲ್ಲ. ಧರ್ಮವನ್ನು ಬಿಟ್ಟಿಲ್ಲ. ಅನಾಚಾರವೆಂಬ ನಾಮವನ್ನು ಪಡೆದಿಲ್ಲ. ಈಗ ಯಾವರೊ ಸಮಾಜ ಸಂಸ್ಕರಣೆಯನ್ನು ಬೆಳಕಿಗೆ ತರುವ ಮುಖಂಡರು ಹುಡುಗನ ಮದುವೆಯ ವಯಸ್ಸನ್ನು ೨ ವರ್ಷಗಳಿಂದ ಕಡಿಮೆ ಮಾಡಿ ಅವುಗಳನ್ನು ಹುಡುಗಿಯ ವಯಸ್ಸಿಗೆ ಸೇರಿಸಿರುತ್ತಾರೆ. ಇದಕ್ಕೆ ನ್ಯಾಯವಾದ ಆಧಾರಗಳು ಯಾವವೂ ಇಲ್ಲ. ಹಾಗಾದರೆ ಮುಂಚಿನ ಪದ್ಧತಿಗೆ ಕೊರತೆಗಳೇನು! ಸುಲಭವಾಗಿ ಹೇಳುವದರೆ ಮುಂಚಿನ ಪದ್ಧತಿಯನ್ನನುಸರಿಸಿದರೆ ಬಾಲವಿಧವೆಯರು, ಬಾಲಮಾತೆಯರು, ಮತ್ತು ಬಾಲವೃದ್ಧರು ನಮ್ಮಲ್ಲಿ ದಿನೆ ದಿನೆ ಹೆಚ್ಚಿಕೊಂಡು ಬರುತ್ತಾರೆಂತ ಆ ಮಹಾಶಯರು. ಗಂಟು ಕೊಡದು ಹೋಗುವಷ್ಟು ಗಟ್ಟಿಯಾಗಿ ಸಾರಿಕೊಂಡು ಬರುತ್ತಾರೆ. ಆಹಾ! ಏನು ಕೃಪೆ! ಏನು ಸಾಹಸ! ಇವರ ಪ್ರಯತ್ನಕ್ಕೆ ನಾವು ಸಂತೋಷದಿಂದ ತುಂಬಿ ಕುಣಿಯಬೇಕೊ ಅಥವಾ ದುಃಖದಿಂದ ಬೇಸರ ಪಡಬೇಕೊ ಎಂತ ಇಲ್ಲಿ ವಿಮರ್ಶಿಸಲು ಸಾಧ್ಯವಿಲ್ಲ.

ಸ್ತ್ರೀಯರಿಗೆ ೧೪ ವಯಸ್ಸಿನ ಮೊದಲು ವಿವಾಹವಾದರೆ ಬಾಲವಿಧವೆಯರ ಸಂಖ್ಯೆಯು ದಿನೇ ದಿನೇ ಪ್ರಬಲವಾಗುತ್ತದೆಯಂತೆ. ಹಾಗಾದರೆ ಅನಂತರ ಅವರಿಗೆ ಮದುವೆಯಾದರೆ ವೈಧವ್ಯವು ಅವರ ಹತ್ತಿರವನ್ನೆ ಸೇರಲಿಕ್ಕಿಲ್ಲವೆಂಬುದು ನಿಶ್ಚಯವೆಂತಾಯಿತು. ಒಬ್ಬಳಿಗೆ ೧೪ ವರ್ಷದಲ್ಲಿ ಮದುವೆಯಾಗಿ ಮರುದಿವಸವೆ ಅವಳ ಗಂಡನು ಸ್ವರ್ಗಯಾತ್ರೆಯನ್ನು ಮಾಡಿದನೆಂದರೆ ಅವಳ್ಯೇನಾಯಿತು? ಅಂತಹ ವಿಪತ್ತುಗಳು ಸಂಭವಿಸಲಾರದೆಂದು ಯಾರಾದರೂ ಪಾಠಕಮಹಾಶಯರಿಗೆ ವಾಗ್ದಾನ ಮಾಡಿದರೆ ನಾವು ಆ ವಿಷಯ ಸುಮ್ಮನಿರಲೇಬೇಕು. ಅದು ನಿಶ್ಚಯವೆಂದಾದರೆ ಯಮಧರ್ಮರಾಯನು ಅವರ ಆಜ್ಞಾವರ್ತಿಯೆಂಬುದಕ್ಕೆ ಸಂಶಯವಿರದು. ಅಂತಹ ಮಹಾಪುರುಷರಿಗೆ ನಾವು ತಲೆ ಬಗ್ಗಿಸಲೇ ಬೇಕು. ಆದರೆ ಅಂತಹವರನ್ನು ಹುಡುಕುವ ಬಗೆ ಹೇಗೆ? ಪುನರ್ವಿವಾಹವನ್ನು ಮಾಡಿ ವೈಧವ್ಯವನ್ನು ತಪ್ಪಿಸಬಹುದೆಂದು ಕುತರ್ಕವಾಚಸ್ಪತಿಗಳು ಹೇಳುವರಲ್ಲ! ಹಾಗಾದರೆ ವಿಧವಾವಿವಾಹಕ್ಕೂ ಒಂದು ಮಸೂದೆಬೇಕು. ಕೊನೆಗೆ ಮಸೂದೆಗಳ ಹೊಡತವೆ ಹೊಡೆತ. ಆದರೆ ಇಂತಹ ಮಸೂದೆಗಳಿಂದ ೧೨ ವಯಸ್ಸಿನ ವಿಧವೆಯರ ಕಷ್ಟನಿವಾರಣೆಯನ್ನು ಸುಲಭವಾಗಿ ಮಾಡಬಹುದಲ್ಲ! ಹದಿನಾಲ್ಕು ವರ್ಷಗಳಿಗೆ, ಮೊದಲು ಮದುವೆ ಮಾಡಬಾರದೆಂಬ ನಿರ್ಧಾರವೇಕೆ?

ಮುಂಚಿನ ಪದ್ಧತಿಗನುಸಾರವಾಗಿ ವಿವಾಹ ಮಾಡಿದರೆ ಬಾಲಮಾತೆಯರು ಮತ್ತು ಬಾಲವೃದ್ಧರು ಹೆಚ್ಚುತ್ತಾರೆಂದು ತಿಳಿದವರು ಹೇಳುತ್ತಾರೆ. ಇದು ನಿಜವಾದ ತಿಳುವಳಿಕೆಯೊ ಅಥವಾ ತಿಳಿಗೇಡಿತನವೋ ಎಂತ ಒಂದೇ ಕಾರಣದಿಂದ, ಹೇಳಬಹುದು. ವಿಷಯಸುಖಾನುಭವದಿಂದ ಸ್ತ್ರೀಯರು ಮಾತೆಯರೂ, ಪುರುಷರು, ವೃದ್ಧರೂ ಆಗುತ್ತಾರೆ. ಆದರೆ ಮದುವೆಗೊಂದು ಮಸೂದೆಯನ್ನು ಮಾಡಿದರೆ ವಿಷಯಸುಖಾನುಭವವನ್ನು ನಿಲ್ಲಿಸಬಹುದೆ? ಮಸೂದೆಯಿಂದ ಅದು ಸಾಧ್ಯವಿದೆಯೆ? ಈ ಸಂದರ್ಭದಲ್ಲಿ ಮಿಸ್ಸಿಸ್ ಬ್ಲಾಮೋಶಮ್‌ಪಂತ್ತು, ಇವರು ಹೇಳಿದ ಒಂದು ವಾಕ್ಯವನ್ನು ನೆನಪಿಗೆ ತಂದರೆ ಸಾಕು. "That the sexual urge was too much for convention and morality was seen in the rate of illegitimate births in European countries. Did anybody want this or its alternative abortion and inpanticide to be repeated in India? — "Hindu", Nov. 26." ವಿಷಯಸುಖಾನುಭವವನ್ನು ಮಸೂದೆಗಳಿಂದ ಬಂಧಿಸಲು ಸಾಧ್ಯವಿಲ್ಲ. ಒಮ್ಮೆಗೆ ಹಾಗೆ ಯತ್ನಿಸಿದರೆ ಪಾಶ್ಚಾತ್ಯದೇಶಗಳಲ್ಲಿ ಸಂಭವಿಸುವ ದುರಾಚಾರಗಳಿಗೆ ನಾವು ತುತ್ತಾಗಬೇಕು. ಗರ್ಭನಾಶ, ಶಿಶುಹತ್ಯೆ ಮೊದಲಾದುವುಗಳನ್ನು ಯಾರೂ ಎಂದಿಗೂ ಬಯಸಲಾರರೆಂಬುದೆ ಮೇಲೆಹೇಳಿದ ವಾಕ್ಯದ ಸಾರಾಂಶವಾಗಿದೆ.

ಹನ್ನೆರಡು ವರುಷಗಳಿಗೆ ಮುಂಚಿತವಾಗಿ ಸ್ತ್ರೀಯರು ಗರ್ಭವತಿಯರಾಗುತ್ತಾರೆಂಬುದೂ, ನಮ್ಮ ಪ್ರಾಂತದಲ್ಲಿ ಎರಡು ಲಕ್ಷ ಹನ್ನೆರಡು ವರ್ಷದೊಳಗಿನ ಬಾಲವಿಧವೆಯರಿರುತ್ತಾರೆಂಬುದೂ ಅನ್ಯಾಯ ಅತಿಶಯೋಕ್ತಿ. ಇದಕ್ಕೆ ತಕ್ಕದಾದ ಉದಾಹರಣೆಯು ಎಲ್ಲಿಯೂ ಕಂಡುಬರುವುದಿಲ್ಲ. ಸುಳ್ಳು ಹೇಳಿ ಅಧರ್ಮಪ್ರಚಾರಣೆಯನ್ನು ಮಾಡಲುದ್ಯುಕ್ತರಾದ ನರರು ನರಕೆಂಬ ಅಭಿಧಾನಕ್ಕೆ ಪಾತ್ರರಾಗುವದೆ ಇಲ್ಲ:

ಹಿಂದೂಜನಾಂಗವು ದಿನೆದಿನೆ ಬಲಹೀನತೆಯನ್ನು ಸ್ವೀಕರಿಸುತ್ತದೆಂಬುದು ನಿಜ. ಆದರೆ ಅದರ ಕಾರಣ ಶಾಸ್ತ್ರಪದ್ಧತಿಗನುಸಾರವಾದ ಮದುವೆಯಾಚರಣೆಯಲ್ಲ. ವಿಷಯಸುಖಾನುಭವವು ಬಲಕುಂದಿಸಬಹುದು. ಆದರೆ ಅದರಲ್ಲೂ ಕ್ರಮವಿರಬೇಕು. ಮದುವೆಯಾದೊಡನೆಯೆ ನರನಾಗಲಿ, ನಾರಿಯಾಗಲಿ, ವಿಷಯಸುಖಾನುಭವವನ್ನು ಆರಂಭಿಸುವದಿಲ್ಲ, ಹಾಗೆ ಸಮರ್ಥಿಸುವದು ಕೇವಲ ತಪ್ಪು. ಕ್ರಮವಾಗಿ ವಿಷಯಸುಖಾನುಭವವನ್ನು ಮಾಡಿದರೆ ಅದರಿಂದ ಬಲಹೀನತೆ ಬರಲಾರದು. ಅದು ಅತ್ಯಂತವಾದರೆ ಬಲವು ಕುಂದುವುದು. ಆದರೆ ತಿಳುವಳಿಕೆಯುಳ್ಳವರು ಹಾಗೆ ವರ್ತಿಸಲಾರರು. ಅಂತಹ ದುರಾಚಾರವನ್ನು ವಿದ್ಯೆಯ ಪ್ರಚಾರತೆಯಿಂದ ನಿಲ್ಲಿಸಬೇಕಲ್ಲದೆ ಮದುವೆಗೊಂದು ಮಸೂದೆಯನ್ನು ಮಾಡಿ ಯತ್ನಿಸಿದರೆ ವಾತಕ್ಕೆ ಪಿತ್ತದ ಪ್ರತಿಕ್ರಿಯೆಯನ್ನು ಮಾಡಿದ ಹಾಗಾಗುವುದು.

ಈಗಿನ ವಿದ್ಯಾವಂತರೂ, ಅಂದರೆ ಬಿ. ಎ., ಬಿ. ಎಲ್., ಮೊದಲಾದ ಪದವೀಧರರೂ ಅತ್ಯಂತ ವಿಷಯಸುಖಾನುಭವಕ್ಕೆ ಇಳಿಯುತ್ತಾರಲ್ಲ. ಹಾಗಾದರೆ ವಿದ್ಯೆಯಿಂದ ಈ ದುರ್ನಡತೆಯು ಅನಿವಾರ್ಯವಾಯಿತಲ್ಲ! ಈ ಮೊದಲಾದ ಚೋದ್ಯಗಳು ನನ್ನನ್ನು ಪದೆಪದೆ ಬಾಧಿಸುತ್ತವೆ. ಇದಕ್ಕೇನು ಸಮಾಧಾನ? ಮನುಷ್ಯನಿಗೆ ವಿದ್ಯೆಯೊಂದಿದ್ದರೆ ಮಾತ್ರ ಸಾಲದು. ನಡತೆಯೂ ಒಳ್ಳೆಯದಾಗಿರಬೇಕು. ಎಲ್ಲವೂ ನಡತೆಯ ಮೇಲೆ ಹೊಂದಿರುವದು. ನಡತೆಯು ಒಳ್ಳೆಯದಾಗಿರಬೇಕಾದರೆ ವಿದ್ಯೆಯನ್ನು ಕ್ರಮವಾಗಿ ಹೀರಿಕೊಳ್ಳಲಿಕ್ಕೆ ಬುದ್ಧಿಯಿರಬೇಕು. ಬುದ್ಧಿಯೆ ಸುಗುಣಗಳ ತವರುಮನೆ. ಬುದ್ಧಿಯೆ ಸಂತೋಷಕ್ಕೆ ಮೂಲ. ಬುದ್ಧಿಯೆ ಸ್ವಧರ್ಮಪರಿಪಾಲನೆ, ಸ್ವಕರ್ಮಾಚರಣೆ, ಇವೆ ಮೊದಲಾದ ಸತ್ಕರ್ಮಗಳಿಗೆ ಮುಖ್ಯಸಾಧನ. ಈಗ ನಮ್ಮ ಬುದ್ಧಿಯು ಕೆಟ್ಟುಹೋಗಿದ್ದ ಕಾರಣ ನಮ್ಮ ನಡತೆಗಳೂ ಕೆಟ್ಟುಹೋಗಿವೆ, ಹೀಗಿರಲು ನಮಗೆ ಎಷ್ಟು ವಿದ್ಯೆಯಿದ್ದರೂ ಪ್ರಯೋಜನಕ್ಕೆ ಬಾರದು. ಕಾಫಿ, ಚಾ, ಬೀಡಿ, ಸಿಗ್ರೇಟ್, ಕಳ್ಳು, ಅಫೀಮು, ಬಂಗಿ, ಪಾನೀಯವಲ್ಲ, ಸಿನೆಮಾ ಇವೆ ಜಲೂಕದೋಷಾದಿಯಲ್ಲಿ ನಮ್ಮ ರಕ್ತವನ್ನೆಲ್ಲ ಹೀರುತ್ತವೆ. (ಸೂಚನೆ — ಇಲ್ಲಿ ತಕ್ಕವಾದ ಕನ್ನಡಶಬ್ದಗಳು ದೊರೆಯದಿದ್ದ ಕಾರಣ ಪರದೇಶೀಯ ಶಬ್ದಗಳನ್ನು ಉಪಯೋಗಿಸಿದುದಕ್ಕೆ ವಾಚಕಮಹಾಶಯರು ಕ್ಷಮಿಸಬೇಕಾಗಿ ಪ್ರಾರ್ಥನೆ). ಕಾಪಿ, ಚಾ, ಬೀಡಿ, ಸಿಗ್ರೇಟು ಮೊದಲಾದವುಗಳು ಮಾದಕಪದಾರ್ಥಗಳಾಗಿಯೂ ಅನಾರೋಗ್ಯಕರವಾದವುಗಳಾಗಿಯೂ ಇರುತ್ತವೆ. ದೇಹ ಕೆಟ್ಟ ಒಡನೆಯೆ ಬುದ್ಧಿಯು ಕೆಡುವುದು. (A sound mind in a sound body). ಸಿನೆಮಾ ನೋಡುವದರಿಂದ ದೇಹ ಕೆಡುವದಲ್ಲದೆ ಸತ್ಪುರುಷರು ನೋಡಬಾರದಂತಹ ಅನೇಕ ವಿಷಯಗಳು ಅದರಲ್ಲಿರುವ ಕಾರಣ ಮನಸ್ಸು ಚಂಚಲವಾಗುವುದು. ದುರ್ನಡತೆಗಳಿಗೆ ಕಾರಣವಾಗಿದ್ದ ನಮ್ಮ ದೇಹವು ಎಂದಿಗೂ ಬಲವಂತವಾಗಲಾರದು. ವ್ಯಾಯಾಮವೆಂದರೆ ನಾವು ಅರಿತದ್ದೆ ಇಲ್ಲ. ನಡೆದುಹೋಗುವ ಪದ್ಧತಿ ನಮ್ಮಲ್ಲಿ ಅಂಕುರಿತವಾಗಲಿ ಇಲ್ಲ. ಕಾರಣ, ಕಟ್ಟಳೆಗಳೆಂದರೆ ಕಾಹಿಲೆಗಳ ಜಾಲವೆಂದು ನಮ್ಮ ಪ್ರಿಯ ಸಹೋದರ ಸಹೋದರಿಯರು ಪ್ರತಿಪಾದಿಸುವರಲ್ಲ! ನಿತ್ಯಾನುಷ್ಠಾನವೆಂದರೆ ನಮಗೆ ತಿಳಿಯದೆ ತಿಳಿಯದು. ಅಡಿಗೆಗೊಂದು ಜನ; ಮನೆಯ ಕೆಲಸಕ್ಕೊಂದು ಜನ; ಹೊರಗಿನ ಕೆಲಸಕ್ಕೊಂದು ಜನ. ನೋಟ್ಸನ್ನು ಬರೆಯಿಸಿಕೊಳ್ಳುವದಕ್ಕೊಂದು ಜನ; ಬರೆದುದನ್ನು ಸಭೆಯಲ್ಲಿ ಓದಿಹೇಳುವುದಕ್ಕೂ ಒಂದು ಜನ. ಅಂತು ಭೃತ್ಯರ ಸಂಖ್ಯೆಗೆ ನೆಲೆಯೆ ಇಲ್ಲ. ನಮಗೆ ಯಾವಾಗ ನೋಡಿದರೂ ವಿಶ್ರಾಂತಿ, 'ವಿಶ್ರಾಂತಿ ಹೆಚ್ಚಾಗಿ ಈಗ ತುಕ್ಕು ಹಿಡಿದ ಅವಸ್ಥೆಯಲ್ಲಿದ್ದೇವೆ (To rest is to rust). ಹೀಗಿರುವಾಗ ನಾವು ಸಬಲರಾಗಬೇಕೊ ದುರ್ಬಲರಾಗಬೇಕೊ ಎಂತ ವ್ಯಾಖ್ಯರೆ ವಿಚಾರಿಸಲಿ. 'ಇಂತಹ ದುರ್ನಡತೆಗಳನ್ನು ಸರಿಪಡಿಸುವುದಕ್ಕೆ ಬದಲಾಗಿ ಅಧರ್ಮಸಂಸ್ಥಾಪನೆಗೆ ಬದ್ಧಕಂಕಣರಾಗಿ ನವೀನ ಸಂಸ್ಕಾರದ ಮುಖಂಡರು ಹೊರಟಿದ್ದಾರೆ. ಇವರ ನ್ಯಾಯಾನ್ಯಾಯವನ್ನು ಇನ್ನೂ ಬಿಡಿಸಿ ಹೇಳಬೇಕಾಗಿಲ್ಲ.

ಮುಂಚಿನ ಕಾಲದಲ್ಲಿಯೂ ಬಾಲ್ಯದಲ್ಲೆ ವಿವಾಹಗಳು ನಡೆಯುತ್ತಿದ್ದವು. ಆದರೆ ಜನರು ಕರ್ಮಪರಾಯಣರಾಗಿದ್ದ ಕಾರಣ ಬಲಹೀನರಾಗಲಿಲ್ಲ. ಈಗ ನಾವು ಕರ್ಮಪಥವನ್ನು ಬಿಟ್ಟಿರುವುದರಿಂದ ಬಲಹೀನರಾಗಿ ಪ್ರಪಂಚಸುಖವೆ ನಿಜವಾದ ಸುಖವೆಂದು ತಿಳಿದು ಅತ್ಯಂತ ವಿಷಯಸುಖದಲ್ಲಿ ಮಗ್ನರಾಗಿ ನಮ್ಮ ದುಃಸ್ಥಿತಿಯನ್ನು ತಂದುಕೊಂಡಿರುತ್ತೇವೆ. ಹೊರತು ನಮ್ಮ ವಿಪತ್ತಿಗೆ ಶಾಸ್ತ್ರಪದ್ಧತಿಗನುಸಾರವಾದ ವಿವಾಹವು ಎಂದಿಗೂ ಕಾರಣವಾಗದು. ಹಾಗೆ ನುಡಿಯುವುದು ಕೇವಲ ತಿಳಿಗೇಡಿತನ. ಪಾಶ್ಚಾತ್ಯರ ಕ್ರಮವನ್ನನುಸರಿಸಿ ನಾವು ಮದುವೆಗೆ ವರ್ಷ ನಿರ್ಧಾರ ಮಾಡಬೇಕೆಂದರೆ ಎಂದಿಗೂ ಆಗದು. ದೇಶ, ಕಾಲ, ಪಾತ್ರಗಳ ಸ್ಥಿತಿಗತಿಗಳಿಗನುಸಾರವಾಗಿ ನಡತೆಗಳನ್ನು ನಿಶ್ಚಯಿಸಬೇಕು. ಇದು ಪಂಡಿತರ ಲಕ್ಷಣ. ಒಬ್ಬನು ಮಾಡಿದ ಹಾಗೆ ನಾನೂ ವರ್ತಿಸಬೇಕೆಂದು ಬಯಸುವವನು ಹೇಡಿಯೂ ಬುದ್ಧಿಶೂನ್ಯನೂ ಆಗಿರುತ್ತಾನೆ. ಆದುದರಿಂದ ಯಾವ ಕಾರ್ಯವನ್ನು ಕಟ್ಟಿಕೊಳ್ಳುವಾಗಲೂ ಸ್ವಲ್ಪ ವಿಚಾರಿಸಿಯೆ ಮುಂದುವರಿಯಬೇಕೆಂಬುದೆ ನನ್ನ ಅಪಾರವಾದ ಬಯಕೆ. ಈ ವಿಷಯ ಪಂಡಿತವರೇಣ್ಯರೂ ಪ್ರಾಜ್ಞಮಹಾಶಯರೂ ಆದ ವಿದ್ಯಾವಂತರು ಚಿಂತಿಸಲುಪಕ್ರಮಿಸಬೇಕೆಂಬುದೆ ನನ್ನ ಸಂಪ್ರಾರ್ಥನೆ. ಧರ್ಮವನ್ನು ಹಾಳಾಗುವದಕ್ಕೆ ಬಿಟ್ಟು ಅರ್ಥಶಾಸ್ತ್ರವನ್ನು (materalism) ಪೂಜಿಸಿ ಪ್ರಚಾರಗೊಳಿಸುವ ವಿದ್ಯಾವಂತರು ಲೋಕೋಪಕಾರಿಗಳೆಂದು ಇನ್ನೂ ತಿಳಿದಿಲ್ಲ. ಆದುದರಿಂದ ಇನ್ನು ಮುಂದಾದರೂ ಅರ್ಥಶಾಸ್ತ್ರದ ಬೆಂಬಲವನ್ನು ವ್ಯಾಖ್ಯರು ಬಿಡುವರೆಂದು ನಾನು ದೃಢ ತಿಳಿಯುತ್ತೇನೆ. ಅರ್ಥಶಾಸ್ತ್ರದ ಮೇಲಿನ ಪ್ರೀತಿಯಿಂದ ಧರ್ಮಶಾಸ್ತ್ರವನ್ನೂ ಪದ್ಧತಿಗಳನ್ನೂ ಸಮೂಲವಾಗಿ ನಾಶಪಡಿಸಿದರೆ ನಮಗೆ ಎಂದಿಗೂ ಶ್ರೇಯಸ್ಸು ದೊರೆಯಲಾರದು. ಅನಂತರ ಸುಖವನ್ನುಣ್ಣುವ ಆಶೆ ನಮಗೆ ಬೇಡವೆ ಬೇಡ. ಇದನ್ನು ಸರ್ವರೂ ತಿಳಿದಿರಲಿ.

ಕೆ. ಬಾಲಕೃಷ್ಣರಾವ್, ಬಿ. ಎ.,

ತುಳುದೇಶವನ್ನು ಪ್ರತ್ಯೇಕ ಸಂಸ್ಥಾನ ಮಾಡಲು ಇರುವ ತೊಡಕುಗಳು.

ತುಳುರಾಜ್ಯವು ಬಹಳ ಪುರಾತನ ಕಾಲದಿಂದಲೂ ಇದ್ದ ರಾಜ್ಯವಾಗಿದೆ. ಪರಶುರಾಮನು ಪಶ್ಚಿಮ ಕರಾವಳಿಯ ಸಹ್ಯಾದ್ರಿ ಖಂಡವನ್ನು ಸ್ಥಾಪಿಸುವ ಮೊದಲೇ ಈ ರಾಜ್ಯವು ಇದ್ದಿರಬೇಕು. ಯಾಕೆಂದರೆ ಈ ದೇಶದಲ್ಲಿ ವಾಸಮಾಡಿಕೊಂಡಿದ್ದ ತುಳು ಜನರು ತುಳು ಭಾಷೆಯನ್ನು ಆಡಿಕೊಂಡಿದ್ದರೆಂದು ಕಾಣುತ್ತದೆ. ಈ ತುಳುಜನರ ತರೆಬುರುಡೆಯ ಪರಿಮಾಣ, ಮೂಗು ದವಡೆಗಳ ಎಲುಬುಗಳು ಇವುಗಳು ತಮಿಳು, ತೆಲುಗು, ಕನ್ನಡ, ಮಲೆಯಾಳ, ಕೊಡಗು ಜನರ ತಲೆಬುರುಡೆ, ಮೂಗು, ದವಡೆ ಎಲುಬುಗಳು ಒಂದನ್ನೊಂದು ಹೋಲುವುದರಿಂದಲೂ ಇವರ ಪದ್ಧತಿಗಳು, ನಡತೆಗಳು, ದೇವತಾರಾಧನೆ ಮುಂತಾದವುಗಳು ಒಂದನ್ನೊಂದು ಹೋಲುವುದರಿಂದಲೂ ಈ ತುಳುದೇಶದ ಜನರು ಸಹ ಅದೇ ವಂಶಕ್ಕೆ ಸೇರಿದವರೆಂದು ಕಾಣುತ್ತದೆ. ಮೇಲೆ ಹೇಳಿದ ಎಲ್ಲಾ ಭಾಷೆಗಳನ್ನಾಡುವ ಜನರು ದ್ರಾವಿಡ ವಂಶಕ್ಕೆ ಸೇರಿದವರಾಗಿರುತ್ತಾರೆ. ಒಂದು ಕಾಲದಲ್ಲಿ ಭೂಕಂಪದ ದೆಸೆಯಿಂದ ಈ ಪಶ್ಚಿಮ ಕರಾವಳಿಯು ಸ್ವಲ್ಪ ಸಮಯಕ್ಕೆ ಸಮುದ್ರ ಪಾಲಾಯಿತು. ನಂತರ ಸಮುದ್ರವು ದೂರಹೋಗಿ ಈ ಕರಾವಳಿಯು ಮೊದಲಿನಂತೆಯೇ ಆಯಿತು. ಈ ಭೂಕಂಪದ ದೆಸೆಯಿಂದ ಅಡಿಗೆ ಹೋದ ಗೋಕರ್ಣ ಮಹಾಬಲೇಶ್ವರ ಲಿಂಗವು ಕೆಳಗೆ ಇಳಿದು ಹೋದ್ದು ಈಗಲೂ ಹಾಗೆಯೇ ಇದೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯೇ ಆಗಿದೆ. ಇದರಿಂದ ಈ ಪ್ರದೇಶವು ಸಮುದ್ರದಿಂದ ಹೊರಗೆ ಬಂದ ಮೇಲೆ ಪರಶುರಾಮನು ಓಡಿಹೋದ ಜನರಿಗೆ ಧೈರ್ಯವನ್ನು ಕೊಟ್ಟು ತಿರಿಗಿ ಇಲ್ಲಿಯೇ ಬಂದು ನಿಲ್ಲುವಂತೆ ಮಾಡಿದನೆಂದು ಹೇಳಬಹುದು. ಮೇಲಿನ ಸಂಗತಿಗಳಿಂದ ದ್ರಾವಿಡರು ದಕ್ಷಿಣ ದೇಶಕ್ಕೆ ಬಂದು ನೆಲೆಸಿದ ಸಮಯದಿಂದಲೇ ಈ ತುಳುದೇಶವು ಇದ್ದಿತೆಂದು ಹೇಳಬಹುದು. ಅದಲ್ಲದೆ ತುಳು, ಮಲೆಯಾಳ, ಹೈಗ ದೇಶದವರಿಗೆ ಧೈರ್ಯದಿಂದ ಆಳುವುದಕ್ಕಾಗಿ ಚೇರದೇಶದ ಅಂದರೆ ಘಟ್ಟದ ಮೇಲಿನ ತಮಿಳು ದೇಶದ ಅರಸನನ್ನು ಈ ದೇಶಕ್ಕೆ ಅಧಿಕಾರಿಯಾಗಿ ನೇಮಿಸಿದನೆಂದು ತೋರುತ್ತದೆ. ಬಹಳ ಸಣ್ಣದಾದ ತುಳುದೇಶವು ಆ ಸಮಯದಲ್ಲಿ ಮಲೆಯಾಳ ರಾಜರ ಒಳರಾಜ್ಯವಾಗಿಯೇ ಇತ್ತೆಂದು ಹೇಳಬೇಕಾಗಿದೆ.

ಇದರ ನಂತರ ಈ ದೇಶವು ತೆಲುಗುದೇಶದ ರಾಜರ ಅಧೀನವಿತ್ತೆಂದು ಹೇಳಬೇಕಾಗಿದೆ. ತೆಲುಗು ಕರ್ನಾಟಕ, ತುಳು, ಹೈಗ ದೇಶವನ್ನು ಸಾತವಾಹನ ಎಂಬ ತೆಲುಗುವಂಶವು ಆಳಿಕೊಂಡಿತ್ತು. ಇದಕ್ಕೆ ಆಧಾರವಾಗಿ ಕೆಲವು ಕುರುಹುಗಳು ಸಿಕ್ಕಿಯವೆ. ಸರ್ಪದ ಬಾಯಿಂದ ಮೇಲಕ್ಕೆ ಎದ್ದುಬಂದ ಒಂದು ಸ್ತ್ರೀರೂಪವು ಇವರ ಧ್ವಜವಾಗಿತ್ತು. ಇದಕ್ಕೆ ಆಧಾರವಾಗಿ ಒಂದು ಶಾಸನವು ಇತ್ತಲಾಗಿ ಬನವಾಸಿಯಲ್ಲಿ ಸಿಕ್ಕಿಯದೆ. ಇನ್ನೊಂದು ಕಲ್ಲು ಶಾಸನವು ಮಂಜೇಶ್ವರದ ಶ್ರೀ ಮದನಂತೇಶ್ವರ ದೇವಸ್ಥಾನದ ಕಂಚಿನ ದೀಪಸ್ತಂಭದ ಅಡಿಯಲ್ಲಿದೆ. ಈ ಎರಡು ಆಧಾರಗಳಿಂದ ಕ್ರಿಸ್ತಪೂರ್ವದಲ್ಲಿಯೇ ಈ ತುಳು ರಾಜ್ಯವು ಸಾತವಾಹನ ಎಂಬ ತೆಲುಗು ರಾಜರ ಅಧೀನದಲ್ಲಿತ್ತು ಎಂದು ಹೇಳಲು ಆಧಾರವಿದ್ದಂತಾಯಿತು.

ಕ್ರಿಸ್ತಶಕದ ಒಂದನೇ ಶತಮಾನದ ಆದಿ ಭಾಗದಲ್ಲಿ ಈ ತುಳು ರಾಜ್ಯವು ಕರ್ನಾಟಕ ರಾಜರಾದ ಕದಂಬರಾಜರ ಅಧೀನದಲ್ಲಿತ್ತು. ಈ ಸಮಯದಲ್ಲಿ ತೆಲುಗು ದೇಶವನ್ನು ಶಾಲಿವಾಹನನು ಆಳುತ್ತಿದ್ದನು. ಶಾಲಿವಾಹನನಿಗೆ ಚೈತ್ರ ಶು|| ಪಾಡ್ಯದ ದಿವಸ (ಕ್ರಿ. ಶ. ೭೮ರಲ್ಲಿ) ಪಟ್ಟಾಭಿಷೇಕವಾಯಿತು. ಅದೇ ವರುಷ ತುಳು ರಾಜ್ಯವನ್ನು ಭೂತಾಳಪಾಂಡ್ಯನೆಂಬ ರಾಜನು ಆಳಿಕೊಂಡಿದ್ದನು. ಈ ಭೂತಾಳಪಾಂಡ್ಯನು ತುಳು ಮಲೆಯಾಳ, ಹೈಗ, ಕರ್ನಾಟಕ ದೇಶದ ಗೋಕರ್ಣ ಮಂಡಲೇಶ್ವರನಾಗಿ ಆಳುತ್ತಿದ್ದನು. ಇದರಲ್ಲಿ ಹೇಳಿರುವ ತುಳುದೇಶವು ಉತ್ತರದಲ್ಲಿ ಸೀತಾನದಿಯೂ, ಪೂರ್ವದಲ್ಲಿ ಪಶ್ಚಿಮಘಟ್ಟಗಳೂ, ದಕ್ಷಿಣದಲ್ಲಿ ಪಯಸ್ವಿನಿ ನದಿಯೂ, ಪಶ್ಚಿಮದಲ್ಲಿ ಅರಬೀ ಸಮುದ್ರವೂ ಈ ನಾಲ್ಕು ಗಡಿಗಳೊಳಗುಳ್ಳ ಪ್ರದೇಶವನ್ನು ಒಳಕೊಂಡಿತ್ತು. ಇದರಲ್ಲಿ ಉಪ್ಪಳ ಹೊಳೆಯಿಂದ ಪಯಸ್ವಿನಿ ನದಿಯ ವರೆಗೆ ಇರುವ ಮಲೆಯಾಳ ಕುಂಬಳೆ ರಾಜ್ಯವು ಅಡಕವಾಗಿತ್ತು. ಸೀತಾನದಿಯ ಉತ್ತರಕ್ಕೆ ಇರುವ ಪ್ರದೇಶದ ಒಂದು ಭಾಗವಾದ ಹೊಸಂಗಡಿ ರಾಜಧಾನಿಯಲ್ಲಿ ಆಳುತ್ತಿದ್ದ ಕರ್ನಾಟಕದ ಭಾಗವಾದ ಹೊನ್ನೆಯ ಕಂಬಳಿಯ ರಾಜ್ಯವು ಅಡಕವಾಗಿತ್ತು. ಹಳ್ಳಗೇರಿ, ಬೈಂದೂರು ಭಟಕಲ, ಗೆರಸೊಪ್ಪೆ ಎಂಬ ಪ್ರದೇಶವು ಸಂಗೀತಪುರವನ್ನು (ಹಾಡುವಳ್ಳಿ) ರಾಜ್ಯಧಾನಿಯಾಗಿಮಾಡಿ ಆಳಿಕೊಂಡಿದ್ದ ಹೈಗ ದೇಶದಲ್ಲಿ ಅಡಕವಾಗಿತ್ತು. ಇದರಿಂದ ಭೂತಾಳಪಾಂಡ್ಯನು ಪಯಸ್ವಿನಿ ಹೊಳೆಯಿಂದ ಗೋಕರ್ಣದ ವರೆಗಿನ ಪ್ರದೇಶವನ್ನು ಆಳಿಕೊಂಡಿದ್ದನು ಎಂದು ಮಾತ್ರವೇ ಹೇಳಬಹುದು. ಭೂತಾಳಪಾಂಡ್ಯನಿಗೆ ತುಳು, ಮಲೆಯಾಳ, ಹೈಗ, ಕರ್ನಾಟಕ ಚತುರ್ದೇಶಾಧೀಶ್ವರ ಎಂಬ ಬಿರುದು ಇದ್ದರೂ ಅವನು ಮಲೆಯಾಳ, ಕರ್ನಾಟಕ ದೇಶಗಳನ್ನು ಸಾರ್ವಭೌಮನಾಗಿ ಆಳುತ್ತಿದ್ದನೆಂದು ಹೇಳಲು ಸಾಧ್ಯವಿಲ್ಲ. ಯಾಕೆಂದರೆ ಕರ್ನಾಟಕ ರಾಜ್ಯವನ್ನು ಸ್ವತಂತ್ರವಾಗಿ ಕದಂಬರಾಜರೂ ಮಲೆಯಾಳ ದೇಶವನ್ನು ಚಿರುಮಾನ ಪೆರುಮಾಳನೆಂಬ ಬಲಿಷ್ಠನಾದ ಅರಸನೂ ಆಳುತ್ತಿದ್ದರು. ತುಳು ಕುಂಬಳೆ, ಹೈಗ ಮತ್ತು ಹೊಸಂಗಡಿ ಹೊನ್ನೆಯ ಕಂಬಳಿ ರಾಜ್ಯವನ್ನು ಮಾತ್ರವೇ ಆಳುತ್ತಿದ್ದನೆಂದು ಹೇಳಬಹುದು. ಮೇಲಿನ ಸಂಗತಿಯಿಂದಲೂ ತುಳು ರಾಜ್ಯವು ಕರ್ನಾಟಕ ಕದಂಬರಾಜರ ಒಳ ರಾಜ್ಯವಾಗಿಯೇ ಇದ್ದಿತಲ್ಲದೆ ಸ್ವತಂತ್ರರಾಜ್ಯವಾಗಿರಲಿಲ್ಲ ಎಂದು ತಿಳಿಯಬಹುದು.

ಕದಂಬರ ನಂತರ ಕರ್ನಾಟಕದೇಶವನ್ನು ಆಳಿದ ಚಾಲುಕ್ಯರ ಕಾಲದಲ್ಲಿಯೂ, ಅವರ ನಂತರ ಆಳಿದ ಹೊಯ್ಸಳ ವಂಶದವರ ಕಾಲದಲ್ಲಿಯೂ, ವಿಜಯನಗರ ಅರಸರ ಆಳ್ವಿಕೆಯಲ್ಲಿಯೂ, ಕೆಳದಿನಾಯಕರ ಕಾಲದಲ್ಲಿಯೂ ತುಳುದೇಶವು ಕರ್ನಾಟಕ ರಾಜ್ಯದ ಒಳಭಾಗವಾಗಿಯೇ ಇದ್ದಿತಲ್ಲದೆ ಸ್ವತಂತ್ರರಾಜ್ಯವಾಗಿ ಇರಲಿಲ್ಲ. ಕೆಳದಿನಾಯಕರ ಕಾಲದಲ್ಲಿ ತುಳುರಾಜ್ಯವನ್ನು ಆಳುತ್ತಿದ್ದ ಅರಸರೆಲ್ಲರೂ, ತಮ್ಮ ತಮ್ಮ ರಾಜ್ಯಗಳನ್ನು ಸಹ ಕಳಕೊಂಡರು, ಅದಲ್ಲದೆ ತುಳು ಎಂಬ ಹೆಸರನ್ನು ಸಹ ತೆಗೆದು ಉತ್ತರ ಮತ್ತು ದಕ್ಷಿಣಕನ್ನಡಜಿಲ್ಲೆಯನ್ನು ಒಳಕೊಂಡಿರುವ ಕಾರವಾರದಿಂದ, ಕವ್ವಾಯಿ ವರೆಗೆ ಇರುವ ಭಾಗಕ್ಕೆ ಕನ್ನಡಜಿಲ್ಲೆಯೆಂದು ಹೆಸರನ್ನಿಟ್ಟರು, ಟಿಪ್ಪುಸುಲ್ತಾನನ ಕಾಲದಲ್ಲಿಯೂ ಇದೇ ಹೆಸರಿತ್ತು, ತುಳು ಎಂಬ ಹೆಸರೇ ಇರಲಿಲ್ಲ;

(ಇನ್ನೂ ಇದೆ, ಮುಂದುವರಿಯುದೆ.)

ಶಾಸ್ತ್ರೀಯ
ಅಮೂಲ್ಯ ಔಷಧಗಳು

ಅಶ್ವಗಂಧಾದಿ ತೈಲ—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡುಹಿಡಿಯಲ್ಪಟ್ಟದ್ದು. ಅಂಗಗಳಿಗೆ ಆರೋಗ್ಯವಾದ ಈ ತೈಲವು ಚಿಕ್ಕಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪಾಯಿ 1—4—0, ಅಂಚೆಯ ವೆಚ್ಚ ಬೇರೆ.

ಚ್ಯವನಪ್ರಾಶ—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವಿನೀ ದೇವತೆಗಳು ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕಾಸ, ಕ್ಷಯ, ಹೃದ್ರೋಗಗಳೆಂಬ ವ್ಯಾಧಿಗಳಿಗೂ ಮಕ್ಕಳ ಶರೀರ ವೃದ್ಧಿಗೂ ಹಿತಕರವಾದ ಫಲ ಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು 1ಕ್ಕೆ ರೂಪಾಯಿ 3—12—0, ಅಂಚೆ ವೆಚ್ಚ ಬೇರೆ.

ಕಸ್ತೂರಿ ಮಿಶ್ರಣ!
ದಶಮೂಲ ಸುಖಪ್ರದ ಔಷಧಿ!

ಬಾಣಂತಿಯರ ಪ್ರಸವ ಜೀವನಕ್ಕೆ ನಂದನವನದಂತಿರುವುದು

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವ ಕಂದ ಮಲವನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಆಕುಂಚಿತಮಾಡುವದು.

ರಸಾಯನ ಗುಣದಿಂದ ಬಾಣಂತಿಯು—ಗರ್ಭ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವದು.

ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ 2-0-0. ಪೋಸ್ಟೇಜು ವಗೈರೆ ಬೇರೆ.

ಹೆಚ್ಚಿನ ಮಾಹಿತಿಗೆ "ಆರ್ಯ ಆರೋಗ್ಯರಹಸ್ಯ" ಎಂಬ ಪುಸ್ತಕಕ್ಕೆ ಬರೆಯಿರಿ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು ದ. ಕನ್ನಡ.

ಮುದಲ್‌ತರವಾದ ಬೆಳ್ಳಿ ಪುಡಿದಾರಹಗ್ಗ.

ESTD 1896.

ಅನೇಕ ವರ್ಷದಿಂದ ನಾವು ಬೆಳ್ಳಿ ಪುಡಿದಾರಗಳು ತಯಾರು ಮಾಡಿ ಅನೇಕ ವ್ಯಾಪಾರಿಗಳಿಗೆ ಕಳುಹಿಸುತ್ತೇವೆ. ಇದುವರೆಗಿನ ಅನುಭವದ ಮೇಲೆ ನಮ್ಮ ಪುಡಿದಾರ ಹಗ್ಗಗಳು ಕೆಲಸ ಸ್ವಚ್ಛವೂ, ದಾರವೂ ಸರಸ ಬಲ್ಲಿಯೂ, ಸರಕಿನ ನಾಣ್ಯದಲ್ಲಿಯೂ ದಕ್ಷಿಣ ಇಂಡಿಯಾದಲ್ಲಿ ಹೆಸರು ಪಡೆದದಾಗಿದೆ. ವ್ಯಾಪಾರಿಗಳಿಗೆ ಸ್ವಲ್ಪ ಲಾಭದಲ್ಲಿ ಸರಕುಗಳು ಕಳುಹಿಸುತ್ತೇವೆ. ಒಂದು ಸಾರಿ ನಮ್ಮಲ್ಲಿಂದ ತರಿಸಿನೋಡಿದರೆ ನಮ್ಮ ಪುಡಿದಾರಗಳ ಗುಣವು ತಿಳಿಯುವುದು. ಬೆಳ್ಳಿ ದಾರದ ಪ್ರಕಾರ ಸರಕುಗಳಿಗೆ ದಾರದ ಹಾಕಿ ಕಳುಹಿಸುತ್ತೇವೆ.

ಕೆ. ಎಸ್. ನಾರಾಯಣಶೆಟ್ಟಿ ಅಂಡ್ ಸನ್ಸ್,
ಸರಾಪು ವ್ಯಾಪಾರ,
24–8–'28 — ಶಿವ್ವಾಪೇಟೆ. ಸೇಲಂ. (ದಕ್ಷಿಣ ಇಂಡಿಯಾ).

ಅಪೂರ್ವ ಸುಸಂದರ್ಭ.

ನಿಮ್ಮ ಹಾಳಾದ ಶರೀರ ಪ್ರಕೃತಿಯನ್ನು ಸರಿಪಡಿಸಲು

ಆತಂಕನಿಗ್ರಹ ಮಾತ್ರೆಗಳನ್ನು

ಉಪಯೋಗಿಸಿರಿ.

32 ಮಾತ್ರೆಗಳುಳ್ಳ ಡಬ್ಬಿಗೆ ಬರೇ ರೂಪಾಯಿ 1/- ಮಾತ್ರ.

ಇತರ ಮಾಹಿತಿಗೆ ದಯಮಾಡಿ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಆತಂಕನಿಗ್ರಹ ಔಷಧಾಲಯ,
ನಂ. 26, ಬ್ರಾಡ್ವೇ, ಮದರಾಸು.

ಏಜಂಟರು:—
ಮೆಸರ್ಸ್ ಲೇಡೆಲ್ ಎಂಡ್ ಕಂಪೆನಿ,
ಮಂಗಳೂರು.

The Canara Bank, Limited, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906. — 1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Branches: Karkal, Kasaragod, Cochin, Udipi, Gangolli, Coondapur, and Bombay.

ಬ್ರಾಂಚುಗಳು: ಕಾರ್ಕಳ, ಕಾಸರಗೋಡು, ಕೊಚ್ಚಿ, ಉಡುಪಿ, ಗಂಗೊಳ್ಳಿ ಕುಂದಾಪುರ ಮತ್ತು ಬೊಂಬಾಯಿ.

Authorised and fully paid up Capital Rs. 300,000—0—0

Reserve and other sinking Funds „ 3,37,715—8—7

Amount invested on G. P. Notes Rs. 4,87,793—6—0

Rates of interest on fixed deposits at Head Office and Branch 6¼% for 2 Years; 6% „ 1 Year

Season deposits of Rs. 1000/- & above terminable by the end of June are received at 6¼% p. a.

ಅಧಿಕಾರಗೊಳಿಸಲ್ಪಟ್ಟು ಪೂರ್ಣವಾಗಿ ಕೊಟ್ಟ ಮೂಲಧನವು ರೂ. 300,000—0—0

ರಿಸರ್ವ್‌ನಿಧಿ ಮತ್ತು ಇತರ ಫಂಡುಗಳು 3,37,715—8—7

ಗವರ್ನಮೆಂಟ್ ಪ್ರೋಮಿಸರಿ ನೋಟುಗಳಲ್ಲಿ ಹಾಕಿದ ರೂ. 4,87,793-6-0

ಕಾಯಂ ಠೇವಣಾತಿಗಳ ಮೇಲೆ ಕೊಡಲ್ಪಡುವ ಬಡ್ಡಿ ದರ 2 ವರುಷಗಳಿಗೆ ಶೇಕಡಾ 6¼% 1 ವರುಷಕ್ಕೆ ಶೇ 6.

ಜೂನ್ ಅಂತ್ಯದ ವರೆಗೆ ವ್ಯಾಪ್ತಿ ಆಗುವ ರೂ. 1000/- ಕ್ಕೂ ಹೆಚ್ಚಿನ ಮೊತ್ತದ ಡಿಪೋಸಿಟುಗಳಿಗೆ ಬಡ್ಡಿ ದರ ಶೇಕಡಾ 6¼.

Current Account Deposits received and interest allowed on daily balance of Rs. 50/- and above that on multiples of Rs. 10/- @ 3% from 1st January to 30th June and @ 2% from 1st July to 31st December. No interest will be allowed unless the depositor earns not less than Rs. 5/- during a period of 6 months ending either 30th June or 31st December in any year.

For further particulars please apply to—

Canara Bank Ltd.
Mangalore, 10—12—1928

K. Venkat Rao,
Secretary

THE PANGAL NAYAK BANK, LTD.

Head Office: Udipi, S. K.] *Estd. 1920.* **[Branch Office: Mangalore, S. K.**

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು: ಉಡುಪಿ, ದ. ಕ.] ಸ್ಥಾಪಿತವಾದದ್ದು 1920. [ಬ್ರೇಂಚು ಆಫೀಸು: ಮಂಗಳೂರು, ದ. ಕ.

ಬೇಂಕರರು—ಇಂಪೀರಿಯಲ್ ಬೇಂಕ್ ಒಫ್ ಇಂಡಿಯಾ, ಮಂಗಳೂರು ಮತ್ತು ಬೊಂಬಾಯಿ.

ನಿಯಮಿತ ಮೂಲಧನ ರೂಪಾಯಿ 2,00,000/-

ಚಂದಾ ಮೂಲಕ ಹಾಕಲ್ಪಟ್ಟ ವಸೂಲಾದ ಮೂಲಧನ ರೂ. 1,50,000-

ಆಪದ್ಧನ ಇತ್ಯಾದಿ ನಿಧಿಗಳು ರೂ. 1,00,000/

FIXED DEPOSITS are received for 3 months at 5%, for 6 or 9 months at 5½%, of 12, 15, 18 or 21 months at 6¼%, and for 24 months at 6¼. Interest being payable every 3 Months. SEASON DEPOSITS from January to June at 6¼% SHORT NOTICE DEPOSITS, withdrawable by giving 15 days previous notice after one month at 4½% and CUMULATIVE DEPOSITS by monthly instalments are also received. SAVINGS BANK DEPOSIT ACCOUNTS may be opened and interest allowed at 4½%, CURRENT DEPOSIT ACCOUNTS may also be opened and interest allowed at 3% from January to June and at 2 from July to December. Loans granted on personal and approved securities on reasonable terms. Banking business of every description transacted.

Further information may be had on application to the Secretary at the HEAD OFFICE or to the AGENT at BRANCH OFFICE.

ಕಾಯಂ ಠೇವಣಾತಿಗಳು 3 ತಿಂಗಳುಗಳಿಗೆ ಸಾ. ಶೆ. 5 ರಂತೆಯೂ, 6 ಯಾ 9 ತಿಂಗಳುಗಳಿಗೆ ಸಾ. ಶೆ. 5½ ರಂತೆಯೂ, 12, 15, 18, ಯಾ 21 ತಿಂಗಳುಗಳಿಗೆ ಸಾ. ಶೆ. 6¼ ರಂತೆಯೂ, 24 ತಿಂಗಳುಗಳಿಗೆ ಸಾ. ಶೆ. 6¼ ರಂತೆಯೂ, ಪ್ರತಿ 3 ತಿಂಗಳುಗಳಿಗೆ ಬಡ್ಡಿ ಕೊಡುವ ಶರ್ತದ ಮೇಲೆ ಅಂಗೀಕರಿಸಲ್ಪಡುವವು. ಮುದ್ದತ ಠೇವಣಾತಿಗಳು (ಜನವರಿಯಿಂದ ಜೂನ್ ಅಂತ್ಯದ ವರೆಗೆ) ಸಾ. ಶೆ. 6¼ ರಂತೆಯೂ ಅಲ್ಪಾವಧಿ ಠೇವಣಾತಿಗಳು ಸಾ. ಶೆ. 4½ ರಂತೆಯೂ, ಸಂಚಯ ಠೇವಣಾತಿಗಳ ಪ್ರಯೋಜನಕರವಾದ ರೀತಿಯಂತಲೂ, ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಸಾ. ಶೆ. 4½ ರಂತೆಯೂ, ಚಾಲ್ತಿ ಠೇವಣಾತಿಗಳು ಜನವರಿಯಿಂದ ಜೂನ್ ಅಂತ್ಯದ ವರೆಗೆ ಸಾ. ಶೆ. 3 ರಂತೆಯೂ, ಜುಲಾಯಿ ತಿಂಗಳಿಂದ ಡಿಸೆಂಬರ ಅಂತ್ಯದ ವರೆಗೆ ಸಾ. ಶೆ. 2 ರಂತೆಯೂ ಅಂಗೀಕರಿಸಲ್ಪಡುವವು.

ಸಾಲಗಳು ಯೋಗ್ಯವಾದ ಜವಾಬ್ದಾರಿಗಳ ಮೇಲೆ ನ್ಯಾಯವಾದ ರೀತಿಯಲ್ಲಿ ಕೊಡಲ್ಪಡುವವು.

ಕಾರ್ಯಕ್ರಮಗಳ ಮತ್ತು ಹೆಚ್ಚಿನ ಮಾಹಿತಿ ಬಗ್ಗೆ ಹೆಡ್ ಆಫೀಸಿನ ಸೆಕ್ರೆಟರಿಯವರಿಗೂ ಯಾ ಬ್ರೇಂಚ್ ಆಫೀಸಿನ ಏಜಂಟರಿಗೂ ಬರಕೊಳ್ಳುವುದು.

ಬೇಂಕಿನ ಆಫೀಸು, ಉಡುಪಿ,
ತಾ. 16—10—'28.

ಪಿ. ಲಕ್ಷ್ಮಣ ನಾಯಕ್,
ಆಫೀಸಿಯೇಟಿಂಗ್ ಸೆಕ್ರೆಟರಿ.

ಕೋವಿಮದ್ದು ವಗೈರೆ ಬೇಟೆಯ ಹತ್ಯಾರುಗಳ.

ಇಷ್ಟು ಇತ್ತು ಮೇಲಣ ಸಾಮಾನುಗಳನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಆಲಿಭಾಯಿ ಎಂಡ್ ಸನ್ಸ್,
ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ;
210, ಅಬ್ದುರ್ರಹಮಾನ್ ರಸ್ತೆ, ಮುಂಬಾಯಿ.

ಕಲಕತ್ತಾ ಎಕ್ಸಿಬಿಷನು.

1928.

ಹಿಂದೀ ರಾಷ್ಟ್ರೀಯ ಮಹಾಸಭೆಯ 43ನೇ ಅಧಿವೇಶನದವರಿಂದ ವ್ಯವಸ್ಥಾಪಿಸಲ್ಪಟ್ಟದ್ದು.

ಅಪೂರ್ವ ಸುಸಂದರ್ಭ.

ಸ್ವದೇಶಕ್ಕೆ ಸಂಬಂಧಿಸಿದ ಮಾಲು ತಯಾರಿಸುವವರಿಗೂ, ಸಾಹುಕಾರರಿಗೂ, ವ್ಯಾಪಾರಿಗಳಿಗೂ, ಪ್ರದರ್ಶಕರಿಗೂ ಚಿತ್ರಕಾರರಿಗೂ, ಕಲಾಕೋವಿದರಿಗೂ, ಅನುಕೂಲವಾಗುವಂತೆ, ಕಲಕತ್ತಾ ಎಗ್ಜಿಬಿಷನು 1928ನೇ ಡಿಸೆಂಬರ ತಿಂಗಳಿನ ಮಧ್ಯದಿಂದ 1929ನೇ ಇಸವಿ ಜನವರಿ ತಿಂಗಳಿನ ಮಧ್ಯದ ವರೆಗೆ ತೆರೆದುಕೊಂಡಿರುವದು.

ಎಗ್ಜಿಬಿಷನಿನ ಕಟ್ಟಡಗಳಲ್ಲಾಗಲೀ, ಪ್ರತ್ಯೇಕವಾಗಿ ಗೂಡಾರಗಳನ್ನು ಕಟ್ಟಿಸುವ ಸಲುವಾಗಿಯಾಗಲೀ ಸ್ಥಳಕೊಡಲಾಗುವದು. ಎಗ್ಜಿಬಿಷನು ಪಾರ್ಕ್‌ಸರ್ಕಸ್ ಎಂಬ ಸ್ಥಳದಲ್ಲಿ ನಡೆಯುವದು.

ಪೂರ್ಣ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

N. R. Sarkar,
Secretary,
The Calcutta Exhibition
3A, Hogg Street, CALCUTTA

ಪನಗಲ್ ರಾಜರ ನಿಧನ.

ಪನ್‌ಗಲ್ ರಾಜರ ಮರಣದಿಂದ ಬ್ರಾಹ್ಮಣೇತರರೊಳಗಿನ ಒಬ್ಬ ಪ್ರತಿಭಾಸಂಪನ್ನಧುರೀಣನು ಅಸ್ತಂಗತನಾದನು. ಡಾಕ್ಟರ್ ನಾಯರರು ಬ್ರಾಹ್ಮಣೇತರ ಪಕ್ಷವನ್ನು ವ್ಯವಸ್ಥೆಗೊಳಿಸಿದ ಮೇಲೂ ಸೌತ್ ಇಂಡಿಯನ್ ಲಿಬರಲ್ ಫೆಡರೇಶನೆಂದು ಬ್ರಾಹ್ಮಣೇತರರು ಒಂದು ರಾಜಕೀಯ ಸಂಸ್ಥೆಯನ್ನು ಸ್ಥಾಪಿಸಿದ ಮೇಲೂ, ಬ್ರಾಹ್ಮಣೇತರರು ಒಂದು ಪ್ರತ್ಯೇಕವಾದ ರಾಜಕೀಯ ಪಕ್ಷವಾಗಿ ವ್ಯವಸ್ಥೆಗೊಳಿಸಲ್ಪಟ್ಟು, ಅವರು ತಮಗಾಗಿ ವಿಧಾಯಿಸಿದ ರಾಜಕೀಯ ಕಾರ್ಯಕ್ರಮದ ಹಿತಾಹಿತಗಳ ವಿಷಯದಲ್ಲಿ ಬಹಳ ಭಿನ್ನಾಭಿಪ್ರಾಯವಿದೆಯೆಂದೂ, ಅವರು ಅನುಸರಿಸಿದ ಉಪಾಯಗಳನ್ನು ಇದೀ ಪ್ರಾಂತ್ಯದ ಬ್ರಾಹ್ಮಣೇತರರೇ ಸಾಕಷ್ಟು ಸ್ಪಷ್ಟವಾಗಿ ಖಂಡಿಸಿದೆಯೆಂದೂ ಕಳೆದ ಚುನಾವಣೆಗಳೇ ತೋರಿಸಿವೆ. ಆದರೆ ಸಾರ್ವಜನಿಕ ಸುಧಾರಣೆಯ ಬಗ್ಗೆಯೂ, ಹಿಂದೂಸಮಾಜದ ಸಂಸ್ಕರಣೆಗಾಗಿಯೂ ಬ್ರಾಹ್ಮಣೇತರರ ಸುಸಂಘಟನೆಯು ಅವಶ್ಯವಿದ್ದಿತೆಂದು ಬೇರೆ ಹೇಳಬೇಕಾಗಿಲ್ಲ. ಅಂತಹ ಸಾಮಾಯಿಕ ಚಳವಳವನ್ನು ಸರ್. ಪಿ. ತ್ಯಾಗರಾಯ ಚೆಟ್ಟಿಯವರು ತಮ್ಮ ಧುರೀಣತ್ವದಲ್ಲಿ ಕೈಕೊಂಡು ನಡಿಸಿದ ಮೇಲೆ, ಅವರ ನಂತರ ಪನಗಲ್ ರಾಜರೇ ಆ ಧುರೀಣತ್ವವನ್ನು ಕೈಕೊಂಡರು. ಪನಗಲ್ ರಾಜರು ರಾಜತಂತ್ರಜ್ಞರಲ್ಲಿ ಪ್ರಥಮ ಶ್ರೇಣಿಯವರೆಂಬುವುದು ಮದ್ರಾಸ್ ಸರಕಾರದಲ್ಲಿ ಅವರು ವಹಿಸಿದ ಸೂತ್ರದಾರ ಅಭಿನಯವೇ ತೋರಿಸುವುದು. ಇಂಡಿಯದ ಇಂಪೀರಿಯಲ್ ಸರಕಾರದ ಎಕ್ಸಿಕ್ಯೂಟಿವ್ ಕಮಿಟಿಗೆ ಲಾ ಮೆಂಬರರಾಗಿ ನೇಮಕ ಹೊಂದಲಿದ್ದ ಸರ್. ಸಿ. ಪಿ. ರಾಮಸ್ವಾಮಿಯವರಿಗೆ ಪನಗಲ್ ರಾಜರೇ ಅಂತಹ ಮೆಂಬರುತನವನ್ನು ಸಿಕ್ಕದ ಹಾಗೆ ಮಾಡಲು ಸಮರ್ಥರಾದರೆಂಬುದೇ, ಅವರು ಸರಕಾರದಲ್ಲಿ ನಡೆಸುವ ಅಸಾಮಾನ್ಯ ಶಕ್ತಿಯ ಉದಾಹರಣೆಯಾಗಿರುತ್ತದೆ. ಹಿಂದೂ ಉಂಬಳಿಗಳ ಕಾಯಿದೆಗೆ ಇವರೇ ಕಾರಣಕರ್ತರೆಂಬುವುದೂ ಇವರ ಶ್ರೇಯಸ್ಸಿನ ಕಾರಣವೆನ್ನಬೇಕು. ಹಿಂದೂ ಮತಸಂಸ್ಥೆಗಳಲ್ಲಿ ರೂಢಮೂಲವಾಗಿ ಹೋಗಿರುವ ಅನಾಚಾರ ದುರ್ವ್ಯಯಗಳನ್ನು ಕಿತ್ತು ಹಾಕಲು ಇವರ ಧೈರ್ಯದಿಂದ ಮುಂದುವರಿದುದಕ್ಕಾಗಿ ಇಡೀ ಹಿಂದೂ ಸಮಾಜವೇ ಕೃತಜ್ಞವಾಗಿರಬೇಕು. ಬ್ರಾಹ್ಮಣೇತರರು ಅವರ ಅವಶ್ಯವಾದ ಚಳವಳದಲ್ಲಿ ತಾವು ಹಿಂದೂಗಳಾಗಿ ಬ್ರಾಹ್ಮಣೇತರರೆಂಬ ಭಾವನೆಯನ್ನು ಪ್ರೇರಿಸಿದುದಾದರೆ ಬ್ರಾಹ್ಮಣೇತರರ ಈ ಚಳವಳಕ್ಕೆ ಮತ್ತಷ್ಟು ಶೋಭೆಯು ಇರುತ್ತಿದ್ದಿತು. ಹೇಗೂ ಪನಗಲ್ ರಾಜರ ನಿಧನದಿಂದ ಬ್ರಾಹ್ಮಣೇತರರ ಉಜ್ವಲ ವ್ಯಕ್ತಿಯು ನಷ್ಟವಾಯಿತು.

ಎಸೋಸಿಯೇಟೆಡ್ ಚೇಂಬರ್ಸ

ಮೇಲಿನ ಹೆಸರಿನ ವ್ಯಾಪಾರೀ ಸಂಸ್ಥೆಯ ವಾರ್ಷಿಕ ಸಭೆಯು ಕಲ್ಕತ್ತದಲ್ಲಿ ಕೂಡಿರುತ್ತದೆ. ಇದರಲ್ಲಿ ಯುರೋಪಿಯನರಿಗೇನೇ ಪ್ರಾಬಲ್ಯ ಹೆಚ್ಚು. ಯುರೋಪಿಯನ್ ವ್ಯಾಪಾರೀ ಸಂಸ್ಥೆಗಳು ಕೂಡಿ ಈ ಎಸೋಸಿಯೇಟೆಡ್ ಚೇಂಬರ್ ಒಫ್ ಕೊಮರ್ಸ್ ಎಂಬ ಸಂಸ್ಥೆಯು ಸ್ಥಾಪಿತವಾಯಿತು. ಸಂಸ್ಥೆಯು ವ್ಯಾಪಾರಿಗಳದ್ದಾದರೂ ರಾಜಕೀಯ ಪ್ರಾಬಲ್ಯವು ಇದರದ್ದು ಹೆಚ್ಚು. ಇಂತಹ ಸಂಸ್ಥೆಯೊಡನೆ ಸರಕಾರವು ಬಹಳ ಮೈತ್ರಿಯಿಂದ ನಡೆಯುವುದನ್ನು ನೋಡಿದರೆ ಸರಕಾರದ ಬಿಳೇ ಧೋರಣವು ವ್ಯಕ್ತವಾಗುವುದು. ಈ ಸಂಸ್ಥೆಯ ಸಭೆಗೆ ವ್ಯಾಸರಾಯರು ಹಾಜರು ಇದ್ದರು. ಮತ್ತು ಅವರು ಬಹಳ ಆತ್ಮೀಯವಾಗಿ ಮಾತನಾಡಿರುವರು. ಪ್ರಾಂತಗಳನ್ನೆಲ್ಲಾ ಸಂಚರಿಸಿ ಬಹಳ ಆದರಾತಿಥ್ಯೋಪಚಾರಗಳನ್ನು ಹೊಂದಿ ಅದರೊಡನೆ, ಕೊಡೋಣಾಗುವ ಮಾನಪತ್ರಗಳಿಗೆ ಬಹಳ ಜಾಗರೂಕತೆಯಿಂದ "ಆಲೋಚಿಸಲಾಗುವುದು" ಎಂಬ ದ್ವಯಾರ್ಥದ ಜವಾಬನ್ನು ಸಾಮಾನ್ಯ ಪ್ರಜೆಗೆ ಕೊಡುವ ವ್ಯಾಸರಾಯಿಗಳವರು ಈ ಎಸೋಸಿಯೇಟೆಡ್ ಚೇಂಬರ ಒಫ್ ಕೊಮರ್ಸ್‌ನ ಸಭೆಯಲ್ಲಿ ಬಾಯಿಬಿಟ್ಟು ಸರಕಾರದ ಧೋರಣವನ್ನು ಮಾತನಾಡಿರುವರಲ್ಲದೆ ಅಂತಹ ಧೋರಣವನ್ನು ಸುಲಭವಾಗಿ ಯುರೋಪೀಯ ಕೇಳಿಕೆಗಳಿಗೆ ಅಧೀನವಾಗಿ ಮಾಡಲು ಒಪ್ಪಿತವನ್ನು ತೋರಿಸಿರುವರು. ಸರಕಾರದ ಶಿಖರವಾಗಿರುವವರೂ ಇಂತಹ ಪಕ್ಷಪಾತವನ್ನು ತೋರಿಸುವುದು ಖಂಡನೀಯವಿದೆ. ಈ ಕೇಳಿಕೆಗಳನ್ನು ಕೇಳಲಿಕ್ಕೂ, ಅಭಿಪ್ರಾಯಭೇದಗಳು ಬರುವಾಗ ಸಮಜಾಯಿಸಲಿಕ್ಕೂ ಸರಕಾರೀ ಮೆಂಬರರು ಆ ಸಭೆಗೆ ಹೋಗಿ ಸರಕಾರದ ಕಡೆಯಿಂದ ಮಾತನಾಡುವರು. ಈ ತರದ ಸಲಿಗೆಯನ್ನು ನಿಷ್ಪಕ್ಷಪಾತವಾಗಿ ಸರಕಾರವು ಅನುಸರಿಸುವುದಾದರೆ ಕಾಂಗ್ರೆಸ್ಸಿಗೂ ಮತ್ತು ಇನ್ನಿತರ ಎಲ್ಲಾ ರಾಜಕೀಯ ಪಕ್ಷ ಪಂಗಡಗಳಿಗೂ [illegible] ಪ್ರತಿನಿಧಿಗಳನ್ನು [illegible] ಸ್ವೀಕರಿಸುವರು. ಇದು ಯಾವ ತರದ ನ್ಯಾಯವೆಂದು ಎಲ್ಲರೂ ಅನ್ನುತ್ತಿರುವರು. ಸರ್ [illegible] ಸರಕಾರದ ಕಡೆಯಿಂದ ಸರಕಾರದ ಧೋರಣವನ್ನೇ ನಿರೂಪಿಸಿ ಈ ಸಭೆಯೊಡನೆ ಸಹಕರಿಸಿರುವರು. ಈ ಸಭೆಗೆ ಹಿಂದೀಯರ ಹಿತವಿಲ್ಲವೆಂದೂ, ಇವರ ಹಿತಗಳು ಹಿಂದೂಸ್ಥಾನದ ಹೊರಗಿನವುಗಳೆಂದೂ ಇವರು ಮಾ| ಹಾಡಿಯವರು ಹಿಂದೀ ಹಣಗು ವ್ಯಾಪಾರದ ರಕ್ಷಣೆಗಾಗಿ ತಂದ ಠರಾವನ್ನು ವಿರೋಧಿಸಿದುದನ್ನು ನೋಡಿದರೆ ಕಾಣುವುದು. ಮನೆಯೆಲ್ಲಾ ನಮ್ಮದೇ ಆದರೂ ಬಚ್ಚಲು ತಂಬಿಗೆಗಳು ಯುರೋಪಿಯನರಕೈಯಲ್ಲಿಯೇ ಇಟ್ಟುಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆಯೆಂದು ಇದು ತೋರಿಸುತ್ತದೆ.

ಮಜೂರ ಮುಷ್ಕರ.

ಮುಂಬಾಯಿಯ ಮಜೂರ ಮುಷ್ಕರಗಳ ಅಖೈರಿಯು ಇನ್ನೂ ಆಗಿಲ್ಲ. ಒಂದಲ್ಲ ಒಂದು ಕಾರಣದಿಂದ ಆಗಾಗ ತೊಂದರೆಗಳು ಸಂಭವಿಸುತ್ತಾ ಇವೆ. ಒಂದು ಕಡೆಯಲ್ಲಿ ಪೋಲೀಸರಿಗೂ ಕೂಲಿಕಾರರಿಗೂ ಬಡಿದಾಟವಾಗಿ ಪೋಲೀಸರು ಕೂಲಿಕಾರರ ಮೇಲೆ ಗುಂಡನ್ನು ಹಾಯಿಸಬೇಕಾಗಿ ಬಂತು. ಮಜೂರ ಮುಷ್ಕರಗಳಿಂದ ಹಿಂದೀ ಕೈಗಾರಿಕೆಯಾದ ಮುಂಬಾಯಿಯ ಗಿರಣಿ ಉದ್ಯೋಗವು ಬಹಳ ಕಷ್ಟದಲ್ಲಿರುವಾಗ ಯುರೋಪಿಯ ಕೈಗಾರಿಕೆಗಳು ಎಷ್ಟೇ ಕಷ್ಟಗಳು ಮಜೂರರಿಗೆ ಉಂಟಾದರೂ ಚೆನ್ನಾಗಿ ನಡೆಯುತ್ತಲೇ ಇವೆ. ಮಜೂರ ಮುಂದಾಳುಗಳು ಪರದೇಶೀಯ ಹಣದ ದಾಕ್ಷಿಣ್ಯದಲ್ಲಿವೆಯಾದುದರಿಂದ, ಇಲ್ಲಿಯ ಹಿತಾಹಿತಗಳನ್ನು ಅಲಕ್ಷಿಸಿ ಪರದೇಶೀಯ ಚಳವಳಗಾರರ ಆಜ್ಞೆಗಳಿಗೆ ವಿಧೇಯವಾಗಿ ನಡೆಯಬೇಕಾಗಿ ಒಂದು ಹಿಂದೀ ಚಳವಳವು ಅನಾವಶ್ಯವಾದರೂ ನಡಿಯುತ್ತಲೇ ಇರಬೇಕಾಗುವುದು. ಮಜೂರ ಚಳವಳವು ಪರದೇಶೀಯ ಸಹಾಯವನ್ನು ತಿರಸ್ಕರಿಸಿ, ದೇಶೀಯರ ಸಹಾನುಭೂತಿಯಿಂದ ನಡೆದದ್ದಾದರೆ ಮಜೂರ ಮುಂದಾಳುಗಳಲ್ಲಿ ಜವಾಬ್ದಾರಿಯು ಇದ್ದು, ತಮ್ಮ ಚಳವಳವನ್ನು ಜನತೆಯ ಅಭಿಪ್ರಾಯಕ್ಕೆ ಸರಿಯಾಗಿ ರೂಪಿಸುವ ಅವಶ್ಯಕತೆಯನ್ನು ಕಾಣುತ್ತಿದ್ದರು. ಆದರೆ ಈಗಿನ ಸ್ಥಿತಿ ನೋಡಿದರೆ ಈ ಚಳವಳಗಾರರು ಪರದೇಶೀಯ ಹಣವನ್ನು ತರಿಸುವುದರಲ್ಲೇ ಆಸಕ್ತರಾಗಿರುವರೆಂದು ಕಾಣುವುದು. ಇನ್ನೊಂದು ವಿಶೇಷದ ಸಂಗತಿಯೇನೆಂದರೆ ಸರಕಾರದ ಅಲಕ್ಷ್ಯ. ಅದೇ ಯುರೋಪಿಯ ಕೈಗಾರಿಕೆಗಳಿಗೆ ಈ ಮುಷ್ಕರಗಳು ಸಂಬಂಧಿಸಿದ್ದುದಾದರೆ ಕೂಡಲೇ ಸರಕಾರವು ದಬ್ಬಾಳಿಕೆಯನ್ನು ಆರಂಭಿಸುತ್ತಿತ್ತು. ಜೇಡಾ ಜೆಲ್ಲೆಯಲ್ಲಿ ಮಜೂರರು ನ್ಯಾಯವಾಗಿ ಮುಷ್ಕರ ಹಾಕಿದಾಗ ಸರಕಾರದ ವರ್ತನವೇ ಬೇರೆ ಆಗಿತ್ತು. ಕಲ್ಕತ್ತದಲ್ಲಿ, ಬ್ರಿಟಿಷರ ನಾರಿನ ಗಿರಣಿಗಳೇ ಅಧಿಕವಾಗಿರುವ ಕಡೆಯಲ್ಲಿ ಬಂದ ಒಬ್ಬ ಚಳವಳಗಾರರು, ಎಫ್. ಡಬ್ಲ್ಯು. ಜೋನ್ಸ್‌ನ್ ಎಂಬವರಿಗೆ ಕೂಡಲೇ ದೇಶವನ್ನು ಬಿಟ್ಟು ಹೋಗಬೇಕಾಗಿ ಸರಕಾರವು ಹುಕುಮನ್ನು ಕೊಟ್ಟು, ಹೋಗದಿದ್ದುದಕ್ಕೆ ಅವರನ್ನು ಕೈದುಮಾಡಿ ಬಿಟ್ಟಿರುವರು. ಮುಖ್ಯವಾಗಿ ಯುರೋಪೀಯ ಕೈಗಾರಿಕೆಗಳಿಗೆ ಬಾಧೆ ಒದಗಬಾರದಾಗಿ ಸರಕಾರದ ಎಚ್ಚರಿಕೆಯಾಗಿ, ಸೌತ್ ಇಂಡಿಯನ್ ರೈಲ್ವೆ ಮುಷ್ಕರವಾದಾಗ ಮುಂದಾಳುಗಳು ಕೈದುಮಾಡಲ್ಪಟ್ಟು ಹಲವು ತಿಂಗಳುಗಳ ವರೆಗೆ ಪೀಡಿಸಲ್ಪಟ್ಟರು. ಆದರೆ ಮುಂಬಾಯಿ ಗಿರಣಿಯ ಮುಷ್ಕರ ವರ್ಷವಾಗುತ್ತಾ ಬಂದರೂ ಇನ್ನೂ ತೀರಿಲ್ಲ. ಸರಕಾರವು ನಿಷ್ಪಕ್ಷಪಾತದ ಮುಸುಕನ್ನು ತೊಟ್ಟಿದೆ! ಸರಕಾರವು ಯಾವುದೊಂದು ಪಕ್ಷವನ್ನು ತೆಗೆದುಕೊಳ್ಳಬೇಕಾಗಿ ನಾವು ಹೇಳುವುದಿಲ್ಲ. ಆದರೆ ಈ ಜಗಳವನ್ನು ಹೆಚ್ಚುಕಾಲ ಮುಂದರಿಸಲಾಗುವುದಿಲ್ಲ. ನ್ಯಾಯಾನ್ಯಾಯವನ್ನು ವಿಚಾರಿಸಿ ಸ್ಪಷ್ಟವಾದ ತೀರ್ಮಾನವನ್ನು ಕೊಟ್ಟು ಗಿರಣಿ ಮಾಲೀಕರೂ ಮಜೂರರೂ ಅದರಂತೆ ನಡೆಯುವ ಹಾಗೆ ಮಾಡುವುದು ಸರಕಾರದ ಕರ್ತವ್ಯವಿದೆ.

ಎಲ್ಲಿಯ ಪ್ರೇರಣೆ?

ಕಳೆದ ವರುಷಗಳಲ್ಲಿ ಅಲ್ಲಲ್ಲಿ ನಡೆದ ಹಿಂದೂ ಮುಸಲ್ಮಾನ ಕಲಹಗಳ ಮೂಲ ಕಾರಣಗಳು ಅತೀ ಸಂಶಯಕರವಾದ ರೀತಿಯಲ್ಲಿ ತೋರಿಬರುತ್ತಿದ್ದವು. ಇವು ಹೇಗೆ ಉಂಟಾದುವು ಎಂದು ಈ ವರೆಗೆ ಯಾರಿಂದಲೂ ಹೇಳಲಾಗಿಲ್ಲ. ಆದರೆ ಪಂಜಾಬಿನಲ್ಲಿ ಕೈದುಮಾಡಲ್ಪಟ್ಟ ಸಂಯುಕ್ತ ಪ್ರಾಂತದ ಒಬ್ಬ C. I. D. ಯ ವಿಚಾರಣೆಯ ಸಮಯದಲ್ಲಿ C. I. D.ಗಳೇ ಹೇಗೆ ಅವಿಚಾರಿ ಯುವಕರನ್ನು ಅಧಃಪಾತಕ್ಕೆಳೆದು ಆ ಮೇಲೆ ಅವರನ್ನು ಅತ್ಯಾಚಾರಿಯೆಂದು ಸರಕಾರದ ಕೈಗೆ ಕೊಡುತ್ತಿದ್ದರೆಂಬುದು ತೋರಿಬಂದದೆ. ಇದರ ಇನ್ನೊಂದು ಪ್ರತ್ಯಕ್ಷ ನಿದರ್ಶನವು ಲಕ್ನೋದಲ್ಲಿ ಸೈಮನ್ ಸ್ವಾಗತದ ಸಮಯದಲ್ಲಿ ಸಿಕ್ಕಿತು. ಆಗ ಪಂಡಿತ ಜವಾಹಿರಲಾಲ ನೆಹರುರವರ ಮುಂದಾಳುತನದಲ್ಲಿ ಸೈಮನ್ ಬಹಿಷ್ಕಾರದ ಮೆರವಣಿಗೆಯು ರೈಲ್ವೆ ಸ್ಟೇಶನಿಗೆ ಬಂದಿತು. ಅಲ್ಲಿ ಪೋಲೀಸರು ಮುಂದಾಳುಗಳನ್ನೂ ಜನರನ್ನೂ ಲಾಹೋರಿನಲ್ಲಿ ಹೊಡೆದಂತೆಯೇ ಹೊಡೆದರು. ಆ ಕೋಪೋದ್ರೇಕದ ಸಮಯದಲ್ಲಿ ಒಬ್ಬ C. I. D.ಯು ಜವಾಹಿರಲಾಲ ನೆಹರುರವರ ಹತ್ತಿರ ಬಂದು "ನಿಮಗೆ ರಿವೊಲ್ವರ ತಂದು ಕೊಡುತ್ತೇನೆ"ಎಂದು ಸ್ವಯಂ ಸೇವಕತನವನ್ನು ತೋರಿದನು. ಆಗ ಈ ಯುವಕನು ಯಾರೆಂದು ತಿಳಿಯದೆ ಅವನ ದುಷ್ಟ ಆಲೋಚನೆಗಾಗಿ ಅವನನ್ನು ಗದ್ದರಿಸಿ ನೆಹರುರವರು ಅವನನ್ನು ಕಳುಹಿಸಿದರು. ಸ್ವಲ್ಪ ಸಮಯದ ಮೇಲೆ ನೋಡುವಾಗ ಅವನು C. I. D ಯೆಂದು ತಿಳಿದು ಬಂತು. ಊರೊಳಗಿನ ಗದ್ದಲಗಳ ಸಂದರ್ಭದಲ್ಲಿ C. I. D.ಗಳು ಇಂತಹ ಯಾವ ನೀಚ ಉಪಾಯವನ್ನು ಹೂಡಿ ಆ ಗದ್ದಲಗಳನ್ನು ಬೆಳೆಸುತ್ತಾರೆಂದು ಹೇಳಬರುವುದಿಲ್ಲ. ಊರಲ್ಲಿ ಜಾತೀಯ ವೈಷಮ್ಯವು ಪ್ರಕಟವಾಗಿರುವಾಗ ಒಬ್ಬರು ಹಿಂದೂವನ್ನು ಮುಸಲ್ಮಾನರು ಕೊಂದರೆಂದೂ, ಮುಸಲ್ಮಾನರು ಹಿಂದೂವನ್ನು ಕೊಂದರೆಂದೂ ಇಕ್ಕಡೆಗಳಲ್ಲಿಯೂ ವರ್ತಮಾನವನ್ನು ಹಬ್ಬಿ ಬಿಡುವರು. ದೆಂಕಿಯುರಿಯಲಿಕ್ಕೆ ಬೇರೆ ಕಿಚ್ಚೇ ಬೇಡ, ಮರುದಿನವೇ ಪತ್ರಿಕೆಗಳಲ್ಲಿ ಬಡಿದಾಟ, ಕೊಲೆಗಳ ವರ್ತಮಾನವು ಬರುವುದು. ಆದರೆ ಇದಕ್ಕೆ ಕಾರಣವಾದ ಸುಳ್ಳು ವರ್ತಮಾನವನ್ನು ಹಬ್ಬಿಸಿದವರಾರು? ಅದನ್ನೇ ಯಾರೂ ಹೇಳಲಾರರು. ಹಿಂದೂಸ್ಥಾನದ ಜಗಳಗಳಲ್ಲಿ ಇಂತಹ ಹೃದಯ ಹೀನ ಪ್ರೇರಕರು ಎಷ್ಟು ಮಂದಿ ಇಲ್ಲ? ಸರಕಾರದ ಒಂದಿಷ್ಟು ಅನ್ನಕ್ಕಾಗಿ ತಮ್ಮ ಆತ್ಮವನ್ನೇ ವಿಕ್ರಯಿಸಿ ಸುಖಿಸುವವರು ಎಷ್ಟು ಮಂದಿ ಇಲ್ಲ?

ನೋಟಗಳು
NOTES.

After ten years of long lost opportunity "citizen" has just now been able to announce the "expression of piety" of the Musalmans in Mangalore.

No one was ever of opinion that they were less pious in the past.

However the "citizen's" present announcement is made at a very opportune time.

"They are not a whit behind the other communities in manifesting their faith & zeal" says the "citizen".

And we have noticed the keen competition between the communities in this manifestation.

We pray "God save us from such manifestations of all communities".

ಸೆಂಟ್ರಲ್ ಲಂಡನ್ನಿನಲ್ಲಿ ಹೊಸದೊಂದು ಮಸೀದಿಯು ಕಟ್ಟಲ್ಪಡುವುದು. ಅದರ ಹತ್ತಿರದಲ್ಲಿ ಹಲವು ಚರ್ಚುಗಳೂ ಇರುವುವು. ಮೋಟಾರ ಮೊದಲಾದ ವಾಹನಗಳ ಶಬ್ದವು ಇಲ್ಲಿ ಪ್ರಚಂಡವಾಗಿದೆ. ಮಸೀದಿಯಲ್ಲಿ ಪ್ರಾರ್ಥನೆ ಮಾಡುವ ಸಮಯದಲ್ಲಿಯಾದರೂ, ಈ ಚರ್ಚುಗಳಿಗೆ ಘಂಟೆ ಬಾರಿಸಲಿದ್ದರೆ, ಅಥವಾ ಮೋಟಾರುಗಳು ಅತ್ತ ಹಾದುಹೋಗುವುದಾದರೆ ಲೈಸನ್ಸು ಪಡೆಯಬೇಕೆಂದು ಮಾಡಿದರೆ ಒಳ್ಳೆಯದಿತ್ತು.

ಮಂಗಳೂರು ಮಸೀದಿ ಹತ್ತಿರವಿರುವ ಅವಲಕ್ಕಿ ಒನಕೆಗಳಿಗೂ ಲೈಸನ್ಸ ಆಗತ್ಯವಿದ್ದಿತೊ ಎಂಬ ಹೆದರಿಕೆಯು ಉಂಟಾಗಿದೆ.

ರಾಷ್ಟ್ರಬಂಧುವಿನಲ್ಲಿ — ಶಳ್ಳಿಯ ಎದುರಲ್ಲಿ ಮಾತ್ರ ಗಲಭೆ ಎದ್ದುದರಿಂದ ಇದಕ್ಕೆ ಮತದ್ವೇಷದ ಬಣ್ಣವು ಬಂದಿಲ್ಲ.

ನ್ಯಾಯಕ! ದೇವಸ್ಥಾನದ ಎದುರು ಆದದ್ದಾದರೆ ಬರುತ್ತಿತ್ತು! (ಇದು ನನ್ನ ಸೂಚನೆ).

ಯಾವುದರ ಎದುರು ಗಲಭೆ ಆದರೆ ಮತದ್ವೇಷದ ಬಣ್ಣವು ಬರುತ್ತಿತ್ತೆಂದು ಯಾರಾದರೂ ತಿಳಿಸುವರೇ!

ಕಲಿವಾಹನ ಶಕ ೧೮೫೦ನೆಯ ವಿಭವಸಂವತ್ಸರದ ಮಾರ್ಗಶಿರ ಶುಕ್ರವಾರದಿಂದ ವಿಭವ ಸಂವತ್ಸರದ ಮಾರ್ಗಶಿರ ಬ| ೨ ಶುಕ್ರವಾರದ ವರೆಗಿನ ಪಂಚಾಂಗ.

(೧೯೨೮ನೆಯ ವೃಶ್ಚಿಕ (ಜಾರ್ದ)

ತಾರೀಖು	ವಾರ	ತಿಥಿ	ಘಳಿ.	ನಕ್ಷತ್ರ	ಘಳಿ.	ಸೌರದಿನ	ಸೂರ್ಯ ಉ	ಸೂರ್ಯ ಅಸ್ತ
22	ಶನಿ	[illegible]	[illegible]	ಅಶ್ವಿನೀ	[illegible]	[illegible]	6.50	6 8
23	ರವಿ	[illegible]	[illegible]	ಭರಣೀ	[illegible]	[illegible]	6 50	6. 9
24	ಸೋಮ	[illegible]	[illegible]	ಕೃತ್ತಿಕಾ	[illegible]	[illegible]	6.51	6. 9
25	ಮಂಗಳ	[illegible]	[illegible]	ರೋಹಿಣೀ	[illegible]	[illegible]	6 51	6.10
26	ಬುಧ	○	[illegible]	ಮೃಗಶಿರಾ	[illegible]	[illegible]	6 52	6.10
27	ಗುರು	[illegible]	[illegible]	ಆರ್ದ್ರಾ	[illegible]	[illegible]	6.52	6.11
28	ಶುಕ್ರ	[illegible]	[illegible]	ಪುನರ್ವಸು	[illegible]	[illegible]	6,53	6.12

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಕಾವು) Maximum ಹೆಚ್ಚಾದ	Minimum ಕಡಿಮೆ	Rainfall. ಮಳೆ ದಿನದ ಮಳೆ	ಒಟ್ಟು ಮಳೆ.
14	90— 2	99 — 2	—	—
15	90— 4	69— 2	0—11	—
16	87— 8	67— 8	0—01	—
17	91— 0	68— 2	—	—
18	91— 0	67— 9	—	—
19	89— 6	68— I	—	—
20	89— 6	66— 9	—	—
				124-70

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಆ.	ವರೆಗೆ ರೂ. ಆ.
ಮುಷ್ಟಿ	...	7— 12	8 — 12
ಗಾಡ್ಳು	...	7 — 4	7— 6
[illegible]	...	6 — 8	7— 0
ಹೊಸ ರಾಶಿ	...	6 — 0	6 — 5
ಊರಿ ಅವ್ವಲ್ ಬೆಳ್ತಿಗೆ	...	7— 8	8 — 14
[illegible] ಬೆಳ್ತಿಗೆ ಗೋಣಿ ಗಳ್ಗೆ	...	12— 8	—
[illegible] ಬೆಳ್ತಿಗೆ ಮುಡಿ ಗಳ್ಗೆ	...	6 —12	7— 0
[illegible] ಗೋಣಿ ಗಳ್ಗೆ	...	18— 0	19— 0
[illegible] ಗೋಣಿ ಗಳ್ಗೆ	...	7 — 0	9 — 4
[illegible] ಗೋಣಿ ಗಳ್ಗೆ	...	14 —12	16 — 0
[illegible] ಗೋಣಿ ಗಳ್ಗೆ	...	14 — 8	—
[illegible] ಗೋಣಿ ಗಳ್ಗೆ	...	18 — 0	26 — 0
[illegible] ಗೋಣಿ ಗಳ್ಗೆ	...	14 — 8	16 -
[illegible] ಗೋಣಿ ಗಳ್ಗೆ	...	13 - 0	14 -
[illegible] ಖಂಡಿ ಗಳ್ಗೆ	...	47— 8	55 — 0
[illegible] ಗೋಣಿ ಗಳ್ಗೆ	...	4— 8	4 —12
[illegible] ಖಂಡಿ ಗಳ್ಗೆ	...	130- 0	-
[illegible] ಖಂಡಿ ಗಳ್ಗೆ	...	47— 8	48 — 8
[illegible] ಖಂಡಿ ಗಳ್ಗೆ	...	35 — 8	46 — 4
[illegible] ಮುಡಿ ಗಳ್ಗೆ	...	7— 8	7—10
[illegible] ಗಳ್ಗೆ	...	8— 0	8 — 6
[illegible] ಬೆಳ್ತಿಗೆ ಗಳ್ಗೆ	...	7— 2	7 - 4
[illegible] ಸಕ್ಕರೆ ಮುಡಿ ಗಳ್ಗೆ	...	3 —11	3 —12
[illegible] ಮೆಣಸು	...	6 — 0	6 — 8
[illegible] ಮುಡಿ ಗಳ್ಗೆ	...	3 — 4	4 — 0
[illegible] ಮುಡಿ ಗಳ್ಗೆ	...	3— 4	—
[illegible] ಮುಡಿ ಗಳ್ಗೆ	...	6— 4	5 - 12
[illegible] ಕಾಫಿ ಖಂಡಿ ಗಳ್ಗೆ	...	378— 0	395— 0
[illegible] ಖಂಡಿ ಗಳ್ಗೆ	...	180— 0	210— 0
[illegible] ಖಂಡಿ ಗಳ್ಗೆ	...	523- 0	524— 8
[illegible] ಮುಡಿ ಗಳ್ಗೆ	...	4 — 0	60 —
[illegible] ಮುಡಿ ಗಳ್ಗೆ	...	3 — 5	3— 7
[illegible] ಖಂಡಿ ಗಳ್ಗೆ	...	40 — 0	42 — 8
[illegible] ತಗಡು ಗಳ್ಗೆ	...	16— 8	16 —12
[illegible] ಪಾತ್ರೆಗಳು ಮಣ ಗಳ್ಗೆ	...	21 — 0	22 -
[illegible] ಸೀಸ ಗಳ್ಗೆ	...	15— 0	—
[illegible] ತಗಡು ಮಣ ಗಳ್ಗೆ	...	14— 8	16 — 8
[illegible] ಗಳ್ಗೆ	...	13—5—6	—
[illegible] ಖಂಡಿ ಗಳ್ಗೆ	...	70 —	85 — 0

ಒಂದೇ ದಾರಿ

ಆಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಷ್ಕಂಟಕವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಪ್ರಯವಾಗಲಿ ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು,

ಮತ್ತು

ಸ್ತ್ರೀಪುರುಷರನ್ನು ಆರೋಗ ದೃಢಗಾತ್ರರಾಗಿರಿಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ದೌರ್ಬಲ್ಯ, ವಿಸ್ಮಾರ, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಿಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಚಿಂತಾಮಣಿ 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. ಉಜಿಲಸ್ ಮಾರ್ಟ್, ಹಂಪನಕಟ್ಟಾ, ಮಂಗಳೂರು. ದ. ಕನ್ನಡ



ತಯಾರಾಗಿವೆ   ತಯಾರಾಗಿವೆ!!

ಕಾಫಿ ಪ್ಲಾಂಟರರಿಗೂ, ತೋಟದವರಿಗೂ

ಬೇಕಾಗುವಂತಹ

ಚಕ್ ರೋಲ್‌ಗಳು

ಮೂರು ಸ್ಯಾಂಪಲ್‌ನಲ್ಲಿ ತಯಾರಿಸಲ್ಪಟ್ಟು ಮಾರಾಟಕ್ಕೆ ಸಿದ್ಧವಿವೆ.

ರಖಂ ತೆಗೆದುಕೊಳ್ಳುವವರಿಗೆ ರಿಯಾಯಿತಿ ದರವಿದೆ.

ಕ್ರಯಕ್ಕೂ, ಇತರ ಮಾಹಿತಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮೆನೇಜರ್,
ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಪರೀಕ್ಷಿಸಿರಿ!   ಖಾತ್ರಿಯಾಗುವದು!!
ಕಿಮ್ಮತ್ತು ಅಗ್ಗ   ಫಲಪ್ರಾಪ್ತಿಕರ

ಹೊಸದುರ್ಗ ಅಮೃತೇಶ್ವರಿ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

ಆಯುರ್ವೇದಿಕ್ ವೈದ್ಯ ಸಭೆಗಳಲ್ಲಿ ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ಯೆಂಬ ಬಿರುದು ಪಡೆದು ಪ್ರಸಿದ್ಧರಾದ 'ಧನ್ವಂತರಿ ಶ್ರೀ ವೈದ್ಯರತ್ನ ಪರಮೇಶ್ವರ ಮೂಸಾಂದ' ಅವರಿಂದ ಕೈಕೆಳಗೆ ವಿದ್ಯಾಭ್ಯಾಸ ಹೊಂದಿ ಅನುಭವಶಾಲಿಯಾದ [illegible] ವೈದ್ಯರಿಂದ ಕರೆಯೋಣವಾದ ಈ ಸ್ಥಾಪನೆಯಲ್ಲಿ ಸರ್ವ ಆಬಾಲವೃದ್ಧರಿಗೆ ಬಾಧೆ ಕೊಡುವಂಥಾ ಸಕಲ ತರದ ರೋಗಗಳನ್ನು ಪರೀಕ್ಷಿಸಿ ಚಿಕಿತ್ಸೆ ನಡಿಸೋಣಾಗುತ್ತದೆ. ಎಲ್ಲಾ ತರದ ಎಣ್ಣೆಗಳು, ಲೇಹಗಳು, ಘೃತಗಳು, ಚೂರ್ಣ, ಮಾತ್ರೆ, ಅರಿಷ್ಟಾಸವಗಳು ಇತ್ಯಾದಿ ಸಿದ್ಧೌಷಧಿಗಳು ನಮ್ಮಲ್ಲಿ ಯಾವಾಗಲೂ ಕಲಬೆರಕೆಯಿಲ್ಲದೆ ತಯಾರಿರುವವು. [illegible]

ವಾರದ ಪ್ರತಿ [illegible] ವೈದ್ಯಶಾಲೆಯಲ್ಲಿ ಕಾಣಬಹುದು

ಮೇನೇಜರ್,
ಅಮೃತೇಶ್ವರಿ ವೈದ್ಯಶಾಲಾ ಹೊಸದುರ್ಗ
ಪೋಸ್ಟ್ ಕಾಂಞಂಗಾಡ (ದ. ಕ

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(1923ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 1860ನೇ ಇಸವಿ XXIನೇ ಆಕ್ಟಿನ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟಿದೆ.)

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ ಶುದ್ಧ ಆಯುರ್ವೇದ ಔಷಧಗಳ ಉಪಯೋಗವು ಸಿಗುವಂತೆ ನಮ್ಮ "ಫಾರ್ಮಸಿ"ಯಲ್ಲಿ ಶಾಸ್ತ್ರರೀತ್ಯಾ ತಯಾರಿಸುವ ಔಷಧಿಗಳನ್ನು ಅಲ್ಪ ಬೆಲೆಗೆ ಮಾರಾಟಮಾಡಿ ಹುಟ್ಟಿಬರುವ ಲಾಭಾಂಶವನ್ನು ಸಂಘದ ಉದ್ದೇಶಗಳನ್ನು ಮುಂದುವರಿಸುವ ಬಗ್ಗೆ ವಿನಿಯೋಗಿಸಲ್ಪಡುತ್ತವೆ. 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ ತರಗತಿಯ ಪ್ರಶಸ್ತಿ ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೂ ನಮ್ಮಲ್ಲಿ ತಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೆ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,
ಡೊಂಗರಕೇರಿ, ಮಂಗಳೂರು.

ಅನುಕ್ರಮಣಿಕೆ.

ಮುಖ್ಯ ...
ಸ್ಥಳೀಯ ...
ವಿದೇಶ ವರ್ತಮಾನ
... ...
... ...
ವರ್ತಮಾನ ಸಂಗ್ರಹಗಳು
ಒಳದೇಶ ವರ್ತಮಾನ ... ೬-೭
ಸ್ಥಳೀಯ ಪತ್ರಗಳು—ಮಂಗಳೂರು, ಮಂಜೇಶ್ವರ, ಕುರ್ಕಳ್ಳಿ, ... , ಉಪ್ಪಳ, ಬಂಟ್ವಾಳ, ಪಾಣೆಮಂಗಳೂರು, ...
ಸ್ಥಳೀಯ ಸಮಾಚಾರಗಳು ... ೬-೯
ಹಿಂದೂಸ್ಥಾನಕ್ಕೆ ಹಿತಕರವಾದ ಸೂಚನೆಗಳು ... ೧೦
ಪತ್ರವ್ಯವಹಾರ ... ೭-೮

ಸ್ವದೇಶಾಭಿಮಾನಿ.

ತಾರೀಖು ೨೧ನೇ ಶುಕ್ರವಾರ ದಶಂಬರ ೧೯೨೮

ರಾಷ್ಟ್ರೀಯ ಸಭೆ.

ಬರುವ ವಾರದಲ್ಲಿ ಕಲ್ಕತ್ತದಲ್ಲಿ ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯು ಕೂಡುವುದು. ಇದೀ ವರುಷದ ರಾಜಕೀಯ ಇತಿಹಾಸದಲ್ಲಿ ಇದು ಅತ್ಯಂತ ಪ್ರಮುಖವಾದ ಐತಿಹ್ಯ ಘಟನೆಯಾಗಿರುತ್ತದೆ. ಕಳೆದ ರಾಜಕೀಯ ಪ್ರಗತಿಯ ಸಿಂಹಾವಲೋಕನವೂ, ಮುಂದಿನ ವರ್ಷದ ಗತಿರಚನೆಯೂ ಈ ಮಹಾ ಸಮ್ಮೇಲನದಲ್ಲಿ ಮಾಡಲ್ಪಡುವುದು. ಇಲ್ಲಿ ರಾಜಕೀಯ ರಂಗದಲ್ಲಿ ಪ್ರವೇಶಿಸುವವರೆಲ್ಲರ ದೃಷ್ಟಿಯೂ ಕೇಂದ್ರೀಕರಿಸಲ್ಪಡುವುದಲ್ಲದೆ ಭಾರತದ ಆಶೆ ಆಕಾಂಕ್ಷೆಗಳಿಗೆ ವ್ಯಕ್ತರೂಪವು ಕೊಡಲ್ಪಡುವುದು.

ಆ ಕಾರಣದಿಂದ ರಾಷ್ಟ್ರೀಯ ಮಹಾಸಭೆಯು ಕೂಡುವ ಸ್ಥಳವು ಆ ರಾಷ್ಟ್ರೀಯ ವಾರದಲ್ಲಿ ಇಡೀ ರಾಷ್ಟ್ರಕ್ಕೇನೇ ಒಂದು ಮಹಾಯಾತ್ರಾಸ್ಥಳವಾಗಿ ಪರಿಣಮಿಸುವುದು. ಮೂವತ್ತು ಮೂರು ಕೋಟಿ ಪರಾಧೀನ ಪ್ರಜೆಗಳ ಉದ್ವಿಗ್ನ ಭಾವನೆಯು ಅಲ್ಲಿ ಪ್ರತಿನಿಧಿಸಲ್ಪಡುವುದು. ಅಲ್ಲಿ ಕೂಡುವ ಸಾವಿರಾರು ಭಾರತ ಪುತ್ರರು ಭಾರತೀಯ ಸ್ವಾಧೀನತೆಯು ಕದನಕ್ಕಾಗಿ ಮುಂದೆ ಅನುಸರಿಸಬೇಕಾದ ಸೂತ್ರಗಳನ್ನು ರಚಿಸುವರು.

ಶ್ರೀ. ಮೋತಿಲಾಲ ನೆಹರುರವರು ಅಧ್ಯಕ್ಷರಾಗಿ ಕೂಡುವ ಈ ಮಹಾಸಭೆಯು ಅಷ್ಟು ಪ್ರಾಮುಖ್ಯವಿದೆ. ಮಾತ್ರವಲ್ಲ. ಹಿಂದೂಸ್ಥಾನದ ಭವಿಷ್ಯ ಶಾಸ್ತ್ರದಲ್ಲಿ ಎಷ್ಟು ಸರಿಯಬಹುದೆಂದು ಆಲೋಚಿಸಲು 'ಉದ್ಧಾರಂಭಾವನೆ'ಯೆಂದು ಬಂದಿರುವ ಸೈಮನ್ ಕಮಿಶನ್ನಿನ ಸಂದರ್ಭವು ಅವಶ್ಯವಾಗಿರುತ್ತದೆ. ನೆಹರು ಕಮಿಟಿಯ ವರದಿ, ಡೊಮಿನಿಯನ್ ಸ್ಟೇಟಸ್—ಸ್ವಾತಂತ್ರ್ಯ ಇವುಗಳ ವಾದ, ಮುಸಲ್ಮಾನರ "ಇನ್ನೂ ಬರಲಿ" ಎಂಬ ಎಂದೂ ಅಡಗದ ಹಸಿವು ನೀರಡಿಕೆ, ಎಲ್ಲವೂ ಈ ಸಭೆಯ ಮುಂದೆ ಒಂದು ಗದ್ದಲವೆಬ್ಬಿಸಲಿದೆ.

ಸೈಮನ್ ಬಹಿಷ್ಕಾರದಲ್ಲಿ ಒಟ್ಟಾದ ತೊಡರೇಟರೂ ಈ ಅಧಿವೇಶನಕ್ಕೆ ಬರಬಹುದೋ ಎಂಬ ಆಶೆಯಿದೆ. ಆದರೆ ಮುಸಲ್ಮಾನರ ಪ್ರೋತ್ಸಾಹವು ಈ ಸಭೆಗೆ ಎಷ್ಟಿರಬಹುದೆಂದು ಇನ್ನೂ ನೋಡಬೇಕಷ್ಟೆ. ಕಳೆದ ವರ್ಷ ಅಧ್ಯಕ್ಷರಾಗಿದ್ದ ಡಾ। ಅನ್ಸಾರಿಯಂತೆ ಕೆಲವರು ಹಿಂದೀ ರಾಷ್ಟ್ರೀಯತೆಯನ್ನು ಜಾತೀಯ ಏಳಿಗೆಯೊಡನೆ ಸಂಬಂಧಿಸಿ ಜಾತೀಯ ಹಿತಗಳಲ್ಲಿ ರಾಷ್ಟ್ರೀಯತೆಗೆ ಬೇಕಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿರುವರಾದರೂ, ಅಲ್ಲಿ ಬಂಧುಗಳೀರ್ವರೂ, ತಮ್ಮ ಅಸ್ತಿತ್ವವೇ ಜಾತೀಯ ಸ್ವಾರ್ಥೋಪದೇಶದಲ್ಲಿದೆಯೆಂದು ಅನುಭವದಿಂದ ತಿಳಿದು ಕೊಳ್ಳದೆ ರಾಷ್ಟ್ರೀಯ ಹಿತವನ್ನು ಜಾತೀಯ ಸ್ವಾರ್ಥಕ್ಕೆ ಅಧೀನವಾಗಿಮಾಡಿ ತಮ್ಮ ಕೈಯಿಂದ ಜಾರಿಹೋಗುತ್ತಿದ್ದ ಮುಸಲ್ಮಾನ ಧುರೀಣತ್ವವನ್ನು ಪುನಃ ಪಡೆಯಲು ಪ್ರಯತ್ನಿಸಿರುವರು.

ಶ್ರೀ ಮೋತಿಲಾಲ ನೆಹರುರವರು ಡೊಮಿನಿಯನ್ ಸ್ಟೇಟಸ್ಸನ್ನು ಆದರಿಸಿ ಹಿಂದೂಸ್ಥಾನಕ್ಕೆ ಒಪ್ಪಿಗೆಯಾಗಬಹುದಾದ ಸರಕಾರ ರಚನೆಯನ್ನು ಸಿದ್ಧಗೊಳಿಸುವಾಗ ಯುವಕರ ಮುಂದಾಳಾಗಿರುವ ಅವರ ಮಗಂದಿರು ಶ್ರೀ ಜವಾಹರಲಾಲ ನೆಹರುಗಳವರ ಸ್ವಾತಂತ್ರ್ಯದ ಪಕ್ಷದ ... ಒಂದು ರಾಷ್ಟ್ರೀಯ ... ಯಲ್ಲಿ ... ಬಂಗಾಳದ ಶ್ರೀಯುತ ಸುಭಾಸಚಂದ್ರಬೋಸರೂ, ಮದ್ರಾಸ್ ಕಡೆಯಿಂದ ಶ್ರೀನಿವಾಸ ಅಯ್ಯಂಗಾರರೂ ಇವನ್ನು ಪುಷ್ಟೀಕರಿಸಿರುವರು. ಪ್ರತಿ ಸ್ವಾತಂತ್ರ್ಯದ ಪ್ರಮುಖ ಧುರೀಣರೇ ಈ ಸ್ವಾತಂತ್ರ್ಯದ ನಿರ್ಧಾರವನ್ನು ಸ್ಥಾಪಿಸಲು ಯತ್ನಿಸುವರಾದುದರಿಂದ ಪಂಡಿತ ಮೋತಿಲಾಲ ನೆಹರುರವರ ವರದಿಗೂ, ಈ ಸ್ವಾತಂತ್ರ್ಯದ ವಾದಿಗಳಿಗೂ ಬಹಳ ಮೇಳಾಟವಾಗಲಿರಲೆಂದು ಕಾಣುವುದು.

ಕಾಂಗ್ರೆಸ್ಸಿಗೆ ಮಹಾತ್ಮಾಗಾಂಧಿಯವರೂ ಹೋಗುವುದರಿಂದ ಕಾಂಗ್ರೆಸ್ಸಿನ ಅಧಿವೇಶನಗಳೊಳಗಿನ ಚರ್ಚೆಯಲ್ಲಿ ಸಂತಯವೂ, ತಾಳ್ಮೆಯೂ ಪ್ರೇರಿಸಲ್ಪಡಬಹುದೆಂದು ಆಶಿಸಬಹುದು. ಆದರೆ ಶೋಧಿಯ ಕಾರ್ಯಕ್ರಮವು ಹಳತಾಗಿ ಬಂದು ಅದರ ಪ್ರಾಮುಖ್ಯತೆಯು ಕೊಲ್ಲನೆ ಹೋಗುತ್ತಾ ಇರುವುದರಿಂದ ಪ್ರದರ್ಶನಶಾಲೆಗಳಲ್ಲಿ ಖಾದಿಯ ಎಂತಹ ವೈಚಿತ್ರ್ಯಗಳು ಬರಬಹುದಾದರೂ ಅಧಿವೇಶನದ ಕಾರ್ಯಕ್ರಮದಲ್ಲಿ ಅದು ಹೆಚ್ಚು ಪ್ರಾಮುಖ್ಯತೆಯನ್ನು ತಾಳುವ ಭರವಸೆಯಿಲ್ಲ.

ಇನ್ನು ರಾಜಕೀಯ ಧುರೀಣರ ಲಕ್ಷ್ಯದಲ್ಲಿ ಪ್ರಾಯಶಃ ಬರಲಾರದ ಒಂದು ವಿಷಯವಿರುತ್ತದೆ. ಮುಂಬಾಯಿಯಲ್ಲಿ ಈ ವರ್ಷ ನಡೆದ ಕೂಲಿಕಾರರ ದೀರ್ಘಮುಷ್ಕರದ ಅವಶೇಷವು ಇನ್ನೂ ಇದೆ. ಕೂಲಿಮುಷ್ಕರಗಳು ಆಗಿಂದಾಗ್ಯೆ ಕಾಣುತ್ತಲೇ ಇವೆ. ಇವುಗಳ ಕಡೆಗೂ ಲಕ್ಷ್ಯಕೊಡಲಿಕ್ಕೆ ಕಾಂಗ್ರೆಸ್ಸಿಗೆ ಸಾವಕಾಶವಿದೆಯೋ ಎಂಬ ಒಂದು ಪ್ರಶ್ನೆಯಿದೆ. ಕಾಂಗ್ರೆಸ್ಸು ಈ ಸಮಸ್ಯೆಯನ್ನು ತನ್ನ ಕೈಯಲ್ಲಿ ತೆಗೆದುಕೊಳ್ಳದಿದ್ದರೆ ಕಾಂಗ್ರೆಸ್ಸಿನ ದೂರದರ್ಶಿತೆಯ ಅಭಾವಕ್ಕಾಗಿ ವಿಷಾದಿಸಬೇಕಾಗುವುದು.

॥ ವಂದೇ ಮಾತರಂ ॥

ವಿದೇಶ ವರ್ತಮಾನ.

— ಯುರೋಪು ಮತ್ತು ಆಫ್ರಿಕಾ ದೇಶಗಳನ್ನು ಜೋಡಿಸುವ ಸಲುವಾಗಿ ಜಿಬ್ರಾಲ್ಟರಿನಲ್ಲಿ ನೆಲದಡಿಯಲ್ಲಿ ಒಂದು ಸುರಂಗವನ್ನು ನಿರ್ಮಿಸುವ ಯೋಜನೆ ನಡೆಯುತ್ತಿದೆ. ಇದಕ್ಕಾಗಿ ಸರ್ವೆಯನ್ನು ಮಾಡಲು ಮಾತ್ರವೇ ಒಂದು ವರುಷದ ಸಮಯವು ಬೇಕಾಗುವದು.

— ಯುದ್ಧದ ಸಮಯದಲ್ಲಿ ಬ್ರಿಟಿಷರು ಯುನೈಟೆಡ್ ಸ್ಟೇಟ್ಸಿನಿಂದ ಪಡೆದ ಸಾಲದ ಮರುಪಾವತಿಯ ಅಂಶವಾಗಿ ೯೫,೫೦೦,೦೦೦ ಡೊಲ್ಲರುಗಳನ್ನು ಕಳೆದ ೧೫ನೇ ತಾರೀಕಿನ ದಿನ ಕೊಟ್ಟು ಬಿಟ್ಟರು. ಇದರಲ್ಲಿ ೩೬,೦೦೦,೦೦೦ ರೂಪಾಯಿ ಅಸಲಿನ ಮರುಪಾವತಿಯು. ಅಂತ ಉಳಿದುದು ಸಾಲದ ಬಡ್ಡಿ. ಇದು ವರೆಗೆ ಬ್ರಿಟಿಷರು ಯುನೈಟೆಡ್ ಸ್ಟೇಟ್ಸಿಗೆ ೯೩೪,೪೮೦,೦೦೦ ಡೊಲರುಗಳನ್ನು ಕೊಟ್ಟರು. ಇದರಲ್ಲಿ ಅಸಲು ೧೫೮,೦೦೦,೦೦೦ ಡೊಲರುಗಳು. ಇನ್ನೂ ಅವರು ೪,೪೫೩,೦೦೦,೦೦೦ ಡೊಲರುಗಳನ್ನು ಕೊಡಲುಬಾಕಿ ಇರುತ್ತದೆ.

— ಸಮ್ರಾಟ್ ಜೋರ್ಜ್ ಚಕ್ರವರ್ತಿಗಳ ಮೇಲೂ ಯುವರಾಜರ ಮೇಲೂ ಮಾತುಗಳನ್ನು ಪ್ರಕಟಿಸಿದುದಕ್ಕಾಗಿ ಕೆನಡದ ಒಬ್ಬ ಪತ್ರಿಕೆಯ ಸಂಪಾದಕನನ್ನು ಶಿಕ್ಷಿಸಿರುವರು.

— ಅಮೇರಿಕದಲ್ಲಿ ಶ್ರೀಮತಿ ಸರೋಜಿನಿ ನಾಯುಡುರವರು ಮಾಡುವ ಭಾಷಣವನ್ನು ಹಿಂದೂಸ್ಥಾನದ ಕಲಕತ್ತಾ ಪಟ್ಟಣದಲ್ಲಿ ಬ್ರಾಡ್‌ಕಾಸ್ಟಿನ ಮೂಲಕ ಕೇಳಿಸುವಂತೆ ಅಮೇರಿಕದಲ್ಲಿರುವ ಹಿಂದೂ ಪ್ರಮುಖರಾದ ವಿ. ಘೋಷರವರು ತಯಾರಿಗಳನ್ನು ಮಾಡುತ್ತಿರುವರು.

— ಇಂಗ್ಲಾಂಡಿನಲ್ಲಿ ಹೊಸ ರೀತಿಯ ಕರೆನ್ಸಿ ನೋಟುಗಳು ಹೊರಹೊರಟೊಡನೆ ಅವುಗಳೊಂದಿಗೆ ಕೆಲವು ಕಳ್ಳ ನೋಟುಗಳು ಕಾಣಬಂದುವು. ಈ ಕಳ್ಳ ನೋಟುಗಳನ್ನು ಬ್ಯಾಂಕಿಗೆ ಹಿಂದಿರುಗಿಸಿ, ಅವನ್ನು ಯಾರು ಹೊರಡಿಸಿದರೆಂದು ಶೋಧನೆಯು ನಡೆಯುತ್ತಿದೆ.

— ತುರ್ಕಿಸ್ಥಾನದ ಪಾರ್ಲಿಮೆಂಟು ಸಭೆಯವರು ಅಫೀಮು ಮೊದಲಾದ ಅಮಲು ಪದಾರ್ಥಗಳ ವ್ಯಾಪಾರವನ್ನು ನಿರೋಧಿಸುವ ಒಂದು ಮಸೂದೆಯನ್ನು ಅಂಗೀಕರಿಸಿರುವರು.

— ಹಿಂದೂ ಸ್ತ್ರೀಯರ ಅಭಿವೃದ್ಧಿಯನ್ನು ಮಾಡುವ ಸಲುವಾಗಿ ಇಂಗ್ಲಾಂಡು ಮತ್ತು ಅಮೇರಿಕಾ ದೇಶಗಳಲ್ಲಿ ಲೇಡಿ ಇರ್ವಿನ್, ಲೇಡಿ ಲಿಟ್ಟನ್, ಮಿಸೆಸ್ ಪೆಂಟ್ಲಿಂಗ್‌ಹೆಮ್ ಮೊದಲಾದವರು ಪ್ರಯತ್ನಿಸುತ್ತಲಿರುವರು.

— ಬ್ರಿಟನಿನ ಕಲ್ಲಿದ್ದಲಿನ ಗಣಿಗಳಲ್ಲಿ ದುಡಿಯುವ ಕೆಲಸಗಾರರಿಗೆ ಸಹಾಯವನ್ನು ಮಾಡಬೇಕೆಂದು ಮಹಾರಾಣಿಯವರು ಸೂಚಿಸಿ ಅವರಿಗೆ ಉಡಿಗೆಯನ್ನೂ ಆಟದ ಸಾಮಾನುಗಳನ್ನೂ ಕಳುಹಿಸಿ ಕೊಟ್ಟರು. ಈ ಉದಾಹರಣೆಯನ್ನನುಸರಿಸಿ ಕಾಡ್ರಿಫಿನ ರಾಜಕುಮಾರಿ ಮೇರಿಯವರು ನೋರ್ತ್ ಅಂಬರಲೇಂಡ್ ಮತ್ತು ದರ್‌ಹೇಮ್ ಗಣಿಗಳ ಕೆಲಸಗಾರರಿಗೆ ಬೂಟುಗಳನ್ನು ತನ್ನ ಮಕ್ಕಳ ಪರವಾಗಿ ಆಟದ ಸಾಮಾನುಗಳನ್ನೂ ಕಳುಹಿಸಿರುವರು, ಇನ್ನೂ ಯೋರ್ಕಿನ ಡಚೆಸ್ ಇವರು ಗಣಿಯ ಕೆಲಸಗಾರರ ಮಕ್ಕಳು ಛಳಿಗಾಲದಲ್ಲಿ ಉಟ್ಟುಕೊಳ್ಳಲು ವಸ್ತ್ರವನ್ನೂ, ಆಟದ ಸಾಮಾನುಗಳನ್ನೂ ಕಳುಹಿಸಿರುವರು.

— ಸರ್ಬಿಯನ್ ಎಂಬಲ್ಲಿ ವಿಚಿತ್ರವಾದ ಒಂದು ಸ್ಪರ್ಧೆ. ಅದರಲ್ಲಿ ಮೊದಲನೆಯ ಇನಾಮು ಓರ್ವ ಹೆಂಗಸಿಗೆ. ಹಳೇ ಇಜಾರಿನ ಕಾಲನ್ನು ಕತ್ತರಿಸಿ, ಒಬ್ಬ ಹುಡುಗನ ಅಂಗಿಯನ್ನು ಹೊಲಿದುದೇ ಆಕೆಯ ವಿಶೇಷತೆಯುದ ಪ್ರದರ್ಶನ.

— ... ...

— ... ... ವಾದ್ಯಗಾರನು ಲಂಡನಿಗೆ ಮರಳಿ ಬಾರದೆ ಒಂದೆಯೇ ಹಿಂದಕ್ಕೆ ... ಹಿಂತಿರುಗಿದ್ದನು. ... ... ಆತನ ಅಪ್ಪನು ಆ ಕೇಳದಾಗಿ ಇಷ್ಟರೊಳಗೂ ... ... ಗುದ್ದಾಟವೂ ಪ್ರಾರಂಭವಾಯಿತು. ವಾದ್ಯಗಾರನು ... ಒಂದು ... ... ಸ್ಪೋಟಿಸಿದ ಆ ... ಮದ್ದುಗುಂಡಿನ ... ... ಅತನನ್ನು ಕೊಂದುಬಿಟ್ಟನು.

— ... ... ಅಲ್ಲಿ ಬೆಳೆದ ಮೊಸಳೆಗಳನ್ನು ಸಾಕಸಲಿಸುವ ಸಲುವಾಗಿ ೧೫,೦೦೦ ಪೌಂಡಿಗೂ ವಿಶಿಷ್ಟವಾದ ಆಹಾರದ ಬಟ್ಟಲುಗಳು, ... ಸೂಜುಗಳು ... ಬೇರೆ ಜಾತಿಯ ಗೂಡುಗಳು ... , ... ವಾಯುಗಳನ್ನು ಬೆಕ್ಕುಗಳನ್ನು ಉಪಯೋಗಿಸಿದರೂ, ಒಂದು ವರ್ಷದಲ್ಲಿ ಒಟ್ಟು ಸತ್ತಿದ್ದ ಗಂಡು ಇಲಿಗಳ ಸಂಖ್ಯೆ ೧೫೪೦, ಹೆಣ್ಣು ಇಲಿಗಳ ಸಂಖ್ಯೆ ೬೦. ಇಲಿಗಳಿಗೂ ಹೊರನಡೆಯುವದೇನೆಂಬುದನ್ನು ತಿಳಿದುಕೊಳ್ಳುವ ಶಕ್ತಿಯಿರುವುದೇನೋ!

ಕವೆಂಟ್ರಿಯ ಮುಖ್ಯ ಮುಖ್ಯ ಮಾರ್ಗದ ಸಂಗಮಗಳಲ್ಲಿ ಜನಸಂದಣಿಯನ್ನು ನಿಯಮಿಸಲು ಪೋಲೀಸರ ಬದಲಿಗೆ ಒಟೊಮೆಟಿಕ್ (ಸ್ವತಶ್ಚಲನ) ಯಂತ್ರಗಳನ್ನು ಇಡುವರು. ಒಂದು ಬಣ್ಣದ ದೀಪವು ಪ್ರದರ್ಶಿಸಲ್ಪಟ್ಟೊಡನೆ ಜನರೂ ವಾಹನಗಳೂ ಉತ್ತರದಿಂದ ದಕ್ಷಿಣಕ್ಕೆ, ದಕ್ಷಿಣದಿಂದ ಉತ್ತರಕ್ಕೆ ಚಲಿಸಬಹುದು. ಇನ್ನೊಂದು ಬಣ್ಣದ ದೀಪಗಳು ಪ್ರದರ್ಶಿಸಲ್ಪಟ್ಟೊಡನೆ ಪೂರ್ವದಿಂದ ಪಶ್ಚಿಮಕ್ಕೆ, ಪಶ್ಚಿಮದಿಂದ ಪೂರ್ವಕ್ಕೆ ಚಲಿಸಬಹುದು. ಪೋಲೀಸರನ್ನು ನೇಮಿಸುವ ಅವಶ್ಯಕತೆಯೇ ಇರುವುದಿಲ್ಲ.

— ಇದುವರೆಗೆ ದೀಪಸ್ತಂಭಗಳು ಸಮುದ್ರದಲ್ಲಿ ಮಾತ್ರವಿದ್ದು ಹಡಗಿನವರಿಗೆ ಸಹಾಯಕರಾಗಿದ್ದವು. ಇನ್ನು ಮುಂದೆ ಬ್ರಿಟನಿನಲ್ಲಿ ನೆಲದ ಮೇಲೆಯೂ ದೀಪಸ್ತಂಭಗಳನ್ನು ಏರ್ಪಡಿಸಿ, ರಾತ್ರಿಯಲ್ಲಿಯೂ ಮಂಜು ಕವಿದಾಗಲೂ, ವಿಮಾನದವರಿಗೆ ಸೂಚನೆಗಳನ್ನು ಕೊಡುವರು. ಒಂದೊಂದು ಸ್ತಂಭದಲ್ಲಿ ಒಂದೊಂದು ಗುರುತಿನ ದೀಪವಿರುವುದು. ಈ ಗುರುತುಗಳೆಲ್ಲವನ್ನು ವಿಮಾನದ ಜನರು ನೆನಪಿನಲ್ಲಿಡುವರು.

— ಫ್ರಾನ್ಸಿನಲ್ಲಿ ಮಾರ್ಗಗಳು ತಿರುಗುವಲ್ಲೆಲ್ಲ ಇರುವ ಮರಗಳಿಗೆ ಬಿಳೀ ಬಣ್ಣವನ್ನು ಬಳಿಯುವರು. ಇದರಿಂದ ಕತ್ತಲೆಯಲ್ಲಿ ಮೋಟಾರು ಓಡಿಸುವವರಿಗೆ ಎದುರಿನ ಮರದ ಬಿಳೀ ಬಣ್ಣವು ಕಂಡು ಮಾರ್ಗವು ಅಲ್ಲಿ ತಿರುಗಿರುತ್ತದೆ ಎಂಬುದು ಮನವರಿಕೆಯಾಗುವದು. ನೆಲದಿಂದ ಆರು ಅಡಿಯ ವರೆಗೆ ಮರದ ಕಾಂಡಕ್ಕೆ ಬಣ್ಣ ಕೊಡುವುದರಿಂದ ಮೋಟಾರು ಕಾರು ಬಹಳ ದೂರದಲ್ಲಿರುವಾಗಲೂ, ದೀಪಗಳ ಬೆಳಕಿನಿಂದ ಮರವು ಗೋಚರಿಸುವದು.

— ಜರ್ಮನಿಗೆ ತರಿಸುವಂಥಾ ಸಕ್ಕರೆಯ ಮೇಲೆ ಜರ್ಮನ ಸರಕಾರದವರು ಸುಂಕವನ್ನು ಬಹಳವಾಗಿ ಏರಿಸಿರುವರು. ಸಕ್ಕರೆಯಿಂದ ಜನರಿಗೆ ಕೆಡುಕಿದೆಯೆಂದೂ ಅದು ಕಾರಣ ಅದರ ಆಮದನ್ನೇ ಇಳಿಸಬೇಕೆಂದೂ ಅವರ ಅಭಿಪ್ರಾಯ.

— ಒಂದು ತರಹದ ನೀಲ ದೀಪಗಳ ಉಪಯೋಗದಿಂದ ಹೊಟ್ಟೆಯೊಳಗಿನ ಇಂದ್ರಿಯಗಳ ಛಾಯಾಚಿತ್ರವನ್ನು ತೆಗೆಯುವ ಉಪಾಯವನ್ನು ಬರ್ಲಿನಿನ ಡಾಕ್ಟರ್ ಎಲ್ಸನ್ ಎಂಬವರು ಕಂಡುಹಿಡಿದಿರುವರು.

ಒಳದೇಶ ವರ್ತಮಾನ.

— ಬನಾರಸಿನಲ್ಲಿ ಕಾಲಿಟ್ಟಿರುವ ಕೋಲರಾ ರೋಗವು ಇನ್ನೂ ನಿಂತುಹೋಗಿಲ್ಲ. ವಾರಕ್ಕೆ ಸುಮಾರು ೩೦ ಜನರು ಸಾಯುತ್ತಲಿರುವರು.

— ನವಶ್ಚೇರಾ ಎಂಬಲ್ಲಿ ಭಯಂಕರವಾದ ಅಗ್ನಿಯಿಂದ ಬಹಳ ನಷ್ಟ ಉಂಟಾಯಿತೆಂದು ವರ್ತಮಾನವಿದೆ.

— ಪೋರ್ವರ್ಡ್ ಪತ್ರಿಕೆಯಲ್ಲಿ "ದಿ ಯುನಿಫೋರ್ಮ್" ಎಂಬ ಲೇಖನವನ್ನು ಪ್ರಕಟಿಸಿದುದಕ್ಕಾಗಿ ಸಂಪಾದಕರ ಮೇಲೂ, ಮುದ್ರಕರ ಮೇಲೂ ದಾಖಲಾಗಿರುವ ವ್ಯಾಜ್ಯದ ವಿಚಾರಣೆಗೆ ಜನವರಿ ೪ನೇ ತಾರೀಖಿಗೆ ಮುಂದರಿಸಲ್ಪಟ್ಟಿರುತ್ತದೆ.

— ಅಹಮದಾಬಾದಿನ ಗಿರಣಿಗಳ ಕೂಲಿಯಾಳುಗಳಿಗೆ ಶೇಕಡಾ ೩೫ರಷ್ಟು ಸಂಬಳವನ್ನು ಏರಿಸಿದರು. ಆದರೆ ಈ ಹಣವನ್ನು ನಗದಿಯಾಗಿ ಕೊಡುವದಿಲ್ಲ. ಕೂಲಿಯಾಳುಗಳ ಮನೆಗಳನ್ನು ಅಭಿವೃದ್ಧಿಗೊಳಿಸುವರು. ಅವರದೇ ಒಂದು ಬೇಂಕನ್ನು ನಿರ್ಮಿಸಿ, ಈ ಹಣವನ್ನು ಅಲ್ಲಿ ಠೇವಣಿಯಾಗಿಡುವರು.

— ಕಲಕತ್ತೆಯ ಸಮೀಪದ ಬೋರಿಯಾ ಎಂಬಲ್ಲಿರುವ ಗಿರಣಿಯ ಒಬ್ಬ ಕಾರಕೂನನು ಸಾಯಂಕಾಲ ಗಿರಣಿಯಿಂದ ಹೊರಟು ಮನೆಗೆ ಹೋಗುತ್ತಿರುವಾಗ ಕೆಲವು ಗಿರಣಿಯ ಮಜ್ದೂರರು ... ... ಒಂದು ಚೂರಿಗಳಿಂದ ಆತನನ್ನು ತಿವಿದು ಕೆಡಹಿದರು. ಕತ್ತಲೆಯಾಗಿದ್ದುದರಿಂದ ಮುಕ್ತಿದವರ ಯಾರೆಂಬುದನ್ನು ಗುರುತಿಸಲು ಕಾರಕೂನನಿಗೆ ಸಾಧ್ಯವಾಗಲಿಲ್ಲ. ತನ್ನನ್ನು ಕೆಡಹಿದೊಡನೆ ಪ್ರಯತ್ನಪಟ್ಟು ತನ್ನ ಕಿಸೆಯೊಳಗಿನ ಪಿಸ್ತೂಲು ತೆಗೆದು ಮೂರು ಸಲ ಗುಂಡು ಹಾರಿಸಿದೊಡನೆ ಅಪರಾಧಿಗಳು ಎತ್ತಲೋ ಓಡಿ ಹೋದರು. ಅವರ ಶೋಧೆಯು ಈಗ ನಡೆಯುತ್ತಲಿದೆ.

— ಇದೇ ತಿಂಗಳ ೧೫ನೇ ತಾರೀಕಿನಿಂದ ಬರುವ ಜನವರಿ ೨ನೇ ತಾರೀಕಿನ ವರೆಗೆ ಹಿಂದೂಸ್ಥಾನದಿಂದ ಹೊರದೇಶಗಳಿಗೆ ಕಳುಹಿಸಲ್ಪಡುವ ಹೊಸ ವರುಷದ ಅಭಿನಂದನೆಯ ತಂತಿಗಳಿಗೆ ಚಾರ್ಜು ಬಹಳ ಕಡಿಮೆ ಮಾಡಲ್ಪಟ್ಟಿರುತ್ತದೆ. ೧೦ ಶಬ್ದಗಳು ಯಾ ಅವುಗಳಿಗಿಂತ ಕಡಿಮೆಗೆ ರೂಪಾಯಿ ೧-೧೪-೦. ಹತ್ತು ಶಬ್ದಗಳಿಗೆ ಮಿಕ್ಕಿದರೆ ಪ್ರತಿಯೊಂದು ಶಬ್ದಕ್ಕೆ ಮಾಮೂಲಿ ಪ್ರಕಾರ ಹೆಚ್ಚಿಗೆ ಕೊಡಬೇಕಾಗುವದು.

— ಕಲಕತ್ತದಲ್ಲಿ ಪ್ರಕಟಿಸಲ್ಪಡುವ ಭಾರತ ಮಿತ್ರ ಎಂಬ ಪತ್ರಿಕೆಯ ಆಫೀಸಿಗೆ ಅಕಸ್ಮಾತ್ತಾಗಿ ಹಲವರು ನುಗ್ಗಿ ಸಂಪಾದಕರನ್ನು ಗದರಿದರು. ಸೈಮನ್‌ಬಹಿಷ್ಕಾರದ ವಿರುದ್ಧವಾಗಿ ಸಂಪಾದಕರು ಒಂದು ಲೇಖನವನ್ನು ಬರೆದುದೇ ಇದಕ್ಕೆ ಕಾರಣವಂತೆ. ಸಂಪಾದಕರು ಈ ಕುರಿತಾಗಿ ಪೋಲೀಸರಿಗೆ ಅರ್ಜಿಯನ್ನು ಮಾಡಿದರು.

— ಬದನೇ ಜೋರ್ಜ ಚಕ್ರವರ್ತಿಗಳವರು ಬೇಗನೇ ಗುಣಹೊಂದುವಂತೆ ಕಂಟೋನ್ಮೆಂಟಿನ ದೇವಸ್ಥಾನಗಳಲ್ಲಿ ಪೂಜೆಗಳೂ ಪ್ರಾರ್ಥನೆಗಳೂ ನಡೆಯುತ್ತಿವೆ. ಮತ್ತು ಅಲ್ಲಿಯ ಸಾಹುಕಾರರ್ರಿಬ್ಬರು ಎಂಟಲವರು ಈ ಸಲುವಾಗಿ ಬಡ ಬಗ್ಗರಿಗೆ ಅನ್ನದಾನ ಮಾಡುತ್ತಿರುವರು.

೧೯೨೧ನೇ ಇಸವಿಯಲ್ಲಿ ಮಲಬಾರಿನಲ್ಲಿ ನಡೆದ ಮೋಪ್ಲಾ ದಂಗೆಯ ಸಲುವಾಗಿ ಬಳ್ಳಾರಿಯ ಕಾರಾಗೃಹದಲ್ಲಿ ಬಂಧಿಸಲ್ಪಟ್ಟಿದ್ದ ೧೧೧ ಜನ ಮೋಪ್ಲೆಯವರನ್ನು ಇತ್ತೀಚೆಗೆ ಬಂಧವಿಮುಕ್ತರನ್ನಾಗಿ ಮಾಡಿದರು.

ಅಫಘಾನಿಸ್ಥಾನದಲ್ಲಿ ಬ್ರಿಟಿಷರ ಹೇತುಗಳನ್ನು ಧರಿಸಲೇಬೇಕೆಂಬ ನಿರ್ಬಂಧವಿರುವುದಿಲ್ಲವೆಂದು ದಿಲ್ಲಿಯಲ್ಲಿರುವ ಅಫಘಾನ ಕೌನ್ಸಲ್ ಜನರಲರು ಹೇಳಿದರು.

— ಲಾಲಾಜಿಯವರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ 'ಪೀಪಲ್' ಎಂಬ ಪತ್ರಿಕೆಯ ವಿಶೇಷ ಸಂಚಿಕೆಯೊಂದನ್ನು ಲಾಲಾಜಿಯವರ ಸ್ಮಾರಕಕ್ಕಾಗಿ ಪ್ರಕಟಿಸಬೇಕೆಂದು ನಿಶ್ಚಯವಾಗಿರುತ್ತದೆ.

— ಅಹಮದಾಬಾದಿನ ಒಂದು ಗಿರಣಿಯಲ್ಲಿ ಇಬ್ಬರು ಕೆಲಸಗಾರರು ಏನೋ ತಪ್ಪು ಮಾಡಿದರೆಂದು ಅದಾದನೆಯ ಮೇಲೆ ಅವರಿಬ್ಬರ ಮುಖಕ್ಕೂ ಕಪ್ಪು ಬಣ್ಣವನ್ನು ಬಳಿದು ಕತ್ತೆಯೊಂದು ಇಲಾಖೆಯ ಜನರಿಗೂ ಪ್ರದರ್ಶಿಸಿದರು. ಒಬ್ಬನಿಗೆ ಪ್ರವೇಶದ ಬಹಳ ಅಪಮಾನದಿಂದ ಅಫೀಮನ್ನು ಸೇವಿಸಿ ಪ್ರಾಣಹತ್ಯವನ್ನು ಮಾಡಿಕೊಳ್ಳಲು ಪ್ರಯತ್ನಿಸಿದನು. ಅವರ ಮುಖಕ್ಕೆ ಬಣ್ಣ ಬಳಿದವರನ್ನು ಕೆಲಸದಿಂದ ಡಿಸ್‌ಮಿಸ್ ಮಾಡದೆ ಇದ್ದರೆ ತಾವೆಲ್ಲರೂ ಮುಷ್ಕರ ಹೂಡುವುದೇ ಖಂಡಿತವೆಂದು ಕೆಲಸಗಾರರೆಲ್ಲರೂ ಒಟ್ಟಾಗಿ ಅಧಿಕಾರಿಗಳಿಗೆ ತಿಳಿಸಿರುವರು.

— ಸ್ವಾಮನ್ ಕಮಿಶನು ಬ್ರಹ್ಮದೇಶಕ್ಕೆ ಬಂದು ತಲುಪಿದೊಡನೆ ಮಹಾರಾಜರು ಅವರನ್ನು ಸತ್ಕರಿಸಿದರು. ರೈಲುವೇ ಸ್ಟೇಶನಿನಲ್ಲಿ ಸ್ವಾಮನ್ ವಿರೋಧಿಗಳು ಕಲಿತು ಬೇರೆ ಕಡೆಗಳಂತೆ ಬಹಿಷ್ಕಾರವನ್ನು ಪ್ರಕಟಿಸಿದರು. ಇದರಿಂದ ಕಾಂಗ್ರೆಸ್ ಪಕ್ಷದ ಹಲವು ಮುಖಂಡರಿಗೆ ಸ್ವಲ್ಪ ಸ್ವಲ್ಪ ಪೆಟ್ಟು ಕೂಡ ಆಯಿತು.

— ಪನಗಲ್ಲಿನ ರಾಜರು ಕಳೆದ ಆದಿತ್ಯವಾರ ದೈವಾಧೀನರಾದರು.

— ಕಳೆದ ಸೋಮವಾರ ದಿನ ಮುಂಬಾಯಿಯ ಎಂಟು ಗಿರಣಿಗಳು ಪೂರ್ಣ ಮುಚ್ಚಲ್ಪಟ್ಟಿದ್ದವು. ನಾಲ್ಕು ಗಿರಣಿಗಳಲ್ಲಿ ಅರೆವಾಸಿ ಜನರು ಮಾತ್ರವೇ ಕೆಲಸಕ್ಕೆ ಬಂದಿದ್ದರು. ಒಟ್ಟಾರೆ ಮುಷ್ಕರ ಹೂಡಿದವರ ಸಂಖ್ಯೆ ೧೫,೦೦೦ದಾಗಿತ್ತು. ಸಂಬಳವನ್ನು ಇಳಿಸಿದರೆಂಬುದೇ ಅವರ ದೂರು. ಹಿಂದಿನ ಬುಧವಾರ ಕೆಲಸಗಾರರೊಳಗೂ ಪೋಲೀಸರೊಳಗೂ ಜಗಳವಾಗಿ ನಾಲ್ವರು ಸತ್ತುಹೋಗಿದ್ದರು.

— ಸೆಪ್ಟೆಂಬರಿನಲ್ಲಿ ಉಂಟಾದ ಎಣ್ಣೆ ಕಂಪೆನಿಯ ಮುಷ್ಕರವು ಶಾಂತವಾಗಿಲ್ಲ. ಹೊಸ ಕೆಲಸಗಾರರನ್ನು ತಂದು ಮಿಲ್ಲಿನ ಕೆಲಸವು ಮಾತ್ರ ನಡೆಯುತ್ತಲಿದೆ. ಮುಷ್ಕರಗಾರರು ಗಿರಣಿಯ ಹೊರಗೆ ನಿಂತು ಹೊಸ ಕೆಲಸಗಾರರು ಬಾರದಂತೆ ತಡೆಗಟ್ಟುತ್ತಿರುವರು.

— ಸಿಲೋನಿನ ಒಂದು ಮನೆಯಲ್ಲಿ ಮಲಗಿದ್ದ ಹಾಲ್ವರನ್ನು ಯಾರೋ ದುರಾತ್ಮರು ಕೊಂದು ಓಡಿ ಹೋಗಿರುವರು. ಐದನೆಯವನನ್ನು ಹೊಡೆಯುವಾಗ ಅತನು ಎಚ್ಚರವಾಗಿ ಬೊಬ್ಬೆ ಹೊಡೆದನು. ಜನರೆಲ್ಲರೂ ಬಂದು ಕೂಡಿದರು. ಅಪರಾಧಿಯು ಓಡಿಹೋದನು.

— ಮದರಾಸಿನಲ್ಲಿ ಎಂಟು ಜನ ಕೊರವರು ಕಳ್ಳ ಪವನುಗಳನ್ನು ಬಹು ಕಡಿಮೆ ಕ್ರಯದಲ್ಲಿ ಮಾರಲು ಪ್ರಯತ್ನಿಸಿ ಕೊನೆಗೆ ಪೋಲೀಸರ ಕೈಗೆ ಸಿಕ್ಕಿಬಿದ್ದರು. ಇವರಲ್ಲಿ ಮೂವರು ಹೆಂಗಸರು. ಒಬ್ಬ ಕೊರವನು ಒಬ್ಬ ಸಾಹುಕಾರನಲ್ಲಿಗೆ ಹೋಗಿ ನಿಜವಾದ ಪವನನ್ನು ತೋರಿಸಿ ತಮ್ಮ ಕೂಡ ಹಲವು ಪವನುಗಳಿವೆಯೆಂದೂ, ಒಟ್ಟಾರೆ ಸಾಹುಕಾರನು ೬೦೦ ರೂಪಾಯಿಗಳನ್ನು ಕೊಟ್ಟರೆ ಸಾಕೆಂದೂ ಒಪ್ಪಿಗೆಯಾಗಿ, ಒಂದು ನಿಶ್ಚಿತ ಮುದ್ದೆ ಕೆಳಗೆ ಅಂದು ರಾತ್ರಿ ಅವರು ಕೂಡಬೇಕೆಂದು ನಿರ್ಣಯವಾಯಿತು. ಈ ಸಂಗತಿಯನ್ನು ಸಾಹುಕಾರನು ಮೆಲ್ಲನೆ ಪೋಲೀಸ ಅಧಿಕಾರಿಗಳಿಗೆ ತಿಳಿಸಿ, ರಾತ್ರಿ ತನ್ನೊಂದಿಗೆ ಪೋಲೀಸರನ್ನು ಕರಕೊಂಡು ಹೋಗಿ ದೂರದಲ್ಲಿ ನಿಲ್ಲಿಸಿ ತಾನು ಕೊರವರನ್ನು ಸಮೀಪಿಸಿದನು. ಅವರೊಳಗೆ ಸಂಭಾಷಣೆಯು ನಡೆಯುತ್ತಿರುವಾಗ ಪೋಲೀಸರು ಬಂದು ಕೊರವರನ್ನು ಹಿಡಿದು ಕೈದು ಮಾಡಿ ಕೈಲಿನಲ್ಲಿಟ್ಟರು.

ದಕ್ಷಿಣ ಕನ್ನಡ.

ಮಂಗಳೂರು: — ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಬೋರ್ಡಿಗೆ ಶ್ರೀಯುತ ವಕೀಲ ಎನ್. ಎಸ್. ಕುಡ್ವರವರು ಪ್ರೆಸಿಡೆಂಟರಾಗಿ ಕಳೆದ ಶನಿವಾರ ಜರಗಿದ ಬೋರ್ಡು ಮೀಟಿಂಗಿನಲ್ಲಿ ಸರ್ವಾನುಮತದಿಂದ ಆರಿಸಲ್ಪಟ್ಟಿರುವರು.

ಕುಂದಾಪುರದಲ್ಲಿ ಮೆಜಿಸ್ಟ್ರೇಟರಾಗಿದ್ದ ಶ್ರೀ ಎಸ್. ಸುಬ್ಬರಾಯರಿಗೆ ಉಡುಪಿಗೆ ವರ್ಗವಾಗಿರುತ್ತದಾಗಿಯೂ, ಉಡುಪಿಯಲ್ಲಿ ಮೆಜಿಸ್ಟ್ರೇಟರಾಗಿದ್ದ ಶ್ರೀ ಬಿ. ಕೆ. ಕೃಷ್ಣರಾಯರು ಕುಂದಾಪುರಕ್ಕೆ ವರ್ಗಾಯಿಸಲ್ಪಟ್ಟಿರುವರಾಗಿಯೂ ತಿಳಿಯಬರುತ್ತದೆ.

ಕಳೆದ ವಾರ ಇಲ್ಲಿಯ ಬಸವನಗುಡಿಯ ಸಮೀಪದ ಮುಸಲ್ಮಾನರ ಪಳ್ಳಿಯ ಎದುರಿನಲ್ಲಿ ಹಿಂದೂಗಳು ಭಜನೆಯನ್ನು ಕೊಂಡೊಯ್ದು ಅವರೊಳಗೆ ಜಗಳವಾಗಿ, ಇನ್ನೆರಡು ತಿಂಗಳುಗಳ ವರೆಗೆ ಯಾವ ಭಜನೆಯನ್ನೂ ಮುಸಲ್ಮಾನರ ಮಸೀದಿಗಳೆದುರು ಜರಗಿಸಬಾರದಾಗಿ ಊರ ಮೆಜಿಸ್ಟ್ರೇಟರವರು ೧೪೪ನೇ ಪ್ರಕರಣದ ಮೇರೆಗೆ ಹುಕುಂ ಕೊಟ್ಟಿದ್ದರಷ್ಟೇ. ಕಳೆದ ಸೋಮವಾರ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟರ ಅಪೇಕ್ಷೆ ಮೇರೆಗೆ ಹಿಂದೂಮುಸಲ್ಮಾನರೊಳಗೆ ಸಮಾಧಾನವನ್ನುಂಟು ಮಾಡುವ ಸಲುವಾಗಿ, ಹಿಂದೂಮುಸಲ್ಮಾನ ಪಕ್ಷಗಳ ಮುಖಂಡರನೇಕರು ಸಿಟಿ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ನೆರೆದಿದ್ದರು. ಈ ಸಂದರ್ಭದಲ್ಲಿ ಪೋಲೀಸ್ ಸುಪರಿಂಟೆಂಡೆಂಟ್ ದೊರೆಗಳವರು, ಆ ಮಾರ್ಗವಾಗಿ ಭಜನೆಯಾಗಲಿ, ಇನ್ನಾವ ಮೆರವಣಿಗೆಯಾಗಲಿ ಹೋಗಬೇಕಾದರೆ ಲೈಸನ್ಸ್ ಪಡಕೊಳ್ಳಲೇಬೇಕೆಂಬ ಹುಕುಮನ್ನು ಕೊಟ್ಟಿರುವರು.

ದಕ್ಷಿಣ ಕನ್ನಡ ಜಿಲ್ಲಾ ದ್ರಾವಿಡ ಬ್ರಾಹ್ಮಣರ ನವಮ ಪರಿಷತ್ತು ಡಿಸೆಂಬರ ತಾರೀಕು ೨೭ ಮತ್ತು ೨೮ನೇ ದಿನಗಳಲ್ಲಿ ಕಾಸರಗೋಡು ತಾಲೂಕಿನ ಅಗಲ್ಪಾಡಿ ಶ್ರೀ ಅನ್ನಪೂರ್ಣೇಶ್ವರಿ ದೇವರ ಸನ್ನಿಧಿಯಲ್ಲಿ, ಶ್ರೀ ಪಿ. ಆರ್. ವ್ಯಾಸರಾಯಾಚಾರ್ಯ, ಬಿ. ಎ. ಬಿ. ಎಲ್. ಎಡ್ವೋಕೇಟ್ ಇವರ ಅಧ್ಯಕ್ಷತೆಯಲ್ಲಿ ಜರಗುವದು. ಈ ಪರಿಷತ್ತಿಗೆ ದ್ರಾವಿಡ ಬ್ರಾಹ್ಮಣ ವರ್ಗದವರು ತಮ್ಮ ಸ್ವಜಾತಿ ಬಾಂಧವರನ್ನು ಕರೆದುಕೊಂಡು ಬಂದು, ಸಮ್ಮೇಲನವು ಯಶಸ್ವಿಯಾಗುವಂತೆ ನೆರವಾಗಬೇಕಾಗಿ, ಸ್ವಾಗತ ಮಂಡಲಾಧ್ಯಕ್ಷರಾದ ಶ್ರೀ ಬಳ್ಳಪದವು ವಾಸುದೇವಾಚಾರ್ಯರೂ, ಉಪಾಧ್ಯಕ್ಷರಾದ ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಚಿತ್ತಾಯರೂ ಅಪೇಕ್ಷಿಸುತ್ತಾರೆ.

ತಾರೀಕು ೧೫—೧೨—೨೮ಕ್ಕೆ ಅಂತ್ಯವಾಗುವ ವಾರದಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಟ್ಟು ೩೯ ಮರಣಗಳೂ ೫೩ ಜನನಗಳೂ ಆದವು. ಈ ಪೈಕಿ ಕೊಲೆರಾ ರೋಗದಿಂದ ಉಂಟಾದ ಮರಣಗಳು ೯.

ಗೀತಾಜಯಂತಿ ಉತ್ಸವವು ಸೈಂಟ್ ಎಲೋಸಿಯಸ್ ಕೋಲೇಜಿನ ಸಂಸ್ಕೃತ ಪಂಡಿತ ವೆ. ಶಾ. ಸಂ. ಬ್ರಹ್ಮಶ್ರೀ ಅನಂತ ಉಪಾಧ್ಯಾಯರವರ ಅಧ್ಯಕ್ಷತೆಯಲ್ಲಿ ಇದೇ ಬರುವ ಮಾರ್ಗಶಿರ ಶು ೧೧ (ಡಿಸೆಂಬರ ತಾ ೨೩ ಆದಿತ್ಯವಾರ) ಸಾಯಂ ಗಂಟೆ ೫ಕ್ಕೆ ಮಂಗಳೂರು ರಾಷ್ಟ್ರೀಯ ಬಾಲಿಕಾ ಪಾಠಶಾಲೆ (National Girls' School)ಯಲ್ಲಿ ಜರಗುವದು. ಎಲ್ಲರಿಗೂ ಸುಸ್ವಾಗತವಿದೆ.

ಕಳೆದ ನವೆಂಬರ್ ತಿಂಗಳ ತಾರೀಕು ೧೧ರಿಂದ ತಾ. ೩೦-೧೧-೨೮ರ ವರೇಗೆ ಮದ್ರಾಸ್ ಅವಡಿ ಆರೋಗ್ಯಾಶ್ರಮಕ್ಕಾಗಿ ಸಹಾಯ ಧನವನ್ನಿತ್ತ ಮಹಾನುಭಾವರುಗಳು:- ರಾವ್ ಸಾಹೇಬ್, ನೆಲ್ಲಿಕ್ಕಾ ವೆಂಕಟ್ರಾವ್ ರೂ. ೫—೦—೦, ಶ್ರೀ ಪಿ. ಆರ್. ಕಾಮತ್ ರೂ. ೪-೦-೦, ಶ್ರೀ ಕೆ. ಉಮಾನಾಥರಾವ್ ರೂ. ೧—೦—೦, ಈ ಮೊದಲು ಬಂದ ರೂಪಾಯಿ ೧೦೦—೦—೦ ಸೇರಿ ಒಟ್ಟು ಜಮಾ ರೂ ೧೧೧-೦-೦ ಎಂದು ಡಾ| ಪಿ. ಕೆ. ಪಿ. ಶರ್ಮರವರು ತಿಳಿಸುತ್ತಾರೆ.

ಸ್ವೀಕಾರ.

ಈ ಕೆಳಗಿನ ಪುಸ್ತಕಗಳನ್ನು ನಾವು ಆನಂದಪೂರ್ವಕವಾಗಿ ಸ್ವೀಕರಿಸುವೆವು. ಸ್ಥಳಾಭಾವದ ದೆಸೆಯಿಂದ ಇವುಗಳ ವಿಮರ್ಶೆಯನ್ನು ಈ ಸಂಚಿಕೆಯಲ್ಲಿ ಕೊಡದೆ ಮುಂದಣ ಸಂಚಿಕೆಯಲ್ಲಿ ಕೊಡುವೆವು.

೧೯೨೮ನೇ ಇಸವಿ ಮೇ ತಾ. ೩೧ಕ್ಕೆ ಅಂತ್ಯವಾದ ಪುತ್ತೂರು ಯೂನಿಯನ್ ಕ್ಲಬ್ಬಿನ ಹದಿಮೂರನೇ ವಾರ್ಷಿಕ ವರದಿ.

ಬೆಂಗಳೂರಿನ ವಿಶ್ವಕರ್ನಾಟಕ ಕಾರ್ಯಾಲಯದಲ್ಲಿ ಪ್ರಕಾಶಿಸಲ್ಪಟ್ಟ ಮಧುರ ಮುರಲಿ ಮಿಕಸಗಳು.

ಮಂಜೇಶ್ವರ — ಕಾಲಾವಧಿ ಷಷ್ಠಿ ಉತ್ಸವವು ಸಾಂಗ್ಯವಾಗಿ ನೆರವೇರಿತು. ಹಂಚಲಾದ ನೋಟೀಸು ಪ್ರಕಾರ ತಾ. ೧೬ನೇ ದಿನ ವಸಂತ ಮಂಟಪದಲ್ಲೊಂದು ಸಭೆ ಸೇರಿ ಡಾ| ಉಳ್ಳಾಲ ವಾಸುದೇವ ಮಲ್ಯರ ಅಧ್ಯಕ್ಷತೆಯಲ್ಲಿ ಕೆಲವು ಠರಾವುಗಳು. ಪಾಸಾದವು ದೇವಸ್ಥಾನದ ಟ್ರಸ್ಟಿಗಳು ಯಾವ್ಯಾವ ಠರಾವು ಮಾಡಿದ್ದಾರೋ ದೇವರೆ ಬಲ್ಲ.

ಹೊಸ ಅಂಗಡಿ ಬಳಿ ಒಂದು ರೈಲ್ವೆ ಸ್ಟೇಶನ್ ತೆರೆಯುವದಾಗಿ ರೈಲ್ವೆ ಅಧಿಕಾರಿಗಳು ನೋಡಿ ಹೋಗಿದ್ದಾರು. ಈ ವರೇಗೆ ಆಗುವ ಕುರುಹುಗಳು ಕಂಡುಬರುವದಿಲ್ಲ. ಅಧಿಕಾರಿಗಳ ದೃಷ್ಟಿ ಈ ಕಡೆಗೆ ಬಿದ್ದರೆ ಒಳ್ಳೇದಿತ್ತು.

ಇಲ್ಲಿಯ ಹೊಸಬೆಟ್ಟು ಪಂಚಾಯತ ಕೋರ್ಟಿನವರು ಅನ್ಯ ಕೋರ್ಟು ಚೆಕ್‌ಬಂದಿಯ ಖ್ಯಾಲ್ಯಗಳನ್ನು ದಾಖಲು ಮಾಡಿ ತೀರ್ಮಾನಿಸುತ್ತಲಿರುವರು. ಈ ಕೋರ್ಟಿನ ಕಾನೂನುಗಳು ವಿಪರೀತ ಪ್ರತಿವಾದಿಗೆ ನೋಟೀಸು ಆಗದೇ ಡಿಕ್ರಿ ಕೊಡುತ್ತಲಿರುವರು. ಮೇಲಧಿಕಾರಿಗಳು ಈ ಕಡೆ ನಿಗಾ ಕೊಡಬೇಕಾಗಿದೆ.

ಕುಚ್ಚಿಕಾಪಳ್ಳ — ಮಂಗಲಪಾಡಿ ಬಾಲಿಕಾ ಪಾಠಶಾಲೆಯನ್ನು ಇಲ್ಲಿ ೧೦ ವರ್ಷದಿಂದ ಕಿಟ್ಟರ ಬಂಗ್ಲೆಗೆ ಸಾಗಿಸಲು ಹುಕುಂ ಆಗಿಯದೆ. ತಾಲೂಕು ಬೋರ್ಡಿನವರಿಗೆ ಟ್ರೈನ್ಡ್ ಆಗದ ಲವರ್ ಗ್ರೇಡಿನ ಉಪಾಧ್ಯಾಯರನ್ನು ಹಲವು ಕಡೆ ನೇಮಿಸುತ್ತಾ ಬಂದಿರುವರು. ಹಾಯರ್ ಗ್ರೇಡಿನವರಲ್ಲಿ ಏನೂ ದಾಕ್ಷಿಣ್ಯ ತೋರುವುದಿಲ್ಲ. ಇಂಥವರ ಅರ್ಜಿಗಳು ಕಲ್ಲು ಕಟ್ಟಿ ಗುಂಡಿಯಲ್ಲಿ ಹಾಕಿದ ಹಾಗಾಗಲು ಕಾರಣವೇನು?

ಕುಂಬಳೆ — ಇಲ್ಲಿಯ ಶ್ರೀಮದನಂತೇಶ್ವರ ದೇವಸ್ಥಾನಕ್ಕೆ ಮೊಕ್ತೇಸರು ಆದ ಟ್ರಸ್ಟಿ ವೆಂಕಟರಾಯ ರಾಮಚಂದ್ರ ನಾಯಕರು ಈಗ ನಿರಾಕರಿಸುತ್ತಾರಾದ್ದರಿಂದ ಒಂದು ಸ್ಥಾನ ಖಾಲಿ ಬೀಳುತ್ತದೆ. ಈಗ ಇದೇ ಸ್ಥಾನಕ್ಕೆ ಪಟೇಲ ಗೋಪಾಲ ನಾಯಕರು ಉಮೇದ್ವಾರರಾಗಿರುತ್ತಾರೆಂದು ವಾರ್ತೆ ಇದೆ. ಧನ್ಯ!

ಅಮಟಾಡಿ — ಬಂಟವಾಳ ಸರ್ಕಲಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಸಭೆಯು ಈ ಗ್ರಾಮದ ಬೋರ್ಡ ಎಲಿಮೆಂಟರಿ ಶಾಲಾ ಮಂದಿರದ ಮುಂದುಗಡೆ ಹಾಕಿದ ಚಪ್ಪರದಲ್ಲಿ ಮಂಗಳೂರು ತಾಲೂಕು ಬೋರ್ಡ ಮೆಂಬರರಾದ ಬಂಟವಾಳ ವೆಂಕಟರಾಯ ಪ್ರಭುಗಳ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ತಾ. ೧೫ನೇ ಶನಿವಾರ ಮಧ್ಯಾಹ್ನ ಜರಗಿತು. ಸಭೆಗೆ ಗ್ರಾಮದ ಮಹನೀಯರೆಲ್ಲರೂ ದಯಮಾಡಿಸಿದ್ದರು. ಬಂಟವಾಳ ದೇವಳ ಶಾಲೆಯ ಉಪಾಧ್ಯಾಯರಾದ ಬಿ. ಪಕೀರ ಮಾಸ್ತರರು ಕೋಲೆರಾ ರೋಗದ ವಿಷಯದಲ್ಲಿ ಒಂದು ಭಾಷಣ ಕೊಟ್ಟರು. ಬಂಟವಾಳ ಬೋರ್ಡ ಶಾಲೆಯ ಉಪಾಧ್ಯಾಯರಾದ ಕೊರಗ ಮೆಂಡನವರು ೪ನೇ ವರ್ಗಗೆ ಒಂದು ಪಠ್ಯಪಾಠವನ್ನು ಕೊಟ್ಟರು. ಗ್ರಾಮ ಪುನರ್ನಿರ್ಮಾಣದ ವಿಷಯದಲ್ಲಿ ಎಂ. ಜಿ. ಬಗಳರು ಒಂದು ಭಾಷಣವನ್ನು ಕೊಟ್ಟರು. ಅಧ್ಯಕ್ಷರು ಶಾಲೆಗೆ ಒಂದು ಚಲೋದಾದ ಕಟ್ಟಡವನ್ನು ಗ್ರಾಮದವರು ಬೇಗನೇ ಕಟ್ಟಿಸುವಂತೆ ಸಾಧಿಸಬೇಕೆಂದೂ ಅದರಲ್ಲಿ ಒಂದು ವಾಚನಾಲಯವನ್ನೂ ಪುಸ್ತಕ ಭಂಡಾರವನ್ನೂ ತೆರೆಯಬೇಕೆಂದೂ, ಗ್ರಾಮದವರು ಶಾಲಾ ಉಪಾಧ್ಯಾಯರೊಡನೆ ಸಹಕರಿಸಿ ಗ್ರಾಮದ ಮಕ್ಕಳೆಲ್ಲರು ೫ನೇ ವರ್ಗದ ವರೆಗೆ ವಿದ್ಯಾಭ್ಯಾಸವನ್ನು ಕಲಿಯುವಂತೆ ಸಾಧಿಸಬೇಕೆಂದೂ ಹೇಳಿದರು. ಜಿಲ್ಲಾ ಸಂಘವನ್ನು ಸ್ಥಾಪಿಸಬೇಕೆಂಬ ಠರಾವು ಮಂಜೂರಾಯಿತು. ಅನಂತರ ರಾಜಕೀಯ ಫಲಾಹಾರಗಳಾದ ಸತ್ಕಾರಗಳಾಗಿ ಸಭೆಯು ಅಗಲಿತು.

ಬಂಟವಾಳ — ಬೋರ್ಡ ಹುಡುಗಿಯರ ಶಾಲೆಯ ವರ್ಧಂತಿ ಉತ್ಸವವು ಬರುವ ಜನವರಿ ತಿಂಗಳ ೧೩ನೇ ತಾರೀಕಿಗೆ ಜರಗುವುದು.

ಪಾಣೆಮಂಗಳೂರು — ಇಲ್ಲಿಯ ಬೋರ್ಡ ಹುಡುಗಿಯರ ಶಾಲೆಯ ಸ್ಕೂಲ್ ಡೇ ಸಮಾರಂಭವು ಜನವರಿ ತಿಂಗಳ ತಾರೀಕು ೨೬ನೇ ಶನಿವಾರ ಬಹಳ ವಿಜೃಂಭಣೆಯಿಂದ ಜರಗುವುದು "ರಾಯರ ಚಿತ್ರ ಪರೀಕ್ಷೆ" ಎಂಬ ಚಲೋ ನಾಟಕವು ಅಭಿನಯಿಸಲ್ಪಡುವುದು.

ಕಾವಳಕಟ್ಟೆ — ಇಲ್ಲಿಯ ನಿವಾಸಿಗಳು ಇಲ್ಲಿ ಒಂದು ಬ್ರೇಂಚ್ ಪೋಸ್ಟಾಫೀಸನ್ನು ಇಡಬೇಕೆಂದು ಇಲಾಖೆಯವರಿಗೆ ಅರ್ಜಿ ಮಾಡಿರುವರು. ಈ ಗ್ರಾಮದಲ್ಲಿ ೨೫ ಸಾವಿರ ಜನ ಸಂಖ್ಯೆಯು ಇದೆ. ಅನೇಕ ಮಂದಿ ದೊಡ್ಡ ವರ್ಗದಾರರೂ ಇರುವರು. ಮಾರ್ಗದ ಬದಿಯಲ್ಲಿ ಪೇಟೆ, ಅಂಗಡಿಗಳು, ಬಸ್ತಿ, ದೊಡ್ಡದಾದ ಶಾಲೆ ಮುಂತಾದ್ದು ಇವೆ. ಪ್ರಖ್ಯಾತಿಪಟ್ಟ ಕಾರಂಜೇ ದೇವಸ್ಥಾನವೂ ಇದೆ. ಇದರ ಹತ್ತಿರ ಅನೇಕ ಮನೆಗಳಿದ್ದು ಪೇಟೆಯಂತೆ ಕಾಣುವ ಬಾರಿಬಲ ಎಂಬ ಮಾಡ ಪಡುಕೋಡಿ ಗ್ರಾಮವಿದೆ. ವಗ್ಗದಲ್ಲಿ ಜನಸಂಖ್ಯೆಯೂ ಕಡಿಮೆ, ಸುತ್ತ ಮುತ್ತಲಿನ ಹಳ್ಳಿಗಳು ರಿಜರ್ವ್ ಕಾಡಿನಿಂದ ತುಂಬಿವೆ. ಮಾರ್ಗದ ಬದಿಯಲ್ಲಿ ಮಾತ್ರವೇ ದೂರದೂರ ಕೆಲವು ಅಂಗಡಿಗಳಿವೆ. ಆದುದರಿಂದ ಇಲಾಖೆಯವರು ಬ್ರೇಂಚ್ ಪೋಸ್ಟಾಫೀಸನ್ನು ವಗ್ಗದಲ್ಲಿ ಇಡುವದರ ಬದಲಾಗಿ ಕಾವಳಕಟ್ಟೆಯಲ್ಲಿಯೇ ಇಡುವುದು ಉತ್ತಮ.

ದೇವಶ್ಯಪಡೂರು — ಬಂಟವಾಳ ಸರ್ಕಲಿನ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಸಭೆಯು ಜನವರಿ ತಾ. ೧೯ರಲ್ಲಿ ಇಲ್ಲಿಯ ಬೋರ್ಡ ಶಾಲೆಯಲ್ಲಿ ಜರಗುವುದು.

ವಿವಿಧ ಸಮಾಚಾರಗಳು.

ಮುಂಬಾಯಿಯ ಯುವಕಪರಿಷತ್ತು.

ಮುಂಬಾಯಿಯ ಯುವಕಪರಿಷತ್ತು ಕಳೆದ ೧೩ನೇ ತಾರೀಕಿನ ದಿನ ಕೊನೆಗಂಡಿತು. ಬರುವ ಮೇ ತಿಂಗಳ ೧೦ನೇ ತಾರೀಕಿನ ದಿವಸವು ರಾಷ್ಟ್ರೀಯ ದಿನವನ್ನಾಗಿ ಸಂಸ್ಥಾನದ ಎಲ್ಲೆಡೆಗಳಲ್ಲಿಯೂ ಆಚರಿಸಬೇಕೆಂಬ ಠರಾವು ಕೊನೆಯದಾಗಿ ಮಂಜೂರಾತಿಯನ್ನು ಹೊಂದಿತು. ಈ ಪರಿಷತ್ತಿಗೆ ಬಂದ ಅಮೇರಿಕದ ಮಿ. ಸೌಕವರ್ಥರೆಂಬವರು ಅಮೇರಿಕದ ಯುವಕರ ಪರವಾಗಿ ಈ ಪರಿಷತ್ತಿಗೆ ಅಭಿನಂದನೆಯನ್ನು ಸಮರ್ಪಿಸಿದರು. ಯುವಕ ಧುರೀಣರಾದ ಶ್ರೀ ಜವಾಹರಲಾಲ್ ನೆಹರುಗಳವರೇ ಈ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಮುಖ್ಯವಾಗಿ ಈ ಪರಿಷತ್ತಿನಲ್ಲಿ ಮಂಜೂರಾತಿಯನ್ನು ಪಡೆದ ಠರಾವುಗಳೆಂದರೆ ರಾಷ್ಟ್ರೀಯ ಸ್ವಾತಂತ್ರ್ಯವೇ ಹಿಂದೂಸ್ಥಾನಕ್ಕೆ ಅತ್ಯವಶ್ಯಕವಾದುದು, ಸರ್ವರೂ ಖಾದಿಯ ಉಪಯೋಗ ಮಾಡಬೇಕು, ಸ್ವಾಮನ್ ಕಮಿಶನನ್ನು ಬಹಿಷ್ಕರಿಸಬೇಕು, ಇವುಗಳು ಮಾತ್ರವಲ್ಲದೆ ಬ್ರಿಟಿಷ ಸಾಮಾನುಗಳನ್ನು ಬಹಿಷ್ಕರಿಸಬೇಕೆಂಬ ಠರಾವು ಮಂಜೂರಾಯಿತು. ಹಿಂದೂಸ್ಥಾನದ ಯುವಕರು ರಾಜಕೀಯ ಕಾರ್ಯಕ್ಷೇತ್ರದಲ್ಲಿ ಉತ್ಸಾಹಪೂರಿತವಾದ ಕೆಲಸಗಳನ್ನು ಮಾಡಬೇಕೆಂದೂ, ದೇಶದ ಅಭಿವೃದ್ಧಿಯನ್ನು ಸಾಧಿಸಬೇಕೆಂದೂ ಮಂಜೂರಾಯಿತು. ವಿಶೇಷವಾಗಿ ಬೇರೆಬೇರೆ ಮತಗಳೊಳಗೆ ಮತಭೇದವಿರದೆ ಐಕ್ಯವಿರಬೇಕೆಂದೂ ನಿರ್ಣಯವಾಯಿತು. ಕೊನೆಯದಾಗಿ ಪಂಡಿತ ಜವಾಹರಲಾಲರು ಬಹಳ ಹೊತ್ತು ಮಾತಾಡಿದ ಮೇಲೆ ನಾನಾ ಪ್ರಾಂತಗಳಿಂದ ಬಂದಿದ್ದ ಪ್ರತಿನಿಧಿಗಳು ಪಂಡಿತ ಜವಾಹರಲಾಲರಿಗೆ ಪುಷ್ಪಮಾಲೆಯನ್ನು ಸಮರ್ಪಿಸಿದರು. ಎಲ್ಲೆಲ್ಲಿಯೂ "ಜವಾಹರಲಾಲ್ ಕಿ ಜೈ" ಎಂಬ ಜಯಘೋಷವಾಯಿತು.

ಪನಗಲ್ ರಾಜರ ಮರಣ.

ಬ್ರಾಹ್ಮಣೇತರ ಧುರೀಣರೆನ್ನಿಸಿ ಹೆಸರುಹೊಂದಿದ ಪನಗಲ್ ರಾಜರು ಕಳೆದ ಶನಿವಾರ ರಾತ್ರಿ ಮರಣಹೊಂದಿದರು. ಒಂದು ವಾರದ ಹಿಂದೆ ರಾಜರು ಚೆನ್ನಾದ ದೇಹಾರೋಗ್ಯದಲ್ಲಿದ್ದರೂ ಕಳೆದ ಮಂಗಳವಾರ ಸ್ನಾನವಾದೊಡನೆ ಫಕ್ಕನೆ ಜ್ವರವು ಬಂದು ಅದು ಇನ್‌ಫ್ಲುಯೆಂಜಾ ಜ್ವರಕ್ಕೆ ಪರಿವರ್ತನವಾಯಿತು. ಎರಡು ಡಾಕ್ಟರರುಗಳು ಚಿಕಿತ್ಸೆ ಮಾಡುತ್ತಿದ್ದರು. ದಿನಗಳೆದಷ್ಟಕ್ಕೆ ಜ್ವರವು ಹೆಚ್ಚಿತು. ಶನಿವಾರ ದಿವಸ ಅವರು ಸ್ಮೃತಿಯಲ್ಲಿರಲಿಲ್ಲ. ರಾತ್ರಿ ಸುಮಾರು ೮ನೇ ಗಂಟೆ ಸಮಯಕ್ಕೆ ಇಹಲೋಕದಿಂದ ಮುಕ್ತರಾದರು. ಅವರ ಅಕಾಲಮರಣವು ನಿಜವೆಂದು ಯಾರೂ ಮೊದಲು ನಂಬಿರಲಿಲ್ಲ. ಅವರ ಪ್ರೇತಸಂಸ್ಕಾರವು ಮದರಾಸಿನ ಕೃಷ್ಣಮ್‌ಪೇಟೆಯ ಸ್ಮಶಾನದಲ್ಲಿ ಜರಗಿತು. ಮೂರ್ತಿ ವರ್ಷದ ಅವರ ನಿವಾಸದಿಂದ ಹೊರಟು ಸ್ಮಶಾನಕ್ಕೆ ಸೇರಬೇಕಾದರೆ ಸುಮಾರು ಆರೂವರೆ ಗಂಟೆಯಾಯಿತು. ಮೂರು ಸಾವಿರ ಜನರು ನೆರೆದಿದ್ದರು.

ಇವರು ಕ್ಷತ್ರಿಯ ವಂಶದವರು. ೧೮೬೬ರಲ್ಲಿ ಇವರು ಜನಿಸಿ ಚಿಕ್ಕಪ್ರಾಯದಲ್ಲಿಯೇ, ತೆಲುಗು, ಇಂಗ್ಲಿಷ, ಸಂಸ್ಕೃತ ಮೊದಲಾದವುಗಳನ್ನು ಚೆನ್ನಾಗಿ ಕಲಿತುಕೊಂಡರು. ಮೊದಲು ಇವರು ಉತ್ತರ ಆರ್ಕಾಟು ಡಿಸ್ಟ್ರಿಕ್ಟ್ ಬೋರ್ಡಿಗೆ ಸೇರಿದರು. ತದನಂತರ ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಸೇರಿದರು. ೧೯೧೫ನೇ ಇಸವಿಯಲ್ಲಿ ಆಂಧ್ರ ಪರಿಷತ್ತಿನ ಅಧ್ಯಕ್ಷರಾದರು.

ಬ್ರಾಹ್ಮಣೇತರ ಧುರೀಣರಾಗಿ ಇವರು ಇಂಗ್ಲೆಂಡಿಗೆ ಹೋಗಿ ಹಿಂದೂಸ್ಥಾನದ ಅಭಿವೃದ್ಧಿಯ ಸಲುವಾಗಿ ಪಾರ್ಲಿಮೆಂಟಿನ ಕಮಿಟಿಯ ಮುಂದೆ ಚರ್ಚಿಸಿದರು. ತದನಂತರ ಇವರು ಲೋಕಲ್‌ಸೆಲ್ಫ ಗವರ್ನಮೆಂಟಿನ ಮಂತ್ರಿಗಳಾಗಿ, ೧೯೨೩ರಲ್ಲಿ ರಾಜಾ ಎಂಬ ಬಿರುದನ್ನು ಪಡೆದರು.

ಬಾಲವಿದ್ದ ಶಿಶುವು.

ಟಿನ್ನೆನ್ನಿ ಎಂಬ ಜಿಲ್ಲೆಯ ನೋಕ್ಸ್‌ವಿಲ್ ಪಟ್ಟಣದಲ್ಲಿ ಹುಟ್ಟಿದ ಒಂದು ಹೆಣ್ಣು ಮಗುವಿಗೆ ಒಂದು ಬಾಲವಿರುವುದಂತೆ. ಬಾಲವು ೬ ಇಂಚು ಉದ್ದವಿರುತ್ತದೆ. ಫ್ರೆಂಚ್ ಇಂಡೋ ಚೈನಾ ಎಂಬಲ್ಲಿ ಒಮ್ಮೆ ಹುಟ್ಟಿದ ಮಗುವಿಗೆ ಒಂಭತ್ತು ಇಂಚು ಬಾಲವಿದ್ದಿತು. ಬಾಲವಿದ್ದು ಹುಟ್ಟಿದ ಮಕ್ಕಳ ಸಂಖ್ಯೆಯು ಇದು ವರೆಗೆ ಹೆಚ್ಚಾದರೆ ೩೫ ಆಗಬಹುದು. ಮಗುವು ಹುಟ್ಟಬೇಕಾದರೆ ತಾಯಿಯ ಹೊಟ್ಟೆಯೊಳಗೆ ಅದಕ್ಕೆ ಶರೀರದ ಆರನೇ ಒಂದು ಪಾಲಷ್ಟು ಬಾಲವಿರುವುದು. ಆದರೆ ಹೊಟ್ಟೆಯಿಂದ ಹೊರ ಬರಬೇಕಾದರೆ ಅದು ಮಾಯವಾಗುವುದು. ಈ ಬಾಲವೆಂದರೆ ಬೇರೆಯಲ್ಲ, ಬೆನ್ನೆಲುಬಿನಿಂದ ಹೊರಬರುವ ಬೆನ್ನಿನ ರಜ್ಜು, ಇದು ಹುಟ್ಟುವ ಮುಂಚೆ ಮಾಯವಾಗದಿದ್ದರೆ ಹುಟ್ಟಿದ ತರುವಾಯ ಕಾಣಿಸಿಕೊಳ್ಳುವುದು. ಆದರೆ ಹೊರಗೆ ಕಾಣಿಸಿಕೊಳ್ಳುವ ಈ ರೀತಿಯ ರಜ್ಜುವಿನಲ್ಲಿ ಎಲುಬು ಇರದೆ ರಕ್ತನಾಳಗಳೂ, ನರಗಳೂ ಕೂಡಿಕೊಂಡು ಇರುವುವು.

'ಸಾರಸ್ವತಾಸವ.'

ಓದಿದುದು ಮರೆತು ಹೋಗುತ್ತಿದ್ದರೆ, ಓದಲು ಕುಳಿತರೆ ದೇಜಾರಾಗುತ್ತಿದ್ದರೆ, ದಿನ್ನಿನ ನರಗಳು ಸೇದುತ್ತಿದ್ದರೆ ಶರೀರದಲ್ಲಿ ಲವಲವಿಕೆಯುಲ್ಲದಿದ್ದರೆ, ರಾತ್ರಿ ಚೆನ್ನಾಗಿ ನಿದ್ದೆ ಬಾರದಿದ್ದರೆ, ಇದಿಗೋ! ವರಪ್ರಸಾದದಂತಿರುವ ಸಾರಸ್ವತಾಸವವನ್ನು ಸೇವಿಸಿರಿ ನಿಮಗೆ ತುಂಬಾ ಒಳ್ಳೆಯದಾಗುತ್ತದೆ. ಸೀಸೆ ೧ಕ್ಕೆ ಬೆಲೆ ೧—೦—೦, ಪೋಸ್ಟೇಜು ಬೇರೆ.

ಬಾಲಸುಧೋದಯ.

ಮಕ್ಕಳಿಗೆ ಪುಷ್ಟಿಕಾರಿ ಸಿಹಿಯಾಗಿದೆ. ಕೈಕಾಲು ಸಣ್ಣದಾಗಿ ಹೊಟ್ಟೆ ದಪ್ಪವಾಗಿದ್ದರೂ, ತುಂಬಾ ಬಡವಾಗಿದ್ದರೂ, ದೇಹ ಸದೆ ಭೇದಿಯಾಗುತ್ತಿದ್ದರೂ, ಮಲಬದ್ಧವಿದ್ದರೂ ಬಾಲಸುಧೋದಯವು ಗುಣಪಡಿಸಿ ಮೂಳೆಗಳಿಗೆ ಬಲವನ್ನೂ, ರಕ್ತವೃದ್ಧಿಯನ್ನೂ ಉಂಟು ಮಾಡುತ್ತದೆ. ಸೀಸೆ ೧ಕ್ಕೆ ಬೆಲೆ ೦—೧೨—೦, ಪೋಸ್ಟೇಜು ಬೇರೆ.

ಲೋಕಾಮಯಹರ ಕಸ್ತೂರಿ ಮಾತ್ರೆಗಳು.

ದೊಡ್ಡವರ— ಶೀತ, ನೆಗಡಿ, ಶೀತವಾತ, ಜ್ವರ, ಚಳಿಜ್ವರ, ಕೆಮ್ಮಲು, ಮಲಬದ್ಧ ಅಜೀರ್ಣ, ಹೊಟ್ಟೆನೋವು, ಇಂಪ್ಲೂಯನ್ಜಾ, ಪ್ಲೇಗುಜ್ವರ.

ಮಕ್ಕಳ— ಮಂದ, ಏಳವು, ಜ್ವರಗಳು, ವಾಯು, ಕೆಮ್ಮಲು, ಮಲಬದ್ಧ, ಹೊಟ್ಟೆನೋವು ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ. ಗರ್ಭಸ್ತ್ರೀಯರಿಗೂ ಕುಳಿತರದೇಕಾದವರಿಗೂ ಬಾಣಂತಿಯರಿಗೂ ಸಂಜೀವನ. ೨೫ರಿಂದ ೩೦೦ ಮಾತ್ರೆಗಳ ವರೆಗಿರುವ ಸೀಸೆ ಬೆಲೆ ೪ ಆಣೆ ಒಕ್ಕೆ ೧—೪—೦, ೧೨ ಸೀಸೆಗೆ ೨—೭—೦, ೨೫ ಸೀಸೆಗೆ ೪—೧೦—೦, ಪೋಸ್ಟೇಜು ಬೇರೆ.

"ಬಿವರ್‌ರತ್ನ" ಪ್ರಾಕ್ಯದ ವೆಂಕಟಾಚಲ ಪಂಡಿತರು,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಬ್ರಾಂಚ್ ಆಫೀಸ್, ಚಿಕ್ಕಪೇಟೆ ಬೆಂಗಳೂರು ಸಿಟಿ.
ಹೆಡ್ ಆಫೀಸ್, ಸೀತಾರಾಘವ ವೈದ್ಯಶಾಲಾ, ಮೈಸೂರು.

ಏಜಂಟರು:—
ಅತ್ತಾವರ ಸೋಮಯ್ಯ ಮತ್ತು ಕಂಪೆನಿ, ಸೋಡಾ ಫ್ಯಾಕ್ಟರಿ
ಮಂಗಳೂರು ಟವರ್ಗೆ ಮಾತ್ರ.

ಹೊಸ ವರುಷದ ಅಂಕ.

ಸ್ವದೇಶಾಭಿಮಾನಿಯ ಹೊಸ ವರುಷದ ಅಂಕವು ಜನವರಿಯ ಮೊದಲಿನ ಶುಕ್ರವಾರ ದಿನ ಕಳೆದ ವರ್ಷದ ಅಂಕಕ್ಕಿಂತಲೂ ಹೆಚ್ಚು ಪುಟಗಳೊಡನೆ ಪ್ರಕಟಿಸಲ್ಪಡುವುದು. ಸಂಚಿಕೆಯಲ್ಲಿ ತುಂಬಾ ಚಿತ್ರಗಳು ಈ ಸಂಚಿಕೆಗಾಗಿ ಪ್ರತ್ಯೇಕವಾಗಿ ರೂಚಿಸಲ್ಪಟ್ಟು ಪ್ರಕಟಿಸಲ್ಪಡುವುವು. ಉತ್ತಮ ಲೇಖನಗಳು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಲ್ಪಡುವುವು. ಸಚಿತ್ರವಾದ ಲೇಖನಗಳಿಗೆ ಹೆಚ್ಚಿನ ಪ್ರೋತ್ಸಾಹವು ಸಿಕ್ಕುವುದು. ಚಿತ್ರಗಳನ್ನು ಲೇಖಕರು ಕಳುಹಿಸಬೇಕು. ಅವುಗಳ ಬ್ಲೋಕನ್ನುನಾವೇ ತರಿಸಿಕೊಳ್ಳುತ್ತೇವೆ. ಲೇಖಗಳು ಸ್ವದೇಶಾಭಿಮಾನಿಯ ಹಿಂದೂವರೆ ಕಲಮನ್ನು ಮೀರದಿದ್ದರೆ ಉತ್ತಮ. ದಶಂಬರ ಅಂತ್ಯದೊಳಗಾಗಿ ಲೇಖಗಳು ನಮ್ಮ ಕೈಸೇರಿದರೆ ಮುದ್ರಣವನ್ನು ಸರಿಪಡಿಸಲಿಕ್ಕೆ ಅನುಕೂಲವಾಗುವುದು. ಚಿಕ್ಕ ಕತೆ ಕಾವ್ಯಗಳೂ ಬೇಕಾಗಿರುವುವು. ಕರ್ನಾಟಕದ ಸುಪ್ರಸಿದ್ಧ ಲೇಖಕರು ಈ ನಮ್ಮ ಕೆಲಸದಲ್ಲಿ ಸಹಾಯ ಮಾಡಬೇಕಾಗಿ ವಿನಂತಿ

ಮೆನೇಜರ್.

[illegible] ಮರಿಯ ಸಾಹಸ.

[illegible] ಎಂಬಲ್ಲಿ [illegible] ಮನೆಯಲ್ಲಿ ಒಂದು [illegible] ನಾಯಿ ಮರಿಯಿತ್ತು. ಕುದುರೆ ತಾಂಗೆ ಆ [illegible] ವರುಷ ಪ್ರಾಯದ ಮಗುವಿನ ಮೇಲೆ ವಿಶೇಷ ಪ್ರೀತಿ. ಅದು [illegible] ದರಿಂದ [illegible] ಮಾತ್ರವಲ್ಲದೆ [illegible] ಆದರೆ ಮಗುವಿನೊಡನೆ [illegible] ಬಹು ಸಾಧುಸ್ವಭಾವದಿಂದ ಆಡುತ್ತಿತ್ತು. ಒಂದು [illegible] ಎಲ್ಲಿ ಹುಡುಕಿದರೂ ಸಿಕ್ಕಲಿಲ್ಲ. [illegible] ಕರೆಮ್ಮ ಹುಡುಕಾಡ ತೊಡಗಿದರು. [illegible] ಆಶ್ಚರ್ಯಕರವಾದ ಒಂದು ದೃಶ್ಯವನ್ನು [illegible] ಅಲ್ಲಿ [illegible] ಮಗುವಿನ ಅಂಗಿಯ ತುತ್ತಿಗೆಯನ್ನು [illegible] ಹಿಡಿದು [illegible] ವಾಗಿ ಕುಳಿತಿತ್ತು. ಮಗುವಿನ ಕುತ್ತಿಗೆಯು [illegible] ನೀರಿನ ಮೇಲಿದ್ದಿತು. ಮಗುವು [illegible] ಯಿಂದ ಸ್ಮೃತಿ ತಪ್ಪಿ ಹೋಗಿತ್ತು. ಮಗುವು ಮುಳುಗದಂತೆ ಆ ರೀತಿ ಎಷ್ಟು ಸಮಯದಿಂದ [illegible] ಯು ಮಗುವನ್ನು ಹಿಡಿದುಕೊಂಡು ಇದ್ದಿತೋ, ಯಾರಿಗೂ [illegible] ಮಗುವನ್ನು ಮನೆಗೆ ಕೊಂಡೊಯ್ದು ಹೇಗೂ ಬದುಕಿಸಿ ಕೊಂಡರು.

* * *

ತಂದೆಯ ಕೊಲೆ.

[illegible] ಜಿಲ್ಲೆಯ [illegible] ಶೇವಾನನೆಂಬವನು ತನ್ನ ತಂದೆಯಾದ [illegible] ಪೆರುಮಾಯಿ ಎಂಬ ಹೆಂಗಸನ್ನೂ ಒಂದೇ ಸಮಯದಲ್ಲಿ ಕೊಂದುದಕ್ಕಾಗಿ ಆತನಿಗೆ ಪಾಶಿ ಶಿಕ್ಷೆಯು ವಿಧಿಸೋಣಾಯಿತು. ಅದೇ ಹಳ್ಳಿಯ [illegible] ಅಯ್ಯರ ಶೇವಾನನೆಂಬವನಿಗೂ [illegible] ಶೇವಾನನಿಗೂ ವಿವಾದವುಂಟಾಗಿ ಪಂಚಾಯಿತಗಳಿಂದ [illegible] ಪಂಚಾಯಿತಿಯು ಮಾಡೋಣಾಗಿತ್ತು. ಅವರೂ ಪರಸ್ಪರರೊಳಗೆ ಸ್ನೇಹವಿರಲಿಲ್ಲ. ಆತನ ಹೆಂಡತಿಯಾದ [illegible] ಯೆಂಬವಳು ಆಗಾಗ [illegible] ಅಯ್ಯರು ಶೇವಾನನ ಮನೆಗೆ ಹೋಗುತ್ತಾ ಬರುತ್ತಾ ಇದ್ದಳು. ಇದಕ್ಕೆ ಆಕೆಯ ಗಂಡನು ವಿರೋಧಿಸಿದರೂ [illegible] ಮಾತ್ರ ಶೇವಾನನು ಯಾವ ಆಕ್ಷೇಪವನ್ನೂ ಸೂಚಿಸಿರಲಿಲ್ಲ. ಇದರಿಂದ ತನ್ನ ತಂದೆಯು ತನ್ನ ಹೆಂಡತಿಗೂ, ತನ್ನ ವಿರೋಧಿಗೂ ಸ್ನೇಹವು ಹೆಚ್ಚಲು ಪ್ರೋತ್ಸಾಹಿಸುವ ನೆಂದು ತಂದೆಯ ಮೇಲೆ ಸಿಟ್ಟುಗೊಂಡನು. ಅವರೊಳಗೆ ಆಗಾಗ ಕಲಹಗಳಾಗುತ್ತಲೇ ಬಂದವು. ಒಂದು ದಿನ [illegible] ಸಿಟ್ಟು [illegible] ಏರಿ, ಆತನು ಒಂದು ಕತ್ತಿಯನ್ನು ಹಿಡಿದು ತಂದೆಯ [illegible] ಹೋಗಿ ಆತನನ್ನು ಹೊಡೆದನು. ತಂದೆಯ ಬೊಬ್ಬೆಯನ್ನು ಕೇಳಿ ಸಮೀಪದ ಮನೆಯ ಪೆರುಮಾಯಿಯೆಂಬ ಹೆಂಗಸು ತಂದೆಯ ಸಹಾಯಕ್ಕೆ ಬರಲು ಅವಳೂ ಕತ್ತಿಯಿಂದ ಕೊಲ್ಲಲ್ಪಟ್ಟಳು. ತಂದೆಯೂ ಸತ್ತನು. ಆತನ ಮೇಲೆ ಮೊಕದ್ದಮೆಯಾಗಿ ಮಧುರೆಯ ಜಡ್ಜರು ಆತನಿಗೆ ಪಾಶಿ ಶಿಕ್ಷೆಯನ್ನು ವಿಧಿಸಿದರು.

* * *

ಲಾಹೋರಿನಲ್ಲಿ ಪ್ರಚಂಡ ಕೊಲೆ.

ಲಾಹೋರಿನಲ್ಲಿ ಅಸಿಸ್ಟಾಂಟ್ ಸುಪರಿಂಟೆಂಡಾದ ಮಿ. ಜೆ. ಪಿ. ಸೊಂಡರ್ಸರು ಕಳೆದ ಸೋಮವಾರ ದಿನ ಸಂಜೆ ಘಂಟೆ 4-45ಕ್ಕೆ ಯಾರೋ ಇಬ್ಬರು ಯುವಕರಿಂದ ಗುಂಡುಹೊಡೆದು ಕೊಲ್ಲಲ್ಪಟ್ಟರು. ಅವರು ಒಂದು ಮೋಟಾರ ಸೈಕಲಿನ ಮೇಲೆ ಕುಳಿತು ಹೋಗುತ್ತಿರುವಾಗ ಎದುರಿನಿಂದ ಇಬ್ಬರು ಯುವಕರು ಬಂದು ರಿವೋಲ್ವರಿನಿಂದ ಅವರ ಕಡೆ ಗುಂಡು ಹೊಡೆದರು. ಗುಂಡನ್ನು ತಪ್ಪಿಸಲು ಅವರು ಬದಿಗೆ ಸರಿಯಲು ಕೆಳಕ್ಕೆ ಬಿದ್ದು ಮೋಟಾರಿನಡಿಯಲ್ಲಾದರು. ಒಡನೆ ಯುವಕರು ಅಲ್ಲಿಗೆ ಓಡಿ ಬಂದು ಅವರಿಗೆ ಗುಂಡು ಹೊಡೆದು ಕೊಂದು ಓಡಿಹೋದರು. ಅವರ ಹಿಂದೆಯೇ ಇದ್ದ ಪೋಲಿಸ್ ಇನ್ಸ್‌ಪೆಕ್ಟರರೂ ಯುವಕರ ಕಡೆಗೆ ಗುಂಡು ಹೊಡೆದರೂ ಗುರಿಯು ತಪ್ಪಿಹೋಯಿತು. ತರುವಾಯ ಒಬ್ಬ ಪೊಲೀಸನು ಅವರನ್ನು ಹಿಂಬಾಲಿಸಿದನು. ಅವನೂ ಗುಂಡು ಹೊಡೆಯಲ್ಪಟ್ಟು ಹಾದಿಯಲ್ಲಿಯೇ ಬಿದ್ದು ಸತ್ತನು. ಈ ಇಬ್ಬರು ಯುವಕರು ಡಿ. ಎ. ವಿ. ಕಾಲೇಜನ್ನು ಹೊಕ್ಕು ಹಿಂದಣ ಹಾದಿಯಿಂದ ತಪ್ಪಿಸಿ ಸ್ಯಾಕಲಿನ ಮೇಲೆ ಕುಳಿತು ಓಡಿಹೋದರು. ಕೊನೆಗೆ ಸ್ಯಾಕಲುಗಳನ್ನು ಒಂದು ಬಯಲಿನಲ್ಲಿ ಬಿಟ್ಟು ಎಲ್ಲಿಯೋ ಓಡಿಹೋದರು. ಕೊಲೆಗಾರರಲ್ಲಿ ಒಬ್ಬನು ಹಿಂದೂ ಉಡುಪನ್ನು ತೊಟ್ಟುಕೊಂಡಿದ್ದನಂತೆ. ಇದಕ್ಕಾಗಿ ಸಂಶಯದ ಮೇಲೆ ನಾಲ್ವರನ್ನು ಹಿಡಿದು ಕೈದುಮಾಡಿರುವರು. ಮಿ. ಜೆ. ಪಿ. ಸೊಂಡರ್ಸರು ಲಾಹೋರಿಗೆ ಬಂದುದು ಬರೇ ಸ್ವಲ್ಪ ಸಮಯದ ಹಿಂದೆ. ಜನರಿಗೆ ವಿರೋಧವಾದ ಕೆಲಸಗಳಾವುವನ್ನೂ ಅವರು ಮಾಡಿರಲಿಲ್ಲ. ಲಾಹೋರಿನಲ್ಲಿ ಸ್ಯಾಮನ್ ಕಮಿಶನ್ ಬಂದಾಗ ಜಗಳವಾದಾಗ ತಡೆಗಟ್ಟಲು ಮಾತ್ರ ಅವರು ಮುಂದರಿಸಿದ್ದರು. ಲಾಲಾಜಿಯವರು ಸತ್ತ [illegible] ದಿನವೇ ಅವರು ಕೊಲ್ಲಲ್ಪಟ್ಟರು.

(೩ನೇ ಪುಟದಿಂದ ಮುಂದುವರಿದುದು.)

ಮೇಲಿನ ಎಲ್ಲಾ ಸಂಗತಿಗಳಿಂದ ತುಳುರಾಜ್ಯವು ತಮಿಳು, ಮಲೆಯಾಳ, ತೆಲುಗು, ಕರ್ನಾಟಕ ರಾಜ್ಯಗಳ ಒಳಭಾಗವಾಗಿಯೇ ಇತ್ತಲ್ಲದೆ ಸ್ವತಂತ್ರರಾಜ್ಯವಾಗಿ ಇರಲೇ ಇಲ್ಲ. ಹೀಗಿರುವುದರಿಂದ ಈ ತುಳು ರಾಜ್ಯವು ಪರಾಧೀನವಾಗಿಯೇ ಇತ್ತೆಂದು ಹೇಳಬಹುದು.

ತುಳುರಾಜ್ಯವು ಪರಾಧೀನವಾಗಿರಲು ಕಾರಣವೇನು? ತುಳುರಾಜ್ಯದ ವಿಸ್ತೀರ್ಣವು ಬಹಳ ಕಡಿಮೆ. ರಾಜ್ಯದ ಉತ್ಪತ್ತಿಯೂ ಕಡಿಮೆ. ಪ್ರಜೆಗಳಿಂದ ಸರಕಾರಕ್ಕೆ ಸಿಕ್ಕುವ ಕಂದಾಯವೂ ಕಡಿಮೆ. ರಾಜ್ಯವನ್ನು ಸ್ವತಂತ್ರವಾಗಿ ಆಳಬೇಕಾದರೆ ಸುತ್ತಮುತ್ತಲು ಇರುವ ಬಲಿಷ್ಠರಾದ ರಾಜರೊಡನೆ ಹೋರಾಡಿ ಯುದ್ಧವನ್ನು ಮಾಡಿ ಸ್ವತಂತ್ರವನ್ನು ಇಟ್ಟುಕೊಳ್ಳಲಿಕ್ಕೆ ಬಲವಾದ ಸೈನ್ಯವನ್ನು ದೇಶದ ರಕ್ಷಣೆಗಾಗಿ ಇಡಬೇಕು. ಈ ರೀತಿಯಲ್ಲಿ ಇದ್ದರೆ ಸುತ್ತಲೂ ಇರುವ ಅರಸರಿಗೆ ಈ ರಾಜ್ಯದ ಮೇಲೆ ದಂಡೆತ್ತಿ ಬರಲು ಧೈರ್ಯವು ಬರುವುದಿಲ್ಲ. ಬಲವಾದ ಸೈನ್ಯವನ್ನು ಇಡಬೇಕಾದರೆ ಸೈನಿಕರ ಖರ್ಚಿಗೂ, ಸೈನಿಕರಿಗೆ ಬೇಕಾದ ಯುದ್ಧಸಾಮಗ್ರಿಗಳನ್ನು ತಯಾರಿಸಲಿಕ್ಕೂ ಹಣವು ಬೇಕಾಗಿದೆ. ಅದಲ್ಲದೆ ದೇಶದ ಜನಸಂಖ್ಯೆಯೂ ಹೆಚ್ಚಾಗಿದ್ದರೆ ಸೈನಿಕರು ಹೆಚ್ಚು ಮಂದಿಯಿರಲು ಸಾಧ್ಯವಾಗುತ್ತದೆ. ಭಂಡಾರಕ್ಕೆ ಸಿಕ್ಕುವ ಹಣವು ಹೆಚ್ಚಾಗಬೇಕಾದರೆ ನಾನಾತರದ ಕೈಗಾರಿಕೆಗಳನ್ನು ತಯಾರಿಸುವುದರಿಂದಲೂ ದೇಶದ ವ್ಯಾಪಾರವು ಹೆಚ್ಚಾಗುವುದರಿಂದಲೂ ರಾಜ್ಯದ ಕಂದಾಯವು ಅಭಿವೃದ್ಧಿಯಾಗುವುದು. ದೇಶವು ಎಲ್ಲಾ ವಿಧದಲ್ಲಿಯೂ ಮುಂದರಿಯುವುದು. ಸ್ವತಂತ್ರವಾಗಿ ಇರಲು ಸಾಧ್ಯವಾಗುವುದು. [illegible] ತುಳುದೇಶವು ಸುತ್ತಲೂ ಇರುವ ಬಲಿಷ್ಠರಾದ ಕರ್ನಾಟಕ, ಮಲೆಯಾಳ, ತಮಿಳು, ತೆಲುಗು ರಾಜರ ಸ್ವಾಧೀನವಿರಬೇಕಾಯಿತು.

ತುಳುದೇಶವು ಸ್ವತಂತ್ರವಾಗಿ ಇಲ್ಲದೆ ಇದ್ದುದರಿಂದ ಈ ದೇಶಕ್ಕೆ ಬಂದ ದೋಷಗಳು. ಈ ದೇಶದಲ್ಲಿ ಯಾವದೊಂದು ಬಂದರಗಳೂ ಸ್ಥಾಪನೆಯಾಗಲಿಲ್ಲ. ಯಾವ ತರದ ಕೈಗಾರಿಕೆಗಳೂ ಅಭಿವೃದ್ಧಿಯಾಗಲಿಲ್ಲ. ಹಡಗ ಕಟ್ಟುವ ವಿದ್ಯೆಯೂ ಅಭಿವೃದ್ಧಿಯಾಗಲಿಲ್ಲ. ಇಲ್ಲಿ ಹಡಗ ಕಟ್ಟುವ ಮಲೆಯಾಳಿ ಬಡಿಗೆಯವರು ಮಲೆಯಾಳ ದೇಶದವರು. ಚಿಪ್ಪುಗಾರ ಮತ್ತು ಚಾರೋಡ ಬಡಿಗೆಯವರು ಗೋವೆಯವರೂ, ಕರ್ನಾಟಕ ದೇಶದವರೂ ಆಗಿರುತ್ತಾರೆ. ನೇಯುಗೆಯವರು ತಮಿಳು ಭಾಷೆ ಆಡುವವರು, ಒಳ್ಳೇ ತರದ ಮಣ್ಣಿನ ಪಾತ್ರ ಮಾಡುವ ಕನ್ನಡ ಕುಂಬಾರರು, ತೆಲುಗು ದೇಶದವರು. ಇಲ್ಲಿಯ ದೇವಸ್ಥಾನಗಳನ್ನು ಕೊಂಕಣಿಕಾರರಲ್ಲಿ ಕಟ್ಟಿದವರು ಮಲೆಯಾಳಿಗಳು. ತುಳುದೇಶದ ವ್ಯಾಪಾರಸ್ಥರೂ ಕಂಡುಬರುವುದಿಲ್ಲ. ವಿದ್ಯಾವಂತರಾದ ಬ್ರಾಹ್ಮಣರೂ ಪರದೇಶದವರು. ಮೇಲಿನ ಎಲ್ಲಾ ಸಂಗತಿಗಳಿಂದ ಸ್ವತಂತ್ರವಾಗಿರದೆ ಪರಸ್ವಾಧೀನವಾಗಿದ್ದುದರಿಂದ ತುಳುದೇಶವು ಎಲ್ಲಾ ವಿಧದಲ್ಲಿಯೂ ಬಹಳ ಹೀನಸ್ಥಿತಿಯಲ್ಲಿರಲು ಕಾರಣವಾಯಿತು.

ಈಗಲೂ ತುಳುದೇಶವನ್ನು ಪ್ರತ್ಯೇಕ ಸಂಸ್ಥಾನವನ್ನಾಗಿ ಮಾಡಲು ಇರುವ ಅಡಚಣೆಗಳು. ತುಳುಭಾಷೆಯನ್ನು ಉಡುಪಿ, ಕಾರ್ಕಳ, ಮಂಗಳೂರು, ಉಪ್ಪಿನಂಗಡಿ ತಾಲೂಕುಗಳು ಪಯಸ್ವಿನಿ ವರೆಗಿನ ಕಾಸರಗೋಡು ತಾಲೂಕಿನ ಭಾಗ ಇಷ್ಟು ಭಾಗದಲ್ಲಿ ಮಾತ್ರವೇ ಆಡುತ್ತಾರೆ. ಆದುದರಿಂದ ತುಳುಸಂಸ್ಥಾನವನ್ನು ಭಾಷಾಸೂತ್ರಕ್ಕೆ ಅನುಸಾರವಾಗಿ ಒಂದು ಪ್ರತ್ಯೇಕ ಸಂಸ್ಥಾನವಾಗಿ ಮಾಡಬೇಕಾದರೆ ಮೇಲಿನ ತಾಲೂಕುಗಳನ್ನು ಒಳಕೊಂಡಿರುವ ಪ್ರದೇಶಗಳನ್ನು ಮಾತ್ರವೇ ಗಣನೆಗೆ ತರಬೇಕಾಗಿದೆ.

ಈಗ ದಕ್ಷಿಣಕನ್ನಡಜಿಲ್ಲೆಯಿಂದ ಸರಕಾರಕ್ಕೆ [illegible] ಲಕ್ಷ ಚಿಲ್ಲರೆ ರೂಪಾಯಿ ಕಂದಾಯವಾಗಿ ಸಿಕ್ಕುತ್ತದೆ. ತುಳುಪ್ರದೇಶವನ್ನು ವಿಂಗಡಿಸಿದರೆ ಕುಂದಾಪುರ ತಾಲೂಕನ್ನು ಬಿಟ್ಟರೆ ಇದರಿಂದ [illegible] ಲಕ್ಷ ರೂಪಾಯಿ ಕಳೆಯಬೇಕಾಗುತ್ತದೆ. ಕಾಸರಗೋಡು ತಾಲೂಕಿನಿಂದ [illegible] ಲಕ್ಷ ರೂಪಾಯಿ ಕಳೆಯಬೇಕಾಗುತ್ತದೆ. ಹೀಗೆ ಕಳೆದರೆ ಶುದ್ಧ ತುಳುದೇಶದಿಂದ [illegible] ಲಕ್ಷ ರೂಪಾಯಿ ಮಾತ್ರವೇ ಕಂದಾಯವಾಗಿ ಸಿಕ್ಕುವುದು. ಈ ಹಣದಿಂದ ತುಳು ಪ್ರಾಂತೀಯ ಸರಕಾರದ ಬೇರೆಬೇರೆ ಇಲಾಖೆಗಳಿಗೆ ಹಣ ಒದಗಿಸುವುದಕ್ಕೆ ಹಣದ ಅಭಾವವು ಕಂಡುಬರುತ್ತದೆ. ಗವರ್ನರರು ಅವರ ಸಿಬಂದಿ, ನ್ಯಾಯವಿಧಾಯಕ ಸಭೆಯ ಖರ್ಚು ಮಂತ್ರಿಗಳು, ಸೆಕ್ರೆಟರಿಗಳು ಅವರ ಸಿಬಂದಿ, ಪೋಲಿಸ್, ಕೋಓಪರೇಟಿವ್, ಮೆಡಿಕಲ್, ವಿದ್ಯೆ, ಆರೋಗ್ಯ, ಎಂಜಿನೀಯರಿಂಗ್, ಮೀನಿನ ಇಲಾಖೆ, ಕೈಗಾರಿಕೆ ಇಲಾಖೆ, ಕಾಡಿನ ಇಲಾಖೆ, ಬೇಸಾಯದ ಇಲಾಖೆ, ಪಶು ವೈದ್ಯ ಮುಂತಾದ ಇಲಾಖೆಗಳಿಗೆ ಹಣಬೇಕಾಗಿದೆ. ಒಂದು ಬಂದರವನ್ನಾದರೂ ಕಟ್ಟಿಸಬೇಕು. ಇವುಗಳ ಖರ್ಚಿಗೆ [illegible] ಲಕ್ಷ ರೂಪಾಯಿ. ಸಾಕಾದೀತೆಂಬ ಸಂಗತಿಯನ್ನು ವಿಚಾರಿಸಿ ನಂತರ ತುಳು ಸಂಸ್ಥಾನವನ್ನೇ ಮಾಡುವ ಆಲೋಚನೆಯನ್ನು ಮಾಡಬೇಕಾಗಿದೆ. ಆದುದರಿಂದ ತುಳುಸಂಸ್ಥಾನ ಮಾಡುವ ಆಲೋಚನೆಗೆ ಯಾವ ದಾರಿಯೂ ಕಾಣುವದಿಲ್ಲ.

ಆದರೆ ವಿಜಯನಗರ ಅರಸರ ಕಾಲದ ವರೇಗೆ ಇದ್ದ ತುಳುದೇಶ ಎಂಬ ಹೆಸರನ್ನು ತುಳುಭಾಷೆ ಆಡುವ ಪ್ರದೇಶಕ್ಕೆ ಕೊಟ್ಟು ಇದನ್ನು ಭಾವೀಕರ್ನಾಟಕ ಸಂಸ್ಥಾನದ ಭಾಗವಾಗಿ ಮಾಡುವುದು ಸಾಧ್ಯವಾಗುತ್ತದೆ.

ಮೇಲಿನ ಸಂಗತಿಗಳಿಂದ ತುಳುಸಂಸ್ಥಾನ ಸ್ಥಾಪಕರು ಆಶ್ಚರ್ಯಗೊಳ್ಳಬೇಕು, ಅವರ ಆಲೋಚನೆಗೆ ಅಡ್ಡಿ ಬರಬೇಕು, ಎಂದು ಬರೆದುದಲ್ಲ. ಆದುದರಿಂದ ತುಳುಸಂಸ್ಥಾನಸ್ಥಾಪಕ ಮಹಾಶಯರು ಪ್ರತ್ಯೇಕ ಸಂಸ್ಥಾನ ಸ್ಥಾಪನೆ ಸಾಧ್ಯವಾಗುವ ಉಪಾಯಗಳನ್ನು ತೋರಿಸಿ ತುಳು ಸಂಸ್ಥಾನ ಮಾಡಿದರೆ ತುಳುದೇಶವು ಉದ್ಧಾರವಾದೀತು.

ತುಳುದೇಶ ನಿವಾಸಿ.

ಮಂಗಳೂರು ಮುನಿಸಿಪಾಲಿಟಿ
ನೋಟೀಸು.

ಮುನ್ಸಿಪಲ್ ಶಹರಿನ ಉತ್ತರ ಮತ್ತು ಪೂರ್ವ ಭಾಗದ ಅಂಶವನ್ನು ಈ ಕೆಳಗೆ ಕಾಣಿಸಿದ ಸರ್ವೆ ನಂಬ್ರಗಳ ಗಡಿಗಳನ್ನು ಕೂಡಿಸಿಕೊಂಡು ಪಟ್ಟಣವನ್ನು ವಿಸ್ತರಿಸಲಿಕ್ಕೆ ಕೌನ್ಸಿಲಿನವರು ನಿಶ್ಚಯಿಸಿದ್ದಾರೆಂಬ ಸಂಗ್ತಿಯನ್ನು ಈ ಮೂಲಕ ಸರ್ವರಿಗೂ ತಿಳಿಸೋಣಾಗುತ್ತದೆ.

ಈ ವಿಷಯದಲ್ಲಿ ಯಾವ ತರದ ಸೂಚನೆಯಾಗಲೀ ಯಾ ಆಕ್ಷೇಪಣೆಯಾಗಲೀ ಇರುವ ಪಕ್ಷದಲ್ಲಿ ಬರುವ 1929ನೇ ಇಸವಿ ಜನವರಿ ತಾ. 31ರ ಒಳಗೆ ತಿಳಿಸಿದಲ್ಲಿ ಅವುಗಳನ್ನು ಆಲೋಚಿಸಲಾದೀತು.

ಮಂಗಳೂರು ಮುನ್ಸಿಪಲ್ ಗಡಿಯನ್ನು ವಿಸ್ತರಿಸಬೇಕೆಂದು ಆಲೋಚಿಸಿದ ಗಡಿಗಳು—

ಉತ್ತರ	ರೆವನ್ಯೂ ಸರ್ವೆ ನಂಬ್ರ 19, 18, 16, 15, 13, 12, ಕಾವೂರ್ ಗ್ರಾಮ. 22, 18, 27, 10, 49, 38, 35, 30, 33, 62, 67 ದೇರೆಬೈಲು ಗ್ರಾಮ.
ಪೂರ್ವ	ರೆವನ್ಯೂ ಸರ್ವೆ ನಂಬ್ರ 18, 21, 19, 41, 63, 54 ಕೊಡಿಯಾಲಬೈಲ ಗ್ರಾಮ.
	48, 47, 49, 51, 69, 56, 65, 68, 125, 127, 128 ಪದವು ಗ್ರಾಮ.
	9, 62, 25, 26, ಮರೋಳಿ ಗ್ರಾಮ.
	103, 104, 106, 107, 109, 110 ಕದ್ರಿಗ್ರಾಮ.
	6, 7, 8, 21, 19, 27, 17, 16, 16, 11 ಕಂಕನಾಡಿ ಗ್ರಾಮ.
	7, 6, 72, 71, 79, 80, 81, 82, 86, 87, 88 ಮತ್ತು 89 ಜಪ್ಪಿನ ಮೊಗರ ಗ್ರಾಮ.

ಮುನ್ಸಿಪಲ ಆಫೀಸ,
ಮಂಗಳೂರು, 15-12-28

Nellikai Venkat Rao.
Chairman M. C.

ಮೆಕ್ ಕೊರ್ಮಿಕ್ ಡೀರಿಂಗ್

ಚಟ್ಟನೂಗಾ
ಕಬ್ಬಿನ ಗಾಣಗಳು.

ಚಟ್ಟನೂಗಾ ಕಬ್ಬಿನ ಗಾಣಗಳು

ಕಬ್ಬುಬೆಳೆಸಲ್ಪಡುವ ಎಲ್ಲಾ ಸ್ಥಳಗಳಲ್ಲಿಯೂ, ಬಾಳುವಿಕೆ, ಹೆಚ್ಚು ರಸವನ್ನೀಳುವ ಶಕ್ತಿ, ಗಟ್ಟಿ ಸಾಮಾನು ಇವುಗಳಿಗಾಗಿ ಹೆಸರು ಹೊಂದಿರುತ್ತವೆ

ಗಂಟೆಗೆ 88ರಿಂದ 250 ಗೆಲನು ರಸವೀಳುವ ರೀತಿಯ ಅನೇಕ ಸೈಜು ಗಳಲ್ಲಿ ಕಟ್ಟಲ್ಪಟ್ಟಿರುತ್ತದೆ.

ಎತ್ತಿನ ಅಥವಾ ಬೆಲ್ಟು ಪವರುಗಳಿಗೆ ಅನುಕೂಲವಾಗಿದೆ.

VOLKART BROS. ENGINEERS

ಎಲ್ಲಾ ತರದ ಕೃಷಿ ಸಾಮಾನುಗಳು ದಾಸ್ತಾನು ಇವೆ.

Armenian Street MADRAS.

Chikmagalur Public Conveyance Motor Service

CHIKMAGALUR.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್

ಚಿಕ್ಕಮಗಳೂರು

ಟೆಲಿಗ್ರಾಮ್ ವಿಳಾಸ [illegible] — Tel: Conveyance.

ಕಡೂರು, ಚಿಕ್ಕಮಗಳೂರು, ಮಂಗಳೂರು.

(1) ಈ ಕಂಪೆನಿಯವರು ಪ್ರಯಾಣಿಕರ ಅನುಕೂಲತೆಗಾಗಿ ಕಡೂರು (M. S. M Railway) ರೈಲ್ವೇ ಸ್ಟೇಶನಿನಿಂದ 12 ಗಂಟೆಗಳೊಳಗಾಗಿ ಚಿಕ್ಕಮಗಳೂರು, ಮೂಡಿಗೆರೆ, ಚಾರ್ಮಾಡಿ ಘಾಟು ಮಾರ್ಗವಾಗಿ ಬೆಳ್ತಂಗಡಿಗೆ [illegible] 1 ಗಂಟೆ ಸಮಯಕ್ಕೆ ಸೇರಿ, ಅಲ್ಲಿ ಸಿದ್ಧವಾಗಿರತಕ್ಕ ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಕಂಪೆನಿಯಾದ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಇವರ ಕಂಪೆನಿ ಬಸ್ಸುಗಳಲ್ಲಿ ಕೂಡಲೆ ಹೊರಟು ಗುರುವಾಯನಕೆರೆ, ಉಪ್ಪಿನಂಗಡಿ [illegible] ಮಾರ್ಗವಾಗಿ ಸುಬ್ರಹ್ಮಣ್ಯ ವಗೈರೆ ಕಡೆಗಳಿಗೆ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಗುರುವಾಯನಕೆರೆ, ಮೂಡಬಿದರೆ, [illegible] ಮಾರ್ಗವಾಗಿ ಉಡುಪಿಗೆ ಸೇರಿಸತಕ್ಕ, ಬೆಳ್ತಂಗಡಿಯಿಂದ ಕೂಡಲೇ ಹೊರಟು ಪುಂಜಾಲಕಟ್ಟೆ, ಬಂಟವಾಳ ಮಾರ್ಗವಾಗಿ ಸಾಯಂಕಾಲ 4—30 ಗಂಟೆ ಒಳಗೆ ಮಂಗಳೂರಿಗೆ, ತಲ್ಪಿಸತಕ್ಕ ಮೋಟಾರು ಬಸ್ಸುಗಳನ್ನು ಏರ್ಪಡಿಸಿರುತ್ತೆ.

ಮೋಟಾರ ಬಸ್ಸುಗಳು ಹೊರಡುವ ಟೈಮುಗಳ ವಿವರ.

(2) ಕಡೂರಿನಿಂದ ಬೆಳಿಗ್ಗೆ 4 ಗಂಟೆಗೆ ಹೊರಟು 6 ಗಂಟೆಗೆ ಚಿಕ್ಕಮಗಳೂರಿಗೆ ಸೇರಿ ಪ್ರಯಾಣಿಕರ ವಿಶ್ರಾಂತಿಗೆ [illegible] ಅವಕಾಶ ಕೊಟ್ಟು 7½ ಗಂಟೆಗೆ ಸಿದ್ಧವಾಗಿರುವ ನಮ್ಮ ಕಂಪೆನಿ ಬಸ್ಸಿನಲ್ಲಿ ಹೊರಟು ಮೂಡಿಗೆರೆಗೆ 9 ಗಂಟೆಗೆ, ಕೊಟ್ಟಿಗೆಹಾರಕ್ಕೆ 10-30ಕ್ಕೆ ಮೈಸೂರು ಗಡಿಗೆ 11-45ಕ್ಕೂ, ಚಾರ್ಮಾಡಿ ಘಾಟಿಯಲ್ಲಿ ಅತ್ಯುತ್ತಮವಾದ ಬಸ್ಸಿನಲ್ಲಿ 12-30ಕ್ಕೆ ಚಾರ್ಮಾಡಿಗೂ ಸೇರಿ, ಅಲ್ಲಿಂದ ಕೂಡಲೇ ಹೊರಟು ಉಜಿರೆ ಮೋಟಾರ ಸ್ಟೇಶನ್ ಆದ ಧರ್ಮಸ್ಥಳ ರೋಡಿಗೆ ದಿನ 1-30ಕ್ಕೂ ಬೆಳ್ತಂಗಡಿಗೆ 1-45ಕ್ಕೆ ಸಾಯಂಕಾಲ 4-30ಕ್ಕೆ ಮಂಗಳೂರಿಗೆ ತಲ್ಪಿ ಆ ಟೈಮಿಗೆ ಸಿದ್ಧವಾಗಿರುವ ರೈಲಿನಲ್ಲಿ ಮಂಜೇಶ್ವರ, [illegible] ಗೋಡು, ಮಲಬಾರು, ಕನ್ನನೂರು ಪ್ರಾಂತಗಳಿಗೂ ಆದಿನ ದಿನವೇ ತೊಂದರೆ ಇಲ್ಲದೆ ಸುಖವಾಗಿ ಹೋಗಿ ಸೇರಬಹುದು.

(3) ಇದೇ ರೀತಿ ಮಂಗಳೂರಿನಿಂದ ಬೆಳಿಗ್ಗೆ 7 ಗಂಟೆಗೆ ದಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್ ಇವರ ಬಸ್ಸಿನಲ್ಲಿ ಹೊರಟು 8ಕ್ಕೆ ಬಂಟವಾಳಕ್ಕೂ 10-30ಕ್ಕೆ ಬೆಳ್ತಂಗಡಿಗೂ 11 ಘಂಟೆಗೆ ಧರ್ಮಸ್ಥಳದ ರೋಡಾದ ಉಜಿರೆ ಸ್ಟೇಶನಿಗೂ 12 ಘಂಟೆಗೆ ಚಾರ್ಮಾಡಿಗೂ 12-30ಕ್ಕೆ ಮೈಸೂರು ಗಡಿಗೂ ಸೇರಿ ಅಲ್ಲಿಂದ ಒಡನೆ ಹೊರಟು 2-30ಕ್ಕೆ ಕೊಟ್ಟಿಗೆಹಾರಕ್ಕೂ ಸಾಯಂಕಾಲ 4 ಘಂಟೆಗೆ ಮೂಡಿಗೆರೆಗೂ 6 ಘಂಟೆ ಒಳಗೆ ಚಿಕ್ಕಮಗಳೂರಿಗೂ ನಿರಾಯಾಸವಾಗಿ ಸೇರಿ ಚಿಕ್ಕಮಗಳೂರಲ್ಲಿ ಬೇಕಾಗುವ ಟಿಫಿನ್ ಆಹಾರ ವಗೈರೆ ತೆಗೆದುಕೊಂಡು ವಿಶ್ರಮಿಸಿಕೊಳ್ಳಲು ಅವಕಾಶವಿರುತ್ತದೆ. ನಂತರ ಚಿಕ್ಕಮಗಳೂರಿನಿಂದ ಸಾಯಂಕಾಲ 6-30ಕ್ಕೆ ಮತ್ತು 7-30ಕ್ಕೆ ಹೊರಟು ಹುಬ್ಬಳ್ಳಿ ವಗೈರೆ ಕಡೆಗಳಿಗೆ ಹೋಗುವ ಪ್ರಯಾಣಿಕರಿಗೆ ಕಡೂರಿನ ಎಕ್ಸ್‌ಪ್ರೆಸ್ ಟ್ರೈನಿಗೆ ಸೇರಿ ರೈಲ್ವೇ ಮೂಲಕ ಮಾರನೇ ಬೆಳಿಗ್ಗೆ 8 ಘಂಟೆ ಒಳಗೆ ಹುಬ್ಬಳ್ಳಿಗೂ, ಗದಗ್, ಪಂಡರಾಪೂರ್ ಗೋವಾ, ಬೆಳಗಾಂ, ಪೂನಾ, ಮತ್ತು ಮುಂಬಾಯಿ ವಗೈರೆ ಕಡೆಗಳಿಗೆ ಪ್ರಯಾಣ ಮಾಡತಕ್ಕವರಿಗೆ ಅನುಕೂಲಪಡಿಸಿರುತ್ತೆ.

ಚಿಕ್ಕಮಗಳೂರಿನಿಂದ ರಾತ್ರಿ 8 ಮತ್ತು 8-30ಕ್ಕೆ ಹೊರಡುವ ಬಸ್ಸುಗಳಲ್ಲಿ ಹೊರಟು ರಾತ್ರಿ 10 ಘಂಟೆಗೆ ಕಡೂರಿಗೆ ಸೇರಿ ಬೊಂಬಾಯಿ ಕಡೆಯಿಂದ 10 ಘಂಟೆಗೆ ಬರತಕ್ಕ ಮೈಲ್ ಟ್ರೈನಿನಲ್ಲಿ ಹೊರಟು ಬೆಂಗಳೂರು, ಮೈಸೂರು, ಮದ್ರಾಸ್ ವಗೈರೆ ಕಡೆಗಳಿಗೂ 3-30ಕ್ಕೆ ಬರುವ ಟ್ರೈನಿನಲ್ಲಿ ಹುಬ್ಬಳ್ಳಿ, ಪೂನಾ ವಗೈರೆ ಪ್ರಾಂತಗಳಿಗೆ ಹೋಗತಕ್ಕ ಪ್ರಯಾಣಿಕರಿಗೆ ಅನುಕೂಲಪಡಿಸಿರುತ್ತೆ.

ವಿಶೇಷ ಮಾಹಿತಿಗೆ ಮೇಲಿನ ವಿಳಾಸಕ್ಕೂ ಮೆನೇಜಿಂಗ್ ಪ್ರೊಪ್ರೈಟರರಿಗೂ ಬರೆದುಕೊಳ್ಳಬಹುದು.

ಬಿ. ಎನ್. ಹನುಮಂತಪ್ಪ, ಫ್ಯೂರಡೂನ್ ಸೊರಾಬ್, ಕೆ. ಸೂರಪ್ಪ ಸೆಟ್ಟಿ,

ಪ್ರೊಪ್ರೈಟರ್ಸ್

ಘಾಟಿಯಲ್ಲಿಯೂ ಕೂಡ ಸಿ. ಪಿ. ಸಿ. ಕಂಪೆನಿಯವರ
ಟೆಕ್ಸಿಗಳ ಬದಲಿಗೆ ಬಸ್ಸು ಚಲಾವಣೆಯಾಗುವುದು.

THE CANARA PUBLIC CONVEYANCE CO., LTD, MANGALORE.

(ESTABLISHED 1914)

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ, ಲಿಮಿಟೆಡ್,

ಮಂಗಳೂರು.

ಇದು ದಕ್ಷಿಣ ಕನ್ನಡ ಜಿಲ್ಲೆಯ ಪ್ರಧಾನ ಮೋಟರ ಕಂಪೆನಿಯಾಗಿದೆ.

ಈ ಕಂಪೆನಿಯ ಬಸ್ಸುಗಳು ಜಿಲ್ಲೆಯ ಎಲ್ಲಾ ಪುಣ್ಯಕ್ಷೇತ್ರಗಳಿಗೆ ಹೋಗುವವು. ಮೈಸೂರು, ಕೊಡಗು, ಮತ್ತು ಉತ್ತರ ಕಾನಡಾಗಳ ಬಸ್ಸುಗಳೊಂದಿಗೆ ಕನೆಕ್ಷನು ಕೂಡ ಇರುವದು.

ಮಧ್ವಾಚಾರ್ಯರ ಜನ್ಮಸ್ಥಾನವನ್ನೂ ಶ್ರೀ ಕೃಷ್ಣನ ಪ್ರತಿಮೆಯನ್ನೂ

ನೋಡಬಿಚ್ಛಿಸುವಿರಾದರೆ ಪ್ರತಿದಿನವೂ ಮೂರಾವರ್ತಿ ಕರಾವಳಿ ಮಾರ್ಗವಾಗಿಯೂ ಎರಡಾವರ್ತಿ ಕಾರ್ಕಳ ಮಾರ್ಗವಾಗಿಯೂ ಹೊರಡುವ ಕಂಪೆನಿಯ ಬಸ್ಸುಗಳಲ್ಲಿ ಕುಳಿತು ನಾಲ್ಕೇ ತಾಸುಗಳಲ್ಲಿ ಉಡುಪಿಗೆ ತಲಪಿರಿ. ಒಂದೇ ಶಿಲೆಕಲ್ಲಿನಿಂದ ರಚಿತವಾಗಿ, 37 ಫೀಟು ಉನ್ನತವಾಗಿ ಎತ್ತರವಾದ ಶಿಲಾಪರ್ವತದ ಮೇಲೆ ನೆಲಸಿರುವ,

ಕಾರ್ಕಳ ಗೋಮಟೇಶ್ವರನ

ಪ್ರತಿಮೆಯನ್ನು ನೋಡಲು ಬಹಳ ಸುಲಭ. ಮಂಗಳೂರಿನಿಂದ ಬಸ್ಸುಗಳು ಎರಡು ಸಲ ಹೊರಟು ಮೂರೇ ತಾಸುಗಳ ಸಮಯದಲ್ಲಿ ಕಾರ್ಕಳಕ್ಕೆ ತಲಪುವವು.

ಕೊಲ್ಲೂರು ಮೂಕಾಂಬಿಕಾ ದೇವಾಲಯ

ಎಂಬ ಅತ್ಯಂತ ಪುಣ್ಯ ಸ್ಥಳವನ್ನು ನೋಡಬೇಕಾದರೆ ಏಳೇ ಘಂಟೆಗಳೊಳಗೆ ಕುಂದಾಪುರಕ್ಕೆ ತಲಪಬಹುದು.
'ಸುಬ್ರಹ್ಮಣ್ಯ'ಕ್ಕೆ ಹೋಗಬೇಕಾದರೆ ಅದಕ್ಕೆ ಅತ್ಯಂತ ಸಮೀಪದಲ್ಲಿರುವ ಉಪ್ಪಿನಂಗಡಿಗೆ ಬೇಗನೆ ತಲಪುವಿರಿ.
ಶ್ರೀ ಶಂಕರಾಚಾರ್ಯರ ಸ್ಥಾನವಾದ ಶೃಂಗೇರಿಯನ್ನು ಸಂದರ್ಶಿಸಲು ಬಹಳ ಸುಲಭವಿದೆ. ನಮ್ಮ ಬಸ್ಸುಗಳಿಗೂ ಮೈಸೂರಿನ ಸರ್ವಿಸಿಗೂ ಕನೆಕ್ಷನ್ ಇರುತ್ತದೆ.
ಪ್ರಾಚೀನಕಾಲದ ದೇವಸ್ಥಾನಗಳಿಂದ ಕೂಡಿದ ಗೋಕರ್ಣಕ್ಕೆ ಹೋಗುವರೆ ನಮಗೆ ಉತ್ತರ ಕನ್ನಡಾ ಜಿಲ್ಲೆಯವರ ಸರ್ವಿಸಿಗೆ ಕನೆಕ್ಷನ್ ಇರುತ್ತದೆ.
ದಕ್ಷಿಣ ಮಹಾರಾಷ್ಟ್ರ, ಮೈಸೂರು, ಕೊಡಗು, ಉತ್ತರ ಹಿಂದುಸ್ಥಾನ ಮೊದಲಾದ ಸ್ಥಳಗಳಿಗೆ ಹೋಗುವರೆ, ನಮ್ಮ ಬಸ್ಸುಗಳಲ್ಲಿ ಪ್ರಯಾಣಮಾಡಿ ಅನಂತರ ರೈಲನ್ನು ಹತ್ತಲು ಸುಲಭವಾಗುವದು.
ಈ ಕಂಪೆನಿಯ ಬಸ್ಸುಗಳು ಮಡಿಕೇರಿಗೆ ಹತ್ತು ಘಂಟೆಗಳೊಳಗೂ, ಕಡೂರಿಗೆ ಹದಿನೆರಡು ಘಂಟೆಗಳೊಳಗೂ, ತರೀಕೆರೆ ಮಾರ್ಗವಾಗಿ ಶಿಮೊಗ್ಗಕ್ಕೆ ಹದಿನಾರು ಘಂಟೆಗಳೊಳಗೂ ತಲಪುವವು.
ಹೆಚ್ಚಿನ ಮಾಹಿತಿಗೆ ಮಂಗಳೂರು ಹೆಡ್ ಆಫೀಸಿಗೆ ಬರೆದರೆ ತಿಳಿಸಲಾಗುವುದು.

Secretary,

The Canara Public Conveyance Co., Ltd., S, Mangalore.

[illegible]

13102

THE BANKING & INDUSTRIAL INDSYCATE LTD.,
BOMBAY.

9250/—Cash loans granted without interest for 10 years in 1928. Concession enlistment commences from 1st November for distributing loans of Rs. 5000/- on 31st January 1929. Paid Agents Wanted. For rules and list of loans granted, enclose two annas stamps.

BANKING & INDUSTRIAL SYNDICATE, Ltd.
Bombay 2.

Diamonds ವಜ್ರಗಳು **Diamonds**

BOLA MANGESH ROW & Co.,
MANGALORE.

Agents & Direct importers of Superior Daimonds of Antwerp

ಹೋಲ್ಯಾಂಡಿನ ಅಂಟವರ್ಪಿನಿಂದ ತರಿಸುವ ವಜ್ರಗಳು
— ವ್ಯಾಪಾರಕ್ಕಿವೆ. —

ಬೋಳ ಮಂಗೇಶ ರಾವು.
ಮಂಗಳೂರು

ಮಲೇರಿಯಾನ
ಸರ್ವಜ್ವರಸಂಹಾರಿಣಿ

ಕ್ರಯ. 8 ಔನ್ಸಿನ 1-8-0 ½ ಡಜನಿಗೆ 8-8-0 ಡಜನಿಗೆ 16-8-0

ಆಗಿನ ಕಾರ್ಯಕ್ರಮವೂ ಅಂತಹ ಮಹತ್ವದ್ದಾಗಿದ್ದಿತು. ಅಸಹಕಾರವೂ ಅಸಹಕಾರದ ಪರಿಣಾಮದ ಸತ್ಯಾಗ್ರಹವೂ ಸರಕಾರದಿಂದ ಪತ್ಯಾಯಪೂರ್ವಕ ಇಚ್ಛಿತ ವಿಷಯಗಳನ್ನು ಹೊಂದಬಹುದೆಂಬ ಆಶೆಯನ್ನು ಕೊಡುತ್ತಿದ್ದವು; ಮತ್ತು ಅದೇ ಉದ್ದೇಶದಿಂದಲೇ ಆ ಕಾರ್ಯಕ್ರಮವು ರಚಿಸಲ್ಪಟ್ಟಿದ್ದಿತು. ಆದರೆ ಈಗ ಕಾಂಗ್ರೆಸ್ಸಿಗೆ ಆ ಆತ್ಮವಿಶ್ವಾಸವೂ ಇಲ್ಲ; ಆ ಅಧಿಕಾರವೂ ಇಲ್ಲ. ಅಂತಹ ಸ್ಥಿತಿಯಲ್ಲಿ ಅದು ತನಗೆ ಸ್ವಾತಂತ್ರ್ಯವೇ ಬೇಕೆಂದು ಹಟಸಾಧಿಸುವುದರಲ್ಲಿ ಯಾವ ಧ್ಯೇಯ ಸಾಧನೆಯೂ ಕಂಡುಬರುವುದಿಲ್ಲ.

ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವೇ ಸಿಕ್ಕಬೇಕೆಂದು ಹಿಂದೀಯನಾದ ಪ್ರತಿ ಒಬ್ಬನಿಗೂ ಆಶೆ ಇದ್ದೇ ಇದೆ. ಆದರೆ ಅದನ್ನು ಹೊಂದುವ ಬಗೆ ಹೇಗೆ? ಹೊಂದಿದರೆ ಪರಿಣಾಮವೇನು? ಹೊಂದುವ ಕ್ರಮ ಯಾವುದು? ಎಂಬುದರಲ್ಲಿ ಬಹಳವಾಗಿ ಭಿನ್ನಾಭಿಪ್ರಾಯವಿರುತ್ತದೆ. ಮಾತ್ರವಲ್ಲ, ಬ್ರಿಟಿಷರಿಂದ ಹಿಂದೂಸ್ಥಾನಕ್ಕೆ ಬಹಳ ಹಾನಿಯುಂಟಾಗಿರುವುದಾದರೂ, ಸಮಾನತೆಯ ಭಾವದಿಂದ ಬ್ರಿಟಿಷ ಸಾಮ್ರಾಜ್ಯದಲ್ಲಿ ಒಳಗೊಂಡು ಇರಲಿಕ್ಕೆ ಸಾಧ್ಯವಿದ್ದರೆ ಹಿಂದೂಸ್ಥಾನವು ಸ್ವತಂತ್ರವಾಗಿಯೇ ಇರಬೇಕೆಂಬ ಹಠವನ್ನು ಏಕೆ ತೊಟ್ಟುಕೊಳ್ಳಬೇಕೆಂದು ನಮಗೆ ತಿಳಿಯುವುದಿಲ್ಲ. ಕೆನಡಾದಂತೆಯೂ ದಕ್ಷಿಣ ಆಫ್ರಿಕದಂತೆಯೂ, ಆಸ್ಟ್ರೇಲಿಯಾದಂತೆಯೂ ಬ್ರಿಟಿಷ ಸಾಮ್ರಾಜ್ಯದೊಳಗೆ ಇರಬಹುದಾದರೆ ಹಿಂದೂಸ್ಥಾನವು ಸ್ವಾತಂತ್ರ್ಯಕ್ಕಿಂತ ಅದನ್ನೇ ಹೆಚ್ಚಾಗಿ ಬಯಸಲಿಕ್ಕೆ ಪ್ರಬಲವಾದ ಕಾರಣಗಳಿರುತ್ತವೆ.

ಶ್ರೀ. ಶ್ರೀನಿವಾಸ ಅಯ್ಯಂಗಾರ, ಜವಾಹಿರಲಾಲ ನೆಹರುರವರು ಮೊದಲಾದವರು ಈ ಸ್ವಾತಂತ್ರ್ಯ ಸಾಧನೆಯ ಮುಂದಾಳುಗಳಾಗಿದ್ದಾರೆ. ಡೊಮಿನಿಯನ್ ಸ್ಟೇಟಸ್ ಸಿಕ್ಕುತ್ತದೆಂಬ ಭರವಸೆಯೇ ಇಲ್ಲದಿರುವಾಗ ಸ್ವಾತಂತ್ರ್ಯದ ಸಾಧನೆಯನ್ನು ಬಿಟ್ಟು ತಮ್ಮ ಧ್ಯೇಯವನ್ನು ತಗ್ಗಿಸಲೇಕೆ? ಎಂದು ಅವರ ಅಭಿಪ್ರಾಯ. ಆದರೆ ಹಿಂದೂಸ್ಥಾನದ ಒಳಗಿನ ರಾಜಕೀಯ [illegible] ಸಮುದಾಯ ತತ್ವಗಳಿಗೆ ಸ್ವಾತಂತ್ರ್ಯ ಸಾಧನೆಯನ್ನು [illegible] ಹಿಸುವಷ್ಟು ಅನುಕೂಲವಿಲ್ಲ.

ಡೊಮಿನಿಯನ್ ಸ್ಟೇಟಸನ್ನು ಅಲ್ಲಗಳೆಯಲಿಕ್ಕೆ ಮೌಲಾನಾ ಅಲಿ ಬಂಧುಗಳೂ ಮುಂದಾಗಿದ್ದಾರೆ. ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯವೇ ಬೇಕೆಂದು ಅವರ ಪತ್ಯಾಯ. ಆದರೆ ಅಲಿ ಬಂಧುಗಳಿಗೆ ಬ್ರಿಟಿಷ ದ್ವೇಷವಿರುವಷ್ಟೇ ಹೊರ ಮುಸಲ್ಮಾನ ರಾಷ್ಟ್ರಗಳ ಸ್ನೇಹವಿರುತ್ತದೆ. ಹಿಂದೂಸ್ಥಾನವು ಸ್ವತಂತ್ರವಾದ ಸಮಯದಲ್ಲಿ ಯಾವುದೊಂದು ಹಿಂದೂ ಮುಸಲ್ಮಾನ ಪ್ರಭೇದವು ಮೇಲೆದ್ದರೆ, ಆ ಪ್ರಭೇದಗಳನ್ನು ಒಳಗೊಳಗೆ ತೀರ್ಮಾನಿಸುವುದಕ್ಕಿಂತಲೂ, ಹೊರಗಿನ ಮುಸಲ್ಮಾನೀ-ಸಹಾಯವು ಮುಸಲ್ಮಾನರಿಂದ ನಿರೀಕ್ಷಿಸಲ್ಪಡಬಹುದು. ಏಕೆಂದರೆ ಈಗಲೂ ಹಿಂದೂ ಮುಸಲ್ಮಾನರಿಗೆ ಪರದೇಶದ ಮುಸಲ್ಮಾನ ರಾಷ್ಟ್ರಗಳ ಮೇಲಿರುವಷ್ಟು ಅಭಿಮಾನವು ಹಿಂದೂಸ್ಥಾನದ ಮೇಲಿರುವುದಿಲ್ಲ. ಆದುದರಿಂದ ಮುಸಲ್ಮಾನರು ಹೊರ ಮುಸಲ್ಮಾನ ರಾಷ್ಟ್ರಗಳು ಪರರಾಷ್ಟ್ರಗಳೆಂದೂ, ಹಿಂದೂಸ್ಥಾನವು ತಮ್ಮ ಪ್ರೇಮದ ಜನ್ಮಭೂಮಿಯೆಂದೂ ಪೂರ್ತಿ ತಿಳಿಯುವ ತನಕ ಹಿಂದೂಸ್ಥಾನದ ಒಮ್ಮಿಂದೊಮ್ಮೆಯೇ ನಿರಾಧಾರವಾದ ಸಂಪೂರ್ಣ ಸ್ವತಂತ್ರ ರಾಷ್ಟ್ರವಾಗುವುದು ಅನುಚಿತವು. ಈ ವಿಷಯದಲ್ಲಿ ತುರ್ಕಿ, ಪರ್ಶಿಯಾ ಮತ್ತು ಅಫಘಾನಿಸ್ಥಾನಗಳ ಸುಸಂಘಟನೆಯು ಮುಖ್ಯವಾದುದಾಗಿದೆ.

ಹಲವು ಧ್ಯೇಯವಾದಿಗಳು ಡೊಮಿನಿಯನ್ ಸ್ಟೇಟಸನ್ನು ನಿರೋಧಿಸುವರು. ಹಲವು ಕಡೆಗಳಲ್ಲಿ ಒಪ್ಪುವ ಠರಾವುಗಳು ರೂಪಿಸಲ್ಪಡುತ್ತಿವೆ. ಆದರೆ ಇಂತಹ ಸಮಾಜದ ಮೂರ್ಖತನದ ಠರಾವುಗಳಿಂದ ತಮ್ಮನ್ನು ತಾವೇ ಮೋಸಮಾಡಿಕೊಳ್ಳಬಹುದಷ್ಟೇ ಅಲ್ಲದೆ ಬೇರೆ ಲಾಭವಿಲ್ಲ. ಈಗ ಡೊಮಿನಿಯನ್ ಸ್ಟೇಟಸ್ಸಿಗೆ ಒಪ್ಪಿದ ಕೂಡಲೇ ಅದು ಸಿಕ್ಕುತ್ತದೆಂದು ನಾವು ಹೇಳುವುದಲ್ಲ, ಆದರೆ ಈ ಧ್ಯೇಯದಲ್ಲಿ ಎಲ್ಲಾ ರಾಜಕೀಯ ಪಕ್ಷಗಳನ್ನು ಒಟ್ಟುಗೂಡಿಸಬಹುದೆಂದೂ, ಕಾಂಗ್ರೆಸು ಮತ್ತೊಂದು ಬಾರಿ ಕಾರ್ಯಕಾರಿಯಾದ ಚಳವಳವನ್ನು ಹೂಡಲು ಶಕ್ತವಾಗುವ ವರೆಗೆ ಇದಕ್ಕಾಗಿಯೇ ಪ್ರಯತ್ನಿಸುವುದರಿಂದ ರಾಜಕೀಯ ಜಾಗೃತಿಯು ಚೆನ್ನಾಗಿ ಆಗಬಹುದೆಂದೂ ನಮಗೆ ತೋರುವುದು. ಕಾರ್ಯತಃ ಸಂಪೂರ್ಣ ಸ್ವಾತಂತ್ರ್ಯವು ಬಹಳ ಎಚ್ಚರಿಕೆಯಿಂದ ಬರತಕ್ಕುದಿದೆ ಎಂಬುದನ್ನು ಹೇಳಲೇ ಬೇಕಾಗುತ್ತಿದೆ. ಇಂತಹ ವಸ್ತುಸ್ಥಿತಿಯಲ್ಲಿ ಕಾಂಗ್ರೆಸು ಬರೇ ತಾತ್ವಿಕವಾದದಲ್ಲಿ ಶಕ್ತಿಯನ್ನು ಹಾಳುಮಾಡುವುದು ದುಃಖಕರವಾಗಿದೆ.

ವಿದೇಶ ವರ್ತಮಾನ.

— ಜರ್ಮನಿಯ ರಾಷ್ಟ್ರೀಯ ಪಕ್ಷದವರು ರೈಚ್‌ಸ್ಟೇಗಿಗೆ ಒಂದು ಮಸೂದೆಯನ್ನು ಸಮರ್ಪಿಸಲಿರುವರು. ಆ ಮಸೂದೆಯು ಅಂಗೀಕರಿಸಲ್ಪಟ್ಟರೆ, ಜರ್ಮನಿಯಲ್ಲಿ ವಾಸಿಸುವ ಯಾವ ವಿದೇಶಿಯನಾದರೂ, ಬರಹ ಮೂಲಕವಾಗಲೀ, ಬಾಯ್ಮಾತಿನಿಂದಾಗಲೀ, ಕಳೆದ ಮಹಾ ಯುದ್ಧವು ಜರ್ಮನರ ದೆಸೆಯಿಂದಾಯಿತೆಂದು ಹೇಳಿದರೆ, ಆತನು ಮೂರು ತಿಂಗಳುಗಳ ಕಾರಾಗೃಹವಾಸಕ್ಕೆ ಬದ್ಧನಾಗಿ, ಅನಂತರ ಜರ್ಮನಿಯಿಂದ ಹೊರಗೆ ಹಾಕಲ್ಪಡುವನು. ಜರ್ಮನರ ಪೈಕಿ ಯಾರಾದರೂ ಹೇಳಿದರೆ, ಇದೇ ರೀತಿ ಆತನೂ ಬಂಧಿಸಲ್ಪಡುವನು. ಅಲ್ಲದೆ ತನ್ನ ಹಕ್ಕುಸ್ವಾತಂತ್ರ್ಯಗಳೆಲ್ಲವನ್ನೂ ಕಳಕೊಳ್ಳುವನು. ಆದರೆ ಈ ಮಸೂದೆಯು ಅಂಗೀಕರಿಸಲ್ಪಡುವುದು ಮಾತ್ರ ಸಂಶಯಾಸ್ಪದ.

— ಲಂಡನಿನಲ್ಲಿ ಎರಡು ದೊಡ್ಡ ಗ್ಯಾಸಿನ ಟಾಂಕಿಗಳು ಒಡದು ಹೋಗಿ ಬಹಳ ಜನರಿಗೆ ಜಖಮಾಯಿತು. ಭೂಕಂಪದಂತೆ ಶಬ್ದವುಂಟಾಯಿತು.

— ಮೊಸ್ಕೊ ಪಟ್ಟಣದಲ್ಲಿ ತಯಾರಾಗುತ್ತಿರುವ ಬ್ರೆಡ್ಡಿನ ಪರಿಮಾಣವನ್ನು ಕಡಿಮೆಮಾಡಬೇಕೆಂದು ಅಲ್ಲಿನ ಸರಕಾರದವರು ಒಂದು ಹುಕುಮನ್ನು ಕೊಟ್ಟಬಿಟ್ಟರು. ಆದರಂತೆ ಬ್ರೆಡ್ಡಿನ ತಯಾರಿಯು ಕಡಿಮೆಯಾಯಿತು. ಜನರಿಗೆ ತಿನ್ನಲು ಆಹಾರವಿಲ್ಲದೆ, ಒಂದೆರಡು ದಿನ ಜನರು ಹುಚ್ಚರಂತಾಗಿ ಕಂಡಡೆಗೆ ಆಹಾರದ ಹುಡುಕಾಟಕ್ಕಾಗಿ ಓಡಿದರು. ಆದರೆ ಒಡನೆಯೇ ಈ ಹುಕುಮು ರದ್ದುಪಡಿಸಲ್ಪಟ್ಟುದರಿಂದ ಹೆಚ್ಚಿನ ತೊಂದರೆಗಳೇನೂ ಉಂಟಾಗಲಿಲ್ಲ.

— ಕ್ರಿಸ್‌ಮಸಿಗಾಗಿ ಅಮೇರಿಕನರು ಖರ್ಚುಮಾಡುವ ಹಣವು ಅಷ್ಟಿಷ್ಟಲ್ಲ. ಸುಮಾರು ೨೫ ಮಿಲಿಯ ಸ್ಟರ್ಲಿಂಗುಗಳು ಅಲ್ಲಿ ಕೇವಲ ಸಂತೋಷದ ಸಲುವಾಗಿಯೇ ವ್ಯಯಿಸಲ್ಪಡುವವು. ಮಾಂಸವನ್ನೂ, ಭಕ್ಷ್ಯಗಳನ್ನೂ ಕೊಳ್ಳಲು ಹಣವನ್ನು ವ್ಯಯಿಸಿ ಇಂಗ್ಲೆಂಡಿನಿಂದ ತರಿಸುವರು.

ತುರ್ಕಿ ರಾಜಧಾನಿ ಮುಸ್ತಾಫಾ ಕೆಮಲ್‌ಪಾಷಾರವರ ಮೇಲೆ ಎರಡೆಣಿಸಿದ ಸಲುವಾಗಿ ಬಹಳ ಜನರು ಕೈದು ಮಾಡಲ್ಪಟ್ಟರು. ಹಲವರನ್ನು ಬಿಡುಗಡೆ ಮಾಡಿರುವರು. ಒಂಬತ್ತು ಜನರನ್ನು ರಿಮಾಂಡಿನಲ್ಲಿಟ್ಟಿರುವರು, ಇವರಲ್ಲಿ ಕದ್ರಿಯಾ ಎಂಬುವ ಇಬ್ಬರು ಮುಸಲ್ಮಾನ ಸಹೋದರಿಯರಿರುವರು. ಒಬ್ಬಳು ಒಬ್ಬ ಇಜಿಪ್ಶಿಯನ್ ಡಾಕ್ಟರನ ಮೊದಲನೆಯ ಹೆಂಡತಿಯಾಗಿದ್ದಳು.

— ಕಳೆದ ಮಂಗಳವಾರ ಮತ್ತು ಬುಧವಾರ ಬ್ರಿಟನಿನಲ್ಲಿ ಯಾವ ಪತ್ರಿಕೆಗಳೂ ಪ್ರಕಟಿಸಲ್ಪಡಲಿಲ್ಲ.

— [illegible] ಒಬ್ಬ [illegible] ಮತ್ತು [illegible] ಹೆಂಗಸು [illegible] ಬೀದಿಯ ಕಂಬದ ಬಳಿಗೆ [illegible] ಆತನ ಮುಖದ ಮತ್ತು ಕೈಗಳ ಚರ್ಮವನ್ನು [illegible] ತಿಂದನು. ಆತನು ಬಹಳ ಪ್ರಯತ್ನಪಟ್ಟು ಆ ಹೆಂಗಸನ್ನು ಕೊಂದನು. ಆ ಹೆಂಗಸಿಗೆ ಆರೇ ಆಹಾರ ಎಂದರೆ ಒಂದು [illegible] ಎಂಬ ನಾಯಿಗಳು ದೊರೆತವು.

— ಜರ್ಮನಿಯ ಕಲೋನ್ ಎಂಬಲ್ಲಿ ಒಬ್ಬ ಪೋಲಿಸ್ ಆಫೀಸರನು ತನ್ನ ಮಗನನ್ನು ಕಳವಿನ ತಪ್ಪಿನ ಮೇಲೆ ಕೈದು ಮಾಡಬೇಕಾಯಿತು. ಕೈದುಮಾಡಿ ಕೋಳವನ್ನು ಹಾಕುವಾಗ ಅವರಿಬ್ಬರೊಳಗೆ ಜಗಳವಾಗಿ ಮಗನು ತಂದೆಗೆ ಬಲವಾದ ಪೆಟ್ಟು ಹೊಡೆಯುವುದರಲ್ಲಿದ್ದನು. ಆಗ ತಂದೆಯು ಗುಂಡುಹೊಡೆದು ತನ್ನ ಸ್ವಂತ ಮಗನನ್ನೇ ಗಾಯಗೊಳಿಸಿದನು. ಮಗನು ಆಸ್ಪತ್ರೆಯಲ್ಲಿರುವನು. ಬದುಕುವ ಸ್ಥಿತಿ ಇರುವುದಿಲ್ಲ.

— ಪೆರಿಸಿನಿಂದ ಚಿತ್ರಪ್ರಪತ್ತಿ ಸಿಲ್ಕು ಉಡಿಗೆಗಳನ್ನು ಕಳವು ಮಾಡಬೇಕೆಂದು ಪ್ರಯತ್ನಿಸಿದ ಒಬ್ಬ ಬ್ರಿಟಿಷ್ ಹೆಂಗಸಿಗೆ ಜೋವರಿನಲ್ಲಿ ೯೩೫ ಪೌಂಡು ಜುರುಮಾನೆ ವಿಧಿಸಿರುವರು.

— ಚ್ಯಾನಾ ಮತ್ತು ಬ್ರಿಟನು ಇವುಗಳೊಳಗೆ ಒಂದು ಸಂಧಿಯು ನಡೆದಿರುತ್ತದೆ. ಇದರಿಂದ ಈ ರಾಜ್ಯಗಳೊಳಗಿನ ಪರಸ್ಪರ ಸಂಬಂಧವು ಭವಿಷ್ಯತ್ತಿನಲ್ಲಿ ಚೆನ್ನಾಗಿ ಬೆಳೆಯಲಿದೆ.

— ಸೋವಿಯಟ್ ಸರಕಾರಕ್ಕೆ ಹೊಸ ಅಫಘಾನ ಮಂತ್ರಿಯಾದ ಗುಲಾಮ್ ನಾಬಿಖಾನನೆಂಬವನು ಬೆರಿಸಿನಿಂದ ಮೊಸ್ಕೊ ಪಟ್ಟಣಕ್ಕೆ ಬಂದು ತಲುಪಿರುವನು.

— ಮಿಂಡನೋವಾ ದ್ವೀಪದ ಕೊಟ್ಯಾಬಟೊ ಎಂಬ ಪಟ್ಟಣದಲ್ಲಿ ಭೂಕಂಪವುಂಟಾಗಿ ಪಟ್ಟಣವೇ ಹಾಳಾಗಿ ಹೋಗಿರುವುದು. ಇದುವರೆಗೆ ಬಂದ ವರ್ತಮಾನದಿಂದ ನಾಲ್ವರು ಸತ್ತಿರುವರೆಂದೂ, ೧೦ ಜನರಿಗೆ ಜಖಮಾಗಿರುತ್ತದೆಂದೂ ತಿಳಿದುಬರುತ್ತದೆ.

— ಫ್ರಾನ್ಸ್ ಮತ್ತು ಬ್ರಿಟನು ಈ ಎರಡು ದೇಶಗಳ ಉದ್ಯೋಗಿಕ ಪರಿಸ್ಥಿತಿಗಳೊಳಗೆ ಬಹಳೇ ವ್ಯತ್ಯಾಸವಿದೆ. ಬ್ರಿಟನಿನಲ್ಲಿ ನಿರುದ್ಯೋಗಿಗಳ ಸಂಖ್ಯೆ ಮಿಲಿಯಗಟ್ಟಲೆ. ಆದರೆ ಫ್ರಾನ್ಸಿನಲ್ಲಿ ಕೆಲಸವಿಲ್ಲದವರ ಸಂಖ್ಯೆಯು ಬರೇ ನೂರಕ್ಕಿಂತ ಕಡಿಮೆಯಾಗಿರುವುದಂತೆ.

— ರಶ್ಯದೊಡನೆ ವ್ಯಾಪಾರವನ್ನು ಇನ್ನು ಮುಂದಕ್ಕೆ ಪ್ರಾರಂಭಿಸುವ ಸಲುವಾಗಿ ಬ್ರಿಟಿಷರು ಮೊಸ್ಕೊ ಪಟ್ಟಣಕ್ಕೆ ವ್ಯಾಪಾರಿ ಪ್ರತಿನಿಧಿಗಳನ್ನು ಕಳುಹಿಸಲು ನಿಶ್ಚಯಿಸಿರುವರು. ಜರ್ಮನಿಯೊಂದಿಗೆ ವ್ಯಾಪಾರದ ಒಪ್ಪಂದವನ್ನು ಅವರು ಮೊದಲೇ ಮಾಡಿಕೊಂಡಿರುವರು.

— ಲಂಡನಿನಲ್ಲಿ ಮೆಡಿಕಲ್ ಶಾಲೆಗೆ ಬರುವ ಹೆಂಗಸರ ಸಂಖ್ಯೆಯು ವಿಶೇಷವಾಯಿತು. ಇದು ಸರಿಯಲ್ಲವೆಂದು ತಿಳಿದು ಹೆಂಗಸರ ಒಂದು ಮೆಡಿಕಲ್ ಶಾಲೆಯನ್ನು ಮುಚ್ಚಿರುವರು.

— ಲಂಡನಿನ ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದ ಹೆಂಗಸೊಬ್ಬಳು ಮದುವೆಯಾದಳು. ಒಡನೆಯೇ ಆಕೆಯು ಕೆಲಸವನ್ನು ಬಿಡಬೇಕೆಂದು ಅಧಿಕಾರಿಗಳ ಹುಕುಮಾಯಿತು. ಆದರೂ ಆಕೆಯು ಕೆಲಸವನ್ನು ಬಿಡಲಿಲ್ಲ. ಆಕೆಗೆ ಸಂಬಳವು ಕೊಡಲ್ಪಡಲಿಲ್ಲ. ಇದಕ್ಕಾಗಿ ಲಿಂಕನ್‌ಶಾಯರಿನ ಒಬ್ಬ ಅಧ್ಯಾಪಕನಾದ ಡೋರಿಸ್ ಬೆಂಟನೆಂಬವನು ಹೆಂಗಸರು ಮದುವೆಯಾದ ಮೇಲೆ ಕಲಿಸಬಹುದೋ, ಬಾರದೋ ಎಂಬುದನ್ನು ನಿರ್ಧರಿಸಲು ಕೋರ್ಟಿನಲ್ಲಿ ವ್ಯಾಜ್ಯ ಮಾಡಲಿರುವನು.

ಒಳದೇಶ ವರ್ತಮಾನ.

— ಕೆಲವು ದಿನಗಳ ಹಿಂದೆ ಮುಂಬಾಯಿಯ ಗಿರಣಿಗಳ ಕೂಲಿಕಾರರೊಳಗೂ ಮುಂಬಾಯಿ ಪೋಲೀಸರೊಳಗೂ ಜಗಳವು ನಡೆದಿದ್ದಿತು. ಆ ಜಗಳದಲ್ಲಿ ಪೆಟ್ಟು ತಗಲಿದ್ದ ಒಬ್ಬ ಪೋಲೀಸನೂ ಸತ್ತುಹೋದನು.

— ಕಲಕತ್ತೆಯಲ್ಲಿ ನಡೆಯುವ ರಾಷ್ಟ್ರೀಯ ಮಹಾಸಭೆಯ ಭಾಷಣಗಳನ್ನೂ ಇನ್ನಿತರ ಮಾತುಗಳನ್ನೂ ಬ್ರೋಡ್‌ಕಾಸ್ಟಿನ ಮೂಲಕ ಅಮೇರಿಕದಲ್ಲಿ ಕೇಳಿಸುವಂತೆ ಮಾಡಲು ಪ್ರಯತ್ನಗಳು ನಡೆಯುತ್ತಲಿವೆ.

— ಕೊಯಮುತ್ತೂರಿನಲ್ಲಿ ಕೆಲವೇ ತಿಂಗಳುಗಳ ಹಿಂದೆ ಮದುವೆಯಾಗಿದ್ದ ಪಿ. ಸಿಸ್ ಶೀಹಾಲಕ್ಷ್ಮಿ ಎಂಬ ಹದಿನಾರು ವರುಷ ಪ್ರಾಯದ ಯುವತಿಯು ದೇವಳದ ಕೆರೆಗೆ ಹಾರಿ ಆತ್ಮಹತ್ಯವನ್ನು ಮಾಡಿಕೊಂಡಳು. ಕಾರಣವೇನೆಂದು ತಿಳಿದಿಲ್ಲ. ಇದನ್ನು ನೋಡುವುದಕ್ಕಾಗಿ ಸಾವಿರಗಟ್ಟಲೆ ಜನರು ಕೆರೆಯ ಬಳಿ ಬಂದು ಕೂಡಿದ್ದರು.

— ಫೆಬ್ರವರಿಯ ಕಡೆಯ ವಾರದಲ್ಲಿ ಪಾಟಿಯಾಲದಲ್ಲಿ ಮೂರನೇ ಎಗ್ರಿಕಲ್ಚರಲ್ ಮತ್ತು ಇಂಡಸ್ಟ್ರಿಯಲ್ ಪ್ರದರ್ಶನವು ನಡೆಯಲಿದೆ.

— ಗಯಾ ಜಿಲ್ಲೆಯಲ್ಲಿ ಜಮೀನ್ದಾರರು ಅಧಿಕವಾದ ತೆರಿಗೆಯನ್ನು ಹೊರಿಸಿರುವರು ತಪ್ಪೆಂದೂ, ಅದನ್ನು ತಗೆದು ಹಾಕುವ ಬಗ್ಗೆ ಪ್ರಯತ್ನಿಸಬೇಕೆಂದೂ ಮಹಾತ್ಮಾಜಿಯವರು ಸೂಚಿಸಿರುವರು.

— ಶ್ರೀ ಶ್ರೀನಿವಾಸ ಶಾಸ್ತ್ರಿಯವರು ಜನವರಿ ತಾರೀಕು 28ಕ್ಕೆ ದಕ್ಷಿಣ ಆಫ್ರಿಕದಿಂದ ಹೊರಟು "ಕರೋಮ" ಎಂಬ ಹಡಗದಲ್ಲಿ ಕುಳಿತು ಮುಂಬಾಯಿಗೆ ಬಂದು ತಲುಪುವರು. ಅವರು ಕೆನಿಯಾದಲ್ಲಿ ನಿಲ್ಲದೆ ಸೀದಾ ಮುಂಬಾಯಿಗೆ ಬರುವರು.

— ಪಂಜಾಬಿನ ಡೆಪ್ಯುಟಿ ಸುಪರಿಂಟೆಂಡೆಂಟ ಸಿ. ಐ. ಡಿ.ಯವರಾದ ರಾವ್‌ಸಾಹೇಬ ಸೂತಾರಾಮನೆಂಬವರು ಲಾಹೋರಿನಿಂದ ಹೊರಟು ಮೂವರು ಸಬ್ ಇನ್ಸ್‌ಪೆಕ್ಟರರೊಂದಿಗೆ ರಾವಲ್‌ಪಿಂಡಿ ಅತ್ತಕಡೆ ಮೋಟಾರ ಕಾರಿನಲ್ಲಿ ಹೋಗುತ್ತಿರುವಾಗ, ರಾವಲ್‌ಪಿಂಡಿಯಲ್ಲಿ ಮೋಟಾರಕಾರು ಕವಚಿಬಿದ್ದು ಸಿ. ಐ. ಡಿ. ಆಫೀಸರರು ತತ್ಕ್ಷಣವೇ ಮೃತಪಟ್ಟರು. ಇವರು ಮೊನ್ನೆ ತಾನೆ ಲಾಹೋರಿನಲ್ಲಿ ಆದ ಸುಪರಿಂಟೆಂಡೆಂಟರ ಕೊಲೆಯ ಶೋಧನೆಯ ಬಗ್ಗೆ ಹೋಗುತ್ತಿದ್ದರು.

— ಕಳೆದ ಆದಿತ್ಯವಾರ ದಿನ ಹಿಂದೂಸ್ಥಾನದಲ್ಲೆಲ್ಲಿಯೂ ಶ್ರದ್ಧಾನಂದರ ಸ್ಮಾರಕ ದಿನವನ್ನು ಆಚರಿಸಿದರು. ಮೆರವಣಿಗೆ ಭಜನೆ ಭಾಷಣಗಳು ಪ್ರತಿಯೊಂದು ಮುಖ್ಯ ಪಟ್ಟಣದಲ್ಲಿಯೂ ನಡೆದುವು.

— ಶ್ರೀನಗರದಲ್ಲಿಯ ಮುನಿಸಿಪಾಲಿಟಿಯ ಚೆಯರ್‌ಮೇನನ ಕಾರು ಹದಿನೈದು ದಿನಗಳ ಹಿಂದೆ ಕಳವಾಗಿ ಹೋಗಿದ್ದಿತು. ಅದು ಈಗ ಬೇರೊಂದು ಪಟ್ಟಣದಲ್ಲಿ ಸ್ವಲ್ಪ ಜಖಮಾದ ಸ್ಥಿತಿಯಲ್ಲಿ ದೊರಕಿರುತ್ತದೆ. ಆ ಸಂಬಂಧವಾಗಿ ಯಾವ ಅಪರಾಧಿಗಳೂ ಸಿಕ್ಕಲಿಲ್ಲ. ಯಾರೂ ಕೈದುಮಾಡಲ್ಪಟ್ಟಿಲ್ಲ.

— ಕಾಬೂಲಿನ ಕಾಂಗ್ರೆಸ್ ಕಮಿಟಿಯವರು ಬರುವ ವರುಷದ ಕಾಂಗ್ರೆಸ್ಸನ್ನು ಕಾಬೂಲಿಗೆ ಕರೆಯಬೇಕಾಗಿ ನಿಶ್ಚಯಿಸಿರುವರು.

— ಲಾಹೋರಿನ ಅಸಿಸ್ಟಾಂಟ ಪೋಲಿಸ್ ಸುಪರಿಂಟೆಂಡೆಂಟ ಮಿ. ಸೋಂಡರ್ಸರನ್ನು ವಧಿಸಿದವರನ್ನು ಕಂಡುಹಿಡಿದರೆ ದೊಡ್ಡ ಇನಾಮು ದೊರಕುವುದಾಗಿ ಸರಕಾರದವರು ಪ್ರಕಟಿಸಿದ್ದರು. ಕೊಲೆಗಾರನೇ ಇನ್ನೊಂದು ನೋಟೀಸನ್ನು ಅಲ್ಲಿಯ ಒಂದು ಗೇಟಿಗೆ ಕಳೆದ ಶುಕ್ರವಾರ ಹೊಡೆದಿದ್ದನು. ನೋಟೀಸಿನಲ್ಲಿದ್ದಿದ್ದೇನೆಂದರೆ "ಮಿ. ಸೋಂಡರ್ಸರನ್ನು ವಧಿಸಿದವನು ನಾನು. ನನ್ನನ್ನು ಹಿಡಿಯುವವರಿಗೆ ಸರಕಾರದವರ ಇನಾಮಿನ ಹೊರತು ನಾನೂ ೫೦೦೦ ರೂಪಾಯಿ ಕೊಡಲಿರುವೆನು. ರಕ್ತಪಾನದ ಆಶೆಯು ನನಗೆ ಇನ್ನೂ ಶಾಂತವಾಗಿಲ್ಲ. ನಾನು ಇನ್ನೂ ೫ ದಿನಗಳವರೆಗೆ ಲಾಹೋರಿನಲ್ಲಿಯೇ ಇರುವೆನು" ಎಂದು.

— ಬೆಜವಾಡದ ಕಾರಖಾನೆಗಳ ಮುಖ್ಯ ಇಂಜನಿಯರ ಧೊರೆಯು ಬೆಜವಾಡದ ರೈಲುವೇ ಸ್ಟೇಶನದ ಪ್ಲೇಟ್‌ಫೋರ್ಮಿನ ಮೇಲೆ ನಿಂತಿದ್ದನು. ಆತನ ಕಿಸೆಯಲ್ಲಿ ಮದ್ದು ತುಂಬಿಸಿ ತಯಾರಾದ ಒಂದು ಪಿಸ್ತೂಲು ಇದ್ದಿತು. ದೊರೆಯು ಅಕಸ್ಮಾತ್ತಾಗಿ ಕೈಯನ್ನು ತನ್ನ ಕಿಸೆಗೆ ಹಾಕಲು ಪಿಸ್ತೂಲಿನ ಮದ್ದು ಹೊಡೆದು ಆತನ ಬಲತೊಡೆಗೆ ದೊಡ್ಡ ಗಾಯವನ್ನುಂಟುಮಾಡಿತು.

— ಮದರಾಸು ಸಂಸ್ಥಾನದ ಹುಡುಗಿಯರ ಶಾಲೆಗಳ ಹುಡುಗಿಯರ ಶಾರೀರಕ ಶಿಕ್ಷಣದ ವಿಚಾರಣೆಗಾಗಿ ಮದರಾಸು ಸರಕಾರದವರು ಒಂದು ಕಮಿಟಿಯನ್ನು ನೇಮಕಮಾಡಿರುವರು. ಇದರ ಹದಿನೆರಡು ಮೆಂಬರರೂ ಸ್ತ್ರೀಯರೇ ಆಗಿರುವರು. ಇದು ವರೆಗೆ ಶಾರೀರಿಕ ಶಿಕ್ಷಣದ ಸಲುವಾಗಿ ಹುಡುಗಿಯರ ಶಾಲೆಗಳಲ್ಲಿ ಕೈಕೊಂಡ ಕ್ರಮಗಳನ್ನು ವಿಚಾರಿಸಿ ವಿಮರ್ಶಿಸುವದು ಉಪಯುಕ್ತವಾದ ಹೊಸ ಕ್ರಮಗಳನ್ನು ಜಾರಿಗೆ ತರುವದೂ ಈ ಕಮಿಟಿಯ ಕೆಲಸವಾಗಿದೆ.

— ಅಹಮದಾಬಾದಿನಲ್ಲಿ ರಾಷ್ಟ್ರೀಯ ಪಕ್ಷದ ಒಂದು ಇಂಗ್ಲಿಷ್ ವಾರಪತ್ರಿಕೆಯು ಇದೇ ತಿಂಗಳ ಕೊನೆಯಿಂದ ಹೊರಡುವದು. ಇದರ ಹೆಸರು 'ಡೋನ್' (Dawn) ಎಂದು.

— ಕರಾಚಿಯ ನಿಬಿಡವಾದ ಒಂದು ಮಾರ್ಗದಲ್ಲಿ ಎರಡು ಮಾಳಿಗೆಯ ಒಂದು ಮನೆಗೆ ಕಳೆದ ವಾರ ಬೆಂಕಿ ಹಿಡಿದು ಹತ್ತು ಜನರು ಸತ್ತುಹೋದರು. ಮನೆಯ ಕೆಳಗಿದ್ದ ಚಿಮಣಿ ಎಣ್ಣೆ ಅಂಗಡಿಗೆ ಬೆಂಕಿ ಹಿಡಿಯಿತು. ೨೦ ನಿಮಿಷಗಳಲ್ಲಿಯೇ ಮನೆಯು ಜರಗಿದಿತ್ತು. ಮಾಳಿಗೆಯಲ್ಲಿದ್ದ ಮೂವರು ಗಂಡಸರು, ನಾಲ್ವರು ಹೆಂಗಸರು, ಮೂವರು ಮಕ್ಕಳು ಮೃತ್ಯುವಶರಾದರು. ಹಲವರು ಜರಗಿ ಬೀಳುವ ಮೊದಲೇ ಕಿಟಕಿಗಳಿಂದಲೂ, ಉರಿಯುವ ಬಾಗಿಲುಗಳ ಎಡೆಗಳಿಂದಲೂ ಹೊರಗೆ ಬಂದಿದ್ದರು. ಒಬ್ಬ ನಡುಪ್ರಾಯದ ಹೆಂಗಸು ತನ್ನ ಚಿಕ್ಕ ಮಗುವನ್ನು ಎದೆಗವಚಿಕೊಂಡು ಮಾಳಿಗೆಯಿಂದ ಮಾರ್ಗಕ್ಕೆ ಹಾರಿದಳು. ಸ್ವಲ್ಪ ಜಖಮಾಯಿತು. ಸ್ತ್ರೀ ತಪ್ಪಲಿಲ್ಲ — ಬಹಳ ಜನರ ಪ್ರಯತ್ನದಿಂದ ಸುತ್ತುಮುತ್ತಲಿನ ಕಟ್ಟಡಗಳಿಗೆ ಹಾನಿಯೊದಗಲಿಲ್ಲ.

— ಬಿಹಾರ ಎಕ್ಸಿಕ್ಯುಟಿವ್ ಕೌನ್ಸಿಲಿನ ಮೆಂಬರತನಕ್ಕೆ ದ್ವಾರಭಂಗದ ಮಹಾರಾಜಾ ಬಹದೂರರವರು ರಾಜೀನಾಮೆ ಕೊಟ್ಟಿರುವರು. ವರ್ತಮಾನ ಬರೆಯುವವರೂ ಆ ಕುರಿತು ನಿಶ್ಚಯವಾದ ವರ್ತಮಾನವು ಸಿಕ್ಕಿಲ್ಲ. ಅವರ ತರುವಾಯ ಆ ಸ್ಥಾನಕ್ಕೆ ಸರ್. ಸುಲ್ತಾನ್ ಅಮದ್, ಕನಿಕಾದ ರಾಜರೂ, ಸುರೀಜಪುರ ರಾಜರೂ ಉಮೇದುವಾರರಾಗಿರುವರಂತೆ.

ದ ಕ್ಷಿ ಣ ಕ ನ್ನ ಡ.

ಮಂಗಳೂರು: — ಸಬ್ ಕೋರ್ಟಿನ ಪ್ರಿನ್ಸಿಪಾಲ ಸಬೋರ್ಡಿನೇಟ್ ಜಡ್ಜರಾದ ಮಿ. ಕೆ. ಎ. ವರ್ಗೀಸರವರು ಎಡಿಶನಲ್ ಸಬೋರ್ಡಿನೇಟ್ ಜಡ್ಜರಾಗಿ ನೇಮಕ ಹೊಂದಿರುವರು. ಎಡಿಶನಲ್ ಸಬೋರ್ಡಿನೇಟ್ ಜಡ್ಜರಾಗಿದ್ದ ಮಿ. ಸಿ. ಎನ್. ಕೃಷ್ಣಸ್ವಾಮಿ ಅಯ್ಯರವರು ಡಿಸ್ಟ್ರಿಕ್ಟ್ ಮುನಸೀಫರಾಗಿ ಅವರ ಮೊದಲನೇ ಸ್ಥಾನಕ್ಕೆ ನೇಮಿಸಲ್ಪಟ್ಟರು.

ಕೊಯಮುತ್ತೂರಿನ ಫಸ್ಟ್ ಎಡಿಶನಲ್ ಸಬೋರ್ಡಿನೇಟ್ ಜಡ್ಜರಾದ ರಾ। ಟಿ. ಶಾಮರಾಯರವರು ಮಂಗಳೂರು ಸಬ್‌ಕೋರ್ಟಿನ ಪ್ರಿನ್ಸಿಪಾಲ ಸಬೋರ್ಡಿನೇಟ ಜಡ್ಜರಾಗಿ ನೇಮಕ ಹೊಂದಿರುವರು.

ಇಲ್ಲಿಯ ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟರಾದ ಮಿ. ಜೆ. ಎಮ್. ಗ್ರೀನ್ ಧೊರೆಗಳಿಗೆ ತ್ರಿಚನಾಪಳ್ಳಿಗೆ ವರ್ಗವಾಗಿರುತ್ತದೆ. ರಜೆಯ ಮೇಲಿದ್ದ ರಾ। ಎನ್. ರಾಮನಾಥ ಅಯ್ಯಂಗಾರರವರು ಇಲ್ಲಿಯ ಡಿಸ್ಟ್ರಿಕ್ಟ್ ಪೋಲೀಸ್ ಸುಪರಿಂಟೆಂಡೆಂಟರಾಗಿ ನೇಮಕ ಹೊಂದಿರುತ್ತಾರೆ.

ಮಂಗಳೂರು ತಾಲೂಕು ಬೋರ್ಡಿನ ಮುಂದಿನ ಬರುವ ಸಾಧಾರಣ ಸಭೆಯು ತಾರೀಖು ೮ನೇ ಜನವರಿ ಮಂಗಳವಾರ ದಿನ ಅಪರಾಹ್ನ ೩ ಘಂಟೆಕ್ಕೆ ತಾಲೂಕ ಬೋರ್ಡಿನ ಆಫೀಸಿನಲ್ಲಿ ಕೂಡುವದು.

ಕಳೆದ ಶನಿವಾರ ಇಲ್ಲಿಯ ಗಣಪತಿ ಹೈಸ್ಕೂಲಿನಲ್ಲಿ, ಮುನಿಸಿಪಾಲಿಟಿ ಚೆಯರ್‌ಮೇನರಾದ ಶ್ರೀಯುತ ಸಲ್ದಾನ್ಹಾ ವೆಂಕಟರಾಯರವರ ಅಧ್ಯಕ್ಷತೆಯಲ್ಲಿ ಮಂಗಳೂರಿನ ಸೆಕೆಂಡರಿ ಶಾಲೆಗಳ ವಿದ್ಯಾರ್ಥಿಗಳ ಶಾರೀರಕ ಶಿಕ್ಷಣೆಯ ಪ್ರದರ್ಶನವನ್ನು ಜರಗಿಸಿದರು. ಅಧ್ಯಕ್ಷರ ಮೊದಲನೆಯ ಭಾಷಣವಾದನಂತರ ಗಣಪತಿ ಶಾಲೆ, ಮಿಶನ್ ಶಾಲೆ, ಗವರ್ನಮೆಂಟ್ ಕೊಲೇಜಿನ ಮೊಡಲ್ ಶಾಲೆ, ಕೆನರಾ ಹೈಸ್ಕೂಲು ಈ ಶಾಲಾ ವಿದ್ಯಾರ್ಥಿಗಳಿಂದ ಹಲವು ತರದ ಆಟಗಳು ಪ್ರದರ್ಶಿಸಲ್ಪಟ್ಟವು. ಮದರಾಸು ಸರಕಾರದ ಅಸಿಸ್ಟಾಂಟ್ ಫಿಸಿಕಲ್ ಡೈರೆಕ್ಟರರಾದ ಮಿ. ಜೆ. ಎಫ್. ಎಂಡ್ರೂಸರವರು ಶಾಲೆಗಳಲ್ಲಿ ಶಾರೀರಕ ಶಿಕ್ಷಣೆಯೂ ಅದರ ಆವಶ್ಯಕತೆಯೂ, ಎಂಬುವದರ ಕುರಿತು ಭಾಷಣ ಮಾಡಿದರು. ಅಧ್ಯಕ್ಷರ ಕೊನೆಯ ಭಾಷಣವೂ, ಕೃತಜ್ಞತಾ ವಂದನೆಗಳೂ ಆದ ಮೇಲೆ ಸಮಾರಂಭವು ಕೊನೆಗೊಂಡಿತು.

ಕಳೆದ ಸೋಮವಾರ ಅಂಸರೆ ಮುಕ್ಕೋಟಿ ದ್ವಾದಶಿಯ ದಿನ ಇಲ್ಲಿಯ ಶ್ರೀ ವೆಂಕಟ್ರಮಣ ದೇವಸ್ಥಾನದಿಂದ ದೇವರ ಉತ್ಸವವು ಹೊರಟು ಕದಿರಿಗೆ ಹೋಗಿ ಹಿಂದಿರುಗುವ ಪದ್ಧತಿಯಿದ್ದರೂ ಅಂತಹ ಉತ್ಸವದಿಂದ ಶಾಂತಿಗೆ ಭಂಗವಾಗಬಹುದೆಂಬ ಕಾರಣದ ಮೇಲೆ ಉತ್ಸವವನ್ನು ಹೊರಡಿಸಬೇಕಾದರೆ ಲೈಸನ್ಸನ್ನು ಪಡೆಯಬೇಕೆಂದು ಪೋಲೀಸ್ ಸುಪರಿಂಟೆಂಡೆಂಟರಾದ ಮಿ. ಜೆ. ಎಮ್. ಗ್ರೀನ್ ಧೊರೆಗಳವರು ದೇವಸ್ಥಾನದ ಆಡಳಿತ ಮೊಕ್ತೇಸರರಿಗೆ ಮ ಆದೇಶ ಸಮ್ಮಂದಪಟ್ಟವರಿಗೆ ಹುಕುಂ ಕೊಟ್ಟು ಮೇರೆಗೂ ಅಲ್ಲದೆ ಲೈಸನ್ನು ಪಡಕೊಳ್ಳುವದು ಮಾಮೂಲಿಗೆ ವಿರೋಧವಾಗುವುದಾಗಿಯೂ ಆ ದಿವಸದ ಉತ್ಸವವು ದೇವಸ್ಥಾನದಿಂದ ಹೊರಡಲಿಲ್ಲ. ಅದು ಅಲ್ಲದೆ ಊರ ಗೌಡಸಾರಸ್ವತರೆಲ್ಲರೂ ಮತ್ತು ಸರ್ವಸಾಧಾರಣವಾಗಿ ಇತರ ಮತದವರು ಅಂದಿನ ದಿನ ತಮ್ಮ ಅಂಗಡಿಗಳೆಲ್ಲವನ್ನೂ ಮುಚ್ಚಿ ಅಖಂಡವಾದ ಹರತಾಳವನ್ನು ಆಚರಿಸಿದರು. ಅದೇ ದಿನ ಗೌಡಸಾರಸ್ವತ ಬ್ರಾಹ್ಮಣರ ಸಭೆಯೊಂದು ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಜರಗಿ, ಈ ಸಮ್ಮಂಧದಲ್ಲಿ ನಡೆಸಲಾಗುವ ಸಿವಿಲ್ ವ್ಯವಹರಣೆಗೆ ಖರ್ಚಿನ ಬಗ್ಗೆ ಅರ್ಧ ಹಣವನ್ನು ಶ್ರೀ ವೆಂಕಟರಮಣ ದೇವಸ್ಥಾನದ ಭಂಡಾರದಿಂದ ತೆಗೆಯಬೇಕೆಂತಲೂ, ಉಳಿದ ಅರ್ಧ ಹಣವನ್ನು ಪಟ್ಟಣಿಗರ ವಂತಿಗೆಯಿಂದ ಕೂಡಿಸಬೇಕೆಂತಲೂ ನಿರ್ಣಯವಾಯಿತು.

ಕಳೆದ ಗುರುವಾರ ಮಂಗಳೂರಿಗೆ, ಐ ಸಿ ಎಸ್. ಪಾಸಾದ ಶ್ರೀ ಹುಂಡಿ ಶ್ರೀನಿವಾಸಕಾಮತರೂ ಮಿ. ಜೆ ಎಮ್. ಲೋಬೊರವರೂ ಬಂದರು. ರೈಲುವೇ ಸ್ಟೇಶನಿನಲ್ಲಿಯೇ ಅವರನ್ನು ಎದುರುಗೊಂಡು ಬೇಂಡು, ವಾದ್ಯ ಮೊದಲಾದವುಗಳಿಂದ ಕರೆದೊಯ್ಯಲಾಯಿತು. ಶ್ರೀ ಶ್ರೀನಿವಾಸ ಕಾಮತರವರಿಗೆ ಕಳೆದ ಆದಿತ್ಯವಾರ ದಿನ ಇಲ್ಲಿಯ ಗೌಡಸಾರಸ್ವತ ಕ್ಲಬ್ಬಿನ ಪರವಾಗಿ ಒಂದು ಟೀಪಾರ್ಟಿಯು ನಡೆಯಿತು.

ಪಾಣೆಮಂಗಳೂರು — ಇಲ್ಲಿ ಶನಿವಾರ ರಾತ್ರಿ ಸುಮಾರು ೧೦ ಗಂಟೆ ಸಮಯಕ್ಕೆ ಒಬ್ಬ ವನಪಿಳ್ಳೆಯೆಂಬನು ಒಬ್ಬ ಬಿಲ್ಲವನನ್ನು ಚೂರಿಯಿಂದ ತಿವಿದು ಕೊಂದಿರುವನು. ಶವವನ್ನು ಬಂಟವಾಳ ಆಸ್ಪತ್ರೆಗೆ ಪೋಸ್ಟ್‌ಮಾರ್ಟಮಿಗೆ ಕೊಂಡುಹೋಗಿರುವರು. ಕೊಂದವನನ್ನು ಕೈದುಮಾಡಿರುವರು.

ಕಲ್ಲಡ್ಕ — ಇದು ಸಾಧಾರಣ ತರದ ಒಂದು ಊರಾಗಿದೆ. ಇಲ್ಲಿ ಅನೇಕ ಅಂಗಡಿಗಳೂ ಭಂಡಸಾಲೆಗಳೂ, ಒಂದು ಹಾಯರ್ ಎಲಿಮೆಂಟರಿ ಶಾಲೆಯೂ ಇದೆ. ಸುತ್ತುಮುತ್ತಲೂ ದೊಡ್ಡ ವರ್ಗದಾರರ ಮನೆಗಳೂ ಇವೆ. ಆದುದರಿಂದ ಸರಕಾರದವರು ಇಲ್ಲಿ ಒಂದು ಬ್ರೇಂಚ್ ಪೋಸ್ಟಾಫೀಸನ್ನು ಇಟ್ಟರೆ ಬಹಳ ಉಪಕಾರವಾಗುತ್ತಿತ್ತು. ಇಲ್ಲಿ ಕಾಗದಗಳ ಬಟ್ವಾಡೆಯು ನಾಲ್ಕು ಎರಡಾವರ್ತಿ ಬಂಟವಾಳ ಸಬ್ ಪೋಸ್ಟಾಫೀಸಿನಿಂದ ಆಗುವುದರಿಂದ ಕಾಗದಗಳು ಸಿಕ್ಕುವಾಗ ತಡವಾಗುತ್ತದೆ. ಇದು ವೃಲೇಜಿನಲ್ಲಿಯೇ ಇರುವುದರಿಂದ ಪ್ರತ್ಯೇಕ ಬ್ಲಿಲ್ಡಿಂಗ ಇರುವ ಅಗತ್ಯ ಇರುವುದಿಲ್ಲ.

ಸುಳ್ಯ — ಇಲ್ಲಿಯ ವರುಷಾವಧಿ ಜಾತ್ರೆಯು ತಾ। ೯–೧–೨೯ ರಿಂದ ೭ ದಿವಸಗಳ ವರೆಗೆ ರಥೋತ್ಸವ ವಗೈರೆ ಬಹು ವಿಜೃಂಭಣೆಯಿಂದ ಜರಗಲಿರುವದು. ಕಟ್ಟೀರಿ, ಜೀನಸು ವಗೈರೆ ವ್ಯಾಪಾರಸ್ಥರು ಬರುವರು. ಕಳೆದ ವರುಷದಂತೆಯೇ ಸಾಮಾನುಗಳ ತಂದರೆ ಊರಿನ ಜನರಿಗೆ ಅನುಕೂಲವು. ವ್ಯಾಪಾರಸ್ಥರಿಗೆ ಹೆಚ್ಚಿನ ನಫೆಯು ಸಿಕ್ಕುವದರಲ್ಲಿ ಸಂದೇಹವಿಲ್ಲ.

ಕಣ್ಣನೂರು ಸರ್ಕಸ್ ಕಂಪೆನಿಯವರು ಕೆಲವು ದಿವಸಗಳು ಇದ್ದು ಸರ್ಕಸು ವಗೈರೆ ತೋರಿಸಿ ಸಂಪಾಜೆಗೆ ಹೋಗಿರುತ್ತಾರೆ.

ಸುಳ್ಯ ರೇಂಜಿನ ಉಪಾಧ್ಯಾಯರ ಸಭೆಯು ಸುಳ್ಯದ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ತಾ। ೧೨–೧–೨೯ಕ್ಕೆ ಜರಗುವದು.

ಕಾರ್ಕಳ: — ಸಂಘಗೆದ್ದರು. ಎಂದಿನಂತೆ ಕಳೆದ ತಾರೀಖು ೧೨–೧೩–'೨೮ರಲ್ಲಿ ಉಡುಪಿ ತಾಲೂಕಿನ ವಿದ್ಯಾರ್ಥಿಗಳ ವ್ಯಾಯಾಮ ಸ್ಪರ್ಧೆಯು (Sports) ಉಡುಪಿಯ ಅಜ್ಜರಕಾಡು ಮೈದಾನದಲ್ಲಿ ಜರಗಿತು. ಇದರಲ್ಲಿ ಕಾಪು ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯವರು ಹಿರಿಯ ಬಹುಮಾನವನ್ನು ಗೆದ್ದು, ಸ್ಥಿರ (permanent) ಮಾಡಿಕೊಂಡರು. ಅಂತೂ ಶಾಲೆಯು ಕಾಪಿಗೂ, ತನ್ನ ಊರಿಗೂ ಶ್ರೇಯಸ್ಸನ್ನುಂಟುಮಾಡಿತು. ಸದರಿ ಶಾಲಾ ವಿದ್ಯಾರ್ಥಿಗಳಿಂದ ಮುಂದೆ ಪ್ರತಿ ವರ್ಷವೂ ಯಶಸ್ಸು ಬರುವಂತೆ ಜಗದಂಬೆಯು ದಯಪಾಲಿಸಲಿ.

ಇನ್ನು ಆ ಕಿರಿಯ ಬಹುಮಾನವನ್ನು (Junier cup) ಉಡುಪಿ ಬಾಸೆಲ್ ಮಿಶನ್ ಸ್ಕೂಲಿನವರು ಗೆದ್ದರು. ಆದಷ್ಟು ಬೇಗನೆ ಕೊಡುವಂತೆ, ಕಮಿಟಿಯ ಕಾರ್ಯದರ್ಶಿಗಳಾದ ಮ। ರಾ। ರಾ। ಎ. ಪದ್ಮನಾಭ ಕಾಮತ್, ಬಿ ಎ, ಎಲ್. ಟಿ. ಅವರುಗಳು ಪ್ರಯತ್ನ ಮಾಡುವಂತೆ ಈ ಮೂಲಕ ಪ್ರಾರ್ಥನೆ.

ಗಣವಾಯಿತು. ಕಾಪು ಶ್ರೀ ಜನಾರ್ಧನ ದೇವಸ್ಥಾನದ ಆವರಣದ ತೆಯ ವಿಷಯ, ಸುಮಾರು ಎರಡು ಮೂರು ವರುಷಗಳಿಂದ ನನ್ನ ಕೈಯದು. ಬಿಲ್ಲವರೂ ಮಲ್ಲರೂ ಪಟೇಲ್ ಸಂಕಪ್ಪ ಶೆಟ್ರಿಗೂ ನಡೆಯುತ್ತಿದ್ದ ಸಂಬಂಧ ಅಪೀಲಿನಲ್ಲಿ ಮೂಲತೀರ್ಪನ್ನೇ ಕಾಯಂ ಮಾಡಿರುವರೆಂದು ಕೇಳಿಬಂತು. ಇದರಲ್ಲಿ ಮೂರನೇ ಪಾರ್ಟಿಯವನ್ನು ಬಿಟ್ಟುಕೊಡಬೇಕೆಂದಿರುವುದೆಂದು ವರ್ತಮಾನ. ಒಟ್ಟಿನ ಮೇಲೆ ಬಿಲ್ಲವರು ಗೆದ್ದರು!!!

ಭಜನೆ ಮಂಡಳಿ. ಊರೆಲ್ಲಾ ಹೆಚ್ಚಿಗೆಯಾದಂತೆ ಭಜನೆ ಮಂಡಳಿಗಳುಂಟಾಗಿವೆ. ಕಳೆದ ವಾರದ ಕೊಲೆಯ ರೋಗದ ನಂತರ ಜನರಿಗೆ ಭಜನೆಯಲ್ಲಿ ಪ್ರೀತಿಯುಂಟಾಗಿರಬಹುದು. "ಬೆಣ್ಣೆಯಾದರೆ, ಬೆಟ್ಟ ಕರಗೀತು!"

ಪ್ರತಿನಿಧಿ ಕಾಪು ರೇಂಜಿನ ಪರವಾಗಿ ತಾಲೂಕು ಕಮಿಟಿಗೆ ಶ್ರೀಯುತ ಮಟ್ಟು ಗೋವಿಂದ ರಾಯರು ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟಿರುವರು.

ಉತ್ಸವ. ಸೊರ್ಕಳದಲ್ಲಿ ಎಂದಿನಂತೆ ಜಾಗತ್ರ ಪಕ್ಷ್ಯದ ಉತ್ಸವಗಳು ಕಳೆದ ವರ್ಷಕ್ಕಿಂತ ಬಿಂಗಾಗಿ ಜರಗಿಸಲ್ಪಟ್ಟವು.

ವಿಧವಾವಿವಾಹ ಅಲ್ಲ ವಿಧುರವಿವಾಹ. ಊರಲ್ಲೆಲ್ಲಾ ವಿಧವಾ ವಿವಾಹದ ಬಗ್ಗೆ ಪ್ರಯತ್ನಗಳು ನಡೆಯುತ್ತಿರುವಾಗ ನಮ್ಮೂರಲ್ಲಿ ವಿಧುರ ವಿವಾಹದ ಪ್ರಯತ್ನಗಳು ನಡೆಯುತ್ತಲಿವೆ. ಇತ್ತಲಾಗೆ ಒಂದು ವಿಧುರ ವಿವಾಹವು ನಡೆಯಿತು. ಇನ್ನೊಂದು ವಿವಾಹವು ನಡೆಯಲಿಕ್ಕಿರುವುದು. ಮೊದಲನೇ ವಿವಾಹವು ಸುಮಾರು ೫೦ ವರುಷ ಪ್ರಾಯದ ವಿಧುರ ಯುವಕನು ೧೪ ವರುಷದ ಬಾಲಿಕೆಯನ್ನು ಅಗ್ನಿ ಸಾಕ್ಷ್ಯವಾಗಿ ಪಾಣಿಗ್ರಹಣ ಮಾಡಿಕೊಂಡಿರುವನು. ಇನ್ನೊಂದರ ಸನ್ನಾಹಗಳು ನಡೆಯುತ್ತಲಿವೆ. ೫೮ ವರುಷದ ವಿಧುರನು ೧೩ ವರುಷದ ಯುವತಿಯನ್ನು ಪಾಣಿಗ್ರಹಣ ಮಾಡಿಕೊಳ್ಳುವುದರಲ್ಲಿದ್ದಾನೆ. ಇದೀಗ ನವೀನ ಸುಧಾರಣೆ.

ಹೊಸದುರ್ಗ: — ತಾ। ೧೫–೧೨–'೨೮ನೇ ಶನಿವಾರ ದಿನ ಅಂದವಾಗಿ ಶೃಂಗರಿಸಿದ ಇಲ್ಲಿಯ ಗವರ್ನಮೆಂಟ್ ಲೇಬರ್ ಡಿಪಾರ್ಟಮೆಂಟ್ ಆದಿದ್ರಾವಿಡ ಎಲಿಮೆಂಟರಿ ಶಾಲೆಯಲ್ಲಿ ಕಾಸರಗೋಡು ರೇಂಜಿಗೆ ಸೇರಿದ ಲೇಬರ್ ಶಾಲೆಗಳ ಉಪಾಧ್ಯಾಯರ ಸಭೆಯು, ಸದರಿ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಮ। ರಾ। ರಾ। ಶ್ರೀಪಾದರಾಯರವರುಗಳ ಅಧ್ಯಕ್ಷತೆಯಲ್ಲಿ ಜರಗಿತು. ಸದರಿ ಸಭೆಗೆ ಮ। ರಾ। ರಾ। ಲೇಬರ್ ಸ್ಪೆಶಲ್ ಇನ್ಸ್‌ಪೆಕ್ಟರರವರೂ, ಡಿಪ್ಯುಟಿ ಸರ್ವೆಯವರೂ ಇಲ್ಲಿಯ ಪಂಚಾಯತ ಕೋರ್ಟಿನ ಮೆಂಬರರಾದ ಮ। ರಾ। ರಾ। ಶೇಷಗಿರಿ ಕಂಪ್ತಿಯವರೂ, ಇಲ್ಲಿಯ ಸಹಕಾರ ಸಂಘದ ಕ್ಲಾರ್ಕರಾದ ರಾ। ಕೃಷ್ಣಪೈಯವರೂ, ಕೆಲವು ತಾಲೂಕು ಬೋರ್ಡು ಶಾಲೆಯ ಉಪಾಧ್ಯಾಯರುಗಳೂ, ಮಿಶನ್ ಶಾಲೆಯ ಉಪಾಧ್ಯಾಯರುಗಳೂ, ಸದರಿ ರೇಂಜ್ ಲೇಬರ್ ಶಾಲೆಗಳ ಯಾವತ್ತು ಉಪಾಧ್ಯಾಯರುಗಳೂ, ಇನ್ನು ಹಲವು ಮಹಾನುಭಾವರುಗಳೂ ನೆರೆದಿದ್ದರು. ಸಭಾರಂಭದಲ್ಲಿ ಹೊಸದುರ್ಗ ಆದಿದ್ರಾವಿಡ ಎಲಿಮೆಂಟರಿ ಶಾಲೆಯ ಬಾಲಕರು ಚಲೋ ರೀತಿಯಲ್ಲಿ ದೇವತಾ ಪ್ರಾರ್ಥನೆಯನ್ನು ಹಾಡಿದರು. ಅನಂತರ ಸದರಿ ಉಪಾಧ್ಯಾಯರ ಸಂಘದ ಸೆಕ್ರೆಟರಿಯವರಾದ ಮಡಿವಾಳ ಆದಿದ್ರಾವಿಡ ಶಾಲೆಯ ಮುಖ್ಯ ಅಧ್ಯಾಪಕರಾದ ರಾ। ಅಬ್ದುಲ್ ರಹಿಮಾನ್ ಸಾಹೇಬರು ಕಳೆದ ಮೀಟಿಂಗಿನ ಕಾರ್ಯಕ್ರಮಗಳನ್ನು ಓದಿ ಹೇಳಿದರು. ಅನಂತರ ಕಾಪುಗೋಳಿ ಶಾಲಾ ಅಧ್ಯಾಪಕರಾದ ರಾ। ಹಯಾತ್ ಸಾಹೇಬರು, ಸದರಿ ಶಾಲೆಯ ೫ನೇ ತರಗತಿಯ ಬಾಲಕರಿಗೆ ಸಸ್ಯವರ್ಗದ ಕುರಿತು ಮಾದರಿ ಪಾಠವನ್ನು ಚಲೋ ರೀತಿಯಲ್ಲಿ ಮಾಡಿದರು. ತಿಕ್ಕರ್‌ಪುರ್ ಶಾಲಾ ಅಧ್ಯಾಪಕರಾದ ರಾ। ಕೆ. ಶಾಂತಾ. ಎಂಬವರು ನೀಲೇಶ್ವರ ಮಲೆಯಾಳ ಆದಿದ್ರಾವಿಡ ಶಾಲೆಯ ಮೂರನೇ ತರಗತಿಯ ಮಕ್ಕಳಿಗೆ ಹತ್ತಿಯ ಕುರಿತು ಗಣ್ಯ ಪಾಠವನ್ನು ಮಾಡಿದರು. ಅನಂತರ ಮ। ರಾ। ರಾ। ಶೇಷಗಿರಿ ಕಂಪ್ತಿಯವರು ಲೇಬರ್ ಡಿಪಾರ್ಟಮೆಂಟನ್ನು ತೆರೆದ ನಾಲ್ಕು ವರುಷಗಳಲ್ಲಿಯೇ ವಿದ್ಯಾವಿಹೀನರಾದ ಆದಿ ದ್ರಾವಿಡರ ಮಕ್ಕಳನ್ನು ಸದರಿ ಡಿಪಾರ್ಟಮೆಂಟಿಗೆ ಒಳಪಟ್ಟ ಆ ಉಪಾಧ್ಯಾಯರುಗಳು ಜಾತಿ, ಮತ, ಭೇದವನ್ನು ಮಾಡದೆ ಹೆಚ್ಚಿನ ಮುತುವರ್ಜಿ ವಹಿಸಿ ಇವರನ್ನು ಸುಧಾರಣೆಗೆ ತರುವದಕ್ಕಾಗಿ ದುಡಿದುದಕ್ಕೂ, ಆ ಉಪಾಧ್ಯಾಯರುಗಳ ಕಲ್ಯಾಣವನ್ನೇ ಬಯಸಲಿ ಎಂತಲೂ ಮುಂದೆ ಈ ಜನಾಂಗದವರನ್ನು ಸುಧಾರಣೆಗೆ ತರುವ ವಿಷಯದಲ್ಲಿ ಹೆಚ್ಚಿನ ಮಾಹಿತಿಯನ್ನು ಆ ಉಪಾಧ್ಯಾಯ ವರ್ಗದವರಿಗೆ ಚಲೋ ರೀತಿಯಲ್ಲಿ ಭಾಷಣ ಮೂಲಕ ವಿವರಿಸಿ ಹೇಳಿದರು. ಮತ್ತು ಇದರಂತೆ ಅಧ್ಯಕ್ಷ ಮಹಾಶಯರುಗಳೂ ಇನ್ನು ಕೆಲವು ಮಹಾನುಭಾವರುಗಳೂ ಆದಿ ದ್ರಾವಿಡರ ಸುಧಾರಣೆಯ ಕುರಿತು ಆ ಉಪಾಧ್ಯಾಯರುಗಳು ಇವರಿಗೆ ಸುಧಾರಣೆಗೆ ತರುವ ವಿಷಯದಲ್ಲಿ ವಹಿಸುವದ ಕರ್ತವ್ಯಗಳ ಕುರಿತು ಭಾಷಣ ಮಾಡಿದರು. ಇದಕ್ಕೆ ಬರುವ ಉಪಾಧ್ಯಾಯರುಗಳ ಸಭೆಯನ್ನು ತಾ। ೧೯–೧–'೨೯ರಲ್ಲಿ ಕುಂಬಳೆ ಆದಿ ದ್ರಾವಿಡ ಎಲಿಮೆಂಟರಿ ಶಾಲೆಯಲ್ಲಿ ಜರಗುವಂತೆ ನಿರ್ಣಯಿಸಿ ಸದರಿ ಶಾಲಾ ಬಾಲಕ ಬಾಲಕಿಯರಿಂದ ಸಂಗೀತದೊಡನೆ ಸದರಿ ಸಭೆಯನ್ನು ಮುಕ್ತಾಯಗೊಳಿಸಿದರು.

ಹಳ್ಳಿ ಉಪಾಧ್ಯಾಯರು. ತಾ। ೭–೧೨–'೨೮ನೇ ಸ್ವದೇಶಾಭಿಮಾನಿಯಲ್ಲಿ "ದಕ್ಷಿಣ ಕನ್ನಡ ಜಿಲ್ಲೆಯ ಎಲಿಮೆಂಟರಿ ಶಾಲೆಯ ಉಪಾಧ್ಯಾಯರ ಸಂಘವನ್ನು ಸ್ಥಾಪಿಸುವ ಅವಶ್ಯಕತೆ" ಎಂಬ ವಿಷಯದ ಪ್ರಕಾರ "ಉಪಾಧ್ಯಾಯರ ಭಾಗ್ಯೋದಯ" ಎಂಬ ಶಿರೋನಾಮೆಯ ಮುಖಾಂತರ ಬರೆಯಲ್ಪಟ್ಟ ಲೇಖನದ ಮೂಲಕ ಕೃಷ್ಣೆಯ ಮುಖಾಂತರ ಕುರಿತು, ಹೊಸದುರ್ಗ ರೇಂಜಿನ ಪ್ರಾಥಮಿಕ ಉಪಾಧ್ಯಾಯರ ಸಭೆಯೊಂದು ಡಿಪ್ಯುಟಿ ಇನ್ಸ್‌ಪೆಕ್ಟರ ಶ್ರೀಯುತ ಟಿ. ಶ್ರೀಪಾದ ರಾಯರ ಅಧ್ಯಕ್ಷತೆಯಲ್ಲಿ ಇಲ್ಲಿ ಮೊನ್ನೆ ಜರಗಿತು.

ಸಭೆಯಲ್ಲಿ "ಇದು ನಮ್ಮ ಧನ್ಯ ಭಾಗ್ಯವಯ್ಯಾ" ಎಂಬ ದೇಶಭಾಷೆಯ ಇನ್ನೊಂದು ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಕುರಿತು ಚರ್ಚೆಗಳು ನಡೆದು, ಸ್ವದೇಶಾಭಿಮಾನಿಯಲ್ಲಿ ಕೊಟ್ಟ ಹಳ್ಳಿಗಾಡ ಉಪಾಧ್ಯಾಯರು ಸೂಚಿಸಿದ ಪ್ರಕಾರ ಒಗ್ಗಟ್ಟಿನಿಂದ ದುಡಿಯುವರೆ ಪ್ರಸಂಗ ಬಂದಂತೆ ಉಪಾಧ್ಯಾಯರ ಸಂಘವನ್ನು ಸ್ಥಾಪಿಸುವದೆ ಪ್ರಯತ್ನಿಸಬೇಕಾಗಿ ಸಭೆಯಲ್ಲಿ ನೆರೆದ ಉಪಾಧ್ಯಾಯರು ಸಮ್ಮತಪಟ್ಟು ಅಂಥಾ ಸಂಘವನ್ನು ಜರಗಿಸುವ ಸಮಿತಿಯು ... ವಿಷಯ ಹಸ್ತಗತವಾಗುವದೆಂಬ ವಿವರವನ್ನು "ಹಳ್ಳಿಗಾಡ ಉಪಾಧ್ಯಾಯರು" ಪತ್ರಿಕೆಯ ಮುಖಾಂತರ ತಿಳಿಸಿದಲ್ಲಿ ಸಭೆಗೆ ಹಾಜರಿದ್ದ ಉಪಾಧ್ಯಾಯರು ಕೃತಜ್ಞರಾಗುವರೆಂದು ಎಂಬ ನಮ್ಮ ಸಂಘದ ಕಾರ್ಯದರ್ಶಿಯವರ ... ತಿಳಿಸಬೇಕೆಂದು ಕೆಲವು ಮಂದಿಯ ನಾಡಿಲಿಯಿತು. ಹಳ್ಳಿಗಾಡ ಉಪಾಧ್ಯಾಯರ ಅಭಿಪ್ರಾಯ ಮುಂದಿನ ಸೂಚನೆ ಬಯಸಲಾಗಿದೆ.

ಬಂಟವಾಳ — ಕೋಟಿ ವೈದ್ಯನಾದ ಜಾತಿಯ ಸುಮಾರು ೩೦ ವರುಷ ಪ್ರಾಯದ ಹೊಸಬಸಿರುಣ ವಿಧವೆ ಹೆಂಗಸು ಕಂಬಾರ ಜಾತಿಯ ಒಬ್ಬ ಯುವಕನೊಡನೆ ಇಲ್ಲಿಗೆ ಓಡಿಬಂದಿದ್ದಳು. ಇವಳ ಮೈಮೇಲೆ ಸುಮಾರು ಒಂದು ಸಾವಿರ ರೂಪಾಯಿ ಚಿನ್ನಾಭರಣವಿತ್ತು. ಇವಳ ಸಹೋದರನೊಬ್ಬನು ಇವರನ್ನು ಹಿಂಬಾಲಿಸಿ ಬಂದು ಈ ಸಂಗತಿಯನ್ನು ಇಲ್ಲಿಯ ಪೋಲೀಸ್ ಅಧಿಕಾರಿಗಳ ಮುಂದೆಯೂ ಸಬ್ ಮೆಜಿಸ್ಟ್ರೇಟರ ಮುಂದೆಯೂ ತಿಳಿಸಿದನು. ಆಭರಣವನ್ನು ಇಲ್ಲಿಯ ಮೆಜಿಸ್ಟ್ರೇಟ ಕಚೇರಿಯಲ್ಲಿ ಯಾರ ಹಕ್ಕೆಂದು ನಿರ್ಧಾರವಾಗುವ ವರೆಗೆ ಅಮಾನತು ಇಟ್ಟಿರುವರು. ಯಾರ ಬುದ್ಧಿವಾದವನ್ನೂ ಈ ಹೆಂಗಸು ಕೇಳಲಿಲ್ಲ. ಇವರು ಮೊದಲು ಸಲ್ಲಿ ಕೂತುಕೊಳ್ಳುವಲ್ಲಿ ಸಹೋದರನು ಬಂದುದರಿಂದ ಇವರಿಗೆ ಮದುವೆ ಹೊಂದಲಿಕ್ಕೆ ಅನಾನುಕೂಲವಾಯಿತು.

ಸಾರಸ್ವತ ಸಮಾಜದ ಶಿರಾಲಿ ಚಿತ್ರಾಪುರ ಮಠದ ಶ್ರೀಪಾದಂಗಳವರು ಶ್ರೀಮದಾನಂದಾಶ್ರಮ ಗುರುಗಳು ಪುತ್ತೂರಿನಿಂದ ಇಲ್ಲಿ ಸೋಮವಾರ ಸಾಯಂಕಾಲ ೫ ಗಂಟೆಗೆ ಬಂದು ತಲುಪಿದರು. ಹಿಂದೂ ಪೇಟೆಯ ಆರಂಭವಾಗುವ ಸ್ಥಳದಲ್ಲಿ ಬಂಗ್ಲೆಬಾಗಿಲಿನಿಂದ ವಿಶ್ವಹಿಂದೂ ಉತ್ಸವವು ಹೊರಟು ಮಸ್ಸಪೇಟೆ, ಕೊಟ್ಟಿಗೆ ನಂಗರು, ಹೊಸಪೇಟೆ, ದಾರಿಯಾಗಿ ಸಾರಸ್ವತರ ಶ್ರೀ ರಾಮಚಂದ್ರ ದೇವಸ್ಥಾನಕ್ಕೆ ಸುಮಾರು ೧೦ ಗಂಟೆಗೆ ಬಂದು ತಲುಪಿದರು. ಸಾರಸ್ವತ ಗೌಡಸಾರಸ್ವತ ಸಮಾಜದವರೂ, ಇತರ ಎಲ್ಲಾ ಜಾತಿಯ ಹಿಂದೂಗಳು ಇದರಲ್ಲಿ ಭಾಗಿಗಳಾಗಿದ್ದರು. ಹೊಸಪೇಟೆಯ ಗೌಡಸಾರಸ್ವತ ಮಹಾಮಾಯಿ ದೇವಸ್ಥಾನದಲ್ಲಿ ರಾ। ಸುಬ್ರಾಯರವರು ಪಾದಪೂಜೆಯನ್ನು ಮಾಡಿದರು. ಇಲ್ಲಿಂದ ಶ್ರೀಗಳವರು ಮಂಜೇಶ್ವರಕ್ಕೆ ಹೋಗುತ್ತಾರೆಂದು ವಾರ್ತೆಯಿದೆ.

[illegible] ಸೋಮವಾರದಿಂದ ಮುಂದಿನ [illegible] ಶುಕ್ರವಾರದ ವರೆಗಿನ ಪಂಚಾಂಗ.

(ಗಾಂಧಿಯ ವೃಶ್ಚಿಕ (ಚಾಂದ್ರ)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ. ಉ	ಅಸ್ತ
29	ಶನಿ	[illegible]	[illegible]	ಪುಷ್ಯಾ	[illegible]	[illegible]	6.53	6.13
30	ರವಿ	[illegible]	[illegible]	ಆಶ್ಲೇಷಾ	[illegible]	[illegible]	6 54	6.13
31	ಸೋಮ	[illegible]	[illegible]	ಮಘಾ	[illegible]	[illegible]	6.54	6.14
1	ಮಂಗಳ	[illegible]	[illegible]	ಪುಬ್ಬಾ	[illegible]	[illegible]	6.54	6.14
2	ಬುಧ	[illegible]	[illegible]	ಉತ್ತರಾ	[illegible]	[illegible]	6.55	6.15
3	ಗುರು	[illegible]	[illegible]	ಹಸ್ತಾ	[illegible]	[illegible]	6.55	6.15
4	ಶುಕ್ರ	[illegible]	[illegible]	ಚಿತ್ರಾ	[illegible]	[illegible]	6.56	6.15

ಮಂಗಳೂರಿನ ವಾಯುಸ್ಥಿತಿ.

ತಾರೀಖು Date	Temperature. ಉಷ್ಣ (ಶಾಖ) Maximum ಜಾಸ್ತಿ		Minimum ಕಡಿಮೆ		Rainfall. ಮಳೆ ದಿನದ ಮಳೆ	ಒಟ್ಟು ಮಳೆ
21	90—	3	68—	3	—	—
22	90—	4	67—	9	—	—
23	90—	5	70—	0	—	—
24	93—	3	69—	3	—	—
25	92—	8	71—	7	—	—
26	93—	0	73—	7	—	—
27	94—	7	74—	7	—	—
						124-70

ಮಂಗಳೂರಿನ ಪೇಟೆ ಧಾರಣೆ.

ಜಿನಸು		ಇಂದ ರೂ. ಅ.	ವರೆಗೆ ರೂ. ಅ.
ಮುಸ್ಸಿ	...	7— 14	8 — 12
ಗುಡ್ಡು	...	7 — 0	7— 4
ಸುಗ್ಗಿ	...	6 — 8	7— 0
ಹೊಸ ರಾಶಿ	...	6 — 4	6 — 8
ಊರ ಅನ್ವಲ್ ಬೆಳ್ತಿಗೆ	...	7— 8	8 — 8
ರಂಗೂನು ಬೆಳ್ತಿಗೆ ಗೋಣಿ ಗಳ್ಳೆ	...	12— 8	–
ಎಲ್ಲೂರು ಬೆಳ್ತಿಗೆ ಮುಡಿ ಗಳ್ಳೆ	...	6 — 8	8 — 10
ಗೋದಿ ಗೋಣಿ ಗಳ್ಳೆ	...	18 — 0	19 — 0
ಹುರುಳಿ ಗೋಣಿ ಗಳ್ಳೆ	...	7 — 0	9 . 4
ಕಡಲೆ ಗೋಣಿ ಗಳ್ಳೆ	...	14 — 12	16 — 0
ತೊಗರಿ ಗೋಣಿ ಗಳ್ಳೆ	...	14 — 8	–
ತೊಗರಿಬೇಳೆ ಗೋಣಿ ಗಳ್ಳೆ	...	18 — 0	24 0
ಉದ್ದು ಗೋಣಿ ಗಳ್ಳೆ	...	14 — 8	16 8
ಹೆಸರು ಗೋಣಿ ಗಳ್ಳೆ	...	13 — 0	14
ಊರು ಬೆಲ್ಲ ಖಂಡಿ ಗಳ್ಳೆ	...	47— 8	55 . 0
ಉಪ್ಪು ಗೋಣಿ ಗಳ್ಳೆ	...	4 — 8	4 — 12
ಬೊಬ್ರ ಖಂಡಿ ಗಳ್ಳೆ	...	130 - 0	–
ಕೊಬ್ರಿ ಹಿಂಡಿ ಖಂಡಿ ಗಳ್ಳೆ	...	47— 8	48 — 8
ಎಳ್ಳಿಂಡಿ ಖಂಡಿ ಗಳ್ಳೆ	...	36— 8	46 — 1
ಕೊಬ್ರಿ ಎಣ್ಣೆ ಮುಡಿ ಗಳ್ಳೆ	...	7 — 8	7 — 10
ಎಳ್ಳೆಣ್ಣೆ ಮುಡಿ ಗಳ್ಳೆ	...	8 — 0	8 — 6
ಬಡಾಣಿಎಣ್ಣೆ ಪಟ್ಟಿಗೆ ಗಳ್ಳೆ	..	7 — 2	7 — 4
ಮೋರಿಸ ಸಕ್ಕರೆ ಮುಡಿ ಗಳ್ಳೆ	...	9 — 11	9 — 12
ಹೊಸ ಮೆಣಸು	...	6 — 0	6 — 8
ಹಳ್ಳಿ ಊರ ಮೆಣಸಿನಕಾಯಿ ಮುಡಿ ಗಳ್ಳೆ		3 — 4	4 — 0
ಸಾಸಿವೆ ಮುಡಿ ಗಳ್ಳೆ	...	9 — 4	—
ಕೊತ್ತಂಬರಿ ಮುಡಿ ಗಳ್ಳೆ	...	6 — 4	5 - 12
ನೇಟಿವ್ ಕಾಫಿ ಖಂಡಿ ಗಳ್ಳೆ	...	378— 0	395— 0
ಅಳಿಗೋಟು ಅಡಿಕೆ ಖಂಡಿ ಗಳ್ಳೆ	...	180— 0	210— 0
ಕಾಳುಮೆಣಸು ಖಂಡಿ ಗಳ್ಳೆ	...	523 - 0	524 - 8
ಯೇಲಕ್ಕಿ ಮುಡಿ ಗಳ್ಳೆ	...	4 — 10	60 —
ಗೇರುಬೀಜ ಮುಡಿ ಗಳ್ಳೆ	...	3 — 5	3 — 7
ಕಬ್ಬಿಣ ಖಂಡಿ ಗಳ್ಳೆ	...	40 — 0	42 - 8
ತಾಂಬ್ರ ತಗಡು ಗಳ್ಳೆ	...	16- 8	16 — 12
ತಾಂಬ್ರ ಪಾತ್ರಗಳು ಮುಡಿ ಗಳ್ಳೆ	...	21 — 0	22 - 4
ಬೇಹಿದಕ್ಕಿ ಸೇರು ಗಳ್ಳೆ	...	15 — 0	—
ಹಿತ್ತಾಳೆ ತಗಡು ಮುಡಿ ಗಳ್ಳೆ	...	14 — 3	16 — 8
ಪವನು ಗಳ್ಳೆ	...	13—0—8	—
ಕುಂಕುಮ ಖಂಡಿ ಗಳ್ಳೆ	...	70 —	85 — 0

ಒಂದೇ ದಾರಿ

ಅಬಾಲವೃದ್ಧರೂ, ಸ್ತ್ರೀಪುರುಷರೂ ಇಹಲೋಕದಲ್ಲಿ ನಿಶ್ಚಿಂತವಾದ ಸುಖವನ್ನು ಅನುಭವಿಸುವುದಕ್ಕೆ

— ದಾರಿ ಯಾವುದೆಂದರೆ: —

ಕ್ರಯವಾಗಲಿ ಅಂಚೆಹಾಸಲು ಆಗಲಿ

ಇಲ್ಲದೆ ಮುಫತ್ತಾಗಿ ಕೊಡಲ್ಪಡುವ

ವೈದ್ಯವಿದ್ಯ

ಎಂಬ ಪುಸ್ತಕವನ್ನು ಓದಿ ಅದರಲ್ಲಿ ಹೇಳಿರುವ ವಿಧಗಳನ್ನು ಗ್ರಹಿಸಿ, ಅವುಗಳನ್ನು ಅನುಸರಿಸುವುದು.

ಮತ್ತು

ಸ್ತ್ರೀಪುರುಷರನ್ನು ಆರೋಗ್ಯ ದೃಢಗಾತ್ರರಾಗಿರಿಸುವ ಭೂಲೋಕ ಅಮೃತ ರೂಪವಾದ

ಮದನಮಂಜರಿ ಮಾತ್ರೆಗಳು

ಅಜೀರ್ಣ, ಮಲಬಂಧ, ಕೆಮ್ಮು, ದಮ್ಮು, ಮುಂತಾದ ಸಾಧಾರಣ ವ್ಯಾಧಿಗಳನ್ನೂ, ನರಗಳ ಸಡಿಲಿಕೆ, ಮೂತ್ರಕೋಶ ವ್ಯಾಧಿಗಳು, ನಪುಂಸಕತ್ವ ಇವುಗಳನ್ನು ಪರಿಹಾರಮಾಡುವ ಮತ್ತು ನಿವಾರಣೆಮಾಡುವ ಅಪೂರ್ವ ಔಷಧವು. 40 ಮಾತ್ರೆಗಳಿರುವ 1 ಡಬ್ಬಿ ಕ್ರಯ ರೂ. 1—0—0.

ಇದನ್ನು ಸೇವಿಸುವುದೇ.

ರಾಜವೈದ್ಯ ನಾರಾಯಣಜಿ ಕೇಶವಜಿ, 1/94 ಜೈನಾ ಬಜಾರು, ಮದ್ರಾಸು.

ಮಂಗಳೂರು ಏಜಂಟರು:— ಡಿ. [illegible], ಹಂಪನಕಟ್ಟ, ಮಂಗಳೂರು. ದ. ಕನ್ನಡ



ತಯಾರಾಗಿವೆ ತಯಾರಾಗಿವೆ!

ಕಾಫಿ ಪ್ಲೆಂಟರರಿಗೂ, ತೋಟದವರಿಗೂ

ಬೇಕಾಗುವಂತಹ

ಚೆಕ್ ರೋಲ್ ಗಳು

ಮೂರು ಸ್ಯಾಜಿನಲ್ಲಿ ತಯಾರಿಸಲ್ಪಟ್ಟು

ಮಾರಾಟಕ್ಕೆ ಸಿದ್ಧವಿವೆ.

ರಿಯಾಯತಿ [illegible] ದರವಿದೆ.

ಕ್ರಯಕ್ಕೂ, ಇತರ ವಿವರಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮೆನೇಜರ್,

ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಪರೀಕ್ಷಿಸಿರಿ! ಶೀಘ್ರವೂ ಅಗ್ಗ ಖಾತ್ರಿಯಾಗುವದು!! ಫಲಪ್ರದ

ಹೊಸದುರ್ಗ ಅಮೃತೇಶ್ವರ ವೈದ್ಯಶಾಲಾ

ಪೋಸ್ಟ್ ಕಾಂಞಂಗಾಡ (ದ. ಕ.)

ರೈಲ್ವೆ ಸ್ಟೇಶನ್ ಕಾಂಞಂಗಾಡ (S.I.R.)

[illegible] ಮುಖ್ಯವಾಗಿ ಸರಕಾರದಿಂದ 'ವೈದ್ಯರತ್ನ'ವೆಂಬ ಬಿರುದು ಪಡೆದ ಪ್ರಸಿದ್ಧರಾದ 'ಭಿಷಕ್ ಶ್ರೀ ವೈದ್ಯರತ್ನ [illegible]' ಅವರ [illegible]

[illegible]

ಮೆನೇಜರ್,

ಅಮೃತೇಶ್ವರ ವೈದ್ಯಶಾಲಾ ಹೊಸದುರ್ಗ

ಪೋಸ್ಟ್ ಕಾಂಞಂಗಾಡ (ದ. ಕ.)

ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ ಸಂಘ, ಮಂಗಳೂರು.

(1923ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟು ಸನ್ 1860ನೇ ಇಸವಿ [illegible])

ಚಿಕಿತ್ಸಾಲಯಗಳು — ಮಂಗಳೂರು ಮತ್ತು ಮೂಲ್ಕಿ.

ಬಡಬಗ್ಗರಿಗೆ ಧರ್ಮಾರ್ಥವಾಗಿ ಆಯುರ್ವೇದ ಔಷಧಿಗಳನ್ನು ಕೊಡುತ್ತವೆ.

ವೈದ್ಯರಿಗೂ, ಸಂಪನ್ನರಿಗೂ [illegible] ಆಯುರ್ವೇದ ಔಷಧಗಳ [illegible] ನಮ್ಮ "ಫಾರ್ಮಸಿ"ಯಲ್ಲಿ ಶಾಸ್ತ್ರೋಕ್ತ [illegible] ಔಷಧಿಗಳನ್ನು ಅಲ್ಪ ಬೆಲೆಗೆ [illegible] 1927ನೇ ಇಸವಿಯಲ್ಲಿ ಬಿಜಾಪುರದಲ್ಲಿ ಜರಗಿದ ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಳನದಲ್ಲಿ ಪ್ರದರ್ಶಿಸಿದ ನಮ್ಮಲ್ಲಿ ತಯ್ಯಾರಾದ ಔಷಧಿಗಳಿಗೆ ಸುವರ್ಣ ಪದಕ ಮತ್ತು ಪ್ರಥಮ [illegible] ಪತ್ರಿಕೆ ದೊರಕಿರುತ್ತದೆ. ಸಂಘಕ್ಕೆ ಮೆಂಬರರನ್ನು ಕೂಡಿಸುವ ಬಗ್ಗೂ ನಮ್ಮಲ್ಲಿ ತಯ್ಯಾರಾಗುವ ಅರಿಷ್ಟಗಳು, ಆಸವಗಳು, ಲೇಹಗಳು, ತೈಲಗಳು ವಗೈರೆ ಎಲ್ಲಾ ಆಯುರ್ವೇದ ಔಷಧಿಗಳನ್ನು ವಿಕ್ರಯಿಸುವ ಬಗ್ಗೂ ಯೋಗ್ಯರಾದ

ಏಜಂಟರು ಬೇಕಾಗಿರುವರು.

ವಿಶೇಷ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಸೆಕ್ರೆಟರಿ, ಶ್ರೀ ರಾಮಕೃಷ್ಣ ಧರ್ಮ ವೈದ್ಯಾಶ್ರಮ,

ಡೊಂಗರಕೇರಿ, ಮಂಗಳೂರು.

ಬೇಕಲ—ಇಲ್ಲಿಯ ಕ್ರಿಶ್ಚನ್ನರ ಬ್ಯಾಡ್ಮಿಂಟನ್ ಟೀಮಿಗೂ ಕಾಸರಗೋಡಿನ ಚಿರಂಜೀವಿಯ ಎಸೇ ಟೀಮಿಗೂ ಕ್ರಿಶ್ಚನ್ನರ ಗ್ರೌಂಡಿನಲ್ಲಿ ಟೂರ್ನಮೆಂಟ್ ನಡೆದು ಕ್ರಿಶ್ಚನ್ನರ ಟೀಮು ಜಯಹೊಂದಿತು. ಚಿರಂಜೀವಿ ಕ್ಲಬ್ಬಿನ ೧ನೇ ಟೀಮಿನವರು ಇನಾಮು ಇಲ್ಲಿ ಬಂದು ಎಸೇ ಟೀಮಿಗೆ ಸಿಕ್ಕಿದ ಅವಕಾಶವನ್ನು ಸಂಪಾದಿಸುವರೆ ಭಗೀರಥ ಪ್ರಯತ್ನವಿಟ್ಟು ಪ್ರೇಕ್ಷಕರಿಗೆ ಸೋಜಿಗ ತೋರಿದ ರೀತಿ ಅತ್ಯಂತ ರೀತಿಯನ್ನು ಎದೆಗುಂದದೆ ಬಹಳ ಪರಾಕ್ರಮದಲ್ಲಿ ಆಡಿದರು. ಉಭಯ ಟೀಮಿನವರ ಯಶಸ್ಸು ಬಗ್ಗೆ ಜನಜಂಗುಳಿಯು ಬಹಳ ಕೌತುಕದಲ್ಲಿ ಹೋರಾಡಿದರೂ ಜಯಶ್ರೀಯು ಕ್ರಿಶ್ಚನ್ನರ ಟೀಮಿಗೇನೆ ಮಾಲೆ ಹಾಕಿತು. ಚಿರಂಜೀವಿಯ ೧ ಮತ್ತು ೨ ಟೀಮಿನವರಿಗೆ ಸುವರ್ಣ ಅವಕಾಶವನ್ನು ಈ ಸಂದರ್ಭದಲ್ಲಿ ಸಲ್ಲಿಸುವರೆ ಸಾಧ್ಯವಾಗಲಿಲ್ಲವಾದರೂ ಮುಂದಿನ ಪ್ರೋಗ್ರಾಮಿನಲ್ಲಿ ಹ್ಯಾಗೆ ನಡೆಯುವವು ಎಂದು ನೋಡಬೇಕಾಗಿದೆ.

ಇಲ್ಲಿಯ ಕ್ರಿಶ್ಚನ್ನರ ರೈಲ್ವೆ ಸ್ಟೇಷನ್ ಒಮ್ಮೆ ೧—೧೨—'೨೮ರಿಂದ ತೆಗೆದು ಹಾಕಬೇಕಾಗಿ ನಿರ್ಣಯವಾಗಿದ್ದರೂ ಎಸೇ ಹುಕುಂ ಸಿಕ್ಕುವ ವರೆಗೆ ಸದರಿ ಸ್ಟೇಷನ್ ಉಪಯೋಗವಲ್ಲದೆ ಇಡಬೇಕಾಗಿ ರೈಲ್ವೆ ಅಧಿಕಾರಿಗಳ ಹುಕುಂ.

ರೈಲ್ವೆ ಆಫೀಸಿನಿಂದ ಅರ್ಧ ಮೈಲು ಒಳಗೆ ಇರಬಹುದಾದ ಸರಕಾರಿ ಸ್ಥಳಗಳನ್ನು ಬೇರೇಯು ಜೋಡಿಸಿ ಕೊಡಬೇಕಾದರೆ ರೈಲ್ವೆ ಇಲಾಖೆಯವರ ಅನುಮತಿ ಬೇಕೆಂದು ಸರಕಾರಿ ನಿರ್ಣಯ. ಈ ಸಂಗತಿಯಲ್ಲಿ ಯಾವ ಗುಣದೋಷ ನೋಡದೆ ಅಭಿಪ್ರಾಯ ಕೇಳದ ಕಲಾವಿದರಿಗೆ ರೈಲ್ವೆಯವರೇ ಇಷ್ಟರು. ಅಜಾಗ್ರತೆ ದಾಸವಾಡುವ ಜನರ ವ ಜಮಾನುದಾರರುಗಳ ಆದಾಯ ತಪ್ಪಿಸಲಿಕ್ಕೆ ಕಷ್ಟದ ಹೊಂದ ಮುಳ್ಳಿನ ದಾರಿ ಪಡೆಯುವರೆ ರೇವನ್ನು ಇಲಾಖೆಯ ವ್ಯವಹಾರ. ನಿರಾಸೆಯ ಉದಾಹರಣೆ ಯುಗದ ಮಹಿಮೆಯಿಂದ ಸಿಕ್ಕುವ ಸ್ವಾತಂತ್ರ್ಯದ ವಿಚಾರವನ್ನು ಉಂಟುಮಾಡುತ್ತದೆ.

ವಿವಿಧ ಸಮಾಚಾರಗಳು.

ಪುರಾತನ ಹಿಂದೀಯರ ಶಸ್ತ್ರ ಚಿಕಿತ್ಸೆ.

ಕ್ರಿಸ್ತನಿಗಿಂತಲೂ ಮೊದಲು ಹಿಂದೂಗಳು ಶಸ್ತ್ರ ಚಿಕಿತ್ಸೆಯಲ್ಲಿ ನಿಪುಣರಿದ್ದರು ಎಂಬುವನ್ನು ಡಾ। ಮುತ್ತು ಎಂಬುವರು ವಿಶದಪಡಿಸಿರುವರು. ಋಗ್ವೇದ ಕಾಲದಲ್ಲಿ ಅಂದರೆ ಸುಮಾರು ಕ್ರಿಸ್ತಶಕ ೪೦೦೦ ವರುಷಗಳ ಹಿಂದೆ, ಹಿಂದೂಸ್ಥಾನದಲ್ಲಿ ಶಸ್ತ್ರಚಿಕಿತ್ಸೆ, ಆರೈಕೆ, ಆರೋಗ್ಯದ ರಕ್ಷಣೆ, ವೈದ್ಯಕೀಯ ಕ್ರಮಗಳು, ಇವು ಬಹಳೇ ಅಭಿವೃದ್ಧಿಯ ಸ್ಥಿತಿಯಲ್ಲಿದ್ದವು. ಆಯುರ್ವೇದದಲ್ಲಿ ಮನುಷ್ಯನ ಅಂತರಿಕ ಇಂದ್ರಿಯಗಳ ವರ್ಣನೆ, ಅವು ರೋಗಪೀಡಿತವಾದಾಗ ಮಾಡಬೇಕಾದ ಉಪಕ್ರಮ ಇವು ಚೆನ್ನಾಗಿ ವರ್ಣಿತವಾಗಿರುವ ಒಂದು ಅಧ್ಯಾಯವೇ ಇರುತ್ತದೆ. ಕ್ರಿ. ಶ. ೯೨೭ನೇ ಇಸವಿಯಲ್ಲಿ ಧಾರಾನಗರದ ಅರಸನಾದ ಭೋಜರಾಜನ ತಲೆಯನ್ನು ಒಪರೇಶನ್ ಮಾಡಿದ್ದೆಂದು ಬರೆಯಲ್ಪಟ್ಟಿದೆ. ಒಪರೇಶನು ಮಾಡಿದವರು ವೈದ್ಯವಿದ್ಯೆಯನ್ನು ಬಲ್ಲ ಇಬ್ಬರು ಅಣ್ಣತಮ್ಮಂದಿರು. ಸ್ಮೃತಿತಪ್ಪಲು ಅವರು ಸಮ್ಮೋಹಿನಿ ಎಂಬ ಔಷಧವನ್ನು ಉಪಯೋಗಿಸಿದ್ದರು. ತಲೆಯನ್ನು ಬಿಚ್ಚಿ ಮಿದುಳಿನ ಒಂದಂಶವನ್ನು ತೆಗೆದು, ತಲೆಯನ್ನು ಪುನಃ ಮುಚ್ಚಿ, ಹೊಲಿದು ಗುಣಪಡಿಸಿದ್ದರು. ಪುನಃ ಸ್ಮೃತಿಯುಂಟಾಗಲು ಸಂಜೀವಿನಿ ಎಂಬ ಔಷಧವು ಉಪಯೋಗಿಸಲ್ಪಡುತ್ತಿತ್ತು.

ಮೋಟಾರ ಅಪಘಾತಗಳ ಪರಮಾವಧಿ.

ಇತ್ತೀಚೆಗೆ ನಡೆಯುವ ಮೋಟಾರ ಅಪಘಾತಗಳ ಸಂಖ್ಯೆಯು ಬಹಳವಾಗಿ ಬೆಳೆದಿರುತ್ತದೆ. ಗ್ರೇಟ್ ಬ್ರಿಟನಿನ ೧೦೦ ಪ್ರಾಂತಿಕ ಆಸ್ಪತ್ರೆಗಳಲ್ಲಿ ೧೯೨೭ನೇ ಇಸವಿಯಲ್ಲಿ ಕೇವಲ ಮೋಟಾರ ಅಪಘಾತದಿಂದಲೇ ೨೬,೦೦೦ ರೋಗಿಗಳು ಬಂದು ಸೇರಿದರು. ೩೯,೦೦೦ ಜನರಿಗೆ ಹೊರಗಿಂದೊರಗೆ ಚಿಕಿತ್ಸೆ ಮಾಡಲಾಯಿತು. ಇಷ್ಟು ಜನರ ಚಿಕಿತ್ಸೆ ಬಗ್ಗೆ ತಗಲಿದ ಖರ್ಚು ೨೪೦,೦೦೦ ಪವನುಗಳು. ಇದರಲ್ಲಿ ೨೬,೦೦೦ ಪವನುಗಳು, ಜಖಮ್ ಹೊಂದಿದವರಿಂದ ದೊರಕಿದುವಂತೆ. ಮೋಟಾರಿಸ್ಟರನ್ನು ಇನ್ಶೂರು ಮಾಡುವ ವಿಮಾಯದ ಕಾನೂನನ್ನು ಜ್ಯಾರಿಗೆ ತರುವದು ರಾಜ್ಯಕರಣಾಗಿರುವದಾದರೂ, ಅದು ಮಾತ್ರ ಸಾಧ್ಯವೆಂದು ತೋರಿಬರುವುದಿಲ್ಲ. ಒಮ್ಮೆಗೆ ಮೋಟಾರಿಸ್ಟರನ್ನು ಕಡ್ಡಾಯದಿಂದ ಇನ್ಶೂರು ಮಾಡಿಸಿದ್ದರೆ, ಮೋಟಾರು ಅಪಘಾತದಲ್ಲಿ ಜಖಮು ಹೊಂದುವವರು ಹೆಚ್ಚಾಗಿ ಮೋಟಾರಿಸ್ಟರಲ್ಲ. ಮಾರ್ಗದಲ್ಲಿ ಹೋಗುವ ಪಥಿಕರು. ಅವರೆಲ್ಲರನ್ನು ಇನ್ಶೂರು ಮಾಡಲು ಅನುಕೂಲವಿದೆಯೇ? ಮೋಟಾರಿಸ್ಟರ ಸಂಘಗಳನ್ನು ಸ್ಥಾಪಿಸಿ, ಅವರಿಂದ ಹಣವನ್ನಿತ್ತು ಆಸ್ಪತ್ರೆಗೆ ಕೊಡಿಸುವುದಾಗಲಿ, ಮೋಟಾರು ಓಡಿಸುವವರಿಗೆ ಪ್ರತ್ಯೇಕವಾದ ಒಂದು ತೆರಿಗೆಯನ್ನು ಜಾರಿ ಮಾಡಿ ಹಣ ವಸೂಲು ಮಾಡಿ ಜಖಮು ಹೊಂದಿದವರ ಆರೈಕೆಗೆ ಉಪಯೋಗಿಸುವುದೂ ಬಹಳ ಹಿತಕರವಾಗಿದೆಯೆಂದು ಬ್ರಿಟನಿನ ಡಾಕ್ಟರರೊಬ್ಬರು ಅಭಿಪ್ರಾಯ ಪಡುವರು.

ಅಮೇರಿಕೆಯಲ್ಲಿ ಶ್ರೀಮತಿ ಸರೋಜಿನಿ ನಾಯುಡುರವರು.

ಕಳೆದ ನವಂಬರ ತಿಂಗಳಿನಲ್ಲಿ ಅಮೇರಿಕೆಯಲ್ಲಿ ಶ್ರೀಮತಿ ಸರೋಜಿನಿ ದೇವಿಯವರಿಗೆ ಅಮೇರಿಕೆಯಲ್ಲಿರುವ ಹಿಂದೂ ಸಭೆಯ ಕಡೆಯಿಂದ ಹಿಂದೂಗಳವರು ಕೊಟ್ಟ ಔತಣಕ್ಕೆ ಸುಮಾರು ನಾಲ್ಕುನೂರು ಜನರು ನೆರೆದಿದ್ದರು. ಮಂದಿರವನ್ನು ಅಂದವಾಗಿ ಶೃಂಗರಿಸಿ, ಸುಮಾರು ೬೦ ರಾಷ್ಟ್ರಗಳ ಜನರು ಅಲ್ಲಿ ಬಂದಿದ್ದರು. "ಹಿಂದೂಸ್ಥಾನ ಸ್ವತಂತ್ರ" ಎಂಬ ಪತ್ರಿಕೆಯ ಸಂಪಾದಕರಾದ ಶ್ರೀ. ಹೇರಂಬ, ಕೆ. ರಕ್ಷಿತರವರು ಈ ಸಮಾರಂಭದಲ್ಲಿ ಉತ್ಸಾಹಪೂರ್ಣವಾದ ಭಾಗವನ್ನು ವಹಿಸಿದ್ದರು. ಸರೋಜಿನಿ ದೇವಿಯವರು, ಭಾಷಣವನ್ನು ಕೊಡುವುದರ ಸಲುವಾಗಿ ಎದ್ದು ನಿಂತೊಡನೆ ನೆರೆದ ಜನರೆಲ್ಲರೂ ಎದ್ದು ನಿಂತರು. ಸರೋಜಿನಿ ದೇವಿಯವರಿಗೆ ತುಂಬಾ ಗೌರವವಿತ್ತರು. "ಹಿಂದೂಸ್ಥಾನದ ಜನರೀಗ ಸ್ವಾತಂತ್ರ್ಯವನ್ನಪೇಕ್ಷಿಸಿ ಹೋರಾಡುತ್ತಿರುವರು. ರಾಜಕೀಯ ಸ್ವಾತಂತ್ರ್ಯ ಮಾತ್ರವಲ್ಲ, ಸಾಮಾಜಿಕ, ಸ್ತ್ರೀಕ್ಷೇ, ಮೊದಲಾದ ಸ್ವಾತಂತ್ರ್ಯವನ್ನು ಬಯಸುವರು. ಅದಕ್ಕಾಗಿ ಹಿಂದೂ ಧರ್ಮ ಮತ್ತು ಅಹಿಂಸೆ, ಇವುಗಳ ಸಹಾಯ ಹಿಂದೀಯರಿಗೆ ಅಗತ್ಯವಾಗಿದೆ" ಎಂದು ಮೊದಲಾಗಿ ಭಾಷಣವನ್ನು ಮಾಡಿದರು. ಕಳೆದ ಬಣ್ಣದ ಸಿಲ್ಕ ವಸ್ತ್ರದ ಮೇಲೆ ಒಂದು ಮಾನಪತ್ರವನ್ನು ಮುದ್ರಿಸಿ ಅವರಿಗೆ ಸಮರ್ಪಿಸಲಾಯಿತು. ಅದಲ್ಲದೆ ಪುಷ್ಪಮಾಲೆಗಳೂ ಸಮರ್ಪಿಸಲಾದುವು. ಮಾನಪತ್ರದ ಸಾರಾಂಶ ವೇನೆಂದರೆ:— "ನಮ್ಮಲ್ಲಿಗೆ ನೀವು ಚಿತ್ತೈಸಿದುದು ನಮ್ಮ ಭಾಗ್ಯೋದಯ ವೆಂದು ಭಾವಿಸುವೆವು. ಅದಲ್ಲದೆ ಹಿಂದೂಸ್ಥಾನದ ಕಡೆಗಿನ ನಮ್ಮ ಪ್ರೇಮವನ್ನು ಇದರಿಂದ ತೋರ್ಪಡಿಸುವೆವು. ಮೊದಲೇ ಅಮೇರಿಕೆಯು ಹಿಂದೂಸ್ಥಾನದ ವಿಷಯವಾಗಿ ಕಳಂಕಭಾವನೆಯುಳ್ಳದ್ದಾಗಿದೆ. ಅದನ್ನು ನಿವಾರಿಸುವ ಸಲುವಾಗಿ ಹಿಂದೂಸ್ಥಾನದಿಂದ ಇಲ್ಲಿಗೆ ಬಂದು ಪ್ರಯತ್ನಿಸಿ, ಹೆಸರು ಪಡೆದ ನೀವೇ ಧನ್ಯರು. ಹಿಂದೂಸ್ಥಾನಕ್ಕೂ ಅಮೇರಿಕಕ್ಕೂ ಸನ್ನದಲ್ಲಿಯೇ ಸ್ನೇಹವು ಬೆಳೆದು ಬರುವುದೆಂದು ಹಾರೈಸುವೆವು." ಎಂದಾಗಿದ್ದಿತು.

ಗ್ರಾಮಪಂಚಾಯತುಗಳಲ್ಲಿ ವಿದ್ಯಾಭ್ಯಾಸ.

ಕಳೆದ ವರುಷದ ಗ್ರಾಮ ಪಂಚಾಯತುಗಳ ಆಡಳಿತೆ ವರದಿಯಿಂದ ಈ ಕೆಳಗಿನ ಕೆಲವು ಸಂಗತಿಗಳು ತಿಳಿದುಬರುತ್ತವೆ. ಸರಕಾರಿ ಗ್ರ್ಯಾಂಟಿನ ಸಹಾಯದಿಂದ ೩೭೧ ಗ್ರಾಮಪಂಚಾಯತುಗಳು ೮೦೦ ಶಾಲೆಗಳನ್ನು ನಡೆಸಿದುವು. ಈ ಶಾಲೆಗಳಲ್ಲಿ ಸುಮಾರು ೫೦೦ ಶಾಲೆಗಳು ಆಡಳಿತೆಯ ವರುಷದಲ್ಲಿಯೇ ಸ್ಥಾಪಿಸಲ್ಪಟ್ಟುವು. ಈ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಿಯು ಸರಾಸರಿ ವಿದ್ಯಾರ್ಥಿಗಳ ಸಂಖ್ಯೆಯ ಶೇಕಡಾ ೮೦ ರಷ್ಟು ಆಗಿತ್ತು. ಬೋರ್ಡ್ ಯಾ ಬೋರ್ಡ್ ಶಾಲೆಗಳಿಗಿಂತ ಈ ಶಾಲೆಗಳ ಮೇಲೆ ಜನರು ಯಾವಾಗಲೂ ಪ್ರೀತಿ ಹೆಚ್ಚು. ಈ ಶಾಲೆಗಳ ಶೇಕಡಾ ೨೫ರಷ್ಟು ಶಾಲೆಗಳಲ್ಲಿ ಆದಿದ್ರಾವಿಡ, ಯಾ ಆದಿ ಆಂಧ್ರದ ಮಕ್ಕಳು ಕಲಿಯುತ್ತಿದ್ದರು. ಆಡಳಿತೆಯ ವರುಷದಲ್ಲಿ ೨೫೩ ಶಾಲಾ ಕಟ್ಟೋಣಗಳು ನಿರ್ಮಿಸಲ್ಪಟ್ಟುವು. ನಾಲ್ಕು ಪಂಚಾಯತುಗಳಲ್ಲಿ ಕಡ್ಡಾಯಪೂರ್ವಕವಾಗಿ ಕಲಿಸುವ ಕ್ರಮವು ಜ್ಯಾರಿಯಲ್ಲಿದ್ದಿತು. ಬೋರ್ಡ್ ಸ್ಕೂಲುಗಳ ಮೇಲೂ ಅಧಿಕಾರ ನಡೆಸಲು ೩೯ ಪಂಚಾಯತುಗಳಿಗೆ ಅಧಿಕಾರವಿದ್ದಿತು. ಲೈಬ್ರರಿಗಳ ಬಗ್ಗೆ ೨೦,೦೦೦ ರೂಪಾಯಿಗಳನ್ನು ಪ್ರತ್ಯೇಕಿಸಿಟ್ಟಿದ್ದರು. ಇದರಿಂದ ೩೬೭ ಪಂಚಾಯತುಗಳಿಗೆ ಲೈಬ್ರರಿಗಳ ಬಗ್ಗೆ ಗ್ರ್ಯಾಂಟು ದೊರಕಿತು.

ವಿಶೇಷ ವಾರ್ತೆಗಳು.

ಸುಡದ ಕಾಗದ. ಬೆಂಕಿಯಲ್ಲಿ ಸುಡದಿರುವಂತಹ ಒಂದು ತರದ ಕಾಗದವು ಇತ್ತೀಚೆಗೆ ಕಂಡುಹಿಡಿಯಲ್ಪಟ್ಟಿರುವದು. ಬರೆಯಲ್ಪಟ್ಟ ಪುಸ್ತಕಗಳಿಗೆ ಕಾಪಾಡುವದನ್ನು ಮಾಡಲು ಇದು ಬಹು ಉಪಯುಕ್ತವಾಗಿದೆ. ಇದನ್ನು ಕಂಡುಹಿಡಿದವನು ಜರ್ಮನಿಯ ಫ್ರಂಚಪ್ರೆಂಕೆನೆಂಬವನು. ಇದನ್ನು ಆತನು ಪ್ರತ್ಯಕ್ಷವಾಗಿ ತೋರಿಸಿರುವನು. ಸಾದಾ ಕಾಗದವಿಷ್ಟನ್ನು ತೆಗೆದು ಉಂಡೆಯಾಗಿ ಮುದಡಿ, ಅದನ್ನು ಈ ನೂತನ ಕಾಗದದಲ್ಲಿ ಸುತ್ತಿ ಬೆಂಕಿಯಲ್ಲಿಟ್ಟನು. ಬೆಂಕಿಯು ಕಾಗದವನ್ನು ಕರಗಿಸುವಷ್ಟು ಬಿಸಿಯಾಗಿದ್ದಿತು. ಆದರೂ ಈ ಕಾಗದವು ಬೆಂಕಿಯಲ್ಲಿ ಸುಟ್ಟು ಹೋಗಲಿಲ್ಲ. ಅದಲ್ಲದೆ ಒಳಗಿನ ಕಾಗದವೂ ಏನೂ ಹಾಳಾಗಲಿಲ್ಲ.

ವಕೀಲರಿಗೆ ಜುಲ್ಮಾನೆ. ಅಲಹಾಬಾದಿನ ಕೋರ್ಟಿನಲ್ಲಿ ವಕೀಲನೊಬ್ಬನು "ಬಾಂದಾ ಎಂಬಲ್ಲಿರುವ ಈ ವಾದಿಯ ಅಂಗಡಿಯು ಬಹು ಅಪಮರ್ಯಾದೆಯದು" ಎಂದು ಹೇಳಿ ಹೀನಯಿಸಿದುದಕ್ಕಾಗಿ ಆತನಿಗೆ ೨೦೦ ರೂಪಾಯಿಗಳ ಜುಲ್ಮಾನೆಯು ವಿಧಿಸಲ್ಪಟ್ಟಿತು. ಈ ಜುಲ್ಮಾನೆಯನ್ನು ಅಲಹಾಬಾದ ಹೈಕೋರ್ಟಿನವರು ಕಾಯಂ ಮಾಡಿದರು.

ಹೂವಿನ ಪರಿಮಳ. ಬಿಳಿ ಹೂವುಗಳಲ್ಲಿರುವಷ್ಟು ಪರಿಮಳದ ಜಾತಿಗಳು ಬೇರಾವ ಬಣ್ಣದ ಹೂಗಳಲ್ಲಿಯೂ ಇರುವದಿಲ್ಲ. ಬರ್ಮಿಂಗ ಹೇಮಿನ ಶಾಲೆಯೊಂದರ ಬೊಟನಿ ಪ್ರೊಫೆಸರರು ಇದನ್ನು ಕುರಿತು ಹೇಳುವದೇನಂದರೆ, "ಪ್ರತಿ ಬಿಳಿ ಹೂಗಳಲ್ಲಿ ೫೦ ಜಾತಿಗಳಲ್ಲಿ ೧೦೨ ಜಾತಿಗೆ ಪರಿಮಳವಿದೆ. ಕೆಂಪು ಹೂಗಳಲ್ಲಿ ೧೦ರಲ್ಲಿ ಒಂದು ಜಾತಿಗೆ ಪರಿಮಳವಿದೆ. ಕೆಲವು ಹೂಗಳಲ್ಲಿ ಪರಿಮಳವು ಬಹಳೇ ಕಡಿಮೆ. ಪರಿಮಳವು ಹೂವನ್ನು ಸೂರ್ಯನ ತಾಪದಿಂದ ರಕ್ಷಿಸುವದು" ಎನ್ನುವರು.

ಡಾಕ್ಟರನ ಮೇಲೆ ಮೊಕದ್ದಮೆ. ಜಾಕ್ಸನ ಡಕ್ಕರ ಟೆಕ್ ಜುನೆವ ಎಂಬವನು ಹೆಂಡತಿಯೊಂದಿಗೆ ಕುಳಿತಾಗ ಹಲವು ವಿದ್ಯಾರ್ಥಿಗಳು ಆ ಕಡೆಯಿಂದ ಬಂದರು. ಆತನ ಹೆಂಡತಿಯನ್ನು (ಪ್ರಾಯಶಃ ಅವಳು ವಿಕಾರ ಸ್ವರೂಪದವಳಾಗಿದ್ದಿರಬಹುದು.) ನೋಡಿದೊಡನೆ ವಿದ್ಯಾರ್ಥಿಗಳು ನಗಲಾರಂಭಿಸಿದರು. ಡಾಕ್ಟರನು ಸಿಟ್ಟಿನಿಂದ ಅವರ ಕಡೆಗೆ ೯ ಗುಂಡುಗಳನ್ನು ಹೊಡೆದನು. ದೈವವಶಾತ್ ಯಾರಿಗೂ ಜಖಮಾಗಲಿಲ್ಲ. ಆತನ ಮೇಲೀಗ ಮೊಕದ್ದಮೆಯಾಗಿದೆ. ನಳಿಗೆಯೊಳಗಿನ ಧೂಳನ್ನು ಹೋಗಲಾಡಿಸಲು ಗುಂಡು ಹಾರಿಸಿದುದೆಂಬ ಡಾಕ್ಟರನ ಹೇಳಿಕೆ.

ಪುರಾತನದಲ್ಲಿ. ರೈಲುವೇ ಸ್ಟೇಶನುಗಳೊಳಗೆ ಸಿಗ್ನಲುಗಳಿರಲಿಲ್ಲ. ಎರಡು ರೈಲು ಬಂಡಿಗಳು ಒಂದೇ ಹಾದಿಯ ಕಂಬಿಯ ಮೇಲೆ ಒಟ್ಟಾಗುವ ಸಂದರ್ಭಗಳಿರುತ್ತಿದ್ದವು. ಆಗ ಎರಡು ಬಂಡಿಯವರೂ ಬಹಳ ಹೊತ್ತಿನ ವರೆಗೆ ಚರ್ಚಿಸಿ ಸಮಯವನ್ನು ಕಳೆಯುತ್ತಿದ್ದರು. ಸ್ವಲ್ಪ ಕಾಲದ ತರುವಾಯ ದಾರಿ ಹಂಚಿಕೆಯನ್ನು ಹುಡುಕಿ ತೆಗೆದರು. ಎರಡು ಸ್ಟೇಶನುಗಳ ನಡುವೆ ಸರಿಮಧ್ಯದಲ್ಲಿ ಒಂದು ಕಂಬವನ್ನು ನೆಟ್ಟರು. ಯಾವ ರೈಲು ಬಂಡಿಯು ಒಂದು ಸ್ಟೇಶನಿನಿಂದ ಹೊರಟು ಆ ಕಂಬವನ್ನು ದಾಟಿ ಬಂದಿದೆಯೋ ಅದು ಸೀದಾ ಮುಂದರಿದು ಹೋಗಬೇಕೆಂದೂ, ಯಾವುದು ಕಂಬವನ್ನು ಸಮೀಪಿಸಲ್ಲವೋ ಅದು ಬಂದ ಹಾಗೆಯೇ ಹಿಂದಕ್ಕೆ ಹೋಗಬೇಕೆಂದೂ ನಿಶ್ಚಯಿಸಿದರು.

ಜೂಲಿಯಸ್ ಸೀಸಾರರು. ಈಗಲೂ ಜೂಲಿಯಸ್ ಸೀಸಾರರಿರುವರು, ಆದರೆ ಹೆಸರಿನಲ್ಲಿ ಮಾತ್ರ. ಮೈಸೂರ್ ಕೌನ್ಸಿಲಿನಲ್ಲಿ ಒಬ್ಬ ಸದಸ್ಯನು ಚುನಾಯಿಸಲ್ಪಟ್ಟಿರುವನು. ಆತನ ಹೆಸರು ಜೂಲಿಯಸ್ ಸೀಸಾರನೆಂದು. ಲಂಡನಿನ ಟೆಲಿಫೋನ್ ಡೈರೆಕ್ಟರಿಯಲ್ಲಿ ನೋಡಿದರೆ ಅದರಲ್ಲಿ ಜೂಲಿಯಸ್ ಸೀಸಾರನೆಂಬ ಎರಡು ಜನರ ಹೆಸರುಗಳಿರುವುವಂತೆ.

ಮೊದಲನೆಯ ಡೆಂಟಲ್ ಆಸ್ಪತ್ರೆ. ಹಲ್ಲು ರೋಗಗಳನ್ನು ಗುಣಪಡಿಸುವ ಆಸ್ಪತ್ರೆಗಳು ಇದುವರೆಗೆ ಇರಲಿಲ್ಲ. ಅಂದರೆ ಅದೇ ಕೆಲಸದ ಆಸ್ಪತ್ರೆ ಇರಲಿಲ್ಲ. ಪಂಜಾಬ ಸರಕಾರದವರು ಒಂದನ್ನು ಹೊಸದಾಗಿ ತೆರೆದಿರುವರು. ಇದು ಹೊರತು, ದಂತವೈದ್ಯರಿಗಾಗಿ ಒಂದು ಟ್ರೈನಿಂಗ್ ಕಾಲೇಜನ್ನು ತೆರೆಯಲಿರುವರು.

ಅಲ್ಫೋನ್ಸೊ ರಾಜನು. ಸ್ಪೈನಿನ ಅಲ್ಫೋನ್ಸೊ ರಾಜನು ವಿಚಿತ್ರ ತರದ ಸ್ವಭಾವವುಳ್ಳವನು. ಚಿಕ್ಕತನದಲ್ಲಿ ಆತನಿಗೆ ವ್ಯಕ್ತ ಕಾರದ ವಾಗ್ದಾನಗಳನ್ನೇ ಆತನೀಗ ವಿಶೇಷವಾಗಿ ಪ್ರೀತಿಸುವನು. ಸಣ್ಣ ಹುಡುಗನಾಗಿರುವಾಗ ಆತನ ಕೆಲ್ಸ ದಿನ್ನ ಒಂದು ದೊಡ್ಡ ಕಲ್ಲಿಗೆ ತಲೆಹೊಡೆದು ಗಾಯಹೊಂದಿದ್ದನು. ಆ ಕಲ್ಲೇ ಆತನ ಪ್ರಿಯ ವಸ್ತುವು. ಆತನ ಮದುವೆಯ ಮೆರವಣಿಗೆ ಹೋಗುತ್ತಿರುವಾಗ ಒಂದು ಬಾಂಬು ಆತನ ಗಾಡಿಯ ಕಡೆಗೆ ಬಿಸಾಡಲ್ಪಟ್ಟಿತು. ಇದು ಒಡೆದು ಗಾಡಿಯ ಒಂದು ಕಿಟಕಿಯು ಸಿಡಿದುಹೋಯಿತು. ಸಿಡಿದ ಕಿಟಕಿಯ ಚರ್ಮವು ಆತನಿಗೆ ಪ್ರಿಯಕರವಾದ ಇನ್ನೊಂದು ವಸ್ತುವು.

ಹಿಂದೀ ಕ್ರಿಕೆಟಿಯರರು. ೧೯೩೦ನೇ ಇಸವಿಯಲ್ಲಿ ಕ್ರಿಕೆಟ್ ಆಡಲು ಇಂಡಿಯನ್ ಕ್ರಿಕೆಟ್ ಟೀಮಿನ ಪ್ರತಿನಿಧಿಗಳನ್ನು ಇಂಗ್ಲಾಂಡಿಗೆ ಕಳುಹಿಸಬೇಕೆಂದು ತಯಾರಿಯು ಈಗಲೇ ನಡೆಯುತ್ತಿದೆ.

ಹೆಂಗಸರ ಅಧಿಕ ಪ್ರಯಾಣ. ವಿಮಾನಗಳಲ್ಲಿ ಪ್ರಯಾಣ ಮಾಡುತ್ತಿರುವ ಹೆಂಗಸರ ಸಂಖ್ಯೆಯು ಗಂಡಸರಿಗಿಂತಲೂ ಮಿಗಿಲಾಗಿದೆ. ನಾಲ್ವರು ಗಂಡಸರಾದರೆ ಐದರು ಹೆಂಗಸರು. ಅಪಾಯದ ಸಲುವಾಗಿ ಗಂಡಸರಿಗಿಂತಲೂ ಹೆಂಗಸರಿಗೆ ಹೆದರಿಕೆ ಕಡಿಮೆ.

ಧನಿಕ ಬಿಕ್ಷುಕ. ಜರ್ಮನಿಯಲ್ಲಿ ಒಬ್ಬ ಬಿಕ್ಷುಕ, ಆತನು ಊಟಕ್ಕಿರುವದು ಒಂದು ಹೊಟೇಲಿನಲ್ಲಿ. ಆತನು ಇದುವರೆಗೆ ಕೂಡಿಹಾಕಿದ್ದ ಧನವನ್ನು ಲೆಕ್ಕ ಮಾಡಲಾಗಿ ಅದು ಅಸಂಖ್ಯಾತವಾಗಿದ್ದಿತು. ಆದರೂ ಮಗನಿಗೆ ಸುಖಿಯಾಗಿ ಕಳೆಯುವ ಬದಲು ಆತನು ಈಗಲೂ ಬೇಡುತ್ತಿರುವನಂತೆ.

ಪಂಪುಗಳು.



ನಿಶ್ಚಲವಾದ ಮತ್ತು ಹಗುರವಾದ್ಯಾವತರದ ಪಂಪುಗಳೂ ಸಿದ್ಧವಿರುತ್ತವೆ.

VOLKART BROS. ENGINEERS

ಆರ್ಮೇನಿಯನ್ ಸ್ಟ್ರೀಟ್, ಮದರಾಸು.

ತುತಿಕೋರಿನ್, ಕೊಚ್ಚಿ, ತಲಚೇರಿ.

ಫೆಲೂನಾ ಆರೋಗ್ಯವು

ನಿಮ್ಮ

ಮನೋಭಿಲಾಷೆಯನ್ನು

ಪೂರೈಸುವುದು

ಮಕ್ಕಳನ್ನು ಪಡೆಯುವದು ಸ್ವಾಭಾವಿಕವು. ಮಕ್ಕಳನ್ನು ಪಡೆಯದಿರುವದು ಅಸ್ವಾಭಾವಿಕವಾಗಿರುವದು. ಆದರೆ ಅಂತಹ ಹೆಂಗಸರು ಬಹು ಕಡಿಮೆ.

ಆದರೆ ಹಲವು ಹೆಂಗಸರಿಗೆ ಮಾತೃತನವು ನಿರಾಕರಿಸಲ್ಪಡುವದು. ಎಂದು ಮಕ್ಕಳನ್ನು ಪಡೆವ ದಿನವು ಉದಯಿಸುವುದೋ ಎನ್ನುತ್ತ ಅವರು ಕಾದು ಕಾದು ನಿರಾಶೆ ಹೊಂದುವರು. ಇತರರ ಶಿವಿಗಳಿಗೆ ಆ ಶುಭಸಮಾಚಾರವನ್ನು ಸುರಿಯಬೇಕೆಂದು ಅವರು ಅಪೇಕ್ಷಿಸುವರು. ಆದರೆ ಕಾರಣಾಂತರಗಳಿಂದ ಅವರ ಆಶೆಯು ಫಲಿಸುವುದಿಲ್ಲ. ಇಂತಹ ಸ್ಥಿತಿಗೆ ಸಾಧಾರಣವಾಗಿ ಶಕ್ತಿಹೀನತೆಯೇ ಕಾರಣವು. ಆಂತರಿಕ ಆರೋಗ್ಯವೇ ಬೇಕಾದುದು. ಒಬ್ಬಿಬ್ಬರಿಗೆ ಅಲ್ಲ. ಸಾವಿರಾರು ಹೆಂಗಸರಿಗೆ, ಈ ಫೆಲೂನಾ ಮಾತ್ರೆಗಳು ಆಂತರಿಕ ಆರೋಗ್ಯವನ್ನು ಒದಗಿಸಿ, ಅವರ ಮನೋಭಿಲಾಷೆಯನ್ನು ಪೂರಯಿಸಿರುವವು.

ಫೆಲೂನಾ ಮಾತ್ರೆಗಳಿಗೆ ಹೆಂಗಸರ ಇಂದ್ರಿಯಗಳನ್ನು ಶುಚಿಪಡಿಸುವ, ಬಲಪಡಿಸುವ ಶಕ್ತಿಯಿದೆ. ಅವುಗಳನ್ನು ಸೇವಿಸಿದೊಡನೆ ಮೊದಲು ಉತ್ಸಾಹವು ತಲೆದೋರಿ, ಸಂತೋಷವುಂಟಾಗಿ ರಕ್ತವು ಹೆಚ್ಚುವುದು. ಹೆಂಗಸು ಸರಿಯಾಗಿ ಚಲಿಸುವಳು. ಇದಕೆಲ್ಲಕ್ಕೆ ಫೆಲೂನಾ ಮಾತ್ರೆಗಳೇ ಕಾರಣ. ಹೀಗಾದೊಡನೆ ಸ್ವಾಭಾವಿಕವಾಗಿ ಮಕ್ಕಳು ಹುಟ್ಟಿ, ಆಗ ಫೆಲೂನಾ ಮಾತ್ರೆಗಳು ಇನ್ನಷ್ಟು ಪ್ರಶಂಸನೀಯವಾಗುವವು.

ವಾಚಕರೆ, ನಿಮ್ಮಲ್ಲಿ ಯಾರಿಗಾದರೂ, ಫೆಲೂನಾ ಮಾತ್ರೆಗಳಿಂದ ಶುಚಿತನವೂ, ಬಲವೂ ಬೇಕಾಗಿವೆಯೆ? ನಿಮಗೆ ಮಾತೃತನವು ಅಲಭ್ಯವೆನಿಸುವದೆ? ಹೆಂಗಸರಿಗಾಗಿಯೇ ಇರುವ **ಫೆಲೂನಾ ಮಾತ್ರೆಗಳಿಂದ** ಪೂರ್ಣ ಸೌಖ್ಯವೂ ಆರೋಗ್ಯವೂ ಲಭಿಸುವದು.

ಇಂಡಿಯಾ, ಬರ್ಮಾ, ಸಿಲೋನಿನ ಎಲ್ಲಾ ಕೆಮಿಸ್ಟರಿಂದಲೂ ಸ್ಟೋರ್ಸ್‌ರಿಂದಲೂ ಉತ್ತಮ ಫೆಲೂನಾ ಮಾತ್ರೆಗಳು ಮೇಲೆ ತೋರಿಸಿದಂತಹ ಕೆಂಪು ಮೊಹರು ಹಾಕಿದ ಕಟ್ಟುಗಳಲ್ಲಿ ಮಾರಲ್ಪಡುವವು. ಬಾಟಲಿಗೆ ರೂ. 2—4—0.

ಮುಖ್ಯ ಏಜಂಟರು— ಪಟೇಲ್ ಮತ್ತು ಧೊಂಡಿ, ಪೋಸ್ಟು ಆಫೀಸು ಬೋಕ್ಸ್ 838, ಮುಂಬಾಯಿ, ಮತ್ತು ಪೋಸ್ಟು ಬೋಕ್ಸ್ 620 ಕಲ್ಕತ್ತ.

ಮದ್ರಾಸು ಸಂಸ್ಥಾನಕ್ಕೆ—

ದಾದಾ ಎಂಡ್ ಕೋ,
260 ಚೈನಾ ಬಜಾರ್ ರೋಡ್, ಮದರಾಸ್.

ಗರ್ಭವತಿಯಾದವರಿಗೆ ಫೆಲೂನಾ ಮಾತ್ರೆಗಳು ಉಪಕಾರಿಯಾಗಿರುವವು. ಅವು ಸ್ವಾಭಾವಿಕವಾದ ಬೆಳವಣಿಗೆಗೆ ಮಾತ್ರವೇ ಸಹಾಯಕವಾಗುವವು. ಅವು ವನಸ್ಪತಿ ಧಾತುಗಳಿಂದಲೇ ತಯಾರಿಸಲ್ಪಟ್ಟವುಗಳಲ್ಲದೆ, ಪ್ರಾಣಿಜನ್ಯ ಧಾತುಗಳು ಅವುಗಳಲ್ಲಿರುವುದಿಲ್ಲ. ಮಾಡುವಾಗ ಕೈಯಿಂದ ಮುಟ್ಟುವದೂ ಇಲ್ಲ.

ದಕ್ಷಿಣ ಆಫ್ರಿಕದ ಕೇಪ್ ಟೌನಿನ ಗ್ರಹಮ್ಸ್ ರೆಮ್ಮಿಡಿಸ್ ಲಿಮಿಟೆಡ್ ಇವರಿಂದ ತಯಾರಿಸಲ್ಪಟ್ಟವು.

No 2a

ಕೋವಿಮದ್ದು ವಗೈರೆ ಬೇಟೆಯ ಸಾಮಾನುಗಳು

ದಯಿ ಇಟಸ್ಟಿ ಮೇಲಣ ಸಾಮಾನುಗಳನ್ನು ಕೊಂಡುಕೊಳ್ಳುವ ಮೊದಲು ನಮ್ಮೊಡನೆ ವಿಚಾರಿಸಿಕೊಳ್ಳಿರಿ. ನಿಮಗೆ ಅದರಿಂದ ಪ್ರಯೋಜನವಿದೆ. ಅಗ್ಗವೂ ಅತ್ಯುತ್ತಮವೂ ಆದ ಬೇಟೆಯ ಉಪಕರಣಗಳು ಎಲ್ಲಾ ಸಿಗುತ್ತವೆ!

ಬರೆದುಕೊಂಡವರಿಗೆ ಧರ್ಮಾರ್ಥವಾಗಿ 1928ನೇ ಇಸವಿಯ ಕೆಟಲಾಗನ್ನು ಕಳುಹಿಸುತ್ತೇವೆ.

ಗುಲಾಮಹುಸೇನ್ ಅಲ್ಲಿಭಾಯಿ ಎಂಡ್ ಸನ್ಸ್

ಮದ್ದುಕೋವಿಗಳನ್ನು ಧಾರಾಳವಾಗಿ ಆಮದು ಮಾಡುವವರು.
ಇಂಡಿಯಾದಲ್ಲಿ ಇವರಲ್ಲಿ ಅತಿ ಸುಲಭ ಬೆಲೆ;
210, ಅಬ್ದುಲ್‌ರಹಿಮಾನ್ ರಸ್ತೆ, ಮುಂಬಾಯಿ.

ಹೊಸಮುದ್ರಣ! ಅಂದವಾದ ಅಕ್ಷರ!!

ಸಂಗೀತಶಾಸ್ತ್ರ ಪ್ರವೇಶದಾಯಿನಿ.

(ಮೈಸೂರು ಮತ್ತು ಬೊಂಬಾಯಿ ವಿದ್ಯಾಭ್ಯಾಸ ಇಲಾಖೆಯವರಿಂದ ಅಂಗೀಕರಿಸಲ್ಪಟ್ಟಿದೆ)

ಇದರಲ್ಲಿ ಸಂಗೀತಶಾಸ್ತ್ರ ಸಂಬಂಧವಾದ ಅನೇಕ ರಹಸ್ಯಗಳು ಸಂಗೀತ ವಿದ್ವಾಂಸರ ಸಲಹೆಗಳನ್ನು ಅನುಸರಿಸಿ ಸುಲಭ ರೀತಿಯಲ್ಲಿ ಕನ್ನಡದಲ್ಲಿ ವಿವರಿಸಲ್ಪಟ್ಟಿವೆ.

ಸರಳೆ ಅಲಂಕಾರ, ಗೀತ, ಸ್ವರಜತಿ, ವರ್ಣಗಳು ಮತ್ತು ತ್ಯಾಗಯ್ಯರ್, ಪಟ್ಟಣಂ ಸುಬ್ರಹ್ಮಣ್ಯಯ್ಯರ್, ದೀಕ್ಷಿತರು, ಸದಾಶಿವರಾಯರು, ಶಾಮಾಶಾಸ್ತ್ರಿಗಳು ಮೊದಲಾದ ಸುಪ್ರಸಿದ್ಧ ಸಂಗೀತ ವಿದ್ವಾಂಸರ 106 ಕೃತಿಗಳೂ ಜಾವಡಿಗಳು ಸ್ವರಚಿಹ್ನೆ ಸಹಿತವಾಗಿ ಇದರಲ್ಲಿ ಕೊಡಲ್ಪಟ್ಟಿವೆ.

ಬೆಲೆ 2—4—0 ಹಾಸಲ 0—5—0

ಹಾರ್ಮೋನಿಯಂ ಸ್ವಯಂಬೋಧೆ.

0—12—0.

ಹೆಚ್. ಎನ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು ಚಿಕ್ಕಪೇಟೆ ಬೆಂಗಳೂರು ಸಿಟಿ

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿನಲ್ಲಿ—

O. P. No. 80/1928

1. ಬಿ. ಜನಾರ್ಧನ ಪ್ರಭು
2. ಬಿ. ಆನಂದಿ ಯಾನೆ ಪದ್ಮಾವತಿ ಬಾಯಿ
3. ಬಿ. ಶಾಂಬವಿ ಯಾನೆ ಗುಲಾಬಿ ಬಾಯಿ
4. ಬಿ. ಶಾಂತಾ ಬಾಯಿ (ಮೈನರು)

} ಅರ್ಜಿದಾರರು.

ಸದರಿ ಅರ್ಜಿದಾರರು ಮೃತಪಟ್ಟ ಬೆಳ್ಮಣ್ಣು ಪುಂಡಲೀಕ ಪ್ರಭು ಯೆಂಬವನು ದಿ ಬೊಂಬೈಲೈಫ್ ಎಸ್ಯುರೆನ್ಸ್ ಕಂಪೆನಿಯಲ್ಲಿ ಪೋಲಿಸಿ ನಂಬ್ರ 16745ಕ್ಕೆ ರೂಪಾಯಿ 1000ಕ್ಕೆ ಇನ್ಸೂರು ಮಾಡಿದ ಬಾಬ್ತು ರೂಪಾಯಿ 1000ವನ್ನು ತಮಗೆ ಸಿಕ್ಕುವ ಹಾಗೆ 1ನೇ ಅರ್ಜಿದಾರಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಈ ಕೋರ್ಟಿಗೆ ಅರ್ಜಿ ದಾಖಲು ಮಾಡಿರುವದರಿಂದ ಆ ಕುರಿತು ಯಾರಾದರೂ ಆಕ್ಷೇಪ ಹೇಳುವುದಾದರೆ ಸದರಿ ಅರ್ಜಿಯು ತನಿಖೆಗೆ ಇಟ್ಟ ತಾರೀಕು 8—1—1929ನೇ ಹಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರು ಆಗಿ ಜಾಹೀರು ಮಾಡತಕ್ಕದ್ದು:—

ಕಾರ್ಕಳ, 7-12-1928. } **K. Santhaya Kamath,** *Pleader for Petitioners*

ತಯಾರಿವೆ! ತಯಾರಿವೆ!!

ಶಾಲಾ ಉಪಾಧ್ಯಾಯರಿಗೆ ಬೇಕಾಗುವಂತಹ ಚೋಕು ಪೆಟ್ಟಿಗೆಗಳು ಕಡಿಮೆ ದರದಲ್ಲಿ ಮಾರಾಟಕ್ಕೆ ತಯಾರಿವೆ.

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು.

ಮಂಗಳೂರು ಮುನಿಸಿಪಾಲಿಟಿ

ನೋಟೀಸು.

ಮುನ್ಸಿಪಲ್ ಶಹರಿನ ಉತ್ತರ ಮತ್ತು ಪೂರ್ವ ಭಾಗದ ಅಂಶವನ್ನು ಈ ಕೆಳಗೆ ಕಾಣಿಸಿದ ಸರ್ವೆ ನಂಬ್ರಗಳ ಗಡಿಗಳನ್ನು ಕೂಡಿಸಿಕೊಂಡು ಪಟ್ಟಣವನ್ನು ವಿಸ್ತರಿಸಲಿಕ್ಕೆ ಕೌನ್ಸಿಲಿನವರು ನಿಶ್ಚಯಿಸಿದ್ದಾರೆಂಬ ಸಂಗತಿಯನ್ನು ಈ ಮೂಲಕ ಸರ್ವರಿಗೂ ತಿಳಿಸಲಾಗುತ್ತದೆ.

ಈ ವಿಷಯದಲ್ಲಿ ಯಾವ ತರದ ಸೂಚನೆಯಾಗಲೀ ಯಾ ಆಕ್ಷೇಪಣೆಯಾಗಲೀ ಇರುವ ಪಕ್ಷದಲ್ಲಿ ಬರುವ 1929ನೇ ಇಸವಿ ಜನವರಿ ತಾ. 31ರ ಒಳಗೆ ತಿಳಿಸಿದಲ್ಲಿ ಅವುಗಳನ್ನು ಆಲೋಚಿಸಲಾಗುವದು.

ಮಂಗಳೂರು ಮುನ್ಸಿಪಲ್ ಗಡಿಯನ್ನು ವಿಸ್ತರಿಸಬೇಕೆಂದು ಆಲೋಚಿಸಿದ ಗಡಿಗಳು—

ಉತ್ತರ — ರೆವಿನ್ಯೂ ಸರ್ವೆ ನಂಬ್ರ 19, 18, 16, 15, 13, 12, ಕಾವೂರ್ ಗ್ರಾಮ. 22, 18, 27, 40, 40, 38, 35, 30, 33, 62, 67 ದೇರೆಬೈಲು ಗ್ರಾಮ.

ಪೂರ್ವ — ರೆವಿನ್ಯೂ ಸರ್ವೆ ನಂಬ್ರ 18, 21, 19, 41, 53, 54 ಕೊಡಿಯಾಲಬೈಲ ಗ್ರಾಮ.
48, 47, 49, 51, 59, 56, 65, 66, 125, 127, 128 ಪದವು ಗ್ರಾಮ.
9, 62, 25, 26, ಮರೋಳಿ ಗ್ರಾಮ.
103, 104, 106, 107, 109, 110 ಕದ್ರಿ ಗ್ರಾಮ
6, 7, 8, 21, 19, 20, 17, 16, 15, 11 ಕಂಕನಾಡಿ ಗ್ರಾಮ.
7, 6, 72, 71, 79, 80, 81, 82, 86, 87, 88 ಮತ್ತು 89 ಜಪ್ಪಿನ ಮೊಗರ ಗ್ರಾಮ.

ಮುನ್ಸಿಪಲ ಆಫೀಸು, ಮಂಗಳೂರು, 15-12-28 } **Nellikai Venkat Rao,** *Chairman M. C*

ಕಲ್ಕತ್ತೆಯಲ್ಲಿ ರಾಷ್ಟ್ರೀಯ ವಾರ.

ಡೊಮಿನಿಯನ್ ಸ್ಟೇಟಸ್-ಸ್ವಾತಂತ್ರ್ಯಗಳ ಒಣ ಚರ್ಚೆ.

ಅಧ್ಯಕ್ಷರ ಆಗಮನ—ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾದ ಪಂಡಿತ ಮೋತಿಲಾಲ ನೆಹರೂಗಳವರು ತಾರೀಖು ೨೨ನೆಯ ಕಲಕತ್ತೆಗೆ ಬಂದು ತಲಪಿದೊಡನೆ ಅವರಿಗೆ ವಿಶೇಷ ರೀತಿಯಲ್ಲಿ ಸ್ವಾಗತವು ಕೊಡಲ್ಪಟ್ಟಿತು. ಅಧ್ಯಕ್ಷರು ರೈಲಿನಲ್ಲಿ ಕುಳಿತು ಹೌರಾ ರೈಲ್ವೆ ಸ್ಟೇಶನಿಗೆ ಬಂದು ತಲಪಿದೊಡನೆ ಅಲ್ಲಿ ಸ್ವಾಗತ ಕಮಿಟಿಯ ಅಧ್ಯಕ್ಷರೂ ಇತರರೂ 'ವಂದೇ ಮಾತರಮ್' ಎಂಬ ಜಯಘೋಷದಿಂದ ಅವರನ್ನೆದುರುಗೊಂಡು ಪುಷ್ಪ ಮಾಲಿಕೆಗಳನ್ನು ಸಮರ್ಪಿಸಿದರು. ಸ್ಟೇಶನಿನಿಂದ ಹೊರಗೆ ಬಂದು ಅಧ್ಯಕ್ಷರು ೩೪ ಬಿಳಿ ಕುದುರೆಗಳನ್ನು ಕಟ್ಟಿದ ರಜತ ರಥವನ್ನೇರಿದರು. ಕುದುರೆಗಳನ್ನು ನಡಿಸಲು ಹಳದಿ ಸಮವಸ್ತ್ರದ ೧೭ ಜನ ಸಾರಥಿಗಳು ಕುಳಿತಿದ್ದರು. ಮೆರವಣಿಗೆಯು ಕಲಕತ್ತದ ಕಡೆಗೆ ನಡೆಯಿತು. ಹಿಂದೂಗಳು ಮಾತ್ರವಲ್ಲ, ಮುಸಲ್ಮಾನರೂ, ಕ್ರೈಸ್ತರೂ, ಯುರೋಪಿಯನರೂ ಕೂಡ ಈ ಸಮಾರಂಭವನ್ನು ಕಾಣುವ ಸಲುವಾಗಿ ಬಂದಿದ್ದರು. ಹಾದಿಯುದ್ದಕ್ಕೂ 'ವಂದೇಮಾತರಮ್' ಮಹಾತ್ಮಾ ಗಾಂಧೀಕಿ ಜೈ, ಪಂಡಿತ ಮೋತಿಲಾಲ ನೆಹರೂಕೀ ಜೈ' ಎಂಬ ಜಯಧ್ವನಿಯು ಪ್ರತಿಧ್ವನಿಸುತ್ತಿತ್ತು. ಅಧ್ಯಕ್ಷರೊಂದಿಗೆ ಪಂಡಿತ ಮಾಲವೀಯರವರೂ ಇದ್ದರು.

ಮೆರವಣಿಗೆಯು ಒಟ್ಟು ಒಂದು ಮೈಲು ಉದ್ದವಾಗಿದ್ದಿತು. ಎದುರಿನಲ್ಲಿ ದೇಶೀ ವಾದ್ಯ, ಬದಿಗಳಲ್ಲಿ ಮೋಟಾರ ಸೈಕ್ಲಿಸ್ಟರು, ಇವರ ಹಿಂದೆ ರಾಷ್ಟ್ರದಳ, ಅವರ ಬದಿಗಳಲ್ಲಿ ಸಂಕೀರ್ತನಗಾರರು ಇದ್ದರು. ಮೊದಲನೆಯ ರಥದಲ್ಲಿ ಶ್ರೀ ಸುಭಾಷ ಚಂದ್ರಬೋಸರವರು ಖಾಕಿ ಯುನಿಫೋರ್ಮ್ ಉಡುಪಿನಲ್ಲಿ ನಿಂತು, ಮೆರವಣಿಗೆಯು ಸರಿಯಾಗಿ ನಡೆಯುತ್ತಿದೆಯೋ ಎಂಬುದನ್ನು ನೋಡಿಕೊಳ್ಳುತ್ತಿದ್ದರು. ಅವರ ಹಿಂದೆ ಖಾಕಿ ಯುನಿಫಾರ್ಮ್ ಉಡುಪಿನ ರಾಷ್ಟ್ರದಳ, ಅವರ ಹಿಂದೆ ೩೪ ಬಿಳಿ ಕುದುರೆಗಳಿಂದ ಎಳೆಯಲ್ಪಡುವ ರಥದ ಮೇಲೆ ಪಂಡಿತ ನೆಹರೂಗಳವರೂ ಅವರ ಪಕ್ಕದಲ್ಲಿ ಶ್ರೀ ಸೇನಗುಪ್ತರವರೂ ಕುಳಿತಿದ್ದರು. ಪಂಡಿತ ನೆಹರೂರವರು ಕೈಮುಗಿದುಕೊಂಡೇ ಕುಳಿತಿದ್ದರು. ಮಾರ್ಗದಲ್ಲೆಲ್ಲ ಸುಸ್ವಾಗತವೆಂಬ ಆರ್ಚುಗಳನ್ನು ನಿರ್ಮಿಸಿದ್ದರು. ಮಧ್ಯಾಹ್ನದ ಹೊತ್ತಿಗೆ ಮೆರವಣಿಗೆಯು ದೇಶಬಂಧು ನಗರಕ್ಕೆ ತಲಪಿತು.

ಕಾಂಗ್ರೆಸ್ ನಗರ—ಈ ವರುಷ ಕಾಂಗ್ರೆಸಿಗಾಗಿ ತಯಾರಿಸಲ್ಪಟ್ಟ ಚಪ್ಪರವು ಕಳೆದ ಎಲ್ಲಾ ವರುಷಗಳಿಗಿಂತಲೂ ವಿಶಾಲವಾಗಿದ್ದು ಸುಮಾರು ೨೦,೦೦೦ ಸಭಿಕರು ಸುಖವಾಗಿ ಕುಳಿತುಕೊಳ್ಳಬಹುದಾದಷ್ಟು ಸ್ಥಳವಿದ್ದಿತು. ಅದು ಹೊರತು ಅಷ್ಟು ದೊಡ್ಡ ಚಪ್ಪರವನ್ನು ಮನಮೋಹಕವಾದ ರೀತಿಯಲ್ಲಿ ಶೃಂಗರಿಸಿದ್ದರು.

ಸರ್ವಪಕ್ಷೀಯರ ಸಮಿತಿ—ತಾರೀಖು ೨೨ನೇ ಸಾಯಂಕಾಲ ಎಲ್ಲಾ ಪಕ್ಷಗಳ ಸಮಿತಿಯೊಂದು ಎಲ್ಲಾ ಪಕ್ಷಗಳ ಧುರೀಣರ ಹಾಜರಿಯಿಂದ ಕಾಂಗ್ರೆಸ್ ನಗರದಲ್ಲಿ ಕೂಡಿತು. ಅಧ್ಯಕ್ಷರಾದ ಡಾ। ಅನ್ಸಾರಿಯವರು ಈ ಸಮಿತಿಯನ್ನು ತೆರೆದು, ಲಾಲಾಜಿಯವರ ದೇಶಸೇವೆಯ ಕೆಲಸಗಳನ್ನು ನೆನೆದವರಿಗೆ ವಿವರಿಸಿ ಅವರ ಮರಣದಿಂದ ದೇಶಕ್ಕೆ ಅಪಾರ ನಷ್ಟವುಂಟಾಗಿಯದೆಂಬುದನ್ನೂ, ದೇಶಬಂಧುಗಳಿಗೆ ಅಮಿತ ದುಃಖವಾಗಿಯದೆಂಬುದನ್ನೂ ವಿವರಿಸಿದರು. ನೆಹರು ಕಮಿಟಿಯ ವರದಿಯನ್ನ ಎಲ್ಲಾ ಪಕ್ಷದ ಜನರೂ ಏಕ ಪ್ರಕಾರವಾಗಿ ಅಂಗೀಕರಿಸಬೇಕೆಂದೂ ಅದರಲ್ಲಿ ಸೂಚಿಸಿದ ಸಂಗತಿಗಳು ವಿಶ್ವಾಸಾರ್ಹವೆಂದೂ, ಡಾ। ಅನ್ಸಾರಿಯವರು ಸ್ಫೂರ್ತಿದಾಯಕವಾದ ಭಾಷಣವನ್ನಿತ್ತರು. ಡೊಮಿನಿಯನ್ ಸ್ಟೇಟಸನ್ನೇ ಸದ್ಯಕ್ಕೆ ಅಂಗೀಕರಿಸಿದರೆ ಸಾಕೆಂದರು. ಜಾತೀಯ ಕಲಹಗಳನ್ನು ಹೋಗಲಾಡಿಸಬೇಕು. ಎಲ್ಲಾ ಜಾತಿಯವರೂ ಒಂದಾಗಬೇಕು ಎಂಬುದೇ ಅವರ ದೀರ್ಘ ಭಾಷಣದ ಸಾರಾಂಶವಾಗಿದ್ದಿತು.

ಕಾರ್ಯಕಾರಿ ಕಮಿಟಿಯ ಸಭೆ—೨೩ನೇ ತಾರೀಕಿನ ದಿನ ಕಾಂಗ್ರೆಸ್ ಕಾರ್ಯಕಾರಿ ಕಮಿಟಿಯವರ ಸಭೆ ಜರಗಿ ನೆಹರು ವರದಿಯಲ್ಲಿ ಸೂಚಿಸಿದ ಜಾತೀಯ ಕಲಹಗಳ ನಿವಾರಣೆಯ ಪ್ರಶ್ನೆಯ ಕುರಿತು ಚರ್ಚೆಯು ನಡೆಯಿತು. ಇದಕ್ಕೆ ಡಾ। ಅನ್ಸಾರಿಯವರೇ ಅಧ್ಯಕ್ಷರಾಗಿದ್ದರು.

ಹಿಂದೂ ಸಭಾ ಕಾರ್ಯಕಾರಿ ಕಮಿಟಿ—ಹಿಂದೂ ಮಹಾಸಭೆಯ ಕಾರ್ಯಕಾರಿ ಮಂಡಳಿಯ ಸಭೆಯೊಂದು ಅದೇ ದಿನ ಜರಗಿ ನೆಹರು ವರದಿಯ ಕುರಿತಾಗಿ ಸಂಭಾಷಣೆಗಳು ನಡೆದುವು. ಹಿಂದೂ ಮುಸಲ್ಮಾನರ ಐಕ್ಯದ ಠರಾವು, ಲಾಲಾಜಿಯವರ ನಿಧನದ ಸಲುವಾಗಿ ದುಃಖಸೂಚಕ ಠರಾವು, ಆಲ್ ಇಂಡಿಯಾ ಹಿಂದೂ ಮಹಾಸಭೆಯ ಪರವಾಗಿ, ಲಾಲಾಜಿಯವರ ಸ್ಮಾರಕವೊಂದನ್ನು ತೆರೆಯಬೇಕಾಗಿ ಡಾ। ಮೂನ್ಜಿಯವರ ಠರಾವು ಮಂಜೂರಾದವು.

ತಾರೀಖು ೨೩ನೇ ದಿನ ಪುನಃ ಸರ್ವ ಪಕ್ಷೀಯರ ಸಮಿತಿಯು ಡಾ। ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಇದಕ್ಕೆ ಹಲವು ಪ್ರತಿನಿಧಿಗಳು ಬಂದಿದ್ದರು. ಸುಮಾರು ೩೦೦೦ ಜನರು ನೆರೆದಿದ್ದರು. ಮೊದಲಾಗಿ ಶ್ರೀ। ಸೇನಗುಪ್ತರವರ ಸ್ವಾಗತ ಭಾಷಣವು ನಡೆಯಿತು. "ನೆಹರು ವರದಿಯಲ್ಲಿ ಸೂಚಿಸಲ್ಪಟ್ಟ ಸರಕಾರ ರಚನೆಯು ಆಂಗ್ಲ ಅಥವಾ ಅಮೇರಿಕನ್ ಸರಕಾರ ರಚನೆಯ ಮಾದರಿಯೆಂದು ಹೇಳುವ ವಾದರೂ ನಾನದನ್ನು ನಿರೋಧಿಸುವೆನು. ಅದರ ಸೂತ್ರಗಳ್ಯಾವುವೆಂದರೆ ಇಲೆಕ್ಟಿವ್ ಪ್ರಜಾಧಿಪತ್ಯ, ಮತ್ತು ಸಂಯುಕ್ತ ಸರಕಾರ, ಇವು ಬೇರೆ ಕಡೆಗಳಲ್ಲಿರುವುದಿಲ್ಲ. ನೆಹರು ಕಮಿಟಿಯಂತೆ ಸರಕಾರ ರಚನೆಯಲ್ಲಿ ಯಾವ ದೇಶವೂ ವಿಜಯಿಯಾಗಿಲ್ಲ. ಹಿಂದೂಸ್ಥಾನದಲ್ಲಿ ಐಕ್ಯವಿರುವುದಿಲ್ಲವೆಂದು ಬ್ರಿಟಿಷರು ಹೇಳುವರಾದರೂ ಇಲ್ಲಿ ಹಿಂದೂಸ್ಥಾನದ ಸರ್ವ ಪಕ್ಷೀಯ ಜನರೂ ನೆರೆದುದನ್ನು ನೋಡುವಾಗ ಅವರ ಮಾತನ್ನು ಯಾವನಾದರೂ ಖಂಡಿಸದಿರಲಾರನು. ನಮಗೆ ಬೇಕಾದ ಕೊನ್ಸ್ಟಿಟ್ಯೂಶನನ್ನು ನಿರ್ಮಿಸಲು ನಾವಿಲ್ಲಿ ಕೂಡಿರುವೆವು" ಎಂದು ಅವರು ವಿವರಿಸಿದರು. ನೆಹರು ವರದಿಯಲ್ಲಿ ಸೂಚಿಸಲ್ಪಟ್ಟ ಸರಕಾರ ರಚನೆಯನ್ನೇ ಅನುಮೋದಿಸುವದು ಒಳ್ಳೇಯದೆಂದು ಪಂಡಿತ ಮೋತಿಲಾಲರವರು ಸೂಚಿಸಿದರು. ಡಾ। ಅನ್ಸಾರಿಯವರೂ ಇದನ್ನೇ ಸಮರ್ಥಿಸಿದರು. ಆ ಬಳಿಕ ಶ್ರೀ ಸೇನಗುಪ್ತರು ಎದ್ದು ನಿಂತು, ಈ ಕೆಳಗಿನ ಠರಾವನ್ನು ಮುಂದಕ್ಕೆ ತಂದರು. "ಹಿಂದೂಸ್ಥಾನಕ್ಕೆ ಡೊಮಿನಿಯನ್ ಓಫ್ ಕೆನಡಾ, ಕಾಮನ್‌ವೆಲ್ತ್ ಓಫ್ ಆಸ್ಟ್ರೇಲಿಯಾ, ಡೊಮಿನಿಯನ್ ಓಫ್ ನ್ಯೂಜೀಲೇಂಡ್, ಯೂನಿಯನ್ ಓಫ್ ಸೌತ್ ಆಫ್ರಿಕಾ ಇವುಗಳಂತೆ ಕಾನೂನು ಕಾಯಿದೆಗಳನ್ನು ನಿರ್ಮಿಸುವದಕ್ಕೂ, ಶಾಂತತಾಸ್ಥಾಪನೆಗೂ ಒಂದು ಪಾರ್ಲಿಮೆಂಟೂ, ಈ ಪಾರ್ಲಿಮೆಂಟಿಗೆ ಜವಾಬ್ದಾರಿಯಾದ ಒಂದು ಎಕ್ಸಿಕ್ಯೂಟಿವ್ ಮಂಡಳಿಯೂ ಇದ್ದು 'ಕೊಮನ್ ವೆಲ್ತ್ ಓಫ್ ಇಂಡಿಯಾ' ಎಂಬ ಹೆಸರು ಅದಕ್ಕೆ ಕೊಡಲ್ಪಡಬೇಕು". ಈ ಠರಾವನ್ನು ಮುಂಬಾಯಿಯ ಮಿ. ಯಾಕೂಬ ಹಸನರವರು ಅನುಮೋದಿಸಿದರು. ಈ ಠರಾವನ್ನು ಶ್ರೀ। ಶ್ರೀನಿವಾಸ ಅಯ್ಯಂಗಾರರೂ, ಶ್ರೀ। ಚಂದ್ರಿಕಾ ಪ್ರಸಾದರವರೂ ಅನುಮೋದಿಸಿ ಭಾಷಣಗಳನ್ನು ಕೊಟ್ಟರು. ಅಷ್ಟರಲ್ಲಿ ಮಹಾತ್ಮಾಜಿಯವರೂ ಅಲ್ಲಿಗೆ ಬಂದು ತಲಪಿದರು. ಮೌಲಾನಾ ಮಹಮ್ಮದಾಲಿಯವರು ಮಾತ್ರ ಇದಕ್ಕೆ ಆತಂಕವನ್ನು ತೆಗೆದರು. ಡೊಮಿನಿಯನ್ ಸ್ಟೇಟಸು ನಮಗೆ ಅಗತ್ಯವಿಲ್ಲವೆಂದೂ ಸಂಪೂರ್ಣ ಸ್ವಾತಂತ್ರ್ಯವೇ ನಮಗೆ ಬೇಕಾದುದೆಂದೂ ಅವರ ಅಂಬೋಣವಾಗಿದ್ದಿತು. ಡೊಮಿನಿಯನ್ ಸ್ಟೇಟಸನ್ನು ಅಪೇಕ್ಷಿಸುವದು ಹೇಡಿಗಳ ಲಕ್ಷಣವೆಂದರು. ಮೌಲಾನಾ ಮಹಮ್ಮದಾಲಿಯವರ ಅಭಿಪ್ರಾಯವನ್ನು ಖಂಡಿಸಿ, ಲಾಹೋರಿನ ಡಾ। ಆಲಮ್‌ರವರು ಮಾತನಾಡಿದರು.

ಅಂತೆಯೇ ಶ್ರೀ। ಸತ್ಯಮೂರ್ತಿಯವರೂ, ಡಾ। ಬೆಸೆಂಟಮ್ಮನವರೂ, ಮಾತನಾಡಿದರು. ಕೊನೆಗೆ ವಾದ ವಿವಾದಗಳು ಹಲವು ತಾಸುಗಳ ವರೆಗೆ ನಡೆದು, ಈ ಠರಾವು ಒಬ್ಬರಿಂದ ಮಾತ್ರ ನಿರೋಧಿಸಲ್ಪಟ್ಟದ್ದರೂ ಬಹುಮತ ಹೊಂದಿ ಮಂಜೂರು ಹೊಂದಿತು.

ಎಲ್ಲಾ ಪಕ್ಷದವರ ಸಮಿತಿಯು ತಾರೀಖು 24ನೇ ದಿನ ಪುನಃ ಜರಗಿತು. ಹಿಂದಿನ ದಿನಕ್ಕಿಂತಲೂ ಹೆಚ್ಚಿಗೆ ಜನರಿದ್ದರು. ಮೊದಲಾಗಿ ಪಂಡಿತ ಮೋತಿಲಾಲರು ಒಂದು ಠರಾವನ್ನು ಮುಂದಕ್ಕೆ ತಂದರು. ಅದು ವಿಚಾರಣೆಯ ಬಗ್ಗೆ ಒಂದು ಕಮಿಟಿಯವರಿಗೆ ಸಮರ್ಪಿಸಲ್ಪಟ್ಟಿತು. ಇನ್ನೊಂದು ಠರಾವು ಮುಂದಕ್ಕೆ ತರಲ್ಪಟ್ಟಿತು. ಯಾವುದೆಂದರೆ "ನ್ಯಾಯಕ್ಕೆ ಸರಿಯಾಗಿ ಅಲ್ಲದೆ ಯಾವನೊಬ್ಬನ ಆಸ್ತಿ, ಮನೆ ಮೊದಲಾದುವುಗಳನ್ನು ಅಪಹರಿಸಕೂಡದು" ಎಂಬುದು. ಇದು ಬಹಳ ಚರ್ಚೆಯ ತರುವಾಯ ಮಂಜೂರಾತಿಯನ್ನು ಹೊಂದಿತು.

ತದನಂತರ ಮಿ. ಬಾಲಕೃಷ್ಣ ಶರ್ಮರೆಂಬವರು "ಕೋಮನ್‌ವೆಲ್ತಿನ ಒಳಗೆ ಯಾವುದಾದರೂ ತಪ್ಪಿತಕ್ಕಾಗಿ ಅಂಗಶಿಕ್ಷೆಯನ್ನು ವಿಧಿಸಬಾರದು" ಎಂಬ ಠರಾವು ಮುಂದಕ್ಕೆ ತರಲಾಗಿ ಅದು ಮಂಜೂರಾತಿಯನ್ನು ಹೊಂದಿತು.

ತದನಂತರ ಮಾದಕಪಾನ ನಿಷೇಧದ ಠರಾವು ಮುಂದಕ್ಕೆ ಬಂದಿತು.

ಅದು ಕೂಡ ಬಹುಪಕ್ಷದ ಮತದಿಂದ ಮಂಜೂರಾತಿಯನ್ನು ಹೊಂದಿತು. ಹೊಸ ಸರಕಾರ ರಚನೆಯ ಆಧಾರಭೂತವಾದ ಅಂಗವು ಮದ್ಯಪಾನ ನಿಷೇಧವಾಗಿರುವುದೆಂದೂ, ೨೦ ಲಕ್ಷ ಜನರ ಜೀವನವು ಹಿಂದೂಸ್ಥಾನದಲ್ಲಿ ಕೇವಲ ಮದ್ಯಪಾನದ ದೆಸೆಯಿಂದಲೇ ಕೆಡಿಸಲ್ಪಡುವದೆಂದೂ ವಿವರ ಪೂರ್ವಕವಾದ ಭಾಷಣವನ್ನು ಶ್ರೀ। ರಾಜಗೋಪಾಲಾಚಾರಿಯವರು ಮಾಡಿದರು. ಇನ್ನೂ ಹಲವು ಇತರ ಠರಾವುಗಳ ಬಗ್ಗೆ ಚರ್ಚಿಸಲು ಪುನಃ ಇದೇ ಸಮಿತಿಯು ತಾರೀಖು ೨೬ನೇ ದಿನ ಕೂಡಬೇಕೆಂದು ನಿಶ್ಚಯವಾಗಿ ಅಂದಿನ ಸಮಿತಿಯು ಚದರಿತು.

ಮುಸ್ಲಿಮ್ ಲೀಗೂ ನೆಹರು ವರದಿಯೂ—ಮಿ. ಜಿನ್ನಾರವರು ಕಲಕತ್ತೆಗೆ ಬಂದು ತಲಪಿದೊಡನೆ ಮುಸಲ್ಮಾನ ಧುರೀಣರೂ, ಮಹಮುದಾಬಾದದ ಮಹಾರಾಜರೂ ಕೂಡಿ ಸಮಿತಿಯಲ್ಲಾದ ನಿರ್ಣಯಗಳ ಕುರಿತು ಆಲೋಚಿಸತೊಡಗಿದರು, ಆದರೆ ಯಾವ ನಿರ್ಣಯವೂ ಆಗಲಿಲ್ಲ. ತಾರೀಖು ೨೬ನೇ ದಿನ ನಡೆಯುವ ಮುಸ್ಲಿಮ್ ಲೀಗಿನ ಅಧಿವೇಶನಕ್ಕೆ ಮಹಮುದಾಬಾದದ ಮಹಾರಾಜರು ಅಧ್ಯಕ್ಷರಾಗಬೇಕೆಂಬ ಒಪ್ಪಿಗೆಯಾಯಿತು.

ಇಂಡಿಪೆಂಡೆನ್ಸ್ ಲೀಗು—ಡೊಮಿನಿಯನ್ ಸ್ಟೇಟಸು ಅಗತ್ಯವಿಲ್ಲವೆಂದೂ ಸಂಪೂರ್ಣ ಸ್ವಾತಂತ್ರ್ಯವೇ ಬೇಕಾದುದೆಂದೂ ಕೆಲವು ಜನರು ತಮ್ಮ ಪಕ್ಷಕ್ಕೆ ಜನರನ್ನು ಕೂಡಿಸಲು ಬಹಳ ಪ್ರಯತ್ನಿಸಿದರು. ಮದರಾಸು ಸಂಸ್ಥಾನದಿಂದ ಮಾತ್ರವೇ ಇವರ ಪಕ್ಷಕ್ಕೆ ೨೦೦ ಪ್ರತಿನಿಧಿಗಳು ಸೇರಿರುವರು. ಶ್ರೀ ಶ್ರೀನಿವಾಸ ಅಯ್ಯಂಗಾರ, ಶ್ರೀ ಸತ್ಯಮೂರ್ತಿ, ಶ್ರೀ ಜವಾಹಿರಲಾಲ ನೆಹರು ಇವರುಗಳೇ ಈ ಪಕ್ಷದ ಮುಖ್ಯ ಧುರೀಣರು. ಡೊಮಿನಿಯನ್ ಸ್ಟೇಟಸನ್ನು ನಿಷೇಧಿಸಿ ಇಂಡಿಪೆಂಡೆನ್ಸ್ ಲೀಗಿನವರ ಒಂದು ಠರಾವು ಆಲ್ ಇಂಡಿಯಾ ಕಾಂಗ್ರೆಸ್ ಕಮಿಟಿಯವರ ಸಭೆಯಲ್ಲಿ ಮಂಜೂರಾಗಲಿದೆ.

ಒಟ್ಟಿನಲ್ಲಿ ಮೇಲೆ ಹೇಳಿದ ಎರಡು ಪಕ್ಷಗಳಾದುದು ಹಿತವಲ್ಲವೆಂದು ಅಲ್ಲಿ ಕೂಡಿದ ಧುರೀಣಾನೇಕರು ಅಭಿಪ್ರಾಯಪಡುವರು. ಬಂಗಾಳದವರಲ್ಲಿ ಅಭಿಪ್ರಾಯಭೇದಗಳಿದ್ದ ಕಾರಣ ಶ್ರೀ ಶ್ರೀನಿವಾಸ ಅಯ್ಯಂಗಾರರು ತನ್ನ ಪಕ್ಷಕ್ಕೆ ೧೫೦ ಜನ ಕಾಂಗ್ರೆಸ್ ಜನರನ್ನು ಸೇರಿಸಿಟ್ಟಿರುವರು. ಮಿ. ಸೇನಗುಪ್ತರವರ ಮತ ಬೇರೆ, ಶ್ರೀ। ಸುಭಾಷ ಚಂದ್ರರವರ ಮತ ಬೇರೆ ಯಾವ ಪಕ್ಷವು ಕೊನೆಗೆ ವಿಜಯಿಯಾಗುವದೆಂದು ನೋಡಲಿದೆ.

ಆಲ್ ಇಂಡಿಯಾ ಮುಸ್ಲಿಂ ಲೀಗು—ತಾರೀಖು ೨೬ನೇ ದಿನ ಕಲಕತ್ತೆಯಲ್ಲಿ ಆಲ್ ಇಂಡಿಯಾ ಮುಸ್ಲಿಂ ಲೀಗಿನ ಅಧಿವೇಶನವು ಜರಗಿತು. ಸ್ವಾಗತಾಧ್ಯಕ್ಷರಾದ ಅಬ್ದುಲ್ ಕರೀಮರವರ ಭಾಷಣವು ಬಹಳ ಸ್ವಾರಸ್ಯವಾಗಿದ್ದಿತು. ರಾಷ್ಟ್ರೀಯ ಐಕ್ಯವೇ ಹಿಂದೂಸ್ಥಾನದ ಸ್ವಾತಂತ್ರ್ಯ ಸಾಧನೆಗೆ ಜವಾಬ್ದಾರಿಯಾಗಿರುತ್ತದೆಂತಲೂ, ಮುಸಲ್ಮಾನರು ಈ ಸಂದರ್ಭದಲ್ಲಿ ಎರಡು ಮನಸ್ಸು ಮಾಡುವದು ಒಳ್ಳೆಯದಲ್ಲವೆಂದರು. ಸ್ವರಾಜ್ಯವು ಸಿಕ್ಕಿದ ಮೇಲೆ ತಮ್ಮ ಹಕ್ಕು ಸ್ವಾತಂತ್ರ್ಯಗಳನ್ನು ಸಾಧಿಸಬಹುದೆಂದರು. ಬ್ರಿಟಿಷರು ಹಿಂದೂಸ್ಥಾನದ ಧನಸಂಪತ್ತನ್ನು ಸೂರೆಮಾಡುವ ವಿಧವನ್ನು ವಿವರಿಸಿ, ಸರಕಾರದ ಬದಲಾವಣೆಯಾಗುವದು ಅತ್ಯವಶ್ಯವಿದೆಯೆಂದರು. ಅದು ಕಾರಣ ಡೊಮಿನಿಯನ್ ಸ್ಟೇಟಸ್ಸನ್ನೇ ಆಧರಿಸಿ, ಮುಸಲ್ಮಾನರು ಅಭಿಪ್ರಾಯಗಳನ್ನು ಕೊಡುವದು ಉಚಿತವೆಂದರು.

ಮಹಮುದಾಬಾದದ ಮಹಾರಾಜರೇ ಈ ಅಧಿವೇಶನದ ಅಧ್ಯಕ್ಷರಾಗಿದ್ದರು. ಡೊಮಿನಿಯನ್ ಸ್ಟೇಟಸಿನ ಕಡೆಗನೇ ಹಲವು ಜನ ಮುಸಲ್ಮಾನರ ಒಲವಿದ್ದಿತು. ಆದರೂ ಈ ಕುರಿತು ಯಾವ ನಿರ್ಣಯಗಳೂ ಆಗದೆ ಮರುದಿನವೇ ಇನ್ನೊಂದು ಸಭೆಯನ್ನು ಜರಗಿಸಿ, ಆ ಸಭೆಯಲ್ಲಿ ಚರ್ಚಿಸಬೇಕೆಂದಾಯಿತು. ಎಲ್ಲಾ ಪಕ್ಷದ ಸಮಿತಿಯವರು ಮಾಡುವ ನಿರ್ಣಯಗಳಿಗೆ ತಾವು ಅನ್ಯಾಯಮಾಡುವದು ಉಚಿತವಲ್ಲವೆಂದರು. ಹಿಂದೂಸ್ಥಾನದ ಪ್ರತಿಯೊಂದು ಮತವೂ ಸ್ವರಾಜ್ಯವನ್ನು ಅನುಭೋಗಿಸಲು ಅರ್ಹವಿದೆ. ಆದಕಾರಣ ಪ್ರತಿಯೊಂದು ಮತದವರೂ ಏಕಮನಸ್ಸಿನಿಂದ ಸ್ವರಾಜ್ಯ ಸಾಧನೆಗೆ ಸೊಂಟಕಟ್ಟಬೇಕು. ಸಂಪೂರ್ಣ ಸ್ವಾತಂತ್ರ್ಯವೇ ಈಗ ಬೇಕೆನ್ನುವದು ಹುಚ್ಚುತನ. ಅಂತಹ ಸ್ಥಿತಿಗೆ ಹಿಂದೂಸ್ಥಾನವು ಅರ್ಹವಾಗಿಲ್ಲ ಎಂದು ಮೊದಲಾಗಿ ಸಕಾರಣವಾಗಿ ಅವರು ಭಾಷಣವನ್ನು ಜರಗಿಸಿ ಪೂರೈಸಿದರು.

ಡೊಮಿನಿಯನ್ ಸ್ಟೇಟಸೂ ಸಂಪೂರ್ಣ ಸ್ವಾತಂತ್ರ್ಯವೂ—ಕೊಂಗ್ರೆಸ್ ಮಂಟಪದಲ್ಲಿ ಡೊಮಿನಿಯನ್ ಸ್ಟೇಟಸ್ ಮತ್ತು ಸ್ವಾತಂತ್ರ್ಯವೆಂಬ ಎರಡು ಪಕ್ಷಗಳಾದುದನ್ನು ನೀಗಿ ಜನರೆಲ್ಲರೂ ಒಂದೇ ನಿರ್ಣಯವನ್ನು ಮಾಡುವ ಹಾಗೆ ಮಹಾತ್ಮಾಜಿಯವರು ಬಹಳವಾಗಿ ಪ್ರಯತ್ನಿಸಿದರು. ಸಂಪೂರ್ಣ ಸ್ವಾತಂತ್ರ್ಯದ ಬಗ್ಗೆ ಹೋರಾಡಬೇಕೆಂದು ಮದರಾಸು ಕಾಂಗ್ರೆಸಿನಲ್ಲಿ ನಿರ್ಣಯವಾಗಿತ್ತು. ಆದರೆ ನೆಹರು ವರದಿಯಲ್ಲಿ

೧೧ನೇ ಪುಟಕ್ಕೆ ಮುಂದುವರಿಯುದ.